ಭಗವಾನಕುಂದಕುಂದಾಚಾರ್ಯದೇವವಿರಚಿತ

# ಪಂಚಾಸ್ತಿಕಾಯ ಪರಿಮಳ

## (ಭಾಗ - 2)


ಸಂಪಾದಕರು :

ಶ್ರೀ ಎಂ. ಬಿ. ಪಾಟೀಲ, ಸೇಡಬಾಳ

ಶಹಾಪುರ - ಬೆಳಗಾವಿ.



ಪ್ರಕಾಶಕರು :

ಶ್ರೀ ದಿಗಂಬರ ಜೈನ ಟ್ರಸ್ಟ, ಅಧ್ಯಾತ್ಮ ಪ್ರಕಾಶನ ಸಂಸ್ಥೆ,

ಬೆಂಗಳೂರು.

■ ಪ್ರಥಮಾವೃತ್ತಿ : **ಒಂದು ಸಾವಿರ (1000)** ಪ್ರತಿಗಳು
ವಿಜಯ ದಶಮಿ
**ಅಕ್ಟೋಬರ 2005**


■ **ಬೆಲೆ : ಇಪ್ಪತ್ತೈದು ರೂಪಾಯಿ 25/-**
**(ಮೂಲ ಬೆಲೆ : ರೂ. 75/-)**

■ **ಸಂಪೂರ್ಣ ಹಕ್ಕು ಸುರಕ್ಷಿತ**


■ **ದೊರಕುವ ಸ್ಥಳ :**
**ದಿಗಂಬರ ಜೈನ ಟ್ರಸ್ಟ - ಅಧ್ಯಾತ್ಮ ಪ್ರಕಾಶನ ಸಂಸ್ಥೆ**
141, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - 560 053.
ದೂರವಾಣಿ : 22911890, 22912990

**ಶ್ರೀ ಬಿ. ಜಿ. ಬಖೇಡಿ,**
ಡಾ. ಎಸ್.ಪಿ.ಎಂ. ಪಥ, ಬೆಳಗಾವಿ - 1.
ದೂರವಾಣಿ : 2466966.


■ ಮುದ್ರಕರು :
**ಇಮೇಜ ಪ್ರಿಂಟ್ಸ,**
2393, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
ಫೋನ : 9341103880



ದೇವಾಧಿದೇವ ಶ್ರೀ ಋಷಭದೇವ ಜಿನಬಿಂಬ, ಬೆಂಗಳೂರು



ಶ್ರೀಮದ್ ಭಗವದ್ ಕುಂದಕುಂದಾಚಾರ್ಯದೇವ



परम पूज्य अध्यात्ममूर्ति सद्गुरुदेवश्री कानजीस्वामी

# ಪ್ರಕಾಶಕೀಯ

ಭಗವಾನ ಕುಂದಕುಂದಾಚಾರ್ಯದೇವ ವಿರಚಿತ 'ಪಂಚಾಸ್ತಿಕಾಯ ಸಂಗ್ರಹ'ವೆಂಬ ಪರಮೋತ್ಕೃಷ್ಟ ಪೂಜನೀಯ ಪರಮಾಗವು ಶ್ರೀಮದಮೃತಚಂದ್ರಾಚಾರ್ಯದೇವ ಲಿಖಿತ 'ಸಮಯವ್ಯಾಖ್ಯೆ'ಯೆಂಬ ಟೀಕೆಯೊಂದಿಗೆ ಸಮಗ್ರವಾಗಿ ಕನ್ನಡದಲ್ಲಿ ಅನುವಾದಗೊಂಡು ಸರ್ವಾಂಗ ಸುಂದರವಾದ ಗ್ರಂಥವು ಈಗಾಗಲೇ ನಮ್ಮ ಸಂಸ್ಥೆಯಿಂದ ಮೂರು ಆವೃತ್ತಿಗಳಲ್ಲಿ ಪ್ರಕಾಶನಗೊಂಡಿದೆ ಮೋಕ್ಷ ಮಾರ್ಗದಲ್ಲಿ ಆರೂಢರಾಗಬಯಸುವವರೆಲ್ಲರಿಗೂ ಈ ಪರಮಾಗಮವು ಪರಮೋಪಕಾರಿಯೂ ಪ್ರಯೋಜನಭೂತವೂ ಆಗಿರುವುದರಿಂದ ಎಲ್ಲರಿಗೆ ಅಧ್ಯಯನ ಯೋಗ್ಯವಾಗಿದೆ. ಆದರೇನು ಮಾಡುವುದು ಇಂದು ಬುದ್ಧಿಯ ಮಂದತೆ ಮತ್ತು ಸ್ವಾಧ್ಯಾಯದಿಂದ ವಂಚಿತವಿರುವಂಥ ಸಾಮಾನ್ಯ ಜನರೆಲ್ಲರಿಗೂ ಇಂಥ ವಸ್ತುಭೂತ ಸತ್ ಶಾಸ್ತ್ರಗಳ ಮರ್ಮವನ್ನು ತಿಳಿದುಕೊಳ್ಳುವುದು ದುಸ್ತರವಾಗಿದೆ. ಇಂದು ಬಹಳಷ್ಟು ಜನರು ಧರ್ಮಬುದ್ಧಿಯಿಂದ ಸ್ವಾಧ್ಯಾಯ ಮಾಡುತ್ತಿದ್ದರೂ ಕೂಡ ಅಧ್ಯಾತ್ಮ ಪರಂಪರೆಯು ಮಧ್ಯದಲ್ಲಿ ಬಿಟ್ಟು ಹೋಗಿರುವುದರಿಂದ ಇವುಗಳ ಭಾವವು ಬುದ್ಧಿ ಗಮ್ಯವಾಗುತ್ತಿಲ್ಲ ಅದರಿಂದ ಕೆಲವೊಮ್ಮೆ ನಿರಾಶೆಯು ಕೂಡ ತಲೆದೋರಬಹುದಾಗಿದೆ.

ಈ ಪರಮಾಗಮವು ಪ್ರತಿಯೊಂದು ಪದದ ಅರ್ಥವನ್ನು ಶಬ್ದಾರ್ಥ, ನಯಾರ್ಥ, ಮತಾರ್ಥ, ಆಗಮಾರ್ಥ ಮತ್ತು ಭಾವಾರ್ಥವೆಂದು ಐದು ಪ್ರಕಾರಗಳಿಂದ ಮಾಡಿ, ಮರ್ಮವನ್ನು - ಭಾವವನ್ನು ಅಂತರ್ಗತ ಮಾಡಿಕೊಳ್ಳಬೇಕೆಂದು ಪ್ರಾರಂಭದಲ್ಲಿಯೇ ನಿರ್ದೇಶಿಸಲಾಗಿದೆ. ಈ ಕಾರ್ಯವು ಎಲ್ಲರಿಗೆ ಸುಲಭ ಸಾಧ್ಯವಿರುವುದಿಲ್ಲ. ಆದುದರಿಂದ ವರ್ತಮಾನದಲ್ಲಿ ಬುದ್ಧಿಯ ಮಂದತೆಯಿದ್ದರೂ ಆಂತರ್ಯದಲ್ಲಿ ಪ್ರಚುರ ಅಭಿರುಚಿಯುಳ್ಳ ಪಾತ್ರ ಜೀವರುಗಳ ಸಲುವಾಗಿ ೧೯೫೧ ರಲ್ಲಿ ಈ ಪರಮಾಗಮದ ಮೇಲೆ ಮಾಡಿರುವ ಪೂ. ಗುರುದೇವರ ಸಾರಭೂತ ಪ್ರವಚನವನ್ನು ಗುಜರಾತಿಯಿಂದ ಕನ್ನಡಿಸಿ ಸಮಗ್ರವಾಗಿ ಎರಡು ಭಾಗಗಳಲ್ಲಿ ಕೊಡಬಯಸಲಪೇಕ್ಷಿಸಿದಂತೆ ಮೊದಲನೆಯ ಭಾಗವನ್ನು ಎಪ್ರಿಲದಲ್ಲಿ ಹೊರತರಲಾಗಿದೆ. ಮತ್ತು ಈಗ ಕೂಡಲೇ ಎರಡನೆಯ ಭಾಗವನ್ನು ಹೊರತರಲು ನಮಗೆ ತುಂಬ ಸಂತೋಷವಾಗುತ್ತಿದೆ. ಏಕೆಂದರೆ ಇಂದಿನವರೆಗೆ ಈ ಗ್ರಂಥವು ಈ ರೂಪದಲ್ಲಿ ಭಾರತದ ಯಾವುದೇ ಭಾಷೆಯಲ್ಲಿ ಬರಲಿಲ್ಲ. ಆದುದರಿಂದ ಕನ್ನಡಿಗರು ಇದರ ಯಥಾರ್ಥ ಲಾಭ ಪಡೆದು ತಮ್ಮ ಅನಾದಿ ಕಾಲದ ಮಿಥ್ಯಾತ್ವವವನ್ನು ಕೆಡಿಸಿ ಮೋಕ್ಷಮಾರ್ಗದಲ್ಲಿ ಆರೂಢರಾಗಬೇಕೆಂದು ಹಾರ್ದಿಕವಾಗಿ ಬಯಸುತ್ತೇವೆ.

ಮತ್ತು ಮೊದಲಿನಿಂದಲೇ ಸರಳ-ಸಜ್ಜನಿಕೆಯನ್ನು ಮೈಗೂಡಿಸಿಕೊಂಡು ಬರುತ್ತಿರುವಂಥ ನಮ್ಮ ಕನ್ನಡಿಗರಿಗೆ ಇಂದು ವಾಸ್ತವಿಕ ವೀತರಾಗ ಧರ್ಮದ ಸಂಯೋಗವು ಲಭ್ಯವಾಗಿರುವುದರಿಂದ ಅವರು ಕೀರ್ತಿ ಕಾಮಿನಿಯ ಲೋಭದಿಂದ ರಹಿತವಾದ ತ್ಯಾಗ ಭಾವನೆಯಿಂದ ಪ್ರೇರಿತರಾಗಿ ಈ ಗ್ರಂಥದ ಸಂಪೂರ್ಣ ಖರ್ಚನ್ನು ತಾವೇ ವಹಿಸಿಕೊಂಡಿದ್ದಾರೆ. ಆ ನಮ್ಮ ಪ್ರೀತಿಯ ಮುಮುಕ್ಷುಗಳೆಲ್ಲರಿಗೂ ಆದರದ ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಇನ್ನು ಈ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಇಮೇಜ ಪ್ರಿಂಟ್ಸ ದ ಮಾಲೀಕರಾದ ಶ್ರೀ ಅಜಿತ ಪಾಟೀಲ ಅವರಿಗೂ ಹಾಗೂ ಅಲ್ಲಿನ ಕುಶಲ ಕಾರ್ಮಿಕರಿಗೂ ಪ್ರೀತಿಯ ಧನ್ಯವಾದಗಳು.

**ಶ್ರೀ ಸಿ. ಬಿ. ಭಂಡಾರಿ,**
ಅಧ್ಯಕ್ಷರು, ದಿಗಂಬರ ಜೈನ ಟ್ರಸ್ಟ,
ಬೆಂಗಳೂರು.

ಬೆಂಗಳೂರು
ಅಕ್ಟೋಬರ 2005

# ಪ್ರಸ್ತಾವನೆ

ಭಗವಾನ ಕುಂದಕುಂದಾಚಾರ್ಯದೇವ ವಿರಚಿತ ಉಪಲಬ್ಧ ಪಂಚ ಪರಮಾಗಮಗಳಲ್ಲಿ ಒಂದು ಸಮಯಸಾರ ಪರಮಾಗಮವು ಎಷ್ಟು ಪ್ರಸಾರ-ಪ್ರಸಿದ್ಧಿಯನ್ನು ಪಡೆಯಿತು ಅಷ್ಟು ಅನ್ಯ ಪರಮಾಗಮಗಳು ಪಡೆಯಲಿಲ್ಲ. ದೃಷ್ಟಿಪ್ರಧಾನವಿರುವ ಈ ಸಮಯಸಾರದ ಪ್ರಚಂಡ ಪ್ರಭೆಯಲ್ಲಿ ಜ್ಞಾನಪ್ರಧಾನ, ಭಾವಪ್ರಧಾನವಿರುವಂಥ ಪರಮಾಗಮಗಳು ಅದೇನು ಮರೆಯಾಗಿ ಮಸುಳಿಸಿ ಹೊದವೋ ಅಥವಾ ಇಂದಿನ ಪಂಡಿತರುಗಳೇ ಅವುಗಳ ಕಡೆಗೆ ವಿಶೇಷ ಗಮನ ಹರಿಸಲಿಲ್ಲವೋ ಏನೋ ! ಅಂತೂ ಸಾಮಾನ್ಯ ಜನರು ಜ್ಞಾನದ ವಿಷಯದಿಂದ ವಂಚಿತರಾಗಿ ಹೋಗಿರುವುದು ಯಾರಿಗೂ ಶೋಭನೀಯವಿಲ್ಲ.

ಪಂಚಾಸ್ತಿಕಾಯ, ಪ್ರವಚನಸಾರ, ಸಮಯಸಾರ ಇವು ಮೂರನ್ನು ಪ್ರಾಭೃತತ್ರಯವೆಂದು ಹೇಳಿರುವುದರ ತಾತ್ಪರ್ಯವೇನೆಂದರೆ ಕ್ರಮಪೂರ್ವಕವಾಗಿ ಆತ್ಮಲಕ್ಷಿಯಾಗಿ ಸೂಕ್ಷ್ಮದೃಷ್ಟಿಯಿಂದ ಈ ಮೂರರ ಅಧ್ಯಯನ ಮಾಡಿ ಮೂಲ ಪ್ರಯೋಜನಭೂತ ಸತ್ವವನ್ನು ಅಂತರ್ಗತ ಮಾಡಿಕೊಂಡಾಗಲೇ ಜೀವನು ತನ್ನ ಸರ್ವವಿಶುದ್ಧಜ್ಞಾನವನ್ನು ಪ್ರಕಟಪಡಿಸಿಕೊಂಡು ಆ ಆನಂದಮಯವಾದ ಶಾಂತ ಸುಧಾರಸದಲ್ಲಿ ಸಾದಿ ಅನಂತ ಕಾಲದವರೆಗೆ ಸ್ಥಿರವಾಗಿ ಉಳಿಯಬಹುದಾಗಿದೆ, ನೆಲೆಸಿ ನಿಲ್ಲಬಹುದಾಗಿದೆ.

ಪ್ರಥಮ ಸ್ಥಾನದಲ್ಲಿ ಬರುವಂಥ ಈ ಪಂಚಾಸ್ತಿಕಾಯ ಸಂಗ್ರಹ ಗ್ರಂಥವನ್ನು ಪ್ರಾರಂಭ ಮಾಡುತ್ತ ಆಚಾರ್ಯ ಭಗವಂತರು **''ಪವಯಣಸಾರಂ ಪಂಚತ್ಥಿಯ ಸಂಗಹಂ ಸುತ್ತಂ''** ಎಂದರೆ ಪ್ರತ್ಯಕ್ಷ ಸರ್ವಜ್ಞ ಭಗವಂತರ ದಿವ್ಯಧ್ವನಿಯ ಸಾರಭೂತ ಸಂದೇಶವನ್ನೇ ಇದರಲ್ಲಿ ತುಂಬಿ ಬಿಟ್ಟಿದ್ದೇನೆಂದು ಹೇಳಿದ್ದಾರೆ. ಆ ದಿವ್ಯ ಧ್ವನಿಯಲ್ಲಿ ಸಮಸ್ತ ಪದಾರ್ಥಗಳ ಪ್ರತಿಪಾದನೆ, ಚತುರ್ಗತಿ ನಿವಾರಣೆ ಮತ್ತು ನಿರ್ವಾಣದ ಕಾರಣವು ಒಳಗೊಂಡಿದೆಯೆಂದು ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಈ ಪಂಚಾಸ್ತಿಕಾಯ ಪರಮಾಗಮವು ದುಃಖತಪ್ತ ಸಂಸಾರೀ ಪ್ರಾಣಿಗೆ ಸುಖದ ಮಾರ್ಗವನ್ನು ತೋರುತ್ತದೆಂಬುದು ನಿಶ್ಚಿತವಿದೆ.

ಕಾಲ ಸಹಿತ ಐದು ಅಸ್ತಿಕಾಯಗಳ ಸಮುದಾಯವಿರುವ ಈ ವಿಶ್ವದಲ್ಲಿ ಪ್ರತಿಯೊಂದು ವಸ್ತುವು ಅನುತ್ಪನ್ನ ಮತ್ತು ಅವಿನಾಶಿಯಿದ್ದು ಪ್ರತಿಯೊಂದರಲ್ಲಿ ಅನಂತ ಶಕ್ತಿ ಅಥವಾ ಗುಣಗಳಿವೆ, ಅವು ತ್ರೈಕಾಲಿಕ ನಿತ್ಯವಿವೆ. ಪ್ರತಿಯೊಂದು ವಸ್ತುವು ಸಮಯ-ಸಮಯಕ್ಕೆ ನವೀನ ಪರ್ಯಾಯ ಧಾರಣ ಮಾಡುತ್ತಿದ್ದರೂ ಯಾವುದೂ ತನ್ನ ಜಾತಿಯನ್ನು ಬಿಟ್ಟುಕೊಟ್ಟು ಬೇರೆ ರೂಪವಾಗುವುದಿಲ್ಲ. ಹೀಗೆ ಪ್ರತಿಯೊಂದು ಜಡ-ಚೇತನವು ತನ್ನ ತನ್ನ ಸ್ವರೂಪ ಸೀಮೆಯಲ್ಲಿದ್ದುಕೊಂಡು ನಿರಂತರ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಲಿವೆ. ಜಗತ್ತಿಗೆ ಉಪಕಾರ ಮಾಡುತ್ತಿವೆ.

ಐದು ಅಸ್ತಿಕಾಯಗಳಲ್ಲಿ ಜೀವಾಸ್ತಿಕಾಯದೊಳಗೆ ಅಂತರ್ಗತವಿರುವ ನಿಜಾತ್ಮನನ್ನು ಸ್ವರೂಪದಿಂದ ಅತ್ಯಂತ ವಿಶುದ್ಧ, ಚೈತನ್ಯ ಸ್ವಭಾವವುಳ್ಳವನೆಂದು ಸ್ವಾಶ್ರಿತ ನಿಶ್ಚಯನಯದ ಕಥನದಿಂದ ನಿರ್ಣಯ ಮಾಡಬೇಕು ಮತ್ತು ಪರದೊಡನೆ ತನ್ನ ಸಂಬಂಧವಿರುವ ರೂಪದ ನಿರೂಪಣೆ ಮಾಡುವ ಪರಾಶ್ರಿತ ವ್ಯವಹಾರನಯದ ಕಥನವನ್ನು ಅಭೂತಾರ್ಥವೆಂದು ತಿಳಿದು ಬಿಟ್ಟುಕೊಡಬೇಕು. ಈ ಪ್ರಕಾರ ಮೂಲಭೂತ ವಸ್ತುತತ್ತ್ವದ ನಿರೂಪಣೆ ಮಾಡುವ ಈ ಶಾಸ್ತ್ರದಲ್ಲಿ ತಿಳಿಸಿಕೊಟ್ಟ ರೀತಿಯನ್ನು ಹೊರತುಪಡಿಸಿ ಅನ್ಯ ಪ್ರಕಾರದಿಂದ ಜೀವನು ತನ್ನ ಅನಾದಿ ಕಾಲೀನವಾದ ದುಃಖದಿಂದ ಬಿಡುಗಡೆ ಹೊಂದಿ ತನ್ನ ಸ್ವಾಭಾವಿಕ ಸುಖವನ್ನು ಪಡೆಯುವುದಿಲ್ಲ.

ಅಂಥ ಸ್ವರೂಪ ಸುಖದ ಪ್ರಾಪ್ತಿಯ ಸಲುವಾಗಿಯೇ ಈ ಪೂಜ್ಯ ಪಂಚಾಸ್ತಿಕಾಯ ಪರಮಾಗಮದ ಮೇಲೆ ಬರೆದ ಅಮೃತಚಂದ್ರಾಚಾರ್ಯದೇವರ ಟೀಕೆ ಸಹಿತವಿರುವ ಪರಿಪೂರ್ಣ ಗ್ರಂಥದ ಶಬ್ದಶಬ್ದದ ಭಾವವನ್ನು ಆತ್ಮಜ್ಞಾನೀ ಮಹಾಪುರುಷರಿಂದ ತೆಗೆಯಲ್ಪಟ್ಟಿದ್ದು ಅದನ್ನೇ ಇಲ್ಲಿ **''ಪಂಚಾಸ್ತಿಕಾಯ ಪರಿಮಳ''** ಯೆಂಬ ಹೆಸರಿನಲ್ಲಿ ಕೊಡುತ್ತಿದ್ದೇವೆ. ಕನ್ನಡಿಗರೆಲ್ಲರೂ ಇದರ ಸದುಪಯೋಗ ಪಡೆದು ಮೋಕ್ಷಮಾರ್ಗದಲ್ಲಿ ಆರೂಢರಾಗಬೇಕೆಂದು ಆಶಿಸುತ್ತೇನೆ.

**- ಶ್ರೀ ಎಂ. ಬಿ. ಪಾಟೀಲ, ಸೇಡಬಾಳ.**

# INDEX



| Sl. No. | Gatha No. | Page No. | Sl. No. | Gatha No. | Page No. | Sl. No. | Gatha No. | Page No. |
|---|---|---|---|---|---|---|---|---|
| 1. | Gatha -91 | 1 | 29. | Gatha -119 | 83 | 57. | Gatha -147 | 164 |
| 2. | Gatha -92 | 7 | 30. | Gatha -120 | 84 | 58. | Gatha -148 | 166 |
| 3. | Gatha -93 | 8 | 31. | Gatha -121 | 87 | 59. | Gatha -149 | 168 |
| 4. | Gatha -94 | 9 | 32. | Gatha -122 | 89 | 60. | Gatha -150 | 172 |
| 5. | Gatha -95 | 11 | 33. | Gatha -123 | 92 | 61. | Gatha -151 | 172 |
| 6. | Gatha -96 | 13 | 34. | Gatha -124 | 93 | 62. | Gatha -152 | 181 |
| 7. | Gatha -97 | 14 | 35. | Gatha -125 | 94 | 63. | Gatha -153 | 183 |
| 8. | Gatha -98 | 16 | 36. | Gatha -126 | 95 | 64. | Gatha -154 | 186 |
| 9. | Gatha -99 | 23 | 37. | Gatha -127 | 95 | 65. | Gatha -155 | 194 |
| 10. | Gatha -100 | 25 | 38. | Gatha -128 | 98 | 66. | Gatha -156 | 199 |
| 11. | Gatha -101 | 29 | 39. | Gatha -129 | 98 | 67. | Gatha -147 | 201 |
| 12. | Gatha -102 | 29 | 40. | Gatha -130 | 98 | 68. | Gatha -158 | 201 |
| 13. | Gatha -103 | 31 | 41. | Gatha -131 | 102 | 69. | Gatha -159 | 204 |
| 14. | Gatha -104 | 39 | 42. | Gatha -132 | 104 | 70. | Gatha -160 | 210 |
| 15. | Gatha -105 | 44 | 43. | Gatha -133 | 108 | 71. | Gatha -161 | 219 |
| 16. | Gatha -106 | 46 | 44. | Gatha -134 | 110 | 72. | Gatha -162 | 225 |
| 17. | Gatha -107 | 56 | 45. | Gatha -135 | 114 | 73. | Gatha -163 | 230 |
| 18. | Gatha -108 | 61 | 46. | Gatha -136 | 115 | 74. | Gatha -164 | 235 |
| 19. | Gatha -109 | 69 | 47. | Gatha -137 | 120 | 75. | Gatha -165 | 240 |
| 20. | Gatha -110 | 70 | 48. | Gatha -138 | 123 | 76. | Gatha -166 | 243 |
| 21. | Gatha -111 | 73 | 49. | Gatha -139 | 124 | 77. | Gatha -167 | 245 |
| 22. | Gatha -112 | 74 | 50. | Gatha -140 | 126 | 78. | Gatha -168 | 248 |
| 23. | Gatha -113 | 77 | 51. | Gatha -141 | 131 | 79. | Gatha -169 | 251 |
| 24. | Gatha -114 | 78 | 52. | Gatha -142 | 136 | 80. | Gatha -170 | 255 |
| 25. | Gatha -115 | 78 | 53. | Gatha -143 | 141 | 81. | Gatha -171 | 260 |
| 26. | Gatha -116 | 79 | 54. | Gatha -144 | 142 | 82. | Gatha -172 | 266 |
| 27. | Gatha -117 | 80 | 55. | Gatha -145 | 159 | 83. | Gatha -173 | 309 |
| 28. | Gatha -118 | 81 | 56. | Gatha -146 | 161 | | | |

॥ ಓಂ ॥

ಪರಮಾತ್ಮನೇ ನಮಃ

# ಭಗವಾನ ಕುಂದಕುಂದಾಚಾರ್ಯದೇವವಿರಚಿತ

# ಪಂಚಾಸ್ತಿಕಾಯ ಪರಿಮಳ

ಈಗ ಲೋಕದ ಹೊರಗೆ ಯಾವ ಅಲೋಕಾಕಾಶವಿದೆ ಅದರ ಸ್ವರೂಪ ಹೇಳುತ್ತಾರೆ -

**ಜೀವಾ ಪೋಗ್ಗಲಕಾಯಾ ಧಮ್ಮಾಧಮ್ಮಾ ಯ ಲೋಗದೋ ಣಣ್ಣಾ।**
**ತತ್ತೋ ಅಣಣ್ಣಮಣ್ಣಂ ಆಯಾಸಂ ಅಂತವದಿರಿತ್ತಂ ॥೯೧॥**

**ಜೀವ, ಪುದ್ಗಲಕಾಯ, ಧರ್ಮಾಧರ್ಮ, ಕಾಲಗಳಿವು ಲೋಕದಿಂದನನ್ಯವಿವೆ ।**
**ಅವಸಾನವಿಲ್ಲದಾಕಾಶ ಲೋಕದಿಂದನನ್ಯ ಮತ್ತದರಂತೆ ಅನ್ಯವಿದೆ ॥೯೧॥**

ಆಕಾಶವು ಲೋಕ ಮತ್ತು ಅಲೋಕದ ಭೇದದಿಂದ ಎರಡು ಪ್ರಕಾರದ್ದಿದೆ. ಯಾವುದರಲ್ಲಿ ಜೀವ ಮೊದಲಾದ ಐದು ದ್ರವ್ಯಗಳಿರುತ್ತವೆ, ಅದನ್ನು ಲೋಕಾಕಾಶವೆಂದು ಹೇಳುತ್ತಾರೆ. ಎಲ್ಲಿ ಕೇವಲ ಆಕಾಶವೇ ಇದೆ, ಅದನ್ನು ಅಲೋಕವೆಂದು ಹೇಳುತ್ತಾರೆ. ಅಲೋಕ ಆಕಾಶವು ಏಕದ್ರವ್ಯದ ಅಪೇಕ್ಷೆಯಿಂದ ಲೋಕದಿಂದ ಬೇರೆಯಿಲ್ಲ ಮತ್ತು ಅಲೋಕಾಕಾಶದಲ್ಲಿ ಐದು ದ್ರವ್ಯಗಳು ಇಲ್ಲದಿರುವ ಅಪೇಕ್ಷೆಯಿಂದಂತೂ ಅಲೋಕಾಕಾಶವು ಲೋಕದಿಂದ ಬೇರೆಯಿದೆ, ಅಲೋಕಾಕಾಶವು ಅನಂತ ಪ್ರದೇಶಿಯಿದೆ ಮತ್ತು ಲೋಕಾಕಾಶವು ಅಸಂಖ್ಯಾತ ಪ್ರದೇಶಿಯಿದೆ.

**ಪ್ರಶ್ನೆ :-** ಲೋಕಾಕಾಶದ ಕ್ಷೇತ್ರವು ಕಿಂಚಿತ್ ಮಾತ್ರವಿದ್ದು ಅದರಲ್ಲಿ ಜೀವ ಮೊದಲಾದ ಪದಾರ್ಥಗಳು ಯಾವ ರೀತಿ ಸಮಾವೇಶವಾಗುವ ಸಾಧ್ಯತೆಯಿದೆ ? ಐದು ರೂಪಾಯಿಗಳು ಸಮಾವೇಶವಾಗುವಂಥ ಚಿಕ್ಕ ಚೀಲದಲ್ಲಿ ಐದು ಸಾವಿರ ರೂಪಾಯಿಗಳು ಹೇಗೆ ಸಮಾವೇಶವಾಗುವ ಸಾಧ್ಯತೆಯಿದೆ ?

**ಉತ್ತರ :-** ಒಂದು ಮನೆಯಲ್ಲಿ ಅನೇಕ ದೀವಿಗೆಗಳ ಪ್ರಕಾಶವು ಸಮಾವೇಶವಾಗುವ ರೀತಿಯಿಂದ ಅಸಂಖ್ಯಾತ ಪ್ರದೇಶಿಯಾದ ಆಕಾಶದಲ್ಲಿ ಸ್ವಾಭಾವಿಕವಾದ ಅವಗಾಹನ ಸ್ವಭಾವದಿಂದ ಅನಂತ ಜೀವ ಮೊದಲಾದ ಪದಾರ್ಥಗಳು ಸಮಾವೇಶವಾಗಿ ಹೋಗುತ್ತವೆ. ವಸ್ತುವಿನ ಸ್ವಭಾವವು ವಚನಗಮ್ಯವಿಲ್ಲ, ಸರ್ವಜ್ಞದೇವರು ತಿಳಿದುಕೊಂಡಿದ್ದಾರೆ, ಅವರು ಅನುಭವಿಸಿದ್ದಾರೆ. ಅದರಿಂದ ಅದರಲ್ಲಿ ಸಂದೇಹವು ಅತ್ಪನ್ನವಾಗುವುದಿಲ್ಲ. ವಸ್ತುಸ್ವರೂಪದಲ್ಲಿ ಯಾವಾಗಲೂ ವಿಶ್ವಾಸವಿಡುವುದರಿಂದ ಆಕಸ್ಮಿಕವೂ ಅನಂತವೂ ಆದ ಸುಖದ ಅನುಭವವಾಗುವುದು.

೧) ಆಕಾಶದ ಕ್ಷೇತ್ರವಂತೂ ಅನಂತ ಅನಂತವಿದೆ ಲೋಕದ ನಂತರ ಅಲೋಕವಿದೆ ಲೋಕವು ಸಂಗ್ರಹಾತ್ಮಕವಿದೆ. ಅದರ ನಂತರ ಯಾವುದಾದರೂ ಗೋಡೆ ಬರುವುದೇನು ? ಅನಂತರ ಅನಂತರ ಏನಾದರೂ ಇದೆಯೇನು ? ಇಲ್ಲ

ಅನಂತರ ಏನೂ ಇಲ್ಲ, ಕೇವಲ ಬರಿದಾದ ಭಾಗವಿದೆ. ಹತ್ತು ದಿಶೆಗಳಲ್ಲಿ ಅಳತೆಯಿಲ್ಲದ ಅನಂತ ಅನಂತ ಕ್ಷೇತ್ರವಿದೆಯೆಂಬುದು ತಿಳಿದು ಬರುತ್ತದೆ. ಅದರದೆಲ್ಲಿಯೂ ಕೊನೆಯಿಲ್ಲ, ಹೀಗೆ ಕ್ಷೇತ್ರ ಸ್ವಭಾವದ ಅಚಿಂತ್ಯತೆ ಮತ್ತು ಅನಂತತೆಯು ತಿಳಿದುಬರುತ್ತದೆ. ಯಾವನಾದರೂ ನಾಸ್ತಿಕನು ಕೂಡ ವಿಚಾರ ಮಾಡಿದರೆ ಇದೆ ಇದೆಯೆಂದಂತೂ ಹೇಳುವನು. ತರ್ಕ ಮಾಡಿದರೆ ಲಕ್ಷ್ಯದಲ್ಲಿ ಬರುವುದು. ಈ ಕ್ಷೇತ್ರವು ಹೇಗಿದೆಯೆಂದರೆ ಅನಂತ ಅಪಾರವಿದೆ, ಅದರದು ಕೊನೆಯಿಲ್ಲ. ಅದರ ಅಸ್ತಿತ್ವವನ್ನು ಸ್ವೀಕರಿಸಿದರೆ ಲಕ್ಷ್ಯದಲ್ಲಿ ಬರುವಂತಿದೆ, ನ್ಯಾಯದಿಂದ ಮಾತನ್ನು ಹೇಳಲಾಗಿದೆ. ಎಲ್ಲಿಯಾದರೂ ಕ್ಷೇತ್ರದ ಕೊನೆಯಿದೆಯೇನು ? ಜನರು ಆಕಾಶದ ಮಾತು ಹೇಳುತ್ತಾರೆ ಅದಂತೂ ರೂಪಿಯಿದೆ ಆದರೆ ಇಲ್ಲಿಯಂತೂ ಅರೂಪಿ ಆಕಾಶದ ಮಾತು ನಡೆಯುತ್ತಿದೆ. ಅರೂಪಿ ಆಕಾಶದ ಪ್ರದೇಶದ ಶ್ರೇಣಿಗಳು ದಶದಿಶೆಗಳಲ್ಲಿ ಹರಡಿ ಹೋಗುತ್ತವೆ, ಒಂದು ಪರಮಾಣುವು ಎಷ್ಟು ಸ್ಥಳವನ್ನು ಆಕ್ರಮಿಸುತ್ತದೆ ಅದಕ್ಕೆ ಒಂದು ಪ್ರದೇಶವೆಂದು ಹೇಳುತ್ತಾರೆ. ಆ ಪ್ರದೇಶದಿಂದ ಅಳತೆ ಮಾಡ ಹೋದರೆ ಆಕಾಶವು ಅನಂತ ಪ್ರದೇಶಿಯಿದೆ. ಕ್ಷೇತ್ರವು ಅಳತೆ ರಹಿತವಿದೆ, ತರ್ಕದಿಂದ ನಿರಾಕರಿಸುವಂತಿಲ್ಲ. ಯಾವ ಆಕಾಶ ಕ್ಷೇತ್ರವಿದೆ ಅದರ ಸೀಮೆಯಿಲ್ಲ, ದಶದಿಕ್ಕುಗಳಲ್ಲಿ ಅನಂತವಿದೆ. ಈ ಪ್ರಕಾರ ಆಕಾಶದ ಅನಂತ ಪ್ರದೇಶಗಳ ಕ್ಷೇತ್ರದ ಅಸ್ತಿತ್ವದ ಮಾತು ಹೇಳಲಾಯಿತು.

೨) ಈಗ ಅದರ ಸ್ವಭಾವದ ಮಾತು ಹೇಳುತ್ತಾರೆ. ಆ ಕ್ಷೇತ್ರದ ಸ್ವಭಾವವು ಹೇಗಿದೆಯೆಂದರೆ ಅನಂತ ಜೀವಗಳು, ಪುದ್ಗಲಗಳು ಮೊದಲಾದ ಪದಾರ್ಥಗಳಿಗೆ ಅವಗಾಹನ ಕೊಡುವಂತೆ ಅದರದು ಅವಗಾಹನ ಶಕ್ತಿಯಿದೆ. ಲೋಕದ ಪದಾರ್ಥಗಳು ಸೂಕ್ಷ್ಮ ಪರಿಣಮನ ಮಾಡಿದರೆ ಎಲ್ಲವುಗಳಿಗೆ ಒಂದು ಕ್ಷೇತ್ರದಲ್ಲಿ ಸ್ಥಳಾವಕಾಶ ಕೊಡುವ ಸಾಧ್ಯತೆಯಿರುವಂಥ ಅಚಿಂತ್ಯ ಅವಗಾಹನ ಶಕ್ತಿಯು ಆಕಾಶದಲ್ಲಿ ಇದೆ. ಅದು ಅವಗಾಹನ ಸ್ವಭಾವದ ಅನಂತತೆಯಾಯಿತು.

೩) ಈಗ ಆಕಾಶವಿದೆಯೆಂದರೆ ಅದು ಯಾವಾಗಿನಿಂದ ಇದೆ. ಅದಕ್ಕೆ ಆದಿಯೂ ಇಲ್ಲ, ಅದರಂತೆ ಕೊನೆಯು ಕೂಡ ಇಲ್ಲ. ಹೀಗೆ ಕಾಲದಿಂದ ಕೂಡ ಅನಂತತೆಯಿದೆ.

೪) ಈ ಎಲ್ಲ ಅನಂತತೆಯ ಸ್ವೀಕಾರವನ್ನು ಯಾರು ಮಾಡುತ್ತಾರೆಂದರೆ ಜ್ಞಾನವು ಆ ಎಲ್ಲ ಅನಂತತೆಯನ್ನು ತಿಳಿಯುತ್ತದೆ. ಕೆಳಗಿನ ಅವಸ್ಥೆಯಲ್ಲಿ ರಾಗವಿದ್ದರೂ ಕೂಡ ರಾಗಕ್ಕೆ ಆ ಅನಂತತೆಯ ಅರಿವು ಇಲ್ಲ. ಜ್ಞಾನವು ಅದನ್ನು ತಿಳಿಯುತ್ತದೆ. ಛದ್ಮಸ್ಥ ಜೀವರುಗಳಿಗೆ ಜ್ಞಾನಪರ್ಯಾಯವು ಅಸಂಖ್ಯ ಸಮಯದಲ್ಲಿ ಅನಾದಿ ಅನಂತ ಕಾಲದ ವಿಚಾರ ಮಾಡುತ್ತದೆ, ಅನಂತ ಕ್ಷೇತ್ರದ ವಿಚಾರ ಮಾಡುತ್ತದೆ. ಲೋಕದಲ್ಲಿ ವಾಸಿಸುವಂಥ ಅನಂತ ಜೀವ ಮೊದಲಾದ ಪದಾರ್ಥಗಳನ್ನು ಹಾಗೂ ಪದಾರ್ಥಗಳಿಂದ ರಹಿತವಾದ ಅಲೋಕವನ್ನು ವಿಚಾರ ಮಾಡುತ್ತದೆ. ಇಷ್ಟು ಸತ್ತಾವನ್ನು ಜ್ಞಾನಪರ್ಯಾಯವು ಒಪ್ಪಿಕೊಳ್ಳುತ್ತದೆ.

೫) ಒಂದು ಜ್ಞಾನಪರ್ಯಾಯದಲ್ಲಿ ಇಷ್ಟು ಸತ್ತಾವನ್ನು ಒಪ್ಪಿಕೊಳ್ಳುವಂಥ ಅಚಿಂತ್ಯ ಸಾಮರ್ಥ್ಯವಿದೆಯೆಂದಮೇಲೆ ಅನಂತ ಅನಂತ ಪರ್ಯಾಯಗಳ ಪಿಂಡರೂಪವಾದ ಒಂದು ಜ್ಞಾನಗುಣದ ಸಾಮರ್ಥ್ಯವಂತೂ ಅನಂತವೆಂದು ತಿಳಿಯುವುದು ಜ್ಞಾನಗುಣವು ಇರುವ ಹಾಗೆ ಬೇರೆ ಶ್ರದ್ಧೆ, ಅಸ್ತಿತ್ವ ಮೊದಲಾದ ಗುಣಗಳು ಕೂಡ ಇವೆ. ಇಂಥ ಅನಂತ ಗುಣಗಳ ಪಿಂಡರೂಪನಾದ ಆತ್ಮನು ಅಚಿಂತ್ಯ ಸಾಮರ್ಥ್ಯವುಳ್ಳವನಿದ್ದಾನೆಂಬ ಪ್ರತೀತಿಯಾಗುತ್ತದೆ. ಹೀಗೆ ಆತ್ಮನು ಪರದ ಅಭಾವ ಸ್ವಭಾವರೂಪ, ವಿಕಾರ ಮತ್ತು ಪರದ ಆಧಾರ, ಪರದ ಸತ್ತಾದಿಂದ ರಹಿತ, ಅನಂತ ನಿರ್ಮಲ ಪರ್ಯಾಯಗಳ ಧಾರಕ ಶುದ್ಧ ಚೈತನ್ಯಸ್ವಭಾವಿಯಿದ್ದಾನೆಂಬ ಸ್ವೀಕಾರವಾಗುತ್ತದೆ.

೬) ಹೀಗೆ ನಿಶ್ಚಿತ ಮಾಡಿದ ನಂತರ ಸಾಧಕ ಜೀವನಿಗೆ ತಿಳಿದುಬರುವುದೇನೆಂದರೆ ವರ್ತಮಾನದಲ್ಲಿ ನನಗೆ ರಾಗವಿರುವುದರಿಂದ ಸಮಸ್ತ ಪದಾರ್ಥಗಳನ್ನು ಪ್ರತ್ಯಕ್ಷವಾಗಿ ನೋಡುವ ಸಾಧ್ಯತೆಯಿಲ್ಲ. ಆದರೆ ರಾಗವನ್ನು ದೂರಮಾಡಿ

ಸ್ವಭಾವದಲ್ಲಿ ಸಂಪೂರ್ಣವಾಗಿ ಸ್ಥಿರಗೊಂಡು ಪರಿಪೂರ್ಣತೆಗೆ ಪ್ರಾಪ್ತರಾದ ಸರ್ವಜ್ಞರುಗಳು ಅನಂತರಾಗಿದ್ದಾರೆ. ನನ್ನ ಹಾಗೆ ಸ್ವರೂಪವನ್ನು ಸಾಧಿಸುವಂಥ ಸಾಧಕರು ಕೂಡ ಇದ್ದಾರೆ ಮತ್ತು ವಸ್ತುಸ್ವರೂಪವು ಹೇಗೆ ಇದೆ ಹಾಗೆ ಒಪ್ಪಿಕೊಳ್ಳ-ದಂಥ ಮಿಥ್ಯಾದೃಷ್ಟಿ ಜೀವರುಗಳು ಕೂಡ ಇದ್ದಾರೆ. ಅವರು ರಾಗವನ್ನು ಮತ್ತು ವಿಕಾರವನ್ನು ಸ್ಥೂಲವಾಗಿ ಮಾಡಿದರೆ ಅವರಿಗೆ ನಿಮಿತ್ತರೂಪದಿಂದ ಕರ್ಮಗಳು ಕೂಡ ಜಗತ್ತಿನಲ್ಲಿ ಇವೆಯೆಂದು ಎಲ್ಲವು ವಿಚಾರದಲ್ಲಿ ಬಂದು ಬಿಡುತ್ತವೆ.

೭) ಮೊದಲು ವಸ್ತುಸ್ವರೂಪದ ತಿಳಿವಳಿಕೆ ಇರಲಿಲ್ಲ, ತಿಳಿವಳಿಕೆ ಬಂದನಂತರ ಜ್ಞಾನಪರ್ಯಾಯವು ಒಮ್ಮೆಲೇ ತಿರುವುಮುರುವಾಗುತ್ತದೆ ಮತ್ತು ಓಹೋ ! ಈ ಜಗತ್ತಿನಲ್ಲಿ ಆಕಾಶದ್ರವ್ಯವು ಕ್ಷೇತ್ರದಿಂದ, ಭಾವದಿಂದ, ಕಾಲದಿಂದ ಅನಂತತೆಯುಳ್ಳದ್ದಿದೆಯೆಂಬುದರ ಸ್ವೀಕಾರವನ್ನು ನನ್ನ ಜ್ಞಾನಪರ್ಯಾಯವು ಮಾಡಿದೆ. ಆ ಕಾರ್ಯವು ಜ್ಞಾನದ ಪರ್ಯಾಯದಲ್ಲಿ ಆಗಿದೆಯೆಂದರೆ ಜ್ಞಾನದ ಪರ್ಯಾಯದಲ್ಲಿ ತಿಳಿವಳಿಕೆಯರೂಪದ ಕಾರ್ಯವಾಗುವಲ್ಲಿ ಕಾರಣವು ಯಾವುದಿದೆ ? ಕಾರಣವಂತೂ ಗುಣಗಳ ಸಾಗರನಾದಂಥ ಆತ್ಮನೇ ಇದ್ದಾನೆ. ಅಯ್ಯಾ ! ನನ್ನ ಆತ್ಮನಂತೂ ಅನಂತ ಗುಣಗಳಿಂದ ತುಂಬಿಹೋಗಿದ್ದಾನೆ, ನನ್ನ ಜ್ಞಾನಸ್ವಭಾವವು ಅಚಿಂತ್ಯವಿದೆಯೆಂಬ ಮಹಿಮೆಯು ಬಂದುಬಿಟ್ಟರೆ ಸ್ವಭಾವಬುದ್ಧಿಯಾಗುತ್ತದೆ ಮತ್ತು ಪರ್ಯಾಯಬುದ್ಧಿಯು ಹೊರಟು ಹೋಗುತ್ತದೆ. ಹೀಗಾಗುವುದೇ ನಿಜವಾಗಿ ಧರ್ಮದಶೆಯ ಆರಂಭವಿದೆ.

ಏನು ದ್ರವ್ಯದ ನಿರಾಕರಣೆ ಮಾಡುವ ಸಾಧ್ಯತೆಯಿದೆಯೇನು ? ಒಂದನ್ನು ಒಪ್ಪಿಕೊಂಡರೆ ಎಲ್ಲವನ್ನು ಒಪ್ಪಿಕೊಂಡಂತಿದೆ. ಜಡದ ದ್ರವ್ಯ, ಕ್ಷೇತ್ರ, ಕಾಲ ಮತ್ತು ಸ್ವಭಾವದ ಅಳತೆ ಮಾಡುವಂಥದು ಜ್ಞಾನವಿದೆ. ರಾಗವುಳ್ಳ ಜ್ಞಾನಕ್ಕೆ ಅಸಂಖ್ಯ ಸಮಯಗಳು ತಗಲುತ್ತವೆ, ಆದರೆ ರಾಗವು ಹೊರಟು ಹೋದನಂತರ ಸಂಪೂರ್ಣ ಕೇವಲಜ್ಞಾನವು ಪ್ರಕಟವಾಗುತ್ತದೆ, ಅದು ಸಮಸ್ತ ದ್ರವ್ಯಗಳನ್ನು ಪ್ರತ್ಯಕ್ಷವಾಗಿ ಒಂದು ಸಮಯದಲ್ಲಿ ತಿಳಿಯುತ್ತದೆ. ಆ ಜ್ಞಾನವು ಪರಪದಾರ್ಥಗಳಿಂದ ಮತ್ತು ನಿಮಿತ್ತದ ಕಾರಣದಿಂದ ಆಗುವುದಿಲ್ಲ. ಅದರಂತೆ ಆಕಾಶದ ಅನಂತತೆ ಮತ್ತು ಅಪಾರತೆಯ ಕಾರಣದಿಂದ ಆಗುವುದಿಲ್ಲ. ಜ್ಞಾನವಂತೂ ಅಂತರ್ಮುಖ ದೃಷ್ಟಿಮಾಡುವುದರಿಂದ ಪ್ರಕಟವಾಗುತ್ತದೆ, ಇಂಥ ಅಳತೆಯಿಲ್ಲದ ಚೈತನ್ಯಸ್ವಭಾವಿಯಾದ ಸೂರ್ಯನ ಅಳತೆ ಮಾಡಲಾಗುವುದಿಲ್ಲ.

೧) ಒಂದು ಪರಮಾಣುವಿನ ಸಾಮರ್ಥ್ಯವು ಒಂದು ಸಮಯದಲ್ಲಿ ಹದಿನಾಲ್ಕು ರಜ್ಜು ಪ್ರಮಾಣದಲ್ಲಿ ತಲುಪಿಬಿಡುವಷ್ಟು ಇದೆ ಮತ್ತು ಭಾವದಲ್ಲಿ ಕೂಡ ಅನಂತ ಸಾಮರ್ಥ್ಯವಿದೆ. ಒಂದು ಗುಣವು ಸ್ನಿಗ್ಧ ಪರಮಾಣುವು ಒಂದು ಸಮಯದಲ್ಲಿ ಅನಂತಗುಣಿತ ಸ್ನಿಗ್ಧವಾಗಿ ಹೋಗುತ್ತದೆ ಮತ್ತು ಅನಂತಗುಣಗಳೊಳಗಿಂದ ಒಂದು ಗುಣವಾಗಿ ಹೋಗುವಂಥ ಸಾಮರ್ಥ್ಯವು ಪುದ್ಗಲ ಪರಮಾಣುವಿನಲ್ಲಿ ಇದೆ.

೨) ಧರ್ಮಾಸ್ತಿಕಾಯದ ಸಾಮರ್ಥ್ಯವು ಎಷ್ಟಿದೆಯೆಂದರೆ ಅದು ಅನಂತ ಆತ್ಮರುಗಳು ಮತ್ತು ಅನಂತ ಪುದ್ಗಲಗಳು ಒಟ್ಟಿಗೆ ಗತಿ ಮಾಡಿದರೂ ಕೂಡ ಅವೆಲ್ಲವುಗಳ ಗತಿಯಲ್ಲಿ ನಿಮಿತ್ತವಾಗುತ್ತದೆ.

೩) ಅಧರ್ಮಾಸ್ತಿಕಾಯದ ಸಾಮರ್ಥ್ಯವು ಎಷ್ಟಿದೆಯೆಂದರೆ ಅದು ಅನಂತ ಆತ್ಮರುಗಳು ಮತ್ತು ಅನಂತ ಪುದ್ಗಲಗಳು ಒಂದೇ ಸಮಯದಲ್ಲಿ ಗತಿಪೂರ್ವಕ ಸ್ಥಿರತೆ ಮಾಡಿದರೂ ಕೂಡ ಅವೆಲ್ಲವುಗಳ ಸ್ಥಿರತೆಯಲ್ಲಿ ನಿಮಿತ್ತವಾಗುತ್ತದೆ.

೪) ಆಕಾಶದ ಸಾಮರ್ಥ್ಯವು ಎಷ್ಟಿದೆಯೆಂದರೆ ಅದು ಅನಂತ ಅನಂತ ಚೇತನಗಳಿಗೆ ಮತ್ತು ಅನಂತ ಅನಂತ ಜಡಗಳಿಗೆ ಏಕಕಾಲದಲ್ಲಿ ಅವಕಾಶ ಕೊಡುತ್ತದೆ, ಅನಂತ ಮೇರುವಿನಷ್ಟು ಪರಮಾಣುಗಳು ಸೂಕ್ಷ್ಮರೂಪದಿಂದಪರಿಣಮಿಸಿದರೂ ಕೂಡ ಏಕಪ್ರದೇಶದಲ್ಲಿ ಸ್ಥಳಾವಕಾಶ ಕೊಡುವಂಥ ಸಾಮರ್ಥ್ಯವಿದೆ.

೫) ಕಾಲದ ಸಾಮರ್ಥ್ಯವು ಎಷ್ಟಿದೆಯೆಂದರೆ ಅನಂತ ಜಡದ್ರವ್ಯಗಳು ಅನಂತ ಚೇತನದ್ರವ್ಯಗಳು ಪರಿಣಮನ ಮಾಡುವಲ್ಲಿ ಏಕಕಾಲಕ್ಕೆ ನಿಮಿತ್ತವಾಗುತ್ತದೆ.

೬) ಅವೆಲ್ಲವುಗಳ ಸಾಮರ್ಥ್ಯವನ್ನು ತಿಳಿದುಕೊಳ್ಳುವಂಥವನು ಜೀವನಿದ್ದಾನೆ. ಅನಂತ ಲೋಕಾಲೋಕವಿದ್ದರೂ ಕೂಡ ಒಂದು ಸಮಯದಲ್ಲಿ ಎಲ್ಲವನ್ನೂ ತಿಳಿದುಕೊಳ್ಳುವಂಥದು ಜೀವದ ಸ್ವಭಾವವಿದೆ ಅದಕ್ಕಾಗಿ ಜೀವದ ಮಹಿಮೆಯಿದೆ.

ಜಡದಲ್ಲಿ ಅನಂತಭಾವಗಳಿದ್ದರು ಕೂಡ ಅವುಗಳ ಭಾವ ಮಾಡುವಂಥವನು ಆತ್ಮನಿದ್ದಾನೆ. ದ್ರವ್ಯಸ್ವಭಾವವಂತೂ ಅಳತೆಯಿಲ್ಲದಷ್ಟು ಇದೆ, ಆದರೆ ಸರ್ವಜ್ಞಪರ್ಯಾಯದ ಸ್ವಭಾವವು ಕೂಡ ಅಳತೆಯಿಲ್ಲದಷ್ಟು ಇದೆ.

೧) ವ್ಯವಹಾರದಲ್ಲಿ ರಾಗವನ್ನು ತರುವುದು ಅದು ಜ್ಞಾನದ ಸ್ವಭಾವವಲ್ಲ.

೨) ಜಗತ್ತಿನಲ್ಲಿ ಪದಾರ್ಥಗಳಿರುವುದರಿಂದ ಜ್ಞಾನವಿದೆಯೆಂಬುದಾಗಿಲ್ಲ.

೩) ಮತ್ತು ಶುಭರಾಗಾದಿಗಳ ವ್ಯವಹಾರವಿದೆ ಅದಕ್ಕಾಗಿ ಜ್ಞಾನಸ್ವಭಾವವಿದೆಯೆಂಬುದಾಗಿಲ್ಲ, ಅದರಂತೆ ಅದರ ಕಾರಣದಿಂದ ಜ್ಞಾನಸ್ವಭಾವವು ಪ್ರಕಟವಾಗುವುದಿಲ್ಲ.

೪) ತನ್ನ ಶುದ್ಧಸ್ವಭಾವದ ಆಶ್ರಯದಿಂದ ಜ್ಞಾನವು ಪ್ರಕಟವಾಗುವಂತಿದೆ. ಅಯ್ಯಾ ! ಜ್ಞಾನಸ್ವಭಾವದ ಮಹಿಮೆಯನ್ನೇನು ಹೇಳುವುದು ? ಯಾವುದು ಯಾವುದರ ಸ್ವಭಾವವಿದೆ ಅದರ ಮರ್ಯಾದೆಯನ್ನೇನು ಹೇಳುವುದು? ಈ ಎಲ್ಲ ಜಡದ ಅಪಾರ ಸ್ವಭಾವವನ್ನು ತಿಳಿದುಕೊಳ್ಳುವುದಂತೂ ಜ್ಞಾನಪರ್ಯಾಯವಿದೆ. ಇದು ಕಾರ್ಯದಶೆಯ ಮಾತು ನಡೆಯುತ್ತಿದೆ. ಜ್ಞಾನದ ಕಾರ್ಯದ ದಶೆಯು ಕೂಡ ಸೀಮಾತೀತವಿದೆ. ಕಾರ್ಯವಂತೂ ಒಂದು ಸಮಯದ್ದಿದೆ. ಒಂದು ಕಾರ್ಯವು ಬದಲಾಗಿ ನವೀನ ಕಾರ್ಯವು ಉತ್ಪನ್ನವಾಗುತ್ತದೆ. ಜ್ಞಾನ ದಶೆಯರೂಪವಾದ ಕಾರ್ಯದ ಕಾರಣವಂತೂ ಜ್ಞಾನ ಮತ್ತು ವೀತರಾಗತೆಯ ಮೂರ್ತಿಯಾದಂಥ ಆತ್ಮನಿದ್ದಾನೆ. ಆತನ ಅವಲಂಬನೆ ತೆಗೆದುಕೊಳ್ಳುವುದರಿಂದ ಸ್ವಾಭಾವಿಕವಾದ ಜ್ಞಾನದಶೆಯು ಪ್ರಕಟವಾಗುತ್ತದೆ.

**ಪ್ರಶ್ನೆ :-** ಈ ಎಲ್ಲ ಅನಂತತೆಯ ಸ್ವಭಾವವು ಬುದ್ಧಿಗಮ್ಯವಿದೆಯೇನು ?

**ಉತ್ತರ :-** ಅಹುದು, ಬುದ್ಧಿ ಎಂದರೆ ಜ್ಞಾನಗಮ್ಯವಿದೆ ಇದು ಕ್ಷೇತ್ರವಿದೆ. ಇದೆ ಮತ್ತು ಇದೆಯೆಂದೇಕೆ ವಿಚಾರದಲ್ಲಿ ಬರುವುದಿಲ್ಲ, ಕ್ಷೇತ್ರದ ಅಂತವಿಲ್ಲ, ಕಾಲದ ಆದಿಯೂ ಇಲ್ಲ ಅಂತವೂ ಇಲ್ಲ. ಸ್ವಭಾವವು ಕೂಡ ಅನಂತ ಸಾಮರ್ಥ್ಯವುಳ್ಳದ್ದಿದೆ. ಹೀಗೆ ಕ್ಷೇತ್ರದಿಂದ, ಕಾಲದಿಂದ ಮತ್ತು ಸ್ವಭಾವದಿಂದ ಅನಂತತೆಯಿರುವಂಥ ಜಡಕ್ಕೆ ಪ್ರಜ್ಞೆಯಿಲ್ಲ. ಆ ಎಲ್ಲವುಗಳನ್ನು ತಿಳಿಯುವಂಥದು ಜ್ಞಾನವಿದೆ. ಅಯ್ಯಾ ! ನೀನು ಜ್ಞಾನಸ್ವಭಾವಿಯಾದ ಆತ್ಮನಿರುವೆ, ಜಡದ್ರವ್ಯದ ಅನಂತ ಕ್ಷೇತ್ರವನ್ನು, ಅನಂತ ಕಾಲವನ್ನು ಮತ್ತು ಅನಂತ ಸಾಮರ್ಥ್ಯವಿರುವಂಥ ಅದರ ಸ್ವಭಾವವನ್ನು ತಿಳಿಯುವಂಥವನು ನೀನು ಇರುವೆ. ನೀನು ಕೂಡ ಆದಿ-ಅಂತಗಳಿಂದ ರಹಿತನಾಗಿರುವೆ. ನೀನು ಜ್ಞಾನಸ್ವಭಾವಿಯಾಗಿರುವೆಯೆಂದು ಇಲ್ಲಿ ಶಾಸ್ತ್ರವು ನಿನ್ನ ಸ್ವಭಾವದ ಮಹಿಮೆಯನ್ನು ಹಾಡುತ್ತಿದೆ.

ಅಳತೆಯ ಮೀಟರು ದೊಡ್ಡದೋ ಅಥವಾ ಬಟ್ಟೆಯ ಥಾನು ದೊಡ್ಡದೋ ಎಂದು ಯಾರಾದರೂ ಕೇಳಿದರೆ ಕೇವಲ ಮೇಲು ದೃಷ್ಟಿಯಿಂದ ನೋಡುವವರು ಬಟ್ಟೆಯ ಥಾನು ದೊಡ್ಡದಿದೆಯೆಂದು ಹೇಳುತ್ತಾರೆ, ಆದರೆ ಅದು ತಪ್ಪು ಇದೆ. ಇಡೀ ಬಟ್ಟೆಯ ಥಾನನ್ನು ಅಳತೆ ಮಾಡಲಾಗುತ್ತದೆ, ಅಳತೆ ಮಾಡಿದನಂತರ ಆ ಥಾನದ ಕೊನೆ ಬರುತ್ತದೆ. ಆದರೆ ಮೀಟರು ಕಡಿಮೆಯಾಗುವುದಿಲ್ಲ. ಆದುದರಿಂದ ಮೀಟರು ದೊಡ್ಡದಿದೆ, ಅದರಂತೆ ಪಾದವು ದೊಡ್ಡದೋ

ಅಥವಾ ಪೃಥ್ವಿಯು ದೊಡ್ಡದೋ ಎಂದು ಯಾರಾದರೂ ಕೇಳಿದರೆ ಮೇಲು ದೃಷ್ಟಿಯಿಂದ ನೋಡುವವರು ಪೃಥ್ವಿಯು ದೊಡ್ಡದೆಂದು ಹೇಳುತ್ತಾರೆ. ಆದರೆ ಅದು ತಪ್ಪು ಇದೆ. ಪೃಥ್ವಿಯನ್ನು ಪಾದದಿಂದ ಅಳೆಯುತ್ತ ಹೋದರೆ ಅದಕ್ಕೆ ಕೊನೆ ಬರುತ್ತದೆ, ಆದರೆ ಪಾದವು ಕಡಿಮೆಯಾಗುವುದಿಲ್ಲ. ಆದುದರಿಂದ ಪಾದವು ದೊಡ್ಡದಿದೆ. ಈ ಬಾಹ್ಯ ದೃಷ್ಟಾಂತಗಳನ್ನು ತಿಳಿಸಿಕೊಡುವ ಸಲುವಾಗಿ ಹೇಳಲಾಗಿದೆ. ಅದರಂತೆ ಲೋಕಾಲೋಕವು ದೊಡ್ಡದೋ ಅಥವಾ ನೀನು ದೊಡ್ಡವನೋ ಎಂದು ಯಾರಾದರೂ ಕೇಳಿದರೆ ಮೇಲು ದೃಷ್ಟಿಯುಳ್ಳವನು ಲೋಕಾಲೋಕವು ದೊಡ್ಡದಿದೆಯೆಂದು ಹೇಳುತ್ತಾನೆ, ಆದರೆ ಅದು ತಪ್ಪು ಇದೆ. ಏಕೆಂದರೆ ನಿನ್ನ ಜ್ಞಾನರೂಪದ ಮೀಟರ್‌ನಿಂದ ಅಳತೆ ಮಾಡುವುದರಿಂದ ಲೋಕಾಲೋಕವು ಅಳತೆಯಾಗಿ ಹೋಗುತ್ತದೆ ಎಂದರೆ ಲೋಕಾಲೋಕದ ಕೊನೆಯು ಬಂದು ಬಿಡುತ್ತದೆ. ಆದರೆ ಜ್ಞಾನದ ಕೊನೆ ಬರುವುದಿಲ್ಲ, ನೀನು ಅನಂತ ಲೋಕಾಲೋಕವನ್ನು ತಿಳಿದುಕೊಳ್ಳುವಂಥವನಿರುವೆ. ಆದುದರಿಂದ ನೀನು ದೊಡ್ಡವನಿರುವೆ.

ನೋಡಿರಿ ! ಈ ಗಾಥೆಯಲ್ಲಿ ಲೋಕ-ಅಲೋಕವನ್ನು ಸಿದ್ಧಮಾಡಿದ್ದಾರೆ ಮತ್ತು ಕ್ಷೇತ್ರವು ಅವಗಾಹನ ಸ್ವಭಾವದಿಂದ ಅಪಾರವಿದೆ ಮತ್ತು ದ್ರವ್ಯಗಳು ಕೂಡ ಅಪಾರವಿವೆ. ಅದು ಲೋಕವಿದೆ ಮತ್ತು ಯಾವ ಕ್ಷೇತ್ರದಲ್ಲಿ ಅನ್ಯ ದ್ರವ್ಯಗಳು ಇಲ್ಲ ಆದರೆ ಕೇವಲ ಆಕಾಶವಿದೆ ಅದು ಅಲೋಕವಿದೆ. ಅಲೋಕವು ಅನಂತ ಪ್ರದೇಶಿಯಿದೆ ಮತ್ತು ಲೋಕವು ಅಸಂಖ್ಯ ಪ್ರದೇಶಿಯಿದೆ ಆದರೆ ಅದನ್ನು ತಿಳಿದುಕೊಳ್ಳುವಂಥ ಸಾಮರ್ಥ್ಯವು ನಿಮಿತ್ತದಲ್ಲಿ ಇಲ್ಲ, ಶುಭರಾಗದಲ್ಲಿ ಇಲ್ಲ. ಆದುದರಿಂದಲೇ ನಿಮಿತ್ತ ಮತ್ತು ಶುಭರಾಗಗಳು ಆದರಣೀಯವಿಲ್ಲ. ಒಂದು ಜ್ಞಾನದ ಪರ್ಯಾಯದಲ್ಲಿ ಎಲ್ಲವನ್ನು ತಿಳಿದುಕೊಳ್ಳುವ ಸಾಮರ್ಥ್ಯವಿದೆ. ಆ ಪರ್ಯಾಯದ ಕಾರಣವು ಪರ್ಯಾಯವಿಲ್ಲ. ಆದರೆ ಆ ಪರ್ಯಾಯದ ಕಾರಣವು ತ್ರಿಕಾಲೀ ದ್ರವ್ಯಸ್ವಭಾವವಿದೆ. ಅದಕ್ಕಾಗಿ ಪರ್ಯಾಯವು ಆದರಣೀಯವಿಲ್ಲ, ಕೇವಲ ಒಂದು ಶುದ್ಧದ್ರವ್ಯಸ್ವಭಾವವು ಆದರಣೀಯವಿದೆ. ರಾಗರಹಿತ ಅಚಿಂತ್ಯ ಜ್ಞಾನಸ್ವಭಾವದ ಪ್ರತೀತಿ ಮಾಡಿಸುವುದೇ ಈ ಗಾಥೆಯ ಉದ್ದೇಶವಿದೆ.

ಕ್ಷೇತ್ರದಿಂದ ಅನಂತತೆ, ಭಾವದಿಂದ ಅನಂತತೆ, ಕಾಲದಿಂದ ಅನಂತತೆ ಮೊದಲಾದುವನ್ನು ತಿಳಿದುಕೊಳ್ಳುವುದು ಆತ್ಮನ ಸ್ವಭಾವವಿದೆ ಮತ್ತು ಪರ್ಯಾಯದಲ್ಲಿ ಆಗುವ ರಾಗ ಮೊದಲಾದ ವಿಕಲ್ಪಗಳನ್ನು ತಿಳಿದುಕೊಳ್ಳುವವನು ಕೂಡ ಆತ್ಮನಿದ್ದಾನೆ. ರಾಗವಂತೂ ಒಂದು ಸಮಯದ ಪರ್ಯಾಯದಲ್ಲಿ ಇದೆ. ರಾಗದಿಂದ ರಹಿತವಾದ ಜ್ಞಾನಸ್ವಭಾವದ ಮಹಿಮೆಯು ಬಂದರೆ ತಾನು ತನ್ನೊಳಗೆ ಇದ್ದುಕೊಂಡು ಸ್ವ ಮತ್ತು ಪರ ಇವೆರಡನ್ನೂ ಅಳತೆ ಮಾಡುವವನಿದ್ದಾನೆ. ತಾನು ಕೂಡ ಸ್ವಜ್ಞೇಯನಿದ್ದೇನೆಂದು ತನ್ನಲ್ಲಿ ಇರುತ್ತ ಸ್ವ-ಪರಜ್ಞೇಯಗಳನ್ನು ತಿಳಿಯುತ್ತಾನೆ.

ವಸ್ತುಸ್ವರೂಪವು ವಚನಗಮ್ಯವಿಲ್ಲ, ಆದರೆ ಜ್ಞಾನಗಮ್ಯವಿದೆ. ವಸ್ತುವಿನ ಆಶಯದ ಪ್ರಜ್ಞೆಯಿಲ್ಲ. ವಚನದ ಒಳಗೆ ಇರುವ ಆಶಯವನ್ನು ಜ್ಞಾನವು ಹಿಡಿದುಕೊಳ್ಳುತ್ತದೆ. ಆ ಜ್ಞಾನದ ಮೂಲಕ ಸಾಧಕ ಜೀವನು ನಿಶ್ಚಿತ ಮಾಡುತ್ತಾನೆ. ನಾನು ಇಷ್ಟು ಕಾರ್ಯ ಮಾಡುವ ಸಾಧ್ಯತೆಯಿದ್ದರೆ ವೃದ್ಧಿಸಿ ಪೂರ್ಣವಾಗುವುದು. ಹೀಗೆ ಪೂರ್ಣರಾದಂಥ ಸರ್ವಜ್ಞ ಜೀವರುಗಳು ಕೂಡ ಇದ್ದಾರೆ. ಸಾಧಕರು ಕೂಡ ಇದ್ದಾರೆ. ಜ್ಞಾನಸ್ವಭಾವದಿಂದ ವಿರುದ್ಧವಾಗಿ ಮನ್ನಿಸುವಂಥ ಬಾಧಕರು ಕೂಡ ಇದ್ದಾರೆ. ಅವರು ರಾಗಾದಿಗಳಲ್ಲಿಯೇ ಪರಿಣಮಿಸುತ್ತಿದ್ದಾರೆ. ಅವರಿಗೆ ನಿಮಿತ್ತ ರೂಪದಿಂದ ಕರ್ಮದ ಆವರಣವಿದೆ. ಅದರಲ್ಲಿ ಕರ್ಮದ ಪರಮಾಣುಗಳ ಭಾವದಿಂದ ಅನಂತ ಭಾವವುಳ್ಳದ್ದಿದೆ. ಅದೆಲ್ಲವನ್ನು ತಿಳಿದುಕೊಳ್ಳುವಂಥ ಜ್ಞಾನಸ್ವಭಾವದಿಂದ ಅನಂತ ಶಕ್ತಿಯುಳ್ಳ ಆತ್ಮನು ನಾನಿದ್ದೇನೆಂದು ದೃಷ್ಟಿಯಾಗುವುದು ಅದು ಗಾಥೆಯ ಸಾರವಿದೆ.

ಸರ್ವಜ್ಞದೇವರು ಕೇವಲ ತಿಳಿಯುತ್ತಾರೆ. ಆದರೆ ಯಾರಿಗೆ ಏನನ್ನೂ ಮಾಡುವುದಿಲ್ಲ. ಅದರಂತೆ ಯಾರಿಗೆ ಏನನ್ನೂ ಕೊಡುವುದಿಲ್ಲವೆಂದ ಮೇಲೆ ಬೋಧಪಾಹುಡದ ೨೪ನೇ ಗಾಥೆಯಲ್ಲಿ ಹೀಗೆ ಹೇಳುತ್ತಾರೆ.

ಯಾವನು ಬೇಡಿದ್ದನ್ನುಕೊಡುತ್ತಾನೆ, ಅವನಿಗೆ ದೇವನೆಂದು ಹೇಳುತ್ತಾರೆ.ಯಾವನು ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕನ್ನು ಕೊಡುತ್ತಾನೆ, ಅವನು ದೇವನಿದ್ದಾನೆಂದು ಹೇಳಿದೆ. ಅದರ ಆಶಯವೇನಿದೆ ?

**ಉತ್ತರ :-** ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕೊಡುವಂಥವನು ದೇವನಿದ್ದಾನೆ. ಎಂದರೆ ಅದರಲ್ಲಿ ನಿಮಿತ್ತವಿದೆ, ಅದನ್ನು ನ್ಯಾಯದಿಂದ ಹೇಳಲಾಗಿದೆ.

ಜ್ಞಾನ ಅಥವಾ ಮೋಕ್ಷ: ಯಾವನೋ ಓರ್ವ ಮನುಷ್ಯನು ಬಿಕ್ಷುಕನ ಹತ್ತಿರ ಹೋದರೆ ಆ ಬಿಕ್ಷುಕನು ಧನವನ್ನು ದೊರಕಿಸಿಕೊಡುವಲ್ಲಿ ನಿಮಿತ್ತರೂಪನಾಗವುದಿಲ್ಲ. ಆದರೆ ಧನವುಳ್ಳವನೇ ಧನ ದೊರಕಿಸುವಲ್ಲಿ ನಿಮಿತ್ತನಾಗುತ್ತಾನೆ. ಅದರಂತೆ ಸರ್ವಜ್ಞ ದೇವರ ನಿಮಿತ್ತವು ದೊರಕಿದರೆ ಮಾತ್ರ ಜೀವನು ಯಾವ ದಶೆಯನ್ನು ತನಗೆ ಪ್ರಕಟಪಡಿಸಿಕೊಳ್ಳುವುದಿದೆ ಅಂಥ ದಶೆಯು ಭಗವಂತರದಿದೆಯೆಂದು ಜ್ಞಾನಮಾಡಿಕೊಳ್ಳುತ್ತಾನೆ. ಆ ದಶೆಯನ್ನು ಭಗವಂತರು ಆತ್ಮನ ಅವಲಂಬನದಿಂದ ಪ್ರಕಟಮಾಡಿಕೊಂಡಿದ್ದಾರೆ. ಅದರಂತೆ ನಾನು ಕೂಡ ನನ್ನ ಆತ್ಮನ ಅವಲಂಬನದಿಂದ ಪ್ರಕಟಮಾಡಿಕೊಳ್ಳುವಂತಿದೆ. ಭಗವಂತರು ಮತ್ತು ನಾನು ಸಮಾನರಿದ್ದೇವೆ. ಭಗವಂತರು ಕೂಡ ನೀನು ಸರ್ವಜ್ಞನಿರುವೆಯೆಂದು ಹೇಳಿದ್ದಾರೆ. ಶರೀರ, ಮನಸ್ಸು, ವಾಣಿ ಇವು ನಿನ್ನ ಸ್ವರೂಪವಲ್ಲ. ಅದರಂತೆ ಅಲ್ಪಜ್ಞತೆಯು ಕೂಡ ನಿನ್ನ ಸ್ವರೂಪವಿಲ್ಲವೆಂದು ಭಗವಂತರು ಹೇಳಿದ್ದಾರೆ. ಅದನ್ನು ಶಿಷ್ಯನು ತಿಳಿಯುತ್ತಾನೆ ಮತ್ತು ಪ್ರತೀತಿ ಮಾಡುತ್ತಾನೆ. ಹೀಗೆ ಸರ್ವಜ್ಞರ ಹತ್ತಿರ ಸಾಧಕ ಪದದ ಬೇಡಿಕೆ ಮಾಡುತ್ತಾನೆ. ಈ ಪ್ರಕಾರ ದೇವರ ನಿಮಿತ್ತದಿಂದ ಶಿಷ್ಯನಿಗೆ ನಿಜವಾದ ಜ್ಞಾನವು ಪ್ರಕಟವಾಗುತ್ತದೆ ಮತ್ತು ಜ್ಞಾನವಾದರೆ ಮೋಕ್ಷವಾಗುವುದರಿಂದ ಭಗವಂತರು ಜ್ಞಾನಕೊಟ್ಟರು ಅಥವಾ ಮೋಕ್ಷಕೊಟ್ಟರೆಂದು ಹೇಳಲಾಗುತ್ತದೆ.

**ಧರ್ಮ :-** ಯಾರಿಗೆ ಭಗವಂತರ ನಿಮಿತ್ತದಿಂದ ಯಥಾರ್ಥ ಜ್ಞಾನವಾಗಿದೆ ಅಂಥ ಸಾಧಕ ಜೀವನಿಗೆ ಸಂಪೂರ್ಣ ವೀತರಾಗ ದಶೆಯು ಪ್ರಾಪ್ತವಾಗುವುದಿಲ್ಲ, ಅಲ್ಲಿಯವರೆಗೆ ಶುಭರಾಗವಿರುತ್ತದೆ. ಅದರ ಕಾರಣದಿಂದ ಪುಣ್ಯದ ಬಂಧವಾಗುತ್ತದೆ. ಅದರಲ್ಲಿ ಭಗವಂತರು ನಿಮಿತ್ತರಿರುವುದರಿಂದ ಭಗವಂತರು ಪುಣ್ಯದ ದಾತಾರರಿದ್ದಾರೆಂದು ಹೇಳಲಾಗುತ್ತದೆ.

ಯಾವನಾದರೂ ಧರ್ಮಾತ್ಮ ಜೀವನಿಗೆ ಶುಭರಾಗದ ಭೂಮಿಕೆಯಲ್ಲಿ ತೀರ್ಥಂಕರ ಪುಣ್ಯ ಪ್ರಕೃತಿಯ ಬಂಧವಾಗುತ್ತದೆ. ಅದನ್ನು ಕೂಡ ತೀರ್ಥಂಕರ ದೇವರೇ ಕೊಟ್ಟರೆಂದು ಹೇಳಲಾಗುತ್ತದೆ.

**ಕಾಮಭೋಗ :-** ಯಾವ ಸಾಧಕ ಜೀವನಿಗೆ ಪುಣ್ಯಪ್ರಕೃತಿಯ ಬಂಧವಾಗಿದೆ ಅದರ ಫಲದಲ್ಲಿ ಅವನಿಗೆ ಧನ ವೊದಲಾದ ಬಾಹ್ಯಪದಾರ್ಥಗಳ ಪ್ರಾಪ್ತಿಯಾಗುವುದರಿಂದ ಭಗವಂತರು ಕಾಮ-ಭೋಗಗಳನ್ನು ಕೊಡುವಂಥವರಿದ್ದಾರೆಂದು ಹೇಳಲಾಗುತ್ತದೆ.

ಈ ನಾಲ್ಕೂ ಮಾತುಗಳು ಧರ್ಮಾತ್ಮನಿಗೆ ಅನ್ವಯಿಸುತ್ತವೆ, ಅವನಿಗೆ ನಾಲ್ಕು ಪೃಥಕ್ಕತೆಯ ಜ್ಞಾನವಿದೆ ಮತ್ತು ಆತ್ಮಸ್ವಭಾವದ ಜ್ಞಾನವು ಕೂಡ ಇದೆ. ಅಜ್ಞಾನಿಗೆ ನಾಲ್ಕು ಪೃಥಕ್ಕತೆಯ ಅದರಂತೆ ಆತ್ಮನ ಜ್ಞಾನವು ಕೂಡ ಇಲ್ಲ. ಅವನಿಗೆ ಜ್ಞಾನ ಅಥವಾ ಮೋಕ್ಷವಂತೂ ಇಲ್ಲ, ಆದರೆ ಅಂಥ ಪುಣ್ಯವು ಕೂಡ ಆಗುವುದಿಲ್ಲ. ಯಾವನಿಗೆ ಅರಿವುಂಟಾಗಿದೆ ಅವನಿಗೆ ಇವು ನಾಲ್ಕನ್ನೂ ದೇವರು ಕೊಟ್ಟರೆಂದು ಹೇಳಲಾಗುತ್ತದೆ. ಯಾರಿಗೆ ದಿವ್ಯಶಕ್ತಿಯು ಅರಳಿ ಹೋಗಿದೆ ಅವರು ದೇವರಿದ್ದಾರೆ. ಆ ಶಕ್ತಿಯು ಪಾತ್ರತೆಯಿಲ್ಲದೆ ಅರಳುವ ಸಾಧ್ಯತೆಯಿಲ್ಲ ಮತ್ತು ಪಾತ್ರ ಜೀವರುಗಳು ಸರ್ವಜ್ಞರ ನಿಮಿತ್ತದಿಂದ ಅರಳಿರುವುದರಿಂದ ಸರ್ವಜ್ಞ ಪದವನ್ನು ಮತ್ತು ತೀರ್ಥಂಕರ ಪದವನ್ನು ಸರ್ವಜ್ಞದೇವರು ಕೊಡುತ್ತಾರೆಂದು ಹೇಳಲಾಗುತ್ತದೆ. ಈ ಪ್ರಕಾರ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವನ್ನು ಕೊಡುತ್ತಾರೆ ಅವರನ್ನು ದೇವರೆಂದು ಹೇಳುತ್ತಾರೆ.

ಈ ಗಾಥೆಯಲ್ಲಿ ವಸ್ತುವಿನ ಸ್ವಭಾವವು ವಚನಗಮ್ಯವಿಲ್ಲ, ಆದರೆ ಜ್ಞಾನಗಮ್ಯವಿದೆಯೆಂಬ ಮಾತು ಬಂದಿದೆ. ಜ್ಞಾನಸ್ವಭಾವವು ಎಲ್ಲವನ್ನು ತಿಳಿದುಕೊಳ್ಳದಿದ್ದರೆ ಅದು ಜ್ಞಾನಸ್ವಭಾವವಲ್ಲ. ದ್ರವ್ಯಗಳ ಅಪಾರತೆ, ಕ್ಷೇತ್ರದ ಅಪಾರತೆ, ಪ್ರತಿಯೊಂದು ದ್ರವ್ಯದ ಸ್ವಭಾವದ ಅಪಾರತೆಯ ಜ್ಞಾನವನ್ನು ಸಂಪೂರ್ಣವಾಗಿ ಪ್ರತ್ಯಕ್ಷ ರೀತಿಯಿಂದ ಮಾಡಿಕೊಳ್ಳುವಂಥವರು ಸರ್ವಜ್ಞದೇವರಿದ್ದಾರೆ.ಅವರನ್ನು ಹೊರತುಪಡಿಸಿ ಬೇರೆ ಯಾರೂ ಇಲ್ಲ. ಆ ಸರ್ವಜ್ಞ ಪದವು ಆತ್ಮನಲ್ಲಿ ಇತ್ತು ಅದರೊಳಗಿಂದ ಪ್ರಕಟವಾಗಿದೆ. ಹೀಗೆ ನಿಶ್ಚಯ ಮಾಡಿಕೊಳ್ಳುವವರಿಗೆ ತಮ್ಮ ಚೈತನ್ಯ ಸ್ವಭಾವದ ಅಳತೆಯಿಲ್ಲದಿರುವಿಕೆಯ ಜ್ಞಾನವಾಗುತ್ತದೆ. ಈ ರೀತಿಯಿಂದ ಸಾಧಕ ಜೀವನು ವಸ್ತುಸ್ವರೂಪದಲ್ಲಿ ನಿಶ್ಚಲನಾಗುತ್ತಾನೆ. ಇದು ಹೀಗೆ, ಹೇಗೆಯೆಂಬ ಸಂದೇಹವು ಜ್ಞಾನದ ಅನುಭವ ಮಾಡುವಂಥವನಿಗೆ ಉಳಿಯುವುದಿಲ್ಲ. ವಸ್ತುವು ಹೇಗೆ ಇದೆ ಹಾಗೆ ಇದೆ. ತನ್ನ ಜ್ಞಾನಸ್ವಭಾವದ ವಿಚಾರ ಬಂದನಂತರ ಜ್ಞೇಯದ ಅಪಾರತೆಯ ವಿಚಾರವು ಬಂದು ಬಿಡುತ್ತದೆ. ಈ ರೀತಿಯಾಗಿ ರಾಗರಹಿತ ಜ್ಞಾನಸ್ವಭಾವದ ಅನುಭವ ಮಾಡುವುದು ಅದು ನಿಜವಾದ ಧರ್ಮವಿದೆ.

ಧರ್ಮ-ಅಧರ್ಮದ್ರವ್ಯಗಳು ಗತಿ-ಸ್ಥಿತಿಯಲ್ಲಿ ಕಾರಣವಾಗುತ್ತವೆಂದೇಕೆ ಹೇಳಿದೆ ? ಗತಿ-ಸ್ಥಿತಿಯಲ್ಲಿ ಆಕಾಶವನ್ನು ಕಾರಣವೆಂದೇಕೆ ಹೇಳಿಲ್ಲ ? ಎಂದು ಪ್ರಶ್ನೆ ಮಾಡುವವರಲ್ಲಿ ದೋಷವೇನಿದೆಯೆಂಬುದನ್ನು ತಿಳಿಸಿದ್ದಾರೆ -

**ಆಗಾಸಂ ಅವಗಾಸಂ ಗಮಣಟ್ಠಿದಿಕಾರಣೇಹಿಂ ದೇದಿ ಜದಿ ।**
**ಉಡ್ಢಂಗದಿಪ್ಪಧಾಣಾ ಸಿದ್ಧಾ ಚಿಟ್ಠಂತಿ ಕಿಧ ತತ್ಥ ॥೯೨॥**

**ಆಕಾಶವದು ಗತಿ-ಸ್ಥಿತಿಯ ಕಾರಣಸಹಿತ ಅವಕಾಶಕೊಡುತಿದ್ದರೆ ।**
**ಆಕಾಶದಲಿ ಊರ್ಧ್ವಗತಿಪ್ರಧಾನಸಿದ್ಧರು ಅದು ಹೇಗೆ ಸ್ಥಿರವಾದರು ? ॥೯೨॥**

ಆ ಗತಿ-ಸ್ಥಿತಿಯಲ್ಲಿ ಆಕಾಶವು ಕಾರಣವಿದೆಯೆಂದು ಮನ್ನಿಸಲಾದರೆ ಮತ್ತು ಧರ್ಮ-ಅಧರ್ಮಗಳ ಅಭಾವವನ್ನು ಮನ್ನಿಸಲಾದರೆ ಸಿದ್ಧ ಪರಮೇಷ್ಠಿಗಳು ಅಲೋಕದಲ್ಲಿ ಕೂಡ ಹೊರಟು ಹೋಗುವರು, ಆದರೆ ಹಾಗೆ ಸಂಭವಿಸುವುದಿಲ್ಲ, ಏಕೆಂದರೆ ಅಲೋಕದಲ್ಲಿ ಧರ್ಮ-ಅಧರ್ಮಗಳು ಇಲ್ಲ. ಇಲ್ಲಿ ನಿಮಿತ್ತವನ್ನು ಸಿದ್ಧಮಾಡುವುದಿದೆ.

೧) ಜೀವನು ಯಾವಾಗಲೂ ಅಲ್ಪಜ್ಞದಶೆಯುಳ್ಳವನೇ ಆಗಿ ಉಳಿದರೆ ಅವನೆಂದೂ ಪೂರ್ಣ ದಶೆಯನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯೇ ಇಲ್ಲ. ೨) ಪೂರ್ಣದಶೆಯು ಪ್ರಾಪ್ತವಾದನಂತರ ಇದ್ದಕ್ಕಿದ್ದ ಹಾಗೆ ಗಮನಮಾಡುತ್ತಲೇ ಹೋದರೆ ಎಲ್ಲಿಯೂ ಸ್ಥಿರಗೊಳ್ಳುವ ಸಾಧ್ಯತೆಯೇ ಇಲ್ಲ. ಆ ಸಿದ್ಧ ಜೀವರುಗಳೇ ಇದ್ದಕ್ಕಿದ್ದ ಹಾಗೆ ಹೊರಟು ಹೋದರೆ ಗಮನದ ಕಾರ್ಯವು ಪೂರ್ಣವಾಯಿತೆಂದು ಹೇಳಲಾಗುವುದಿಲ್ಲ. ಸಿದ್ಧ ಭಗವಂತರಿಗೆ ಕೂಡ ಗತಿರೂಪ ಕಾರ್ಯದ ಕೃತಕೃತ್ಯತೆಯಾಗಿ ಹೋಗಿರುವುದರಿಂದ ಒಂದು ಸಮಯದಲ್ಲಿ ಊರ್ಧ್ವಗಮನ ಸ್ವಭಾವದ ಕಾರಣದಿಂದಲೋಕಾಗ್ರಕ್ಕೆ ತಲುಪಿ ಬಿಡುತ್ತಾರೆ ಮತ್ತು ಅಲ್ಲಿ ಸ್ಥಿರವಾಗುತ್ತಾರೆ. ಮತ್ತು ನಿಮಿತ್ತರೂಪದಿಂದ ಧರ್ಮ-ಅಧರ್ಮ ದ್ರವ್ಯಗಳು ಕೂಡ ಅಲ್ಲಿಯವರೆಗೆ ಇರುವುದರಿಂದ ಅವರು ಅಲೋಕಾಕಾಶದಲ್ಲಿ ಹೋಗುವುದಿಲ್ಲ. ಸಿದ್ಧಭಗವಂತರಿಗೆ ಸರ್ವೋತ್ಕೃಷ್ಟವೂ ಸ್ವಾಭಾವಿಕವೂ ಆದ ಊರ್ಧ್ವಗತಿಯ ಪರಿಣಾಮವು ಅಂತರಂಗ ಸಾಧನವಂತೂ ಇದೆ ಮತ್ತು ಆಕಾಶವನ್ನು ಗತಿಯಲ್ಲಿ ಬಹಿರಂಗ ಸಾಧನವೆಂದು ಮನ್ನಿಸಲಾದರೂ ಮತ್ತು ಅವೆರಡು ಸಾಧನಗಳಿದ್ದರೂ ಕೂಡ ಸಿದ್ಧಭಗವಂತರು ಲೋಕಾಗ್ರದಲ್ಲಿ ಅದೇಕೆ ಉಳಿಯುತ್ತಾರೆ ಮುಂದೆ ಅದೇಕೆ ಹೋಗುವುದಿಲ್ಲ. ಗತಿಯ ಸಲುವಾಗಿ ಆಕಾಶವು ಬಹಿರಂಗ ಸಾಧನವಿದ್ದರೆ ಭಗವಂತರು ಅಲೋಕದಲ್ಲಿ ಹೋಗಬೇಕಾಗುವುದು, ಆದರೆ ಹಾಗೆ ಸಂಭವಿಸುವುದಿಲ್ಲ. ಆದುದರಿಂದ ಆಕಾಶವು ಗತಿ-ಸ್ಥಿತಿಯ ಸಲುವಾಗಿ ಬಹಿರಂಗ ಸಾಧನವಿಲ್ಲ. ಧರ್ಮ-ಅಧರ್ಮಗಳು ಗತಿ-ಸ್ಥಿತಿಯಲ್ಲಿ ನಿಮಿತ್ತವಾಗುವುದೇ

ಬಹಿರಂಗ ಸಾಧನವಿದೆ. ಧರ್ಮ-ಅಧರ್ಮಗಳು ಅಲೋಕದಲ್ಲಿ ಇಲ್ಲ. ಲೋಕದಲ್ಲಿ ಇವೆ, ಅದರಿಂದಲೇ ಲೋಕದ ಮರ್ಯಾದೆಯಿದೆ.

ಸರ್ವಜ್ಞದೇವರು ಆರು ದ್ರವ್ಯಗಳನ್ನು ನೋಡಿದ್ದಾರೆ. ಒಂದು ದ್ರವ್ಯದ ಗುಣಗಳು ಇನ್ನೊಂದು ದ್ರವ್ಯದ ಕಾರಣದಿಂದ ಇದ್ದರೆ ಆರೂ ದ್ರವ್ಯಗಳು ಉಳಿಯುವುದಿಲ್ಲ. ಜ್ಞಾನ ಮತ್ತು ಆನಂದವು ಆತ್ಮನ ಗುಣಗಳಿದ್ದು ಆ ಗುಣಗಳು ಜಡದ್ದೆಂದು ಮನ್ನಿಸಿದರೆ ಭೇದಜ್ಞಾನ ಮಾಡುವ ಸಾಧ್ಯತೆಯಿಲ್ಲ ಮತ್ತು ಸ್ವರೂಪದಲ್ಲಿ ಸ್ಥಿರಗೊಳ್ಳುವ ಸಾಧ್ಯತೆಯಿಲ್ಲ. ಆರೂ ದ್ರವ್ಯಗಳ ಕಾರ್ಯಗಳು ತಮ್ಮ ತಮ್ಮಿಂದಲೇ ಆಗುತ್ತವೆ. ಒಂದರ ಕಾರಣದಿಂದ ಇನ್ನೊಂದರ ಕಾರ್ಯವಾಗುವುದಿಲ್ಲ. ಆತ್ಮನ ಗುಣಗಳು ಜಡದಲ್ಲಿ ಇಲ್ಲ, ಜಡದ ಗುಣಗಳು ಆತ್ಮನಲ್ಲಿ ಇಲ್ಲ. ಧರ್ಮ-ಅಧರ್ಮದ ಕಾರ್ಯಗಳು ಆಕಾಶದಲ್ಲಿ ಆಗುವುದಿಲ್ಲ ಮತ್ತು ಆಕಾಶದ ಕಾರ್ಯಗಳು ಧರ್ಮ-ಅಧರ್ಮಗಳಲ್ಲಿ ಇರುವುದಿಲ್ಲ. ಒಂದರ ಕಾರಣದಿಂದ ಇನ್ನೊಂದರಲ್ಲಿ ಕಾರ್ಯವಾಗುತ್ತದೆಯೆಂದು ಮನ್ನಿಸಹೋದರೆ ಆರು ದ್ರವ್ಯಗಳ ಸ್ವಯಂ ಸಿದ್ಧತೆಯು ಉಳಿಯುವುದಿಲ್ಲ ಖಿಚಡಿಯಾಗಿ ಹೋಗುತ್ತದೆ ಎಂದರೆ ತಮ್ಮ ಜ್ಞಾನ ಹಾಗೂ ಶ್ರದ್ಧೆಗಳು ಅಸತ್ಯವೆಂದು ನಿರ್ಣಯವಾಗುತ್ತವೆ.

ಧರ್ಮದ್ರವ್ಯವು ಚೇತನ ಮತ್ತು ಪುದ್ಗಲ ಪದಾರ್ಥಗಳಿಗೆ ಗತಿಯಲ್ಲಿ ನಿಮಿತ್ತವಾಗುತ್ತದೆ ಮತ್ತು ಅಧರ್ಮ ದ್ರವ್ಯವು ಸ್ಥಿತಿಯಲ್ಲಿ ನಿಮಿತ್ತವಾದರೆ ಆ ಗತಿ-ಸ್ಥಿತಿಯಲ್ಲಿ ನಿಮಿತ್ತವಾಗುವ ಕಾರ್ಯವನ್ನು ಆಕಾಶವು ಮಾಡಿದರೆ ತಪ್ಪೇನಿದೆಯೆಂದು ಮನ್ನಿಸ ಹೋದರೆ ದ್ರವ್ಯಗಳು ಪೃಥಕ್ಕಾಗಿ ಉಳಿಯುವುದಿಲ್ಲ.

ಈಗ ಲೋಕಾಗ್ರದಲ್ಲಿ ಸಿದ್ಧರ ಸ್ಥಿರತೆಯನ್ನು ಹೇಳುತ್ತಾರೆ.

**ಜಮ್ಹಾ ಉವರಿಟ್ಠಾಣಂ ಸಿದ್ಧಾಣಂ ಜಿಣವರೇಹಿಂ ಪಣ್ಣತ್ತಂ ।**
**ತಮ್ಹಾ ಗಮಣಟ್ಠಾಣಂ ಆಯಾಸೇ ಜಾಣ ಣತ್ಥಿ ತ್ತಿ ॥೯೩॥**

**ಲೋಕಾಗ್ರದಲ್ಲಿ ಸಿದ್ಧರ ಸ್ಥಿರತೆಯ ಜಿನವರ ಯಾವುದರಿಂದ ಪೇಳಿಹರು ।**
**ಆ ಕಾರಣದಿ ಆಕಾಶದಲಿ ಗತಿ-ಸ್ಥಿತಿ ಹೇತುತ್ವವಿಲ್ಲವೆಂದರಿಯುವುದು ॥೯೩॥**

ಈ ಗಾಥೆಯಲ್ಲಿ ಧರ್ಮ-ಅಧರ್ಮದ್ರವ್ಯಗಳು ಆಕಾಶದಿಂದ ಭಿನ್ನವಿವೆಯೆಂಬ ಭೇದಜ್ಞಾನ ಮಾಡಿಸಿದ್ದಾರೆ. ಯಾವ ವೀತರಾಗ ಭಗವಂತರು ಅಶರೀರಿ ದಶೆಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಅವರ ನಿವಾಸ ಸ್ಥಾನವು ಲೋಕಾಗ್ರದಲ್ಲಿ ಇದೆ. ಆದುದರಿಂದ ಅಲ್ಲಿಯವರೆಗೆ ಕ್ಷೇತ್ರಾಂತರವಾಗುವಲ್ಲಿ ಅದರಂತೆ ಅಲ್ಲಿ ಸ್ಥಿರಗೊಳ್ಳುವಲ್ಲಿ ನಿಮಿತ್ತ ರೂಪವಾಗುವ ಗುಣವು ಆಕಾಶದಲ್ಲಿ ಇಲ್ಲ. ಆಕಾಶದ ಗುಣದಿಂದ ಧರ್ಮ-ಅಧರ್ಮದ ಗುಣಗಳು ಭಿನ್ನವಿವೆ. ಆಕಾಶದಲ್ಲಿ ಗತಿ-ಸ್ಥಿತಿಯೊಳಗೆ ನಿಮಿತ್ತವಾಗುವ ಗುಣವು ಇಲ್ಲವೆಂದು ಎಲೈ ಶಿಷ್ಯನೇ ! ನೀನು ತಿಳಿದುಕೊಳ್ಳು !

**ಭಾವಾರ್ಥ :-** ಧರ್ಮ-ಅಧರ್ಮ ದ್ರವ್ಯಗಳ ಅವಶ್ಯಕತೆಯೇನಿದೆ, ಆಕಾಶವು ಚೇತನ ಮತ್ತು ಪುದ್ಗಲಗಳ ಗತಿ-ಸ್ಥಿತಿಯಲ್ಲಿ ನಿಮಿತ್ತವಾದರೆ ತಪ್ಪೇನಿದೆಯೆಂದು ಶಿಷ್ಯನು ಪ್ರಶ್ನೆ ಕೇಳಿದ್ದನು. ಅವನಿಗೆ ಹೀಗೆ ಉತ್ತರ ಕೊಡುತ್ತಾರೆ ಆ ಸಿದ್ಧ ಭಗವಂತರುಗಳ ಗಮನವು ಅಲೋಕದಲ್ಲಿ ಆದರೆ ಆಕಾಶದೊಳಗೆ ಗತಿ-ಸ್ಥಿತಿಯಲ್ಲಿ ನಿಮಿತ್ತವಾಗುವ ಗುಣವು ಸಂಭವಿಸಬಹುದಾಗಿದೆ. ಆಕಾಶದಲ್ಲಿ ಅಂಥ ಗುಣಗಳು ಇರುತ್ತಿದ್ದರೆ ಸಿದ್ಧ ಭಗವಂತರುಗಳು ಇದ್ದಕ್ಕಿದ್ದ ಹಾಗೆ ಹೊರಟು ಹೋಗಬೇಕಾಗುವುದು. ಆದರೆ ಸಿದ್ಧರು ಅಲೋಕದಲ್ಲಿ ಹೊರಟು ಹೋಗುವುದಿಲ್ಲ ಅವರಂತೂ ಲೋಕಾಗ್ರದಲ್ಲಿಯೇ ಉಳಿಯುತ್ತಾರೆ. ಲೋಕಾಗ್ರದಿಂದ ಮುಂದಕ್ಕೆ ಹೋಗುವ ರೂಪದ ಕಾರ್ಯವು ಆಗುವುದಿಲ್ಲ. ಆದುದರಿಂದ ಆ ಕಾರ್ಯದಲ್ಲಿ ನಿಮಿತ್ತಕಾರಣರೂಪವಾಗುವ ಗುಣಗಳು ಗತಿ-ಸ್ಥಿತಿಯ ಹೇತುಗಳು ಆಕಾಶದಲ್ಲಿ ಇಲ್ಲ ಎಂದರೆ

ಆಕಾಶದಲ್ಲಿ ಆ ಗುಣಗಳು ಇಲ್ಲವೆಂಬುದು ಸಿದ್ಧವಾಗುತ್ತದೆ.ಆದುದರಿಂದಲೇ ಗತಿ-ಸ್ಥಿತಿಯಲ್ಲಿ ನಿಮಿತ್ತವಾಗುವ ಗುಣಗಳು ಧರ್ಮ-ಅಧರ್ಮದಲ್ಲಿಯೇ ಇವೆ. ಏಕೆಂದರೆ ಧರ್ಮ-ಅಧರ್ಮ ದ್ರವ್ಯಗಳು ಲೋಕಾಕಾಶದಲ್ಲಿ ಇವೆ ಮುಂದೆ ಇಲ್ಲ.

ಯಾವ ಪ್ರಕಾರ ಧರ್ಮ-ಅಧರ್ಮದ ಕಾರ್ಯಗಳನ್ನು ಆಕಾಶವು ಮಾಡುವ ಸಾಧ್ಯತೆಯಿಲ್ಲವೆಂಬುದು ನಿಶ್ಚಿತವಾಯಿತು. ಅದರ ಮೇಲಿಂದ ಯಾವುದೇ ಒಂದು ದ್ರವ್ಯದ ಕಾರ್ಯವನ್ನು ಇನ್ನೊಂದು ಯಾವುದೇ ದ್ರವ್ಯವು ಮಾಡುವ ಸಾಧ್ಯತೆಯಿಲ್ಲವೆಂಬ ನ್ಯಾಯವು ಹೊರಡುತ್ತದೆ. ಅದೇ ಪ್ರಕಾರ ಆತ್ಮನಲ್ಲಿ ಇನ್ನೊಂದರ ಜತೆ ತತ್ಪರವಾಗುವ ಆತ್ಮನ ಕಾರ್ಯವನ್ನು ಗುರುತು ಮಾಡಿಕೊಡುವ, ಅನುಕೂಲ ಕಾಲವನ್ನು ತಂದುಕೊಡುವ, ಕಾರ್ಯವನ್ನು ಶರೀರವು ಮಾಡಿಕೊಡುವುದೆಂದು ಯಾವನು ಮನ್ನಿಸಿದ್ದಾನೆ ಅವನಿಗೆ ಪರದಿಂದ ಬೇರೆಯಾಗುವ ಅವಸರವು ಉಳಿಯುವುದಿಲ್ಲ. ಮನಸ್ಸು, ವಾಣಿ, ದೇಹದ ಕ್ರಿಯೆಯಿಂದ ಆತ್ಮನ ಧರ್ಮವಾಗುತ್ತಿದ್ದರೆ ಮನಸ್ಸು, ವಾಣಿ ಮತ್ತು ದೇಹವು ಆತ್ಮನಲ್ಲಿ ಪ್ರವೇಶಿಸಿ ಹೋಗಬೇಕು. ಪರ್ಯಾಯದಲ್ಲಿ ವಿಕಾರವು ಕರ್ಮದ ಕಾರಣದಿಂದ ಆಗುತ್ತಿದ್ದರೆ ಕರ್ಮ ಮತ್ತು ವಿಕಾರವು ಒಂದಾಗಿ ಹೋಗುವವು. ಜಡದಿಂದ ಆತ್ಮನಿಗೆ ಲಾಭವಾಗುತ್ತದೆಯೆಂದು ಮನ್ನಿಸ ಹೋದರೆ ಆತ್ಮನು ಜಡದ ಕ್ಷೇತ್ರದಲ್ಲಿ ಪ್ರವೇಶಿಸಿ ಹೋಗುವನು ಮತ್ತು ಜಡವು ಆತ್ಮನ ಕ್ಷೇತ್ರದಲ್ಲಿ ಪ್ರವೇಶಿಸಿ ಹೋಗಬೇಕು, ಆದರೆ ಹಾಗೆ ಸಂಭವಿಸುವುದಿಲ್ಲ.

ದಯೆ, ದಾನ, ಮೊದಲಾದವುಗಳ ಭಾವದಿಂದ ಧರ್ಮವಾಗುತ್ತದೆಯೆಂದು ಮನ್ನಿಸ ಹೊರಟರೆ ವಿಭಾವ ಮತ್ತು ಸ್ವಭಾವವು ಒಂದಾಗಿ ಹೋಗುವವು. ವಿಭಾವವು ಕ್ಷಣಿಕವಿದ್ದು ಅಶುದ್ಧವಿದ್ದರೆ ಸ್ವಭಾವವು ತ್ರಿಕಾಲ ಶುದ್ಧವಿದೆ. ಇವೆರಡರಲ್ಲಿ ಮರ್ಯಾದೆಯು ಉಳಿಯುವುದಿಲ್ಲ.

ಯಾವ ಜೀವನು ಪರದಿಂದ,ಶರೀರದಿಂದ ಮತ್ತು ವಿಕಾರದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಾನೆ ಅವನಿಗೆ ಅವೆಲ್ಲವುಗಳ ಜತೆಯಲ್ಲಿ ಏಕತ್ವ ಬುದ್ಧಿಯು ವರ್ತಿಸುತ್ತದೆ. ಅವನಿಗೆ ಪರದಿಂದ ಬಿಡುಗಡೆ ಹೊಂದುವುದು ರುಚಿಸುವುದಿಲ್ಲ. ಪರದಿಂದ ಬೇರೆಯಾಗುವುದು ಅದು ಮುಕ್ತಿಯಿದೆ. ಆದುದರಿಂದ ಇಲ್ಲಿ ತಿಳಿಸಿಕೊಡುವುದೇನೆಂದರೆ ಆಕಾಶವು ಧರ್ಮ-ಅಧರ್ಮ ದ್ರವ್ಯಗಳ ಕಾರ್ಯ ಮಾಡಿದರೆ ಸಿದ್ಧಭಗವಂತರುಗಳು ಲೋಕಾಗ್ರಕ್ಕಿಂತಲೂ ದೂರ ಹೋಗಬೇಕಾಗವುದು ಮತ್ತು ಯಾವ ಮರ್ಯಾದೆಯೂ ಉಳಿಯುವುದಿಲ್ಲ. ಆದುದರಿಂದ ಪ್ರತಿಯೊಂದು ತತ್ತ್ವವು ಭಿನ್ನವೇ ಇದೆ. ಧರ್ಮದ್ರವ್ಯವು ಅದು ಅಧರ್ಮದ್ರವ್ಯರೂಪದಿಂದ ಮತ್ತು ಅಧರ್ಮದ್ರವ್ಯವು ಆಕಾಶರೂಪದಿಂದ ಇಲ್ಲ. ಪ್ರತಿಯೊಂದು ದ್ರವ್ಯವು ತನ್ನಿಂದ ಇದೆ, ಇನ್ನೊಂದರಿಂದ ಇಲ್ಲ. ಅದರಂತೆ ಆತ್ಮನು ತನ್ನಿಂದ ಇದ್ದಾನೆ ಮತ್ತು ಬೇರೆ ಐದು ದ್ರವ್ಯಗಳ ರೂಪದಿಂದ ಇಲ್ಲ. ಇನ್ನು ಅನಂತ ಆತ್ಮರುಗಳಲ್ಲಿ ಪ್ರತಿಯೊಬ್ಬ ಆತ್ಮನು ತನ್ನಿಂದ ಇದ್ದಾನೆ ಮತ್ತು ಇನ್ನೊಬ್ಬನಿಂದ ಇಲ್ಲ. ಒಬ್ಬ ಆತ್ಮನು ಇನ್ನೊಬ್ಬ ಆತ್ಮನ ಕಾರ್ಯ ಮಾಡಿದರೆ ಅವನು ತನ್ನ ಕ್ಷೇತ್ರ ಬಿಟ್ಟುಕೊಟ್ಟು ಪರದಲ್ಲಿ ಹೊರಟು ಹೋಗುವನು. ಆದರೆ ಹಾಗೆ ಆಗುವ ಸಾಧ್ಯತೆಯಿಲ್ಲ.

ಧರ್ಮ-ಅಧರ್ಮದ ಕಾರ್ಯವನ್ನು ಆಕಾಶವು ಮಾಡುವುದಿಲ್ಲವೆಂಬುದನ್ನು ಸಿದ್ಧಮಾಡಿ ಭೇದಜ್ಞಾನ ಮಾಡಿಸಿದ್ದಾರೆ. ಪಂಚಾಸ್ತಿಕಾಯವು ಭೇದಜ್ಞಾನದ ಕಾರಣವಿದೆ. ಅದರಲ್ಲಿ ದೃಷ್ಟಿಯ ವಿಷಯವು ಬಂದು ಹೋಗುತ್ತದೆ.

**ಜದಿ ಹವದಿ ಗಮಣಹೇದೂ ಆಗಾಸಂ ಠಾಣಕಾರಣಂ ತೇಸಿಂ ।**

**ಪಸಜದಿ ಅಲೋಗಹಾಣೀ ಲೋಗಸ್ಸ ಯ ಅಂತಪರಿವುಡ್ಢೀ ॥೯೪॥**

**ಆಕಾಶವು ಜೀವ ಪುದ್ಗಲಗಳಿಗೆ ಗತಿಹೇತು ಮೇಣ್ ಸ್ಥಿತಿಹೇತುವಿದ್ದರೆ ।**

**ಲೋಕಾಂತದ ವೃದ್ಧಿಯ ಪ್ರಸಂಗವಿಲ್ಲವೆ ಅಲೋಕದ ಹಾನಿಯುಂಟಾಗುವುದು ॥೯೪॥**

ಈ ಗಾಥೆಯಲ್ಲಿ ಲೋಕ ಮತ್ತು ಅಲೋಕದ ಮಧ್ಯದಲ್ಲಿ ಭೇದಜ್ಞಾನ ಮಾಡಿಸಿದ್ದಾರೆ.

ಆ ಧರ್ಮ, ಅಧರ್ಮ ದ್ರವ್ಯಗಳು ಇಲ್ಲ ಮತ್ತು ಆಕಾಶದ್ರವ್ಯವು ಜೀವ-ಪುದ್ಗಲಗಳಿಗೆ ಗತಿ-ಸ್ಥಿತಿಯಲ್ಲಿ ಸಹಕಾರೀ ಕಾರಣವಿವೆಯೆಂದು ಮನ್ನಿಸುವುದರಲ್ಲಿ ಬಂದರೆ ಅಲೋಕಾಕಾಶದ ನಾಶವಾಗುವುದು ಮತ್ತು ಲೋಕದ ವೃದ್ಧಿಯಾಗುವುದು.

**ಭಾವಾರ್ಥ :-** ಆಕಾಶವು ಜೀವ-ಪುದ್ಗಲಗಳಿಗೆ ಗತಿ-ಸ್ಥಿತಿಯಲ್ಲಿ ಕಾರಣವಿಲ್ಲ. ಏಕೆಂದರೆ ಆ ಗತಿ-ಸ್ಥಿತಿಯಲ್ಲಿ ಆಕಾಶವು ಕಾರಣವಿದ್ದರೆ ಜೀವಗಳು ಮತ್ತು ಪುದ್ಗಲಗಳು ಅಲೋಕದಲ್ಲಿ ಹೊರಟು ಹೋಗುವವು ಮತ್ತು ಅದರಿಂದ ಲೋಕ-ಅಲೋಕದ ಮರ್ಯಾದೆಯು ಉಳಿಯುವುದಿಲ್ಲ. ಲೋಕ ಮತ್ತು ಅಲೋಕದಲ್ಲಿ ಭೇದ ಮಾಡುವಂಥವು ಧರ್ಮ-ಅಧರ್ಮ ದ್ರವ್ಯಗಳಿವೆ. ಲೋಕ ಮತ್ತು ಅಲೋಕದ ಭೇದವಂತೂ ಅನಾದಿಯಿಂದ ಇದೆ. ಆದರೆ ಪ್ರತಿಯೊಂದು ಗುಣದ ಕಾರ್ಯವು ಬೇರೆಯಿದೆಯೆಂದು ತಿಳಿಸಿಕೊಡುವುದಿರುವುದರಿಂದ ಆಕಾಶದಲ್ಲಿ ಗತಿ-ಸ್ಥಿತಿಗುಣದ ಅಭಾವವಿದೆಯೆಂದು ಹೇಳಿದೆ. ಅದು ಹೀಗೆ ಇಲ್ಲದಿದ್ದರೆ ಅಲೋಕಾಕಾಶದ ಅಭಾವವಾಗುವುದು ಮತ್ತು ಲೋಕಾಕಾಶವು ಧರ್ಮ-ಅಧರ್ಮ ದ್ರವ್ಯಗಳಿಂದ ಅಸಂಖ್ಯ ಪ್ರದೇಶ ಪ್ರಮಾಣದಷ್ಟು ದೊಡ್ಡದಾಗಿ ಹೋಗುವುದು ಅಥವಾ ಸಮಸ್ತ ಅಲೋಕಾಕಾಶದಲ್ಲಿ ಜೀವ-ಪುದ್ಗಲಗಳು ಹರಡಿ ಹೋಗುವವು. ಅದಕ್ಕಾಗಿ ಗತಿ-ಸ್ಥಿತಿಯ ಗುಣಗಳು ಆಕಾಶಕ್ಕೆ ಇಲ್ಲ, ಆದರೆ ಧರ್ಮ-ಅಧರ್ಮಗಳಿಗೆ ಇವೆ.

ಜೀವ ಮತ್ತು ಪುದ್ಗಲಗಳು ಗಮನ ಮಾಡುತ್ತಿದ್ದರೆ ಅಸಂಖ್ಯ ಯೋಜನಗಳವರೆಗೆ ಹೋಗುವವು, ಆದರೆ ಅನಂತ ಯೋಜನಗಳವರೆಗೆ ಹೋಗುವುದಿಲ್ಲ.ಅವು ಅನಂತ ಯೋಜನಗಳವರೆಗೆ ಹೋದರೆ ಲೋಕ-ಅಲೋಕದ ಕ್ಷೇತ್ರದ ಮರ್ಯಾದೆಯು ಉಳಿಯುವುದಿಲ್ಲ. ಅಲೋಕದ ಅಭಾವವಾಗುವುದು ಮತ್ತು ಲೋಕವು ವೃದ್ಧಿಸಿ ಹೋಗುವುದು. ಆದರೆ ಹಾಗೆ ಸಂಭವಿಸುವುದಿಲ್ಲ ಅದರ ಮರ್ಯಾದೆಯು ಅಸಂಖ್ಯ ಪ್ರದೇಶಿಯಾದ ಲೋಕಾಕಾಶದಲ್ಲಿ ಅಸಂಖ್ಯ ಯೋಜನದವರೆಗೆ ಇದೆ. ಆ ದೃಷ್ಟಾಂತವನ್ನು ಆತ್ಮನಲ್ಲಿ ಇಳಿಸಿಕೊಳ್ಳಬೇಕು.

ನಾನು ಶುದ್ಧ ಚೈತನ್ಯ ಸ್ವಭಾವಿಯಾದ ಆತ್ಮನಿದ್ದೇನೆ. ಶರೀರ, ಮನಸ್ಸು, ವಾಣಿಗಳು ಪರವಿವೆ ಮತ್ತು ವಿಕಾರವು ಒಂದು ಸಮಯದ ಅಶುದ್ಧತೆಯಿದೆ. ಆದರೆ ತ್ರಿಕಾಲೀ ಸ್ವಭಾವದಲ್ಲಿ ಅಶುದ್ಧತೆಯಿಲ್ಲವೆಂಬ ಜ್ಞಾನ ಮಾಡಿಕೊಂಡ ಸಾಧಕ ಜೀವನಿಗೆ ಮುಕ್ತಾವಸ್ಥೆಯನ್ನು ಪ್ರಾಪ್ತಮಾಡಿಕೊಳ್ಳಲು ಅನಂತಕಾಲವು ತಗಲಿದರೆ ಮುಕ್ತಿಯ ಅಭಾವದ ಪ್ರಸಂಗವು ಬರುವುದು. ಯಾವ ಪ್ರಕಾರ ದೃಷ್ಟಾಂತದಲ್ಲಿ ಅಲೋಕದ ಅಭಾವದ ಪ್ರಸಂಗವು ಬರುತ್ತಿತ್ತು ಅದೇ ಪ್ರಕಾರ ಇಲ್ಲಿ ಮುಕ್ತಿಯ ಅಭಾವದ ಪ್ರಸಂಗವು ಬರುವುದು. ಆದರೆ ಯಾವ ಪ್ರಕಾರ ಜಡ ಹಾಗೂ ಚೇತನ ಪದಾರ್ಥಗಳ ಗತಿ-ಸ್ಥಿತಿಯಲ್ಲಿ ಲೋಕದ ಅಸಂಖ್ಯ ಪ್ರದೇಶಗಳೇ ನಿಮಿತ್ತವಿವೆ, ಅನಂತ ಪ್ರದೇಶಗಳು ನಿಮಿತ್ತವಿಲ್ಲ ಅದೇ ಪ್ರಕಾರ ಆತ್ಮನು ತನ್ನ ಸ್ವಭಾವದ ಸಾಧನೆ ಮಾಡಿ ಮುಕ್ತಾವಸ್ಥೆಯನ್ನು ಪಡೆಯುವಲ್ಲಿ ಅಸಂಖ್ಯ ಸಮಯಗಳೇ ತಗಲುವವು, ಅನಂತ ಸಮಯಗಳು ತಗಲುವುದಿಲ್ಲ. ಸಾಧಕ ಜೀವನಿಗೆ ಕೇವಲಜ್ಞಾನ ಪಡೆಯುವಲ್ಲಿ ಅನಂತ ಸಮಯಗಳು ಬೇಕಾಗುವುದಿಲ್ಲ, ಅವನು ಅಸಂಖ್ಯ ಸಮಯಗಳಲ್ಲಿಯೇ ಕೇವಲಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಯಾವನೋ ಓರ್ವ ಜೀವನು ಸಮ್ಯಕ್ತ್ವದಿಂದ ಪತನವಾಗಿ ಹೋದರೆ ಅವನಿಗೆ ಅರ್ಧಪುದ್ಗಲ ಪರಾವರ್ತನ ಕಾಲವಂತೂ ಕಳೆದುಹೋಗುವುದು ಮತ್ತು ನರಕ, ನಿಗೋದದ ಭವಗಳು ಕೂಡ ಆಗುತ್ತವೆಯೆಂದು ಕೆಲವರು ಹೇಳುತ್ತಾರೆ. ಇಲ್ಲಿ ಅದರ ಸ್ಪಷ್ಟೀಕರಣವನ್ನು ಹೀಗೆ ಮಾಡುತ್ತಾರೆ. ಸಮ್ಯಕ್ತ್ವವು ಬಿಟ್ಟು ಹೋಗುವುದರಿಂದ ಅವನು ಸಾಧಕನಾಗಿ ಉಳಿಯುವುದಿಲ್ಲ, ಬಾಧೆಗೆ ಒಳಗಾಗುತ್ತಾನೆ. ಇಲ್ಲಿಯಂತೂ ಯಾವನು ಸ್ವಭಾವದ ಜ್ಞಾನಮಾಡಿಕೊಂಡು

ಸಾಧಕನಾಗಿದ್ದಾನೆ ಅವನ ಮಾತು ನಡೆಯುತ್ತಿದೆ. ಅವನಿಗೆ ಒಂದೆರಡು ಭವಗಳು ತಗಲಬಹುದು, ಆದರೆ ಅದು ಅಸಂಖ್ಯ ಸಮಯವಿದೆ. ಅನಂತಕಾಲದಿಂದ ಸಿಕ್ಕಿಹಾಕಿಕೊಂಡಿದ್ದಾನೆ. ಅದರಲ್ಲಿ ಅನಂತ ಸಮಯಗಳು ತಗಲುವವು, ಆದರೆ ಜ್ಞಾನವಾದ ನಂತರ ಕೇವಲಜ್ಞಾನ ಪಡೆಯಲು ಅಸಂಖ್ಯ ಸಮಯಗಳೇ ತಗಲುವವು.

ಜೀವ-ಪುದ್ಗಲಗಳ ಗತಿ-ಸ್ಥಿತಿಯಲ್ಲಿ ಆಕಾಶವನ್ನು ನಿಮಿತ್ತವೆಂದು ಮನ್ನಿಸಹೋದರೆ ಈ ಕೆಳಗೆ ಹೇಳಿದ ದೋಷಗಳು ಬರುತ್ತವೆಯೆಂದು ಈ ಗಾಥೆಯಲ್ಲಿ ತಿಳಿಸಿಕೊಡಲಾಗಿದೆ.

೧) ಸಿದ್ಧರಿಗೆ ಮೇಲೆ ಹೋಗುವ ಸಲುವಾಗಿ ಒಂದು ಸಮಯವೇ ತಗಲುವುದೆಂಬ ನಿಯಮವಿದೆ. ಆ ಸಿದ್ಧರು ಅನಂತ ಅಲೋಕದಲ್ಲಿ ಹೊರಟು ಹೋದರೆಂದು ಮನ್ನಿಸುವುದರಲ್ಲಿ ಬಂದರೆ ಅವರಿಗೆ ಇದ್ದಕ್ಕಿದ್ದ ಹಾಗೆ ಹೋಗುತ್ತ ಹೋಗುತ್ತ ಅನಂತ ಸಮಯಗಳಾಗುವವು.

೨) ಸಿದ್ಧರಿಗೆ ಇದ್ದಕಿದ್ದ ಹಾಗೆ ಗಮನ ಮಾಡುವುದು ಬಾಕಿ ಉಳಿಯುವುದರಿಂದ ಸಿದ್ಧರ ಗತಿರೂಪ ಕಾರ್ಯದ ಕೃತಕೃತ್ಯತೆಯಾಗಲಿಲ್ಲ.

೩) ಲೋಕದ ದ್ರವ್ಯಗಳು ಅಲೋಕದಲ್ಲಿ ಹೋಗುವುದರಿಂದ ಸಮಸ್ತ ಜೀವ-ಪುದ್ಗಲಗಳು ಅಲ್ಲಿ ಹರಡಿ ಹೋಗುವುದರಿಂದ ಅಲೋಕದ ಅಭಾವದ ಪ್ರಸಂಗವು ಬಂದು ಬಿಡುವುದು.

೪) ಲೋಕದ ಮರ್ಯಾದೆಯು ಅಸಂಖ್ಯ ಪ್ರದೇಶಗಳದಿದ್ದೂ ಆ ಮರ್ಯಾದೆಯು ಮುರಿದುಹೋಗುವುದು ಮತ್ತು ಲೋಕವು ವೃದ್ಧಿಸಿ ಹೋಗುವುದು.

ಈ ಪ್ರಕಾರದ ದೋಷವು ಬರುತ್ತದೆ. ಆದುದರಿಂದ ಗತಿ-ಸ್ಥಿತಿಯಲ್ಲಿ ನಿಮಿತ್ತವಾಗುವ ಗುಣವು ಆಕಾಶದಲ್ಲಿ ಇಲ್ಲ ಮತ್ತು ಆಕಾಶಕ್ಕೆ ಮರ್ಯಾದೆಯು ಇಲ್ಲ. ಇನ್ನು ಸಿದ್ಧರು ಹೊರಟು ಹೋಗುತ್ತ ಹೋಗುತ್ತ ಎಲ್ಲಿ ಸ್ಥಿರರಾಗುತ್ತಾರೆಂದು ನೀನು ಮರ್ಯಾದೆ ಮಾಡುತ್ತ ಹೊರಟರೆ ಆಗಕೂಡ ಆ ಕಾರ್ಯವನ್ನು ಇನ್ನೊಂದು ದ್ರವ್ಯದ ಗುಣದ ಕಾರ್ಯವೆಂದು ಮನ್ನಿಸಬೇಕಾಗುವುದು. ಏಕೆಂದರೆ ಆಕಾಶವಂತೂ ಮರ್ಯಾದೆಯಿಂದ ಅತೀತವಿದೆ ಮತ್ತು ಸಿದ್ಧಭಗವಂತರು ಬೇಕಾದಲ್ಲಿ ಸ್ಥಿರಗೊಂಡರೆ ಅಲ್ಲಿ ಎರಡು ಭಾಗವಂತೂ ಆಗಿ ಹೋಗುವುದು ಮತ್ತು ಆಕಾಶವು ಮರ್ಯಾದೆಯಿಂದ ರಹಿತವಿರುವುದರಿಂದ ಗತಿ-ಸ್ಥಿತಿಯಲ್ಲಿ ನಿಮಿತ್ತವಾಗುವ ಗುಣವು ಆಕಾಶಕ್ಕೆ ಇಲ್ಲವೆಂದು ಒಪ್ಪಿಕೊಳ್ಳಬೇಕಾಗುವುದು. ಈ ಪ್ರಕಾರ ಸಿದ್ಧರಿಗೆ ಗತಿ-ಸ್ಥಿತಿ ಮಾಡುವಲ್ಲಿ ಧರ್ಮ-ಅಧರ್ಮ ದ್ರವ್ಯಗಳೇ ನಿಮಿತ್ತವಿವೆಯೆಂದು ಸ್ಥಾಪನೆ ಮಾಡಬೇಕಾಗುವುದು. ಆದುದರಿಂದ ಎಲ್ಲಿಯವರೆಗೆ ಧರ್ಮ-ಅಧರ್ಮ ದ್ರವ್ಯಗಳು ತಮ್ಮ ಅಸಂಖ್ಯ ಪ್ರದೇಶಗಳಲ್ಲಿ ಸ್ಥಿರವಿವೆ ಅಲ್ಲಿಯವರೆಗೆ ಲೋಕಾಕಾಶವಿದೆ ಮತ್ತು ಅಲ್ಲಿಯವರೆಗೆ ಗಮನ-ಸ್ಥಿತಿಯಿದೆ.

ಈಗ ಆಕಾಶದಲ್ಲಿ ಗತಿ-ಸ್ಥಿತಿಗೆ ಕಾರಣವಾದ ಗುಣವಿಲ್ಲವೆಂಬುದನ್ನು ಸಂಕ್ಷೇಪದಿಂದ ತಿಳಿಸಿಕೊಡುತ್ತಾರೆ.

**ತಮ್ಹಾ ಧಮ್ಮಾಧಮ್ಮಾ ಗಮಣಟ್ಠಿದಿಕಾರಣಾಣಿ ಣಾಗಾಸಂ ।**
**ಇದಿ ಜಿಣವರೇಹಿಂ ಭಣಿದಂ ಲೋಗಸಹಾವಂ ಸುಣಂತಾಣಂ ॥೯೫॥**

**ಅದರಿಂದ ಗತಿ-ಸ್ಥಿತಿ ಕಾರಣಗಳು ಧರ್ಮಾಧರ್ಮಗಳಿವೆ ಆಕಾಶವಿಲ್ಲ ।**
**ಇದನರಿಯೆಂದು ಶ್ರೋತೃಗಳಿಗೆ ಲೋಕಸ್ವಭಾವವ ಜಿನವರ ಪೇಳಿಹರು ॥೯೫॥**

ಈ ಮಾತನ್ನು ಯುಕ್ತಿಯಿಂದ ಸಿದ್ಧಮಾಡಿದ ನಂತರ ಭಗವಂತರು ಕೂಡ ಹೀಗೆಯೇ ಹೇಳಿದ್ದಾರೆಂದು ಈಗ ತಿಳಿಸಿಕೊಡುತ್ತಾರೆ.

ವರ್ತಮಾನ ಸೀಮಂಧರ ಭಗವಂತರು ಮಹಾವಿದೇಹಕ್ಷೇತ್ರದಲ್ಲಿ ವಿರಾಜಮಾನರಿದ್ದಾರೆ ಮತ್ತು ಪೂರ್ವದಲ್ಲಿ ಮಹಾವೀರ ಭಗವಂತರು ಇಲ್ಲಿ ತೀರ್ಥಂಕರ ರೂಪದಲ್ಲಿ ವಿರಾಜಮಾನರಿದ್ದರು. ಅವರ ದಿವ್ಯಧ್ವನಿಯನ್ನು ಆಲಿಸಲು ಅಲ್ಲಿ ಸೇರಿದ ಭವ್ಯ ಜೀವರುಗಳಿಗೆ ಭಗವಂತರು ಹೇಳಿರುವುದೇನೆಂದರೆ ಧರ್ಮ-ಅಧರ್ಮ ದ್ರವ್ಯಗಳು ಗತಿ ಮತ್ತು ಸ್ಥಿತಿಯಲ್ಲಿ ನಿಮಿತ್ತ ಕಾರಣವಿವೆ, ಆಕಾಶವು ಗಮನ-ಸ್ಥಿತಿಯಲ್ಲಿ ಕಾರಣವಿಲ್ಲ. ಆರೂ ದ್ರವ್ಯಗಳು ಸ್ವತಂತ್ರವಿವೆ ಹೀಗೆ ಲೋಕದ ಸ್ವಭಾವವಿದೆ. ಭಗವಂತರು ಆರೂ ದ್ರವ್ಯಗಳನ್ನು ಪೃಥಕ್ ಪೃಥಕ್ಕಾಗಿ ಹೇಳಿದ್ದಾರೆ. ನೀನು ಶರೀರದಿಂದ ಆತ್ಮನ ಕಾರ್ಯವಾಗುತ್ತದೆಯೆಂದು ಮನ್ನಿಸಿದರೆ ಮತ್ತು ನಿನ್ನ ಜ್ಞಾನದ ಸಲುವಾಗಿ ಶರೀರ, ಮನಸ್ಸು, ಪುಸ್ತಕ ಮೊದಲಾದವುಗಳ ಅವಶ್ಯಕತೆಯಿರುತ್ತದೆಯೆಂದು ಮನ್ನಿಸಿದರೆ ನಿನ್ನ ಗುಣಗಳ ಹಾನಿಯಾಗುವುದು. ಯಾರ ಕಾರ್ಯವು ಯಾರಿಂದಲೂ ಆಗುವುದಿಲ್ಲವೆಂಬುದನ್ನು ಭಗವಂತರು ಭವ್ಯ ಜೀವರುಗಳಿಗೆ ಹೇಳಿದ್ದಾರೆ. ಅಭವ್ಯ ಜೀವರುಗಳಂತೂ ಭಗವಂತರ ಸಮವಸರಣದಲ್ಲಿ ಪ್ರವೇಶ ಮಾಡುವ ಸಾಧ್ಯತೆಯಿಲ್ಲ. ಅಭವ್ಯ ಜೀವರುಗಳಿಗೆ ನಿಜವಾದ ಉಪದೇಶವು ದೊರಕಿದರೂ ಕೂಡ ಅವರು ಜ್ಞಾನಪೂರ್ವಕವಾಗಿ ಆಲಿಸುವುದಿಲ್ಲ, ಆದರೆ ಪುಣ್ಯ-ಪಾಪದ ಮಾತನ್ನು ಆಲಿಸುವುದರ ಬೆನ್ನು ಹತ್ತಿರುತ್ತಾರೆ. ಆ ಅಭವ್ಯ ಜೀವರುಗಳು ಕ್ರಿಯಾಕಾಂಡವನ್ನು ಮಾಡಿ ಅದರಲ್ಲಿಯೇ ಧನ್ಯತೆಯನ್ನು ಮನ್ನಿಸುತ್ತಾರೆ ಮತ್ತು ಪುಣ್ಯ ಪರಿಣಾಮದಿಂದ ಸ್ವರ್ಗಾದಿಗಳಲ್ಲಿ ಹೋದರೂ ಕೂಡ ಪುನಃ ಪಾಪ ಮಾಡಿ ನರಕದಲ್ಲಿ ಹೋಗುತ್ತಾರೆ. ಈ ಪ್ರಕಾರ ಚತುರ್ಗತಿಗಳಲ್ಲಿಯೇ ಸುತ್ತುತ್ತಾರೆ. ಅವರು ಸಂಸಾರದಿಂದ ಎಂದೂ ಬಿಡುಗಡೆ ಹೊಂದುವುದಿಲ್ಲ.

ಭಗವಂತರು ಭವ್ಯ ಜೀವರುಗಳಿಗೆ ಸತ್ಯ ಮಾತನ್ನು ಹೇಳಿದ್ದಾರೆ. (ಸಮ್ಯಕ್ ಪ್ರಕಾರದಿಂದ ಭವ್ಯಜೀವರುಗಳು ಹನ್ನೆರಡು ಸಭೆಯರೂಪದಲ್ಲಿ ಏಕತ್ರಿತರಾಗುತ್ತಾರೆ ಅದನ್ನು ಸಮವಸರಣವೆಂದು ಹೇಳುತ್ತಾರೆ. ಭಗವಂತರು ಹೇಳುವುದೇನೆಂದರೆ ಎಲೈ ಭವ್ಯ ಜೀವರುಗಳೇ ! ಜೈನದರ್ಶನವು ಅದು ವಸ್ತುದರ್ಶನವಿದೆ, ಅದು ಸ್ವಭಾವಸ್ವರೂಪವಿದೆ. ಆಕಾಶವು ಅನಂತ ದ್ರವ್ಯಗಳಿಗೆ ಅವಗಾಹನ ಕೊಡುವಂಥ ಸ್ವಭಾವವುಳ್ಳದ್ದಿದೆ, ಧರ್ಮವು ಅನಂತ ಜೀವ-ಪುದ್ಗಲಗಳಿಗೆ ಗತಿಯಲ್ಲಿ ನಿಮಿತ್ತವಾಗುವಂಥ ಸ್ವಭಾವವುಳ್ಳದ್ದಿದೆ, ಅಧರ್ಮವು ಗತಿಪೂರ್ವಕವಾದ ಅನಂತ ಜೀವ-ಪುದ್ಗಲಗಳಿಗೆ ಸ್ಥಿತಿಯಲ್ಲಿ ನಿಮಿತ್ತವಾಗುವಂಥ ಸ್ವಭಾವವುಳ್ಳದ್ದಿದೆ. ಕಾಲವು ಅನಂತ ಜೀವ-ಪುದ್ಗಲಗಳಿಗೆ ಪರಿಣಮನದಲ್ಲಿ ನಿಮಿತ್ತವಾಗುತ್ತದೆ, ಪರಮಾಣುವು ಒಂದು ಸಮಯದಲ್ಲಿ ಹದಿನಾಲ್ಕು ರಜ್ಜು ಪ್ರಮಾಣಲೋಕದಲ್ಲಿ ಹೋಗುವಂಥ ಮತ್ತು ಸ್ಪರ್ಶಾದಿಗಳ ತರತಮತೆಯಲ್ಲಿ ಅನಂತ ಪ್ರಕಾರದ ಭಾವವುಳ್ಳದ್ದಿದೆ ಮತ್ತು ಜೀವವೊಂದು ಜ್ಞಾನಾನಂದ ಸ್ವಭಾವಿ ಹಾಗೂ ಸ್ವ ಮತ್ತು ಪರಗಳೆಲ್ಲವನ್ನು ತಿಳಿದುಕೊಳ್ಳುವಂಥದ್ದಿದೆ. ಹೀಗೆ ಆರೂ ದ್ರವ್ಯಗಳು ಸ್ವತಂತ್ರವಿವೆಯೆಂದು ಜ್ಞಾನಮಾಡಿಕೊಂಡು ಪರದಿಂದ ಭಿನ್ನತನ-ವಿಭಕ್ತತನ ಮತ್ತು ಸ್ವದಿಂದ ಏಕತೆಯನ್ನು ಸಾಧಿಸುವುದು ಅದು ಧರ್ಮವಿದೆಯೆಂದು ಭಗವಂತರ ದಿವ್ಯಧ್ವನಿಯಲ್ಲಿ ಬಂದಿದೆ.

ಯಾವ ಜೀವನು ಯಾವುದೇ ಒಂದು ದ್ರವ್ಯದ ಸ್ವಭಾವವನ್ನು ನಿರಾಕರಿಸುತ್ತಾನೆ, ಧರ್ಮ-ಅಧರ್ಮದ ಗತಿ-ಸ್ಥಿತಿ ಹೇತುತ್ವ ಗುಣವನ್ನು ನಿರಾಕರಿಸುತ್ತಾನೆ ಮತ್ತು ಕಾಲವನ್ನು ನಿರಾಕರಿಸುತ್ತಾನೆ ಆ ಜೀವನು ಪರದಿಂದ ಭಿನ್ನತೆ ಮತ್ತು ತನ್ನಲ್ಲಿ ಏಕತೆಯನ್ನು ಮಾಡುವುದಿಲ್ಲ. ಪರದಿಂದ ಬೇರೆಯಾಗದ ಹೊರತಾಗಿ ತನ್ನಲ್ಲಿ ಏಕತೆಯಾಗುವ ಸಾಧ್ಯತೆಯಿಲ್ಲ.

ಒಂದು ಪರಮಾಣುವು ಹದಿನಾಲ್ಕು ರಜ್ಜು ಪ್ರಮಾಣವಾದ ಲೋಕದವರೆಗೆ ಯಾವುದರದೂ ಸಹಾಯವಿಲ್ಲದೆ ಒಂದು ಸಮಯದಲ್ಲಿ ಹೋಗುತ್ತದೆ ಅದರ ಕಾರಣವೇನು ? ಅದರ ಸ್ವಯಂಸಿದ್ಧ ಸ್ವಭಾವವೇ ಕಾರಣವಿದೆ. ಯಾವುದು

ಸ್ವಭಾವವಿದೆ ಅದು ಎಂದೂ ಹೊರಟು ಹೋಗುವುದಿಲ್ಲ ಮತ್ತು ಯಾವುದು ನವೀನವಾಗಿ ಆಗುತ್ತದೆ ಅದನ್ನು ಸ್ವಭಾವವೆಂದು ಹೇಳಲಾಗುವುದಿಲ್ಲ. ರಾಗ-ದ್ವೇಷಗಳಲ್ಲಿ ಸಿಕ್ಕಿಬೀಳುವುದು ಅದು ಜ್ಞಾನದ ಸ್ವಭಾವವಲ್ಲ. ನಿಜವಾದ ತಿಳಿವಳಿಕೆಯಾದರೆ ಜ್ಞಾನಪರ್ಯಾಯವು ತನ್ನ ಜ್ಞಾನ ಸ್ವಭಾವದಲ್ಲಿ ಗಮನ ಮಾಡುತ್ತದೆ ಮತ್ತು ಪರದಿಂದ ವಿಭಕ್ತವಾಗುವುದು. ರಾಗ-ದ್ವೇಷಗಳಿಂದ ವಿಭಕ್ತವಾಗುವುದು ಸ್ವಭಾವದಲ್ಲಿ ಏಕತ್ವ ಮಾಡುವುದನ್ನು ಭಗವಂತರ ವಾಣಿಯಲ್ಲಿ ಹೇಳಲಾಗಿದೆ. ಯಾವ ಜೀವರುಗಳು ಇಂಥ ವಾಣಿಯನ್ನು ಕೇಳಿಯೂ ಕೂಡ ನಿಜಸ್ವಭಾವವನ್ನು ತಿಳಿದುಕೊಂಡಿಲ್ಲ. ಅವರಿಗೆ ಈ ಮಾತು ಒಪ್ಪಿಗೆಯಾಗುವುದಿಲ್ಲ. ಅವರನ್ನು ದಿವ್ಯಧ್ವನಿ ಕೇಳಿದವರೆಂದು ಹೇಳಲಾಗುವುದಿಲ್ಲ. ಯಾರು ತಮ್ಮ ಸ್ವಭಾವವನ್ನು ತಿಳಿದುಕೊಂಡಿದ್ದಾರೆ ಅವರು ವಾಣಿಯನ್ನು ಆಲಿಸಿದ್ದಾರೆಂದು ಹೇಳಲಾಗಿದೆ. ಆರು ದ್ರವ್ಯಗಳ ಸ್ವರೂಪವನ್ನು ಭಗವಂತರು ಇಚ್ಛಾರಹಿತತೆಯಿಂದ ಹೇಳಿದ್ದಾರೆ ವಾಣಿ ಮತ್ತು ಭಗವಂತರಲ್ಲಿ ನಿಮಿತ್ತ-ನೈಮಿತ್ತಿಕ ಸ್ವಭಾವವಿರುವುದರಿಂದ ಭಗವಂತರು ಹೇಳಿದ್ದಾರೆಂದು ಹೇಳಲಾಗುತ್ತದೆ.

ಧರ್ಮ-ಅಧರ್ಮ ಮತ್ತು ಆಕಾಶ ಈ ಮೂರರ ಗುಣಗಳನ್ನು ಭಿನ್ನವಾಗಿ ಹೇಳಿದ ನಂತರ ಮೂರರ ಕ್ಷೇತ್ರವು ಬೇರೆಯಾಗಿಲ್ಲ. ಮೂರೂ ಏಕಕ್ಷೇತ್ರದಲ್ಲಿ ಇರುತ್ತಿದ್ದರೂ ಕೂಡ ವಿರೋಧವು ಬರುವುದಿಲ್ಲವೆಂಬುದನ್ನು ತಿಳಿಸಿದ್ದಾರೆ. ಮನೆಯಲ್ಲಿ ಬೇರೆ ಬೇರೆ ಮನುಷ್ಯರಿರುತ್ತಾರೆ, ಓರ್ವನು ತೀವ್ರ ಸ್ವಭಾವಿಯಿದ್ದರೆ ಇನ್ನೋರ್ವನು ಶಾಂತ ಸ್ವಭಾವಿಯಿರುತ್ತಾನೆ, ಆದಾಗ್ಯೂ ಒಂದೇ ಮನೆಯಲ್ಲಿ ಜತೆಯಾಗಿರುತ್ತಾರೆ. ಅದೇ ಪ್ರಕಾರ ಧರ್ಮ, ಅಧರ್ಮ ಮತ್ತು ಆಕಾಶದ ಗುಣಗಳು ಬೇರೆ ಬೇರೆಯಾಗಿದ್ದರೂ ಮತ್ತು ಅವುಗಳ ಕಾರ್ಯವು ಬೇರೆ ಬೇರೆಯಾಗಿದ್ದರೂ ಕೂಡ ಆಕಾಶದಲ್ಲಿ ಒಂದು ಸ್ಥಾನದಲ್ಲಿವೆ ಮತ್ತು ಒಂದು ಸ್ಥಾನದಲ್ಲಿದ್ದರೂ ಕೂಡ ತಮ್ಮ ತಮ್ಮ ಸ್ವಭಾವ ಬಿಟ್ಟು ಕೊಡುವುದಿಲ್ಲ.

ಅದೇ ಪ್ರಕಾರ ಶರೀರ, ಕರ್ಮ ಮತ್ತು ಆತ್ಮನು ಏಕ ಕ್ಷೇತ್ರದಲ್ಲಿ ಇರುತ್ತಿದ್ದರೂ ಕೂಡ ಪ್ರತಿಯೊಂದು ತನ್ನ ತನ್ನ ಸ್ವಭಾವ ಬಿಡುವುದಿಲ್ಲ. 'ಜ್ಞಾನಾವರಣೀಯ ಕರ್ಮವು ಜ್ಞಾನವನ್ನು ಮಲಿನ ಮಾಡಿರುವುದರಿಂದ ಅದಕ್ಕೆ ಜ್ಞಾನಾವರಣೀಯ ಕರ್ಮವೆಂದು ಹೆಸರು ಬಂದಿದೆ'ಯೆಂದು ಕೆಲವರು ಸಾಧಿಸುತ್ತಾರೆ. ಆದರೆ ಸೋದರನೇ ! ಕರ್ಮದ ಕಾರಣದಿಂದಂತೂ ಜ್ಞಾನವು ಮಲಿನವಾಗುವುದಿಲ್ಲ. ಆದರೆ ಜೀವವು ತಾನು ತನ್ನ ಕಾರಣದಿಂದ ಜ್ಞಾನವನ್ನು ಮಲಿನ ಮಾಡಿದೆ. ಅದಕ್ಕಾಗಿ ಕರ್ಮಕ್ಕೆ ಜ್ಞಾನಾವರಣೀಯವೆಂದು ಹೆಸರು ಕೊಟ್ಟಿದೆಯೆಂಬುದಾಗಿಯೂ ಇಲ್ಲ. ಅದರ ಸ್ವಭಾವ ಮತ್ತು ಅದರ ನಾಮದ ಕಾರಣದಿಂದ ಇದೆ ಮತ್ತು ಅದರ ಹೆಸರು ಜ್ಞಾನಾವರಣೀಯವೆಂದು ಬಿದ್ದಿರುವುದರಿಂದ ಜ್ಞಾನವು ಮಲಿನವಾಗುತ್ತದೆಯೆಂದು ಕೂಡ ಇಲ್ಲ. ವಿಕಾರ ಅಥವಾ ಹೀನತೆಯನ್ನು ಜೀವವು ತನ್ನ ಕಾರಣದಿಂದ ಮಾಡುತ್ತದೆ ಮತ್ತು ಕರ್ಮದ ಅವಸ್ಥೆ ಹಾಗೂ ಹೆಸರು ಕರ್ಮದ ಕಾರಣದಿಂದ ಇದೆ.ಎರಡರ ಸ್ವಭಾವವು ಭಿನ್ನ ಭಿನ್ನವಾಗಿದ್ದರೂ ಕೂಡ ಏಕಕ್ಷೇತ್ರದಲ್ಲಿ ವಾಸಿಸುತ್ತವೆ.

ಧರ್ಮ, ಅಧರ್ಮ ಮತ್ತು ಆಕಾಶ ಈ ಮೂರು ದ್ರವ್ಯಗಳು ಏಕಕ್ಷೇತ್ರದಲ್ಲಿ ಇರುತ್ತಿದ್ದರೂ ಕೂಡ ನಿಜಸ್ವಭಾವದಿಂದ ಅವು ಮೂರು ಬೇರೆ ಬೇರೆಯಿದೆಯೆಂದು ಈ ಗಾಥೆಯಲ್ಲಿ ಹೇಳುತ್ತಾರೆ -

**ಧಮ್ಮಾಧಮ್ಮಾಗಾಸಾ ಅಪುಧಬ್ಭೂದಾ ಸಮಾಣಪರಿಮಾಣಾ ।**
**ಪುಧಗುವಲದ್ಧಿವಿಸೇಸಾ ಕರೇಂತಿ ಏಗತ್ತಮಣ್ಣತ್ತಂ ।।೯೬।।**

**ಆ ಧರ್ಮಾಧರ್ಮ ಆಕಾಶಗಳು ಸಮಾನ ಪರಿಣಾಮಯುತ ಅಪೃಥಕತ್ವದಿಂ ।**
**ಅದರಂತೆ ಭಿನ್ನ-ಭಿನ್ನ ವಿಶೇಷದಿಂ ಏಕತ್ವಮೇಣನ್ಯತ್ವವ ಮಾಡುವವು ।।೯೬।।**

ಧರ್ಮ, ಅಧರ್ಮ ಮತ್ತು ಆಕಾಶ ಈ ಮೂರು ದ್ರವ್ಯಗಳು ವ್ಯವಹಾರನಯದ ಅಪೇಕ್ಷೆಯಿಂದ ಏಕಕ್ಷೇತ್ರಾವಗಾಹಿಯಿವೆ. ಎಲ್ಲಿ ಆಕಾಶವಿದೆ ಅಲ್ಲಿ ಧರ್ಮ, ಅಧರ್ಮ ಎರಡೂ ದ್ರವ್ಯಗಳು ಇರುತ್ತವೆ. ಈ ಮೂರು ದ್ರವ್ಯಗಳ ಅಸಂಖ್ಯ ಪ್ರದೇಶಗಳು ಸಮಾನವಿವೆ ಮತ್ತು ನಿಶ್ಚಯನಯದಿಂದ ಬೇರೆ ಬೇರೆಯಾಗಿ ಕಂಡುಬರುತ್ತವೆ ಅಥವಾ ತಮ್ಮ ಸ್ವಭಾವದಿಂದ ಟಂಕೋತ್ಕೀರ್ಣ ತಮ್ಮ ತಮ್ಮ ಭಿನ್ನ ಭಿನ್ನ ಸತ್ತಾವುಳ್ಳವುಗಳಿವೆ. ಪಾಷಾಣದಲ್ಲಿ ಚೇಣದಿಂದ ಕೊರೆದ ಮೂರ್ತಿಯ ಹಾಗೆ ಹೇಗಿದೆ ಹಾಗೆ ಇದೆ. ಇಲ್ಲಿ ಹೇಳಿರುವುದೇನೆಂದರೆ ಸಮ್ಯಕ್‌ಜ್ಞಾನರೂಪದ ಚೇಣದಿಂದ ಭೇದಮಾಡಿ ಪ್ರತಿಯೊಬ್ಬ ಆತ್ಮ ಮತ್ತು ಜಡಪದಾರ್ಥಗಳು ಬೇರೆ ಬೇರೆಯಿವೆ. ಯಾವುದು ಯಾವುದನ್ನು ತಂದಿಲ್ಲ ಮತ್ತು ಯಾವುದು ಯಾವುದನ್ನು ಬಿಟ್ಟುಕೊಟ್ಟಿಲ್ಲ. ಒಂದು ಸ್ಥಳದಲ್ಲಿ ೯೦ ಅಡಿಯ ಅಖಂಡ ಪಾಷಾಣವು ಹೊರಡುವುದು ಮತ್ತು ಅದರಿಂದ ಮಾನಸ್ತಂಭ ಮಾಡುವರು. ಅದರಂತೆ ಪ್ರತಿಯೊಂದು ಅಖಂಡ ಪೂರ್ಣ ಬಿದ್ದುಕೊಂಡಿದೆ, ಯಾವ ಪ್ರಕಾರ ಪಾಷಾಣದಲ್ಲಿ ಭೇದವಿರುವುದರಿಂದ ಅದು ಬೇರೆಯಾಗಿ ಹೋಗುತ್ತದೆ, ಅದೇ ಪ್ರಕಾರ ಪ್ರತಿಯೊಂದು ಆತ್ಮ, ಪರಮಾಣು, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಇವುಗಳ ಮಧ್ಯದಲ್ಲಿ ಸ್ವಭಾವದ ಅಪೇಕ್ಷೆಯಿಂದ ಭೇದವಿದೆ. ಅದರಿಂದ ಅವು ಬೇರೆಯಾಗಿ ಹೋಗುತ್ತವೆ.

ಇಲ್ಲಿ ಹೇಳಿರುವುದೇನೆಂದರೆ ಧರ್ಮ, ಅಧರ್ಮ, ಆಕಾಶಗಳು ವ್ಯವಹಾರ ನಯದಿಂದ ಏಕಕ್ಷೇತ್ರಾವಗಾಹಿಯಿರುವುದರಿಂದ ಏಕಭಾವರೂಪವೆಂದು ಹೇಳಲಾಗುತ್ತದೆ ಮತ್ತು ನಿಶ್ಚಯನಯದಿಂದ ಮೂರೂ ತಮ್ಮ ತಮ್ಮ ಸತ್ತಾದಿಂದ ಭೇದಭಾವ ಮಾಡುತ್ತವೆ. ಈ ಪ್ರಕಾರ ಮೂರೂ ದ್ರವ್ಯಗಳ ಸ್ವರೂಪವನ್ನು ವ್ಯವಹಾರ-ನಿಶ್ಚಯದಿಂದ ಏಕರೂಪವಾಗಿ ತಿಳಿದುಕೊಳ್ಳುವುದು.

ಆ ದೃಷ್ಟಾಂತದಂತೆ ಶರೀರ, ಕರ್ಮ ಮತ್ತು ಆತ್ಮನು ಆಕಾಶಕ್ಷೇತ್ರದ ಅಪೇಕ್ಷೆಯಿಂದ ಏಕಕ್ಷೇತ್ರಾವಗಾಹಿಯೆಂದು ಹೇಳಲಾಗುತ್ತಿದ್ದರೂ ಪರಮಾರ್ಥದಿಂದ ಮೂರರ ಕಾರ್ಯಗಳು ಬೇರೆ ಬೇರೆಯಿವೆ.ಯಾವುದೂ ಯಾವುದಕ್ಕೂ ಸಹಾಯ ಮಾಡುವುದಿಲ್ಲ. ಯಾವ ಪ್ರಕಾರ ನೀರಿನಲ್ಲಿ ಕಲ್ಲುಗಳಿದ್ದರೂ ಕೂಡ ಒಂದು ಇನ್ನೊಂದರ ರೂಪವಾಗುವುದಿಲ್ಲ ಅದೇ ಪ್ರಕಾರ ಚೈತನ್ಯ ಮತ್ತು ಶರೀರ, ಕರ್ಮ ಮೊದಲಾದ ಜಡಗಳು ಏಕಕ್ಷೇತ್ರದಲ್ಲಿ ಇರುತ್ತಿದ್ದರೂ ಕೂಡ ತಮ್ಮ ಸ್ವಭಾವವನ್ನೆಂದೂ ಬಿಟ್ಟುಕೊಡುವುದಿಲ್ಲ. ಹೀಗೆ ಪರದಿಂದ ಭೇದಜ್ಞಾನ ಮಾಡುವುದು ಅದು ಧರ್ಮವಿದೆ. ಇಂಥ ಧರ್ಮದಿಂದಲೇ ಜೀವನಿಗೆ ನಿಜವಾದ ಸುಖವು ಲಭಿಸುತ್ತದೆ.

ಈಗ ದ್ರವ್ಯಗಳಲ್ಲಿ ಮೂರ್ತತ್ವ-ಅಮೂರ್ತತ್ವ, ಚೇತನತ್ವ-ಅಚೇತನತ್ವವೆಂಬ ನಾಲ್ಕು ಭಾವಗಳನ್ನು ತಿಳಿಸಿಕೊಡುತ್ತಾರೆ -

**ಆಗಾಸಕಾಲಜೀವಾ ಧಮ್ಮಾಧಮ್ಮಾ ಯ ಮುತ್ತಿ ಪರಿಹೀಣಾ ।**
**ಮುತ್ತಂ ಪೋಗ್ಗಲದವ್ವಂ ಜೀವೋ ಖಲು ಚೇದಣೋ ತೇಸು ॥೯೭॥**

**ಜೀವ ಮತ್ತದರಂತೆ ಆಕಾಶ, ಧರ್ಮ, ಅಧರ್ಮ, ಕಾಲವಿವೆಲ್ಲ ಅಮೂರ್ತವಿವೆ ।**
**ಕೇವಲ ಪುದ್ಗಲದ್ರವ್ಯ ಮೂರ್ತವಿದ್ದವುಗಳಲಿ ಜೀವ ನಿಜದಿ ಚೇತನವಿದೆ ॥೯೭॥**

ಈ ಜಗತ್ತಿನಲ್ಲಿ ಆರು ವಸ್ತುಗಳಿದ್ದು, ಅವುಗಳ ಭಾವಗಳು ಪೃಥಕ್ ಪೃಥಕ್ ಇವೆ. ಐದು ಜಡ ಪದಾರ್ಥಗಳ ಪ್ರತಿಯೊಂದರ ಭಾವವು ತಮ್ಮಿಂದ ತಮ್ಮ ತಮ್ಮಲ್ಲಿ ಅಭೇದವಿವೆ ಮತ್ತು ಪರದಿಂದ ಭೇದವಿದೆ. ಚೈತನ್ಯಮಯ ಜೀವದ ಭಾವವು ತನ್ನಲ್ಲಿ ತನ್ನಿಂದ ಅಭೇದವಿದೆ ಮತ್ತು ಪರದಿಂದ ಭೇದವಿದೆ. ಇಲ್ಲಿ ಕಾಲದ ಮಾತನ್ನು ಜತೆಯಲ್ಲಿ ಸ್ವೀಕರಿಸಲಾಗಿದೆ.

ಆಕಾಶದ್ರವ್ಯವು ಅಮೂರ್ತಿಕವಿದೆ, ಅದರಲ್ಲಿ ಸ್ಪರ್ಶ, ರಸ, ಗಂಧ, ವರ್ಣಗಳಿಲ್ಲ. ಅದೇ ರೀತಿಯಿಂದ ಆತ್ಮನಲ್ಲಿ ಸ್ಪರ್ಶ, ರಸ, ಗಂಧ, ವರ್ಣಗಳಿಲ್ಲದಿದ್ದರೂ ಕೂಡ ಆತ್ಮ ಮತ್ತು ಆಕಾಶದ ಸ್ವರೂಪದಲ್ಲಿ ಅಂತರವಿದೆ. ಆಕಾಶವು ಅಚೇತನ ಅಮೂರ್ತಿಕವಿದೆ ಮತ್ತು ಆತ್ಮನು ಚೇತನ ಅಮೂರ್ತಿಕನಿದ್ದಾನೆ, ಅದೇ ರೀತಿಯಿಂದ ಕಾಲ, ಧರ್ಮ, ಅಧರ್ಮ, ಈ ಮೂರರಲ್ಲಿ ಸ್ಪರ್ಶ, ರಸ, ಗಂಧ, ವರ್ಣಗಳಿಲ್ಲದಿರುವುದರಿಂದ ಅಮೂರ್ತಿಕವಿವೆ, ಆದರೆ ಅಚೇತನವಿವೆ, ಪರಂತು ಆತ್ಮನು ಚೇತನ ಅಮೂರ್ತಿಕನಿದ್ದಾನೆ.

ಪುದ್ಗಲ ದ್ರವ್ಯವು ಮೂರ್ತಿಕವಿದೆ, ಸ್ಪರ್ಶ, ರಸ, ಗಂಧ, ವರ್ಣಯುಕ್ತವಿದೆ ಮತ್ತು ಅಚೇತನವಿದೆ. ಆತ್ಮನು ಚೇತನ ಅಮೂರ್ತಿಕನಿದ್ದಾನೆ. ಇದನ್ನು ತಿಳಿಸಿಕೊಟ್ಟು ಆತ್ಮನು ಪರಪದಾರ್ಥಗಳಿಂದ ಭಿನ್ನನಿದ್ದಾನೆಂದು ಹೇಳಿದೆ. ಯಾವ ಪದಾರ್ಥಗಳು ತಮ್ಮಿಂದ ಭಿನ್ನವಿವೆ ಅವುಗಳ ತ್ಯಾಗವನ್ನು ಆತ್ಮನು ಯಾವ ರೀತಿಯಿಂದ ಮಾಡುವನು ? ಕುಟುಂಬ-ಪರಿವಾರ, ಶರೀರ, ಧನ ಮೊದಲಾದವುಗಳಿಂದ ಆತ್ಮನು ಭಿನ್ನನಿರುವುದರಿಂದ ಅವುಗಳ ತ್ಯಾಗವನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ಆದರೆ ಅಜ್ಞಾನೀ ಜೀವನು ಮನ್ನಿಸಿಕೊಂಡಿರುವುದೇನೆಂದರೆ ಪರ ಪದಾರ್ಥಗಳನ್ನು ಬಿಟ್ಟು ಕೊಟ್ಟವನು ಅವನು ತ್ಯಾಗಿಯೆನಿಸಿಕೊಳ್ಳುತ್ತಾನೆ ಮತ್ತು ಜೀವನಿಗೆ ಯಾವ ಅಧ್ಯವಸಾನಗಳಾಗುತ್ತವೆ ಅವೇನು ಪರದ ಆಶ್ರಯವಿಲ್ಲದೆ ಆಗುತ್ತವೆಯೇನು ? ಆದುದರಿಂದ ಪರವನ್ನು ಬಿಟ್ಟುಕೊಡಬೇಕಾಗುವುದೆಂದು ಅಪೀಲು ಮಾಡುತ್ತಾನೆ.

೧) ಶರೀರ, ಕರ್ಮ, ಧನ, ದೇವ-ಶಾಸ್ತ್ರ-ಗುರು ಮೊದಲಾದ ಸಮಸ್ತ ಜಡ ಮತ್ತು ಚೇತನ ಪದಾರ್ಥಗಳು ನಿನ್ನಿಂದ ಮೂರು ಕಾಲದಲ್ಲಿಯೂ ಭಿನ್ನವಿವೆ. ಪರ ವಸ್ತುಗಳನ್ನು ಬಿಟ್ಟುಕೊಡಬೇಕಾಗುವುದಿಲ್ಲ. ಅವಂತೂ ಬಿಟ್ಟವುಗಳೇ ಇವೆ. ಅವು ನಿನ್ನಿಂದ ಮೂರು ಕಾಲದಲ್ಲಿ ಭಿನ್ನವೇ ಇವೆ. ಅದಕ್ಕಾಗಿ ಅವುಗಳ ಮೇಲಿರುವ ದೃಷ್ಟಿಯನ್ನು ತೆಗೆದುಹಾಕು.

೨) ಶರೀರ, ಮನಸ್ಸು, ವಾಣಿ ಮೊದಲಾದ ಪರಪದಾರ್ಥಗಳನ್ನು ನಾನು ಬಿಟ್ಟಿದ್ದೇನೆಂಬ ಯಾವ ಭ್ರಾಂತಿ ಮತ್ತು ವಿಕಾರವಿದೆ ಅದನ್ನು ಕೂಡ ಬಿಡಲಾಗುವುದಿಲ್ಲ. ಏಕೆಂದರೆ ಯಾವ ವಿಕಾರ ಅಥವಾ ದೋಷವಾಗುವುದು ಅದನ್ನು ಯಾವ ರೀತಿಯಿಂದ ಬಿಡುವುದು ? ಮತ್ತು ಯಾವ ದೋಷವು ಈಗ ಆಗಿಲ್ಲ ಅದನ್ನು ಯಾವ ರೀತಿಯಿಂದ ಬಿಡುವುದು ? ಅದಕ್ಕಾಗಿ ವಿಕಾರವನ್ನು ಬಿಟ್ಟುಕೊಡಲಾಗುವುದಿಲ್ಲ.

೩) ಶರೀರ ಮೊದಲಾದವುಗಳು ಪರವಿವೆ ಮತ್ತು ಭ್ರಾಂತಿ ಹಾಗೂ ವಿಕಾರಗಳು ಒಂದು ಸಮಯದ ಪರ್ಯಾಯವಿವೆ. ನಾನಂತೂ ಶುದ್ಧ ಚೈತನ್ಯಸ್ವಭಾವಿಯಿದ್ದೇನೆ. ನನ್ನೊಳಗೆ ಮೂರು ಕಾಲದಲ್ಲೂ ಪರ ಪದಾರ್ಥಗಳ ಅಭಾವವಿದೆ ಮತ್ತು ಶುದ್ಧ ಸ್ವಭಾವದಲ್ಲಿ ಕ್ಷಣಿಕ ವಿಕಾರಗಳದ್ದೂ ಕೂಡ ಅಭಾವವಿದೆ. ಹೀಗೆ ಶುದ್ಧ ಚೈತನ್ಯ ಸ್ವಭಾವದ ಪ್ರತೀತಿಯಾದರೆ ಮಿಥ್ಯಾತ್ವದ ಉತ್ಪತ್ತಿಯಾಗುವುದಿಲ್ಲ ಮತ್ತು ಸ್ಥಿರತೆಯಾದರೆ ಅಚಾರಿತ್ರದಶೆಯು ಉತ್ಪನ್ನವಾಗುವುದಿಲ್ಲ. ಹೀಗೆ ಮಿಥ್ಯಾತ್ವ ಮತ್ತು ರಾಗ-ದ್ವೇಷಗಳನ್ನು ಬಿಟ್ಟುಕೊಡಲಾಯಿತೆಂದು ಕಥನ ಮಾಡುವುದರಲ್ಲಿ ಬರುತ್ತದೆ.

ಹೀಗೆ ವಸ್ತುಸ್ವರೂಪದ ಅರಿವಿಲ್ಲದೆ ತ್ಯಾಗಿಯಾಗಿ ಹೋಗುವುದು ಮತ್ತು ನಾನು ಹೆಂಡಿರು-ಮಕ್ಕಳನ್ನು ಬಿಟ್ಟುಕೊಟ್ಟಿದ್ದೇನೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ. ಅವನಿಗೆ ತನ್ನ ಧರ್ಮದ ತ್ಯಾಗವು ವರ್ತಿಸುತ್ತಿದೆ. ಅವನನ್ನು ಸ್ವಧರ್ಮ ತ್ಯಾಗಿಯೆಂದು ಹೇಳಬಹುದಾಗಿದೆ. ಶರೀರ, ಕುಟುಂಬ ಮೊದಲಾದ ಪರವಸ್ತುಗಳು ಭಿನ್ನವಾಗಿದ್ದರೂಕೂಡ ಅವನ್ನು ಉಪಾಧಿಯೆಂದು ಮನ್ನಿಸಲಾಗಿದೆ. ನಾನು ಅವುಗಳ ಗ್ರಹಣ-ತ್ಯಾಗ ಮಾಡುವ ಸಾಧ್ಯತೆಯಿದೆಯೆಂಬ ಮನ್ನಣೆಯು ಅಜ್ಞಾನವಿದೆ. ಸ್ವಭಾವದ ಯಥಾರ್ಥ ಜ್ಞಾನವಾದರೆ ಅಜ್ಞಾನವು ಹೊರಟು ಹೋಗುತ್ತದೆ. ಆತ್ಮನ ಜ್ಞಾನವಿಲ್ಲದೆ ವ್ರತ, ತಪ ಮೊದಲಾದುವನ್ನು ಮಾಡಿದರೆ ಮತ್ತು ಶಾಸ್ತ್ರಾಭ್ಯಾಸ ಮಾಡಿದರೂ ಕೂಡ ಅದು ರಾಗದಲ್ಲಿ ಪಕ್ವವಾದಂತೆಯೇ ಇದೆ.

ಆತ್ಮನು ಅಮೂರ್ತನಿದ್ದಾನೆ ಮತ್ತು ಉಳಿದ ನಾಲ್ಕು ದ್ರವ್ಯಗಳು ಅಮೂರ್ತವಿವೆ ಮತ್ತು ಒಂದು ಪುದ್ಗಲ ದ್ರವ್ಯವು ಮೂರ್ತವಿದೆ. ಆತ್ಮನು ತಿಳಿದುಕೊಳ್ಳುವವನಿದ್ದಾನೆ ನೋಡುವವನಿದ್ದಾನೆ, ಉಳಿದ ಐದು ಅಚೇತನ ಇವೆ. ಪರಪದಾರ್ಥಗಳಿಂದ ಆತ್ಮನ ಸ್ವಭಾವವು ಭಿನ್ನವಿದ್ದು ಅದರ ಅಭಿರುಚಿ ಮಾಡಿ ಪರವನ್ನು ಸ್ವೀಕರಿಸುವ, ಬಿಟ್ಟುಕೊಡುವ ಪರ್ಯಾಯ ಬುದ್ಧಿಯನ್ನು ತ್ಯಜಿಸಿ ತನ್ನ ಅಂತರ್ಯದಲ್ಲಿ ಅಭಿರುಚಿ ಮಾಡುವುದು ಅದು ಧರ್ಮವಿದೆ, ಅದುವೇ ಮೋಕ್ಷಮಾರ್ಗವಿದೆ.

ಅದೆಷ್ಟೋ ಜೀವರುಗಳು ಕಾಲವನ್ನು ಉಪಚಾರದಿಂದ ದ್ರವ್ಯವೆಂದು ಮನ್ನಿಸುತ್ತಾರೆ, ಕೆಲವರು ಕಾಲವನ್ನು ಅನಂತದ್ರವ್ಯಗಳ ರೂಪದಿಂದ ಮನ್ನಿಸುತ್ತಾರೆ, ಆದರೆ ಇವೆಲ್ಲ ಮನ್ನಣೆಗಳು ದೋಷಯುಕ್ತವಿವೆ. ಕಾಲವು ಅಸಂಖ್ಯ ಅಚೇತನ ಅಮೂರ್ತಿಕ ದ್ರವ್ಯವಿದೆ. ಆತ್ಮನು ಅದರಿಂದ ಭಿನ್ನ ಚೇತನ ಅಮೂರ್ತಿಕನಿದ್ದಾನೆ. ಹೀಗೆ ಭೇದಜ್ಞಾನ ಮಾಡಲಾಗಿದೆ. ಕರ್ಮವು ರೂಪಿ ಅಚೇತನವಿದೆ, ಆತ್ಮನು ಅದರಿಂದ ಭಿನ್ನನಿದ್ದಾನೆ. ಕರ್ಮದ ಕಾರಣದಿಂದ ಜೀವನಿದ್ದರೆ ಜೀವದ ಜೀವತ್ವವು ಉಳಿಯುವುದಿಲ್ಲ ಮತ್ತು ಜೀವದ ಕಾರಣದಿಂದ ಕರ್ಮವಿದ್ದರೆ ಕರ್ಮದ ಜಡತ್ವವು ಉಳಿಯುವುದಿಲ್ಲ. ಆದುದರಿಂದ ಕರ್ಮವು ಕರ್ಮದ ಕಾರಣದಿಂದ ಇದೆ ಮತ್ತು ಜೀವವು ಜೀವದ ಕಾರಣದಿಂದ ಇದೆ. ಹೀಗೆ ಬೇದಜ್ಞಾನ ಮಾಡುವುದು ಅದು ಧರ್ಮವಿದೆ.

ಈಗ ಆರು ದ್ರವ್ಯಗಳಲ್ಲಿ ಎಷ್ಟು ಕ್ರಿಯೆಯುಳ್ಳವುಗಳಿವೆ ಮತ್ತು ಎಷ್ಟು ನಿಷ್ಕ್ರಿಯವಿವೆ, ಸ್ಥಿರವಿವೆಯೆಂಬುದನ್ನು ತಿಳಿಸಿಕೊಡುತ್ತಾರೆ -

**ಜೀವಾ ಪೋಗ್ಗಲಕಾಯಾ ಸಹ ಸಕ್ಕಿರಿಯಾ ಹವಂತಿ ಣ ಯ ಸೇಸಾ ।**
**ಪೋಗ್ಗಲಕರಣಾ ಜೀವ ಖಂಧಾ ಖಲು ಕಾಲಕರಣಾ ದು ।।೯೮।।**

**ಜೀವ-ಪುದ್ಗಲಗಳು ಸಹಭೂತ ಸಕ್ರಿಯವಿದ್ದರೆ ಶೇಷ ನಿಷ್ಕ್ರಿಯವಿವೆ ।**
**ಜೀವ ಪುದ್ಗಲ ನಿಮಿತ್ತ ಸಕ್ರಿಯವಿದ್ದರೆ ಸ್ಕಂಧ ಕಾಲನಿಮಿತ್ತ ಸಕ್ರಿಯವಿದೆ ।।೯೮।।**

ಜೀವ ಮತ್ತು ಪುದ್ಗಲ ದ್ರವ್ಯಗಳಲ್ಲಿ ಕೆಲವುಗಳಿಗೆ ಕ್ಷೇತ್ರಾಂತರವಾಗುವ ಸ್ವಭಾವವಿದೆ. (ಸಿದ್ಧರಿಗೆ ಇಲ್ಲ) ಅದರಲ್ಲಿ ಪರದ್ರವ್ಯವು ನಿಮಿತ್ತವಿದೆ. ಧರ್ಮ, ಅಧರ್ಮ, ಆಕಾಶ ಮತ್ತು ಕಾಲದಲ್ಲಿ ಕ್ಷೇತ್ರಾಂತರವಾಗುವ ಸ್ವಭಾವವು ಸ್ವಲ್ಪವು ಕೂಡ ಇಲ್ಲ. ರೂಪಾಂತರತನವಿದೆ, ಆದರೆ ಗತಿರೂಪವಾದ ಸಕ್ರಿಯತೆಯಿಲ್ಲ. ಎಲ್ಲಿ ಇದೆ ಅಲ್ಲಿ ಅನಾದಿಯಿಂದ ಬಿದ್ದುಕೊಂಡಿದೆ. ಆದುದರಿಂದ ಅದರಲ್ಲಿ ಗತಿಯ ನಿಮಿತ್ತತನವಿಲ್ಲ. ಜೀವ-ಪುದ್ಗಲಗಳಲ್ಲಿ ಸಕ್ರಿಯತೆಯ ಯೋಗ್ಯತೆಯಿದೆ ಅದರಿಂದ ನಿಮಿತ್ತವು ಕೂಡ ಇದೆ.

ಅದರಲ್ಲಿ ಜೀವದ್ರವ್ಯದ ಮಾತು ಹೇಳುತ್ತಾರೆ. ಜೀವವು ಸಂಸಾರ ದಶೆಯಲ್ಲಿ ಇರುವವರೆಗೆ ತನ್ನ ಕಾರಣದಿಂದ ಗತಿ ಮಾಡುತ್ತಿದ್ದರೆ ಅದರಲ್ಲಿ ಕರ್ಮ ಮತ್ತು ಶರೀರವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಯಾವ ಕರ್ಮ ಮತ್ತು ನೋಕರ್ಮಗಳು ಜೀವಕ್ಕೆ ಗತಿ ಮಾಡಿಸಿಬಿಡುತ್ತಿದ್ದರೆ ಉಳಿದ ನಾಲ್ಕು ಧರ್ಮ ಮೊದಲಾದ ದ್ರವ್ಯಗಳಿಗೂ ಕೂಡ ಗತಿ ಮಾಡಿಸಿಬಿಡಬೇಕು, ಆದರೆ ಅವುಗಳಲ್ಲಿ ಸಂಭವಿಸುವುದಿಲ್ಲ. ಏಕೆಂದರೆ ಅವುಗಳ ಉಪಾದಾನದ ಯೋಗ್ಯತೆಯಿಲ್ಲ. ಜೀವದಲ್ಲಿ ಗತಿ ಮಾಡುವ ಯೋಗ್ಯತೆಯಿದ್ದರೆ ಕರ್ಮ-ನೋಕರ್ಮಗಳನ್ನು ನಿಮಿತ್ತವೆಂದು ಹೇಳಲಾಗುತ್ತದೆ. ನಿಗೋದದಿಂದ ಹಿಡಿದು ಕೇವಲೀ ಭಗವಂತರವರೆಗಿನ ಆತ್ಮರುಗಳು ತಮ್ಮ ಕಾರಣದಿಂದ ಕ್ಷೇತ್ರಾಂತರ ಮಾಡಿದರೆ

ಕರ್ಮ ಹಾಗೂ ಶರೀರವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಜೀವನು ಮನುಷ್ಯನಿಂದ ದೇವಗತಿಯಲ್ಲಿ ಹೋಗಲಿ, ಅಂಗಡಿಗೆ ಹೋಗಲಿ, ಆದರೆ ಅದರಲ್ಲಿ ಆತ್ಮನ ಪ್ರದೇಶಗಳ ಕ್ಷೇತ್ರಾಂತರವಾಗುತ್ತದೆ ಅದು ತನ್ನ ಕಾರಣದಿಂದ ಆಗುತ್ತದೆ, ಅದು ಶರೀರದ ಕಾರಣದಿಂದ ಕರ್ಮದ ಕಾರಣದಿಂದ ಆಗುವುದಿಲ್ಲ. ಆದರೆ ಸ್ವಯಂ ಹೋಗುತ್ತಿದ್ದರೆ ಶರೀರ ಮತ್ತು ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಈಗ ಪುದ್ಗಲ ಸ್ಕಂಧಗಳ ಮಾತು ಹೇಳುತ್ತಾರೆ. ಧನ-ಸಂಪತ್ತು, ಮನೆ-ಮಠ, ಊಟ-ತಿಂಡಿಯ ವಸ್ತು ಮೊದಲಾದ ಪುದ್ಗಲ ಸ್ಕಂಧಗಳು ತಮ್ಮ ತಮ್ಮ ಕಾರಣದಿಂದ ಕ್ಷೇತ್ರಾಂತರ ಮಾಡುತ್ತವೆ ಅದು ಉಪಾದಾನ ಕಾರಣವಿದೆ ಅದರಲ್ಲಿ ನಿಮಿತ್ತವು ಕಾಲದ್ರವ್ಯವಿದೆ. ನೋಡಿರಿ ! ಇಲ್ಲಿ ಜೀವದ ನಿಮಿತ್ತತೆಯನ್ನು ಕೂಡ ತೆಗೆದು ಹಾಕಲಾಗಿದೆ. ಮನೆಯಾಗುವುದರಲ್ಲಿ ಉಪಾದಾನ ಕಾರಣವಂತೂ ಆ ಪರಮಾಣುಗಳ ಯೋಗ್ಯತೆಯಿದೆ. ಅದು ಜೀವದ ಕಾರಣದಿಂದ ಇಲ್ಲ, ಆದರೆ ನಿಮಿತ್ತರೂಪದಿಂದ ಜೀವದ ಇಚ್ಛೆ ಅಥವಾ ಜೀವದ ಜ್ಞಾನ ಅಥವಾ ಪೂರ್ವ ಪುಣ್ಯವನ್ನು ಕೂಡ ನಿರಾಕರಿಸಲಾಗಿದೆ. ನಿಮಿತ್ತರೂಪದಿಂದ ಕಾಲವನ್ನು ಹೇಳಲಾಗಿದೆ. ಈ ವಸ್ತುವು ಇಲ್ಲಿಂದ ಇಲ್ಲಿಗೆ ಕ್ಷೇತ್ರಾಂತರವಾಗುತ್ತದೆ ಅದರಲ್ಲಿ ಉಪಾದಾನವಂತೂ ಸ್ವಯಂ ಅದರದಿದೆ. ಆದರೆ ಬೆರಳು ಅಥವಾ ಜೀವದ ಇಚ್ಛೆ ಅಥವಾ ಜ್ಞಾನವನ್ನು ಕೂಡ ನಿಮಿತ್ತವೆಂದು ಹೇಳಿಲ್ಲ. ಆದರೆ ಕಾಲವನ್ನು ನಿಮಿತ್ತವೆಂದು ಹೇಳಿದ್ದಾರೆ.

ಜೀವನು ಪರಮಾಣುವಿನಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ, ಆದರೆ ಸ್ಕಂಧದಲ್ಲಾದರೂ ಮಾಡುವ ಸಾಧ್ಯತೆಯಿದೆಯಲ್ಲವೇ ? ಜೀವನು ಶರೀರವನ್ನು ನಡೆಸುವ ಸಾಧ್ಯತೆಯಿದೆಯಲ್ಲವೇನು ? ಎಂಬುದಾಗಿ ಕೆಲವು ಅಜ್ಞಾನಿಗಳು ಮನ್ನಿಸುತ್ತಾರೆ. ಆದರೆ ಅವರು ತತ್ತ್ವದ ವಾಸ್ತವಿಕ ಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ. ಶರೀರ, ಮನಸ್ಸು, ವಾಣಿ ಮೊದಲಾದ ಸ್ಕಂಧಗಳನ್ನು ಜೀವನು ಮಾಡುವ ಸಾಧ್ಯತೆಯಿಲ್ಲ, ಆದರೆ ಅದರಲ್ಲಿ ಅವನು ನಿಮಿತ್ತಕೂಡ ಇಲ್ಲ. ಅಜ್ಞಾನಿಗಳ ದೃಷ್ಟಿಯು ಸಂಯೋಗದ ಮೇಲೆ ಹೋಗುತ್ತದೆ. ಬೇಕಾದರೆ ಪುದ್ಗಲವು ಪುದ್ಗಲದ ನಿಮಿತ್ತದಿಂದ ಗಮಿಸಲಿ, ಆದರೆ ಅದರಲ್ಲಿ ಜೀವನು ನಿಮಿತ್ತನಿದ್ದಾನೆಂಬುದಾದರೂ ನಿಜವಿದೆಯಲ್ಲವೇನು ? ಎಂಬ ಮಾತನ್ನು ಕೂಡ ಇಲ್ಲಿ ತೆಗೆದು ಹಾಕಿದ್ದಾರೆ. ಮನೆಯು ನಿರ್ಮಾಣವಾಗುವುದರಲ್ಲಿ ಜೀವದ ರಾಗವು ನಿಮಿತ್ತವಾಗುವುದು ನಿಜವಲ್ಲವೇನು ? ರೋಗವು ನಾಶವಾಗುವುದರಲ್ಲಿ ಸಾತಾದ ಉದಯವು ನಿಜವಲ್ಲವೇನು ? ಈ ಕೈಯಲ್ಲಿರುವ ಕೋಲನ್ನು ಮೇಲಕ್ಕೆತ್ತುವುದರಲ್ಲಿ ಜೀವದ ನಿಮಿತ್ತವು ನಿಜವಲ್ಲವೇನು ? ಎಂಬಿತ್ಯಾದಿ ಮಾತುಗಳನ್ನು ಹಾರಿಸಿಬಿಟ್ಟಿದ್ದಾರೆ. ಜೀವದ ಇಚ್ಛೆಯನ್ನು ಅಥವಾ ಬೇರೊಂದು ಪುದ್ಗಲವನ್ನು ನಿಮಿತ್ತವೆಂದು ಸ್ವೀಕರಿಸಿಲ್ಲ, ನಿನ್ನ ನಿಮಿತ್ತತನವು ಕೂಡ ಅದರಲ್ಲಿ ಇಲ್ಲ. ಎಂಟು ಕರ್ಮಗಳು ಕಟ್ಟುತ್ತವೆ ಅವಂತೂ ಅವುಗಳ ಕಾರಣದಿಂದ ಕಟ್ಟುತ್ತವೆ. ಆದರೆ ಅದರಲ್ಲಿ ಜೀವದ ರಾಗ ಅಥವಾ ಇಚ್ಛೆಯು ನಿಮಿತ್ತವಿದೆಯೆಂಬುದು ನಿಜವಲ್ಲವೇನು ? ಚಪಾತಿಗಳಾಗುವಲ್ಲಿ ಮಹಿಳೆಯ ಇಚ್ಛೆಯು ನಿಮಿತ್ತವಿರುವುದು ನಿಜವಲ್ಲವೇನು? ಪರಮಾಣುಗಳು ತಮ್ಮ ಕಾರಣದಿಂದ ಭಾಷೆಯ ರೂಪದಿಂದ ಆಗುವಲ್ಲಿ ನಿಮಿತ್ತ ಯಾರು ? ಜ್ಞಾನೀ ಅಥವಾ ಅಜ್ಞಾನಿಯ ಇಚ್ಛೆಯು ನಿಮಿತ್ತವೆಂಬುದು ನಿಜವಲ್ಲವೇನು ? ಕೇವಲಿಯ ವಾಣಿಗೆ ಯೋಗದ ನಿಮಿತ್ತವಿರುವದು ನಿಜವಲ್ಲವೇನು ? ಈ ಉಪ್ಪರಿಗೆಯ ಸೌಧವಾಗುವಲ್ಲಿ, ಧನವು ಬರುವಲ್ಲಿ ಜೀವದರಾಗ ಮತ್ತು ಜ್ಞಾನವು ನಿಮಿತ್ತವಿರುವುದು ನಿಜವಲ್ಲವೇನು ? ಇಲ್ಲ, ಆ ಪುದ್ಗಲ ಸ್ಕಂಧಗಳ ಉಪಾದಾನ ಕಾರಣವಂತೂ ಆ ಪರಮಾಣುಗಳಿವೆ. ಜೀವದ ಇಚ್ಛೆ ಅಥವಾ ಜ್ಞಾನವು ನಿಮಿತ್ತ ಕೂಡ ಇಲ್ಲ. ಆದರೆ ಕಾಲವು ನಿಮಿತ್ತವಿದೆ. ಸ್ವಕಾಲದಲ್ಲಿ ಪರಿಣಮಿಸುವ ಪುದ್ಗಲಗಳಿಗೆ ಕೇವಲ ಕಾಲವು ನಿಮಿತ್ತವಿದೆಯೆಂದು ಹೇಳಿ ಸೂಕ್ಷ್ಮ ಭೇದಜ್ಞಾನ ಮಾಡಿಸಲಾಗಿದೆ. ಅದು ಆಯಾ ಪುದ್ಗಲಗಳ ಪರಿಣಮನದ ಸ್ವಕಾಲವಿದೆ ಆದುದರಿಂದ ಅದರ ಮೇಲಿರುವ ದೃಷ್ಟಿಯನ್ನು ತಿರುಗಿಸು !

ಇಲ್ಲಿ ಅಸ್ತಿಕಾಯದ ಸ್ವರೂಪವನ್ನು ತಿಳಿಸಿಕೊಡಲಾಗಿದೆ. ಜೀವದ್ರವ್ಯದಲ್ಲಿ ದ್ರವ್ಯಗುಣಗಳಂತೂ ಸ್ವತಂತ್ರವಾಗಿ ಜೀವದ ಪ್ರದೇಶಗಳ ಕ್ಷೇತ್ರಾಂತರವಾಗುವಲ್ಲಿ ಒಂದು ಗತಿಯಿಂದ ಬೇರೊಂದು ಗತಿಯಲ್ಲಿ ಹೋಗುವಲ್ಲಿ ಜೀವದ ಪರ್ಯಾಯದ ಯೋಗ್ಯತೆಯು ಅದು ಉಪಾದಾನ ಕಾರಣವಿದೆ ಮತ್ತು ಅದರಲ್ಲಿ ಕರ್ಮ-ನೋಕರ್ಮಗಳನ್ನು ನಿಮಿತ್ತ ಕಾರಣವೆಂದು ಹೇಳಿದೆ ಮತ್ತು ಪರಮಾಣುವಿನ ಸ್ಕಂಧಗಳಲ್ಲಿ ದ್ರವ್ಯ-ಗುಣಗಳಂತೂ ಸ್ವತಂತ್ರವಿವೆ, ಆದರೆ ಕ್ಷೇತ್ರಾಂತರವಾಗುತ್ತದೆ ಅದು ತಮ್ಮ ಕಾರಣದಿಂದಿದೆ. ಇನ್ನೊಂದರ ಕಾರಣದಿಂದಂತೂ ಇಲ್ಲ, ಆದರೆ ಅದರಲ್ಲಿ ಜೀವದ ಇಚ್ಛೆ ಅಥವಾ ಪುದ್ಗಲದ ನಿಮಿತ್ತವಿಲ್ಲ, ಕೇವಲ ಕಾಲವು ನಿಮಿತ್ತವಿದೆ, ತರಕಾರಿಯಾಗುವ ಸಮಯದಲ್ಲಿ ಜೀವದ ಇಚ್ಛೆ, ಬೆರಳುಗಳ ನಿಮಿತ್ತವು ನಿಜವಿದೆಯಲ್ಲವೇನು ? ಆಪ್ತಕ್ರಿಯಾಗುವಲ್ಲಿ ಜೀವದ ಶುಭಭಾವವು ನಿಮಿತ್ತವಿರುವುದು ನಿಜವಿಲ್ಲವೇನು ? ಇಲ್ಲ, ಜೀವವು ನಿಮಿತ್ತಕೂಡ ಇಲ್ಲ. ಆದರೆ ಒಂದು ಕಾಲ ದ್ರವ್ಯವು ನಿಮಿತ್ತವಿದೆಯೆಂದು ಹೇಳಿ ಸೂಕ್ಷ್ಮತೆಯನ್ನು ತಿಳಿಸಿಕೊಡಲಾಗಿದೆ.

ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಇವು ನಾಲ್ಕಂತೂ ಅರೂಪಿಯಿವೆ, ಅಕ್ರಿಯವಿವೆ ಎಂದರೆ ಅವುಗಳಲ್ಲಿ ಕ್ಷೇತ್ರಾಂತರವಿಲ್ಲ. ಅದಕ್ಕಾಗಿ ಅವುಗಳ ನಿಮಿತ್ತದ ಮಾತಂತೂ ಸ್ವೀಕರಿಸಿಲ್ಲ. ಆದರೆ ಜೀವದಲ್ಲಿ ಯಾವ ರೂಪಾಂತರವಾಗುತ್ತದೆ ಮತ್ತು ಜ್ಞಾನ, ದರ್ಶನ ಮೊದಲಾದ ಗುಣಗಳ ಅವಸ್ಥೆಯು ಬದಲಾಗುತ್ತದೆ ಅದು ಭಾವವಿದೆ. ಮತ್ತು ಪುದ್ಗಲದಲ್ಲಿ ಸ್ಪರ್ಶ, ರಸ, ಗಂಧ, ವರ್ಣದ ಭಾವಗಳು ಬದಲಾಗುತ್ತವೆ ಅದರದು ಕೂಡ ಮಾತಿಲ್ಲ. ಇಲ್ಲಿಯಂತೂ ಎರಡೂ ದ್ರವ್ಯಗಳ ಕ್ಷೇತ್ರಾಂತರದ ಕ್ರಿಯೆಯ ಮಾತನ್ನು ಸ್ವೀಕರಿಸಲಾಗಿದೆ. ಈ ಕೋಲು ಮೇಲೆ ಹೋಗುವುದು ಮತ್ತು ಇತರ ಸ್ಕಂಧಗಳ ಕ್ಷೇತ್ರಾಂತರವಾಗುವುದು ಅದು ಅವುಗಳ ಕಾರಣದಿಂದ ಇದೆ. ಆದರೆ ಅದರಲ್ಲಿ ಜೀವದ ನಿಮಿತ್ತತನವನ್ನು ಹೇಳುವುದಿಲ್ಲ, ಕೇವಲ ಕಾಲದ ನಿಮಿತ್ತವನ್ನು ಹೇಳಲಾಗುತ್ತದೆ. ಇಲ್ಲಿ ಕಾಲದ್ರವ್ಯವನ್ನು ಸಿದ್ಧಪಡಿಸಲಾಗಿದೆ. ಯಾರಾದರೂ ಕಾಲವನ್ನು ಉಪಚಾರವೆಂದು ಮನ್ನಿಸಿದರೆ, ಯಾರಾದರೂ ಅನಂತ ಕಾಲದ್ರವ್ಯಗಳನ್ನು ಮನ್ನಿಸಿದರೆ ಅದೆಲ್ಲವೂ ಅಸತ್ಯವಿದೆ. ಈ ಜಗತ್ತಿನಲ್ಲಿ ಅಸಂಖ್ಯ ಕಾಲಾಣುಗಳಿವೆ ಅವು ಪುದ್ಗಲದ ಸಕ್ರಿಯತೆಯಲ್ಲಿ ನಿಮಿತ್ತವಾಗುತ್ತವೆ.

ಸಕ್ರಿಯವಿರುವಂಥ ಪುದ್ಗಲಗಳ ಸಕ್ರಿಯತೆಯು ಅಖಂಡವಾಗಿರುತ್ತದೆ. ಅದಕ್ಕಾಗಿ ಅವುಗಳಿಗೆ ನಿಮಿತ್ತರೂಪದಿಂದ ಅಖಂಡವಾಗಿರುವಂಥ ನಿಮಿತ್ತಗಳು ಬೇಕು. ಜೀವವು ಸಂಸಾರ ಅವಸ್ಥೆಯಲ್ಲಿ ಅಖಂಡವಾಗಿರುವುದಿಲ್ಲ. ಆ ಜೀವವು ಸಂಸಾರದಲ್ಲಿ ಅಖಂಡವಾಗಿ ಉಳಿದರೆ ಅದರ ಸಂಸಾರವೆಂದೂ ದೂರವಾಗುವುದಿಲ್ಲ, ಪುದ್ಗಲದ ಸಕ್ರಿಯ ಸ್ವಭಾವವಂತೂ ತ್ರಿಕಾಲವಿದೆ. ಅದರ ನಿಮಿತ್ತರೂಪದಿಂದ ತ್ರಿಕಾಲವಿರುವಂಥ ಕಾಲದ್ರವ್ಯವನ್ನೇ ಸ್ವೀಕರಿಸಿದೆ, ಆದರೆ ಜೀವವನ್ನು ಸ್ವೀಕರಿಸಿಲ್ಲ. ಏಕೆಂದರೆ ಜೀವವು ನಿಮಿತ್ತರೂಪದಿಂದ ಯಾವಾಗಲೂ ಇರತೊಡಗಿದರೆ ಜೀವಕ್ಕೆ ಮುಕ್ತಿಯೆಂದೂ ಆಗುವುದೇ ಇಲ್ಲ. ಆತ್ಮನು ಶುದ್ಧ ಚಿದಾನಂದ ಸ್ವಭಾವಿಯಿದ್ದಾನೆ, ವಿಕಾರವು ಅವನ ನಿಜವಾದ ಸ್ವರೂಪವಲ್ಲ. ತ್ರಿಕಾಲ ಸ್ವರೂಪವಂತೂ ಶುದ್ಧವಿದೆ. ಆದುದರಿಂದಲೇ ಪುದ್ಗಲದ ಸ್ಕಂಧಗಳಲ್ಲಿ ಅದರ ನಿಮಿತ್ತತನವು ಕೂಡ ಇಲ್ಲ. ಪುದ್ಗಲಗಳಲ್ಲಿ ಜೀವದ ನಿಮಿತ್ತತೆಯನ್ನು ಮನ್ನಿಸ ಹೋದರೆ ಪುದ್ಗಲಗಳಂತೂ ಯಾವಾಗಲೂ ಇವೆ. ಎಂದ ಮೇಲೆ ಅವುಗಳ ಜತೆಯಲ್ಲಿ ನಿಮಿತ್ತರೂಪದ ಜೀವದ ಸಂಬಂಧವು ಎಂದೂ ಬಿಡುಗಡೆ ಹೊಂದುವುದಿಲ್ಲ ಮತ್ತು ಅದರಿಂದ ಸ್ವಭಾವದ ಕಡೆಗೆ ದೃಷ್ಟಿಯನ್ನು ಹರಿಸುವ ಅವಕಾಶವು ಕೂಡ ಉಳಿಯುವುದಿಲ್ಲ. ಅದಕ್ಕಾಗಿ ಪುದ್ಗಲದ ಸಕ್ರಿಯತೆಯು ತ್ರಿಕಾಲವಿದೆ. ಅದರ ಜತೆಯಲ್ಲಿ ಕಾಲದ್ರವ್ಯವು ತ್ರಿಕಾಲವಿದೆ ಅದನ್ನು ನಿಮಿತ್ತವೆಂದು ಸ್ವೀಕರಿಸಿದೆ. ಇದರಲ್ಲಿ ಧರ್ಮವೇನು ಬಂತೆಂದು ಕೆಲವರು ಕೇಳುತ್ತಾರೆ. ಅನಾದಿಕಾಲದಿಂದ ಜೀವಕ್ಕೆಪರ ಪದಾರ್ಥದ ಜತೆಯಲ್ಲಿ ಏಕತ್ವಬುದ್ಧಿಯು ವರ್ತಿಸುತ್ತಿದೆ. ಪುದ್ಗಲ

ಸ್ಕಂಧಗಳು ಬೇಕಾದರೆ ತಮ್ಮ ಕಾರಣದಿಂದ ಪರಿಣಮಿಸಲಿ, ಆದರೆ ಅದರಲ್ಲಿ ನಾನು ನಿಮಿತ್ತವಿರುವುದು ನಿಜವಲ್ಲವೇನು? ಇಲ್ಲಿ ಅದರ ನಿಷೇಧ ಮಾಡಿದ್ದಾರೆ. ಸೋದರನೇ ! ಪುದ್ಗಲಕ್ಕೆ ನಿಮಿತ್ತವಾಗುವುದು ನಿನ್ನ ಸ್ವಭಾವವಿಲ್ಲ. ಆದುದರಿಂದ ಪರ ಪದಾರ್ಥಗಳ ಕುರಿತಾಗಿರುವ ಸಂಯೋಗ ದೃಷ್ಟಿಯನ್ನು ಬಿಟ್ಟುಕೊಟ್ಟು ಶುದ್ಧ ಚಿದಾನಂದ ಸ್ವಭಾವದ ದೃಷ್ಟಿ ಮಾಡು!

**ಭಾವಾರ್ಥ ः-** ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದಲ್ಲಿ ಗಮನ ಮಾಡುವುದಕ್ಕೆ ಕ್ರಿಯೆಯೆಂದು ಹೇಳುತ್ತಾರೆ. ಆರು ದ್ರವ್ಯಗಳಲ್ಲಿ ಜೀವ ಮತ್ತು ಪುದ್ಗಲಗಳು ಕ್ಷೇತ್ರಾಂತರ ಮಾಡುತ್ತವೆ ಮತ್ತು ಕ್ರಿಯಾರೂಪ ಅವಸ್ಥೆಯನ್ನು ಧಾರಣ ಮಾಡುತ್ತವೆ. ಆದುದರಿಂದ ಅವೆರಡೂ ದ್ರವ್ಯಗಳು ಕ್ರಿಯಾರೂಪವಿವೆ ಮತ್ತು ಉಳಿದ ನಾಲ್ಕು ದ್ರವ್ಯಗಳು ನಿಷ್ಕ್ರಿಯವಿವೆ-ನಿಷ್ಕಂಪವಿವೆ. ಜೀವದ್ರವ್ಯದ ಕ್ರಿಯೆಯಲ್ಲಿ ಬಹಿರಂಗ ನಿಮಿತ್ತವು ಕರ್ಮನೋಕರ್ಮರೂಪ ಪುದ್ಗಲವಿದೆ. ಅದರ ನಿಮಿತ್ತದಿಂದ ಜೀವವು ಅನೇಕ ವಿಕಾರರೂಪವಾಗಿ ಪರಿಣಮನ ಮಾಡುತ್ತದೆ. ಜೀವವು ತನ್ನ ಶುದ್ಧ ಚಿದಾನಂದ ಸ್ವಭಾವದ ಪ್ರತೀತಿಯನ್ನು ಬಿಟ್ಟುಕೊಟ್ಟು ಸಕ್ರಿಯ ಶರೀರದ ಸಹವಾಸ ಮಾಡಿದರೆ ವಿಕಾರವಾಗುತ್ತದೆ. ಶರೀರ, ಕರ್ಮ ಮೊದಲಾದುವಂತೂ ನಿಮಿತ್ತ ಮಾತ್ರವಿವೆ, ಆ ನಿಮಿತ್ತವನ್ನು ಬಿಡುವುದಿಲ್ಲ. ಪರಪದಾರ್ಥಗಳನ್ನು ನಿಮಿತ್ತವನ್ನಾಗಿ ಮಾಡುವುದು ಅಥವಾ ಬಿಡುವುದು ಅದು ನಿನ್ನ ಕೈಯಲ್ಲಿ ಇದೆ. ಎಂದರೆ ನೀನು ರಾಗ-ದ್ವೇಷ ಮಾಡುತ್ತ ಶರೀರ ಮತ್ತು ಕರ್ಮವನ್ನು ನಿಮಿತ್ತವೆಂದು ಹೇಳುವೆ ಮತ್ತು ರಾಗ-ದ್ವೇಷ ಮಾಡುವುದಿಲ್ಲ ಆಗ ಶರೀರ ಮತ್ತು ಕರ್ಮವನ್ನು ನಿಮಿತ್ತವೆಂದು ಕೂಡ ಹೇಳಲಾಗುವುದಿಲ್ಲ.

ಮತ್ತು ಜೀವದ ಸ್ವರೂಪವು ಸಕ್ರಿಯವಾಗಿ ಅಖಂಡವಿರುವುದಿಲ್ಲ. ಚೈತನ್ಯ ಸ್ವಭಾವವು ಜ್ಞಾನಮೂರ್ತಿ ಅರೂಪಿ ಗುಣಗಳ ಪಿಂಡವಿದೆ, ಶರೀರವು ಪರವಿದೆ, ವಿಕಾರವು ಕೃತ್ರಿಮವಿದೆ. ಸ್ವಭಾವವು ವಿಕಾರ ರಹಿತವಿದೆ. ಹೀಗೆ ಜ್ಞಾನ ಮಾಡಿಕೊಂಡು ನಿಜ ಪರ್ಯಾಯದ ಪುರುಷಾರ್ಥದ ಮೂಲಕ ಜೀವವು ಯಾವಾಗ ತನ್ನ ಶುದ್ಧ ದಶೆಯನ್ನು ಪಡೆಯುತ್ತದೆ, ಆಗ ಪುದ್ಗಲ ಕರ್ಮ ಮತ್ತು ನೋಕರ್ಮದ ಅಭಾವವಾಗುತ್ತದೆ. ಕ್ಷೇತ್ರಾಂತರವಾಗುವುದು ಅದು ಜೀವದ ಸ್ವಾಭಾವಿಕವಾದ ಕ್ರಿಯೆಯಲ್ಲ. ಒಂದು ವೇಳೆ ಅದು ಸ್ವಾಭಾವಿಕ ವಸ್ತುವಾಗಿದ್ದರೆ ಎಂದೂ ಬಿಟ್ಟು ಹೋಗುವುದಿಲ್ಲ. ನಿಷ್ಕ್ರಿಯ ರೂಪದಿಂದ ಇರುವುದು ಮತ್ತು ಸಿದ್ಧ ದಶೆಯ ರೂಪದಿಂದಾಗುವುದು, ಅದು ಸ್ವಾಭಾವಿಕ ದಶೆಯಿದೆ. ಜೀವವು ಸ್ವಯಂ ಜ್ಞಾತಾ-ದೃಷ್ಟಾ ರೂಪದಿಂದಿದ್ದು ಸ್ಥಿರತೆ ಹೊಂದಿದರೆ ಸ್ವಾಭಾವಿಕ, ನಿಷ್ಕ್ರಿಯ, ನಿಷ್ಕಂಪ ಅವಸ್ಥೆಯ ರೂಪವಾದ ಸಿದ್ಧ ದಶೆಯನ್ನು ಪ್ರಕಟಪಡಿಸುತ್ತದೆ. ಈ ಕಾರಣದಿಂದ ಪುದ್ಗಲದ ನಿಮಿತ್ತ ಪಡೆದು ಜೀವವು ಕ್ರಿಯಾವಂತವಿದೆಯೆಂದು ತಿಳಿಯುವುದು. 'ನಿಮಿತ್ತ ಪಡೆದು' ಎಂದರೆ ಜೀವದಲ್ಲಿ ನೈಮಿತ್ತಿಕ ಪರ್ಯಾಯವಾಗಿದ್ದರೆ ಪುದ್ಗಲವನ್ನು ನಿಮಿತ್ತವೆಂದು ಹೇಳಲಾಗುವುದು. ಜೀವದ ಕ್ರಿಯೆಯ ಕಾಲ ಮತ್ತು ಆ ಸಮಯದಲ್ಲಿ ಪುದ್ಗಲದ ಕಾಲ ಒಟ್ಟಿಗೆ ಇವೆಯೆಂದು ನಿಮಿತ್ತ-ನೈಮಿತ್ತಿಕ ಸಂಬಂಧವು ತಿಳಿಸಿಕೊಡುತ್ತದೆ.

ಈ ಜಗತ್ತಿನಲ್ಲಿ ಆರು ಪದಾರ್ಥಗಳಿದ್ದು, ಅವುಗಳ ದ್ರವ್ಯ-ಗುಣಗಳು ಸ್ವತಂತ್ರವಿವೆ, ಅವುಗಳ ಕ್ಷೇತ್ರಾಂತರವಾಗುವ ಪರ್ಯಾಯವು ಕೂಡ ಸ್ವತಂತ್ರವಿದೆ. ಆದರೆ ನನ್ನ ಕಾರಣದಿಂದ ಸ್ಕಂಧಗಳು ಜಾರುತ್ತವೆಯೆಂದು ಅಜ್ಞಾನಿಗೆ ಭ್ರಾಂತಿಯಾಗಿ ಹೋಗಿದೆ. ಅದಕ್ಕಾಗಿ ಅವನಿಗೆ ಹೇಳುತ್ತಾರೆ ಸೋದರನೇ ! ಅವು ನಿನ್ನ ಕಾರಣದಿಂದ ಜಾರುವುದಿಲ್ಲ. ಅವು ತಮ್ಮ ಕಾರಣದಿಂದ ಜಾರುತ್ತವೆ, ಅದರಲ್ಲಿ ನಿನ್ನ ನಿಮಿತ್ತತನವು ಕೂಡ ಇಲ್ಲವೆಂದು ಇಲ್ಲಿ ತಿಳಿಸಿಕೊಡುವುದಿದೆ. ಜೀವ ಮತ್ತು ಪುದ್ಗಲಗಳೆರಡೂ ಕ್ಷೇತ್ರಾಂತರವಾಗುವಲ್ಲಿ ಸಾಮಾನ್ಯ ನಿಮಿತ್ತವಂತೂ ಧರ್ಮಾಸ್ತಿಕಾಯವಿದೆ. ಆದರೆ ಇಲ್ಲಿ ವಿಶೇಷ ನಿಮಿತ್ತ ತಿಳಿಸಿಕೊಡುವುದಿದೆ. ಅದರಿಂದ ಜೀವದ ಕ್ಷೇತ್ರಾಂತರ ಕ್ರಿಯೆಯಲ್ಲಿ ಪುದ್ಗಲವನ್ನು ನಿಮಿತ್ತವೆಂದು ಹೇಳಿದೆ ಮತ್ತು ಪುದ್ಗಲ ಸ್ಕಂಧಗಳ ಕ್ಷೇತ್ರಾಂತರದಲ್ಲಿ ಕಾಲವನ್ನು ನಿಮಿತ್ತವೆಂದು ಹೇಳಲಾಗಿದೆ.

ಈ ಪಾಷಾಣ, ವಸ್ತ್ರ, ಬೇಳೆ, ಭತ್ತ ಬಂದು ಬಿಡುತ್ತವೆ. ಮತ್ತು ಶರೀರದ ಗತಿಯಾಗುತ್ತದೆ ಅದಂತೂ ತನ್ನ ಕಾರಣದಿಂದ ಆಗುತ್ತದೆ ಅದರಲ್ಲಿ ಅರೂಪಿಯಾದ ಕಾಲವು ನಿಮಿತ್ತವಿದೆ. 'ಇಲ್ಲಿ ಕಾಲದ ಬಹಿರಂಗ ಕಾರಣ ಪಡೆದು' ಅಂಥ ಶಬ್ದಗಳು ಬಂದು ಬಿಡುತ್ತವೆ. ಅದೇನು ಕಾಲಕ್ಕೆ ತಿಳಿದು ಬಂದಿದೆಯೇನು, ನಾನು ಈ ಸ್ಕಂಧಗಳಿಗೆ ನಿಮಿತ್ತನಾಗುತ್ತೇನೆಂಬುದು ? ಪುದ್ಗಲ ಸ್ಕಂಧಗಳಲ್ಲಿ ನೈಮಿತ್ತಿಕ ಅವಸ್ಥೆಯಾಗುತ್ತದೆ ಆಗ ಕಾಲವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಹೀಗೆ ಅದರ ಅರ್ಥವಿದೆ.

ನನ್ನ ಬುದ್ಧಿವಂತಿಕೆಯಿಂದ ಸಂಪತ್ತು ಬರುತ್ತದೆ ಮತ್ತು ನಾನು ಜಡ ಪದಾರ್ಥದ ವ್ಯವಸ್ಥೆ ಮಾಡುವ ಸಾಧ್ಯತೆಯಿದೆಯೆಂದು ಅಜ್ಞಾನೀ ಜೀವನು ಮನ್ನಿಸುತ್ತಾನೆ. ಆದರೆ ಹೀಗೆ ಮನ್ನಿಸುವಂಥವನು ಮೂಢನಿದ್ದಾನೆ. ಅಜ್ಞಾನೀ ಜೀವನು ಪುಕ್ಕಟೆಯಾಗಿ ಅಭಿಮಾನ ಪಟ್ಟುಕೊಂಡು ಸಿಕ್ಕಿಹಾಕಿಕೊಂಡಿದ್ದಾನೆ. ಧನವು ಬರುವುದು-ಹೋಗುವುದು ಶರೀರದಲ್ಲಿ ರಕ್ತದ ಸಂಚಾರವಾಗುವುದು, ರೋಗಗಳು ಬರುವುದು-ಹೋಗುವುದು. ಅವೆಲ್ಲವೂ ಜೀವದ ಕಾರಣದಿಂದಂತೂ ಇಲ್ಲ. ಆದರೆ ಆ ಪರಮಾಣುಗಳ ಬರ-ಹೋಗುವಿಕೆಯಲ್ಲಿ ಉಪಾದಾನ ಕಾರಣವಂತೂ ಸ್ವಯಂ ಆ ಪರಮಾಣುಗಳಿವೆ ಮತ್ತು ನಿಮಿತ್ತ ಕಾರಣವು ಕಾಲದ್ರವ್ಯವಿದೆಯೆಂದು ಇಲ್ಲಿ ಹೇಳಲಾಗಿದೆ. ಇಲ್ಲಿ ಜೀವವನ್ನು ನಿಮಿತ್ತರೂಪದಲ್ಲಿ ಕೂಡ ಸ್ವೀಕರಿಸಿಲ್ಲ. ಜೀವವಂತೂ ತನ್ನಲ್ಲಿ ರಾಗ-ದ್ವೇಷ ಮಾಡುವುದು ಅಥವಾ ತನ್ನ ಸ್ವರೂಪ ತಿಳಿದುಕೊಂಡು ವೀತರಾಗತೆಯನ್ನು ತಂದುಕೊಳ್ಳುವುದು. ಇದನ್ನು ಹೊರತು ಪಡಿಸಿ ಅದು ಬೇರೆ ಏನನ್ನೂ ಮಾಡುವ ಸಾಧ್ಯತೆಯಿಲ್ಲ.

ಇಲ್ಲಿ ಕಾಲವನ್ನು ಸಹಕಾರೀ ಕಾರಣವೆಂದು ಹೇಳಿದೆ. ಸಹಕಾರೀ ಎಂದರೆ ಜತೆಯಲ್ಲಿ ಇರುವಂಥದು. ಶರೀರ ಮತ್ತು ಬೆರಳು ಮೊದಲಾದವು ಗತಿ ಮಾಡುತ್ತವೆ.

ಅದರಲ್ಲಿ ಕಾಲವು ಸಹಕಾರೀ ಕಾರಣವಿದೆ. ಆದರೆ ನನಗೆ ಕಾಲದ ನಿಮಿತ್ತವಿದೆಯೆಂಬುದು ಆ ಶರೀರಕ್ಕೆ ಅರಿವಿಲ್ಲ ಮತ್ತು ನಾನು ಶರೀರಕ್ಕೆ ನಿಮಿತ್ತನಾಗುತ್ತೇನೆಂದು ಆ ಕಾಲಕ್ಕೆ ಕೂಡ ಪ್ರಜ್ಞೆಯಿಲ್ಲ. ಆದರೆ ಅವೆರಡನ್ನು ತಿಳಿದುಕೊಳ್ಳುವವನಂತೂ ಜೀವನಿದ್ದಾನೆ. ಆಗ ಜೀವವು ನಾನಂತೂ ನಿಮಿತ್ತನಾಗುವುದಿಲ್ಲ. ನಾನಂತೂ ಕೇವಲ ತಿಳಿದುಕೊಳ್ಳುವವನಿದ್ದೇನೆಂದು ಹೇಳುತ್ತದೆ.

ಇಲ್ಲಿ ಕಾಲವನ್ನು ಕೂಡ ಸಿದ್ಧ ಮಾಡುತ್ತ ಹೋಗುತ್ತಾರೆ, ಕಾಲ ಶಬ್ದವಿದೆಯೆಂದ ಮೇಲೆ ಅದರ ವಾಚ್ಯ ಕಾಲ ದ್ರವ್ಯವು ಇರಬೇಕಾಗುವುದು. ಶಬ್ದವಿದೆ ಮತ್ತು ವಸ್ತುವಿಲ್ಲವೆಂಬುದು ಸಂಭವಿಸುವುದಿಲ್ಲ. ಯಾವ ಪ್ರಕಾರ ಸರ್ವಜ್ಞ ಶಬ್ದವಿದೆಯೆಂದ ಮೇಲೆ ಅದರ ವಾಚ್ಯನಾದ ಸರ್ವಜ್ಞ ಆತ್ಮನು ಕೂಡ ಇದ್ದಾನೆ. ಅದೇ ಪ್ರಕಾರ ಕಾಲ ಶಬ್ದವಿದೆಯೆಂದ ಮೇಲೆ ಕಾಲಸ್ವರೂಪಿಯಾದ ಪದಾರ್ಥವು ಇದೆ. ಪುದ್ಗಲ ಸ್ಕಂಧಗಳ ಸಕ್ರಿಯತೆಯಲ್ಲಿ ಕಾಲವು ನಿಮಿತ್ತವಿದೆ. ಈ ಧನ ಮೊದಲಾದುವನ್ನು ನಾನು ತಂದಿದ್ದೇನೆಂದು ಅಜ್ಞಾನೀ ಜೀವನು ಅಭಿಮಾನ ಪಡುತ್ತಾನೆ. ಆದರೆ ಸೋದರನೇ ! ಆ ವಸ್ತುವಿನ ವರ್ತಮಾನ ಸತ್ ಇದೆ ಅಥವಾ ಅಸತ್ ಇದೆ ! ವರ್ತಮಾನ ಸತ್ ಇದೆ ಅದಕ್ಕಾಗಿ ಅದು ತನ್ನಿಂದ ಇದೆ, ಆದರೆ ಜೀವದಿಂದ ಇಲ್ಲ. ಅದರದಂತೂ ತನ್ನ ಕಾರಣದಿಂದ ಕ್ಷೇತ್ರಾಂತರವಾಗುತ್ತದೆ ಅದರಲ್ಲಿ ಜೀವದ ನಿಮಿತ್ತತನ ಕೂಡ ಇಲ್ಲ. ಆದರೆ ಕಾಲವು ನಿಮಿತ್ತವಿದೆಯೆಂದು ಇಲ್ಲಿ ಹೇಳುತ್ತಾರೆ.

ಆದರೆ ಇಲ್ಲಿರುವ ವಿಶೇಷತೆಯೆಂದರೆ ಜೀವದ್ರವ್ಯದ ಹಾಗೆ ಪುದ್ಗಲವೆಂದೂ ನಿಷ್ಕ್ರಿಯವಾಗುವುದಿಲ್ಲ ಜೀವವು ಶುದ್ಧವಾದ ನಂತರ ಎಂದೂ ಕ್ಷೇತ್ರಾಂತರ ಮಾಡುವುದಿಲ್ಲ ಆದರೆ ಪುದ್ಗಲದಲ್ಲಿ ಈ ನಿಯಮವಿಲ್ಲ ಪುದ್ಗಲವು ಪರ ನಿಮಿತ್ತದಿಂದ ಯಾವಾಗಲೂ ಕ್ರಿಯಾವಂತವಾಗಿರುತ್ತದೆ.

ಇಲ್ಲಿ ಜೀವ ಮತ್ತು ಪುದ್ಗಲ ಇವೆರಡೂ ಕ್ರಿಯಾವಂತ ಪದಾರ್ಥಗಳಿದ್ದರೂ ಕೂಡ ಎರಡರಲ್ಲಿ ಭೇದವನ್ನು ತಿಳಿಸಿಕೊಟ್ಟಿದ್ದಾರೆ. ಜೀವವು ತನ್ನ ಶುದ್ಧ ಆತ್ಮನ ಜ್ಞಾನ ಮಾಡಿಕೊಂಡು ಸಿದ್ಧ ದಶೆಯನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ ಅನಂತರ ಯಾವೊಂದು ದಿವಸವೂ ಕ್ಷೇತ್ರಾಂತರ ಮಾಡುವುದಿಲ್ಲ. ಎಲ್ಲಿಯವರೆಗೆ ಜೀವವು ಸಿದ್ಧದ ಪೂರ್ಣ ದಶೆಯನ್ನು ಪ್ರಾಪ್ತಮಾಡಿಕೊಳ್ಳುವುದಿಲ್ಲ ಅಲ್ಲಿಯವರೆಗೆ ಕ್ಷೇತ್ರಾಂತರ ಮಾಡುತ್ತದೆ. ಸಿದ್ಧ ಭಗವಂತರು ಒಂದು ಸ್ಥಾನದಲ್ಲಿ ವಿರಾಜಿಸುತ್ತಾರೆ. ಗತಿ ಮಾಡುವುದಿಲ್ಲ. ಆದರೆ ಪುದ್ಗಲದಲ್ಲಿ ಇಂಥ ನಿಮಿತ್ತವಿಲ್ಲ ಪುದ್ಗಲ ಪರಮಾಣುವು ಏಕಾಕಿಯಾಗಿ ಹೋದರೂ ಕೂಡ ಅದು ಕ್ಷೇತ್ರಾಂತರ ಮಾಡುತ್ತದೆ. ಇತರ ಸ್ಕಂಧಗಳ ಜತೆಯಲ್ಲಿ ಸೇರಿ ಹೋದರೂ ಕ್ಷೇತ್ರಾಂತರ ಮಾಡುತ್ತದೆ. ಅದಕ್ಕಾಗಿಯೇ ಪುದ್ಗಲವನ್ನು ಯಾವಾಗಲೂ ಕ್ರಿಯಾವಂತವೆಂದು ಹೇಳಲಾಗಿದೆ. ಇಲ್ಲಿ ಪುದ್ಗಲವನ್ನು ಯಾವಾಗಲೂ ಕ್ರಿಯವಂತವೆಂದು ಹೇಳಿದೆ ಇದರ ಅರ್ಥವೇನೆಂದರೆ ಜೀವದ ಹಾಗೆ ಪುದ್ಗಲವು ಯಾವಾಗಲೂ ಸ್ಥಂಭೀಭೂತವಾಗಿರುತ್ತದೆಯೆಂಬುದು ಸಂಭವಿಸುವುದಿಲ್ಲ. ಒಂದು ಪರಮಾಣುವು ಭಿನ್ನವಾಗಿ ಹೋಗಲಿ, ಶುದ್ಧವಾಗಲಿ, ಕೆಲವೊಂದು ಸಮಯದವರೆಗೆ ಸ್ಥಿರವೂ ಉಳಿಯಲಿ ಅನಂತರ ಕ್ಷೇತ್ರಾಂತರ ಮಾಡುತ್ತದೆ. ಸಿದ್ಧರ ಹಾಗೆ ಕ್ಷೇತ್ರಾಂತರ ಮಾಡುವುದೇ ಇಲ್ಲ ಎಂಬುದಾಗಿಲ್ಲ ಮತ್ತು ಅಚೇತನ ಮಹಾಸ್ಕಂಧದಲ್ಲಿ ಅದೆಷ್ಟೋ ಪರಮಾಣುಗಳು ಇದ್ದಕ್ಕಿದ್ದಲ್ಲಿಯೇ ಬಿದ್ದುಕೊಂಡಿರುತ್ತವೆ ಅವುಗಳ ಕ್ಷೇತ್ರಾಂತರವೆಂದೂ ಆಗುವುದಿಲ್ಲವೆಂಬುದನ್ನು ಗೌಣಮಾಡಿ ಪರಮಾಣುಗಳು ಸ್ಥಿರವಿರುವುದಿಲ್ಲ, ಆದರೆ ಕ್ರಿಯಾವಂತವಿವೆಯೆಂಬ ಅಪೇಕ್ಷೆಯಿಂದ ಯಾವಾಗಲೂ ಕ್ರಿಯಾವಂತವಿವೆಯೆಂದು ಹೇಳಿಬಿಡಲಾಗಿದೆ. ಸಿದ್ಧರ ನಿಷ್ಕ್ರಿಯ ಸ್ವಭಾವದ ಎದುರಿಗೆ ಪುದ್ಗಲದ ಕ್ರಿಯಾವಂತ ಸ್ವಭಾವವನ್ನು ತಿಳಿಸಿಕೊಡಲಾಗಿದೆ ಮತ್ತು ಅದರಲ್ಲಿ ಕಾಲದ್ರವ್ಯವನ್ನು ನಿಮಿತ್ತವೆಂದು ತಿಳಿಸಿಕೊಡಲಾಗಿದೆ.

ಈಗ ಇಲ್ಲಿ ಕಾಲವನ್ನು ನಿಮಿತ್ತವೆಂದು ಹೇಳಿರುವುದು ಅದು ವಿಶೇಷ ನಿಮಿತ್ತವಿದೆ. ಆರು ದ್ರವ್ಯಗಳಲ್ಲಿ ಪ್ರತಿಯೊಂದು ಗುಣದ ಪ್ರತಿಯೊಂದು ಪರ್ಯಾಯದ ಪರಿಣಮನದಲ್ಲಿ ಕಾಲವು ನಿಮಿತ್ತವಿದೆ. ಅದಂತೂ ಸಾಮಾನ್ಯ ನಿಮಿತ್ತವಂತೂ ಇದ್ದೇ ಇದೆ. ಆ ಆರು ದ್ರವ್ಯಗಳಲ್ಲಿ ಕ್ರಿಯಾವಂತ ಜೀವಕ್ಕೆ ಪುದ್ಗಲವನ್ನು ಭಿನ್ನಮಾಡಲು, ಅವೆರಡರ ಕ್ಷೇತ್ರಾಂತರದಲ್ಲಿ ಸಾಮಾನ್ಯ ನಿಮಿತ್ತವು ಧರ್ಮಾಸ್ತಿಕಾಯವಿದೆ. ಈಗ ಎರಡರಲ್ಲಿ ವಿಶೇಷ ನಿಮಿತ್ತದ ಭೇದ ತಿಳಿಸಿಕೊಡುತ್ತ ಜೀವದ ಕ್ಷೇತ್ರಾಂತರದಲ್ಲಿ ಕರ್ಮ ಮತ್ತು ನೋಕರ್ಮಗಳ ನಿಮಿತ್ತವಿದ್ದರೆ ಪುದ್ಗಲ ಸ್ಕಂಧಗಳ ಕ್ಷೇತ್ರಾಂತರದಲ್ಲಿ ಕಾಲವು ನಿಮಿತ್ತವಿದೆಯೆಂದು ಇಲ್ಲಿ ವಿಶೇಷ ನಿಮಿತ್ತದ ಮಾತನ್ನು ಸ್ವೀಕರಿಸಲಾಗಿದೆ ಮತ್ತು ಅದೆಷ್ಟೋ ಪುದ್ಗಲ ಪರಮಾಣುಗಳು ಇಂದಿನವರೆಗೆ ಯಾವೊಂದು ಜೀವವೂ ಗ್ರಹಣ ಮಾಡದಂಥವುಗಳಿವೆ ಅದರಂತೆ ಭವಿಷ್ಯದಲ್ಲಿ ಗ್ರಹಣ ಕೂಡ ಮಾಡುವುದಿಲ್ಲ. ಜಗತ್ತಿನಲ್ಲಿ ಸಂಸಾರೀ ಜೀವಗಳು ಎಷ್ಟು ಪರಮಾಣುಗಳನ್ನು ಗ್ರಹಣ ಮಾಡಿವೆ, ಅವುಗಳಿಂದ ಅನಂತ ಗುಣಿತವಾಗಿ ಅಗ್ರಾಹ್ಯ ಪರಮಾಣುಗಳು ಈ ಜಗತ್ತಿನಲ್ಲಿ ಇವೆ. ಅವುಗಳಲ್ಲಿ ಜೀವವು ಎಂದೂ ಕೂಡ ನಿಮಿತ್ತವಾಗುವುದಿಲ್ಲ. ಸಮಸ್ತ ಪುದ್ಗಲ ಪರಮಾಣುಗಳಲ್ಲಿ ಜೀವವು ನಿಮಿತ್ತ ರೂಪದಿಂದ ಸದಾಕಾಲ ಆಗುವುದಿಲ್ಲ. ಆದುದರಿಂದ ಎಲ್ಲವುಗಳ ಗತಿಯಲ್ಲಿ ನಿಮಿತ್ತವಾಗುವಂಥದು ಕಾಲವಿದೆ, ಅದು ಅನಾದಿ ಅನಂತವಿದೆ. ಅದಕ್ಕಾಗಿ ಅದನ್ನು ಇಲ್ಲಿ ನಿಮಿತ್ತವೆಂದು ಹೇಳಲಾಗಿದೆ.

೧) ಜೀವ ಮತ್ತು ಪುದ್ಗಲಗಳ ಕ್ಷೇತ್ರಾಂತರದಲ್ಲಿ ಧರ್ಮಾಸ್ತಿಕಾಯವು ನಿಮಿತ್ತವಿದೆ, ಆದರೆ ಆ ಸಾಮಾನ್ಯ ಮಾತು ಹೇಳಿ ಇಲ್ಲಿ ವಿಶೇಷ ಮಾತು ಹೇಳುತ್ತಾರೆ. ಜೀವದ ಸಕ್ರಿಯತನದಲ್ಲಿ ಪುದ್ಗಲವು ನಿಮಿತ್ತವಿದೆ ಮತ್ತು ಪುದ್ಗಲದ ಸಕ್ರಿಯತನದಲ್ಲಿ ಕಾಲವನ್ನು ನಿಮಿತ್ತವೆಂದು ಸ್ವೀಕರಿಸಿದೆ, ಜೀವವನ್ನು ಸ್ವೀಕರಿಸಿಲ್ಲ, ಏಕೆಂದರೆ ಎಲ್ಲ ಪುದ್ಗಲಗಳಿಗೆ ಜೀವವು ನಿಮಿತ್ತ ವಾಗುವುದಿಲ್ಲ. ಆದರೆ ಕಾಲವು ತ್ರಿಕಾಲವಿರುವುದರಿಂದ ಅದನ್ನು ನಿಮಿತ್ತವೆಂದು ಹೇಳಲಾಗಿದೆ.

೨) ಯಾವ ಜೀವರುಗಳು ಕಾಲವನ್ನು ಮನ್ನಿಸುವುದಿಲ್ಲ ಅವರಿಗೆ ಪುದ್ಗಲಗಳಲ್ಲಿ ಕಾಲವು ನಿಮಿತ್ತವಿದೆಯೆಂದು ಹೇಳಿ ಕಾಲದ ಸಿದ್ಧಿಯನ್ನು ಮಾಡಲಾಗಿದೆ.

೩) ಜೀವ ಮತ್ತು ಪುದ್ಗಲಗಳು ಕ್ರಿಯಾವಂತವಾಗಿದ್ದರೂ ಕೂಡ ಎರಡರ ಸಕ್ರಿಯತೆಯಲ್ಲಿ ಅಂತರವಿದೆ. ಜೀವವು ಸಿದ್ಧವಾದರೆ ನಿಷ್ಕ್ರಿಯವಾಗುವುದರಿಂದ ಕ್ರಿಯಾತನವು ಅದು ಜೀವದ ಮೂಲ ಸ್ವಭಾವವಲ್ಲ. ಪುದ್ಗಲ ಪರಮಾಣುಗಳು ಬಿಟ್ಟುಹೋದ ಸಮಯದಲ್ಲೂ ಕೂಡ ಕ್ರಿಯಾವಂತವಾಗುವುದರಿಂದ ಸಕ್ರಿಯತನವು ಅದರ ಸ್ವಭಾವವಿರುವುದರಿಂದ ಪುದ್ಗಲವನ್ನು ಯಾವಾಗಲೂ ಕ್ರಿಯೆಯುಳ್ಳದೆಂದು ಹೇಳಲಾಗಿದೆ. ಆ ಕಾರಣದಿಂದ ಪುದ್ಗಲಗಳು ಯಾವಾಗಲೂ ಸ್ಥಿರವಿರುವುದಿಲ್ಲವೆಂಬುದನ್ನು ತಿಳಿಸಿಕೊಡುವ ಸಲುವಾಗಿ ಯಾವಾಗಲೂ ಕ್ರಿಯೆಯುಳ್ಳವುಗಳಿವೆಯೆಂದು ಹೇಳಲಾಗಿದೆ.

ಇದು ಅರ್ಥ ಸಮಯದ ಮಾತು ನಡೆಯುತ್ತಿದೆ. ಪದಾರ್ಥಗಳ ಸ್ವಭಾವ ತಿಳಿಸಿಕೊಡಲಾಗಿದೆ. ನೀನು ಪದಾರ್ಥಗಳ ಜ್ಞಾನ ಮಾಡಿಕೊಳ್ಳು. ಅಜ್ಞಾನ ಮತ್ತು ರಾಗ-ದ್ವೇಷಗಳನ್ನು ಬಿಟ್ಟುಕೊಡೆಂದು ಹೇಳಿದೆ. ಈ ಪುಸ್ತಕವು ಇಲ್ಲಿಂದ ನುಸುಳಿತು. ಹೀಗೆ ಏಕೆ ? ಅಜ್ಞಾನಿಗೆ ದೃಶ್ಯ ಪದಾರ್ಥಗಳಲ್ಲಿ ಭ್ರಾಂತಿಯು ಬಿದ್ದುಕೊಂಡಿದೆ. ಇಲ್ಲಿ ಹೇಳಿರುವುದೇನೆಂದರೆ ಆ ಪುಸ್ತಕದ ಬರುವಿಕೆ-ಹೋಗುವಿಕೆಯಂತೂ ಅದರ ಕಾರಣದಿಂದ ಇದೆ; ಆದರೆ ಅದರಲ್ಲಿ ಜೀವದ ಜ್ಞಾನ, ಇಚ್ಛೆ ಅಥವಾ ಕೈ ಈ ಮೂರರೊಳಗಿಂದ ಒಂದನ್ನು ಕೂಡ ಇಲ್ಲಿ ನಿಮಿತ್ತವೆಂದು ಸ್ವೀಕರಿಸಿಲ್ಲ. ಆದರೆ ಮೂರು ಕಾಲದಲ್ಲಿ ಇರುವಂಥ ಅರೂಪಿ, ಅದೃಶ ಕಾಲವನ್ನು ನಿಮಿತ್ತವೆಂದು ಹೇಳಲಾಗಿದೆ. ಅದಕ್ಕಾಗಿ ಸಂಯೋಗಗಳ ಮೇಲಿರುವ ದೃಷ್ಟಿಯನ್ನು ತೆಗೆದುಹಾಕು. ಹೀಗೆ ಏಕೆಯೆಂಬ ಪ್ರಶ್ನೆಗೆ ಸ್ವಭಾವದಲ್ಲಿ ಅವಕಾಶವಿಲ್ಲ. ಸ್ವಭಾವವೇ ಹೀಗೆ ಇದೆ. ನೀನು ಕೇವಲ ನೋಡುವವ-ತಿಳಿದುಕೊಳ್ಳುವವನಿದ್ದೇನೆಂಬುದನ್ನು ನಿರ್ಣಯ ಮಾಡಿದಲ್ಲದೆ ಶಾಂತಿಯಾಗುವುದಿಲ್ಲ.

ತಾವು ಆರಂಭ ಮಾಡಬಾರದೆಂದು ಹೇಳುತ್ತೀರಿ. ಆದರೆ ನಾವು ಜಿನಮಂದಿರ, ಜಿನಪ್ರತಿಮೆ ಮೊದಲಾದುವನ್ನು ಮಾಡಿಸುವುದು ಆರಂಭವಾಗುವುದಿಲ್ಲವೇನು ? ಎಂದು ಅದೆಷ್ಟೋ ಅಜ್ಞಾನಿಗಳು ತರ್ಕಮಾಡುತ್ತಾರೆ. ಅವರಿಗೆ ಅಯ್ಯೊ, ನೀವು ಆ ಜಡಪದಾರ್ಥಗಳ ಅವಸ್ಥೆಯನ್ನು ಮಾಡುವ ಸಾಧ್ಯತೆಯಿದೆಯೇನು ? ನಿನ್ನ ಶುಭ ರಾಗದಿಂದ ಆ ಜಡ ಪದಾರ್ಥಗಳು ಆಗುವ ಸಾಧ್ಯತೆಯಿದೆಯೇನು ? ನೀನು ಬೇಕಾದ ಪ್ರಕಾರದ ಶುಭರಾಗದಲ್ಲಿ ಸಿಕ್ಕಿಕೊಳ್ಳು, ಆ ಮಂದಿರ ಮೊದಲಾದುವನ್ನು ನಾನು ಮಾಡಿಯೇ ತೀರುತ್ತೇನೆಂದು ನೀನು ಮನ್ನಿಸಿಕೊಂಡಿರಬಹುದು; ಆದರೆ ಆ ನಿನ್ನ ಮನ್ನಣೆ ಭ್ರಾಂತಿಯುಕ್ತವಿದೆ. ನೀನು ಆರಂಭದ ಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ. ಜೀವದ ಶುಭರಾಗದ ಕಾರಣದಿಂದ ಮಂದಿರಗಳಾಗುವುದಿಲ್ಲ ಅದೇ ಪ್ರಕಾರ ಶುಭರಾಗ ಮಾಡದಿದ್ದರೆ ಮಂದಿರಗಳು ನಿಂತುಹೋಗುತ್ತವೆ ಯೆಂಬುದಾಗಿಯೂ ಇಲ್ಲ. ಯಾವ ಪದಾರ್ಥಗಳು, ಯಾವ ಪಾಷಾಣಗಳು ಲೋಹ ಮೊದಲಾದವುಗಳು ಎಲ್ಲಿಂದ ಮತ್ತು ಯಾವ ಕ್ಷೇತ್ರದಿಂದ ಬರುವವಿವೆ ಅಲ್ಲಿಂದ ಬರುವವು, ಎಲ್ಲಿ ಇರುವವಿವೆ ಮತ್ತು ಮಂದಿರದ ಸ್ಕಂಧ ರೂಪದಿಂದ ಆಗುವವಿವೆ ಅಲ್ಲಿ ಆಗುವವು. ನಾನು ಈ ಜಡ ಪದಾರ್ಥಗಳನ್ನು ಮಾಡುವ ಸಾಧ್ಯತೆಯಿದೆ ಅಥವಾ ಹೀಗೆಯೇ ಮಾಡಿಸುವ ಸಾಧ್ಯತೆಯಿದೆಯೆಂಬ ಮನ್ನಣೆಯೇ ಮಿಥ್ಯಾದರ್ಶನ ಶಲ್ಯವಿದೆ ಮತ್ತು ಇದುವೇ ಮಹಾನ ಆರಂಭವಿದೆ. ಆರಂಭವು ಜಡ ಪದಾರ್ಥಗಳಲ್ಲಿ ಇರುವುದಿಲ್ಲ. ಇಲ್ಲಿ ಹೇಳಿರುವುದೇನೆಂದರೆ ಜಡಪದಾರ್ಥಗಳು ತಮ್ಮ ಕಾರಣದಿಂದ ಬರುತ್ತವೆ-ಹೋಗುತ್ತವೆ ಅದರಲ್ಲಿ ಜೀವವು ನಿಮಿತ್ತ ಕೂಡ ಇಲ್ಲ. ಮಂದಿರ ಮೊದಲಾದವುಗಳಾಗುತ್ತವೆ, ಅದರಲ್ಲಿ ಕಾಲವನ್ನು ನಿಮಿತ್ತವೆಂದು ಹೇಳಿ ಜೀವದ ಶುಭರಾಗದ ನಿಮಿತ್ತತನವನ್ನು ಕೂಡ ಹಾರಿಸಿಬಿಡಲಾಗಿದೆ. ಅದಕ್ಕಾಗಿ ಸಂಯೋಗದ ಮೇಲಿನ ಹಾಗೂ ಶುಭರಾಗದ ಮೇಲಿನ ದೃಷ್ಟಿಯನ್ನು ತೆಗೆ ಮತ್ತು ಶುದ್ಧ ಚಿದಾನಂದ ಸ್ವಭಾವದ ಮೇಲೆ ದೃಷ್ಟಿಹಾಕು  ಪರಮಾಣುಗಳ ಕ್ಷೇತ್ರಾಂತರವಾಗಿ ಮನೆಯ ಸ್ಕಂಧರೂಪ ಅವಸ್ಥೆಯಾಗುತ್ತದೆ, ಅದರಲ್ಲಿ ಜೀವದ



೯೮ನೇ ಗಾಥಾ ಇರುವುದಿಲ್ಲ.

ಜ್ಞಾನವನ್ನು, ಇಚ್ಛೆಯನ್ನು ಅಥವಾ ಕಾಯವನ್ನು ನಿಮಿತ್ತವೆಂದು ಹೇಳದೆ ಕೇವಲ ಅದೃಶ್ಯವಾದ ಒಂದು ಕಾಲವನ್ನು ನಿಮಿತ್ತವೆಂದು ಹೇಳಿ ಅತ್ಯಂತ ಸೂಕ್ಷ್ಮವಾದ ಮಾತನ್ನು ಹೇಳಿದ್ದಾರೆ. ಜಗತ್ತಿನ ದೃಶ್ಯಮಾನವಾದ ಪದಾರ್ಥಗಳ ಮೇಲಿರುವ ಸಂಯೋಗೀ ದೃಷ್ಟಿಯನ್ನು ತೆಗೆದುಹಾಕೆಂದು ಹೇಳುವ ಭಾವವಿದೆ ಮತ್ತು ಸಮಸ್ತ ಜಡ ಪುದ್ಗಲಗಳಲ್ಲಿ ಜೀವವು ನಿಮಿತ್ತವಾಗಿರುವುದರಿಂದ ಜೀವದ ನಿಮಿತ್ತವನ್ನು ತೆಗೆದುಹಾಕಿ ಮೂರುಕಾಲದಲ್ಲೂ ಇರುವಂಥ ಕಾಲವನ್ನು ನಿಮಿತ್ತವೆಂದು ಹೇಳಲಾಗಿದೆ. ಅದಕ್ಕಾಗಿ ಪುದ್ಗಲದ ಕರ್ತೃತ್ವತೆಯ ಅಹಂಕಾರವನ್ನು ತೊಡೆದುಹಾಕಿದ್ದಾರೆ ಮತ್ತು ಪುದ್ಗಲವನ್ನು ಯಾವಾಗಲೂ ಕ್ರಿಯೆಯುಳ್ಳದ್ದೆಂದು ಹೇಳಲಾಗಿದೆ, ಆದರೆ ಅದು ಯಾವಾಗ ಕ್ರಿಯೆ ಮಾಡುತ್ತದೆ ಆಗ ಕ್ರಿಯೆಯುಳ್ಳದ್ದೆಂದು ತಿಳಿದುಕೊಳ್ಳಬೇಕು, ಯಾವಾಗಲೂ ಚಲಿಸುತ್ತಿರುತ್ತದೆಯೆಂಬುದು ಅದರ ಅರ್ಥವಲ್ಲ. ಇನ್ನು ಜೀವವು ಸಿದ್ಧ ದಶೆಯನ್ನು ಪ್ರಾಪ್ತ ಮಾಡಿಕೊಂಡನಂತರ ಮತ್ತು ಸ್ಥಿರವಾದ ನಂತರ ಮೊದಲು ಕ್ರಿಯಾವಂತವಿತ್ತೆಂಬುದನ್ನು ತಿಳಿಸಿಕೊಡುವ ಸಲುವಾಗಿ ಯಾವಾಗಲೂ ಕ್ರಿಯಾವಂತವಿದೆಯೆಂದು ಹೇಳಲಾಗಿದೆ.

ಯಾವುದನ್ನು ಮೂರ್ತ-ಅಮೂರ್ತ ಪದಾರ್ಥವೆನ್ನುತ್ತಾರೆಂಬುದನ್ನು ಈಗ ತಿಳಿಸಿ ಕೊಡುತ್ತಾರೆ.-

**ಜೇ ಖಲು ಇಂದಿಯಗೇಜ್ಝಾ ವಿಸಯಾ ಜೀವೇಹಿಂ ಹೋಂತಿ ತೇ ಮುತ್ತಾ ।**
**ಸೇಸಂ ಹವದಿ ಅಮುತ್ತಂ ಚಿತ್ತಂ ಉಭಯಂ ಸಮಾದಿಯದಿ ॥೯೯॥**

**ಜೀವಗಳಿಗಿಂದ್ರಿಯಗ್ರಾಹ್ಯವಾಗುವ ವಿಷಯಗಳೆಲ್ಲ ಮೂರ್ತವಾಗಿಹವು ।**
**ಅವನುಳಿದೆಲ್ಲ ಅಮೂರ್ತವಿದ್ದು ಚಿತ್ತ ಅವೆರಡನು ಗ್ರಹಣ ಮಾಡುವುದು ॥೯೯॥**

ಜೀವಗಳಿಗೆ ಇಂದ್ರಿಯಗಳ ಮೂಲಕ ತಿಳಿದುಬರುವಂಥ ಪುದ್ಗಲ ಪದಾರ್ಥಗಳಿವೆ ಅವು ಮೂರ್ತವಿವೆ. ಇಂದ್ರಿಯ ಗ್ರಾಹ್ಯ ಎಂದರೆ ಇಂದ್ರಿಯಗಳು ಪದಾರ್ಥಗಳನ್ನು ಹಿಡಿದುಕೊಳ್ಳುವುದಿಲ್ಲ, ಆದರೆ ಇಂದ್ರಿಯಗಳ ನಿಮಿತ್ತದಿಂದ ತಿಳಿದುಬರುತ್ತವೆ ಆ ಪುದ್ಗಲಗಳು ಮೂರ್ತವಿವೆ ಮತ್ತು ಪುದ್ಗಲದಿಂದ ಭಿನ್ನವಾದ ಪದಾರ್ಥಗಳನ್ನು ಅಮೂರ್ತಿಕವೆಂದು ತಿಳಿದುಕೊಳ್ಳುವುದು.

**ಭಾವಾರ್ಥ :-** ಈ ಲೋಕದಲ್ಲಿ ಸ್ಪರ್ಶ-ರಸ-ಗಂಧ-ವರ್ಣವುಳ್ಳ ಪದಾರ್ಥಗಳು ಸ್ಪರ್ಶನ, ಜಿಹ್ವೆ, ನಾಶಿಕ, ಮತ್ತು ನೇತ್ರವೆಂದು ಈ ನಾಲ್ಕು ಇಂದ್ರಿಯಗಳ ಮೂಲಕ ಪದಾರ್ಥಗಳು ತಿಳಿದುಬರುತ್ತವೆ. ಅದರಲ್ಲಿ ದ್ರವ್ಯೇಂದ್ರಿಯಗಳು ನಿಮಿತ್ತವಿವೆ. ಅವೆಲ್ಲವು ಪುದ್ಗಲವಿವೆ ಮೂರ್ತಿಕವಿವೆ. ಇಂದ್ರಿಯಗಳಂತೂ ಪರಪದಾರ್ಥಗಳನ್ನು ಗ್ರಹಣ ಮಾಡುವುದಿಲ್ಲ ಅದರಂತೆ ಬಿಟ್ಟುಕೊಡುವುದೂ ಇಲ್ಲ. ಆದರೆ ಆತ್ಮನು ಕರ್ಮವನ್ನು ಗ್ರಹಿಸುತ್ತಾನೆ ಮತ್ತು ಬಿಟ್ಟುಕೊಡುತ್ತಾನೆಂಬುದೂ ಕೂಡ ಸಂಭವಿಸುವುದಿಲ್ಲ.

**ಪ್ರಶ್ನೆ :-** ಆತ್ಮನ ಕಷಾಯ ಪರಿಣಾಮದಿಂದ ಸ್ಥಿತಿ ಹಾಗೂ ರಸದ ಬಂಧವಾಗುತ್ತದೆ ಮತ್ತು ಯೋಗದಿಂದ ಪ್ರದೇಶ ಹಾಗೂ ಪ್ರಕೃತಿ ಬಂಧವಾಗುತ್ತದೆಯೆಂದು ಆಗಮದಲ್ಲಿ ಕಥನ ಬಂದಿದೆ. ಇದರ ಅರ್ಥವೇನು ? ಮತ್ತು ಆತ್ಮಸಿದ್ಧಿಯಲ್ಲಿ 'ಗ್ರಹಣಕರೇ ಜಡ ಧೂಪ'ವೆಂಬ ಕಥನ ಬಂದಿದೆ. ಹಾಗಾದರೆ ಆತ್ಮನು ಜಡವನ್ನು ಜಡಕರ್ಮವನ್ನು ಗ್ರಹಣಮಾಡುವನೇನು ? ಮತ್ತು ಕರ್ಮವನ್ನು ಕಟ್ಟಿಕೊಳ್ಳುವನೇನು ?

**ಉತ್ತರ :-** ಅದೆಲ್ಲವೂ ನಿಮಿತ್ತದ ಕಥನವಿದೆ. ಜೀವದ ವಿಕಾರೀ ಭಾವವನ್ನು ತಿಳಿಸಿಕೊಡುವುದರ ಕಥನವಿದೆ. ಕರ್ಮವಂತೂ ತನ್ನ ಯೋಗ್ಯತೆಯಿಂದ ಬರುತ್ತದೆ ಮತ್ತು ಕಟ್ಟುತ್ತದೆ. ಅದರಲ್ಲಿ ಆತ್ಮನ ವಿಕಾರದ ನಿಮಿತ್ತತೆಯನ್ನು

ತಿಳಿಸಿಕೊಡುವುದಿದೆ. ಆತ್ಮನಲ್ಲಿ ಪರದ ಗ್ರಹಣತ್ಯಾಗಶೂನ್ಯತ್ವ (ರಹಿತತನ) ವೆಂಬ ಶಕ್ತಿಯಿದೆ. ಭಾವೇಂದ್ರಿಯಗಳು ಪದಾರ್ಥಗಳನ್ನು ಕೇವಲ ತಿಳಿದುಕೊಳ್ಳುತ್ತವೆ.

೧) ಇಂದ್ರಿಯಗಳ ಮೂಲಕ ತಿಳಿದುಕೊಳ್ಳುವುದರಲ್ಲಿ ಬರುವಂಥ ಪದಾರ್ಥಗಳು ಪುದ್ಗಲ ಮೂರ್ತಿಕವಿವೆ. ೨) ಕೆಲವೊಂದುಬಾರಿ ಸ್ಥೂಲ ಸ್ಕಂಧರೂಪವನ್ನು ಧಾರಣ ಮಾಡುತ್ತವೆ. ೩) ಕೆಲವೊಂದು ಬಾರಿ ಸೂಕ್ಷ್ಮ ಸ್ಕಂಧರೂಪವಾಗುತ್ತವೆ. ೪) ಕೆಲವೊಂದು ಬಾರಿ ಪರಮಾಣುವಾಗುತ್ತವೆ. ಅವೆಲ್ಲವೂ ಮೂರ್ತಿಕವಿವೆ.

ಕೆಲವು ಸೂಕ್ಷ್ಮ ಸ್ಕಂಧಗಳು ಅಥವಾ ಪರಮಾಣುಗಳು ಇಂದ್ರಿಯಗಳ ಮೂಲಕ ತಿಳಿದುಕೊಳ್ಳುವುದರಲ್ಲಿ ಬರುವುದಿಲ್ಲವಾದರೂ ಕೂಡ ಆ ಪುದ್ಗಲಗಳಲ್ಲಿ ಎಂಥ ಶಕ್ತಿಯಿದೆಯೆಂದರೆ ಅವು ಕೆಲವೊಂದು ಬಾರಿ ಸ್ಥೂಲತೆಯನ್ನು ಧಾರಣ ಮಾಡುತ್ತವೆ ಮತ್ತು ಇಂದ್ರಿಯಗಮ್ಯವಾಗುತ್ತವೆ. ವರ್ತಮಾನದಲ್ಲಿ ಭಾವೇಂದ್ರಿಯಗಳ ಮೂಲಕ ತಿಳಿದುಬರುವುದಿಲ್ಲ, ಆದರೆ ಇಂದ್ರಿಯಗಳ ಮೂಲಕ ತಿಳಿದುಕೊಳ್ಳುವ ಯೋಗ್ಯತೆಯಿದೆ. ಅದಕ್ಕಾಗಿಯೇ ಇಂದ್ರಿಯಗಮ್ಯವೆಂದು ಹೇಳಲಾಗಿದೆ.

ಆತ್ಮನು ಯಾವುದೇ ಇಂದ್ರಿಯಗಳ ಮೂಲಕ ತಿಳಿದು ಬರುವಂಥವನಿಲ್ಲ. ಅದೇ ರೀತಿಯಾಗಿ ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಇವೆಲ್ಲವು ಅತೀಂದ್ರಿಯವಿವೆ. ಆ ಐದೂ ಪದಾರ್ಥಗಳು ಸ್ಪರ್ಶ, ರಸ, ಗಂಧ, ವರ್ಣಗಳಿಂದ ರಹಿತವಿವೆ. ಅದರಂತೆ ಇಂದ್ರಿಯಗಳ ಮೂಲಕ ತಿಳಿದುಬರುವಂತಿಲ್ಲ. ಆದುದರಿಂದ ಆ ಐದನ್ನು ಅಮೂರ್ತಿಕವೆಂದು ತಿಳಿದುಕೊಳ್ಳಬೇಕು.

ಭಾವಮನದ ಪ್ರಕಟತೆಯಿಂದ ಮತ್ತು ದ್ರವ್ಯಮನದ ನಿಮಿತ್ತದಿಂದ ಮೂರ್ತಿಕ ಹಾಗೂ ಅಮೂರ್ತಿಕ ಎರಡೂ ಪ್ರಕಾರದ ಪದಾರ್ಥಗಳು ತಿಳಿದು ಬರುವ ಸಾಧ್ಯತೆಯಿದೆ. ನನ್ನ ಆತ್ಮನು ಸ್ವತಂತ್ರನಿದ್ದಾನೆ. ಇಂದ್ರಿಯ ಮತ್ತು ಮನಸ್ಸಿನಿಂದ ಜ್ಞಾನವಾಗುವುದಿಲ್ಲ. ನನ್ನ ಆತ್ಮನ ಆಶ್ರಯದಿಂದ ಜ್ಞಾನವಾಗುತ್ತದೆಯೆಂಬ ಪ್ರತೀತಿ ಮತ್ತು ಜ್ಞಾನ ಮಾಡಿಕೊಂಡು ಸ್ವಭಾವದ ಆಶ್ರಯ ತೆಗೆದುಕೊಂಡರೆ ಯಾವ ಮತಿ-ಶ್ರುತಜ್ಞಾನವು ಪ್ರಕಟವಾಗುತ್ತದೆ, ಆ ಜ್ಞಾನವು ತನ್ನನ್ನು ತಿಳಿದುಕೊಳ್ಳುತ್ತ ಪರವನ್ನು ತಿಳಿದುಕೊಳ್ಳುತ್ತದೆ. ಸೂಕ್ಷ್ಮ ಪರಮಾಣು, ತೈಜಸ, ಕಾರ್ಮಾಣ ಮೊದಲಾದವುಗಳ ವಿಚಾರವು ಅನುಮಾನದಿಂದ ಬಂದುಬಿಡುತ್ತದೆ. ಧರ್ಮ, ಅಧರ್ಮ, ಆಕಾಶ ಮತ್ತು ಕಾಲವನ್ನು ಕೂಡ ಆ ಜ್ಞಾನವು ತಿಳಿದುಕೊಳ್ಳುತ್ತದೆ ಮತ್ತು ಆತ್ಮನ ಪರ್ಯಾಯದಲ್ಲಿ ಆಗುತ್ತಿರುವ ರಾಗ-ದ್ವೇಷಗಳು ಅಮೂರ್ತಿಕವಿದ್ದು ಅವನ್ನು ಕೂಡ ಸಮ್ಯಗ್ಜ್ಞಾನವು ತನ್ನನ್ನು ತಿಳಿದುಕೊಳ್ಳುತ್ತ ರಾಗವು ಅದು ಪರವಿದೆಯೆಂದು ತಿಳಿದುಕೊಳ್ಳುತ್ತದೆ. ಈ ಸಮ್ಯಕ್ ಮತಿ-ಶ್ರುತಜ್ಞಾನದ ಸಾಧನನಂತೂ ಆತ್ಮನಿದ್ದಾನೆ. ಮನಸ್ಸು ನಿಮಿತ್ತ ಮಾತ್ರವಿದೆ. ತನ್ನನ್ನು ತಿಳಿದುಕೊಳ್ಳುತ್ತ ಅಮೂರ್ತಿಕ ದ್ರವ್ಯಗಳನ್ನು, ಸೂಕ್ಷ್ಮಮೂರ್ತ ಪದಾರ್ಥಗಳನ್ನು ಮತ್ತು ತನ್ನ ಅಮೂರ್ತಿಕ ವಿಕಾರ ಮೊದಲಾದ ಪರಿಣಾಮವನ್ನು ಅದು ತಿಳಿದುಕೊಳ್ಳುತ್ತದೆ. ಕೇವಲಜ್ಞಾನ ಮತ್ತು ಮತಿಜ್ಞಾನದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷದ ಅಂತರವಿದೆ.

ಯಾವಾಗ ಜ್ಞಾನವು ಪರಪದಾರ್ಥಗಳನ್ನು ತಿಳಿದುಕೊಳ್ಳುತ್ತದೆ ಆಗ ಜ್ಞಾನವು ಆ ಪರಪದಾರ್ಥಗಳಲ್ಲಿ ಹೋಗುವುದಿಲ್ಲ; ಆದರೆ ತಾನು ತನ್ನ ಸಾಮರ್ಥ್ಯದಿಂದ ತನ್ನಲ್ಲಿಯೇ ಇದ್ದುಕೊಂಡು ತಿಳಿದುಕೊಳ್ಳುತ್ತದೆ. ಮತಿ-ಶ್ರುತಜ್ಞಾನದ ಸಾಧನನು ಆತ್ಮನಿದ್ದಾನೆ. ಮನಸ್ಸು ನಿಮಿತ್ತಮಾತ್ರವಿದೆ. ಈ ಪ್ರಕಾರ ಮನಸ್ಸಿನ ನಿಮಿತ್ತದಿಂದ ಮೂರ್ತ-ಅಮೂರ್ತ ಪದಾರ್ಥಗಳನ್ನು ತಿಳಿದುಕೊಳ್ಳಬಹುದಾಗಿದೆ.

ವರ್ತಮಾನದಲ್ಲಿ ಯಾವ ಸ್ಥೂಲ ಮೂರ್ತ ಸ್ಕಂಧಗಳು ಇಂದ್ರಿಯಗಳ ಮೂಲಕ ತಿಳಿದು ಬರುತ್ತವೆ ಅವು ವಿಭಾವ ಪರ್ಯಾಯಗಳಿವೆ, ಅವು ಸಂಯೋಗೀ ಪದಾರ್ಥಗಳಿವೆ, ಮೂಲ ಪದಾರ್ಥಗಳಲ್ಲ. ಅದು ವ್ಯವಹಾರನಯದ

ವಿಷಯವಿದೆ. ನಿಶ್ಚಯ ದ್ರವ್ಯವಂತೂ ಮೂಲ ಪರಮಾಣುವಿದೆ, ಅದು ಕೂಡ ಅತೀಂದ್ರಿಯವಿದೆ. ಇದೇ ರೀತಿಯಾಗಿ ಆರೂ ದ್ರವ್ಯಗಳು ಅತೀಂದ್ರಿಯವಿವೆ ಮತ್ತು ಅವು ಅತೀಂದ್ರಿಯ ಜ್ಞಾನದ ಮೂಲಕ ತಿಳಿದು ಬರುವಂಥವುಗಳಿವೆ. ತನ್ನ ಆತ್ಮನ ಆಶ್ರಯದಿಂದ ಅತೀಂದ್ರಿಯ ಜ್ಞಾನವಾದ ಮೇಲೆ ಇಂದ್ರಿಯಗಳಿಂದ ಗ್ರಾಹ್ಯ ಮಾಡಿದ ಪದಾರ್ಥಗಳಿವೆ ಅವುಗಳ ಯಥಾರ್ಥ ಜ್ಞಾನವಾಗುತ್ತದೆ. ಕೇವಲ ಇಂದ್ರಿಯಗಳಿಂದ ಕಾರ್ಯ ಮಾಡಹೋದರೆ ಯಥಾರ್ಥ ಜ್ಞಾನವಾಗುವುದಿಲ್ಲ.

ಈಗ ವ್ಯವಹಾರಕಾಲ ಮತ್ತು ನಿಶ್ಚಯಕಾಲದ ಸ್ವರೂಪ ಹೇಳುತ್ತಾರೆ -

**ಕಾಲೋ ಪರಿಣಾಮಭವೋ ಪರಿಣಾಮೋ ದವ್ವಕಾಲಸಂಭೂದೋ ।**
**ದೋಣ್ಹಂ ಏಸ ಸಹಾವೋ ಕಾಲೋ ಖಣಭಂಗುರೋ ಣಿಯದೋ ॥೧೦೦॥**

**ಪರಿಣಾಮದಿಂ ಕಾಲ ಉದಿಸಿದರೆ ದ್ರವ್ಯಕಾಲದಿಂ ಪರಿಣಾಮ ಪುಟ್ಟುವುದು ।**
**ಎರಡರದಿದು ಸ್ವಭಾವವಿದ್ದು ಕಾಲಕ್ಷಣಭಂಗುರ ಮೇಣ್ ನಿತ್ಯವಿಹುದು ॥೧೦೦॥**

ಕಾಲದ ಪರ್ಯಾಯವು ಅಥವಾ ಒಂದು ಸಮಯದ ಪರಿಣಾಮವು ತನ್ನ ದ್ರವ್ಯದಿಂದ ಉತ್ಪನ್ನವಾಗುತ್ತದೆ, ಆದರೆ ಅದರಲ್ಲಿ ಜೀವ-ಪುದ್ಗಲದ ಪರಿಣಾಮವು ನಿಮಿತ್ತವಿರುವುದರಿಂದ ಸಮಯ ಮೊದಲಾದ ವ್ಯವಹಾರ ಕಾಲವು ಜೀವ-ಪುದ್ಗಲಗಳ ಪರಿಣಾಮದಿಂದ ಉತ್ಪನ್ನವಾಗುತ್ತದೆಯೆಂದು ಹೇಳಲಾಗಿದೆ ಮತ್ತು ಈ ಜಗತ್ತಿನಲ್ಲಿ ಅಸಂಖ್ಯ ಕಾಲಾಣುಗಳಿದ್ದು ಅವು ದ್ರವ್ಯವಿವೆ. ಅದರಲ್ಲಿ ಅನಂತ ಗುಣಗಳಿವೆ, ಒಂದು ಗುಣದಲ್ಲಿ ಒಂದರಂತೆ ಅನಂತಪರ್ಯಾಯಗಳಿವೆ ಮತ್ತು ಆ ದ್ರವ್ಯವು ಉತ್ಪಾದ-ವ್ಯಯ-ಧ್ರುವಯುಕ್ತವಿದೆ. ನವೀನ ಅವಸ್ಥೆಯ ರೂಪದಿಂದ ಉತ್ಪನ್ನವಾಗುತ್ತದೆ, ಹಳೆಯದು ವ್ಯಯವಾಗುತ್ತದೆ, ತಾನು ದ್ರವ್ಯರೂಪದಿಂದ ಸ್ಥಿರ ಉಳಿಯುತ್ತದೆ. ಜೀವ-ಪುದ್ಗಲಗಳ ಪರಿಣಾಮಗಳಲ್ಲಿ ಈ ನಿಶ್ಚಯ ಕಾಲಾಣುವು ನಿಮಿತ್ತವಿರುವುದರಿಂದ ಕಾಲದ ಕಾರಣದಿಂದ ಜೀವ-ಪುದ್ಗಲಗಳ ಪರಿಣಾಮವಾಗುತ್ತದೆಯೆಂದು ಹೇಳುವುದರಲ್ಲಿ ಬರುತ್ತದೆ. ಈ ಪ್ರಕಾರವಾಗಿ ನಿಶ್ಚಯ ಮತ್ತು ವ್ಯವಹಾರಕಾಲದ ಸ್ವಭಾವವಿದೆ.

ಇದು ಪಂಚಾಸ್ತಿಕಾಯಗಳ ವರ್ಣನೆ ನಡೆಯುತ್ತಿದೆ. ಐದು ಪದಾರ್ಥಗಳು ಎಂದರೆ ಅಸ್ತಿ 'ಇವೆ' ಮತ್ತು ಬಹುಪ್ರದೇಶಗಳ ಸಮೂಹವುಳ್ಳವುಗಳಿವೆ. ಅದಕ್ಕಾಗಿಯೇ 'ಕಾಯ' ಹೀಗೆ ಐದು ಅಸ್ತಿಕಾಯಗಳಿವೆ. ಕಾಲವು ವಸ್ತುವಿದೆ, ಆದರೆ ಸಮೂಹವಿಲ್ಲ.

ಹೀಗೆ ಅದು ಆರು ದ್ರವ್ಯಗಳ ಅರ್ಥಸಮಯವಿದೆ. ಅದನ್ನು ಶಾಸ್ತ್ರವು ಹೇಳುತ್ತದೆ ಮತ್ತು ಜ್ಞಾನವು ತಿಳಿದುಕೊಳ್ಳುತ್ತದೆ. ಯಾವ ಶಾಸ್ತ್ರವು ರಾಗರಹಿತತೆಯಿಂದ ಪದಾರ್ಥಗಳನ್ನು ತಿಳಿಸಿಕೊಡುತ್ತದೆ ಅದು ಶಾಸ್ತ್ರವಿದೆ. ಯಾವ ಪದಾರ್ಥಗಳು ಜ್ಞಾನದಲ್ಲಿ ಜ್ಞೇಯರೂಪದಿಂದ ನಿಮಿತ್ತವಿವೆ ಅದು ಅರ್ಥಸಮಯವಿದೆ ಮತ್ತು ಆ ಪದಾರ್ಥಗಳನ್ನು ರಾಗರಹಿತತೆಯಿಂದ ತಿಳಿದುಕೊಳ್ಳುವುದು ಅದು ಜ್ಞಾನಸಮಯವಿದೆ. ಆತ್ಮನ ಸ್ವಭಾವವು ಸ್ವ-ಪರ ಪ್ರಕಾಶಕವಿದೆ. ಸ್ವವನ್ನು ತಿಳಿದುಕೊಂಡರೆ ರಾಗವು ತಿಳಿದು ಬರುತ್ತದೆ. ಹೀಗೆ ಜ್ಞಾನದ ರುಚಿ ಮಾಡುವುದು ಅದು ಶಾಂತಿ ಮತ್ತು ಸುಖದ ಉಪಾಯವಿದೆ.

ಕನ್ನಡಿಯ ಎದುರಿಗೆ ಬೇರೆ ಬೇರೆ ಆಕಾರದ ಮತ್ತು ವರ್ಣದ ಅನೇಕ ವಸ್ತುಗಳು ಬಿದ್ದುಕೊಂಡಿವೆ ಕನ್ನಡಿಯು ಅದನ್ನು ಹೇಗೆ ಇವೆ ಹಾಗೆ ಪ್ರಕಟಿಸುತ್ತದೆ. ಆದರೆ ಎದುರಿರುವ ವಸ್ತುಗಳ ಆಕಾರ ಮತ್ತು ವರ್ಣವು ಅದರಲ್ಲಿ ಪ್ರವೇಶಿಸಿ

ಹೋಗುವುದಿಲ್ಲ. ತೆಂಗಿನಕಾಯಿ, ನಿಂಬೇಹಣ್ಣು ಮೊದಲಾದ ವಸ್ತುಗಳ ಆಕಾರ ಮತ್ತು ವರ್ಣವು ಕನ್ನಡಿಯಲ್ಲಿ ಪ್ರವೇಶ ಪಡೆದರೆ ಈ ವಸ್ತುಗಳು ವರ್ಣ ಮತ್ತು ಆಕಾರರಹಿತವಾಗುತ್ತ ನಾಶ ಹೊಂದುತ್ತವೆ. ಆದರೆ ಹೀಗೆ ಸಂಭವಿಸುವುದಿಲ್ಲ. ಅದು ಕನ್ನಡಿಯ ಸ್ವಚ್ಛತೆಯ ಪರಿಣಮನವಿದ್ದು ಅದರಲ್ಲಿ ಅನೇಕ ವಸ್ತುಗಳು ಕಂಡು ಬರುತ್ತವೆ. ಅದೇ ರೀತಿಯಾಗಿ ಚೈತನ್ಯ ಕನ್ನಡಿಯು ಸ್ವ-ಪರ ಪ್ರಕಾಶಕ ಸ್ವಭಾವವುಳ್ಳದ್ದಿದೆ. ಅದರಲ್ಲಿ ಸ್ವದ (ನಿಜದ) ಜ್ಞಾನವಾದರೆ ಪರ ಪದಾರ್ಥಗಳ ದ್ರವ್ಯ-ಗುಣ-ಪರ್ಯಾಯ ಮತ್ತು ಆಕೃತಿಗಳು ಹೇಗೆ ಇವೆ ಹಾಗೆ ಕಂಡು ಬರುತ್ತವೆ. ಆದಾಗ್ಯೂ ಪರಪದಾರ್ಥಗಳು ಆತ್ಮನಲ್ಲಿ ಪ್ರವೇಶ ಮಾಡುವುದಿಲ್ಲ. ಕನ್ನಡಿಯಲ್ಲಿ ಪ್ರಜ್ವಲಿಸುವ ಅಗ್ನಿಯು ಕಂಡು ಬರುತ್ತಿದ್ದರೂ ಅದರಿಂದ ಕನ್ನಡಿಯು ಕಾಯ್ದು ಹೋಗುವುದಿಲ್ಲ, ಅದೇ ಪ್ರಕಾರ ನಾನು ಚಿದಾನಂದ ಸ್ವಭಾವದ ಆತ್ಮನಿದ್ದೇನೆ. ಶರೀರ, ಮನಸ್ಸು, ವಾಣಿಗಳು ಪರವಿವೆ. ಪುಣ್ಯ-ಪಾಪಗಳು ವಿಕಾರವಿವೆ. ವಿಕಾರದಿಂದ ರಹಿತನಾದ ನಾನು ಶುದ್ಧನಿದ್ದೇನೆಂದು ನಿಜದ ಜ್ಞಾನವಾದರೆ ಪರದ ಜ್ಞಾನವಾಗಿ ಹೋಗುತ್ತದೆ. ಕಾಲವು ಕೂಡ ಜ್ಞೇಯವಿದೆ, ಅದರ ವ್ಯಾಖ್ಯೆ ಮಾಡಲಾಗಿದೆ.

**ಭಾವಾರ್ಥ :-** ಯಾವುದು ಕ್ರಮದಿಂದ ಅತ್ಯಂತ ಸೂಕ್ಷ್ಮವಾಗಿ ಪ್ರವರ್ತಿಸುತ್ತದೆ ಅದು ವ್ಯವಹಾರಕಾಲವಿದೆ ಮತ್ತು ಆ ವ್ಯವಹಾರಕಾಲದ ಆಧಾರವು ನಿಶ್ಚಯಕಾಲವಿದೆ. ಕಾಲ ಶಬ್ದವಿದೆಯೆಂದ ಮೇಲೆ ಕಾಲ ನಾಮದ ಪದಾರ್ಥವು ಕೂಡ ಇದೆ. ಯಾವ ಪ್ರಕಾರ ಸಕ್ಕರೆಯೆಂಬ ಶಬ್ದವಿದೆಯೆಂದ ಮೇಲೆ ಸಕ್ಕರೆ ನಾಮದ ಪದಾರ್ಥವು ಕೂಡ ಇದೆ. ಸಿಂಹ ಶಬ್ದವಿರುವುದರಿಂದ ಸಿಂಹ ನಾಮದ ಪದಾರ್ಥವು ಇದೆ. ಸರ್ವಜ್ಞ ಶಬ್ದವಿರುವುದರಿಂದ ಸರ್ವಜ್ಞನಾಮದ ಪದಾರ್ಥವು ಇದೆ. ಶಬ್ದದ ಕಾರಣದಿಂದ ಪದಾರ್ಥವಿದೆಯೆಂದು ಹೇಳಿ ಪದಾರ್ಥದ ಪರಾಧೀನತೆಯನ್ನು ತಿಳಿಸಿಕೊಡಲಾಗಿಲ್ಲ; ಆದರೆ ಶಬ್ದವು ವಾಚಕವಿದೆ ಮತ್ತು ಪದಾರ್ಥವು ವಾಚ್ಯವಿದೆಯೆಂದು ಹೇಳಿ ವಾಚಕ ವಾಚ್ಯದ ಸಂಬಂಧವನ್ನು ತಿಳಿಸಿಕೊಡುವುದಿದೆ. ಅದೆಷ್ಟೋ ಜನರು ಕಾಲವನ್ನು ಉಪಚಾರವೆಂದು ಮನ್ನಿಸಿದ್ದಾರೆ ಆ ಮಾತು ಅಸತ್ಯವಿರುವುದರಿಂದ ಕಾಲ ನಾಮದ ಎರಡಕ್ಷರದ ಶಬ್ದವಿದ್ದರೆ ಕಾಲ ಪದಾರ್ಥವು ಕೂಡ ಇದೆಯೆಂಬುದನ್ನು ಇಲ್ಲಿ ಹೇಳಲಾಗಿದೆ.

ಪರಮೇಶ್ವರ ಶಬ್ದವಿದೆಯೆಂದ ಮೇಲೆ ಪರಮೇಶ್ವರರು ಕೂಡ ಇದ್ದಾರೆ. ಯಾರಲ್ಲಿ ಚೈತನ್ಯ ಶಕ್ತಿಯ ಪೂರ್ಣವಿಕಾಸವಾಗಿ ಹೋಗಿದೆ ಅವರನ್ನು ಸರ್ವಜ್ಞ ಅಥವಾ ಪರಮೇಶ್ವರರೆಂದು ಹೇಳುತ್ತಾರೆ. ಶಬ್ದ ಹೇಳಿದೆ ಅಂಥ ಪದಾರ್ಥವಿದೆ ಮತ್ತು ಹಾಗೆ ಜ್ಞಾನದಲ್ಲಿ ಬರಬೇಕಾಗುವುದು. ಸರ್ವಜ್ಞದಶೆಯು ಅದು ಜ್ಞಾನ ಗುಣದ ಪೂರ್ಣದಶೆಯಿದೆ. ಒಂದುವೇಳೆ ನನಗೆ ವರ್ತಮಾನದಲ್ಲಿ ಪೂರ್ಣದಶೆ ಇಲ್ಲದಿದ್ದರೂ ಕೂಡ ಜಗತ್ತಿನಲ್ಲಿ ಪೂರ್ಣದಶೆಯನ್ನು ಪ್ರಾಪ್ತ ಮಾಡಿಕೊಂಡಂಥ ಸರ್ವಜ್ಞರಿರಲೇ ಬೇಕಾಗುವುದು. ವರ್ತಮಾನದಲ್ಲಿ ನನಗೆ ಅಲ್ಪಜ್ಞತೆಯಿದ್ದರೂ ಕೂಡ ಸರ್ವಜ್ಞ ದಶೆಯನ್ನು ಒಪ್ಪಿಕೊಳ್ಳುತ್ತೇನೆ. ಆ ಪರ್ಯಾಯದಲ್ಲಿ ಸರ್ವಜ್ಞರನ್ನು ಒಪ್ಪಿಕೊಳ್ಳುವಂಥ ಬಲವು ಉತ್ಪನ್ನವಾಗಿದೆ ಆ ಬಲವು ಯಾವುದರೊಳಗಿಂದ ಬಂದಿದೆ ? ನಿಮಿತ್ತ , ರಾಗ ಅಥವಾ ಪರ್ಯಾಯದ ಅವಲಂಬನೆಯಿಂದ ಆ ಬಲವು ಉತ್ಪನ್ನವಾಗಿಲ್ಲ, ಆದರೆ ತನ್ನ ಜ್ಞಾನ ಸ್ವಭಾವದ ಮಹಿಮೆಯು ಬರುವುದರಿಂದ ಆ ಬಲವು ಉತ್ಪನ್ನವಾಗಿದೆ. ಅಯ್ಯಾ ಮಹನೀಯರೇ ! ಆ ಸರ್ವಜ್ಞ ಭಗವಂತರು ತಮ್ಮ ತ್ರಿಕಾಲೀ ಜ್ಞಾನವುಳ್ಳ ಆತ್ಮನ ಆಶ್ರಯದಿಂದ ಸರ್ವಜ್ಞದಶೆಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಅದರಂತೆ ನಾನು ಕೂಡ ಆತ್ಮನಿದ್ದೇನೆ. ನಾನು ನನ್ನ ಸ್ವಭಾವದ ಆಶ್ರಯದಿಂದ ಅಲ್ಪಜ್ಞತೆಯ್ನು ದೂರಮಾಡಿ ಸರ್ವಜ್ಞದಶೆಯನ್ನು ಪಡೆದುಕೊಳ್ಳುವೆನು. ಅನಂತ ಸರ್ವಜ್ಞರುಗಳು ಆಗಿಹೋಗಿದ್ದಾರೆ. ಅವರ ಸ್ವೀಕಾರದಲ್ಲಿ ತಮ್ಮ ಪ್ರಭುತೆಯ ಸ್ವೀಕಾರವು ಬಂದು ಹೋಗುತ್ತದೆ. ಆ ಪ್ರಭುತೆಯ ಸ್ವೀಕಾರವು ಸರ್ವಜ್ಞರ ಕಾರಣದಿಂದ ಇಲ್ಲ. ಅದೇ ಪ್ರಕಾರ ಶಬ್ದದ ಕಾರಣದಿಂದ ಇಲ್ಲ. ನಾನು ನನ್ನ ಪ್ರಭುತೆಯನ್ನು ನನ್ನ ಚೈತನ್ಯದ ಆಶ್ರಯದಿಂದ ಒಪ್ಪಿಕೊಂಡಿದ್ದೇನೆ. ವರ್ತಮಾನದ ಅಲ್ಪಜ್ಞತೆಯಲ್ಲಿ ಮತ್ತು ರಾಗದಲ್ಲಿ ಸಿಕ್ಕಿಹಾಕಿಕೊಂಡಿರುವುದು ಅದು ನನ್ನ ದುರ್ಬಲತೆಯಿದೆ ಮತ್ತು

ಅದರಿಂದ ನನ್ನ ಸರ್ವಜ್ಞತೆಯು ವ್ಯಕ್ತವಿಲ್ಲ. ಆದರೆ ಸ್ವಭಾವದ ಆಶ್ರಯದಿಂದ ವೀತರಾಗ ವಿಜ್ಞಾನವಾಗುತ್ತಿರುವಂತೆ ಸರ್ವಜ್ಞನಾಗಿ ಬಿಡಬಹುದೆಂಬ ಪ್ರತೀತಿಯು ವರ್ತಿಸುತ್ತದೆ. ಹೀಗೆ ನಿಶ್ಚಿತ ಮಾಡುವಂಥ ಸರ್ವಜ್ಞ ಶಬ್ದವನ್ನು ತಿಳಿದುಕೊಂಡೆನು. ಆ ಶಬ್ದದಿಂದ ತಿಳಿಸಿಕೊಟ್ಟ ಪದಾರ್ಥವನ್ನು ಕೂಡ ತಿಳಿದುಕೊಂಡೆನು ಮತ್ತು ಸ್ವಯಂ ಸರ್ವಜ್ಞನಾಗುವ ಸಾಮರ್ಥ್ಯವಿದೆಯೆಂಬುದನ್ನು ಜ್ಞಾನದಿಂದ ನಿಶ್ಚಿತ ಕೂಡ ಮಾಡಿಕೊಂಡೆನು. ಈ ರೀತಿಯ ಶಬ್ದ , ಪದಾರ್ಥ ಮತ್ತು ಜ್ಞಾನ ಈ ಮೂರು ಸಮಯಗಳನ್ನು ತಿಳಿದುಕೊಂಡೆನೆಂದು ಹೇಳಲಾಗುವುದು.

**ಪ್ರಶ್ನೆ :-** 'ಮೊಲದ ಕೊಂಬು' ಶಬ್ದವಿದೆಯೆಂದ ಮೇಲೆ ಜಗತ್ತಿನಲ್ಲಿ ಅಂಥ ಪದಾರ್ಥವಿದೆಯೇನು ?

**ಉತ್ತರ :-** 'ಮೊಲದ ಕೊಂಬು' ಇದು ಎರಡು ಪದವುಳ್ಳ ವಾಕ್ಯವಾಗಿ ಹೋಗಿದೆ. ಒಂದೇ ಶಬ್ದವನ್ನು ಹೇಳಿದ್ದರೆ ಅಂಥ ಪದಾರ್ಥವು ಇರಬೇಕಾಗುವುದು. ಮೊಲ ಶಬ್ದವಿದೆಯೆಂದ ಮೇಲೆ ಆ ಹೆಸರಿನ ಪದಾರ್ಥವಿದೆ. ಮತ್ತು ಕೊಂಬು ಶಬ್ದವಿರುವುದರಿಂದ ಆ ಹೆಸರಿನ ಪದಾರ್ಥವಿದೆ. ಎರಡು ಶಬ್ದಗಳಿವೆಯೆಂದ ಮೇಲೆ ಎರಡು ಪದಾರ್ಥಗಳು ಬೇರೆಬೇರೆಯಿವೆ. ಆದರೆ ಎರಡು ಶಬ್ದಗಳ ವಾಕ್ಯದ ಪದಾರ್ಥವು ಇರಬೇಕಾಗುವುದೆಂಬ ನಿಯಮವಿಲ್ಲ. ಒಂದು ಶಬ್ದವಿದ್ದರೆ ಅಂಥ ಪದಾರ್ಥವಿರುವ ಸಾಧ್ಯತೆಯಿದೆ ಮತ್ತು ಅಂಥ ಜ್ಞಾನವಾಗುವ ಸಾಧ್ಯತೆಯಿದೆ. ಶಬ್ದವಂತೂ ಶಬ್ದದ ಕಾರಣದಿಂದ ಇದೆ ಮತ್ತು ಜ್ಞಾನವುಕೂಡ ಜ್ಞಾನದ ಕಾರಣದಿಂದ ಆಗುತ್ತದೆ. ಆದರೆ ಶಬ್ದ ಹಾಗೂ ಜ್ಞಾನದಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಯಾವ ಪ್ರಕಾರ ಸರ್ವಜ್ಞ ಶಬ್ದದ ಮೇಲಿಂದ ತನ್ನ ರಾಗರಹಿತ ಸ್ವಭಾವದ ಆಶ್ರಯದಿಂದ ಸರ್ವಜ್ಞತೆಯನ್ನು ನಿಶ್ಚಯ ಮಾಡಲಾಗಿದೆ. ಅದೇ ಪ್ರಕಾರ ಕಾಲ ಶಬ್ದವಿದೆಯೆಂದ ಮೇಲೆ ಕಾಲ ನಾಮದ ಪದಾರ್ಥವು ಕೂಡ ಇದೆ ಮತ್ತು ಕಾಲ ಪದಾರ್ಥದ ಜ್ಞಾನವನ್ನು ರಾಗರಹಿತ ಸ್ವಭಾವದ ಆಶ್ರಯದಿಂದ ಯಥಾರ್ಥವಾಗಿ ಮಾಡಿಕೊಳ್ಳುವ ಸಾಧ್ಯತೆಯಿದೆ. ಇಲ್ಲಿ ಪಂಚ ಮಹಾವ್ರತಗಳನ್ನು ಧಾರಣಮಾಡಿದ ಮಹಾನ ಆಚಾರ್ಯ ಭಗವಾನ ಕುಂದಕುಂದಾಚಾರ್ಯದೇವರು ಹೇಳಿರುವುದೇನೆಂದರೆ ಕಾಲ ನಾಮದ ಶಬ್ದವಿರುವುದರಿಂದ ಕಾಲ ನಾಮದ ಪದಾರ್ಥವಿದೆಯೆಂದು ಸರ್ವಜ್ಞ ದೇವರು ಹೇಳಿದ್ದಾರೆ. ಶಾಸ್ತ್ರಗಳು ಕೂಡ ಹೇಳುತ್ತಿವೆ. ನಿನ್ನ ಜ್ಞಾನದ ಅನುಭವದಲ್ಲಿ ಯುಕ್ತಿ ಮತ್ತು ಅನುಮಾನದೊಡನೆ ಲಕ್ಷ್ಯದಲ್ಲಿ ಬಂದು ಬಿಡುವಂತಿದೆ.

ವ್ಯವಹಾರಕಾಲವು ಒಂದು ಸಮಯದ ಪರ್ಯಾಯವಿದೆ. ಅದು ನಿಶ್ಚಯಕಾಲದ ಪರ್ಯಾಯವಿದೆ ಮತ್ತು ಪರ್ಯಾಯವು ಪರ್ಯಾಯವಂತನದಿದೆ. ಆದಾಗ್ಯೂ ಬೇರೆ ರೀತಿಯಿಂದ ತಿಳಿಸಿಕೊಡುವುದರಲ್ಲಿ ಬರುತ್ತದೆ. ಆ ವ್ಯವಹಾರಕಾಲವು ಜೀವ-ಪುದ್ಗಲಗಳ ನವೀನತೆಯೊಳಗಿಂದ ಹಳೆಯ ರೂಪವಾಗುವ ಪರಿಣಾಮಗಳೊಳಗಿಂದ ಉತ್ಪನ್ನವಾಗುತ್ತದೆಯೆಂದು ಹೇಳುವುದರಲ್ಲಿ ಬರುತ್ತದೆ. ಯಾವುದೇ ಒಂದು ಬಟ್ಟೆಯು ನವೀನವಿದ್ದದ್ದು ಅದು ಜೀರ್ಣವಾಗುವುದು. ಯಾವನೋ ಓರ್ವ ಬಾಲಕನಿದ್ದನು ಅವನು ತರುಣನಾಗುವನು. ಈ ಬಾಲಕ, ತರುಣ ಮತ್ತು ವೃದ್ಧ ಅವಸ್ಥೆಯೆಂಬ ಅವಸ್ಥೆಯ ಪರಿಣಾಮದಿಂದ ಕಾಲದ ಅಳತೆಯು ತಿಳಿದು ಬರುತ್ತದೆ. ನಿಜವಾಗಿಯಂತೂ ವ್ಯವಹಾರ ಕಾಲದ ಪರ್ಯಾಯವು ಅದು ನಿಶ್ಚಯ ಕಾಲಾಣು ದ್ರವ್ಯದಿಂದಲೇ ಉತ್ಪನ್ನವಾಗುತ್ತದೆ. ಆದರೆ ಅದರಲ್ಲಿ ಜೀವ-ಪುದ್ಗಲಗಳ ಜೀರ್ಣವಾಗುವ ರೂಪದ ಅವಸ್ಥೆಯು ನಿಮಿತ್ತವಿರುವುದರಿಂದ ಜೀವ-ಪುದ್ಗಲದ ಪರಿಣಾಮದಿಂದ ವ್ಯವಹಾರಕಾಲದ ಅಳತೆಯು ಬರುತ್ತದೆಯೆಂದು ಹೇಳಲಾಗಿದೆ.

ಆದುದರಿಂದ ನಿಶ್ಚಿತವಾಗುವುದೇನೆಂದರೆ ಸಮಯ ಮೊದಲಾದ ಯಾವ ವ್ಯವಹಾರ ಕಾಲವಿದೆ ಅದು ಜೀವ-ಪುದ್ಗಲಗಳ ಪರಿಣಾಮಗಳಿಂದ ಪ್ರಕಟವಾಗುತ್ತದೆ ಮತ್ತು ಸಮಯ ಮೊದಲಾದ ವ್ಯವಹಾರ ಕಾಲವಿದೆಯೆಂದ

ಮೇಲೆ ಅದರ ಜತೆಯಲ್ಲಿ ಅವಿನಾಭಾವ ಸಂಬಂಧವನ್ನು ಧಾರಣ ಮಾಡುವಂಥ ನಿಶ್ಚಯಕಾಲದ್ರವ್ಯವು ಕೂಡ ಇದೆ. ಎಲ್ಲಿ ಪರ್ಯಾಯವಿದೆ ಅಲ್ಲಿ ದ್ರವ್ಯವು ಇದ್ದೇ ಇರುವುದು. ಒಂದು ವೇಳೆ ದ್ರವ್ಯವಿಲ್ಲದಿದ್ದರೆ ಪರ್ಯಾಯವಿರುವುದಿಲ್ಲ. ಪರ್ಯಾಯದಿಂದ ಪರ್ಯಾಯದ ಅಸ್ತಿತ್ವವು ಲಕ್ಷ್ಯದಲ್ಲಿ ಬರುತ್ತದೆ. ಹೇಗೆಂದರೆ ಎಲ್ಲಿ ಸಕ್ಕರೆಯ ಸಿಹಿಯಾದ ಸ್ವಾದವಿದೆ ಅಲ್ಲಿ ಸಕ್ಕರೆ ದ್ರವ್ಯವಿದೆ. ಅದೇ ರೀತಿಯಿಂದ ಪರಮಾಣುವು ಒಂದು ಪ್ರದೇಶದಿಂದ ಎರಡನೆಯ ಪ್ರದೇಶಕ್ಕೆ ಮಂದಗತಿಯಿಂದ ಹೋಗುವಲ್ಲಿ ಒಂದು ಸಮಯದ ಅಳತೆಯು ಬಂದು ಬಿಡುತ್ತದೆ. ಪರ್ಯಾಯ ಕಾಲವು ಇಷ್ಟರಲ್ಲಿ ಬಂದು ಬಿಟ್ಟಿತು. ಅದಕ್ಕಾಗಿಯೇ ಅಲ್ಲಿ ದ್ರವ್ಯಕಾಲವು ಕೂಡ ಇಷ್ಟರಲ್ಲಿ ಬಂದು ಹೋಯಿತೆಂಬುದು ಸಿದ್ಧವಾಗುತ್ತದೆ. ಸಮಯಕಾಲ ಅಥವಾ ವ್ಯವಹಾರಕಾಲವು ದ್ರವ್ಯಕಾಲವನ್ನು ಅಥವಾ ನಿಶ್ಚಯಕಾಲವನ್ನು ಸಿದ್ಧ ಮಾಡುತ್ತದೆ. ನಿಶ್ಚಯವಿಲ್ಲದೆ ವ್ಯವಹಾರವು ಇರುವುದೇ ಇಲ್ಲ.

ಇದು ಕಾಲದ್ರವ್ಯದ ಮಾತು ನಡೆಯುತ್ತಿದೆ. ಆ ಕಾಲದ್ರವ್ಯವು ನಿಶ್ಚಯದಿಂದ ವಿದ್ಯಮಾನವಿದ್ದರೂ ಕೂಡ ಅದರ ನಿರಾಕರಣೆ ಮಾಡಿದರೆ ಜ್ಞಾನವು ಅಸತ್ಯವಾಗಿ ಸಿದ್ಧವಾಗುವುದು. ಯಾವನೋ ಓರ್ವನ ಅಂಗಡಿಯಲ್ಲಿ ಸಕ್ಕರೆಯ ಗುಣಗಳು ಬಿದ್ದುಕೊಂಡಿದ್ದರೂ ಕೂಡ ಅಂಗಡಿಕಾರನು ಸಕ್ಕರೆಯ ಗುಣಗಳಿಲ್ಲವೆಂದು ಹೇಳಿದರೆ ಅವನ ಜ್ಞಾನವು ಅಸತ್ಯವೆಂದು ಸಿದ್ಧವಾಗುತ್ತದೆ. ಅದೇ ಪ್ರಕಾರ ಕಾಲ ಸಹಿತವಾಗಿ ಜಗತ್ತಿನ ಪದಾರ್ಥಗಳನ್ನು ಹೇಗೆ ಇವೆ ಹಾಗೆ ಮನ್ನಿಸದೆ ಹೋದರೆ ಮತ್ತು ಕಾಲವನ್ನು ಹಾರಿಸಿ ಬಿಟ್ಟರೆ ಅದನ್ನು ಹಾರಿಸುವುದರಿಂದ ತನ್ನ ಜ್ಞಾನ ಸ್ವಭಾವವನ್ನೇ ಹಾರಿಸಿ ಬಿಟ್ಟಿದ್ದಾನೆ. ಎಂದರೆ ತನ್ನ ಜ್ಞಾನವು ಅಸತ್ಯವೆಂದು ಸಿದ್ಧವಾಗುವುದು. ವರ್ತಮಾನದಲ್ಲಿ ಅದೆಷ್ಟೋ ಜೀವರುಗಳು ಕಾಲವನ್ನು ಮನ್ನಿಸುವುದಿಲ್ಲ, ಕೆಲವರಂತೂ ಅನಂತ ಕಾಲದ್ರವ್ಯಗಳನ್ನು ಮನ್ನಿಸುತ್ತಾರೆ. ಆದರೆ ಅವೆರಡೂ ಮನ್ನಣೆಗಳು ಅಸತ್ಯವಿವೆ. ಒಂದು ಪ್ರದೇಶದಲ್ಲಿ ಒಂದರಂತೆ ಅಸಂಖ್ಯ ಕಾಲಾಣುಗಳಿವೆ ಎಂಬುದು ವಸ್ತುಸ್ವರೂಪವಿದೆ. ಭಗವಂತರು ಅವನ್ನು ನೋಡಿದ್ದಾರೆ ಮತ್ತು ಜ್ಞಾನ-ಧ್ಯಾನದಲ್ಲಿ ಮತ್ತರಿರುವಂಥ ಮುನಿವರರು ಕೂಡ ಹೀಗೆ ಹೇಳುತ್ತಲಿದ್ದಾರೆ. ಯಾರು ಮುನಿತನದ ಸ್ವೀಕಾರ ಮಾಡಿದ್ದಾರೆ ಅವರಿಗೆ ಕಾಲತತ್ತ್ವದ ಸ್ವೀಕಾರವೂ ಕೂಡ ಆಗಿರಬೇಕಾಗುವುದು. ಯಾರು ಕಾಲವನ್ನು ಸ್ವೀಕರಿಸುವುದಿಲ್ಲ ಅವರು ಒಂದನ್ನು ಕೂಡ ಸ್ವೀಕರಿಸುವುದಿಲ್ಲ.

ಓರ್ವ ಕಲಾವಿದನಾದ ಚಿತ್ರಕಾರನಿದ್ದು ಅವನು ಪರದೆಯ ಹಿಂದೆ ಕುಳಿತುಕೊಂಡಿರುವಂಥ ಓರ್ವ ಮಹಿಳೆಯ ಚಿತ್ರವನ್ನು ಕೇವಲ ಅವಳ ಒಂದು ಬೆರಳನ್ನು ನೋಡಿ ಪೂರ್ಣ ಚಿತ್ರವನ್ನು ಬಿಡಿಸುತ್ತಾನೆ ಮತ್ತು ಓರ್ವ ಅಲ್ಪಜ್ಞ ಅಜ್ಞಾನೀ ಕಲಾವಿದನು ಕೂಡ ಒಂದು ಅಂಶದ ಮೇಲಿಂದ ಇಡೀ ಶರೀರದ ತಾದೃಶವಾದ ಚಿತ್ರವನ್ನು ಬಿಡಿಸಿರುತ್ತಾನೆ. ಜಗತ್ತಿಗೆ ಆ ಕುಶಲ ಕಲಾವಂತಿಕೆಯ ಮಹಿಮೆ ಬರುತ್ತದೆ. ಆದರೆ ಆತ್ಮನು ಜ್ಞಾನಕಲಾವಿದನಿದ್ದಾನೆ. ಅವನು ಒಂದು ಸಮಯದ ಅಳತೆಯಲ್ಲಿ ಇಡೀ ಪರ್ಯಾಯವಂತವಾದ ಕಾಲವನ್ನು ನಿರ್ಣಯ ಮಾಡುವ ಸಾಮರ್ಥ್ಯವುಳ್ಳವನಿದ್ದಾನೆ. ಆ ತನ್ನ ಕಲಾವಂತಿಕೆಯ ಮಹಿಮೆಯು ಅಜ್ಞಾನಿಗೆ ಬರುವುದಿಲ್ಲ; ಅವನು ರಾಗ-ದ್ವೇಷಗಳಲ್ಲಿಯೇ ಸಿಲುಕಿ ಹೋಗಿದ್ದಾನೆ.

ಇಲ್ಲಿ ವ್ಯವಹಾರಕಾಲದ ಮೇಲಿಂದ ನಿಶ್ಚಯಕಾಲವನ್ನು ತಿಳಿಸಿದ್ದಾರೆ. ಪರ್ಯಾದಿಂದ ಪರ್ಯಾಯಿಯ ಅಸ್ತಿತ್ವವು ನಿಶ್ಚಿತವಾಗುತ್ತದೆ. ಅದರಲ್ಲಿ ವ್ಯವಹಾರಕಾಲವು ಕ್ಷಣವಿನಶ್ವರವಿದೆ ಮತ್ತು ನಿಶ್ಚಯಕಾಲವು ನಿತ್ಯವಿದೆ. ಅದು ತನ್ನ ಅನಂತ ಗುಣಪರ್ಯಾಯಗಳಿಂದ ಸಹಿತವಿದೆ ಮತ್ತು ಯಾವಾಗಲೂ ಅವಿನಾಶೀ ಇದೆ. ಒಂದು ವೇಳೆ ಆತ್ಮನ ಮೋಕ್ಷದಶೆಯಲ್ಲಿ ಕಾಲವು ನಿಮಿತ್ತವಿದ್ದರೂ ಕೂಡ ಕಾಲದ ಕಾರಣದಿಂದ ಮೋಕ್ಷವಾಗುವುದಿಲ್ಲ. ಅದರಂತೆ ಆತ್ಮನ ಜ್ಞಾನದಲ್ಲಿ ಕಾಲವು ಜ್ಞೇಯವಿದೆ ಎಂದರೆ ಜ್ಞೇಯದ ರೂಪದಲ್ಲಿ ಕೂಡ ನಿಮಿತ್ತವಿದೆ. ಪರ್ಯಾಯವು ನಿಮಿತ್ತವಾಗುತ್ತದೆ, ದ್ರವ್ಯವಂತೂ ತ್ರಿಕಾಲವಿದೆ. ಈ ಪ್ರಕಾರ ನಿತ್ಯವಾದ ಕಾಲದ್ರವ್ಯವನ್ನು ಅವಿನಾಶಿಯೆಂದು ಹೇಳಲಾಗಿದೆ.

ಈಗ ಕಾಲದ್ರವ್ಯದ ಸ್ವರೂಪವನ್ನು ನಿತ್ಯಾನಿತ್ಯದ ಭೇದಮಾಡಿ ತಿಳಿಸಿಕೊಡುತ್ತಾರೆ,-

**ಕಾಲೋ ತ್ತಿ ಯ ವವದೇಸೋ ಸಬ್ಭಾವಪರೂವಗೋ ಹವದಿ ಣಿಚ್ಚೋ ।**
**ಉಪ್ಪಣ್ಣಪ್ಪದ್ಧಂಸೀ ಅವರೋ ದೀಹಂತರಟ್ಠಾ ಈ ॥೧೦೧॥**

**'ಕಾಲ' ವೆಂಬ ಸಂಜ್ಞೆ ಸತ್ಪ್ರರೂಪಕವಿರುವುದರಿಂದ ಕಾಲನಿತ್ಯವಿರುವುದು ।**
**ಅಲೆಯಂತೆ ಉತ್ಪನ್ನಧ್ವಂಸಿಯಾದಿನ್ನೊಂದದುದೀರ್ಘಾಂತರಸ್ಥಾಯಿಯೆನಿಪುದು ॥೧೦೧॥**

**ಭಾವಾರ್ಥ :-** ಯಾವ ಪ್ರಕಾರ ಸಿಂಹ ಶಬ್ದವು ಎರಡು ಅಕ್ಷರಗಳದ್ದಿದ್ದು ಅದು ಸಿಂಹನಾಮದ ಪದಾರ್ಥವನ್ನು ತಿಳಿಸಿಕೊಡುತ್ತದೆ. ಯಾವಾಗ ಒಬ್ಬನು ಸಿಂಹ ಶಬ್ದವನ್ನು ಹೇಳುತ್ತಾನೆ ಆಗ ಸಿಂಹ ಶಬ್ದದ ಜ್ಞಾನವಾಗುತ್ತದೆ ಅದೇ ಪ್ರಕಾರ ಕಾಲ ಶಬ್ದವನ್ನು ಹೇಳುವುದರಿಂದ ಕಾಲ ಪದಾರ್ಥವು ತಿಳಿವಳಿಕೆಯಲ್ಲಿ ಬಂದುಬಿಡುತ್ತದೆ. ಶಬ್ದದ ಕಾರಣದಿಂದ ಜ್ಞಾನವಾಗುತ್ತದೆಯೆಂಬುದಾಗಿ ಇಲ್ಲವೇ ಇಲ್ಲ, ಆದರೆ ವಾಚಕ ವಾಚ್ಯ ಸಂಬಂಧವನ್ನು ತಿಳಿಸಿ ಕಾಲವನ್ನು ಸಿದ್ಧಮಾಡುತ್ತದೆ. ಕಾಲ ಶಬ್ದವು ಕಾಲನಾಮದ ನಿಶ್ಚಯ ಪದಾರ್ಥವನ್ನು ತಿಳಿಸಿಕೊಡುತ್ತದೆ. ಯಾವ ಪ್ರಕಾರ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶವೆಂಬ ದ್ರವ್ಯಗಳಿವೆ ಅದೇ ಪ್ರಕಾರ ಕಾಲವು ಕೂಡ ದ್ರವ್ಯವಿದೆ. ಅಸಂಖ್ಯ ಕಾಲಾಣುಗಳಿವೆ. ಹೀಗೆ ಕಾಲನಾಮದ ಪದಾರ್ಥವನ್ನು ನಿಶ್ಚಯನಯದಿಂದ ತಿಳಿಸಿಕೊಡಲಾಗಿದೆ.

ವ್ಯವಹಾರಕಾಲದಲ್ಲಿ ಎಲ್ಲಕ್ಕಿಂತ ಸೂಕ್ಷ್ಮವಾದುದು ಸಮಯವಿದೆ. ಅದು ಒಂದು ಸಮಯದ ಅವಸ್ಥೆಯಿದೆ. ಅದು ಉತ್ಪನ್ನವಾಗುತ್ತದೆ ಮತ್ತು ನಾಶ ಹೊಂದುತ್ತದೆ ಹಾಗೂ ಅದು ನಿಶ್ಚಯ ಕಾಲಾಣುವಿನ ಪರ್ಯಾಯವಿದೆ. ಉತ್ಪಾದವ್ಯಯರೂಪವಾದ ಪರ್ಯಾಯವನ್ನು ಸಿದ್ಧಾಂತದಲ್ಲಿ ಹೇಳಲಾಗಿದೆ. ಆ ಸಮಯದ ಭೂತ, ಭವಿಷ್ಯ ಮತ್ತು ವರ್ತಮಾನ ರೂಪದ ಪರಂಪರೆಯನ್ನು ಸ್ವೀಕರಿಸುವುದರಲ್ಲಿ ಬಂದರೆ ಆವಲಿ, ಪಲ್ಯೋಪಮ, ಸಾಗರೋಪಮ ಮೊದಲಾದ ಅನಂತ ಭೇದರೂಪಗಳಾಗುವುದರಿಂದ ನಿಶ್ಚಯಕಾಲವು ಅವಿನಾಶಿಯಿದೆ ಮತ್ತು ವ್ಯವಹಾರಕಾಲವು ವಿನಾಶಿಯಿದೆಯೆಂಬುದು ನಿಶ್ಚಿತವಾಗುತ್ತದೆ.

ಕಾಲವು ವಸ್ತುವಿದೆ, ಆದರೆ ಅದಕ್ಕೆ ಕಾಯವಿಲ್ಲ ಎಂದರೆ ಅನೇಕ ಪ್ರದೇಶಗಳಿಲ್ಲ. ಅದು ಒಂದು ಪ್ರದೇಶಿಯಿರುವುದರಿಂದ ಅದನ್ನು ಕಾಯವುಳ್ಳದ್ದೆಂದು ಹೇಳಲಾಗುವುದಿಲ್ಲ. ಒಂದು ಪ್ರದೇಶದಲ್ಲಿ ಪರ್ಯಾಯವು ಪೂರ್ಣವಾಗುತ್ತಿರುವಂತೆ ಅದರ ಅಳತೆ ಬಂದು ಬಿಡುವುದರಿಂದ ಅದು ಏಕಪ್ರದೇಶಿಯಿದೆ. ಅದರಂತೆ ಅದರಲ್ಲಿ ಸ್ನಿಗ್ಧತೆ-ರೂಕ್ಷತೆಗಳು ಕೂಡ ಇಲ್ಲ. ಆದುದರಿಂದ ಒಂದು ಕಾಲಾಣುವು ಇನ್ನೊಂದು ಕಾಲಾಣುವಿನ ಜತೆಯಲ್ಲಿ ಅಂಟಿಕೊಳ್ಳುವ ಸಾಧ್ಯತೆಯಿಲ್ಲ. ಪ್ರತಿಯೊಂದು ಕಾಲಾಣುವು ಬೇರೆಯಾಗಿಯೇ ಇರುತ್ತದೆಂಬುದನ್ನು ಈಗ ತಿಳಿಸಿಕೊಡುತ್ತಾರೆ,-

**ಏದೇ ಕಾಲಾಗಾಸಾ ಧಮ್ಮಾಧಮ್ಮಾ ಯ ಪೋಗ್ಗಲಾ ಜೀವಾ ।**
**ಲಬ್ಭಂತಿ ದವ್ವಸಣ್ಣಂ ಕಾಲಸ್ಸ ದು ಣತ್ಥಿ ಕಾಯತ್ತಂ ॥೧೦೨॥**

**ಜೀವ ಪುದ್ಗಲ ಧರ್ಮ ಅಧರ್ಮ ಆಕಾಶ ಮತ್ತದರಂತೆ ಕಾಲ ಇವೆಲ್ಲವು ।**
**ತಾವೆ 'ದ್ರವ್ಯ' ಸಂಜ್ಞೆಗೆ ಪ್ರಾಪ್ತವಾಗುವುವಾದರೆ ಕಾಲವೊಂದಕೆಕಾಯತ್ವವಿಲ್ಲ ॥೧೦೨॥**

**ಭಾವಾರ್ಥ ಃ-** ಯಾವ ಪ್ರಕಾರ ಧರ್ಮ, ಅಧರ್ಮ, ಆಕಾಶ, ಪುದ್ಗಲ, ಜೀವ ಈ ಐದು ದ್ರವ್ಯಗಳಲ್ಲಿ ಗುಣ-ಪರ್ಯಾಯಗಳಿರುವುದರಿಂದ ಆ ದ್ರವ್ಯದ ಲಕ್ಷಣವು ಹೇಗೆ ಸತ್ ಇದೆ ಮತ್ತು ಸತ್‌ದ ಲಕ್ಷಣವು ಉತ್ಪಾದ-ವ್ಯಯ-ಧ್ರುವವಿದೆ. ಅದೇ ಪ್ರಕಾರ ಗುಣ-ಪರ್ಯಾಯಗಳ ಲಕ್ಷಣವು ಕಾಲದಲ್ಲಿರುವುದರಿಂದ ಕಾಲವನ್ನು ದ್ರವ್ಯವೆಂದು ಹೇಳಲಾಗುತ್ತದೆ.

ಜೀವ-ಪುದ್ಗಲ ಮೊದಲಾದ ದ್ರವ್ಯಗಳ ಲಕ್ಷಣವು ಸತ್ ಇದೆ ಮತ್ತು ಸತ್‌ದ ಲಕ್ಷಣವು ಉತ್ಪಾದ-ವ್ಯಯ-ಧ್ರುವವಿದೆ. ಅವು ಮೂರು ಸತ್‌ದ ಅಂಶಗಳಿವೆ. ಅವು ಪ್ರತಿಯೊಂದು ದ್ರವ್ಯದ ಸ್ವಭಾವಗಳಿವೆ. ಆತ್ಮನ ಉತ್ಪಾದ-ವ್ಯಯ-ಧ್ರುವವು ಆತ್ಮದ್ರವ್ಯದ ಕಾರಣದಿಂದ ಇದೆ, ಪುದ್ಗಲದ ಕಾರಣದಿಂದ ಇಲ್ಲ. ಪುದ್ಗಲದ ಉತ್ಪಾದ-ವ್ಯಯ-ಧ್ರುವವು ಪುದ್ಗಲದ ಕಾರಣದಿಂದ ಇದೆ, ಆತ್ಮನ ಕಾರಣದಿಂದ ಇಲ್ಲ. ಅದೇ ಪ್ರಕಾರ ಕಾಲದ್ರವ್ಯದಲ್ಲಿ ಅನಂತ ಗುಣಗಳಿವೆ ಮತ್ತು ಅನಂತ ಪರ್ಯಾಯಗಳಿವೆ ಅವು ಸತ್ ಇವೆ. ಅದರಲ್ಲಿ ಕೂಡ ನವೀನ ಅವಸ್ಥೆಯ ರೂಪದಿಂದ ಉತ್ಪನ್ನವಾಗುವ, ಹಳೆಯವು ಹೊರಟುಹೋಗುವ ಮತ್ತು ಧ್ರುವತೆಯಿಂದ ಸ್ಥಿರ ಉಳಿಯುವುದಿದೆ. ಇಂಥ ಲಕ್ಷಣಗಳಿರುವುದರಿಂದ ಕಾಲವನ್ನು ಕೂಡ ದ್ರವ್ಯವೆಂದು ಹೇಳಲಾಗಿದೆ. ಈ ಪ್ರಕಾರ ಕಾಲ ಮತ್ತು ಉಳಿದ ಐದು ದ್ರವ್ಯಗಳ ದ್ರವ್ಯ ಸತ್ತಾ ಸಮಾನವಿದೆ. ಈ ಅಪೇಕ್ಷೆಯಿಂದ ಎಲ್ಲವು ಸಮಾನವಿವೆ.

೧) ಜೀವ ನಾಮದ ಪದಾರ್ಥವಿದೆ. ಎದುರಿಗೆ ಪುದ್ಗಲನಾಮದ ಪದಾರ್ಥವಿದೆ. ಜೀವದಲ್ಲಿ ಜ್ಞಾನವಿಲ್ಲವೆಂಬುದು ಎಂದೂ ಸಂಭವಿಸುವುದಿಲ್ಲ ಮತ್ತು ಪುದ್ಗಲದಲ್ಲಿ ಜ್ಞಾನವಿದೆಯೆಂಬುದು ಎಂದೂ ಸಂಭವಿಸುವುದಿಲ್ಲ. ಜೀವನು ಶಕ್ತಿಯಿಂದ ಸರ್ವಜ್ಞನಿದ್ದಾನೆ. ಪುದ್ಗಲವು ಅಜ್ಞಾನವಿದೆ-ಜ್ಞಾನದಿಂದ ರಹಿತವಿದೆ.

೨) ಧರ್ಮದ್ರವ್ಯವು ಜೀವ-ಪುದ್ಗಲಗಳ ಗತಿಯಲ್ಲಿ ನಿಮಿತ್ತವಾಗುತ್ತದೆ ಮತ್ತು ಅಧರ್ಮದ್ರವ್ಯವು ಸ್ಥಿರವಿರುವಲ್ಲಿ ನಿಮಿತ್ತವಾಗುತ್ತದೆ.

೩) ಆಕಾಶವು ಕ್ಷೇತ್ರದಿಂದ ಸರ್ವವ್ಯಾಪಕವಿದೆ-ಅನಂತಪ್ರದೇಶಿಯಿದೆ. ಎದುರಿಗೆ ಕಾಲವು ಏಕಪ್ರದೇಶಿಯಿದೆ. ಚಿಕ್ಕದರಲ್ಲಿ ಚಿಕ್ಕ ಕ್ಷೇತ್ರವಿದೆ.

೪) ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಈ ಐದು ದ್ರವ್ಯಗಳು ಅಚೇತನವಿವೆ ಮತ್ತು ಜೀವವೊಂದು ಚೇತನವಿದೆ.

೫) ಜೀವ, ಧರ್ಮ, ಅಧರ್ಮ, ಆಕಾಶ, ಕಾಲ ಈ ಐದು ದ್ರವ್ಯಗಳು ಅಮೂರ್ತಿಕವಿವೆ ಮತ್ತು ಪುದ್ಗಲವೊಂದು ಮೂರ್ತಿಕವಿದೆ.

ಈ ಪ್ರಕಾರ ದ್ರವ್ಯಗಳು ವಿರುದ್ಧ ಲಕ್ಷಣಗಳುಳ್ಳವುಗಳಿವೆ. ಅವುಗಳಲ್ಲಿ ದ್ವೈತತೆಯು ಬಿದ್ದುಕೊಂಡಿದೆ. ಆದರೆ ದ್ರವ್ಯವಿವೆ, ಈ ಅಪೇಕ್ಷೆಯಿಂದ ಎಲ್ಲವೂ ಸಮಾನವಿವೆ.

ಅವುಗಳಲ್ಲಿ ಧರ್ಮ, ಅಧರ್ಮ, ಲೋಕಾಕಾಶ ಮತ್ತು ಜೀವ ಈ ನಾಲ್ಕಕ್ಕೆ ಅಸಂಖ್ಯ ಪ್ರದೇಶಗಳಿವೆ. ಪುದ್ಗಲ ಪರಮಾಣುವು ನಿಶ್ಚಯದಿಂದ ಏಕ ಪ್ರದೇಶಿಯಿದೆ ಆದರೆ ಅದರಲ್ಲಿ ಸ್ಕಂಧರೂಪವಾಗುವ ಯೋಗ್ಯತೆಯಿರುವುದರಿಂದ ಸಂಖ್ಯಾತ, ಅಸಂಖ್ಯಾತ, ಮತ್ತು ಅನಂತ ಪ್ರದೇಶಿಯಿದೆ. ಆದರೆ ಕಾಲವಂತೂ ಏಕ ಪ್ರದೇಶಿಯೇ ಇದೆ. ಅದರಂತೆ ಅದರಲ್ಲಿ ಸ್ನಿಗ್ಧತೆ-ರೂಕ್ಷತೆಗಳಿಲ್ಲದಿರುವುದರಿಂದ ವ್ಯವಹಾರದಿಂದ ಪ್ರದೇಶಿಯಾಗುವ ಯೋಗ್ಯತೆಯು ಕೂಡ ಇಲ್ಲ.

**ಭಾವಾರ್ಥ ಃ-** ಕಾಲಾಣುಗಳು ರತ್ನದ ರಾಶಿಯಂತೆ ಬಿಡಿ ಬಿಡಿಯಾಗಿ ಬಿದ್ದುಕೊಂಡಿವೆ. ಕಾಲಾಣುವು ಏಕಪ್ರದೇಶಿಯಿದೆ. ಲೋಕಾಕಾಶದ ಪ್ರದೇಶಗಳು ಅಸಂಖ್ಯವಿರುವುದರಿಂದ ಕಾಲಾಣು ದ್ರವ್ಯಗಳು ಕೂಡ ಅಸಂಖ್ಯವಿವೆ ಮತ್ತು ಲೋಕಾಕಾಶದ ಒಂದೊಂದು ಪ್ರದೇಶದ ಮೇಲೆ ಒಂದೊಂದು ಕಾಲಾಣುವು ಇರುವುದರಿಂದ ಕಾಲಗಳು ಕಾಯವುಳ್ಳವುಗಳಿಲ್ಲ ಅನೇಕ ಪ್ರದೇಶಗಳುಳ್ಳವುಗಳಿಲ್ಲ ಎಂದರೆ ಕಾಯರಹಿತವಿವೆ. ಆದುದರಿಂದ ಈ ಪಂಚಾಸ್ತಿಕಾಯ ಗ್ರಂಥದಲ್ಲಿ ಮುಖ್ಯ ರೂಪದಿಂದ ಅವುಗಳ ಕಥನ ಮಾಡಲಾಗಿಲ್ಲ. ಈ ಕಾಲದ್ರವ್ಯದ ಕಥನವು ಐದು ಅಸ್ತಿಕಾಯದಲ್ಲಿ ಗರ್ಭಿತವಾಗಿ ಬಂದು ಬಿಡುತ್ತದೆ. ಏಕೆಂದರೆ ಜೀವ-ಪುದ್ಗಲಗಳ ಪರಿಣಮನದಿಂದ ಸಮಯ ಮೊದಲಾದ ವ್ಯವಹಾರ ಕಾಲವು ತಿಳಿದುಕೊಳ್ಳುವುದರಲ್ಲಿ ಬರುತ್ತದೆ. ಆ ವ್ಯವಹಾರ ಕಾಲವು ಪ್ರಕಟರೂಪದಿಂದ ತಿಳಿದು ಬರುತ್ತದೆಯೆಂದ ಮೇಲೆ ನಿಶ್ಚಯಕಾಲದ ಅನುಮಾನವು ಬಂದು ಬಿಡುತ್ತದೆ. ಆ ಕಾರಣದಿಂದ ಪಂಚಾಸ್ತಿಕಾಯದಲ್ಲಿ ಜೀವ-ಪುದ್ಗಲಗಳ ಪರಿಣಮನದ ಮೂಲಕ ಕಾಲದ್ರವ್ಯವು ತಿಳಿದುಬರುವ ಸಾಧ್ಯತೆಯಿರುವುದರಿಂದ ಪಂಚಾಸ್ತಿಕಾಯದಲ್ಲಿ ಕಾಲದ್ರವ್ಯವು ಗರ್ಭಿತವಿದೆಯೆಂದು ತಿಳಿಯಬೇಕು. ಈ ಕಾಲದ್ರವ್ಯದ ವ್ಯಾಖ್ಯಾನವು ಇಲ್ಲಿಗೆ ಪೂರ್ಣವಾಯಿತು.

ಈಗ ಐದು ಅಸ್ತಿಕಾಯಗಳ ಜ್ಞಾನದ ಫಲವನ್ನು ತಿಳಿಸಿಕೊಡುತ್ತಾರೆ -

**ಏವಂ ಪವಯಣಸಾರಂ ಪಂಚತ್ಥಿಯಸಂಗಹಂ ವಿಯಾಣಿತ್ತಾ ।**
**ಜೋ ಮುಯದಿ ರಾಗದೋಸೇ ಸೋ ಗಾಹದಿ ದುಕ್ಖಪರಿಮೋಕ್ಖಂ ॥೧೦೩॥**

**ಈ ವಿಧ ಪ್ರವಚನಸಾರರೂಪ 'ಪಂಚಾಸ್ತಿಕಾಯಸಂಗ್ರಹ'ವ ತಿಳಿದುಕೊಂಡು ।**
**ಯಾವನು ರಾಗದ್ವೇಷಗಳ ಬಿಡುವನವನು ದುಃಖದಿಂ ಪರಿಮುಕ್ತನಾಗುವನು ॥೧೦೩॥**

ಪಂಚಾಸ್ತಿಕಾಯದ ಜ್ಞಾನಮಾಡಿಕೊಳ್ಳುವುದರ ಫಲವು ಮೋಕ್ಷವಿದೆಯೆಂಬುದನ್ನು ತಿಳಿಸಿಕೊಡುತ್ತಾರೆ. ಇದನ್ನು ನಿಕಟ ಭವ್ಯಜೀವರುಗಳು ಹೇಳುತ್ತಾರೆ. ಅಲ್ಪಕಾಲದಲ್ಲಿ ಮೋಕ್ಷಕ್ಕೆ ಹೋಗುವವರು ನಿಕಟ ಭವ್ಯರಿದ್ದಾರೆ. ಇತರರ ಪರ್ಯಾಯವು ಕೆಡಲಿ ಅಥವಾ ಸುಧಾರಿಸಲಿ, ಒಬ್ಬನು ಸರ್ವಜ್ಞನಾಗಲಿ ಅಥವಾ ಒಬ್ಬನು ನಿಗೋದದಲ್ಲಿ ಹೋಗಲಿ, ಪರಮಾಣುಗಳು ಭಿನ್ನ ಭಿನ್ನವಾಗಲಿ ಅಥವಾ ಏಕತ್ರಿತವಾಗಲಿ, ಅದರಿಂದ ನನಗೆ ಯಾವ ಲಾಭವಾಗಲಿ ಅಥವಾ ಹಾನಿಯಾಗಲಿ ಇಲ್ಲ ಮತ್ತು ನನ್ನ ಜ್ಞಾನದಲ್ಲಿ ನನ್ನನ್ನು ತಿಳಿದುಕೊಳ್ಳುವುದರಿಂದ ಸಮಸ್ತ ಪರಗಳು ತಿಳಿದುಬರುತ್ತವೆ. ಇತರ ಪದಾರ್ಥಗಳು ನನಗೆ ಸುಖ-ದುಃಖದ ಕಾರಣವಾಗಿಲ್ಲ. ಆ ಸುಖ-ದುಃಖವು ಪರದ ಕಾರಣದಿಂದ ಆಗುತ್ತದೆಯೆಂದು ನನ್ನ ಕಲ್ಪನೆಯಾಗುತ್ತದೆ, ಆದರೆ ಅದು ನನ್ನ ದುರ್ಬಲತೆಯ ಕಾರಣದಿಂದ ಇದೆ. ನಾನಂತೂ ರಾಗ ಮತ್ತು ಪರವನ್ನು ಕೇವಲ ತಿಳಿದುಕೊಳ್ಳುವವನಿದ್ದೇನೆಂಬ ಜ್ಞಾನ ಸ್ವಭಾವದ ಪ್ರತೀತಿಯುಳ್ಳ ಜೀವನು ನಿಕಟ ಭವ್ಯಜೀವನಿದ್ದಾನೆ.

ಆ ನಿಕಟ ಭವ್ಯ ಜೀವನು ದಿವ್ಯಧ್ವನಿಯಲ್ಲಿ ಬಂದಿರುವ ಹನ್ನೆರಡು ಅಂಗಗಳ ರಹಸ್ಯವನ್ನು ಅಥವಾ ಈ ಪಂಚಾಸ್ತಿಕಾಯಗಳ ಸ್ವಭಾವವನ್ನು ಒಳ್ಳೆಯ ಪ್ರಕಾರದಿಂದ ತಿಳಿದಿರುತ್ತಾನೆ. 'ಒಳ್ಳೆಯ ಪ್ರಕಾರದಿಂದ ತಿಳಿದುಕೊಂಡು' ಎಂಬ ಶಬ್ದದ ಮೇಲೆ ವಿಶೇಷ ಭಾರವಿದೆ. ಯಾವ ಪ್ರಕಾರ ಆರು ದ್ರವ್ಯಗಳು ಸ್ವತಂತ್ರವಿವೆ ಅದೇ ಪ್ರಕಾರ ತಿಳಿದುಕೊಂಡಿದ್ದಾನೆ. ಪ್ರತಿಯೊಂದು ದ್ರವ್ಯವು ತಾನು ತನ್ನಿಂದಲೇ ಇದೆ ಮತ್ತು ಅದು ಇನ್ನೊಂದು ದ್ರವ್ಯದಿಂದ ಇಲ್ಲ. ಅದೇ ಪ್ರಕಾರ ಪ್ರತಿಯೊಂದರ ವರ್ತಮಾನವು ತನ್ನಿಂದ ಇದೆ ಮತ್ತು ಅನ್ಯದ್ರವ್ಯದಿಂದ ಇಲ್ಲ. ಹೀಗೆ ಆರು ದ್ರವ್ಯಗಳ ದ್ರವ್ಯ-ಗುಣ- ಪರ್ಯಾಯಗಳು ಸ್ವತಂತ್ರವಿವೆಯೆಂದು ಪೃಥಕ್ ಪೃಥಕ್ಕಾಗಿ ತಿಳಿದುಕೊಳ್ಳುವುದು ಅದು ಪ್ರಥಮ

ಉಪಾಯವಿದೆ. ಮಿಥ್ಯಾ ಅವಸ್ಥೆಯಲ್ಲಿ ಆರು ದ್ರವ್ಯಗಳನ್ನು ಭಿನ್ನ ಭಿನ್ನವಾಗಿ ತಿಳಿಯದಿರುವುದರಿಂದ ಮಿಥ್ಯಾತ್ವ ಸಹಿತವಾಗಿ ರಾಗ-ದ್ವೇಷಗಳ ಉತ್ಪತ್ತಿಯಾಗುತ್ತಲಿತ್ತು. ಈಗ ಭೇದಜ್ಞಾನವಾಗಿರುವುದರಿಂದ ಓಹೋ! ಈ ಆರೂ ದ್ರವ್ಯಗಳು ಸ್ವತಂತ್ರವಿವೆ, ಯಾವುದರ ಕಾರಣದಿಂದ ಯಾವುದೂ ಇಲ್ಲ, ನಾನು ಆತ್ಮನಿದ್ದೇನೆ, ಇತರ ಜಡಗಳಿಂದ ಭಿನ್ನನಿದ್ದೇನೆ, ಅದರಂತೆ ಇತರ ಅನಂತ ಆತ್ಮರುಗಳಿಂದ ಕೂಡ ಭಿನ್ನನಿದ್ದೇನೆ. ಆದುದರಿಂದ ಆ ಪರ ಪದಾರ್ಥಗಳಿಂದ ನನಗೆ ಯಾವುದೇ ಪ್ರಕಾರದಿಂದ ಲಾಭವೂ ಇಲ್ಲ ಮತ್ತು ಹಾನಿಯೂ ಕೂಡ ಇಲ್ಲ. ಸರ್ವಜ್ಞ ಭಗವಂತರಿಂದ ನನಗೆ ಲಾಭವಿಲ್ಲ ಮತ್ತು ವಿರೋಧಿಗಳಿಂದ ಯಾವ ರೀತಿಯ ಹಾನಿಯಿಲ್ಲ. ನನ್ನ ಪರ್ಯಾಯದ ಅಂಶವು ಅವುಗಳಲ್ಲಿ ಹೋಗುವುದಿಲ್ಲ ಮತ್ತು ಅವುಗಳ ಅಂಶವು ನನ್ನಲ್ಲಿ ಬರುವುದಿಲ್ಲ. ಪ್ರತಿಯೊಂದು ಪದಾರ್ಥದ ಕ್ರಿಯೆಯು ಸ್ವತಂತ್ರವಾಗಿ ಆಗುತ್ತಲಿದೆಯೆಂದು ಮೊದಲು ಪರದಿಂದ ಭೇದವಿಜ್ಞಾನ ಮಾಡಿದ್ದಾನೆ.

ಈ ಪ್ರಕಾರ ಭೇದವಿಜ್ಞಾನವಾದ ನಂತರ ಇಷ್ಟ ಪದಾರ್ಥಗಳಲ್ಲಿ ಪ್ರೀತಿ ಮತ್ತು ಅನಿಷ್ಟ ಪದಾರ್ಥಗಳಲ್ಲಿನ ದ್ವೇಷವನ್ನು ಬಿಡುತ್ತಾನೆ. ಭೇದವಿಜ್ಞಾನವಾಗದ ಹೊರತಾಗಿ ರಾಗ-ದ್ವೇಷಗಳು ಎಂದೂ ಬಿಟ್ಟು ಹೋಗುವುದಿಲ್ಲ. ಆದುದರಿಂದ ಒಳ್ಳೆಯರೀತಿಯಿಂದ ತಿಳಿದುಕೊಂಡು ರಾಗ-ದ್ವೇಷಗಳನ್ನು ಬಿಟ್ಟುಕೊಡಲಾಗಿದೆಯೆಂದು ಇಲ್ಲಿ ಹೇಳಲಾಗಿದೆ. ಪರದಿಂದ ಭೇದವಿಜ್ಞಾನ ಮಾಡಲಾಗಿದೆ. ಕರ್ಮವು ಪರವಿದೆ, ಜಡವಿದೆ. ಅದನ್ನು ನಾನು ನಾಶಮಾಡುವ ಸಾಧ್ಯತೆಯಿಲ್ಲ. ಅದರಂತೆ ಪರಪದಾರ್ಥಗಳನ್ನು ನಾನು ಗ್ರಹಣ ಮಾಡುವ ಅಥವಾ ಬಿಟ್ಟುಕೊಡುವ ಸಾಧ್ಯತೆಯಿಲ್ಲ ಮತ್ತು ನನ್ನಲ್ಲಿ ಆಗುತ್ತಿರುವ ರಾಗ-ದ್ವೇಷಗಳು ಅವು ಪರದ ಕಾರಣದಿಂದ ಆಗುತ್ತಿಲ್ಲ, ನನ್ನ ಕಾರಣದಿಂದ ಆಗುತ್ತವೆ. ಆದರೆ ಆ ರಾಗ-ದ್ವೇಷಗಳು ನನ್ನ ಸ್ವಭಾವದಲ್ಲಿ ಇಲ್ಲ. ನಾನು ಜ್ಞಾನಸ್ವಭಾವಿಯಾದ ಆತ್ಮನಿದ್ದೇನೆಂದು ತನ್ನ ಸ್ವಭಾವದಲ್ಲಿ ಶ್ರದ್ಧೆ, ಜ್ಞಾನ ಮತ್ತು ಸ್ಥಿರತೆ ಮಾಡಿದರೆ ರಾಗ-ದ್ವೇಷಗಳು ಉತ್ಪನ್ನವಾಗುವುದೇ ಇಲ್ಲ. ಅವನನ್ನು ರಾಗ-ದ್ವೇಷಗಳನ್ನು ಬಿಟ್ಟಿದ್ದಾನೆಂದು ಹೇಳಲಾಗುತ್ತದೆ. ರಾಗ-ದ್ವೇಷಗಳಿವೆ ಅವನ್ನು ಯಾವ ರೀತಿಯಿಂದ ಬಿಡುವುದು ? ಮತ್ತು ಉತ್ಪನ್ನವಾಗದವುಗಳನ್ನು ಹೇಗೆ ಬಿಡುವುದು ? ನಾನು ಜ್ಞಾನ ಸ್ವಭಾವಿಯಾದ ಆತ್ಮನಿದ್ದೇನೆಂದು ಸ್ವಭಾವದಲ್ಲಿ ಸ್ಥಿರಗೊಂಡರೆ ರಾಗ-ದ್ವೇಷಗಳ ಉತ್ಪತ್ತಿಯೇ ಆಗುವುದಿಲ್ಲ. ಅವನನ್ನು ಇಷ್ಟ ಅನಿಷ್ಟ ಪದಾರ್ಥಗಳಲ್ಲಿನ ರಾಗ-ದ್ವೇಷಗಳನ್ನು ಬಿಟ್ಟಿದ್ದಾನೆಂಬ ಉಪದೇಶದ ವಾಕ್ಯಗಳು ಬರುತ್ತವೆ.

೧) ಮೊದಲು ನಿಮಿತ್ತದ ಅಭಿರುಚಿಯು ಹೊರಟುಹೋಗಿ ಸ್ವಭಾವದ ಅಭಿರುಚಿಯಾಗುತ್ತದೆ.

೨) ಅನಂತರ ಸ್ವಭಾವದಲ್ಲಿ ಸ್ಥಿರವಾದರೆ ರಾಗ-ದ್ವೇಷಗಳು ಹೊರಟು ಹೋಗುತ್ತವೆ.

ಈ ರೀತಿಯಿಂದ ಆ ಭವ್ಯಜೀವನು ಸಂಸಾರದ ದುಃಖದಿಂದ ಬಿಡುಗಡೆಯಾಗಿ ಮುಕ್ತಿಯನ್ನು ಪಡೆಯುತ್ತಾನೆ.

ಇಲ್ಲಿಗೆ ಮೊದಲನೆಯ ಅಧ್ಯಾಯವು ಪೂರ್ಣವಾಗುತ್ತದೆ. ಜ್ಞಾನಸಮಯ, ಅರ್ಥಸಮಯ ಮತ್ತು ಶಬ್ದ ಸಮಯವೆಂದು ಮೂರು ಪ್ರಕಾರದ ಸಮಯದ ಮಾತು ಮಾಡಲಾಯಿತು. ಜಗತ್ತಿನ ಪದಾರ್ಥಗಳು ಜ್ಞಾನದಲ್ಲಿ ತಿಳಿದುಬರುತ್ತವೆ. ಅವುಗಳ ಕಾರಣದಿಂದ ರಾಗ-ದ್ವೇಷಗಳಾಗುವುದಿಲ್ಲ. ಆದರೆ ವೀತರಾಗತೆಯಾಗುತ್ತದೆಯೆಂದು ತಿಳಿಸಿಕೊಡುವಂಥವುಗಳನ್ನು ಶಾಸ್ತ್ರವೆಂದು ಹೇಳುತ್ತಾರೆ. ಪರಪದಾರ್ಥಗಳ ಜತೆಯಲ್ಲಿ ನಿನ್ನ ಸಂಬಂಧವಿಲ್ಲ. ಆರೂ ದ್ರವ್ಯಗಳು ಭಿನ್ನ-ಭಿನ್ನವಿವೆ. ಪರದ ಕಾರಣದಿಂದ ಸಂಗತಿಯಿಲ್ಲ. ಅದರಂತೆ ಪರದಕಾರಣದಿಂದ ಅಸಂಗತಿಯು ಕೂಡ ಇಲ್ಲ. ನಿನಗೆ ಅಸಂಗತಿಯ ಅಭಾವವು ವರ್ತಿಸುತ್ತಿರುವುದರಿಂದಲೇ ಸಂಸಾರವಿದೆ. ನಿನ್ನ ಪ್ರಜ್ಞಾಹೀನತೆಯಿಂದಲೇ ಸಂಸಾರವಿದೆ ಮತ್ತು ಸ್ವಭಾವದ ಜ್ಞಾನವಾದೊಡನೆ ಸಂಸಾರವು ಬಿಟ್ಟುಹೋಗುತ್ತದೆ ಮತ್ತು ವೀತರಾಗತೆಯು ಉತ್ಪನ್ನವಾಗುತ್ತದೆಯೆಂದು ಶಾಸ್ತ್ರಕಾರರು ಹೇಳುತ್ತಾರೆ. ಈ ಪ್ರಕಾರ ಸ್ವತಂತ್ರತೆಯನ್ನು ತಿಳಿಸಿಕೊಡುವುದು ಅದು

ಶಬ್ದಸಮಯವಿದೆ. ಶಾಸ್ತ್ರ ಮತ್ತು ರಾಗದ ಅವಲಂಬನೆಯಿಲ್ಲದೆ ಯಾವುದು ಪ್ರಕಟವಾಗುತ್ತದೆ ಅದು ಜ್ಞಾನಸಮಯವಿದೆ. ಐದು ಅಸ್ತಿಕಾಯಗಳನ್ನು ತಿಳಿದುಕೊಳ್ಳುವುದರ ಫಲವು ವೀತರಾಗತೆಯಿದೆ ಅದನ್ನು ತಿಳಿಸಿಕೊಡಲಾಗಿದೆ.

**ಭಾವಾರ್ಥ ಃ-** ಆತ್ಮನ ಸ್ವಭಾವವು ಜ್ಞಾನವೇ ಇದೆ, ಆತ್ಮನು ಪರಪದಾರ್ಥಗಳಿಂದ ಬೇರೆಯಿದ್ದಾನೆ ಮತ್ತು ಪರ್ಯಾಯದಲ್ಲಿ ಆಗುತ್ತಿರುವ ವಿಕಾರವು ಅದು ಆತ್ಮನ ನಿಜವಾದ ಸ್ವರೂಪವಿಲ್ಲವೆಂಬ ಜ್ಞಾನವಾದ ನಂತರ ದುರ್ಬಲತೆಯ ಕಾರಣದಿಂದ ಅಲ್ಪರಾಗ-ದ್ವೇಷಗಳಾಗುತ್ತವೆ. ಅದು ಕೂಡ ಆತ್ಮನಲ್ಲಿ ವಿಶೇಷವಾಗಿ ಅಸಂಗತೆಯ ದೃಢತೆಯಾದ ಮೇಲೆ ನಾಶಹೊಂದುತ್ತದೆ ಮತ್ತು ವೀತರಾಗತೆಯು ಪ್ರಕಟವಾಗಿ ಕೇವಲಜ್ಞಾನವು ಪ್ರಕಟವಾಗುತ್ತದೆ. ಆ ಸರ್ವಜ್ಞದೇವರ ದಿವ್ಯಧ್ವನಿ ಹೊರಡುತ್ತದೆ. ಅದು ದ್ವಾದಶಾಂಗ ವಾಣಿಯಿದೆ. ಅದರಲ್ಲಿ ಸಮಯ-ಸಮಯಕ್ಕೆ ಹನ್ನೆರಡು ಅಂಗಗಳ ರಹಸ್ಯವು ಹೊರಡುತ್ತದೆ ಮತ್ತು ಅದರ ಅನುಸಾರವಾಗಿ ಗಣಧರರು ಶಾಸ್ತ್ರದ ರಚನೆ ಮಾಡುತ್ತಾರೆ.

ಆ ದ್ವಾದಶಾಂಗ ವಾಣಿಯ ಅನುಸಾರದಿಂದ ಎಷ್ಟು ಶಾಸ್ತ್ರಗಳ ರಚನೆಯಾಗಿವೆ ಅವು ನಿಜವಾದ ಶಾಸ್ತ್ರಗಳಿವೆ. ಆರೂ ದ್ರವ್ಯಗಳು ಪರಿಪೂರ್ಣ ಸ್ವತಂತ್ರವಿವೆಯೆಂದು ಆ ಶಾಸ್ತ್ರಗಳು ತಿಳಿಸಿಕೊಡುತ್ತವೆ.

ಈ ಆರು ದ್ರವ್ಯಗಳ ಸ್ವರೂಪದೊಳಗಾದ ಯಾವುದಾದರೂ ಒಂದು ವಸ್ತುವು ಕೂಡ ಹಿಂದೆ ಮುಂದೆ ಮಾಡಿದರೆ ಮತ್ತು ಒಂದು ಪದಾರ್ಥವನ್ನಾದರು ಕೂಡ ತೆಗೆದುಹಾಕಿದರೆ, ಒಬ್ಬ ಆತ್ಮನನ್ನು ಅಪೂರ್ಣನೆಂದು ಹೇಳಿದರೆ ಒಂದು ಪುದ್ಗಲವನ್ನು ಅಪೂರ್ಣವೆಂದು ಹೇಳಿದರೆ, ಧರ್ಮ, ಅಧರ್ಮ, ಆಕಾಶವನ್ನು ತೆಗೆದುಹಾಕಿದರೆ, ಕಾಲವನ್ನು ಮನ್ನಿಸದಿದ್ದರೆ ಅಥವಾ ಕಾಲಾಣುವನ್ನು ಮನ್ನಿಸಿ ಅದರಲ್ಲಿ ಹೆಚ್ಚುಕಡಿಮೆ ಮಾಡಿ ಶಾಸ್ತ್ರ ರಚಿಸಿದರೆ ಅದು ಮಿಥ್ಯಾದೃಷ್ಟಿ ರಚಿಸಿದ್ದಿದೆ. ಅದನ್ನು ದ್ವಾದಶಾಂಗ ವಾಣಿಯ ಆಧಾರದಿಂದ ರಚಿಸಿದ್ದು ಇಲ್ಲ.

ಇದು ಶಬ್ದಸಮಯ ಅಥವಾ ಶಬ್ದಶ್ರುತದ ಮಾತು ನಡೆಯುತ್ತಿದೆ. ಭಗವಾನ ಕುಂದಕುಂದಾಚಾರ್ಯದೇವರು ಎರಡು ಸಾವಿರ ವರ್ಷಗಳ ಮೊದಲು ಆಗಿದ್ದಾರೆ ಮತ್ತು ಅಮೃತಚಂದ್ರಾಚಾರ್ಯದೇವರು ಒಂದು ಸಾವಿರ ವರ್ಷಗಳ ಮೊದಲು ಆಗಿದ್ದಾರೆ. ಅವರು ಹೇಳಿರುವುದೇನೆಂದರೆ 'ಎಲ್ಲಿಯೂ ಯಾವುದನ್ನೂ ಬಿಟ್ಟು ಕೊಟ್ಟಿಲ್ಲ.' ಎಂದರೆ ಭಗವಂತರ ವಾಣಿಯಲ್ಲಿ ಸ್ವಲ್ಪ ಕೂಡ ಕೊರತೆ ಮಾಡಿಲ್ಲ. ಯಾವ ಪ್ರಕಾರ ವಸ್ತುವಿನ ಸ್ವರೂಪವಿದೆ ಅದೇ ಪ್ರಕಾರ ಇಲ್ಲಿ ಹೇಳಲಾಗಿದೆ. ದ್ರವ್ಯಗಳು ಐದೇ ಇದ್ದು ಕಾಲವನ್ನು ಉಪಚಾರವೆಂದು ಮನ್ನಿಸಿ ಬಿಟ್ಟುಕೊಟ್ಟರೆ ಆ ವಾಣಿಯು ತೀರ್ಥಂಕರರ, ಮುನಿಗಳ ಅಥವಾ ಸಾಧು ಪರಮೇಷ್ಠಿಗಳದ್ದಲ್ಲ ಆದರೆ ಮಿಥ್ಯಾದೃಷ್ಟಿಯದಿದೆಯೆಂಬ ಸಿದ್ಧಾಂತವನ್ನು ಸಿದ್ಧ ಮಾಡಿದೆ. ಯಾರ ಪರಂಪರೆಯೇ ನಿಜವಿಲ್ಲ ಅವರ ಒಂದು ಅಕ್ಷರವು ಕೂಡ ಸತ್ಯವಿಲ್ಲ. ನಾವು ಕಾಲವನ್ನು ಮನ್ನಿಸುವುದಿಲ್ಲ, ಆದರೆ ಅನಂತ ಆತ್ಮ, ಅನಂತ ಪರಮಾಣು ಹಾಗೂ ದ್ರವ್ಯ-ಗುಣ-ಪರ್ಯಾಯಗಳನ್ನು ಮನ್ನಿಸುತ್ತೇವೆ. ಇಷ್ಟಾದರೂ ನಮ್ಮದು ಸತ್ಯವೆಂದು ಹೇಳಿರಲ್ಲ ?

**ಉತ್ತರ ಃ-** ಇಲ್ಲ ; ತಮ್ಮದು ಒಂದು ಅಕ್ಷರವು ಕೂಡ ಸತ್ಯವಿಲ್ಲ. ಕಾಲದ್ರವ್ಯವು ಸಮಸ್ತ ದ್ರವ್ಯಗಳ ಪರಿಣಮನದಲ್ಲಿ ನಿಮಿತ್ತವಿದೆ. ಅದನ್ನೇ ತಾವು ಸ್ವೀಕರಿಸಲಿಲ್ಲ ಎಂದರೆ ತಮ್ಮ ಅಭಿಪ್ರಾಯದಲ್ಲಿ ಒಂದೂ ದ್ರವ್ಯದ ಸ್ವೀಕಾರವಿಲ್ಲ. ಆದುದರಿಂದ ನಿಮ್ಮ ಎಲ್ಲ ಮಾತುಗಳು ಅಸತ್ಯವಿವೆ.

ಒಂದಾದರೂ ದ್ರವ್ಯವನ್ನು ಅಪೂರ್ಣವೆಂದು ಮನ್ನಿಸಿದರೆ ಅಥವಾ ವಿಪರೀತವಾಗಿ ಮನ್ನಿಸಿದರೆ ಅದೆಲ್ಲವೂ ಅಸತ್ಯವಿದೆ ಮತ್ತು ಆರೂ ದ್ರವ್ಯಗಳನ್ನು ಹೇಗೆ ಇವೆ ಹಾಗೆ ತಿಳಿಸಿದ್ದರೆ ಅದು ನಿಜವಾದ ಶಾಸ್ತ್ರವಿದೆ. ಈ ಪಂಚಾಸ್ತಿಕಾಯದಲ್ಲಿ ಕೂಡ ಇದೇ ನಿರ್ಣಯವಿರುವುದರಿಂದ ಈ ಪಂಚಾಸ್ತಿಕಾಯ ಪ್ರವಚನವಿದೆ ಅದು ಭಗವಂತರ ಪ್ರಮಾಣ ವಚನಗಳ

ಸಾರವಿದೆ. ಏಕೆಂದರೆ ಇದರಲ್ಲಿ ಆರೂ ದ್ರವ್ಯಗಳ ಸ್ವತಂತ್ರ ಪ್ರತಿಪಾದನೆ ಮಾಡಲಾಗಿದೆ. ಆತ್ಮನು ಆತ್ಮರೂಪದಿಂದ ಇದ್ದಾನೆ, ಆದರೆ ಪರರೂಪದಿಂದ ಇಲ್ಲ ಮತ್ತು ಪರವು ಪರರೂಪದಿಂದ ಇದೆ ಆದರೆ ಆತ್ಮರೂಪದಿಂದ ಇಲ್ಲ. ಹೀಗೆ ಮೊದಲು ವಾಣಿಯನ್ನು ಸಿದ್ಧಮಾಡಿ, ಅನಂತರ ಅದರ ಅನುಸಾರವಾಗಿ ರಚಿಸಿದ ಶಾಸ್ತ್ರಗಳಲ್ಲಿ ಆರೂ ದ್ರವ್ಯಗಳು ಸ್ವತಂತ್ರವಿವೆಯೆಂದು ತಿಳಿಸಿಕೊಡಲಾಗಿದೆಯೆಂದು ಸಿದ್ಧಮಾಡಿದೆ.

ಈಗ ಆ ಶಾಸ್ತ್ರಗಳಲ್ಲಿ ಹೇಳಿರುವ ಆರು ದ್ರವ್ಯಗಳ ಸ್ವರೂಪವನ್ನು ತಿಳಿದುಕೊಳ್ಳುವುದರ ಫಲವನ್ನು ಹೇಳುತ್ತಾರೆ; ಸಮಸ್ತ ಪದಾರ್ಥಗಳ ಸ್ವರೂಪವನ್ನು ತಿಳಿಸಿಕೊಡುವಂಥ ಈ ಗ್ರಂಥವು ಪಂಚಾಸ್ತಿಕಾಯವಿದೆ. ಯಾವನಾದರೂ ಪುರುಷನು ಅದನ್ನು ಶಬ್ದ ಹಾಗೂ ಅರ್ಥದ ಮೂಲಕ ಒಳ್ಳೆಯ ರೀತಿಯಿಂದ ತಿಳಿದುಕೊಂಡರೆ ಅವನು ಭೇದಜ್ಞಾನ ಪಡೆಯುತ್ತಾನೆ. ಯಾವನೋ ಆತ್ಮನು ಯಾವುದೇ ಪರದಲ್ಲಿ ಲಾಭ ಹಾನಿ ಮಾಡಲು ಸಮರ್ಥನಿಲ್ಲ. ಕಾಲ ಪದಾರ್ಥವಿದೆ, ಆದರೆ ಅದರ ಕಾರಣದಿಂದ ಇನ್ನೊಂದು ದ್ರವ್ಯದಲ್ಲಿ ಪರಿಣಮನವಾಗುವುದಿಲ್ಲ. ಪ್ರತಿಯೊಂದು ದ್ರವ್ಯವು ತನ್ನ ಕಾರಣದಿಂದ ತನ್ನ ಸೀಮೆಯಲ್ಲಿ ವರ್ತಿಸುತ್ತದೆ. ಕರ್ಮವು ಕರ್ಮರೂಪದಿಂದ ಇದೆ, ಶರೀರವು ಶರೀರ ರೂಪದಿಂದ ಇದೆ. ಬೇರೆ ಆತ್ಮನು ಬೇರೆರೂಪದಿಂದ ಇದ್ದಾನೆ, ನಾನು ನನ್ನ ರೂಪದಿಂದ ಇದ್ದೇನೆ. ಯಾವನಾದರೂ ಒಬ್ಬನು ನನ್ನ ನಿಂದೆ ಮಾಡಿದರೆ ಆ ಶಬ್ದಗಳು ಮತ್ತು ಅವನ ಭಾವವು ನನಗೆ ಅಹಿತವನ್ನು ಮಾಡುವುದಿಲ್ಲ ಮತ್ತು ಯಾವನೋ ಓರ್ವನು ನನ್ನ ಹಿತದ ಭಾವನೆ ಮಾಡಿದರೆ ಅದರಿಂದ ನನ್ನ ಹಿತವಾಗುವುದಿಲ್ಲ. ನನ್ನ ಕಾರಣದಿಂದ ನನ್ನ ಹಿತ ಅಥವಾ ಅಹಿತವಿದೆ. ನನ್ನ ದುಃಖದ ಕಾರಣವು ನನ್ನ ರಾಗ ದ್ವೇಷಗಳಿವೆ ಮತ್ತು ನನ್ನ ಶಾಂತಿಯ ಕಾರಣನು ನಾನಿದ್ದೇನೆ. ಪರಪದಾರ್ಥಗಳು ಶಾಂತಿಯ ಅಥವಾ ದುಃಖದ ಕಾರಣವಾಗಿಲ್ಲವೆಂದು ಯಥಾರ್ಥ ರೀತಿಯಿಂದ ಶಾಸ್ತ್ರಗಳನ್ನು ತಿಳಿದುಕೊಳ್ಳಬೇಕಾಗುವುದು.

ಇತರರು ನನ್ನ ನಿಂದೆ ಮಾಡುವುದರಿಂದ ನನಗೆ ದುಃಖವಾಗುತ್ತದೆ ಮತ್ತು ಪ್ರಶಂಸೆ ಮಾಡುವುದರಿಂದ ನನಗೆ ರಾಗವಾಗುತ್ತದೆ, ಕರ್ಮದ ಕಾರಣದಿಂದ ವಿಕಾರವಾಗುತ್ತದೆ, ಸ್ತ್ರೀ-ಕುಟುಂಬ, ಧನ-ಕನಕ, ಭಕ್ಷ್ಯ-ಭೋಜನ ಮೊದಲಾದವುಗಳಿಂದ ಸುಖವಾಗುತ್ತದೆಯೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ. ಯಾವನು ಪ್ರತಿಯೊಂದು ಪದಾರ್ಥವನ್ನು ಭಿನ್ನಭಿನ್ನವಾಗಿ ತಿಳಿದುಕೊಳ್ಳುವುದಿಲ್ಲ ಅವನು ಶಾಸ್ತ್ರವನ್ನು, ಪದಾರ್ಥವನ್ನು ಅಥವಾ ಜ್ಞಾನಸ್ವಭಾವವನ್ನು ತಿಳಿದುಕೊಳ್ಳುವುದಿಲ್ಲ.

ಮೂರನೆಯ ಗಾಥೆಯಲ್ಲಿ ೧) ಶಬ್ದಸಮಯ ೨) ಪದಾರ್ಥಸಮಯ ೩) ಜ್ಞಾನಸಮಯದ ಮಾತು ಮಾಡಲಾಗಿದ್ದು ಇಲ್ಲಿ ಕ್ರಮದಿಂದ ಹೇಳಲಾಗಿದೆ. ಆರೂ ದ್ರವ್ಯಗಳನ್ನೂ ಸ್ವತಂತ್ರವೆಂದು ಹೇಳಿ ವೀತರಾಗತೆಯನ್ನು ತಿಳಿಸಲಾಗಿದೆ. ಅದು ಶಬ್ದಸಮಯವಿದೆ. ವಸ್ತುಕೂಡ ಹೀಗೇ ಇದೆ ಮತ್ತು ಜ್ಞಾನಕೂಡ ಹೀಗೇ ತಿಳಿದುಕೊಂಡಿದೆ. ಅಯ್ಯಾ! ನನ್ನ ಆತ್ಮನಿಗೆ ಯಾವುದೇಪರದ ಜತೆಯಲ್ಲಿ ಸಂಬಂಧವಿಲ್ಲ, ಯಾರನ್ನಾದರೂ ತಡೆಯುವುದು ಅಥವಾ ಅವನ ವಿಕಾಸ ಮಾಡುವುದು ಅದು ನನ್ನ ಕೈಯ್ಯೊಳಗೆ ಇಲ್ಲ, ನಾನಂತೂ ಸ್ವತಂತ್ರನಿದ್ದೇನೆ. ಈ ಪ್ರಕಾರವಾಗಿ ಮೂರರ ಫಲವು ವೀತರಾಗತೆಯಿದೆ.

ಉತ್ತಮ ಸಂಹನನವಿದ್ದರೆ ಕೇವಲಜ್ಞಾನವಾಗುವುದು, ಒಳ್ಳೆಯ ಕಾಲವಿದ್ದರೆ ಧರ್ಮವಾಗುವುದು, ಯಾರಾದರೂ ನಿಂದೆ ಮಾಡಿದರೆ ದ್ವೇಷವಾಗುವುದು, ಯಾರಾದರೂ ಪ್ರಶಂಸೆ ಮಾಡಿದರೆ ರಾಗವಾಗುವುದೆಂದು ಮನ್ನಿಸುವವನಿಗೆ ಶಾಸ್ತ್ರಕಾರರು ಹೇಳುವುದೇನೆಂದರೆ ಅಯ್ಯಾ! ಈ ಪ್ರಕಾರದ ನಿನ್ನ ಮೂಢತೆಯನ್ನು ನಿಲ್ಲಿಸಿ ಬಿಡು, ನಿನ್ನ ಒಂದು ಅಕ್ಷರವು ಕೂಡ ಸತ್ಯವಿಲ್ಲ. ನೀನು ಪದಾರ್ಥಗಳನ್ನು ತಿಳಿದುಕೊಳ್ಳುವುದಿಲ್ಲ. ದೇವ-ಶಾಸ್ತ್ರ-ಗುರುಗಳನ್ನು ತಿಳಿದುಕೊಳ್ಳುವುದಿಲ್ಲ, ನಿನ್ನ ಆತ್ಮನನ್ನು ತಿಳಿದುಕೊಳ್ಳುವುದಿಲ್ಲ.

ಆರೂ ದ್ರವ್ಯಗಳನ್ನು ಹೇಗೆ ಇವೆ ಹಾಗೆ ತಿಳಿದುಕೊಳ್ಳು. ಯಾವುದಕ್ಕೂ ಯಾವುದರ ಅಪೇಕ್ಷೆಯಿಲ್ಲ, ಪ್ರತಿಯೊಂದು ತತ್ತ್ವವು ಪೃಥಕ್ ಇದೆ. ಶರೀರ, ಮನಸ್ಸು, ವಾಣಿ, ಮನೆ, ಧನಗಳೆಲ್ಲವು ಸ್ವತಂತ್ರವಿವೆ. ಯಾವುದರ ಕಾರಣದಿಂದ ಯಾವುದೂ ಇಲ್ಲ. ಇನ್ನೊಂದರ ಕಾರಣದಿಂದ ನಾನಿದ್ದೇನೆ ಮತ್ತು ಇನ್ನೊಂದರಿಂದ ನನ್ನ ಸುಖವಿದೆಯೆಂದು ಮನ್ನಿಸಿದರೆ ಪರದಿಂದ ಪೃಥಕ್ಕತೆಯು ಉಳಿಯುವುದಿಲ್ಲ.

ಮೂಲಗಾಥೆಯಲ್ಲಿ ವಿಜ್ಞಾನ ಶಬ್ದವಿದೆ ಅದರ ಅರ್ಥವು ಒಳ್ಳೆಯ ರೀತಿಯಿಂದ ತಿಳಿದುಕೊಂಡಿದ್ದೆಂದು ಮಾಡಲಾಗಿದೆ. ನೋಡಿರಿ ! ಇದು ಮೂಲ ಮಾತು ಇದೆ. 'ಒಳ್ಳೆಯ ಪ್ರಕಾರದಿಂದ ತಿಳಿದುಕೊಂಡು' ಎಂದು ಹೇಳಿದೆ. ಕೇವಲ ಧಾರಣದ ಮಾತು ಇಲ್ಲ. ಯಾವನಿಗೆ ವಸ್ತುವಿನ ಅಭಿರುಚಿಯಾಗಿಲ್ಲ ಅವನು ಒಳ್ಳೆಯ ಪ್ರಕಾರದಿಂದ ಸ್ವರೂಪವನ್ನು ತಿಳಿದುಕೊಂಡಿಲ್ಲ. ಅಯ್ಯೊ ! ನನ್ನ ಆತ್ಮನು ಸುಖ ಮತ್ತು ಜ್ಞಾನಸ್ವರೂಪನಿದ್ದಾನೆ. ಜಗತ್ತಿನ ಯಾವುದೇ ಸಾಧನದಿಂದ ಶಾಂತಿ ಅಥವಾ ಅಶಾಂತಿಯಿಲ್ಲ, ಯಾರಿಂದಲೂ ನನ್ನ ಧರ್ಮವು ಪ್ರಕಟವಾಗುವುದಿಲ್ಲ ಅದರಂತೆ ಲೂಟಿಯಾಗಿ ಹೋಗುವುದಿಲ್ಲ. ಎಷ್ಟು ಆಸಕ್ತಿಯಿದೆ ಅಷ್ಟು ಅಧರ್ಮವಿದೆ ಮತ್ತು ಎಷ್ಟು ಸ್ವಭಾವವು ಪ್ರಕಟವಾಗಿದೆ ಅಷ್ಟು ಧರ್ಮವಿದೆ. ಈ ಪಂಚಾಸ್ತಿಕಾಯದ ಸ್ವರೂಪವನ್ನು ತಿಳಿದುಕೊಳ್ಳುವುದರಿಂದ ಭೇದವಿಜ್ಞಾನವಾಗುತ್ತದೆ. ಪರದ ಕಾರಣದಿಂದ ವಿಕಾರವಾಗುವುದಿಲ್ಲ, ವಿಕಾರವು ಅದು ನನ್ನ ಜೀವಾಸ್ತಿಕಾಯದ ಅಂಶವಿದೆ. ಹೀಗೆ ಪರದಿಂದ ಪೃಥಕತೆಯು ಜ್ಞಾನವಾದ ಮೇಲೆ ವಿಕಾರವು ಪರ್ಯಾಯದಲ್ಲಿದೆಯೇ ವಿನಹ ನನ್ನ ಶುದ್ಧ ತ್ರಿಕಾಲೀ ಸ್ವಭಾವದಲ್ಲಿ ಇಲ್ಲವೆಂದು ಧರ್ಮಾತ್ಮನು ವಿಚಾರ ಮಾಡಿ ಭೇದಜ್ಞಾನ ಮಾಡುತ್ತಾನೆ. ಅವನನ್ನು ಒಳ್ಳೆಯ ಪ್ರಕಾರದಿಂದ ಶಾಸ್ತ್ರ ತಿಳಿದವನೆಂದು ಹೇಳಲಾಗುತ್ತದೆ.

ಅಜ್ಞಾನಿಯು ಜಗತ್ತಿಗೆ ತಿಳಿಸಿಕೊಡುವ ಸಲುವಾಗಿ ಶಾಸ್ತ್ರಾಭ್ಯಾಸ ಮಾಡುತ್ತಾನೆ. ಶಾಸ್ತ್ರವನ್ನು ಕೇವಲ ಶುಭರಾಗ ಸಹಿತ ತಿಳಿದುಕೊಂಡರೆ ಅದರಿಂದ ಪುಣ್ಯ ಬಂಧವಿದೆ, ಆದರೆ ಧರ್ಮವಿಲ್ಲ ಮತ್ತು ಯಾವುದೇ ಒಂದು ಅಸ್ತಿಕಾಯದ ಕೆಲವಂಶವನ್ನು ಇನ್ನೊಂದರಲ್ಲಿ ಸೇರಿಸಿದರೆ ಆರು ದ್ರವ್ಯಗಳ ಪೃಥಕ್ಕತೆಯನ್ನು ಮನ್ನಿಸದಿದ್ದರೆ ಅವನಿಗೆ ವಾಣಿಯು ದೊರಕಲಿಲ್ಲ, ಆರುದ್ರವ್ಯಗಳ ಸ್ವರೂಪವು ದೊರಕಲಿಲ್ಲ ಮತ್ತು ಅವನಿಗೆ ನಿಜವಾದ ಜ್ಞಾನವಾಗಲಿಲ್ಲ.

ಅದಕ್ಕಾಗಿಯೇ ಇಲ್ಲಿ 'ಒಳ್ಳೆಯ ರೀತಿಯಿಂದ' ಶಬ್ದದ ಉಪಯೋಗ ಮಾಡಲಾಗಿದೆ. ಒಳ್ಳೆಯ ಪ್ರಕಾರದಿಂದ ತಿಳಿದುಕೊಳ್ಳುವ ಮಾತು ಇದೆ. ಕೇವಲ ಧಾರಣಾದ ಮಾತು ಇಲ್ಲ. ಧರ್ಮಾತ್ಮ ಜೀವನು ಸ್ವರ್ಗದಲ್ಲಿದ್ದರೂ ಕೂಡ ಇಂದ್ರಾಣಿಯಿಂದ ಸುಖವಿದೆಯೆಂದು ಮನ್ನಿಸುವುದಿಲ್ಲ. ಏಕೆಂದರೆ ಅವಳು ಪರ ಇದ್ದಾಳೆ. ನರಕದಲ್ಲಿದ್ದರೂ ಕೂಡ ಅಗ್ನಿಯನ್ನು ದುಃಖದ ಕಾರಣವೆಂದು ಮನ್ನಿಸುವುದಿಲ್ಲ ಏಕೆಂದರೆ ಅದು ಪರವಿದೆ. ಧರ್ಮಾತ್ಮನು ತಿರ್ಯಂಚನಾಗಿದ್ದರೂ ಕೂಡ ಪ್ರಹಾರ ಮೊದಲಾದ ಕಾರಣದಿಂದ ದುಃಖ ಮನ್ನಿಸುವುದಿಲ್ಲ ಕಾರಣವೇನೆಂದರೆ ಅದೆಲ್ಲವು ಪರವಿದೆ. ಧರ್ಮಾತ್ಮ ಜೀವನು ಬೇಕಾದ ಗತಿಯಲ್ಲಿದ್ದರೂ ಕೂಡ ನನ್ನ ಸುಖವು ನನ್ನಲ್ಲಿದೆಯೆಂದು ಮನ್ನಿಸುತ್ತಾನೆ.

ಅಜ್ಞಾನೀ ಜೀವರುಗಳು ಶಕೆಯ ಕಾರಣದಿಂದ ಅತ್ಯಂತ ಆಕುಲತೆಯಾಗುತ್ತದೆಯೆಂದು ಮನ್ನಿಸುತ್ತಾರೆ. ಸೋದರನೇ ! ನೀನು ಆಕುಲತೆ ಮಾಡುವುದರಿಂದ ಆಗುತ್ತದೆ ಮತ್ತು ಯಾವನೋ ಓರ್ವನು ಶರೀರವನ್ನು ಧರ್ಮದ ಸಾಧನವೆಂದು ಮನ್ನಿಸಿ ಸಾಧನೆ ಮಾಡುತ್ತಾನೆ ಮತ್ತು ಶರೀರವು ಗಟ್ಟಿಮುಟ್ಟಾಗಿದ್ದರೆ ಧರ್ಮವಾಗುತ್ತದೆಂದು ಮನ್ನಿಸುತ್ತಾನೆ. ಇನ್ನೂ ಮನ್ನಿಸುವುದೇನೆಂದರೆ ಶರೀರದಲ್ಲಿ ನೂರೈದು ಡಿಗ್ರಿ ಜ್ವರ ಬಂದು ಬಿಟ್ಟರೆ ಸಾಮಾಯಿಕವಾಗುವುದಿಲ್ಲ ಎಂದು ಹೇಳುತ್ತಾನೆ. ಅವನಿಗೆ ತಿಳಿಸಿಕೊಡುವುದೇನೆಂದರೆ ಸೋದರನೇ ! ನೀನು ಅಜ್ಞಾನಿಯಿರುವೆ, ಜ್ವರವು ಶರೀರಕ್ಕೆ ಬಂದಿದೆ, ಆತ್ಮನಿಗೆ ಜ್ವರವು ಬರುವುದಿಲ್ಲ. ಆತ್ಮನು ಶರೀರದಿಂದ ಭಿನ್ನನಿದ್ದಾನೆ ಆತ್ಮನ ಆಧಾರದಿಂದ ಸಾಮಾಯಿಕವಾಗುತ್ತದೆ ಎಂಬುದರ ಅರಿವು ನಿನಗೆ ಇಲ್ಲ, ಅದನ್ನು ತಿಳಿದುಕೊಳ್ಳು !

ಇಷ್ಟರ ಸಲುವಾಗಿಯೇ ಇಲ್ಲಿ ಮೊದಲು ಭೇದಜ್ಞಾನ ಮಾಡುವುದರ ಮಾತು ಹೇಳಲಾಗಿದೆ. ಧರ್ಮಾತ್ಮ ಜೀವನು ಆರುದ್ರವ್ಯಗಳನ್ನು ಸ್ವತಂತ್ರವೆಂದು ಮನ್ನಿಸುತ್ತಾನೆ. ವಿಕಾರವು ಪರದ ಕಾರಣದಿಂದ ಇಲ್ಲ, ಅದು ನನ್ನ ಕಾರಣದಿಂದಿದೆ, ಆದರೆ ಅದು ಪರ್ಯಾಯದಲ್ಲಿ ಇದೆ, ದ್ರವ್ಯ-ಗುಣಗಳಲ್ಲಿ ಇಲ್ಲ. ಹೀಗೆ ಪರದಿಂದ ಭಿನ್ನವಾಗಿ ವಿಚಾರಿಸುವುದೇನೆಂದರೆ ಶುಭಾಶುಭ ಭಾವಗಳು ಹೇಯವಿವೆ ಮತ್ತು ಶುದ್ಧ ಆತ್ಮ ಸ್ವಭಾವವು ಉಪಾದೇಯವಿದೆ. ಚೈತನ್ಯಸ್ವಭಾವವು ನಿರ್ಮಲವಿದೆಯೆಂದು ಯಾವನು ದೃಢ ಮಾಡಿದ್ದಾನೆ ಅವನು ತಿಳಿಯುವುದೇನೆಂದರೆ ಅವಿದ್ಯೆಯಿಂದ ಉತ್ಪನ್ನವಾಗುವಂಥ ರಾಗ-ದ್ವೇಷಗಳ ಪರಿಣಾಮವು ಆತ್ಮಸ್ವರೂಪದಲ್ಲಿ ವಿಕಾರವನ್ನುಂಟು ಮಾಡುತ್ತವೆ. ಆದರೆ ಅದು ನನ್ನ ನಿಜವಾದ ಸ್ವರೂಪವಲ್ಲ. ಇಲ್ಲಿ ಕರ್ಮದಿಂದ ರಾಗ-ದ್ವೇಷಗಳಾಗುತ್ತವೆಯೆಂದು ಹೇಳಿಲ್ಲ, ಅನಾದಿ ಅವಿದ್ಯೆಯಿಂದ ರಾಗ-ದ್ವೇಷಗಳಾಗುತ್ತವೆ, ಎಂದರೆ ಆರು ದ್ರವ್ಯಗಳ ಪೃಥಕ್ಕತೆಯ ಅರಿವಿಲ್ಲದಿರುವುದು ಅದು ಅನಾದಿಯ ಅವಿದ್ಯೆಯಿದೆ, ಅದರಿಂದ ವಿಕಾರವುತ್ಪನ್ನವಾಗುತ್ತದೆ. ಈಗ ನನ್ನ ಕಾರಣದಿಂದ ಹಾಸ್ಯ, ರತಿ, ಅರತಿ, ಯಶ, ಅಯಶದ ಮನೋಭಾವದಿಂದ ಆಗುತ್ತವೆ. ಕರ್ಮದ ಕಾರಣದಿಂದ ಇಲ್ಲವೆಂಬುದರ ಅರಿವಾಯಿತು. ವ್ಯವಹಾರ ರತ್ನತ್ರಯದ ಪರಿಣಾಮವು ಕೂಡ ಚೈತನ್ಯ ಸ್ವಭಾವದ ನಿರ್ಮಲತೆಯನ್ನು ಮಲಿನ ಮಾಡುವಂಥದ್ದಿದೆ. ಹೀಗೆ ಯಾವನು ಯಥಾರ್ಥ ಜ್ಞಾನ ಮಾಡಿಕೊಳ್ಳುತ್ತಾನೆ ಅವನ ಜ್ಞಾನವು ಸತ್ಯವಿದೆ.

ಜ್ಞಾನ ಸ್ವಭಾವದಲ್ಲಿ ವಿಕಾರವಿಲ್ಲ, ವಿಕಾರವು ನನ್ನ ಜಾತಿಯದಲ್ಲ, ವಿಕಾರವು ಜಡದ್ದಿದೆ, ಅದು ಚೈತನ್ಯ ಸ್ವರೂಪದ್ದಿಲ್ಲವೆಂಬ ದ್ರವ್ಯದೃಷ್ಟಿ ಮಾಡಿಸುವ ಕಥನವು ಸಮಯಸಾರದಲ್ಲಿ ಬರುತ್ತದೆ.

ಇಲ್ಲಿ ಪಂಚಾಸ್ತಿಕಾಯದಲ್ಲಿ ಶುಭಾಶುಭರಾಗವು ನಿನ್ನ ಜೀವಾಸ್ತಿಕಾಯದ್ದಿದೆ, ಪರದ ಕಾರಣದಿಂದ ಇಲ್ಲ, ನಿನ್ನ ಅಂಶವಿದೆಯೆಂದು ಜ್ಞಾನ ಮಾಡಿಸಿ ಈಗ ಹೇಳುವುದೇನೆಂದರೆ ಆ ಶುಭಾಶುಭ ಭಾವಗಳು ಚೈತನ್ಯ ಸ್ವರೂಪವನ್ನು ಮಲಿನ ಮಾಡುವಂಥವುಗಳಿವೆ-ಎಂದು ಹೇಳಿ ತೆಗೆದು ಹಾಕಲಾಗಿದೆ. ಮೊದಲು ರಾಗ-ದ್ವೇಷಗಳು ನಿನ್ನ ಅಸ್ತಿಕಾಯದಲ್ಲಿವೆಯೆಂದು ಸಿದ್ಧಮಾಡಿದೆ, ನಂತರ ತೆಗೆದು ಹಾಕಲಾಗಿದೆ.

ವ್ಯವಹಾರ ರತ್ನತ್ರಯದ ಸಾಧನವನ್ನು ಕೂಡ ಹಾರಿಸಿಬಿಟ್ಟಿದ್ದಾರೆ, ಏನು ಮಾಡುವುದೆಂದು ಕೇಳುತ್ತಾರೆ. ಅವರಿಗೆ ಹೇಳುವುದೇನೆಂದರೆ ಅಯ್ಯಾ ಸೋದರನೇ ! ನಿನ್ನ ಆತ್ಮನು ನಿಜವಾದ ಸಾಧನನಿದ್ದಾನೆ ಎಷ್ಟು ರಾಗ-ದ್ವೇಷಗಳಾಗುತ್ತವೆ ಅಷ್ಟು ಮಲಿನತೆಯನ್ನುಂಟು ಮಾಡುತ್ತವೆ. ಆ ಮಲಿನತೆಯು ಪರದ ಕಾರಣದಿಂದ ಇಲ್ಲ. ಆದರೆ ನಿನ್ನ ಕಾರಣದಿಂದ ಇದೆ. ನಿನಗೆ ಹಾನಿಯನ್ನುಂಟು ಮಾಡುವಂಥದ್ದಿದೆ. ಅದಕ್ಕಾಗಿ ನೀನು ಜ್ಞಾನ ಸ್ವಭಾವದಲ್ಲಿ ಸ್ಥಿರಗೊಳ್ಳು ! ಎಂದರೆ ಅದರಿಂದ ಧರ್ಮ ಮತ್ತು ಶಾಂತಿಯಾಗುವಂತಿದೆ.

ಈ ಹೆಂಡಿರು ಮಕ್ಕಳನ್ನು ಏನು ಮಾಡುವುದು, ಇವರದೇ ನನಗೆ ಚಿಂತೆಯಾಗಿದೆಯೆಂದು ಕೆಲವರು ಕೇಳುತ್ತಾರೆ. ಎಲ್ಲೈ ಸೋದರನೇ ! ಅವರ ಆತ್ಮನು ಭಿನ್ನನಿದ್ದಾನೆ. ಅವರ ಕಾರಣದಿಂದ ಚಿಂತೆಯಾಗುತ್ತದೆಂಬ ಮನ್ನಣೆಯು ಮಿಥ್ಯಾತ್ವದ ಚಿಂತೆಯಿದೆ. ಜ್ಞಾನಿಗೆ ದುರ್ಬಲತೆಯ ಕಾರಣದಿಂದ ಚಿಂತೆಯಾಗುತ್ತದೆ, ಆದರೆ ಪರದ ಕಾರಣದಿಂದ ಚಿಂತೆಯನ್ನು ಮನ್ನಿಸುವುದಿಲ್ಲ. ಇತರ ಆತ್ಮ ಮತ್ತು ಪರಪದಾರ್ಥಗಳಂತೂ ನನ್ನ ಸ್ವರೂಪವಿಲ್ಲ. ಆದರೆ ನನ್ನ ಕಾರಣದಿಂದ ನನ್ನಲ್ಲಿ ಚಿಂತೆಯಾಗುತ್ತದೆ ಅದು ಕೂಡ ನನ್ನ ಸ್ವಭಾವವಲ್ಲ. ನಾನಂತೂ ಜ್ಞಾನ ಸ್ವಭಾವಿಯಿದ್ದೇನೆಂದು ಜ್ಞಾನಿಯು ಮನ್ನಿಸುತ್ತಾನೆ. ಹೀಗೆ ಜ್ಞಾನಿಯು ಜ್ಞಾನದಲ್ಲಿದ್ದುಕೊಂಡು ರಾಗವನ್ನು ತಿಳಿಯುತ್ತಾನೆ. ಯಾವ ಭಾವದಿಂದ ತೀರ್ಥಂಕರ ನಾಮಕರ್ಮವು ಕಟ್ಟುತ್ತದೆ ಆ ರಾಗವು ನನ್ನ ಆತ್ಮನಲ್ಲಿ ಮಲಿನತೆ ಮಾಡುವಂತದ್ದಿದೆ. ಅದು ನನ್ನ ಸ್ವರೂಪವಲ್ಲವೆಂದು ಜ್ಞಾನಿಯು ತಿಳಿಯುತ್ತಾನೆ. ಎಷ್ಟು ವ್ಯವಹಾರವನ್ನು ಶಾಸ್ತ್ರಗಳಲ್ಲಿ ಹೇಳಲಾಗಿದೆ ಅದೆಲ್ಲವೂ ಮಲಿನತೆ

ಮಾಡುವಂಥದ್ದಿದೆ. ಅದರಿಂದ ನನ್ನ ಪರಮಜ್ಯೋತಿಯು ಭಿನ್ನವಿದೆಯೆಂಬ ಭೇದಜ್ಞಾನ ಮಾಡುವುದು ಅದು ಪ್ರಥಮ ಶ್ರದ್ಧೆಯಿದೆ, ಅದುವೇ ಸಮ್ಯಗ್ದರ್ಶನ ಮತ್ತು ಸಮ್ಯಕ್‌ಜ್ಞಾನವಿದೆ.

ಯಾವನು ಪರಪದಾರ್ಥಗಳನ್ನು ಕೂಡ ಬೇರೆಯೆಂದು ಮನ್ನಿಸುವುದಿಲ್ಲ ಆ ಜೀವನು ವಿಕಾರದಿಂದ ಆತ್ಮನು ಭಿನ್ನನಿದ್ದಾನೆ ಮತ್ತು ಆತ್ಮನು ವಿಕಾರವನ್ನು ಬಿಡುವವನಿದ್ದಾನೆಂಬ ಪ್ರತೀತಿಯನ್ನು ಎಲ್ಲಿಂದ ತಂದುಕೊಳ್ಳುವನು ? ಧರ್ಮವು ವಿವೇಕದಿಂದ ಮಾಡಿದರೆ ಆಗುತ್ತದೆ. ಧರ್ಮವು ಹೊರಗಿನಿಂದ ಬರುವುದಿಲ್ಲ ಅಂತರ್ಯದೊಳಗಿಂದ ವಿವೇಕಪೂರ್ವಕವಾದ ಜ್ಞಾನದಿಂದ ಧರ್ಮವು ಪ್ರಕಟವಾಗುತ್ತದೆ.

ಯಾವನಿಗೆ ಭೇದಜ್ಞಾನವಾಗಿದೆ ಅವನು ರಾಗ-ದ್ವೇಷಗಳನ್ನು ದೂರಮಾಡಿ ಚಾರಿತ್ರ ಅಥವಾ ವೀತರಾಗತೆಯನ್ನು ಪ್ರಕಟಮಾಡುತ್ತಾನೆ. ಅವನ ಮಾತು ಇಲ್ಲಿ ನಡೆಯುತ್ತಿದೆ. ಭೇದವಿಜ್ಞಾನವಾದ ನಂತರ ಪರಮ ವಿವೇಕಜ್ಯೋತಿಯು ಪ್ರಕಟವಾಗುತ್ತದೆ ಎಂದರೆ ತನ್ನ ಶುದ್ಧ ಸ್ವಭಾವದಲ್ಲಿ ಸ್ಥಿರತೆ ಮಾಡುತ್ತಾನೆ. ಭೇದವಿಜ್ಞಾನದ ಸಮಯದಲ್ಲಿ ದರ್ಶನ-ಜ್ಞಾನವಿತ್ತು, ಈಗ ಸ್ವಭಾವದಲ್ಲಿ ಏಕಾಗ್ರತೆಯು ಸ್ಥಿರವಾಗಿದೆ ಎಂದರೆ ರಾಗ-ದ್ವೇಷಗಳು ಉತ್ಪನ್ನವಾಗುವುದಿಲ್ಲ. ಹೀಗೆ ಪರಮ ವಿವೇಕ ಜ್ಯೋತಿಯ ಪ್ರಕಟತೆಯಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಮೂರು ಸಮಾವೇಶವಾಗುತ್ತವೆ ಅದು ಮೋಕ್ಷಮಾರ್ಗವಿದೆ. ಆತ್ಮನು ಪರದಿಂದ ಬೇರೆಯಿದ್ದಾನೆಂಬ ಭೇದಜ್ಞಾನವಾಗಿತ್ತು, ಆದರೆ ಪರ್ಯಾಯದಲ್ಲಿ ರಾಗ-ದ್ವೇಷಗಳ ದೋಷವಾಗುತ್ತಿತ್ತು, ಸ್ವಭಾವದಲ್ಲಿ ಏಕಾಗ್ರತೆಯಾದೊಡನೆ ಆ ದೋಷವು ಕೂಡ ಹೊರಟು ಹೋಯಿತು ಎಂದರೆ ಪರಮ ವಿವೇಕ ಜ್ಯೋತಿಯು ಪ್ರಕಟವಾಯಿತು. ಅದರಿಂದ ಕರ್ಮ ಬಂಧವನ್ನುಂಟು ಮಾಡುವಂಥ ರಾಗ-ದ್ವೇಷ ಪರಿಣತಿಯ ನಾಶವಾಗಿ ಹೋಗುತ್ತದೆ. ಮೊದಲು ಅಜ್ಞಾನದ ದಶೆಯಲ್ಲಿ ರಾಗ-ದ್ವೇಷವಾಗುತ್ತಿದ್ದು ಅದರ ಕಾರಣವು ಕರ್ಮವನ್ನು ಸ್ವೀಕರಿಸಿರಲಿಲ್ಲ. ಅಲ್ಲಿ ಅವಿದ್ಯೆಯ ಕಾರಣದಿಂದ ರಾಗ-ದ್ವೇಷಗಳಾಗುತ್ತಿದ್ದುವೆಂದು ಹೇಳಿತು, ಆದರೆ ಯಾವ ನವೀನ ರಾಗ-ದ್ವೇಷಗಳಾಗುತ್ತವೆ ಅವನ್ನು ನವೀನ ಕರ್ಮ ಬಂಧದ ಕಾರಣವೆಂದು ಹೇಳಿತ್ತು. ಹೀಗೆ ಕರ್ಮಬಂಧವನ್ನುಂಟು ಮಾಡುವಂಥ ರಾಗ-ದ್ವೇಷದ ಪರಿಣತಿಯು ಧರ್ಮಾತ್ಮ ಜೀವನು ಸ್ವಭಾವದಲ್ಲಿ ಸ್ಥಿರತೆ ಮಾಡಿದರೆ ಉತ್ಪನ್ನವಾಗುವುದಿಲ್ಲ. ಅದರಿಂದ ಅದು ನಾಶವಾಗಿ ಹೋಗುತ್ತದೆಯೆಂಬ ಕಥನ ಮಾಡಲಾಗಿದೆ. ಹೀಗೆ ಆಗಮದಲ್ಲಿ ಬಂಧದ ರೀತಿಯಿದ್ದು ಅದು ಬಿಟ್ಟುಹೋಗುವುದು ಮತ್ತು ನವೀನ ಬಂಧವಾಗುವುದಿಲ್ಲ.

ಆ ಮಾತನ್ನು ದೃಷ್ಟಾಂತದಿಂದ ತಿಳಿಸಿಕೊಡುತ್ತಾರೆ. ಯಾವ ಪ್ರಕಾರ ಒಂದು ಪರಮಾಣುವಿನ ಒಂದು ಗುಣವು ಸ್ನಿಗ್ಧತೆಯುಳ್ಳದ್ದು ಅಥವಾ ರೂಕ್ಷತೆಯುಳ್ಳದಿದ್ದರೆ ಇನ್ನೊಂದು ಪರಮಾಣುವಿನ ಜತೆಯಲ್ಲಿ ಅಥವಾ ಸ್ಕಂಧದ ಜತೆಯಲ್ಲಿ ಬಂಧಾವಸ್ಥೆಗೆ ಪ್ರಾಪ್ತವಾಗುವುದಿಲ್ಲ. ಅದೇ ಪ್ರಕಾರ ಜೀವವು ತನ್ನಲ್ಲಿ ಪರಮ ವಿವೇಕ ಜ್ಯೋತಿಯನ್ನು ಪ್ರಕಟಪಡಿಸಿಕೊಂಡು ಸ್ವರೂಪದಲ್ಲಿ ಸ್ಥಿರವಾಗಿಬಿಡುತ್ತದೆ ಮತ್ತು ರಾಗ-ದ್ವೇಷಗಳನ್ನು ಉತ್ಪನ್ನ ಮಾಡುವುದಿಲ್ಲ. ಆದುದರಿಂದ ತನ್ನ ಸ್ವರೂಪವನ್ನು ತಿಳಿದುಕೊಂಡು ಅಂತರ್ಯದಲ್ಲಿ ಸ್ಥಿರಗೊಳ್ಳುವುದು ಆ ಕ್ರಿಯೆಯು ಅಬಂಧದ ಕಾರಣವಿದೆ. ಉಳಿದ ಎಲ್ಲ ಕ್ರಿಯೆಗಳು ಅವು ಬಂಧದ ಕಾರಣವಿವೆ, ಇದು ಚಾರಿತ್ರವಿದೆ. ತನ್ನ ಆತ್ಮನಲ್ಲಿ ಏಕಾಗ್ರವಾಗುವುದು, ಸ್ಥಿರವಾಗುವುದು ಅದು ಚಾರಿತ್ರವಿದೆ. ದೇಹದ ಕ್ರಿಯೆಯಾಗಲಿ ಅಥವಾ ಪಂಚ ಮಹಾವ್ರತಗಳಾಗಲಿ ಅದು ಚಾರಿತ್ರವಲ್ಲ, ಪೂರ್ವದಲ್ಲಿ ಬದ್ಧವಾದ ಕರ್ಮಗಳು ಸಂಯೋಗದಲ್ಲಿ ಬಂದು ಉದುರಿ ಹೋಗುತ್ತವೆ ಮತ್ತು ನಂತರ ಜೀವವು ನಾಲ್ಕು ಗತಿಗಳ ದುಃಖಗಳಿಂದ ನಿವೃತ್ತವಾಗಿ ಮೋಕ್ಷ ಪದವನ್ನು ಪಡೆಯುತ್ತದೆ. ತೀರ್ಥಂಕರ ಪ್ರಕೃತಿ, ಸಮವಸರಣ ಮೊದಲಾದ ಸಂಯೋಗಗಳು ಬಂದು ಬಿಟ್ಟುಹೋಗುತ್ತವೆ ಮತ್ತು ಭಗವಂತರು ಮೋಕ್ಷಕ್ಕೆ ಹೊರಟು ಹೋಗುತ್ತಾರೆ ಇನ್ನು ವೃಷಭನಾಥ ಭಗವಂತರು ಮಹಾನ ಸಾಧುಗಳಿದ್ದರು ಮತ್ತು ಮಹಾವೀರ ಭಗವಂತರು ಸಾಮಾನ್ಯ ಸಾಧುಗಳಿರುವುದರಿಂದ

ಅವರ ಮೋಕ್ಷ ಪದದಲ್ಲಿ ಯಾವುದಾದರೂ ಅಂತರವಿರಬಹುದಲ್ಲವೇ ? ಅಯ್ಯಾ ಸೋದರನೇ ! ಇದೆಲ್ಲವೂ ಬಾಹ್ಯದಲ್ಲಿನ ಮಾತುಗಳಿವೆ. ಸಮವಸರಣ ಮೊದಲಾದವುಗಳೆಲ್ಲವೂ ಇಲ್ಲಿಯೇ ಬಿದ್ದುಕೊಂಡಿರುತ್ತವೆ. ಕರ್ಮಗಳು ಸಂಯೋಗದಲ್ಲಿ ಬಂದು ಉದುರಿಹೋಗುತ್ತವೆ. ಭಗವಂತರು ಮುಕ್ತ ದಶೆಯನ್ನು ಪಡೆಯುತ್ತಾರೆ. ಮೋಕ್ಷದಶೆಯಲ್ಲಿ ಯಾವುದೇ ಅಂತರವಿರುವುದಿಲ್ಲ. ಅಲ್ಲಿ ಇರುವವರೆಲ್ಲರು ಎಂದರೆ ಮುಕ್ತಾತ್ಮರುಗಳೆಲ್ಲರು ಸಂಪೂರ್ಣ ಶುದ್ಧ ಜ್ಞಾನಾನಂದದ ಅನುಭವ ಮಾಡುತ್ತಾರೆ.

ಈ ಪ್ರಕಾರ ಮೊದಲನೆಯ ಭಗವಂತರ ವಾಣಿಯ ಸ್ಥಾಪನೆಯಾಯಿತು, ಅದರೊಳಗಿಂದ ರಚಿಸಿದ ಶಾಸ್ತ್ರಗಳು ಸತ್ಯವಿವೆಯೆಂದು ಹೇಳಲಾಗಿದೆ ಅದರಲ್ಲಿ ತಿಳಿಸಿರುವ ಆರು ದ್ರವ್ಯಗಳ ಪೃಥಕತೆಯನ್ನು ತಿಳಿದುಕೊಂಡು ಕೇವಲ ಧಾರಣ ಮಾಡುವುದಿಲ್ಲ, ಆದರೆ ವಿಕಾರವನ್ನು ಮಲಿನವೆಂದು ತಿಳಿಯಬೇಕು ಮತ್ತು ಭೇದ ವಿಜ್ಞಾನವನ್ನು ಪ್ರಕಟ ಮಾಡಬೇಕು. ಅನಂತರ ಪರಮ ಜ್ಯೋತಿಯನ್ನು ಪ್ರಕಟಪಡಿಸಿ ರಾಗ-ದ್ವೇಷಗಳ ನಾಶಮಾಡಿ ಮೋಕ್ಷ ಪದವನ್ನು ಪಡೆಯುತ್ತಾರೆ. ಈ ಪ್ರಕಾರ ಪೂರ್ಣ ಮೋಕ್ಷಮಾರ್ಗದ ಕ್ರಮ ತಿಳಿಸಿಕೊಡಲಾಗಿದೆ.

ಅನಾದಿಯಿಂದ ಅಜ್ಞಾನೀ ಜೀವನು ರಾಗ-ದ್ವೇಷಗಳಿಂದ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಲಿದ್ದಾನೆ. ಅವನು ಒಂದು ವೇಳೆ ಭೇದಜ್ಞಾನ ಮಾಡಿದರೆ ಧರ್ಮದಶೆಯನ್ನು ಪಡೆದುಕೊಳ್ಳುತ್ತಾನೆ. ನಾನು ಆನಂದ ಸ್ವರೂಪನಾದ ಆತ್ಮನಿದ್ದೇನೆ. ಪರಪದಾರ್ಥಗಳ ಜತೆಯಲ್ಲಿ ನನ್ನದು ಯಾವುದೇ ಪ್ರಕಾರದ ಸಂಬಂಧವಿಲ್ಲ. ಅದರಂತೆ ಯಾವ ರಾಗ-ದ್ವೇಷಗಳಾಗುತ್ತವೆ ಅವು ಕ್ಷಣಿಕವಾದ ಉಪಾಧಿಗಳಿವೆ. ನನ್ನ ಸ್ವರೂಪವಂತೂ ಜ್ಞಾನ ಮತ್ತು ಆನಂದವಿದೆಯೆಂದು ಪರದಿಂದ ಭಿನ್ನವಾಗಿ ನನ್ನ ಸ್ವರೂಪವು ಆಕುಲತೆಯಿಂದ ರಹಿತವಾಗಿದೆಯೆಂದು ವಿವೇಕ ಮಾಡಿಕೊಂಡು ತನ್ನ ಸ್ವಭಾವದಲ್ಲಿ ಏಕಾಗ್ರತೆಯನ್ನು ಸಾಧಿಸಿದರೆ ಮೋಕ್ಷ ದಶೆಯನ್ನು ಪಡೆಯುತ್ತಾನೆ. ಇದನ್ನು ದೃಷ್ಟಾಂತದ ಮೂಲಕ ತಿಳಿಸಿಕೊಡುತ್ತಾರೆ.

ನೀರು ಅಗ್ನಿಯ ನಿಮಿತ್ತದಿಂದ ಉಷ್ಣವಾಗುತ್ತದೆ. ಇಲ್ಲಿ ಆ ನೀರಂತೂ ತನ್ನ ಯೋಗ್ಯತೆಯಿಂದಲೇ ಉಷ್ಣವಾಗುತ್ತದೆ. ಅದು ಅಗ್ನಿಯ ಕಾರಣದಿಂದ ಉಷ್ಣವಾಗುತ್ತಿದ್ದರೆ ಅಲ್ಲಿಯೇ ಇರುವಂಥ ಧರ್ಮ, ಅಧರ್ಮ, ಆಕಾಶ ಮತ್ತು ಕಾಲವು ಕೂಡ ಉಷ್ಣವಾಗಬೇಕಾಗುವುದು. ಆದರೆ ಅವುಗಳ ಯೋಗ್ಯತೆಯು ಉಷ್ಣವಾಗುವುದಿಲ್ಲದಿರುವುದರಿಂದ ಅವು ಉಷ್ಣವಾಗುವುದಿಲ್ಲವೆಂದ ಮೇಲೆ ಅಗ್ನಿಯು ಆ ನೀರಿಗೆ ನಿಮಿತ್ತ ಕೂಡ ಆಗುವುದಿಲ್ಲ. ಅಲ್ಲಿ ನೀರು ಸ್ವಯಂ ತನ್ನ ಯೋಗ್ಯತೆಯಿಂದ ಉಷ್ಣವಾಗುತ್ತದೆಯೆಂದ ಮೇಲೆ ಆಗ ನೀರು ಅಗ್ನಿಯ ಸಂಬಂಧದಿಂದ ಉಷ್ಣವಾಯಿತೆಂದು ಹೇಳಲಾಗುತ್ತದೆ. ಆ ನೀರು ತನ್ನ ಯೋಗ್ಯತೆಯ ಕಾಲದಲ್ಲಿ ಉಷ್ಣತೆಯನ್ನು ಬಿಟ್ಟುಕೊಟ್ಟು ತನ್ನ ಶೀತಲ ಸ್ವಭಾವವನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ. ನೀರಿನ ಸ್ವಭಾವವು ಶೀತಲವಿದೆಯೆಂಬುದನ್ನು ಜ್ಞಾನವು ನಿರ್ಣಯ ಮಾಡುತ್ತದೆ. ಕಾಯ್ದ ನೀರಿನಲ್ಲಿ ಕೈ ಹಾಕುವುದರಿಂದ ನೀರು ತಂಪು ಇದೆಯೆಂದು ತಿಳಿದು ಬರುವುದಿಲ್ಲ. ಅದರಂತೆ ಕಣ್ಣು, ಕಿವಿ, ಮೂಗು ಅಥವಾ ಜಿಹ್ವೆಯ ಮೂಲಕ ಕೂಡ ಅದರ ಶೀತಲ ಸ್ವಭಾವವು ತಿಳಿದು ಬರುವುದಿಲ್ಲ. ಅಥವಾ ಯಾವನೋ ಓರ್ವ ಜೀವನು ಬಹಳಷ್ಟು ಆಕುಲತೆ ಮಾಡಿದರೆ ಮತ್ತು ಮನಸ್ಸಿನ ನಿಮಿತ್ತದಿಂದ ಬೇಕಾದಷ್ಟು ಸಂಕಲ್ಪ-ವಿಕಲ್ಪ ಮಾಡಿದರೂ ಕೂಡ ಅದರ ಶೀತಲವಾದ ಸ್ವಭಾವವು ತಿಳಿದು ಬರುವಂತಿಲ್ಲ, ಆದರೆ ನೀರಿನ ಸ್ವಭಾವವು ಶೀತಲವಿದೆಯೆಂದು ಜ್ಞಾನವು ನಿರ್ಣಯ ಮಾಡುತ್ತದೆ. ಈ ದೃಷ್ಟಾಂತದ ಅನುಸಾರ ಭಗವಂತರ ವಚನಗಳ ಅಂಗೀಕಾರ ಮಾಡಿ ಜ್ಞಾನೀ ಜೀವನು ಕರ್ಮ ವಿಕಾರದ ಆತಪವನ್ನು ನಷ್ಟಮಾಡಿ, ಶಾಂತರಸಗರ್ಭಿತವಾದ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಇಲ್ಲಿ ಯಾವುದನ್ನು ಶಬ್ದಸಮಯವೆಂದು ಹೇಳಬೇಕೆಂಬುದು ಕೂಡ ಬಂದು ಹೋಯಿತು, ಭಗವಂತರ ವಚನಗಳು ಹೇಳಿರುವುದೇನೆಂದರೆ ನೀನು ಮೂರು ಕಾಲದಲ್ಲೂ ಶುದ್ಧನಿರುವೆ, ಪರಪದಾರ್ಥಗಳು ವಿಕಾರ ಮಾಡಿಸುವುದಿಲ್ಲ,

ಅದರಂತೆ ಸ್ವಭಾವದಲ್ಲಿ ವಿಕಾರವಿಲ್ಲ. ಆದರೆ ಶಾಂತಿ ಮತ್ತು ಸುಖವಿದೆಯೆಂದು ಶಬ್ದಸಮಯವು ಹೇಳುತ್ತದೆ ಮತ್ತು ಜ್ಞಾನ ಸಮಯವು ಕೂಡ ಇದೇ ಪ್ರಕಾರ ನಿರ್ಣಯ ಮಾಡುತ್ತದೆ. ಸಂತರುಗಳು ಅಂತರ್ಮುಖ ದೃಷ್ಟಿಮಾಡಿ, ಆತಪವನ್ನು ನಾಶಗೊಳಿಸಿ ಶೀತಲತೆಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ. ಅದರಂತೆ ನಾನು ಕೂಡ ಅಂತರ್ಯದಲ್ಲಿ ಜ್ಞಾನ ಮಾಡಿಕೊಂಡು ಆತಪವನ್ನು ನಾಶ ಮಾಡುವೆನು ಮತ್ತು ಅನಾಕುಲವಾದ ಶಾಂತರಸವನ್ನು ಪ್ರಾಪ್ತ ಮಾಡಿಕೊಳ್ಳುವೆನು. ಬಾಹ್ಯದ ಜತೆಯಲ್ಲಿ ನನಗೇನೂ ಕೊಡ-ಕೊಳ್ಳುವುದಿಲ್ಲ. ಯಾವನೋ ಓರ್ವ ಬದ್ಧ ವೈರಿಯು ಬಂದರೆ ನನ್ನ ಪರ್ಯಾಯವನ್ನು ತೊಲಗಿಸಿಬಿಡುವುದಿಲ್ಲ ಮತ್ತು ಬೇಕಾದರೆ ಚತುರ್ಥಕಾಲವಿರಲಿ ಅಥವಾ ಜೀವನು ಸಮವಸರಣದಲ್ಲಿ ಕುಳಿತುಕೊಂಡಿದ್ದರೂ ಕೂಡ ತನ್ನ ಸ್ವಭಾವದ ಅವಲಂಬನೆ ತೆಗೆದುಕೊಂಡಲ್ಲದೆ ಆತಪವು ಎಂದೂ ದೂರವಾಗಿ ಹೋಗುವಂತಿಲ್ಲ.

ಯಾವ ಮಾರ್ಗದಿಂದ ಭಗವಂತರಾಗಿದ್ದಾರೆ, ಆತ್ಮನೊಳಗಿಂದ ಆಗಿದ್ದಾರೆಯೋ ಅಥವಾ ಬಾಹ್ಯದೊಳಗಿಂದ ಆಗಿದ್ದಾರೆಯೋ ? ಯಾವ ಪ್ರಕಾರ ನೀರಿನ ಶೀತಲತೆಯು ಅದರ ಸ್ವಭಾವದೊಳಗಿಂದ ಬರುತ್ತದೆ ಅದೇ ಪ್ರಕಾರ ಶೀತಲ ಶಾಂತ ಸ್ವಭಾವದೊಳಗಿಂದಲೇ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪರ್ಯಾಯವು ಪ್ರಕಟವಾಗುತ್ತದೆ. ಜೀವನು ಲಕ್ಷ್ಯಾಂತರ ಮಂದಿರಗಳನ್ನು ನಿರ್ಮಿಸಲಿ ಅಥವಾ ಮಹಾವಿದೇಹದಲ್ಲಿ ಹೋಗಲಿ, ಆದರೆ ಧರ್ಮದ ಸಾಧನವಂತೂ ಸ್ವಯಂ ತನ್ನ ಸ್ವಭಾವವಿದೆ. ಯಾವ ಪ್ರಕಾರ ನೀರಿನ ಸ್ವಭಾವವು ಜ್ಞಾನದಿಂದ ನಿಶ್ಚಿತವಾಗುತ್ತದೆ, ಅದೇ ಪ್ರಕಾರ ಆತ್ಮನ ಸ್ವಭಾವವು ಕೂಡ ಜ್ಞಾನದಿಂದಲೇ ನಿಶ್ಚಿತವಾಗುತ್ತದೆ-ಎಂದು ನಿರ್ಣಯ ಮಾಡಿದ ನಂತರ ಜೀವನು ಅಂತರ್ಯದಲ್ಲಿ ಸ್ಥಿರನಾಗುತ್ತಾನೆ. ಇಲ್ಲಿ ಚಾರಿತ್ರದ ಮಾತು ಇದೆ. ಬಾಹ್ಯದಲ್ಲಿನ ರೋಗ ಮೊದಲಾದವುಗಳ ಪ್ರತಿಕೂಲತೆಯಿಂದ ಅಂತರ್ಯದಲ್ಲಿ ಪ್ರತಿಕೂಲತೆಯು ಬರುವುದಿಲ್ಲ. ಅದೇ ಪ್ರಕಾರ ಅಂತರ್ಯದ ಅನುಕೂಲತೆಯಿಂದ ಬಾಹ್ಯದಲ್ಲಿ ಅನುಕೂಲತೆಯಾಗಲಿ ಅಥವಾ ಪ್ರತಿಕೂಲತೆಯಾಗಲಿ ಬಂದು ಬಿಡುವುದಿಲ್ಲವೆಂದು ತನ್ನ ಶಾಂತ ಸ್ವಭಾವವನ್ನು ತಿಳಿದುಕೊಂಡು ಸ್ಥಿರಗೊಳ್ಳುತ್ತಾನೆ. ಅವನು ಆತಪದ ನಾಶಮಾಡಿ, ಆತ್ಮಿಕ ಶಾಂತರಸ ಗರ್ಭಿತವಾದ ಸುಖವನ್ನು ಪಡೆಯುತ್ತಾನೆ. ಬಾಹ್ಯದಲ್ಲಿರುವ ಸಂಯೋಗಗಳು ಹೇಗೆ ಇವೆ ಹಾಗೆ ಇದ್ದು ಬಿಡಲಿ ಸಾವಿರಾರು ತೀರ್ಥಂಕರರಿರಲಿ ಮತ್ತು ಕೇವಲಿಗಳಿರಲಿ, ಆದರೆ ನನ್ನ ಪರಿಣತಿಯಲ್ಲಿ ವಿಭಾವವನ್ನು ಕಡಿಮೆ ಮಾಡುವುದು ಮತ್ತು ಸ್ವಭಾವದಲ್ಲಿ ಅಭಿವೃದ್ಧಿ ತಂದುಕೊಳ್ಳುವುದು ಅದು ನನ್ನ ಆಧೀನವಿದೆ, ಆದರೆ ಭಗವಂತರ ಆಧೀನವಿಲ್ಲವೆಂದು ತನ್ನ ಸ್ವಭಾವವನ್ನು ತಿಳಿದುಕೊಂಡು ಸ್ಥಿರಗೊಂಡರೆ ಅವನು ಮುಕ್ತಿ ಪಡೆಯುತ್ತಾನೆ.

ಈಗ ದುಃಖದ ನಾಶಮಾಡುವ ಕ್ರಮವನ್ನು ತಿಳಿಸುತ್ತಾರೆ. ಅಥವಾ ಯಾವ ಕ್ರಮದಿಂದ ಜೀವನು ಸಂಸಾರದಿಂದ ರಹಿತನಾಗಿ ಮುಕ್ತನಾಗುತ್ತಾನೆಂಬುದನ್ನು ತಿಳಿಸಿಕೊಡುತ್ತಾರೆ,-

**ಮುಣಿಊಣ ಏತದಟ್ಠಂ ತದಣುಗಮಣುಜ್ಜದೋ ಣಿಹದ ಮೋಹೋ ।**
**ಪಸಮಿಯರಾಗದ್ದೋಸೋ ಹವದಿ ಹದಪರಾಪರೋ ಜೀವೋ ॥೧೦೪॥**

**ಜೀವನೀ ಅರ್ಥವ ತಿಳಿದು ಅದರನುಸಾರ ಪ್ರಯತ್ನಿಸಿ ಹತಮೋಹನಾಗಿ ।**
**ಅವನು ರಾಗದ್ವೇಷ ಪ್ರಶಮಿಸಿ ಪೂರ್ವೋತ್ತರ ಬಂಧರಹಿತನಾಗುವನು ॥೧೦೪॥**

ಯಾವ ಜೀವನು ಈ ಗ್ರಂಥದ ರಹಸ್ಯವಾದ ಶುದ್ಧಾತ್ಮಪದಾರ್ಥವನ್ನು ತಿಳಿದುಕೊಂಡು ಅದರಲ್ಲಿಯೇ ಪ್ರವೀಣನಾಗುವ ಉದ್ಯಮಿಯಾಗುತ್ತಾನೆ, ಆ ಭೇದವಿಜ್ಞಾನಿಯಾದ ಜೀವನು ಮೋಕ್ಷಪದದ ಅನುಭವಿಯಾಗುತ್ತಾನೆ.

ಆ ಜೀವನು ದರ್ಶನಮೋಹದ ನಾಶಮಾಡಿರುತ್ತಾನೆ, ಅವನಲ್ಲಿ ರಾಗ-ದ್ವೇಷಗಳು ಹೊರಟುಹೋಗಿರುತ್ತವೆ ಮತ್ತು ಅವನು ಪೂರ್ವಾಪರ ಬಂಧದ ನಾಶಮಾಡಿರುತ್ತಾನೆ.

ಇದು ಪಂಚಾಸ್ತಿಕಾಯವಿದ್ದು, ಐದು ಅಸ್ತಿಕಾಯ ಮತ್ತು ಕಾಲ ಇವು ಹೇಗೆ ಇವೆ ಹಾಗೆ ತಿಳಿದುಕೊಳ್ಳುವುದು ಅದರ ರಹಸ್ಯವಿದೆ ಮತ್ತು ಅದರ ಫಲವು ವೀತರಾಗತೆಯಿದೆ.

ಆರುದ್ರವ್ಯಗಳಲ್ಲಿ ಯಾವುದರದೂ ಅಭಾವವು ವರ್ತಿಸುತ್ತಿದೆಯೆಂಬುದಾಗಿಲ್ಲ. ಈ ದ್ರವ್ಯವು ಹೀಗೆ ಹೇಗೆ ವರ್ತಿಸುತ್ತದೆಯೆಂಬುದರದು ಕೂಡ ಪ್ರಶ್ನೆಯೇ ಇಲ್ಲ ಮತ್ತು ಈ ದ್ರವ್ಯವು ಇನ್ನೊಂದರ ಕಾರಣದಿಂದ ಪರಿಣಮಿಸುತ್ತದೆಯೆಂಬುದಾಗಿಯೂ ಇಲ್ಲ. ಎಲ್ಲವೂ ತಮ್ಮ ಕಾರಣದಿಂದಿವೆ. ಹೀಗಿವೆಯೆಂಬುದರ ನಿರ್ಣಯ ಮಾಡಿದರೆ ಶುದ್ಧ ಆತ್ಮನ ಕಡೆಗೆ ಪ್ರವೃತ್ತಿಯಾಗುತ್ತದೆ.

ಸಮಸ್ತ ಪದಾರ್ಥಗಳಿವೆಯೆಂದು ಹೇಳಿರಿ, ಮಹಾಸತ್ತಾಯಿದೆ-ಅವಾಂತರ ಸತ್ತಾಯಿದೆಯೆಂದು ಹೇಳಿರಿ, ಶುದ್ಧ ದ್ರವ್ಯದೃಷ್ಟಿಯೆಂದು ಹೇಳಿರಿ, ಕ್ರಮಬದ್ಧಪರ್ಯಾಯದ ನಿರ್ಣಯವೆಂದು ಹೇಳಿರಿ, ಮೋಕ್ಷಮಾರ್ಗವೆಂದು ಹೇಳಿರಿ, ಪರ್ಯಾಯ ಬುದ್ಧಿ ಬಿಟ್ಟು ಸ್ವಭಾವಬುದ್ಧಿ ಮಾಡುವುದೆಂದು ಹೇಳಿರಿ, ಅವೆಲ್ಲವುಗಳ ಫಲವು ವೀತರಾಗತೆಯಿದೆ. ಇದು ಪರ್ಯಾಯವಿದೆ, ಇದು ಗುಣವಿದೆ, ಇದು ದ್ರವ್ಯವಿದೆಯೆಂದು ಅವಾಂತರ ಸತ್ತಾದಿಂದ ನಿರ್ಣಯ ಮಾಡಿದರೆ ಪರ್ಯಾಯವು ಕ್ಷಣಿಕವಿದೆ ಮತ್ತು ದ್ರವ್ಯವು ತ್ರಿಕಾಲವಿದೆಯೆಂಬ ನಿರ್ಣಯವಾದರೆ ದ್ರವ್ಯದ ಕಡೆಗೆ ಪ್ರವೃತ್ತಿಯಾದಲ್ಲದೆ ಇರಲಾರದು. ವಿಕಾರವಿದೆ, ಪರ್ಯಾಯದಲ್ಲಿ ಅಪೂರ್ಣತೆಯಿದೆ, ದ್ರವ್ಯವು ಪೂರ್ಣ ಶುದ್ಧವಿದೆ. ಎಲ್ಲವೂ ಇವೆಯೆಂದು ಒಪ್ಪಿಕೊಳ್ಳುವ ಮಹಿಮೆಯು ವಿಕಾರೀ ಪರ್ಯಾಯದ ಮೇಲೆ ಹೋಗುವುದಿಲ್ಲ. ಆದರೆ ಶುದ್ಧ ಆತ್ಮನ ಮೇಲೆ ಹೋಗುತ್ತದೆ ಮತ್ತು ನಾನು ಇದ್ದೇನೆಂದು ನಿರ್ಣಯ ಮಾಡಿದರೆ ಅನಂತ ಜ್ಞಾನ-ದರ್ಶನ-ಚಾರಿತ್ರಸುಖದಿಂದ ತುಂಬಿದ್ದೇನೆಂದು ನಿರ್ಣಯವಾಗುತ್ತದೆ. ಹೀಗೆ ಧರ್ಮಾತ್ಮ ಜೀವನು ಪರವನ್ನು ಪರವೆಂದು ತಿಳಿಯುವನು, ರಾಗವನ್ನು ರಾಗವೆಂದು ತಿಳಿಯುವನು. ರಾಗವನ್ನು ತ್ರಿಕಾಲದಲ್ಲಿ ಹೇಳುವುದಿಲ್ಲ, ತನ್ನಲ್ಲಿ ಪರವನ್ನು ತಿಳಿಸುವುದಿಲ್ಲ, ತನ್ನ ಶುದ್ಧ ಆತ್ಮನನ್ನು ತಿಳಿಯುತ್ತಾನೆ. ಇಂಥವನು ಪಂಚಾಸ್ತಿಕಾಯದ ರಹಸ್ಯವನ್ನು ತಿಳಿದಿರುತ್ತಾನೆ.

ಈ ಪ್ರಕಾರ ಶುದ್ಧ ಆತ್ಮ ಪದಾರ್ಥವನ್ನು ತಿಳಿದುಕೊಂಡು ಆ ಜೀವನು ಆತ್ಮ ಪದಾರ್ಥದಲ್ಲಿ ಪ್ರವೀಣನಾಗಲು ಉದ್ಯಮಿಯಾಗುತ್ತಾನೆ. ಹೀಗೆ ಬಹಳಷ್ಟು ನ್ಯಾಯಗಳು ಬಂದುಬಿಡುತ್ತವೆ. ನೀನು ನಿನ್ನ ಶುದ್ಧ ಆತ್ಮನ ಕಡೆಗೆ ಪ್ರವೃತ್ತಿಮಾಡೆಂದು ದೇವ-ಶಾಸ್ತ್ರ-ಗುರುಗಳು ಹೇಳುತ್ತಾರೆ. ನೀನು ರಾಗದ ಪ್ರಯತ್ನ ಮಾಡೆಂದು ಶಾಸ್ತ್ರ ಹೇಳುವುದಿಲ್ಲ. ನೀನು ನನ್ನ ಕಡೆಗೆ ನೋಡಿದರೆ ನಿನ್ನ ಕಲ್ಯಾಣವಾಗುವುದೆಂದು ಗುರುಗಳು ಹೇಳುವುದಿಲ್ಲ, ಹೀಗೆ ಯಾವನಾದರೂ ಗುರುವು ಹೇಳಿದರೆ ಮತ್ತು ಬಹಿರ್ಮುಖತೆಯನ್ನು ತಿಳಿಸಿದರೆ ಅವನು ಗುರುವಲ್ಲ, ದೇವನು ಕೂಡ ರಾಗಮಾಡಲು ಹೇಳುವುದಿಲ್ಲ. ಮೊದಲು ಶ್ರವಣ ಸಮಯದಲ್ಲಿ ವಿಕಲ್ಪವಿತ್ತು, ಆಗ ಸುದೇವಾದಿಗಳ ನಿಮಿತ್ತವಿತ್ತು ಮತ್ತು ಕುದೇವಾದಿಗಳ ನಿಮಿತ್ತವು ಬಿಟ್ಟುಹೋಗಿತ್ತು. ಮೊದಲು ವಿಕಲ್ಪವಿರುತ್ತದೆ ಆದುದರಿಂದ ಮೊದಲು ವ್ಯವಹಾರ ಮತ್ತು ನಂತರ ನಿಶ್ಚಯವೆಂದು ಇದರ ಅರ್ಥವಲ್ಲ, ಆದರೆ ತನ್ನ ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡರೆ ಮೊದಲಿನ ವಿಕಲ್ಪವನ್ನು ವ್ಯವಹಾರವೆಂದು ಹೇಳಲಾಗುವುದು. ಇಲ್ಲದಿದ್ದರೆ ಅದನ್ನು ವ್ಯವಹಾರವೆಂದು ಕೂಡ ಹೇಳಲಾಗುವುದಿಲ್ಲ.

'ಕ್ರಮಬದ್ಧಪರ್ಯಾಯದ ನಿರ್ಣಯ ಮಾಡುವುದರಿಂದ ಪ್ರಮಾದಿಯಾಗುತ್ತಾನೆಂದು ಪ್ರಶ್ನೆ ಮಾಡುವವನು ಕ್ರಮಬದ್ಧಪರ್ಯಾಯವನ್ನು ತಿಳಿದುಕೊಳ್ಳುವುದಿಲ್ಲ. ಯಾವ ಸಮಯದಲ್ಲಿ ಹೇಗೆ ಆಗುವುದಿದೆ ಹಾಗೇ ಆಗುವುದಿದೆಯೆಂದು ಯಥಾರ್ಥ ತಿಳಿದುಕೊಳ್ಳುವವನಿಗೆ ಅಂತರ್ಮುಖ ಪ್ರವೀಣತೆಯಾದಲ್ಲದೆ ಇರುವುದಿಲ್ಲ.

ಅವನಿಗೆ ಪ್ರಮಾದವು ಉಳಿಯುವುದಿಲ್ಲ. ಇಲ್ಲಿ ಅಜ್ಞಾನಿಯು ಪ್ರಶ್ನಿಸುವುದೇನೆಂದರೆ 'ವಸ್ತುಸ್ವಭಾವದ ದೃಷ್ಟಿಯಾದಮೇಲೆ ದೋಷವುಂಟಾದರೆ? ಹೇಗೆ ಆಗುವುದಿದೆ ಹಾಗೆ ಆಗುತ್ತದೆಂದು ಮನ್ನಿಸುವವನಿಗೆ ವ್ಯವಹಾರವು ಅನ್ವಯಿಸದಿದ್ದರೆ?' -ಎಂದು ಪ್ರಶ್ನೆ ಕೇಳುವವನು ವಸ್ತುಸ್ವಭಾವವನ್ನು ತಿಳಿದುಕೊಳ್ಳುವುದಿಲ್ಲ. ಸ್ವಭಾವದ ಅಂತರ್ಮುಖ ಆಶ್ರಯವಿಲ್ಲದೆ ಯಥಾರ್ಥ ತಿಳಿವಳಿಕೆಯಾಗುವುದಿಲ್ಲ. ಯಾವ ಪದಾರ್ಥಗಳು ಹೇಗೆ ಇವೆ ಹಾಗೆ ತಿಳಿದುಕೊಂಡರೆ ಸ್ವಭಾವದ ಪ್ರಯತ್ನವಾಗುತ್ತದೆ. ಸಾಧಕನಿಗೆ ಅಶಕ್ತತೆಯ ರಾಗವಿದೆ, ಅದು ರಾಗದ ಭೂಮಿಕೆಯಲ್ಲಿ ಬರುತ್ತದೆ, ಆದುದರಿಂದ ವ್ಯವಹಾರವಿರುವುದಿಲ್ಲವೆಂಬ ಮಾತು ಉಳಿಯುವುದಿಲ್ಲ. ಧರ್ಮಾತ್ಮ ಜೀವನು ಪದಾರ್ಥದಲ್ಲಿ ಪ್ರವೀಣನಿದ್ದಾನೆ ಮತ್ತು ಎಷ್ಟು ರಾಗವಿದೆ ಅದು ತಿಳಿದುಕೊಳ್ಳುವ ಸಲುವಾಗಿ ಇದೆ, ಆದರೆ ಒಬ್ಬನು ವ್ಯವಹಾರವನ್ನು ಹಿಡಿದುಕೊಂಡು 'ಮೋಕ್ಷಮಾರ್ಗದಲ್ಲಿ ಮಧ್ಯದೊಳಗೆ ವ್ಯವಹಾರವು ಬರುತ್ತದೆ, ವ್ಯಗ್ರವಾಗಬಾರದೆ'ಂದು ಹೇಳುತ್ತಾನೆ. ಇನ್ನೊಬ್ಬನು 'ವ್ಯವಹಾರವು ಬಂದಲ್ಲದೆ ಇರುವುದಿಲ್ಲ'ವೆಂದು ಹೇಳುತ್ತಾನೆ, ಅವನ ಮಹಿಮೆಯು ವ್ಯವಹಾರದ ಮೇಲಿರುತ್ತದೆ, ಅವನಿಗೆ ವ್ಯವಹಾರದ ಅವಲಂಬನವಿದೆ. ಅವನಿಗೆ ವ್ಯವಹಾರದ ಅನುಸಾರವಾಗಿ ಇರುವುದಿದೆ. ಆದರೆ ಶುದ್ಧ ಆತ್ಮನನ್ನು ಅನುಸರಿಸಿ ಇರುವುದಿಲ್ಲ.

ಇಲ್ಲಿ 'ತದನುಗಮನೋದ್ಯತಃ' ಎಂಬ ಪಾಠವಿದ್ದು ಅವನೇ ಆತ್ಮ ಪದಾರ್ಥದಲ್ಲಿ ಪ್ರವೀಣನಾಗುವ ಉದ್ಯಮಿಯಾಗುತ್ತಾನೆ. ರಾಗ ಅಥವಾ ವ್ಯವಹಾರದ ಉದ್ಯಮಿಯೆಂದು ಹೇಳಿಲ್ಲ, ಆದರೆ ಶುದ್ಧ ಆತ್ಮ ಪದಾರ್ಥವನ್ನು ಅನುಸರಿಸುವ ಉದ್ಯಮಿಯೆಂದು ಹೇಳಿದೆ. ಹೀಗೆ ಯಾವ ಧರ್ಮಾತ್ಮ ಜೀವನಿಗೆ ಭೇದವಿಜ್ಞಾನವು ವರ್ತಿಸುತ್ತಿದೆ, ಅವನ ಭ್ರಾಂತಿಯು ನಾಶವಾಗಿ ಹೋಗುತ್ತದೆ. ನನಗೆ ಏನಾಗುವುದು ಮತ್ತು ಹೇಗಾಗುವುದೆಂಬ ಮಾತು ಉಳಿಯುವುದಿಲ್ಲ. ಜಡಕರ್ಮದ ನಾಶವನ್ನಂತೂ ಯಾವ ಜೀವನು ಮಾಡುವ ಸಾಧ್ಯತೆಯಿಲ್ಲ, ಮತ್ತು ಮಿಥ್ಯಾಭ್ರಾಂತಿಯ ನಾಶವನ್ನು ಕೂಡ ಯಾರೂ ಮಾಡುವ ಸಾಧ್ಯತೆಯಿಲ್ಲ. ಸ್ವಭಾವದ ಕಡೆಯ ಪುರುಷಾರ್ಥವಾದರೆ ಭ್ರಾಂತಿಯು ಉತ್ಪನ್ನವಾಗುವುದಿಲ್ಲ. ಅವನನ್ನು ದರ್ಶನಮೋಹದ ನಾಶಮಾಡಿದನೆಂದು ಹೇಳಲಾಗುತ್ತದೆ. ಅಖಂಡತೆಯೇ ಉಪಾಯವಿದೆ, ಬೇರೆ ಯಾವ ಉಪಾಯವಿಲ್ಲ.

ಈಗ ಆ ಜೀವನು ಚಾರಿತ್ರ ಪ್ರಕಟಮಾಡಿ ಮೋಕ್ಷವನ್ನು ಪಡೆಯುತ್ತಾನೆಂದು ತಿಳಿಸುತ್ತಾರೆ. ಅವನೇ ಸ್ವಭಾವದ ಅವಲಂಬನೆ ಮಾಡಿ ಶಾಂತಿ ಪ್ರಕಟಪಡಿಸಿಕೊಳ್ಳುತ್ತಾನೆ. ಇಂತಿಷ್ಟು ವ್ರತ, ತಪಸ್ಸು ಮಾಡಿದರೆ ಶಾಂತಿಯಾಗುತ್ತದೆಂಬುದು ಇಲ್ಲವೇ ಇಲ್ಲ. ಅದರಂತೆ ನಿಮಿತ್ತ, ಬಾಹ್ಯಕ್ಷೇತ್ರ ಅಥವಾ ಪರದ ಅವಲಂಬನದಿಂದ ಶಾಂತಿಯಾಗುವುದಿಲ್ಲ. ಹೀಗೆ ನಿರ್ಣಯವನ್ನಂತು ಮಾಡಿದ್ದರೂ ಕೂಡ ಧರ್ಮಾತ್ಮ ಜೀವನು ಸ್ವಭಾವದಲ್ಲಿ ವಿಶೇಷ ಸ್ಥಿರತೆ ಮಾಡುತ್ತಾನೆ, ಅದು ಚಾರಿತ್ರವಿದೆ ಮತ್ತು ಕೆಲವರು ಹೇಳುವುದೇನೆಂದರೆ 'ಶಾಸ್ತ್ರ ಕೇಳುವವರು ಅಧಿಕ ಸಂಖ್ಯೆಯಲ್ಲಿದ್ದರೆ ಸಂತೋಷ ಮತ್ತು ಶಾಂತಿಯಾಗುವುದು, ಒಬ್ಬನೇ ಇದ್ದರೆ ಶಾಂತಿ ಎಲ್ಲಿಂದ ಬರುವುದು' ಎಂದು ಅಜ್ಞಾನೀ ಜೀವರುಗಳು ಪರದ ಆಶ್ರಯದಿಂದ ಶಾಂತಿಯನ್ನು ಮನ್ನಿಸಿಕೊಂಡು ಕುಳಿತಿದ್ದಾರೆ. ಆದರೆ ಸೋದರನೇ ! ಪರದ ಆಶ್ರಯ ತೆಗೆದುಕೊಳ್ಳುವಲ್ಲಿ ಆಕುಲತೆಯಿದೆ. ಏಕಾಕಿ ಸ್ವಭಾವದ ಆಶ್ರಯದಿಂದ ಶಾಂತಿಯಿದೆ. ಹೀಗೆ ಭೇದವಿಜ್ಞಾನೀ ಜೀವನು ಪರಿಪೂರ್ಣವಾಗಿ ತನ್ನ ಸ್ವಭಾವದ ಆಶ್ರಯ ಪಡೆಯುತ್ತಾನೆ. ಅದರಿಂದ ಅಸ್ಥಿರತೆಯು ಹೊರಟುಹೋಗುತ್ತದೆ. ಪೂರ್ವಬಂಧವು ನಾಶವಾಗುತ್ತದೆ. ಮೋಕ್ಷಸ್ಥಾನವನ್ನು ಪಡೆಯುತ್ತಾನೆ.

**ಭಾವಾರ್ಥ :-** ಸಂಸಾರೀ ಜೀವನು ಅನಾದಿ ಅವಿದ್ಯೆಯ ಕಾರಣದಿಂದ ಭ್ರಮಣ ಮಾಡುತ್ತಿದ್ದಾನೆ. ಯಾವುದೇ ಕರ್ಮದ ಕಾರಣದಿಂದ ಭ್ರಮಣ ಮಾಡುತ್ತಿದ್ದಾನೆಂದು ಹೇಳಿಲ್ಲ. ಆದರೆ ವಿದ್ಯಮಾನ ಸ್ವಭಾವದ ಅರುಚಿ

ಮತ್ತು ವಿಕಾರಾದಿಗಳ ಹಾಗೂ ಸಂಯೋಗಗಳ ಯಾವ ಕ್ಷಣಿಕತೆಯಿದೆ-ಅವಿದ್ಯಮಾನವಿದೆ ಅದರ ರುಚಿಯು ಅದು ಅವಿದ್ಯೆಯಿದೆ. ಇಂಥ ಅವಿದ್ಯೆಯ ಕಾರಣದಿಂದ ಪುಣ್ಯ-ಪಾಪ ಭಾವಗಳನ್ನು ತನ್ನ ಸ್ವಭಾವವೆಂದು ಮನ್ನಿಸುತ್ತಾನೆ. ಈ ರೀತಿಯಿಂದ ಅಜ್ಞಾನಿಯಾದ ಜೀವನು ರಾಗ-ದ್ವೇಷಗಳ ರೂಪದಿಂದ ಪರಿಣಮಿಸುತ್ತಾನೆ. ಆದರೆ ಯಾವಾಗ ನಿಜ ಪುರುಷಾರ್ಥಮಾಡಿ ಸರ್ವಜ್ಞ ವೀತರಾಗ ಭಗವಂತರ ವಚನಗಳನ್ನು ಅವಧಾರಣ ಮಾಡುತ್ತಾನೆ, ಆಗ ಅವನ ಮಿಥ್ಯಾತ್ವವು ನಾಶಹೊಂದುತ್ತದೆ. ಭಗವಂತರ ವಚನಗಳನ್ನು ಆಲಿಸಿದ ಆ ಜೀವನು ಜಾಗೃತನಾಗುತ್ತಾನೆ. ಓಹೋ ! ಸಮಸ್ತ ಪದಾರ್ಥಗಳು ವ್ಯವಸ್ಥಿತವಿವೆ, ನಿಯಮಬದ್ಧವಿವೆ. ಯಾವುದೂ ಯಾವುದಕ್ಕೂ ರಾಗ-ದ್ವೇಷಗಳನ್ನು ಉತ್ಪನ್ನ ಮಾಡಿಸುವುದಿಲ್ಲ ತಾನು ಸ್ವಯಂ ದೋಷ ಮಾಡಿದರೆ ರಾಗ-ದ್ವೇಷಗಳಾಗುತ್ತವೆ. ಮತ್ತು ಆ ದೋಷವು ಸ್ವಭಾವದ ಆಶ್ರಯದಿಂದ ದೂರವಾಗುತ್ತದೆ. ತನ್ನ ಜ್ಞಾನಸ್ವಭಾವದೊಳಗಿಂದ ಜ್ಞಾನ ಮತ್ತು ವೀತರಾಗತೆಯು ಪ್ರಕಟವಾಗುತ್ತದೆ. ಪ್ರಾಪ್ತದ ಪ್ರಾಪ್ತಿಯಾಗುತ್ತದೆ. ಹೀಗೆ ಭಗವಂತರ ವಚನಗಳು ರುಚಿಸಿದವನಿಗೆ ಸಂಸಾರದೊಳಗಿಂದ ಬಿಡುಗಡೆ ಹೊಂದುವ ಪ್ರಸಂಗವು ಬರುವುದು. ಹೀಗೆ ಪುರುಷಾರ್ಥ ಮಾಡಿ ಯಾವ ಜೀವನು ತನ್ನ ಸ್ವಭಾವದ ಅಭಿರುಚಿ ಮಾಡುತ್ತಾನೆ, ಅವನ ಕಾಲಲಬ್ಧಿಯು ಬಂದುಬಿಟ್ಟಿದೆ, ಪಕ್ವವಾಗಿದೆ. ಜ್ಞಾನಸ್ವಭಾವ ತಿಳಿಯುವುದು ಅದು ಸ್ವಭಾವವಿದೆ. ಸ್ವಭಾವದ ಕಡೆಗೆ ಪ್ರವೃತ್ತವಾದರೆ ಕರ್ಮದ ಅಭಾವವು ಆಗತೊಡಗುವುದು. ಹೀಗೆ ಐದೂ ಸಮವಾಯಗಳು ಒಟ್ಟಿಗೆ ಬಂದು ಸೇರುವವು. ಯಾವನು ವೀತರಾಗರ ವಚನಗಳನ್ನು ಅವಧರಿಸಿದ್ದಾನೆ ಅವನ ಮೋಹವು ನಾಶ ಹೊಂದುತ್ತದೆ. ಭೇದ ವಿಜ್ಞಾನರೂಪದ ಸಮ್ಯಕ್‌ಜ್ಞಾನ ಜ್ಯೋತಿಯು ಪ್ರಕಟವಾಗುತ್ತದೆ.

ಯಾವ ಜೀವರುಗಳು ತಮ್ಮ ಜ್ಞಾನಸ್ವಭಾವದ ನಿರ್ಣಯ ಮಾಡಿಲ್ಲ ಅವರು ಸ್ವಭಾವದಿಂದ ಜಾಗೃತರಾಗಿಲ್ಲ, ಅವರಿಗೆ ನಿಜವಾದ ಪುರುಷಾರ್ಥವು ವಿಕಸಿತವಾಗುವುದಿಲ್ಲ, ಅವರು ನಿಯತಿಯನ್ನು ತಿಳಿಯುವುದಿಲ್ಲ. ಅವರಿಗೆ ಕಾಲಲಬ್ಧಿಯು ಪಕ್ವವಾಗಿಲ್ಲ, ಅವರಿಗೆ ಕರ್ಮದ ಅಭಾವವಾಗುವುದಿಲ್ಲ. ಹೀಗೆ ಅಜ್ಞಾನಿಯು ಒಂದೂ ಸಮವಾಯವನ್ನು ತಿಳಿಯುವುದಿಲ್ಲ.

ಧರ್ಮಾತ್ಮ ಜೀವನು ವಿಚಾರಮಾಡುವುದೇನೆಂದರೆ ಓಹೋ ! ಸರ್ವಜ್ಞ ಭಗವಂತರ ಅನಂತ ಶಕ್ತಿಯು ವ್ಯರ್ಥವಾಗಿ ಹೋಗಿದೆ, ಅದು ಯಾರಿಗೂ ಏನನ್ನೂ ಮಾಡುವ ಸಾಧ್ಯತೆಯಿಲ್ಲ ಎಂದಮೇಲೆ ಅಲ್ಪಜ್ಞನಾದ ನಾನು ಪರದಲ್ಲಿ ಏನು ಮಾಡುವೆನು ? ಯಾರು ಏನನ್ನೂ ಮಾಡಲು ಸಮರ್ಥರಿಲ್ಲ. ತನ್ನ ಜ್ಞಾನ ಸ್ವಭಾವಿಯಾದ ಆತ್ಮನೊಳಗಿಂದ ಜ್ಞಾನವು ಪ್ರಕಟವಾಗುತ್ತದೆ. ವೀತರಾಗ ಸ್ವಭಾವಿಯಾದ ಆತ್ಮನೊಳಗಿಂದ ವೀತರಾಗತೆಯು ಪ್ರಕಟವಾಗುತ್ತದೆ. ತನ್ನ ವೀರ್ಯವಂತನಾದ ಆತ್ಮನೊಳಗಿಂದ ವೀರ್ಯವು ಪ್ರಕಟವಾಗುತ್ತದೆಯೆಂದು ನಿರ್ಣಯ ಮಾಡುವಂಥ ಧರ್ಮಾತ್ಮ ಜೀವನಿಗೆ ಕಾಲಲಬ್ಧಿಯು ಪಕ್ವವಾಗಿಹೋಗಿದೆ. ಕೇವಲ ಧಾರಣಾದ ಮಾತು ಇಲ್ಲ, ಆದರೆ ಅಂತರ್ಮುಖ ಅವಲಂಬನದ ಮಾತು ಇದೆ. ಅವನಿಗೆ ಸಂದೇಹ ಉಳಿಯುವುದಿಲ್ಲ. ಹೀಗೆ ಪ್ರಜ್ಞೆಯುಂಟಾದನಂತರ ಚಾರಿತ್ರಮೋಹವು ನಾಶ ಹೊಂದುತ್ತದೆ. ಅದನ್ನು ತಿಳಿದುಕೊಂಡಲ್ಲದೆ ವ್ರತ, ತಪಸ್ಸು ಮಾಡಲಾರಂಭಿಸಿದರೆ ಅದರಿಂದ ಚಾರಿತ್ರವು ಪ್ರಕಟವಾಗುವುದೆಂಬುದು ಸಂಭವಿಸುವುದಿಲ್ಲ. ಶರೀರ ಮೊದಲಾದವು ಪರವಿವೆ, ಪುಣ್ಯ-ಪಾಪಗಳಿಂದ ರಹಿತವಾದ ನನ್ನ ಸಮಸ್ವಭಾವಿಯಾದ ಚೈತನ್ಯ ಸೂರ್ಯನೊಳಗಿಂದ ವೀತರಾಗತೆಯು ಪ್ರಕಟವಾಗುತ್ತದೆಯೆಂಬ ಪ್ರಜ್ಞೆಯುಳ್ಳ ಜೀವನಿಗೆ ಚಾರಿತ್ರವು ಪ್ರಕಟವಾಗುತ್ತದೆ. ಭೇದವಿಜ್ಞಾನವಾದನಂತರ ಅಸ್ಥಿರತೆಯ ಸಂಕಲ್ಪ-ವಿಕಲ್ಪಗಳು ಇರುತ್ತವೆ. ಬಾಹ್ಯದಲ್ಲಿ ಯಶಸ್ಸಿನ ಸಮೂಹವಿದ್ದರೆ ಅದರಿಂದ ನನಗೆ ಶಾಂತಿಯಿಲ್ಲ. ಅಪಯಶದ ಸಮೂಹವಿದ್ದರೆ ಅದರಿಂದ ನನಗೆ ಅಶಾಂತಿಯಿಲ್ಲ. ನನಗೆ ನನ್ನ ಸ್ವಭಾವದ ಅವಲಂಬನದಿಂದಲೇ ಶಾಂತಿಯಿದೆಯೆಂದು ವಿಶೇಷವಾಗಿ ದೃಢತೆಯನ್ನು ತಂದುಕೊಂಡು ಸ್ವಭಾವದಲ್ಲಿ ಲೀನನಾಗುತ್ತಾ ಹೋಗುತ್ತಾನೆ. ಕೆಲವರು ಹೇಳುವುದೇನೆಂದರೆ ''ತಮ್ಮ

ಪ್ರಭಾವನೆಯ ಶುಭರಾಗದಿಂದ ಬಹಳಷ್ಟು ಪ್ರಭಾವನೆಯಾಗುವುದು ಅದಕ್ಕಾಗಿ ಆ ರಾಗವನ್ನು ಮಾಡಬೇಕಾಗುವುದು'', ಆದರೆ ಧರ್ಮಾತ್ಮ ಜೀವನು ಶುಭರಾಗದಿಂದಕೂಡ ಜೀವರುಗಳಿಗೆ ಲಾಭವಿಲ್ಲ. ಅದರಂತೆ ನನಗೆ ಕೂಡ ಲಾಭವಿಲ್ಲವೆಂದು ತಿಳಿದುಕೊಂಡಿರುತ್ತಾನೆ. ನಾನು ಬಾಹ್ಯದಲ್ಲಿ ನಿಂತುಕೊಳ್ಳುವೆನು ಎಂದರೆ ಸಿಕ್ಕಿಕೊಳ್ಳುವೆನು. ನನ್ನ ಪ್ರಭಾವನೆಯು ಬಾಹ್ಯದಲ್ಲಿ ಇಲ್ಲ. ನಾನು ಅಂತರ್ಯದಲ್ಲಿ ಏಕಾಗ್ರನಾಗಿಹೋಗುವುದೇ ನಿಜವಾಗಿ ನನ್ನ ಪ್ರಭಾವನೆಯಿದೆ. ಈ ಪ್ರಕಾರ ಸರ್ವಥಾ ಸಂಕಲ್ಪ-ವಿಕಲ್ಪಗಳ ಅಭಾವ ಮಾಡುತ್ತಾನೆ. ಆಗ ಸ್ವರೂಪದಲ್ಲಿ ಲೀನನಾಗುತ್ತಾನೆ. ಭವಿಷ್ಯದ ಬಂಧವಾಗುವುದಿಲ್ಲ. ಮೊದಲಿನ ಕರ್ಮಗಳ ಸಂಯೋಗಗಳು ಹೊರಟುಹೋಗುತ್ತವೆ. ತೀರ್ಥಂಕರ, ಚಕ್ರವರ್ತಿ ಮೊದಲಾದ ಯಾರಿಗೆ ಯಾವ ಪ್ರಕಾರದ ಪುಣ್ಯದ ನಿಮಿತ್ತದಿಂದ ಸಂಯೋಗಗಳು ದೊರಕೊಳ್ಳುವವಿವೆ, ಅವು ದೊರಕೇ ದೊರಕುತ್ತವೆ, ಮತ್ತು ಕರ್ಮಗಳು ಬಿಟ್ಟು ಹೊಗುತ್ತವೆ. ಆಗ ಆ ಜೀವನು ನಿರ್ಬಂಧ ಅವಸ್ಥೆಯನ್ನು ಧಾರಣ ಮಾಡಿ ಮುಕ್ತ ದಶೆಯನ್ನು ಪಡೆಯುತ್ತಾನೆ ಮತ್ತು ಅನಂತಕಾಲದವರೆಗೆ ಸ್ವರೂಪದಲ್ಲಿ ಗುಪ್ತವಾಗಿದ್ದುಕೊಂಡು ಅನಂತ ಸುಖವನ್ನು ಭೋಗಿಸುತ್ತಾನೆ. ಸಾಧಕ ದಶೆಯಲ್ಲಿ ಅಲ್ಪರಾಗವಿತ್ತು ಅದು ಈಗ ಹೊರಟುಹೋಗಿದೆ ಮತ್ತು ಪರಿಪೂರ್ಣ ವೀತರಾಗ ಸರ್ವಜ್ಞ ದಶೆಯನ್ನು ಪ್ರಾಪ್ತಮಾಡಿಕೊಂಡು ಅನಂತ ಸುಖವನ್ನು ಭೋಗಿಸುತ್ತಾನೆ.

ಪ್ರಥಮ ಶ್ರುತಸ್ಕಂಧವು ಸಮಾಪ್ತವಾಯಿತು. ಅದರಲ್ಲಿ ಆರು ದ್ರವ್ಯಗಳ ಸ್ವತಂತ್ರತೆಯನ್ನು ತಿಳಿಸಿಕೊಡಲಾಗಿದೆ. ಈಗ ಭೇದದಿಂದ ಒಂಭತ್ತು ಪದಾರ್ಥಗಳ ಕಥನ ಮಾಡುತ್ತಾರೆ. ಅದರಲ್ಲಿ ಮೊದಲು ಭಗವಂತರ ಸ್ತುತಿ ಮಾಡುತ್ತಾರೆ. ಏಕೆಂದರೆ ಯಾರ ವಚನಗಳು ಪ್ರಮಾಣವಿವೆ ಆ ಪುರುಷರು ಪ್ರಮಾಣರಿದ್ದಾರೆ, ಮತ್ತು ಪುರುಷ ಪ್ರಮಾಣದಿಂದ ವಚನಗಳ ಪ್ರಮಾಣತೆಯಿದೆ. ಈ ಕೇವಲೀ ಭಗವಂತರು ಸರ್ವಜ್ಞ ವೀತರಾಗರಿದ್ದಾರೆ. ಅವರ ವಚನಗಳು ಮನ್ನಣೆ ಪಡೆಯುವ ಸಾಧ್ಯತೆಯಿದೆ. ವೀತರಾಗ ಸರ್ವಜ್ಞ ಭಗವಂತರ ಹೊರತಾಗಿ ಇತರರ ವಚನಗಳು ಸತ್ಯವಿಲ್ಲ. ಅದೆಷ್ಟೋ ಜೀವರುಗಳು ಭಗವಂತರ ಹೆಸರಿನಲ್ಲಿ ಶಾಸ್ತ್ರಗಳನ್ನು ಬರೆದಿದ್ದಾರೆ. ಗ್ರಂಥದ ಹೆಸರು 'ವೀರದೇಶನಾ'ವೆಂದು ಇಟ್ಟಿರುವರು ( ಆದರೆ ಗ್ರಂಥದ ಹೆಸರಿನ ಪ್ರಕಾರ ಅಲ್ಲಿ ಭಗವಂತರ ದಿವ್ಯಧ್ವನಿಯ ವಿಷಯವೇ ಬಂದಿಲ್ಲ ಆದುದರಿಂದ ಅದನ್ನು ಹರಟೆಯೆಂದು ಹೇಳಲಾಗುವುದು) ಮತ್ತು ಅಂತರ್ಯದಲ್ಲಿ (ಗ್ರಂಥಾಂತರಂಗದಲ್ಲಿ ) ಹರಟೆಹೊಡೆದಿರುವುದು, ಅದಕ್ಕಾಗಿ ಅವು ಪ್ರಾಮಾಣಿಕವಿಲ್ಲ. ಭಗವಂತರ ವಚನ ಪ್ರಮಾಣವಿರುವುದರಿಂದ ಕುಂದಕುಂದಾಚಾರ್ಯದೇವರು ಭಗವಂತರ ಸ್ತುತಿ ಮಾಡಿದ್ದಾರೆ.

**ಈ ಪ್ರಕಾರ ಭಗವಂತರ ಸ್ತುತಿಪೂರ್ವಕ ಸಾಕ್ಷಾತ್ ಮೋಕ್ಷಮಾರ್ಗದ ಪ್ರತಿಬಿಂಬ ಸ್ವರೂಪವಿರುವ ಎರಡನೆಯ ಮಹಾಧಿಕಾರದ ಆರಂಭವು ಅಭೂತಪೂರ್ವವಾಗಿ ಆಗುತ್ತಲಿದೆ.**

## ನವಪದಾರ್ಥಪೂರ್ವಕ ಮೋಕ್ಷಮಾರ್ಗ ಪ್ರಪಂಚ ವರ್ಣನೆ

**ಅಭಿವಂದಿಊಣ ಸಿರಸಾ ಅಪುಣಬ್ಭವಕಾರಣಂ ಮಹಾವೀರಂ ।**
**ತೇಸಿಂ ಪಯತ್ಥಭಂಗಂ ಮಗ್ಗಂ ಮೋಕ್ಖಸ್ಸ ವೋಚ್ಛಾಮಿ ॥೧೦೫॥**

**ಅಪುನರ್ಭವದಕುರಿತು ಶ್ರೀಮಹಾವೀರರಿಗೆ ತಲೆಬಾಗಿ ಅಭಿವಂದಿಸಿ ।**
**ಆ ಪದಾರ್ಥಗಳ ಭೇದ ಮತ್ತದರಂತೆ ಮೋಕ್ಷದ ಮಾರ್ಗವನೀಗ ಹೇಳುವೆನು ॥೧೦೫॥**

ಭ. ಕುಂದಕುಂದಾಚಾರ್ಯದೇವರು ಮೋಕ್ಷದ ಕಾರಣಭೂತರಾದ ಭಗವಾನ ವರ್ಧಮಾನ ತೀರ್ಥಂಕರರಿಗೆ ತಲೆಬಾಗಿ ನಮಸ್ಕಾರ ಮಾಡಿ ಮೋಕ್ಷದ ಕಾರಣಸ್ವರೂಪವಿರುವ ಆ ಆರು ದ್ರವ್ಯಗಳ ನವ ಪದಾರ್ಥರೂಪ ಭೇದವನ್ನು ಹೇಳುವರು.

ಇಲ್ಲಿ ನಿಮಿತ್ತಕಾರಣದ ವ್ಯಾಖ್ಯೆ ಮಾಡಿದ್ದಾರೆ. ಭವದ ಅಭಾವದ ಕಾರಣವಂತೂ ತಮ್ಮ ಸ್ವಭಾವವಿದೆಯೆಂದು ಯಾರಿಗೆ ಅಭಿರುಚಿಯಾಗಿದೆ ಅವರಿಗೆ ಭಗವಂತರು ನಿಮಿತ್ತರಿರುವುದರಿಂದ ಅವರುಗಳ ಸ್ತುತಿಯನ್ನು ಮಾಡಲಾಗಿದೆ. ಯಾರಿಗೆ ಭವದ ಅಭಿರುಚಿಯಿದೆ ಅವರಿಗೆ ಸರ್ವಜ್ಞರ ಅಭಿರುಚಿಯಿಲ್ಲ ಮತ್ತು ಸರ್ವಜ್ಞರ ರುಚಿಯಿರುವವರಿಗೆ ಭವದರುಚಿಯಿಲ್ಲ. ಬೇಕಾದ ಭವವಿರಲಿ ಸರ್ವಾರ್ಥಸಿದ್ಧಿಯ ಭವವಿರಲಿ ಅಥವಾ ತೀರ್ಥಂಕರರ ಭವವಿರಲಿ, ಯಾವುದೇ ಭವದ ಅಭಿರುಚಿಯು ಧರ್ಮಾತ್ಮನಿಗೆ ಇರುವುದಿಲ್ಲ. ಯಾವಭಾವದಿಂದ ಭವವು ದೊರಕಿದೆ ಆ ಭಾವವು ಆಕುಲತೆಯಿದೆ. ಭವಜನ್ಯ ದುಃಖವಿರುವುದರಿಂದ ಆಕುಲತೆಯಿಲ್ಲದೆ ಏಕಾಕಿ ಜ್ಞಾಯಕ ಸ್ವಭಾವವು ಯಾರಿಗೆ ಉಳಿದಿದೆ ಮತ್ತು ಯಾರು ಪೂರ್ಣದಶೆಯನ್ನು ಪಡೆದಿದ್ದಾರೆ ಮತ್ತು ಯಾರು ಜ್ಞಾನದಲ್ಲಿ ಮೂರು ಲೋಕಗಳನ್ನು ನೋಡಿದ್ದಾರೆ ಅಂಥ ಸರ್ವಜ್ಞದೇವರು ಅಪುನರ್ಭವದ ಕಾರಣರಿದ್ದಾರೆ. ಮೋಕ್ಷದ ಕಾರಣನಂತೂ ಆತ್ಮನಿದ್ದಾನೆ, ಆದರೆ ಅದರಲ್ಲಿ ಭಗವಂತರನ್ನು ನಿಮಿತ್ತಕಾರಣರೆಂದು ಹೇಳಲಾಗಿದೆ.

ಇಲ್ಲಿಂದ ಬಿಡುಗಡೆಹೊಂದಿ ಮಹಾವಿದೇಹದಲ್ಲಿ ಹೋಗುವುದು ಅಥವಾ ದೇವಗತಿಯಲ್ಲಿ ಹೋಗುವುದು ಮತ್ತು ಅಲ್ಲಿಂದ ಭಗವಂತರ ವಾಣಿಯನ್ನು ಕೇಳುವುದಕ್ಕೆ ಹೋಗುವುದು ಮತ್ತು ಅಲ್ಲಿ ಧರ್ಮವಾಗುವುದೆಂದು ಹೇಳುವಂಥ ಜೀವರುಗಳು ವೀತರಾಗ ದೇವ, ಶಾಸ್ತ್ರ ಅಥವಾ ಧರ್ಮವನ್ನು ಮನ್ನಿಸುವುದಿಲ್ಲ. ಕಾರಣವೇನೆಂದರೆ ಅವರಿಗೆ ಇನ್ನೂ ಭವದ ಅಭಿರುಚಿ ಉಳಿದುಕೊಂಡಿದೆ. ಮತ್ತೆ ಕೆಲವರು ಹೇಳುವುದೇನೆಂದರೆ ನನ್ನ ಸಲುವಾಗಿ ಒಂದು ಭವವಾಗಬಹುದು, ಆದರೆ ನನ್ನಿಂದ ಜಗತ್ತಿನ ಕಲ್ಯಾಣವಾಗುವಂತಿದ್ದರೆ ಮಾಡಿಬಿಡುವೆನೆಂದು ಮನ್ನಿಸುವಂಥ ಜೀವನಿಗೆ ಕೂಡ ಭವದ ಅಭಿರುಚಿಯಿದೆ. ಭವವಿಲ್ಲದೆ ಸ್ವಭಾವದ ರುಚಿಯಿಲ್ಲದಿರುವುದರಿಂದ ಅವನಿಗೆ ಭಗವಂತರ ವಾಣಿಯ ರುಚಿಯು ಕೂಡ ಇರುವುದಿಲ್ಲ. ಧರ್ಮಾತ್ಮ ಜೀವನಿಗೆ ಶುಭರಾಗವು ಬರುತ್ತದೆ. ಆದರೆ ಅವನು ನನ್ನ ಸ್ವಭಾವದ ಸ್ವಾದವು ನನ್ನಲ್ಲಿದೆಯೆಂದು ತಿಳಿಯುತ್ತಾನೆ ಮತ್ತು ಶ್ರವಣ ಮಾಡುವುದರ ವಿಕಲ್ಪವು ಉತ್ಪನ್ನವಾಗುತ್ತದೆ, ಅದು ನನ್ನ ಕಾರಣದಿಂದ ಇದೆ. ಆ ವಿಕಲ್ಪದಿಂದ ಇತರರಿಗೆ ಲಾಭವಿಲ್ಲ. ಅದರಂತೆ ನನಗೆ ಕೂಡ ಲಾಭವಿಲ್ಲ. ನನಗೆ ನನ್ನ ಸ್ವಭಾವದಿಂದ ಲಾಭವಿದೆಯೆಂದು ಯಾರು ನಿರ್ಣಯ ಮಾಡುತ್ತಾರೆ ಅವರಿಗೆ ಭಗವಂತರು ಧರ್ಮದಲ್ಲಿ ನಿಮಿತ್ತರಿರುತ್ತಾರೆ.

ಯಾವ ಜೀವನು ರಾಗದಿಂದ ಲಾಭವಿದೆಯೆಂದು ಮನ್ನಿಸಿ ರಾಗದಲ್ಲಿ ನಿಂತುಕೊಂಡಿದ್ದಾನೆ, ತನ್ನ ಕಲ್ಯಾಣವು ಪರದ ನಿಮಿತ್ತದಿಂದ ನಿಂತುಕೊಂಡಿದೆಯೆಂದು ಮನ್ನಿಸಿದ್ದಾನೆ, ನಿಮಿತ್ತವನ್ನು ಹಾಗೂ ರಾಗವನ್ನು ಸಾಧನವೆಂದು ಮನ್ನಿಸಿ

ನಿಂತುಕೊಂಡಿದ್ದಾನೆ ಅವನು ಭಗವಂತರನ್ನು ನಿಮಿತ್ತವಾಗಿ ಮಾಡುವ ಸಾಧ್ಯತೆಯಿಲ್ಲ. ಅಜ್ಞಾನಿಯು ಪರಜೀವದ ದಯೆ ಮತ್ತು ಸೇವೆಯಲ್ಲಿ ಧರ್ಮವಿದೆಯೆಂದು ಮನ್ನಿಸಿ ಅದರಲ್ಲಿಯೇ ಸಿಕ್ಕಿಹೋಗುತ್ತಾನೆ. ಇತರರ ಸಲುವಾಗಿ ಸೇವೆ ಮಾಡುವೆನೆಂದು ಮನ್ನಿಸುತ್ತಾನೆ, ಆದರೆ ಇದೆಲ್ಲವು ಅಭಿಮಾನವಿದೆ.

ನನ್ನ ಸ್ವಭಾವವು ಭವರಹಿತವಿದೆಯೆಂದು ಭಗವಂತರು ಹೇಳಿದ್ದಾರೆ. ಭಗವಂತರು ಯಾವುದೇ ಭವದ ಸ್ಥಾಪನೆ ಮಾಡುವುದಿಲ್ಲ, ಆದರೆ ಶುದ್ಧ ಸ್ವಭಾವದ ಸ್ಥಾಪನೆ ಮಾಡುತ್ತಾರೆ. ಇಲ್ಲಿ ಭ. ಕುಂದಕುಂದಾಚಾರ್ಯದೇವರಿಗೆ ವಿಕಲ್ಪ ಉಂಟಾಗಿರುವುದರಿಂದ ಅವರು ಹೇಳುವುದೇನೆಂದರೆ ಓ ಪ್ರಭು ! ಸಂಸಾರದ ಅಭಾವ ಸ್ವಭಾವರೂಪವಾದ ಪರ್ಯಾಯವು ಪ್ರಕಟವಾಗುವ ಕಾರಣವಂತೂ ನಮಗೆ ಬೇಕು, ಆದರೆ ಅದರಲ್ಲಿ ತಾವು ನಿಮಿತ್ತರಿರುವಿರಿ ಅದರಿಂದ ತಮಗೆ ವಂದಿಸುತ್ತೇನೆ. ಯಾರು ಭವದ ಅಭಾವ ತಿಳಿಸಿದ್ದಾರೆ ಮತ್ತು ಸ್ವಭಾವದ ಮಾಹಾತ್ಮ್ಯವನ್ನು ತಿಳಿಸಿದ್ದಾರೆ ಮತ್ತು ಅದರಲ್ಲಿ ಲೀನತೆ ಮಾಡಿಸುವ ಉಪದೇಶ ನೀಡಿದ್ದಾರೆ ಅವರು ವಂದನೀಯರಿದ್ದಾರೆ.

ಯಾರು ಭವದ ಕಾರಣರೂಪವಿರುವ ರಾಗಾದಿಗಳ ಅನುಮೋದನೆ ಮಾಡುತ್ತಾರೆ ಅವರಿಗೆ ವಂದನೆ ಮಾಡುವಂಥ ಜೀವನು ಮಿಥ್ಯಾದೃಷ್ಟಿಯಿದ್ದಾನೆ. ದೇವ, ಶಾಸ್ತ್ರ, ಗುರುಗಳ ಕುರಿತಾದ ರಾಗವನ್ನೂ ಕೂಡ ಆದರಣೀಯವೆಂದು ಮನ್ನಿಸುವಂಥವನು ಮಿಥ್ಯಾದೃಷ್ಟಿಯಿದ್ದಾನೆ ಮತ್ತು ಸ್ವರ್ಗದಲ್ಲಿ ಹೋಗುವುದರಿಂದ ಅಥವಾ ಮಹಾವಿದೇಹದಲ್ಲಿ ಹೋಗುವುದರಿಂದ ಲಾಭವಾಗುವುದೆಂದು ಹೇಳುವವನು, ಆದರೆ ವಸ್ತುಸ್ವಭಾವದಿಂದ ಲಾಭವಾಗುವುದೆಂದು ಹೇಳದಿದ್ದರೆ ಅವನು ವಂದನೀಯನಿಲ್ಲ. ಲೂಟಿ ಮಾಡುವವನಿಗೆ ಸಹಾಯ ಮಾಡುವವನನ್ನು ಹೇಗೆ ಅಪರಾಧಿಯೆಂದು ಗಣಿಸಲಾಗುತ್ತದೆ ಹಾಗೆ ಶುದ್ಧ ಚೈತನ್ಯ ಸ್ವಭಾವದ ವಿರುದ್ಧವಾಗಿ ಹೇಳುವವನು, ಪುಷ್ಟಿ ಮಾಡುವವನು, ಲೂಟಿ ಮಾಡುವವನಿಗೆ ಸಹಾಯ ಮಾಡುವವನ ಸಮಾನವೇ ಇದ್ದಾನೆ.

ಓ ಪ್ರಭು ! ತಮ್ಮ ವಾಣಿ ಮತ್ತು ತಮ್ಮ ಶಾಸ್ತ್ರವಂತೂ ಪ್ರತಿಯೊಂದು ದ್ರವ್ಯದ ಪೃಥಕ್ಕತೆಯನ್ನು ತಿಳಿಸುತ್ತದೆ. ಸಾಧಕ ದಶೆಯಲ್ಲಿ ರಾಗವು ಬರುತ್ತದೆ, ಆದರೆ ನಾನು ಅದರ ಅನುಮೋದನೆ ಮಾಡುವುದಿಲ್ಲ. ಸಮಯ ಸಮಯಕ್ಕೆ ಜೀವದಲ್ಲಿ ಹೊಸ ಹೊಸ ಪರ್ಯಾಯದ ಉತ್ಪಾದವಾಗುತ್ತದೆ. ಆ ಪರ್ಯಾಯದ ಪ್ರವೃತ್ತಿಯು ಬಾಹ್ಯದಲ್ಲಿ ಹೋದರೆ ಸಂಸಾರವಿದೆ ಮತ್ತು ಆಂತರ್ಯದಲ್ಲಿ ಸ್ವಭಾವದಪ್ರವೃತ್ತಿ ಮಾಡಿದರೆ ಮೋಕ್ಷಮಾರ್ಗವಿದೆ.

ಶರೀರ, ಮನಸ್ಸು, ವಾಣಿ ಮೊದಲಾದವು ಪರದ ಅಭಿರುಚಿ ಮಾಡಿ ಯಾವ ಪರ್ಯಾಯವು ಉತ್ಪನ್ನವಾಗುತ್ತದೆ ಅದು ಮೋಕ್ಷಮಾರ್ಗವನ್ನು ಬಂದ ಮಾಡಿ ಬಿಡುತ್ತದೆ. ಮತ್ತು ಯಾರು ಪರದ ಹಾಗೂ ರಾಗದ ಅಭಿರುಚಿಯನ್ನು ಬಿಟ್ಟುಕೊಟ್ಟು ಸ್ವಭಾವದ ಅಭಿರುಚಿ ಮಾಡಿ ಯಾವ ಪರ್ಯಾಯವು ಉತ್ಪನ್ನವಾಗುತ್ತದೆ ಅದು ಮೋಕ್ಷಮಾರ್ಗವನ್ನು ತೆರೆದು ಬಿಡುತ್ತದೆ ಮತ್ತು ಎಷ್ಟು ಶುದ್ಧತೆಯು ಪ್ರಕಟವಾಗುವುದು ಅದು ದ್ರವ್ಯದ ಜತೆಯಲ್ಲಿ ಅಭೇದವಾಗುತ್ತದೆ, ಆದರೆ ಎಷ್ಟು ರಾಗವು ಉಳಿದಿರುತ್ತದೆ ಅದು ಆಶ್ರಯಭೂತವಿಲ್ಲವೆಂದು ಧರ್ಮಾತ್ಮನು ಮನ್ನಿಸುತ್ತಾನೆ.

ಇಲ್ಲಿ ಭಗವಾನ ಕುಂದಕುಂದಾಚಾರ್ಯದೇವರಿಗೆ ಶುಭ ವಿಕಲ್ಪವು ಉಂಟಾಗಿರುವುದರಿಂದಲೇ ಹೇಳುತ್ತಿದ್ದಾರೆ. ನನ್ನ ಕರ್ತವ್ಯವಂತೂ ಶುದ್ಧ ಸ್ವಭಾವದಕಡೆಗೆ ಪ್ರವೃತ್ತವಾಗುವುದೇ ಇದೆ. ಅಪುನರ್ಭವದ ಕಾರಣನಂತೂ ಆತ್ಮನೇ ಇದ್ದಾನೆ. ಅವನ ಮೇಲೆ ಭಾರವಿರುವುದರಿಂದ ಅಪುನರ್ಭವವು (ಮೋಕ್ಷವು) ಆಗಿಯೇ ಆಗುವುದು, ಆದರೆ ಈಗ ರಾಗವಿರುವುದರಿಂದ ಮತ್ತು ವಿಕಲ್ಪವುಂಟಾಗುವುದರಿಂದ ವಂದನೆ ಮಾಡುತ್ತಿದ್ದೇನೆ, ಆದರೆ ಆ ವಂದನೆಯ ಮೇಲೆ ಭಾರವಿಲ್ಲ. ಭಾರವಂತೂ ಅಪುನರ್ಭವದ ಕಾರಣವಿರುವ ಶುದ್ಧಸ್ವಭಾವದ ಮೇಲೆ ಇದೆ. ಭಗವಂತರ ಸ್ತುತಿ ಮಾಡುವ ಸಮಯದಲ್ಲಿ ಭಗವಂತರ ಕುರಿತು ರಾಗವಿದ್ದರೂ ಕೂಡ ನಾವು ತಮ್ಮನ್ನು ನಮ್ಮ ವಿಕಲ್ಪದಲ್ಲಿ ನಿಮಿತ್ತವೆಂದು ಹೇಳುವುದಿಲ್ಲ. ನಾವು ತಮ್ಮನ್ನು ಜ್ಞಾಯಕ ಸ್ವಭಾವದಲ್ಲಿ ನಿಮಿತ್ತರೆಂದು ಹೇಳುತ್ತಿದ್ದೇವೆ. ಈ ಪ್ರಕಾರ ಅಪುನರ್ಭವದ

ಕಾರಣನಂತೂ ತಮ್ಮ ಆತ್ಮನಿದ್ದಾನೆ ಮತ್ತು ಅದರಲ್ಲಿ ನಿಮಿತ್ತರು ಶ್ರೀ ಮಹಾವೀರ ಭಗವಂತರಿದ್ದಾರೆಂದು ಹೇಳಿ ನಿಶ್ಚಯ ಮತ್ತು ವ್ಯವಹಾರಗಳೆರಡನ್ನೂ ತಿಳಿಸಿಕೊಡಲಾಗಿದೆ.

ಈ ಪ್ರಕಾರ ಮೋಕ್ಷದ ಕಾರಣಭೂತರಾದ ಭಗವಾನ ವರ್ಧಮಾನ ತೀರ್ಥಂಕರದೇವರಿಗೆ ಮಸ್ತಕವನ್ನು ಮಣಿಸಿ ನಮಸ್ಕಾರ ಮಾಡಿ ಮೋಕ್ಷಮಾರ್ಗ ಅಥವಾ ಅದರ ಕಾರಣ ಸ್ವರೂಪವಿರುವ ಆರು ದ್ರವ್ಯಗಳ ಒಂಭತ್ತು ಪದಾರ್ಥಗಳ ಭೇದಗಳನ್ನು ಹೇಳುತ್ತೇನೆಂದು ಆಚಾರ್ಯ ಭಗವಂತರು ಹೇಳಿದ್ದಾರೆ. ಮೋಕ್ಷಮಾರ್ಗವು ಎಲ್ಲಿ ನಡೆಯುತ್ತಿದೆಯೆಂದರೆ ಅದು ಎಂದರೆ ಆತ್ಮನ ಮೋಕ್ಷಮಾರ್ಗವು ಅಂತರ್ಯದ ದಶೆಯಲ್ಲಿ ಇದೆ. ಸ್ವರೂಪದಲ್ಲಿ ಅಂತರ್ಮುಖವಾಗುವುದು ಏಕಾಗ್ರವಾಗುವುದು ಅದು ಮೋಕ್ಷಮಾರ್ಗವಿದೆ. ಆ ಮೋಕ್ಷಮಾರ್ಗದ ಕಾರಣ ಸ್ವರೂಪವಾಗಿ ಆರು ದ್ರವ್ಯಗಳಿವೆ. ಅವು ಭಗವಂತರ ವಾಣಿಯಲ್ಲಿ ಹೇಗೆ ಬಂದಿವೆಯೋ ಅದೇ ಪ್ರಕಾರವೇ ಇವೆ. ಆ ಆರರಲ್ಲಿ ಭೇದ ಮಾಡಿ ಒಂಭತ್ತರ ವ್ಯಾಖ್ಯೆ ಮಾಡಲಾಗುವುದು.

**ಭಾವಾರ್ಥ :-** ವರ್ತಮಾನದೊಳಗೆ ಪಂಚಮಕಾಲವಿದ್ದು, ಅದರಲ್ಲಿ ಧರ್ಮತೀರ್ಥದ ಕರ್ತೃಗಳು ಭಗವಾನ ಪರಮ ಭಟ್ಟಾರಕ ದೇವಾಧಿದೇವ ಶ್ರೀ ವರ್ಧಮಾನ ಸ್ವಾಮಿಗಳಿದ್ದಾರೆ. ಯಾವ ಪಾತ್ರ ಜೀವರುಗಳು ತಮ್ಮ ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡು ತಮ್ಮಲ್ಲಿ ಧರ್ಮತೀರ್ಥ ಪ್ರಕಟಪಡಿಸಿಕೊಂಡಿರುವಂಥ ಜೀವರುಗಳಿಗೆ ಧರ್ಮ ಪ್ರಕಟ ಮಾಡುವಲ್ಲಿ ಭಗವಂತರು ನಿಮಿತ್ತರಿರುವುದರಿಂದ ಭಗವಂತರನ್ನು ಧರ್ಮತೀರ್ಥದ ಕರ್ತೃಗಳೆಂದು ಹೇಳಲಾಗುತ್ತದೆ.

ಭಗವಂತರು ದೇವರ ದೇವರಿದ್ದಾರೆ. ಗಣಧರದೇವರ ದೇವರಿದ್ದಾರೆ, ಚಕ್ರವರ್ತಿಗಳ ದೇವರಿದ್ದಾರೆ, ದೇವಾದಿ ದೇವರಿದ್ದಾರೆ. ಅವರ ಸ್ತುತಿ ಮಾಡುತ್ತೇನೆಂದು ಹೇಳುವುದು ಅದು ದ್ರವ್ಯ ಸ್ತುತಿಯಿದೆ. ಈ ರೀತಿಯಾಗಿ ಭಗವಾನ ಕುಂದಕುಂದಾಚಾರ್ಯದೇವರು ಭಗವಾನ ಮಹಾವೀರ ಸ್ವಾಮಿಯ ಸ್ತುತಿಮಾಡಿ, ಮೋಕ್ಷಮಾರ್ಗವನ್ನು ತಿಳಿಸಿಕೊಡುವಂಥ ಆರು ದ್ರವ್ಯಗಳ ಭೇದರೂಪವಿರುವ ಒಂಭತ್ತು ತತ್ತ್ವಗಳನ್ನು ಹೇಳುತ್ತೇನೆಂದು ಪ್ರತಿಜ್ಞೆ ಮಾಡಿದ್ದಾರೆ.

ಈಗ ಸಂಕ್ಷೇಪದಲ್ಲಿ ಮೋಕ್ಷಮಾರ್ಗದ ಕಥನ ಮಾಡುತ್ತಾರೆ -

**ಸಮ್ಮತ್ತಣಾಣಜುತ್ತಂ ಚಾರಿತ್ತಂ ರಾಗದೋಸಪರಿಹೀಣಂ ।**
**ಮೋಕ್ಖಸ್ಸ ಹವದಿ ಮಗ್ಗೋ ಭವ್ವಾಣಂ ಲದ್ಧಬುದ್ಧೀಣಂ ॥೧೦೬॥**

**ಆ ಸಮ್ಯಕ್ತ್ವಜ್ಞಾನಸಂಯುಕ್ತವದರಂತೆ ರಾಗದ್ವೇಷವಿಲ್ಲದ ಚಾರಿತ್ರವದು ।**
**ಲೇಸಾದ ಲಬ್ಧಬುದ್ಧಿಯಭವ್ಯಜೀವಗಳಿಗೆ ಮೋಕ್ಷದಮಾರ್ಗವಿರುವುದು ॥೧೦೬॥**

ಸಮ್ಯಕ್ತ್ವ ಎಂದರೆ ಶ್ರದ್ಧೆ ಮತ್ತು ವಸ್ತುವಿನ ಯಥಾರ್ಥಜ್ಞಾನಸಹಿತವಿರುವ ಯಾವ ಆಚರಣೆಯಿದೆ ಅದು ಮೋಕ್ಷದ ಮಾರ್ಗವಿದೆ ಎಂದರೆ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರ ಈ ಮೂರರ ಪರಿಣಮನವು ಯಾವಾಗ ಒಟ್ಟಿಗೆ ಆಗುತ್ತದೆ ಆಗಲೇ ಮೋಕ್ಷ ಮಾರ್ಗವಾಗುತ್ತದೆ. ಆ ದರ್ಶನ, ಜ್ಞಾನಸಹಿತವಾಗಿರುವ ಚಾರಿತ್ರವು ಹೇಗಿದೆಯೆಂದರೆ ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರಾಗ-ದ್ವೇಷಗಳಿಲ್ಲದ ಸಮತೆಯರಸದಿಂದ ಗರ್ಭಿತವಿದೆ. ಇಂಥ ಮೋಕ್ಷಮಾರ್ಗವು ಯಾರಿಗೆ ಆಗುತ್ತದೆಯೆಂದರೆ ಯಾರಿಗೆ ಸ್ವ-ಪರ ಭೇದವಿಜ್ಞಾನದ ಬುದ್ಧಿಯು ಪ್ರಾಪ್ತವಾಗಿದೆ ಮತ್ತು ಯಾರು ಮೋಕ್ಷಮಾರ್ಗದ ಸನ್ಮುಖರಿದ್ದಾರೆ ಆ ಜೀವರುಗಳಿಗೆ ಮೋಕ್ಷಮಾರ್ಗವಾಗುತ್ತದೆ.

ಈ ಗಾಥೆಯು ಅತ್ಯಂತ ರಸವತ್ತಾಗಿದೆ ; ಭಾವಪೂರ್ಣವಾಗಿದೆ.

ಇಲ್ಲಿ ಚಾರಿತ್ರವನ್ನು ಮೋಕ್ಷಮಾರ್ಗವೆಂದು ಹೇಳಿದೆ. ಕಾರಣವೇನೆಂದರೆ ಚಾರಿತ್ರವು ಅದು ಪ್ರತ್ಯಕ್ಷ ಧರ್ಮವಿದೆ ಮತ್ತು ಅದು ಮೋಕ್ಷಮಾರ್ಗದ-ಕೇವಲಜ್ಞಾನದ ಕಾರಣವಿದೆ. ಆ ಚಾರಿತ್ರವು ಹೇಗಿದೆಯೆಂದರೆ ಅದು ಸಮ್ಯಗ್ದರ್ಶನ ಮತ್ತು ಸಮ್ಯಕ್‌ಜ್ಞಾನದಿಂದ ಯುಕ್ತವಿದೆ. ಅಜ್ಞಾನೀ ಜೀವರುಗಳು ವ್ರತ, ತಪಸ್ಸುಗಳನ್ನು ಚಾರಿತ್ರವೆಂದು ಹೇಳುತ್ತಾರೆ, ಆದರೆ ಅದು ಚಾರಿತ್ರವಲ್ಲ. ಅನಾದಿಯಿಂದ ಅಜ್ಞಾನಿಗಳಲ್ಲಿ ಪುಣ್ಯದಿಂದ ಧರ್ಮವಾಗುತ್ತದೆಂದು ಮನ್ನಿಸುವ ಶಲ್ಯವು ಬಿದ್ದುಕೊಂಡಿದೆ, ಅದರಿಂದಲೇ ಸಂಸಾರದಲ್ಲಿ ಭ್ರಮಣ ಮಾಡುತ್ತಿದ್ದಾನೆ. ಧರ್ಮದಲ್ಲಿ ಹೊಣೆಗಾರಿಕೆಯು ಸ್ವಯಂ ತಮ್ಮದಿದೆಯೆಂದು ಇಲ್ಲಿ ಹೇಳಿದ್ದಾರೆ. ಇತರರ ಆಧಾರದಿಂದ ಕಾರ್ಯವಾಗುವುದಿಲ್ಲ ಎಂದರೆ ಸ್ವಯಂ ತಾನೇ ಯಥಾರ್ಥ ಶ್ರದ್ಧೆ-ಜ್ಞಾನ ಮಾಡಬೇಕಾಗುವುದು.

ಇಲ್ಲಿ ಹೇಳಿರುವುದೇನೆಂದರೆ ಯಥಾರ್ಥ ಶ್ರದ್ಧೆ ಮತ್ತು ಯಥಾರ್ಥ ವಸ್ತುವಿನ ಜ್ಞಾನಸಹಿತವಾಗಿ ಯಾವ ಆಚರಣೆಯಿದೆ ಅದು ಮೋಕ್ಷಮಾರ್ಗವಿದೆ. ಮೂರರ ಏಕತೆಯಿಂದಲೇ ಮೋಕ್ಷಮಾರ್ಗವಾಗುತ್ತದೆ. ಸಮ್ಯಗ್ದರ್ಶನವು ಅದು ಪ್ರತ್ಯಕ್ಷ ಧರ್ಮವಿಲ್ಲ, ಆದರೆ ಅದು ಧರ್ಮದ ಮೂಲವಿದೆ. ಪ್ರತ್ಯಕ್ಷ ಧರ್ಮವಂತೂ ಚಾರಿತ್ರವಿದೆ. ಆ ಚಾರಿತ್ರವು ಸಮ್ಯಗ್ದರ್ಶನವಿಲ್ಲದೆ ಇರುವುದಿಲ್ಲ.

ದರ್ಶನ, ಜ್ಞಾನಯುಕ್ತವಾದ ಆ ಚಾರಿತ್ರವು ಹೇಗಿದೆಯೆಂದರೆ ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರಾಗ-ದ್ವೇಷಗಳಿಂದ ರಹಿತ ಸಮತೆಯ ರಸದಿಂದ ಗರ್ಭಿತವಿದೆ. ಇಲ್ಲಿ ಚಾರಿತ್ರದ ಮಾತು ಹೇಳುತ್ತಿದ್ದಾರೆ. ಇಂಥ ಅದ್ಭುತ ಸ್ವತಂತ್ರತೆಯನ್ನು ತಿಳಿಸಿಕೊಡುವಂಥ ವಾಣಿಯು ಹೊರಟಿದ್ದರೂ ಕೂಡ ಈ ಜೀವನು ಅದೇಕೆ ಮನ್ನಿಸುತ್ತಿಲ್ಲ ? ಈ ವಿರೋಧಿಗಳು ನಿಜವಾದ ಮಾರ್ಗವನ್ನು ವಿಲೋಪ ಮಾಡಿಬಿಟ್ಟಿದ್ದಾರೆಂಬ ಅನೇಕ ಪ್ರಕಾರದ ವಿಕಲ್ಪಗಳು ಚಾರಿತ್ರವಂತರಿಗೆ ಉತ್ಪನ್ನವಾಗುವುದೇ ಇಲ್ಲ. ಯಾವುದಾದರೂ ಒಂದಿಷ್ಟು ಯಶಸ್ಸು ಇದ್ದರೆ ಅದು ನನ್ನ ಸ್ವಭಾವದ ಕಾರಣದಿಂದ ಇದೆ ಮತ್ತು ಅಯಶಸ್ಸು ಇದ್ದರೆ ಅದು ನನ್ನ ಪರ್ಯಾಯದಲ್ಲಿ ಇದೆ. ಬಾಹ್ಯದಲ್ಲಿನ ಕಾರಣಗಳಿಂದ ರಾಗ-ದ್ವೇಷಗಳಾಗುತ್ತವೆಯೆಂದು ಸಮ್ಯಗ್ದೃಷ್ಟಿಯು ಮನ್ನಿಸುವುದಿಲ್ಲ. ಅದರ ನಂತರ ತನ್ನ ಶಿಥಿಲತೆಯ ಕಾರಣದಿಂದ ಹೀಗೇಕಾಗುತ್ತದೆಯೆಂಬ ವಿಕಲ್ಪವು ಕೂಡ ಚಾರಿತ್ರವಂತರಿಗೆ ಆಗುವುದಿಲ್ಲ-ಬರುವುದಿಲ್ಲ. ಯಾವುದು ಯಾವುದನ್ನು ಮನ್ನಿಸುವುದೆಂದು ಅವನು ವಿಚಾರ ಮಾಡುತ್ತಾನೆ. ಯಾರು ಯಾರದನ್ನು ಮನ್ನಿಸುವುದಿಲ್ಲವೆಂದು ವಿಚಾರ ಮಾಡಿ ಮುನಿಗಳು ಅಂತರ್ಯದಲ್ಲಿ ಸ್ಥಿರವಾಗಿ ಹೋಗುತ್ತಾರೆ. ಎಷ್ಟು ಶಿಥಿಲತೆಯಿದೆ ಅಷ್ಟು ಚಾರಿತ್ರವಿಲ್ಲ. ಯಾರು ಯಾರನ್ನು ತಿದ್ದುವುದು ಮತ್ತು ಯಾರು ಯಾರನ್ನು ಕೆಡಿಸುವುದೆಂಬ ವೃತ್ತಿಯು ಉತ್ಪನ್ನವಾಗುವುದೇ ಇಲ್ಲ. ನನ್ನ ಸ್ವಭಾವದ ಆದರವು ಅದು ನನ್ನ ಮಾನವಿದೆ ಮತ್ತು ನನ್ನ ಸ್ವಭಾವದ ಅನಾದರವು ಅದುವೇ ಅವಮಾನವಿದೆಯೆಂದು ತಿಳಿದುಕೊಂಡು ಬಾಹ್ಯದಲ್ಲಿನ ಮಾನ ಮತ್ತು ಅವಮಾನದ ಕಡೆಗಿರುವ ನಿರ್ಬಲತೆಯ ವೃತ್ತಿಯನ್ನು ಮುರಿದು ಹಾಕಿ ಅಂತರ್ಯದಲ್ಲಿ ಸ್ಥಿರವಾಗಿ ಹೋಗುವುದು ಅದು ಚಾರಿತ್ರವಿದೆ.ಅವನಿಗೆ ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರಾಗ ದ್ವೇಷಗಳಿಲ್ಲದ ಸಮತೆಯು ಪ್ರಕಟವಾಗಿರುತ್ತದೆ. ಇಂಥ ಮೋಕ್ಷಮಾರ್ಗವು ಯಾರಿಗೆ ಆಗುತ್ತದೆಯೆಂದರೆ ಯಾರಿಗೆ ಸ್ವ-ಪರ ವಿವೇಕದ ಭೇದವಿಜ್ಞಾನದ ಬುದ್ಧಿಯು ಪ್ರಕಟವಾಗಿ ಹೋಗಿದೆ ಮತ್ತು ಯಾರು ಮೋಕ್ಷಮಾರ್ಗದ ಸನ್ಮುಖರಿದ್ದಾರೆ ಅವರಿಗೆ ಚಾರಿತ್ರ ಅಥವಾ ಮೋಕ್ಷಮಾರ್ಗವು ಪ್ರಕಟವಾಗುತ್ತದೆ.

**ಭಾವಾರ್ಥ :-** ಚಾರಿತ್ರವಿದೆ ಅದು ದರ್ಶನ ಮತ್ತು ಜ್ಞಾನಸಹಿತವಾಗಿರುತ್ತದೆ. ತನ್ನ ಸ್ವರೂಪದ ಆಚರಣೆ, ಸ್ವಭಾವದ ಅನುಷ್ಠಾನ ಮತ್ತು ಸ್ವಭಾವದಲ್ಲಿ ರಮಣತೆಯು ಅದು ಚಾರಿತ್ರವಿದೆ ಮತ್ತು ಅದು ದರ್ಶನ-ಜ್ಞಾನಸಹಿತವಿರುತ್ತದೆ.

ಬಾಲಕನ ಕೈಯೊಳಗಿನ ಹುಣಸೆಯನ್ನು ತೆಗೆದುಕೊಂಡು ಅವನಿಗೆ ಪೇಡೆ ಕೊಡಲು ಹೋದರೂ ಕೂಡ ಅವನು ಹಸಿಹುಣಸೆಯನ್ನು ಬಿಟ್ಟುಕೊಡುವುದಿಲ್ಲ, ಅವನು ಪೇಡೆಯ ಸಿಹಿಯನ್ನು ತಿಳಿದುಕೊಳ್ಳುವುದಿಲ್ಲ. ಅದೇ ಪ್ರಕಾರ ಅಜ್ಞಾನಿಗೆ ದೋಷಯುಕ್ತ ಕ್ರಿಯಾಕಾಂಡವನ್ನು ಬಿಟ್ಟುಕೊಡಲು ಹೇಳಿ ನಿಜವಾದ ಚಾರಿತ್ರವನ್ನು ತಿಳಿಸಿಕೊಟ್ಟರೂ ಕೂಡ ಅವನು ತಿಳಿದುಕೊಳ್ಳುವುದಿಲ್ಲ. ಆ ಭಗವಂತರು ಸರ್ವಜ್ಞದಶೆಯನ್ನು ಪಡೆದುಕೊಂಡಿದ್ದಾರೆ ಅವರು ತಮ್ಮಲ್ಲಿ ತಾವು ಸ್ಥಿರವಿದ್ದುಕೊಂಡೇ ಭಗವಂತರಾಗಿದ್ದಾರೆ, ಅವರು ಬಾಹ್ಯದಿಂದ ಭಗವಂತರಾಗಿಲ್ಲ. ಯಾರು ಪೂರ್ಣಾನಂದದ ದಶೆಯನ್ನು ಪಡೆದುಕೊಂಡಿದ್ದಾರೆ ಅವರು ಶಿರಸಾವಂದ್ಯರಿದ್ದಾರೆ, ಅವರು ದೊಡ್ಡವರಿದ್ದಾರೆ. ಅವರು ತಮ್ಮ ಸ್ವಭಾವದ ಆಶ್ರಯದಿಂದ ವೀತರಾಗತೆ ಮತ್ತು ಸರ್ವಜ್ಞತೆಯನ್ನು ಪ್ರಕಟ ಮಾಡಿಕೊಂಡು ರಾಗ-ದ್ವೇಷಗಳನ್ನು ತೆಗೆದು ಹಾಕಿದ್ದಾರೆ. ಅವರು ಯಾವುದನ್ನು ತೆಗೆದು ಹಾಕಿದ್ದಾರೆ ಅದನ್ನು ತೆಗೆದು ಹಾಕುವಂಥದ್ದಿದೆಯೆಂದು ಮನ್ನಿಸಿದ್ದಾರೆ ಮತ್ತು ಅವರು ಯಾವುದನ್ನು ಉಳಿಸಿಕೊಂಡಿದ್ದಾರೆ, ಅದನ್ನು ಸ್ವಭಾವದ ಆಶ್ರಯದಿಂದ ಉಳಿಸಿಕೊಂಡಿದ್ದಾರೆ ಅವರು ಸಿದ್ಧರನ್ನು ಮನ್ನಿಸಿದ್ದಾರೆ. ಈ ಪ್ರಕಾರ ತಮ್ಮ ಸ್ವಭಾವದ ಅಂತರ್ದೃಷ್ಟಿ ಮಾಡಿದಲ್ಲದೆ ಚಾರಿತ್ರವು ಪ್ರಕಟವಾಗುವುದಿಲ್ಲ. ತಮ್ಮ ಆತ್ಮನ ಶ್ರದ್ಧೆ-ಜ್ಞಾನಪೂರ್ವಕವಾಗಿರುವ ಆಚರಣೆಯು ಅದು ಚಾರಿತ್ರವಿದೆ.

ಈಗ ನಾಸ್ತಿಯಿಂದ ಮಾತನಾಡುತ್ತಾರೆ. ದರ್ಶನ-ಜ್ಞಾನದಿಂದ ರಹಿತವಾದ ಯಾವ ಚಾರಿತ್ರವಿದೆ ಅದು ಮಿಥ್ಯಾಚಾರಿತ್ರವಿದೆ. ಆತ್ಮನ ಜ್ಞಾನವಿಲ್ಲದೆ ಮತ್ತು ಒಂಭತ್ತು ತತ್ತ್ವಗಳ ಯಥಾರ್ಥ ತಿಳಿವಳಿಕೆಯಿಲ್ಲದೆ ಮಹಾವ್ರತ ಮೊದಲಾದವುಗಳ ಪಾಲನೆ ಮಾಡುವುದು ಅದು ಮಿಥ್ಯಾಚಾರಿತ್ರವಿದೆ. ಐದು ಮಹಾವ್ರತಗಳ ರಾಗವು ಅದು ಆಸ್ರವವಿದೆ, ಅದು ಆತ್ಮನ ದಶೆಯನ್ನು ಕೆಡಿಸಿಬಿಡುವಂಥದ್ದಿದೆ. ಆಂತರ್ಯದ ಸ್ವಭಾವದಿಂದ ಲಾಭವಿದೆಯೆಂದು ಮನ್ನಿಸಿಕೊಂಡಲ್ಲದೆ ಆಚರಣೆಯಾಗುವುದಿಲ್ಲ.

ಸಮ್ಯಗ್ದರ್ಶನವಾಗುತ್ತದೆ, ಆದರೆ ಅದರ ಪ್ರಜ್ಞೆಯಿರುವುದಿಲ್ಲವೆಂದು ಯಾರಾದರೂ ಹೇಳುತ್ತಿದ್ದರೆ ಆ ಮಾತು ತೀರ ಅಸತ್ಯವಿದೆ. ಆತ್ಮನಲ್ಲಿ ಪ್ರಮೇಯತ್ವವೆಂಬ ಹೆಸರಿನ ಒಂದು ಗುಣವಿದೆ. ಎಲ್ಲಿ ಶ್ರದ್ಧೆಯ ಪರ್ಯಾಯವಿದೆ ಅಲ್ಲಿ ಪ್ರಮೇಯತ್ವವು ಕೂಡ ಇರುವುದರಿಂದ ಅದರಲ್ಲಿ ತಿಳಿದುಕೊಳ್ಳುವ ಯೋಗ್ಯತೆಯಿರುತ್ತದೆ ಮತ್ತು ಜ್ಞಾನವು ಜ್ಞೇಯವನ್ನು ಪೂರ್ತಿ ತಿಳಿದುಕೊಳ್ಳುವಂಥದು ಜ್ಞಾನದ ಸ್ವಭಾವವಿದೆ. ಅಜ್ಞಾನಿಗಳಿಗೆ ಪ್ರಜ್ಞೆಯಿಲ್ಲದಿರುವುದರಿಂದ ಅವರಿಗೆ ಸಮ್ಯಗ್ದರ್ಶನವಾಗುವುದಿಲ್ಲ. ಆತ್ಮದ್ರವ್ಯದ ಜ್ಞಾನವಿಲ್ಲದೆ, ರಾಗ ಮತ್ತು ಸ್ವಭಾವದ ಮಧ್ಯದಲ್ಲಿರುವ ವಿವೇಕವಿಲ್ಲದೆ ಸ್ವಭಾವದ ಆಂತರ್ಯದಲ್ಲಿ ರಮಣತೆಯಾಗುವುದಿಲ್ಲ.

ಯಾವ ಜೀವರುಗಳು ಕುದೇವ-ಕುಗುರು-ಕುಶಾಸ್ತ್ರಗಳನ್ನು ಮನ್ನಿಸುತ್ತಾರೆ ಅವರಿಗೆ ಇನ್ನೂ ಗೃಹೀತ ಮಿಥ್ಯಾತ್ವದ ತ್ಯಾಗವಾದರೂ ಯಾವ ರೀತಿಯಿಂದ ಆಗುವುದೆಂಬುದರದೂ ಕೂಡ ಪ್ರಜ್ಞೆಯು ಇಲ್ಲ. ನಿಜವಾದ ದೇವ-ಶಾಸ್ತ್ರ-ಗುರು ಮತ್ತು ಜಿನಬಿಂಬವು ಹೇಗಿರುತ್ತದೆಯೆಂಬ ವ್ಯವಹಾರದ ಪ್ರಜ್ಞೆಯು ಇಲ್ಲ, ಅವನಿಗೆ ಗೃಹೀತ ಮಿಥ್ಯಾತ್ವವಿದೆ ಮತ್ತು ಅಗೃಹೀತ ಮಿಥ್ಯಾತ್ವವಂತೂ ಬಿದ್ದುಕೊಂಡೇ ಇದೆ. ಯಾರಿಗೆ ವ್ಯವಹಾರದ ವಿವೇಕವಿಲ್ಲ ಅವರಿಗೆ ನಿಶ್ಚಯದ ವಿವೇಕವಂತೂ ಇರುವುದೇ ಇಲ್ಲ. ಅವರಿಗೆ ಮಹಾವ್ರತಗಳು ಇರುವುದಿಲ್ಲ.

ಇಲ್ಲಿಯಂತೂ ಹೇಳುವುದೇನೆಂದರೆ ನಿಜವಾದ ದೇವ-ಗುರು-ಶಾಸ್ತ್ರಗಳನ್ನು ವ್ಯವಹಾರದಿಂದ ಮನ್ನಿಸಿದ ನಂತರ ವ್ರತ, ತಪಸ್ಸು, ದಯೆ, ದಾನ ಮೊದಲಾದವುಗಳನ್ನು ಧರ್ಮದ ಸಾಧನಗಳೆಂದು ಮನ್ನಿಸಿದರೆ ಅವನು ಮೂಢನಿದ್ದಾನೆ, ಅವನಿಗೆ ಚಾರಿತ್ರವಿರುವುದಿಲ್ಲ, ಚಾರಿತ್ರವಾಗುವುದಿಲ್ಲ.

ಯಾವುದು ಚಾರಿತ್ರವಿದೆ ಅದುವೇ ಚಾರಿತ್ರವಿದೆ. ಯಾವುದು ರಾಗರಹಿತವಿರುವ ಜ್ಞಾನಸ್ವಭಾವದಲ್ಲಿ ಜೀಕುತ್ತದೆ, ಚಿದಾನಂದ ಶಕ್ತಿಯನ್ನು ಭೇದಿಸಿ ಆನಂದದ ಅನುಭವ ಮಾಡುತ್ತದೆ ಅದು ಚಾರಿತ್ರವಿದೆ. ಆರನೆಯ

ಗುಣಸ್ಥಾನದಲ್ಲಿ ಭಾವಲಿಂಗೀ ಮಹಾಮುನಿಗಳಿಗೆ ಇಪ್ಪತ್ತೆಂಟು ಮೂಲಗುಣಗಳ, ಪಂಚಮಹಾವ್ರತ ಮೊದಲಾದವುಗಳ ವಿಕಲ್ಪಗಳು ಉಂಟಾಗುತ್ತವೆ, ಆದರೆ ಅದು ಚಾರಿತ್ರವಲ್ಲ, ಎಂದ ಮೇಲೆ ಮಿಥ್ಯಾದೃಷ್ಟಿಯ ಚಾರಿತ್ರವು ಚಾರಿತ್ರ ಹೇಗೆ ಆಗುವ ಸಾಧ್ಯತೆಯಿದೆ ?

ಆದುದರಿಂದ ಯಾವುದು ರಾಗ-ದ್ವೇಷಗಳಿಂದ ರಹಿತವಿದೆ ಮತ್ತು ಸಮತೆಯ ರಸದಿಂದ ಸಹಿತವಿದೆ ಅದುವೇ ಚಾರಿತ್ರವಿದೆ. ಬಾಹ್ಯದಲ್ಲಿ ಮಾನ-ಅವಮಾನಗಳಾಗುತ್ತಿದ್ದರೂ, ಅನ್ಯಾಯವಾಗುತ್ತಿದ್ದರೂ ಕೂಡ ಮುನಿವರರುಗಳು ಆತ್ಮನ ಪ್ರಜ್ಞೆಯೊಡನೆ ವೀತರಾಗೀ ಸಮತೆಯನ್ನು ಧಾರಣ ಮಾಡುತ್ತಾರೆ ಮತ್ತು ಅಂತರ್ಯದಲ್ಲಿ ಆನಂದದೊಳಗೆ ಮುಳುಗೇಳುತ್ತಿರುತ್ತಾರೆ. ಜೈನ ಧರ್ಮವು ಸತ್ಯವಿದೆ ಮತ್ತು ಅನ್ಯ ಮತಗಳು ಅಸತ್ಯವಿದೆಯೆಂಬ ವಿಕಲ್ಪವು ಕೂಡ ಉತ್ಪನ್ನವಾಗುವುದಿಲ್ಲ, ಆದರೆ ಸಮತೆಯಲ್ಲಿ ಜೀಕುತ್ತಿರುವುದು ಅದು ಚಾರಿತ್ರವಿದೆ. ಅಜ್ಞಾನಿಗಳು ಮನ್ನಿಸಿಕೊಂಡಿರುವುದೇನೆಂದರೆ ನಮ್ಮನ್ನು ವೈರಿಗಳು ಬೇಕಾದಷ್ಟು ಕೋಲಿನಿಂದ ಹೊಡೆದರೂ ಕೂಡ ನಾವು ಸಮತೆಯನ್ನು ಕಾಯ್ದುಕೊಳ್ಳುತ್ತೇವೆ ಆದರೆ ಸೋದರರೇ ! ಅದು ಸಮತೆಯಲ್ಲ, ಪರದ ಲಕ್ಷದಿಂದ ಆಗುವ ಕಷಾಯದ ಮಂದತೆಯಿದೆ. ಅವನಿಗೆ ರಾಗದ ಒಂದು ಅಂಶವು ಕೂಡ ಅಭಾವವಾಗುವುದಿಲ್ಲ. ಸ್ವಭಾವದ ಯಥಾರ್ಥ ದೃಷ್ಟಿಯಾದಲ್ಲದೆ ರಾಗವು ಯಥಾರ್ಥತೆಯಿಂದ ಕಡಿಮೆಯಾಗುವುದಿಲ್ಲ. ಆತ್ಮನ ಪ್ರಜ್ಞೆಯು ವರ್ತಿಸುತ್ತಿರುವಂಥ ಮುನಿಗಳಿಗೆ ಸತ್‌ದ ಸ್ಥಾಪನೆಯ ಮತ್ತು ಅಸತ್‌ದ ಉತ್ಥಾಪನೆಯ ವಿಕಲ್ಪಗಳು ಉತ್ಪನ್ನವಾಗುವುದಿಲ್ಲ, ಅದು ಸಮತೆಯಿದೆ. ಶಾಸ್ತ್ರರಚನೆ ಮಾಡುವ ವಿಕಲ್ಪವಾಗುವುದು ಅದು ಚಾರಿತ್ರವಲ್ಲ. ಕಷಾಯರಸದಿಂದ ಗರ್ಭಿತವಾಗಿರುವುದು ಅದು ಚಾರಿತ್ರವಲ್ಲ, ಆದರೆ ಅದು ಸಂಕ್ಲೇಶರೂಪದ ಪರಿಣಾಮವಿದೆ. ಮಹಾಮುನಿಗಳಿಗೆ ಶಾಸ್ತ್ರ ರಚಿಸುವ ವಿಕಲ್ಪವುಂಟಾಗುತ್ತದೆ ಅದು ಸಂಕ್ಲೇಶರೂಪವಿದೆ. ಅದು ಚಾರಿತ್ರವೂ ಅಲ್ಲ ಮತ್ತು ಸಮತೆಯ ಭಾವವು ಕೂಡ ಅಲ್ಲ. ಅನಂತರ ಅದರ ಹಿಂದೆ ಅಕಷಾಯ ಪರಿಣತಿಯಿರುತ್ತದೆ, ಅದು ಚಾರಿತ್ರವಿದೆ ಮತ್ತು ಅದು ಮೋಕ್ಷದ ಕಾರಣವಿದೆ.

**ಭಾವಾರ್ಥ :-** ೧) ಇದು ಮೋಕ್ಷಮಾರ್ಗದ ಅಧಿಕಾರವಿದೆ. ಆತ್ಮನ ಸ್ವಭಾವವು ಶುದ್ಧವಿದೆ ; ಆದರೆ ಪರ್ಯಾಯದಲ್ಲಿ ರಾಗ-ದ್ವೇಷಗಳಿದ್ದು ಅವುಗಳಿಂದ ಮುಕ್ತಿಯಾಗುವುದನ್ನು ಮತ್ತು ಶಕ್ತಿಗಳದ್ದು ಪೂರ್ಣ ವ್ಯಕ್ತತೆಯಾಗುವುದನ್ನು ಮೋಕ್ಷವೆಂದು ಹೇಳುತ್ತಾರೆ. ಅದರ ಮಾರ್ಗವು ಮೋಕ್ಷಮಾರ್ಗವಿದೆ ಮತ್ತು ಅದುವೇ ಚಾರಿತ್ರವಿದೆ. ಆತ್ಮನು ಪರದಲ್ಲಿ ಮತ್ತು ಸಂಕಲ್ಪ-ವಿಕಲ್ಪಗಳಲ್ಲಿ ಸಿಕ್ಕಿಕೊಂಡಿದ್ದಾನೆ ಅದು ಬಂಧಮಾರ್ಗವಿದೆ. ವಿಭಾವಗಳಿಂದ ರಹಿತವಾಗಿ ಸ್ವಭಾವದಲ್ಲಿ ಸ್ಥಿರತೆ ಮಾಡುವುದು ಅದು ಚಾರಿತ್ರವಿದೆ. ಸ್ವರೂಪದಲ್ಲಿ ವಿಹರಿಸುವುದು ರಮಿಸುವುದು ಅದು ಚಾರಿತ್ರವಿದೆ. 'ದರ್ಶನ-ಜ್ಞಾನಗಳಿಂದ ಯುಕ್ತವಾಗಿರುವುದೇ ಚಾರಿತ್ರವಿದೆ. ದರ್ಶನ-ಜ್ಞಾನದಿಂದ ರಹಿತವಾದ ಯಾವ ಚಾರಿತ್ರವಿದೆ ಅದು ಮಿಥ್ಯಾಚಾರಿತ್ರವಿದೆ. ಯಾವುದು ಶಾಂತಿಯನ್ನು ಪ್ರಕಟ ಮಾಡುತ್ತದೆ ಅದು ಚಾರಿತ್ರವಿದೆ. ಅದು ಸಮ್ಯಗ್ದರ್ಶನ-ಜ್ಞಾನದಿಂದ ಸಹಿತವಾಗಿರುತ್ತದೆ. ಆತ್ಮ ಪದಾರ್ಥವು ಪರದಿಂದ ರಹಿತವಿದೆ ಮತ್ತು ಸಂಕಲ್ಪದಿಂದ ಕೂಡ ರಹಿತವಿದೆ. ಇಂಥ ಪದಾರ್ಥವನ್ನು ಮನ್ನಿಸಿದಲ್ಲದೆ ಅದರಲ್ಲಿ ಯಾವ ರೀತಿಯಿಂದ ಸ್ಥಿರವಾಗುವುದು ? ಯಾವ ಜೀವರುಗಳು ಧನ, ಗೌರವ, ಶರೀರ ಮೊದಲಾದವುಗಳಲ್ಲಿ ಸುಖ ಮನ್ನಿಸಿ ನಿಂತುಕೊಂಡಿದ್ದಾರೆ ಅವರು ಸ್ವದಲ್ಲಿ ಯಾವ ರೀತಿಯಿಂದ ಸ್ಥಿರಗೊಳ್ಳುವರು ? ಸ್ವದ ಮಾಹಾತ್ಮ್ಯವು ಬರದ ಹೊರತಾಗಿ ಲೀನತೆಯೆಲ್ಲಿಂದ ಆಗುವುದು ? ಇಲ್ಲಿ ಸಮ್ಯಗ್ದರ್ಶನ ಮತ್ತು ಜ್ಞಾನ ಇವೆರಡನ್ನು ಜತೆಯಲ್ಲಿ ತೆಗೆದುಕೊಂಡಿದ್ದಾರೆ. ಅವು ಇದ್ದರೇನೇ ಚಾರಿತ್ರವಿರುತ್ತದೆ. ಶರೀರ, ಮನಸ್ಸು, ವಾಣಿಗಳೆಲ್ಲವು ಆತ್ಮನಿಂದ ಭಿನ್ನವಿವೆ, ಅವುಗಳಲ್ಲಿ ನಾನಿರುವ ಸಾಧ್ಯತೆಯಿಲ್ಲ. ಅವು ನನ್ನಿಂದ ಭಿನ್ನ ತತ್ತ್ವಗಳಿವೆ. ಈ ಪ್ರಕಾರ ಅಭಿರುಚಿ ಮತ್ತು ಜ್ಞಾನ ಮಾಡಿಕೊಂಡರೆ ಅವನಿಗೆ ಚಾರಿತ್ರವಿರುತ್ತದೆ. ಇಲ್ಲದಿದ್ದರೆ ಚಾರಿತ್ರವಿರುವುದಿಲ್ಲ.

ದರ್ಶನ-ಜ್ಞಾನಗಳಿಲ್ಲದ ಚಾರಿತ್ರವು ಅದು ಮಿಥ್ಯಾಚಾರಿತ್ರವಿದೆ. ಸ್ವಭಾವದ ಮಾಹಾತ್ಮ್ಯವು ಬಂದಲ್ಲದೆ ಚಾರಿತ್ರವಿರುವುದಿಲ್ಲ. ಶುಭಾಶುಭ ಭಾವಗಳು ಆಕುಲತೆಯಿಂದ ಸಂಯುಕ್ತವಿವೆ, ಆ ಆಕುಲತೆಯಿಂದ ರಹಿತವಾದ ನಿರಾಕುಲ ಸ್ವಭಾವದಲ್ಲಿ ಸುಖವಿದೆಯೆಂಬ ಪ್ರಜ್ಞೆಯಿಲ್ಲದೆ ಚಾರಿತ್ರವಿರುವುದಿಲ್ಲ ಮತ್ತು ಅವನು ತ್ಯಾಗಿಯಾಗುವುದು, ವ್ರತ-ತಪಸ್ಸು ಮಾಡುವುದು ಮತ್ತು ಜನರು ಅದನ್ನು ಚಾರಿತ್ರವೆಂದು ಹೇಳಿದರೂ ಕೂಡ ಅದು ಚಾರಿತ್ರವಲ್ಲ.

೨) ಯಾವುದು ಚಾರಿತ್ರವಿದೆ ಅದುವೇ ಚಾರಿತ್ರವಿದೆ, ಮಿಥ್ಯಾಚಾರಿತ್ರವು ಅದು ಚಾರಿತ್ರವಲ್ಲ. ಆತ್ಮನು ಚೈತನ್ಯ ಭೂಮಿಕೆಯುಳ್ಳವನಿದ್ದಾನೆ, ಅವನು ಪುಣ್ಯ-ಪಾಪಗಳುಳ್ಳವನಿಲ್ಲ. ಚೈತನ್ಯಮಯ ಆತ್ಮನ ಪ್ರತೀತಿ ಮತ್ತು ಜ್ಞಾನವು ವರ್ತಿಸುತ್ತಿರುವುದನ್ನು ಚಾರಿತ್ರವೆಂದು ಹೇಳುತ್ತಾರೆ ಮತ್ತು ಅದು ನಿಜವಾದ ಚಾರಿತ್ರವಿದೆ. ಮಿಥ್ಯಾಚಾರಿತ್ರವು ಅದು ಚಾರಿತ್ರವಲ್ಲ, ವ್ರತಗಳನ್ನು ಪಾಲಿಸುವುದು ಅದು ಚಾರಿತ್ರವಲ್ಲ, ಧರ್ಮವಲ್ಲ. ಚಿಂದಾನಂದ ಸ್ವಭಾವದ ಪ್ರಜ್ಞೆಯಿಲ್ಲದ ಮಿಥ್ಯಾಚಾರಿತ್ರವನ್ನು ಚಾರಿತ್ರವೆಂದು ಹೇಳಲಾಗುವುದಿಲ್ಲ.

೩) ಯಾವುದು ರಾಗ-ದ್ವೇಷಗಳಿಂದ ರಹಿತ ಸಮತೆಯರಸದಿಂದ ಸಂಯುಕ್ತವಿದೆ ಅದುವೇ ಚಾರಿತ್ರವಿದೆ. ಯಾವುದು ಕಷಾಯರಸದಿಂದ ಗರ್ಭಿತವಿದೆ ಅದು ಚಾರಿತ್ರವಲ್ಲ, ಅದು ಸಂಕ್ಲೇಶರೂಪವಿದೆ. ರಾಗ-ದ್ವೇಷಗಳಿಂದ ರಹಿತವಾದ ಸಮತೆಯ ಸ್ವಭಾವವು ಪರ್ಯಾಯದಲ್ಲಿ ಪ್ರಕಟವಾಗುವುದು ಅದು ಚಾರಿತ್ರವಿದೆ. ಬಾಹ್ಯದಲ್ಲಿ ಅನುಕೂಲತೆಯ ಕುರಿತಾಗಿ ರಾಗವಿಲ್ಲ ಮತ್ತು ಪ್ರತಿಕೂಲತೆಯ ಕುರಿತಾಗಿ ದ್ವೇಷವಿಲ್ಲ. ರಾಗ-ದ್ವೇಷಗಳಿಂದ ರಹಿತವಾದ ಸ್ಥಾನದಲ್ಲಿ ಸಮತೆಯಿದೆ. ಈ ಸಮತೆಯ ಸಂಯುಕ್ತತೆಯನ್ನು ಚಾರಿತ್ರವೆಂದು ಹೇಳುತ್ತಾರೆ. ಯಾವುದೇ ಪದಾರ್ಥವಿದ್ದರೂಕೂಡ ಅದು ಕ್ರಿಯಾ ಸಂಪನ್ನವಿದೆ ಮತ್ತು ಅದು ತನ್ನ ಕ್ರಿಯಾಸಹಿತವಿದೆ. ಆದುದರಿಂದ ನನಗೆ ಅದರ ಚಿಂತೆಯಿಲ್ಲ ಮತ್ತು ಅದಕ್ಕೆ ನನ್ನ ಚಿಂತೆಯಿಲ್ಲ. ಯಾವುದೇ ಕಾಲದಲ್ಲಿ ಕೂಡ ಕ್ರಿಯೆಯಿಲ್ಲದ ತತ್ತ್ವವು ಇರುವ ಸಾಧ್ಯತೆಯಿಲ್ಲ. ಅದು ನನ್ನ ಆಸೆ ಇಟ್ಟುಕೊಂಡಿದೆಯೆನ್ನುವಂಥ ತತ್ತ್ವವೇ ಇಲ್ಲ. ನಾನು ಅದರ ಆಸೆಯಿಟ್ಟು ಕೊಂಡಿದ್ದೇನೆನ್ನುವಂತೆಯೂ ಇಲ್ಲ. ಇಂಥ ಜ್ಞಾನದಲ್ಲಿ ಸಮತೆಯ ರಸವು ಪ್ರಕಟವಾಗುತ್ತದೆ. ನಾನು ಪರದ ಆಧೀನವಿಲ್ಲ, ನನ್ನ ಆಶೆಯನ್ನು ಯಾರೂ ಯಾವುದೂ ಇಟ್ಟುಕೊಳ್ಳುವುದಿಲ್ಲ ಮತ್ತು ನಾನು ಯಾರ ಆಶೆಯನ್ನೂ ಇಟ್ಟುಕೊಳ್ಳುವುದಿಲ್ಲವೆಂದು ಮನ್ನಿಸುವವರಿಗೆ ಚಾರಿತ್ರವು ಪ್ರಕಟವಾಗುತ್ತದೆ. ಯಾವ ರಾಗದ ಮನೋಭಾವನೆಯುಳ್ಳ ಉಷ್ಣತೆಯಾಗುತ್ತಿದೆ ಅದು ಪರದ ಸಲುವಾಗಿ ಇಲ್ಲ, ಆದರೆ ತನ್ನ ವೇದನೆಯ ಸಲುವಾಗಿ ತನ್ನ ಉಷ್ಣತೆಯ ವೇದನೆಯ ಸಲುವಾಗಿ ಆಗುತ್ತದೆ ಅದು ಆ ಉಷ್ಣತೆಯ ವೇದನೆಯು ಹೊರಟು ಹೋಗಿ ಆತ್ಮನ ಅರಿವಿನೊಡನೆ ಸಮತೆಯರಸವು ಪ್ರಕಟವಾಗುವುದು ಅದು ಚಾರಿತ್ರವಿದೆ. ಸಮ್ಯಗ್ದರ್ಶನದ ಅನಂತರ ಜ್ಞಾನಿಗೆ ಅಸ್ಥಿರತೆಯ ರಾಗವಿರುತ್ತದೆ, ಆದರೆ ವಿಶೇಷ ಸ್ಥಿರತೆಮಾಡಿ ಆಕುಲತೆಯನ್ನು ದೂರೀಕರಿಸಿ ಅನಾಕುಲತೆಯ ರಸವು ಪ್ರಕಟವಾಗುವುದು ಮತ್ತು ಶಾಂತಿಯ ಪರ್ವತವು ಒಡೆಯುವುದು (ಅದರೊಳಗಿಂದ ಶಾಂತಿಯು ಚಿಮ್ಮಿ ಬರುವುದು) ಮತ್ತು ಚಿದಾನಂದ ರಸದಲ್ಲಿ ಏಕಾಗ್ರತೆಯಾಗಿ ಹೋಗುವುದು ಅದು ಸಮತೆಯಿದೆ ಮತ್ತು ಅದು ಚಾರಿತ್ರವಿದೆ.

ಅಜ್ಞಾನೀ ಜೀವರುಗಳು ಬಾಹ್ಯದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳುವುದು ಸಮತೆಯಲ್ಲ, ಆದರೆ ಮೂಢತೆಯಿದೆ. ಯಾವುದಾದರೂ ಪ್ರತಿಕೂಲತೆಯು ಬಂದಾಗ ಹೇಳುವುದೇನೆಂದರೆ 'ನಾವುಗಳು ಏನನ್ನೂ ಮಾಡದಿದ್ದರೂ ಕೂಡ ನಮ್ಮ ಕರ್ಮದ ಉದಯವು ಬಂದು ಬಿಟ್ಟಿರುವುದರಿಂದ ಪ್ರತಿಕೂಲತೆಯು ಬಂದು ಬಿದ್ದಿದೆ'ಯೆಂದು ಕರ್ಮದ ಕುರಿತಾಗಿ ಸಮತೆಯನ್ನು ಕಾಯ್ದುಕೊಳ್ಳುವುದು ಅದು ನಿಜವಾದ ಸಮತೆಯಲ್ಲ. ಕರ್ಮದ ಉದಯದ

ವಿಕಲ್ಪವುಂಟಾಗುವುದೇ ದುಃಖದಾಯಕವಿದೆ. ನನ್ನ ಆತ್ಮನಲ್ಲಿ ಕರ್ಮವು ಇಲ್ಲವೇ ಇಲ್ಲ, ಅದೇ ಪ್ರಕಾರ ಆಕುಲತೆಯು ಕೂಡ ಇಲ್ಲವೆಂದು ಆತ್ಮನ ಅರಿವಿನೊಡನೆ ಕಷಾಯವು ಉತ್ಪನ್ನವಾಗುವುದೇ ಇಲ್ಲ ಮತ್ತು ಶಾಂತಿಯ ರಸವು ಉತ್ಪನ್ನವಾಗುವುದು ಅದು ಚಾರಿತ್ರವಿದೆ.

೪) ಯಾವ ಈ ಚಾರಿತ್ರವಿದೆ ಅದು ಸಮಸ್ತ ಕರ್ಮಗಳ ಕ್ಷಯಲಕ್ಷಣರೂಪ ಮತ್ತು ಮೋಕ್ಷ ಸ್ವರೂಪವಿದೆ, ಆದರೆ ಅದು ಕರ್ಮದ ಬಂಧರೂಪವಾಗಿಲ್ಲ.

ಆತ್ಮನು ಆಂತರ್ಯದ ವಸ್ತುವಿದ್ದಾನೆ. ಅವನು ದೇಹ, ಮನಸ್ಸು, ವಾಣಿಯಿಂದ ಅತೀತನಿದ್ದಾನೆ. ಈ ಪ್ರಕಾರದ ದೃಷ್ಟಿಯೊಡನೆ ಆತ್ಮನ ರಮಣತೆಯಲ್ಲಿ ರಮಿಸುವವನಿಗೆ ಸಕಲ ಕರ್ಮಗಳ ಕ್ಷಯವಾಗುತ್ತದೆ. ಚಾರಿತ್ರದಿಂದ ಕರ್ಮದ ಬಂಧವಾಗುವುದಿಲ್ಲ. ಚಾರಿತ್ರದಿಂದ ಪುಣ್ಯದ ಬಂಧವಾಗುತ್ತದೆ ಮತ್ತು ಅದರಿಂದ ಸ್ವರ್ಗದಲ್ಲಿ ಹೋಗುತ್ತಾನೆಂದು ಯಾರಾದರೂ ಹೇಳಿದರೆ ಆ ಮಾತು ಸಂಪೂರ್ಣ ಅಸತ್ಯವಿದೆ. ಚಾರಿತ್ರದಲ್ಲಿ ಒಂದು ಅಂಶ ಕೂಡ ಬಂಧವಾಗುವುದಿಲ್ಲ ಮತ್ತು ಚಾರಿತ್ರದಿಂದ ಸ್ವಲ್ಪ ಶುದ್ಧಿಯಾಗುತ್ತದೆ ಮತ್ತು ಸ್ವಲ್ಪ ಪುಣ್ಯದ ಬಂಧವಾಗುತ್ತದೆಯೆಂದು ಯಾರಾದರೂ ಹೇಳಿದರೆ ಅದುಕೂಡ ಅಸತ್ಯವಿದೆ. ಎಲ್ಲಿ ಬಂಧನವಿದೆ ಅಲ್ಲಿ ಅಚಾರಿತ್ರವಿದೆ. ಚಾರಿತ್ರವಿರುವಲ್ಲಿ ಸ್ವಲ್ಪ ಕೂಡ ಬಂಧನವಿರುವುದಿಲ್ಲ. ಈಗ ವರ್ತಮಾನ ಕಾಲದಲ್ಲಿ ಬಹಳಷ್ಟು ವಿವಿಧ ವಿರುದ್ಧತೆಗಳು ವರ್ತಿಸುತ್ತಿವೆ, ಆದಾಗ್ಯೂ ಜನರು ಅದನ್ನು ಸತ್ಯಮಾರ್ಗವೆಂದು ಹೇಳುತ್ತಾರೆ. ಎರಡು ರೊಟ್ಟಿ ಒಂದು ಸೇರು ಹಾಲು ಕುಡಿಯುವರು, ಕಾವಿ ಬಟ್ಟೆ ತೊಡುವರು, ತಲೆ ಬೋಳಿಸಿಕೊಳ್ಳುವರು, ಹೆಂಡಿರು-ಮಕ್ಕಳನ್ನು ಬಿಟ್ಟುಕೊಟ್ಟವರಿಗೆ ಜನರು ಚಾರಿತ್ರವೆಂದು ಹೇಳುತ್ತಾರೆ, ಆದರೆ ಅದು ಚಾರಿತ್ರವಲ್ಲ, ಆತ್ಮನು ಅಬಂಧಸ್ವಭಾವಿಯಿದ್ದು ಅವನಲ್ಲಿ ನಿಮಗ್ನವಾಗಿ ಹೋಗುವುದು ಅದು ಚಾರಿತ್ರವಿದೆ. ಯಾವ ಭಾವದಿಂದ ಸರ್ವಾರ್ಥಸಿದ್ಧಿಯ ಭವವು ದೊರಕಿದೆ, ತೀರ್ಥಂಕರರ ಭವವು ದೊರಕಿದೆ, ಬೇಕಾದಂಥ ಸಂಯೋಗಗಳು ದೊರಕಿವೆ ಆ ಭಾವವು ಚಾರಿತ್ರವಲ್ಲ, ಆದರೆ ಕ್ಲೇಶವಿದೆ. ಪುಣ್ಯವು ಅದು ಶುಭಕ್ಲೇಶವಿರುವುದರಿಂದ ಅನುಕೂಲತೆಗಳು ದೊರಕುತ್ತವೆ, ಮತ್ತು ಪಾಪವು ಅದು ಅಶುಭ ಕ್ಲೇಶವಿರುವುದರಿಂದ ಪ್ರತಿಕೂಲತೆಗಳು ದೊರಕುತ್ತವೆ. ಪುಣ್ಯ-ಪಾಪಗಳಿಂದ ರಹಿತವಾದ ಅಬಂಧಸ್ವಭಾವದಲ್ಲಿ ನಿಮಗ್ನತೆ ಮಾಡುವುದು ಅದು ಚಾರಿತ್ರವಿದೆ ಮತ್ತು ಅದು ಮೋಕ್ಷಮಾರ್ಗವಿದೆ.

**ಪ್ರಶ್ನೆ :-** ಏಕತ್ರ ಕುಟುಂಬವಿರುವುದನ್ನು ಕ್ಲೇಶಕಾರಿಯೆಂದು ಹೇಳಲಾಗುವುದೇನು ?

**ಉತ್ತರ :-** ಏಕತ್ರವೆಂದು ಯಾವುದನ್ನು ಹೇಳುವುದು ? ತಂದೆ ಮತ್ತು ಮಗನ ಮಧ್ಯದಲ್ಲಿ ಹಿಮಾಲಯ ಮತ್ತು ವಿಂಧ್ಯಾಚಲದಷ್ಟು ಅಂತರವಿದೆ. ಒಂದರಲ್ಲಿ ಇನ್ನೊಂದರ ಅಭಾವವಿಲ್ಲದೆ ಎರಡು ವಸ್ತುಗಳು ಪೃಥಕ್ ಇರುವ ಸಾಧ್ಯತೆಯಿಲ್ಲ, ಅಭಾವದಲ್ಲಿ ಏಕತೆ ಇರುವ ಸಾಧ್ಯತೆಯಿಲ್ಲ. ನಾವುಏಕತ್ರರಿದ್ದೇವೆಂಬ ವಿಕಲ್ಪವುಂಟಾಗುವುದು ಅದುವೇ ಕ್ಲೇಶವಿದೆ. ತನ್ನ ಆತ್ಮನು ಅನಂತ ಗುಣಗಳ ಸಮೂಹನಿದ್ದಾನೆ ಅವುಗಳ ಜತೆಯಲ್ಲಿ ಏಕತೆಯ ಬುದ್ಧಿ ಮಾಡುವುದು ಅದು ಐಕ್ಯವಿದೆ. ಈರ್ವರು ಸಹೋದರರ ಮಧ್ಯದಲ್ಲಿನ ಏಕತೆಯಂತೂ ಅದು ಅಶುಭರಾಗವುಳ್ಳ ಕ್ಲೇಶವಿದೆ; ಆದರೆ ಮಹಾವ್ರತಾದಿಗಳ ಪರಿಣಾಮವು ಶುಭರಾಗವಿದ್ದು ಅದು ಕೂಡ ಕ್ಲೇಶವಿದೆ, ಆಕುಲತೆಯಿದೆ. ಪುಣ್ಯ-ಪಾಪವಿಲ್ಲದ, ಅಬಂಧ ಸ್ವಭಾವಿಯಾದ ಆತ್ಮನ ಏಕಾಗ್ರತೆಯಿಂದ ಪ್ರಕಟವಾದ ಭಾವವು ಅದು ಚಾರಿತ್ರವಿದೆ ಮತ್ತು ಅದು ಸಮಸ್ತ ಕರ್ಮಗಳ ನಾಶ ಮಾಡಿಬಿಡುತ್ತದೆ.

ವಿಶ್ವಪ್ರೇಮ ಮಾಡಿರೆಂದು ಜನರು ಹೇಳುತ್ತಾರೆ. ವಿಶ್ವ ಎಂದರೆ ಎಲ್ಲರ ಜತೆಯಲ್ಲಿ ಪ್ರೀತಿ ಮಾಡುವುದು. ಇದರಲ್ಲಿ ಇವರು ನಮ್ಮವರು ಮತ್ತು ಇವರು ತಮ್ಮವರೆಂಬುದು ಉಳಿಯುವುದಿಲ್ಲ. ಏಕೇಂದ್ರಿಯಗಳ ಕುರಿತಾದ ಪ್ರೀತಿಯಲ್ಲಿ ತಡೆದು ನಿಂತುಕೊಂಡರೆ ಆ ಸಮಯದಲ್ಲಿ ಪಂಚೇಂದ್ರಿಯಗಳ ಕಡೆಗೆ ಪ್ರೀತಿಯನ್ನು ತೋರಿಸುವ ಸಾಧ್ಯತೆಯಿಲ್ಲ. ಏಕಕಾಲದಲ್ಲಿ ಎಲ್ಲವುಗಳ ಜತೆಯಲ್ಲಿ ಪ್ರೀತಿಯನ್ನು ಯಾವ ರೀತಿಯಿಂದ ತೋರಿಸುವ ಸಾಧ್ಯತೆಯಿದೆ? ಮನೆಯಲ್ಲಿ ಕೂಡ ಓರ್ವ ಮಗನ ಜತೆಯಲ್ಲಿ ಪ್ರೀತಿಯನ್ನು ತೋರಿಹೋದರೆ ಆ ಸಮಯದಲ್ಲಿ ಇನ್ನೊಬ್ಬನ ಜತೆಯಲ್ಲಿ ತೋರಿಸುವ ಸಾಧ್ಯತೆಯಿಲ್ಲವೆಂದ ಮೇಲೆ ಜಗತ್ತಿನ ಸಮಸ್ತ ಜೀವಗಳ ಜತೆಯಲ್ಲಿ ಏಕಕಾಲದೊಳಗೆ ಯಾವ ರೀತಿಯಿಂದ ಪ್ರೀತಿ ಮಾಡಬಹುದಾಗಿದೆ ? ಆದುದರಿಂದ ನೀನು ಎಲ್ಲ ಜೀವರುಗಳ ಜತೆಯಲ್ಲಿ ಪ್ರೀತಿಯನ್ನೆಂದೂ ತೋರಿಸುವ ಸಾಧ್ಯತೆಯಿಲ್ಲ ಮತ್ತು ಇತರರ ಕುರಿತು ಪ್ರೀತಿಯನ್ನು ತೋರಿಸಿಕೊಡಲು ಹೋದೆಯಾದರೆ ಸ್ವರೂಪದಲ್ಲಿ ಆಂತರ್ಯದ ಸ್ಥಿರತೆ ಮಾಡುವ ಪ್ರೀತಿಯು ಹೊರಟು ಹೋಗುವುದು. ಆದುದರಿಂದ ನಿನ್ನ ವೃತ್ತಿಯು ಶುಭಾಶುಭ ಭಾವದಲ್ಲಿ ಒಲಿದು ಹೋಗುತ್ತಿದೆ ಅದನ್ನು ಆಂತರ್ಯದಲ್ಲಿ ತಿರುಗಿಸು. ಒಂದು ಸಮಯದಲ್ಲಿ ಎಲ್ಲವುಗಳನ್ನು ಹೇಗೆ ಇವೆ ಹಾಗೆ ತಿಳಿದುಕೊಳ್ಳುವಂಥ ಸಾಮರ್ಥ್ಯವು ನಿನ್ನಲ್ಲಿ ಇದೆ. ಸಿದ್ಧರಿರಲಿ ಅಥವಾ ನಿಗೋದಿಗಳಿರಲಿ, ಸರ್ವಜ್ಞರಿರಲಿ ಅಥವಾ ಅಲ್ಪಜ್ಞರಿರಲಿ, ಮಿಥ್ಯಾದೃಷ್ಟಿಯಿರಲಿ ಅಥವಾ ಸಮ್ಯಗ್ದೃಷ್ಟಿಯಿರಲಿ ಅವರೆಲ್ಲರನ್ನು ತನ್ನ ಜ್ಞಾನದಲ್ಲಿ ತಿಳಿದುಕೊಂಡು ಸಮತೆಯ ರಸದಿಂದ ಗರ್ಭಿತವಾಗಿ ಇರುವುದು ಮತ್ತು ಎಲ್ಲಿಯೂ ಸಿಕ್ಕಿಕೊಳ್ಳದಿರುವುದನ್ನು ವಿಶ್ವಪ್ರೇಮವೆಂದು ಹೇಳುತ್ತಾರೆ. ಇಡೀ ವಿಶ್ವದ ಜ್ಞಾಯಕನಾಗಿ ಇರುವುದಿದೆ. ಆ ಜ್ಞಾಯಕತನದ ಶಕ್ತಿಯು ಆಂತರ್ಯದಲ್ಲಿ ತುಂಬಿಕೊಂಡಿದೆ ಅದರೊಳಗಿಂದ ಪ್ರಕಟವಾಗುತ್ತದೆ. ಅದರ ಹೆಸರು ಚಾರಿತ್ರವಿದೆ ಮತ್ತು ಅದು ಮೋಕ್ಷಸ್ವರೂಪವಿದೆ.

೫) ''ಯಾವ ದರ್ಶನ-ಜ್ಞಾನಯುಕ್ತವಾದ ಚಾರಿತ್ರವಿದೆ ಅದುವೇ ಉತ್ತಮ ಮಾರ್ಗವಿದೆ. ಸಂಸಾರದ ಯಾವ ಮಾರ್ಗಗಳು ಒಳ್ಳೆಯವಿಲ್ಲ.'' ಮೊದಲನೇ ವಚನದಲ್ಲಿ ಜ್ಞಾನ-ದರ್ಶನಯುಕ್ತವಿದೆ ಅದು ಚಾರಿತ್ರವಿದೆಯೆಂದು ಹೇಳಲಾಗಿತ್ತು ಈ ಐದನೆಯ ವಚನದಲ್ಲಿ ಜ್ಞಾನ-ದರ್ಶನಯುಕ್ತವಿರುವುದನ್ನು ''ಉತ್ತಮ ಮಾರ್ಗ''ವೆಂದು ಹೇಳಲಾಗಿದೆ. ಇಲ್ಲಿ ಉತ್ತಮವೆಂದು ಹೇಳಿ ವಿಶೇಷತೆಯನ್ನು ತಿಳಿಸಿಕೊಡಲಾಗಿದೆ. ಆತ್ಮನು ಶಕ್ತಿಯಿಂದ ಸರ್ವಜ್ಞರ ಸಾಮರ್ಥ್ಯವುಳ್ಳವನಿದ್ದಾನೆ. ಅವನೊಳಗಿಂದ ಸರ್ವಜ್ಞತೆಯು ಪ್ರಕಟವಾಗುತ್ತದೆ ಅದು ಉತ್ತಮ ಮಾರ್ಗವಿದೆ. ಯಾವ ಭಾವದಿಂದ ತೀರ್ಥಂಕರ ನಾಮಕರ್ಮವು ಕಟ್ಟುವುದು, ಸರ್ವಾರ್ಥಸಿದ್ಧಿಯ ಭವವು ದೊರಕುವುದು ಆ ಭಾವವು ಸಂಸಾರ ಮಾರ್ಗವಿದೆ, ಅದು ಒಳ್ಳೆಯ ಮಾರ್ಗವಿಲ್ಲ.

ರಾಗವು ಅದು ವಿಷವಿದೆಯೆಂದು ಭಗವಂತರಿಗೆ ಅರಿವು ಇತ್ತು, ಆಂತರ್ಯದಲ್ಲಿ ಸ್ಥಿರಗೊಳ್ಳುವುದು ಅದು ಉತ್ತಮ ಮಾರ್ಗವಿದೆ, ರಾಗವು ಉತ್ತಮ ಮಾರ್ಗವಿಲ್ಲ. ಆತ್ಮನ ಶ್ರದ್ಧೆ-ಜ್ಞಾನವಿಲ್ಲದಿದ್ದರೂ ಕೂಡ ರಾಗವನ್ನು ಕಡಿಮೆಮಾಡಿರುವುದನ್ನು ಸ್ವಲ್ಪ ಒಳ್ಳೆಯ ಮಾರ್ಗವೆಂದಾದರೂ ಹೇಳಿರಿ ! ಎಂದು ಕೆಲವರು ಕೇಳುತ್ತಾರೆ. ಅದಕ್ಕೆ ಹೇಳುವುದೇನೆಂದರೆ ಇಲ್ಲ, ಸ್ವಲ್ಪ ಕೂಡ ಒಳ್ಳೆಯದಿಲ್ಲ, ಅದು ವಿಷವಿದೆ ಮತ್ತು ಯಾವ ಜೀವನು ಮೂರು ಲೋಕದ ಪ್ರಭುವಿನ ಹತ್ತಿರ ಶಾಂತಿಯನ್ನು ಶೋಧಿಸಲು ಹೋಗುವನು, ಅವನು ತನ್ನ ಸಾಮರ್ಥ್ಯವನ್ನು ಜಾಹೀರು ಪಡಿಸುತ್ತಾನೆ. ನಾನು ಜ್ಞಾನದಲ್ಲಿ ಸ್ಥಿರವಾಗುವುದರಿಂದ ಸುಖಿಯಿರುವೆನು. ಇದು ಸ್ವತಂತ್ರತೆಯ ಪ್ರಕಟತೆಯಿದೆ. ವರ್ತಮಾನದ ಸ್ವರಾಜ್ಯವನ್ನು ಜನರು ಸ್ವತಂತ್ರತೆಯೆಂದು ಹೇಳುತ್ತಾರೆ, ಆದರೆ ನಿಜವಾಗಿಯಂತೂ ಅದು ಪರತಂತ್ರತೆಯಿದೆ.

ಇಲ್ಲಿ ದರ್ಶನ-ಜ್ಞಾನ ಸಹಿತವಿರುವ ಚಾರಿತ್ರವೇ ನಿಜವಾಗಿ ಉತ್ತಮ ಮಾರ್ಗವಿದೆ, ಸಂಸಾರಮಾರ್ಗವು ಅದು ಉತ್ತಮವಿಲ್ಲವೆಂದು ಹೇಳಲಾಗಿದೆ.

೬) ಯಾವ ಮೋಕ್ಷಮಾರ್ಗವಿದೆ ಅದು ನಿಕಟ ಸಂಸಾರೀ ಜೀವರುಗಳಿಗೇ ಆಗುತ್ತದೆ. ಅಭವ್ಯ ಅಥವಾ ದುರ್ಭವ್ಯರಿಗೆ ಆಗುವುದಿಲ್ಲ. ಯಾರು ಭವ್ಯ ಜೀವರುಗಳಿದ್ದಾರೆ ಅವರಿಗೆ ಮೋಕ್ಷಮಾರ್ಗವಾಗುತ್ತದೆ. ಯಾರಿಗೆ ಚಿದಾನಂದ ಸ್ವಭಾವದ ಅಭಿರುಚಿಯಿದೆ ಅವರು ಭವ್ಯರಿದ್ದಾರೆ. ಯಾರಿಗೆ ಪುಣ್ಯದ ಅಭಿರುಚಿಯಿದೆ, ವ್ಯವಹಾರದ ಮತ್ತು ನಿಮಿತ್ತದ ಅಭಿರುಚಿಯಿದೆ ಅವರಿಗೆ ಸ್ವಭಾವದ ಅಭಿರುಚಿಯಿಲ್ಲ, ಅವರು ಮೋಕ್ಷಮಾರ್ಗಕ್ಕೆ ಯೋಗ್ಯರಿಲ್ಲ.

ಚಕ್ರವರ್ತಿಗೆ ವಿಪುಲ ಪುಣ್ಯದ ರಾಶಿಯಿರುತ್ತದೆ, ಆದಾಗ್ಯೂ ಅವರಿಗೆ ಆತ್ಮನ ಪ್ರಜ್ಞೆಯಿರುತ್ತದೆ. ಎಷ್ಟು ರಾಗವು ವರ್ತಿಸುತ್ತದೆ ಅದನ್ನು ವಿಷವೆಂದು ತಿಳಿಯುತ್ತಾರೆ. ಆಂತರ್ಯದ ಸ್ವಭಾವದಲ್ಲಿ ಸ್ಥಿರಗೊಳ್ಳುವುದನ್ನು ಅವರು ಮೋಕ್ಷಮಾರ್ಗವೆಂದು ಮನ್ನಿಸುತ್ತಾರೆ. ಭವ್ಯ ಜೀವರುಗಳಿಗೆ ಮೋಕ್ಷಮಾರ್ಗವಿರುತ್ತದೆಂದು ಇಲ್ಲಿ ಹೇಳಲಾಗಿದೆ ಮತ್ತು ಅಭವ್ಯ ಜೀವರುಗಳಿಗೆ ಮೋಕ್ಷಮಾರ್ಗವಿರುವುದಿಲ್ಲವೆಂದು ಹೇಳಲಾಗಿದೆ.

೭) ಭೇದವಿಜ್ಞಾನವಿರುವಂಥ ಭವ್ಯ ಜೀವರುಗಳಿಗೆ ಮೋಕ್ಷಮಾರ್ಗವಾಗುತ್ತದೆ, ಆದರೆ ಸ್ವ-ಪರ ಜ್ಞಾನಶೂನ್ಯವಿರುವಂಥ ಅಜ್ಞಾನಿಗಳಿಗೆ ಆಗುವುದಿಲ್ಲ. ಮೊದಲನೆಯ ವಚನದಲ್ಲಿ ಸಮ್ಯಗ್ದರ್ಶನ ಮತ್ತು ಜ್ಞಾನವೆಂದು ಎರಡನ್ನು ಜತೆಯಲ್ಲಿ ಹೇಳಲಾಗಿತ್ತು. ಆದರೆ ಇಲ್ಲಿ ಒಂದು ಜ್ಞಾನವನ್ನು ಬೇರೆ ಮಾಡಿ ಹೇಳಲಾಗಿದೆ. ಯಾರಿಗೆ ಸ್ವಸಂವೇದನ ಜ್ಞಾನವು ಪ್ರಕಟವಾಗಿದೆ ಅವರಿಗೆ ಮೋಕ್ಷಮಾರ್ಗವಿರುತ್ತದೆ. ವಿಷಯ ಕಷಾಯಗಳಲ್ಲಿ ಅಭಿರುಚಿಯಿರುವವರಿಗೆ ಮೋಕ್ಷಮಾರ್ಗವಿರುವುದಿಲ್ಲ. ಇಲ್ಲಿ ಜ್ಞಾನದ ಮುಖ್ಯತೆಯಿಂದ ಹೇಳಲಾಗಿದೆ. ಪ್ರತಿಯೊಂದು ಪರಮಾಣುವು ನನ್ನಿಂದ ಬೇರೆಯಿದೆ. ನನಗೆ ಈ ಜಡಕಣಗಳ ಆಧಾರವಿಲ್ಲ. ನನಗೆ ಇವುಗಳ ಆಧಾರವಿಲ್ಲವೆಂದು ಪರದಿಂದ ವಿರಕ್ತವಿರುವಂಥ ಭೇದವಿಜ್ಞಾನಿಯಾದ ಜೀವನಿಗೆ ಮೋಕ್ಷಮಾರ್ಗವಿರುತ್ತದೆ, ಆದರೆ ಯಾವ ಜೀವರುಗಳು ಸ್ವ ಮತ್ತು ಪರದ ಖಿಚಡಿ (ಮಿಶ್ರಣ) ಮಾಡುತ್ತಾರೆ ಮತ್ತು ಶರೀರ ಹಾಗೂ ಪುಣ್ಯದ ಜತೆಯಲ್ಲಿ ಏಕತ್ವಬುದ್ಧಿ ಮಾಡುತ್ತಾರೆ ಅವರು ಸ್ವ-ಪರಜ್ಞಾನಶೂನ್ಯರಿದ್ದಾರೆ, ಅವರಿಗೆ ಮೋಕ್ಷಮಾರ್ಗವು ಎಂದೂ ಪ್ರಕಟವಾಗುವುದಿಲ್ಲ.

ಪೂರ್ವದಲ್ಲಿ ಬೇಕಾದಷ್ಟು ವಿಪರೀತ (ವಿರುದ್ಧ) ಮನ್ನಣೆ ಮಾಡಿರಬಹುದು, ಆದರೆ ಜೀವನು ಒಂದು ಕ್ಷಣದಲ್ಲಿ ಆ ಮನ್ನಣೆಯನ್ನು ತಿರುಗಿಸಿ ಬಿಡುವ ಸಾಧ್ಯತೆಯಿದೆ. ಅಜ್ಞಾನಿಗಳಿಗೆ ಸಂಯೋಗಗಳಲ್ಲಿ, ನಿಮಿತ್ತಗಳಲ್ಲಿ, ರಾಗ ಮೊದಲಾದ ಕೃತ್ರಿಮ ಪದಾರ್ಥಗಳಲ್ಲಿ ವಿಶ್ವಾಸವುಂಟಾಗುತ್ತದೆ. ಒಂದು ದೊಡ್ಡದಾದ ಲಡ್ಡು ಮತ್ತು ಈ ಚಿಕ್ಕದಾದ ವಸ್ತುವು ಗಂಟಲಲ್ಲಿ ಇಳಿದು ಹೋಗಬಹುದಾಗಿದೆ ಆಂತರ್ಯದಲ್ಲಿ ಪಚನವಾಗಬಹುದಾಗಿದೆಯೆಂಬ ವಿಶ್ವಾಸವು ಬರುತ್ತದೆ. ಇದೇ ಪ್ರಕಾರ ಅನೇಕ ಪದಾರ್ಥಗಳ ವಿಶ್ವಾಸವು ಬರುತ್ತದೆ, ಆದರೆ ಆತ್ಮನಾದ ನಾನು ಶುದ್ಧ ಚೈತನ್ಯ ಸ್ವಭಾವಿಯಿದ್ದೇನೆ, ಪರದಿಂದ ಮತ್ತು ಪುಣ್ಯದಿಂದ ಭಿನ್ನನಿದ್ದೇನೆ. ನನ್ನ ಆಶ್ರಯದಿಂದ ಶಾಂತಿ ಮತ್ತು ಧರ್ಮವಾಗುತ್ತದೆಯೆಂಬ ವಿಶ್ವಾಸವು ಬರುವುದಿಲ್ಲ. ಇದೇ ರೀತಿಯಾಗಿ ಯಾರಿಗೆ ಸ್ವ-ಪರ ಭೇದವಿಜ್ಞಾನವಾಗುವುದಿಲ್ಲ ಅವರಿಗೆ ಮೋಕ್ಷಮಾರ್ಗವಾಗುವುದಿಲ್ಲ ಮತ್ತು ಅವರಿಗೆ ಚಾರಿತ್ರ-ತಪಸ್ಸು ಇರುವುದಿಲ್ಲ. ಇನ್ನು ಯಾರಿಗೆ ಪರದಿಂದ ಭೇದವಿಜ್ಞಾನವಾಗಿದೆ ಅಂಥ ಜೀವರುಗಳಿಗೆ ಚಾರಿತ್ರವಿರುತ್ತದೆ, ಇತರರಿಗೆ ಇರುವುದಿಲ್ಲ.

ಇದು ಮೋಕ್ಷಮಾರ್ಗ ಅಧಿಕಾರವಿದೆ ಎಂದರೆ ಮೋಕ್ಷರೂಪದ ನಗರದಲ್ಲಿ ಹೋಗುವ ದಾರಿಯಿದೆ. ಆ ವೀತರಾಗ ದಶೆಯ ಪಂಥವು ಅದು ಚಾರಿತ್ರವಿದೆ, ಚಾರಿತ್ರವಿಲ್ಲದೆ ಮೋಕ್ಷಮಾರ್ಗವಿರುವ ಸಾಧ್ಯತೆಯಿಲ್ಲ.

೧) ಯಾರಿಗೆ ಸಮ್ಯಗ್ದರ್ಶನ-ಜ್ಞಾನವಿರುತ್ತದೆ ಅವರಿಗೆ ಚಾರಿತ್ರವಿರುತ್ತದೆ.

**ಪ್ರಶ್ನೆ :-** ಕಾಂಚನ, ಕಾಮಿನಿ ಮತ್ತು ಕುಟುಂಬವನ್ನು ಬಿಟ್ಟುಕೊಟ್ಟವರಿಗೆ ಚಾರಿತ್ರವಿರುತ್ತದೆಯಲ್ಲವೇ ?

**ಉತ್ತರ :-** ಪರವನ್ನು ಬಿಟ್ಟುಕೊಡುವ ಸಾಧ್ಯತೆಯಿದೆಯೆಂಬ ಮನ್ನಣೆಯು ಅಜ್ಞಾನವಿದೆ. ಅಂಥ ಜೀವರುಗಳಿಗೆ ಚಾರಿತ್ರವಿರುವುದಿಲ್ಲ. ನಿಜಕ್ಷೇತ್ರದಲ್ಲಿ, ನಿಜ ಪರ್ಯಾಯದಲ್ಲಿ ಅಜ್ಞಾನದಿಂದ ರಾಗ-ದ್ವೇಷಗಳ ಪರಿಣತಿಯಾಗುತ್ತಲಿದೆ, ಅವುಗಳ ತ್ಯಾಗವು ಅದು ಚಾರಿತ್ರವಿದೆ. ಅದು ಯಾವಾಗ ಪ್ರಕಟವಾಗುತ್ತದೆಯೆಂದರೆ ತ್ರಿಕಾಲೀ ಚೈತನ್ಯಸ್ವಭಾವದಲ್ಲಿ ವಿಕಾರವಿಲ್ಲವೆಂದು ಯಾವಾಗ ಆಂತರ್ಯದ ದೃಷ್ಟಿಯ ಜ್ಞಾನ ಮತ್ತು ಲೀನತೆಯಾಗುತ್ತದೆ ಆಗ ಚಾರಿತ್ರವು ಪ್ರಕಟವಾಗುತ್ತದೆ. ಕಾಂಚನ, ಕಾಮಿನಿ ಮತ್ತು ಕುಟುಂಬವು ತಮ್ಮ ಪರ್ಯಾಯದಲ್ಲಿ ಯಾವ ದಿವಸ ಕುಳಿತುಕೊಂಡಿದ್ದವು ? ಅವುಗಳ ತ್ಯಾಗ ಮಾಡಬೇಕಾದರೆ ಅವಂತೂ ಎಂದೂ ಕುಳಿತುಕೊಂಡೇ ಇಲ್ಲ. ಶರೀರ, ಮನಸ್ಸು, ವಾಣಿ ಮೊದಲಾದ ಪದಾರ್ಥಗಳನ್ನಂತೂ ಆತ್ಮನು ಎಂದೂ ಧಾರಣ ಮಾಡಿ ಇಟ್ಟುಕೊಂಡಿಲ್ಲ. ಮಹಾನುಭಾವರೇ ! ತಮ್ಮ ಧರ್ಮವಂತೂ ತಮ್ಮ ಆಂತರ್ಯದ ದಶೆಯಲ್ಲಿಯೇ ಇದೆ, ಅದೇನು ಬಾಹ್ಯದಲ್ಲಿ ಇಲ್ಲ. ಇತರರ ಪರಿಚಯದಿಂದ ಮತ್ತು ಸ್ವಭಾವದ ಅಪರಿಚಯದಿಂದ ಶಾಂತಿಯು ದೊರಕುವುದಿಲ್ಲ. ಅದರಂತೆ ಪುಣ್ಯ-ಪಾಪದ ಪರಿಚಯದಿಂದಲೂ ಶಾಂತಿಯು ದೊರಕುವುದಿಲ್ಲ. ಪುಣ್ಯ-ಪಾಪದಿಂದ ರಹಿತವಾದ ಶುದ್ಧಸ್ವಭಾವದ ಆಶ್ರಯದಿಂದ ಶಾಂತಿ ಮತ್ತು ಧರ್ಮವಾಗುತ್ತದೆ ಹೀಗೆ ಮೊದಲು ಶ್ರದ್ಧೆ-ಜ್ಞಾನಗಳಿದ್ದರೆ ಅವನಿಗೆ ಚಾರಿತ್ರವಿರುತ್ತದೆ, ಇತರರಿಗೆ ಚಾರಿತ್ರವಿರುವುದಿಲ್ಲ.

೨) ಆಂತರ್ಯದಲ್ಲಿ ಉನ್ಮುಖತೆ ಮಾಡಿ ಜ್ಞಾನ ಸ್ವಭಾವದ ಸ್ಥಾನವನ್ನು ದೊರಕಿಸಿಕೊಂಡು ಅದರಲ್ಲಿ ಲೀನವಾಗಿ ಹೋಗುವುದನ್ನು ಚಾರಿತ್ರವೆಂದು ಹೇಳುತ್ತಾರೆ. ಇದನ್ನು ಬಿಟ್ಟು ಉಳಿದುವೆಲ್ಲವು ಮಿಥ್ಯಾಚಾರಿತ್ರಗಳಿವೆ.

೩) ಯಾವುದು ಚಾರಿತ್ರವಿದೆ ಅದು ಸಮತಾಭಾವ ಸಹಿತವಿರುತ್ತದೆ. ಅದರಲ್ಲಿ ಗ್ರಹಣ-ತ್ಯಾಗವಂತೂ ಇಲ್ಲವೇ ಇಲ್ಲ. ಆದರೆ ಸ್ವಭಾವವನ್ನು ಗ್ರಹಣ ಮಾಡುವೆನು ಮತ್ತು ರಾಗವನ್ನು ಬಿಟ್ಟುಕೊಡುವೆನೆಂಬ ವಿಕಲ್ಪವುಕೂಡ ಸ್ವಭಾವದಲ್ಲಿ ಇಲ್ಲ. ಚಿದಾನಂದ ಸ್ವಭಾವದ ಸ್ಥಾನವನ್ನು ದೊರಕಿಸಿಕೊಂಡು ಆಂತರ್ಯದಲ್ಲಿ ಸಮತೆಯ ರಸವು ಪ್ರಕಟವಾಗುವುದನ್ನು ಚಾರಿತ್ರವೆಂದು ಹೇಳುತ್ತಾರೆ. ಮನಸ್ಸಿನಲ್ಲಿ ಎಷ್ಟು ವಿಚಾರಗಳು ಉತ್ಪನ್ನವಾಗುತ್ತವೆ ಅವೆಲ್ಲವು ಪುಣ್ಯದ ಕಾರಣವಿವೆ, ಸಂಕ್ಲೇಶವಿವೆ, ಅವು ಬಂಧದ ಕಾರಣವಿವೆ.

೪) ಯಾವುದು ಸಮಸ್ತ ಕರ್ಮಗಳ ಕ್ಷಯಮಾಡಿ ಮೋಕ್ಷ ದೊರಕಿಸುತ್ತದೆ ಅದು ಚಾರಿತ್ರವಿದೆ. ಯಾವುದರಿಂದ ಕರ್ಮದ ಬಂಧನವಾಗುತ್ತದೆ ಅದು ಚಾರಿತ್ರವಲ್ಲ.

೫) ಜ್ಞಾನ-ದರ್ಶನಯುಕ್ತವಿರುವ ಚಾರಿತ್ರವೇ ಉತ್ತಮ ಮಾರ್ಗವಿದೆ. ವಿಭಾವಗಳಲ್ಲಿ ನಿಂತುಕೊಳ್ಳುವುದು ಅದು ಉತ್ತಮ ಮಾರ್ಗವಲ್ಲ, ಅಚಾರಿತ್ರವಿದೆ.

೬) ಭವ್ಯ ಜೀವರುಗಳಿಗೆ ಚಿದಾನಂದ ಸ್ವಭಾವದ ಅರಿವಾಗುತ್ತದೆ. ಅಭವ್ಯರಿಗೆ ಅರಿವು ಮೂಡಿ ಬರುವುದಿಲ್ಲ. ಅಜ್ಞಾನೀ ಜೀವರುಗಳಿಗೆ ಜಗತ್ತಿನ ಕ್ರಿಯೆಯ ವಿಶ್ವಾಸ ಬರುತ್ತದೆ, ಮಕ್ಕಳ ವಿಶ್ವಾಸ ಬರುತ್ತದೆ, ದಯೆ-ದಾನ ಮೊದಲಾದವುಗಳ ಪರಿಣಾಮಗಳಾಗುತ್ತವೆ, ಅವುಗಳ ವಿಶ್ವಾಸ ಬರುತ್ತದೆ, ಆದರೆ ಅವೆಲ್ಲವುಗಳಂತೂ ಸತ್ತು ಹೋಗಿರುವ ಶವದ ಸಮಾನವಿವೆ. ಅವುಗಳ ಮೇಲೆ ವಿಶ್ವಾಸವಿಡಲಾಗುತ್ತದೆ, ಆದರೆ ಶುದ್ಧ ಜೀವಂತ ಜ್ಯೋತಿಯಾದ ಚಿದಾನಂದ ಸ್ವಭಾವದ ಮೇಲೆ ವಿಶ್ವಾಸ ಮಾಡುವುದಿಲ್ಲ. ಅಂಥ ಜೀವರುಗಳಿಗೆ ಮೋಕ್ಷಮಾರ್ಗವೆಂದೂ ಆಗುವುದಿಲ್ಲ.

೭) ಭೇದವಿಜ್ಞಾನವಿರುವಂಥ ಭವ್ಯ ಜೀವರುಗಳಿಗೆ ಚಾರಿತ್ರವು ಪ್ರಕಟವಾಗುತ್ತದೆ. ಮತ್ತು ಭೇದವಿಜ್ಞಾನವಿರದಂಥವರಿಗೆ ಚಾರಿತ್ರವು ಪ್ರಕಟವಾಗುವುದಿಲ್ಲ. ಕೆಲವು ಜೀವರುಗಳು ಕುಟುಂಬ ಮೊದಲಾದವುಗಳ ತ್ಯಾಗದಿಂದ ಧರ್ಮವಾಗುತ್ತದೆಂದು ಮನ್ನಿಸಿಕೊಂಡಿದ್ದಾರೆ, ಆದರೆ ಆತ್ಮನಂತೂ ಅವುಗಳಿಂದ ಬೇರೆಯೇ ಇದ್ದಾನೆ ಮತ್ತು ಒಂದುವೇಳೆ ಅವುಗಳ ತ್ಯಾಗದಿಂದ

ಧರ್ಮವಾಗುತ್ತಿದ್ದರೆ ಕ್ರಿಮಿ, ಕೀಟಗಳು ಮತ್ತು ವೃಕ್ಷಾದಿಗಳ ಹತ್ತಿರ, ಕಾಂಚನ, ಕಾಮಿನಿ, ಕುಟುಂಬ ಮೊದಲಾದವುಗಳೇನೂ ಇಲ್ಲವೆಂದ ಮೇಲೆ ಅವಕ್ಕೆ ಬಹಳಷ್ಟು ಧರ್ಮವಾಗಬೇಕಾಗುವುದು. ಯಾವುದು ಯಾವವುಗಳಲ್ಲಿ ಇಲ್ಲ ಅವುಗಳ ತ್ಯಾಗ ಮಾಡುವ ಸಾಧ್ಯತೆಯಿಲ್ಲ, ಮತ್ತು ಯಾವವುಗಳಲ್ಲಿ ಇರುವುದು ಅವುಗಳ ತ್ಯಾಗಮಾಡುವ ಸಾಧ್ಯತೆಯಿಲ್ಲ. ಕುಟುಂಬ ಮೊದಲಾದವು ಆತ್ಮನಲ್ಲಿ ಇಲ್ಲದಿರುವುದರಿಂದ ಅವುಗಳ ತ್ಯಾಗ ಮಾಡುವ ಸಾಧ್ಯತೆಯಿಲ್ಲ ಆದರೆ ರಾಗ-ದ್ವೇಷಾದಿಗಳು ಪರ್ಯಾಯದಲ್ಲಿ ಆಗುತ್ತವೆ. ಅವುಗಳತ್ಯಾಗ ಮಾಡುವ ಸಾಧ್ಯತೆಯಿದೆ. ಅದು ಕೂಡ ಉಪಚಾರ ಮಾತ್ರವಿದೆ. ವಿಕಾರವಿಲ್ಲದ ಶುದ್ಧ ಸ್ವಭಾವದಲ್ಲಿ ನಿಮಗ್ನತೆ ಮಾಡುವುದರಿಂದ ರಾಗವು ಉತ್ಪನ್ನವಾಗುವುದೇ ಇಲ್ಲ. ಅವನನ್ನು ರಾಗದ ತ್ಯಾಗ ಮಾಡಿದನೆಂದು ಹೇಳಲಾಗುತ್ತದೆ. ಹೀಗೆ ಪರಪದಾರ್ಥಗಳ ಸ್ವೀಕಾರದಿಂದ ಆತ್ಮನು ಭಿನ್ನನೇ ಇದ್ದಾನೆಂಬ ಭೇದ ಜ್ಞಾನವಿಲ್ಲದವನಿಗೆ ಧರ್ಮವಾಗುವುದಿಲ್ಲ.

ಮಾನವ ಧರ್ಮದ ಪಾಲನೆ ಮಾಡಿರೆಂದು ಕೆಲವರು ಹೇಳುತ್ತಾರೆ. ಆದರೆ ಮಾನವ ಧರ್ಮವೆಂದರೆ ಆತ್ಮನದೋ ಅಥವಾ ಶರೀರದ್ದೋ ? ಆತ್ಮನ ಮಾನವಧರ್ಮವೆಂದರೆ ಶುದ್ಧ ಆತ್ಮನ ಜ್ಞಾನ ಮಾಡಿಕೊಳ್ಳುವುದು ಇದೆ ಮತ್ತು ಶರೀರದ ಧರ್ಮವು ಅದು ಜಡದ ಧರ್ಮವಿದೆ. ಅದರ ಉತ್ಪಾದ-ವ್ಯಯ-ಧ್ರುವ ಮೂರು ಆಂಶಿಕವಾಗಿ ಅದರ ಕಾರಣದಿಂದ ಆಗುತ್ತವೆ ಅದು ಅದರ ಧರ್ಮವಿದೆ. ಶರೀರದ ಕ್ರಿಯೆ ಮಾಡುವುದು ಅದು ಆತ್ಮನ ಅಧಿಕಾರದ ಮಾತು ಅಲ್ಲ.

ನಾನು ಮನುಷ್ಯನಿಲ್ಲ, ನಾನು ಶರೀರ, ಮನಸ್ಸು, ಪುಣ್ಯ-ಪಾಪದ ಭಾವಗಳು ಅವು ಕ್ಷಣಿಕವಾದ ವಿಕಾರಗಳಿವೆ. ನಾನು ಶುದ್ಧ ಚೈತನ್ಯ ಸ್ವಭಾವಿಯಿದ್ದೇನೆಂದು ಪರದಿಂದ ಭಿನ್ನತೆಯ ಜ್ಞಾನವಾಗಿ ಆ ಭಿನ್ನತೆಯ ದಾರಿಯು ಪೂರ್ಣ ಬೇರೆಯಾಗುವುದು ಅದು ಮೋಕ್ಷವಿದೆ.

ವ್ಯಾಪಾರದಲ್ಲಿ ಸಂಪಾದಿಸಿದ ಧನವನ್ನು ನಾನು ದಾನವಾಗಿ ಕೊಡುವೆನೆಂದು ಯಾರಾದರೂ ಹೇಳಿದರೆ ಅವನಿಗೆ ಇತರರ ಹಣವನ್ನು ದಾನವಾಗಿ ಕೊಡುವುದರ ಅಧಿಕಾರವೇನಿದೆ ? ಕುಟುಂಬ, ಕಾಮಿನಿ, ಕಾಂಚನಗಳಂತೂ ಇತರರ ವಸ್ತುಗಳಿವೆ. ಆ ಜಡ ವಸ್ತುಗಳು ನಿನ್ನವು ಎಂದಾಗಿದ್ದವು, ನೀನು ಅವನ್ನು ಬಿಟ್ಟು ಕೊಡುತ್ತೇನೆಂದು ಹೇಳುತ್ತಿರುವೆ ? ಅವಂತೂ ಮೂರುಕಾಲದಲ್ಲಿ ನಿನ್ನಿಂದ ಭಿನ್ನವಾಗಿಯೇ ಇವೆ. ಆತ್ಮನು ಪರಪದಾರ್ಥಗಳ ತ್ಯಾಗಸ್ವರೂಪನಾಗಿಯೇ ಇರುವನು.

ಪರದ ಅಭಾವವಿದ್ದರೂ ಕೂಡ ಅವುಗಳ ಅಭಾವ ಮಾಡುವೆನೆಂದು ಮನ್ನಿಸುವುದು ಅದುವೇ ಮಿಥ್ಯಾತ್ವವಿದೆ. ಮಿಥ್ಯಾಭ್ರಾಂತಿ, ಅಜ್ಞಾನ ಮತ್ತು ರಾಗ-ದ್ವೇಷಗಳ ತ್ಯಾಗವಾಗುವ ಸಾಧ್ಯತೆಯಿದೆ. ಸ್ವಭಾವದ ಅರಿವಿನೊಡನೆ ಆ ರಾಗಾದಿಗಳು ಉತ್ಪನ್ನವಾಗುವುದಿಲ್ಲ. ಈ ಪ್ರಕಾರ ಯಾರಿಗೆ ಭೇದವಿಜ್ಞಾನವಿದೆ ಅವರಿಗೆ ಚಾರಿತ್ರವಿದೆ, ಅದು ಇಲ್ಲದಿದ್ದರೆ ಚಾರಿತ್ರವಿರುವುದಿಲ್ಲ. ಭೇದಜ್ಞಾನವಿಲ್ಲದಿದ್ದರೆ ವ್ರತ ಮೊದಲಾದವುಗಳೆಲ್ಲವು ಮಿಥ್ಯೆಯಿವೆ.

೮) ಇಲ್ಲಿ ಮೋಕ್ಷಮಾರ್ಗದ ಉತ್ಕೃಷ್ಟತೆಯನ್ನು ತಿಳಿಸಿದ್ದಾರೆ. ಆ ವಿಷಯದಲ್ಲಿ ಗುಣಸ್ಥಾನಗಳಿರುತ್ತವೆ. ಎಲ್ಲಿ ಚಾರಿತ್ರದಶೆಯು ಪೂರ್ಣ ನಿರ್ಮಲವಾಗಿರುತ್ತದೆ ಅಲ್ಲಿ ಮಹಾವ್ರತ ಮೊದಲಾದವುಗಳ ವಿಕಲ್ಪವು ಕೂಡ ಇರುವುದಿಲ್ಲ. ಎಲ್ಲಿ ಕಷಾಯಗಳಿರುತ್ತವೆ ಅಲ್ಲಿ ಚಾರಿತ್ರವಿರುವುದಿಲ್ಲ. ಈಗಂತೂ ಜೈನತ್ವದ ಹೆಸರಿನಲ್ಲಿ ಬಹಳಷ್ಟು ಅದಲು ಬದಲಾಗಿ ಹೋಗಿದೆ. ವಸ್ತ್ರ ಮೊದಲಾದುವನ್ನು ಇಟ್ಟುಕೊಳ್ಳುವ ರಾಗವು ಕೇವಲಜ್ಞಾನಿಗಳಿಗೆ ಇರುವ ಸಾಧ್ಯತೆಯಿಲ್ಲ. ಆರನೆಯ ಗುಣಸ್ಥಾನದ ಮುನಿಗಳಿಗೆ ಕೂಡ ವಸ್ತ್ರದ ರಾಗವಿರುವುದಿಲ್ಲವೆಂದ ಮೇಲೆ ಕೇವಲೀ ಭಗವಂತರುಗಳಿಗೆ ವಸ್ತ್ರಾದಿಗಳನ್ನು ಇಟ್ಟುಕೊಳ್ಳುವ ರಾಗವು ವರ್ತಿಸುತ್ತದೆಯೆನ್ನುವುದು ನ್ಯಾಯದಿಂದ ವಿರುದ್ದವಾಗಿದೆ. ಭರತ ಚಕ್ರವರ್ತಿಗೆ ಮೊದಲು ಭೇದವಿಜ್ಞಾನವಿತ್ತು, ಸಂಸಾರದಶೆಯಲ್ಲಿ ಒಂದಿಷ್ಟು ರಾಗವಿತ್ತು. ಅನಂತರ ವೈರಾಗ್ಯವಾಯಿತು. ಓಹೋ ! ಈಗ

ದೀಕ್ಷಿತರಾದರು. ವಸ್ತ್ರ-ಆಭರಣಗಳೆಲ್ಲವು ಹೊರಟು ಹೋದವು ಮತ್ತು ಶರೀರದಲ್ಲಿ ನಗ್ನ ಅವಸ್ಥೆಯು ಬಂದು ಬಿಟ್ಟಿತು. ಅನಂತರ ಎರಡು ಗಳಿಗೆ ಧ್ಯಾನದಲ್ಲಿ ನಿಮಗ್ನರಾದರು ಚಾರಿತ್ರವು ಪ್ರಕಟವಾಯಿತು ಕೂಡಲೆ ಕೇವಲ ದಶೆಯನ್ನು ಪಡೆದುಕೊಂಡರು. ಬಾಹ್ಯ ತ್ಯಾಗ ಮತ್ತು ನಗ್ನದಶೆಯು ಅದು ಚಾರಿತ್ರವಿಲ್ಲ. ಆದರೆ ಆತ್ಮನಲ್ಲಿ ಸ್ವಭಾವದ ಲೀನತೆಯು ವರ್ಧಿಸುತ್ತದೆ ಆಗ ಬಾಹ್ಯದಲ್ಲಿ ನಗ್ನದಶೆಯು ಇರುತ್ತದೆ ಮತ್ತು ಎಲ್ಲಿ ನಗ್ನದಶೆಯು ಇರುವುದಿಲ್ಲ ಅಲ್ಲಿ ಚಾರಿತ್ರವು ಇರುವುದಿಲ್ಲ. ವಸ್ತ್ರವಿಟ್ಟುಕೊಂಡು ಚಾರಿತ್ರ ದಶೆಯೆಂದೂ ಬರುವುದಿಲ್ಲ ಮತ್ತು ಚಾರಿತ್ರವಿಲ್ಲದೆ ಕೇವಲಜ್ಞಾನವಾಗುವುದಿಲ್ಲ. ಮುನಿಗಳಿಗೆ ಮಾತ್ರ ನವಿಲುಗರಿಯ ಪಿಂಛಿ ಮತ್ತು ಕಮಂಡಲು ಇರುತ್ತದೆ. ಬೇರೆ ಏನೂ ಇರುವುದಿಲ್ಲ ಭರತನಿಗೆ ಪ್ರಜ್ಞೆಯಂತೂ ಇತ್ತು, ನಂತರ ಸಂಪೂರ್ಣ ಜಗತ್ತಿನಿಂದ ಉದಾಸನಾಗಿ ಒಂದು ಸ್ವಭಾವದ ಅವಲಂಬನೆ ತೆಗೆದುಕೊಂಡನು. ಬಾಹ್ಯದಲ್ಲಿ ನಗ್ನದಶೆಯಿತ್ತು ಆಂತರ್ಯದಲ್ಲಿ ವೀತರಾಗ ದಶೆಯಿತ್ತು. ಅದು ವೃದ್ಧಿಸುವುದರಿಂದ ಕೇವಲಜ್ಞಾನ ಪಡೆದನು. ಇದೊಂದೇ ಮೋಕ್ಷಮಾರ್ಗವಿದೆ. ಬೇಕಾದ ಭವದಲ್ಲಿ ಭಾವಿಸಿದರು ಕೂಡ ಇದೊಂದೇ ಉಪಾಯವಿದೆ. ಈ ಪ್ರಕಾರ ಮೋಕ್ಷ ಸಾಧನೆಯ ಉಪಾಯವನ್ನು ಎಂಟು ಪ್ರಕಾರದಿಂದ ಹೇಳಲಾಯಿತು.

ಈಗ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಸ್ವರೂಪವನ್ನು ಹೇಳುತ್ತಾರೆ -

**ಸಮ್ಮತ್ತಂ ಸದ್ದಹಣಂ ಭಾವಾಣಂ ತೇಸಿಮಧಿಗಮೋ ಣಾಣಂ ।**
**ಚಾರಿತ್ತಂ ಸಮಭಾವೋ ವಿಸಏಸು ವಿರೂಢಮಗ್ಗಾಣಂ ॥೧೦೭॥**

**ಭಾವಗಳ ಶ್ರದ್ಧೆಯದು ಸಮ್ಯಕ್ತ್ವವಿದ್ದು ಅವುಗಳ ಬೋಧ ಜ್ಞಾನವಿದೆ ।**
**ಆ ವಿಶೇಷರೂಢ ಮಾರ್ಗವಾಗಿ ವಿಷಯಗಳಲಿ ಸಾಮ್ಯವದು ಚಾರಿತ್ರವಿದೆ ॥೧೦೭॥**

ಭಗವಂತರು ಆರು ದ್ರವ್ಯಗಳ ವರ್ಣನೆ ಮಾಡಿದ್ದಾರೆ, ಅವುಗಳ ಪ್ರತೀತಿ ಮಾಡುವುದು ಅದು ವ್ಯವಹಾರ ಶ್ರದ್ಧೆಯಿದೆ. ಕೇಶರ ತೆಗೆದುಕೊಳ್ಳುವ ಸಲುವಾಗಿ ಹರಿದು ಹೋದ ಮೂಟೆಯು ಕೆಲಸಕ್ಕೆ ಬರುವುದಿಲ್ಲ, ಆದರೆ ಸ್ಟೀಲಿನ ಡಬ್ಬವು ಕೆಲಸಕ್ಕೆ ಬರುತ್ತದೆ. ಅದೇ ಪ್ರಕಾರ ಆತ್ಮನು ಶುದ್ಧ ಚಿದಾನಂದ ಸ್ವರೂಪನಿದ್ದು ಅವನ ಪ್ರತೀತಿಯ ಸಲುವಾಗಿ ಆರು ದ್ರವ್ಯ ಮೊದಲಾದವುಗಳ ಪ್ರತೀತಿರೂಪದ ವ್ಯವಹಾರ ಸಮ್ಯಕ್ತ್ವವು ಅದು ಮೊಟೆಯಿದೆ. ವ್ಯವಹಾರ ಶ್ರದ್ಧೆಯು ದೋಷಯುಕ್ತವಿರುವುದು ಮತ್ತು ಸಮ್ಯಗ್ದರ್ಶನವು ಪ್ರಕಟವಾಗುತ್ತದೆಯೆಂಬುದು ಸಂಭವಿಸುವುದಿಲ್ಲ. ನಿಜವಾದ ವ್ಯವಹಾರ ಶ್ರದ್ಧೆಯಿಲ್ಲದೆ ನಿಶ್ಚಯ ಸಮ್ಯಗ್ದರ್ಶನವು ಆಗುವುದಿಲ್ಲ ಮತ್ತು ವ್ಯವಹಾರದ ಅಭಾವ ಮಾಡದ ಹೊರತು ನಿಶ್ಚಯ ಸಮ್ಯಗ್ದರ್ಶನವು ಪ್ರಕಟವಾಗುವುದಿಲ್ಲ. ಹೀಗೆ ಎರಡೂ ಮಾತುಗಳನ್ನು ತಿಳಿದುಕೊಳ್ಳಬೇಕಾಗುವುದು.

ಈ ಪಂಚಾಸ್ತಿಕಾಯದ ಐವತ್ತೈದನೆಯ ಪುಟದಲ್ಲಿ ಹೇಳಿರುವುದೇನೆಂದರೆ ಖರತರ ದೃಷ್ಟಿಯುಳ್ಳವರು ಎಂದರೆ ಸೂಕ್ಷ್ಮದೃಷ್ಟಿಯುಳ್ಳವರು ಕಾಲ ಸಹಿತವಾಗಿ ಐದು ಅಸ್ತಿಕಾಯಗಳನ್ನು ಸ್ವೀಕಾರ ಮಾಡಬೇಕಾಗುವುದು. ಯಾವುದು ಕಾಲವನ್ನು ಸ್ವೀಕಾರ ಮಾಡುವುದಿಲ್ಲ ಆ ಶಾಸ್ತ್ರವು ಜೈನ ಶಾಸ್ತ್ರವಲ್ಲ. ಅದನ್ನು ಹನ್ನೆರಡು ಅಂಗಗಳ ಅನುಸಾರವಾಗಿ ಬರೆದುದಾಗಿಲ್ಲ. ಆದುದರಿಂದ ಆರು ದ್ರವ್ಯಗಳು ಯಾವ ಪ್ರಕಾರವಿವೆ ಅದೇ ಪ್ರಕಾರ ಯಥಾರ್ಥ ಸ್ವತಂತ್ರವಾಗಿ ತಿಳಿದುಕೊಳ್ಳಬೇಕಾಗುವುದು.

ಐದು ಅಸ್ತಿಕಾಯಗಳಿವೆ. ಯಾವ ಪ್ರಕಾರ ಈ ಶರೀರದ ಪರಮಾಣುಗಳು ವಿಪುಲವಿವೆ. ಅದೇ ಪ್ರಕಾರ ಆತ್ಮ ಮೊದಲಾದವುಗಳ ಅನೇಕ ಪ್ರದೇಶಗಳಿವೆ ಅವು ಅವುಗಳ ಕಾಯಗಳಿವೆ. ಆತ್ಮ, ಧರ್ಮ ಮತ್ತು ಅಧರ್ಮ ದ್ರವ್ಯಗಳು ಅಸಂಖ್ಯ ಪ್ರದೇಶಿಗಳಿವೆ. ಆಕಾಶವು ಅನಂತ ಪ್ರದೇಶಿಯಿದೆ. ಪುದ್ಗಲ ಸ್ಕಂಧಗಳು ಎರಡರಿಂದ ಹಿಡಿದು

ಅನಂತ ಪ್ರದೇಶಿಗಳಿವೆ. ಈ ಪ್ರಕಾರ ಐದು ಅಸ್ತಿಕಾಯಗಳ ಪ್ರತೀತಿಯು ಅದು ವ್ಯವಹಾರ ಸಮ್ಯಗ್ದರ್ಶನವಿದೆ. ಮತ್ತು ಒಂಭತ್ತು ತತ್ತ್ವಗಳ ಶ್ರದ್ಧೆಯು ಅದು ವ್ಯವಹಾರ ಸಮ್ಯಗ್ದರ್ಶನವಿದೆ. ಸಮಯಸಾರದ ಹದಿಮೂರನೆಯ ಗಾಥೆಯಲ್ಲಿ ಒಂಭತ್ತರ ಮಾತು ಬಂದು ಹೋಗಿದೆ. ಶುದ್ಧ ಜೀವ ಸ್ವಭಾವವನ್ನು ಜೀವವೆಂದು ಮನ್ನಿಸಿದೆ ಮತ್ತು ಶರೀರ, ಕರ್ಮ ಮೊದಲಾದುವನ್ನು ಅಜೀವವೆಂದು ಮನ್ನಿಸಿದೆ. ಜೀವದ ಕಾರಣದಿಂದ ಅಜೀವದ ಕ್ರಿಯೆಯಾಗುವುದಿಲ್ಲ ಮತ್ತು ಅಜೀವದ ಕ್ರಿಯೆಯಿಂದ ಜೀವದಲ್ಲಿ ಯಾವುದೂ ಆಗುವುದಿಲ್ಲವೆಂದು ಮನ್ನಿಸಲಾಗಿದೆ. ದಯೆ, ದಾನ ಮೊದಲಾದುವನ್ನು ಪುಣ್ಯವೆಂದು ಮನ್ನಿಸಿದೆ, ಅವುಗಳಲ್ಲಿ ನಿಂತುಕೊಳ್ಳುವುದನ್ನು ಬಂಧವೆಂದು ಮನ್ನಿಸಿದೆ. ಶುದ್ಧ ಆತ್ಮನ ಆಶ್ರಯದಿಂದ ನಿರ್ಮಲತೆಯಾಗುವುದನ್ನು ಸಂವರವೆಂದು ಮನ್ನಿಸಿದೆ, ನಿರ್ಮಲತೆಯ ವೃದ್ಧಿಯಾಗುವುದನ್ನು ನಿರ್ಜರೆಯೆಂದು ಮನ್ನಿಸಿದೆ ಮತ್ತು ಸಂಪೂರ್ಣ ನಿರ್ಮಲತೆಯನ್ನು ಮೋಕ್ಷವೆಂದು ಮನ್ನಿಸಿದೆ. ಈ ಪ್ರಕಾರದಿಂದ ರಾಗರಹಿತವಾದ ಒಂಭತ್ತು ತತ್ತ್ವಗಳ ಶ್ರದ್ಧೆಯನ್ನು ವ್ಯವಹಾರ ಸಮ್ಯಗ್ದರ್ಶನವೆಂದು ಹೇಳಿದೆ. ಒಂದು ಶುದ್ಧ ಚೈತನ್ಯ ಸ್ವಭಾವವನ್ನು ಬೇರೆ ಮನ್ನಿಸಿ ಅಂತರ್ಯದಲ್ಲಿ ಶ್ರದ್ಧೆ ಮಾಡುವುದು ಅದು ನಿಶ್ಚಯ ಸಮ್ಯಗ್ದರ್ಶನವಿದೆ.

ಜೀವದಿಂದ ಅಜೀವದ ಕ್ರಿಯೆಯಾಗುತ್ತದೆಂದು ಮನ್ನಿಸಿದರೆ ಜೀವ ಮತ್ತು ಅಜೀವ ಇವೆರಡೂ ಭಿನ್ನವಾಗಿ ಉಳಿಯುವುದಿಲ್ಲ. ಪುಣ್ಯದಿಂದ ಧರ್ಮವಾಗುತ್ತದೆಂದು ಮನ್ನಿಸಿದರೆ ಆಸ್ರವ ಮತ್ತು ಸಂವರಗಳು ಒಂದಾಗಿ ಹೋಗುತ್ತವೆ. ಶುದ್ಧ ಜೀವದೊಳಗಿಂದ ಶುಭವು ಬರುತ್ತದೆಂದು ಮನ್ನಿಸಿದರೆ ಜೀವ ಮತ್ತು ಪುಣ್ಯ ಇವೆರಡೂ ಒಂದಾಗಿ ಹೋಗುತ್ತವೆ. ಈ ಪ್ರಕಾರ ಯಾರಿಗೆ ಒಂಭತ್ತು ತತ್ತ್ವಗಳ ವ್ಯವಹಾರ ಶ್ರದ್ಧೆಯದೂ ಕೂಡ ಪತ್ತೆಯಿಲ್ಲ ಅವರಿಗೆ ನಿಶ್ಚಯ ಸಮ್ಯಗ್ದರ್ಶನವು ಎಂದೂ ಆಗುವುದಿಲ್ಲ. ಹಣದಿಂದ ಸುಖವಾಗುತ್ತದೆಂದು ಮನ್ನಿಸಿದರೆ ಅವನು ಜೀವ ಮತ್ತು ಅಜೀವವನ್ನು ಒಂದೆಂದು ಮನ್ನಿಸಿದನು. ಧರ್ಮದಿಂದ ಭವಗಳು ದೊರಕುತ್ತವೆಂದು ಮನ್ನಿಸುವವನು ಸಂವರ ಮತ್ತು ಆಸ್ರವವನ್ನು ಒಂದೆಂದು ಮನ್ನಿಸಿದ್ದಾನೆ. ಹೀಗೆ ಒಂಭತ್ತನ್ನು ಪೃಥಕ್ಕಾಗಿ ತಿಳಿದುಕೊಳ್ಳದವನಿಗೆ ಎಂದೂ ಧರ್ಮವಾಗುವುದಿಲ್ಲ.

ಇಲ್ಲಿ ಹೇಳುವುದೇನೆಂದರೆ ಆರು ದ್ರವ್ಯಗಳು, ಐದು ಅಸ್ತಿಕಾಯಗಳು ಮತ್ತು ಒಂಭತ್ತು ತತ್ತ್ವಗಳು ಹೇಗೆ ಇವೆ ಹಾಗೆ ರಾಗಸಹಿತವಾಗಿ ಮನ್ನಿಸುವುದು ಅದು ವ್ಯವಹಾರ ಸಮ್ಯಗ್ದರ್ಶನವಿದೆ. ಅದನ್ನು ಕೂಡ ವ್ಯವಹಾರವೆಂದು ಯಾವಾಗ ಹೇಳಲಾಗುವುದೆಂದರೆ ವ್ಯವಹಾರದ ವಿಕಲ್ಪಗಳುಂಟಾಗುವುದು ಅದು ನಾನಿಲ್ಲ, ನಾನಂತೂ ಶುದ್ಧ ಚೈತನ್ಯ ಸ್ವಭಾವಿಯಿದ್ದೇನೆಂದು ತನ್ನ ಆತ್ಮನ ರಾಗ ರಹಿತ ಪ್ರತೀತಿ ಮಾಡಿ ನಿಶ್ಚಯ ಸಮ್ಯಗ್ದರ್ಶನ ಪ್ರಕಟ ಮಾಡಿದರೆ ಮೊದಲಿನ ಒಂಭತ್ತು ತತ್ತ್ವಾದಿಗಳ ವಿಕಲ್ಪವನ್ನು ವ್ಯವಹಾರ ಸಮ್ಯಗ್ದರ್ಶನವೆಂದು ಹೇಳಲಾಗುತ್ತದೆ. ಅಪೂರ್ಣದಶೆಯಲ್ಲಿ ತತ್ತ್ವಗಳ ವಿಕಲ್ಪದ ರಾಗವು ಬಂದಲ್ಲದೆ ಇರುವುದಿಲ್ಲ ; ಆದಾಗ್ಯೂ ರಾಗವು ಅದು ಸಮ್ಯಗ್ದರ್ಶನವಿಲ್ಲ, ರಾಗ ರಹಿತ ಪ್ರತೀತಿಯು ಅದು ಸಮ್ಯಗ್ದರ್ಶನವಿದೆ ಮತ್ತು ಎಲ್ಲಿ ನಿಶ್ಚಯ ಸಮ್ಯಗ್ದರ್ಶನವಿರುತ್ತದೆ ಅಲ್ಲಿ ಇಂಥ ವ್ಯವಹಾರ ಶ್ರದ್ಧೆಯು ಇರುವುದರಿಂದ ಇಲ್ಲಿ ನಿಶ್ಚಯ ವ್ಯವಹಾರಗಳೆರಡರ ಮಾತನ್ನು ಮಾಡಲಾಗಿದೆ.

'ಅದೇ ಪದಾರ್ಥಗಳ ಯಾವ ಯಥಾರ್ಥ ಅನುಭವವಿದೆ ಅದು ಸಮ್ಯಗ್ಜ್ಞಾನವಿದೆ.' ಶುದ್ಧ ಆತ್ಮನ ಅವಲಂಬನದಿಂದ ಯಾವ ಜ್ಞಾನವು ಪ್ರಕಟವಾಗುತ್ತದೆ ಅದು ಸಮ್ಯಗ್ಜ್ಞಾನವಿದೆ. ಆಗ ಆರು ದ್ರವ್ಯಗಳು ಬೇರೆ ಬೇರೆಯಿವೆ, ಒಂಭತ್ತು ತತ್ತ್ವಗಳಿವೆ ಇವೇ ಮೊದಲಾದವುಗಳ ವ್ಯವಹಾರ ಜ್ಞಾನವಿರುತ್ತದೆ. ಯಾವ ಜೀವನು ಶರೀರದ ಕ್ರಿಯೆಯಿಂದ ಧರ್ಮ ಮನ್ನಿಸುತ್ತಾನೆ. ಆತ್ಮನಿಂದ ಶರೀರವು ನಡೆಯುತ್ತದೆಂದು ಮನ್ನಿಸುತ್ತಾನೆ ಅವನಿಗೆ ಧರ್ಮ ದಶೆಯಲ್ಲಿ ನಿಮಿತ್ತವು ಯಾವುದಿರುತ್ತದೆಯೆಂಬುದರ ಪ್ರಜ್ಞೆಯಿಲ್ಲ. ಯಾರಿಗೆ ಧರ್ಮ ಮಾಡುವುದಿದೆ ಅವರಿಗೆ ಆರು ದ್ರವ್ಯಗಳ ಹಾಗೂ ಒಂಭತ್ತು ತತ್ತ್ವಗಳ ಜ್ಞಾನವು ವಿಕಲ್ಪದ ಮೂಲಕ ಯಥಾರ್ಥ ರೀತಿಯಿಂದ ಇರಬೇಕಾಗುವುದು ಎಂದರೆ ವ್ಯವಹಾರ ಜ್ಞಾನವು ಅಸತ್ಯವಿದ್ದರೆ ಅವನಿಗೆ ಧರ್ಮವಾಗುವುದಿಲ್ಲ.

ಈಗ ಚಾರಿತ್ರದ ಕುರಿತು ಹೇಳುತ್ತಾರೆ. ''ಐದು ಇಂದ್ರಿಯಗಳ ವಿಷಯಗಳಲ್ಲಿ ಯಾವನು ಅತ್ಯಂತ ದೃಢತೆಯಿಂದ ಪ್ರವೃತ್ತಿ ಮಾಡುವುದಿಲ್ಲ, ಅಂಥ ಭೇದವಿಜ್ಞಾನಿಯಾದ ಜೀವರುಗಳ ಯಾವ ರಾಗ-ದ್ವೇಷಗಳಿಲ್ಲದ ಶಾಂತ ಸ್ವಭಾವವಿದೆ ಅದು ಸಮ್ಯಕ್ಚಾರಿತ್ರವಿದೆ.''

ಐದು ಇಂದ್ರಿಯಗಳು ಹಾಗೂ ಅವುಗಳ ವಿಷಯಗಳು, ಭಾವೇಂದ್ರಿಯ ಮತ್ತು ತ್ರಿಕಾಲಿ ಶುದ್ಧ ಆತ್ಮನೆಂದು ಈ ಮೂರರ ಮಧ್ಯದಲ್ಲಿ ಯಾರಿಗೆ ಭೇದಜ್ಞಾನವು ವರ್ತಿಸುತ್ತದೆ ಅವರಿಗೆ ಚಾರಿತ್ರವಿರುತ್ತದೆ. ಅದಲ್ಲದೆ ಚಾರಿತ್ರವು ಇರುವುದಿಲ್ಲ. ಆಂತರ್ಯದ ಸ್ಥಿರತೆಯು ಅದು ಚಾರಿತ್ರವಿದೆ. ಈತನು ನನ್ನ ಪರಿಚಯವುಳ್ಳವನಿದ್ದಾನೆ ಅಥವಾ ಅಪರಿಚಯವುಳ್ಳವನಿದ್ದಾನೆಂಬ ವಿಕಲ್ಪವು ಯಾರಿಗೆ ಉತ್ಪನ್ನವಾಗುವುದಿಲ್ಲ, ಆದರೆ ಸ್ವರೂಪದಲ್ಲಿ ಸ್ಥಿರವಾಗಿ ಹೋಗುತ್ತಾರೆ. ಅವರಿಗೆ ಚಾರಿತ್ರವಿರುತ್ತದೆ. ಸಂಸಾರದಲ್ಲಿ ಅಪರಿಚಯವುಳ್ಳ ಮನುಷ್ಯನು ಆದರ ಮಾಡದಿದ್ದರೆ ಜೀವನಿಗೆ ಏನೂ ಎನಿಸುವುದಿಲ್ಲ ; ಆದರೆ ಪರಿಚಿತ ಮನುಷ್ಯನು ಯಥಾಯೋಗ್ಯ ಆದರ ಮಾಡದಿದ್ದರೆ ಅಪಕೀರ್ತಿಯಾಗುತ್ತದೆ. ಇಲ್ಲಿ ಹೇಳಿರುವುದೇನೆಂದರೆ ಆತ್ಮನಿಗೆ ಯಾರ ಜತೆಯಲ್ಲೂ ಪರಿಚಯವಿಲ್ಲ. ಬಾಹ್ಯದಲ್ಲಿನ ಅಪರಿಚಯದಿಂದ ಅಥವಾ ಪರಿಚಯದಿಂದ ಹೀಗೆ ಎರಡರ ಜತೆಯಲ್ಲೂ ಉಪೇಕ್ಷೆಯ ಭಾವವು ವರ್ತಿಸುತ್ತದೆ. ಆತ್ಮನಲ್ಲಿ ಎಲ್ಲವುಗಳ ಅಭಾವವಿದೆ. ಅದಕ್ಕಾಗಿಯೇ ನನ್ನದು ನನ್ನ ಜ್ಞಾನ-ದರ್ಶನ ಮೊದಲಾದ ಗುಣಗಳ ಜತೆಯಲ್ಲಿ ಪರಿಚಯವಿದೆಯೆಂದು ತಿಳಿದುಕೊಂಡು ಆಂತರ್ಯದಲ್ಲಿ ಸ್ಥಿರವಾಗುವುದು ಅದು ಚಾರಿತ್ರವಿದೆ. ಬೇಕಾದ ಜೀವವಿರಲಿ, ಪ್ರಶಂಸೆ ಮಾಡಲಿ ಅಥವಾ ನಿಂದೆ ಮಾಡಲಿ, ಪರಿಚಿತನಿರಲಿ ಅಥವಾ ಅಪರಿಚಿತನಿರಲಿ ನನ್ನದು ಯಾವುದೇ ಸಂಬಂಧವಿಲ್ಲ. ಅಜ್ಞಾನದ ದಶೆಯಲ್ಲಿ ರಾಗ-ದ್ವೇಷಾದಿಗಳನ್ನು ಮಾಡುತ್ತಲಿದ್ದೆನು. ಆ ಸ್ವಭಾವದ ಪರಿಚಯ ಮಾಡಿಕೊಂಡು ಒಳಗೆ ಉದಾಸೀನನಾಗಿ ಸ್ವಭಾವದ ದೃಢತೆಯು ವೃದ್ಧಿಸಿ ಹೋಯಿತು. ಸಮ್ಯಗ್ದೃಷ್ಟಿಗೆ ಇನ್ನೂ ಆಸಕ್ತಿಯಿರುತ್ತದೆ ಇಲ್ಲಿಯಂತೂ ಆ ಆಸಕ್ತಿಯನ್ನು ಕೂಡ ಸ್ವಭಾವದ ಅವಲಂಬನದಿಂದ ಮುರಿದು ಹಾಕುವುದು ಅದು ಚಾರಿತ್ರವಿದೆ.

ಈ ಮಕ್ಕಳನ್ನು ಮತ್ತು ಸಂಬಂಧಿಕರನ್ನು ಇಡೀ ಜೀವನದ ತುಂಬೆಲ್ಲ ಪೋಷಿಸಿಕೊಂಡು ಬಂದೆನು, ದೊಡ್ಡವರನ್ನಾಗಿ ಮಾಡಿದೆನು, ಆದರೆ ಈಗ ನನ್ನೊಡನೆಯೇ ವಿರುದ್ಧವಾಗಿ ಅದೇಕೆ ವರ್ತಿಸುತ್ತಿದ್ದಾರೆಂದು ಅಜ್ಞಾನೀ ಜೀವರುಗಳ ಮನಸ್ಸಿನಲ್ಲಿ ಬರುತ್ತದೆ. ಅದಕ್ಕಾಗಿ ಅವರಿಗೆ ಹೇಳುವುದೇನೆಂದರೆ ಎಲೈ ಸೋದರನೇ ! ನೀನು ಆ ಯಾವ ಜೀವರುಗಳನ್ನೂ ಪೋಷಿಸಿಲ್ಲ, ಆದರೆ ನಿನ್ನ ಭಾವದಲ್ಲಿ ವಿಕಾರವನ್ನು ಪೋಷಿಸಿರುವೆ ಆ ವಿಕಾರವೇನು ನಿನ್ನ ತತ್ತ್ವವಿಲ್ಲ. ವಿಕಾರದಿಂದ ರಹಿತವಾದ ಶಾಂತ ಸ್ವಭಾವದಲ್ಲಿ ಸ್ಥಿರಗೊಂಡರೆ ಶಾಂತಿಯು ಸ್ವಾಭಾವಿಕವಾಗಿ ಸಿಗುವಂತಿದೆ.

ಈ ಜೀವನು ನನ್ನ ಆದರ ಮಾಡುತ್ತಾನೆ ಮತ್ತು ಈತನು ನನ್ನ ಆದರ ಮಾಡುವುದಿಲ್ಲವೆಂದು ಯಾರು ಮನ್ನಿಸಿದ್ದಾರೆ ಅವರ ದೃಷ್ಟಿಯಲ್ಲಿ ಪದಾರ್ಥಗಳು ಜ್ಞೇಯರೂಪವಾಗಿ ಉಳಿಯುವುದಿಲ್ಲ. ಆ ಜೀವನು ಪರದ್ರವ್ಯಗಳಲ್ಲಿ ಕಲಬೆರಕೆ ಮಾಡುತ್ತಾನೆ ಮತ್ತು ಆ ಜೀವರುಗಳು ಹೆಂಡಿರು-ಮಕ್ಕಳನ್ನು ಬಿಟ್ಟುಕೊಡುವುದರಿಂದ ಸಂಸಾರವು ಬಿಟ್ಟು ಹೋಗುತ್ತದೆಯೆಂದು ಮನ್ನಿಸುತ್ತಾರೆ. ಅವರಿಗೆ ವಸ್ತು ಸ್ವಭಾವದ ಪ್ರಜ್ಞೆಯಿಲ್ಲ. ಆರು ತಿಂಗಳ ಮಗುವಿಗೆ ಹೊಟ್ಟೆಯಲ್ಲಿ ನೋವಾಗುತ್ತಿದ್ದರೆ ಎಲ್ಲಿ ನೋವಾಗುತ್ತಿದೆ ಮತ್ತು ಅದು ಯಾವ ರೀತಿಯಿಂದ ದೂರವಾಗುವುದೆಂಬುದು ಆ ಮಗುವಿಗೆ ತಿಳಿದು ಬರುವುದಿಲ್ಲ. ಅದೇ ಪ್ರಕಾರ ಅಜ್ಞಾನೀ ಜೀವನಿಗೆ ಸಂಸಾರವು ಎಲ್ಲಿ ಇರುತ್ತಿರಬೇಕು ಮತ್ತು ಎಲ್ಲಿಂದ ಅದನ್ನು ಬಿಡಲಾಗುತ್ತದೆಯೆಂಬುದರ ಅರಿವು ಮೂಡಿ ಬರುವುದಿಲ್ಲ. ಹೆಂಡಿರು-ಮಕ್ಕಳುಗಳು ಆತ್ಮನಲ್ಲಿ ಸೇರಿ ಹೋಗಿಲ್ಲ, ಅವರನ್ನು ಬಿಟ್ಟುಕೊಡಲು ಬಯಸುತ್ತಿರುವೆ. ಅವರಂತೂ ಮೂರು ಕಾಲದಲ್ಲೂ ಬಿಟ್ಟುಕೊಟ್ಟವರೇ ಇದ್ದಾರೆ-ಭಿನ್ನವಾಗಿಯೇ ಇದ್ದಾರೆ. ಶುದ್ಧ ಚಿದಾನಂದ ಸ್ವರೂಪಿಯಾದ ಆತ್ಮನು ಭಿನ್ನನೇ ಇದ್ದಾನೆಂಬ ಜ್ಞಾನವಾದಲ್ಲದೆ ಚಾರಿತ್ರವಾಗುವ ಸಾಧ್ಯತೆಯಿಲ್ಲ. ಯಾವ ಪರ್ಯಾಯವು ಶುದ್ಧ ಆತ್ಮನನ್ನು ವಿಷಯವನ್ನಾಗಿ ಮಾಡುತ್ತದೆ ಮತ್ತು ಪರವಿಷಯಗಳನ್ನು

ಹಾಗೂ ಕುಟುಂಬ ಮೊದಲಾದುವನ್ನು ಉಪೇಕ್ಷೆ ಮಾಡುತ್ತದೆ ಮತ್ತು ಸ್ವಭಾವದಲ್ಲಿ ಸ್ಥಿರಗೊಳ್ಳುತ್ತದೆ ಅದು ಚಾರಿತ್ರವಿದೆ. ನನ್ನ ಆತ್ಮನು ರಾಗರಹಿತನಿದ್ದಾನೆಂದು ಶ್ರದ್ಧೆ-ಜ್ಞಾನ ಮಾಡಿಕೊಂಡು ಆಂತರ್ಯದ ಶಾಂತ ಸ್ವರೂಪದಲ್ಲಿ ನಿಂತುಕೊಳ್ಳುವುದು ಅದು ಚಾರಿತ್ರವಿದೆ.

**ಭಾವಾರ್ಥ :-** ಜೀವರುಗಳಿಗೆ ಅನಾದಿ ಅವಿದ್ಯೆಯ ಪ್ರಭಾವದಿಂದ ಪದಾರ್ಥಗಳ ಕುರಿತು ವಿಪರೀತವಾದ ಶ್ರದ್ಧೆಯಿದೆ. ತಮ್ಮ ಆತ್ಮನು ಶುದ್ಧ ಮತ್ತು ಆನಂದಸ್ವರೂಪನಿದ್ದಾನೆಂಬುದನ್ನು ಮನ್ನಿಸದೆ ನನ್ನ ಜ್ಞಾನ ಮತ್ತು ಆನಂದವು ಪರದೊಳಗಿಂದ ಬರುತ್ತಿರಬೇಕು ಮತ್ತು ಪರಪದಾರ್ಥಗಳು ನನ್ನ ಕಾರಣದಿಂದ ಪೋಷಿಸಲ್ಪಡುತ್ತಿರಬೇಕೆಂಬ ಮನ್ನಣೆಯು ಅದು ಮಿಥ್ಯಾದರ್ಶನವಿದೆ. ಶರೀರ, ಮನಸ್ಸು, ವಾಣಿಗಳು ಪೃಥಕ್ಕಾಗಿದ್ದರೂ ಕೂಡ ಅವುಗಳ ನೆರವಿನಿಂದ ನನಗೆ ಶಾಂತಿಯಿದೆಯೆಂದು ಮನ್ನಿಸುವುದು ಅದು ಅಜ್ಞಾನವಿದೆ. ಅನಾದಿಯಿಂದ ಅಜ್ಞಾನೀ ಜೀವನಿಗೆ ಇಂಥ ವಿಪರೀತ ಶ್ರದ್ಧೆಯಿದೆ.

ಕಾಲಲಬ್ಧಿಯ ಪ್ರಭಾವದಿಂದ ಮಿಥ್ಯಾತ್ವವು ನಷ್ಟವಾಗುತ್ತದೆ. ಆಗ ಪದಾರ್ಥಗಳ ಯಥಾರ್ಥ ಪ್ರತೀತಿಯಾಗುವುದು ಅದು ಸಮ್ಯಗ್ದರ್ಶನವಿದೆ. ಕಾಲಲಬ್ಧಿಯ ಅರ್ಥವೆಂದರೆ ಸ್ವಪರ್ಯಾಯದ ಪುರುಷಾರ್ಥವು ತಾನು ಸ್ವಯಂ ಜ್ಞಾನಾನಂದ ಸ್ವಭಾವಿಯಿದ್ದೇನೆಂದು ಅಭಿರುಚಿಯಾಗುವುದು ಮತ್ತು ವರ್ತಮಾನ ದಶೆಯಲ್ಲಿ ಸ್ವಭಾವವನ್ನು ಪ್ರಕಟಪಡಿಸುವ ಯೋಗ್ಯತೆಯನ್ನು ಕಾಲಲಬ್ಧಿಯೆಂದು ಹೇಳುತ್ತಾರೆ. ತನ್ನ ಸ್ವಭಾವದ ಪ್ರತೀತಿಯಿರುವವನಿಗೆ ಒಂಭತ್ತು ಪದಾರ್ಥಗಳ ಯಥಾರ್ಥ ಪ್ರತೀತಿಯಿರುತ್ತದೆ. ಜೀವವನ್ನು ಜೀವವೆಂದು ತಿಳಿಯುವುದು, ಜಡವನ್ನು ಜಡವೆಂದು ತಿಳಿಯುವುದು, ಪುಣ್ಯ-ಪಾಪಗಳನ್ನು ವಿಕಾರವೆಂದು ತಿಳಿಯುವುದು, ತ್ರಿಕಾಲೀ ಸ್ವಭಾವವನ್ನು ಶುದ್ಧವೆಂದು ತಿಳಿಯುವವನಿಗೆ ಯಥಾರ್ಥ ಪ್ರತೀತಿಯಿರುತ್ತದೆ.

ಅಜ್ಞಾನೀ ಜೀವರುಗಳಿಗೆ ಪರದ ಮಹಿಮೆಯು ಬರುತ್ತದೆ. ಮನೆಯಲ್ಲಿ ಮಗನ ಮದುವೆಯಾದರೆ ಅದರ ಮಹಿಮೆ ಬರುತ್ತದೆ, ಆಭರಣಗಳ ಮಹಿಮೆ ಬರುತ್ತದೆ, ಧನದ ಮಹಿಮೆ ಬರುತ್ತದೆ ಇವೆಲ್ಲವು ಅಜ್ಞಾನದ ಭಾವಗಳಿವೆ. ಪೂರ್ವದ ಪುಣ್ಯವು ಉದಯದಲ್ಲಿ ಬಂದು ಬಿಟ್ಟರೆ ಹಣವು ದೊರಕುತ್ತದೆ, ಆದರೆ ಜೀವನು ಅದರಲ್ಲಿ ಹರ್ಷಿತನಾಗುತ್ತಾನೆ. ಆದರೆ ಇಂಥ ಸಂಯೋಗಗಳು ಅನಂತ ಬಾರಿ ದೊರಕಿವೆ ಅದರಲ್ಲಿ ನವೀನತೆಯಿಲ್ಲ. ಇನ್ನು ಕೆಲವರಿಗೆ ದಯೆ, ದಾನ ಮೊದಲಾದವುಗಳ ಮಾಹಾತ್ಮ್ಯವು ಬರುತ್ತದೆ. ಈ ಪ್ರಕಾರ ಪರದ ವಿಕಾರದ ಮಾಹಾತ್ಮ್ಯವು ಬರುವುದು ಅದು ಅಜ್ಞಾನವಿದೆ. ತನ್ನ ಶುದ್ಧ ಆತ್ಮನ ಮಾಹಾತ್ಮ್ಯವು ಬಾರದಿರುವುದರಿಂದ ಜೀವನು ಸಂಸಾರದಲ್ಲಿ ಸುತ್ತುತ್ತಿದ್ದಾನೆ.

ಜೀವನು ಯಾವಾಗ ತನ್ನ ಪರ್ಯಾಯದಲ್ಲಿ ಪುರುಷಾರ್ಥ ಮಾಡುತ್ತಾನೆ ಆಗ ಮಿಥ್ಯಾತ್ವವು ನಷ್ಟವಾಗುತ್ತದೆ ಮತ್ತು ಜೀವವನ್ನು ಜೀವವೆಂದು ತಿಳಿಯುತ್ತಾನೆ, ಅಜೀವವನ್ನು ಅಜೀವವೆಂದು ತಿಳಿಯುತ್ತಾನೆ. ಹೀಗೆ ಒಂಭತ್ತು ಪದಾರ್ಥಗಳನ್ನು ಪೃಥಕ್ ಪೃಥಕ್ಕಾಗಿ ತಿಳಿಯುವುದರಲ್ಲಿ ಶುದ್ಧ ಆತ್ಮನ ಪ್ರತೀತಿಯು ಬಂದು ಬಿಡುತ್ತದೆ. ಅದರ ಹೆಸರೇ ಸಮ್ಯಗ್ದರ್ಶನವಿದೆ. ಅದು ಬೀಜಭೂತವಿದ್ದು ಅದರೊಳಗಿಂದ ಕೇವಲಜ್ಞಾನವು ಪ್ರಕಟವಾಗುತ್ತದೆ. ಮಾವಿನ ಹಣ್ಣಿನ ಸಲುವಾಗಿ ಮಾವಿನ ಹಣ್ಣಿನ ಬೀಜವನ್ನು ಬಿತ್ತಬೇಕಾಗುವುದು, ಬೇವಿನ ಹಣ್ಣಿನ ಬೀಜ ಬಿತ್ತಿದರೆ ನಡೆಯುವುದಿಲ್ಲ. ಅದರಂತೆ ಪುಣ್ಯ-ಪಾಪದ ಅಭಿರುಚಿ ಮಾಡುವುದು ಮತ್ತು ಸಂಸಾರದೊಳಗಿಂದ ಬಿಡುಗಡೆ ಹೊಂದಲು ಬಯಸುವುದು ಅದು ಹೇಗೆ ಸಾಧ್ಯವಿದೆ ? ಶುದ್ಧ ಚೈತನ್ಯಸೂರ್ಯ ಸ್ವಭಾವದ ಆತ್ಮನಿದ್ದಾನೆ ಅವನ ಶ್ರದ್ಧೆ ಮಾಡುವುದು ಅದು ಬೀಜಭೂತವಿದೆ. ಅವನೊಳಗಿಂದಲೇ ಕೇವಲಜ್ಞಾನವು ಪ್ರಕಟವಾಗುವುದು. ಒಂಭತ್ತು ಪದಾರ್ಥಗಳ ಯಥಾರ್ಥ ಪ್ರತೀತಿಯಲ್ಲಿ ಆತ್ಮನ ಪ್ರತೀತಿಯು ಬಂದು ಬಿಡುತ್ತದೆ. ಯಾವುದರೊಳಗಿಂದ ಸ್ವಭಾವದ ಪ್ರಜ್ಞೆಯು ಬರುವುದು ಮತ್ತು ಪರದ ಪ್ರಜ್ಞೆಯು ಹೊರಟು ಹೋಗುವುದು. ಆ ಪ್ರಜ್ಞೆಯು ಸ್ತಂಭವಿದೆ, ಆತ್ಮನು ಮಹಾಭಾವದ ಮಾನಸ್ತಂಭನಿದ್ದಾನೆ. ಆತ್ಮನು ಚೈತನ್ಯಸ್ವರೂಪನಿದ್ದಾನೆ ಮತ್ತು ಅನ್ಯರೂಪದಿಂದ ಇಲ್ಲ.

ಇಂಥ ನಿರ್ವಿಕಲ್ಪ ಪ್ರತೀತಿಯು ಅದು ಸಮ್ಯಗ್ದರ್ಶನವಿದೆ ಮತ್ತು ಅದು ಕೇವಲಜ್ಞಾನದ ಬೀಜವಿದೆ. ಈಗ ಜ್ಞಾನದ ಮಾತು ಹೇಳುತ್ತಾರೆ. ಮಿಥ್ಯಾತ್ವದ ಉದಯದಿಂದ ಸಂಶಯ, ವಿಮೋಹ, ವಿಭ್ರಮ ಸ್ವರೂಪದಿಂದ ಪದಾರ್ಥಗಳ ಜ್ಞಾನವಾಗುತ್ತವೆ. ಯಾವ ಪ್ರಕಾರ ಉಗಿಬಂಡಿಯಲ್ಲಿ ಕುಳಿತುಕೊಂಡವರಿಗೆ ಬಾಹ್ಯದಲ್ಲಿ ಸ್ಥಿರವಿರುವಂಥ ಪದಾರ್ಥಗಳು ಓಡುತ್ತಿರುವಂತೆ ಕಂಡು ಬರುತ್ತವೆ ಅದನ್ನು ವಿಪರೀತ ಜ್ಞಾನವೆಂದು ಹೇಳುತ್ತಾರೆ. ಪ್ರತಿಯೊಂದು ಪದಾರ್ಥವು ಸ್ವತಂತ್ರವಿದ್ದು ಅದು ತನ್ನ ಕಾರಣದಿಂದ ಬರುತ್ತದೆ ಹೋಗುತ್ತದೆ, ಆದಾಗ್ಯೂ ಅಜ್ಞಾನೀ ಜೀವನಿಗೆ ಆ ವಸ್ತುಗಳು ನನ್ನ ಸಲುವಾಗಿ ಬರುತ್ತಿರಬೇಕೆಂದು ಎನಿಸುತ್ತದೆ. ಕ್ಷೇತ್ರ, ಕಾಲ ಮತ್ತು ಭಾವದಿಂದ ಆ ವಸ್ತುಗಳ ಸಂಯೋಗವಿರುವುದರಿಂದ ಅವುಗಳ ವಿಯೋಗವಾಗುತ್ತಿದ್ದರೂ ಕೂಡ ಅಜ್ಞಾನಿಗೆ ಎನಿಸುವುದೇನೆಂದರೆ ಅವು ನನ್ನ ಸಲುವಾಗಿ ಬಂದಿರುತ್ತವೆ ಮತ್ತು ಯಾವಾಗ ಹೋಗುತ್ತವೆ ಆಗ ಅವು ನನ್ನನ್ನು ಬಿಟ್ಟು ಹೊರಟುಹೋದವೆಂದು ಮನ್ನಿಸುತ್ತಾನೆ. ಈ ಪ್ರಕಾರ ಅವನು ವಿಪರೀತವಾಗಿ ಮನ್ನಿಸುತ್ತಿರುತ್ತಾನೆ. ಪದ್ಮನಂದಿ ಪಂಚವಿಂಶತಿಕೆಯ ದಾನ ಅಧಿಕಾರದಲ್ಲಿ ಮುನಿಗಳು ಲೋಭರೂಪದ ಹೊಂಡದಲ್ಲಿ ಹೊರಳಿ ಬೀಳುತ್ತಿರುವ ಜೀವರುಗಳನ್ನು ಮೇಲಕ್ಕೆತ್ತುವ ಸಲುವಾಗಿ ಹೇಳಿದ್ದಾರೆ ಮತ್ತು ಅದನ್ನು ಓದಿ ನಂತರ ವಿಪರೀತ ಬುದ್ಧಿಯ ಜೀವರುಗಳಿಗೆ ಎನಿಸುವುದೇನೆಂದರೆ 'ನನ್ನ ಹತ್ತಿರದಿಂದ ಹಣ ಕಿತ್ತುಕೊಳ್ಳುವ ಸಲುವಾಗಿ ಈ ದಾನ ಅಧಿಕಾರವನ್ನು ರಚಿಸಿದ್ದಾರೆ'. ಪ್ರರೂಪಣೆಯಲ್ಲಿ ಆತ್ಮನು ಸಿದ್ಧಸಮಾನನಿದ್ದಾನೆಂದು ಬರುತ್ತದೆ. ಆದರೆ ವಿಪರೀತ ಬುದ್ಧಿಯ ಮನುಷ್ಯರು 'ನಮಗಂತೂ ಸಿದ್ಧಸ್ವರೂಪವು ಎಲ್ಲಿ ಕಂಡು ಬರುವುದೇ ಇಲ್ಲವಲ್ಲ ! ' ಎಂದು ಹೇಳುತ್ತಾರೆ ಮತ್ತು ಅಜ್ಞಾನಿಗಳು ಮನ್ನಿಸಿಕೊಂಡಿರುವುದೇನೆಂದರೆ ಹಣವಿದ್ದರೆ ನಿವೃತ್ತಿ ತೆಗೆದುಕೊಳ್ಳುತ್ತಾರೆ ಅದು ಕೂಡ ವಿಪರೀತತೆಯಿದೆ. ನಿವೃತ್ತಿಯನ್ನು ಪರದಿಂದ ತೆಗೆದುಕೊಳ್ಳುವುದಿಲ್ಲ. ಅವರಿಗೆ ಕುದೇವಾದಿಗಳು ಸತ್ಯವಾಗಿ ಕಂಡು ಬರುತ್ತಾರೆ. ನಿಜವಾದ ದೇವರು ಕುದೇವರಾಗಿ ಕಂಡು ಬರುತ್ತಾರೆ ಮತ್ತು ಕೆಲವರು 'ಪುಣ್ಯವಿಲ್ಲದೆ ಕೇಳಲು ದೊರಕುವುದಿಲ್ಲ ಮತ್ತು ಕೇಳಿದಲ್ಲದೆ ಧರ್ಮವಾಗುವುದಿಲ್ಲ'ವೆಂದು ಹೇಳುತ್ತಾರೆ. ಈ ಮಾತುಗಳನ್ನು ಕೇಳುತ್ತಿರುವಂತೆ ಅಜ್ಞಾನಿಗಳಿಗೆ ಪುಣ್ಯದಿಂದ ಧರ್ಮವಾಗುತ್ತದೆಯೆಂದು ಎನಿಸುತ್ತದೆ. ಈ ಪ್ರಕಾರ ಯಾರ ಜ್ಞಾನವು ವಿಪರೀತವಿದೆ ಅವರಿಗೆ ಎಲ್ಲವು ವಿರುದ್ಧವೆನಿಸುತ್ತದೆ. ಅಜ್ಞಾನಿಗಳು ಕುದೇವರನ್ನು ಸುದೇವರೆಂದು ಮನ್ನಿಸುತ್ತಾರೆ, ಸುದೇವರನ್ನು ಕುದೇವರೆಂದು ಮನ್ನಿಸುತ್ತಾರೆ; ಸುಮಾರ್ಗವನ್ನು ಕುಮಾರ್ಗವೆಂದು ಮನ್ನಿಸುತ್ತಾರೆ, ಕುಮಾರ್ಗವನ್ನು ಸುಮಾರ್ಗವೆಂದು ಮನ್ನಿಸುತ್ತಾರೆ ಮತ್ತು ಯಾವ ಪ್ರಕಾರ ಯಾವನಿಗೆ ಸರ್ಪದಂಶ ಮಾಡಿದೆ ಆ ಜೀವನಿಗೆ ಬೇವು ಕಹಿಯೆನಿಸುವುದಿಲ್ಲ, ಆದರೆ ಸಿಹಿಯೆನಿಸುತ್ತದೆ. ಅದೇ ಪ್ರಕಾರ ಮಿಥ್ಯಾತ್ವ ಮತ್ತು ಅಜ್ಞಾನರೂಪದ ವಿಷವು ಯಾರಲ್ಲಿದೆ ಆ ಜೀವರುಗಳಿಗೆ ವಿರುದ್ಧವಾದ ಮಾತುಗಳು ಕೂಡಲೆ ಒಪ್ಪಿಗೆಯಾಗುತ್ತವೆ, ಆದರೆ ಯಾವಾಗ ಜೀವದ ಮಿಥ್ಯಾಭ್ರಾಂತಿಯು ನಾಶ ಹೊಂದುತ್ತದೆ ಆಗ ಪದಾರ್ಥಗಳ ಯಥಾರ್ಥ ಗ್ರಹಣವಾಗುತ್ತದೆ ಆ ಜ್ಞಾನದ ಹೆಸರು ಸಮ್ಯಗ್ಜ್ಞಾನವಿದೆ. ಇಲ್ಲಿ ಅಕ್ಷರ ಜ್ಞಾನದ ಮಾತು ಇಲ್ಲ. ಚಿದಾನಂದವು ನನ್ನ ಸ್ವರೂಪವಿದೆಯೆಂದು ಜ್ಞಾನದಿಂದ ಜ್ಞಾನವನ್ನು ಹಿಡಿದುಕೊಳ್ಳುವುದು ಅದು ಸ್ವಸಂವೇದನ ಜ್ಞಾನವಿದೆ ಮತ್ತು ಅದು ಆತ್ಮತತ್ತ್ವದ ಅನುಭವದ ಪ್ರತೀತಿಯ ಮೂಲ ಕಾರಣವಿದೆ.

ಈಗ ಚಾರಿತ್ರದ ಮಾತು ಹೇಳುತ್ತಾರೆ. ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನದ ಪ್ರವೃತ್ತಿಯ ಪ್ರಭಾವದಿಂದ ಕುಮಾರ್ಗದ ನಿವೃತ್ತಿಯಾಗಿ ರಾಗ ರಹಿತ ಪರಿಣಾಮವಾಗುವುದನ್ನು ಚಾರಿತ್ರವೆಂದು ಹೇಳುತ್ತಾರೆ. ವೀತರಾಗ ಸರ್ವಜ್ಞ ಭಗವಂತರು ಹೇಳಿರುವ ಮಾರ್ಗವನ್ನು ಹೊರತುಪಡಿಸಿ ಸಮಸ್ತ ಮಾರ್ಗಗಳು ಕುಮಾರ್ಗಗಳಿವೆ. ಜನರು ಶರೀರದ ಕ್ರಿಯೆ ಮೊದಲಾದವುಗಳಿಗೆ ಯೋಗವೆಂದು ಹೇಳುತ್ತಾರೆ ಅದೆಲ್ಲವು ವಿಪರೀತ ಮಾರ್ಗವಿದೆ. ಎಲ್ಲವೂ ಸೇರಿ ಒಂದು ಪದಾರ್ಥವಿಲ್ಲ ಮತ್ತು ಭಗವಂತರು ದರ್ಶನ ಕೊಡುವುದರಿಂದ ಕಲ್ಯಾಣವಾಯಿತೆಂದು ಕೆಲವರು ಮನ್ನಿಸುತ್ತಾರೆ ಅವೆಲ್ಲವು ಕುಮಾರ್ಗಗಳಿವೆ. ಆ ಕುಮಾರ್ಗಗಳಿಂದ ನಿವೃತ್ತಿಯಾಗಬೇಕಾಗುವುದು. ಸರ್ವಜ್ಞ ಭಗವಂತರು ಹೇಳಿರುವ ಹಾಗೆ ಆರು ದ್ರವ್ಯಗಳು ಸ್ವತಂತ್ರವಿವೆ. ಅವು ಭಿನ್ನ ಭಿನ್ನವಿವೆಯೆಂದು ಯಥಾರ್ಥವಾಗಿ ಕೂಡ ತಿಳಿದುಕೊಳ್ಳಬೇಕಾಗುವುದು.

ಇದನ್ನು ತಿಳಿದುಕೊಂಡಲ್ಲದೆ ಇದು ಸತ್ಯವಿದೆಯೋ ಅಥವಾ ಇನ್ನೊಂದು ಸತ್ಯವಿದೆಯೋ ? ಎಂದು ಮನ್ನಿಸಿ ಅಜ್ಞಾನೀ ಜೀವನು ವೀರ್ಯವನ್ನು ತುಂಡು ತುಂಡು ಮಾಡಿ ಕುಮಾರ್ಗದಲ್ಲಿ ಸಿಕ್ಕಿ ಬೀಳುತ್ತಾನೆ. ಆದುದರಿಂದ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನದ ಪ್ರವೃತ್ತಿಯಿಂದ ಸಮಸ್ತ ಕುಮಾರ್ಗಗಳಿಂದ ಬಿಡುಗಡೆ ಹೊಂದಿ ತಮ್ಮ ಆತ್ಮಸ್ವರೂಪದಲ್ಲಿ ನಿಮಗ್ನವಾಗುವುದನ್ನು ಚಾರಿತ್ರವೆಂದು ಹೇಳುತ್ತಾರೆ. ಜಡದೇಹದ ಕ್ರಿಯೆ ಅಥವಾ ಪಂಚಮಹಾವ್ರತದ ಪರಿಣಾಮವು ಅದು ಚಾರಿತ್ರವಿಲ್ಲ. ಅದರಂತೆ ಹೊಟ್ಟೆತುಂಬ ಊಟಮಾಡಲಿ ಅಥವಾ ಬ್ರಹ್ಮಚರ್ಯ ಪಾಲಿಸಲಿ ಅದುಕೂಡ ಚಾರಿತ್ರವಿಲ್ಲ. ಪದಾರ್ಥಗಳಲ್ಲಿನ ಇಷ್ಟ-ಅನಿಷ್ಟತೆಯ ಕಲ್ಪನೆಯನ್ನು ಬಿಟ್ಟುಕೊಟ್ಟು ರಾಗ-ದ್ವೇಷಗಳಿಂದ ರಹಿತವಾಗಿ ಆತ್ಮಸ್ವಭಾವದಲ್ಲಿ ನಿರ್ವಿಕಾರ ಪರಿಣಾಮವಾಗುವುದು ಅದು ಸಮ್ಯಕ್ಚಾರಿತ್ರವಿದೆ. ನಾನು ಶುದ್ಧ ಚಿದಾನಂದ ಸ್ವರೂಪನಿದ್ದೇನೆಂಬ ಪ್ರಜ್ಞೆಯು ಬಂದಲ್ಲದೆ ಸಮ್ಯಗ್ದರ್ಶನವಾಗುವುದಿಲ್ಲ, ಸಮ್ಯಗ್ದರ್ಶನವಿಲ್ಲದೆ ಚಾರಿತ್ರವಿರುವುದಿಲ್ಲ, ಚಾರಿತ್ರವಿಲ್ಲದೆ ಕೇವಲಜ್ಞಾನವಾಗುವುದಿಲ್ಲ ಮತ್ತು ಕೇವಲಜ್ಞಾನವಿಲ್ಲದೆ ಮುಕ್ತಿಯಾಗುವುದಿಲ್ಲ.

ಚಾರಿತ್ರದ ದಶೆಯು ಉತ್ಪನ್ನವಾಗುವುದರಿಂದ ಸಂಸಾರವು ಉತ್ಪನ್ನವಾಗುವುದಿಲ್ಲ. ಚಾರಿತ್ರವು ಅದು ಮೋಕ್ಷಮಾರ್ಗವಿದೆ ಮತ್ತು ಮೋಕ್ಷದ ಕಾರಣವಿದೆ. ಇಲ್ಲಿ ನಿಜವಾದ ಚಾರಿತ್ರದ ಮಾತು ಇದೆ. ಒಂದು ದ್ರವ್ಯಲಿಂಗವನ್ನು ಧಾರಣ ಮಾಡಿದರೆ ಅಥವಾ ಪಂಚ ಮಹಾವ್ರತಗಳನ್ನು ಪಾಲಿಸಿದರೆ ಅದು ಚಾರಿತ್ರವಾಗುವುದಿಲ್ಲ. ಆತ್ಮನ ಅರಿವಿನೊಡನೆ ಆಂತರ್ಯದಲ್ಲಿ ಲೀನತೆಯಾಗುವುದು ಅದು ಚಾರಿತ್ರವಿದೆ. ನಾಲ್ಕನೆಯ ಗುಣಸ್ಥಾನದಲ್ಲಿ ಸಮ್ಯಗ್ದರ್ಶನವಿರುತ್ತದೆ ಅದು ಪೂರ್ಣ ಮೋಕ್ಷಮಾರ್ಗವಿಲ್ಲ. ಸಮ್ಯಗ್ದರ್ಶನ, ಜ್ಞಾನ ಮತ್ತು ಚಾರಿತ್ರವೆಂದು ಈ ಮೂರರ ಏಕತೆಯು ಅದು ಮೋಕ್ಷಮಾರ್ಗವಿದೆ. ಅದರೊಳಗಿಂದ ಯಾವುದಾದರೊಂದರ ಕೊರತೆಯಿದ್ದರೆ ಅದು ಮೋಕ್ಷಮಾರ್ಗವಿಲ್ಲ.

ಯಾವ ರೀತಿಯಿಂದ ರೋಗಿಗೆ ಔಷಧದ ಶ್ರದ್ಧೆ, ಜ್ಞಾನ ಮತ್ತು ಉಪಚಾರ ಇವು ಮೂರು ಪ್ರಕಾರಗಳು ಇರುವುದರಿಂದಲೇ ರೋಗಿಯು ರೋಗದಿಂದ ಮುಕ್ತನಾಗುತ್ತಾನೆ. ಅವುಗಳೊಳಗಿಂದ ಯಾವುದಾದರೊಂದು ಇಲ್ಲದಿದ್ದರೆ ರೋಗವು ಹೋಗುವುದಿಲ್ಲ ಆದರೆ ಮೂರೂ ಉಪಚಾರಗಳು ಜತೆಯಲ್ಲಿ ಇದ್ದರೆ ರೋಗವು ಹೊರಟು ಹೋಗುತ್ತದೆ. ಇದು ದೃಷ್ಟಾಂತವಿದೆ ರೋಗವಂತೂ ರೋಗದ ಕಾರಣದಿಂದ ಹೋಗುತ್ತದೆ ಆಗ ಇವು ಮೂರು ನಿಮಿತ್ತಗಳಿರುತ್ತವೆ. ಅದೇ ರೀತಿಯಾಗಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕತೆಯಿಂದ ಮೋಕ್ಷಮಾರ್ಗವಾಗುತ್ತದೆ, ಒಂದರಿಂದ ಆಗುವುದಿಲ್ಲ.

ಈಗ ನಿಶ್ಚಯ-ವ್ಯವಹಾರನಯದ ಅಪೇಕ್ಷೆಯಿಂದ ಮೋಕ್ಷಮಾರ್ಗ ಹೇಳುತ್ತಾರೆ. ಸಮ್ಯಗ್ದರ್ಶನ ಮತ್ತು ಜ್ಞಾನದಿಂದ ಒಂಭತ್ತು ಪದಾರ್ಥಗಳು ತಿಳಿದುಬರುತ್ತವೆ. ಆ ನವ ಪದಾರ್ಥಗಳ ಸಂಕ್ಷೇಪ ಸ್ವರೂಪ ಹಾಗೂ ಹೆಸರು ಹೇಳುತ್ತಾರೆ -

**ಜೀವಾಜೀವಾ ಭಾವಾ ಪುಣ್ಣಂ ಪಾವಂ ಚ ಆಸವಂ ತೇಸಿಂ ।**
**ಸಂವರಣಂ ಣಿಜ್ಜರಣಂ ಬಂಧೋ ಮೋಕ್ಖೋ ಯ ತೇ ಅಟ್ಠಾ ॥೧೦೮॥**

**ಜೀವ ಅಜೀವವೆಂದೆರಡು ಭಾವ ಅವೆರಡರ ಪುಣ್ಯ ಪಾಪ ಮೇಣಾಸ್ರವ ।**
**ಸಂವರ ನಿರ್ಜರೆ ಬಂಧ ಮತ್ತದರಂತೆ ಮೋಕ್ಷವಿವೆಲ್ಲ ಪದಾರ್ಥಗಳಿವೆ ॥೧೦೮॥**

ಒಂದು ಜೀವ ಪದಾರ್ಥ ಮತ್ತು ಒಂದು ಅಜೀವ ಪದಾರ್ಥ. ಒಂದು ಪುಣ್ಯ ಪದಾರ್ಥ ಮತ್ತು ಒಂದು ಪಾಪ ಪದಾರ್ಥ. ಅವೆರಡೂ ಪುಣ್ಯ-ಪಾಪಗಳು ಆತ್ಮನಲ್ಲಿ ಬರುವುದು ಅದು ಒಂದು ಆಸ್ರವ ಪದಾರ್ಥವಿದೆ. ಸಂವರ

ನಿರ್ಜರೆ ಮತ್ತು ಬಂಧ ಇವು ಮೂರು ಪದಾರ್ಥಗಳಿವೆ ಮತ್ತು ಒಂದು ಮೋಕ್ಷ ಪದಾರ್ಥವಿದೆ. ಈ ಪ್ರಮಾಣದಿಂದ ಯಾವವು ಇವೆ ಅವು ಒಂಭತ್ತು ಪದಾರ್ಥಗಳಾಗುತ್ತವೆ.

**ಜೀವ :-** ಒಂಭತ್ತು ಪದಾರ್ಥಗಳಲ್ಲಿ ಜೀವವು ಒಂದು ಪದಾರ್ಥವಿದೆ. ಇಂಥ ಜೀವಗಳು ಅನಂತವಿವೆ. ಪ್ರತಿಯೊಬ್ಬ ಆತ್ಮನು ಅಸಂಖ್ಯ ಪ್ರದೇಶ ಮತ್ತು ಅನಂತ ಗುಣವುಳ್ಳವನಿದ್ದಾನೆ. ಇಂಥವರು ಅನಂತ ಆತ್ಮರುಗಳಿದ್ದಾರೆ. ಆದರೆ ಜಾತಿಯ ಅಪೇಕ್ಷೆಯಿಂದ ಏಕನಿದ್ದಾನೆ. ಕೆಲವರು ಒಬ್ಬನೇ ಆತ್ಮನೆಂದು ಮನ್ನಿಸುವರು, ಕೆಲವರು ಏಕಾಂತ ಅನಿತ್ಯವೆಂದು ಮನ್ನಿಸುವರು, ಕೆಲವರು ನವೀನವಾಗಿ ಉತ್ಪನ್ನನಾಗಿದ್ದಾನೆಂದು ಮನ್ನಿಸುತ್ತಾರೆ. ಇವೆಲ್ಲವೂ ಅಸತ್ಯವಿವೆ.

**ಅಜೀವ :-** ಅಜೀವದಲ್ಲಿ ಐದು ಭೇದಗಳಿವೆ. ಒಂದು ಧರ್ಮಾಸ್ತಿಕಾಯ, ಒಂದು ಅಧರ್ಮಾಸ್ತಿಕಾಯ, ಒಂದು ಆಕಾಶ, ಅಸಂಖ್ಯ ಕಾಲಾಣುಗಳು ಹಾಗೂ ಅನಂತ ಪುದ್ಗಲಗಳಿವೆ. ಈ ಪ್ರಕಾರ ಅಜೀವದಲ್ಲಿ ಐದು ಭೇದಗಳಿವೆಯೆಂದು ತಿಳಿದುಕೊಳ್ಳುವುದು.

**ಪುಣ್ಯ :-** ದಯೆ, ದಾನ, ಪೂಜೆ, ಭಕ್ತಿ, ಕೋಮಲತೆಯ ಪರಿಣಾಮ, ಐದು ಮಹಾವ್ರತಗಳ ಪರಿಣಾಮ ಈ ಎಲ್ಲ ಭಾವಗಳು ಪುಣ್ಯವಿವೆ.

**ಪಾಪ :-** ಹಿಂಸೆ, ಅಸತ್ಯ, ಕಳವು ಮೊದಲಾದವುಗಳ ಪರಿಣಾಮವು ಆ ಭಾವವು ಪಾಪವಿದೆ.

**ಆಸ್ರವ :-** ಪುಣ್ಯ-ಪಾಪದ ಭಾವಗಳಾಗುವುದು ಅದು ಆಸ್ರವವಿದೆ. ಅದು ಜೀವದಿಂದ ಭಿನ್ನವಾದ ತತ್ತ್ವವಿದೆ. ಅದೆಷ್ಟೋ ಜೀವರುಗಳು ದಯೆ, ದಾನದ ಭಾವವನ್ನು ಪಾಪವೆಂದು ಹೇಳುತ್ತಾರೆ, ಕೆಲವು ಜೀವರುಗಳು ಆಸ್ರವವನ್ನು ಜೀವದ ಜತೆಯಲ್ಲಿ ಅಭೇದ ಮಾಡುತ್ತಾರೆ ಅದು ಅಪರಾಧವಿದೆ. ಪುಣ್ಯ-ಪಾಪಗಳು ಜೀವದ ಪರ್ಯಾಯದಲ್ಲಿ ಆಗುತ್ತವೆ, ಆದರೆ ಅದು ಶುದ್ಧ ಜೀವತತ್ತ್ವವಿಲ್ಲ.

ಕೆಲವು ಜೀವರುಗಳು ದಯೆ-ದಾನವನ್ನು ಪಾಪವೆಂದು ಹೇಳುತ್ತಾರೆ, ಕೆಲವರು ದಯೆ-ದಾನದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಾರೆ. ಅವರೀರ್ವರು ಭ್ರಾಂತಿಯಲ್ಲಿದ್ದಾರೆ. ಕೆಲವರು ಜೀವದಿಂದ ಶರೀರವು ನಡೆಯುತ್ತದೆಂದು ಮನ್ನಿಸುತ್ತಾರೆ. ಕೆಲವರು ಅಜೀವದಿಂದ ಜೀವದಲ್ಲಿ ಕಾರ್ಯವಾಗುತ್ತದೆಯೆಂದು ಮನ್ನಿಸುತ್ತಾರೆ, ಆದರೆ ಅದು ತಪ್ಪು ಇದೆ. ಹೀಗೆ ಮನ್ನಿಸುವುದರಿಂದ ಜೀವ ಮತ್ತು ಅಜೀವ ತತ್ತ್ವಗಳು ಉಳಿಯುವುದಿಲ್ಲ. ಇನ್ನು ಕೆಲವು ಜೀವರುಗಳು ದೇವ-ಗುರು-ಶಾಸ್ತ್ರಗಳ ಶ್ರದ್ಧೆಯ ರಾಗದಿಂದ ಧರ್ಮವಾಗುತ್ತದೆಂದು ಮನ್ನಿಸುತ್ತಾರೆ ಇದರಿಂದ ಆಸ್ರವ ಮತ್ತು ಸಂವರಗಳೆರಡೂ ಒಂದಾಗಿ ಹೋಗುತ್ತವೆ. ಕರ್ಮದ ಕಾರಣದಿಂದ ವಿಕಾರವಾಗುತ್ತದೆಂದು ಮನ್ನಿಸಹೋದರೆ ಆಸ್ರವ ಮತ್ತು ಅಜೀವಗಳು ಒಂದಾಗಿ ಹೋಗುತ್ತವೆ. ಮನುಷ್ಯ ದೇಹದ ಕಾರಣದಿಂದ ಧರ್ಮವಾಗುತ್ತದೆಂದು ಮನ್ನಿಸಿದರೆ ಸಂವರ ಮತ್ತು ಅಜೀವಗಳು ಒಂದಾಗಿ ಹೋಗುತ್ತವೆ. ಪಂಚಮಹಾವ್ರತಗಳ ಕಾರಣದಿಂದ ಧರ್ಮವಾಗುತ್ತದೆಂದು ಮನ್ನಿಸಿದರೆ ಆಸ್ರವದಿಂದ ಸಂವರವನ್ನು ಮನ್ನಿಸಿದಂತೆ ಇದ್ದು ಅದು ಭ್ರಮೆಯಿದೆ.

**ಸಂವರ :-** ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳ ಪರಿಣಾಮವು ಅದು ಸಂವರವಿದೆ. ಪುಣ್ಯದಿಂದ ಧರ್ಮ ಮನ್ನಿಸಿದರೆ, ಶರೀರದ ಅನುಕೂಲತೆಯ ಕಾರಣದಿಂದ ಧರ್ಮ ಮನ್ನಿಸಿದರೆ ಸಂವರ ತತ್ತ್ವವು ಉಳಿಯುವುದಿಲ್ಲ.

**ನಿರ್ಜರೆ :-** ಆತ್ಮನ ಆಶ್ರಯದಿಂದ ಶುದ್ಧಿಯ ವೃದ್ಧಿಯಾಗುವುದು ಅದು ನಿರ್ಜರೆಯಿದೆ. ಅಜ್ಞಾನೀ ಜೀವರುಗಳು ಆಹಾರ ಸ್ವೀಕರಿಸದಿರುವುದನ್ನು ನಿರ್ಜರೆಯೆಂದು ಮನ್ನಿಸುತ್ತಾರೆ. ಅವರು ಅಜೀವವನ್ನು ನಿರ್ಜರೆಯೆಂದು ಮನ್ನಿಸಿಕೊಂಡಿದ್ದಾರೆ. ಆತ್ಮನ ಆಶ್ರಯದಿಂದ ಶುದ್ಧತೆಯ ವೃದ್ಧಿಯಾಗುವುದು ಅದು ನಿರ್ಜರೆಯಿದೆ. ಯಾರು ಒಂಭತ್ತನ್ನು ಒಂಭತ್ತಾಗಿ ತಿಳಿಯುವುದಿಲ್ಲ ಅವರ ವ್ಯವಹಾರವು ಕೂಡ ಸತ್ಯವಿಲ್ಲ, ಅವರಿಗೆ ಧರ್ಮವಾಗುವುದಿಲ್ಲ.

ರಾಗ-ದ್ವೇಷಾದಿಗಳ ಭಾವಗಳಲ್ಲಿ ನಿಂತು ಹೋಗುವುದು ಅದು ಬಂಧವಿದೆ ಮತ್ತು ವಿಕಾರೀ ಭಾವಗಳಿಂದ ಸಂಪೂರ್ಣವಾಗಿ ಮುಕ್ತವಾಗುವುದು ಅದು ಮೋಕ್ಷವಿದೆ. ಹೀಗೆ ಒಂಭತ್ತು ಪದಾರ್ಥಗಳನ್ನು ಹೇಗೆ ಇವೆ ಹಾಗೆ ಶ್ರದ್ಧೆಯಲ್ಲಿ ತಂದುಕೊಳ್ಳಬೇಕಾಗುವುದು.

**ಭಾವಾರ್ಥ :-** ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರೆ, ಬಂಧ ಮತ್ತು ಮೋಕ್ಷವೆಂಬ ಒಂಭತ್ತು ಪದಾರ್ಥಗಳನ್ನು ತಿಳಿದುಕೊಳ್ಳಬೇಕಾಗುವುದು.

**೧) ಜೀವ :-** ಆತ್ಮನು ಚೈತನ್ಯ ಪದಾರ್ಥನಿದ್ದಾನೆ. ಪುಣ್ಯ-ಪಾಪ ಮಾಡಿದರೆ ಅವನು ಆತ್ಮನಿಲ್ಲ. ದೇಹದಿಂದ ಭಿನ್ನ ಕೇವಲ ಚೈತನ್ಯದ ಜ್ಞಾನನಿದ್ದಾನೆ'. ದೇಹದಿಂದ ಭಿನ್ನ, ಕೇವಲ ನೋಡುವ-ತಿಳಿದುಕೊಳ್ಳುವ ಉಪಯೋಗವುಳ್ಳವನು ಅವನು ಜೀವನಿದ್ದಾನೆ. ಪುಣ್ಯ-ಪಾಪ ಮಾಡುವವನು ಅಥವಾ ಶರೀರ ಮೊದಲಾದವುಗಳ ಕ್ರಿಯೆ ಮಾಡುವವನು ಅವನು ಆತ್ಮನಿಲ್ಲ. ಯಾವ ಪ್ರಕಾರ ದೊರೆಗೆ, ಅವನಿಗೆ ಯೋಗ್ಯವಾದ ಮನ್ನಣೆಯಿಂದ ಪ್ರಾರ್ಥನಾ ಪತ್ರ ಸಲ್ಲಿಸಿದರೆ ಅದರ ವಿಚಾರ ಮಾಡುವನು. ಅದೇ ಪ್ರಕಾರ ಚೈತನ್ಯ ದೊರೆಯು ಹೇಗೆ ಇದ್ದಾನೆ ಹಾಗೆ ಪ್ರಾರ್ಥನಾ ಪತ್ರದಲ್ಲಿ ಬರೆದರೆ ಎಂದರೆ ಜ್ಞಾನದಲ್ಲಿ ತೆಗೆದುಕೊಂಡರೆ ಆತ್ಮದೊರೆಯು ಪ್ರಸನ್ನನಾಗಿ ಹೋಗುವಂಥವನಿದ್ದಾನೆ. ಶರೀರ ಮೊದಲಾದವು ಪರವಿವೆ ಮತ್ತು ದಯೆ-ದಾನದ ಭಾವಗಳು ವಿಕಾರವಿವೆ. ಆತ್ಮನು ಅವುಗಳಿಂದ ಭಿನ್ನನಿದ್ದಾನೆಂದು ತಿಳಿದುಕೊಂಡರೆ ಭೇದಜ್ಞಾನವಾಗುತ್ತದೆ ಮತ್ತು ಅದರಿಂದ ಶಾಂತಿಯಾಗುತ್ತದೆ.

ಅಜ್ಞಾನೀ ಜೀವರುಗಳು ಹೇಳುವುದೇನೆಂದರೆ ಪೂರ್ವದಲ್ಲಿ ಪುಣ್ಯ ಮಾಡಲಾಗಿತ್ತು ಅದರಿಂದ ಈ ಎಲ್ಲ ಸಂಯೋಗಗಳು ದೊರಕಿವೆ ಅವನ್ನು ಜೀವನು ಭೋಗಿಸುತ್ತಾನೆ. ಅವರಿಗೆ ಹೇಳುವುದೇನೆಂದರೆ ಎಲೈ ಸೋದರರೇ! ಸಂಯೋಗಗಳನ್ನು ಜೀವನು ಭೋಗಿಸುವುದಿಲ್ಲ, ಸುಖ-ದುಃಖದ ಭಾವವಾಗುತ್ತದೆ ಅದು ಕೂಡ ಜೀವವಿಲ್ಲ ಅದರಂತೆ ಸಂವರ-ನಿರ್ಜರೆಯ ಪರ್ಯಾಯವು ಕೂಡ ಒಂದು ಸಮಯದ್ದಿದೆ ಅದು ಕೂಡ ತ್ರಿಕಾಲೀ ಜೀವ ತತ್ತ್ವವಿಲ್ಲ.

ಜೀವನು ಚೇತನಾ ಲಕ್ಷಣವುಳ್ಳವನಿದ್ದಾನೆ. ಅವನು ಏನು ಮಾಡುತ್ತಾನೆಂದರೆ ಜೀವ, ಮನಸ್ಸು, ವಾಣಿ, ದೇಹದ ಕ್ರಿಯೆ ಮಾಡುವಂಥವನಿಲ್ಲ, ಆದರೆ ಕೇವಲ ನೋಡುವ-ತಿಳಿದುಕೊಳ್ಳುವ ಸ್ವಭಾವವುಳ್ಳವನಿದ್ದಾನೆ. ಅಫೀಮದ ಸ್ವಭಾವವು ಕಹಿಯಿರುವಂತೆ ಆತ್ಮನ ಸ್ವಭಾವವು ನೋಡುವುದು-ತಿಳಿದುಕೊಳ್ಳುವುದಿದೆ. ರಾಗಾದಿಗಳ ಉಪಾಧಿಯು ಅದು ಜೀವದ ಸ್ವರೂಪವಿಲ್ಲ. ಒಂದುವೇಳೆ ರಾಗವು ಜೀವ ಸ್ವರೂಪವಿದ್ದರೆ ಸಿದ್ಧರಲ್ಲಿ ಕೂಡ ರಾಗವು ಇರಬೇಕಾಗುವುದು. ಆದರೆ ಸಿದ್ಧರು ವೀತರಾಗರಿದ್ದಾರೆ, ಆದುದರಿಂದ ರಾಗವು ಅದು ಜೀವದ ಸ್ವರೂಪವಿಲ್ಲ. ಶುದ್ಧ ಚೈತನ್ಯ ಸ್ವರೂಪವು ಅದು ಜೀವವಿದೆ. ಎಷ್ಟು ಆತ್ಮನಿದ್ದಾನೆ ಅದೆಲ್ಲವು ಚೈತನ್ಯ ಪ್ರಭುತ್ವದಿಂದ ತುಂಬಿಕೊಂಡಿದೆ. ಅಜ್ಞಾನಿಗಳಿಗೆ ಪ್ರಜ್ಞೆಯಿಲ್ಲದಿರುವುದರಿಂದ ಅವರು ತಮ್ಮ ಸ್ವಭಾವವನ್ನು ಮರೆತು ಹೋಗಿದ್ದಾರೆ ಅದು ಅಧರ್ಮವಿದೆ. ಅಜ್ಞಾನೀ ಜೀವರುಗಳು ದಯೆ-ದಾನಗಳಲ್ಲಿ ಧರ್ಮವನ್ನು ಮನ್ನಿಸುತ್ತಿದ್ದಾರೆ, ಆದರೆ ಆ ವಿಕಾರೀ ಪರ್ಯಾಯವು ಜೀವದ ಮೂಲ ಸ್ವಭಾವವಲ್ಲ. ಜೀವದ ಸ್ವಭಾವವು ನಿರುಪಾಧಿಮಯ ಶಾಂತವಿದೆ. ಈ ಪ್ರಕಾರ ಜೀವದ ಜ್ಞಾತಾ-ದೃಷ್ಟಾ ಸ್ವಭಾವವನ್ನು ತಿಳಿದುಕೊಳ್ಳುವುದು ಅದು ಧರ್ಮವಿದೆ. ಇಂಥ ಧರ್ಮದ ಸ್ವೀಕೃತಿಯಿಂದಲೇ ಜೀವದ ಕಲ್ಯಾಣವಾಗುತ್ತದೆ.

೨) ಚೇತನಾದಿಂದ ರಹಿತವಾದ ಜಡ ಪದಾರ್ಥವು ಅಜೀವವಿದೆ. ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಆಕಾಶಾಸ್ತಿಕಾಯ ಮತ್ತು ಕಾಲದ್ರವ್ಯವೆಂದು ಇವು ಐದು ಪ್ರಕಾರದ ಅಜೀವಗಳಿವೆ. ಶರೀರ, ಮನಸ್ಸು, ವಾಣಿ, ಅನ್ನ, ಸಾರ, ಮಾಣಿಕರತ್ನ, ಪಚ್ಚೆರತ್ನ, ಧನ, ಕನಕ, ಮನೆ ಮೊದಲಾದವುಗಳೆಲ್ಲವು ಜಡ ಪುದ್ಗಲಗಳಿವೆ, ಅಜೀವವಿವೆ. ಅದನ್ನು ತಮ್ಮವೆಂದು ಮನ್ನಿಸುವುದು ಅದು ಅಧರ್ಮವಿದೆ. ಇದು ನನ್ನ ಮನೆಯಿದೆ,

ಇದು ನನ್ನ ಅಂಗಡಿಯಿದೆ, ಇವನು ನನ್ನ ಮಗನಿದ್ದಾನೆ, ಈಕೆ ನನ್ನ ಪತ್ನಿಯಿದ್ದಾಳೆ ಎಂದು ಹೇಳಿದರೆ ಅವು ಪರಪದಾರ್ಥಗಳಿವೆ ಮತ್ತು ಅವು ನನ್ನಿಂದ ಪೃಥಕ್ ಇವೆಯೆಂದು ನಿರ್ಣಯವಾಗುತ್ತದೆ. ಜೀವವು ಅದು ಜೀವವಿದೆ, ಆದರೆ ಅಜೀವವಿಲ್ಲ; ಅಜೀವವು ಅದು ಅಜೀವವಿದೆ, ಆದರೆ ಜೀವವಿಲ್ಲ. ವಸ್ತುಸ್ಥಿತಿಯು ಹೀಗಿದ್ದರೂ ಕೂಡ ನನ್ನಿಂದ ವಾಣಿಯನ್ನು ಆಡುವುದು ಮತ್ತು ಕರ್ಮವು ನನ್ನನ್ನು ದುಃಖಿಯನ್ನಾಗಿ ಮಾಡಿದೆಯೆಂದು ಮನ್ನಿಸುವುದು ಅದು ಅಜ್ಞಾನವಿದೆ. ಮನೆಯಲ್ಲಿ ಒಂಭತ್ತು ಮಕ್ಕಳಿದ್ದರೂ ಐದು ಮಕ್ಕಳಿದ್ದಾರೆಂದು ಹೇಳುವುದು ಅಸತ್ಯವಿದೆ. ಅದರಂತೆ ತತ್ತ್ವಗಳು ಒಂಭತ್ತು ಇದ್ದು ಅವುಗಳಿಂದ ಕಮ್ಮಿಯಾಗಿ ಮನ್ನಿಸಿದರೆ ಅಪರಾಧವಿದೆ ಆದುದರಿಂದ ಶರೀರ ಮೊದಲಾದ ಪುದ್ಗಲಗಳ ಪ್ರಭುವು ಆತ್ಮನಿಲ್ಲ, ಆತ್ಮನು ಅವುಗಳಿಂದ ಬೇರೆಯಿದ್ದಾನೆ.

೩) ಯಾವುದು ಜಡ ಮತ್ತು ಚೈತನ್ಯ ಪದಾರ್ಥಗಳು ಗಮನ ಮಾಡುವಾಗ ಅವುಗಳಿಗೆ ಗತಿಯಲ್ಲಿ ಸಹಾಯ ಮಾಡುತ್ತದೆ. ಅದು ಧರ್ಮದ್ರವ್ಯವಿದೆ. ಅದು ಹದಿನಾಲ್ಕು ಬ್ರಹ್ಮಾಂಡಗಳಲ್ಲಿ ವ್ಯಾಪಿಸಿಕೊಂಡು ಅರೂಪಿ ಅಖಂಡ ದ್ರವ್ಯವಿದೆ. ಇದೆಲ್ಲವುಗಳ ಜ್ಞಾನ ಮಾಡಿಕೊಂಡಲ್ಲದೆ ದಯೆ ಮಾಡಿದರೂ ಜಡದಂತೆ ಆಗಿ ಹೋಗುವುದು. ಆತ್ಮನು ಇತರ ಐದು ದ್ರವ್ಯಗಳು ಹೇಗೆ ಇವೆ ಹಾಗೆ ತಿಳಿದುಕೊಳ್ಳಬೇಕಾಗುವುದು.

೪) ಜಡ ಮತ್ತು ಚೈತನ್ಯ ಪದಾರ್ಥಗಳು ಗಮನ ಮಾಡಿ ಸ್ಥಿರವಾಗುವಲ್ಲಿ ಅಧರ್ಮದ್ರವ್ಯವು ನಿಮಿತ್ತವಿದೆ. ಅದು ಹದಿನಾಲ್ಕು ಬ್ರಹ್ಮಾಂಡಗಳಲ್ಲಿ ವ್ಯಾಪಿಸಿ ಅರೂಪಿ ಅಖಂಡ ದ್ರವ್ಯವಿದೆ. ಜ್ಞಾನದಲ್ಲಿ ಅದರ ಅರಿವು ಮೂಡಿ ಬರುವ ಸಾಧ್ಯತೆಯಿದೆ. ಇದನ್ನು ಮನ್ನಿಸದವನು ಮಿಥ್ಯಾದೃಷ್ಟಿಯಿದ್ದಾನೆ.

೫) ಆಕಾಶವು ಲೋಕಾಲೋಕ ಪ್ರಮಾಣವಾಗಿ ಅರೂಪ ಅಖಂಡ ದ್ರವ್ಯವಿದೆ ಅದು ಸಮಸ್ತ ಪದಾರ್ಥಗಳಿಗೆ ಅವಗಾಹನ ಕೊಡುತ್ತದೆ.

೬) ಅಸಂಖ್ಯ ಕಾಲಾಣುಗಳಿವೆ. ಅರೂಪಿ ತತ್ತ್ವವಿದೆ. ಒಂದು ಕಾಲಾಣುವಿನಲ್ಲಿ ಅನಂತ ಗುಣಗಳಿವೆ. ಯಾರು ಕಾಲವನ್ನು ಸ್ವೀಕಾರ ಮಾಡುವುದಿಲ್ಲ ಮತ್ತು ಒಂಭತ್ತು ತತ್ತ್ವಗಳ ಶ್ರದ್ಧೆ ಮಾಡುವುದಿಲ್ಲ ಅವರಿಗೆ ಆತ್ಮನು ಎಂದೂ ತಿಳಿದು ಬರುವುದಿಲ್ಲ.

ಈ ಪ್ರಕಾರ ಅಜೀವದ ಐದು ಭೇದಗಳನ್ನು ತಿಳಿಯುವುದು.

ಆರು ಪದಾರ್ಥಗಳು ಅನಾದಿ ಅನಂತ ಮೂಲ ವಸ್ತುಗಳಿವೆ, ಆತ್ಮನು ಚಿದಾನಂದ ಸ್ವರೂಪಿ ವಸ್ತುವಿದ್ದಾನೆ ಅದೇ ಪ್ರಕಾರ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವು ಕೂಡ ಸಹಜ ಮೂಲ ವಸ್ತುವಿವೆ. ಯಾರೂ ಅವುಗಳನ್ನು ನಿರ್ಮಾಣ ಮಾಡಿಲ್ಲ. ಜೀವ ಮತ್ತು ಅಜೀವ ಎರಡು ಇವೆ. ಎರಡನ್ನು ಇವೆಯೆಂದು ಯಾವಾಗ ಮನ್ನಿಸಲಾಗುವುದು ಆಗ ಒಂದು ಇನ್ನೊಂದರ ಕಾರಣದಿಂದ ಇಲ್ಲವೆಂದು ಸ್ವತಂತ್ರವಾಗಿವೆಯೆಂದು ಮನ್ನಿಸುವುದು. ಅದಲ್ಲದೆ ಏಳು ಪದಾರ್ಥಗಳು ಬೇರೆಯಿವೆ. ಅವು ಜೀವ ಮತ್ತು ಪುದ್ಗಲದ ಸಂಯೋಗದಿಂದ ಉತ್ಪನ್ನವಾದಂಥವುಗಳಿವೆ. ಜೀವ ತತ್ತ್ವದಲ್ಲಿ ದ್ರವ್ಯವಂತೂ ತ್ರಿಕಾಲವಿದೆ ಮತ್ತು ಅದರ ಪರ್ಯಾಯದಲ್ಲಿ ಏಳು ಭೇದಗಳಾಗುತ್ತವೆ. ಮತ್ತು ಕರ್ಮದ ಪರ್ಯಾಯದಲ್ಲಿ ಏಳು ಭೇದಗಳಾಗುತ್ತವೆ. ಧರ್ಮ, ಅಧರ್ಮ, ಆಕಾಶ ಮತ್ತು ಕಾಲದಲ್ಲಿ ಈ ಏಳು ಭೇದಗಳಾಗುವುದಿಲ್ಲ. ಅದರಂತೆ ಕರ್ಮವನ್ನು ಹೊರತುಪಡಿಸಿ ಉಳಿದ ಪುದ್ಗಲಗಳಲ್ಲಿ ಈ ಏಳು ಭೇದಗಳಿಲ್ಲ ನಿನ್ನ ಜಾತಿ, ಕುಲ ಶುದ್ಧ ಚೈತನ್ಯ ದ್ರವ್ಯದ್ದಿದೆ. ಅದು ನಿನ್ನ ಪರ್ಯಾಯದಲ್ಲಿ ನಿನ್ನ ಕಾರಣದಿಂದ ಪುಣ್ಯ-ಪಾಪ ಮೊದಲಾದ ಏಳು ಭೇದಗಳಾಗುತ್ತವೆ ಮತ್ತು ಅಜೀವದ್ರವ್ಯವು ತ್ರಿಕಾಲವಿದೆ ಮತ್ತು ಅದರ ಏಳು ಪರ್ಯಾಯಗಳು ಜಡದ ಕಾರಣದಿಂದ ಆಗುತ್ತವೆ. ಈ ಪ್ರಕಾರ ಸ್ವತಂತ್ರವಿವೆಯೆಂದು ಜ್ಞಾನ ಮಾಡಿಕೊಂಡರೆ ಆತ್ಮನ ಕಡೆಗೆ ಪ್ರವೃತ್ತಿಯಾದಲ್ಲದೆ ಇರುವುದಿಲ್ಲ.

ಈ ಪ್ರಕಾರ ಏಳು ಭೇದಗಳನ್ನು ತಿಳಿಸಿಕೊಡಲಾಗಿದೆ.

**ಪುಣ್ಯ :-** ಆತ್ಮನು ಶುದ್ಧ ಚೈತನ್ಯ ಸ್ವಭಾವಿಯಿದ್ದಾನೆ. ಅವನ ಪರ್ಯಾಯದಲ್ಲಿ ದಯೆ, ದಾನಾದಿಗಳ ಪರಿಣಾಮಗಳಾಗುತ್ತವೆ. ಮಹಾವ್ರತಾದಿಗಳ ಪರಿಣಾಮ, ನಮಸ್ಕಾರ ಮಂತ್ರವನ್ನುಚ್ಚರಿಸುವ ಭಾವ ಈ ಭಾವಗಳೆಲ್ಲವು ಪುಣ್ಯವಿದೆ. ಅದು ಜೀವತತ್ತ್ವವಿಲ್ಲ, ಅಜೀವತತ್ತ್ವವಿಲ್ಲ ಹಾಗೂ ಧರ್ಮ ಅಥವಾ ಸಂವರ ತತ್ತ್ವವಿಲ್ಲ ಅದರಂತೆ ಪಾಪತತ್ತ್ವವಿಲ್ಲ, ಆದರೆ ಅರೂಪಿ ಆತ್ಮನ ಪರ್ಯಾಯವಿದೆ. ಪರ್ಯಾಯವನ್ನು ಪರ್ಯಾಯವೆಂದು ತಿಳಿದರೆ, ತ್ರಿಕಾಲೀ ದ್ರವ್ಯವನ್ನು ದ್ರವ್ಯವೆಂದು ತಿಳಿದರೆ, ಶರೀರ, ಮನಸ್ಸು, ವಾಣಿಯನ್ನು ಅಜೀವವೆಂದು ತಿಳಿದರೆ ಭೇದಜ್ಞಾನವಾಗುತ್ತದೆ. ಹೇಗೆ ಲೌಕಿಕದಲ್ಲಿ ಜಾತಿ ಬದಲಾದರೆ ಮದುವೆಯಾಗುವುದಿಲ್ಲ ಹಾಗೆ ಇಲ್ಲಿ ಒಂಭತ್ತು ತತ್ತ್ವಗಳ ಜಾತಿಯು ಬೇರೆಯಿದೆ. ನಾನು ಹಣ ಸಂಪಾದಿಸಬಹುದಾಗಿದೆ, ರೂಪಾಯಿ ಸಂಗ್ರಹಿಸಬಹುದಾಗಿದೆಯೆಂದು ಯಾರು ಮನ್ನಿಸುತ್ತಾರೆ ಅವರು ಜೀವ ಮತ್ತು ಅಜೀವವನ್ನು ಒಂದು ಮಾಡುತ್ತಾರೆ.

ಅಜ್ಞಾನೀ ಜೀವನು ಶುಭದ ಕರ್ತೃವಾಗುತ್ತಾನೆ. ದಯೆ, ದಾನ ಮೊದಲಾದವುಗಳ ಪರಿಣಾಮವು ಒಂದು ಸಮಯದ ಪರ್ಯಾಯವಿದೆ, ಅದು ತ್ರಿಕಾಲೀ ಸ್ವಭಾವದಿಂದ ಭಿನ್ನವಿದೆಯೆಂದು ತಿಳಿದುಕೊಂಡರೆ ಸಮ್ಯಗ್ದರ್ಶನ ವಾಗುವುದು.

ಭಾವ ಪುಣ್ಯದ ನಿಮಿತ್ತ ಪಡೆದು ಸಾತಾ ಮೊದಲಾದವುಗಳ ಪರಮಾಣುಗಳು ಕಟ್ಟುತ್ತವೆ. ಅವನ್ನು ದ್ರವ್ಯ ಪುಣ್ಯವೆಂದು ಹೇಳಲಾಗುತ್ತದೆ. ಆ ದ್ರವ್ಯಪುಣ್ಯದಿಂದ ಭಾವಪುಣ್ಯವು ಬೇರೆಯಿದೆ ಮತ್ತು ಭಾವಪುಣ್ಯದಿಂದ ಜೀವತತ್ತ್ವವು ಬೇರೆಯಿದೆ. ಜಡಪುಣ್ಯವು ಪರಮಾಣುವಿನ ಪರ್ಯಾಯವಿದೆ, ಭಾವಪುಣ್ಯವು ಜೀವದ ಒಂದು ಸಮಯದ ಪರ್ಯಾಯವಿದೆ. ಅದು ಕಾರ್ಯಸ್ವರೂಪದ್ದಿಲ್ಲ ಮತ್ತು ಶುದ್ಧ ಜೀವವು ತ್ರಿಕಾಲೀ ತತ್ತ್ವವಿದೆಯೆಂದು ಭೇದಜ್ಞಾನ ಮಾಡಿದರೆ ಧರ್ಮ ಮತ್ತು ಶಾಂತಿಯಾಗುತ್ತದೆ ಮತ್ತು ಕರ್ಮದಲ್ಲಿ ಪುಣ್ಯ ರೂಪದಿಂದಾಗುವ ಯೋಗ್ಯತೆಯಿದೆ. ಆಗ ಶುಭಭಾವವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಎರಡೂ ಸ್ವತಂತ್ರವಿವೆ, ಎರಡರಿಂದ ಜೀವತತ್ತ್ವವು ಬೇರೆಯಿದೆ. ಹೀಗೆ ಶುದ್ಧ ಚೈತನ್ಯ ತತ್ತ್ವದ ಜ್ಞಾನ ಮಾಡಿಕೊಳ್ಳುವುದು ಅದು ಸಮ್ಯಕ್‌ಜ್ಞಾನವಿದೆ.

**ಪಾಪ :-** ಹಿಂಸೆ, ಕಳವು, ಅಸತ್ಯ, ಕ್ರೋಧ, ಮಾನ, ಮಾಯೆ, ಲೋಭದ ಪರಿಣಾಮಗಳ ಅಸ್ತಿಯು-ಇರುವಿಕೆಯು ಕಂಡು ಬರುತ್ತದೆ. ಅದು ಒಂದು ಸಮಯದ ಅವಸ್ಥೆಯಿದೆ. ಅದು ಜಡದಲ್ಲಿ ಇಲ್ಲ, ಜಡದ ಕಾರಣದಿಂದ ಇಲ್ಲ, ಆದರೆ ತನ್ನ ಅಪರಾಧದ ಕಾರಣದಿಂದ ಒಂದು ಸಮಯದ ಅವಸ್ಥೆಯಲ್ಲಿ ಆಗುತ್ತದೆ. ಅದರ ನಿಮಿತ್ತ ಪಡೆದು ನೀಚಗೋತ್ರ ಮೊದಲಾದ ಪಾಪದ ಪ್ರಕೃತಿಯು ಬಂಧವಾಗುತ್ತದೆ. ಅದು ದ್ರವ್ಯಪಾಪವಿದೆ. ಪುದ್ಗಲ ವರ್ಗಣಾಗಳು ಪಾಪರೂಪದಿಂದ ಪರಿಣಮಿಸುತ್ತದೆ. ಅದು ತನ್ನ ಕಾರಣದಿಂದ ಇದೆ, ಭಾವಪಾಪದ ಕಾರಣದಿಂದ ಇಲ್ಲ, ಭಾವಪಾಪವು ನಿಮಿತ್ತಮಾತ್ರವಿದೆ. ಭಾವಪಾಪವು ಬೇರೆ ದ್ರವ್ಯವಿದೆ ಮತ್ತು ದ್ರವ್ಯಪಾಪವು ಬೇರೆ ಇದೆ ಮತ್ತು ಅವೆರಡರಿಂದ ಜೀವತತ್ತ್ವವು ಬೇರೆಯಿದೆ-ಎಂದು ಜ್ಞಾನ ಮಾಡಿಕೊಳ್ಳಬೇಕಾಗುವುದು.

**ಆಸ್ರವ :-** ಇತರರಿಗೆ ಲಾಭ ಮಾಡಿಕೊಡುವೆನೆಂಬ ಭಾವವು ಹಾಗೂ ರಾಗ-ದ್ವೇಷ ಮೊದಲಾದವುಗಳ ಪರಿಣಾಮ ಮಾಡುವ ಭಾವವು ಅದು ಆಸ್ರವವಿದೆ. ಆತ್ಮನ ವರ್ತಮಾನ ದಶೆಯಲ್ಲಿ ಮೋಹ-ರಾಗ-ದ್ವೇಷಗಳ ಪರಿಣಾಮದ ಭಾವವು ಅದು ಆಸ್ರವವಿದೆ. ಅದು ಒಂದು ಸಮಯದ ಪರ್ಯಾಯವಿದೆ. ಅದು ಜೀವತತ್ತ್ವವಿಲ್ಲ, ಅದರಂತೆ ಸಂವರತತ್ತ್ವವಿಲ್ಲ. ಭಾವಆಸ್ರವದ ನಿಮಿತ್ತ ಪಡೆದು ಮನ-ವಚನ-ಕಾಯಗಳ ಯೋಗದ ಮೂಲಕ ಜಡಕರ್ಮದ ಪರಮಾಣುಗಳ ಆಗಮವಾಗುತ್ತದೆ. ಅದು ದ್ರವ್ಯಆಸ್ರವವಿದೆ. ಅದು ಜಡದ ಅವಸ್ಥೆಯಿದೆ. ಎಷ್ಟು ಪ್ರಮಾಣದಲ್ಲಿ ರಾಗ-ದ್ವೇಷ ಮೊದಲಾದವುಗಳ ಪರಿಣಾಮ ಮಾಡುತ್ತದೆ ಅಷ್ಟೇ ಪ್ರಮಾಣದಲ್ಲಿ ಕರ್ಮ ಪರಮಾಣುಗಳ

ಆಸ್ರವವಾಗುತ್ತದೆ. ಆದಾಗ್ಯೂ ಭಾವಆಸ್ರವ ಮತ್ತು ದ್ರವ್ಯಆಸ್ರವಗಳು ಒಂದು ಇನ್ನೊಂದರಿಂದ ಪರಾಧೀನವಿಲ್ಲ. ಅವೆರಡೂ ಸ್ವತಂತ್ರವಿವೆ. ಒಂದು ಇನ್ನೊಂದರಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಇವೆರಡರಿಂದ ಜೀವತತ್ತ್ವವು ಬೇರೆಯಿದೆ.

**ಸಂವರ :-** ಜೀವದ ಮೋಹ, ರಾಗ, ದ್ವೇಷ ಮೊದಲಾದ ವಿಕಾರೀ ಭಾವಗಳನ್ನು ತಡೆಯುವಂಥ ಭಾವವು ಅದು ಭಾವಸಂವರವಿದೆ. ವಿಕಾರೀ ಭಾವಗಳನ್ನು ತಡೆಯುವುದೆಂಬ ಕಥನವು ಕೂಡ ನಾಸ್ತಿಯಿಂದ ಇದೆ.

ನಾನು ಆತ್ಮನು ಶುದ್ಧ ಚೈತನ್ಯರೂಪನಿದ್ದೇನೆಂಬ ಅರಿವಿನೊಡನೆ ಅಂತರ್ಯದಲ್ಲಿ ತಿಳಿದುಕೊಳ್ಳುವ ಕ್ರಿಯೆಯಾಗುವುದು ಎಂದರೆ ಮಿಥ್ಯಾಭ್ರಾಂತಿ ಮೊದಲಾದವುಗಳ ಪರಿಣಾಮಗಳು ಉತ್ಪನ್ನವಾಗದಿರುವಿಕೆಯನ್ನು ವಿಕಾರೀ ಪರಿಣಾಮಗಳನ್ನು ತಡೆಯಲಾಯಿತೆಂದು ಹೇಳಲಾಗುತ್ತದೆ. ಪರಿಣಾಮಗಳು ಉತ್ಪನ್ನವಾದ ನಂತರ ಅವನ್ನು ತಡೆಲಾಯಿತೆಂದು ಅರ್ಥವಿಲ್ಲ. ಶುದ್ಧ ಚೈತನ್ಯ ಸ್ವಭಾವದ ಅವಲಂಬನದಿಂದ ಪುಣ್ಯ-ಪಾಪದ ಪರಿಣಾಮಗಳು ಉತ್ಪನ್ನವಾಗದಿರುವಿಕೆಯನ್ನು ಧರ್ಮವೆಂದು ಹೇಳಲಾಗುತ್ತದೆ.

ಜನರು ದೇಹದ ಕ್ರಿಯೆಯನ್ನು ಇಂಥ ಸ್ಥಳದಲ್ಲಿ ಇಂತಿಷ್ಟು ಸಮಯದವರೆಗೆ ಕುಳಿತುಕೊಳ್ಳುವುದನ್ನು ಸಂವರವೆಂದು ಹೇಳುತ್ತಾರೆ. ಅದು ಸ್ಥೂಲವಾದ ಅಜ್ಞಾನ ಭಾವವಿದೆ. ಶುದ್ಧ ಆತ್ಮನ ಅರಿವಿನೊಡನೆ ಶ್ರದ್ಧೆ-ಜ್ಞಾನ-ರಮಿಯಿಸುವುದಾಗುವುದು ಅದು ಭಾವಸಂವರವಿದೆ. ಅದು ಕೂಡ ಒಂದು ಸಮಯದ ಸಲುವಾಗಿ ಅವಸ್ಥೆಯಿದೆ. ಅದು ಆತ್ಮನ ತ್ರಿಕಾಲೀ ಸ್ವರೂಪವಿಲ್ಲ. ಇಲ್ಲಿ ನಿಮಿತ್ತದ ಬುದ್ಧಿಯನ್ನು ಪರ್ಯಾಯನ್ನು ಬುದ್ಧಿಯು ಹಾರಿಸಿಬಿಟ್ಟಿದೆ ಮತ್ತು ಶುದ್ಧ ತ್ರಿಕಾಲೀ ದ್ರವ್ಯಸ್ವಭಾವದ ದೃಷ್ಟಿಯನ್ನು ಮಾಡಿಸಲಾಗಿದೆ. ಅದರ ಅವಲಂಬನೆ ತೆಗೆದುಕೊಂಡರೆ ಸಂವರವು ಪ್ರಕಟವಾಗುತ್ತದೆ. ಜೀವರುಗಳಿಗೆ ಇನ್ನೂ ಆಸ್ರವದ ಸ್ವರೂಪದ ಅರಿವೇ ಇಲ್ಲ. ಒಂಭತ್ತನ್ನು ಒಂಭತ್ತೆಂದು ಮನ್ನಿಸದಿರುವುದು ಇದು ಮಿಥ್ಯಾತ್ವದ ಆಸ್ರವವಿದೆ. ಹೀಗೆ ಐದು ಪ್ರಕಾರದ ಆಸ್ರವವಿದೆ. ಆ ಆಸ್ರವವನ್ನು ಚೈತನ್ಯದ ಅರಿವಿನೊಡನೆ ತಡೆಯುವುದು ಅದು ಸಂವರ ಮತ್ತು ಧರ್ಮವಿದೆ.

ಭಾವಸಂವರದ ನಿಮಿತ್ತ ಪಡೆದು ಮನ-ವಚನ-ಕಾಯಗಳ ಯೋಗದ ಮುಖಾಂತರ ಪುದ್ಗಲ ವರ್ಗಣಾಗಳ ಬರುವಿಕೆಯನ್ನು ನಿರೋಧಮಾಡುವುದು ಎಂದರೆ ತಡೆಯುವುದು ಅದು ದ್ರವ್ಯಸಂವರವಿದೆ. ಇದು ಕೂಡ ನಿಮಿತ್ತದಿಂದ ಕಥನವಿದೆ. ಕರ್ಮಗಳು ಆಗಮಿಸುತ್ತಲಿದ್ದವು ಮತ್ತು ಆತ್ಮನು ಆ ಬರುವಿಕೆಯನ್ನು ತಡೆಹಿಡಿದನೆಂದು ಇದರ ಅರ್ಥವಿಲ್ಲ. ಕರ್ಮವು ಬರುವುದರ ಯೋಗ್ಯತೆಯೇ ಇರಲಿಲ್ಲ. ಆ ಸಮಯದಲ್ಲಿ ಜೀವದ ಭಾವವು ಸಂವರದ ಜಾತಿಯ ಪರ್ಯಾಯದ ಯೋಗ್ಯತೆಯಿತ್ತು. ಎರಡೂ ಒಂದು ಸಮಯದಲ್ಲಿದ್ದರೂ ಕೂಡ ಸ್ವತಂತ್ರವಿವೆ. ಅವೆರಡರಿಂದ ಆತ್ಮನು ಬೇರೆಯಿದ್ದಾನೆ. ಹೀಗೆ ಪೃಥಕ್ಕತೆಯ ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

**ನಿರ್ಜರೆ :-** ಆತ್ಮನು ಶುದ್ಧ ಚಿದಾನಂದ ಸ್ವರೂಪಿಯಿದ್ದಾನೆ. ಅವನ ಅರಿವಿನೊಡೆ ಅಂತರ್ಯದಲ್ಲಿ ವಿಹಾರ ಮಾಡುವುದು ಅದು ಶುದ್ಧ ಉಪಯೋಗವಿದೆ. ಅದನ್ನು ಭಾವನಿರ್ಜರೆಯೆಂದು ಹೇಳಲಾಗಿದೆ. ಕರ್ಮಗಳ ಶಕ್ತಿಯನ್ನು ಕಡಿಮೆ ಮಾಡುವಲ್ಲಿ ಸಮರ್ಥವಿರುವಂಥ ಬಹಿರಂಗ ಅಂತರಂಗ ತಪಸ್ಸುಗಳಿಂದ ವರ್ಧಮಾನವಿರುವಂಥ ಯಾವ ಶುದ್ಧ ಉಪಯೋಗವಿದೆ. ಅದನ್ನು ಭಾವನಿರ್ಜರೆಯೆಂದು ಹೇಳಲಾಗುತ್ತದೆ. ನಿಜವಾಗಿಯಂತೂ ಅಂತರಂಗ ತಪಸ್ಸಿನಿಂದಲೇ ಭಾವನಿರ್ಜರೆಯಿದೆ. ಬಹಿರಂಗ ತಪಸ್ಸು ಅದು ಉಪಚಾರ ಮಾತ್ರವಿದೆ. ಬಾಹ್ಯದಲ್ಲಿ ಉಪವಾಸ ಮೊದಲಾದ ತಪಸ್ಸು ಅದು ಪುಣ್ಯದ ಕಾರಣವಿದೆ. ಆಹಾರ ಸ್ವೀಕರಿಸದಿರುವುದನ್ನು ಜನರು ತಪಸ್ಸೆಂದು ಹೇಳುತ್ತಾರೆ. ಆದರೆ ರಾಯರೇ! ಜಡದ ಪರಮಾಣುಗಳ ಸಂಯೋಗವಾಗದಿರುವುದು ಅದಂತೂ ಜಡದ ಕಾರಣದಿಂದ ಇದೆ. ಅಂತರ್ಯದಲ್ಲಿ ಕಷಾಯದ ಮಂದತೆಯ ಪರಿಣಾಮ ಮಾಡುವುದು ಅದು ಶುಭವಿದೆ-ಪುಣ್ಯವಿದೆ. ಅದನ್ನು

ಧರ್ಮವೆಂದು ಮನ್ನಿಸುವುದು ಅದು ಮಿಥ್ಯಾಭಾವವಿದೆ. ಆ ಪುಣ್ಯದಿಂದ-ಜಡದ ಕ್ರಿಯೆಯಿಂದ ರಹಿತವಾಗಿ ಚಿದಾನಂದ ಸ್ವರೂಪವು ಶುದ್ಧವಿದೆಯೆಂದು ಜ್ಞಾನ ಮಾಡಿಕೊಳ್ಳುವುದು ಮತ್ತು ಆಂತರ್ಯದಲ್ಲಿ ಲೀನತೆ ಮಾಡುವುದು ಆ ಶುದ್ಧ ಉಪಯೋಗವು ಅದು ನಿರ್ಜರೆಯಿದೆ ಅದು ಒಂದು ಸಮಯದ ಸಲುವಾಗಿನ ಅವಸ್ಥೆಯಿದೆ. ಆತ್ಮನು ಭಾವನಿರ್ಜರೆಯಷ್ಟು ಇಲ್ಲ, ಆದರೆ ಆತ್ಮನು ತ್ರಿಕಾಲೀ ಇದ್ದಾನೆಂದು ಭೇದಜ್ಞಾನ ಮಾಡಬೇಕಾಗುವುದು.

ಆ ಭಾವನಿರ್ಜರೆಯ ನಿಮಿತ್ತ ಪಡೆದು ಪೂರ್ವೋಪಾರ್ಜಿತ ಕರ್ಮದ ನೀರಸ ಭಾವವಾಗಿ ಹೋಗುವುದು, ಏಕದೇಶ ಕ್ಷಯವಾಗಿ ಹೋಗುವುದನ್ನು ದ್ರವ್ಯನಿರ್ಜರೆಯೆಂದು ಹೇಳಲಾಗುತ್ತದೆ. ಅದು ಕೂಡ ನಿಮಿತ್ತದಿಂದ ಕಥನವಿದೆ. ಆತ್ಮನು ಕರ್ಮಗಳನ್ನು ಕ್ಷಯಮಾಡುವ ಸಾಧ್ಯತೆಯಿಲ್ಲ. ಆ ಪರಮಾಣುಗಳು ಸ್ವಯಂ ತಮ್ಮ ಯೋಗ್ಯತೆಯಿಂದ ಏಕದೇಶರೂಪದಿಂದ ಕ್ಷಯವಾಗಿ ಹೋಗುತ್ತವೆ. ಅದು ದ್ರವ್ಯನಿರ್ಜರೆಯಿದೆ. ಈ ಪ್ರಕಾರ ಭಾವನಿರ್ಜರೆ ಮತ್ತು ದ್ರವ್ಯನಿರ್ಜರೆಗಳೆರಡೂ ಸ್ವತಂತ್ರವಾಗಿವೆ. ಆತ್ಮನು ದ್ರವ್ಯನಿರ್ಜರೆಯಿಂದ ಬೇರೆಯಿದ್ದಾನೆ ಮತ್ತು ಆತ್ಮನು ಭಾವನಿರ್ಜರೆಯಷ್ಟೇ ಇಲ್ಲ. ಆದರೆ ಶುದ್ಧ ತ್ರಿಕಾಲೀ ಇದ್ದಾನೆಂದೂ ಭೇದಜ್ಞಾನ ಮಾಡುವುದು ಅದು ಧರ್ಮವಿದೆ.

ಧರ್ಮವು ಹೇಗಾಗುತ್ತದೆ ಎಂಬುದರ ಮಾತು ನಡೆಯುತ್ತಲಿದೆ. ಒಂಭತ್ತು ತತ್ತ್ವಗಳನ್ನು ಸರಿಯಾಗಿ ತಿಳಿದುಕೊಂಡರೆ ಚೈತನ್ಯ ಸ್ವರೂಪದ ಕಡೆಗೆ ಪ್ರವೃತ್ತಿಮಾಡಿ ಅದರಲ್ಲಿ ಏಕಾಗ್ರವಾಗಿ ಮುಕ್ತಿಯನ್ನು ಪಡೆಯಬಹುದಾಗಿದೆ. ಆತ್ಮನು ಶುದ್ಧ ಚೈತನ್ಯ ಸ್ವಭಾವಿಯಿದ್ದಾನೆ. ನೋಡುವುದು-ತಿಳಿದುಕೊಳ್ಳುವುದು ಅವನ ಸ್ವಭಾವವಿದೆ, ಧರ್ಮವಿದೆ. ಶರೀರ, ಮನಸ್ಸು, ವಾಣಿ ಮೊದಲಾದವು ಅಜೀವವಿವೆ. ಆ ಅಜೀವದಿಂದ ಜೀವನು ಭಿನ್ನನಾಗಿದ್ದಾನೆ. ದಯೆ-ದಾನ ಮೊದಲಾದವುಗಳ ಭಾವವು ಪುಣ್ಯವಿದೆ. ಅದು ಆತ್ಮನ ಪರ್ಯಾಯದಲ್ಲಿ ಆಗುತ್ತದೆ. ಅದನ್ನು ಭಾವಪುಣ್ಯವೆಂದು ಹೇಳುತ್ತಾರೆ ಮತ್ತು ಅದರ ನಿಮಿತ್ತ ಪಡೆದು ರಜಕಣಗಳ ಬಂಧವಾಗುವಿಕೆಯನ್ನು ದ್ರವ್ಯಪುಣ್ಯವೆಂದು ಹೇಳುತ್ತಾರೆ. ಹಿಂಸೆ, ಕಳವು, ಅಸತ್ಯ ಮೊದಲಾದವು ಪಾಪತತ್ತ್ವವಿವೆ. ಅವುಗಳ ನಿಮಿತ್ತದಿಂದ ಪರಮಾಣುಗಳ ಕಟ್ಟುವಿಕೆಯನ್ನು ದ್ರವ್ಯ ಪಾಪವೆಂದೂ ಹೇಳುತ್ತಾರೆ. ಪುಣ್ಯ-ಪಾಪದ ಪರಿಣಾಮವನ್ನು ಆಸ್ರವವೆಂದು ಹೇಳುತ್ತಾರೆ ಮತ್ತು ಅದರ ನಿಮಿತ್ತದಿಂದ ಪರಮಾಣುಗಳು ಬರುವುದನ್ನು ದ್ರವ್ಯಆಸ್ರವವೆಂದು ಹೇಳುತ್ತಾರೆ.

**ಸಂವರ :-** ಆತ್ಮನು ಶುದ್ಧ ಚೈತನ್ಯ ಸ್ವರೂಪನಿದ್ದಾನೆ. ಅಜೀವ ಮತ್ತು ಪುಣ್ಯ-ಪಾಪದ ಅಭಿರುಚಿಯನ್ನು ಬಿಟ್ಟುಕೊಟ್ಟು ಸ್ವಭಾವದ ಜ್ಞಾನವಾಗುವುದು ಅದು ಭಾವಸಂವರವಿದೆ. ಅದರ ನಿಮಿತ್ತದಿಂದ ಕರ್ಮಗಳ ಬರುವಿಕೆಯು ನಿಂತುಕೊಳ್ಳುವುದು ಅದು ದ್ರವ್ಯಸಂವರವಿದೆ. ನವೀನ ಕರ್ಮಗಳ ಬರುವವುಗಳಿದ್ದವು ಮತ್ತು ಅವು ನಿಂತುಹೋದವೆಂಬುದು ಇದರ ಅರ್ಥವಲ್ಲ. ಆದರೆ ಶುದ್ಧ ಚೈತನ್ಯ ಸ್ವಭಾವದಲ್ಲಿ ಲೀನತೆಯಾಗುವುದರಿಂದ ವಿಕಾರ ಮೊದಲಾದವು ಆಗಲಿಲ್ಲ ಮತ್ತು ಕರ್ಮಗಳ ಬರುವಿಕೆಯು ಸ್ವಯಂ ನಿಂತುಹೋಯಿತು. ಅದು ಸಂವರವಿದೆ. ಈ ಸಂವರವಿಲ್ಲದೆ ಅಥವಾ ಸಮ್ಯಕ್‌ದರ್ಶನವಿಲ್ಲದೆ ಧ್ಯಾನ ಮತ್ತು ತಪಸ್ಸು ಆಗುವುದಿಲ್ಲ. ಯಾವನಿಗೆ ಆತ್ಮನ ಜ್ಞಾನವಾಗಿದೆ ಆ ಜೀವನು ತಿಳಿದುಕೊಳ್ಳುವುದೇನೆಂದರೆ ನಾಲ್ಕನೆಯ, ಐದನೆಯ, ಆರನೆಯ ಗುಣಸ್ಥಾನದಲ್ಲಿ ಎಷ್ಟು ಪರದ ಆಶ್ರಯವು ಬಿಟ್ಟುಹೋಗಿದೆ ಮತ್ತು ಸ್ವಭಾವದ ಆಶ್ರಯವು ವರ್ತಿಸುತ್ತದೆ. ಅಷ್ಟು ಶುದ್ಧತೆಯಾಗುತ್ತದೆ.

**ನಿರ್ಜರೆ :-** ಇಂದು ವೈಶಾಖ ಶುದ್ಧ ತೃತೀಯೆಯ ದಿವಸವಿದೆ. ಹದಿನೆಂಟು ಕೋಟಾಕೋಟಿ ಸಾಗರೋಪಮದ ನಂತರ ಮೊದಲು ಆಹಾರದಾನ ತೆಗೆದುಕೊಳ್ಳುವಂಥ ಋಷಭದೇವ ಭಗವಂತರು ಮುನಿ ಅವಸ್ಥೆಯಲ್ಲಿ ಇದ್ದರು ಮತ್ತು ಮೊದಲು ಆಹಾರದಾನ ಕೊಡುವಂಥ ದೊರೆ ಶ್ರೇಯಾಂಶ ಕುಮಾರನಿದ್ದನು. ಅದು ಇಂದಿನ ದಿವಸವಿದೆ. ಅವರು ಆಹಾರದಾನವಿತ್ತರು ಮತ್ತು ನಿರ್ಜರೆಯು ಹೇಗಾಯಿತೆಂದು ಆ ನಿರ್ಜರೆಯ ಸ್ವರೂಪವನ್ನು ತಿಳಿಸಿಕೊಡುತ್ತಾರೆ. ಬಹಿರಂಗ ತಪಸ್ಸಿನಿಂದ ನಿರ್ಜರೆಯಾಗುತ್ತದೆಯೆಂದು ಹೇಳುವುದು ಅದು ನಿಮಿತ್ತದ ಕಥನವಿದೆ. ಆತ್ಮನು ಜ್ಞಾತಾ-ದೃಷ್ಟಾ

ಶುದ್ಧ ಸ್ವರೂಪಿಯಿದ್ದಾನೆ. ಸಂಯೋಗಗಳ ಮೇಲಿರುವ ಅಭಿರುಚಿಯು ಬಿಟ್ಟು ಹೋಗಿದೆ ಮತ್ತು ಪುಣ್ಯ-ಪಾಪದ ಸ್ವಾಮಿತ್ವವು ಕೂಡ ಬಿಟ್ಟುಹೋಗಿದೆ. ಪರಿಪೂರ್ಣ ಸ್ವಭಾವದ ಶ್ರದ್ಧಾ ಪೂರ್ವಕವಾಗಿ ಲೀನತೆಯು ವರ್ತಿಸುತ್ತಿದೆ. ಇಂಥ ಶುದ್ಧ ಉಪಯೋಗದಿಂದ ನಿರ್ಜರೆಯಾಗುತ್ತದೆ. ಭಾವಆಸ್ರವದ ವ್ಯಯವಾಗಿಹೋಗುವುದು. ನಿರ್ವಿಕಾರ ಆನಂದದ ಅನುಭವವು ವೃದ್ಧಿಸುವುದನ್ನು ಶುದ್ಧ ಉಪಯೋಗವೆಂದು ಹೇಳಲಾಗಿದೆ. ಅಶುದ್ಧತೆಯು ಸರಿದು ಹೋಗುವುದು ಮತ್ತು ಶುದ್ಧತೆಯು ವೃದ್ಧಿಸುವುದು ಅದು ಕೂಡ ವ್ಯವಹಾರವಿದೆ. ತ್ರಿಕಾಲೀ ಸ್ವಭಾವದ ಆಶ್ರಯದಿಂದ ಶುದ್ಧತೆಯು ವೃದ್ಧಿಸುತ್ತದೆ. ಮತ್ತು ಅಶುದ್ಧತೆಯು ಉತ್ಪನ್ನವಾಗುವುದಿಲ್ಲ. ಅದನ್ನು ಅಶುದ್ಧತೆಯು ಸರಿದುಹೋಯಿತೆಂದು ಹೇಳಲಾಗುತ್ತದೆ. ಜನರು ಬಾಹ್ಯದಲ್ಲಿ ನಿರ್ಜರೆಯನ್ನು ಮನ್ನಿಸುತ್ತಾರೆ. ಎರಡು ತುತ್ತು ಆಹಾರ ಕಡಿಮೆ ಆದರೆ ಮತ್ತು ಹೊಟ್ಟೆಯನ್ನು ಅಪೂರ್ಣವಾಗಿ ಇಟ್ಟರೆ ನಿರ್ಜರೆಯಾಗುತ್ತದೆಯೆಂದು ಮನ್ನಿಸುತ್ತಾರೆ, ಆದರೆ ಇದಂತೂ ಜಡದ ಕ್ರಿಯೆಯಿದೆ. ರಾಗದ ಮಂದತೆಯಾಗುವುದು ಅದು ಕೂಡ ನಿರ್ಜರೆಯಲ್ಲ. ಆಂತರ್ಯದೊಳಗೆ ಅಕಷಾಯ ಪರಿಣತಿಯಲ್ಲಿ ಸ್ಥಿರತೆಯಾಗುವುದು ಅದು ಭಾವನಿರ್ಜರೆಯಿದೆ. ಜೀವರುಗಳಿಗೆ ತತ್ತ್ವದ ಪರಿವೆಯಿಲ್ಲ ಅಶುಭವನ್ನು ಬಿಟ್ಟುಕೊಟ್ಟರೆ ಮತ್ತು ಶುಭವನ್ನು ಮಾಡಿದರೆ ನಿರ್ಜರೆಯೆಂದು ಮನ್ನಿಸುತ್ತಾರೆ. ಆದರೆ ಅದು ನಿರ್ಜರೆಯಲ್ಲ. ಅವರಿಗೆ ಜೀವತತ್ತ್ವದ ಅರಿವಿಲ್ಲ ಮತ್ತು ಆತ್ಮನ ಅರಿವಿಲ್ಲ. ಆತ್ಮನಲ್ಲಿ ಏಕಾಗ್ರತೆ ಮಾಡಿದಲ್ಲದೆ ಅಶುದ್ಧತೆಯು ಹೊರಟು ಹೋಗುವುದು ಮತ್ತು ಶುದ್ಧತೆಯ ಉತ್ಪಾದವಾಗುವುದು ಅದು ಯಾವ ರೀತಿಯಿಂದ ಆಗುವುದು ? ಸಮಸ್ತ ತತ್ತ್ವಗಳನ್ನು ಯಥಾರ್ಥವಾಗಿ ತಿಳಿದುಕೊಂಡು ಶುದ್ಧ ಆತ್ಮನಲ್ಲಿ ಸ್ಥಿರತೆಮಾಡಿದರೆ ನಿರ್ಜರೆಯಾಗುವುದು. ಮತ್ತು ಭಾವನಿರ್ಜರೆಯ ನಿಮಿತ್ತ ಪಡೆದು ಮೊದಲಿನ ಕರ್ಮಗಳು ನೀರಸವಾಗಿ ಹೋಗುವುದು, ಏಕದೇಶ ಹೊರಟು ಹೋಗುವುದು ಅದು ದ್ರವ್ಯನಿರ್ಜರೆಯಿದೆ. ಇಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಟ್ಟಿದ್ದಾರೆ. ಆತ್ಮನು ದ್ರವ್ಯನಿರ್ಜರೆಯ ಕರ್ತೃವಿಲ್ಲ. ಪರಮಾಣುಗಳು ಪರಮಾಣುಗಳ ಕಾರಣದಿಂದ ಉದುರಿಹೋಗುತ್ತವೆ ಮಾತ್ರ ಭಾವನಿರ್ಜರೆಯ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಟ್ಟು ತ್ರಿಕಾಲೀ ಆತ್ಮನು ಅವೆರಡರಿಂದ ಬೇರೆಯಿದ್ದಾನೆಂದು ಜ್ಞಾನ ಮಾಡಿಸಿದ್ದಾರೆ.

**ಬಂಧ :-** ಜೀವದ ಮೋಹ-ರಾಗ-ದ್ವೇಷ ರೂಪದ ಪರಿಣಾಮ ಮತ್ತು ದಯೆ-ದಾನ ಮೊದಲಾದವುಗಳ ಪರಿಣಾಮವು ಅದು ಭಾವಬಂಧವಿದೆ. ಕೆಂಪು ಪುಷ್ಪದ ನಿಮಿತ್ತದಿಂದ ಸ್ಫಟಿಕವು ಕೆಂಪು ರೂಪದಿಂದ ಪರಿಣಮಿಸುವಂತೆ ಆತ್ಮನು ರಾಗ-ದ್ವೇಷ-ಮಿಥ್ಯಾತ್ವ ಭಾವರೂಪದಿಂದ ಪರಿಣಮಿಸುತ್ತಾನೆ. ಅದು ಭಾವಬಂಧವಿದೆ, ಅದು ಧರ್ಮವಿಲ್ಲ. ಅದೇ ಪ್ರಕಾರ ಧರ್ಮದ ಕಾರಣವು ಕೂಡ ಇಲ್ಲ.

ಭಾವಬಂಧದ ನಿಮಿತ್ತ ಪಡೆದು ಕರ್ಮ ವರ್ಗಣಾಗಳು ಜೀವದ ಪ್ರದೇಶಗಳ ಜತೆಯಲ್ಲಿ ಪರಸ್ಪರ ಏಕ ಕ್ಷೇತ್ರಾವಗಾಹ ಸಂಬಂಧವಾಗುವುದನ್ನು ಬಂಧವೆಂದು ಹೇಳುತ್ತಾರೆ.

**ಮೋಕ್ಷ :-** ಜೀವನಿಗೆ ಪರಿಪೂರ್ಣ ಶುದ್ಧ ಆತ್ಮಸ್ವಭಾವದ ಪ್ರಾಪ್ತಿಯಾಗುವುದು ಅದು ಮೋಕ್ಷವಿದೆ. ಅದು ಆತ್ಮನ ಅವಸ್ಥೆಯಿದೆ, ಅದು ಭಾವಮೋಕ್ಷವಿದೆ. ಅದರ ನಿಮಿತ್ತ ಪಡೆದು ಸರ್ವಥಾ ಪ್ರಕಾರದಿಂದ ಕರ್ಮಗಳ ಸಂಬಂಧವು ಬಿಟ್ಟು ಹೋಗುವುದು ಅದು ದ್ರವ್ಯಮೋಕ್ಷವಿದೆ.

ಇಲ್ಲಿ ಜೀವ ಭಾವದ ಜತೆಯಲ್ಲಿ ಕರ್ಮಗಳ ಪರ್ಯಾಯದ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ಇಟ್ಟುಕೊಂಡಿದ್ದರೂ ಕೂಡ ಒಂದರ ಕಾರಣದಿಂದ ಇನ್ನೊಂದು ಇಲ್ಲ, ಆದರೆ ಅವೆರಡೂ ಸ್ವತಂತ್ರವಿವೆ. ಉಳಿದ ಸಮಸ್ತ ಪುದ್ಗಲಗಳ ಜತೆಯಲ್ಲಿ ಅದರಂತೆ ಅಜೀವದ ಜತೆಯಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ಹಾರಿಸಿಬಿಡಲಾಗಿದೆ. ಆತ್ಮನು ತಿಳಿದುಕೊಳ್ಳುವವನಿದ್ದಾನೆ ಮತ್ತು ಸಮಸ್ತ ಅಜೀವಗಳು ಜ್ಞೇಯಮಾತ್ರವಿವೆ. ಮನೆ, ಅಂಗಡಿ, ಧನ, ಧಾನ್ಯ, ಹೆಂಡಿರು, ಮಕ್ಕಳು, ಶರೀರ ಮೊದಲಾದವುಗಳ ಜತೆಯಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತೆಗೆದುಕೊಂಡಿಲ್ಲ. ಕೇವಲ

ಜ್ಞಾನ-ಜ್ಞೇಯದ ಸಂಬಂಧವಿದೆಯೆಂದು ತಿಳಿಸಿಕೊಟ್ಟು ಸಂಯೋಗಬುದ್ಧಿಯನ್ನು ನಿಮಿತ್ತಾಧೀನವಾದ ಐಬುದ್ಧಿಯನ್ನು ಹಾರಿಸಿಬಿಟ್ಟಿದ್ದಾರೆ. ಪುಣ್ಯ, ಪಾಪ, ಆಸ್ರವ, ಬಂಧಗಳು ವಿಕಾರವಿವೆ, ಅವು ಆತ್ಮನ ಸ್ವರೂಪವಿಲ್ಲ ಮತ್ತು ಸಂವರ, ನಿರ್ಜರೆ, ಮೋಕ್ಷಗಳು ಒಂದು ಸಮಯದ ಅವಸ್ಥೆಯಿದೆ ಮತ್ತು ಆತ್ಮನು ತ್ರಿಕಾಲೀ ಶುದ್ಧನಿದ್ದಾನೆಂದು ತಿಳಿಸಿಕೊಟ್ಟು ಪರ್ಯಾಯ ಬುದ್ಧಿಯನ್ನು ಹಾರಿಸಿದ್ದಾರೆ ಮತ್ತು ಸ್ವಭಾವಬುದ್ಧಿ ಮಾಡಿಸಿದ್ದಾರೆ. ಹೀಗೆ ತಿಳಿದುಕೊಂಡು ಯಾರು ಶುದ್ಧಸ್ವಭಾವದ ಅವಲಂಬನೆ ತೆಗೆದುಕೊಳ್ಳುತ್ತಾರೆ ಅವರಿಗೆ ಸಂವರ-ನಿರ್ಜರೆಗಳು ಪ್ರಕಟವಾಗುತ್ತದೆ ಮತ್ತು ಪೂರ್ಣ ಏಕಾಗ್ರತೆಯಾಗಿಹೋದರೆ ಮೋಕ್ಷದಶೆಯು ಪ್ರಕಟವಾಗುತ್ತದೆ. ಧರ್ಮವು ವಿವೇಕದಿಂದ ಪ್ರಕಟವಾಗುತ್ತವೆ. ಈ ಪ್ರಕಾರ ಒಂಭತ್ತು ತತ್ತ್ವಗಳ ವಿವೇಕ ಎಂದರೆ ಭೇದಜ್ಞಾನ ಮಾಡಬೇಕಾಗುವುದು.

ಜೀವ ಪದಾರ್ಥದ ವ್ಯಾಖ್ಯಾನ ಮಾಡಲಾಯಿತು. ಅದರಲ್ಲಿ ಜೀವದ ಸ್ವರೂಪವನ್ನು ನಾಮ ಮಾತ್ರ ಮಾಡಲಾಗಿದೆ.

**ಜೀವಾ ಸಂಸಾರತ್ಥಾ ಣಿವ್ವಾದಾ ಚೇದಣಪ್ಪಗಾ ದುವಿಹಾ ।**
**ಉವಓಗಲಕ್ಖಣಾ ವಿ ಯ ದೇಹಾದೇಹಪ್ಪವೀಚಾರಾ ॥೧೦೯॥**

**ಜೀವ ಸಂಸಾರೀ-ಸಿದ್ಧವೆಂದೆರಡು ತೆರ ಅವೆರಡು ಚೇತನಾತ್ಮಕವಂತೆ ।**
**ಅವೆರಡು ಉಪಯೋಗ ಲಕ್ಷಣವಿದ್ದು ಒಂದು ಸದೇಹವಿನ್ನೊಂದದೇಹವಿದೆ ॥೧೦೯॥**

ಜೀವವು ಎರಡು ಪ್ರಕಾರವಿದೆ. ಸಂಸಾರದಲ್ಲಿರುವಂಥ ಜೀವವು ಅಶುದ್ಧವಿದೆ ಮತ್ತು ಮೋಕ್ಷ ಅವಸ್ಥೆಗೆ ಪ್ರಾಪ್ತವಾದ ಜೀವವು ಸಿದ್ಧವಿದೆ. ನಿಗೋದದಿಂದ ಹಿಡಿದು ಹದಿನಾಲ್ಕನೆಯ ಗುಣಸ್ಥಾನದವರೆಗಿರುವ ಜೀವಗಳು ಸಂಸಾರಿಯಿವೆ. ಸಂಸಾರವು ಬಿಟ್ಟಾಗ ಮುಕ್ತವಾಗುತ್ತವೆ. ಮುಕ್ತಿಯಲ್ಲಿ ಸಂಸಾರವಿಲ್ಲ ಮತ್ತು ಸಂಸಾರದಲ್ಲಿ ಮುಕ್ತಿಯಿಲ್ಲ. ಸಂಸಾರದ ಪರ್ಯಾಯವು ತಿಳಿದುಬರುತ್ತದೆ. ಹೆಂಡಿರು-ಮಕ್ಕಳು ಅದು ಸಂಸಾರವಿಲ್ಲ. ಮಹಾವಿದೇಹ ಕ್ಷೇತ್ರದಲ್ಲಿ ಸೀಮಂಧರ ಭಗವಂತರು ಸಂಸಾರಿಯಿದ್ದಾರೆ. ನಾಲ್ಕು ಕರ್ಮಗಳು ಬಾಕಿ ಉಳಿದಿರುವುದರಿಂದ ಸಂಸಾರಿಯಿದ್ದಾರೆಂಬುದಾಗಿಲ್ಲ. ಕೇವಲಜ್ಞಾನವು ಪ್ರಕಟವಾಗಿದ್ದರೂ ಕೂಡ ಪ್ರತಿಜೀವಿ ಗುಣಗಳು, ಯೋಗ, ಕ್ರಿಯಾವತಿ, ಕರ್ತಾ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ, ಮೊದಲಾದವುಗಳ ಅಶುದ್ಧತೆಯಿದೆ ಅದು ತನ್ನ ಕಾರಣದಿಂದ ಇದೆ. ಜೀವದ ಕಾರಣದಿಂದ ಸಂಸಾರವಿದೆ, ಕರ್ಮದ ಕಾರಣದಿಂದ ಸಂಸಾರವಿಲ್ಲ. ನಿಗೋದದಲ್ಲಿರಲಿ ಅಥವಾ ಹದಿನಾಲ್ಕನೆಯ ಗುಣಸ್ಥಾನವಿರಲಿ, ಆದರೂ ಯಾವ ಅಶುದ್ಧತೆಯಿದೆ ಅದು ಜೀವದ ಯೋಗ್ಯತೆಯಿಂದ ಇದೆ. ಅದು ಜೀವದ ಭೇದವಿದೆ. ತನ್ನ ಸ್ವಭಾವವನ್ನು ಮರೆತುಹೋಗುವುದರಿಂದ ಆಗುವ ಅಶುದ್ಧತೆಯಿದೆ. ಸಂಸಾರದಲ್ಲಿ ಇರುವಂಥ ಜೀವವು ಅಶುದ್ಧವಿದೆ.

ಸಿದ್ಧ ಭಗವಂತರಿಗೆ ಯಾವುದೇ ಅವಸ್ಥೆಯಲ್ಲಿ ಮಲಿನತೆಯಿಲ್ಲ. ಹೀಗೆ ಜೀವದ ಶುದ್ಧ ಮತ್ತು ಅಶುದ್ಧವೆಂಬ ಭೇದವು ಅನಾದಿಯಿಂದ ಇದೆ. ಮೊದಲು ಸಿದ್ಧ ಭಗವಂತರೋ ಅಥವಾ ಸಂಸಾರಿಗಳೋ ? ಎಂದು ಕೆಲವರು ಕೇಳುತ್ತಾರೆ. ಆದರೆ ಮೊದಲು ಮತ್ತು ನಂತರ ಯಾರೂ ಇಲ್ಲ. ಇಬ್ಬರೂ ಅನಾದಿಯಿಂದ ಇದ್ದಾರೆ. ಸಮುಚ್ಚಯದ ಮಾತು ಸ್ವೀಕರಿಸಲಾಗಿದೆ. ಯಾರೂ ಮೊದಲು-ನಂತರವಿಲ್ಲ. ಯಾವ ಪ್ರಕಾರ ಬೀಜ ಮತ್ತು ವೃಕ್ಷದಲ್ಲಿ ಮೊದಲು-ನಂತರವಿಲ್ಲ. ಬೀಜವಿಲ್ಲದೇ ವೃಕ್ಷವಿರುವುದಿಲ್ಲ ಮತ್ತು ವೃಕ್ಷವಿಲ್ಲದೇ ಬೀಜವಿರುವುದಿಲ್ಲ. ಅದೇ ಪ್ರಕಾರ ಎಲ್ಲವೂ ಅನಾದಿ-ಅನಂತವಿವೆ. ಒಂಭತ್ತು ತತ್ತ್ವಗಳು ಅನಾದಿಯಿಂದ ಇವೆ. ಮೊದಲು ನಂತರವೆಂದು ಯಾವುದೂ ಇಲ್ಲ.

ಮೊದಲನೇ ಭವ ಯಾವುದೂ ಇಲ್ಲ. ಸಂಸಾರವು ಅನಾದಿಯಿಂದ ಇದೆ. ಒಂದು ಪರಮಾಣುವಿನ ವರ್ಣದ ಪರ್ಯಾಯವು ಮೊದಲು ನೀಲಿಯೋ ಅಥವಾ ಹಸಿರೋ ? ಇದರಲ್ಲಿ ಮೊದಲು ನಂತರವಿಲ್ಲ. ಎರಡೂ ಅನಾದಿಯಿಂದ ಇವೆ. ಇದು ವಸ್ತುಸ್ವಭಾವದ ಮಾತು ಇದೆ. ಎಲ್ಲಿಯವರೆಗೆ ಸ್ವಭಾವವು ತಿಳಿದುಬರುವುದಿಲ್ಲ ಅಲ್ಲಿಯವರೆಗೆ ಧರ್ಮದ ದಶೆಯು ಪ್ರಕಟವಾಗುವುದಿಲ್ಲ. ಸಂಸಾರ, ಸಿದ್ಧವೆಲ್ಲವೂ ಅನಾದಿಯಿಂದ ಇವೆ. ಅದಕ್ಕಾಗಿ ಪರ್ಯಾಯ ಬುದ್ಧಿಯನ್ನು ಬಿಟ್ಟು ಸ್ವಭಾವ ಬುದ್ಧಿಯನ್ನು ಧಾರಣ ಮಾಡು.

ಜೀವನು ನೋಡುವ-ತಿಳಿಯುವ ಸ್ವಭಾವದವನಿದ್ದಾನೆ. ಅಜ್ಞಾನಿಯ ಸ್ವಭಾವ ಕೂಡ ದರ್ಶನ ಮತ್ತು ಜ್ಞಾನೋಪಯೋಗವುಳ್ಳದ್ದಿದೆ, ಆದರೆ ಅವನಿಗೆ ಅದರ ಅರಿವಿಲ್ಲ. ಅವನು ತನ್ನನ್ನು ರಾಗ-ದ್ವೇಷವುಳ್ಳವನೆಂದು ಮನ್ನಿಸಿಬಿಟ್ಟಿದ್ದಾನೆ. ಜೀವದ ಸ್ವಭಾವವನ್ನು ತಿಳಿದುಕೊಂಡಲ್ಲದೆ ಸಂಸಾರ ಬಿಡುವುದೆಂದರೆ ಹೇಗೆ ಬಿಡುವುದೆಂದು ಅಜ್ಞಾನೀ ಜೀವನು ಕೇಳುತ್ತಾನೆ. ತಿಳಿದುಕೊಂಡಲ್ಲದೆ ಯಾವುದನ್ನು ಆದರಿಸುವುದು ಮತ್ತು ಬಿಡುವುದು ? ಇಷ್ಟರ ಸಲುವಾಗಿ ಜೀವನು ಶುದ್ಧಚೈತನ್ಯ ದರ್ಶನ-ಜ್ಞಾನಮಯನಿದ್ದಾನೆಂದು ಜೀವದ ಪರಿಚಯ ಮಾಡಿಸಿಕೊಡಲಾಗಿದೆ. ಮತ್ತೆ ಹೇಗಿದ್ದಾನೆಂದರೆ ದೇಹ ಸಹಿತ ಜೀವನು ಸಂಸಾರಿಯಿದ್ದಾನೆ ಮತ್ತು ದೇಹರಹಿತನಿದ್ದವನು ಮುಕ್ತನಿದ್ದಾನೆ. ಜೀವದ ದಶೆಯ ವರ್ಣನೆ ಮಾಡಲಾಯಿತು. ಹೀಗೆ ಸ್ವತಂತ್ರವಾಗಿ ತಿಳಿದುಕೊಂಡರೆ ಧರ್ಮದ ಪ್ರಾಪ್ತಿಯಾಗಿ ಮುಕ್ತಿಯನ್ನು ಪಡೆಯಬಹುದಾಗಿದೆ.

**ಪುಢವೀ ಯ ಉದಗಮಗಣೀ ವಾಉ ವಣಪ್ಫದಿ ಜೀವಸಂಸಿದಾ ಕಾಯಾ ।**
**ದೇಂತಿ ಖಲು ಮೋಹಬಹುಲಂ ಫಾಸಂ ಬಹುಗಾ ವಿ ತೇ ತೇಸಿಂ ॥೧೧೦॥**

**ಭೂಮಿ, ಜಲ, ಅಗ್ನಿ, ವಾಯು, ವನಸ್ಪತಿಕಾಯವಿವೆಲ್ಲ ಜೀವಸಹಿತವಿವೆ ।**
**ಅಮಿತಕಾಯಗಳಿವು ಅತಿಮೋಹಸಂಯುಕ್ತ ಸ್ಪರ್ಶಕೊಡುವವು ಜೀವಕೆ ॥೧೧೦॥**

ಪೃಥ್ವೀ, ಜಲ, ಅಗ್ನಿ, ವಾಯು ಮತ್ತು ವನಸ್ಪತಿಯ ಜೀವಗಳು ಏಕೇಂದ್ರಿಯವಿವೆ. ಆದರೆ ಅಖಂಡವಾಗಿ ಏಕೇಂದ್ರಿಯರೂಪದಿಂದಿರುವುದು ಅವುಗಳ ಸ್ವಭಾವವಿಲ್ಲ. ಅವುಗಳ ಸ್ವಭಾವವಂತೂ ಅಖಂಡ ಜ್ಞಾಯಕ ಜ್ಯೋತವಿದೆ. ಆತ್ಮನಂತೂ ಅಖಂಡ ಅಭೇದ ಸ್ವಭಾವಿಯಿದ್ದಾನೆ. ಅವನ ಭಾವನೆ ಮತ್ತು ಏಕಾಗ್ರತೆ ಮಾಡಿದರೆ ಕೇವಲಜ್ಞಾನ ಪಡೆಯುವನು ಮತ್ತು ಅವನ ಭಾವನೆ ಭಾವಿಸದಿದ್ದರೆ ಏಕೇಂದ್ರಿಯತನವು ಪ್ರಾಪ್ತವಾಗುವುದು.

ಅಜ್ಞಾನೀ ಜೀವವು ಏಕೇಂದ್ರಿಯದ ಶರೀರವೇ ತಾನಿರುವೆನೆಂದು ಮನ್ನಿಸುತ್ತಿದೆ. ಆ ಏಕೇಂದ್ರಿಯತನವು ಹೇಗೆ ಪ್ರಾಪ್ತವಾಗಿದೆಯೆಂದರೆ ಮನುಷ್ಯತನದಲ್ಲಿ ಬಂದಂಥ ಜೀವವು ಸ್ಪರ್ಶನೇಂದ್ರಿಯ ಲಂಪಟಿಯಾಗಿ ಜ್ಞಾನ ಸ್ವಭಾವವನ್ನು ಮರೆತು ಇಂಥ ಹೀನದಶೆಯನ್ನು ಪಡೆದಿದೆ. ಏಕೇಂದ್ರಿಯ ಜೀವವು ಬೇರೆ ಜೀವದಿಂದ ಸಾಯುತ್ತದೆ ಅಥವಾ ಬದುಕುತ್ತದೆಯೆಂಬ ಮಾತೇ ಇಲ್ಲ. ಆದರೆ ಅದರ ಅಸ್ತಿತ್ವವು ಯಾವ ರೀತಿಯಿಂದಿರುತ್ತದೆಂಬುದನ್ನು ತಿಳಿಸಿದೆ. ಆ ಜೀವವು ತನ್ನ ಅತೀಂದ್ರಿಯ ಸ್ವಭಾವದ ಅಭಿರುಚಿಮಾಡಿ ಏಕಾಗ್ರತೆ ಹೊಂದಿದರೆ ಚಾರಿತ್ರವು ಪ್ರಕಟವಾಗಿ ಕೇವಲಜ್ಞಾನವಾಗುವುದು. ಜೀವದ ಸಿದ್ಧದಶೆ, ಕೇವಲಜ್ಞಾನದಶೆ, ಶುಕ್ಲಧ್ಯಾನ, ಚಾರಿತ್ರದಶೆ, ಸಮ್ಯಗ್ದರ್ಶನದಶೆ ಇಲ್ಲದಿದ್ದರೆ ಯಾವುದೇ ದಶೆಯಲ್ಲಂತೂ ಜೀವವು ಇರಲೇಬೇಕಾಗುವುದು. ಸಮ್ಯಗ್ದರ್ಶನ ಮೊದಲಾದವುಗಳಿಂದ ಹಿಡಿದು ಸಿದ್ಧದಶೆಯವರೆಗಿನ ಎಲ್ಲ ದಶೆಗಳು ಪಂಚೇಂದ್ರಿಯ ಭೂಮಿಕೆಯಲ್ಲಿರುತ್ತವೆ. ಈಗಂತೂ ಆ ದಶೆಗಳು ಇಲ್ಲದಿದ್ದರೆ ಅದಕ್ಕೆ ಎಂಥ ದಶೆಯು ಪ್ರಾಪ್ತವಾಗಿದೆ ? ತನ್ನ ಜ್ಞಾನದ ಅವಸ್ಥೆಯು ತನ್ನ ಶುದ್ಧ ಚೈತನ್ಯ ಸ್ವಭಾವದ

ಆಶ್ರಯದಿಂದ ಆಗುತ್ತಿದ್ದರೂ ಆ ಅತೀಂದ್ರೀಯ ಜ್ಞಾನ ಸ್ವಭಾವವನ್ನು ಮರೆತು ಇಂದ್ರಿಯಗಳ ಅಭಿರುಚಿ ಮಾಡಿ ಸ್ಪರ್ಶನೇಂದ್ರಿಯ ಇಂದ್ರಿಯದ ವಿಷಯದ ಲಂಪಟಿಯಾಗಿ ಮೋಹ-ರಾಗ-ದ್ವೇಷ ಮಾಡಿ ಕರ್ಮದ ಉಪಾರ್ಜನೆ ಮಾಡುತ್ತದೆ, ಅದರ ಕಾರಣದಿಂದ ಏಕೇಂದ್ರಿಯತನವು ಪ್ರಾಪ್ತವಾಗುತ್ತದೆ.

ತನ್ನ ಜ್ಞಾನ ಸ್ವಭಾವದ ಭಾವನೆ ಮಾಡದಿದ್ದರೆ ಹೀನದಶೆಯ ರೂಪವಾಗಿ ಪರಿಣಮಿಸುವುದು. ಪರ್ಯಾಯವು ಹೀನವಿದ್ದರೂ ದ್ರವ್ಯ-ಗುಣಗಳು ಸ್ಥಿರವಿರುತ್ತವೆ ಮತ್ತು ಪರ್ಯಾಯವು ಕೇವಲ ಸ್ಪರ್ಶವನ್ನು ತಿಳಿಯುತ್ತದೆ. ಆಗ ಅದರ ಅಧಿಕರಣವು ಸ್ಪರ್ಶನೇಂದ್ರಿಯ ಮಾತ್ರವಿದೆ. ಸ್ಪರ್ಶದ ಪ್ರಕಟತೆ ಮತ್ತು ವಿಷಯವು ಕೂಡ ಸ್ಪರ್ಶದ್ದಿದೆ.

ಎದುರಿನ ವಿಷಯ, ಇಂದ್ರಿಯ ಮತ್ತು ಪರ್ಯಾಯದಲ್ಲಿ ಅಲ್ಪ ಪ್ರಕಟತೆಯಿರುವುದು ಅದು ಹೇಯವಿದೆ ಮತ್ತು ದ್ರವ್ಯ ಗುಣಗಳು ಉಪಾದೇಯವಿವೆಯೆಂದು ನಿರ್ಣಯ ಮಾಡದಂಥ ಜೀವನು ಅತೀಂದ್ರಿಯ ಜ್ಞಾನಸ್ವರೂಪದ ಭಾವನೆಯನ್ನು ಬಿಟ್ಟು ಅಲ್ಪಜ್ಞತೆಯ ಹಾಗೂ ಇಂದ್ರಿಯ ವಿಷಯಗಳ ಗೃದ್ಧತೆಯ ಭಾವನೆ ಭಾವಿಸುವುದರಿಂದ ಏಕೇಂದ್ರಿಯತನ ದೊರಕಿದೆ. ಹೀಗೆ ನಿಮಿತ್ತ ಮತ್ತು ಅಲ್ಪಜ್ಞತೆಯ ಭಾವನೆಯುಳ್ಳವರು ಸ್ವಭಾವದ ತೀವ್ರ ಅರುಚಿ ಮಾಡಿದರೆ ಹೀನದಶೆಯು ಆಗುತ್ತಾ ಆಗುತ್ತಾ ಏಕೇಂದ್ರಿಯತನವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಏಕೇಂದ್ರಿಯದಲ್ಲಿ ಇಂದ್ರಿಯವು ಅನಂತ ಪರಮಾಣುವಿನಿಂದ ಮಾಡಿರುತ್ತದೆ. ಅದು ನಿಮಿತ್ತವಿದೆ ಮತ್ತು ಪ್ರಕಟತೆಯು ಸ್ಪರ್ಶವನ್ನು ತಿಳಿಯುವಷ್ಟಿದೆ ಮತ್ತು ಸ್ಪರ್ಶದ ವಿಷಯವನ್ನೇ ತಿಳಿಯುತ್ತದೆ. ಆ ಪ್ರಕಟತೆಯಷ್ಟು ನನ್ನ ಸ್ವರೂಪವಿಲ್ಲವೆಂದು ತಿಳಿದುಕೊಳ್ಳುವಲ್ಲಿ ಉಗ್ರ ಪುರುಷಾರ್ಥ ಮಾಡುವ ಯೋಗ್ಯತೆಯಾದಲ್ಲದೆ ಇರುವುದಿಲ್ಲ.

ಏಕೇಂದ್ರಿಯದಿಂದ ಪಂಚೇಂದ್ರಿಯತೆಯವರೆಗಿನ ವಿಕಾಸವಾಗುವುದು, ಅಲ್ಲಿ ತಿಳಿವಳಿಕೆ ಮಾಡಿಕೊಂಡು ಅತೀಂದ್ರಿಯತೆಯನ್ನು ಪ್ರಾಪ್ತಮಾಡಿಕೊಂಡರೆ ಅದನ್ನು ಎಲ್ಲಿಂದ ಪ್ರಾಪ್ತಮಾಡಿಕೊಂಡನು ? ಇಂದ್ರಿಯಗಳ ಭಾವನೆ ಮಾಡುವುದರಿಂದ ಆಯಿತೇನು ? ಪರದ ಸಹಾಯತೆಯಿಂದ ಆಯಿತೇನು ? ಆತ್ಮನಲ್ಲಂತೂ ಪರದ ಅಭಾವವಿದೆ. ತನಗೆ ತನ್ನ ಅನಂತ ಪ್ರದೇಶಗಳ ವಿರಹವಿಲ್ಲ, ಆದರೆ ಅತೀಂದ್ರಿಯ ಅಸಂಖ್ಯ ಪ್ರದೇಶಿಯಾದ ಶುದ್ಧ ಆತ್ಮನ ಅಭಿರುಚಿ ಬಿಟ್ಟು ಸ್ಪರ್ಶದ ಮತ್ತು ಇಂದ್ರಿಯದ ಹಾಗೂ ಒಂದು ಸಮಯದ ಸ್ಪರ್ಶದ ಅಭಿರುಚಿ ಮಾಡಿ ಕ್ರಮದಿಂದ ಹೀನದಶೆಯಾಗುತ್ತ ಏಕೇಂದ್ರಿಯತೆಯನ್ನು ಪ್ರಾಪ್ತಮಾಡಿಕೊಂಡಿದೆ. ಇಂದ್ರಿಯ ಮೊದಲಾದವುಗಳ ಅಭಿರುಚಿಯನ್ನು ಬಿಟ್ಟುಕೊಡುವುದು ಮತ್ತು ಸ್ವಭಾವದ ಅಭಿರುಚಿ ಮಾಡಿದರೆ ಅದುವೆ ಕ್ರಮದಿಂದ ವೃದ್ಧಿಸಿ ಅತೀಂದ್ರಿಯತೆಯನ್ನು ಪ್ರಾಪ್ತಮಾಡಿಕೊಳ್ಳಬಹುದಾಗಿದೆ.

ಸಮ್ಯಗ್ದೃಷ್ಟಿ ಜೀವನಿಗೆ ಸ್ಪರ್ಶದ ವಿಷಯದ ಸಮಯದಲ್ಲಿ ಈ ರಾಗವು ನನ್ನ ಅಶಕ್ತತೆಯಿಂದ ಆಗುತ್ತಿದೆಯೆಂಬ ಅರಿವಿರುತ್ತದೆ, ಆದಾಗ್ಯೂ ಅವನು ಇಂದ್ರಿಯ ವಿಷಯಗಳಲ್ಲಿ ಸುಖವನ್ನು ಮನ್ನಿಸುವುದಿಲ್ಲ. ವಿಷಯದ ಸಮಯದಲ್ಲಿ ಕೂಡ ಸ್ವಭಾವದ ಅಭಿರುಚಿಯು ಹೊರಟು ಹೋಗುವುದಿಲ್ಲ, ಕಡಿಮೆ ಕೂಡ ಆಗುವುದಿಲ್ಲ ಮತ್ತು ಅಜ್ಞಾನಿಗಳಿಗೆ ಸ್ವಭಾವದ ಅಭಿರುಚಿಯು ಆಗುವುದೇ ಇಲ್ಲ.

ಇಲ್ಲಿ ಏಕೇಂದ್ರಿಯ ಜೀವದ ಜ್ಞಾನ ಮಾಡಿಸಿದ್ದಾರೆ. ಧರ್ಮಾತ್ಮ ಜೀವನು ಏಕೇಂದ್ರಿಯ ಜೀವದ ಸ್ವರೂಪದ ಜ್ಞಾನ ಮಾಡಿಕೊಂಡು ವಿಚಾರಿಸುವುದೇನೆಂದರೆ ಈ ಜೀವಗಳು ಸ್ವಭಾವದ ಅಭಿರುಚಿ ಬಿಟ್ಟುಕೊಟ್ಟು ಇಂದ್ರಿಯ ಮೊದಲಾದವುಗಳ ಅಭಿರುಚಿ ಮಾಡಿರುವುದರಿಂದ ಅವು ಹೀನದಶೆಗೆ ಪ್ರಾಪ್ತವಾಗಿವೆ. ನಾನು ಇಂದ್ರಿಯಗಳ ಅಭಿರುಚಿ ಬಿಟ್ಟು ಸ್ವಭಾವದ ಅಭಿರುಚಿ ಮಾಡಿ ಉಗ್ರತೆಯಿಂದ ಸ್ವಭಾವವನ್ನು ಸಾಧಿಸಿಕೊಳ್ಳುವೆನೆಂಬ ಭಾವನೆಯನ್ನು ಭಾವಿಸುತ್ತಾನೆ.

ಮೇಲಿನ ಕಥನದ ಸಾರವು ಈ ಪ್ರಕಾರವಿದೆ.

೧) ಏಕೇಂದ್ರಿಯಗಳು ಆತ್ಮವಿವೆಯೆಂಬುದನ್ನು ಒಪ್ಪಿಕೊಂಡರೆ ಈ ಜಗತ್ತಿನಲ್ಲಿ ಅನಂತ ಆತ್ಮಗಳಿವೆಯೆಂಬುದು ತಾನೇ ತಾನಾಗಿ ಸಿದ್ಧವಾಗುತ್ತದೆ.

೨) ಏಕೇಂದ್ರಿಯತನದಲ್ಲಿ ಪರಿಣಮನವು ಅತ್ಯಂತ ಹೀನನಾಗಿ ಹೋಗಿರುತ್ತದೆ.

೩) ಏಕೇಂದ್ರಿಯಗಳು ಪರ್ಯಾಯದ ಸಮಯದಲ್ಲಿ ಕೂಡ ಉಗ್ರ ಪರಿಣಮನವಾಗುವ ಯೋಗ್ಯತೆಯು ಜೀವದಲ್ಲಿ ಬಿದ್ದುಕೊಂಡಿರುತ್ತದೆ, ಉಗ್ರ ಪುರುಷಾರ್ಥದ ಮೂಲಕ ಏಕೇಂದ್ರಿಯತನದ ಅಭಾವವಾಗಿ ಸರ್ವಜ್ಞವಾಗಿ ಹೋಗುವ ಯೋಗ್ಯತೆಯಿರುತ್ತದೆ.

ಇಂಥ ಅನಂತ ಆತ್ಮರುಗಳಿದ್ದು, ಆ ಆತ್ಮನಲ್ಲಿ ವಿರೋಧ ಮಾಡಿ ಹೀನದಶೆಗೆ ಪ್ರಾಪ್ತವಾದ ಏಕೇಂದ್ರಿಯ ಜೀವಗಳಿವೆ. ನಿಮಿತ್ತವು ಸ್ಪರ್ಶನೇಂದ್ರಿಯವಿದ್ದರೂ ಶಕ್ತಿಯಿಂದ ಸರ್ವಜ್ಞವಿದೆ. ಇಂಥ ಮಾತುಗಳೆಲ್ಲವೂ ಸರ್ವಜ್ಞರ ಹೊರತಾಗಿ ಬೇರೆ ಎಲ್ಲಿಯೂ ಇಲ್ಲ. ಆದುದರಿಂದ ಅನ್ಯ ಮತದೊಡನೆ ಸಮನ್ವಯವಾಗಬಹುದೆಂಬುದು ಸಾಧ್ಯವಿಲ್ಲ.

ಜ್ಞಾನದ ವಿಕಾಸ ಮತ್ತು ವೀತರಾಗತೆಯು ಪೂಜ್ಯವಿದೆ ಮತ್ತು ಜ್ಞಾನದ ಹೀನದಶೆ ಹಾಗೂ ರಾಗವು ಪೂಜ್ಯವಿಲ್ಲ. ಆದುದರಿಂದ ರಾಗೀ ದೇವ-ದೇವಿಯರು ಪೂಜ್ಯರಿಲ್ಲ ಅದರಂತೆ ಅವರ ಮಾತುಗಳು ಮನ್ನಣೆ ಯೋಗ್ಯವಾಗುವ ಸಾಧ್ಯತೆಯಿಲ್ಲ. ಈ ಏಕೇಂದ್ರಿಯ ಜೀವಗಳು ಹೀನದಶೆಗೆ ಪ್ರಾಪ್ತವಾಗಿವೆ. ಅವು ತಮ್ಮ ಅಪರಾಧದಿಂದ ಪ್ರಾಪ್ತವಾಗಿವೆಯೆಂದು ಧರ್ಮಾತ್ಮ ಜೀವನು ವಿಚಾರ ಮಾಡುತ್ತಾನೆ. ಆತ್ಮನಂತೂ ಸರ್ವಜ್ಞ ಸ್ವಭಾವಿಯಿದ್ದಾನೆ. ಅವನ ಶ್ರದ್ಧೆ, ಜ್ಞಾನ ಮಾಡಿಕೊಂಡು ತನ್ನನ್ನು ತಿಳಿದುಕೊಂಡರೆ ಸಮಸ್ತ ಪದಾರ್ಥಗಳನ್ನು ತಿಳಿಯಬಹುದೆಂಬ ಪ್ರತೀತಿಯು ಬಂದುಬಿಡುತ್ತದೆ.

ಇತ್ತೀಚೆಗಂತೂ ಜನರು ಸಮನ್ವಯ ಮಾಡಬಯಸುತ್ತಾರೆ, ಆದರೆ ಇನ್ನೊಂದರ ಜತೆ ಜೈನ ದರ್ಶನದ ಸಮನ್ವಯವಾಗುವ ಸಾಧ್ಯತೆಯೇ ಇಲ್ಲ. ಆದುದರಿಂದ ಯಥಾರ್ಥ ವಿಚಾರ ಮಾಡಬೇಕಾಗುವುದು.

೧) ಏಕೇಂದ್ರಿಯ ಜೀವದ ಪ್ರಕಟತೆಯು ಕರ್ಮದ ಕಾರಣದಿಂದಿದೆಯೆಂದು ಮನ್ನಿಸಿದರೆ ಜೀವದ ಪರ್ಯಾಯವು ಉಳಿಯುವುದಿಲ್ಲ ಮತ್ತು ಪರ್ಯಾಯವು ಉಳಿಯದಿದ್ದರೆ ಜೀವದ ಸಿದ್ಧಿಯಾಗುವುದಿಲ್ಲ.

೨) ಜೀವದ ಹೀನದಶೆಯ ಕಾರಣದಿಂದ ಕರ್ಮವು ಬಂದಿದೆಯೆಂದು ಮನ್ನಿಸಿದರೆ ಪುದ್ಗಲ ದ್ರವ್ಯದ ಸಿದ್ಧಿಯಾಗುವುದಿಲ್ಲ. ಆದರೆ ಜೀವದ ಹೀನದಶೆಯ ಸಮಯದಲ್ಲಿ ಕರ್ಮಗಳು ಬಂದಲ್ಲದೆ ಇರುವುದಿಲ್ಲ. ಆದಾಗ್ಯೂ ಕೂಡ ಎರಡೂ ಸ್ವತಂತ್ರವಿವೆ.

ಪೃಥ್ವೀಕಾಯ ಮೊದಲಾದ ಸ್ಥಾವರದಲ್ಲಿ ಐದು ಭೇದಗಳಿವೆ. ಅವುಗಳಲ್ಲಿ ಒಳಗೆ ಅರೂಪಿ ಜೀವವಿದೆ. ಅವುಗಳ ಶರೀರದ ಭೇದದಿಂದ ಬಹಳಷ್ಟು ಜಾತಿಗಳಿವೆ. ಆದರೂ ಕೂಡ ನಿಶ್ಚಯದಿಂದ ಆ ಸಮಸ್ತ ಜೀವಗಳು ಮೋಹಗರ್ಭಿತ ರಾಗ ಭಾವವನ್ನು ಉತ್ಪನ್ನಮಾಡುತ್ತವೆ ಮತ್ತು ಸ್ಪರ್ಶದ ವಿಷಯವನ್ನು ಭೋಗಿಸುತ್ತವೆ.

ಮನುಷ್ಯತನದಲ್ಲಿ ನಿಜವನ್ನು ತಿಳಿದುಕೊಳ್ಳುವ ಸಮಯದಲ್ಲಿ ಕೂಡ ಯಾವ ಜೀವನು ವಸ್ತುಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ ಮತ್ತು ತೀವ್ರ ವಿರೋಧ ಮಾಡುತ್ತಾನೆ. ಅವನು ಅತೀಂದ್ರಿಯ ಸ್ವಭಾವದ ಅನಾದರ ಮಾಡಿ ಕರ್ಮದ ಉಪಾರ್ಜನೆ ಮಾಡುತ್ತಾನೆ ಮತ್ತು ಏಕೇಂದ್ರಿಯತನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಇಲ್ಲಿ ಏಕೇಂದ್ರಿಯ ಜೀವದ ಜ್ಞಾನ ಮಾಡಿಸಿದ್ದಾರೆ.

ಜೀವದ ಜ್ಞಾನದ ಯೋಗ್ಯತೆಯ ಮಾತು ಹೇಳುತ್ತಿದ್ದಾರೆ. ದ್ರವ್ಯ-ಗುಣಗಳು ಸ್ಥಿರವಾಗಿರುತ್ತವೆ, ಪರ್ಯಾಯದಲ್ಲಿ ಹೀನತೆಯಿದೆ. ಇಂದ್ರಿಯವು ನಿಮಿತ್ತವಿದೆ ಮತ್ತು ದ್ರವ್ಯದ ಆಶ್ರಯದಿಂದ ಪೂರ್ಣ ವಿಕಾಸ ಮಾಡಿದರೆ ಇಂದ್ರಿಯ ಮತ್ತು ಕರ್ಮಗಳು ಉಳಿಯುವುದಿಲ್ಲ ಮತ್ತು ಪೂರ್ಣದಶೆಯು ಪ್ರಕಟವಾಗುತ್ತದೆಯೆಂದು ಯಥಾರ್ಥ ಶ್ರದ್ಧೆ-ಜ್ಞಾನ ಮಾಡುವುದಿಲ್ಲ ಅಂಥ ಜೀವನು ಅನೇಕ ಪದಾರ್ಥಗಳ ಕುರಿತು ರಾಗ-ದ್ವೇಷ-ಮೋಹ ಮಾಡಿ ಏಕೇಂದ್ರಿಯತನವನ್ನು ಪಡೆದು ಸ್ಪರ್ಶದ ವಿಷಯವನ್ನು ಭೋಗಿಸುತ್ತದೆ.

**ಭಾವಾರ್ಥ :-** ಈ ಐದೂ ಪ್ರಕಾರದ ಸ್ಥಾವರ ಕಾಯದ ಜೀವಗಳಲ್ಲಿ ಅನೇಕ ಭೇದಗಳಿವೆ. ಆ ಜೀವಗಳು ಮೋಹ ಕರ್ಮದ ನಿಮಿತ್ತದಿಂದ ತನ್ನ ಅಜ್ಞಾನದ ಕಾರಣದಿಂದ ಸುಖ-ದುಃಖರೂಪದ ಸ್ಪರ್ಶವನ್ನು ಭೋಗಿಸುತ್ತವೆ. ಅಲ್ಲಿ ರಾಗ-ದ್ವೇಷಗಳ ಕರ್ತೃತ್ವದ ಮುಖ್ಯತೆ ಇರುವುದಿಲ್ಲ. ಆ ಜೀವಗಳು ಒಂದು ಕಾಯದ ವಶವರ್ತಿಯಾಗಿ ಅನೇಕ ನವೀನ ಅವಸ್ಥೆಗಳನ್ನು ಧಾರಣ ಮಾಡುತ್ತವೆ. ಯಾವ ಜೀವನು ಯಥಾರ್ಥ ರೂಪದಿಂದ ಏಕೇಂದ್ರಿಯದ ಶ್ರದ್ಧೆ ಮಾಡುತ್ತಾನೆ ಅವನಿಗೆ ಆತ್ಮನ ಅಸ್ತಿತ್ವದ ಶ್ರದ್ಧೆಯಾಗುತ್ತದೆ. ಯಾವನ ಭಾವನೆಯು ಒಂದು ಜ್ಞಾನವೇ ಇದೆ ಅವನು ಏಕೇಂದ್ರಿಯ ರೂಪವಾಗಿ ಪರಿಣಮಿಸುವುದಿಲ್ಲ, ಆದರೆ ಅವನು ವಿಕಾಸ ಹೊಂದಿ ಕೇವಲಜ್ಞಾನ ಪಡೆಯುತ್ತಾನೆ ಮತ್ತು ಯಾವನು ಯಥಾರ್ಥ ಶ್ರದ್ಧೆ ಮಾಡುವುದಿಲ್ಲ ಅವನು ಏಕೇಂದ್ರಿಯನಾಗುತ್ತಾನೆ.

**ತಿ ತ್ಥಾವರತಣುಜೋಗಾ ಅಣಿಲಾಣಲಕಾಇಯಾ ಯ ತೇಸು ತಸಾ ।**
**ಮಣಪರಿಣಾಮವಿರಹಿದಾ ಜೀವಾ ಏಇಂದಿಯಾ ಣೇಯಾ ॥೧೧೧॥**

**ಅವುಗಳಲಿ ಮೂರು ಜೀವ ಸ್ಥಾವರಕಾಯವಿದ್ದು ಅಗ್ನಿ-ವಾಯು ಜೀವ ತ್ರಸವಿವೆ ।**
**ಅವೆಲ್ಲವು ಮನಪರಿಣಾಮಗಳಿಲ್ಲದ ಏಕೇಂದ್ರಿಯ ಜೀವವೆಂದರಿವುದು ॥೧೧೧॥**

ಸ್ಥಾವರನಾಮಕರ್ಮದ ಉದಯದಿಂದ ಪೃಥ್ವೀ, ಜಲ, ವನಸ್ಪತಿ ಇವು ಮೂರು ಪ್ರಕಾರದ ಜೀವಗಳನ್ನು ಏಕೇಂದ್ರಿಯವೆಂದು ತಿಳಿಯುವುದು. ಐದು ಸ್ಥಾವರಗಳಲ್ಲಿ ವಾಯು ಹಾಗೂ ಅಗ್ನಿ ಇವು ಎರಡು ಪ್ರಕಾರದ ಜೀವಗಳು ಚಲಿಸುತ್ತಿದ್ದರೂ ಸ್ಥಾವರನಾಮಕರ್ಮದ ಉದಯದಿಂದ ಸ್ಥಾವರ ಏಕೇಂದ್ರಿಯ ಜೀವವೆಂದು ಕರೆಯಿಸಿಕೊಳ್ಳುತ್ತವೆ. ಆ ಏಕೇಂದ್ರಿಯ ಜೀವಗಳು ಮನೋಯೋಗರಹಿತವಿವೆ.

ಆತ್ಮನು ಅನಂತ ಗುಣಗಳ ಪಿಂಡನಿದ್ದಾನೆ. ಅವನು ಸ್ಥಾವರನಾಮಕರ್ಮದಿಂದ ಬೇರೆಯಿದ್ದಾನೆ. ಆತ್ಮನು ಕರ್ಮ ಹಾಗೂ ಮನದಿಂದ ರಹಿತನಿದ್ದಾನೆ ಮತ್ತು ತನ್ನ ಗುಣಗಳಿಂದ ಅಭಿನ್ನನಿದ್ದಾನೆ. ಯಾವನು ಅವನ ಭಾವನೆಯನ್ನು ಮಾಡುವುದಿಲ್ಲ ಅವನು ಕರ್ಮಗಳಿಂದ ಬಂಧಿಸುತ್ತಾನೆ ಮತ್ತು ಅದರಿಂದ ಏಕೇಂದ್ರಿಯತನವು ಪ್ರಾಪ್ತವಾಗುತ್ತದೆ. ರಾಗದ ಭಾವನೆ ಮಾಡಿದರೆ ಸ್ಥಾವರ ನಾಮಕರ್ಮದ ಉಪಾರ್ಜನೆಯಾಗುತ್ತದೆ.

ವರ್ತಮಾನದಲ್ಲಿ ಯಾವ ಯಾವ ಅವಸ್ಥೆಗಳು ಕಂಡುಬರುತ್ತವೆ. ಅವು ಕರ್ಮದ ನಿಮಿತ್ತದಿಂದ ಆಗಿದೆ. ಆ ಕರ್ಮವು ತಮ್ಮ ಅಪರಾಧದ ಕಾರಣದಿಂದ ಕಟ್ಟಿರುತ್ತದೆ. ಕೆಲವು ಜೀವಗಳು ನೀರಿನ ಜೀವರೂಪದಿಂದ ಆಗಿರುತ್ತವೆ. ಅವು ಪೂರ್ವದಲ್ಲಿ ಅಂಥ ಭಾವಮಾಡಿರುವುದರಿಂದ ಹಾಗೆ ಆಗಿವೆ ಮತ್ತು ಶರೀರದ ನಿರೋಗ ಅವಸ್ಥೆ ಇರುವುದು ಅದುಕೂಡ ಕರ್ಮದ ನಿಮಿತ್ತದಿಂದ ಆಗಿರುತ್ತದೆ. ಪೂರ್ವದಲ್ಲಿ ಅದು ತನ್ನ ಸ್ವಭಾವವನ್ನು ಮರೆತು ಶುಭಭಾವ ಮಾಡಿರುವುದರ ಫಲದಲ್ಲಿ ಯಾವ ಕರ್ಮವು ಕಟ್ಟಿತ್ತು ಅದರ ನಿಮಿತ್ತದಿಂದ ಸಾತಾವು ಕಂಡುಬರುತ್ತದೆ. ವರ್ತಮಾನದ ಅಪರಾಧದಿಂದ ರೋಗವಾಗುವುದಿಲ್ಲ ಮತ್ತು ಶರೀರದ ಕಡೆಗೆ ವಿಶೇಷ ಲಕ್ಷ್ಯವಹಿಸುವುದರಿಂದ ಅದು

ನಿರೋಗವಿರುತ್ತದೆಯೆಂಬುದಾಗಿಯೂ ಇಲ್ಲ. ಅದು ತನ್ನ ಸ್ವಭಾವವನ್ನು ಮರೆತು ಪೂರ್ವದಲ್ಲಿ ಶುಭಾಶುಭ ಭಾವ ಮಾಡಿರುವುದರ ಫಲದಲ್ಲಿ ಕಟ್ಟಿದ ಕರ್ಮದ ಫಲರೂಪವಾಗಿ ಈಗ ರೋಗ-ನಿರೋಗತೆಗಳು ಕಂಡು ಬರುತ್ತವೆ.

ಸಿದ್ಧ ದಶೆಯಲ್ಲಿ ಕೇವಲ ಶುದ್ಧ ಆತ್ಮನೇ ಉಳಿದುಬಿಡುವುದರಿಂದ ಸಿದ್ಧ ಭಗವಂತರು ಎಲ್ಲರಿಗಿಂತ ದೊಡ್ಡವರಾಗಿ ಹೋಗಿದ್ದಾರೆ. ಆ ಭಗವಂತರನ್ನು ಅಗ್ರೇಸರರೆಂದು ಸ್ವೀಕಾರ ಮಾಡಿದೆ, ಆದರೆ ಹೀನದಶೆಯು ಮತ್ತು ಯಾವ ಭಾವದಿಂದ ಹೀನದಶೆಯು ದೊರಕುವುದು ಅವೆಲ್ಲ ಭಾವಗಳನ್ನು ಬಿಟ್ಟುಕೊಟ್ಟು ಒಂದು ಸ್ವಭಾವದ ಭಾವನೆ ಮಾಡಿದರೆ ಸಿದ್ಧರಂತೆ ಅತ್ಯುತ್ತಮ ಅಥವಾ ಪ್ರಭುವೆಂದು ಮನ್ನಿಸಲಾಗುವುದು.

ಈ ಜೀವವು ಮನರಹಿತ ಹೇಗಾಯಿತೆಂದರೆ ಪಂಚೇಂದ್ರಿಯತನದ ಪ್ರಕಟತೆಯ ಯೋಗ್ಯತೆಯು ಇಲ್ಲದಿರುವುದರಿಂದ ಎಂದರೆ ಮನಸ್ಸಿನ ನಿಮಿತ್ತತನವು ಕೂಡ ಹೊರಟು ಹೋಯಿತು. ಪ್ರಕಟತೆಯ ಯೋಗ್ಯತೆಯು ತನ್ನ ಕಾರಣದಿಂದ ಇದೆ. ಜೀವಾಸ್ತಿಕಾಯದ ಮಾತು ನಡೆಯುತ್ತಿದೆ. ಜೀವವು ತನ್ನ ಸ್ವಭಾವವನ್ನು ಮರೆತು ಸ್ವಯಂ ಹೀನದಶೆ ಮಾಡುತ್ತ ಮಾಡುತ್ತ ಮನರಹಿತವಾಗಿ ಹೋಗುವುದು.

ಹೀಗೆ ಏಕೇಂದ್ರಿಯತನದೊಳಗೆ ಪೃಥ್ವಿಯಲ್ಲಿ ಮೇಲೆಯೇ ಜನ್ಮ ಪಡೆದರೆ ಎಪ್ಪತ್ತು ಕೋಟಾಕೋಟಿ ಸಾಗರೋಪಮದವರೆಗೆ ಉಳಿಯುವುದು. ಬಾದರ, ನಿಗೋದ, ಅಗ್ನಿ ಮೊದಲಾದವುಗಳಲ್ಲಿ ಮೇಲೆ ಮೇಲೆಯೇ ಎಪ್ಪತ್ತು ಕೋಟಾಕೋಟಿ ಸಾಗರೋಪಮದವರೆಗೆ ಉಳಿಯುವುದು, ಅದಕ್ಕಿಂತ ಹೆಚ್ಚಿಗೆ ಸಮಯ ಉಳಿಯುವುದಿಲ್ಲ. ತನ್ನ ತೀವ್ರ ವಿರೋಧ ಭಾವವನ್ನು ಹಾಗೇ ಉಳಿಸಿಕೊಂಡರೆ ಮತ್ತು ಏಕೇಂದ್ರಿಯತನದ ಯೋಗ್ಯತೆಯನ್ನು ಉಳಿಸಿಕೊಂಡರೆ ಏಕೇಂದ್ರಿಯ ತನದಲ್ಲಿ ಜನ್ಮ-ಮರಣ ಮಾಡುತ್ತಲೇ ಇರುವುದು, ವಾಯುಕಾಯಕ ಜೀವವು ಪೃಥ್ವೀಕಾಯಕವಾಗುವುದು ಇದೇ ಮೊದಲಾಗಿ ಒಂದು ಏಕೇಂದ್ರಿಯದೊಳಗಿಂದ ಇನ್ನೊಂದು ಏಕೇಂದ್ರಿಯದ ಭವಗಳನ್ನು ಮಾಡುತ್ತ ಮಾಡುತ್ತ ಅಸಂಖ್ಯ ಪುದ್ಗಲ ಪರಾವರ್ತನದವರೆಗೆ ಅಲ್ಲಿ ಜನ್ಮ-ಮರಣಗಳನ್ನು ಹೊಂದುತ್ತದೆ. ಆದುದರಿಂದ ಇಲ್ಲಿ ಹೇಳುವುದೇನೆಂದರೆ ಜ್ಞಾನದ ಹೀನದಶೆಯ, ರಾಗದ ಮತ್ತು ನಿಮಿತ್ತದ ಭಾವಗಳು ಮಾಡಲು ಯೋಗ್ಯವಾದವುಗಳಿಲ್ಲ. ಯಾರು ಅವುಗಳ ಭಾವನೆ ಮಾಡುತ್ತಾರೆ ಅವರು ಒಂದಾದನಂತರ ಒಂದರಂತೆ ಇಂಥ ಏಕೇಂದ್ರಿಯದ ಭವಗಳನ್ನು ಮಾಡಬೇಕಾಗುವುದು.

ಇಂಥ ಮಾತುಗಳು ಸರ್ವಜ್ಞರ ಹೊರತಾಗಿ ಬೇರೆಲ್ಲಿಯೂ ದೊರಕುವುದಿಲ್ಲ. ವೀತರಾಗ ಮತ್ತು ಸರ್ವಜ್ಞ ದಶೆಯು ಪೂಜ್ಯವಿದೆ. ಆ ದಶೆಯನ್ನು ಪ್ರಕಟಿಸಿಕೊಳ್ಳದಿರುವುದು ಮತ್ತು ಹೀನ ಪರಿಣಮನ ಮಾಡಿದರೆ ಅದು ತನ್ನ ಕಾರಣದಿಂದ ಇದೆ ಮತ್ತು ಜಡದ ಪರ್ಯಾಯವು ಜಡದ ಕಾರಣದಿಂದ ಇದೆ. ಒಂದರಲ್ಲಿ ಸಮ್ಮೂರ್ಛನ ಸ್ಥಾವರದ ಕಾರಣದಿಂದ ಮತ್ತು ಒಂದರಲ್ಲಿ ಮನರಹಿತತೆಯ ಕಾರಣದಿಂದ. ಮನವು ದೊರಕಿದರೆ ಜೀವದ ಯೋಗ್ಯತೆಯಿಂದ ದೊರಕುತ್ತದೆ, ಮನವು ದೊರಕದಿರುವುದು ಅದು ಕೂಡ ಜೀವದಯೋಗ್ಯತೆಯಿಂದ ದೊರಕುವುದಿಲ್ಲ. ಕರ್ಮದ ಕಾರಣದಿಂದಿಲ್ಲವೆಂದು ತಿಳಿದುಕೊಂಡು ಕರ್ಮದ ಮೇಲಿನ ಭಾವನೆಯನ್ನು ತೆಗೆದು ದ್ರವ್ಯ ಸ್ವಭಾವದ ಭಾವನೆ ಮಾಡಿದರೆ ಧರ್ಮವಾಗುವುದು ಮತ್ತು ಅಂಥ ಭಾವನೆ ಭಾವಿಸದಿದ್ದರೆ ಹೀನ ದಶೆಯಾಗುವುದು.

**ಏದೇ ಜೀವಣಿಕಾಯಾ ಪಂಚವಿಧಾ ಪುಢವಿಕಾಇಯಾದೀಯಾ ।**
**ಮಣಪರಿಣಾಮವಿರಹಿದಾ ಜೀವಾ ಏಗೇಂದಿಯಾ ಭಣಿಯಾ ॥೧೧೨॥**

**ಇವೆಲ್ಲ ಪೃಥ್ವಿಕಾಯಿಕ ಮೊದಲಾದೈದು ಪ್ರಕಾರದ ಜೀವನಿಕಾಯುಗಳಿಗೆ ।**
**ಆವಗಂ ಮನಪರಿಣಾಮಗಳಿಲ್ಲದ ಏಕೇಂದ್ರಿ ಜೀವಗಳೆಂದು ಹೇಳಿದೆ ॥೧೧೨॥**

ಆ ಪೃಥ್ವೀ ಮೊದಲಾದ ಐದು ಪ್ರಕಾರದ ಜೀವಗಳಿವೆ ಅವು ಮನೋಯೋಗದ ವಿಕಲ್ಪಗಳಿಂದ ರಹಿತವಾದ ಏಕೇಂದ್ರಿಯ ಜೀವಗಳಿವೆ. ಅವು ಮನ ರಹಿತವಾಗಿ ಹೇಗೆ ಆದವು ? ಆತ್ಮನು ಉಪಾಧಿ ರಹಿತನಿದ್ದಾನೆ ಅವನ ಭಾವನೆಯನ್ನು ಯಾರು ಬಿಟ್ಟುಕೊಡುತ್ತಾರೆ ಆ ಜೀವಗಳು ಮನರಹಿತವಾಗಿ ಆಗಿ ಹೋಗುತ್ತವೆ. ಆತ್ಮನ ಶುದ್ಧ ಪರಿಣಾಮದಿಂದ ರಹಿತ ಮತ್ತು ಅಶುದ್ಧ ಪರಿಣಾಮ ಸಹಿತವಿರುವ ಜೀವಗಳು ಏಕೇಂದ್ರಿಯತನವನ್ನು ಪ್ರಾಪ್ತ ಮಾಡಿಕೊಳ್ಳುತ್ತವೆ. ಯಾವಾಗ ಜೀವವು ಪಂಚೇಂದ್ರಿಯ ಮನುಷ್ಯವಾಗಿತ್ತು ಆಗ ಆತ್ಮನ ಜ್ಞಾನ ಮಾಡಿಕೊಂಡು ಅಸಂಖ್ಯ ಪ್ರದೇಶಗಳಲ್ಲಿ ಕೇವಲಜ್ಞಾನದ ಜ್ಯೋತಿಯನ್ನು ಪ್ರಕಟಪಡಿಸಿಕೊಳ್ಳುವಂಥ ಯೋಗ್ಯತೆಯಿತ್ತು ; ಆದರೆ ಆತ್ಮನ ಜ್ಞಾನ ಮಾಡಿಕೊಳ್ಳದೆ ಆರ್ತಧ್ಯಾನ ಮತ್ತು ರೌದ್ರಧ್ಯಾನಮಾಡಿ ವಿಕಾರ ಮತ್ತು ಪುಣ್ಯದ ಭಾವನೆಯನ್ನು ಭಾವಿಸಿ ಏಕೇಂದ್ರಿಯತನವನ್ನು ತಾನಾಗಿಯೇ ಪ್ರಾಪ್ತ ಮಾಡಿಕೊಂಡಿದೆ.

ಈ ಶರೀರದ ಸ್ಥಿತಿಯಂತೂ ಐವತ್ತು ಅರವತ್ತು ವರ್ಷದ್ದಿರುತ್ತದೆ. ಆದರೆ ಅಷ್ಟು ಸಮಯದಲ್ಲಿ ವಿಘ್ನಗಳಿಗಂತೂ ಸೀಮೆಯೇ ಇರುವುದಿಲ್ಲ. ಈ ಶರೀರವು ನಗ್ನವಾಗಿ ಹೋಗುವುದು ಮತ್ತು ಈಗ ಯಾರ ಪರಿಚಯವು ವರ್ತಿಸುತ್ತಿದೆ ಅಂಥ ಜೀವರುಗಳು ಎಲ್ಲಿ ಕಂಡು ಬರುವುದಿಲ್ಲ, ಆದರೆ ಅಜ್ಞಾನಿಗೆ ಅದರ ಅರಿವಿಲ್ಲ. ಆತ್ಮನು ಮನರಹಿತನಿದ್ದಾನೆ ಅವನ ಭಾವನೆ ಭಾವಿಸದೆ ಅಶುದ್ಧತೆಯ ಭಾವನೆ ಭಾವಿಸುತ್ತಿರುವವನು ಕ್ರಮದಿಂದ ಹೀನ ದಶೆಯನ್ನು ಪಡೆದು ಮನರಹಿತನಾಗಿ ಹೋಗುತ್ತಾನೆ. ಒಂದು ಕಲ್ಲನ್ನು ಆಕಾಶಕ್ಕೆ ಹಾರಿಸಿದರೆ ಅದು ಕೆಳಗೆ ಬಂದಲ್ಲದೆ ಇರುವುದಿಲ್ಲ. ಅದೇ ಪ್ರಕಾರ ಒಬ್ಬನು ಉಚ್ಚನಾಗಿ ಪಂಚೇಂದ್ರಿಯನಾಗಿ ಹೋಗಿದ್ದರೂ ಕೂಡ ಆತ್ಮನ ಜ್ಞಾನ ಮಾಡಿಕೊಳ್ಳದಿರುವ ಕಾರಣದಿಂದ ಕೀಳುದಶೆಯಲ್ಲಿ-ಏಕೇಂದ್ರಿಯದಲ್ಲಿ ಬಂದಲ್ಲದೆ ಇರುವುದಿಲ್ಲ. ಏಕೆಂದರೆ ತ್ರಸ ದ್ವೀಂದ್ರಿಯದಿಂದ ಪಂಚೇಂದ್ರಿಯದ ಸ್ಥಿತಿಯು ಎರಡುಸಾವಿರ ಸಾಗರದ್ದಿದೆ. ಅದು ಪೂರ್ಣವಾಗಿ ಬಿಟ್ಟರೆ ಏಕೇಂದ್ರಿಯ ತನಕ್ಕೆ ಪ್ರಾಪ್ತವಾಗುತ್ತದೆ. ಸ್ವಭಾವವನ್ನು ತಿಳಿದುಕೊಳ್ಳದಿರುವುದರಿಂದ ಹೀನದಶೆಯನ್ನು ಪಡೆಯಬೇಕಾಗುವುದು. ಏಕೇಂದ್ರಿಯ ಜೀವದ ಮೇಲೆ ದಯೆ ಮಾಡುವ ಅಥವಾ ಆ ದಯೆಯಿಂದ ಧರ್ಮವಾಗುತ್ತದೆಯೆಂಬ ಮಾತು ಇಲ್ಲಿ ಇಲ್ಲ. ಏಕೇಂದ್ರಿಯ ಪರ್ಯಾಯದ ಜ್ಞಾನ ಮಾಡಿಸಿ ಶಕ್ತಿಯಿಂದ ನೀನು ಸರ್ವಜ್ಞನಿರುವೆಯೆಂದು ತಿಳಿಸಿಕೊಡಲಾಗಿದೆ. ವಿಪರೀತವಾಗಿ ವರ್ತಿಸಿದರೆ ಹೀನನಾಗಿ ಹೋಗುವೆ ಮತ್ತು ಅನುಕೂಲವಾಗಿ ವರ್ತಿಸಿದರೆ ಸರ್ವಜ್ಞನಾಗಿ ಹೋಗುವೆಯೆಂಬುದನ್ನು ತಿಳಿಸಿಕೊಡುವ ಮಾತು ಇದಾಗಿದೆ.

ಐದು ಪ್ರಕಾರದ ಪೃಥ್ವೀಕಾಯ ಮೊದಲಾಗಿ ಸ್ಥಾವರ ಏಕೇಂದ್ರಿಯ ಜೀವಗಳಿವೆ. ಅವು ತಮ್ಮ ಜ್ಞಾನಸ್ವಭಾವದ ಭಾವನೆ ಭಾವಿಸದಿರುವುದರಿಂದ ಕೀಳುದಶೆ ಪಡೆದು ಏಕೇಂದ್ರಿಯವಾಗಿವೆ. ಸರ್ವಥಾ ವಿಕಾಸದ ಅಭಾವವಾಗಿ ಹೋದರೆ ಜಡವಾಗಿ ಹೋಗುತ್ತವೆಯೆಂಬುದು ಸಂಭವಿಸುವುದಿಲ್ಲ. ಏಕೇಂದ್ರಿಯದಷ್ಟು ವಿಕಾಸವಿರುತ್ತದೆ. ಆತ್ಮನು ಶಕ್ತಿಯಿಂದ ಪ್ರಭುವಿದ್ದಾನೆ ಮತ್ತು ಪರ್ಯಾಯದಲ್ಲಿ ಪ್ರಭುವಾಗುವ ಯೋಗ್ಯತೆಯಿದೆಯೆಂಬ ಪ್ರಜ್ಞೆಯು ಯಾರಿಗೆ ಇಲ್ಲ ಮತ್ತು ವಿಭಾವದಷ್ಟೇ ತಮ್ಮನ್ನು ಮನ್ನಿಸುತ್ತಾರೆ ಅವರು ಕೀಳು ದಶೆಯನ್ನು ಪಡೆಯುತ್ತಾರೆ. ಪೃಥ್ವೀ ಮೊದಲಾದ ಐದು ಪ್ರಕಾರದ ಸ್ಥಾವರ ಜೀವಗಳಿವೆ. ಅವುಗಳಿಗೆ ಸ್ಪರ್ಶನೇಂದ್ರಿಯದ ಮೂಲಕ ತಿಳಿದುಕೊಳ್ಳುವ ಪ್ರಕಟತೆಯಿದೆ. ಉಳಿದ ನಾಲ್ಕು ಇಂದ್ರಿಯಗಳಿಂದ ಜ್ಞಾನ ಮಾಡಿಕೊಳ್ಳುವ ಅದರಂತೆ ಮನಸ್ಸಿನಿಂದ ತಿಳಿದುಕೊಳ್ಳುವ ಯೋಗ್ಯತೆಯಿರುವುದಿಲ್ಲ. ಏಕೆಂದರೆ ಆ ಜೀವಗಳು ನಾಲ್ಕು ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ರಹಿತವಿವೆ.

ಆತ್ಮನು ಶುದ್ಧ ಚೈತನ್ಯ ಸ್ವರೂಪನಿದ್ದಾನೆ. ಆತ್ಮನು ಸ್ವತಂತ್ರರೂಪದಿಂದ ತನ್ನ ಜ್ಞಾನಭಾವದ ಕರ್ತೃ ಇದ್ದಾನೆ. ಅವನನ್ನು ರಾಗದ ಕರ್ತೃವೆಂದು ಹೇಳುವುದು ಅದು ಉಪಚಾರ ಮಾತ್ರವಿದೆ. ನೋಡುವ-ತಿಳಿದುಕೊಳ್ಳುವ ರೂಪದಿಂದ ಇರುವುದು ಅದು ಅವನ ಸ್ವರೂಪವಿದೆ. ಅಂಥ ತನ್ನ ಸ್ವರೂಪದಲ್ಲಿ ಯಾವ ಜೀವನು ಉಳಿಯುವುದಿಲ್ಲ ಅವನು ಕೀಳು

ದಶೆಯನ್ನು ಪಡೆಯುತ್ತಾನೆ. ತ್ರಸದ ಸ್ಥಿತಿಯು ಎರಡು ಸಾವಿರ ಸಾಗರದ್ದಿದೆ. ಅದರೊಳಗಾಗಿ ಆತ್ಮನ ಜ್ಞಾನ ಮಾಡಿಕೊಂಡು ಮೋಕ್ಷದಶೆಯನ್ನು ಪ್ರಾಪ್ತಮಾಡಿಕೊಳ್ಳಬೇಕು. ಇಲ್ಲದಿದ್ದರೆ ಮರಳಿ ಏಕೇಂದ್ರಿಯತನವನ್ನು ಪಡೆಯುವುದೆಂಬ ನಿಯಮವಿದೆ. ಎಂದರೆ ಆ ಅವಧಿಯ ಒಳಗಾಗಿ ಯಾರು ತಮ್ಮ ಆತ್ಮನ ಜ್ಞಾನ-ಅರಿವು ಮಾಡಿಕೊಳ್ಳುವುದಿಲ್ಲ ಅವರು ಅವಶ್ಯವಾಗಿ ಏಕೇಂದ್ರಿಯತನವನ್ನು ಪಡೆಯುತ್ತಾರೆ.

೧) ಏಕೇಂದ್ರಿಯತನದಲ್ಲಿ ಕೇವಲ ಸ್ಪರ್ಶವನ್ನು ತಿಳಿದುಕೊಳ್ಳುವಷ್ಟು ವಿಕಾಸವಾಗಿರುತ್ತದೆ ಮತ್ತು ಎದುರಿಗೆ ಸ್ಪರ್ಶ, ರಸ, ಗಂಧ, ವರ್ಣ, ಶಬ್ದವೆಂಬ ಐದು ಇಂದ್ರಿಯ ವಿಷಯಗಳಿರುವಂಥ ಪದಾರ್ಥಗಳಿರುವುದರಿಂದ ಏಕೇಂದ್ರಿಯ ಜೀವಗಳಿಗೆ ಜ್ಞೇಯ ಪದಾರ್ಥಗಳಲ್ಲಿ ತಿಳಿದುಕೊಳ್ಳುವುದು ಬಹಳಷ್ಟು ಬಾಕಿ ಉಳಿದುಬಿಡುತ್ತದೆ. ಸ್ಕಂಧಗಳಲ್ಲಿ ಸ್ಪರ್ಶ ಮೊದಲಾದ ಗುಣಗಳು, ಅಸ್ತಿತ್ವ, ವಸ್ತುತ್ವ, ಮೊದಲಾಗಿ ಬಹಳಷ್ಟು ತಿಳಿದುಕೊಳ್ಳುವುದು ಬಾಕಿ ಉಳಿದುಬಿಡುತ್ತದೆ.

೨) ಎದುರಿಗಿರುವ ಪದಾರ್ಥಗಳಲ್ಲಿ ಇಷ್ಟು ಜ್ಞೇಯಗಳನ್ನು ತಿಳಿದುಕೊಳ್ಳುವುದು ಬಾಕಿ ಉಳಿಯುತ್ತಿದ್ದರೆ ಇಲ್ಲಿ ಜ್ಞಾನದಲ್ಲಿ ಕೂಡ ತಿಳಿದುಕೊಳ್ಳುವ ಶಕ್ತಿಯು ಇರಲೇಬೇಕಾಗುವುದು. ಎದುರಿಗಂತೂ ಅವು ಇರುವುದು ಮತ್ತು ಜ್ಞಾನಶಕ್ತಿಯಿಲ್ಲದಿರುವುದೆಂಬುದು ಸಂಭವಿಸುವುದಿಲ್ಲ. ಅದಕ್ಕಾಗಿ ಜ್ಞಾನದಲ್ಲಿ ಕೂಡ ಅವ್ಯಕ್ತ ಶಕ್ತಿಯಿದೆ. ಆ ಶಕ್ತಿಯು ಏಕೇಂದ್ರಿಯ ಜೀವದಲ್ಲಿ ಅವ್ಯಕ್ತರೂಪದಿಂದ ಬಿದ್ದುಕೊಂಡಿದೆ.

೩) ಈಗ ಆ ಏಕೇಂದ್ರಿಯ ಜೀವವು ರಾಗದ ಮಂದತೆ ಮಾಡಿ ವಿಕಾಸ ಹೊಂದಿದರೆ ಮತ್ತು ದ್ವೀಂದ್ರಿಯತನವನ್ನು ಪಡೆದರೆ ಅದು ಸ್ಪರ್ಶ ಮತ್ತು ರಸನೇಂದ್ರಿಯದ ವಿಷಯವನ್ನು ತಿಳಿಯುವುದು, ಅದಕ್ಕಿಂತ ಹೆಚ್ಚಿಗೆ ವಿಕಾಸ ಹೊಂದಿದರೆ ಅಸಂಜ್ಞೀ ಪಂಚೇಂದ್ರಿಯತನದವರೆಗಿನ ತಮ್ಮ ತಮ್ಮ ಯೋಗ್ಯ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ.

೪) ಅದಕ್ಕಿಂತಲೂ ವಿಶೇಷ ರಾಗದ ಮಂದತೆ ಮಾಡಿ ಸಂಜ್ಞೀ ಪಂಚೇಂದ್ರಿಯ ಮನುಷ್ಯನಾದರೆ ಮನದ ಧಾರಣದಿಂದ ಸ್ಕಂಧಗಳ ಸ್ಪರ್ಶ ಮೊದಲಾದ ಗುಣಗಳನ್ನು ಹಾಗೂ ಅಸ್ತಿತ್ವ ಮೊದಲಾದ ಗುಣಗಳನ್ನು ಶಾಸ್ತ್ರದ ಆಧಾರದಿಂದ ತಿಳಿದುಕೊಳ್ಳಬಹುದಾಗಿದೆ, ಆದರೆ ಅದು ರಾಗಸಹಿತವಿರುವ ಧಾರಣವಿದೆ.

೫) ಅದಕ್ಕಿಂತಲೂ ವಿಶೇಷ ಪುರುಷಾರ್ಥ ಮಾಡಿದರೆ ಮತ್ತು ರಾಗರಹಿತ ಸ್ವಭಾವದ ದೃಷ್ಟಿ ಮಾಡಿ ತನ್ನನ್ನು ಯಥಾರ್ಥವಾಗಿ ತಿಳಿದುಕೊಂಡರೆ ಸ್ವ-ಪರಗಳ ಯಾವ ಗುಣಗಳಿವೆ ಆ ಗುಣಗಳ ಪ್ರತೀತಿಯಾದಲ್ಲದೆ ಇರುವ ಸಾಧ್ಯತೆಯಿಲ್ಲ. ಗುಣಗಳನ್ನು ಪ್ರತ್ಯಕ್ಷವಾಗಿಯಂತೂ ತಿಳಿದುಕೊಳ್ಳುವುದಿಲ್ಲ, ಆದರೆ ಆಂಶಿಕ ಸ್ವಸಂವೇದನ ಪ್ರತ್ಯಕ್ಷಜ್ಞಾನವು ಪ್ರಕಟವಾದರೆ ಸಮಸ್ತ ಗುಣಗಳ ಪ್ರತೀತಿಯು ಯಥಾರ್ಥವಾಗಿ ಆಗಿಹೋಗುವುದು ಮತ್ತು ಅವುಗಳ ಪ್ರತ್ಯಕ್ಷ ಜ್ಞಾನವಾಗುತ್ತದೆ.

೬) ಅದಕ್ಕಿಂತಲೂ ವಿಶೇಷ ಪುರುಷಾರ್ಥದ ಮೂಲಕ ಸ್ವಭಾವದಲ್ಲಿ ಸ್ಥಿರತೆ ಮಾಡಿದರೆ ರಾಗದಿಂದ ರಹಿತತೆಯಾಗಿ ಕೇವಲಜ್ಞಾನವು ಪ್ರಕಟವಾಗುವುದು. ಆಗ ಸಮಸ್ತ ಸ್ವ-ಪರಗಳು ಪ್ರತ್ಯಕ್ಷವಾಗಿ ಬಿಡುತ್ತವೆ. ಲೋಕಾಲೋಕವನ್ನು ಅದರಂತೆ ಸಮಸ್ತ ದ್ರವ್ಯ-ಗುಣ-ಪರ್ಯಾಯಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಲಾಗುತ್ತದೆ. ವಸ್ತುವಿನಲ್ಲಿ ಪ್ರತ್ಯಕ್ಷ-ಪರೋಕ್ಷತೆಯಿರುವುದಿಲ್ಲ. ಆದರೆ ಜ್ಞಾನದಲ್ಲಿ ಪ್ರತ್ಯಕ್ಷ-ಪರೋಕ್ಷತೆಯಿದೆ.

೭) ಈ ಪ್ರಕಾರ ಚೈತನ್ಯ ಆತ್ಮನಲ್ಲಿ ಉಗ್ರ ಪುರುಷಾರ್ಥದ ಮೂಲಕ ವಿಕಾಸ ಮಾಡಿದರೆ ಪ್ರತ್ಯಕ್ಷರೂಪದಿಂದ ಸಮಸ್ತ ಸ್ವ-ಪರ ಪದಾರ್ಥಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಅರಳಿ ನಿಲ್ಲಬಹುದಾಗಿದೆ. ಇಂಥ ಅನಂತ ಪ್ರಭುವಿದ್ದಾನೆ. ಇಂಥ ಶಕ್ತಿಯು ಪ್ರತಿಯೊಂದು ಏಕೇಂದ್ರಿಯ ಜೀವದಲ್ಲಿ ಕೂಡ ಬಿದ್ದುಕೊಂಡಿದೆ.

ಆದರೆ ಇಂಥ ಪ್ರಭುತೆಯನ್ನು ಮರೆತುಹೋದ ಜೀವರುಗಳು ಕೀಳು ಪರ್ಯಾಯ ರೂಪದಿಂದ ಆಗಿಹೋಗಿದ್ದಾರೆ ಮತ್ತು ನಾಲ್ಕು ಇಂದ್ರಿಯ ಹಾಗೂ ಮನರಹಿತರಾಗಿ ಹೋಗಿದ್ದಾರೆ. ಅವರು ಒಂದು ಸ್ಪರ್ಶನೇಂದ್ರಿಯದ ವಿಷಯವನ್ನೇ ತಿಳಿಯುತ್ತಾರೆ.

ಏಕೇಂದ್ರಿಯ ಜೀವಗಳಿಗೆ ಚೈತನ್ಯದ ಅಸ್ತಿತ್ವವಿರುವುದಿಲ್ಲವೆಂದು ಯಾರಾದರೂ ಸಂದೇಹ ವ್ಯಕ್ತ ಮಾಡಿದರೆ ಅವರಿಗೆ ದೃಷ್ಟಾಂತಪೂರ್ವಕ ತಿಳಿಸಿಕೊಡುತ್ತಾರೆ -

**ಅಂಡೇಸು ಪವಡ್ಢಂತಾ ಗಬ್ಭತ್ಥಾ ಮಾಣುಸಾ ಯ ಮುಚ್ಛಗಯಾ ।**
**ಜಾರಿಸಯಾ ತಾರಿಸಯಾ ಜೀವಾ ಏಗೇಂದಿಯಾ ಣೇಯಾ ॥೧೧೩॥**

**ಹೇಗೆ ಮೊಟ್ಟೆಯಲಿ, ಗರ್ಭದಲಿರುವ ಮೇಣ್ಮೂರ್ಛೆ ಹೋದ ಮನುಷ್ಯರಿರುವರು ।**
**ಹಾಗೆ ಇವೆಲ್ಲ ಐದುವಿಧದೇಕೇಂದ್ರಿ ಜೀವಗಳಿವೆಯೆಂದು ತಿಳಿಯುವುದು ॥೧೧೩॥**

ಯಾವ ಪ್ರಕಾರ ಪಕ್ಷಿಗಳ ಮೊಟ್ಟೆಗಳು ವೃದ್ಧಿಸುತ್ತ ಹೋಗುತ್ತವೆ ಅವು ಜೀವದ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುತ್ತವೆ. ಅದೇ ಪ್ರಕಾರ ಏಕೇಂದ್ರಿಯ ಜೀವಗಳನ್ನು ತಿಳಿಯುವುದು.

**ಭಾವಾರ್ಥ :-** ಯಾವ ರೀತಿಯಿಂದ ಮೊಟ್ಟೆಯಲ್ಲಿ ಜೀವವು ವೃದ್ಧಿಸುತ್ತದೆ, ಆದರೆ ಆ ಮೊಟ್ಟೆಯಲ್ಲಿ ಶ್ವಾಸವು ಕಂಡುಬರದಿದ್ದರೂ ಕೂಡ ಮೊಟ್ಟೆಯು ವೃದ್ಧಿಸುತ್ತದೆ. ಅದರಿಂದ ಅದರೊಳಗೆ ಜೀವವು ಇರಲೇಬೇಕೆಂಬುದು ತಿಳಿದುಬರುತ್ತದೆ ಮತ್ತು ಯಾವ ರೀತಿಯಿಂದ ವನಸ್ಪತಿಯಲ್ಲಿ ಮಾವು-ಬೇವು ಮೊದಲಾದವು ವೃದ್ಧಿಸುತ್ತಿರುವುದು ಕಂಡು ಬರುತ್ತದೆ ಅವುಗಳಲ್ಲಿ ಅಂಕುರೋತ್ಪತ್ತಿಯು ಆಗುತ್ತದೆ, ಅದು ಒಳಗೆ ಜೀವದ ಇರುವಿಕೆಯನ್ನು ತಿಳಿಸುತ್ತದೆ. ಅದೇ ರೀತಿಯಿಂದ ಸಮಸ್ತ ಸ್ಥಾವರ ಜೀವಗಳಿಗೆ ಜೀವತ್ವ ಗುಣವಿರುವುದು ನಿಜವಿದೆ. ಪಾಷಾಣದ ಗಣೆಯು ವೃದ್ಧಿಸುತ್ತಿರುವುದು ಕಂಡುಬರುತ್ತದೆ ಅದರಲ್ಲಿ ಜೀವಗಳು ಉತ್ಪತ್ತಿಯಾಗುತ್ತಿರುತ್ತವೆ ಮತ್ತು ಅವುಗಳ ನಿಮಿತ್ತದಿಂದ ಶರೀರವು ವೃದ್ಧಿಯಾಗುತ್ತಿರುವಂತೆ ಕಂಡುಬರುತ್ತದೆ.

ಯಾವ ರೀತಿಯಿಂದ ಗರ್ಭದಲ್ಲಿ ವಾಸಿಸುವ ಜೀವವು ಮೇಲಿನಿಂದ ತಿಳಿದುಬರುವುದಿಲ್ಲ, ಆದರೆ ಹೇಗೆ ಗರ್ಭವು ವೃದ್ಧಿಸುತ್ತ ಹೋಗುತ್ತದೆ ಹಾಗೆ ಜೀವವು ಆಂತರ್ಯದಲ್ಲಿ ದೊಡ್ಡದಾಗುತ್ತ ಹೋಗುತ್ತದೆ ಮತ್ತು ಹೇಗೆ ಮೂರ್ಛೆಗೆ ಪ್ರಾಪ್ತನಾದ ಮನುಷ್ಯನು ಮೃತಕ ಸದೃಶ ಕಂಡುಬರುತ್ತಾನೆ, ಆದರೆ ಆಂತರ್ಯದಲ್ಲಿ ಜೀವವು ಇದ್ದೇ ಇರುತ್ತದೆ. ಅದೇ ರೀತಿಯಾಗಿ ಐದು ಪ್ರಕಾರದ ಸ್ಥಾವರ ಜೀವಗಳಲ್ಲಿ ಮೇಲಿನಿಂದ ನೋಡಿದರೆ ಜೀವದ ಚೇಷ್ಟೆಯು ಕಂಡುಬರುವುದಿಲ್ಲ. ಆದರೆ ಆಗಮದಿಂದ ಹಾಗೂ ಆ ಜೀವಗಳ ಪ್ರಫುಲ್ಲತೆ ಮೊದಲಾದ ಅವಸ್ಥೆಗಳ ಮೇಲಿಂದ ಚೈತನ್ಯದ ಅಸ್ತಿತ್ವವು ತಿಳಿದುಬರುತ್ತದೆ.

ಜೀವವು ಪರಮಾರ್ಥದಿಂದ ಸ್ವಾಧೀನವೂ, ಅನಂತಜ್ಞಾನ ಮತ್ತು ಸೌಖ್ಯಸಹಿತವಾಗಿದ್ದರೂ ಕೂಡ ಅಜ್ಞಾನದಿಂದ ಪರಾಧೀನವೂ, ಇಂದ್ರಿಯ ಸುಖದಲ್ಲಿ ಆಸಕ್ತವೂ ಆಗಿ ಯಾವ ಕರ್ಮಬಂಧನ ಮಾಡಿಕೊಳ್ಳುತ್ತದೆ ಅದರ ನಿಮಿತ್ತದಿಂದ ತನ್ನನ್ನು ಏಕೇಂದ್ರಿಯ ಮತ್ತು ದುಃಖಿಯನ್ನಾಗಿ ಮಾಡಿಕೊಳ್ಳುತ್ತದೆಯೆಂಬ ತಾತ್ಪರ್ಯವನ್ನು ಇಲ್ಲಿ ಗ್ರಹಣ ಮಾಡಬೇಕಾಗುವುದು.

**ಸಂಬುಕ್ಕಮಾದುವಾಹಾ ಸಂಖಾ ಸಿಪ್ಪೀ ಅಪಾದಗಾ ಯಾ ಕಿಮಿ ।**
**ಜಾಣಂತಿ ರಸಂ ಫಾಸಂ ಜೇ ತೇ ಬೇಇಂದಿಯಾ ಜೀವಾ ॥೧೧೪॥**

**ಬಸವನಹುಳ, ಮಾತೃವಾಹ, ಶಂಕ, ಸಿಂಪು ಮೇಣ್ಕಾಲಿಲ್ಲದ ಕ್ರಿಮಿಗಳಿವು ।**
**ರಸಮೇಣ್ ಸ್ಪರ್ಶವನು ತಿಳಿಯುವುದರಿಂದವು ದ್ವೀಂದ್ರಿಯ ಜೀವಗಳಿವೆ ॥೧೧೪॥**

ದ್ವೀಂದ್ರಿಯ ಜೀವಗಳ ಭೇದ ತಿಳಿಸಿಕೊಟ್ಟಿದ್ದಾರೆ. ಚಿಕ್ಕ ಶಂಕ, ಸಿಂಪು, ಮಾತೃವಾಹ, ಕ್ರಿಮಿ, ಬಸವನ ಹುಳು ಮೊದಲಾದ ಅನೇಕ ಪ್ರಕಾರದ ದ್ವೀಂದ್ರಿಯ ಜೀವಗಳಿವೆ ಅವು ನಾಲಗೆಯಿಂದ ರಸ ಮತ್ತು ಸ್ಪರ್ಶದಿಂದ ಶೀತ-ಉಷ್ಣಗಳನ್ನು ತಿಳಿಯುತ್ತಿರುವುದರಿಂದ ಆ ಜೀವಗಳನ್ನು ದ್ವೀಂದ್ರಿಯಗಳೆಂದು ತಿಳಿಯುವುದು.

ದ್ವೀಂದ್ರಿಯತನವು ಹೇಗೆ ದೊರಕುತ್ತದೆಯೆಂಬುದನ್ನು ಶ್ರೀ ಜಯಸೇನಾಚಾರ್ಯದೇವರ ಟೀಕೆಯಲ್ಲಿ ಹೀಗೆ ಹೇಳುತ್ತಾರೆ - ಆತ್ಮನ ಸ್ವಭಾವವಂತೂ ಇಂದ್ರಿಯಗಳಿಂದ ಭಿನ್ನವಿದೆ ಮತ್ತು ಭಾವ ಇಂದ್ರಿಯದ ಪ್ರಕಟತೆಯಷ್ಟು ಕೂಡ ಆತ್ಮನಿಲ್ಲ ಮತ್ತು ತನ್ನ ಜ್ಞಾನ-ದರ್ಶನ ಗುಣಗಳಿಂದ ಅಭಿನ್ನನಿದ್ದಾನೆ-ಅಭೇದನಿದ್ದಾನೆ. ನಾನು ಶುದ್ಧ ಚಿದಾನಂದ ಆತ್ಮನಿದ್ದೇನೆ, ಜ್ಞಾತಾ-ದೃಷ್ಟಾ ಇದ್ದೇನೆಂಬ ಭಾವನೆಯು ಯಾರಿಗೆ ಇಲ್ಲ ಮತ್ತು ಸ್ಪರ್ಶದ ಭೋಗದಲ್ಲಿ ಮತ್ತು ರಸದ ಗೃದ್ಧಿತನದಲ್ಲಿ ಸುಖವಿದೆಯೆಂದು ಮನ್ನಿಸಿ ರಾಗ-ದ್ವೇಷಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ-ನಿಂತುಕೊಂಡಿದ್ದಾರೆ. ಅವರು ದ್ವೀಂದ್ರಿಯ ನಾಮಕರ್ಮವನ್ನು ಕಟ್ಟಿಕೊಳ್ಳುತ್ತಾರೆ, ಅದರ ನಿಮಿತ್ತದಿಂದಲೇ ದ್ವೀಂದ್ರಿಯದ ಶರೀರವು ದೊರಕುತ್ತದೆ. ವರ್ತಮಾನದಲ್ಲಿ ಯಾವ ಶರೀರ ಮತ್ತು ಸಂಯೋಗಗಳು ಕಂಡುಬರುತ್ತವೆ ಅವು ಸ್ವಯಂ ತಾವು ಪೂರ್ವದಲ್ಲಿ ಮಾಡಿದ ಅಪರಾಧ ಮತ್ತು ಅದರ ನಿಮಿತ್ತದಿಂದ ಕಟ್ಟಿದ ಕರ್ಮ, ಆ ಕರ್ಮದ ನಿಮಿತ್ತದಿಂದ ಇದೆಲ್ಲ ವಿಚಿತ್ರತೆಯು ಕಂಡು ಬರುತ್ತದೆ. ಇಲ್ಲಿ ಏಕೇಂದ್ರಿಯ, ದ್ವೀಂದ್ರಿಯ ಜೀವಗಳನ್ನು ಕೊಲ್ಲುವ ಅಥವಾ ಕಾಯುವ ಮಾತು ಇಲ್ಲ. ಶುದ್ಧ ಚೈತನ್ಯವನ್ನು ಮರೆತುಹೋದರೆ ದ್ವೀಂದ್ರಿಯತನವು ದೊರಕುವುದು. ಆದುದರಿಂದ ಈಗ ದ್ವೀಂದ್ರಿಯತನವನ್ನು ತಿಳಿದುಕೊಳ್ಳುವ ಫಲವೆಂದರೆ ಶುದ್ಧಚೈತನ್ಯ ಸ್ವಭಾವದಲ್ಲಿ ಶ್ರದ್ಧೆ-ಜ್ಞಾನ ಮಾಡುವುದಿದೆ.

ಸ್ಪರ್ಶನೇಂದ್ರಿಯ ಮತ್ತು ರಸನೇಂದ್ರಿಯ ಎಂದರೆ ಇವೆರಡು ಭಾವೇಂದ್ರಿಯಗಳ ಆವರಣದ ಕ್ಷಯೋಪಶಮದ ಕಾರಣವಾಗಿ ಹಾಗೂ ಉಳಿದ ಮೂರು ಭಾವೇಂದ್ರಿಯಗಳ ಆವರಣದ ಉದಯ ಮತ್ತು ಮನಸ್ಸಿನ ಎಂದರೆ ಭಾವಮನದ ಆವರಣದ ಉದಯವಿರುವುದರಿಂದ ಸ್ಪರ್ಶ ಮತ್ತು ರಸವನ್ನು ತಿಳಿಯುವಂಥ ದ್ವೀಂದ್ರಿಯ ಜೀವಗಳಾಗುತ್ತವೆ.

**ಜೂಗಾಗುಂಭೀಮಕ್ಕಣಪಿಪೀಲಿಯಾ ವಿಚ್ಛುಯಾದಿಯಾ ಕೀಡಾ ।**
**ಜಾಣಂತಿ ರಸಂ ಫಾಸಂ ಗಂಧಂ ತೇಇಂದಿಯಾ ಜೀವಾ ॥೧೧೫॥**

**ಹೇನು, ಕೆಂಪು ಇರುವೆ, ತಗಣೆ, ಇರುವೆ ಮೇಣ್‌ಚೇಳು ಮೊದಲಾದ ಪ್ರಾಣಿಗಳು ।**
**ತಾನೆ ರಸ, ಗಂಧ ಮೇಣ್ ಸ್ಪರ್ಶವನು ತಿಳಿಯುವುದರಿಂದವು ತ್ರೀಂದ್ರಿಯವಿವೆ ॥೧೧೫॥**

ಹೇನು, ತಿಗಣೆ, ಇರುವೆ, ಚೇಳು ಮೊದಲಾದ ಜೀವಗಳಿವೆ. ಅವು ಸ್ಪರ್ಶ, ರಸ, ಗಂಧವೆಂದು ಮೂರು ವಿಷಯಗಳನ್ನು ತಿಳಿದುಕೊಳ್ಳುವುದರಿಂದ ಆ ಜೀವಗಳನ್ನು ಸಿದ್ಧಾಂತದಲ್ಲಿ ತ್ರೀಂದ್ರಿಯ ಜೀವಿಗಳೆಂದು ಹೇಳಿದ್ದಾರೆ.

**ಭಾವಾರ್ಥ :-** ಈ ಸಂಸಾರೀ ಜೀವಗಳಿಗೆ ಸ್ಪರ್ಶನ, ರಸನ, ಘ್ರಾಣವೆಂದು ಈ ಮೂರು ಇಂದ್ರಿಯಗಳ

ಪ್ರಕಟತೆಯಿದೆ. ಮತ್ತು ಉಳಿದ ಎರಡು ಇಂದ್ರಿಯಗಳ ಆವರಣವಿರುವುದರಿಂದ ಅವನ್ನು ಮೂರು ಇಂದ್ರಿಯಗಳುಳ್ಳ ಜೀವಗಳೆಂದು ಹೇಳಲಾಗುತ್ತದೆ.

ಶ್ರೀ ಜಯಸೇನಾಚಾರ್ಯದೇವರು ಸಂಸ್ಕೃತ ಟೀಕೆಯಲ್ಲಿ ತ್ರೀಂದ್ರಿಯತನವು ಏಕೆ ಪ್ರಾಪ್ತವಾಗುತ್ತದೆ ಎಂಬುದನ್ನು ತಿಳಿಸಿಕೊಡುತ್ತಾರೆ ಆತ್ಮನ ಸ್ವಭಾವವು ವಿಶುದ್ಧ ಜ್ಞಾನ-ದರ್ಶನಮಯವಿದ್ದು ಅವನ ಶ್ರದ್ಧೆ, ಜ್ಞಾನ ಮತ್ತು ಲೀನತೆಯಿಂದ ವೀತರಾಗ ಪರಮಾನಂದ ಲಕ್ಷಣವುಳ್ಳ ಸುಖಾಮೃತ ರಸದ ಅನುಭವವು ಉತ್ಪನ್ನವಾಗುತ್ತದೆ. ಆದರೆ ಯಾರಿಗೆ ಅಂಥ ಶುದ್ಧ ಆತ್ಮನ ಜ್ಞಾನವಿಲ್ಲ-ಪ್ರಜ್ಞೆಯಿಲ್ಲ ಮತ್ತು ಸ್ಪರ್ಶ, ರಸ, ಗಂಧದ ವಿಷಯಗಳಲ್ಲಿ ಲೋಲುಪಿಯಾಗಿರುತ್ತಾರೆ, ಆ ಜೀವರುಗಳು ವೀತರಾಗ ಆನಂದದಿಂದ ಚ್ಯುತರಾಗುತ್ತಾರೆ - ಎಂದರೆ ಅವರುಗಳಿಗೆ ಆ ವೀತರಾಗ ಸುಖದ ಅನುಭವವು ಆಗುವುದಿಲ್ಲ.

ಸ್ಪರ್ಶನೇಂದ್ರಿಯ, ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯ ಆವರಣದ ಕ್ಷಯೋಪಶಮದ ಕಾರಣ ಹಾಗೂ ಉಳಿದ ಇಂದ್ರಿಯಗಳ ಆವರಣದ ಉದಯ ಮತ್ತು ಮನಸ್ಸಿನ ಆವರಣದ ಉದಯವಿರುವುದರಿಂದ ಸ್ಪರ್ಶ, ರಸ, ಗಂಧವನ್ನು ತಿಳಿಯುವಂಥ ಜೀವರುಗಳು ಮನಸ್ಸಿಲ್ಲದ ತ್ರೀಂದ್ರಿಯ ಜೀವಗಳಿವೆ.

**ಉದ್ದಂಸಮಸಯಮಕ್ಖಿಯ ಮಧುಕರಿ ಭಮರಾ ಪಯಂಗಮಾದೀಯಾ ।**
**ರೂವಂ ರಸಂ ಚ ಗಂಧಂ ಫಾಸಂ ಪುಣ ತೇ ವಿಜಾಣಂತಿ ॥೧೧೬॥**

**ಯಾವ ದೋಮೆ, ಸೊಳ್ಳೆ, ನೊಣ, ಜೇನುನೊಣ, ದುಂಬಿಮೇಣ್ದೀಪದಹುಳ ಇತ್ಯಾದಿ ।**
**ಜೀವಗಳಿವು ರೂಪ, ರಸ, ಗಂಧವದರಂತೆ ಸ್ಪರ್ಶವನು ತಿಳಿಯುವವು ॥೧೧೬॥**

ದೋಮೆ, ಸೊಳ್ಳೆ, ನೊಣ, ಜೇನುನೊಣ, ದುಂಬಿ, ಪತಂಗದ ಹುಳು ಇತ್ಯಾದಿ ಜೀವಗಳು ರೂಪು, ರಸ, ಗಂಧ ಮತ್ತು ಸ್ಪರ್ಶವನ್ನು ತಿಳಿಯುವುದರಿಂದ ಅವನ್ನು ನಿಶ್ಚಯದಿಂದ ಚತುರಿಂದ್ರಿಯ ಜೀವಗಳೆಂದು ತಿಳಿಯುವುದು.

**ಭಾವಾರ್ಥ :-** ಯಾವಾಗ ಆ ಸಂಸಾರೀ ಜೀವರುಗಳಿಗೆ ಸ್ಪರ್ಶ, ರಸ, ಗಂಧ, ವರ್ಣವೆಂಬ ಈ ನಾಲ್ಕು ಇಂದ್ರಿಯಗಳ ಆವರಣರೂಪ ಕರ್ಮದ ಕ್ಷಯೋಪಶಮವಿರುತ್ತದೆ ಮತ್ತು ಕರ್ಣೇಂದ್ರಿಯ ಹಾಗೂ ಮನಸ್ಸಿನ ಆವರಣದ ಉದಯವಿರುತ್ತದೆ ಆಗ ಸ್ಪರ್ಶ, ರಸ, ಗಂಧ, ವರ್ಣವೆಂದು ಈ ನಾಲ್ಕು ವಿಷಯಗಳನ್ನು ತಿಳಿದುಕೊಳ್ಳುತ್ತಿರುತ್ತವೆ. ಎಂದರೆ ನಾಲ್ಕು ಇಂದ್ರಿಯ ಸಹಿತವಿರುತ್ತವೆ ಮತ್ತು ಕರ್ಣ ಹಾಗೂ ಮನಸ್ಸಿನಿಂದ ರಹಿತವಿರುತ್ತವೆ.

ಜೀವದ ಪ್ರಕಟತೆಯ ಕಾರಣದಿಂದ ಇಂದ್ರಿಯಗಳ ಪರಮಾಣುಗಳು ಬರಬೇಕಾಗುತ್ತದೆಯೆಂಬ ಪರಾಧೀನತೆ-ಯಿಲ್ಲ. ಆತ್ಮನು ಜಡ ಇಂದ್ರಿಯಗಳ ಕರ್ತೃವಿಲ್ಲ. ಒಂದೊಂದು ಇಂದ್ರಿಯಗಳ ಪ್ರಕಟತೆಯು ವೃದ್ಧಿಸುತ್ತ ಹೋದಹಾಗೆ ಒಂದೊಂದು ಅಧಿಕರಣವು ನಿಮಿತ್ತರೂಪದಿಂದ ವೃದ್ಧಿಸುತ್ತ ಹೋಗುತ್ತದೆಯೆಂಬ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡಲಾಗಿದೆ. ಆದರೆ ಯಾವುದೂ ಯಾವುದರ ಕರ್ತೃವಿಲ್ಲ.

ಶ್ರೀ ಜಯಸೇನಾಚಾರ್ಯದೇವರು ಟೀಕೆಯಲ್ಲಿ ಹೇಳಿರುವುದೇನೆಂದರೆ ಜೀವವು ತನ್ನ ಶುದ್ಧ ಚೈತನ್ಯ ಸ್ವಭಾವದ ಪರಿಚಯ ಮಾಡಿಕೊಂಡು ನಿರ್ವಿಕಾರ ಸ್ವ-ಸಂವೇದನ ಜ್ಞಾನ ಭಾವನೆಯಿಂದ ಸುಖ ಸುಧಾರಸ ಪಾನವನ್ನು ಉತ್ಪನ್ನಮಾಡಿಕೊಳ್ಳಬೇಕಾಗುವುದು. ಆದರೆ ಆತ್ಮನ ಜ್ಞಾನವಿಲ್ಲದಿರುವುದರಿಂದ ಆ ಜೀವರುಗಳಿಗೆ ಇಂಥ ಸುಖ ಸುಧಾರಸದ ಪಾನವು ದೊರಕುವುದಿಲ್ಲ ಮತ್ತು ಸ್ಪರ್ಶ, ರಸ, ಗಂಧ ಹಾಗೂ ವರ್ಣ ಮೊದಲಾದವುಗಳ ವಿಷಯದಲ್ಲಿ

ಸುಖವಿದೆಯೆಂದು ಮನ್ನಿಸಿ ಆ ವಿಕಾರೀ ಸುಖವನ್ನೇ ಭೋಗಿಸುತ್ತಿರುವುದರಿಂದ ಚತುರಿಂದ್ರಿಯ ನಾಮಕರ್ಮದ ಉಪಾರ್ಜನೆ ಮಾಡುತ್ತವೆ ಮತ್ತು ಅದರಿಂದ ಆ ರೂಪವಾಗಿ ಉತ್ಪನ್ನವಾಗುತ್ತವೆ.

ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ ಮತ್ತು ಚಕ್ಷುರಿಂದ್ರಿಯದ ಆವರಣದ ಕ್ಷಯೋಪಶಮದ ಕಾರಣ ಹಾಗೂ ಶ್ರೋತೇಂದ್ರಿಯದ ಆವರಣದ ಉದಯ ಮತ್ತು ಮನಸ್ಸಿನ ಆವರಣದ ಉದಯವಿರುವುದರಿಂದ ಸ್ಪರ್ಶ, ರಸ, ಗಂಧ ಮತ್ತು ವರ್ಣವನ್ನು ತಿಳಿಯುವಂಥ ಜೀವಗಳು ಮನಸ್ಸಿಲ್ಲದ ಚತುರಿಂದ್ರಿಯ ಜೀವಗಳಿವೆ.

**ಸುರಣರಣಾರಯತಿರಿಯಾ ವಣ್ಣರಸಪ್ಫಾಸಗಂಧಸದ್ದಣ್ಹೂ ।**
**ಜಲಚರಥಲಚರಖಚರಾ ಬಲಿಯಾ ಪಂಚೇಂದಿಯಾ ಜೀವಾ ।।೧೧೭।।**

**ಆ ವರ್ಣ, ರಸ, ಗಂಧ, ಸ್ಪರ್ಶ ಮೇಣ್‌ಶಬ್ದ ತಿಳಿವ ಸುರ-ನರ-ನಾರಕ-ತಿರ್ಯಂಚ ।**
**ಅವು ಜಲಚರ, ಭೂಚರ, ಖೇಚರವಿವೆ-ಬಲಿಷ್ಠ ಪಂಚೇಂದ್ರಿ ಜೀವಗಳಿವೆ ।।೧೧೭।।**

ಆ ಜೀವದ ವಿಕಾಸವು ವೃದ್ಧಿಸುತ್ತ ಪಂಚೇಂದ್ರಿಯವಾಗುತ್ತದೆ. ದೇವ, ಮನುಷ್ಯ, ನಾರಕೀ ಮತ್ತು ತಿರ್ಯಂಚ ಗತಿಯ ಜೀವಗಳಿವೆ ಅವು ಪಂಚೇಂದ್ರಿಯ ಜೀವಗಳಿವೆ. ಅವುಗಳಲ್ಲಿ ಮತ್ಸ್ಯ ಮೊದಲಾದ ಜಲಚರಗಳಿವೆ. ಹಸು, ಎತ್ತು, ಎಮ್ಮೆ ಮೊದಲಾದ ಭೂಚರಗಳಿವೆ ಮತ್ತು ಪಕ್ಷಿಗಳು ಆಕಾಶಗಾಮಿಗಳಿವೆ. ಆ ಪಂಚೇಂದ್ರಿಯ ಜೀವಗಳಿಗೆ ಸ್ಪರ್ಶ, ರಸ, ಗಂಧ, ವರ್ಣ ಮತ್ತು ಶಬ್ದವೆಂದು ಈ ಐದು ಇಂದ್ರಿಯಗಳ ಪ್ರಕಟತೆಯಿದೆ. ತಮ್ಮ ಕಾರಣದಿಂದ ಜ್ಞಾನದ ವಿಕಾಸವು ಪಂಚೇಂದ್ರಿಯದ್ದಾಗಿದೆ. ಆ ಇಂದ್ರಿಯಗಳಿಂದ ಮತ್ತು ಮನಸ್ಸಿನ ಮೂಲಕ ಪರ ಪದಾರ್ಥಗಳು ತಿಳಿದುಬರುತ್ತವೆ, ಆದರೆ ಆತ್ಮನು ತಿಳಿದುಬರುವುದಿಲ್ಲ. ಯಾವುದೇ ಇಂದ್ರಿಯದ ಮೂಲಕ ಆತ್ಮನು ತಿಳಿದುಬರುವುದಿಲ್ಲ, ಆದರೆ ಆತ್ಮನು ಅತೀಂದ್ರಿಯ ಸ್ವಸಂವೇದನದ ಮೂಲಕ ತಿಳಿದುಬರುವಂತಿದ್ದಾನೆ.

**ಭಾವಾರ್ಥ :-** ಯಾವಾಗ ಸಂಸಾರೀ ಜೀವಗಳಿಗೆ ಐದು ಇಂದ್ರಿಯಗಳ ಆವರಣರೂಪ ಕರ್ಮದ ಕ್ಷಯೋಪಶಮವಿರುತ್ತದೆ ಆಗ ಐದೂ ವಿಷಯಗಳನ್ನು ತಿಳಿಯುತ್ತವೆ. ಪಂಚೇಂದ್ರಿಯ ಜೀವಗಳು ಒಂದು ಸಂಜ್ಞೀ ಮತ್ತು ಇನ್ನೊಂದು ಅಸಂಜ್ಞೀ ಎಂದು ಎರಡು ಪ್ರಕಾರದ್ದಿವೆ. ಯಾವುದಕ್ಕೆ ಮನ ಆವರಣ ಕರ್ಮದ ಉದಯವಿದೆ ಅದು ಮನರಹಿತ ಅಸಂಜ್ಞಿಯಿದೆ ಮತ್ತು ಯಾವುದಕ್ಕೆ ಮನ ಆವರಣದ ಕ್ಷಯೋಪಶಮವಿರುತ್ತದೆ ಅದು ಮನಸಹಿತ ಸಂಜ್ಞೀ ಪಂಚೇಂದ್ರಿಯ ಜೀವವಿವೆ. ತಿರ್ಯಂಚಗತಿಯಲ್ಲಿ ಮನಸಹಿತ ಅಥವಾ ಮನರಹಿತವಿರುತ್ತವೆ.

ಶ್ರೀ ಜಯಸೇನಾಚಾರ್ಯದೇವರ ಟೀಕೆಯಲ್ಲಿ ತಿಳಿಸಿರುವುದೇನೆಂದರೆ ಆತ್ಮನ ಸ್ವಭಾವವು ಅತೀಂದ್ರಿಯವಿದೆ. ಅಂಥ ನಿರ್ದೋಷ ಪರಮಾತ್ಮನ ಧ್ಯಾನದಿಂದ ನಿರ್ವಿಕಾರ ತಾತ್ತ್ವಿಕ ಆನಂದ ಲಕ್ಷಣವಿರುವಂಥ ಸುಖವು ಉತ್ಪನ್ನವಾಗುತ್ತದೆ. ಆದರೆ ಯಾರಿಗೆ ಆ ಪ್ರಕಾರದ ಜ್ಞಾನವಿಲ್ಲ ಮತ್ತು ಐದು ಇಂದ್ರಿಯಗಳ ವಿಷಯಗಳಲ್ಲಿ ಸುಖವನ್ನು ಮನ್ನಿಸುತ್ತಾರೆ ಅದು ತಾತ್ತ್ವಿಕ ಸುಖವಲ್ಲ. ಜಗತ್ತಿನ ವಿಷಯಗಳಲ್ಲಿ ಆ ಸುಖದ ಕಲ್ಪನೆ ಮಾಡಲಾಗುತ್ತದೆ ಮತ್ತು ಐದು ಇಂದ್ರಿಯಗಳ ವಿಷಯಗಳಲ್ಲಿ ಲೀನರಾಗಿ ಬಹಿರ್ಮುಖರಾಗಿ ಒಳಗಿನ ಸತ್ತಾವನ್ನು ಮರೆತು ಹೋಗುತ್ತಾರೆ. ಅದರಿಂದ ಪಂಚೇಂದ್ರಿಯ ಜಾತಿ ನಾಮಕರ್ಮದ ಉಪಾರ್ಜನೆ ಮಾಡುವುದರಿಂದ ಪಂಚೇಂದ್ರಿಯರಾಗಿ ಜನ್ಮವೆತ್ತುತ್ತಾರೆ.

ಯಾವ ಪಂಚೇಂದ್ರಿಯ ಸಂಜ್ಞೀ ಜೀವಗಳು ಆತ್ಮನ ಜ್ಞಾನಮಾಡಿಕೊಳ್ಳುತ್ತವೆ ಮತ್ತು ಕೇವಲೀ ಭಗವಂತರು ಹೇಳಿದ ಆರು ದ್ರವ್ಯ ಮತ್ತು ಒಂಭತ್ತು ತತ್ತ್ವಗಳ ಪರಿಚಯ ಮಾಡಿಕೊಳ್ಳುತ್ತಾರೆ ಅವರಿಗೆ ಸಮ್ಯಗ್ದರ್ಶನ ಮತ್ತು

ಸಮ್ಯಗ್ಜ್ಞಾನವು ಉತ್ಪನ್ನವಾಗುತ್ತದೆ. ಕೇವಲೀ ಭಗವಂತರು ಸ್ವ-ಪರ ಲೋಕಾಲೋಕವನ್ನು ಪ್ರತ್ಯಕ್ಷ ತಿಳಿಯುತ್ತಾರೆ ಮತ್ತು ಭಾವಶ್ರುತ ಜ್ಞಾನಿಗಳು ಪರೋಕ್ಷ ತಿಳಿಯುತ್ತಾರೆ, ಆದರೆ ಯಥಾರ್ಥ ತಿಳಿಯುತ್ತಾರೆ. ಮನವುಳ್ಳ ಪ್ರಾಣಿಯೂ ಆತ್ಮನ ಜ್ಞಾನ ಮಾಡಿಕೊಂಡು, ಸಮ್ಯಗ್ಜ್ಞಾನ ಪ್ರಕಟಪಡಿಸಿಕೊಂಡು ಕೇವಲಜ್ಞಾನ ಪ್ರಾಪ್ತಿಮಾಡಿಕೊಳ್ಳುವ ಸಾಧ್ಯತೆಯಿದೆ. ಇದನ್ನು ತಿಳಿಸಿಕೊಡುವ ಸಲುವಾಗಿ ಈ ಎಲ್ಲ ವಿಷಯವನ್ನು ತಿಳಿಸಲಾಗಿದೆ.

ಇದು ಜೀವ ಅಧಿಕಾರವಿದೆ. ಜೀವದ ಸ್ವಭಾವವು ಜ್ಞಾನ ಮತ್ತು ದರ್ಶನವಿದೆ. ಅದರ ಅಭಿರುಚಿಯನ್ನು ಬಿಟ್ಟುಕೊಟ್ಟು ಯಾವ ಜೀವವು ಸಂಯೋಗದ ಮತ್ತು ವಿಕಾರದ ಭಾವನೆ ಮಾಡುತ್ತದೆ ಅದು ನಾಮಕರ್ಮದ ಉಪಾರ್ಜನೆ ಮಾಡುತ್ತದೆ ಮತ್ತು ಅದರ ಕಾರಣದಿಂದ ಸಂಸಾರದಲ್ಲಿ ಜನ್ಮ-ಮರಣ ಹೊಂದುತ್ತದೆ.

**ದೇವಾ ಚಉಣ್ಣಿಕಾಯಾ ಮಣುಯಾ ಪುಣ ಕಮ್ಮಭೋಗಭೂಮೀಯಾ ।**
**ತಿರಿಯಾ ಬಹುಪ್ಪಯಾರಾ ಣೇರಇಯಾ ಪುಢವಿಭೇಯಗದಾ ॥೧೧೮॥**

**ಸುರ ನಾಲ್ಕು ಪ್ರಕಾರ ನರ ಕರ್ಮ ಭೂಮಿಜ ಭೋಗಭೂಮಿಜವೆಂದಿರ್ತೆರವಿವೆ ।**
**ತಿರಿಯಂಚ ಪಲತೆರ ನಾರಕಿಗಳದವುಗಳ ಪೃಥ್ವೀ ಭೇದದಷ್ಟಿವೆ ॥೧೧೮॥**

ದೇವಗತಿ ನಾಮಕರ್ಮದ ಉದಯದಿಂದ ದೇವ ಶರೀರವು ದೊರಕುತ್ತದೆ. ಅವರು ಎಲ್ಲಕ್ಕಿಂತ ಅಧಿಕ ಉತ್ಕೃಷ್ಟ ಭೋಗವನ್ನು ಭೋಗಿಸುತ್ತಾರೆ. ಆ ದೇವಗಳಲ್ಲಿ ಭವನವಾಸಿ, ವ್ಯಂತರವಾಸಿ, ಜ್ಯೋತಿಷಿವಾಸಿ ಮತ್ತು ವೈಮಾನಿಕವಾಸಿ ಎಂದು ನಾಲ್ಕು ಪ್ರಕಾರಗಳಿವೆ. ತಮ್ಮ ಆತ್ಮನು ಸಿದ್ಧ ಸಮಾನನಿದ್ದಾನೆ ನಾಲ್ಕು ಗತಿಗಳಿಂದ ವಿಲಕ್ಷಣ ಮತ್ತು ಚೈತನ್ಯ ಸ್ವಭಾವದಿಂದ ಪ್ರಾಪ್ತವಾದ ಅವನ ಲಕ್ಷಣವಿದೆ. ಇಂಥ ಸಿದ್ಧಗತಿಯ-ಆತ್ಮನ ಭಾವನೆಯನ್ನು ಯಾರು ಜ್ಞಾನ ಸಹಿತವಾಗಿ ಮಾಡುವುದಿಲ್ಲ ಅವರು ಚತುರ್ಗತಿ ನಾಮಕರ್ಮವನ್ನು ಕಟ್ಟಿಕೊಂಡು ಶುಭ ಭಾವ ಮಾಡಿರುವುದರ ಫಲಸ್ವರೂಪವಾಗಿ ದೇವರೂಪದಿಂದ ಉತ್ಪನ್ನರಾಗುತ್ತಾರೆ.

ಯಾವ ಜೀವರುಗಳು ತಮ್ಮ ಸ್ವಭಾವವನ್ನು ಮರೆತು ಮನುಷ್ಯಗತಿಗೆ ಯೋಗ್ಯವಿರುವಂಥ ಶುಭಭಾವವನ್ನು ಮಾಡುತ್ತಾರೆ ಅವರು ಮನುಷ್ಯರಾಗುತ್ತಾರೆ. ಕೆಲವು ಮನುಷ್ಯರು ಕರ್ಮ ಭೂಮಿಯಲ್ಲಿ ಉತ್ಪನ್ನರಾಗಿದ್ದರೆ ಮತ್ತೆ ಕೆಲವರು ಅಧಿಕ ಆಯುಷ್ಯವುಳ್ಳ ಭೋಗಭೂಮಿಯಲ್ಲಿ ಜನ್ಮವೆತ್ತಿದ್ದಾರೆ. ವರ್ತಮಾನದಲ್ಲಿ ದೊಡ್ಡ ಶ್ರೇಷ್ಠಿಗಳು ಮತ್ತು ಲಕ್ಷ್ಯಾಧೀಶರಾಗಿದ್ದಾರೆ ಅವರು ಉಪಾಧಿಭಾವವನ್ನು ಸೇವನೆ ಮಾಡಿ ಆಗಿದ್ದಾರೆ. ಆತ್ಮನ ಧರ್ಮದಿಂದ ಶ್ರೇಷ್ಠಿಗಳಾಗಿಲ್ಲ. ಆತ್ಮನ ಸ್ವಭಾವವು ಜ್ಞಾನಾನಂದಮಯವಿದೆ. ಅದರ ಮೂಲಕ ಉಪಾಧಿರಹಿತತೆಯಾಗುತ್ತದೆ, ಆದರೆ ಅದರ ಮೂಲಕವಾಗಿ ಪುಣ್ಯದ ಬಂಧವಾಗುವುದಿಲ್ಲ. ಸ್ವಭಾವವನ್ನು ಮರೆತು ಹೋಗುವುದರಿಂದ -ಉಪಾಧಿಭಾವದ ಕಾರಣದಿಂದ ಕರ್ಮದ ಬಂಧವಾಗುತ್ತದೆ.

ತಿರ್ಯಂಚಗತಿಯ ಜೀವವು ಏಕೇಂದ್ರಿಯದಿಂದ ಸಂಜ್ಞೀ ಪಂಚೇಂದ್ರಿಯ ತಿರ್ಯಂಚದವರೆಗಿರುತ್ತದೆ. ತಿರ್ಯಂಚದಲ್ಲಿ ಮನಸಹಿತ ಮತ್ತು ಮನರಹಿತವೆಂದು ಎರಡು ಪ್ರಕಾರವಿರುತ್ತವೆ. ಯಾವ ಜೀವವು ತನ್ನ ತ್ರಿಕಾಲೀ ಸ್ವಭಾವವನ್ನು ಮರೆತು ಕಪಟ, ಮಾಯಾಚಾರ, ದಂಭಗಳ ಸೇವನೆ ಮಾಡುತ್ತದೆ ಅದರಫಲದಲ್ಲಿ ತಿರ್ಯಂಚಗತಿಯನ್ನು ಪ್ರಾಪ್ತಮಾಡಿಕೊಂಡು ತಿರ್ಯಂಚರೂಪದಿಂದ ಅವತಾರ ಹೊಂದುತ್ತದೆ. ಮನುಷ್ಯನ ಶರೀರವು ನೇರ-ಸರಳವಾಗಿದ್ದರೆ ತಿರ್ಯಂಚದ ಶರೀರವು ಅಡ್ಡವಾಗಿದೆ. ಪೂರ್ವದಲ್ಲಿ ಮಾಯಾಚಾರ ಮಾಡಿರುವುದರ ಫಲದಲ್ಲಿ ಆ ಜೀವಗಳು ಅಡ್ಡ ಶರೀರವಿರುವಂಥ ತಿರ್ಯಂಚರೂಪದಿಂದ ಅವತರಿಸಿವೆ. ಯಾವ ಜಾತಿಯ ಭಾವ ಮಾಡಿರುತ್ತವೆ ಆ ಜಾತಿಯ ಫಲ

ದೊರಕುತ್ತದೆ. ನಿಜ ಕ್ರಿಯೆಯ ಫಲವು ನಿಜದಲ್ಲಿ ಬರುತ್ತದೆ. ಶುಭಾಶುಭ ಭಾವಗಳನ್ನು ಜೀವವು ತನ್ನ ಅಸಂಖ್ಯ ಪ್ರದೇಶಗಳಲ್ಲಿ ಮಾಡುತ್ತದೆ. ಅದರ ಫಲವು ತನ್ನ ಪರ್ಯಾಯದಲ್ಲಿ ಬರುತ್ತದೆ. ಅದರ ಫಲವು ಬಾಹ್ಯದ ಸಂಯೋಗಗಳಲ್ಲಿ ಬರುವುದಿಲ್ಲ. ಆದುದರಿಂದ ಮಾಯಾಚಾರದ ಹಾಗೂ ವಿಕಾರೀ ಪರ್ಯಾಯದ ಅಭಿರುಚಿಯನ್ನು ಬಿಟ್ಟುಕೊಡು ಮತ್ತು ಸ್ವಭಾವದ ಅಭಿರುಚಿ ಮಾಡೆಂದು ಇಲ್ಲಿ ಹೇಳುತ್ತಿದ್ದಾರೆ.

ನರಕದ ಎಷ್ಟು ಭೇದಗಳಿವೆ ಅಷ್ಟು ನರಕದ ಜೀವಗಳಿವೆ. ನರಕಗಳು ಏಳು ಇದ್ದರೆ ನರಕದ ಜೀವಗಳು ಕೂಡ ಏಳು ಪ್ರಕಾರದ್ದಿವೆ. ಯಾವ ಜೀವರುಗಳು ಮಾಂಸ ಭಕ್ಷಣೆ ಮಾಡುತ್ತಾರೆ, ಮದ್ಯ ಕುಡಿಯುತ್ತಾರೆ, ಬೇಟೆ ಮೊದಲಾದವುಗಳನ್ನು ಆಡುತ್ತಾರೆ ಅವರು ನರಕದಲ್ಲಿ ಹೋಗಿ ಹುಟ್ಟುತ್ತಾರೆ. ಅಲ್ಲಿ ಕೂಡ ತಮ್ಮ ಭಾವವನ್ನೇ ಭೋಗಿಸುತ್ತಾರೆ. ಕ್ಷೇತ್ರವಂತೂ ನಿಮಿತ್ತ ಮಾತ್ರವಿದೆ.

ಸ್ವಭಾವವನ್ನು ಹೊರತುಪಡಿಸಿ ಯಾವ ಭಾವವಾಗುತ್ತದೆ ಅದೆಲ್ಲವು ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡುವ ಭಾವವಿದೆ. ನನ್ನ ಹೊರತಾಗಿ ಇದರ ಕಾರ್ಯವಾಗುವುದಿಲ್ಲವೆಂದು ಮನ್ನಿಸುವಂಥ ಜೀವನು ಎದುರಿನ ಪದಾರ್ಥಗಳ ಸ್ವತಂತ್ರತೆಯನ್ನು ಮರೆತುಹೋಗುತ್ತಾನೆ. ಯಾವುದೇ ಪದಾರ್ಥವು ವರ್ತಮಾನ ಕಾರ್ಯವಿಲ್ಲದೆ ಇರುವುದಿಲ್ಲ. ಸಮಸ್ತ ಜಡ ಮತ್ತು ಚೇತನ ಪದಾರ್ಥಗಳು ಕಾರ್ಯಸಂಪನ್ನವಿವೆ ; ಆದಾಗ್ಯೂ ಅದರ ಕಾರ್ಯವು ನನ್ನ ಹೊರತಾಗಿ ಆಗುವುದಿಲ್ಲವೆಂದು ಮನ್ನಿಸಿ ತನ್ನ ಚೈತನ್ಯ ಸ್ವಭಾವವನ್ನು ಮರೆತು ಹೋಗುತ್ತಾನೆ ಮತ್ತು ರಾಗ ಹಾಗೂ ಅಹಂಕಾರದ ಭಾವನೆ ಮಾಡಿ ಚತುರ್ಗತಿಗಳಲ್ಲಿ ಅಂಡಲೆಯುತ್ತಾನೆ.

ಆತ್ಮನ ಹೊರತಾಗಿ ಬೇರೆ ತತ್ತ್ವವು ಇದೆಯೋ ಅಥವಾ ಇಲ್ಲವೋ ? ವಸ್ತುವಿದ್ದರೆ ಅದರ ಕಾರ್ಯವಿದೆಯೋ ಅಥವಾ ಇಲ್ಲವೋ ? ವಸ್ತುವು ಕಾರ್ಯವಿಲ್ಲದೆ ಇದೆಯೇನು ? ಕಾರ್ಯವಿಲ್ಲದೆಯೇ ಇದ್ದರೆ ಆ ವಸ್ತುವು ಕೂಟಸ್ಥವಾಗಿ ಬಿಡುತ್ತದೆ ಆದರೆ ಈ ಪ್ರಕಾರ ವಸ್ತುಸ್ವರೂಪವಿಲ್ಲ. ಆದುದರಿಂದ ಪರದಲ್ಲಿ ಮಾಡುವ ರೂಪದ ಅಹಂಕಾರವನ್ನು ಬಿಟ್ಟುಕೊಟ್ಟು ಜ್ಞಾತಾಸ್ವಭಾವದ ಅಭಿರುಚಿ ಮಾಡು. ಅಜ್ಞಾನಿಗಳು ಇಪ್ಪತ್ತಾನ್ಲುಕ್ಕು ಘಂಟೆ ಅಹಂಕಾರ ಮಾಡುತ್ತಾರೆ. ಶರೀರವು ಪರಮಾಣುಗಳ ಅವಸ್ಥೆಯಿದೆ. ಅದರ ಕಾರ್ಯವು ಅದರಿಂದಲೇ ಆಗುತ್ತದೆ. ಆ ಪರಮಾಣುಗಳು ಸ್ಥಿರ ಎಂದರೆ ಅಖಂಡವಾಗಿದ್ದುಕೊಂಡು ಬದಲಾಗುತ್ತಿರುತ್ತವೆ. ಅವನ್ನು ಜೀವನು ಬದಲಾವಣೆ ಮಾಡುತ್ತಾನೆಂಬುದು ಸಂಭವಿಸುವುದಿಲ್ಲ. ಜೀವನು ಪರತತ್ತ್ವದ ಕಾರ್ಯವನ್ನು ಮಾಡುವುದಿಲ್ಲ, ಮಾಡುವ ಸಾಧ್ಯತೆಯೂ ಇಲ್ಲ. ಆದಾಗ್ಯೂ ಅಜ್ಞಾನಿಗಳು ಒಂದು ಸಮಯ ಮಾತ್ರ ಕೂಡ ಪರದ ಅಹಂಕಾರವನ್ನು ಬಿಟ್ಟುಕೊಟ್ಟಿಲ್ಲ, ಬಿಟ್ಟುಕೊಡುವುದಿಲ್ಲ.

ತಮ್ಮ ಆತ್ಮನು ಸಿದ್ಧ ಸಮಾನ ಏಕರೂಪನಿದ್ದಾನೆ. ಅವನ ಭಾವನೆಯನ್ನು ಬಿಟ್ಟುಕೊಟ್ಟು ಅನೇಕತೆಯ ಭಾವನೆಯನ್ನು ಮಾಡುತ್ತಾನೆ. ಅವನು ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡುತ್ತಾನೆ. ಪ್ರತಿಯೊಂದು ದ್ರವ್ಯವು ತ್ರಿಕಾಲವಿದೆ, ಅದರ ಗುಣಗಳು ತ್ರಿಕಾಲವಿವೆ, ಅದರ ಕ್ಷೇತ್ರವು ತ್ರಿಕಾಲವಿದೆ. ಅದರ ಪರ್ಯಾಯ ಕಾಲವು ಒಂದು ಸಮಯ ಮಾತ್ರದ್ದಿದೆ. ಅದರ ಪರ್ಯಾಯವು ಅದರ ಕಾರ್ಯವಿದೆ. ಯಾವುದೇ ಕಾರ್ಯವಿಲ್ಲದ ತತ್ತ್ವವನ್ನು ಮನ್ನಿಸುತ್ತಿದ್ದರೆ ತತ್ತ್ವಗಳೇನು ಮಾಡುವವು ? ಅಜ್ಞಾನಿಗಳು ಇಪ್ಪತ್ತಾನ್ಲುಕ್ಕು ಗಂಟೆ ಧಾರಾವಾಹೀ ರೂಪದಿಂದ ಅಹಂಕಾರ ಮಾಡುತ್ತಾರೆ. ತಾವು ಸ್ವಯಂ ಜ್ಞಾನಸ್ವಭಾವಿಯಿದ್ದೇವೆಂಬ ಅಭಿರುಚಿಯನ್ನು ಮಾಡದಿರುವುದರಿಂದ ಕರ್ಮದ ಉಪಾರ್ಜನೆ ಮಾಡಿ ಸಂಸಾರದಲ್ಲಿ ಸುತ್ತುತ್ತಾರೆ. ನಗ್ನ ದಿಗಂಬರ ಮುನಿಗಳಾಗಿದ್ದರೂ ನಾನು ನಗ್ನವಾಗುವ ಸಾಧ್ಯತೆಯಿದೆ. ಪರದ್ರವ್ಯದ ಗ್ರಹಣ-ತ್ಯಾಗ ಮಾಡುವ ಸಾಧ್ಯತೆಯಿದೆಯೆಂಬ ಮನ್ನಣೆಯ ಕಾರಣದಿಂದ ಆ ಜೀವರುಗಳು ಮಿಥ್ಯಾದೃಷ್ಟಿಯಿದ್ದಾರೆ ಮತ್ತು ಮಹಾಭೋಗಿಗಳಿದ್ದಾರೆ, ನಾಲ್ಕು ಗತಿಗಳಲ್ಲಿ ಸುತ್ತುತ್ತಾರೆ. ಎಲ್ಲಿ ನಿಂತುಕೊಂಡಿದ್ದಾರೆ ಅಲ್ಲಿ ಪರದ ಕಾರಣದಿಂದ ಮತ್ತು ಸಂಯೋಗದ ಕಾರಣದಿಂದ ಕಾರ್ಯವಾಗುತ್ತದೆಯೆಂದು ಮನ್ನಿಸುತ್ತಿದ್ದಾರೆ. ಶುದ್ಧ

ಚಿದಾನಂದದ ಭಾವನೆಯನ್ನು ಮರೆತುಹೋಗಿ ಪುಣ್ಯ-ಪಾಪದ ಅಹಂಕಾರವನ್ನು ಮಾಡುತ್ತ, ಪರದ ಕಾರ್ಯ ನನ್ನಿಂದಲೇ ಆಗುತ್ತದೆಯೆಂದು ಮನ್ನಿಸುತ್ತ, ಸ್ವಭಾವವನ್ನು ಮರೆತುಹೋಗುತ್ತ ಕರ್ಮ ಕಟ್ಟಿಕೊಳ್ಳುತ್ತಾರೆ.

ಅಜ್ಞಾನೀ ಜೀವರುಗಳು ಪರದ ಕಾರ್ಯವನ್ನು ನಾನು ಮಾಡುವ ಸಾಧ್ಯತೆಯಿದೆಯೆಂದು ಮನ್ನಿಸುತ್ತಿದ್ದಾರೆ. ಅಂಗಡಿಯ, ಶರೀರದ, ಕುಟುಂಬ ಮೊದಲಾದ ಕಾರ್ಯವನ್ನು ನಾನು ಮಾಡುವ ಸಾಧ್ಯತೆಯಿದೆಯೆಂದು ಅಹಂಕಾರ ಮಾಡುತ್ತಾರೆ. ಸಂಯೋಗಗಳು ಮತ್ತು ಸಂಯೋಗೀ ಭಾವಗಳಿಂದ ರಹಿತವಾದ ಶುದ್ಧ ಸ್ವಭಾವವನ್ನು ಅವರು ತಿಳಿಯುವುದಿಲ್ಲ ಮತ್ತು ಅನೇಕ ಪ್ರಕಾರದ ಭಾವಗಳನ್ನು ಮಾಡಿ ಬೇರೆ ಬೇರೆ ಭವಗಳನ್ನು ಧಾರಣ ಮಾಡುತ್ತಾರೆ. ಕೆಲವರು ಮನುಷ್ಯರಿಂದ ದೇವರಾಗುತ್ತಾರೆ, ಕೆಲವರು ಮನುಷ್ಯರಿಂದ ಮನುಷ್ಯರಾಗುತ್ತಾರೆ, ತಿರ್ಯಂಚದಿಂದ ತಿರ್ಯಂಚವಾಗುತ್ತಾರೆ. ಹೀಗೆ ಅನೇಕ ಪ್ರಕಾರದ ವಿಚಿತ್ರವಾದ ಭವಗಳನ್ನು ಧಾರಣ ಮಾಡುತ್ತಾರೆ. ಏಕರೂಪವಾಗಿ ಇರುವುದಿಲ್ಲ. ಎಂಥ ಭಾವ ಮಾಡುತ್ತಾರೆ ಅಂಥ ಗತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಆಯುಗತಿನಾಮಕರ್ಮದ ಉದಯದಿಂದ ದೇವ ಮೊದಲಾದ ಪರ್ಯಾಯಗಳಾಗುತ್ತಿರುವುದರಿಂದ ಆ ಪರ್ಯಾಯಗಳನ್ನು ಅನಾತ್ಮ ಸ್ವರೂಪವೆಂದು ತಿಳಿಸಿಕೊಟ್ಟಿದ್ದಾರೆ -

**ಖೀಣೇ ಪುವ್ವಣಿಬದ್ಧೇ ಗದಿಣಾಮೇ ಆಉಸೇ ಯ ತೇ ವಿ ಖಲು ।**
**ಪಾಉಣ್ಣಂತಿ ಯ ಅಣ್ಣಂ ಗದಿಮಾಉಸ್ಸಂ ಸಲೇಸ್ಸವಸಾ ॥೧೧೯॥**

**ಯಾವ ಪೂರ್ವನಿಬದ್ಧ ಗತಿನಾಮ ಮೇಣಾಯುಕರ್ಮ ಕ್ಷೀಣವಾಗುವುದರಿಂದ ।**
**ಜೀವ ತನ್ನ ಲೇಶ್ಯಾವಶದಿಂದ ಬೇರೆಗತಿ ಮೇಣಾಯುಷ್ಯವನು ಪಡೆಯುವನು ॥೧೧೯॥**

ಪೂರ್ವ ಕಾಲದಲ್ಲಿ ಕಟ್ಟಿದ ಗತಿನಾಮಕರ್ಮ ಹಾಗೂ ಆಯುಕರ್ಮವು ಪೂರ್ಣವಾಗುವುದರಿಂದ ತನ್ನ ರಸವಿತ್ತು ಉದುರಿಹೋಗುತ್ತದೆ ಮತ್ತು ನಿಶ್ಚಯದಿಂದ ಆ ಜೀವವು ತನ್ನ ಕಷಾಯಗರ್ಭಿತ ಯೋಗಗಳ ಪ್ರವೃತ್ತಿರೂಪ ಲೇಶ್ಯೆಯ ಪ್ರಭಾವದಿಂದ ಅನ್ಯಗತಿ ಹಾಗೂ ಆಯುವನ್ನು ಪ್ರಾಪ್ತಮಾಡಿಕೊಳ್ಳುತ್ತದೆ. ಕಟ್ಟಿಗೆಯ ಜತೆಯಲ್ಲಿ ತೆಳುವಾದ ಕಾಗದ ಅಂಟಿಕೊಂಡಿದ್ದರೆ ಅದು ಬಿಟ್ಟುಹೋಗುವುದಿಲ್ಲ. ಅದೇ ಪ್ರಕಾರ ಆತ್ಮನಿಗೆ ಪರಗತಿಯಲ್ಲಿ ಹೋಗುವ ಸಲುವಾಗಿ ಕ್ರೋಧ, ಮಾನ, ಮಾಯೆ, ಲೋಭದ ಪರಿಣಾಮ ಸಹಿತ ಯೋಗಗಳ ಪ್ರವೃತ್ತಿಯು ಬೆಸುಗೆಯ ಸಮಾನವಿದೆ. ನಿಜವಾಗಿಯಂತೂ ಜೀವವು ತನ್ನ ಪರಿಣಾಮದ ಕಾರಣದಿಂದ ಬೇರೆ ಗತಿಯನ್ನು ಧಾರಣ ಮಾಡುತ್ತದೆ. ಕರ್ಮದ ಕಾರಣದಿಂದ ಬೇರೆ ಗತಿಯಲ್ಲಿ ಹೋಗುತ್ತದೆಯೆಂದು ಹೇಳುವುದು ಉಪಚಾರ ಮಾತ್ರವಿದೆ.

**ಭಾವಾರ್ಥ :-** ಜೀವಗಳಿಗೆ ಗತಿಯ ಮತ್ತು ಆಯುವಿನ ಬಂಧವು ಕ್ರೋಧ ಮೊದಲಾದ ಪರಿಣಾಮ ಮತ್ತು ಯೋಗದ ಪ್ರವೃತ್ತಿಯಿಂದ ಆಗುತ್ತದೆ. ಒಂದಾದ ನಂತರ ಒಂದು ಭವವು ಶೃಂಖಲೆಯ ಸಮಾನ ನಡೆದುಕೊಂಡು ಬರುತ್ತಿದೆ. ಯಾವ ಪ್ರಕಾರದ ಭಾವ ಮಾಡಲಾಗುತ್ತದೆ ಅದೇ ಪ್ರಕಾರದ ಭವವು ದೊರಕುತ್ತದೆ. ಮೊದಲಿನ ಆಯುವು ಕರಗಿ ಹೋಗುತ್ತದೆ ಮತ್ತು ನವೀನ ಆಯುವಿನ ಬಂಧವಾಗುತ್ತದೆ ಅದರಿಂದಲೇ ಸಂಸಾರ ಮಾರ್ಗವು ನಡೆಯುತ್ತ ಬರುತ್ತಿದೆ. ಅಜ್ಞಾನೀ ಜೀವರುಗಳು ಘೋರ ತಪಶ್ಚರ್ಯ ಮಾಡಿದರೂ ಕೂಡ ಅದು ಬಾಲತಪವಿದೆ-ಅಜ್ಞಾನ ತಪವಿದೆ, ದಾನ ಕೊಡಲಿ, ಉಪವಾಸ ಮಾಡಲಿ ಆದರೆ ನಾನು ಆಹಾರ ಪಾನೀಯಗಳ ತ್ಯಾಗ ಮಾಡುತ್ತೇನೆಂಬ ಮನ್ನಣೆಯ ಕಾರಣದಿಂದ ಅಜ್ಞಾನವು ಬಿಟ್ಟು ಹೋಗುವುದಿಲ್ಲ ಮತ್ತು ಒಂದು ಕೂಡ ಭವದ ಅಭಾವವಾಗುವುದಿಲ್ಲ. ಒಂದರ ನಂತರ ಒಂದು ಭವದಲ್ಲಿ ಮುಳುಗೇಳುತ್ತಲೇ ಇದ್ದಾನೆ. ಈ ಪ್ರಕಾರ ಅನಾದಿ ಕಾಲದಿಂದ ಅಜ್ಞಾನಿಯು

ಸಂಸಾರದಲ್ಲಿ ಸುತ್ತುತ್ತಲಿದ್ದಾನೆ.

ಆತ್ಮನ ಸ್ವರೂಪವಂತೂ ಕ್ರೋಧ, ಮಾನ, ಮಾಯೆ, ಲೋಭದಿಂದ ಹಾಗೂ ಲೇಶ್ಯೆಯಿಂದ ರಹಿತವಿದೆ ಮತ್ತು ಅನಂತಜ್ಞಾನ-ದರ್ಶನ-ಸುಖ-ವೀರ್ಯರೂಪ ಚತುಷ್ಟಯದಿಂದ ಅಭಿನ್ನವಿದೆ. ಅವನ ಭಾವನೆ ಭಾವಿಸಿದರೆ ಕಷಾಯವು ನಾಶವಾಗುವುದು, ಆದರೆ ಅವನ ಭಾವನೆ ಭಾವಿಸುವುದಿಲ್ಲ. ರಾಗ ಮತ್ತು ವ್ಯವಹಾರದ ಭಾವನೆ ಭಾವಿಸುತ್ತಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ ಮತ್ತು ಚತುರ್ಗತಿಗಳಲ್ಲಿ ಸಿಕ್ಕಿಕೊಂಡಿದ್ದಾನೆ. ಆ ಜೀವನು ಬೇಕಾದರೆ ಶುಕ್ಲಲೇಶ್ಯೆಯ ಪರಿಣಾಮ ಮಾಡಿದರೂ ಸಂಸಾರದಲ್ಲಿ ಬಿದ್ದುಕೊಂಡಿದ್ದಾನೆ. ಆರು ಪ್ರಕಾರದ ಲೇಶ್ಯೆಗಳಿವೆ. ಅವುಗಳಲ್ಲಿ ಕೃಷ್ಣ, ನೀಲ, ಕಾಪೋತವೆಂದು ಇವು ಮೂರು ಅಶುಭ ಲೇಶ್ಯೆಗಳಿವೆ. ಪೀತ, ಪದ್ಮ ಮತ್ತು ಶುಕ್ಲ ಇವು ಮೂರು ಶುಭ ಲೇಶ್ಯೆಗಳಿವೆ ತಾರತಮ್ಯತೆಯ ಅಪೇಕ್ಷೆಯಿಂದ ಇವು ಆರು ಪ್ರಕಾರಗಳಿವೆ. ಮೂರು ಅಶುಭ ಬಂಧದ ಕಾರಣವಿವೆ ಮತ್ತು ಮೂರು ಶುಭ ಬಂಧದ ಕಾರಣಗಳಿವೆ. ದಯೆ-ದಾನಾದಿಗಳ ಭಾವ ಮಾಡಿದರೆ ಶುಭದ ಬಂಧವಾಗುತ್ತದೆ ಮತ್ತು ಮಾನಾದಿಗಳ ಪರಿಣಾಮಗಳಿದ್ದರೆ ಅಶುಭದ ಬಂಧವಾಗುತ್ತದೆ. ಆತ್ಮನು ಜ್ಞಾನ-ದರ್ಶನಮಯನಿದ್ದಾನೆಂದು ಶ್ರದ್ಧೆ-ಜ್ಞಾನಮಾಡದಿರುವುದು ಮತ್ತು ಪುಣ್ಯದ ಭಾವನೆ ಮಾಡಿದರೆ ಸಿಕ್ಕಿಹಾಕಿಕೊಳ್ಳುತ್ತಾನೆ ಮತ್ತು ಸ್ವಭಾವದ ಭಾವನೆ ಮಾಡಿದರೆ ಕಷಾಯದ ನಾಶವಾಗಿ ಹೋಗುತ್ತದೆ.

ನಾವು ಪುಣ್ಯ ಮಾಡಿದರೆ ಆ ಪುಣ್ಯವೇ ಕ್ರಮದಿಂದ ಧರ್ಮರೂಪವಾಗಿ ಹೋಗುವುದೆಂದು ಕೆಲವರು ಅಜ್ಞಾನೀ ಜೀವರುಗಳು ಹೇಳುತ್ತಾರೆ ಅದು ಕೇವಲ ಭ್ರಮೆಯಿದೆ. ಹಿಂಸೆ, ಅಸತ್ಯ, ಕಳವು ಮೊದಲಾದವುಗಳ ಭಾವನೆಯು ಅಶುಭವಿದೆ ಮತ್ತು ದಯೆ-ದಾನಾದಿಗಳ ಭಾವವು ಶುಭವಿದೆ. ಅವೆರಡೂ ಭಾವಗಳು ವಿಕಾರವಿವೆ, ಅವುಗಳ ಭಾವ ಮಾಡುವುದು ಸಂಸಾರದಲ್ಲಿ ಸಿಕ್ಕಿಕೊಳ್ಳುವ ಭಾವವಿದೆ. ಆದರೆ ಶುಭಾಶುಭ ಭಾವಗಳಿಂದ ರಹಿತವಾದ ಶುದ್ಧ ಆತ್ಮನ ಭಾವನೆ ಮಾಡುವುದರಿಂದ ಕಷಾಯದ ನಾಶವಾಗುತ್ತದೆ. ಚಿದಾನಂದ ಭಗವಾನ ಆತ್ಮನ ಜ್ಞಾನವಿಲ್ಲದೆ-ಅರಿವಿಲ್ಲದೆ ಪರಿಭ್ರಮಣವು ನಿಂತು ಹೋಗುವುದಿಲ್ಲ. ಬೇರೆ ಯಾವ ಭಗವಂತನು ಸಂಸಾರದಿಂದ ಪಾರುಮಾಡುವುದಿಲ್ಲ. ತಮ್ಮ ಶಾಂತಿ ಮತ್ತು ಸುಖವು ಸ್ವಭಾವದಲ್ಲಿಯೇ ಇದೆ. ಪರದ ಕಾರಣದಿಂದ ಶಾಂತಿಯಾಗುವುದಿಲ್ಲ, ಪರದಲ್ಲಿ ಶಾಂತಿಯಿರುವುದಿಲ್ಲ. ಅದರಂತೆ ಪುಣ್ಯ-ಪಾಪದ ಭಾವನೆಯಲ್ಲಿ ಕೂಡ ಶಾಂತಿಯಿಲ್ಲ. ಆದುದರಿಂದ ಸ್ವಭಾವದ ಭಾವನೆ ಭಾವಿಸುವುದರಿಂದ ಮಾತ್ರ ಶಾಂತಿ ದೊರಕುವುದು. ಆ ಭಾವನೆ ಭಾವಿಸಿದಲ್ಲದೆ ಜೀವರುಗಳಿಗೆ ಚತುರ್ಗತಿಯ ಭ್ರಮಣವು ತಪ್ಪಲಾರದು.

**ಏದೇ ಜೀವಣಿಕಾಯಾ ದೇಹಪ್ಪವಿಚಾರಮಸ್ಸಿದಾ ಭಣಿದಾ ।**
**ದೇಹ ವಿಹೂಣಾ ಸಿದ್ಧಾ ಭವ್ವಾ ಸಂಸಾರಿಣೋ ಅಭವ್ವಾ ಯ ॥೧೨೦॥**

**ಮೊದಲು ಹೇಳಿದ ಜೀವನಿಕಾಯವೆಲ್ಲ ದೇಹ ಸಹಿತವೆಂದು ಹೇಳಲಾಗಿದೆ ।**
**ಅದೇಹರು ಸಿದ್ಧರಿದ್ದು ಸಂಸಾರಿ ಭವ್ಯ-ಅಭವ್ಯವೆಂದೆರಡು ತೆರವಾಗಿವೆ ॥೧೨೦॥**

ಜೀವದಲ್ಲಿ ಒಂದು ಸಂಸಾರೀ ಮತ್ತು ಇನ್ನೊಂದು ಮುಕ್ತವೆಂದು ಎರಡು ಭೇದಗಳಿವೆ. ಎಲ್ಲ ಜೀವರುಗಳು ಮೋಕ್ಷರೂಪವಿವೆಯೆಂಬುದಾಗಿಯೂ ಇಲ್ಲ ಮತ್ತು ಎಲ್ಲವೂ ದೇಹವುಳ್ಳವುಗಳಾಗಿವೆಯೆಂಬುದಾಗಿಯೂ ಕೂಡ ಇಲ್ಲ. ಜೀವವು ಸ್ವಭಾವದಿಂದ ಯಾವಾಗಲೂ ಶುದ್ಧವೇ ಇದೆ, ಆದರೆ ಚೈತನ್ಯದ ಪ್ರತೀತಿಯಿಲ್ಲದೆ ಹೊಸ-ಹೊಸ ದೇಹ

ಧಾರಣ ಮಾಡಿ ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತಲಿದೆ. ಆತ್ಮನಿಗೆ ಕೇವಲಜ್ಞಾನವೇ ದೇಹವಿದೆ, ಸ್ವಭಾವದಿಂದ ಜ್ಞಾನವೇ ಅವನ ಶರೀರವಿದೆಯೆಂದು ಪ್ರತೀತಿ ಮಾಡಿದರೆ ಆತ್ಮಬುದ್ಧಿಯಾಗುವುದು. ಯಾವ ಜೀವನು ಆತ್ಮನ ಪ್ರತೀತಿ ಮಾಡಿಕೊಳ್ಳುವುದಿಲ್ಲ ಮತ್ತು ದಯೆ-ದಾನದ ಭಾವ ಮಾಡುತ್ತಾನೆ ಅವನು ದೇವನಾಗುತ್ತಾನೆ ಮತ್ತು ಪಾಪ ಮಾಡುತ್ತಾನೆ ಅವನು ನಾರಕಿಯಾಗುತ್ತಾನೆ, ಇನ್ನು ಮಧ್ಯಮ ಪರಿಣಾಮ ಮಾಡುತ್ತಾನೆ ಅವನು ಮನುಷ್ಯನಾಗುತ್ತಾನೆ, ಮಾಯೆಯ ಭಾವ ಮಾಡುತ್ತಾನೆ ಅವನು ತಿರ್ಯಂಚನಾಗುತ್ತಾನೆ. ಈ ಪ್ರಕಾರ ಮುಕ್ತಿಯಿಲ್ಲದ ಜೀವನಿಗೆ ದೇಹದ ಬದಲಾವಣೆಯಾಗುತ್ತಿರುತ್ತದೆ. ಈ ಶರೀರವು ಇಲ್ಲದಿದ್ದರೆ ತೈಜಸ ಮತ್ತು ಕಾರ್ಮಣ ಶರೀರಗಳಂತೂ ಇದ್ದೇಇರುತ್ತವೆಯೆಂದು ಸರ್ವಜ್ಞ ಭಗವಂತರು ಹೇಳಿದ್ದಾರೆ. ದೇಹದಿಂದ ರಹಿತನಿರುವ ಜೀವನು ಸಿದ್ಧನಿದ್ದಾನೆ ಮತ್ತು ಅವನು ಅನಂತಜ್ಞಾನ-ದರ್ಶನ ಮೊದಲಾದ ಗುಣಗಳನ್ನು ಪ್ರಕಟಮಾಡಿಕೊಂಡಿದ್ದಾನೆ. ಅವನು ಯಾರ ಮೇಲೆಯೂ ಪ್ರಸನ್ನವಾಗುವುದಿಲ್ಲ ಮತ್ತು ಪುನಃ ಮರಳಿ ಅವತಾರ ಧಾರಣ ಮಾಡುವುದಿಲ್ಲ. ಇನ್ನು ಸಂಸಾರೀ ಜೀವದಲ್ಲಿ ಕೂಡ ಎರಡು ಜಾತಿಯವುಗಳಿವೆ. ಒಬ್ಬನು ಮೋಕ್ಷಕ್ಕೆ ಯೋಗ್ಯನಾದ ಭವ್ಯ ಜೀವನಿದ್ದಾನೆ ಮತ್ತು ಇನ್ನೊಬ್ಬನು ಮೋಕ್ಷದ ಸಲುವಾಗಿ ನಾಲಾಯಕ ಎಂದರೆ ಯೋಗ್ಯತೆಯಿಲ್ಲದ ಅಭವ್ಯ ಜೀವನಿದ್ದಾನೆ. ಅಭವ್ಯ ಜೀವನು ಅನಂತಕಾಲ ಕಳೆದರೂ ಎಂದೂ ಮುಕ್ತನಾಗುವುದಿಲ್ಲ.

**ಭಾವಾರ್ಥ :-** ಲೋಕದಲ್ಲಿ ಎರಡು ಪ್ರಕಾರದ ಜೀವಗಳಿದ್ದು ಅವರಲ್ಲಿ ಒಬ್ಬನು ದೇಹಧಾರಿಯಿದ್ದರೆ, ಇನ್ನೊಬ್ಬನು ದೇಹರಹಿತನಿದ್ದಾನೆ. ದೇಹಧಾರಿ ಜೀವನು ಸಂಸಾರಿಯಿದ್ದರೆ ದೇಹರಹಿತ ಜೀವನು ಸಿದ್ಧ ಪರ್ಯಾಯವನ್ನು ಅನುಭವ ಮಾಡುತ್ತಾನೆ. ಎಲ್ಲವೂ ಸೇರಿ ಒಂದು ಜೀವವಿಲ್ಲ. ಜೀವವು ಜಾತಿಯ ಅಪೇಕ್ಷೆಯಿಂದ ಒಂದು ಇದ್ದರೆ ಸಂಖ್ಯೆಯ ಅಪೇಕ್ಷೆಯಿಂದ ಅನಂತವಿವೆ. ದೇಹಧಾರಿಯೆಂದರೆ ವ್ಯವಹಾರದಿಂದ ಕರ್ಮ ಕಟ್ಟುತ್ತದೆ ಮತ್ತು ಅದರ ಫಲದಲ್ಲಿ ಶರೀರ ದೊರಕುತ್ತದೆ.

**ಪ್ರಶ್ನೆ :-** ಆತ್ಮನು ದೇಹದ ಸಂಯೋಗವಿಲ್ಲದೆ ನಡೆಯುತ್ತಿದ್ದರೆ ಗಮನದ ಸಮಯದಲ್ಲಿ ದೇಹವು ಸರಿಯಾಗಿ ದ್ವಾರದ ಮೂಲಕವೇ ಹೊರಡುತ್ತದೆ ಮತ್ತು ಗೋಡೆಯೊಳಗಿಂದೇಕೆ ಹೊರಡುವುದಿಲ್ಲ ?

**ಉತ್ತರ :-** ಶರೀರದ ಪರ್ಯಾಯವು ಶರೀರದ ಕಾರಣದಿಂದ ಆಗುತ್ತದೆ, ಅದರಲ್ಲಿ ಆತ್ಮನ ಅಧಿಕಾರವು ನಡೆಯುವುದಿಲ್ಲ. ಜೀವನು ರಾಗ-ದ್ವೇಷಗಳನ್ನು ಮಾಡುತ್ತಾನೆ ಅಥವಾ ಜ್ಞಾನ ಮಾಡುತ್ತಾನೆ. ಆದರೆ ಅವನು ದೇಹದಲ್ಲಿ ಏನನ್ನೂ ಮಾಡುವ ಸಾಧ್ಯತೆಯಿಲ್ಲ. ಜೀವ ದೇಹಗಳೆರಡೂ ಪೃಥಕ್ ಇವೆ.

ಜೀವನಿಗೆ ಸಂಸಾರದ ಅವಸ್ಥೆಯಲ್ಲಿ ದೇಹದ ಸಂಬಂಧವಿದೆಯೆಂದು ನಿಮಿತ್ತದ ಜ್ಞಾನ ಮಾಡಿಸಲಾಗಿದೆ ಮತ್ತು ಸಿದ್ಧ ಭಗವಂತರಿಗೆ ದೇಹದ ನಿಮಿತ್ತತನವು ಕೂಡ ಇರುವುದಿಲ್ಲ.

ಸಂಸಾರದಲ್ಲಿ ಎರಡು ಜಾತಿಯ ಜೀವಗಳಿರುತ್ತವೆ. ಅವುಗಳಲ್ಲಿ ಒಂದು ಭವ್ಯ ಜೀವವಿದೆ. ಯಾವ ಪ್ರಕಾರ ಹೆಸರು ಅಥವಾ ಉದ್ದಿನ ಕಾಳುಗಳು ನೀರಿನಲ್ಲಿ ಅಗ್ನಿಯ ಸ್ಪರ್ಶದಿಂದ ಬೆಂದು ಹೋಗುತ್ತವೆ. ಅವುಗಳ ಹಾಗೆಯೇ ಭವ್ಯ ಜೀವರುಗಳು ನಿಜಾತ್ಮನ ಶ್ರದ್ಧೆ-ಜ್ಞಾನ ಮಾಡಿಕೊಂಡು ಮೋಕ್ಷಪ್ರಾಪ್ತ ಮಾಡಿಕೊಳ್ಳುವ ಯೋಗ್ಯತೆಯುಳ್ಳವರಿದ್ದಾರೆ. ಆ ಜೀವರುಗಳು ದೇಹ ಮತ್ತು ವಿಕಾರಗಳಿಂದ ರಹಿತರಾಗಿ ಶುದ್ಧಾತ್ಮನ ಜ್ಞಾನ ಮಾಡಿಕೊಂಡು ಮುಕ್ತಿ ಪಡೆಯುತ್ತಾರೆ. ಕೆಲವೊಮ್ಮೆ ಹೆಸರು ಅಥವಾ ಉದ್ದಿನ ಕಾಳುಗಳನ್ನು ಬೇಕಾದಷ್ಟು ಸಮಯ ನೀರಿನಲ್ಲಿ ಹಾಕಿ ಬೇಯಿಸಿದರೂ ಅವು ಎಂದೂ ಬೇಯುವುದಿಲ್ಲ. ಅದೇ ಪ್ರಕಾರವಾಗಿ ಅಭವ್ಯ ಜೀವರುಗಳು ಬೇಕಾದಷ್ಟು ಕ್ರಿಯಾಕಾಂಡ ಮಾಡಲಿ, ಸಾವಿರಾರು ರಾಣಿಯರನ್ನು ಬಿಟ್ಟುಕೊಟ್ಟು ಸಾಧುವಾದರೂ ಅವರು ತಮ್ಮ ಶುದ್ಧ ಆತ್ಮನ ಅಭಿರುಚಿ ಮಾಡದಿರುವುದರಿಂದ

ಅವರು ಮುಕ್ತಿಯನ್ನು ಎಂದೂ ಪಡೆಯುವುದಿಲ್ಲ. ಬಹಳಷ್ಟು ಪಾಪಕಾರ್ಯ ಮಾಡಿದರೆ ಮತ್ತು ಪ್ರಾಣಿವಧೆ ಮಾಡುವ ಕಟುಕರ ಕಾರ್ಯವನ್ನೇ ಮಾಡುತ್ತಿದ್ದರೆ ಅವರು ಅಭವ್ಯರಾಗುತ್ತಾರೆ ಮತ್ತು ದಯೆ-ದಾನಗಳ ಭಾವ ಮಾಡಿದರೆ ಅವರು ಭವ್ಯರಾಗುತ್ತಾರೆಂಬುದಾಗಿಲ್ಲ, ಆದರೆ ಅಭವ್ಯ ಮತ್ತು ಭವ್ಯರೆಂಬ ಎರಡು ಜಾತಿಗಳು ಅನಾದಿ ಕಾಲದಿಂದಲೇ ಇವೆ. ಅಭವ್ಯ ಜೀವಗಳು ಅನಂತವಿವೆ. ಆದರೆ ಭವ್ಯ ಜೀವರುಗಳು ಅಭವ್ಯದ ಅನಂತ ಗುಣಿತವಿವೆ. ಅಭವ್ಯ ಜೀವಗಳು ಶರೀರದ ಕ್ರಿಯೆ ಮಾಡುತ್ತಿರುವುದು ಕಂಡು ಬರುತ್ತದೆ, ದುಃಖ ಸಹನೆ ಮಾಡುತ್ತಿರುವುದು ಕಂಡು ಬರುತ್ತದೆ, ಆದರೆ ಅವರು ಶರೀರರಹಿತ ಆತ್ಮನ ಚಿಂತೆ ಮಾಡುವುದಿಲ್ಲ.

**ಪ್ರಶ್ನೆ ಃ-** ಶರೀರಕ್ಕೆ ಕಷ್ಟ ಕೊಡಬೇಕೋ ಅಥವಾ ಕೊಡಬಾರದೋ ?

**ಉತ್ತರ ಃ-** ಶರೀರಕ್ಕೆ ಕಷ್ಟವಾಗುವುದಿಲ್ಲ, ಆತ್ಮನಿಗೆ ಪರ್ಯಾಯದಲ್ಲಿ ಕಷ್ಟವಿರುತ್ತದೆ. ಆ ಕಷ್ಟವಂತೂ ಪಾಪವಿದೆ, ಧರ್ಮವೂ ಕಷ್ಟದಾಯಕವಿರುವುದಿಲ್ಲ. ಜಗತ್ತಿನ ಜನರಿಗೆ ಧರ್ಮದ ಪ್ರಜ್ಞೆಯೇ ಇಲ್ಲ. ಯಾರಿಗೆ ಆರ್ತಧ್ಯಾನದ ಪರಿಣಾಮವಾಗುತ್ತದೆ ಅದು ಪಾಪವಿದೆ, ಆದರೆ ಪುಣ್ಯವಿಲ್ಲ ಮತ್ತು ಧರ್ಮವಂತೂ ಇಲ್ಲವೇ ಇಲ್ಲ. ಯಾವ ಭಾವದಿಂದ ದುಃಖವೆನಿಸುತ್ತದೆ ಆ ಭಾವವಂತೂ ಧರ್ಮವೇ ಇಲ್ಲ, ಆದರೆ ಅದು ಪುಣ್ಯಕೂಡ ಇಲ್ಲ. ಜಡ ಶರೀರಕ್ಕೆ ದುಃಖವಾಗುವುದಿಲ್ಲ, ಆದರೆ ಅಂತರ್ಯದಲ್ಲಿ ವಾಸಿಸುತ್ತಿರುವ ಜೀವನು ಶರೀರದ ಜತೆಯಲ್ಲಿ ಮಮತೆಯ ಪರಿಣಾಮ ಮಾಡುತ್ತಾನೆ ಅದುವೇ ದುಃಖವಿದೆ. ಆದುದರಿಂದ ಯಾವ ಜೀವರುಗಳು ಧರ್ಮದ ಕ್ರಿಯೆ ಮಾಡುತ್ತಾರೆ ಅವರು ದುಃಖ ಭೋಗಿಸುತ್ತಾರೆನ್ನುವುದು ಸರಿಯಲ್ಲ. ಧರ್ಮವು ಶಾಂತಿದಾಯಕ ಮತ್ತು ಆನಂದದಾಯಕವಿದೆ.

ಆತ್ಮನಾದ ನಾನು ಜ್ಞಾತಾ-ದೃಷ್ಟಾಯಿದ್ದೇನೆಂಬ ಪ್ರತೀತಿಯೊಡನೆ ಅಂತರ್ಯದಲ್ಲಿ ಶಾಂತಿ ಮತ್ತು ಆನಂದವು ಪ್ರಕಟವಾಗುತ್ತದೆ ಅದು ಧರ್ಮವಿದೆ. ಯಾವುದು ಕಷ್ಟಕಾರಕವೆನಿಸುತ್ತದೆ ಅದು ಅಧರ್ಮವಿದೆ. ಅಜ್ಞಾನೀ ಜೀವರುಗಳು ಚಾರಿತ್ರವನ್ನು ದುಃಖದಾಯಕವೆಂದು ಮನ್ನಿಸುತ್ತಾರೆ ಮತ್ತು ಭಗವಾನ್ ಮಹಾವೀರರ ಸಂಬಂಧದಲ್ಲಿ ಹೇಳುವುದೇನೆಂದರೆ ಭಗವಂತರು ಆಹಾರದ ಹೆಸರಿನಲ್ಲಿ ಆಹಾರ ಸ್ವೀಕರಿಸಲಿಲ್ಲ, ನೀರಿನ ಹೆಸರಿನಲ್ಲಿ ನೀರನ್ನು ಸ್ವೀಕರಿಸಲಿಲ್ಲ ಮತ್ತು ವಿಶ್ರಾಂತಿಯ ಹೆಸರಿನಲ್ಲಿ ಮಲಗಿಕೊಳ್ಳಲಿಲ್ಲವೆಂದು ಮನ್ನಿಸುವಂಥ ಜೀವರುಗಳು ಚಾರಿತ್ರವನ್ನು ಕಷ್ಟದಾಯಕವೆಂದು ಮನ್ನಿಸುತ್ತಾರೆ. ಅವರು ವೀತರಾಗತೆಯ ಸ್ವರೂಪವನ್ನು ಗುರುತಿಸುವುದಿಲ್ಲ, ತಿಳಿದುಕೊಳ್ಳುವುದೂ ಇಲ್ಲ. ಚಾರಿತ್ರವಂತೂ ಅತ್ಯಂತ ದುಃಖದಾಯಕವಿದೆ.

ಗ್ರೀಷ್ಮ ಋತುವಿನಲ್ಲಿ ತಂಪುಗಾಳಿ ಮೊದಲಾದವು ಶಾಂತಿದಾಯಕವೆನಿಸುತ್ತವೆ. ಅದೇ ಪ್ರಕಾರ ಸಂಸಾರರೂಪದ ಸಂತಾಪದಲ್ಲಿ ಬೆಂದವನಿಗೆ ಆತ್ಮನ ಪ್ರತೀತಿಪೂರ್ವಕ ಚಾರಿತ್ರವು ಪ್ರಕಟವಾದರೆ ಅದು ಶೀತಲರೂಪವಿದೆ ಮತ್ತು ಅದರಿಂದ ಅನಾದಿಕಾಲದಿಂದ ಉಂಟಾದ ಸಂತಾಪವು ದೂರವಾಗಿ ಹೋಗುತ್ತದೆ.

ಅಜ್ಞಾನೀ ಜೀವನು ನಾನು ಪರಪದಾರ್ಥಗಳನ್ನು ಅನುಭವಿಸುತ್ತೇನೆಂದು ಮನ್ನಿಸುತ್ತಾನೆ; ಆದರೆ ಅವನು ಆ ಪದಾರ್ಥಗಳನ್ನು ಅನುಭವಿಸುವುದಿಲ್ಲ, ಆದರೆ ಅವನು ತನ್ನ ರಾಗದ ಅನುಭವ ಮಾಡುತ್ತಾನೆ. ಆತ್ಮನ ಪ್ರತೀತಿಯ ಮೂಲಕ ಆ ರಾಗವನ್ನು ತೊಲಗಿಸಿ ರಾಗದಿಂದ ರಹಿತವಾದ ಶಾಂತಿಯ ಅನುಭವ ಮಾಡುವುದು ಚಾರಿತ್ರವಿದೆ ಮತ್ತು ಅದು ನಿಜವಾದ ತಪಸ್ಸು ಇದೆ. ಅಜ್ಞಾನ ಪೂರ್ವಕವಿರುವಂಥ ತಪಸ್ಸನ್ನು ಬಾಲತಪವೆಂದು ಹೇಳುತ್ತಾರೆ. ಈ ಜಗತ್ತಿನಲ್ಲಿ ಅಭವ್ಯ ಜೀವಗಳು ಇವೆ ಮತ್ತು ಭವ್ಯ ಜೀವಗಳೂ ಇವೆ. ಅದಂತೂ ಅವುಗಳ ಸ್ವಭಾವವೇ ಇವೆ. ಹೀಗೇಕೆ ಎಂಬ ಪ್ರಶ್ನೆಯು ಸ್ವಭಾವದಲ್ಲಿ ಇರುವುದೇ ಇಲ್ಲ. ಆತ್ಮನ ಸ್ವಭಾವವು ಮೂರು ಕಾಲದ ಮತ್ತು ಮೂರು ಲೋಕದ

ಪದಾರ್ಥಗಳನ್ನು ತಿಳಿದುಕೊಳ್ಳುವುದಿದೆಯೆಂಬುದನ್ನು ಪರಿಚಯ ಮಾಡಿಕೊಂಡರೆ ಅವನಿಗೆ ನಾನು ಭವ್ಯನಿದ್ದೇನೆಂಬುದು ಪ್ರಶ್ನೆಯಲ್ಲಿ ಬಂದು ಬಿಡುತ್ತದೆ. ಇತರ ಭವ್ಯ ಹಾಗೂ ಅಭವ್ಯ ಆತ್ಮನಿದ್ದಾನೆಂಬುದನ್ನು ಅವನು ತನ್ನ ಜ್ಞಾನದಲ್ಲಿ ತಿಳಿದುಕೊಂಡಿರುತ್ತಾನೆ. ಈ ಪ್ರಕಾರ ಜೀವದ ಜಾತಿಯ ಕಥನ ಮಾಡಲಾಯಿತು.

ಜೀವದ ಸ್ವರೂಪವು ಎಲ್ಲ ಪ್ರಕಾರದಿಂದ ವ್ಯವಹಾರಾಶ್ರಿತವೆಂದು ಹೇಳಲಾಗುವುದಿಲ್ಲ ಕಥಂಚಿತ್ ಅನ್ಯಪ್ರಕಾರದಿಂದ ಕೂಡ ಕಂಡುಬರುತ್ತದೆ.

**ಣ ಹಿ ಇಂದಿಯಾಣಿ ಜೀವಾ ಕಾಯಾ ಪುಣ ಛಪ್ಪಯಾರ ಪಣ್ಣತ್ತಾ ।**
**ಜಂ ಹವದಿ ತೇಸು ಣಾಣಂ ಜೀವೋ ತ್ತಿ ಯ ತಂ ಪರೂವೇಂತಿ ।।೧೨೧।।**

**ಯಾವ ಇಂದ್ರಿಯಗಳು ಜೀವವಲ್ಲ ಷಡ್‌ವಿಧಕಾಯಗಳು ಕೂಡ ಜೀವವಲ್ಲ ।**
**ಅವುಗಳಲಿ ಯಾವ ಜ್ಞಾನವಿದೆಯದು ಜೀವವೆಂದು ಪ್ರರೂಪಿಸುವರು ।।೧೨೧।।**

ಜೀವನಿಗೆ ಸ್ಪರ್ಶ ಮೊದಲಾದ ಐದು ಇಂದ್ರಿಯಗಳ ನಿಮಿತ್ತವನ್ನು ವ್ಯವಹಾರನಯದಿಂದ ಹೇಳಲಾಗಿದೆ, ಆದರೆ ಇಂದ್ರಿಯಗಳು ಜೀವದ ಸ್ವರೂಪವಾಗಿಲ್ಲ ಮತ್ತು ಪೃಥ್ವೀಕಾಯ, ಜಲಕಾಯ, ಅಗ್ನಿಕಾಯ, ವಾಯುಕಾಯ, ವನಸ್ಪತಿಕಾಯ ಮತ್ತು ತ್ರಸಕಾಯರೂಪದ ಯೋಗ್ಯತೆಯು ಜೀವದ ಪರ್ಯಾಯದಲ್ಲಿ ಇದೆ. ಅದನ್ನು ಅಶುದ್ಧನಿಶ್ಚಯನಯದಿಂದ ಜೀವವೆಂದು ಹೇಳಲಾಗಿದೆ, ಆದರೆ ಪರ್ಯಾಯದ ಯೋಗ್ಯತೆಯಿಂದಂತೂ ಅಂಶಮಾತ್ರವಿದೆ, ಅದೇನೂ ತ್ರಿಕಾಲೀ ಸ್ವರೂಪವಿಲ್ಲ. ಆದುದರಿಂದಲೇ ನಿಶ್ಚಯನಯದಿಂದ ಅದು ಕೂಡ ಜೀವದ ಸ್ವರೂಪವಿಲ್ಲ. ಏಕರೂಪ ಚೈತನ್ಯ ಭಾವವು ಜೀವವಿದೆ.

**ಭಾವಾರ್ಥ :-** ಏಕೇಂದ್ರಿಯ ಮೊದಲಾದ ಭೇದಗಳನ್ನು ವ್ಯವಹಾರನಯದ ಅಪೇಕ್ಷೆಯಿಂದ ಶರೀರದ ಸಂಬಂಧದಿಂದ ಹೇಳುವುದರಲ್ಲಿ ಬರುತ್ತದೆ. ನಿಶ್ಚಯನಯದಿಂದ ವಿಚಾರ ಮಾಡುವುದರಲ್ಲಿ ಬಂದಿತೆಂದರೆ ಸ್ಪರ್ಶನ ಮೊದಲಾದ ಇಂದ್ರಿಯಗಳು ಹಾಗೂ ಪೃಥ್ವೀ ಮೊದಲಾದ ಕಾಯಗಳು ಚೈತನ್ಯಲಕ್ಷ್ಮೀಯುಕ್ತನಿರುವ ಜೀವದಿಂದ ಬೇರೆಯಿವೆ. ಇಂದ್ರಿಯಗಳು ಹಾಗೂ ಶರೀರಗಳು ಜೀವದ ಸ್ವರೂಪವಿಲ್ಲ. ಒಂದು ಸಮಯದ ಪರ್ಯಾಯವನ್ನು ಅಶುದ್ಧ ನಿಶ್ಚಯನಯದಿಂದ ಜೀವದ್ದೆಂದು ಹೇಳಲಾಗಿತ್ತು. ಆದರೆ ಅದು ಜೀವದ ಸ್ಥಿರ ಸ್ವರೂಪವಂತೂ ಇಲ್ಲವೇ ಇಲ್ಲ. ಜ್ಞಾತಾ-ದೃಷ್ಟಾ ಇದು ಜೀವದ ನಿಜವಾದ ಸ್ವರೂಪವಿದೆ. ಪರದ ದಯೆಯನ್ನು ಪಾಲಿಸಬೇಕೋ ಅಥವಾ ಬೇಡವೋ? ಎಂದು ಕೆಲವರು ಕೇಳುತ್ತಾರೆ. ಅಯ್ಯಾ ಸೋದರನೇ ! ಯಾರ ಮೇಲೆ ದಯೆ ಮಾಡುವ ಸಾಧ್ಯತೆಯಿದೆ ? ಶರೀರವಂತೂ ಸ್ವಯಂ ಜಡವಿದೆ. ಆ ಜಡದ ಮೇಲೆ ದಯೆಮಾಡುವೆಯೇನು ? ಪೃಥ್ವೀ ಮೊದಲಾದವು ಒಂದು ಸಮಯದ ಯೋಗ್ಯತೆಯಿದೆ. ಅದರ ಮೇಲೆ ದಯೆ ಮಾಡುವೆಯೇನು ? ತ್ರಿಕಾಲೀ ಜ್ಞಾತಾ-ದೃಷ್ಟಾ ಸ್ವಭಾವವಿದೆ ಅದರ ಮೇಲೆ ದಯೆ ಮಾಡುವೆಯೇನು  ಪರ ಶರೀರದ ರಕ್ಷಣೆಯು ಆಗುವ ಸಾಧ್ಯತೆಯೇ ಇಲ್ಲ ಮತ್ತು ಪರದ ಪರ್ಯಾಯ ಅಥವಾ ಸ್ವಭಾವವು ನೀನು ರಕ್ಷಿಸುವುದರಿಂದ ಉಳಿಯುವಂತಿಲ್ಲ ತಾನು ಪರದಲ್ಲೇನೂ ಮಾಡುವ ಸಾಧ್ಯತೆಯಿಲ್ಲ. ಸ್ವಯಂ ಜ್ಞಾತಾ-ದೃಷ್ಟಾ ಇದ್ದೇನೆಂದು ನಿರ್ಣಯ ಮಾಡುವುದು ತನ್ನ ದಯೆಯಿದೆ. ಈ ಮಾತು ತರುಣರಿಗೆ ತಿಳಿದುಬರುತ್ತಿರಬಹುದೆಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಮಹಾನುಭಾವರೇ ! ಆತ್ಮನು ಬಾಲಕನೂ ಇಲ್ಲ, ತರುಣನೂ ಇಲ್ಲ ಮತ್ತು ವೃದ್ಧನೂ ಇಲ್ಲ. ಆತ್ಮನಂತೂ ಕೇವಲ ಚೈತನ್ಯಭಾವನಿದ್ದಾನೆ. ಅರ್ಧ ಚಕ್ರವರ್ತಿಯಾದ ಕೃಷ್ಣನ ಕುಮಾರನಾದ ಪ್ರದ್ಯುಮ್ನನು ಕಾಮದೇವನಿದ್ದನು, ಮೂರು ಲೋಕದಲ್ಲಿ ಎಲ್ಲರಿಗಿಂತಲೂ ವಿಶೇಷ ಸೌಂದರ್ಯ

ಶಾಲಿಯಿದ್ದನು, ಸ್ವರೂಪಸಂಪನ್ನನಾಗಿದ್ದನು. ತರುಣಾವಸ್ಥೆಯಲ್ಲಿ ಸಾವಿರಾರು ವಿದ್ಯೆಗಳನ್ನು ಸಿದ್ಧಮಾಡಿಕೊಂಡಿದ್ದನು. ಜನ್ಮವಿತ್ತ ತಾಯಿಯು ದೊರಕಿದನಂತರ ವೈರಾಗ್ಯವು ಉತ್ಪನ್ನವಾದಮೇಲೆ ದೀಕ್ಷೆ ಸ್ವೀಕರಿಸಲು ಸಿದ್ಧನಾಗುತ್ತಾನೆ. ಆಗ ತಾಯಿಯು ಹೇಳುವುದೇನೆಂದರೆ ಮಗು ! ನಿನಗೆ ಹದಿನೈದು ವರುಷಗಳು ಕೂಡ ಪೂರ್ಣವಾಗಿಲ್ಲ ಮತ್ತು ನಮಗೆ ದೊರಕಿರುವುದು ಕೇವಲ ಇತ್ತೀಚೆಗೆ ! ಇದುವರೆಗೆ ವಿದ್ಯಾಧರರ ಮನೆಯಲ್ಲಿಯೇ ಬೆಳೆದು ದೊಡ್ಡವನಾಗಿರುವೆ ! ಈಗ ಇಲ್ಲಿ ಬಂದು ಕೂಡಲೇ ದೀಕ್ಷೆ ಸ್ವೀಕರಿಸುತ್ತೇನೆಂದು ಹೇಳುತ್ತಿರುವೆ ! ಇದರಿಂದ ನಮಗೆಷ್ಟು ದುಃಖವಾಗುತ್ತಿರುವುದೆಂಬುದನ್ನು ಒಂದಿಷ್ಟು ಯೋಚನೆ ಮಾಡಿ ನೋಡು ! ಆದಾಗ್ಯೂ ಪ್ರದ್ಯುಮ್ನನು ತನ್ನ ತಾಯಿಗೆ ಹೇಳುತ್ತಾನೆ - 'ಅಮ್ಮಾ ಇಂಥ ಶರೀರಗಳು ಈ ಮೊದಲು ಅನಂತ ದೊರಕಿವೆ. ಆ ಪೂರ್ವದ ಭವಗಳೆಲ್ಲವೂ ಸ್ವಪ್ನದ ಸಮಾನ ಹೊರಟುಹೋಗಿವೆ. ಅದೇ ಪ್ರಕಾರ ಈ ಶರೀರವೂ ಕೂಡ ಸ್ವಪ್ನದ ಸಮಾನ ಕರಗಿಹೋಗುವುದು. ಈಗಲೇ ಇದರ ಉಪಯೋಗ ಮಾಡಿಕೊಳ್ಳುವುದು ಮನುಷ್ಯರಾದವರ ಕರ್ತವ್ಯವಿದೆ ! ಈ ಪ್ರಕಾರ ಅಂತರಂಗದಲ್ಲಿ ವೈರಾಗ್ಯ ತಂದುಕೊಂಡು ದೀಕ್ಷೆ ಸ್ವೀಕರಿಸಿ ಹೊರಟುಹೋಗುತ್ತಾನೆ ! ಈ ಪ್ರಕಾರ ತಮ್ಮ ಆತ್ಮನ ಪ್ರಾಪ್ತಿ ಮಾಡಿಕೊಳ್ಳುವುದು, ಆತ್ಮನ ಅತೀಂದ್ರಿಯ ಅನುಭವವಾಗುವುದು ಅದು ಧರ್ಮವಿದೆ.

ಇಲ್ಲಿ ಜೀವದ ಸ್ವರೂಪವನ್ನು ಪರಿಚಯ ಮಾಡಿಕೊಳ್ಳಲಾಗಿದೆ, ಏಕೇಂದ್ರಿಯ ಮೊದಲಾದ ಇಂದ್ರಿಯಗಳು ಪೃಥ್ವೀ ಮೊದಲಾದ ಶರೀರಗಳು ಅವೇನು ಜೀವದ ಸ್ವರೂಪಗಳಾಗಿಲ್ಲ. ಇಂದ್ರಿಯ ಅಥವಾ ಶರೀರ ಮೊದಲಾದವುಗಳಿಂದೇನು ಕೇವಲಜ್ಞಾನವಾಗುವ ಸಾಧ್ಯತೆಯಿಲ್ಲ, ಅದೇ ಪ್ರಕಾರ ಒಂದು ಸಮಯದ ಯೋಗ್ಯತೆಯಿಂದ ಕೂಡ ಆ ಯೋಗ್ಯತೆಯ ಆಧಾರದಿಂದ ಕೂಡ ಕೇವಲಜ್ಞಾನವಾಗುವುದಿಲ್ಲ. ಜೀವದ ಗತಿಯ ಯೋಗ್ಯತೆಯು ಕೂಡ ಜೀವದ ಸ್ವರೂಪವಿಲ್ಲ. ದೇಹ, ಇಂದ್ರಿಯಗಳು ಮತ್ತು ಪ್ರಕಟಭಾವ ಇವೆಲ್ಲವುಗಳ ಪರಿವರ್ತನವಾಗಿ ಏಕಾಕಿ ಶುದ್ಧ ಚೈತನ್ಯ ಭಾವವು ಉಳಿದುಬಿಡುವುದು ಜೀವವಿದೆ. ಸ್ವ-ಪರಗಳನ್ನು ತಿಳಿದುಕೊಳ್ಳುವಂಥ ಆತ್ಮ ಪದಾರ್ಥವಿದೆ ಅದರಲ್ಲಿ ಗುಣ-ಗುಣಿಯ ಭೇದವಿದೆ. ಆತ್ಮನು ಗುಣಿಯಿದ್ದಾನೆ ಮತ್ತು ಜ್ಞಾನ-ದರ್ಶನ ಮೊದಲಾದವು ಗುಣಗಳಿವೆ. ಈ ಪ್ರಕಾರ ಸಂಜ್ಞಾ ಭೇದದಿಂದ ಭೇದವಿದ್ದರೂ ಕೂಡ ಪ್ರದೇಶ ಭೇದದಿಂದ ಭೇದವಿಲ್ಲದಿರುವುದರಿಂದ ಅಭೇದಸಂಯುಕ್ತವಿದೆ. ಈ ಪ್ರಕಾರ ಅವಿನಾಶಿ, ಶಾಶ್ವತ, ನಿರ್ಮಲ, ಚೈತನ್ಯರೂಪದ ಜೀವಪದಾರ್ಥವನ್ನು ತಿಳಿದುಕೊಳ್ಳಬೇಕು. ಹೀಗೆ ಪರದಿಂದ ಭೇದಸ್ವರೂಪದ ಮತ್ತು ಗುಣಗಳಿಂದ ಅಭೇದಸ್ವರೂಪನಿರುವಂಥ ಆತ್ಮನನ್ನು ತಿಳಿದುಕೊಳ್ಳುವುದು ನಿಜವಾಗಿ ಧರ್ಮವಿದೆ. ಅಯ್ಯಾ ! ಧರ್ಮಿಯನ್ನು ಬಿಟ್ಟು ಧರ್ಮವೆಲ್ಲಿರುವುದು !

ಈ ಪ್ರಕಾರವಿರುವ ಜೀವಪದಾರ್ಥವನ್ನು ತಿಳಿದುಕೊಳ್ಳಲಾರದೆ ಅಜ್ಞಾನೀ ಜೀವರುಗಳು ವಿಕಾರೀಭಾವ ಮಾಡಿ ಅಖಂಡ ದೇಹ ಧಾರಣ ಮಾಡುತ್ತ ಪಂಚೇಂದ್ರಿಯಗಳ ವಿಷಯಗಳನ್ನು ಭೋಗಿಸುತ್ತಿದ್ದಾರೆ. ಆದರೆ ಅವರು ತಮ್ಮ ಅಮೃತಸ್ವರೂಪನಿರುವ ಆತ್ಮನನ್ನು ಭೋಗಿಸುವುದೇ ಇಲ್ಲ. ವಿಷಯಗಳು ನಿಜವಾಗಿ ಸ್ವಪ್ನದ ಸಮಾನವಿವೆ. ತಮ್ಮ ಸುಖವು ತಮ್ಮಲ್ಲಿಯೇ ಇರುವುದನ್ನು ಸಂಪೂರ್ಣವಾಗಿ ಮರೆತುಹೋಗುವುದರಿಂದಲೇ ಪರದಲ್ಲಿ ಸ್ಥಿರಗೊಂಡು ಪರವನ್ನು ಭೋಗಿಸುತ್ತೇವೆಂದು ಮನ್ನಿಸಿಕೊಂಡಿದ್ದಾರೆ. ಯಾವ ಪ್ರಕಾರ ಮದ್ಯ ಕುಡಿದು ಅಮಲೇರಿದ ಮನುಷ್ಯನು ತನ್ನ ತಾಯಿಯನ್ನು ಪತ್ನಿಯೆಂದು ಹೇಳುತ್ತಾನೆ. ಅದೇ ಪ್ರಕಾರ ಶರೀರ, ಮನಸ್ಸು, ವಾಣಿ ಮೊದಲಾದವುಗಳನ್ನು - ಆ ಪರಪದಾರ್ಥಗಳನ್ನು ತನ್ನವುಗಳೆಂಬ ಮೋಹದಿಂದ ಉತ್ಮತ್ತನಾದ ಜೀವನು ಅವನ್ನು ತನ್ನವುಗಳೆಂದು ಮನ್ನಿಸಿದ್ದಾನೆ ಮತ್ತು ಪರದ್ರವ್ಯಗಳಲ್ಲಿ ಮಮತೆಯ ಭಾವ ಮಾಡುತ್ತಾನೆ. ತನ್ನ ಚೈತನ್ಯ ಭಾವವು ತನ್ನ ವಸ್ತುವಿದೆಯೆಂಬುದನ್ನು ಮರೆತುಹೋಗಿ ಪರದಲ್ಲಿ ಮೋಹಮಾಡಿ ಮೋಕ್ಷಸ್ವರೂಪದಿಂದ ಪರಾಙ್ಮುಖನಾಗಿ ಹೋಗಿದ್ದಾನೆ. ಈ ಪ್ರಕಾರ ಆ ಸಂಸಾರೀ ಜೀವರುಗಳಿದ್ದಾರೆ. ಅವರನ್ನು ದ್ರವ್ಯದೃಷ್ಟಿಯಿಂದ ವಿಚಾರ ಮಾಡುವುದರಲ್ಲಿ ಬಂದರೆ ಅವರುಕೂಡ

ನಿರ್ಮಲ ಚೈತನ್ಯಸ್ವಭಾವಿಯಾದ ಆತ್ಮಾರಾಮರುಗಳಿದ್ದಾರೆ. ಈ ಪ್ರಕಾರ ಸ್ವಭಾವ ದೃಷ್ಟಿ ಮಾಡುವುದು ನಿಜವಾಗಿ ಧರ್ಮವಿದೆ.

ಒಂಭತ್ತು ಪದಾರ್ಥಗಳೊಳಗಿಂದ ಇದು ಜೀವ ಪದಾರ್ಥದ ವರ್ಣನೆಯಿದೆ. ನವತತ್ತ್ವಗಳಲ್ಲಿ ಜೀವವನ್ನು ಪರದಿಂದ ಭೇದಜ್ಞಾನ ಮಾಡಿಸುವುದು ಈ ಅಧಿಕಾರವಿದೆ. ಅನಾದಿಕಾಲದಿಂದ ನಿಜ-ಪರಗಳ ಏಕತೆಯ ಬುದ್ಧಿ ರೂಪದ ಯಾವ ಮಿಥ್ಯಾಭಾವವಿದೆ ಅದು ಅಧರ್ಮವಿದೆ. ಪರದಿಂದ ಪ್ರತ್ಯಕ್ಷ ಭಿನ್ನವಿರುವಂಥ ತನ್ನ ಸ್ವರೂಪವನ್ನು ತಿಳಿದುಕೊಂಡರೆ ನಿಜವಾಗಿ ಕಲ್ಯಾಣವಾಗಿ ಹೋಗುವುದು. ಆದುದರಿಂದ ಜೀವದಲ್ಲಿ ಮಾತ್ರವಿದೆ ಮತ್ತು ಯಾವ ದ್ರವ್ಯದಲ್ಲಿ ಇಲ್ಲವೇ ಇಲ್ಲವೆಂಬ ಮುಖ್ಯ ಕಾರ್ಯದ ವರ್ಣನೆಯನ್ನು ಮಾಡಲಾಗುತ್ತದೆ.

**ಜಾಣದಿ ಪಸ್ಸದಿ ಸವ್ವಂ ಇಚ್ಛದಿ ಸುಕ್ಖಂ ಬಿಭೇದಿ ದುಕ್ಖಾದೋ ।**
**ಕುವ್ವದಿ ಹಿದಮಹಿದಂ ವಾ ಭುಂಜದಿ ಜೀವೋ ಫಲಂ ತೇಸಿಂ ॥೧೨೨॥**

**ಜೀವವೆಲ್ಲ ತಿಳಿಯುವುದು ನೋಡುವುದು ಸುಖವಿಚ್ಛಿಸಿ ದುಃಖದಿಂದ ಬೆದರುವುದು ।**
**ಜೀವ ಹಿತಾಹಿತಗಳ ಮಾಡಿ ಮತ್ತವುಗಳ ಫಲವ ಭೋಗಿಸುವುದು ॥೧೨೨॥**

ಮೊದಲಂತೂ ತಿಳಿದುಕೊಳ್ಳುವುದು-ನೋಡುವುದು ಜೀವದ ಕ್ರಿಯೆಯಿದೆ ; ತಿಳಿದುಕೊಳ್ಳುವ ನೋಡುವ ಕ್ರಿಯೆಯು ಒಂದು ಜೀವವನ್ನು ಹೊರತುಪಡಿಸಿ ಉಳಿದ ಯಾವ ದ್ರವ್ಯದಲ್ಲಿಯೂ ಇಲ್ಲ.

ಅದರಂತೆ ಸುಖವನ್ನು ಇಚ್ಛಿಸುತ್ತದೆ ಮತ್ತು ದುಃಖದಿಂದ ಭಯಭೀತವಿರುತ್ತದೆ ಅದುಕೂಡ ಜೀವದ ಕ್ರಿಯೆಯಿದೆ; ಅಜೀವಕ್ಕಂತೂ ಸುಖ-ದುಃಖಗಳು ಇರುವುದೇ ಇಲ್ಲ.

ಅದರಂತೆ ಶುಭ-ಅಶುಭದ ಆಚರಣೆಯು ಕೂಡ ಒಂದು ಜೀವದ ಕರ್ತವ್ಯವೇ ಇದೆ. ಜಡದಲ್ಲಿಯಂತೂ ಯಾವ ಪುಣ್ಯ-ಪಾಪ ಭಾವಗಳು ಇರುವುದೇ ಇಲ್ಲ. ಹಿಂಸೆ ಮೊದಲಾದವುಗಳ ಪಾಪಭಾವವಾಗಲಿ ಅಥವಾ ದಯೆ ಮೊದಲಾದವುಗಳ ಪುಣ್ಯಭಾವವಾಗಲಿ ಜೀವದ ಕ್ರಿಯೆಯೇ ಇದೆಯೆಂದು ತಿಳಿದುಕೊಂಡರೆ ಪರದಿಂದ ಭೇದಜ್ಞಾನವಾಗಿ ಹೋಗುವುದು. ಒಳ್ಳೆಯ ನಿಮಿತ್ತಗಳು ದೊರಕುವುದರಿಂದ ಶುಭಪರಿಣಾಮವಾಗುತ್ತದೆ ಮತ್ತು ಅನಿಷ್ಟ ನಿಮಿತ್ತಗಳು ದೊರಕುವುದರಿಂದ ಅಶುಭ ಪರಿಣಾಮುಗಳಾಗುತ್ತವೆಯೆಂಬುದಾಗಿಲ್ಲ ; ಆದರೆ ಶುಭ ಅಥವಾ ಅಶುಭ ಪರಿಣಾಮಗಳಾಗುವುದು ಜೀವದ ಕರ್ತವ್ಯವೇ ಇದೆ.

ಅದರಂತೆ ತನ್ನ ಕಾರ್ಯದ ಫಲರೂಪವಾಗಿರುವಂಥ ಸುಖ-ದುಃಖಗಳನ್ನು ಕೂಡ ಒಂದು ಜೀವವೇ ಭೋಗಿಸುತ್ತದೆ. ಜಡದಲ್ಲಿಯಂತೂ ಯಾವುದೇ ಪ್ರಕಾರದ ಸುಖ-ದುಃಖಗಳನ್ನು ಭೋಗಿಸುವುದೇ ಇರುವುದಿಲ್ಲ. ದುಃಖದ ಅನುಭವವು-ವೇದನೆಯು ದೇಹದಲ್ಲಿ ಆಗುವುದಿಲ್ಲ, ಆದರೆ ಅದು ಜೀವದಲ್ಲಿ ಆಗುತ್ತದೆ ಎಂಬುದನ್ನು ತಿಳಿದುಕೊಂಡು ಜೀವನು ಪರದಿಂದ ಭಿನ್ನತೆಯನ್ನು ತಿಳಿದುಕೊಳ್ಳುತ್ತಾನೆ.

ತಿಳಿದುಕೊಳ್ಳುವ-ನೋಡುವ ಕ್ರಿಯೆಯನ್ನು ಮಾಡುವಂಥ ಜೀವನು ತಾನೇ ಇದ್ದಾನೆ. ಯಾವುದೇ ಪರದ ಕಾರಣದಿಂದ ಆತ್ಮನಲ್ಲಿ ತಿಳಿದುಕೊಳ್ಳುವ-ನೋಡುವ ಕ್ರಿಯೆಯಾಗುವುದಿಲ್ಲ. ನಿಮಿತ್ತದ ಕಾರಣದಿಂದ ಜ್ಞಾನವಾಗುತ್ತದೆಯೆಂಬುದಾಗಿಲ್ಲ. ಆದರೆ ಜೀವನು ಸ್ವಯಂ ತಿಳಿದುಕೊಳ್ಳುವ ಸ್ವಭಾವವುಳ್ಳವನಾಗಿದ್ದಾನೆ.

ಒಂಭತ್ತು ಪದಾರ್ಥಗಳಲ್ಲಿ ಜೀವವು ಎಂಥ ಸ್ವಭಾವವುಳ್ಳದ್ದಿದೆಯೆಂಬುದನ್ನು ತಿಳಿದುಕೊಳ್ಳಬೇಕಾಗುವುದು. ಜ್ಞಾನ-ದರ್ಶನ ಕ್ರಿಯೆಯ ಜತೆಯಲ್ಲಿ ಆತ್ಮನು ತನ್ಮಯನಿದ್ದಾನೆ. ಆತ್ಮನು ಶರೀರ ಮೊದಲಾದವುಗಳ ಕ್ರಿಯೆಯ ಜತೆಯಲ್ಲಿ

ಎಂದೂ ತನ್ಮಯನಿಲ್ಲ, ಅವುಗಳಿಂದ ಸದಾ ಭಿನ್ನನೇ ಇರುತ್ತಾನೆ; ಆದರೆ ತನ್ನ ಜ್ಞಾನ-ದರ್ಶನದ ಕ್ರಿಯೆಯ ಜತೆಯಲ್ಲಿಯೇ ಅವನು ತನ್ಮಯನಿರುತ್ತಾನೆ. ಪರದಲ್ಲಿ ಮತ್ತು ತನ್ನಲ್ಲಿ ಯಾವುದೇ ಪ್ರಕಾರದ ಸಂಬಂಧವಿಲ್ಲವೆಂಬುದನ್ನು ತಿಳಿದುಕೊಂಡು ಭೇದಜ್ಞಾನ ಮಾಡುವ ಸಲುವಾಗಿಯೇ ಈ ವರ್ಣನೆಯಿದೆ. ಜೀವ ಪದಾರ್ಥದ ವರ್ಣನೆಯನ್ನು ಪೂರ್ಣಗೊಳಿಸುತ್ತ ಕೊನೆಯಲ್ಲಿ ಹೇಳಿರುವುದೇನೆಂದರೆ ಜೀವ-ಅಜೀವ ಪದಾರ್ಥಗಳ ಲಕ್ಷಣದ ವರ್ಣನೆಯನ್ನು ಕೇವಲ ಭೇದವಿಜ್ಞಾನ ಮಾಡಿಸುವ ಉದ್ದೇಶದಿಂದಲೇ ಮಾಡುವುದರಲ್ಲಿ ಬರುತ್ತದೆ. ಪರದಿಂದ ಭೇದಜ್ಞಾನ ಮಾಡಿ ಅಂತರ್ಮುಖ ಸ್ವಭಾವದ ಅವಲಂಬನೆ ಮಾಡುವುದರಿಂದಲೇ ಶಾಂತಿಯಿದೆಯೆಂದು ತಿಳಿದುಕೊಂಡರೆ ಬಾಹ್ಯದಿಂದ ಶಾಂತಿಯನ್ನಾಗಲಿ ಅಥವಾ ಜ್ಞಾನವನ್ನಾಗಲಿ ಪಡೆದುಕೊಳ್ಳಬೇಕೆನ್ನುವಂಥ ಮಿಥ್ಯಾಬುದ್ಧಿಯು ಉಳಿಯುವುದೇ ಇಲ್ಲ. ಜ್ಞಾನದ ಕ್ರಿಯೆಯಂತೂ ತನ್ನ ಆತ್ಮನಲ್ಲಿಯೇ ಆಗುತ್ತದೆ. ಅದೇನು ಯಾವುದೇ ಗ್ರಂಥದ ಪುಟದಿಂದ ಅಥವಾ ಬಾಹ್ಯದಲ್ಲಿರುವ ಪದಾರ್ಥಗಳ ಮೂಲಕ ಆ ಜ್ಞಾನಕ್ರಿಯೆಯು ಆಗುವುದೇ ಇಲ್ಲ. ಜ್ಞಾನದ ಕ್ರಿಯೆಯು ನಿಯಮದಿಂದ ಆತ್ಮನಲ್ಲಿಯೇ ಆಗುತ್ತದೆ ಮತ್ತು ಆ ಜ್ಞಾನಕ್ರಿಯೆಯ ಜತೆಯಲ್ಲಿ ಆತ್ಮನು ತನ್ಮಯನಾಗಿರುತ್ತಾನೆ, ಆದರೆ ಜೀವದ ಜತೆಯಲ್ಲಿ ಸಂಬಂಧವಿರುವಂಥ ಅಚೇತನ ಪುದ್ಗಲದ್ರವ್ಯವು ಆ ಜ್ಞಾನಕ್ರಿಯೆಯ ಕರ್ತೃವೆಂದೂ ಆಗುವುದಿಲ್ಲ. ಅಚೇತನವಿರುವ ಕಣ್ಣುಗಳ ಕಾರಣದಿಂದ ಆತ್ಮನು ತಿಳಿದುಕೊಳ್ಳುತ್ತಾನೆ-ನೋಡುತ್ತಾನೆಂಬ ಮಾತು ಅಸತ್ಯವಿದೆ. ಜ್ಞಾನಾವರಣ ಕರ್ಮವು ಜಡವಿದೆ, ಅದು ಆತ್ಮನ ಜ್ಞಾನಕ್ರಿಯೆಯನ್ನು ಮಾಡುವಂತೆಯೂ ಇಲ್ಲ ಹಾಗೂ ತಡೆಯುವಂತೆಯೂ ಇಲ್ಲ. ಜೀವನು ಸ್ವಯಂ ತನ್ನ ಜ್ಞಾನದ ಕ್ರಿಯೆಯನ್ನು ಹೇಗೆ ಮಾಡುತ್ತಾನೆಯೋ ಹಾಗೆಯೇ ಆಗುತ್ತದೆ. ಯಾವ ಪ್ರಕಾರ ಅಚೇತನ ಆಕಾಶವು ಏನನ್ನೂ ತಿಳಿದುಕೊಳ್ಳುವುದಿಲ್ಲ, ಅದೇ ಪ್ರಕಾರ ಅಜೀವ ಪುದ್ಗಲದ್ರವ್ಯದ ಜತೆಯಲ್ಲಿ ಕೂಡ ಜೀವದ ಜ್ಞಾನಕ್ರಿಯೆಯ ಸಂಬಂಧವೇನೂ ಇರುವುದಿಲ್ಲ. ಯಾವ ಪ್ರಕಾರ ಆಕಾಶದ ಜತೆಯಲ್ಲಿ ಜ್ಞಾನದ ಸಂಬಂಧವೇನೂ ಇರುವುದಿಲ್ಲವೋ ಅದೇ ಪ್ರಕಾರ ಅಜೀವ ಪುದ್ಗಲದ ಜತೆಯಲ್ಲಿಯೂ ಕೂಡ ಜ್ಞಾನದ ಸಂಬಂಧವೇನೂ ಇಲ್ಲ. ಜ್ಞಾನವಂತೂ ಆತ್ಮನ ಜತೆಯಲ್ಲಿ ಏಕೀಭೂತವಿದೆ. ಈ ಪ್ರಕಾರ ತಿಳಿದುಕೊಂಡರೆ ಜ್ಞಾನದಲ್ಲಿ ಪರಾಶ್ರಯ ಬುದ್ಧಿಯು ಉಳಿಯುವುದಿಲ್ಲ. ಯಾವ ಪ್ರಕಾರ ಧರ್ಮಾಸ್ತಿ, ಅಧರ್ಮಾಸ್ತಿ, ಆಕಾಶ ಮತ್ತು ಕಾಲವೆಂಬ ನಾಲ್ಕು ಅರೂಪಿ ದ್ರವ್ಯಗಳು ಆತ್ಮನ ಜ್ಞಾನದ ಕಾರಣಗಳಿಲ್ಲ. ಅದೇ ಪ್ರಕಾರ ಪುದ್ಗಲದ್ರವ್ಯವು ಕೂಡ ಆತ್ಮನ ಜ್ಞಾನದ ಕಾರಣವಾಗಿಲ್ಲ. ಹನ್ನೆರಡು ಅನುಪ್ರೇಕ್ಷೆಗಳಲ್ಲಿ ಹೇಳಿರುವುದೇನೆಂದರೆ ಪುಣ್ಯ-ಪಾಪಗಳು ಆಸ್ರವವಿದ್ದು ಆ ಆಸ್ರವದ ಕ್ರಿಯೆಯು ಮೋಕ್ಷದಲ್ಲಿ ನಿಮಿತ್ತ ಕೂಡ ಇಲ್ಲವೆಂದು ಚಿಂತಿಸಬೇಕು.

ವ್ಯವಹಾರದ ಶುಭ ಪರಿಣಾಮಗಳು ಮೋಕ್ಷದ ನಿಮಿತ್ತವಾಗುತ್ತವೆಂದುಕೂಡ ನೀನು ಚಿಂತಿಸಕೂಡದು. ಆಸ್ರವದ ಭಾವಗಳನ್ನು ಪರಂಪರೆಯಿಂದ ಮೋಕ್ಷದ ಕಾರಣವಾಗಬಹುದೆಂದು ಕೂಡ ನೀನು ಮನ್ನಿಸಬಾರದು ಮತ್ತು ಯಾವ ಪ್ರಕಾರ ಆಸ್ರವವು ಮೋಕ್ಷದ ಕ್ರಿಯೆಯ ಕಾರಣವಾಗುವುದಿಲ್ಲವೆಂದು ಹೇಳಿದೆ, ಅದೇ ಪ್ರಕಾರ ಇಲ್ಲಿ ಅಜೀವ ದ್ರವ್ಯಗಳ ಕಾರಣದಿಂದ ಜೀವದಲ್ಲಿ ಜ್ಞಾನದ ಕ್ರಿಯೆಯಾಗುವುದಿಲ್ಲವೆಂದು ಹೇಳಲಾಗಿದೆ.

ಆರು ದ್ರವ್ಯಗಳಲ್ಲಿ ಒಂದು ಜೀವದ್ರವ್ಯವೇ ಜ್ಞಾನಕ್ರಿಯಾ ಸಂಪನ್ನವಿರುವುದರಿಂದ ಆ ಜ್ಞಾನ ಕ್ರಿಯೆಯ ಮೂಲಕ ಜೀವನು ಇತರ ಸಮಸ್ತ ದ್ರವ್ಯಗಳಿಂದ ಬೇರೆಯಾಗಿಯೇ ತಿಳಿದುಬರುತ್ತಾನೆ.

ಜೀವದಲ್ಲಿಯೇ ಸುಖದ ಇಚ್ಛೆಯಾಗುತ್ತದೆ, ಸಿದ್ಧಭಗವಂತರುಗಳಂತೂ ಪೂರ್ಣಸುಖಿಯಾಗಿ ಹೋಗಿದ್ದಾರೆ, ಅವರಿಗೆ ಈಗ ಯಾವುದೇ ಪ್ರಕಾರದ ಇಚ್ಛೆಯು ಉಳಿದಿರುವುದಿಲ್ಲ. ಅಜೀವಗಳಿಗಂತೂ ಸುಖದ ಇಚ್ಛೆಯು ಇರುವುದೇ ಇಲ್ಲ. ಪ್ರತಿಯೊಂದು ಜೀವವು ಸುಖವನ್ನು ಇಚ್ಛಿಸುತ್ತದೆಯೆಂಬುದಾಗಿ ಹೇಳಿ ಇಲ್ಲಿ ಜಡದಿಂದ ಜೀವದ ಭಿನ್ನತೆಯನ್ನು ತಿಳಿಸಿಕೊಟ್ಟಿದ್ದಾರೆ. ಆತ್ಮನಿಗೆ ಬೇಕಾದರೆ ಅತೀಂದ್ರಿಯ ಸುಖದ ಅಭಿಲಾಷೆಯಿರಲಿ ಅಥವಾ ಸಂಸಾರದ ಇಂದ್ರಿಯ ಸುಖದ ಅಭಿಲಾಷೆಯಿರಲಿ ; ಆದರೆ ಅದು ಜೀವದಲ್ಲಿಯೇ ಇರುತ್ತದೆ. ಅಜೀವದಲ್ಲಿ ಇರುವುದೇ ಇಲ್ಲ. ಸುಖನಾಮದ ಗುಣವಂತೂ ಒಂದು ಜೀವದಲ್ಲಿಯೇ ಇದೆ. ಅದರಂತೆ ದುಃಖದಿಂದ ಭಯಭೀತವಾಗಿ ಹೋಗುವಂಥ ಕ್ರಿಯೆಯು ಕೂಡ

ಒಂದು ಜೀವದಲ್ಲಿಯೇ ಇದೆ. ಅಜೀವದಲ್ಲಿ ಯಾವುದೇ ಪ್ರಕಾರದ ದುಃಖದ ಭಯವು ಇರುವುದೇ ಇಲ್ಲ, ನೋಡಿರಿ ! ಸುಖ-ದುಃಖಗಳು ಇವೇನು ಕಲ್ಪನೆಯಿಲ್ಲ, ಆದರೆ ಜೀವದ ಪರ್ಯಾಯದಲ್ಲಿ ಸುಖ-ದುಃಖಗಳು ಆಗುತ್ತಿರುತ್ತವೆ.

ಅದರಂತೆ ಶುಭ-ಅಶುಭ ಭಾವಗಳ ರೂಪದಿಂದ ಪ್ರವರ್ತನೆ ಮಾಡುವ ಮೊದಲಾದ ಕ್ರಿಯೆಗಳಲ್ಲಿ ಕೂಡ ಒಂದು ಜೀವವೇ ಪ್ರವರ್ತನೆ ಮಾಡುತ್ತದೆ. ನೋಡಿರಿ ! ಇಲ್ಲಿ ಜೀವವನ್ನು ಇತರ ಪದಾರ್ಥಗಳಿಂದ ಬೇರೆಯಾಗಿ ತಿಳಿದುಕೊಳ್ಳುವುದಿದೆ. ಅದಕ್ಕಾಗಿಯೇ ಶುಭ-ಅಶುಭದ ಕರ್ತೃವೆಂದು ಹೇಳಲಾಗಿದೆ. ದೃಷ್ಟಿಯ ವಿಷಯದ ವರ್ಣನೆಯಿದ್ದರೆ ಅಲ್ಲಿಯಂತೂ ಶುಭ-ಅಶುಭಭಾವಗಳು ಆತ್ಮನ ಸ್ವಭಾವದಲ್ಲಿ ಇರುವುದೇ ಇಲ್ಲ ; ಆತ್ಮನು ಶುಭಾಶುಭಭಾವಗಳನ್ನು ಮಾಡುವುದೇ ಇಲ್ಲವೆಂದು ಹೇಳುತ್ತಾರೆ, ಆದರೆ ಇಲ್ಲಿಯಂತೂ ಪರ್ಯಾಯದ ಅಪೇಕ್ಷೆಯಿಂದ ಕಥನವಿರುವುದರಿಂದ ಆತ್ಮನನ್ನು ಶುಭಾಶುಭ ಭಾವಗಳ ಕರ್ತೃವೆಂದು ಹೇಳಲಾಗಿದೆ ಮತ್ತು ತನ್ನ ಶುಭ-ಅಶುಭ ಭಾವಗಳ ಫಲರೂಪವಾಗಿ ಪ್ರಾಪ್ತವಾಗುವಂಥ ಸುಖ-ದುಃಖಗಳನ್ನು ಭೋಗಿಸುವಂಥವನು ಕೂಡ ಸ್ವಯಂ ಜೀವನೇ ಇದ್ದಾನೆ. ಸುಖ-ದುಃಖಗಳನ್ನು ಭೋಗಿಸುವ ರೂಪದ ಕ್ರಿಯೆಯು ಪರದ ಕಾರಣದಿಂದ ಆಗುವುದಿಲ್ಲ. ಆದರೆ ಆ ಕ್ರಿಯೆಯು ಸ್ವಯಂ ಜೀವದ್ದೆ ಇದೆ. ಯಾವುದೇ ಸಂಯೋಗಗಳು ಅವನಿಗೆ ಸುಖ-ದುಃಖಗಳನ್ನು ಕೊಡುವಲ್ಲಿ ಸ್ವಲ್ಪವೂ ಸಮರ್ಥವಿರುವುದಿಲ್ಲ, ಆದರೆ ಜೀವನು ಅಜ್ಞಾನದಿಂದ ಹಾಗೆ ತಿಳಿದುಕೊಳ್ಳುತ್ತಾನೆ.

ಈ ಪ್ರಕಾರ ಜ್ಞಾನ-ದರ್ಶನ, ಸುಖ-ದುಃಖ, ಶುಭ-ಅಶುಭ ಅಥವಾ ಹರುಷ-ವಿಷಾದ ಮೊದಲಾದ ಕ್ರಿಯೆಗಳ ಕರ್ತೃವಂತೂ ಜೀವನೇ ಇದ್ದಾನೆಂಬುದನ್ನು ಖಚಿತವಾಗಿ ತಿಳಿದುಕೊಳ್ಳಬೇಕು. ತಿಳಿದುಕೊಳ್ಳುವುದು-ನೋಡುವುದು ಮೊದಲಾದವುಗಳ ಕ್ರಿಯೆಗಳು ಅಜೀವದಲ್ಲಿ ಇರುವುದಿಲ್ಲವೆಂಬುದನ್ನು ತಿಳಿದುಕೊಂಡು ಜೀವ-ಅಜೀವದ ಭೇದಜ್ಞಾನ ಮಾಡುವುದು ಅಪೂರ್ವ ಧರ್ಮವಿದೆ.

ಒಂಭತ್ತು ಪದಾರ್ಥಗಳಲ್ಲಿ ಮೊದಲನೆಯದಾಗಿ ಜೀವ ಪದಾರ್ಥವು ಬರುತ್ತದೆ. ಇಂಥ ಜೀವದಪ್ರತೀತಿಯನ್ನು ಮಾಡಿಕೊಳ್ಳುವುದಿಲ್ಲ ಮತ್ತು ಬಾಹ್ಯದ ಕ್ರಿಯೆಗಳಲ್ಲಿ ಧರ್ಮವಿದೆಯೆಂದು ಮನ್ನಿಸಿಕೊಳ್ಳುತ್ತಿರುವವನಿಗೆ ಸಂಸಾರದ ಪರಿಭ್ರಮಣವು ನಿಂತುಹೋಗುವುದಿಲ್ಲ. ಆದುದರಿಂದ ಮೊಟ್ಟ ಮೊದಲು ಜೀವನು ಯಾವ ಪ್ರಕಾರನಿದ್ದಾನೆ ಮತ್ತು ಜೀವದಕ್ರಿಯೆಗಳು ಯಾವುವಿವೆಯೆಂಬುದನ್ನು ತಿಳಿದುಕೊಳ್ಳಬೇಕಾವುದು. ಶರೀರವು ಉಚ್ಚ-ನೀಚವಾಗುವುದು, ನಡೆದಾಡುವುದು, ಮಾತನಾಡುವುದು ಇವೇ ಮೊದಲಾದುವಂತೂ ಅಜೀವದ ಕ್ರಿಯೆಗಳಿವೆ, ಆ ಕ್ರಿಯೆಗಳಲ್ಲಿಯೇನು ಜೀವದ ಧರ್ಮವು ಇರುವುದಿಲ್ಲ. ಜೀವದ ಧರ್ಮವಂತೂ ತನ್ನ ಜ್ಞಾನ-ದರ್ಶನ ಮೊದಲಾದವುಗಳ ಕ್ರಿಯೆಗಳಲ್ಲಿ ಇರುತ್ತದೆ. ''ಮನ-ವಚನ-ಕಾಯದಿಂದ ಮಾಡುವದು, ಅನ್ಯರಿಂದ ಮಾಡಿಸುವುದು ಮತ್ತು ಅನ್ಯರಿಗೆ ಅನುಮೋದನೆ ಕೊಡುವುದು'' - ಎಂಬುದಾಗಿ ನವಕೋಟಿಯಿಂದ ತ್ಯಾಗಮಾಡುವುದರ ಕಥನವು ಬರುತ್ತದೆ. ಅಲ್ಲಿ ಆ ಪ್ರಕಾರದ ಜೀವದ ಭಾವಗಳನ್ನು ಬಿಡಿಸುವುದರ ಸಲುವಾಗಿ ಈ ಪ್ರಕಾರದ ಮಾತುಗಳನ್ನು ಹೇಳಲಾಗಿದೆ. ಆದರೆ ಯಾವುದೇ ಜಡದ ಕ್ರಿಯೆಯನ್ನು ಆತ್ಮನು ಮಾಡುವುದೇ ಇಲ್ಲ ಮತ್ತು ಜಡದ ಕ್ರಿಯೆಯನ್ನು ಬಿಡಿಸುವುದರ ಮಾತಂತೂ ಇಲ್ಲ. ಮಾಡುವುದರ, ಮಾಡಿಸುವುದರ ಅಥವಾ ಅನುಮೋದನೆ ಕೊಡುವುದರ ಭಾವಗಳು ಯಾರಿಗೆ ಇರುವವು ? ಆ ಭಾವಗಳಂತೂ ಜೀವದ ಪರ್ಯಾಯದಲ್ಲಿ ಆಗುತ್ತಿರುವುದರಿಂದ ಆ ಭಾವಗಳನ್ನು ಬಿಟ್ಟುಕೊಡುವುದರ ಮಾತುಗಳಿವೆಯೆಂದು ತಿಳಿದುಕೊಳ್ಳಬೇಕು. ಈ ಪ್ರಕಾರ ತಿಳಿದುಕೊಳ್ಳುವುದಿಲ್ಲ ಮತ್ತು ಆತ್ಮನಿಗೆ ಜಡದ ಕ್ರಿಯೆಯಿಂದ ಧರ್ಮ-ಅಧರ್ಮಗಳನ್ನು ಮನ್ನಿಸಿದರೆ ಅವನಿಗಂತೂ ಇನ್ನೂ ಜೀವ-ಅಜೀವದ ಭಿನ್ನತೆಯದೂ ಕೂಡ ಪ್ರತೀತಿಯಿಲ್ಲ ಅವನಿಗೆ ಧರ್ಮವು ಆಗುವುದೇ ಇಲ್ಲ. ಅದಕ್ಕಾಗಿಯೇ ಇಲ್ಲಿ ಜೀವ-ಅಜೀವದ ಲಕ್ಷಣವನ್ನು ತಿಳಿಸಿಕೊಟ್ಟು ಭೇದಜ್ಞಾನ ಮಾಡಿಸಲಾಗಿದೆ.

ಈಗ ಜೀವ-ಅಜೀವದ ವ್ಯಾಖ್ಯಾನವನ್ನು ಸಂಕ್ಷೇಪದಿಂದ ಹೇಳುತ್ತಾರೆ -

**ಏವಮಭಿಗಮ್ಮ ಜೀವಂ ಅಣ್ಣೇಹಿಂ ವಿ ಪಜ್ಜಏಹಿಂ ಬಹುಗೇಹಿಂ ।**
**ಅಭಿಗಚ್ಛದು ಅಜ್ಜೀವಂ ಣಾಣಂತರಿದೇಹಿಂ ಲಿಂಗೇಹಿಂ ॥೧೨೩॥**

**ಅನೇಕ ವಿಧ ಬೇರೆ ಪರ್ಯಾಯಗಳಿಂದ ಹೀಗೆ ಜೀವವನು ತಿಳಿದುಕೊಂಡು ।**
**ಜ್ಞಾನ ವಿಭಿನ್ನ ಜಡಲಿಂಗಗಳಿಂದ ಅಜೀವ ಪದಾರ್ಥವನು ತಿಳಿಯುವುದು ॥೧೨೩॥**

ಈ ಪ್ರಕಾರ ಇತರ ಅನೇಕ ಪರ್ಯಾಯಗಳಿಂದ ಆತ್ಮನನ್ನು ತಿಳಿದುಕೊಂಡು ಜ್ಞಾನದಿಂದ ಭಿನ್ನ ಸ್ಪರ್ಶ, ರಸ, ಗಂಧ, ವರ್ಣ ಮೊದಲಾದ ಚಿಹ್ನದಿಂದ ಪುದ್ಗಲ ಮೊದಲಾದ ಐದು ಅಜೀವ ದ್ರವ್ಯಗಳನ್ನು ತಿಳಿಯುವುದು.

ಈ ಪ್ರಕಾರ ಜ್ಞಾನ-ದರ್ಶನ ಮೊದಲಾದ ಕ್ರಿಯೆಗಳ ಮೂಲಕ ಜೀವವನ್ನು ಇತರದ್ರವ್ಯಗಳಿಂದ ಭಿನ್ನವಾಗಿ ತಿಳಿದುಕೊಳ್ಳಬೇಕಾಗುವುದು. ಅದೇ ರೀತಿಯಿಂದ ಗುಣಸ್ಥಾನ, ಜೀವಸ್ಥಾನ ಮೊದಲಾದ ಇತರ ಪರ್ಯಾಯಗಳಿಂದಲೂ ಕೂಡ ಜೀವವನ್ನು ಇನ್ನಿತರ ಅಜೀವ ದ್ರವ್ಯಗಳಿಂದ ಭಿನ್ನವಾಗಿ ತಿಳಿದುಕೊಳ್ಳಬೇಕಾಗುವುದು. ನೋಡಿರಿ ! ಸಮಯಸಾರ, ನಿಯಮಸಾರ ಮೊದಲಾದ ಗ್ರಂಥಗಳಲ್ಲಿ ಜೀವದ ಅಖಂಡ ಸ್ವಭಾವದ ಅಧಿಕತೆಯನ್ನು ತಿಳಿಸಿಕೊಡುವುದರ ಸಲುವಾಗಿ ಜೀವಸ್ಥಾನ, ಗುಣಸ್ಥಾನ ಮೊದಲಾದವುಗಳನ್ನು ಅಜೀವದ ಪರಿಣಾಮಗಳೆಂದು ಹೇಳಲಾಗಿದೆ. ಅಲ್ಲಿ ಪರ್ಯಾಯವನ್ನು ಗೌಣಮಾಡಿ ದ್ರವ್ಯದೃಷ್ಟಿಯ ವಿಷಯವನ್ನು ತಿಳಿಸಿಕೊಡಲಾಗಿದೆ ಮತ್ತು ಇಲ್ಲಿಯಂತೂ ಅಜೀವ ದ್ರವ್ಯಗಳಿಂದ ಭಿನ್ನತೆಯನ್ನು ತಿಳಿಸಿಕೊಡುವುದರ ಸಲುವಾಗಿ ಜೀವದ ಪರ್ಯಾಯದ ಮೂಲಕ ಜೀವವನ್ನು ಗುರುತಿಸಿಕೊಳ್ಳಲಾಗಿದೆ, ಮಿಥ್ಯಾತ್ವ ಮೊದಲಾದ ಹದಿನಾಲ್ಕು ಗುಣಸ್ಥಾನಗಳಿವೆ ಅವೆಲ್ಲ ಭಾವಗಳು ಜೀವದ ಪರ್ಯಾಯದಲ್ಲಿ ಆಗುತ್ತವೆ, ಅವೇನು ಅಜೀವದ ಕಾರಣದಿಂದ ಆಗುವುದಿಲ್ಲ. ತ್ರಿಕಾಲೀ ಧ್ರುವ ಸ್ವಭಾವದ ದೃಷ್ಟಿ ಮಾಡಿಸುವುದರ ಸಲುವಾಗಿ ಅವನ್ನು ಕರ್ಮಜನಿತವೆಂದು ಹೇಳಲಾಗಿದೆ, ಆದರೆ ಅಲ್ಲಿಯಂತೂ ಪರ್ಯಾಯವನ್ನು ಅಂತರ್ಮುಖಗೊಳಿಸಿ ಅಭೇದ ಸ್ವಭಾವವನ್ನು ತಿಳಿಸಿಕೊಡುವುದರದೇ ಅಭಿಪ್ರಾಯವಿದೆ-ಪ್ರಯೋಜನವಿದೆ. ಒಂದುವೇಳೆ ಪರ್ಯಾಯವನ್ನೇ ಪರಾಧೀನವೆಂದು-ಕರ್ಮದ ಕಾರಣದಿಂದ ಇದೆಯೆಂದು ಮನ್ನಿಸಿಕೊಂಡರೆ ಅವನು ಅಂತರ್ಮುಖನಾಗಿ ಅಭೇದಸ್ವಭಾವದ ದೃಷ್ಟಿಯನ್ನು ಹೇಗೆ, ಎಲ್ಲಿಂದ ಮಾಡುವನು ? ಏಕೆಂದರೆ ಅಭೇದ ಸ್ವಭಾವವನ್ನು ದೃಷ್ಟಿಯಲ್ಲಿ ತೆಗೆದುಕೊಳ್ಳುವುದಂತೂ ಪರ್ಯಾಯವಿದೆ. ಆ ಪರ್ಯಾಯವನ್ನೇ ಯಾರು ಪರದ ಕಾರಣದಿಂದ ಇದೆಯೆಂದು ಮನ್ನಿಸಿಕೊಂಡರೆ ಆ ಜೀವನು ಪರ್ಯಾಯವನ್ನು ಅಂತರ್ಯದಲ್ಲಿ ಸ್ವಭಾವದ ಸನ್ಮುಖ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಎಷ್ಟು ಜೀವದ ಪರ್ಯಾಯಗಳಿವೆ ಅವೆಲ್ಲವೂ ಸ್ವಯಂ ಜೀವದ ಕಾರಣದಿಂದಲೇ ಆಗುತ್ತವೆಯೆಂಬುದನ್ನು ನಿರ್ಣಯ ಮಾಡಿಕೊಳ್ಳಬೇಕಾಗುವುದು. ಈ ಪ್ರಕಾರ ಆತ್ಮನ ಪರ್ಯಾಯಗಳ ವಿಲಾಸವಿದೆ. ಆ ಪರ್ಯಾಯಗಳ ವಿಲಾಸದಿಂದ ಜೀವತತ್ತ್ವವನ್ನು ತಿಳಿದುಕೊಳ್ಳಬೇಕು. ನಿಗೋದದ ದಶೆ, ನರಕಾದಿಗಳ ದಶೆ ಮೊದಲಾದವುಗಳೆಲ್ಲ ದಶೆಗಳಲ್ಲೂ ಕೂಡ ಜೀವತತ್ತ್ವದ ವಿಲಾಸವಿದೆ. ಜಗತ್ತಿನ ಯಾವ ಸಮಸ್ತ ಪದಾರ್ಥಗಳು ಕಂಡು ಬರುತ್ತವೆ, ಅವೆಲ್ಲವುಗಳಲ್ಲಿಯಂತೂ ಜಡದ ವಿಲಾಸವಿದೆ, ಅವುಗಳಲ್ಲಿ ಆತ್ಮನ ವಿಲಾಸವಿಲ್ಲ. ಆತ್ಮನ ವಿಲಾಸವಂತೂ ತನ್ನ ಪರ್ಯಾಯಗಳಲ್ಲಿಯೇ ಇದೆಯೆಂದು ಜೀವದ ಪರ್ಯಾಯದ ಮೂಲಕ ಜೀವವನ್ನು ತಿಳಿದುಕೊಳ್ಳಬೇಕು. ಜೀವದ ಶುದ್ಧಪರ್ಯಾಯವಿರಲಿ ಅಥವಾ ಅಶುದ್ಧ ಪರ್ಯಾಯವಿರಲಿ ಅವುಗಳ ಮೂಲಕ ಒಂದು ಜೀವತತ್ತ್ವವೇ ತಿಳಿದುಬರುತ್ತದೆ ಮತ್ತು ಅಚೇತನತೆಯ ಮೂಲಕ ಅಜೀವ ತತ್ತ್ವವು ತಿಳಿದುಬರುತ್ತದೆ.

ಒಮ್ಮೊಮ್ಮೆ ಮೋಹ-ರಾಗ-ದ್ವೇಷ ಮೊದಲಾದ ಅಶುದ್ಧ ಪರ್ಯಾಯಗಳಾಗುತ್ತವೆ. ಅವು ಅಶುದ್ಧ ನಿಶ್ಚಯನಯದಿಂದ ಜೀವವಿದೆ. ಆ ಅಶುದ್ಧ ಪರ್ಯಾಯದಿಂದ ಜೀವತತ್ತ್ವವು ತಿಳಿದುಬರುತ್ತದೆ. ಏಕೆಂದರೆ ಅದು ಜೀವದ ಪರ್ಯಾಯವಿದೆ ಮತ್ತು ಆ ಅಶುದ್ಧತೆಯು ಹೊರಟುಹೋಗಿ ಶುದ್ಧಪರ್ಯಾಯವು ಪ್ರಕಟವಾಗುವುದು. ಆ ಶುದ್ಧ ಪರ್ಯಾಯದಿಂದ ಕೂಡ ಜೀವತತ್ತ್ವವೇ ತಿಳಿದುಬರುತ್ತದೆ.

ಈ ಪ್ರಕಾರ ಸರ್ವಜ್ಞದೇವ ಪ್ರಣೀತ ಆಗಮದ ಅನುಸಾರ ಅನೇಕ ಪ್ರಕಾರದ ನಯವಿಭಾಗದಿಂದ ಜೀವತತ್ತ್ವವನ್ನು ತಿಳಿದುಕೊಳ್ಳಬೇಕು ಮತ್ತು ಜಡಸ್ವಭಾವದ ಮೂಲಕ ಅಜೀವತತ್ತ್ವವನ್ನು ತಿಳಿದುಕೊಳ್ಳಬೇಕು. ಕರ್ಮಗಳು-ನೋಕರ್ಮಗಳು ಅಥವಾ ಬಿಡಿಬಿಡಿಯಾದ ರಜಕಣಗಳು ಅವೆಲ್ಲವೂ ಅಜೀವವಿವೆ. ಜೀವವು ಜ್ಞಾನ-ದರ್ಶನಮಯವಿದೆ, ಅದು ಅಜೀವದಿಂದ ಅತ್ಯಂತ ಭಿನ್ನವಿದೆ. ಈ ಪ್ರಕಾರ ಜೀವದ ಲಕ್ಷಣದಿಂದ ಜೀವವನ್ನು ತಿಳಿದುಕೊಳ್ಳುವುದು ಮತ್ತು ಅಜೀವದ ಲಕ್ಷಣದಿಂದ ಅಜೀವವನ್ನು ತಿಳಿದುಕೊಳ್ಳುವುದು. ಈ ರೀತಿಯಿಂದ ಜೀವ-ಅಜೀವದ ಭೇದಜ್ಞಾನ ಮಾಡಿಸುವುದರ ಸಲುವಾಗಿಯೇ ಜೀವ-ಅಜೀವದ ಪೃಥಕ್-ಪೃಥಕ್ ಲಕ್ಷಣಗಳನ್ನು ಇಲ್ಲಿ ತಿಳಿಸಿಕೊಡಲಾಗಿದೆ.

ಜೀವ-ಅಜೀವದ ಭೇದಜ್ಞಾನ ಮಾಡದ ಹೊರತಾಗಿ ಪರದೊಳಗಿಂದ ಏಕತ್ವದ ಬುದ್ಧಿಯು ಹೊರಟು ಹೋಗುವುದಿಲ್ಲ ಮತ್ತು ಅದರ ಹೊರತಾಗಿ ಧರ್ಮವಾಗುವುದಿಲ್ಲ. ನೋಡಿರಿ ! ಇದನ್ನು ತಿಳಿದುಕೊಳ್ಳದ ಹೊರತಾಗಿ ಜನ್ಮ-ಮರಣಗಳ ಮೂಲಕ ಉಂಟಾಗಿರುವ ಆಯಾಸವು ನಿವಾರಣೆಯಾಗಿ ಹೋಗುವಂತಿಲ್ಲ. ಅಯ್ಯಾ! ನಿನಗೆ ಜನ್ಮ -ಮರಣಗಳ ಆಯಾಸವನ್ನು ಸಂಪೂರ್ಣವಾಗಿ ನಾಶಮಾಡಿ ಬಿಡುವುದಿದ್ದರೆ ನೀನು ಜ್ಞಾನ ಮೊದಲಾದ ಲಕ್ಷಣಗಳ ಮೂಲಕ ನಿನ್ನ ಜೀವತತ್ತ್ವವನ್ನು ಅಜೀವದಿಂದ ಭಿನ್ನವಿದೆಯೆಂಬುದನ್ನು ಪರಿಚಯ ಮಾಡಿಕೊಂಡು ನಿನ್ನ ಜೀವತತ್ತ್ವದಲ್ಲಿ ವಿಶ್ರಾಂತಿ ಪಡೆ. ಅಂಥ ಸುಖ-ಶಾಂತಿಗಳು ನಿನಗೆ ಲೋಕದಲ್ಲಿ ಬೇರೆಲ್ಲಿಯೂ ದೊರಕುವ ಸಾಧ್ಯತೆಯಿಲ್ಲ.

ಅಭವ್ಯ ಜೀವರುಗಳಿಗೆ ಕೂಡ ಯಾವ ಮಿಥ್ಯಾತ್ವ ಮೊದಲಾದ ಭಾವಗಳಿವೆ ಅವು ಕರ್ಮದ ಕಾರಣದಿಂದಿಲ್ಲ. ಆದರೆ ಅವು ತನ್ನ ಪರ್ಯಾಯದ ಕಾರಣದಿಂದಲೇ ಇವೆ. ಈ ಪ್ರಕಾರ ಒಂಭತ್ತು ತತ್ತ್ವಗಳಲ್ಲಿ ಜೀವವನ್ನು ಅಜೀವದಿಂದ ಭಿನ್ನವಾಗಿ ತಿಳಿದುಕೊಳ್ಳಬೇಕು. ಈ ಒಂಭತ್ತು ತತ್ತ್ವಗಳಲ್ಲಿ ಒಂದು ಜೀವ ತತ್ತವನ್ನು ತಿಳಿದುಕೊಳ್ಳುವುದೇ ತಾತ್ಪರ್ಯವಿದೆ, ಪ್ರಯೋಜನವಿದೆ. ಒಂಭತ್ತು ತತ್ತ್ವಗಳಲ್ಲಿ ಜೀವದ ಪರ್ಯಾಯವನ್ನು ಪರ್ಯಾಯದ ರೂಪದಲ್ಲಿ ತಿಳಿದುಕೊಂಡಿದೆ ಮತ್ತು ದ್ರವ್ಯವನ್ನು ದ್ರವ್ಯದ ರೂಪದಲ್ಲಿ ತಿಳಿದುಕೊಂಡಿದೆ. ಆ ಜ್ಞಾನದ ಬಲವು ಅಖಂಡ ದ್ರವ್ಯದ ಕಡೆಗೆ ತಿರುಗದೆ ಇರುವುದೇ ಇಲ್ಲ. ಏಕೆಂದರೆ ದ್ರವ್ಯವನ್ನು ದ್ರವ್ಯದ ರೂಪದಿಂದ ತಿಳಿದುಕೊಂಡಿದೆ ಮತ್ತು ಪರ್ಯಾಯವನ್ನು ಪರ್ಯಾಯದ ರೂಪದಲ್ಲಿ ತಿಳಿದುಕೊಂಡಿದೆ. ಅಲ್ಲಿ ಪರ್ಯಾಯಕ್ಕಿಂತಲೂ ದ್ರವ್ಯದ ಸಾಮರ್ಥ್ಯವು ಅನಂತಗುಣಿತ ಅಧಿಕವಿದೆಯೆಂಬುದನ್ನು ಆ ಜ್ಞಾನವು ತಿಳಿದುಕೊಂಡಿರುವುದರಿಂದ ಆ ಜ್ಞಾನದ ಪ್ರವೃತ್ತಿಯು ಅಖಂಡ ದ್ರವ್ಯದ ಕಡೆಗೆ ಬಾರದ ಹೊರತಾಗಿ ಇರುವ ಸಾಧ್ಯತೆಯೇ ಇಲ್ಲ. ಈ ಪ್ರಕಾರ ಒಂಭತ್ತು ತತ್ತ್ವಗಳ ಜ್ಞಾನದಲ್ಲಿ ಕೂಡ ಅಭೇದ ದ್ರವ್ಯದ ಕಡೆಗೆ ಪ್ರವೃತ್ತಿಯು ತಾನಾಗಿಯೇ ಬಂದುಬಿಡುತ್ತದೆ.

ಈ ಪ್ರಕಾರ ಒಂಭತ್ತು ತತ್ತ್ವಗಳಲ್ಲಿ ಜೀವತತ್ತ್ವದ ವರ್ಣನೆಯು ಇಲ್ಲಿಗೆ ಪೂರ್ಣವಾಯಿತು. ಈಗ ಅಜೀವ ತತ್ತ್ವದ ವರ್ಣನೆಯನ್ನು ಮಾಡಲಾಗುತ್ತದೆ,-

**ಆಗಾಸಕಾಲಪೋಗ್ಗಲಧಮ್ಮಾಧಮ್ಮೇಸು ಣತ್ಥಿ ಜೀವಗುಣಾ ।**
**ತೇಸಿಂ ಅಚೇದಣತ್ತಂ ಭಣಿದಂ ಜೀವಸ್ಸ ಚೇದಣದಾ ॥೧೨೪॥**

**ಜೀವ ಗುಣಗಳಿಲ್ಲ ಆಕಾಶ, ಕಾಲ, ಪುದ್ಗಲ, ಧರ್ಮ ಮೇಣಧರ್ಮಗಳಲಿ ।**
**ಅವುಗಳಿಗೆ ಅಚೇತನತೆ ಹೇಳಿದರೆ ಜೀವಕ್ಕೆ ಚೇತನತೆ ಹೇಳಿದೆ ॥೧೨೪॥**

ಆಕಾಶದ್ರವ್ಯ, ಕಾಲದ್ರವ್ಯ, ಪುದ್ಗಲದ್ರವ್ಯ, ಧರ್ಮದ್ರವ್ಯ ಮತ್ತು ಅಧರ್ಮದ್ರವ್ಯವೆಂದು ಈ ಐದು ದ್ರವ್ಯಗಳಲ್ಲಿ ಸುಖದ ಸತ್ತಾ, ಬೋಧ, ಚೈತನ್ಯ ಮೊದಲಾದ ಜೀವದ ಗುಣಗಳು ಇರುವುದಿಲ್ಲ. ಸರ್ವಜ್ಞ ಭಗವಂತರು ಆ ಐದೂ

ದ್ರವ್ಯಗಳಲ್ಲಿ ಚೇತನತೆಯಿಂದ ರಹಿತವಾದ ಜಡಭಾವವಿದೆಯೆಂದು ಹೇಳಿದ್ದಾರೆ. ಚೈತನ್ಯ ಭಾವವನ್ನು ಒಂದು ಜೀವದ್ರವ್ಯದಲ್ಲಿಯೇ ಹೇಳಲಾಗುತ್ತದೆ.

''ಸಚೇತನ ವನಸ್ಪತಿ'' ಎಂದು ಹೇಳಲಾಗಿದೆ. ಅಲ್ಲಿ ನಿಜವಾಗಿಯಂತೂ ಬಾಹ್ಯದಲ್ಲಿ ಯಾವ ಕೆಂಪು ವನಸ್ಪತಿಯು ಕಂಡುಬರುತ್ತದೆ ಆ ವನಸ್ಪತಿಯಂತೂ ಜಡವಿದೆ, ಜೀವವಂತೂ ಚೈತನ್ಯ ಲಕ್ಷಣವುಳ್ಳದ್ದಿದೆ. ಅದು ಅಜೀವದಿಂದ ಅತ್ಯಂತ ಭಿನ್ನವಿದೆ. ಜೀವ-ಅಜೀವ ಮೊದಲಾದ ನವತತ್ತ್ವಗಳನ್ನು ತಿಳಿದುಕೊಂಡು ಅವುಗಳಲ್ಲಿ ಉಪಾದೇಯರೂಪವಂತೂ ಜ್ಞಾಯಕ ಮೂರ್ತಿಯಾದ ಒಂದು ಶುದ್ಧ ಜೀವವೇ ಇದೆ. ತಿಳಿದುಕೊಳ್ಳಲು ಯೋಗ್ಯವಂತೂ ಎಲ್ಲ ತತ್ತ್ವಗಳಿವೆ, ಆದರೆ ಅವುಗಳನ್ನೆಲ್ಲಾ ತಿಳಿದುಕೊಂಡು ಶುದ್ಧ ಭೂತಾರ್ಥ ಜ್ಞಾಯಕ ಜೀವವನ್ನು ಆದರಿಸುವದು-ಸ್ವೀಕರಿಸುವುದು ತಾತ್ಪರ್ಯವಿದೆ.

ಈಗ ಪುಣ್ಯ ಪಾಪದ ಸ್ವರೂಪವನ್ನು ತಿಳಿಸಿಕೊಡುತ್ತಾರೆ, ಅದರಂತೆ ಪುಣ್ಯ-ಪಾಪಕ್ಕೆ ಯೋಗ್ಯವಾದ ಪರಿಣಾಮದ ಸ್ವರೂಪವನ್ನು ಕೂಡ ತಿಳಿಸಿಕೊಡುತ್ತಾರೆ,-

**ಸುಹದುಕ್ಖ ಜಾಣಣಾ ವಾ ಹಿದಪರಿಯಮ್ಮಂ ಚ ಅಹಿದಭೀರುತ್ತಂ ।**
**ಜಸ್ಸ ಣ ವಿಜ್ಜದಿ ಣಿಚ್ಚಂ ತಂ ಸಮಣಾ ಬೇಂತಿ ಅಜ್ಜೀವಂ ॥೧೨೫॥**

**ಸುಖ ದುಃಖದ ಸಂಚೇತನ ಹಿತದುದ್ಯೋಗ ಮೇಣಹಿತದ ಹೆದರಿಕೆಯು ।**
**ಅಖಂಡ ಯಾವವುಗಳಿಗಿಲ್ಲವನು ಅಜೀವವೆಂದು ಶ್ರಮಣ ಪೇಳಿಹರು ॥೧೨೫॥**

ಆರು ದ್ರವ್ಯಗಳ ಸ್ವತಂತ್ರತೆಯ ಮಾತು ಈ ಮೊದಲು ಬಂದು ಹೋಗಿದ್ದರೂ ಕೂಡ ಪುನಃ ಅಜೀವದ ಅಧಿಕಾರವೇಕೆಂದು ಯಾರಾದರೂ ಪ್ರಶ್ನೆ ಮಾಡಿದರೆ ಅದರ ಉತ್ತರವು ಈ ಪ್ರಕಾರವಿದೆ.

ಇಲ್ಲಿ ಅಜೀವದ ವ್ಯಾಖ್ಯೆಯು ಬೇರೆ ರೀತಿಯಿಂದ ಬಂದಿದೆ. ಜೀವದ ದ್ರವ್ಯ-ಗುಣ-ಪರ್ಯಾಯಗಳು ಯಾವುದರಲ್ಲಿ ಇವೆ ಅದರಲ್ಲಿ ಅಜೀವದ ದ್ರವ್ಯ-ಗುಣ-ಪರ್ಯಾಯಗಳಿಲ್ಲ. ಯಾವ ದ್ರವ್ಯದಲ್ಲಿ ಸುಖ-ದುಃಖಗಳಿಲ್ಲ ಅದು ಅಜೀವವಿದೆ. ಕರ್ಮದಲ್ಲಿ, ಪುದ್ಗಲದಲ್ಲಿ, ಶರೀರದಲ್ಲಿ, ವಾಣಿಯಲ್ಲಿ, ಧರ್ಮ, ಅಧರ್ಮ, ಆಕಾಶ, ಕಾಲ ಮೊದಲಾದ ದ್ರವ್ಯಗಳಲ್ಲಿ ಸುಖ-ದುಃಖಗಳು ಅಥವಾ ತಿಳಿವಳಿಕೆಯಿಲ್ಲ ಅವು ಅಜೀವ ದ್ರವ್ಯಗಳಿವೆ. ಯಾವುದೇ ಜೀವವು ಭಯದ ಕಾರಣದಿಂದ ಹೆದರುತ್ತದೆ ಮತ್ತು ಓಡಿಹೋಗುತ್ತದೆ ಆದರೆ ಅಲ್ಲಿ ಭಯ ಅಥವಾ ದುಃಖವು ಶರೀರಕ್ಕೆ ಇರುವುದಿಲ್ಲ. ಜೀವಕ್ಕೆ ದುಃಖ ಅಥವಾ ಭಯವಿರುತ್ತದೆ. ಆ ಭಯವು ಕರ್ಮದ ಪರ್ಯಾಯದಲ್ಲಿ ಇಲ್ಲ. ಶರೀರದ ಕ್ಷೇತ್ರಾಂತರವು ಶರೀರದ ಕಾರಣದಿಂದ ಇದೆ ಮತ್ತು ಆತ್ಮನ ಕ್ಷೇತ್ರಾಂತರವು ಆತ್ಮನ ಕಾರಣದಿಂದ ಇದೆ ಶರೀರ, ಕರ್ಮ ಮೊದಲಾದ ಅಜೀವ ಪದಾರ್ಥಗಳಲ್ಲಿ ಸುಖ-ದುಃಖಗಳಿರುವುದಿಲ್ಲ. ಯಾವ ದ್ರವ್ಯದಲ್ಲಿ ಸುಖ-ದುಃಖದ ತಿಳವಳಿಕೆ ಅಥವಾ ಉತ್ತಮ ಕಾರ್ಯದಲ್ಲಿ ಪ್ರವೃತ್ತಿ ಅಥವಾ ದುಃಖದಾಯಕ ಕಾರ್ಯದಿಂದ ಭಯವಿಲ್ಲ ಅಂಥ ದ್ರವ್ಯಗಳನ್ನು ಗಣಧರ ಮೊದಲಾದ ಜ್ಞಾನಿಗಳು ಅಜೀವ ಪದಾರ್ಥವೆಂದು ತಿಳಿದುಕೊಂಡಿದ್ದಾರೆ.

**ಭಾವಾರ್ಥ ಃ-** ಯಾವ ದ್ರವ್ಯಗಳಲ್ಲಿ ಸುಖ-ದುಃಖದ ತಿಳಿವಳಿಕೆಯಿಲ್ಲ ಅವು ಅಜೀವವಿದೆ. ಮತ್ತು ಯಾವ ದ್ರವ್ಯಗಳಲ್ಲಿ ಇಷ್ಟ-ಅನಿಷ್ಟ ಕಾರ್ಯ ಮಾಡುವ ಶಕ್ತಿಯಿಲ್ಲ ಅವು ಅಜೀವವಿವೆ. ಕಣ್ಣು, ಕಿವಿ, ನಾಲಿಗೆಯಲ್ಲಿ ಹಿತಾಹಿತದ ಬುದ್ಧಿಯಿಲ್ಲ. ಈ ದ್ರವ್ಯಗಳ ವಿಷಯದಲ್ಲಿ ಅನುಮಾನವಾಗುವುದೇನೆಂದರೆ ಆ ಪದಾರ್ಥಗಳು ಚೇತನಾಗುಣದಿಂದ

ರಹಿತವಿವೆ. ಈ ಆಕಾಶ ಮೊದಲಾದ ಐದು ದ್ರವ್ಯಗಳಿದ್ದು ಅವುಗಳಲ್ಲಿ ಯಾವುದೇ ದ್ರವ್ಯಕ್ಕೆ ಹಿತಾಹಿತದ ಪ್ರವೃತ್ತಿಯು ಇಲ್ಲದಿರುವುದರಿಂದ ಅವುಗಳನ್ನು ಅಜೀವ ದ್ರವ್ಯಗಳೆಂದು ತಿಳಿದುಕೊಳ್ಳಬೇಕು.

**ಸಂಠಾಣಾ ಸಂಘಾದಾ ವಣ್ಣರಸಪ್ಫಾಸಗಂಧಸದ್ದಾ ಯ ।**
**ಪೋಗ್ಗಲದವ್ವಪ್ಪಭವಾ ಹೋಂತಿ ಗುಣಾ ಪಜ್ಜಯಾ ಯ ಬಹೂ ॥೧೨೬॥**
**ಅರಸಮರೂವಮಗಂಧಂ ಅವ್ವತ್ತಂ ಚೇದಣಾಗುಣಮಸದ್ದಂ ।**
**ಜಾಣ ಅಲಿಂಗಗ್ಗಹಣಂ ಜೀವಮಣಿದ್ದಿಟ್ಠಸಂಠಾಣಂ ॥೧೨೭॥**

**ಯಾವ ಸಂಸ್ಥಾನ-ಸಂಘಾತ, ವರ್ಣ-ರಸ-ಸ್ಪರ್ಶ-ಗಂಧವದರಂತೆ ಶಬ್ದಗಳು ।**
**ಇವೆಲ್ಲನೇಕಗುಣ ಮೇಣ್ಪರ್ಯಾಯಗಳು ಪುದ್ಗಲದ್ರವ್ಯದಿಂ ನಿಷ್ಪನ್ನವಿವೆ ॥೧೨೬॥**
**ಅರಸ, ಅರೂಪ, ಅಗಂಧ, ಅವ್ಯಕ್ತ, ಅಶಬ್ದಮೇಣ್ ಅನಿರ್ದಿಷ್ಟ-ಸಂಸ್ಥಾನ ।**
**ಇರೆ ಚೇತನಾಗುಣವುಳ್ಳ ಇಂದ್ರಿಯಗ್ರಾಹ್ಯವಿಲ್ಲದನು ಜೀವವೆಂದರಿವುದು ॥೧೨೭॥**

ಜೀವ-ಪುದ್ಗಲಗಳ ಸಂಯೋಗವು ಕಂಡು ಬರುತ್ತದೆ. ಏಕಕ್ಷೇತ್ರಾವಗಾಹ ಸಂಬಂಧವಿದೆ, ಆದರೆ ಪರಸ್ಪರ ಲಕ್ಷಣ ಭೇದವಿದೆ.

ಈ ನೂರಿಪ್ಪತ್ತೇಳನೆಯ ಗಾಥೆಯು ಸಮಯಸಾರದಲ್ಲಿ ೪೯ ನೆಯ, ಪ್ರವಚನಸಾರದಲ್ಲಿ, ೧೭೨ ನೆಯ ನಿಯಮಸಾರದಲ್ಲಿ ೪೬ನೆಯ ಮತ್ತು ಭಾವಪಾಹುದಲ್ಲಿ ೬೪ ನೆಯದ್ದಿದೆ.

ಜೀವ-ಪುದ್ಗಲಗಳ ಸಂಯೋಗದಲ್ಲಿ ಸಮಚತುರಸ್ರಾದಿ ಆರು ಪ್ರಕಾರದ ಸಂಸ್ಥಾನಗಳಿವೆ ಅಥವಾ ವಜ್ರರ್ಷಭ ನಾರಾಚ ಮೊದಲಾದ ಸಂಹನನಗಳಿವೆ ಅವೆಲ್ಲವೂ ಜಡವಿವೆ. ಅವು ಜೀವದ ಪರ್ಯಾಯದಲ್ಲಿ ಇಲ್ಲ. ಐದು ವರ್ಣ, ಐದು ರಸ, ಎಂಟು ಸ್ಪರ್ಶ, ಎರಡು ಗಂಧ ಹಾಗೂ ಶಬ್ದಗಳು ಪುದ್ಗಲಜನ್ಯ ಗುಣಗಳು ಹಾಗೂ ಪರ್ಯಾಯಗಳಿವೆ. ಈ ಯಾವ ಭಾಷೆ ಆಡಲಾಗುತ್ತದೆ ಅದು ಜಡವಿದೆ, ಅದು ಜೀವದಿಂದ ಆಡಲಾಗುವುದಿಲ್ಲ.

**ಪ್ರಶ್ನೆ :-** ಛದ್ಮಸ್ಥನಿಗೆ ಇಚ್ಛೆಯಿರುವುದರಿಂದ ವಾಣಿ ಆಡಲಾಗುತ್ತದೆಯೆಂಬ ಮೇಳವು ಕಂಡು ಬರುತ್ತದೆಯಲ್ಲ ?

**ಉತ್ತರ :-** ಭಾಷೆಯು ಜಡದಿಂದ ಆಗಿರುವುದು ಜೀವದಿಂದ ಆಗುವುದಿಲ್ಲ ಜಡದ ಅವಸ್ಥೆಯು ಜಡದ ಕಾರಣದಿಂದ ಇದೆ ಮತ್ತು ಜೀವದ ಪರಿಣಾಮವು ಜೀವದ ಕಾರಣದಿಂದ ಇದೆ. ಯಾವುದೂ ಯಾವುದರ ಕಾರಣದಿಂದ ಇಲ್ಲ.

ಜೀವದಲ್ಲಿ ರಸಗುಣವಿಲ್ಲ, ವರ್ಣವಿಲ್ಲ, ಗಂಧವಿಲ್ಲ, ಅವ್ಯಕ್ತವಿದೆ. ಜ್ಞಾನ-ದರ್ಶನ ಗುಣವುಳ್ಳದ್ದಿದೆ, ಶುಭ ಪರ್ಯಾಯದಿಂದ ರಹಿತವಿದೆ. ಇಂದ್ರಿಯ ಮೊದಲಾದ ಚಿಹ್ನಗಳಿಂದ ತಿಳಿದುಬರುವಂತಿಲ್ಲ. ಆತ್ಮನ ಕಾರಣದಿಂದ ಶಬ್ದವಾಗುವುದಿಲ್ಲ ಅದರಂತೆ ಇಂದ್ರಿಯಗಳಿಂದ ಆತ್ಮನು ತಿಳಿದುಬರುವಂಥವನಿಲ್ಲ. ರಾಗ ಮತ್ತು ಪುಣ್ಯದಿಂದ ಕೂಡ ಆತ್ಮನು ತಿಳಿದುಬರುವಂಥವನಿಲ್ಲ ಮನೋಯೋಗದ ಕ್ರಿಯೆಯಿಂದ ಅಥವಾ ಇತರ ಇಂದ್ರಿಯಗಳ ಕ್ರಿಯೆಯಿಂದ ತಿಳಿದುಬರುವಂಥವನಿಲ್ಲ. ಅವನು ಅತೀಂದ್ರಿಯ ಜ್ಞಾನದಿಂದಲೇ ತಿಳಿದುಬರುವಂಥವನಿದ್ದಾನೆ ಮತ್ತು ಅವನಿಗೆ ಜಡದ ಆಕಾರವಿಲ್ಲ ಆದರೆ ತನ್ನದೇ ಆಕಾರವಿದೆ.

**ಭಾವಾರ್ಥ :-** ಅನಾದಿ ಮಿಥ್ಯಾವಾಸನೆಯಿಂದ ಆತ್ಮದ್ರವ್ಯವು ಪುದ್ಗಲದ ಸಂಬಂಧದಿಂದ ತನ್ನ ವಿಭಾವ ಮತ್ತು ಅಜ್ಞಾನದ ಕಾರಣದಿಂದ ಶರೀರ ಮತ್ತು ಇಂದ್ರಿಯಗಳನ್ನು ತನ್ನದೆಂದು ಮನ್ನಿಸಿಕೊಂಡಿದೆ. ದೇವ ಗತಿಯಲ್ಲಿ ಹೋದರೆ ದೇವ ಶರೀರಾದಿಗಳ ಯಾವ ಪ್ರಕಾರಗಳನ್ನು ನೋಡುತ್ತದೆ ಅದನ್ನು ತನ್ನದೆಂದು ಮನ್ನಿಸುವ ವಾಸನೆ ಮಾಡುತ್ತಿರುತ್ತದೆ. ಪೂರ್ವ ಕರ್ಮದ ನಿಮಿತ್ತದಿಂದ ಎಂಥ ಶರೀರ ಕಣ್ಣು, ಕಿವಿ, ಮೂಗು, ಕಂಠ ಮೊದಲಾದವುಗಳಲ್ಲಿ ಇವು ನನ್ನ ಸಲುವಾಗಿ ದೊರಕಿವೆಯೆಂದು ತಿಳಿದುಕೊಳ್ಳುತ್ತಾನೆ ಮತ್ತು ಅವು ನನ್ನ ಅಧಿಕಾರದಲ್ಲಿವೆಯೆಂದು ಮನ್ನಿಸಿ ಮಿಥ್ಯಾವಾಸನೆ ಮಾಡುತ್ತಿರುತ್ತಾನೆ ಮತ್ತು ಅವುಗಳಲ್ಲಿ ಅಹಂ ಭಾವನೆ ಮಾಡುತ್ತಾನೆ. ಶರೀರವು ಗಮನ ಮಾಡಿದರೆ ನಾನು ಗಮನ ಮಾಡಿಸಿದೆನೆಂದು ಮನ್ನಿಸುತ್ತಾನೆ. ಧನವು ತನ್ನ ಸಮೀಪದಲ್ಲಿ ಬಂದರೆ ಈ ಧನವು ನನ್ನದು, ಅದರಂತೆ ಈ ಮಕ್ಕಳು ನನ್ನವರು, ಗುರುಗಳು ನನ್ನವರೆಂಬ ಅಜ್ಞಾನ ಭಾವ ಮಾಡುತ್ತಾನೆ. ದೇವ ಶರೀರ ದೊರೆತಮೇಲೆ ನಾನು ದೇವನಾದೆನು ಮನುಷ್ಯ ಶರೀರ ದೊರೆತ ಮೇಲೆ ನಾನು ಮನುಷ್ಯನಾದೆನೆಂದು ಮನ್ನಿಸಿ ಅಹಂಭಾವ ಮಾಡುತ್ತಾನೆ. ಆ ಮಿಥ್ಯಾ ಭಾವದ ಪ್ರವೃತ್ತಿಯು ತನ್ನ ಪರ್ಯಾಯದಲ್ಲಿ ತನ್ನ ಕಾರಣದಿಂದ ಆಗುತ್ತದೆ. ಆದಾಗ್ಯೂ ಪರದ ಕಾರಣದಿಂದ ಭ್ರಾಂತಿಯಾಯಿತೆಂದು ಮನ್ನಿಸುತ್ತಿದ್ದಾನೆ. ಸಂಯೋಗಗಳು ಹೊರಟು ಹೋಗುತ್ತವೆ, ವಿಕಾರವು ಬಿಟ್ಟು ಹೋಗುತ್ತದೆ. ಒಂದು ಚೈತನ್ಯಭಾವವು ಉಳಿದುಬಿಡುತ್ತದೆ. ಈ ಮಾತಿನ ಮೇಲೆ ಅಜ್ಞಾನಿಗೆ ಶ್ರದ್ಧೆಯಾಗುವುದಿಲ್ಲ.

ಗಮನಾಗಮನ ಮಾಡುವುದು ಅದು ಜೀವವಿದೆ, ಮಾತನಾಡುವುದು ಅದು ಜೀವವಿದೆಯೆಂದು ಅದೆಷ್ಟೋ ಜನರು ಮನ್ನಿಸಿ ಕುಳಿತುಕೊಂಡಿದ್ದಾರೆ. ಇಂಥ ಮನುಷ್ಯನು ಒಳ್ಳೆಯವನಿದ್ದಾನೆಂದು ಯಾರೋ ತಿಳಿದುಕೊಳ್ಳಲಿ ಅಥವಾ ಯಾರಾದರೂ ಕಥನ ಮಾಡಲಿ ಅಜ್ಞಾನಿಗೆ ಆ ಮಾತು ತುಂಬ ರುಚಿಸುತ್ತದೆ ಈಗ ಸಮಾಜದ ದೃಷ್ಟಿಯಲ್ಲಿ ಹೇಗೆ ಒಳ್ಳೆಯವನಾಗಿ ಕಾಣುವೆನು ಮತ್ತು ಅವರೆಲ್ಲರೂ ನನ್ನನ್ನು ಒಳ್ಳೆಯವನೆಂದು ಹೇಳುತ್ತಿರಲಿ ಇದರ ಉದ್ಯೋಗದಲ್ಲಿಯೇ ಅಜ್ಞಾನೀ ಜೀವಗಳು ಉಳಿದುಬಿಟ್ಟಿದ್ದಾರೆ. ಇದು ಮಿಥ್ಯಾವಾಸನೆಯಿದೆ.

ವೀತರಾಗ-ಸರ್ವಜ್ಞದೇವರು ಎರಡೂ ದ್ರವ್ಯಗಳ ಲಕ್ಷಣವನ್ನು ಬೇರೆ ಬೇರೆ ಹೇಳಿದ್ದಾರೆ. ಜಡದ ಲಕ್ಷಣವು ಅಚೇತನತೆಯಿದೆ ಮತ್ತು ಜೀವದ ಲಕ್ಷಣವು ಚೇತನತೆಯಿದೆ. ಎರಡೂ ಭಿನ್ನವಿವೆ ಆದರೂ ನನ್ನ ಹೊರತಾಗಿ ಶರೀರವು ನಡೆಯುವುದಿಲ್ಲ, ವಾಣಿಯು ಆಡುವುದಿಲ್ಲವೆಂಬ ಮಿಥ್ಯಾವಾಸನೆಯನ್ನು ಅಖಂಡವಾಗಿ ಉಳಿಸಿಕೊಂಡಿದ್ದಾನೆ ಅಲ್ಲಿಯವರೆಗೆ ಅಧರ್ಮವನ್ನೇ ಸೇವಿಸುತ್ತಿದ್ದಾನೆ.

ಈ ಕುಟುಂಬವು ನನ್ನದಿದೆಯೆಂದು ಭಾಷೆಯನ್ನಾಡಬಹುದು ಆದರೆ ಅದರಿಂದೇನು ಆ ಕುಟುಂಬವು ನನ್ನದಾಗಿ ಹೋಗುವುದಿಲ್ಲ. ವಾಣಿಯು ವಾಣಿಯ ಕಾರಣದಿಂದ ಇದೆ, ಶರೀರವು ಶರೀರದ ಕಾರಣದಿಂದ ಇದೆ, ಕರ್ಮವು ಕರ್ಮದ ಕಾರಣದಿಂದ ಇದೆ. ಪರ ಪದಾರ್ಥಗಳು ಶರೀರ ಅಥವಾ ಕರ್ಮವೇನು ರಾಗ ಮಾಡಿಸುವುದಿಲ್ಲ ಅದೇ ಪ್ರಕಾರ ಜ್ಞಾನವನ್ನೂ ಮಾಡಿಸುವುದಿಲ್ಲ. ರಾಗವು ಅದು ಚಾರಿತ್ರಗುಣದ ವಿಪರೀತ ಪರ್ಯಾಯವಿದೆ ಆ ಜ್ಞಾನವು ಜೀವದ ಪರ್ಯಾಯವಿದೆ ಆದರೆ ಮಿಥ್ಯಾದೃಷ್ಟಿಗೆ ಅನ್ಯಥಾ ಭಾಸವಾಗುತ್ತದೆ.

ಜೀವ ಮತ್ತು ಅಜೀವದ ಭೇದ ತಿಳಿದುಕೊಂಡು ಯಾವ ಜೀವನು ಭೇದವಿಜ್ಞಾನಿಯಾಗಿ ಆತ್ಮನ ಅನುಭವಿಯಾಗುತ್ತಾನೆ ಅವನು ಮೋಕ್ಷಮಾರ್ಗವನ್ನು ಸಾಧಿಸಿ ನಿರಾಕುಲ ಸುಖದ ಭೋಕ್ತಾರನಾಗುತ್ತಾನೆ. ಅಜೀವದ ಪರಿಣತಿಯು ಅಜೀವದಲ್ಲಿ ಇದೆ, ಜೀವದ ಪರಿಣತಿಯು ಜೀವದಲ್ಲಿ ಇದೆ. ಪರದ ಕಾರಣದಿಂದ ನನಗೆ ರಾಗ ಅಥವಾ ಸಂಸಾರವಿಲ್ಲ ನಾನಂತೂ ಪರವನ್ನು ಅದೇ ಪ್ರಕಾರ ರಾಗವನ್ನು ತಿಳಿದುಕೊಳ್ಳುವವನಿದ್ದೇನೆಂದು ಭೇದವಿಜ್ಞಾನ ಮಾಡುತ್ತಾನೆ ಅವನು ಸುಖದ ಭೋಗ ಭೋಗಿಸುತ್ತಾನೆ.

ಮತ್ತೆ ಯಾರು ಜೀವವನ್ನು ಅಜೀವದಿಂದ ಭಿನ್ನವಾಗಿ ತಿಳಿಸಿಕೊಡುತ್ತಾರೆ ಮತ್ತು ಆತ್ಮನ ಸ್ವರೂಪವನ್ನು ರಾಗ-ದ್ವೇಷಾದಿಗಳಿಂದ ರಹಿತವಾಗಿ ತಿಳಿಸಿಕೊಡುತ್ತಾರೆ ಅವರು ನಿಜವಾದ ದೇವರಿದ್ದಾರೆ. ಹೀಗೆ ನಿಜವಾದ ಪ್ರರೂಪಣೆ ಮಾಡುತ್ತಾನೆ ಅವನು ನಿಜವಾದ ಗುರುವಿದ್ದಾನೆ. ಮತ್ತು ಹೀಗೆ ಹೇಳುವಂಥ ವಾಣಿ ಅಥವಾ ಶಾಸ್ತ್ರವು ಅದು ನಿಜವಾದ ಶಾಸ್ತ್ರವಿದೆ. ಆದರೆ ಯಾರು ಜೀವ ಮತ್ತು ಅಜೀವದ ಏಕತೆಯನ್ನು ತಿಳಿಸಿಕೊಡುತ್ತಾರೆ ಅವರು ನಿಜವಾದ ದೇವರಿಲ್ಲ. ನಿಜವಾದ ಗುರುವಿಲ್ಲ ಮತ್ತು ನಿಜವಾದ ಶಾಸ್ತ್ರವಿಲ್ಲ.

ಧರ್ಮಾತ್ಮ ಜೀವನು ತಿಳಿದುಕೊಳ್ಳುವುದೇನೆಂದರೆ ಓಹೋ ! ರಾಗವು ಅದು ನನ್ನ ಚಾರಿತ್ರಗುಣದ ವಿಪರೀತ ಪರ್ಯಾಯವಿದೆ ಜ್ಞಾನ-ದರ್ಶನದ ಹೀನ ಅವಸ್ಥೆಯಿದೆ ಅದು ಕೂಡ ನನ್ನ ಕಾರಣದಿಂದ ಇದೆ. ಸರಿಯಾದ ಶ್ರದ್ಧೆಯಾಯಿತು ಅದು ನನ್ನ ಶ್ರದ್ಧಾ ಗುಣದ ಅವಸ್ಥೆಯಿದೆ. ಹೀಗೆ ಪರಿಣಮಿಸುವುದು ಅದು ನನ್ನ ಗುಣಗಳದ್ದಿದೆ. ಜಡ ಪರಿಣಮನವು ಜಡದಲ್ಲಿ ಜಡದ ಕಾರಣದಿಂದ ಇದೆಯೆಂದು ಜೀವ ಮತ್ತು ಅಜೀವದ ಭೇದಜ್ಞಾನ ಮಾಡುತ್ತಾನೆ ಅವನು ಮೋಕ್ಷಮಾರ್ಗವನ್ನು ಸಾಧಿಸುತ್ತಾನೆ. ಪರದ ಸಂಬಂಧವಿಟ್ಟು ಭೇದಜ್ಞಾನ ಸಾಧಿಸುತ್ತಾನೆಂದು ಹೇಳಲಾಗಿಲ್ಲ, ಆದರೆ ಪರದಿಂದ ಭಿನ್ನವಾಗಿದ್ದುಕೊಂಡು ಭೇದಜ್ಞಾನ ಸಾಧಿಸುತ್ತಾನೆ. ಈ ಪ್ರಕಾರ ಯಾವನು ಭೇದಜ್ಞಾನ ಸಾಧಿಸುತ್ತಾನೆ ಅವನು ಶಾಂತಿಯ ಅನುಭವ ಮಾಡುತ್ತಾನೆ.

ಈ ಕಾರಣದಿಂದ ಜೀವ-ಪುದ್ಗಲದ ಲಕ್ಷಣ ಭೇದವನ್ನು ತಿಳಿಸಿಕೊಡಲಾಗಿದೆ. ಆತ್ಮಾ ಮತ್ತು ಶರೀರ ಇವೆರಡರ ಸಂಬಂಧವಿದೆ ಅದರಲ್ಲಿ ಸ್ಪರ್ಶ-ರಸ-ಗಂಧ-ವರ್ಣ ಮೊದಲಾದ ಗುಣಗಳು ಹಾಗೂ ಶಬ್ದ, ಸಂಸ್ಥಾನ, ಸಂಹನನ ಮೊದಲಾದ ಮೂರ್ತ ಪರ್ಯಾಯಗಳು ಸ್ವರೂಪ ಪರಿಣತವಿವೆ. ಮತ್ತು ಯಾವವು ಇಂದ್ರಿಯ ಗ್ರಹಣ ಯೋಗ್ಯವಿವೆ ಅವೆಲ್ಲವೂ ಪುದ್ಗಲದ್ರವ್ಯಗಳಿವೆ ಹಾಗೂ ಪುದ್ಗಲದ್ರವ್ಯದ ಪರ್ಯಾಯಗಳಿವೆ. ಯಾವ ಯಾವುವು ಇಂದ್ರಿಯಗಳಿಂದ ಗ್ರಹಣವಾಗುತ್ತವೆ ಅವೆಲ್ಲವೂ ಪುದ್ಗಲದ್ರವ್ಯಗಳಿವೆ.

ಅದರಂತೆ ಯಾವ ದ್ರವ್ಯದಲ್ಲಿ ಸ್ಪರ್ಶ-ರಸ-ಗಂಧ-ವರ್ಣ ಗುಣಗಳಿಲ್ಲ, ಶಬ್ದದಿಂದ ಭಿನ್ನವಿದೆ, ಜಡದ ಆಕಾರದಿಂದ ರಹಿತವಿದೆ, ಇಂದ್ರಿಯಗಳಿಂದ ಗ್ರಾಹ್ಯವಿಲ್ಲ ಎಂದರೆ ಯಾವುದು ಅತೀಂದ್ರಿಯವಿದೆ, ಚೇತನಾಗುಣವುಳ್ಳದ್ದಿದೆ, ಮೂರ್ತಿಕ-ಅಮೂರ್ತಿಕ ಅಜೀವ ಪದಾರ್ಥಗಳಿಂದ ಭಿನ್ನ ಅಮೂರ್ತಿಕ ಚೇತನವಸ್ತು ಮಾತ್ರವಿದೆ. ಅದು ಜೀವ ಪದಾರ್ಥವಿದೆಯೆಂದು ತಿಳಿದುಕೊಳ್ಳುವುದು.

''ವಾಣಿಯನ್ನು ಜೋರಾಗಿ ಮಾತನಾಡಬೇಕು ಏಕೆಂದರೆ ಅದರಿಂದ ಇತರರ ಮೇಲೆ ಪ್ರಭಾವ ಬೀಳುವುದು'' ಎಂದು ಯಾರಾದರೂ ಕೇಳಿದರೆ ಅವರಿಗೆ ತಿಳಿಸುವುದೇನೆಂದರೆ ಎಲೈ ಸೋದರನೇ ; ಯಾವ ಪದಾರ್ಥವು ಕ್ರಿಯಾ ರಹಿತವಿದೆ ಆ ಪದಾರ್ಥವು ಬರುವುದರಿಂದ ಅದರಲ್ಲಿ ಕಾರ್ಯವಾಗುವುದೇನು ? ದ್ರವ್ಯ ಮತ್ತು ಪರ್ಯಾಯದಲ್ಲಿ ಎಂದಾದರೂ ವಿರಹವಾಗುವುದೇನು ? ಇಲ್ಲ, ಇಲ್ಲ ; ಪ್ರತಿಯೊಂದು ಪದಾರ್ಥವು ಕ್ರಿಯಾಸಂಪನ್ನವಿದೆ. ಆತ್ಮನು ಭಾಷೆಯನ್ನು ಆಡುವುದಿಲ್ಲ ಮತ್ತು ಭಾಷೆಯಿಂದ ಇತರ ಜೀವರುಗಳಲ್ಲಿ ಪ್ರಭಾವ ಬೀಳುವುದಿಲ್ಲ.

ಆತ್ಮನು ಜ್ಞಾನಸ್ವಭಾವಿಯಿದ್ದಾನೆ ಶರೀರ ಮತ್ತು ವಿಕಾರದಿಂದ ಭಿನ್ನನಿದ್ದಾನೆ ಮತ್ತು ಪರದ ಆಕಾರದಿಂದ ರಹಿತನಿದ್ದು ಸ್ವದ ಆಕಾರದಿಂದ ಸಹಿತನಿದ್ದಾನೆ, ಇಂದ್ರಿಯಗಳಿಂದ ಗ್ರಾಹ್ಯನಿಲ್ಲ ಚೈತನ್ಯಗುಪ್ತನಿದ್ದಾನೆ. ಹಾಗಾದರೆ ಓದುವುದು ಮತ್ತು ಆಲಿಸುವುದು ಯಾವುದರ ಸಲುವಾಗಿ-ಎಂದು ಯಾರಾದರೂ ಕೇಳಿದರೆ ಅವರಿಗೆ ಹೀಗೆ ಹೇಳಲಾಗುತ್ತದೆ - ಆಲಿಸುವ ಯೋಗ ಬಂದ ಸಮಯದಲ್ಲಿ ಆತ್ಮನಿಗೆ ಆಲಿಸುವ ರಾಗವು ಬರುತ್ತದೆ. ಆದರೆ ಆತ್ಮನು ಆ ರಾಗದಿಂದ ಭಿನ್ನನಿದ್ದಾನೆ. ಆತ್ಮನಂತೂ ಚೇತನಾಗುಣಯುಕ್ತನಿದ್ದಾನೆ ಆ ಗುಣಗಳಿಂದ ಅವನು ಅಭೇದನಿದ್ದಾನೆ.

ಶರೀರ-ವಾಣಿ-ಮನಸ್ಸು ಮೊದಲಾದ ಮೂರ್ತಿಕ ದ್ರವ್ಯದಿಂದ ಮತ್ತು ಧರ್ಮ ಮೊದಲಾದ ನಾಲ್ಕು ಅಮೂರ್ತಿಕ ದ್ರವ್ಯದಿಂದ ಆತ್ಮನು ಭಿನ್ನನಿದ್ದಾನೆ ಇನ್ನು ಶಾಸ್ತ್ರದಲ್ಲಿ ಕರ್ಮದ ನಿಮಿತ್ತದಿಂದ-ಉಪಚಾರದಿಂದ ಆತ್ಮನನ್ನು ಮೂರ್ತನೆಂದು ಹೇಳಲಾಗಿದೆ, ಆದರೆ ಅಜ್ಞಾನೀ ಜೀವರುಗಳು ಅವನನ್ನು ನಿಜವಾಗಿ ಮೂರ್ತನೆಂದು ಮನ್ನಿಸಿಕೊಂಡಿದ್ದಾರೆ ಅದು ಭ್ರಾಂತಿಯಿದೆ. ಆದರೆ ಆತ್ಮನು ನಿಜವಾಗಿ ಮೂರ್ತನಿಲ್ಲ.

ಈ ಪ್ರಕಾರ ಅಮೂರ್ತಿಕ ಆತ್ಮನು ಮೂರ್ತಿಕ ಪದಾರ್ಥಗಳಿಂದ ಮತ್ತು ಇತರ ಅಮೂರ್ತಿಕ ಪದಾರ್ಥಗಳಿಂದ ಭಿನ್ನನಿದ್ದಾನೆಂದು ಭೇದಜ್ಞಾನ ಮಾಡುವುದು ಅದು ಧರ್ಮವಿದೆ. ಈ ಪ್ರಕಾರ ಜೀವ-ಅಜೀವ ಪದಾರ್ಥಗಳಲ್ಲಿ ಲಕ್ಷಣ ಭೇದವಿದೆ.

**ಜೋ ಖಲು ಸಂಸಾರತ್ಥೋ ಜೀವೋ ತತ್ತೋ ದು ಹೋದಿ ಪರಿಣಾಮೋ ।**
**ಪರಿಣಾಮಾದೋ ಕಮ್ಮಂ ಕಮ್ಮಾದೋ ಹೋದಿ ಗದಿಸು ಗದೀ ॥೧೨೮॥**

**ಗದಿಮಧಿಗದಸ್ಸ ದೇಹೋ ದೇಹಾದೋ ಇಂದಿಯಾಣಿ ಜಾಯಂತೇ ।**
**ತೇಹಿಂ ದು ವಿಸಯಗ್ಗಹಣಂ ತತ್ತೋ ರಾಗೋ ವ ದೋಸೋ ವಾ ॥೧೨೯॥**

**ಜಾಯದಿ ಜೀವಸ್ಸೇವಂ ಭಾವೋ ಸಂಸಾರ ಚಕ್ಕವಾಲಮ್ಮಿ ।**
**ಇದಿ ಜಿಣವರೇಹಿಂ ಭಣಿದೋ ಅಣಾದಿಣಿಧಣೋ ಸಣಿಧಣೋ ವಾ ॥೧೩೦॥**

ಪ್ರಪಂಚಗತ ಯಾವ ಜೀವವಿದೆಯದಕೆ ನಿಜದಿ ಪರಿಣಾಮವಾಗುವುದು ।
ಆ ಪರಿಣಾಮದಿಂದ ಕರ್ಮ, ಕರ್ಮದಿಂ ಗತಿಗಳಲಿ ಗಮನವಾಗುವುದು ॥೧೨೮॥

ಆ ಗತಿ ಪ್ರಾಪ್ತಿಯಿಂ ದೇಹವಾಗುವುದು, ದೇಹದಿಂ ಇಂದ್ರಿಯಗಳುಂಟಾಗುವವು ।
ಆಗ ಅವುಗಳಿಂ ವಿಷಯಗ್ರಹಣ, ಅದರಿಂದ ರಾಗ-ದ್ವೇಷವಾಗುವವು ॥೧೨೯॥

ಜೀವಕ್ಕೆ ಸಂಸಾರ ಚಕ್ರದಲಿ ಅನಾದಿ-ಅನಂತವಿಲ್ಲವೆ ಅನಾದಿ-ಸಾಂತ ।
ಭಾವಗಳು ಈ ತೆರದಿ ಆಗುತ್ತಿರುವುವೆಂದು ಶ್ರೀ ಜಿನದೇವ ಪೇಳಿಹರು ॥೧೩೦॥

ಜೀವ-ಅಜೀವಗಳೆಂದು ಎರಡು ದ್ರವ್ಯಗಳಿವೆ. ಅದರಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧದಿಂದ ಏಳು ತತ್ತ್ವಗಳು ಉತ್ಪನ್ನವಾಗುತ್ತವೆ. ಸಂಸಾರವು ದುಃಖರೂಪವಿದೆ ಅದರ ಕಾರಣವು ಆಸ್ರವ-ಬಂಧಗಳಿವೆ, ಸಂಪೂರ್ಣ ಸುಖರೂಪವಾದ ಭಾವವು ಅದು ಮೋಕ್ಷವಿದೆ. ಅದರ ಕಾರಣವು ಸಂವರ-ನಿರ್ಜರೆಗಳಿವೆ ಮತ್ತು ಅದರ ಕಾರಣವು ಸಮ್ಯಗ್ದರ್ಶನವಿದೆ. ಸಂಸಾರವು ದುಃಖದ ಕಾರಣವಿದೆ. ಸಂಸಾರದ ಕಾರಣವು ಮಿಥ್ಯಾತ್ವ, ಅವಿರತಿ, ಪ್ರಮಾದ, ಕಷಾಯ, ಯೋಗಗಳಿವೆ. ಅದರ ಕಾರಣವು ಮಿಥ್ಯಾದರ್ಶನ-ಜ್ಞಾನ-ಚಾರಿತ್ರಗಳಿವೆ. ಆತ್ಮನು ಪರಮಾನಂದದ ಮೂರ್ತಿಯಿದ್ದಾನೆ ಅವನ ಪ್ರತೀತಿಯಿಲ್ಲದೆ ಜೀವವು ಭ್ರಮಣ ಮಾಡುತ್ತಲಿದೆ. ಆ ಸಂಸಾರರೂಪದ ಚಕ್ರವು ಏಕೆ ನಡೆಯುತ್ತಿದೆಯೆಂಬುದನ್ನು ಇಲ್ಲಿ ತಿಳಿಸಿಕೊಡುತ್ತಾರೆ.

ಯಾವ ಜೀವನು ತನ್ನ ಶುದ್ಧ ಆತ್ಮನನ್ನು ಮರೆತು ಸ್ವಯಂ ಕರ್ಮದ ಉಪಾಧಿಯ ವಶೀಭೂತನಾಗುತ್ತಾನೆ ದಯೆ-ದಾನಾದಿಗಳ ಪರಿಣಾಮಗಳಷ್ಟೇ ತನ್ನನ್ನು ಮನ್ನಿಸಿ ಅವನು ಭ್ರಾಂತಿಯ ಪರಿಣಾಮ ಮಾಡಿ ಎಂಟು ಪ್ರಕಾರದ ಕರ್ಮಗಳನ್ನು ಕಟ್ಟಿಕೊಳ್ಳುತ್ತಾನೆ. ಇಲ್ಲಿ ಸಂಸಾರಸ್ಥವೆಂದು ಹೇಳಿದೆ. ಎಂದರೆ ಸ್ವಭಾವಸ್ಥವಿಲ್ಲ. ಪರ್ಯಾಯಬುದ್ಧಿಯುಳ್ಳ ಜೀವನು ಮಿಥ್ಯಾತ್ವದ ಪರಿಣಾಮ ಮಾಡುತ್ತಾನೆ ಮತ್ತು ಕರ್ಮ ಕಟ್ಟಿಕೊಳ್ಳುತ್ತಾನೆ ಜೀವದ ಅಶುದ್ಧ ಪರಿಣಾಮವು ಕರ್ಮವನ್ನು ಪರಿಣಮಿಸಲ್ಪಡುತ್ತದೆಯೆಂಬುದು ಇಲ್ಲ. ಅಶುದ್ಧ ಪರಿಣಾಮದ ನಿಮಿತ್ತ ಪಡೆದು ಜಡ ಕಾರ್ಮಾಣ ವರ್ಗಣಾದ ಪರಮಾಣುಗಳು ಸ್ವಯಂ ತಮ್ಮ ಕಾರಣದಿಂದ ಪರಿಣಮಿಸಿ ಬಿಡುತ್ತವೆ. ಆ ಕರ್ಮದ ನಿಮಿತ್ತದಿಂದ ಜೀವನು ನರಕ ಮೊದಲಾದ ಗತಿಗಳಲ್ಲಿ ಹೋಗುತ್ತಾನೆ. ಮಿಥ್ಯಾತ್ವದ ಪರಿಣಾಮವು ಅದು ನಿಮಿತ್ತ ಮತ್ತು ಜಡಕರ್ಮಗಳು ಕಟ್ಟುವುದು ಅದು ನೈಮಿತ್ತಿಕವಿದೆ. ಅದರಂತೆ ಜಡ ಕರ್ಮದ ಉದಯವು ಅದು ನಿಮಿತ್ತ ಮತ್ತು ಜೀವವು ನಾಲ್ಕು ಗತಿಗಳಲ್ಲಿ ಸುತ್ತುವುದು ಅದು ನೈಮಿತ್ತಿಕವಿದೆ. ಹೀಗೆ ಮಿಥ್ಯಾದೃಷ್ಟಿಗೆ ಪರಸ್ಪರ ನಿಮಿತ್ತ-ನೈಮಿತ್ತಿಕ ಸಂಬಂಧವು ನಡೆದುಕೊಂಡು ಬರುತ್ತದೆ. ಯಾವನಿಗೆ ಗತಿರಹಿತವಿರುವ ಸ್ವಭಾವದ ಪ್ರಜ್ಞೆಯಿಲ್ಲ ಆ ಜೀವನು ಕರ್ಮದ ನಿಮಿತ್ತದಿಂದ ಗತಿಗೆ ಪ್ರಾಪ್ತನಾಗುತ್ತಾನೆ. ಮತ್ತು ಗತಿಯ ಯೋಗ್ಯತೆಯು ಹೇಗಿರುವುದು ಹಾಗೆ ಶರೀರವು ದೊರಕುತ್ತದೆ. ಇನ್ನು ಶರೀರವಿರುವಲ್ಲಿ ಐದು ಇಂದ್ರಿಯಗಳಿರುತ್ತವೆ ಮತ್ತು ಐದು ಇಂದ್ರಿಯಗಳು ಇರುವಲ್ಲಿ ಐದು ಪ್ರಕಾರದ ವಿಷಯಗಳ ಗ್ರಹಣವಿರುತ್ತದೆ. ಇಂದ್ರಿಯಗಳಂತೂ ಬಾಹ್ಯ ತತ್ತ್ವವಿದ್ದು ಶುದ್ಧ ಆತ್ಮನು ಅಂತಃತತ್ತ್ವನಿದ್ದಾನೆ ಬಾಹ್ಯತತ್ತ್ವದಿಂದ ಅಂತಃತತ್ತ್ವದ ಪತ್ತೆಯಾಗುತ್ತದೆಯೆಂಬುದಾಗಿಲ್ಲ ಇಂದ್ರಿಯಗಳು ಬಾಹ್ಯತತ್ತ್ವವನ್ನು ಹಿಡಿದುಕೊಳ್ಳುತ್ತವೆ, ಅವು ಆತ್ಮನನ್ನು ಹಿಡಿದುಕೊಳ್ಳುವುದಿಲ್ಲ ಆದಾಗ್ಯೂ ಅಜ್ಞಾನಿಯ ದೃಷ್ಟಿಯು ಇಂದ್ರಿಯಗಳ ಮೇಲೆ ಹಾಗೂ ವಿಷಯಗಳ ಮೇಲೆ ಹೋಗುತ್ತದೆ ವಿನಹ ನಾನು ಶುದ್ಧ ಆತ್ಮನು ಅಂತಃ ತತ್ತ್ವನಿದ್ದೇನೆ ಮತ್ತು ನನ್ನ ಸುಖವು ನನ್ನಲ್ಲಿ ಇದೆಯೆಂಬ ದೃಷ್ಟಿಯ ಅರಿವು ಅವನಿಗೆ ಬರುವುದಿಲ್ಲ. ಆ ದೃಷ್ಟಿಯು ಅನಿಷ್ಟ ಪದಾರ್ಥಗಳ ಕುರಿತು ರಾಗ-ದ್ವೇಷ ಮಾಡುತ್ತಿರುತ್ತದೆ ಅದರಿಂದ ಪೂರ್ವಕ್ರಮದ ಅನುಸಾರ ಕರ್ಮವು ಉತ್ಪನ್ನವಾಗುತ್ತದೆ. ಅವನು ವಿಪರೀತ ಪುರುಷಾರ್ಥ ಮಾಡುತ್ತಾನೆ ಮತ್ತು ನಾನು ಶುದ್ಧನಿದ್ದೇನೆಂಬ ದೃಷ್ಟಿ ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೆ ಇಂಥ ಪರಿಪಾಟಿಯು ನಡೆಯುತ್ತಲೇ ಇರುತ್ತದೆ.

ಇಲ್ಲಿ ಸಮ್ಯಗ್ದೃಷ್ಟಿಯ ಮಾತನ್ನು ತೆಗೆದುಕೊಂಡಿಲ್ಲ. ಯಾವನಿಗೆ ಸ್ವಭಾವದ ಪ್ರಾಪ್ತಿಯಾಗಿದೆ ಅವನಿಗೆ ದೇಹ, ಇಂದ್ರಿಯ ಮತ್ತು ವಿಷಯಗಳಿರುವುದಿಲ್ಲ, ಮಿಥ್ಯಾದೃಷ್ಟಿ ಜೀವದ ಪರಿಣಾಮಕ್ಕೆ ಮತ್ತು ಕರ್ಮ ಮೊದಲಾದವುಗಳಿಗೆ ಕಾರಣ-ಕಾರ್ಯ ಸಂಬಂಧವಿದೆ. ರಾಗ-ದ್ವೇಷರೂಪದ ಮಲಿನ ಭಾವವುಳ್ಳ ಆತ್ಮನಿಗೆ ಈ ಪ್ರಕಾರದಿಂದ ಅಶುದ್ಧ ಭಾವದ ಉತ್ಪತ್ತಿಯಾಗುತ್ತದೆ. ಅಂಥ ಅಶುದ್ಧ ಭಾವವು ಅಭವ್ಯ ಜೀವದ ಅಪೇಕ್ಷೆಯಿಂದ ಅನಾದಿ-ಅನಂತವಿದೆ. ಅಭವ್ಯ ಜೀವನು ಎಂದೂ ತನ್ನ ಸ್ವಭಾವದ ಅಭಿರುಚಿ ಮಾಡುವುದಿಲ್ಲ ಮತ್ತು ಭವ್ಯ ಜೀವನು ತನ್ನ ಆತ್ಮನ ಪ್ರತೀತಿ ಮಾಡಿಕೊಳ್ಳುವನು ಈ ಅಪೇಕ್ಷೆಯಿಂದ ಅವನ ಅಶುದ್ಧ ಭಾವಗಳು ಅನಾದಿ-ಸಾಂತವಿವೆಯೆಂದು ಭಗವಂತರು ಹೇಳಿದ್ದಾರೆ.

**ಭಾವಾರ್ಥ ಃ-** ಸಂಸಾರೀ ಜೀವನು ಅನಾದಿಯಿಂದ ಬಂಧಪರ್ಯಾಯದ ವಶೀಭೂತನಾಗಿರುವುದರಿಂದ ಮಿಥ್ಯಾತ್ವ ಮೊದಲಾದವುಗಳ ಪರಿಣಾಮ ಮಾಡುತ್ತಾನೆ. ಆ ಪರಿಣಾಮಗಳು ಕರ್ಮದ ಕಾರಣದಿಂದ ಆಗುವುದಿಲ್ಲ ಆದರೆ ತಾನು ಸ್ವಯಂ ಶುದ್ಧ ಸ್ವಭಾವವನ್ನು ಮರೆತು ಕರ್ಮ ಬಂಧನದ ವಶೀಭೂತನಾಗುತ್ತಾನೆ. ನಾನು ಜ್ಞಾತಾನಿದ್ದೇನೆಂದು ಸ್ವೀಕಾರ ಮಾಡುವುದಿಲ್ಲ ಆದರೆ ದಯೆ-ದಾನಾದಿಗಳ ಭಾವಗಳು ನನ್ನ ಕರ್ತವ್ಯವಿವೆಯೆಂದು ಅಜ್ಞಾನಿಯು ಮನ್ನಿಸಿಕೊಳ್ಳುತ್ತಿದ್ದಾನೆ.

''ಯಾವ ಪ್ರಕಾರ ಕರ್ಮದ ಉದಯವು ಬರುತ್ತದೆ ಅದೇ ಪ್ರಕಾರ ವಿಕಾರ ಮಾಡಬೇಕಾಗುತ್ತದೆ''ಯೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ ಆದರೆ ಅದು ಅವರದು ಭ್ರಾಂತಿಯಿದೆ. ಉದ್ಧಟ ಮಕ್ಕಳ ಚಿತ್ತವು ಮನೆಯಲ್ಲಿ ಸ್ಥಿರವಿರುವುದಿಲ್ಲ ಆದರೆ ಬಾಹ್ಯದಲ್ಲಿ ಎಲ್ಲಿಯೋ ಭ್ರಮಣ ಮಾಡುತ್ತಿರುತ್ತದೆ. ಅದರಂತೆ ಇಲ್ಲಿ ಭಗವಂತರು ಹೇಳುವುದೇನೆಂದರೆ ಅಜ್ಞಾನಿಯ ಚಿತ್ತವು ಸ್ವಭಾವದಲ್ಲಿ ಸ್ಥಿರಗೊಳ್ಳುವುದಿಲ್ಲ ಆದರೆ ಪರದಲ್ಲಿ ಮತ್ತು ದಯೆ-ದಾನಾದಿಗಳ ಭಾವಗಳಲ್ಲಿ ಧಾವಿಸುತ್ತಿರುತ್ತದೆ ಅವನು ತನ್ನ ಸ್ವಭಾವದ ವಶೀಭೂತನಾಗುವುದಿಲ್ಲ ಆದರೆ ಬಂಧದ ವಶೀಭೂತನಾಗುತ್ತಾನೆ.

ಕರ್ಮವು ಪ್ರೇರಕವಿರುವುದರಿಂದ ಅದರ ಪ್ರಮಾಣದಲ್ಲಿ ವಿಕಾರ ಮಾಡಬೇಕಾಗುತ್ತದೆ-ಎನ್ನುವುದಂತೂ ಸ್ಥೂಲ ಅಜ್ಞಾನವಿದೆ. ಆದರೆ ಕರ್ಮದ ಉದಯವು ಬಂದಾಗ ನನಗೆ ನನ್ನ ಕಾರಣದಿಂದ ವಿಕಾರ ಮಾಡಬೇಕಾಗುತ್ತದೆಯೆಂದು ಮನ್ನಿಸುವವನ ದೃಷ್ಟಿಯು ಕೂಡ ವಿಕಾರದ ಮೇಲೆ ಇರುತ್ತದೆ, ಆದರೆ ವಿಕಾರದಿಂದ ರಹಿತವಿರುವ ಸ್ವಭಾವದ ಮೇಲೆ ಇರುವುದಿಲ್ಲ. ಕರ್ಮದ ಉದಯವು ಯಾವಾಗಲೂ ಇರುತ್ತಿರುವುದರಿಂದ ಯಾವಾಗಲೂ ಜೀವನಿಗೆ ವಿಕಾರವನ್ನು ಮಾಡಲೇಬೇಕಾಗುತ್ತದೆ ; ಆದರೆ ಹೀಗೆ ಇರುವುದೇ ಇಲ್ಲ. ತಾನು ಸ್ವಭಾವವನ್ನು ಮರೆತು ಬಿಟ್ಟರೆ ಮಾತ್ರ ವಿಕಾರವಾಗುತ್ತದೆ. ಸ್ವಭಾವದ ಲಕ್ಷ್ಯದಿಂದ ವಿಕಾರವಾಗುವುದಿಲ್ಲ. ಆದರೆ ಪರದ ವಶೀಭೂತನಾಗುವುದರಿಂದ ವಿಕಾರವಾಗುತ್ತದೆ. ಪರ್ಯಾಯಬುದ್ಧಿಯುಳ್ಳ ಜೀವನು ಪರದ ವಶೀಭೂತನಿರುವುದರಿಂದ ಅವನಿಗೆ ಸ್ವಭಾವದ ಉತ್ಪತ್ತಿಯಾಗುವುದಿಲ್ಲ. ಆದರೆ ಅವನಿಗೆ ಎಂಟು ಕರ್ಮಗಳ ಉತ್ಪತ್ತಿಯಾಗುತ್ತದೆ. ಮಿಥ್ಯಾದೃಷ್ಟಿ ಜೀವನಿಗೆ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ಬಿಟ್ಟುಕೊಡುವುದಾಗುವುದಿಲ್ಲ. ಯಾವನಿಗೆ ತನ್ನ ಸ್ವಭಾವವು ಕಲ್ಯಾಣದ ಕಾರಣವಿದೆಯೆಂಬ ಪ್ರತೀತಿಯಿಲ್ಲ ಆ ಜೀವನು ಬೇಕಾದಷ್ಟು ವ್ರತಧಾರಿಯಾಗಿದ್ದರೂ ಕೂಡ ಅವನ ದೃಷ್ಟಿಯು ನಿಮಿತ್ತದ ಮೇಲೆ ಇರುವ ಕಾರಣದಿಂದ ಅವನಿಗೆ ಎಂಟೂ ಕರ್ಮಗಳು ಕಟ್ಟುತ್ತವೆ ಮತ್ತು ಆ ಕರ್ಮದ ನಿಮಿತ್ತದಿಂದ ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತಾನೆ.

ಜಯಸೇನಾಚಾರ್ಯದೇವರು ತಮ್ಮ ಟೀಕೆಯಲ್ಲಿ ಹೀಗೆ ಹೇಳುತ್ತಾರೆ - ಆತ್ಮನ ಸ್ವಭಾವವು ಶುದ್ಧ ನಯದಿಂದ ವಿಶುದ್ಧ ಜ್ಞಾನ-ದರ್ಶನವುಳ್ಳದಿದ್ದರೂ ಕೂಡ ಅನಾದಿಯಿಂದ ಕರ್ಮದ ವಶೀಭೂತವಾದ ''ಆತ್ಮಸಂವಿತ್ತಿ'' ಲಕ್ಷಣವುಳ್ಳ ಅಶುದ್ಧ ಪರಿಣಾಮ ಮಾಡುತ್ತಾನೆ. ಅಜ್ಞಾನೀ ಜೀವನು ಮಿಥ್ಯಾತ್ವದ ಭಾವವನ್ನು ಸ್ವಯಂ ಮಾಡುತ್ತಾನೆಂಬುದನ್ನು ತಿಳಿಸಿಕೊಡುವ ಸಲುವಾಗಿ ''ಆತ್ಮಸಂವಿತ್ತಿ''ಯೆಂದು ಹೇಳಲಾಗಿದೆ.

ಅಶುದ್ಧ ಪರಿಣಾಮದ ನಿಮಿತ್ತದಿಂದ ಎಂಟು ಕರ್ಮಗಳು ಕಟ್ಟುತ್ತವೆ. ಮತ್ತು ಆತ್ಮನ ಅನುಭವದಿಂದ ಉತ್ಪನ್ನವಾಗುವ ಪಂಚಮಗತಿಯ ಆನಂದದಿಂದ ವಿಲಕ್ಷಣವಿರುವಂಥ ದೇವ-ಮನುಷ್ಯ-ತಿರ್ಯಂಚ ಮತ್ತು ನಾರಕಿಯೆಂಬ ಚತುರ್ಗತಿಗಳಲ್ಲಿ ಸುತ್ತಬೇಕಾಗುತ್ತದೆ. ಮತ್ತು ಆತ್ಮನ ಸ್ವಭಾವವಂತೂ ಶರೀರರಹಿತ ಚಿದಾನಂದವಿದೆ ಅದರಿಂದ ವಿಪರೀತವಾದ ಔದಾರಿಕ ಮೊದಲಾದ ದೇಹದ ಪ್ರಾಪ್ತಿಯಾಗುತ್ತದೆ. ಇನ್ನು ಆತ್ಮನ ಸ್ವಭಾವವಂತೂ ಅತೀಂದ್ರಿಯ, ಅಮೂರ್ತ, ಪರಮಾತ್ಮಸ್ವರೂಪವಿದೆ. ಅದರ ಪ್ರತೀತಿ ಇಲ್ಲದಿರುವಂಥ ಜೀವನಿಗೆ ದೇಹದ ನಿಮಿತ್ತದಿಂದ ಅತೀಂದ್ರಿಯದಿಂದ ವಿಲಕ್ಷಣವಿರುವಂಥ ಇಂದ್ರಿಯಗಳ ಪ್ರಾಪ್ತಿಯಾಗುತ್ತದೆ. ಅಜ್ಞಾನೀ ಜೀವದ ದೃಷ್ಟಿಯು ಇಂದ್ರಿಯಗಳ ಮೇಲೆ ಹೋಗುತ್ತದೆ ಮತ್ತು ಇಂದ್ರಿಯಗಳಿಂದ ಇಷ್ಟ-ಅನಿಷ್ಟ ಪದಾರ್ಥಗಳ ಜ್ಞಾನವಾಗುತ್ತದೆ ಅದರಿಂದ ರಾಗ ಬುದ್ಧಿಯಾಗುತ್ತದೆ. ಆತ್ಮನಂತೂ ಅತೀಂದ್ರಿಯ ಪದಾರ್ಥನಿದ್ದಾನೆ ಅವನ ಆಶ್ರಯದಿಂದ ವೀತರಾಗತೆಯಾಗುತ್ತದೆ. ಆದರೆ ಯಾವನ ದೃಷ್ಟಿಯು ಇಂದ್ರಿಯಗಳ ಮೇಲೆ ಹಾಗೂ ಅವುಗಳ ವಿಷಯಗಳ ಮೇಲೆ ಇದೆ ಅವನಿಗೆ ರಾಗ-ದ್ವೇಷಗಳಾಗುತ್ತವೆ. ಅಜ್ಞಾನೀ ಜೀವನು ಶಾಸ್ತ್ರ ಶ್ರವಣವನ್ನು ಕರ್ಣಗಳ ವಿಷಯವನ್ನಾಗಿ ಮಾಡಿದ್ದಾನೆ. ಅಜ್ಞಾನಿಯ

ಲಕ್ಷ್ಯವು ಸಮವಸರಣದಲ್ಲಿದ್ದರೂ ಕೂಡ ಐದು ಇಂದ್ರಿಯಗಳ ವಿಷಯಗಳ ಮೇಲೆಯೇ ಇರುತ್ತದೆ. ಆದರೆ ನಾನು ಅತೀಂದ್ರಿಯ ಜ್ಞಾಯಕ ಸ್ವಭಾವಿಯಿದ್ದೇನೆಂಬ ಮಾತು ಅವನಿಗೆ ರುಚಿಸುವುದಿಲ್ಲ; ಅವನು ರಾಗ-ದ್ವೇಷದ ಪರಿಣಾಮವನ್ನೇ ಮಾಡುತ್ತಿರುತ್ತಾನೆ ಮತ್ತು ಅದರಿಂದ ಪುನಃ ಕರ್ಮಬಂಧನವಾಗುತ್ತಿರುತ್ತದೆ.

ಈ ಪ್ರಕಾರದಿಂದ ಪರಸ್ಪರ ಕಾರ್ಯಕಾರಣರೂಪ ಜೀವ-ಪುದ್ಗಲದ ಪರಿಣಾಮಮಯ ಕರ್ಮಸಮೂಹರೂಪದ ಸಂಸಾರ ಚಕ್ರದಲ್ಲಿ ಅಭವ್ಯ ಜೀವನಿಗೆ ಅನಾದಿ ಅನಂತ ಮತ್ತು ಭವ್ಯ ಜೀವನಿಗೆ ಅನಾದಿ-ಸಾಂತ, ಕುಂಭಕಾರನ ಚಕ್ರದ ಸಮಾನ ಪರಿಭ್ರಮಣವಾಗುತ್ತದೆ. ಆತ್ಮನ ಪರಿಣಾಮವು ಕಾರಣ ಮತ್ತು ಜಡಕರ್ಮವು ಕಾರ್ಯ ಹಾಗೂ ಜಡ ಕರ್ಮವು ಕಾರಣ ಮತ್ತು ನಾಲ್ಕು ಗತಿಗಳಲ್ಲಿ ಗಮನವು ಅದು ಕಾರ್ಯ ಅದರಂತೆ ಗತಿಯಲ್ಲಿ ಗಮನವು ಅದು ಕಾರಣ ಮತ್ತು ದೇಹದ ದೊರೆಯುವಿಕೆಯು ಅದು ಕಾರ್ಯ, ಅದರಂತೆ ದೇಹವು ಕಾರಣ ಮತ್ತು ಇಂದ್ರಿಯಗಳು ಕಾರ್ಯ, ಅದರಂತೆ ಇಂದ್ರಿಯಗಳು ಕಾರಣ ಮತ್ತು ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರಾಗ-ದ್ವೇಷವು ಅದು ಕಾರ್ಯ ಅದರಂತೆ ರಾಗ-ದ್ವೇಷಗಳು ಕಾರಣ ಮತ್ತು ಕರ್ಮದ ಆಗುವಿಕೆಯು ಅದು ಕಾರ್ಯವಿದೆ. ಹೀಗೆ ಪರಸ್ಪರ ಕಾರಣ-ಕಾರ್ಯ ಸಂಬಂಧವು ಅಜ್ಞಾನಿಗಳಿಗೆ ನಡೆಯುತ್ತ ಬರುತ್ತಿದೆ.

ಆತ್ಮನು ಶುದ್ಧ-ಚೈತನ್ಯಸ್ವಭಾವಿಯಿದ್ದಾನೆ ಮತ್ತು ಕರ್ಮ, ಶರೀರ ಮೊದಲಾದವು ಜಡಸ್ವಭಾವಿಯಿವೆ. ಅವುಗಳದು (ಕರ್ಮ-ಶರೀರ ಮೊದಲಾದವುಗಳದ್ದು) ಆತ್ಮನಲ್ಲಿ ಅಭಾವವಿದೆ. ಚೈತನ್ಯದ ಜ್ಞಾನವಾದ ಮೇಲೆ ಶರೀರ ಮೊದಲಾದ ಅಜೀವಗಳದು ಕೂಡ ಜ್ಞಾನವಾಗಿ ಹೋಗುತ್ತದೆ. ಈ ಪ್ರಕಾರದ ಪ್ರತೀತಿಯಿಲ್ಲದ ಜೀವನಿಗೆ ಸಂಸಾರವು ಹೇಗೆ ಉಳಿದುಕೊಂಡಿದೆಯೆಂಬುದರದು ಕೂಡ ಅರಿವಿರುವುದಿಲ್ಲ ತನ್ನ ಮಲಿನತೆಯು ತನ್ನ ಕಾರಣದಿಂದ ಇದೆ- ಎಂಬುದನ್ನು ಯಾರು ಒಪ್ಪಿಕೊಳ್ಳುವುದಿಲ್ಲ ಅವರಿಗೆ ಸಂಸಾರವು ಅಖಂಡ ವಿದ್ಯಮಾನವಿರುತ್ತದೆ. ಈ ಪ್ರಕಾರದಿಂದ ಅಜ್ಞಾನೀ ಜೀವನು ರಾಗ-ದ್ವೇಷದ ಪರಿಣಾಮದಿಂದ ಸಂಸಾರವನ್ನು ಉತ್ಪನ್ನ ಮಾಡಿಕೊಳ್ಳುತ್ತಾನೆ.

ಯಾವ ಜೀವನಿಗೆ ಸಂಸಾರದಲ್ಲಿ ಪರಿಭ್ರಮಣವು ಏಕೆ ಆಗುತ್ತಿರುವುದೆಂಬುದರದೂ ಕೂಡ ಅರಿವಿರುವುದಿಲ್ಲ ಅದನ್ನು ಅವನು ಯಾವ ರೀತಿ ನಾಶ ಮಾಡುವನು ? ಇಲ್ಲಿ ಕಾರಣ-ಕಾರ್ಯ ಹೇಳಿದೆ ಅದರ ಅರ್ಥವು ಕಾರಣ-ನಿಮಿತ್ತ ಮತ್ತು ಕಾರ್ಯ-ನೈಮಿತ್ತಿಕವಿದೆ. ಜೀವನು ರಾಗ-ದ್ವೇಷರೂಪದ ನೈಮಿತ್ತಿಕ ಪರ್ಯಾಯ ಮಾಡುತ್ತಾನೆ, ಅದರಲ್ಲಿ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಅದರಂತೆ ನಾಲ್ಕು ಗತಿರೂಪದ ನೈಮಿತ್ತಿಕ ಪರ್ಯಾಯವಾಗುತ್ತದೆ ಅದರಲ್ಲಿ ಕರ್ಮವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಐದು ಇಂದ್ರಿಯಗಳ ವಿಷಯಗಳಲ್ಲಿ ರಾಗ-ದ್ವೇಷದ ನೈಮಿತ್ತಿಕ ಪರ್ಯಾಯ ಮಾಡುತ್ತಾನೆ ಅದರಲ್ಲಿ ಇಂದ್ರಿಯಗಳನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಮಿಥ್ಯಾದೃಷ್ಟಿಯ ಬುದ್ಧಿಯು ಪರದಲ್ಲಿ ಹೋಗುತ್ತದೆಯೆಂಬುದನ್ನು ಸಿದ್ಧ ಮಾಡುವುದಿದೆ. ಈ ಪ್ರಕಾರ ಪರಸ್ಪರದಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವು ನಡೆಯುತ್ತ ಬರುತ್ತಲಿದೆ. ಮಿಥ್ಯಾದೃಷ್ಟಿ ಜೀವನಿಗೆ ತನ್ನ ಸ್ವಭಾವದ ಅಭಿರುಚಿ ಇಲ್ಲದಿರುವುದರಿಂದ ವಿಷಯಗಳ ಮೇಲೆ ಅವನ ಅಭಿರುಚಿಯಿದೆ. ಅಭವ್ಯ ಜೀವನಿಗೆ ತನ್ನ ಸ್ವಭಾವದ ಮೇಲೆ ಅಭಿರುಚಿಯು ಎಂದೂ ಆಗದಿರುವುದರಿಂದ ಅವನಿಗೆ ಸಂಸಾರದ ಕೊನೆಯು ಎಂದೂ ಬರುವುದೇ ಇಲ್ಲ. ಮತ್ತು ಭವ್ಯ ಜೀವನು ತನ್ನ ಆತ್ಮನ ಪ್ರತೀತಿ ಮಾಡಿಕೊಂಡರೆ ಸಂಸಾರದ ಕೊನೆಯು ಬರುತ್ತದೆ. ಕುಂಭಕಾರನ ಚಕ್ರವು ಹೇಗೆ ಅಖಂಡ ಸುತ್ತುತ್ತಿರುತ್ತದೆ ಹಾಗೆ ಜೀವನು ಅನಾದಿಯಿಂದ ಸಂಸಾರದಲ್ಲಿ ಸುತ್ತುತ್ತಲಿದ್ದಾನೆ. ಆದುದರಿಂದ ನಿಶ್ಚಿತವಾಗುವುದೇನೆಂದರೆ ಪುದ್ಗಲ ಪರಿಣಾಮದ ನಿಮಿತ್ತದಿಂದ ಜೀವನು ತನ್ನ ಅಜ್ಞಾನದ ಕಾರಣದಿಂದ ಅಶುದ್ಧ ಪರಿಣಾಮ ಮಾಡುತ್ತಾನೆ. ಮತ್ತು ಆ ಅಶುದ್ಧ ಪರಿಣಾಮದ ನಿಮಿತ್ತದಿಂದ ಜಡಕರ್ಮದ ಪರಿಣಾಮವಾಗುತ್ತದೆ. ಹೀಗೆ ತಿಳಿಸಿಕೊಟ್ಟು ಹೇಳುವುದೇನೆಂದರೆ ಕರ್ಮ ಮತ್ತು ರಾಗದ ಮೇಲಿನ ನಿನ್ನ

ದೃಷ್ಟಿಯನ್ನು ಬಿಟ್ಟುಕೊಡು ಆ ರಾಗದ ಪರಿಣಾಮವು ಶುದ್ಧ ಜೀವದ್ದಿಲ್ಲ. ಅದರಂತೆ ಅದು ಕರ್ಮದ್ದು ಕೂಡ ಇಲ್ಲ ಅದು ನಿನ್ನ ಪರ್ಯಾಯಬುದ್ಧಿಯಿಂದ ಆಗಿರುವುದರಿಂದ ನಿನ್ನ ಪರ್ಯಾಯ ಬುದ್ಧಿಯನ್ನು ಬಿಟ್ಟುಕೊಡು ಮತ್ತು ಸ್ವಭಾವ ಬುದ್ಧಿಯನ್ನು ಮಾಡೆಂದು ಹೇಳುವುದೇ ಇಲ್ಲಿನ ಭಾವವಿದೆ.

**ಮೋಹೋ ರಾಗೋ ದೋಸೋ ಚಿತ್ತಪಸಾದೋ ಯ ಜಸ್ಸ ಭಾವಮ್ಮಿ ।**
**ವಿಜ್ಜದಿ ತಸ್ಸ ಸುಹೋ ವಾ ಅಸುಹೋ ವಾ ಹೋದಿ ಪರಿಣಾಮೋ ॥೧೩೧॥**

**ಯಾವನ ಭಾವದಲಿ ಮೋಹ, ರಾಗ, ದ್ವೇಷವಿಲ್ಲವೆ ಚಿತ್ತಪ್ರಸನ್ನತೆಯಿದೆ ।**
**ಅವನಿಗೆ ಶುಭವಿಲ್ಲವೆ ಅಶುಭ ಪರಿಣಾಮಗಳ ಸದ್ಭಾವವಿರುವುದು ॥೧೩೧॥**

ಮೊದಲು ಮೋಹದ ಪರಿಣಾಮದ ಪರಿಚಯ ಮಾಡಿಸುತ್ತಾರೆ. ಆತ್ಮನ ಶಾಂತಿಯು ಆತ್ಮನಲ್ಲಿದೆಯೆಂಬುದನ್ನು ಮನ್ನಿಸದೆ ಆ ಶಾಂತಿಯು ಪರದೊಳಗಿಂದ ದೊರಕುತ್ತದೆಯೆಂಬ ಮನ್ನಣೆಯು ಮಹಾನ್ ಅಜ್ಞಾನದ ಪರಿಣಾಮವಿದೆ. ಆದುದರಿಂದ ಯಾರಿಗೆ ಸುಖಿಯಾಗುವುದಿದೆ ಅವರು ಚಿದಾನಂದ ಸ್ವರೂಪನಾದ ಆತ್ಮನಲ್ಲಿ ಶ್ರದ್ಧೆ-ಜ್ಞಾನಗಳನ್ನು ಮಾಡಬೇಕಾಗುವುದು. ಆತ್ಮನನ್ನು ಹೊರತುಪಡಿಸಿ ಸುಖ-ಶಾಂತಿಗಳು ದೊರಕುವುದಿಲ್ಲ.

ಆತ್ಮನು ಸ್ವಯಂ ಸತ್‌ವಸ್ತುವಿದ್ದಾನೆ. ಅವನ ಅಪೇಕ್ಷೆಯಿಂದ ಇತರ ವಸ್ತುಗಳು ಅಸತ್ ಇವೆ. ಅಸತ್‌ದ ಆಧಾರದಿಂದ ಶಾಂತಿಯು ಲಭಿಸುವುದೇನು ? ಎಂದೂ ದೊರಕುವುದಿಲ್ಲ. ಆತ್ಮನ ಶಾಂತಿಯೆಂದು ಹೇಳಿರಿ ಅಥವಾ ಧರ್ಮವೆಂದು ಹೇಳಿರಿ ಎರಡೂ ಒಂದೇ ವಸ್ತುವಿದೆ. ಇಲ್ಲಿ ಧರ್ಮ ಮಾಡುವುದು ಮತ್ತು ಪರಲೋಕದಲ್ಲಿ ಶಾಂತಿಯು ದೊರಕುವುದೆಂಬುದಾಗಿ ವಸ್ತುಸ್ವರೂಪವಿಲ್ಲ. ಅಂತಃತತ್ತ್ವದ ಅನಾದರ ಮಾಡಿ ಬಾಹ್ಯದಲ್ಲಿ ಪ್ರೀತಿಪಡುತ್ತಿರುವವನಿಗೆ ಮೋಹದ ಮೂರ್ಖತನದ ಪರಿಣಾಮವಿದೆ. ದಯೆ-ದಾನ ಮೊದಲಾದವುಗಳ ಭಾವಗಳು ಪುಣ್ಯವಿವೆ. ಅವುಗಳ ವಿಷಯವು ಪರವಿದ್ದರೂ ಕೂಡ ಅವುಗಳಿಂದ ಆತ್ಮನು ಪ್ರಕಟನಾಗುತ್ತಾನೆಂದು ಮನ್ನಿಸುವುದು ಮೂಢತನವಿದೆ ಮತ್ತು ಮೋಹವಿದೆ. ಬಾಹ್ಯದ ವಸ್ತುಗಳನ್ನು ಬಿಟ್ಟುಕೊಡಿರೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ, ಆದರೆ ವಿಪರೀತ ಮನ್ನಣೆಯ್ನು ಬಿಟ್ಟುಕೊಡದ ಹೊರತಾಗಿ ನಿಜವಾಗಿ ರಾಗವು ಹೊರಟುಹೋಗುವುದಿಲ್ಲ. ಅಂತಃತತ್ತ್ವದಿಂದ ಶಾಂತಿಯು ದೊರಕುವುದಿಲ್ಲ ; ಆದರೆ ಅದು ಬಾಹ್ಯದಿಂದ ದೊರಕುತ್ತದೆಯೆಂದು ಮನ್ನಿಸುವುದು ಮೋಹವಿದೆ.

ಪರವಸ್ತುಗಳ ಮೇಲೆ ಪ್ರೀತಿ ಮಾಡುವುದು ರಾಗದ ಪಾಪ ಪರಿಣಾಮವಿದೆ. ಪರವಸ್ತುಗಳು ತಮ್ಮ ಕಾರಣದಿಂದ ಬರುತ್ತವೆ ಮತ್ತು ಹೋಗುತ್ತವೆ. ಪರವಸ್ತು ಮತ್ತು ಆತ್ಮನ ಮಧ್ಯದಲ್ಲಿ ಭದ್ರವಾದ ವಜ್ರದ ಗೋಡೆಯಿದೆ, ಆದಾಗ್ಯೂ ಪರದಮೇಲೆ ಪ್ರೀತಿ ಮಾಡುವುದು ಪಾಪವಿದೆ.

ಮನೆಯು ಬಿದ್ದುಹೋದನಂತರ ಅರುಚಿಯ ಪರಿಣಾಮ ಮಾಡುವುದು ಪಾಪತತ್ತ್ವವಿದೆ. ಅದು ಆತ್ಮನಿಗೆ ಶಾಂತಿಕೊಡುತ್ತದೆಯೆಂಬುದಾಗಿಲ್ಲ.

ತಮ್ಮ ಚಿತ್ತದ ಪ್ರಸನ್ನತೆಯರೂಪದಿಂದ ದಯೆ-ದಾನ ಮೊದಲಾದ ಶುಭಭಾವ ಮಾಡುವುದು ಪುಣ್ಯತತ್ತ್ವವಿದೆ, ಅದು ಧರ್ಮತತ್ತ್ವವಿಲ್ಲ, ಅದು ಅಬಂಧರೂಪದ ಆತ್ಮನಿಗೆ ಸಹಾಯ ಮಾಡುವುದಿಲ್ಲ.

ಯಾರಿಗೆ ಮೋಹ, ಪ್ರೀತಿ-ಅಪ್ರೀತಿ ಹಾಗೂ ಚಿತ್ತದ ಪ್ರಸನ್ನತೆಯ ರೂಪದ ಭಾವಗಳಾಗುತ್ತವೆ. ಅವರಿಗೆ ಶುಭ ಅಥವಾ ಅಶುಭ ಪರಿಣಾಮಗಳಾಗುತ್ತವೆ.

**ಭಾವಾರ್ಥ ಃ-** ಯಾವ ಜೀವನಿಗೆ ಶುದ್ಧ ಆತ್ಮತತ್ತ್ವದ ಅಭಿರುಚಿಯಿಲ್ಲ ಮತ್ತು ನಿಜವಾದ ದೇವ-ಶಾಸ್ತ್ರ-

ಗುರುಗಳ ಅಭಿರುಚಿಯಿಲ್ಲ ಅವನಿಗೆ ಮಿಥ್ಯಾತ್ವದ ಪರಿಣಾಮವಾಗುತ್ತದೆ. ದರ್ಶನಮೋಹನೀಯ ಕರ್ಮದ ಉದಯದ ಕಾರಣದಿಂದ ಮೋಹದ ಪರಿಣಾಮಗಳಾಗುತ್ತವೆ. ಇದು ನಿಮಿತ್ತದಿಂದ ಕಥನವಿದೆ. ಜೀವದಲ್ಲಿ ಮೋಹದ ಪರಿಣಾಮ ರೂಪ ನೈಮಿತ್ತಿಕ ಅವಸ್ಥೆಯಾಗುತ್ತದೆ, ಆಗ ಕರ್ಮದ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಅಜ್ಞಾನೀ ಜೀವನು ಪರ ಪದಾರ್ಥಗಳನ್ನು ಆತ್ಮನ ಸಹಾಯಕವೆಂದು ಮನ್ನಿಸುತ್ತಾನೆ ; ಆದರೆ ಅದು ನಿಜವಾಗಿ ಭ್ರಾಂತಿಯೇ ಇರುವುದು. ಪುಣ್ಯದ ಪರಿಣಾಮಗಳು ಆತ್ಮನಿಗೆ ಸಹಾಯಕವಿಲ್ಲವೆಂದ ಮೇಲೆ ಆ ಪುಣ್ಯದ ಪರಿಣಾಮಗಳು ಯಾವುದರ ಲಕ್ಷ್ಯದಿಂದ ಆಗುತ್ತವೆ ಆ ಪರ ಪದಾರ್ಥಗಳು ಹಾಗೂ ಪುಣ್ಯದಿಂದ ಯಾವ ವಸ್ತುಗಳು ಪ್ರಾಪ್ತವಾಗುತ್ತವೆ, ಅವುಗಳಿಂದ ಆತ್ಮನ ಕಲ್ಯಾಣವು ಯಾವ ರೀತಿಯಿಂದ ಆಗುವುದು ? ಎಂದರೆ ಆಗುವುದೇ ಇಲ್ಲ.

ಯಾವ ಜೀವರುಗಳು ನಿಶ್ಚಯ ಆತ್ಮನ ಶ್ರದ್ಧೆ ಮಾಡುವುದಿಲ್ಲ ಮತ್ತು ವೀತರಾಗ ದೇವ, ನಿರ್ಗ್ರಂಥ ಗುರು ಹಾಗೂ ಅನೇಕಾಂತಮಯ ಧರ್ಮದ ಶ್ರದ್ಧೆ ಮಾಡುವುದಿಲ್ಲ ಅವರು ಕರ್ಮದ ವಿಪಾಕದಲ್ಲಿ ಒಂದಾಗಿ ಹೋಗಿ ಅವನ್ನು ತಮ್ಮವೆಂದು ಹೇಳುತ್ತಾರೆ.

ತಾಯಿಯು ನವೀನವಾಗಿ ಮದುವೆಯಾಗಿರುವ ತನ್ನ ಮಗನನ್ನು ಉದ್ದೇಶಿಸಿ ಹೇಳುವುದೇನೆಂದರೆ ಮಗು ! ನೀನು ನಿನ್ನ ತಾಯಿಯನ್ನು ನಿನ್ನವಳೆಂದು ಮನ್ನಿಸುವುದಿಲ್ಲ, ಆದರೆ ಹೊಸದಾಗಿ ಮದುವೆಯಾಗಿ ಬಂದ ನಿನ್ನ ಪತ್ನಿಯನ್ನು ನಿನ್ನವಳೆಂದು ಮನ್ನಿಸುತ್ತಿರುವೆಯಲ್ಲ ! ಇದನ್ನು ಸಜ್ಜನತೆಯೆಂದು ಹೇಳಲಾಗುವುದಿಲ್ಲ. ಅದೇ ಪ್ರಕಾರ ಇಲ್ಲಿ ಹೇಳುವುದೇನೆಂದರೆ ಅಯ್ಯಾ ! ಚೈತನ್ಯವು ಅನಾದಿಯಿಂದ ನಿನ್ನದಿದ್ದರೂ ಅದನ್ನು ನೀನು ಮನ್ನಿಸುವುದಿಲ್ಲ ಮತ್ತು ಸಮಯ ಸಮಯಕ್ಕೆ ಹೊಸ-ಹೊಸ ಕರ್ಮವಾಗುತ್ತದೆ, ಅದನ್ನು ನೀನು ಮನ್ನಿಸುತ್ತಿರುವೆ. ಆದುದರಿಂದಲೇ ಸಂಸಾರದಲ್ಲಿ ಅಖಂಡ ಪರಿಭ್ರಮಣ ಮಾಡುತ್ತಿರುವೆ. ಇಂಥ ಜೀವನಿಗಂತೂ ನಿಮಿತ್ತದ ಅಭಿರುಚಿಯಿದೆ. ಆದರೆ ಶುದ್ಧ ಉಪಾದಾನದ ಅಭಿರುಚಿಯಿಲ್ಲ. ಕರ್ಮಗಳಿಂದ ಆತ್ಮನು ಬೇರೆಯಿದ್ದಾನೆಂದು ಭೇದಜ್ಞಾನ ಮಾಡಬೇಕಾಗುವುದು ಅದಕ್ಕೆ ಪ್ರತಿಯಾಗಿ ಅಜ್ಞಾನೀ ಜೀವನು ಕರ್ಮದ ಜತೆಯಲ್ಲಿ ಏಕತ್ವಬುದ್ಧಿ ಮಾಡುತ್ತಾನೆ. ಜ್ಞಾನೀ ಪುರುಷರು ಕರ್ಮದ ಕಾರಣದಿಂದ ಸುಖವಾಗುವುದಿಲ್ಲವೆಂದು ಹೇಳಿದರೆ ಅಜ್ಞಾನೀ ಜೀವರುಗಳು ಎದುರಿಗೇ ತರ್ಕಮಾಡಿ ಹೇಳುವುದೇನೆಂದರೆ ''ಇಲ್ಲ, ಇಲ್ಲ. ಪುಣ್ಯಕರ್ಮವಿದ್ದರೆ ಉಪದೇಶಕರು ದೊರಕುತ್ತಾರೆ ಮತ್ತು ಅದರಿಂದ ಧರ್ಮವಾಗುತ್ತದೆ.'' ಆದರೆ ಇದಂತೂ ಮೂಢತನವಿದೆ. ಎಲ್ಲಿ ಪುಣ್ಯದ ಭಾವಗಳೇ ಹಿತಕರವಿಲ್ಲವೆಂದಮೇಲೆ ಅದರ ಫಲದಲ್ಲಿ ಯಾವ ಸಂಯೋಗಗಳು ದೊರಕುತ್ತವೆ ಅವು ಹಿತಕರವಾಗಿ ಹೇಗೆ ಆಗುವ ಸಾಧ್ಯತೆಯಿದೆ ? ಆಗುವ ಸಾಧ್ಯತೆಯೇ ಇಲ್ಲ. ಆದಾಗ್ಯೂ ಅಜ್ಞಾನೀ ಜೀವರುಗಳು ಅವನ್ನು ಹಿತಕರವೆಂದು ಮನ್ನಿಸಿ ಮೂರ್ಖತನ ಮಾಡುತ್ತಿದ್ದಾರೆ. ಅಯ್ಯಾ! ಕರ್ಮದ ವಿಪಾಕವು ಕರ್ಮದಲ್ಲಿ ಇದೆ. ಜೀವನು ವಿಪರೀತ ಶ್ರದ್ಧೆ ಮತ್ತು ಮಲಿನ ಪರಿಣಾಮ ಮಾಡುತ್ತಾನೆ ಮತ್ತು ಕರ್ಮದ ಉದಯದ ಕಾರಣದಿಂದ ಅಶುದ್ಧ ಅಥವಾ ಮಲಿನ ಪರಿಣಾಮವಾಗುತ್ತದೆಂದು ಹೇಳುತ್ತಾನೆ.

ಚಾರಿತ್ರಮೋಹನೀಯ ಕರ್ಮದ ನಿಮಿತ್ತದಿಂದ ಜೀವನು ಸ್ವಯಂ ರತಿ-ಅರತಿಯ ಪರಿಣಾಮ ಮಾಡುತ್ತಾನೆ. ಆದರೆ ಕರ್ಮವು ಪ್ರೀತಿ-ಅಪ್ರೀತಿಯನ್ನು ಮಾಡಿಸುವುದಿಲ್ಲ. ಅಜ್ಞಾನೀ ಜೀವನು ಕರ್ಮದ ಮೇಲೆ ಆರೋಪ ಮಾಡುತ್ತಾನೆ. ಅವನಿಗೆ ಜ್ಞಾನೀ ಪುರುಷರು ನೀನು ಎಂದಾದರೂ ಕರ್ಮವನ್ನು ನೋಡಿರುವೆಯೇನು ? ಎಂದು ಕೇಳಿದರೆ ಇಲ್ಲವೆಂದು ಉತ್ತರ ಕೊಡುತ್ತಾನೆ. ಹಾಗಾದರೆ ನೀನು ಕರ್ಮದ ಮೇಲೆ ಏಕೆ ಅಪರಾಧ ಹೊರಿಸುತ್ತಿರುವೆ ? ರಾಗ-ದ್ವೇಷಗಳಲ್ಲಿ ಅಸಂಖ್ಯಾತ ಪ್ರಕಾರಗಳಿವೆ. ಆ ರಾಗ-ದ್ವೇಷಗಳು ಜಗತ್ತಿನ ವಸ್ತುಗಳನ್ನು ಅದಲು-ಬದಲು ಮಾಡುವುದಿಲ್ಲ, ಪರಿವರ್ತನೆಗೊಳಿಸುವುದಿಲ್ಲ. ಆ ರಾಗ-ದ್ವೇಷಗಳು ಒಂದು ವಸ್ತುವಿನ ಮೇಲೆ ಪ್ರೀತಿ ಮಾಡಿಸುವುದಿಲ್ಲ

ಮತ್ತು ಇನ್ನೊಂದು ವಸ್ತುವಿನ ಮೇಲೆ ಅಪ್ರೀತಿ ಮಾಡಿಸುವುದಿಲ್ಲ, ಆದರೆ ತನ್ನ ಕಾರಣದಿಂದ ಇಷ್ಟ-ಅನಿಷ್ಟದ ಕಲ್ಪನೆ ಮಾಡುತ್ತಾನೆ. ನಿಶ್ಚಯದಿಂದ ಯಾವ ಜೀವನು ವೀತರಾಗ ಪರಿಣಾಮದಿಂದ ರಹಿತನಿದ್ದಾನೆ ಮತ್ತು ವ್ಯವಹಾರ ರತ್ನತ್ರಯದ ಪರಿಣಾಮದಿಂದ ಕೂಡ ರಹಿತನಿದ್ದಾನೆ ಅವನು ನಿಯಮದಿಂದ ಇಷ್ಟ-ಅನಿಷ್ಟ ಪರಿಣಾಮಗಳನ್ನು ಮಾಡಿಯೇ ಮಾಡುತ್ತಾನೆ. ಅವನ್ನು ರಾಗ-ದ್ವೇಷದ ಪರಿಣಾಮಗಳೆಂದು ಹೇಳಿದೆ ಅದರಲ್ಲಿ ಚಾರಿತ್ರಮೋಹನೀಯ ಕರ್ಮವು ನಿಮಿತ್ತಮಾತ್ರವಿದೆಯೆಂದು ತಿಳಿಯಬೇಕು.

ಯಾವನಿಗೆ ಚಾರಿತ್ರಮೋಹನೀಯ ಕರ್ಮದ ಮಂದ ಉದಯವಿದೆ ಅವನಿಗೆ ಒಂದಿಷ್ಟು ವಿಶುದ್ಧ ಪರಿಣಾಮಗಳಾಗುತ್ತವೆ. ದಯೆ, ದಾನ, ಅನುಕಂಪೆ ಮೊದಲಾದ ಭಾವಗಳು ಶುಭವಿವೆ. ಅದೆಷ್ಟೋ ಜೀವರುಗಳು ಅನುಕಂಪೆಯ ಭಾವವನ್ನು ಪಾಪವೆಂದು ಹೇಳುತ್ತಾರೆ, ಆದರೆ ಅವರ ಮಾತು ಅಸತ್ಯವಿದೆ. ಅದು ಪಾಪವಿಲ್ಲ ಮತ್ತು ತಪಧರ್ಮ ಕೂಡ ಇಲ್ಲ. ಆದರೆ ಅದು ಕಷಾಯದ ಮಂದತೆಯಿದೆ. ಆದುದರಿಂದ ಪ್ರಸನ್ನತೆಯೆಂದು ಹೇಳಲಾಗಿದೆ. ವಿಷಯಭೋಗ, ದೊಡ್ಡಸ್ತಿಕೆ ಮತ್ತು ಪತ್ನಿ-ಪುತ್ರರ ಸಲುವಾಗಿ ನಿಂತುಕೊಳ್ಳುವುದು ಕಲುಷಿತವಾದ ಪರಿಣಾಮವಿದೆ. ದಯೆ-ದಾನಾದಿಗಳ ಪರಿಣಾಮದಲ್ಲಿ ನಿಂತುಕೊಳ್ಳುವುದು ಚಿತ್ತದ ಪ್ರಸನ್ನತೆಯಿದೆ-ಶುಭ ಪರಿಣಾಮವಿದೆ. ಶುಭ-ಅಶುಭ ಇವೆರಡೂ ಭಾವಗಳು ವಿಕಾರವಿವೆ ; ಆದಾಗ್ಯೂ ಅಶುಭ ಪರಿಣಾಮಗಳಿಂದ ತನ್ನನ್ನು ಬೇರೆಮಾಡುವ ಸಲುವಾಗಿ ಜಿನಮಂದಿರ ಮೊದಲಾದವುಗಳನ್ನು ಕಟ್ಟಿಸುವ ಭಾವ-ಮೊದಲಾದವುಗಳಲ್ಲಿ ಯಾವ ಶುಭ ಪರಿಣಾಮಗಳಾಗುತ್ತವೆ ಅವನ್ನು ಚಿತ್ತದ ಪ್ರಸನ್ನತೆಯೆಂದು ಹೇಳುತ್ತಾರೆ.

ಎಲ್ಲಿ ಮೋಹದ ಪರಿಣಾಮವಿದೆ, ಇಂದ್ರಿಯ ವಿಷಯಗಳಲ್ಲಿ ಹಾಗೂ ಧನ, ಧಾನ್ಯ ಮೊದಲಾದವುಗಳಲ್ಲಿ ಅಪ್ರಶಸ್ತ ರಾಗವಿದೆ ಅದನ್ನು ಅಶುಭವೆಂದು ಹೇಳಲಾಗುತ್ತದೆ. ಆ ಅಶುಭಭಾವವು ಶುದ್ಧ ಆತ್ಮನಿಂದ ಪೃಥಕ್ ಇದೆ-ಬೇರೆಯಿದೆ.

ಈಗ ಪುಣ್ಯ-ಪಾಪದ ಸ್ವರೂಪವನ್ನು ಹೇಳುತ್ತಾರೆ -

**ಸುಹಪರಿಣಾಮೋ ಪುಣ್ಣಂ ಅಸುಹೋ ಪಾವಂ ತಿ ಹವದಿ ಜೀವಸ್ಸ ।**
**ದೋಣ್ಹಂ ಪೋಗ್ಗಲಮೇತ್ತೋ ಭಾವೋ ಕಮ್ಮತ್ತಣಂ ಪತ್ತೋ ॥೧೩೨॥**

**ಜೀವದ ಶುಭ ಪರಿಣಾಮ ಪುಣ್ಯವಿದ್ದರೆ ಅಶುಭ ಪರಿಣಾಮ ಪಾಪವಿದೆ ।**
**ಅವೆರಡರಿಂದ ಪೌದ್ಗಲಿಕ ಪರಿಣಾಮ ಕರ್ಮತ್ವವನು ಪಡೆಯುವುದು ॥೧೩೨॥**

ಜೀವದ ಸತ್ ಕ್ರಿಯಾರೂಪದ ಪರಿಣಾಮವನ್ನು ಎಂದರೆ ದಯೆ-ದಾನಾದಿಗಳ ಪರಿಣಾಮವನ್ನು ಶುಭ ಅಥವಾ ಪುಣ್ಯವೆಂದು ಹೇಳುತ್ತಾರೆ ಮತ್ತು ವಿಷಯ ಕಷಾಯಗಳ ಪ್ರವೃತ್ತಿಯನ್ನು ಪಾಪವೆಂದು ಹೇಳುತ್ತಾರೆ. ಎಷ್ಟು ಪ್ರಮಾಣದಲ್ಲಿ ಯಾವ ಪ್ರಕಾರದ ಶುಭಾಶುಭಭಾವಗಳನ್ನು ಮಾಡಲಾಗುತ್ತದೆ ಅಷ್ಟು ಪ್ರಮಾಣದಲ್ಲಿ ಅದೇ ಪ್ರಕಾರದ ಜ್ಞಾನಾವರಣ ಮೊದಲಾದ ಕರ್ಮಗಳು ಕಟ್ಟುತ್ತವೆ, ಆತ್ಮನ ಪ್ರದೇಶದಲ್ಲಿ ಬಂದು ನಿಂತುಕೊಳ್ಳುತ್ತವೆ.

ಕರ್ಮದ ಉದಯವು ಎಷ್ಟು ಪ್ರಮಾಣದಲ್ಲಿ ಬರುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ವಿಕಾರ ಮಾಡಬೇಕಾಗುತ್ತದೆಯೆಂಬುದಾಗಿ ನಿರ್ದಿಷ್ಟ ನಿಯಮವಿಲ್ಲ. ಆದರೆ ಇಲ್ಲಿ ಎಷ್ಟು ಪ್ರಮಾಣದಲ್ಲಿ ವಿಕಾರ ಮಾಡಲಾಗುತ್ತದೆ ಅಷ್ಟು ಪ್ರಮಾಣದಲ್ಲಿ ಕರ್ಮವಂತೂ ಅವಶ್ಯವಾಗಿ ಬಂಧಿಸಿಬಿಡುತ್ತದೆ. ಅಲ್ಲಿ ಶುಭ ಭಾವದಿಂದ ಶುಭಕರ್ಮ ಮತ್ತು

ಅಶುಭಭಾವದಿಂದ ಅಶುಭಕರ್ಮವು ಕಟ್ಟಲ್ಪಡುತ್ತದೆ. ಭಾವಗಳ ಕಾರಣದಿಂದಾಗಿ ಕರ್ಮವು ಬರಬೇಕಾಗುತ್ತದೆ ಯೆಂಬುದಾಗಿ ಹೇಳಬೇಕಾದರೆ ಪುದ್ಗಲದ್ರವ್ಯವು ಹಾಗೆ ಪರಾಧೀನವಾಗಿಲ್ಲ ; ಆದರೆ ಆ ಸಮಯದಲ್ಲಿ ಕರ್ಮವರ್ಗಣಾಗಳ ಪರಮಾಣುಗಳ ಯೋಗ್ಯತೆಯೇ ಆ ಪ್ರಕಾರವಾಗಿರುತ್ತದೆ. ಯಾವುದೂ ಯಾವುದರ ಕರ್ತೃವಿಲ್ಲ. ಜೀವವು ಸ್ವಭಾವದ ದೃಷ್ಟಿಯಿಂದ ಅವುಗಳನ್ನು ತಿಳಿದುಕೊಳ್ಳುವಂಥದ್ದಿದೆ. ಆದರೆ ಅಜ್ಞಾನಿಗಳು ಅದನ್ನು ತಮ್ಮ ಸ್ವರೂಪವೆಂದು ಮನ್ನಿಸಿಕೊಳ್ಳುತ್ತಾರೆ.

**ಭಾವಾರ್ಥ :-** ಸಂಸಾರೀ ಜೀವರುಗಳಿಗೆ ಶುಭ-ಅಶುಭದ ಭೇದದಿಂದ ಎರಡು ಪ್ರಕಾರದ ಪರಿಣಾಮಗಳಾಗುತ್ತವೆ. ಆತ್ಮನು ಅಶುದ್ಧ ನಿಶ್ಚಯನಯದಿಂದ ಶುಭ ಪರಿಣಾಮಗಳ ಕರ್ತೃವಿದ್ದಾನೆ ಮತ್ತು ದಯೆ-ದಾನ ಮೊದಲಾದವುಗಳ ಪರಿಣಾಮವು ಅವನ ಕಾರ್ಯವಿದೆ. ಕರ್ಮಗಳು ಆ ಪ್ರಕಾರದ ಭಾವ ಮಾಡಿಸುವುದಿಲ್ಲ, ಆದರೆ ತಾನು ಸ್ವಯಂ ಅಶುದ್ಧಭಾವರೂಪದಿಂದ ಪರಿಣಮಿಸುತ್ತಾನೆ ಆಗ ಕರ್ಮವನ್ನು ನಿಮಿತ್ತ ಕರ್ತೃವೆಂದು ಹೇಳಲಾಗುತ್ತದೆ. ಜಡವಂತೂ ಜಡದ ಪರ್ಯಾಯದ ಕರ್ತೃವಿದೆ. ಪುಣ್ಯಕರ್ಮದ ಪರಮಾಣುಗಳು ತಮ್ಮ ಕಾರಣದಿಂದ ಕಟ್ಟಲ್ಪಡುತ್ತವೆ. ಅವು ಉಪಾದಾನ ಕಾರಣವಿವೆ ಮತ್ತು ಜೀವದ ಶುಭಭಾವವು ಅದರ ನಿಮಿತ್ತ ಕಾರಣವಿದೆ. ಜೀವನು ಶುಭಭಾವ ಮಾಡಿದ್ದಾನೆ ಅದಕ್ಕಾಗಿ ತಾನು ಹೋಗಿ ಕಟ್ಟಲ್ಪಡಬೇಕೆಂಬ ಪ್ರಜ್ಞೆಯು ಜಡಕ್ಕೆ ಇರುವುದಿಲ್ಲ ; ಆದರೆ ಆ ಪರಮಾಣುಗಳು ಸ್ವಯಂ ಬಂದು ಕಟ್ಟಿಕೊಳ್ಳುತ್ತವೆ ಅದರಲ್ಲಿ ನಿಮಿತ್ತ ಕಾರಣವು ಶುಭಪರಿಣಾಮವಿದೆ. ಯಾವಾಗ ಶುಭಪರಿಣಾಮದ ನಿಮಿತ್ತವು ದೊರಕುತ್ತದೆ. ಆಗ ಅಲ್ಲಿ ಪುಣ್ಯ ಪ್ರಕೃತಿಗೆ ಯೋಗ್ಯವಾದ ವರ್ಗಣಾಗಳು ಇರುತ್ತವೆ. ಇದೇ ಕಾರಣದಿಂದ ಮೊದಲಂತೂ ಭಾವಪುಣ್ಯವಾಗುತ್ತದೆ ಅದರ ನಂತರವೇ ದ್ರವ್ಯಪುಣ್ಯವಾಗುತ್ತದೆ.

ಯಾವಾಗ ಶುಭ ಪರಿಣಾಮದ ನಿಮಿತ್ತವು ದೊರಕುತ್ತದೆ ಆಗ ಪುಣ್ಯಪ್ರಕೃತಿಯ ಪರಮಾಣುಗಳು ಬಂದು ಕಟ್ಟಿಕೊಂಡು ಬಿಡುತ್ತವೆ. ಅವೆರಡೂ ಒಂದು ಸಮಯದಲ್ಲಿ ಇರುತ್ತವೆ. ಹಿಂದೆ-ಮುಂದೆ ಇರುವುದೇ ಇಲ್ಲ. ಅದರಂತೆ ಪರಾಧೀನ ಕೂಡ ಇರುವುದಿಲ್ಲ. ಇನ್ನು ಭಾವಪುಣ್ಯವನ್ನು ಮೊದಲು ಹೇಳಲಾಗಿದೆ ಮತ್ತು ದ್ರವ್ಯಪುಣ್ಯವನ್ನು ಅನಂತರವೆಂದು ಹೇಳಲಾಗಿದೆ. ಆದುದರಿಂದ ಶುಭಭಾವವು ಮೊದಲು ಇರುವುದು ಮತ್ತು ದ್ರವ್ಯಪುಣ್ಯವು ಅನಂತರ ಕಟ್ಟುತ್ತದೆಯೆಂಬುದಾಗಿ ಇದರ ಅರ್ಥವಿಲ್ಲ, ಆದರೆ ಎರಡೂ ಒಂದೇ ಸಮಯದಲ್ಲಿರುತ್ತವೆ. ಶುಭಭಾವದ ಪ್ರವೀಣತೆಯನ್ನು ತಿಳಿಸಿಕೊಡುವುದರ ಸಲುವಾಗಿ ಭಾವಪುಣ್ಯವು ಮೊದಲು ಆಗುತ್ತದೆಯೆಂಬುದಾಗಿ ಹೇಳಲಾಗಿದೆ ಆದರೆ ಮೊದಲು ಭಾವ ಮಾಡಲಾಗುವುದು ಅನಂತರ ದ್ರವ್ಯಕರ್ಮವು ಕಟ್ಟಲ್ಪಡುತ್ತದೆಯೆಂಬುದಾಗಿ ಸ್ವರೂಪವಿಲ್ಲ.

ಇದೇ ಪ್ರಕಾರವಾಗಿ ಅಶುದ್ಧ ನಿಶ್ಚಯನಯದಿಂದ ಜೀವನು ಸ್ವಯಂ ತನ್ನ ಪಾಪಪರಿಣಾಮದ ಕರ್ತೃವಿದ್ದಾನೆ. ಅವನು ತನ್ನ ಕುಟುಂಬದ ಕಾರಣದಿಂದ ಅಥವಾ ಹೆಂಡಿರು-ಮಕ್ಕಳುಗಳ ಕಾರಣದಿಂದ ಪಾಪ ಮಾಡುವುದಿಲ್ಲ. ಅಲ್ಲಿ ಜೀವನು ಅಶುಭ ಪರಿಣಾಮದ ಕರ್ತೃವಿದ್ದಾನೆ ಮತ್ತು ಅಶುಭ ಪರಿಣಾಮವು ಅವನ ಕಾರ್ಯವಿದೆ. ಭಾವಪಾಪದ ನಿಮಿತ್ತ ಪಡೆದು ದ್ರವ್ಯಪಾಪವಾಗುತ್ತದೆ. ಆದುದರಿಂದ ಇಲ್ಲಿ ಮೊದಲು ಭಾವಪಾಪವಾಗುತ್ತದೆ ಅನಂತರ ದ್ರವ್ಯಪಾಪವಾಗುತ್ತದೆಯೆಂಬುದಾಗಿ ಕಥನ ಮಾಡುವುದರಲ್ಲಿ ಬಂದಿದೆ. ಆದರೆ ಯಾವ ಸಮಯದಲ್ಲಿ ಭಾವಪಾಪವಿದೆ ಅದೇ ಸಮಯದಲ್ಲಿ ದ್ರವ್ಯಪಾಪವು ಕಟ್ಟಲ್ಪಡುತ್ತದೆ. ಅವು ಮೊದಲು-ಅನಂತರ ಇರುವುದಿಲ್ಲ, ಆದರೆ ಭಾವಪಾಪದ ಪ್ರವೀಣತೆಯನ್ನು ತಿಳಿಸಿಕೊಡುವುದರ ಸಲುವಾಗಿ ಈ ಪ್ರಕಾರ ಕಥನ ಮಾಡುವುದರಲ್ಲಿ ಬಂದಿದೆ.

ಆತ್ಮನಲ್ಲಿ ಯಾವ ಪುಣ್ಯ-ಪಾಪದ ವಿಕಾರಗಳಾಗುತ್ತವೆ ಅವು ಹೇಯವಿವೆ, ಬಂಧದ ಕಾರಣಗಳಾಗಿವೆ. ಆತ್ಮನು ಸ್ವಭಾವದಿಂದ ಶುದ್ಧಜ್ಞಾನಾನಂದಸ್ವರೂಪನಿದ್ದಾನೆ. ಅದನ್ನು ಮರೆತು ಹೋಗುವುದರಿಂದ ವಿಕಾರ ಭಾವಗಳ

ಉತ್ಪತ್ತಿಯಾಗುತ್ತದೆ. ಅವು ಬೇಕಾದರೆ ಪುಣ್ಯಭಾವವಿರಲಿ ಅಥವಾ ಪಾಪಭಾವವಿರಲಿ, ಆದರೆ ಅವೆರಡೂ ಕರ್ಮ ಬಂಧದ ನಿಮಿತ್ತವಿರುವುದರಿಂದ ಅವು ಹೇಯವಿವೆ. ಕರ್ಮವಂತೂ ಕರ್ಮದ ಕಾರಣದಿಂದ ಕಟ್ಟಲ್ಪಡುತ್ತದೆ, ಅದಂತೂ ಪುದ್ಗಲದ ಪರ್ಯಾಯವಿದೆ. ಜೀವನು ಸ್ವಯಂ ಎಷ್ಟು ಪ್ರಮಾಣದಲ್ಲಿ ವಿಕಾರ ಮಾಡುತ್ತಾನೆ ಅಷ್ಟೇ ಪ್ರಮಾಣದಲ್ಲಿ ನವೀನ ಕರ್ಮವು ಕಟ್ಟಲ್ಪಡುತ್ತದೆ. ಆದಾಗ್ಯೂ ಅದು ಜೀವದ ಕಾರಣವಿಲ್ಲ. ಜೀವನಂತೂ ತಾನು ತನ್ನ ಶುಭ-ಅಶುಭ ಪರಿಣಾಮಗಳ ಕರ್ತೃವಿದ್ದಾನೆ. ಜೀವದ ಪರಿಣಾಮಗಳ ಪ್ರಮಾಣದಲ್ಲಿಯೇ ಕರ್ಮದ ರಜಕಣಗಳು ಬಂದು ಕಟ್ಟುತ್ತವೆ; ಆದರೆ ಜೀವನು ಮಾತ್ರ ಆ ಕರ್ಮದ ಕರ್ತೃವಿಲ್ಲ. ಮೊದಲಂತೂ ಜೀವನು ಜಡಕರ್ಮದ ಕರ್ತೃವಿಲ್ಲವೆಂಬುದನ್ನೇ ಇಲ್ಲಿ ತಿಳಿಸಿಕೊಡುವುದಿದೆ. ಯಾವ ಭಾವಗಳ ನಿಮಿತ್ತದಿಂದ ನವೀನ ಕರ್ಮಗಳು ಬಂದು ಕಟ್ಟುತ್ತವೆ ಆ ಭಾವಗಳು ಹೇಯವಿವೆ. ಆತ್ಮನ ಜ್ಞಾನಾನಂದ ಸ್ವಭಾವದ ಶ್ರದ್ಧೆ-ಜ್ಞಾನ ಮತ್ತು ರಮಣತೆಯರೂಪದ ಯಾವ ನಿರ್ಮಲ ಭಾವವಿದೆ ಅದಂತೂ ಧರ್ಮವಿದೆ. ಆ ನಿರ್ಮಲಭಾವವು ನವೀನ ಕರ್ಮಬಂಧಕ್ಕೆ ಸ್ವಲ್ಪ ಮಾತ್ರವೂ ಕಾರಣವಾಗುವುದಿಲ್ಲ.

ಸ್ವಯಂ ತೀವ್ರ ಪಾಪ ಮಾಡುವುದು ಮತ್ತು ಕರ್ಮವು ಅಲ್ಪ ಪ್ರಮಾಣದಲ್ಲಿ ಕಟ್ಟುವುದೆಂಬುದಾಗಿ ಸಂಭವಿಸುವುದಿಲ್ಲ. ಬಹಳಷ್ಟು ಶುಭಭಾವ ಮಾಡುವುದು ಹಾಗೂ ಅದರಿಂದ ಅಲ್ಪ ಪುಣ್ಯವು ಕಟ್ಟುವುದೆಂಬುದಾಗಿ ಕೂಡ ಸಂಭವಿಸುವುದಿಲ್ಲ. ತಾನು ಎಷ್ಟು ಪ್ರಮಾಣದಲ್ಲಿ ಶುಭಾಶುಭ ಭಾವಗಳನ್ನು ಮಾಡಲಾಗುತ್ತದೆ. ಅಷ್ಟು ಪ್ರಮಾಣದಲ್ಲಿಯೇ ಕರ್ಮವು ಕಟ್ಟುತ್ತಿರುತ್ತದೆ ; ಆದಾಗ್ಯೂ ಜೀವನು ಆ ಕರ್ಮದ ಕರ್ತೃವಿಲ್ಲ. ಆದರೂ ಕೂಡ ಪೂರ್ವ ಕರ್ಮದ ಉದಯವು ಎಷ್ಟು ಪ್ರಮಾಣದಲ್ಲಿರುತ್ತವೆ ಅಷ್ಟು ಪ್ರಮಾಣದಲ್ಲಿಯೇ ಜೀವನಿಗೆ ವಿಕಾರವಾಗುತ್ತದೆಯೆಂಬ ಮಾತಂತೂ ಅತ್ಯಂತ ಸ್ಥೂಲ ಮಿಥ್ಯಾತ್ವವಿದೆ. ಜೀವದ ಪರಿಣಾಮದ ಪ್ರಮಾಣದಿಂದ ಯಾವ ಕರ್ಮವು ಕಟ್ಟಲ್ಪಟ್ಟಿದೆ ಅದರ ಕರ್ತೃವು ಕೂಡ ಜೀವನಿಲ್ಲ.

ಹಾಗಾದರೆ ನವೀನ ಕರ್ಮವು ಕಟ್ಟಲ್ಪಡುತ್ತದೆ ಅದರ ಕರ್ತೃವು ಯಾರಿದ್ದಾರೆ ? ಅಯ್ಯಾ ! ನಿಶ್ಚಯದಿಂದಂತೂ ಪುದ್ಗಲದ್ರವ್ಯವೇ ಅದರ ಕರ್ತೃವಿದೆ, ಆತ್ಮನು ಅದರ ಕರ್ತೃವಿಲ್ಲ. ಆದಾಗ್ಯೂ ಆತ್ಮನು ಜಗತ್ತಿನ ಸ್ಥೂಲ ಪದಾರ್ಥಗಳನ್ನು ಮಾಡುತ್ತಾನೆಂಬುದಂತೂ ಇಲ್ಲವೇ ಇಲ್ಲ. ಎಂಟು ಪ್ರಕಾರದ ಕರ್ಮಗಳು ಕಟ್ಟುತ್ತಿರುತ್ತವೆ ಅದು ಜಡದ ಕಾರ್ಯವಿದೆ. ಅದರ ಕರ್ತೃವು ಕೂಡ ಜಡವಿದೆ. ಆತ್ಮನು ಆ ಜಡಕರ್ಮಗಳ ಕರ್ತೃವಿಲ್ಲ. ಶರೀರವು ನಡೆದಾಡಲಿ ಅಥವಾ ಭಾಷೆಯನ್ನಾಡಲಿ - ಅವುಗಳ ಕರ್ತೃವು ಜೀವನಿಲ್ಲ. ಜೀವದ ವಿಕಾರಗಳ ಪ್ರಮಾಣದಿಂದ ಕರ್ಮಗಳು ಕಟ್ಟುತ್ತವೆ, ಆದರೆ ಜೀವದ ಇಚ್ಛೆಯ ಪ್ರಮಾಣವಾಗಿ ದೇಹ ಮೊದಲಾದವುಗಳ ಕ್ರಿಯೆಗಳಂತೂ ಆಗುವುದಿಲ್ಲ ; ಅಲ್ಲಿ ಕರ್ಮದ ಕರ್ತೃವು ಕೂಡ ಜೀವನಿಲ್ಲವೆಂದ ಮೇಲೆ ದೇಹದ ಕ್ರಿಯೆಗಳ ಕರ್ತೃವು ಜೀವನು ಹೇಗಾಗುವ ಸಾಧ್ಯತೆಯಿದೆ ? ಎಷ್ಟು ಪ್ರಮಾಣದಲ್ಲಿ ವಿಕಾರಗಳಿರುತ್ತವೆ ಅಷ್ಟು ಪ್ರಮಾಣದಲ್ಲಿಯೇ ಕರ್ಮಗಳು ಕಟ್ಟುತ್ತಿದ್ದರೂ ಕೂಡ ಜೀವನು ಅವುಗಳ ಕರ್ತೃಕೂಡ ಇಲ್ಲ. ಆದುದರಿಂದ ಯಾವವು ಯಾವಾಗಲೂ ತಮ್ಮ ಇಚ್ಛೆಯ ಪ್ರಕಾರವಾಗಿ ಸಂಭವಿಸುವುದಿಲ್ಲ ಅಂಥ ಮನೆ-ಅಂಗಡಿ ಮೊದಲಾದವುಗಳ ಕರ್ತೃವು ಜೀವನೆಂದು ಹೇಳುವುದು ಅದಂತೂ ಕೇವಲ ಉಪಚಾರ ಮಾತ್ರವೇ ಇದೆ. ಎಂದರೆ ನಿಜವಾಗಿಯಂತೂ ಜೀವನು ಅವುಗಳ ಕರ್ತೃವಿಲ್ಲ. ಜೀವನು ಅಂಗಡಿ-ಮನೆಗಳ ಕರ್ತೃವಿಲ್ಲ, ದೇಹದ ಕ್ರಿಯೆಯ ಕರ್ತೃವು ಕೂಡ ಇಲ್ಲವೆಂಬುದನ್ನು ತಿಳಿದುಕೊಂಡಲ್ಲದೆ ಪರದ ಅಭಿಮಾನವು ಬಿಟ್ಟುಹೋಗುವುದಿಲ್ಲ ಮತ್ತು ಪರದಿಂದ ಭಿನ್ನಸ್ವಭಾವದ ಪರಿಚಯವಾಗುವುದಿಲ್ಲ ಮತ್ತು ಅದು ಆದಲ್ಲದೆ ಧರ್ಮವಾಗುವುದಿಲ್ಲ.

ಜೀವನು ಯಾವುದನ್ನು ಮಾಡುವನು? ಬಾಹ್ಯದಲ್ಲಿ ಮನೆ-ಕುಟುಂಬ-ಧನ ಅಥವಾ ಶರೀರ ಮೊದಲಾದವುಗಳ ಯಾವ ಕ್ರಿಯೆಯನ್ನು ಜೀವನು ಮಾಡುವ ಸಾಧ್ಯತೆಯಿಲ್ಲ. ಜೀವನಂತೂ ವಿಕಾರ ಭಾವಗಳನ್ನು ಮಾಡಿ ದುಃಖ ಭೋಗಿಸುತ್ತಾನೆ. ಇಲ್ಲದಿದ್ದರೆ ಚೈತನ್ಯದ ಪ್ರತೀತಿ ಮಾಡಿಕೊಂಡು ಧರ್ಮಮಾಡುತ್ತಾನೆ. ಇವನ್ನು ಹೊರತುಪಡಿಸಿ

ಪರವನ್ನಂತೂ-ಪರದಲ್ಲಿಯಂತೂ ಏನನ್ನೂ ಮಾಡುವುದಿಲ್ಲ. ಜೀವನು ವಿಕಾರ ಮಾಡಿದಷ್ಟು ಪ್ರಮಾಣದಲ್ಲಿ ಕರ್ಮವು ಕರ್ಮದ ಕಾರಣದಿಂದ ಬಂಧಿಸುತ್ತದೆ ಮತ್ತು ಆತ್ಮನ ಪ್ರತೀತಿ ಮಾಡಿಕೊಂಡು ವಿಕಾರವು ಹೊರಟುಹೋದರೆ ಅದರ ಪ್ರಮಾಣದಲ್ಲಿ ಕರ್ಮವು ಉದುರಿಹೋಗುತ್ತದೆ. ಅದು ಕೂಡ ಪುದ್ಗಲದ ಪರ್ಯಾಯದ ಕಾರಣದಿಂದ ಉದುರಿಹೋಗುತ್ತದೆ. ಜೀವನು ತನ್ನ ವಿಕಾರೀ ಅಥವಾ ಅವಿಕಾರೀ ಪರಿಣಾಮಗಳನ್ನು ಮಾಡುತ್ತಾನೆ ; ಆದರೆ ಅವನು ಪರದಲ್ಲಿ ಯಾವುದೇ ಪ್ರಕಾರದ ಸುಧಾರಣೆಯನ್ನಾಗಲಿ ಅಥವಾ ಕೆಡಕನ್ನಾಗಲಿ ಮಾಡುವ ಸಾಧ್ಯತೆಯಿಲ್ಲ. ಜೀವದ ಶುಭ ಪರಿಣಾಮದ ನಿಮಿತ್ತದಿಂದ ಪುದ್ಗಲದಲ್ಲಿ ಪುಣ್ಯಕರ್ಮದ ಬಂಧವಾಗುತ್ತದೆ ಅದು ದ್ರವ್ಯಪುಣ್ಯವಿದೆ. ಅದರಂತೆಯೇ ಜೀವದ ಅಶುಭ ಪರಿಣಾಮವು ಭಾವಪಾಪವಿದೆ. ಅದರ ನಿಮಿತ್ತದಿಂದ ಯಾವ ಪಾಪ ಕರ್ಮದ ಬಂಧವಾಗುವುದು ಅದು ದ್ರವ್ಯಪಾಪವಿದೆ. ಆ ದ್ರವ್ಯಪುಣ್ಯ ಮತ್ತು ದ್ರವ್ಯಪಾಪದ ಕರ್ತೃವು ಪುದ್ಗಲದ್ರವ್ಯವಿದೆ, ಆದರೆ ಜೀವನು ಅವುಗಳ ಕರ್ತೃವಿಲ್ಲ. ಭಾವರೂಪದ ಯಾವ ಪುಣ್ಯ-ಪಾಪಗಳಿವೆ ಅವುಗಳ ಉಪಾದಾನ ಕಾರಣನು ಆತ್ಮನಿದ್ದಾನೆ. ಅವನು ಸ್ವಯಂ ಪುಣ್ಯ-ಪಾಪ ಮಾಡಿದರೆ ಆಗುತ್ತವೆ ಮತ್ತು ಹಳೆಯ ದ್ರವ್ಯವು ಪುಣ್ಯ-ಪಾಪರೂಪದ ವರ್ಗಣಾಗಳಂತೂ ನಿಮಿತ್ತ ಮಾತ್ರವಿವೆ. ಹಳೆಯಕರ್ಮಗಳ ಪ್ರಮಾಣದಲ್ಲಿಯೇ ವಿಕಾರವಾಗುತ್ತದೆಯೆಂಬುದಾಗಿಯಂತೂ ಇಲ್ಲವೇ ಇಲ್ಲ. ಜೀವನು ಸ್ವಯಂ ಅವುಗಳಲ್ಲಿ ಎಷ್ಟು ಒಂದಾಗುತ್ತಾನೆ ಅಷ್ಟು ಪುಣ್ಯ-ಪಾಪಗಳಾಗುತ್ತವೆ, ಅದರಲ್ಲಿ ಪುರಾತನ ಕರ್ಮವು ನಿಮಿತ್ತವಿದೆ. ಅದರಂತೆಯೇ ಜೀವದ ಪುಣ್ಯ-ಪಾಪದ ಭಾವಗಳು ನವೀನ ಕರ್ಮಬಂಧದ ನಿಮಿತ್ತವಿವೆ. ಆ ಕರ್ಮದ ಉಪಾದಾನವು ಪುದ್ಗಲದ್ರವ್ಯವಿದೆ. ಜೀವನು ಸ್ವಯಂ ಅರೂಪಿಯಿದ್ದಾನೆ ಮತ್ತು ಅವನ ಭಾವಗಳು ಕೂಡ ಅರೂಪಿಯಿವೆ. ಎಂದರೆ ಭಾವಪುಣ್ಯ-ಪಾಪಗಳು ಅಮೂರ್ತಿಕವಿವೆ, ಅಮೂರ್ತಿಕ ದ್ರವ್ಯದ ಕಾರ್ಯವುಕೂಡ ಅಮೂರ್ತಿಕವಿದೆ. ಆದುದರಿಂದ ನಿಶ್ಚಯನಯದಿಂದಂತೂ ಆತ್ಮನ ಭಾವಪುಣ್ಯ-ಪಾಪಗಳು ಅಮೂರ್ತಿಕ ಕರ್ಮಗಳಿವೆ ಮತ್ತು ಯಾವ ದ್ರವ್ಯಪುಣ್ಯ-ಪಾಪರೂಪದ ಮೂರ್ತಿಕ ಕರ್ಮವಿದೆ ಆ ಮೂರ್ತಿಕ ಕರ್ಮವು ವ್ಯವಹಾರದಿಂದಲೇ ಜೀವದ್ದಿದೆ ಎಂದರೆ ಜೀವನು ಕರ್ಮಕಟ್ಟಿಕೊಂಡನೆಂದು ಹೇಳುವುದು ವ್ಯವಹಾರವಿದೆ. ನಿಜವಾಗಿಯಂತೂ ಆತ್ಮನು ಜಡಕರ್ಮದ ಕರ್ತೃವಿಲ್ಲ, ಆದರೆ ಜೀವದ ಪರಿಣಾಮವು ಅದರಲ್ಲಿ ನಿಮಿತ್ತವಿರುವುದರಿಂದ ವ್ಯವಹಾರದಿಂದ ಆ ಜಡಕರ್ಮವು ಆತ್ಮನ ಕಾರ್ಯವಿದೆ. ನಿಶ್ಚಯದಿಂದಂತೂ ಆ ದ್ರವ್ಯಕರ್ಮದ ಕರ್ತೃವು ಜಡವಿದೆ. ಏಕೆಂದರೆ ಕರ್ಮವು ಸ್ವಯಂ ಮೂರ್ತಿಕವಿದೆ. ಆ ಮೂರ್ತಿಕ ಕರ್ಮದ ಕರ್ತೃವು ಕೂಡ ಮೂರ್ತಿಕವೇ ಇರಬೇಕಾಗುವುದು. ನಿಜವಾಗಿ ಅಮೂರ್ತಿಕ ಆತ್ಮನು ಅದರ ಕರ್ತೃವಿಲ್ಲ. ಪುದ್ಗಲದ ಪರ್ಯಾಯವು ಆಗುವ ಸಮಯದಲ್ಲಿ ಜೀವದ ಯಾವ ರಾಗವು ನಿಮಿತ್ತವಿತ್ತು ಅದನ್ನು ತಿಳಿಸಿಕೊಡುವ ಸಲುವಾಗಿ ''ಅವನು ಅದನ್ನು ಮಾಡಿದನೆ''ಂದು ವ್ಯವಹಾರದಿಂದ ಹೇಳಲಾಗುತ್ತದೆ. ಆದರೆ ನಿಜವಾಗಿ ಜೀವನು ಪರವನ್ನು ಮಾಡುವುದೇ ಇಲ್ಲ.

ಮನೆಯಂತೂ ಮನೆಯ ಪರಮಾಣುಗಳ ಕಾರಣದಿಂದ ಆಗುತ್ತದೆ. ಆದರೆ ಈ ಮನೆಯನ್ನು ಯಾರು ಕಟ್ಟಿಸಿದರೆಂದು ಕೇಳಿದರೆ '' ಇಂಥ ಧನಿಕ ಪುರುಷನು ಆ ಮನೆಯನ್ನು ಕಟ್ಟಿಸಿದ''ನೆಂದು ಹೇಳುತ್ತಾರೆ, ಆದರೆ ಆ ಸಮಯದಲ್ಲಿ ಜೀವದ ಮನೆ ಕಟ್ಟಿಸುವ ರಾಗವು ನಿಮಿತ್ತವಿರುವುದರಿಂದ ಜೀವನನ್ನು ಮನೆ ಮೊದಲಾದವುಗಳ ಕರ್ತೃವೆಂದು ಹೇಳಲಾಗುತ್ತದೆ, ಅದು ಕೂಡ ಉಪಚಾರವಿದೆ. ನಿಜವಾಗಿಯಂತೂ ಜೀವನು ದ್ರವ್ಯಕರ್ಮದ ಕರ್ತೃಕೂಡ ಇಲ್ಲ ಮತ್ತು ಪರ ಮೊದಲಾದವುಗಳ ಕರ್ತೃಕೂಡ ಇಲ್ಲ. ಈ ಪ್ರಕಾರ ತಿಳಿದುಕೊಂಡು ಪರದಿಂದ ಭೇದಜ್ಞಾನ ಮಾಡುವುದು ಮತ್ತು ಆತ್ಮನ ಶುದ್ಧ-ಬುದ್ಧ-ಏಕಸ್ವಭಾವದಲ್ಲಿ ಈ ಪುಣ್ಯ-ಪಾಪಗಳು ಕೂಡ ಇಲ್ಲದಿರುವುದರಿಂದ ಆ ಪುಣ್ಯ-ಪಾಪಗಳು ಹೇಯರೂಪವಿವೆ ಮತ್ತು ಒಂದು ಶುದ್ಧ-ಬುದ್ಧ ಸ್ವಭಾವವೇ ಆದರಣೀಯವಿದೆಯೆಂಬುದು ಈ ಗಾಥೆಯ ತಾತ್ಪರ್ಯವಿದೆ.

ಇಲ್ಲಿ ಧರ್ಮಾತ್ಮ ಪುರುಷನು ತಿಳಿದುಕೊಳ್ಳುವುದೇನೆಂದರೆ ದ್ರವ್ಯಪುಣ್ಯ-ಪಾಪ ಅದರಂತೆ ಭಾವಪುಣ್ಯ-ಪಾಪ

ಇವೆರಡೂ ನಮ್ಮ ಜ್ಞೇಯವಿವೆ ಮತ್ತು ನನ್ನ ಶುದ್ಧಜ್ಞಾನಾನಂದ ಸ್ವರೂಪವೇ ನನಗೆ ಉಪಾದೇಯವಿದೆ. ಈ ಪ್ರಕಾರ ತಿಳಿದುಕೊಳ್ಳುವುದು ಧರ್ಮವಿದೆ.

ಆತ್ಮನು ಜ್ಞಾನಾನಂದ ಅಮೂರ್ತನಿದ್ದಾನೆ, ಅವನು ಇಂದ್ರಿಯಗಳಿಂದ ಕಂಡುಬರುವುದಿಲ್ಲ. ಜಡಕರ್ಮಗಳಂತೂ ಮೂರ್ತಿಕವಿವೆ, ಜಡಕರ್ಮಗಳ ಫಲವು ಬಾಹ್ಯದಲ್ಲಿ ಇಂದ್ರಿಯಗಳಿಂದ ಕಂಡುಬರುತ್ತಿರುವುದರಿಂದ ಅವು ಮೂರ್ತವಿವೆ ಮತ್ತು ಅವುಗಳ ಕಾರಣರೂಪವಾದ ಯಾವ ಕರ್ಮವಿವೆ ಅವು ಕೂಡ ಮೂರ್ತವಿವೆ. ಈ ಪ್ರಕಾರ ಈ ಜಡಕರ್ಮಗಳ ಮೂರ್ತತನವನ್ನು ತಿಳಿಸಿಕೊಡುತ್ತಾರೆ -

**ಜಮ್ಹಾ ಕಮ್ಮಸ್ಸ ಫಲಂ ವಿಸಯಂ ಫಾಸೇಹಿಂ ಭುಂಜದೇ ಣಿಯದಂ ।**
**ಜೀವೇಣ ಸುಹಂ ದುಕ್ಖಂ ತಮ್ಹಾ ಕಮ್ಮಾಣಿ ಮುತ್ತಾಣಿ ॥೧೩೩॥**

**ಕರ್ಮದ ಫಲಭೂತ ಮೂರ್ತವಿಷಯ ನಿಯಮದಿಂ ಸ್ಪರ್ಶಾದಿ ಇಂದ್ರಿಯಗಳಿಂದ ।**
**ಕರ್ಮಮೂರ್ತವಿವೆ, ಜೀವದಿಂ ಸುಖ-ದುಃಖರೂಪವಾಗಿ ಭೋಗಿಸುವುದರಿಂದ ॥೧೩೩॥**

ಮೊದಲಿನ ಪ್ರಾರಬ್ಧಕರ್ಮದ ಫಲದಲ್ಲಿ ಬಾಹ್ಯದೊಳಗೆ ಇಷ್ಟ-ಅನಿಷ್ಟ ವಿಷಯಗಳ ಸಂಯೋಗವಾಗುತ್ತದೆ. ಮೊದಲಿನ ಕರ್ಮದ ನಿಮಿತ್ತದಿಂದ ವರ್ತಮಾನದಲ್ಲಿ ಸಾಮಗ್ರಿಗಳ ಸಂಯೋಗವಾಗುತ್ತದೆ-ಎಂಬುದಾಗಿ ಮನ್ನಿಸದೆ ವರ್ತಮಾನದಲ್ಲಿ ಸಮಾಜದ ವ್ಯವಸ್ಥೆಯು ಸರಿಯಾಗಿಲ್ಲ. ಅದಕ್ಕಾಗಿಯೇ ನಮಗೆ ಇಂಥ-ಇಂಥ ಸಾಮಗ್ರಿಗಳು ದೊರಕುತ್ತಿಲ್ಲವೆಂದು ಯಾರು ಮನ್ನಿಸುತ್ತಾರೆ ಅವರ ಮನ್ನಣೆಯು ನಿಜವಾಗಿ ಬದ್ಧವಿರುದ್ಧವಿದೆ-ಅಸತ್ಯವಿದೆ. ಅಯ್ಯಾ ಸೋದರನೇ ! ಅವರು ಪೂರ್ವದಲ್ಲಿ ಯಾವ ಪ್ರಕಾರವಾಗಿ ಶುಭಾಶುಭ ಪರಿಣಾಮ ಮಾಡಿದ್ದಾರೆ ಆ ಪ್ರಕಾರದ ಪ್ರಾರಬ್ಧ ಕರ್ಮವು ಕಟ್ಟಲ್ಪಟ್ಟಿತು ಮತ್ತು ಅದರ ಉದಯವಾದಮೇಲೆ ಬಾಹ್ಯದಲ್ಲಿ ಇಷ್ಟ-ಅನಿಷ್ಟ ಸಾಮಗ್ರಿಗಳು ದೊರಕುತ್ತವೆ. ಅಲ್ಲಿ ಆ ಪ್ರಕಾರದ ಇಷ್ಟ-ಅನಿಷ್ಟದ ಕಲ್ಪನೆಯನ್ನಂತೂ ಜೀವನು ಮಾಡುತ್ತಾನೆ; ಆದರೆ ಯಾವ ಸಾಮಗ್ರಿಗಳು ದೊರಕಿವೆ ಅವಂತೂ ಪೂರ್ವಕರ್ಮದ ನಿಮಿತ್ತದಿಂದ ಪ್ರಾಪ್ತವಾಗಿವೆ. ವರ್ತಮಾನದಲ್ಲಿ ಯಾವ ಮೂರ್ತ ಸಾಮಗ್ರಿಗಳು ದೊರಕಿವೆ ಅವುಗಳಿಗೆ ಕಾರಣರೂಪವಿರುವ ಕರ್ಮವು ಕೂಡ ಮೂರ್ತವಿದೆ. ಇಲ್ಲಿ ಕರ್ಮವನ್ನು ಮೂರ್ತಿಕವೆಂದು ಸಿದ್ಧಮಾಡುವುದಿದೆ. ಪೂರ್ವದ ಪುಣ್ಯವು ಪಕ್ವವಾದಮೇಲೆ ಯಾವುದು ತಾನೆ ದೊರಕುವುದಿಲ್ಲ ? ಆ ಪುಣ್ಯದ ಫಲದಲ್ಲಿ ಬಾಹ್ಯದೊಳಗೆ ಮೂರ್ತ ಸಾಮಗ್ರಿಗಳ ಸಂಯೋಗವು ದೊರಕಿದರೂ ಕೂಡ ಅವುಗಳಿಂದ ಚೈತನ್ಯದ ಶಾಂತಿಯೇನೂ ದೊರಕಲಿಲ್ಲ. ಜಡಕರ್ಮದ ಪಕ್ವತೆಯು ಜಡದಲ್ಲಿ ಬರುತ್ತದೆ ಮತ್ತು ಚೈತನ್ಯದ ಶಾಂತಿಯ ಪರಿಪಕ್ವತೆಯು ಚೈತನ್ಯದ ಸ್ವರೂಪದೊಳಗಿಂದಲೇ ಬರುತ್ತದೆ. ಅಕ್ಷತೆಯು ಎಲ್ಲಿ ಬೇಯುತ್ತದೆ ? ಅಕ್ಷತೆಯು ಅಕ್ಷತೆಯೊಳಗೇನೇ ಬೇಯುತ್ತದೆಯೋ ? ಅಥವಾ ಹೊರಗೆ ಬೇರಾವುದರಲ್ಲಿಯಾದರೂ ಬೇಯುತ್ತದೆಯೋ? ಅದೇ ಪ್ರಕಾರ ಮೂರ್ತಿಕ ಜಡಕರ್ಮದ ಪಕ್ವತೆಯಂತೂ ಜಡದೊಳಗಿಂದಲೇ ಬರುತ್ತದೆ ; ಆದರೆ ಜಡಕರ್ಮದ ಪಕ್ವತೆಯು ಚೈತನ್ಯದೊಳಗಿಂದ ಬರುವುದಿಲ್ಲ. ಆ ಸಮಯದಲ್ಲಿ ಹರುಷ-ಶೋಕದ ಪರಿಣಾಮ ಮಾಡುತ್ತಾನೆ ಅವುಗಳ ಕರ್ತೃವು ಜೀವನಿದ್ದಾನೆ. ಸುಖ-ದುಃಖಕ್ಕೆ ಕಾರಣರೂಪವಿರುವ ಬಾಹ್ಯ ಸಾಮಗ್ರಿಗಳು ಇಂದ್ರಿಯ ವಿಷಯಗಳಿವೆ. ಆದುದರಿಂದ ಅವು ಮೂರ್ತವಿವೆ. ಅವಕ್ಕೆ ಕಾರಣಭೂತವಿರುವ ಜಡಕರ್ಮವು ಕೂಡ ಮೂರ್ತವಿದೆ. ಆತ್ಮನು ಅಮೂರ್ತಿಕನಿದ್ದಾನೆ ಮತ್ತು ಕರ್ಮವು ಜಡವಿದೆಯೆಂದು ಹೇಳಿ ಎರಡರಲ್ಲಿ ಭೇದಜ್ಞಾನ ಮಾಡಿಸುವುದರ ಪ್ರಯೋಜನವಿದೆ. ಮೂರ್ತಿಕ ಇಂದ್ರಿಯಗಳಿಂದ ಆತ್ಮನು ವಿಷಯಗಳನ್ನು ಭೋಗಿಸುತ್ತಾನೆಂದು ಹೇಳುವುದು ಕೂಡ ಉಪಚಾರದ ಕಥನವಿದೆ. ನಿಜವಾಗಿ ''ಆತ್ಮನು ಪರವನ್ನು ಭೋಗಿಸುತ್ತಾನೆ''ಂದು ಇಲ್ಲಿ ತಿಳಿಸಿಕೊಡುವುದಿಲ್ಲ, ಆದರೆ ಇಲ್ಲಿಯಂತೂ ಕೇವಲ ಕರ್ಮವನ್ನು ಮೂರ್ತರೂಪದಿಂದ ಸಿದ್ಧ ಮಾಡುವುದಿದೆ.

ಜಡಕರ್ಮವು ಮೂರ್ತವಿದೆ, ಅಜೀವವಿದೆ, ಅದೇನು ಆತ್ಮನ ಸ್ವರೂಪವಿಲ್ಲ. ಐದೂ ಇಂದ್ರಿಯಗಳ ವಿಷಯಗಳು ಮೂರ್ತವಿವೆ. ಅಮೂರ್ತಿಕ ಚೈತನ್ಯಸ್ವರೂಪನಿರುವ ಆತ್ಮನು ಇಂದ್ರಿಯಗಳ ವಿಷಯನಾಗುವುದಿಲ್ಲ.

ಜೀವನು ಸುಖ-ದುಃಖದ ಪರಿಣಾಮ ಮಾಡುತ್ತಾನೆ ಮತ್ತು ಆ ಸುಖ-ದುಃಖದ ನಿಮಿತ್ತರೂಪವಿರುವ ಬಾಹ್ಯ ಸಾಮಗ್ರಿಯು ಕರ್ಮದ ಫಲವಿದೆ. ಆತ್ಮನು ಇಂದ್ರಿಯಗಳಿಂದ ಮೂರ್ತಕರ್ಮದ ಫಲವನ್ನು ಭೋಗಿಸುತ್ತಾನೆಂದು ಹೇಳುವಲ್ಲಿ ಕರ್ಮವನ್ನು ಮೂರ್ತಿಕವೆಂದು ಸಿದ್ಧಮಾಡುವುದರ ಆಶಯವಿದೆ, ಆದರೆ ಅದರಿಂದ ಆತ್ಮನು ಮೂರ್ತಿಕನಿದ್ದಾನೆಂದು ತಿಳಿದುಕೊಳ್ಳಬಾರದು. ಜಡದ ಸಂಯೋಗ ಮಾಡಿಸುವುದು ಪುಣ್ಯದ ಸ್ವರೂಪವಿದೆ ; ಆದರೆ ಪುಣ್ಯದ ಫಲದಲ್ಲಿ ಸಮ್ಯಕ್ತ್ವವು ದೊರಕುವುದಿಲ್ಲ. ಇತ್ತೀಚಿನ ದಿವಸಗಳಲ್ಲಿಯಂತೂ ''ಸಮ್ಯಗ್ದರ್ಶನವಿಲ್ಲದೆ ವ್ರತ ಮೊದಲಾದವುಗಳನ್ನು ಮಾಡಿ ಬಹಳಷ್ಟು ಪುಣ್ಯ ಕಟ್ಟಿಕೊಳ್ಳುವುದು ಮತ್ತು ಮುಂದೆ ಅದರ ಫಲದಲ್ಲಿ ಭಗವಂತರ ಹತ್ತಿರ ಹೋಗಿ ಅಲ್ಲಿ ಸಮ್ಯಗ್ದರ್ಶನವನ್ನು ಪಡೆದೇ ಪಡೆಯಬಹುದೆ''ಂದು ಯಾರ ಬುದ್ಧಿಯಿದೆ ಅವರಿಗೆ ಚೈತನ್ಯದ ಅಭಿರುಚಿಯಿಲ್ಲ; ಆದರೆ ಕೇವಲ ಜಡದ ಅಭಿರುಚಿಯಿದೆ. ಮಹನೀಯರೇ ! ಪುಣ್ಯದ ಫಲದಲ್ಲಿ ಚೈತನ್ಯವು ದೊರಕುವುದಿಲ್ಲ, ಆದರೆ ಜಡದ ಸಂಯೋಗವು ದೊರಕುತ್ತದೆ. ಅದರ ಅಭಿರುಚಿ ಮಾಡಿದೆಯೆಂದರೆ ತತ್ತ್ವದ ಅನಾದರ ಮಾಡಿ ನಿಗೋದದಲ್ಲಿ ಹೋಗಬಹುದಾಗಿದೆ. ಅಯ್ಯಾ ಸೋದರನೇ ! ಜಡಕರ್ಮದ ಫಲವು ಜಡದಲ್ಲಿ ಬರುತ್ತದೆ ಮತ್ತು ನಿನ್ನ ಸ್ವಭಾವವಂತೂ ಚೈತನ್ಯ ಅಮೂರ್ತಿಕವಿದೆ. ಯಾವನಿಗೆ ಇಂಥ ತನ್ನ ಸ್ವಭಾವವು ರುಚಿಸುವುದಿಲ್ಲ ಅವನು ಪುಣ್ಯ-ಪಾಪ ಮಾಡಿ ವಿಭಾವದ ಪ್ರೀತಿ ಮಾಡುತ್ತಾನೆ. ಆ ವಿಭಾವದ ಲಕ್ಷ್ಯವು ನಿಯಮದಿಂದ ಜಡದಮೇಲೆಯೇ ಹೋಗುತ್ತದೆ. ನೋಡಿರಿ ! ಮೂರ್ತದ ಪ್ರೀತಿಯುಳ್ಳವನು ಅಮೂರ್ತಸ್ವಭಾವವನ್ನು ಮರೆತು ಬಿಟ್ಟಿದ್ದಾನಲ್ಲವೇನು ? ಅದಕ್ಕಾಗಿಯೇ ಅಮೂರ್ತ ಚೈತನ್ಯದ ಪ್ರೀತಿ ಮಾಡುವವನಿಗೆ ವಿಭಾವದ ಮತ್ತು ಜಡದ ಪ್ರೀತಿಯು ಬಿಟ್ಟುಹೋದಲ್ಲದೆ ಇರುವ ಸಾಧ್ಯತೆಯೇ ಇಲ್ಲ. ಕರ್ಮವು ಸ್ವಯಂ ಅಜೀವವಿದೆ ಮತ್ತು ಅದರ ಫಲವು ಕೂಡ ಅಜೀವವಿದೆ. ಪುಣ್ಯ-ಪಾಪದ ಭಾವಗಳು ಪರದ ಮೇಲೆ ಲಕ್ಷ್ಯ ಹೋಗುವುದರಿಂದ ಆಗುತ್ತವೆ ಮತ್ತು ಚೈತನ್ಯದ ಲಕ್ಷ್ಯದಿಂದ ಪುಣ್ಯ-ಪಾಪದ ಉತ್ಪತ್ತಿಯೇ ಆಗುವುದಿಲ್ಲ. ಆದುದರಿಂದ ಯಾವಪ್ರಕಾರ ಪರದ ಪ್ರೀತಿಯುಳ್ಳವನು ಚೈತನ್ಯವನ್ನು ಮರೆತು ವಿಭಾವ ಮಾಡುತ್ತಾನೆ ; ಅದೇ ಪ್ರಕಾರ ಚೈತನ್ಯದ ಪ್ರೀತಿಯುಳ್ಳವನಿಗೆ ಪರದ ಪ್ರೀತಿಯು ತಾನಾಗಿಯೇ ಬಿಟ್ಟುಹೋಗುತ್ತದೆ. ಯಾವನಿಗೆ ಚೈತನ್ಯದ ಪ್ರೀತಿಯಿದೆ ಅವನಿಗೆ ಜಡದ ಪ್ರೀತಿಯು ಇರುವುದಿಲ್ಲ ಮತ್ತು ಯಾವನಿಗೆ ಜಡಕರ್ಮದ ಫಲರೂಪವಾಗಿ ದೊರಕುವ ಜಡಪದಾರ್ಥಗಳ ಪ್ರೀತಿಯಿದೆ ಅವನಿಗೆ ಅಮೂರ್ತಿಕ ಚೈತನ್ಯದ ಅಭಿರುಚಿಯಿಲ್ಲ. ಶಾಶ್ವತ ಶಾಂತಿಯ ಮೂಲವೆಂದರೆ ಒಂದು ಚೈತನ್ಯ ಪದಾರ್ಥವಿದೆ. ಅದಂತೂ ಸ್ವಾಭಾವಿಕವಾದ ವಸ್ತುವಿದೆ. ಈ ಪತ್ನೀ-ಪುತ್ರ ಮೊದಲಾದ ಪದಾರ್ಥಗಳಂತೂ ಜಡಕರ್ಮದ ಫಲದಲ್ಲಿ ಸಂಯೋಗರೂಪದಿಂದ ಬಂದಂಥವುಗಳಾಗಿವೆ. ಅವೇನು ನಿನ್ನ ಸ್ವರೂಪವಿಲ್ಲ ಅಯ್ಯಾ ಸಹೋದರನೇ ! ನೀನಂತೂ ಅಸಂಯೋಗಿ ಚಿದಾನಂದ ಮೂರ್ತಿಯಾಗಿರುವೆ ! ಜಡ ಸಂಯೋಗಗಳೇನು ನಿನ್ನವುಗಳಿಲ್ಲ ಮತ್ತು ಅವುಗಳ ಕಾರಣರೂಪವಾಗಿರುವ ಪುಣ್ಯ-ಪಾಪ ಕರ್ಮಗಳು ಕೂಡ ನಿನ್ನವುಗಳಿಲ್ಲ. ಅದರಂತೆಯೇ ಯಾವ ಶುಭ-ಅಶುಭ ಪರಿಣಾಮದಿಂದ ಆ ಕರ್ಮವು ಕಟ್ಟಲ್ಪಟ್ಟಿದೆ ಅದು ಕೂಡ ನಿಜವಾಗಿ ನಿನ್ನ ಸ್ವರೂಪವಿಲ್ಲ. ಜನ್ಮ ಪಡೆದು ಯಾವಾಗ ಹೊರಗೆ ಬಂದೆಯೋ ಆಗ ಇಂಥ ಲಕ್ಷ್ಮಿ ಮೊದಲಾದವುಗಳ ಸಂಯೋಗವಿರಲಿಲ್ಲ ಮತ್ತು ಯಾವಾಗ ಲಕ್ಷ್ಮಿಯ ಸಂಯೋಗವು ಬಂದುಬಿಟ್ಟಿತೋ ಆಗ ನಿರ್ಧನತೆಯಿಂದ ಸಧನತೆಯು ಬಂದು ಬಿಟ್ಟಿತು. ಹಾಗಾದರೆ ಅದರ ಕಾರಣ ಯಾವುದು ? ಜೀವವು ಅದರ ಕಾರಣವಿಲ್ಲ. ಜೀವವಂತೂ ಮೊದಲು ಕೂಡ ಇತ್ತು. ಒಂದುವೇಳೆ ಜೀವವು ಅದರ ಕಾರಣವಿದ್ದರೆ ಮೊದಲು ಜನ್ಮವಾದಾಗ ಆ ಸಂಯೋಗವು ಅದೇಕೆ ಇರಲಿಲ್ಲ ! ಅದಕ್ಕಾಗಿಯೇ ಅದರ ಕಾರಣವು ಪೂರ್ವದಲ್ಲಿ ಕಟ್ಟಲ್ಪಟ್ಟಿರುವ ರಜಕಣಗಳಿವೆ ಮತ್ತು ಆ ಬಾಹ್ಯ ಸಾಮಗ್ರಿಗಳು ಮೂರ್ತವಿರುವುದರಿಂದ ಅವುಗಳ ಕಾರಣಭೂತವಾದ ಕರ್ಮವು ಕೂಡ ಮೂರ್ತವಿದೆ.

ಯಾವುದರ ಫಲವು ಮೂರ್ತವಿದೆ, ಅದರ ಕಾರಣವು ಕೂಡ ಮೂರ್ತವಿರಬೇಕಾಗುವುದು. ಹೇಗೆಂದರೆ ಬಾಹ್ಯ ಸಾಮಗ್ರಿಗಳು ಮೂರ್ತವಿವೆ ಮತ್ತು ಅವುಗಳ ಕಾರಣರೂಪವಿರುವ ಜಡಕರ್ಮಗಳು ಕೂಡ ಮೂರ್ತವಿವೆ. ಆತ್ಮನ ಸ್ವಭಾವವು ಮೂರ್ತ ಸಾಮಗ್ರಿ ಮತ್ತು ಮೂರ್ತ ಕರ್ಮ ಇವೆರಡರಿಂದ ಅತ್ಯಂತ ಭಿನ್ನ ಅಮೂರ್ತಿಕ ಜ್ಞಾನಸ್ವರೂಪವಿದೆಯೆಂದು ಗುರುತಿಸಿ ತಿಳಿದುಕೊಂಡು ಪರದ ಅಭಿಮಾನವನ್ನು ಬಿಟ್ಟುಕೊಡಬೇಕು.

ಯಾವ ಪ್ರಕಾರ ಇಲಿಯ ವಿಷವು ಮೂರ್ತಿಕವಿದೆ ಮತ್ತು ಮೂರ್ತಿಕ ಶರೀರದ ಮೂಲಕ ಅನುಭವದಲ್ಲಿ ಬರುತ್ತದೆ. ಅದೇನು ಅಮೂರ್ತಿಕವಿರುವ ಆತ್ಮನನ್ನು ಸ್ಪರ್ಶಿಸುವುದಿಲ್ಲ. ಅದೇ ಪ್ರಕಾರ ಕರ್ಮದ ಫಲವು ಮೂರ್ತವಿದೆ ಅದನ್ನು ಮೂರ್ತ ಇಂದ್ರಿಯಗಳ ಮೂಲಕವಾಗಿಯೇ ಭೋಗಿಸಲಾಗುತ್ತದೆ. ಆದುದರಿಂದ ಕರ್ಮವು ಕೂಡ ಮೂರ್ತವಿದೆ. ಪುಣ್ಯ-ಪಾಪದ ಪರಿಣಾಮ, ಅದರಿಂದ ಕಟ್ಟಲ್ಪಟ್ಟಿರುವ ಕರ್ಮ ಮತ್ತು ಅದರ ಫಲದಲ್ಲಿ ದೊರಕಿರುವ ಸಾಮಗ್ರಿ ಇವೆಲ್ಲವೂ ಹೇಯವಿವೆ. ಅವುಗಳಲ್ಲಿ ಆತ್ಮನ ಶಾಂತಿಯಿಲ್ಲ. ಆ ಮೂರರಿಂದ ರಹಿತವಿರುವ ಅಮೂರ್ತಿಕ ಶುದ್ಧ ಚಿದಾನಂದಮಯನಾದ ಆತ್ಮನೇ ಉಪಾದೇಯನಿದ್ದಾನೆ. ಅವನ ಶ್ರದ್ಧೆ-ಜ್ಞಾನ ಮಾಡಿಕೊಂಡು ಅವನಲ್ಲಿ ಏಕಾಗ್ರತೆ ಮಾಡುವುದೇ ಶಾಂತಿಯ ಉಪಾಯವಿದೆ.

ಜೀವನು ಅಮೂರ್ತನಿದ್ದಾನೆ ಮತ್ತು ಪುದ್ಗಲಕರ್ಮವು ಮೂರ್ತವಿದೆ. ಅವೆರಡರಲ್ಲಿ ಬಂಧವು ಯಾವ ರೀತಿಯಿಂದ ಆಗುತ್ತದೆಯೆಂಬುದನ್ನು ಈಗ ಹೇಳುತ್ತಾರೆ -

**ಮುತ್ತೋ ಫಾಸದಿ ಮುತ್ತಂ ಮುತ್ತೋ ಮುತ್ತೇಣ ಬಂಧಮಣುಹವದಿ ।**
**ಜೀವೋ ಮುತ್ತಿವಿರಹಿದೋ ಗಾಹದಿ ತೇ ತೇಹಿಂ ಉಗ್ಗಹದಿ ॥೧೩೪॥**

**ಮೂರ್ತಮೂರ್ತವ ಸ್ಪರ್ಶಿಪುದು ಮೂರ್ತಮೂರ್ತದೊಡನೆ ಬಂಧಕರ್ಹವಪ್ಪುದು ।**
**ಮೂರ್ತವಲ್ಲದ ಜೀವ ಮೂರ್ತಕರ್ಮಗಳಿಗನ್ಯೋನ್ಯ ಅವಗಾಹ ನೀಡುವವು ॥೧೩೪॥**

ಆತ್ಮನಂತೂ ಜ್ಞಾನಘನ ಅರೂಪಿ ವಸ್ತುವಿದ್ದಾನೆ, ಅವನ ಪರ್ಯಾಯದಲ್ಲಿ ಯಾವ ದಯೆ ಮೊದಲಾದವುಗಳ ಶುಭಭಾವಗಳಾಗುತ್ತವೆ ಅಥವಾ ಹಿಂಸೆ ಮೊದಲಾದವುಗಳ ಭಾವಗಳಾಗುತ್ತವೆ, ಅವು ಕೂಡ ಅರೂಪಿಯಿವೆ. ಆ ಶುಭಾಶುಭ ಪರಿಣಾಮಗಳು ನಿಜವಾಗಿ ವಸ್ತುವಿನ ಸ್ವರೂಪವಿಲ್ಲ, ಆದರೆ ಕ್ಷಣಿಕ ಅವಸ್ಥೆಗಳಲ್ಲಿ ಅವು ನವೀನ-ನವೀನವಾಗಿ ಆಗುತ್ತವೆ. ಅದರಲ್ಲಿ ಮೊದಲಿನ-ಹಳೆ ಕರ್ಮವು ನಿಮಿತ್ತವಿದೆ ಮತ್ತು ಪರಿಣಾಮದ ನಿಮಿತ್ತ ಪಡೆದು ನವೀನ ಕರ್ಮಗಳು ಹಳೆಯ ಕರ್ಮಗಳ ಜತೆಯಲ್ಲಿ ಕಟ್ಟಿಕೊಳ್ಳುತ್ತವೆ. ಮೂರ್ತಕರ್ಮಗಳ ಜತೆಯಲ್ಲಿ ಮೂರ್ತಕರ್ಮಗಳು ಕಟ್ಟಿಕೊಳ್ಳುತ್ತವೆ. ಸಹೋದರನೇ ! ಒಂದುವೇಳೆ ನಿನಗೆ ನಿನ್ನ ಕಲ್ಯಾಣ ಮಾಡಿಕೊಳ್ಳುವುದಿದ್ದರೆ ನನಗೆ ಕರ್ಮಗಳ ಸಂಬಂಧವಿಲ್ಲ ಮತ್ತು ಯಾವವುಗಳಿಂದ ಕರ್ಮವು ಕಟ್ಟಲ್ಪಡುತ್ತದೆ ಅಂಥ ಬಾಹ್ಯ ಭಾವಗಳು ಕೂಡ ನನ್ನ ಸ್ವರೂಪದಲ್ಲಿ ಇಲ್ಲವೆಂದು ಒಂದುಬಾರಿ ನಿರ್ವಿಕಲ್ಪ ವಸ್ತುವನ್ನು ಲಕ್ಷ್ಯದಲ್ಲಿ ತಂದುಕೋ ! ಅಯ್ಯಾ ! ನಿನಗೆ ನಿನ್ನ ನಿರ್ವಿಕಲ್ಪ ಅನುಭವದ ಅವಸರವನ್ನು ಪ್ರಾಪ್ತಿ ಮಾಡಿಕೊಳ್ಳುವುದಿದ್ದರೆ ಮೊದಲು ನಾನಂತೂ ಚೈತನ್ಯಮೂರ್ತಿಯಿದ್ದೇನೆಂಬುದನ್ನು ನಿರ್ಣಯ ಮಾಡಿಕೊಂಡು ಶ್ರದ್ಧೆ ಮಾಡಬೇಕಾಗುವುದು. ವಿಕಾರದ ಅಭಿರುಚಿಯನ್ನು ಮತ್ತು ಮುಖ್ಯತೆಯನ್ನು ಬಿಟ್ಟುಕೊಟ್ಟು ಚಿದಾನಂದ ಸ್ವರೂಪದ ಅಭಿರುಚಿ ಮತ್ತು ಮುಖ್ಯತೆ ಮಾಡಿಕೋ ! ಏಕೆಂದರೆ ಚಿದಾನಂದ ವಸ್ತುವಿನಲ್ಲಿ ಯಾವುದೇ ನಿಮಿತ್ತ ಅಥವಾ ಯಾವುದೇ ವಿಕಾರವಿಲ್ಲ. ಆ ವಿಕಾರಗಳ ಮೂಲಕ ಚಿದಾನಂದ ವಸ್ತುವಿನ ನಿರ್ವಿಕಲ್ಪ ಅನುಭವವಾಗುವುದಿಲ್ಲ. ಶುಭಾಶುಭ ವಿಕಾರಗಳು, ಅವುಗಳಿಂದ ಉತ್ಪನ್ನವಾದ ಕರ್ಮ ಮತ್ತು ಆ ಕರ್ಮದ ಫಲದಲ್ಲಿ

ದೊರಕಿದ ಬಾಹ್ಯದ ಸಂಯೋಗಗಳು-ಈ ಮೂರರ ಅಭಿರುಚಿಯನ್ನು ಬಿಟ್ಟುಕೊಟ್ಟು, ಅಖಂಡ ಚೈತನ್ಯವಸ್ತುವನ್ನು ಅಭಿರುಚಿಯಲ್ಲಿ ತಂದುಕೊಳ್ಳು ! ಕರ್ಮ ಹಾಗೂ ವಿಕಾರಗಳಂತೂ ನಾನಿಲ್ಲ ಮತ್ತು ನನ್ನಲ್ಲಿ ಯಾವ ಭೇದದವಿಕಲ್ಪಗಳು ಉತ್ಪನ್ನವಾಗುತ್ತವೆ ಆ ಭೇದದ ವಿಕಲ್ಪಗಳಷ್ಟು ಕೂಡ ನನ್ನ ಸ್ವರೂಪವಿಲ್ಲ. ನಾನು ಧ್ರುವದ್ರವ್ಯಸ್ವಭಾವನಿದ್ದೇನೆಂದು ಮೊದಲಿನಿಂದಲೇ ಅಖಂಡ ದ್ರವ್ಯದ ಅವಲಂಬನ ತೆಗೆದುಕೋ, ಎಂದರೆ ಅವನ ನಿರ್ವಿಕಲ್ಪ ಅನುಭವದ ಅವಸರವು ನಿನಗೆ ಬಂದುಬಿಡುವುದು.

ಪರದ ಜತೆಯಲ್ಲಿಯಂತೂ ನಿನ್ನ ತತ್ತ್ವದ ಸಂಬಂಧವಿಲ್ಲ ಮತ್ತು ಕ್ಷಣಿಕ ವಿಕಾರದಷ್ಟು ಕೂಡ ನಿನ್ನ ತತ್ತ್ವವಿಲ್ಲ. ಆದುದರಿಂದ ಕರ್ಮದ ಜತೆಯಲ್ಲಿ ಸಂಬಂಧವಿದೆಯೆಂಬ ಬುದ್ಧಿಯನ್ನು ಬಿಟ್ಟುಕೊಡು. ದೊರೆಯ ಹತ್ತಿರಕ್ಕೆ ಹೋಗುವುದಿದ್ದರೆ ಅಲ್ಲಿ ಏಕಾಕಿಯಾಗಿಯೇ ಹೋಗಬೇಕಾಗುವುದು. ಬಾಹ್ಯದಲ್ಲಿರುವ ಮಿತ್ರ-ಸಂಗಡಿಗರು ಮೊದಲಾಗಿ ಅಲ್ಲಿ ಬೇರೆ ಯಾರೂ ಜತೆಯಲ್ಲಿ ಬರುವುದಿಲ್ಲ. ನೀನೊಬ್ಬನೇ ಏಕಾಕಿಯಾಗಿಯೇ ದೊರೆಗಳ ಎದುರಿನಲ್ಲಿ ನಿಂತುಕೊಳ್ಳುವ ಸಾಮರ್ಥ್ಯವಿದ್ದರೆ ದೊರೆಯ ಹತ್ತಿರ ಹೋಗಬಹುದಾಗಿದೆ. ಅದೇ ಪ್ರಕಾರ ಚೈತನ್ಯದೊರೆಯ ಹತ್ತಿರಕ್ಕೆ ಹೋಗುವುದಿದ್ದರೆ-ಅವನ ನಿರ್ವಿಕಲ್ಪ ಅನುಭವ ಮಾಡಿಕೊಳ್ಳುವುದಿದ್ದರೆ ಅದು ಕರ್ಮದ ಸಂಬಂಧದ ಮೇಲೆ ನೋಡುವುದರಿಂದ ಅಥವಾ ವಿಕಾರದ ಎದುರು ನೋಡುವುದರಿಂದ ಆ ಅನುಭವವಾಗುವುದಿಲ್ಲ. ಆದರೆ ಕರ್ಮದ ಸಂಬಂಧವನ್ನು ಮತ್ತು ಭೇದದ ವಿಕಲ್ಪವನ್ನು ಬಿಟ್ಟುಕೊಟ್ಟು ಏಕಾಕಿಯಾಗಿಯೇ ಆಂತರ್ಯದಲ್ಲಿ ಹೊರಟುಹೋದರೆ ಅಲ್ಲಿ ಚೈತನ್ಯ ಚಕ್ರವರ್ತಿಯ ಸಮಾಗಮವಾಗುವುದು. ನೀನು ಎಲ್ಲಿ ಹೋಗುವೆ ಅಲ್ಲಿ ಅಂತರ್ಯದ ಚಿದ್‌ಘನಸ್ವಭಾವದ ಹೊರತಾಗಿ ಬೇರೆ ಯಾವುದರ ಅವಲಂಬನವು ಸಮ್ಯಗ್ದರ್ಶನದಲ್ಲಿ ಉಳಿಯುವುದಿಲ್ಲ. ಮೊದಲಿನಿಂದಲೇ ಈ ಪ್ರಕಾರದ ಪ್ರತೀತಿ ಮಾಡಿಕೋ. ಒಂದು ಆಂತರ್ಯದ ವಸ್ತುವನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುವಿನ ಅವಲಂಬನವು ತತ್ತ್ವದ ದೃಷ್ಟಿಯಲ್ಲಿಲ್ಲ. ಏಕೆಂದರೆ ಆತ್ಮವಸ್ತುವಿನಲ್ಲಿ ಯಾವ ಶರೀರ-ಮನಸ್ಸು-ವಾಣಿ ಅಥವಾ ಕರ್ಮ ಮೊದಲಾದವು ಇಲ್ಲ. ಅನಂತ ಕಾಲದಿಂದ ಆಂತರ್ಯದ ತತ್ತ್ವದ ಆಶ್ರಯವನ್ನು ತೆಗೆದುಕೊಂಡೇ ಇಲ್ಲ. ಆದರೆ ಈಗ ಸಮ್ಯಗ್ದರ್ಶನ ಮಾಡಿಕೊಳ್ಳುವುದಿದ್ದರೆ-ಆತ್ಮನ ಅನುಭವ ಮಾಡಿಕೊಳ್ಳುವುದಿದ್ದರೆ-ಆತ್ಮನ ಕಲ್ಯಾಣ ಮಾಡಿಕೊಳ್ಳುವುದಿದ್ದರೆ ಆಂತರ್ಯದಲ್ಲಿ ಒಂದು ಸ್ವತತ್ತ್ವದ ಆಶ್ರಯವನ್ನು ತೆಗೆದುಕೊಂಡಲ್ಲದೆ ಬೇರೆ ಯಾವ ಉಪಾಯವೇ ಇಲ್ಲ. ನಾನಂತೂ ಜ್ಞಾಯಕ ಶುದ್ಧ ಚೈತನ್ಯ ಅಭೇದ ನಿರ್ವಿಕಲ್ಪವಸ್ತುವಿದ್ದೇನೆಂದು ನಿಶ್ಚಿತ ನಿರ್ಣಯ ಮಾಡಿದಲ್ಲದೆ ಸಮ್ಯಗ್ದರ್ಶನವಾಗುವುದಿಲ್ಲ ಮತ್ತು ಈ ಸಮ್ಯಗ್ದರ್ಶನವಿಲ್ಲದೆ ವ್ರತ-ತಪಸ್ಸು ಮೊದಲಾದುವುಗಳೆಲ್ಲವೂ ಅಂಕವಿಲ್ಲದ ಅಸಂಖ್ಯ ಸೊನ್ನೆಗಳ ಸಮಾನವಿವೆ.

ಜೀವನಂತೂ ಅರೂಪಿ ಜ್ಞಾನಸ್ವರೂಪನಿದ್ದಾನೆ. ಅವನ ಅವಸ್ಥೆಯಲ್ಲಿ ವಿಕಾರವು ಉತ್ಪನ್ನವಾಗುತ್ತಿರುವಂತೆಯೇ ನವೀನ ಮೂರ್ತ ಕರ್ಮವು ಬಂದು ಹಳೆಯ ಮೂರ್ತ ಕರ್ಮದ ಜತೆಯಲ್ಲಿ ಕಟ್ಟಿಕೊಳ್ಳುತ್ತದೆ. ಜೀವನು ವಿಕಾರ ಮಾಡುತ್ತಾನೆ, ಆದರೆ ಆ ವಿಕಾರವು ಕೂಡ ಅಮೂರ್ತವಿದೆ. ಅಮೂರ್ತಿಕವಿರುವ ಜೀವನು ನಿಜವಾಗಿ ಜಡಕರ್ಮದ ಜತೆಯಲ್ಲಿ ಬಂಧಿಸಲ್ಪಟ್ಟಿಲ್ಲ. ಚೈತನ್ಯದಲ್ಲಿ ಸ್ಪರ್ಶವಿರುವುದಿಲ್ಲ. ಜೀವನಂತೂ ಅಸ್ಪರ್ಶಿಯಾದ ವಸ್ತುವಿದ್ದಾನೆ. ಅವನಲ್ಲಿ ಕರ್ಮವು ಯಾವ ರೀತಿಯಿಂದ ಮೆತ್ತಿಕೊಳ್ಳುವುದು. ಜೀವನು ಹೆಚ್ಚೆಂದರೆ ತನ್ನಲ್ಲಿ ಅಮೂರ್ತಿಕ ವಿಕಾರ ಮಾಡುತ್ತಾನೆ ಮತ್ತು ಅದರ ನಿಮಿತ್ತ ಮಾಡಿಕೊಂಡು ಮೂರ್ತ ಕರ್ಮದ ಜತೆಯಲ್ಲಿ ಮೂರ್ತಕರ್ಮವು ಬಂದು ಕಟ್ಟಿಕೊಳ್ಳುತ್ತದೆ. ಆ ಮೂರ್ತ ಕರ್ಮದ ಸಂಯೋಗದಿಂದ ಜೀವನೇನು ಮೂರ್ತನಾಗಿ ಹೋಗುವುದಿಲ್ಲ. ಜೀವದ ಪರ್ಯಾಯದಲ್ಲಿ ವಿಕಾರವಾಗುವುದಿಲ್ಲವೆಂದೇ ಇಲ್ಲಿ ತಿಳಿದುಕೊಳ್ಳಬಾರದು. ವಿಕಾರವಂತೂ ಜೀವದ ಪರ್ಯಾಯದಲ್ಲಿ ಆಗುತ್ತದೆ ; ಆದರೆ ಆ ವಿಕಾರವು ಕೂಡ ಅಮೂರ್ತಿಕವಿದೆ. ಚಿದಾನಂದ ಸ್ವರೂಪವನ್ನು ಮರೆತುಬಿಟ್ಟರೆ -ಅದರಿಂದ ತಪ್ಪಿಹೋದರೆ ವಿಕಾರೀ ಪರ್ಯಾಯವಾಗುತ್ತದೆ ಮತ್ತು ಚೈತನ್ಯ ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡು ಆ ಚೈತನ್ಯದಲ್ಲಿ ಏಕಾಗ್ರತೆ

ಮಾಡಿದರೆ ವಿಕಾರವು ಹೊರಟುಹೋಗಿ ನಿರ್ವಿಕಾರದ ಪರ್ಯಾಯವು ಪ್ರಕಟವಾಗುತ್ತದೆ. ಅಜೀವದಲ್ಲೇನು ದುಃಖವಾಗಲಿ ಅಥವಾ ವಿಕಾರವಾಗಲಿ ಇರುವುದಿಲ್ಲ. ವಿಕಾರವಾಗಲಿ ಅಥವಾ ದುಃಖವಾಗಲಿ ಜೀವದ ಪರ್ಯಾಯದಲ್ಲಿ ಇದೆ ; ಆದರೆ ಅದು ಜೀವದ ಪೂರ್ಣ ಸ್ವರೂಪವಿಲ್ಲ. ಈ ಪ್ರಕಾರ ಪ್ರತೀತಿ ಮಾಡಿಕೊಂಡು ತ್ರಿಕಾಲೀ ಸ್ವರೂಪದ ಶ್ರದ್ಧೆ-ಜ್ಞಾನ ಮತ್ತು ಅದರಲ್ಲಿಯೇ ಏಕಾಗ್ರತೆ ಮಾಡಿದರೆ ದುಃಖ ಮತ್ತು ವಿಕಾರವು ಹೊರಟುಹೋಗಿ ಸರ್ವಜ್ಞ ಪರಮಾತ್ಮ ದಶೆಯು ತಾನಾಗಿಯೇ ಪ್ರಕಟವಾಗುತ್ತದೆ ಎಂದರೆ ದ್ರವ್ಯದಲ್ಲಿ ಇದ್ದುದು ಪರ್ಯಾಯದಲ್ಲಿ ವ್ಯಕ್ತವಾಗುತ್ತದೆ.

'ಶರೀರಕ್ಕೆ ದುಃಖವಾಗುತ್ತದೆ'ಯೆಂದೇ ಅಜ್ಞಾನಿಗಳು ಮನ್ನಿಸುತ್ತಾರೆ, ಆದರೆ ಆ ಮಾತು ನಿಜವಾಗಿ ಅಸತ್ಯವಿದೆ. ದುಃಖವಂತೂ ಜೀವದ ಸುಖದ ವಿಪರೀತ ಅವಸ್ಥೆಯಿದೆ. ಅಜೀವದಲ್ಲಿ ಸುಖಗುಣವು ಇರುವುದಿಲ್ಲ ಮತ್ತು ಅದರಲ್ಲಿ ದುಃಖವು ಕೂಡ ಇರುವುದಿಲ್ಲ. ಯಾರಲ್ಲಿ ಕ್ಷಮಾಗುಣವಿರುವುದು ಅವರಲ್ಲಿ ಕ್ಷಮೆಯ ವಿಪರೀತತೆಯ ರೂಪದ ಕ್ರೋಧವು ಇರುತ್ತದೆ. ಜೀವದಲ್ಲಿ ಕ್ರೋಧವು ಬರುತ್ತದೆ, ಆದರೆ ಅದರ ಹಿಂದೆಯೇ ಕ್ಷಮಾ ಗುಣವು ತ್ರಿಕಾಲ ಬಿದ್ದುಕೊಂಡಿದೆ. ಕಟ್ಟಿಗೆಯಲ್ಲಿ ಕ್ರೋಧವು ಉತ್ಪನ್ನವಾಗುವುದಿಲ್ಲ. ಏಕೆಂದರೆ ಅದರಲ್ಲಿ ಕ್ಷಮಾಗುಣವು ಇರುವುದಿಲ್ಲ. ಅದೇ ಪ್ರಕಾರ ದುಃಖವು ಶರೀರದಲ್ಲಿ ಆಗುವುದಿಲ್ಲ. ಆದರೆ ಅದು ಜೀವದ ಅವಸ್ಥೆಯಲ್ಲಿ ಆಗುತ್ತದೆ. ಅದು ಜೀವದ ಸುಖಗುಣದ ವಿರುದ್ಧವಾದ ಅವಸ್ಥೆಯಿದೆ. ಪರ್ಯಾಯದಲ್ಲಿ ವಿಕಾರವಿದೆ ಮತ್ತು ಧ್ರುವ ಸ್ವಭಾವದಲ್ಲಿ ವಿಕಾರವಿಲ್ಲ ಅದು ನಿರ್ವಿಕಾರವಿದೆ. ಈ ಪ್ರಕಾರ ತಿಳಿದುಕೊಂಡು ಜೀವದ ಆಂತರ್ಯಸ್ವಭಾವದ ದೃಷ್ಟಿ ಮಾಡಿದರೆ ನಿಜವಾಗಿ ಕಲ್ಯಾಣವಾಗಿ ಹೋಗುತ್ತದೆ.

ಆತ್ಮನು ಸರ್ವಥಾ ನಿರ್ಮಲನೇ ಇದ್ದಾನೆಂದು ಮನ್ನಿಸಿದರೆ ಅದು ಮಿಥ್ಯೆಯಿದೆ ಮತ್ತು ಆತ್ಮನ ಪರ್ಯಾಯದಲ್ಲಿ ವಿಕಾರವಾಗುತ್ತದೆ, ಆ ವಿಕಾರವನ್ನು ಕರ್ಮವು ಮಾಡಿಸುತ್ತದೆಯೆಂದು ಮನ್ನಿಸಿದರು ಕೂಡ ಮಿಥ್ಯೆಯಿದೆ. ಜೀವದ ಸ್ವಭಾವದಲ್ಲಿ ವಿಕಾರವಿಲ್ಲ, ಆದರೆ ಪರ್ಯಾಯದಲ್ಲಿ ವಿಕಾರವಿದೆ, ಅದನ್ನು ಕರ್ಮವು ಮಾಡಿಸುವುದಿಲ್ಲ ; ಆದರೆ ತಾನು ತನ್ನ ಅಪರಾಧದಿಂದ ಪರ್ಯಾಯದಲ್ಲಿ ವಿಕಾರ ಮಾಡುತ್ತಾನೆ ಮತ್ತು ಆ ವಿಕಾರದ ನಿಮಿತ್ತದಿಂದ ನವೀನ ಕರ್ಮವು ಬಂದು ಕಟ್ಟಿಕೊಳ್ಳುತ್ತದೆಯೆಂಬುದಾಗಿ ತಿಳಿದುಕೊಂಡು ಧ್ರುವಸ್ವಭಾವದ ಶ್ರದ್ಧೆ ಮಾಡುವುದು ಪ್ರಥಮ ಧರ್ಮವಿದೆ. ಒಂದು ವೇಳೆ ಜೀವದ ಪರ್ಯಾಯದಲ್ಲಿ ಜೀವನು ತನ್ನ ಅಪರಾಧದಿಂದ ವಿಕಾರ ಮಾಡದೆಯಿರುತ್ತಿದ್ದರೆ ಮತ್ತು ಕರ್ಮವು ಬಲವಂತದಿಂದ ಅವನಿಗೆ ವಿಕಾರ ಮಾಡಿಸುತ್ತಿದ್ದರೆ ಆ ಜೀವನಿಗೆ ಉಪದೇಶವನ್ನು ಯಾವುದರ ಸಲುವಾಗಿ ಕೊಡುವದು ? ಆ ಕರ್ಮಕ್ಕೇನೇ ಉಪದೇಶ ಕೊಡಬೇಕಾಗುವುದಿಲ್ಲವೇನು ? ಎಲೈ ಕರ್ಮವೇ ! ನೀನು ನನ್ನಿಂದ ದೂರದಲ್ಲಿ ಹೊರಟುಹೋಗು ! ನೀನು ಜೀವನಿಗೆ ವಿಕಾರವನ್ನುಂಟು ಮಾಡಬೇಡವೆಂದು ಹೇಳಬೇಕಾಗುವುದು, ಆದರೆ ಅಜೀವಕ್ಕಂತೂ ಯಾವುದೇ ಪ್ರಕಾರದ ಉಪದೇಶವಿರುವುದಿಲ್ಲ. ಜೀವನು ತಾನು ತನ್ನ ಅಪರಾಧದಿಂದ ಭ್ರಮಣಮಾಡುತ್ತಿರುವುದರಿಂದ ಅವನಿಗೇ ವಿಕಾರ ದೂರಮಾಡುವ ಉಪದೇಶ ಕೊಡಲಾಗಿದೆ.

'ತನ್ನನ್ನು ತಾನು ಮರೆತು ವ್ಯಾಕುಲನಾಗಿದ್ದಾನೆ.' ಜೀವನು ಅನಾದಿಯಿಂದ ಇದ್ದಾನೆ, ಆದರೆ ಅವನು ತನ್ನ ಸ್ವರೂಪವನ್ನು ಮರೆತುಹೋಗಿ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಿದ್ದಾನೆ. ವಸ್ತುವಂತೂ ಯಾವಾಗಲೂ ಸ್ಥಿರವಾಗಿರುತ್ತದೆ ಮತ್ತು ಅದರ ಅವಸ್ಥೆಯು ಕ್ಷಣ-ಕ್ಷಣಕ್ಕೆ ಬದಲಾಗುತ್ತಿರುತ್ತದೆ. ಅಲ್ಲಿ ವಿಕಾರದ ದಶೆಯಿರುವುದು ಸಂಸಾರವಿದೆ ಮತ್ತು ಪೂರ್ಣ ನಿರ್ಮಲ ದಶೆಯಾಗುವುದು ಮೋಕ್ಷವಿದೆ. ಯಾವ ಪ್ರಕಾರ ಅಗ್ನಿ ಮತ್ತು ನೀರುಗಳು ಕೂಡ ಬೇರೆಯಿವೆ ಹಾಗೂ ಅವುಗಳ ಪರ್ಯಾಯಗಳು ಕೂಡ ಎಂದರೆ ಕ್ರಿಯೆಗಳು ಕೂಡ ಬೇರೆಯಿವೆ. ಅದೇ ಪ್ರಕಾರ ಚೈತನ್ಯ ಮೂರ್ತಿಯಾದ ಆತ್ಮ ಮತ್ತು ಜಡಕರ್ಮ ಇವೆರಡೂ ಬೇರೆಬೇರೆಯಾದ ವಸ್ತುಗಳಿವೆ ಮತ್ತು ಅವುಗಳ ಕ್ರಿಯೆಗಳು ಕೂಡ ಬೇರೆಯಿವೆ. ಎರಡು ವಸ್ತುಗಳದ್ದು ಒಂದು ಇನ್ನೊಂದರಲ್ಲಿ ಅಭಾವವಿರುವುದರಿಂದಲೇ ಅವೆರಡೂ ವಸ್ತುಗಳು

ಪೃಥಕ್-ಪೃಥಕ್ಕಾಗಿ ಇರುವ ಸಾಧ್ಯತೆಯಿದೆ. ಜೀವದ ಅವಸ್ಥೆಯಲ್ಲಿ ವಿಕಾರವಿರುವುದು ಜೀವದ ಕಾರ್ಯವಿದೆ, ಅಜೀವ ಕರ್ಮಗಳು ಆ ವಿಕಾರವನ್ನು ಮಾಡಿಸಿವೆಯೆಂದು ಮನ್ನಿಸಿದರೆ ಮಿಥ್ಯಾತ್ವವಿದೆ. ಅದರಂತೆಯೇ ಬಾಹ್ಯದಲ್ಲಿ ಜಡದ ಕ್ರಿಯಾಕಾಂಡವನ್ನು ಆಂತರ್ಯದ ಶುದ್ಧಿಯ ಕಾರಣವೆಂದು ಮನ್ನಿಸಿದರೆ ಅವನು ಕೂಡ ಮೂಢ ಮಿಥ್ಯಾದೃಷ್ಟಿಯಿದ್ದಾನೆ. ಅವನಿಗೆ ಜೀವ-ಅಜೀವದ ಭಿನ್ನತೆಯ ಪ್ರಜ್ಞೆಯೇ ಇಲ್ಲ. ಜೀವ ಮತ್ತು ಅಜೀವ ಇವೆರಡೂ ತ್ರಿಕಾಲ ಬೇರೆ-ಬೇರೆಯಾದ ವಸ್ತುಗಳಿವೆ. ಆತ್ಮನ ಅಜ್ಞಾನವು ಆತ್ಮನ ಪರಿಚಯದಿಂದಲೇ ಬಿಟ್ಟುಹೋಗುತ್ತದೆ. ಬಾಹ್ಯದ ಉಪಾಯದಿಂದ ಅಜ್ಞಾನವು ಎಂದೂ ಬಿಟ್ಟುಹೋಗುವುದಿಲ್ಲ ಮತ್ತು ಧರ್ಮವಾಗುವುದಿಲ್ಲ. ಯಾವ ಪ್ರಕಾರ ಯಾವನೋ ಓರ್ವನ ಹೆಸರನ್ನು ತಿಳಿದುಕೊಳ್ಳುವುದಿದ್ದರೆ ಒಂದೆರಡು ಉಪವಾಸ ಮಾಡಿಬಿಡುವುದರಿಂದ ಅಥವಾ ಕೆಲವೊಂದು ಧನ ಕೊಟ್ಟುಬಿಡುವುದರಿಂದ ಅವನ ಹೆಸರನ್ನು ತಿಳಿದುಕೊಳ್ಳುವುದಾಗುವುದಿಲ್ಲ, ಆದರೆ ಅವನನ್ನು ಕೇಳಿದ ನಂತರವೇ ಅವನ ಹೆಸರನ್ನು ವಿಚಾರಿಸಿದ ನಂತರವೇ ತಿಳಿದುಬರುವ ಸಾಧ್ಯತೆಯಿದೆ. ಅದೇ ಪ್ರಕಾರ ಆತ್ಮನ ಸ್ವರೂಪವನ್ನು ತಿಳಿದುಕೊಳ್ಳುವುದಿದ್ದರೆ ಸತ್ ಸಮಾಗಮದಲ್ಲಿ ಆತ್ಮನ ಪರಿಚಯ ಮಾಡಿಕೊಳ್ಳುವುದರಿಂದಲೇ ಅವನು ತಿಳಿದುಬರುವ ಸಾಧ್ಯತೆಯಿದೆ. ಧನ ಖರ್ಚುಮಾಡಿ ಬಿಡುವುದರಿಂದ ಅಥವಾ ವ್ರತ ಮೊದಲಾದವುಗಳ ಶುಭಭಾವದಿಂದ ಆತ್ಮನು ತಿಳಿದುಬರುವುದೇ ಇಲ್ಲ.

ನನ್ನ ಸ್ವಭಾವವು ತ್ರಿಕಾಲ ಜ್ಞಾನಮೂರ್ತಿ, ಶುದ್ಧವಿದೆ ಮತ್ತು ವರ್ತಮಾನದ ಪರ್ಯಾಯದಲ್ಲಿ ವಿಕಾರವಿದೆಯೆಂದು ಎರಡೂ ಪಾರ್ಶ್ವಗಳಿಂದ ತಿಳಿದುಕೊಂಡರೆ ಶುದ್ಧವಸ್ತುವಿನ ದೃಷ್ಟಿಯಿಂದ ಪರ್ಯಾಯದಲ್ಲಿನ ದೋಷವು ನಾಶವಾಗಿ ಹೋಗುವುದದಿಲ್ಲ. ಇದನ್ನು ಹೊರತುಪಡಿಸಿ ಬೇರೆ ಯಾವ ರೀತಿಯಿಂದಲೂ ಅನಾದಿಯ ದೋಷವು ನಾಶವಾಗಿ ಹೋಗುವುದು. ಸಮ್ಯಕ್‌ಜ್ಞಾನದ ಸಾಧನವೇನೆಂದರೆ ಆಂತರ್ಯದ ವಸ್ತುವಿನ ಮೇಲೆ ವಿಶ್ವಾಸ ಮಾಡುವುದೇ ನಿಜವಾದ ಸಾಧನವಿದೆ. ಆಂತರ್ಯದಲ್ಲಿನ ವಸ್ತುವಿನ ಮೇಲೆ ವಿಶ್ವಾಸವನ್ನು ಸಾಧಿಸುವುದಿಲ್ಲ ಎಂದರೆ ಅಜ್ಞಾನಿಯು ಸಾಧನವನ್ನು ಬಾಹ್ಯದಲ್ಲಿಯೇ ಶೋಧಿಸುತ್ತಾನೆ. ಆತ್ಮನಲ್ಲಿ ತ್ರಿಕಾಲ ''ಕಾರಣಶಕ್ತಿ''ಯಿದೆ ಎಂದರೆ ಆತ್ಮನು ತಾನೇ ತನ್ನ ಆನಂದ ಮೊದಲಾದವುಗಳ ಸಾಧನನಿದ್ದಾನೆ. ಧ್ರುವ ಆನಂದಕಂದ ವಸ್ತುವು ಯಾವಾಗಲೂ ಆಂತರ್ಯದಲ್ಲಿ ಬಿದ್ದುಕೊಂಡಿದೆ, ನಿಜವಾಗಿ ಅದುವೇ ನಿನ್ನ ಪರಮಾತ್ಮದಶೆಯ ಸಾಧನವಿದೆ, ಇದನ್ನು ಹೊರತುಪಡಿಸಿ ಬಾಹ್ಯದಲ್ಲಿನ ಬೇರೆ ಯಾವುದೇ ಸಾಧನದಿಂದ ಪರಮಾತ್ಮದಶೆಯು ಪ್ರಕಟವಾಗುವುದಿಲ್ಲ. ನಿನ್ನೊಳಗೆ ಬಾಹ್ಯದ ಅಭಾವವಿದೆ. ಆದುದರಿಂದ ಬಾಹ್ಯದಲ್ಲಿರುವ ಸಾಧನವು ಚೈತನ್ಯದ್ದಿಲ್ಲ. ಆಂತರ್ಯದಲ್ಲಿ ಪುಣ್ಯ-ಪಾಪದ ಭಾವಗಳು ಉತ್ಪನ್ನವಾಗುತ್ತವೆ ಅವು ಕೂಡ ವಿಕಾರಗಳಿವೆ. ಪುಣ್ಯದ ಭಾವದಿಂದ ಕೂಡ ಹೊಸ ಕರ್ಮದ ಬಂಧವಾಗುತ್ತದೆ. ಆ ಪುಣ್ಯದ ಭಾವಗಳು ಕೂಡ ನಿನ್ನ ಶಾಂತಿಯ ಸಾಧನವಾಗಿಲ್ಲ. ನಿನ್ನ ಚೈತನ್ಯದಲ್ಲಿ ಮೂರ್ತ ಪರಮಾಣುಗಳದ್ದಂತೂ ಗ್ರಹಣ-ತ್ಯಾಗವೇ ಇಲ್ಲ. ಅವುಗಳಿಂದ ನಿನ್ನ ಸ್ವರೂಪವು ಭಿನ್ನವಿದೆ ಮತ್ತು ಯಾವ ಕ್ಷಣಿಕ ವಿಕಾರಗಳಿವೆ ಅವು ಕೂಡ ನಿನ್ನ ಶುದ್ಧ ಸ್ವರೂಪದಲ್ಲಿ ಇಲ್ಲವೇ ಇಲ್ಲ. ಇಂಥ ಶುದ್ಧ ಸ್ವರೂಪದ ವಿಶ್ವಾಸವನ್ನು ಯಾರು ಮಾಡುವರು ? ಆಂತರ್ಯದಲ್ಲಿ ಧ್ರುವ ವಸ್ತುವಿನ ಅಭಿರುಚಿಯನ್ನು ಸ್ವಯಂ ಮಾಡಿದರೆ ಮಾತ್ರ ಆಗುತ್ತದೆ. ಅದರಲ್ಲಿ ಬೇರೆ ಯಾವುದೂ ಸಾಧನವಿಲ್ಲ. ಇಲ್ಲಿಯಂತೂ ಪುಣ್ಯದ ಅಧಿಕಾರವಿದೆ. ಅದರಲ್ಲಿ ತಿಳಿಸಿಕೊಡುವುದೇನೆಂದರೆ ಎಲೈ ಸೋದರನೇ ! ಕಷಾಯದ ಮಂದತೆಯ ರೂಪದ ಪುಣ್ಯ ಪರಿಣಾಮದಿಂದ ಕೂಡ ನಿನ್ನ ಚೈತನ್ಯಕ್ಕೆ ಯಾವುದೇ ಪ್ರಕಾರದ ಲಾಭವಿಲ್ಲ. ಪುಣ್ಯ ಪರಿಣಾಮದ ಮೂಲಕ ನಿನ್ನ ಚೈತನ್ಯದ ಏಕತೆಯು ಪ್ರಾಪ್ತವಾಗುವುದಿಲ್ಲ ಆದರೆ ಅದರಿಂದಂತೂ ಹಳೆಯ ಕರ್ಮದ ಜತೆಯಲ್ಲಿ ನವೀನ ಕರ್ಮದ ಸಂಬಂಧವಾಗುತ್ತದೆ. ಆದುದರಿಂದ ಆ ಪುಣ್ಯ ಪರಿಣಾಮದ ಜತೆಯಲ್ಲಿ ಕೂಡ ನಿಜವಾಗಿ ನಿನ್ನ ಸ್ವಭಾವದ ಏಕತೆಯಿರುವುದಿಲ್ಲ. ಅದು ಸ್ವಭಾವದಿಂದ ಅಸ್ಪೃಷ್ಟವಿರುತ್ತದೆ.

ಹಾಲು ಮತ್ತು ನೀರಿನ ಸಂಯೋಗದ ಹಾಗೆ ಆತ್ಮ ಮತ್ತು ಕರ್ಮದ ಸಂಬಂಧವಿದೆಯೆಂಬುದಾಗಿ ಹೇಳಲಾಗುತ್ತದೆ. ಆದರೆ ಅಲ್ಲಿ ಯಾವ ಪ್ರಕಾರ ಹಾಲು ಮತ್ತು ನೀರು ಬೇರೆಯಿದೆ ಅದೇ ಪ್ರಕಾರ ಆತ್ಮ ಮತ್ತು ಕರ್ಮ ಬೇರೆಯಿವೆಯೆಂಬುದೇ ಅದರ ಅರ್ಥವಿದೆ. ಹಾಲಿನಿಂದ ಖೋವವಾಗುತ್ತದೆ ಮತ್ತು ನೀರು ಉಗಿಯಾಗಿ ಹಾರಿಹೋಗುತ್ತದೆ. ಈ ಪ್ರಕಾರವಾಗಿ ಅವೆರಡೂ ಬೇರೆಯಿವೆ. ಅದೇ ಪ್ರಕಾರ ಜೀವವು ಅಮೂರ್ತಿಕವಿದೆ ಮತ್ತು ಕರ್ಮವು ಮೂರ್ತಿಕವಿದೆ, ಹೀಗೆ ಅವೆರಡೂ ಬೇರೆಯಿವೆ ಮತ್ತು ಯಾವ ಭಾವದಿಂದ ಆ ಕರ್ಮದ ಬಂಧನವಾಗುತ್ತದೆ ಅದು ನಿಜವಾಗಿ ಜೀವದ ಸ್ವರೂಪವಿಲ್ಲ. ಜೀವನು ಶುದ್ಧ ಚೈತನ್ಯರೂಪ ಅಮೂರ್ತಿಕನಿದ್ದಾನೆ. ಇಂಥ ಜೀವದ ಅಂತರ್ದೃಷ್ಟಿ ಮಾಡದ ಹೊರತಾಗಿ ಬೇರೆ ಯಾವುದೇ ರೀತಿಯಿಂದ ಭವಭ್ರಮಣದಿಂದ ಬಿಡುಗಡೆಯಾಗುವ ಸಾಧ್ಯತೆಯೇ ಇಲ್ಲ. ಆದುದರಿಂದ ಮೊದಲು ಅಂತರ್ದೃಷ್ಟಿ ಮಾಡಿ ಆತ್ಮನನ್ನು ಹಿಡಿದುಕೊಳ್ಳಬೇಕು.

ಪ್ರತಿಯೊಬ್ಬ ಆತ್ಮನದು ತನ್ನ ಅಸಂಖ್ಯ ಪ್ರದೇಶಿ ಅರೂಪಿ ಆಕಾರವಿದೆ. ಅರೂಪಿಯಾದ ವಸ್ತುವಿಗೆ ಕೂಡ ತನ್ನದೇ ಆದ ಆಕಾರವಿರುತ್ತದೆ. ಓಹೋ ! ನಾನು ಅಸಂಖ್ಯ ಪ್ರದೇಶಿಯಾದ ಚಿದಾನಂದ ಮೂರ್ತಿಯಿದ್ದೇನೆಂದು ತಿಳಿದುಕೊಂಡು ಶ್ರದ್ಧೆ ಮಾಡಿ ತನ್ನ ಸ್ವಭಾವದ ಎದುರಿಗೆ ನೋಡದೆ ಅನಾದಿ ಕಾಲದಿಂದ ರಾಗ-ದ್ವೇಷಗಳನ್ನೇ ಮಾಡುತ್ತಿದ್ದಾನೆ ಮತ್ತು ತನ್ನನ್ನು 'ವಿಕಾರವಿದೆ ಅದೇ ತಾನೆಂದು' ಮನ್ನಿಸಿಕೊಂಡಿದ್ದಾನೆ. ಆದುದರಿಂದಲೇ ಅವನ ವಿಕಾರೀ ಪರಿಣಾಮದ ನಿಮಿತ್ತದಿಂದ ಹೊಸ-ಹೊಸ ಕರ್ಮಗಳ ಬಂಧನವಾಗುತ್ತಿದೆ. ಯಾವುದರ ಜತೆಯಲ್ಲಿ ಬಂಧಿಸುತ್ತಿದೆಯೆಂದರೆ ಹಳೆಯ ಕರ್ಮಗಳ ಜತೆಯಲ್ಲಿ ನವೀನ ಕರ್ಮಗಳು ಕಟ್ಟಿಕೊಳ್ಳುತ್ತವೆ. ಈ ಪ್ರಕಾರವಾಗಿ ಜೀವದ ವಿಕಾರಗಳ ನಿಮಿತ್ತದಿಂದ ನವೀನ ಕರ್ಮಗಳು ಬಂಧಿಸುತ್ತವೆ. ಆದುದರಿಂದ ಅಮೂರ್ತಿಕನಿರುವ ಜೀವನಿಗೆ ಮೂರ್ತಿಕ ಕರ್ಮಗಳ ಜತೆಯಲ್ಲಿ ಕಥಂಚಿತ್ ಬಂಧನವಿದೆಯೆಂದು ಹೇಳುವುದರಲ್ಲಿ ವಿರೋಧವಿಲ್ಲ. ಯಾವ ಪ್ರಕಾರ ಅಮೂರ್ತಿಕ ಜ್ಞಾನವು ಮೂರ್ತ ಪದಾರ್ಥಗಳನ್ನು ತಿಳಿದುಕೊಳ್ಳುತ್ತದೆ-ಎಂದರೆ ಅರೂಪಿಯದು ರೂಪಿಯ ಜತೆಯಲ್ಲಿ ಜ್ಞೇಯ-ಜ್ಞಾಯಕ ಸಂಬಂಧವಿದೆ. ಎಷ್ಟು ಪ್ರಮಾಣದಲ್ಲಿ ವಿಕಾರ ಮಾಡುತ್ತಾನೆ ಅಷ್ಟು ಪ್ರಮಾಣದಲ್ಲಿ ನವೀನ ಕರ್ಮಗಳು ಬಂಧಿಸುತ್ತವೆ. ಈ ಪ್ರಕಾರ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಆದಾಗ್ಯೂ ಜೀವದ ಕಾರಣದಿಂದ ಜಡವಿಲ್ಲ ಮತ್ತು ಜಡದ ಕಾರಣದಿಂದ ಜೀವವಿಲ್ಲ. ಚೈತನ್ಯದ ಸ್ವಭಾವವು ಹೇಗಿದೆ-ಚೈತನ್ಯದ ವಿಕಾರವು ಹೇಗಿದೆ, ಜಡವು ಹೇಗಿದೆಯೆಂದು ಪ್ರತಿಯೊಂದನ್ನು ತಿಳಿದುಕೊಳ್ಳಬೇಕಾಗುವುದು. ಪುಣ್ಯ-ಪಾಪದ ಅಧಿಕಾರದಲ್ಲಿ -ಜೀವನಿಗೆ ಮೂರ್ತ ಕರ್ಮದ ಜತೆಯಲ್ಲಿ ಏಕತೆಯಾಗುವುದಿಲ್ಲ. ಕರ್ಮದ ಬಂಧನವು ಕರ್ಮದ ಜತೆಯಲ್ಲಿಯೇ ಆಗುತ್ತದೆಯೆಂದು ತಿಳಿಸಿಕೊಡಲಾಗಿದೆ. ಕರ್ಮದ ಸಂಬಂಧದಿಂದ ರಹಿತ ಮತ್ತು ವಿಕಾರ ಭಾವಗಳಿಂದ ಕೂಡ ರಹಿತವಿರುವಂಥ ಅಮೂರ್ತಿಕ ಶುದ್ಧ ಚೈತನ್ಯ ಆತ್ಮಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡು ಅದರಲ್ಲಿ ಏಕಾಗ್ರವಾಗಿ ಹೋಗುವುದೇ ನಿಜವಾಗಿ ಮುಕ್ತಿಯ ಉಪಾಯವಿದೆ. ಇದನ್ನು ಹೊರತುಪಡಿಸಿ ಬೇರೆ ಯಾವ ಉಪಾಯವೇ ಇಲ್ಲ.

ಈಗ ನವತತ್ತ್ವಗಳಲ್ಲಿ ಆಸ್ರವದ ವರ್ಣನೆ ಮಾಡುತ್ತಾರೆ.

**ರಾಗೋ ಜಸ್ಸ ಪಸತ್ಥೋ ಅಣುಕಂಪಾಸಂಸಿದೋ ಯ ಪರಿಣಾಮೋ ।**
**ಚಿತ್ತಮ್ಹಿ ಣತ್ಥಿ ಕಲುಸಂ ಪುಣ್ಣಂ ಜೀವಸ್ಸ ಆಸವದಿ ॥೧೩೫॥**

**ಯಾವ ಜೀವನಿಗೆ ಪ್ರಶಸ್ತರಾಗವಿದೆ, ಅನುಕಂಪೆಯುಳ್ಳ ಪರಿಣಾಮವಿದೆ ।**
**ಇವಲ್ಲದೆ ಚಿತ್ತದಿ ಅಕಲ್ಮಷಭಾವವಿದೆಯವನಿಗೆ ಪುಣ್ಯಾಸ್ರವಮಪ್ಪದು ॥೧೩೫॥**

ನೋಡಿರಿ ! ಈ ಆಸ್ರವತತ್ತ್ವವು ನಿಜವಾಗಿ ಶುದ್ಧ ಜೀವತತ್ತ್ವದಿಂದ ಭಿನ್ನವಿದೆ. ಶುದ್ಧಾತ್ಮನು ದ್ರವ್ಯ ಕರ್ಮ-ಭಾವಕರ್ಮ ಮತ್ತು ನೋಕರ್ಮದಿಂದ ರಹಿತನಿದ್ದಾನೆ. ಅವನು ಚಿದಾನಂದ ಸಹಜ ಆನಂದದಿಂದ ಪರಿಪೂರ್ಣನಿದ್ದಾನೆ. ಈ ಪ್ರಕಾರ ಶುದ್ಧಾತ್ಮನು ಆಸ್ರವದಿಂದ ಭಿನ್ನನಿದ್ದಾನೆ. ಇಂಥ ಶುದ್ಧ ಆತ್ಮನ ಸಮ್ಯಕ್ ಶ್ರದ್ಧೆ-ಜ್ಞಾನ-ಆಚರಣೆ ಮಾಡಬೇಕೆನ್ನುವುದೇ ಇಲ್ಲಿನ ತಾತ್ಪರ್ಯವಿದೆ. ಪರ್ಯಾಯನಯದಿಂದ ಆಸ್ರವವನ್ನು ಆತ್ಮನದೆಂದು ಹೇಳಲಾಗುತ್ತದೆ ; ಆದರೆ ದ್ರವ್ಯನಯದಿಂದ ಆಸ್ರವವನ್ನು ಆತ್ಮನದೆಂದೇ ಮನ್ನಿಸಹೋದರೆ ಅವನನ್ನು ಆಸ್ರವದಿಂದ ಬೇರೆಯಾಗಿ ಹಿಡಿದುಕೊಳ್ಳುವ ಅವಸರವೇ ಉಳಿಯುವುದಿಲ್ಲ. ''ಆಸ್ರವವು ಆತ್ಮನಿಂದ ಭಿನ್ನವಿದೆಯೋ ಅಥವಾ ಅಭಿನ್ನವಿದೆಯೋ''-ಈ ವಿಷಯದಲ್ಲಿ ಈಗ ವಿದ್ಯಮಾನವಿರುವಂಥ ದೊಡ್ಡ-ದೊಡ್ಡ ಆಚಾರ್ಯ ಪದವನ್ನು - ಹೆಸರನ್ನು ಧಾರಣ ಮಾಡಿರುವಂಥವರು ಕೂಡ ಮೋಸ ಹೋಗುತ್ತಿದ್ದಾರೆ. ಪರ್ಯಾಯದಲ್ಲಿ ಆಸ್ರವವಿದ್ದರೂ ಕೂಡ ಶುದ್ಧ ದ್ರವ್ಯದ ದೃಷ್ಟಿಯಿಂದ ನೋಡಿದರೆ ಆತ್ಮನು ಆಸ್ರವದಿಂದ ಭಿನ್ನನೇ ಇದ್ದಾನೆಂದು ಆತ್ಮನಲ್ಲಿ ಶ್ರದ್ಧೆ-ಜ್ಞಾನ ಮಾಡುವುದು ಧರ್ಮವಿದೆ. ಇಲ್ಲಿ ಆಸ್ರವವನ್ನು ತಿಳಿಸಿಕೊಟ್ಟಿದ್ದಾರೆ.

ಜೀವನಿಗೆ ದೇವರು-ಗುರುಗಳಲ್ಲಿ ಪ್ರೀತಿಯ ಭಾವವು ಬರುವುದು ಪುಣ್ಯಾಸ್ರವದ ಕಾರಣವಿದೆ. ಜೀವಗಳ ಮೇಲೆ ಅನುಕಂಪೆಯ ಭಾವವು ಬರುವುದು ಕೂಡ ಪುಣ್ಯಾಸ್ರವದ ಕಾರಣವಿದೆ. ಇಲ್ಲಿ ಭಾವಾಸ್ರವವನ್ನು 'ಊರ್ಧ್ವ' ಎಂದರೆ ಮೊದಲೆಂದು ಹೇಳಲಾಗಿದೆ ಮತ್ತು ಅದರ ನಂತರ ದ್ರವ್ಯಾಸ್ರವವಾಗುವುದನ್ನು ಹೇಳಲಾಗಿದೆ. ಅಲ್ಲಿ ಸಮಯ ಭೇದವನ್ನು ತಿಳಿಸಿಕೊಡಲಾಗಿಲ್ಲ, ಆದರೆ ಭಾವಾಸ್ರವವು ದ್ರವ್ಯಾಸ್ರವದ ಕಾರಣವಿದೆ. ಈ ಪ್ರಕಾರದ ಕಾರಣತನವನ್ನು ತಿಳಿಸಿಕೊಡುವುದರ ಸಲುವಾಗಿಯೇ ಇಲ್ಲಿ ಭಾವಾಸ್ರವವನ್ನು 'ಊರ್ಧ್ವ' - ಮೇಲೆ ಹೇಳಲಾಗಿದೆಯೆಂಬುದು ಸೂತ್ರಕಾರರ ತಾತ್ಪರ್ಯವಿದೆ ಮತ್ತು ಪರಿಣಾಮದಲ್ಲಿ ಕಲುಷತೆಯಾಗದಿರುವುದು, ಮಂದ, ಸರಳ ಪರಿಣಾಮವಾಗುವುದು ಕೂಡ ಪುಣ್ಯಾಸ್ರವವಿದೆ. ಚಿತ್ತದ ಪ್ರಸನ್ನತೆಯ ಶುಭಭಾವವು ಕೂಡ ಆಸ್ರವವಿದೆ. ಜೀವದ ಈ ಪ್ರಕಾರದ ಪರಿಣಾಮವು ಭಾವಾಸ್ರವವಿದೆ. ಅವುಗಳ ನಿಮಿತ್ತದಿಂದ ಪುಣ್ಯ-ಪಾಪರೂಪದ ಜಡ ರಜಕಣಗಳ ಬಂಧವಾಗುವುದು ದ್ರವ್ಯಾಸ್ರವವಿದೆ. ಮೊದಲಂತೂ ಪುಣ್ಯ-ಪಾಪಗಳ ವರ್ಣನೆಯನ್ನು ಬೇರೆ-ಬೇರೆಯಾಗಿ ಮಾಡಿ ಅವೆರಡನ್ನು ಆಸ್ರವದಲ್ಲಿ ವರ್ಣನೆ ಮಾಡಲಾಯಿತು.

ಈಗ ಪ್ರಶಸ್ತರಾಗದ ಸ್ವರೂಪವನ್ನು ತಿಳಿಸಿಕೊಡುತ್ತಾರೆ -

**ಅರಹಂತಸಿದ್ಧಸಾಹುಸು ಭತ್ತೀ ಧಮ್ಮಮ್ಮಿ ಜಾ ಯ ಖಲು ಚೇಟ್ಠಾ ।**
**ಅಣುಗಮಣಂ ಪಿ ಗುರೂಣಂ ಪಸತ್ಥರಾಗೋ ತ್ತಿ ವುಚ್ಚಂತಿ ॥೧೩೬॥**

**ಅರಹಂತ-ಸಿದ್ಧ-ಸಾಧುಗಳ ಕುರಿತು ಭಕ್ತಿ, ಧರ್ಮದಲಿ ಯಥಾರ್ಥ ಪ್ರವೃತ್ತಿ ।**
**ಗುರುಗಳ ಅನುಸರಣೆ ಮಾಡುವುದಿವೆಲ್ಲಕೆ 'ಪ್ರಶಸ್ತರಾಗ'ವೆನ್ನುವರು ॥೧೩೬॥**

ಅರಹಂತ-ಸಿದ್ಧ ಮತ್ತು ಸಾಧು-ಮುನಿಗಳ ಕುರಿತು ಭಕ್ತಿಯ ಭಾವವಿರುವುದು ಹಾಗೂ ಅವರ ಆದರ-ಬಹುಮಾನ-ಅನುಸರಣೆಯ ಭಾವವಿರುವುದು ಪ್ರಶಸ್ತ ರಾಗವಿದೆ. ಆಚಾರ್ಯ-ಉಪಾಧ್ಯಾಯ ಮೊದಲಾದವರು ಯಾವ ಪ್ರಕಾರ ಇರುತ್ತಾರೆಂದರೆ ಅವರು ಶುದ್ಧ ಚಿದಾನಂದ ಜೀವತತ್ತ್ವವನ್ನೇ ಉಪಾದೇಯವೆಂದು ಹೇಳುತ್ತಾರೆ, ಅವರು ರಾಗಾದಿಗಳನ್ನು ಉಪಾದೇಯವೆಂದು ಹೇಳುತ್ತಿದ್ದರೆ ನಿಜವಾಗಿ ಆಚಾರ್ಯ- ಉಪಾಧ್ಯಾಯ ಅಥವಾ ಸಾಧುಗಳಿಲ್ಲ. ತಾವು ಸ್ವಯಂ ಶುದ್ಧ ಜೀವತತ್ತ್ವವನ್ನೇ ಉಪಾದೇಯವೆಂದು ತಿಳಿಯುತ್ತಾರೆ ಮತ್ತು ಇತರರಿಗೆ ಕೂಡ

ಅದೇ ಪ್ರಕಾರ ಹೇಳುತ್ತಾರೆ, ಹಾಗೂ ಸ್ವಯಂ ಮೋಕ್ಷಮಾರ್ಗವನ್ನು ಸಾಧಿಸುತ್ತಿರುವಂಥ ಸಂತರುಗಳ ಕುರಿತು ಧರ್ಮಾನುರಾಗವಿರುವುದು ಪ್ರಶಸ್ತರಾಗವಿದೆ. ಇಲ್ಲಿಯಂತೂ ಕೇವಲ ನಿಜವಾದ ದೇವ-ಗುರುಗಳ ಮಾತನ್ನೇ ಸ್ವೀಕರಿಸಲಾಗಿದೆ. ನಿಜವಾದ ದೇವ-ಗುರುಗಳ ಕುರಿತಾಗಿರುವ ಭಕ್ತಿಯ ಭಾವವು ಪುಣ್ಯಾಸ್ರವವಿದೆ.

ಆಚಾರ್ಯ ಭಗವಂತರು ಹೇಗಿರುತ್ತಾರೆಂದರೆ ಅವರು ಶುದ್ಧಜ್ಞಾನಸ್ವಭಾವಿಯಾದ ಆತ್ಮನ ಆಶ್ರಯದಿಂದ ನಿಶ್ಚಯ ಪಂಚಾಚಾರಗಳನ್ನು ಪಾಲಿಸುತ್ತಾರೆ. ಅದರಂತೆ ವ್ಯವಹಾರ ಪಂಚಾಚಾರದ ಪಾಲನೆಯನ್ನು ಕೂಡ ಮಾಡುತ್ತಾರೆ. ಇತರರ ಕಡೆಯಿಂದ ಕೂಡ ಆ ನಿಶ್ಚಯ-ವ್ಯವಹಾರ ಪಂಚಾಚಾರಗಳ ಪಾಲನೆಯನ್ನು ಮಾಡಿಸುತ್ತಾರೆ ಅವರು ಆಚಾರ್ಯರಿದ್ದಾರೆ. ರಾಗವನ್ನು ಆದರಣೀಯವೆಂದು ಮನ್ನಿಸಲಿ ಅಥವಾ ಮನ್ನಿಸ ಹಚ್ಚಲಿ ಇಲ್ಲವೆ ರಾಗದಿಂದ ಧರ್ಮವಾಗುತ್ತದೆಯೆಂದು ಹೇಳುತ್ತಿದ್ದರೆ ಅವರು ಆಚಾರ್ಯರಂತೂ ಇಲ್ಲ, ಆದರೆ ಮಿಥ್ಯಾದೃಷ್ಟಿಯಿದ್ದಾರೆ. ಸ್ವಯಂ ಆತ್ಮಾನುಭೂತಿಯಿಂದ ರಹಿತರಿದ್ದಾರೆ.

ಉಪಾಧ್ಯಾಯ ಪರಮೇಷ್ಠಿಗಳು ಹೇಗಿರುತ್ತಾರೆಂದರೆ ಅವರು ಒಂಭತ್ತು ತತ್ತ್ವಗಳಲ್ಲಿ ಒಂದು ಶುದ್ಧ ಜೀವತತ್ತ್ವವನ್ನೇ ಉಪಾದೇಯವಿದೆಯೆಂದು ಹೇಳುತ್ತಿರುವರು ಅದರಂತೆ ಶುದ್ಧ ಆತ್ಮನ ಆಶ್ರಯದಿಂದ ಮೋಕ್ಷಮಾರ್ಗವನ್ನು ಯಾರು ಸ್ವಯಂ ಭಾವಿಸುತ್ತಾರೆ ಅದೇ ಪ್ರಕಾರ ಇತರರಿಗೂ ಕೂಡ ಅದರ ಪ್ರತಿಪಾದನೆ ಮಾಡುತ್ತಾರೆ ಅವರು ಉಪಾಧ್ಯಾಯರಿದ್ದಾರೆ. ಯಾರಿಗೆ ಶುದ್ಧಾತ್ಮನ ಪ್ರತೀತಿಯಿರುವುದಿಲ್ಲ ಮತ್ತು ಶುದ್ಧ ಜೀವತತ್ತ್ವವನ್ನು ಹೊರತುಪಡಿಸಿ ಬೇರೊಂದರ ಆಶ್ರಯದಿಂದ ಧರ್ಮವಾಗುತ್ತದೆಯೆಂದು ಮನ್ನಿಸಹಚ್ಚುತ್ತಾರೆ ಅವರಿಗೆ ಸಮ್ಯಗ್ದರ್ಶನ ಅಥವಾ ಮುನಿದಶೆಯು ಕೂಡ ಇರುವುದಿಲ್ಲ.

ಸಾಧು ಪರಮೇಷ್ಠಿಗಳು ಹೇಗಿರುತ್ತಾರೆಂದರೆ-ಯಾರು ನಿಶ್ಚಯ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಮತ್ತು ತಪಶ್ಚರಣ ರೂಪದ ಆರಾಧನೆಯ ಮೂಲಕ ತಮ್ಮ ಶುದ್ಧಾತ್ಮ ಸ್ವರೂಪವನ್ನು ಸಾಧಿಸುತ್ತಿರುತ್ತಾರೆ ಅವರು ಸಾಧುಗಳಿದ್ದಾರೆ. ಇಂಥ ಆಚಾರ್ಯ, ಉಪಾಧ್ಯಾಯ ಹಾಗೂ ಸಾಧುಪರಮೇಷ್ಠಿಗಳ ಕುರಿತು ಭಕ್ತಿ-ಬಹುಮಾನ ಮತ್ತು ಅವರ ಹಾಗೆ ಅನುಸರಣೆ ಮಾಡುವ ಭಾವವು ಶುಭರಾಗವಿದೆ ಮತ್ತು ಇದು ಕೂಡ ಆಸ್ರವವೇ ಇದೆ. ಸರ್ವಜ್ಞದೇವರು ಹೇಳಿರುವ ಧರ್ಮದ ಕುರಿತಾದ ಬಹುಮಾನದ ವಿಕಲ್ಪವು ಕೂಡ ಶುಭರಾಗವಿದೆ.

ಪಂಚಪರಮೇಷ್ಠಿಗಳ ಕುರಿತು ಭಕ್ತಿ ಹಾಗೂ ಅವರನ್ನು ಅನುಸರಿಸಿ ಹೋಗುವ ಭಾವವು ಕೂಡ ಶುಭರಾಗವಿದೆ. ಸಾಧು ಚರಣಗಳಲ್ಲಿ ರಸಾನುಭವ ಮಾಡುವಂಥ ಭಾವವು ಕೂಡ ಶುಭರಾಗವಿದೆ. ಇಂಥ ಆಸ್ರವಭಾವವು ಯಾರಿಗೆ ಆಗುತ್ತವೆಯೆಂಬುದನ್ನು ಹೇಳುತ್ತಾರೆ.

ಈ ಶುಭರಾಗಗಳು ಮುಖ್ಯರೂಪದಿಂದಂತೂ ಅಜ್ಞಾನೀ ಜೀವರುಗಳಿಗೆ ಇರುತ್ತವೆ. ಯಾರು ಕೇವಲ ಭಕ್ತಿ ಮೊದಲಾದವುಗಳ ಭಾವಗಳಲ್ಲಿಯೇ ಧರ್ಮವಿದೆಯೆಂದು ಮನ್ನಿಸುತ್ತಿದ್ದಾರೆ - ಅಂಥ ಅಜ್ಞಾನಿಯಾದ ಜೀವರುಗಳಲ್ಲಿಯೇ ಆಸ್ರವವನ್ನು ಗಣಿಸಲಾಗಿದೆ. ಜ್ಞಾನಿಗಳು ರಾಗವನ್ನು ಆದರಣೀಯವೆಂದು ಮನ್ನಿಸುವುದಿಲ್ಲ, ಆದುದರಿಂದ ಅವರಲ್ಲಿ ಆಸ್ರವದ ಮುಖ್ಯತೆಯನ್ನು ಗಣಿಸಲಾಗಿಲ್ಲ.

ಭಾವಾಸ್ರವವು ಜೀವವಿದೆಯೋ ಅಥವಾ ಅಜೀವವಿದೆಯೋ ?

ಪರ್ಯಾಯದ ದೃಷ್ಟಿಯಿಂದ ನೋಡಹೋದರೆ ಆಸ್ರವವು ಜೀವದ್ದಿದೆ, ಆದರೆ ಜೀವದ ಸ್ವಭಾವದ ದೃಷ್ಟಿಯಿಂದ ನೋಡಿದರೆ ಆಸ್ರವವು ಜೀವದ್ದಿಲ್ಲ-ಜೀವವಿಲ್ಲ, ಆದರೆ ಅದು ಅಜೀವವಿದೆ.

ಹಾಗಾದರೆ ಆಸ್ರವವು ಜೀವದಿಂದ ಭಿನ್ನವಿದೆಯೋ ಅಥವಾ ಅಭಿನ್ನವಿದೆಯೋ ?

ಪರ್ಯಾಯದ ದೃಷ್ಟಿಯಿಂದ ನೋಡಿದರೆ ಆಸ್ರವವು ಜೀವದಿಂದ ಅಭಿನ್ನವಿದೆ ; ಆದರೆ ವಸ್ತುಸ್ವರೂಪದ ಅಪೇಕ್ಷೆಯಿಂದ ನೋಡಹೋದರೆ ಆಸ್ರವವು ಜೀವದಿಂದ ಭಿನ್ನವಿದೆ. ಆಸ್ರವವು ಕೇವಲ ಒಂದು ಸಮಯದ ವಿಕಾರವಿದೆ. ಅದರ ಜತೆಯಲ್ಲಿ ಒಂದುವೇಳೆ ವಸ್ತುದೃಷ್ಟಿಯಿಂದ ಏಕತೆಯು ಇರುವುದಾದರೆ ಆತ್ಮ ಮತ್ತು ಆಸ್ರವ ಇವೆರಡೂ ಎಂದೂ ಬೇರೆಯಾಗಿ ಹೋಗುವುದಿಲ್ಲ ಮತ್ತು ಸಿದ್ಧದಶೆಯು ಎಂದೂ ಪ್ರಾಪ್ತವಾಗುವ ಸಾಧ್ಯತೆಯೇ ಇಲ್ಲ. ಆತ್ಮನು ನಿರಂತರ ಸಂಸಾರದಲ್ಲಿಯೇ ಪರಿಭ್ರಮಣ ಮಾಡಬೇಕಾದ ಪ್ರಸಂಗವು ಬಂದುಬಿಡುವುದು. ಆದುದರಿಂದ ಮೂಲ ವಸ್ತುಸ್ವರೂಪದ ಪ್ರತೀತಿ ಮಾಡಿಕೊಳ್ಳಲಾರದೆಯೇ ಆಚಾರ್ಯಪದ - ಉಪಾಧ್ಯಾಯಪದ ಅಥವಾ ಸಾಧುಪದವನ್ನು ಮನ್ನಿಸಿಕೊಳ್ಳಲಾಗಿದೆ. ಅದಂತೂ ಎಲ್ಲವೂ ಮಿಥ್ಯಾ ಕಲ್ಪನೆಯೇ ಆಗಿದೆ. ಇಲ್ಲಿಯಂತೂ ಕೇವಲ ಒಂದು ಶುದ್ಧ ಜೀವತತ್ತ್ವವನ್ನೇ ಉಪಾದೇಯವೆಂದು ಮನ್ನಿಸಬೇಕು ಮತ್ತು ಉಪದೇಶದಲ್ಲಿ ಕೂಡ ಹಾಗೆಯೇ ಹೇಳಬೇಕು. ಎಂದರೆ ಅಂಥವರು ಆಚಾರ್ಯ-ಉಪಾಧ್ಯಾಯ ಅಥವಾ ಸಾಧುಗಳಿರುತ್ತಾರೆ. ರಾಗವನ್ನು ಆದರಣೀಯವೆಂದು ಮನ್ನಿಸಿದರೆ ಅವನಿಗೆ ಸಮ್ಯಗ್ದರ್ಶನವು ಕೂಡ ಇರುವುದಿಲ್ಲವೆಂದಮೇಲೆ ಸಾಧುಪದವು ಎಲ್ಲಿಂದ ಇರುವುದು ?

ಯಾರು ಭಗವಂತರ ಭಕ್ತಿ-ಪೂಜೆ ಮೊದಲಾದವುಗಳ ಶುಭರಾಗದಲ್ಲಿಯೇ ಧರ್ಮವಿದೆಯೆಂದು ಮನ್ನಿಸಿಕೊಳ್ಳುತ್ತಿದ್ದಾರೆ, ಆದರೆ ನಿಜವಾಗಿ ವಸ್ತುಸ್ವರೂಪವೇನಿದೆಯೆಂಬುದನ್ನು ತಿಳಿದುಕೊಳ್ಳುವುದಿಲ್ಲ ಅವರಿಗೆ ಕೇವಲ ಒಂದು ಆಸ್ರವವೇ ಆಗುತ್ತಿರುತ್ತದೆ, ಅವರಿಗೆ ಆತ್ಮಕಲ್ಯಾಣವಂತೂ ಸ್ವಲ್ಪ ಕೂಡ ಆಗುವ ಸಾಧ್ಯತೆಯಿಲ್ಲ. ಆಸ್ರವವು ಅಧರ್ಮವಿದೆ. ಪುಣ್ಯವಿರಲಿ ಅಥವಾ ಪಾಪವಿರಲಿ ಅವೆರಡೂ ಆಸ್ರವವಿವೆ, ಅವೇನು ಧರ್ಮವಿಲ್ಲ ಮತ್ತು ಅವುಗಳ ಕಾರಣದಿಂದ ಧರ್ಮವಾಗುವುದಿಲ್ಲ. ಪಾಪ-ಪುಣ್ಯಗಳೆರಡರಿಂದ ಆಸ್ರವವಾಗುತ್ತದೆ, ಆಸ್ರವವಂತೂ ಸಂಸಾರ ಪರಿಭ್ರಮಣಕ್ಕೆ ಕಾರಣವಾಗುತ್ತದೆ. ಅದರಂತೆ ಪಂಚಮಹಾವ್ರತಗಳ ಶುಭಪರಿಣಾಮವಿರಲಿ ಅಥವಾ ಪೂಜೆ-ಭಕ್ತಿ-ತೀರ್ಥಯಾತ್ರೆ ಮೊದಲಾದವುಗಳ ಶುಭಪರಿಣಾಮವಿರಲಿ ಅದು ಕೂಡ ಆಸ್ರವವಿದೆ. ನೋಡಿರಿ ! ಭಕ್ತಿ-ಪೂಜೆಯ ಭಾವಗಳಲ್ಲಿ ಪಾಪವಿದೆಯೆಂದು ಮನ್ನಿಸಹಚ್ಚುವವರಂತೂ ಮಿಥ್ಯಾದೃಷ್ಟಿಗಳೇ ಇದ್ದಾರೆ ಮತ್ತು ಆ ಭಕ್ತಿ-ಪೂಜೆಯ ಭಾವಗಳಲ್ಲಿ ಧರ್ಮವಿದೆಯೆಂದು ಮನ್ನಿಸಹಚ್ಚುವವರು ಕೂಡ ಮಿಥ್ಯಾದೃಷ್ಟಿಗಳೇ ಇದ್ದಾರೆ. ಇಂಥ ಮಿಥ್ಯಾದೃಷ್ಟಿಗಳ ಶುಭಭಾವಗಳಿಂದ ಕೇವಲ ಒಂದು ಆಸ್ರವವೇ ಆಗುತ್ತಿರುತ್ತದೆ. ಸ್ಥೂಲತೆಯಿಂದಂತೂ ಅಜ್ಞಾನಿಗಳಲ್ಲಿಯೇ ಆಸ್ರವವನ್ನು ಗಣಿಸಲಾಗಿದೆ. ಏಕೆಂದರೆ ಆ ಅಜ್ಞಾನೀ ಜೀವರುಗಳು ಕೇವಲ ಭಕ್ತಿಪ್ರಧಾನರೇ ಇರುತ್ತಾರೆ, ಅವರಿಗೆ ರಾಗರಹಿತ ಆನಂದಘನ ಆತ್ಮನ ಪ್ರತೀತಿಯಿರುವುದಿಲ್ಲ. ಅವರು ಭಕ್ತಿ ಮೊದಲಾದವುಗಳ ರಾಗದಲ್ಲಿಯೇ ಧರ್ಮವನ್ನು ಮನ್ನಿಸಿಕೊಂಡಿದ್ದಾರೆ.

ಆತ್ಮನದಂತೂ ಶುದ್ಧ ಚಿದಾನಂದ ಸ್ವಭಾವವಿದೆ. ಅವನ ಅಂತರ್ಯದಲ್ಲಿ ಶ್ರದ್ಧೆ-ಜ್ಞಾನ ಮತ್ತು ನಿಮಗ್ನತೆ ಮಾಡುವುದು ಅದು ನಿಜವಾಗಿ ಕಲ್ಯಾಣದ ಉಪಾಯವಿದೆ. ಪಂಚಪರಮೇಷ್ಠಿಗಳ ಕುರುತಾಗಿರುವ ಭಕ್ತಿಯ ಭಾವವು ರಾಗವಿದೆ. ಆ ರಾಗವನ್ನು ಜ್ಞಾನಿಗಳು ಆಸ್ರವವೆಂದು ತಿಳಿಯುತ್ತಾರೆ. ಸಮ್ಯಗ್ದೃಷ್ಟಿ ಧರ್ಮಾತ್ಮರುಗಳಿಗೆ ಭಗವಂತರ ಭಕ್ತಿ-ಪೂಜೆಯ ಭಾವವು ಬರುತ್ತದೆ. ಭಗವಂತರ ಬಿಂಬದ ದರ್ಶನ ಮಾಡುವ ಭಾವವು ಬರುತ್ತದೆ. ನಿಜವಾದ ದೇವ-ಗುರು-ಧರ್ಮದ ಕುರಿತು ಉತ್ಸಾಹದ ಭಾವವು ಬಂದ ಹೊರತಾಗಿ ಇರುವುದೇ ಇಲ್ಲ. ಒಂದುವೇಳೆ ಆ ರಾಗವನ್ನು ಮನ್ನಿಸದೇ ಹೋದರೆ ಅಂಥ ಜೀವನು ರಾಗವನ್ನು ಮತ್ತು ಧರ್ಮವನ್ನು ತಿಳಿದುಕೊಳ್ಳುವುದೇ ಇಲ್ಲ. ಧರ್ಮಾತ್ಮರುಗಳಿಗೆ ತಮ್ಮ ರಾಗದ ಭೂಮಿಕೆಯಲ್ಲಿ ದೇವ-ಗುರುಗಳ ಪೂಜೆ-ಭಕ್ತಿ-ಪ್ರಭಾವನೆ ಮೊದಲಾದವುಗಳ ಭಾವವು ಇದ್ದೇ ಇರುತ್ತದೆ-ಬಂದೇ ಬರುತ್ತದೆ, ಆದರೆ ಅದನ್ನು ಅವರು ಆಸ್ರವವೆಂದು ತಿಳಿದುಕೊಂಡಿರುತ್ತಾರೆ.

ಜೀವಗಳನ್ನು ಉಳಿಸಿಕೊಳ್ಳುವ-ರಕ್ಷಿಸುವ ಭಾವವು ಪಾಪವಿಲ್ಲ, ಪುಣ್ಯವಿದೆ. ಪರಜೀವಗಳನ್ನು ನಾನು ಕೊಲ್ಲುವ ಅಥವಾ ರಕ್ಷಿಸುವ ಸಾಧ್ಯತೆಯಿದೆಯೆಂದು ಮನ್ನಿಸುವುದಂತೂ ಮಿಥ್ಯಾತ್ವವಿದೆ, ಆದರೆ ಅಂಥ ಮಿಥ್ಯಾದೃಷ್ಟಿ ಜೀವನಿಗೆ ಕೂಡ ಯಾವ ಅನುಕಂಪೆ ಮೊದಲಾದವುಗಳ ಭಾವವು ಬರುವುದು ಅದು ಪುಣ್ಯಾಸ್ರವವಿದೆ.

ಅಜ್ಞಾನಿಗೆ ಪಂಚಪರಮೇಷ್ಠಿಗಳ ಕುರಿತು ಭಕ್ತಿಭಾವವು ಬರುತ್ತದೆ, ಆದರೆ ಒಂದುವೇಳೆ ಆಂತರ್ಯದಿಂದ ಯಥಾರ್ಥರೂಪವಾಗಿ ಪಂಚಪರಮೇಷ್ಠಿಗಳನ್ನು ಪರಿಚಯಿಸಿಕೊಂಡಿದ್ದರೆ-ತಿಳಿದುಕೊಂಡಿದ್ದರೆ ಒಳಗೆ ಆತ್ಮನ ಪ್ರತೀತಿಯಾದಲ್ಲದೆ ಇರುವುದೇ ಇಲ್ಲ. ಏಕೆಂದರೆ ಪಂಚಪರಮೇಷ್ಠಿಗಳಂತೂ ಸ್ವಯಂ ಆತ್ಮರಿದ್ದಾರೆ. ಅವರುಗಳ ಶುದ್ಧ ಆತ್ಮನನ್ನು ತಿಳಿದುಕೊಂಡರೆ ತನ್ನ ಆತ್ಮನು ಕೂಡ ಅವರುಗಳಂತೆಯೇ ಇದ್ದಾನೆಂದು ತಿಳಿದುಕೊಂಡರೆ ಅವನಿಗೆ ಸಮ್ಯಗ್ದರ್ಶನವಾದಲ್ಲದೆ ಇರುವುದೇ ಇಲ್ಲ. ಪಂಚಪರಮೇಷ್ಠಿ ಮೊದಲಾದವರುಗಳ ಭಕ್ತಿಯಲ್ಲಿ ಅಜ್ಞಾನಿಗಳಿಗೆ ಮಿಥ್ಯಾತ್ವ ಸಹಿತವಾದಂಥ ಶುಭಾಸ್ರವವಿರುತ್ತದೆ. ದೇಹದ ಕ್ರಿಯೆಗಳಲ್ಲಿ ಆಸ್ರವವಿಲ್ಲ, ಆದರೆ ಜೀವದ ಆಂತರ್ಯದಲ್ಲಿ ಶುಭಾಶುಭಗಳ ಪರಿಣಾಮವಾಗುವುದು ಆ ಭಾವವು ಆಸ್ರವವಿದೆ. ಅದರಲ್ಲಿ ಅಜ್ಞಾನಿಗಳಿಗೆ ಕೇವಲ ಒಂದು ಆಸ್ರವವೇ ಇರುತ್ತದೆ.

ಜ್ಞಾನೀ ಧರ್ಮಾತ್ಮರುಗಳಿಗೆ ಕೆಲವೊಂದು ಸಮಯದಲ್ಲಿ ಭಕ್ತಿ ಮೊದಲಾದವುಗಳ ಶುಭರಾಗವಿರುತ್ತದೆ. ನಿರ್ಗ್ರಂಥ ಸಂತರುಗಳನ್ನು ಗುರುತಿಸಿಕೊಂಡು ಅವರುಗಳ ಕುರಿತು ಭಕ್ತಿ-ಬಹುಮಾನದ ಶುಭರಾಗವು ಬರುತ್ತದೆ. ಸತತ ಆರನೆಯ - ಏಳನೆಯ ಗುಣಸ್ಥಾನಗಳಲ್ಲಿ ಜೀಕುತ್ತ-ಜೀಕುತ್ತ ಪುನಃ-ಪುನಃ ಆಂತರ್ಯದಲ್ಲಿ ಸಿದ್ಧರುಗಳಂಥ ಆನಂದವನ್ನು ಆಂಶಿಕವಾಗಿ ಅನುಭವ ಮಾಡುತ್ತಾರೆ. ಅಂಥ ಮುನಿರಾಜರುಗಳಿಗೆ ಕೂಡ ಯಾವಾಗ ನಿರ್ವಿಕಲ್ಪ ದಶೆಯಾಗುವುದಿಲ್ಲ, ಆಗ ಆರನೆಯ ಗುಣಸ್ಥಾನದಲ್ಲಿ ಶಾಸ್ತ್ರಗಳ ರಚನೆ ಮಾಡುವ ಮೊದಲಾದವುಗಳ ಶುಭವಿಕಲ್ಪಗಳು ಬರುತ್ತವೆ. ಮುನಿರಾಜರುಗಳಿಗೆ ಆರನೆಯ-ಏಳನೆಯ ಗುಣಸ್ಥಾನಗಳು ಪುನಃ-ಪುನಃ ಬರುತ್ತಿರುತ್ತವೆ. ಅವರು ಯಾವಾಗ ಮೇಲಿನ ಅಪ್ರಮತ್ತ ಗುಣಸ್ಥಾನದಲ್ಲಿ ತಲುಪುವ ಸಾಧ್ಯತೆಯಾಗುವುದಿಲ್ಲ ಆಗ ಆರನೆಯ ಗುಣಸ್ಥಾನದಲ್ಲಿ ಶುಭರಾಗಗಳು ಬರುತ್ತವೆ. ಪಂಚಪರಮೇಷ್ಠಿಗಳ ಭಕ್ತಿ, ತೀರ್ಥವಂದನೆ ಮೊದಲಾದವುಗಳ ಶುಭರಾಗವು ಅವರಿಗೆ ಬರುತ್ತದೆ, ಆದರೆ ಅವರು ಅದನ್ನು ಪುಣ್ಯಾಸ್ರವವೆಂದು ತಿಳಿದುಕೊಳ್ಳುತ್ತಾರೆ. ಇದೇ ಪ್ರಕಾರವಾಗಿ ನಾಲ್ಕನೆಯ-ಐದನೆಯ ಗುಣಸ್ಥಾನದಲ್ಲಿ ಧರ್ಮಾತ್ಮರುಗಳಿಗೆ ಕೂಡ ಅಂಥ ಶುಭಭಾವಗಳು ಬರುತ್ತಿರುತ್ತವೆ. ನೋಡಿರಿ ! ಇಲ್ಲಿ 'ಕೆಲವೊಂದು ಸಮಯದಲ್ಲಿ'ಯೆಂದು ಹೇಳಿದ್ದಾರೆ, ಆದರೆ ಅಜ್ಞಾನಿಗಳಂತೂ ಯಾವಾಗಲೂ ಆಸ್ರವದಲ್ಲಿಯೇ ಬಿದ್ದುಕೊಂಡಿರುತ್ತಾರೆ. ಅದಕ್ಕಾಗಿಯೇ ಜ್ಞಾನಿಗಳಿಗೆ ಕೂಡ ಕೆಲವೊಂದು ಸಮಯದಲ್ಲಿ ಶುಭರಾಗವಿರುತ್ತದೆಯೆಂದು ಹೇಳಿದ್ದಾರೆ. ಇಲ್ಲಿ ಮುಖ್ಯರೂಪದಿಂದಂತೂ ಆರನೆಯ ಗುಣಸ್ಥಾನವುಳ್ಳ ಮುನಿರಾಜರ ಮಾತನ್ನು ತೆಗೆದುಕೊಂಡಿದ್ದಾರೆ. ನಾಲ್ಕನೆಯ-ಐದನೆಯ ಗುಣಸ್ಥಾನಗಳಲ್ಲಿರುವಂಥ ಧರ್ಮಾತ್ಮರುಗಳ ಅಂತರಂಗದಲ್ಲಿ ವೀತರಾಗ ಸ್ವಭಾವದ ದೃಷ್ಟಿಯಂತೂ ಪ್ರಕಟವಾಗಿದೆ. ಆದರೆ ಅವರಿಗೆ ಇನ್ನೂ ವಿಶೇಷ ವೀತರಾಗತೆಯು ಪ್ರಕಟವಾಗಿಲ್ಲ. ಅವರು ಯಾವಾಗ ಸ್ವಯಂ ನಿರ್ವಿಕಲ್ಪ ಧ್ಯಾನದಲ್ಲಿ ಇಳಿದು ಹೋಗುವುದಿಲ್ಲ, ಆಗ ಅವರುಗಳಿಗೆ ಶುಭರಾಗವು ಬರುತ್ತಲೇ ಇರುತ್ತದೆ. ನಾಲ್ಕನೆಯ-ಐದನೆಯ ಗುಣಸ್ಥಾನಗಳಲ್ಲಿರುವ ಜ್ಞಾನಿಗಳು ಕೂಡ ಯಾವಾಗ ಸಿದ್ಧರಂತಿರುವ ನಿರ್ವಿಕಲ್ಪ ಆನಂದದ ಅನುಭವವನ್ನು ಆಂಶಿಕವಾಗಿ ಮಾಡುತ್ತಿರುತ್ತಾರೆ ಆಗ ಅವರಿಗೆ ಬುದ್ಧಿಪೂರ್ವಕವಾಗಿ ಶುಭಾಶುಭ ಭಾವಗಳು ಇರುವುದಿಲ್ಲ. ಯಾವಾಗ ನಿರ್ವಿಕಲ್ಪದಶೆಯ ಅವಸರವು ಇರುವುದಿಲ್ಲ ಆಗ ಮಾತ್ರ ಶುಭಭಾವಗಳು ಬರುತ್ತಿರುತ್ತವೆ.

ಧರ್ಮಾತ್ಮನ ಆಂತರ್ಯದಲ್ಲಿ ಪೂರ್ಣ ಸ್ವಭಾವದ ದೃಷ್ಟಿಯು ಪ್ರಕಟವಾಗುತ್ತದೆ, ಆದರೆ ಇನ್ನೂ ಪರ್ಯಾಯದಲ್ಲಿ ಚೈತನ್ಯದ ಪೂರ್ಣತೆಯ ವಿರಹವಿದೆ ಮತ್ತು ಬಾಹ್ಯದಲ್ಲಿ ತೀರ್ಥಂಕರ ಪ್ರಭುಗಳ ವಿರಹವಿದೆ.

ಅಯ್ಯಾ ಮಹಾನುಭಾವರೇ ! ಒಂದಿಷ್ಟು ನೋಡಿಯಾದರೂ ನೋಡಿರಿ ! ಯಾವಾಗ ನಿರ್ವಿಕಲ್ಪ ಅನುಭವದಲ್ಲಿ ಸ್ಥಿರವಾಗಲಾಗುತ್ತದೆ ಅಲ್ಲಿ ಸಾಧನದ ಅವಲಂಬನವು ಇರುತ್ತದೆಯೇನು ? ಆ ಸಮಯದಲ್ಲಿ ಅಂತರ್ಯದಲ್ಲಿರುವ ದ್ರವ್ಯದ ಹೊರತಾಗಿ ಬೇರೆ ಯಾವುದರ ಅವಲಂಬನವೇ ಇರುವುದಿಲ್ಲ. ಆದುದರಿಂದ ರಾಗದ ಸಮಯದಲ್ಲಿ ಕೂಡ ಒಂದು ಚೈತನ್ಯ ಸ್ವಭಾವವನ್ನು ಹೊರತುಪಡಿಸಿ ಬೇರೆ ಯಾವುದರ ಅವಲಂಬನದಿಂದ ಧರ್ಮವಾಗುವುದಿಲ್ಲವೆಂಬುದನ್ನು ನಿರ್ಣಯ ಮಾಡಿಕೊಳ್ಳಬೇಕಾಗುವುದು.

ಶುಭಭಾವದ ಸಮಯದಲ್ಲಿ ಸರ್ವಜ್ಞದೇವರ ಭಕ್ತಿಯ ಭಾವವು ನಿಯಮದಿಂದ ಬರುತ್ತದೆ. ಅದರಲ್ಲಿ ಕುದೇವ ಮೊದಲಾದವರ ಕುರಿತು ರಾಗದ ನಿಷೇಧವು ಸ್ವಾಭಾವಿಕವಾಗಿ ಆಗಿ ಹೋಗುತ್ತದೆ. ರಾಗದ ಸಮಯದಲ್ಲಿ ಕುದೇವ ಮೊದಲಾದವರ ರಾಗದ ನಿಷೇಧದ ಸಲುವಾಗಿ ಅದರಂತೆ ಅಶುಭರಾಗದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಧರ್ಮಾತ್ಮರುಗಳಿಗೆ ಭಗವಂತರುಗಳ ಭಕ್ತಿ-ಪೂಜೆ ಮೊದಲಾದವುಗಳ ಶುಭರಾಗವು ಉತ್ಪನ್ನವಾಗುತ್ತದೆ. ಆ ಸಮಯದಲ್ಲಿ ಅಶುಭರಾಗವು ಆಗುವುದಿತ್ತು ಮತ್ತು ಅದರ ನಿಷೇಧ ಮಾಡಲಾಯಿತೆಂಬುದಾಗಿಯೂ ಇಲ್ಲ, ಆದರೆ ಶುಭರಾಗದ ಸಮಯದಲ್ಲಿ ಅಶುಭರಾಗವು ಆಗಲಿಲ್ಲವೆಂಬ ಅಪೇಕ್ಷೆಯಿಂದ ಅದರ ನಿಷೇಧ ಮಾಡಿತೆಂದು ಹೇಳಲಾಗುತ್ತದೆ.

ಅಜ್ಞಾನಿಗಳಂತೂ ಭಕ್ತಿ ಮೊದಲಾದವುಗಳ ರಾಗದಿಂದಲೇ ಧರ್ಮವಾಗುವುದೆಂದು ಮನ್ನಿಸಿಕೊಂಡು ಕುಳಿತುಕೊಂಡಿದ್ದಾರೆ. ಆದರೆ ಜ್ಞಾನಿಗಳು ಆ ರಾಗವನ್ನು ಧರ್ಮವೆಂದು ಮನ್ನಿಸುವುದೇ ಇಲ್ಲ. ಜ್ಞಾನಿಗಳಿಗೆ ರಾಗವು ಹೇಗೆ ಆಗುತ್ತದೆಯೆಂಬುದರ ಸಲುವಾಗಿ ಮೂರು ಕಾರಣಗಳನ್ನು ಹೇಳಿದ್ದಾರೆ -

೧) ಮೇಲಿನ ಅಪ್ರಮತ್ತ ಗುಣಸ್ಥಾನದಲ್ಲಿ ಹೋಗುವ ಸಾಧ್ಯತೆಯಿಲ್ಲದಿರುವುದರಿಂದ ರಾಗವಾಗುತ್ತದೆ.

೨) ಕುದೇವ ಮೊದಲಾದವರ ಕುರಿತು ರಾಗದ ನಿಷೇಧ ಮಾಡುವ ಸಲುವಾಗಿ ಮತ್ತು

೩) ತೀವ್ರತರವಾದ ಅಶುಭಪರಿಣಾಮದಿಂದ ತಪ್ಪಿಸಿಕೊಳ್ಳುವ ಸಲುವಾಗಿ.

ಧರ್ಮಾತ್ಮನಿಗೆ ಧರ್ಮಾನುರಾಗವು ಉತ್ಪನ್ನವಾಗುತ್ತದೆ. ನಿಜವಾಗಿಯಂತೂ ಅದು ಶುಭರಾಗದ ಸಮಯವಿರುವುದರಿಂದ ಆ ರಾಗವು ಉತ್ಪನ್ನವಾಗಿದೆ. ವಿಷಯಗಳ ರಾಗವನ್ನು ನಿಷೇಧಮಾಡುವ ಸಲುವಾಗಿ ಶುಭರಾಗವು ಉತ್ಪನ್ನವಾಗಿದೆಯೆಂದು ಹೇಳುವುದು ಕೇವಲ ಉಪಚಾರದ ಕಥನವಿದೆ. ಧರ್ಮಾತ್ಮ ಪುರುಷನು ತಿಳಿದುಕೊಂಡಿರುವುದೇನೆಂದರೆ ನನ್ನ ಜ್ಞಾತಾ-ದೃಷ್ಟಾ ಸ್ವಭಾವದಲ್ಲಿಯಂತೂ ರಾಗವು ಇಲ್ಲವೇ ಇಲ್ಲ. ನಾನು ಆ ನನ್ನ ಸ್ವಭಾವದಲ್ಲಿ ಸ್ಥಿರವಿರುವ ಸಾಧ್ಯತೆಯಾಗದಿರುವುದರಿಂದ ಈ ರಾಗವು ಉತ್ಪನ್ನವಾಗಿದೆ ಆದರೆ ಇದಂತೂ ಆಸ್ರವವಿದೆ. ಅದು ನನಗೆ ಧರ್ಮದಲ್ಲಿ ಸಾಧನವಾಗುವುದಿಲ್ಲ. ಅದನ್ನು ಧರ್ಮದ ಸಾಧನವೆಂದು ಮನ್ನಿಸುವುದರಿಂದ ಅಜ್ಞಾನಿಗಳಿಗೆ ರಾಗವಾಗುತ್ತದೆ. ಎಂದರೆ ಅವರಿಗಂತೂ ಮಿಥ್ಯಾತ್ವಸಹಿತದ ರಾಗವಿದೆ. ಆದರೆ ಧರ್ಮಾತ್ಮನು ಈ ರಾಗವು ನನಗೆ ಅಸ್ಥಿರತೆಯಲ್ಲಿ ಕಾರಣವಾಗುತ್ತದೆಯೆಂದು ತಿಳಿಯುತ್ತಾನೆ. ಈ ಪ್ರಕಾರ ರಾಗವನ್ನು ಆಸ್ರವದ ರೂಪದಲ್ಲಿ ತಿಳಿದುಕೊಳ್ಳಬೇಕಾಗುವುದು, ಸ್ವೀಕರಿಸಬೇಕಾಗುವುದು. ರಾಗದ ಸಮಯದಲ್ಲಿ ರಾಗವಾಗುತ್ತದೆಯೆಂಬುದನ್ನು ತಿಳಿದುಕೊಳ್ಳುವುದಿಲ್ಲ, ಮತ್ತು 'ನಾನಂತೂ ನಿರ್ವಿಕಲ್ಪನಾಗಿಯೇ ಇದ್ದೇನೆ'ಂದು ಮನ್ನಿಸಿದರೆ ಅಂಥ ಜೀವನಿಗಂತೂ ತತ್ತ್ವದ ಪ್ರತೀತಿಯೇ ಇಲ್ಲವೆಂದು ನಿರ್ದಿಷ್ಟವಾಗಿ ಹೇಳಬೇಕಾಗುವುದು. ಕಲ್ಯಾಣದ ಅಪೇಕ್ಷೆಯುಳ್ಳವರು ಯೋಗ್ಯ ವಿಚಾರ ಮಾಡಬೇಕು.

ಈಗ ಅನುಕಂಪೆ ಎಂದರೆ ದಯೆಯ ಸ್ವರೂಪವನ್ನು ಹೇಳುತ್ತಾರೆ - ಪುಣ್ಯರೂಪವಿರುವ ಆಸ್ರವದ ವಿಚಾರ ಇಲ್ಲಿ ಬಂದಿರುತ್ತದೆ. ಅದರ ಸಲುವಾಗಿ ಸೂತ್ರ ಹೇಳುತ್ತಾರೆ -

**ತಿಸಿದಂ ವ ಭುಕ್ಖಿದಂ ವಾ ದುಹಿದಂ ದಟ್ಠೂಣ ಜೋ ದು ದುಹಿದಮಣೋ ।**
**ಪಡಿವಜ್ಜದಿ ತಂ ಕಿವಯಾ ತಸ್ಸೇಸಾ ಹೋದಿ ಅಣುಕಂಪಾ ॥೧೩೭॥**

**ಯಾವ ಜೀವನು ತೃಷಿತ, ಕ್ಷುಧಿತ, ದುಃಖಿತನನು ನೋಡಿ ಮನದಿ ದುಃಖ ಮೇಣ್ ।**
**ಅವನ ಕುರಿತು ಕರುಣೆಯಿಂ ವರ್ತಿಪನವನಭಾವ ಅನುಕಂಪೆಯಹುದು ॥೧೩೭॥**

**ಅರ್ಥ :-** ಓರ್ವನು ಬಾಯಾರಿಕೆಯಿಂದ, ಹಸಿವೆಯಿಂದ ಬಳಲುತ್ತಿದ್ದಾನೆ ಅಥವಾ ರೋಗ ಮೊದಲಾದವುಗಳಿಂದ ದುಃಖಿಯಾಗಿದ್ದಾನೆ ಅವನನ್ನು ನೋಡಿ ಯಾವ ಪುರುಷನು ಅವನ ಪೀಡೆಯಿಂದ ಸ್ವಯಂ ದುಃಖಿಯಾಗುವನು, ದಯೆಯ ಭಾವ ಮಾಡುವನು ಮತ್ತು ಆ ಮನುಷ್ಯನ ದುಃಖವನ್ನು ದೂರ ಮಾಡುವ ಪರಿಣಾಮ ಮಾಡುವನು ಅದನ್ನು ದಯೆಯೆಂದು ಹೇಳುತ್ತಾರೆ, ಅದು ಪುಣ್ಯದ ಆಸ್ರವವಿದೆ.

**ಭಾವಾರ್ಥ :-** ದಯೆಯ ಭಾವವು ಅಜ್ಞಾನಿಗಳಿಗೆ ಆಗುತ್ತದೆ, ಅದೇ ಪ್ರಕಾರ ಜ್ಞಾನಿಗಳಿಗೆ ಕೂಡ ಆಗುತ್ತದೆ, ಆದರೆ ಅದರಲ್ಲಿರುವ ವಿಶೇಷತೆಯೇನೆಂದರೆ-ಅಜ್ಞಾನಿಗಳಿಗೆ ಯಾವ ದಯೆಯ ಭಾವವಾಗುತ್ತದೆ ಅದು ಯಾವನೋ ಓರ್ವ ದುಃಖೀ ಪುರುಷನನ್ನು ನೋಡುವುದರಿಂದ ಆಗುತ್ತದೆ ಮತ್ತು ಅವನ ದುಃಖವನ್ನು ದೂರಮಾಡುವ ಉಪಾಯದಲ್ಲಿ ತಾನು ಸ್ವಯಂ ಅಹಂಬುದ್ಧಿ ಮಾಡಿ ಆಕುಲನಾಗುತ್ತಾನೆ. ನಾನು ಅವನ ದುಃಖವನ್ನು ದೂರ ಮಾಡಿಬಿಡುವ ಸಾಧ್ಯತೆಯಿದೆಯೆಂಬ ಅಭಿಪ್ರಾಯವು ಆ ಮಿಥ್ಯಾದೃಷ್ಟಿಗೆ-ಅಜ್ಞಾನಿಗೆ ಇರುತ್ತದೆ. ತನ್ನ ಎದುರಿಗೆ ಇರುವಂಥ ಜೀವನು ದುಃಖಿಯಾಗುತ್ತಲಿದ್ದಾನೆ ಮತ್ತು ಅವನ ಅಜ್ಞಾನದ ಕಾರಣದಿಂದ ಹೀಗಾಗುತ್ತಲಿದ್ದಾನೆ. ಎದುರಿಗೆ ಇರುವಂಥ ಜೀವದ ದುಃಖದ ಪರ್ಯಾಯವನ್ನು ದೂರ ಮಾಡುವ ಸಾಮರ್ಥ್ಯವು ಜೀವದಲ್ಲಿ ಇಲ್ಲ ; ಆದಾಗ್ಯೂ ಎದುರಿಗೆ ಇರುವಂಥ ಜೀವಕ್ಕೆ ಆಹಾರ-ಪಾನೀಯ ಮೊದಲಾದುವನ್ನು ಕೊಟ್ಟು ಸುಖೀ ಮಾಡುವ ಸಾಧ್ಯತೆಯಿದೆ-ಎನ್ನುವುದು ಮಿಥ್ಯಾತ್ವ ಸಹಿತವಿರುವ ಆಕುಲತೆಯಿದೆ. ಪರಪದಾರ್ಥಗಳ ಅವಸ್ಥೆಯನ್ನು ನಾನು ಮಾಡುವ ಸಾಧ್ಯತೆಯಿದೆಯೆಂಬ ಭಾವವು ಮಿಥ್ಯೆಯಿದೆ. ಎಷ್ಟು ಕೋಮಲತೆಯ ಭಾವವಿದೆ ಅದು ಕಷಾಯ ಮಂದತೆಯ ಭಾವವಿರುವುದು ಅದು ಪುಣ್ಯವಿದೆ.

ಆಹಾರ ಮೊದಲಾದುವನ್ನು ಒದಗಿಸುವ ಭಾವ ಮಾಡುವುದು ಪಾಪವಿದೆಯೆಂದು ಅದೆಷ್ಟೋ ಜೀವಗಳು ಮನ್ನಿಸುತ್ತಾರೆ, ಅದರ ಸಲುವಾಗಿ ಅವರು ಕೊಡುವ ತರ್ಕವೇನೆಂದರೆ, ಹನ್ನೊಂದನೆಯ ಪ್ರತಿಮೆಯನ್ನು ಧಾರಣ ಮಾಡಿದ ಶ್ರಾವಕನಿಗೆ ಕೂಡ ಅತ್ಯಾಗ ಭಾವವು ವರ್ತಿಸುತ್ತಿರುವುದರಿಂದ ಅವನಿಗೆ ಆಹಾರ ಕೊಡುವುದೆಂದರೆ ಅತ್ಯಾಗ ಭಾವದ ಅನುಮೋದನೆ ಮಾಡುವಂತಿರುವುದರಿಂದ ಪಾಪವಿದೆ. ಆದರೆ ಆ ಮನ್ನಣೆಯು ದೋಷಯುಕ್ತವಿದೆ. ಜೀವದ ತನ್ನ ಪರಿಣಾಮದ ಮೇಲೆಯೇ ಪುಣ್ಯ-ಪಾಪವಿದೆ. ಎದುರಿಗೆ ಇರುವಂಥ ಜೀವದ ಜತೆಯಲ್ಲಿ ಅದರ ಸಂಬಂಧವಿರುವುದಿಲ್ಲ.

ಮತ್ತೆ ಅದೆಷ್ಟೋ ಜೀವರುಗಳು ಮನ್ನಿಸಿಕೊಂಡಿರುವುದೇನೆಂದರೆ-ಕಟುಕನು ಕತ್ತರಿಸಲು ತೆಗೆದುಕೊಂಡು ಹೋಗುತ್ತಿರುವ ಮೇಕೆಯನ್ನು ಕಟುಕನಿಗೆ ಹಣಕೊಟ್ಟು ಬಿಡಿಸಿಕೊಳ್ಳುವುದರಿಂದಂತೂ ಅವನು ಆ ಹಣದಿಂದ ಇನ್ನೂ ಹೆಚ್ಚು ಮೇಕೆಗಳನ್ನು ತೆಗೆದುಕೊಂಡು ಬರುತ್ತಾನೆ ಮತ್ತು ಇನ್ನೂ ಹೆಚ್ಚಿನ ಹಿಂಸೆಯನ್ನು ಮಾಡುತ್ತಾನೆ ಮತ್ತು ಅದರಿಂದಂತೂ ತಮಗೆ ಪಾಪ ತಗಲುವುದು, ಆದುದರಿಂದ ಅದು ಕೂಡ ದೋಷವಿದೆ. ಎದುರಿಗೆ ಇರುವಂಥ ಜೀವದ ಪರ್ಯಾಯದಿಂದ ಪಾಪವು ತಗಲುವುದಿಲ್ಲ. ತಾನು ದಯೆಯ ಪರಿಣಾಮ ಮಾಡಿದರೆ ಅದು ಪುಣ್ಯವಿದೆ. ಎದುರಿಗೆ ಇರುವಂಥ ಜೀವದ ಪರಿಣಾಮದ ಜತೆಯಲ್ಲಿ ಸಂಬಂಧವಿರುವುದಿಲ್ಲ. ಆದರೆ ನಾನು ಇಂತಿಷ್ಟು ಜೀವಗಳನ್ನು ಬದುಕಿಸುವ ಸಾಧ್ಯತೆಯಿದೆಯೆಂಬ

ಮನ್ನಣೆಯು ಮಿಥ್ಯಾತ್ವವಿದೆ. ಅದರಿಂದ ಮಹಾನ ಪಾಪದ ಬಂಧವಾಗುತ್ತದೆ. ಇದು ಬಹಿರ್ಮುಖ ದೃಷ್ಟಿಯ ಜೀವರುಗಳಿಗೆ ತಿಳಿದುಬರುವುದು ಕಠಿಣವಿದೆ.

ಮತ್ತೆ ಅದೆಷ್ಟೋ ಜೀವರುಗಳು ಮನ್ನಿಸಿಕೊಂಡಿರುವುದೇನೆಂದರೆ ಸ್ವರೂಪ ಸಂಯತ ಎಂದರೆ ನಿಜಶುದ್ಧಾತ್ಮನಲ್ಲಿ ನಿಮಗ್ನರಿರುವಂಥ ಮುನಿರಾಜರುಗಳಿಗೆ ಆಹಾರ-ಪಾನೀಯಗಳನ್ನು ಕೊಡುವುದರಿಂದ ನಿರ್ಜರೆಯಾಗುತ್ತದೆಯೆಂದು ಹೇಳುವುದು ಕೂಡ ಅಸತ್ಯ ವಚನವಿದೆ. ಏಕೆಂದರೆ ತಾನು ಸ್ವಯಂ ಶುಭಭಾವ ಮಾಡಿರುವುದರಿಂದ ಅದು ಪುಣ್ಯವಿದೆ, ಆದರೆ ಧರ್ಮವಿಲ್ಲ. ಎದುರಿಗೆ ಇರುವಂಥ ಜೀವನು ಸಾತಾ ಪಡೆಯುತ್ತಾನೆ ಅದಕ್ಕಾಗಿ ಪುಣ್ಯವಿದೆಯೆಂಬುದಾಗಿಲ್ಲ, ಆದರೆ ಶುಭಭಾವ ಮಾಡಿದ್ದಾನೆ ಅದರದು ಪುಣ್ಯವಿದೆ. ಅನುಕಂಪೆಯ ಭಾವವು ಪಾಪವಿಲ್ಲ. ಅದೇ ಪ್ರಕಾರ ಧರ್ಮ ಕೂಡ ಇಲ್ಲ. ನಾನು ಇತರ ಜೀವಗಳನ್ನು ಬದುಕಿಸುವ ಸಾಧ್ಯತೆಯಿದೆ ಅದರಂತೆ ಸುಖೀ ಕೂಡ ಮಾಡುವ ಸಾಧ್ಯತೆಯಿದೆಯೆಂಬ ಮನ್ನಣೆಯು ಮತ್ತು ಎದುರಿಗೆ ಇರುವಂಥ ಜೀವನು ದುಃಖಿಯಿದ್ದಾನೆ ಅದರಿಂದಾಗಿ ನನಗೆ ಅನುಕಂಪೆಯು ಬರುತ್ತದೆಯೆಂಬ ಮನ್ನಣೆಯು ಮಿಥ್ಯಾತ್ವವಿದೆ. ಜತೆಯಲ್ಲಿ ಕಷಾಯದ ಮಂದತೆಯಿರುವುದರಿಂದ ಅದು ಅಲ್ಪ ಪುಣ್ಯವಿದೆ. ಜಡಪದಾರ್ಥಗಳ ಅವಸ್ಥೆಯು ಸ್ವತಂತ್ರವಿದೆ, ಎದುರಿಗೆ ಇರುವಂಥ ಜೀವದ ಅವಸ್ಥೆಯು ಸ್ವತಂತ್ರವಿದೆ, ರಾಗೀ ಜೀವಕ್ಕೆ ರಾಗ ಬರುವುದು ಸ್ವತಂತ್ರವಿದೆಯೆಂದು ಮನ್ನಿಸದೆ ಎದುರಿಗೆ ಇರುವಂಥ ಜೀವದ ನಿಮಿತ್ತದಿಂದ ನನಗೆ ಅನುಕಂಪೆ ಬರುತ್ತದೆ, ನನ್ನಿಂದ ಅಂಕುಡೊಂಕಾಗಿರುವ ಜಡ ಪದಾರ್ಥಗಳ ಅವಸ್ಥೆಯನ್ನು ಸರಳಗೊಳಿಸುವ ಸಾಧ್ಯತೆಯಿದೆ ಮತ್ತು ಅದರಿಂದ ಎದುರಿಗೆ ಇರುವಂಥ ಜೀವರುಗಳು ಸುಖಿಯಾಗುತ್ತಾರೆಂಬ ಮನ್ನಣೆಯು ಅಸತ್ಯವಿದೆ.

ಅದರಂತೆ ಮತ್ತೆ ಅದೆಷ್ಟೋ ಜೀವರುಗಳು ಮನ್ನಿಸಿಕೊಂಡಿರುವುದೇನೆಂದರೆ-ಕೆಲವು ಜೀವರುಗಳನ್ನು ಮರಣದ ದವಡೆಯಿಂದ ಉಳಿಸಿಕೊಳ್ಳುವ ಅನುಕಂಪೆಯ ಭಾವ ಮಾಡುವುದರಿಂದ ಮತ್ತು ಮುನಿರಾಜರುಗಳಿಗೆ ಆಹಾರಾದಿಗಳನ್ನು ಕೊಡುವುದರಿಂದ ನಿರ್ಜರೆಯಾಗುತ್ತದೆ. ಮತ್ತು ಅದರಿಂದ ಸಂಸಾರವು ಸೀಮಿತವಾಗುತ್ತದೆಯೆಂಬ ಮನ್ನಣೆಯು ಕೂಡ ಅಸತ್ಯವಿದೆ. ಆಹಾರ ಮೊದಲಾದವುಗಳನ್ನು ಕೊಡುವ ಭಾವವು ಮತ್ತು ಅನುಕಂಪೆಯ ಭಾವವು ಇವು ಶುಭವಿದ್ದು ಪುಣ್ಯವಿದೆ, ಆದರೆ ಧರ್ಮವಿಲ್ಲ. ಆಹಾರ ಮೊದಲಾದುವಂತೂ ಜಡವಿವೆ, ಅವನ್ನು ಕೊಡ-ಕೊಳ್ಳುವ ಕ್ರಿಯೆಯನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ಎದುರಿಗೆ ಇರುವಂಥ ಜೀವವು ಉಳಿದುಕೊಂಡಿದೆ ಅದು ತನ್ನ ಕಾರಣದಿಂದ ಉಳಿದುಕೊಂಡಿದೆ. ರಾಗೀ ಜೀವನಿಗೆ ರಾಗವು ಬಂದು ಬಿಟ್ಟಿದೆ ಆ ರಾಗದ ಹಾಗೂ ಪರದ ಅಧಿಪತಿಯಾಗದಿರುವುದು ಮತ್ತು ನಾನು ಜ್ಞಾತಾ-ದೃಷ್ಟಾ ಇದ್ದೇನೆಂದು ಜ್ಞಾನ ಮಾಡಿಕೊಂಡರೆ ಆಗ ಧರ್ಮವಾಗುವುದು. ಜ್ಞಾನಸ್ವಭಾವದಲ್ಲಿ ಭವಗಳಿಲ್ಲ, ಆದರೆ ವಿಕಾರದಲ್ಲಿ ಭವಗಳಿವೆ. ಆದುದರಿಂದ ವಿಕಾರದ ಅಧಿಕಾರೀತನವನ್ನು ಬಿಟ್ಟುಕೊಟ್ಟು ಜ್ಞಾನಸ್ವಭಾವದ ಅಧಿಕಾರೀತನವನ್ನು ಪ್ರಕಟಪಡಿಸಿಕೊಂಡರೆ ಭವದ ನಾಶವಾಗಿ ಹೋಗುವುದು. ದಯೆ-ಕರುಣೆ ಪಾಲಿಸುವ ಭಾವದಿಂದ ಪುಣ್ಯದ ಬಂಧವಾಗುತ್ತದೆ, ಆದರೆ ಸಂಸಾರವು ಸೀಮಿತವಾಗುವುದಿಲ್ಲ.

ಇನ್ನು ಅದೆಷ್ಟೋ ಜೀವರುಗಳು ಹೇಳುವುದೇನೆಂದರೆ-ಅಸಂಯಮಿಯಿರುವ ಜೀವನಿಗೆ ಆಹಾರ ಕೊಡುವುದರಿಂದ ಪಾಪವಾಗುತ್ತದೆಯೆನ್ನುವಂತೆಯು ಕೂಡ ಇಲ್ಲ. ಅದರಂತೆ ಇರುವಂಥ ಮುನಿಗೆ ಆಹಾರ ಕೊಡುವುದರಿಂದ ನಿರ್ಜರೆಯಾಗಿ ಸಂಸಾರದ ನಾಶವಾಗಿಹೋಗುತ್ತದೆಯೆನ್ನುವಂತೆಯು ಕೂಡ ಇರುವುದಿಲ್ಲ. ಆದರೆ ಆ ಭಾವವು ಶುಭವಿದೆ, ಪುಣ್ಯವಿದೆ. ಪರದ ಪರ್ಯಾಯದ ಮತ್ತು ರಾಗದ ಅಧಿಪತಿಯಾದರೆ ಮಿಥ್ಯಾತ್ವದ ಪಾಪವು ತಗಲುತ್ತದೆ ಮತ್ತು ಜ್ಞಾತಾ-ದೃಷ್ಟಾ ಇದ್ದುಕೊಂಡು ಸ್ವಭಾವದ ಜ್ಞಾನ ಮಾಡಿಕೊಂಡರೆ ನಿಯಮದಿಂದ ಧರ್ಮವಾಗುತ್ತದೆ. ರಾಗದಿಂದ ರಹಿತವಿರುವ ವೀತರಾಗ ಜ್ಞಾಯಕತತ್ತ್ವವನ್ನು ಅಂತರ್ಯದೊಳಗೆ ಹಿಡಿದುಕೊಂಡಲ್ಲದೆ, ಪುಣ್ಯ-ಪಾಪದಿಂದ ಪರಾಙ್ಮುಖವಾದಲ್ಲದೆ ಭವದ ಅಭಾವವೆಂದೂ ಆಗುವುದಿಲ್ಲ.

ಅಜ್ಞಾನೀ ಜೀವದ ಅನುಕಂಪೆಯು ಮಿಥ್ಯಾತ್ವ ಭಾವಸಹಿತವಿರುವುದರಿಂದ ಅವನು ಆಕುಲಚಿತ್ತನಾಗಿ ಪ್ರವರ್ತನೆ ಮಾಡುತ್ತಾನೆ.

ಜ್ಞಾನೀ ಜೀವನಿಗೆ ಕೂಡ ಅನುಕಂಪೆಯು ಬರುತ್ತದೆ. ಈಗ ಅದರ ಕುರಿತು ಹೇಳುತ್ತಾರೆ -

ಜ್ಞಾನಿಗಳಿಗೆ ನಾಲ್ಕನೆಯ, ಐದನೆಯ ಮತ್ತು ಆರನೆಯ ಗುಣಸ್ಥಾನಗಳಲ್ಲಿ ಅದೆಷ್ಟೋ ಬಾರಿ ಅನುಕಂಪೆಯು ಬಂದುಬಿಡುತ್ತದೆ. ಜ್ಞಾನಿಗಳು ಇತರ ಜೀವರುಗಳ ಕಾರಣದಿಂದ ಅನುಕಂಪೆ ಮಾಡುವುದಿಲ್ಲ. ತಾವು ತಮ್ಮ ಜ್ಞಾನ ಸ್ವಭಾವದಲ್ಲಿ ಸ್ಥಿರವಾಗಿ ಉಳಿಯುವ ಸಾಧ್ಯತೆಯಿಲ್ಲದಿರುವುದರಿಂದ ಅನುಕಂಪೆಯ ಶುಭರಾಗವು ತಮ್ಮ ಕಾರಣದಿಂದ ಮೂಡಿಬರುತ್ತದೆ. ಆಗ ಜ್ಞಾನೀ ಜೀವರುಗಳು ವಿಚಾರ ಮಾಡುವುದೇನೆಂದರೆ - ಈ ಅಜ್ಞಾನೀ ಜೀವರುಗಳು ತಮ್ಮ ಅಜ್ಞಾನದ ಕಾರಣದಿಂದ ಸ್ವಯಂ ದುಃಖಿಯಾಗುತ್ತಿದ್ದಾರೆ. ಅವರು ಕ್ಷುಧೆ, ತೃಷೆಗಳ ಕಾರಣದಿಂದ ದುಃಖಿಯಾಗುತ್ತಿಲ್ಲವೆಂಬುದನ್ನು ಜ್ಞಾನಿಗಳು ತಿಳಿದುಕೊಂಡಿರುತ್ತಾರೆ. ಆದರೆ ತಮ್ಮಲ್ಲಿ ನಿರ್ವಿಕಲ್ಪದಶೆಯು ಉತ್ಪನ್ನವಾಗದಿರುವುದರಿಂದ ಆಗ ಕೆಲವು ಸಮಯದವರೆಗೆ ಶುಭರಾಗವು ಬಂದುಹೋಗುತ್ತದೆ. ಎದುರಿಗೆ ಇರುವಂಥ ಜೀವದ ಕಾರಣದಿಂದ ಇಲ್ಲ, ಆದರೆ ತಮ್ಮದೇ ಆದ ಅಶಕ್ತತೆಯ ಕಾರಣದಿಂದ ರಾಗವು ಆಗಿಹೋಗುತ್ತದೆ, ಆದರೆ ಆ ರಾಗದಲ್ಲಿ ಶಕ್ತಿಯಿರುವುದಿಲ್ಲ. ದೃಷ್ಟಿಯಂತೂ ಜ್ಞಾತಾ-ದೃಷ್ಟಾ ಸ್ವಭಾವದ ಮೇಲೆಯೇ ಕೇಂದ್ರಿತವಾಗಿರುತ್ತದೆ.

ಜ್ಞಾನಿಗಳು ತಮ್ಮ ಆತ್ಮನನ್ನು ತಿಳಿದುಕೊಳ್ಳುವುದರಿಂದಲೇ ಪರಪದಾರ್ಥಗಳ ಅವಸ್ಥೆಯನ್ನು ಯಥಾರ್ಥವಾಗಿ ತಿಳಿದುಕೊಳ್ಳುತ್ತಾರೆ. ಎಂದರೆ ಎದುರಿಗೆ ಇರುವಂಥ ಜೀವವು ಕ್ಷುಧೆ-ತೃಷೆಗಳ ಕಾರಣದಿಂದ ದುಃಖಿಯಾಗುತ್ತಿಲ್ಲ, ಆದರೆ ತನ್ನ ಅಜ್ಞಾನದ ಕಾರಣದಿಂದ ದುಃಖಿಯಿದೆ. ತಮ್ಮ ಅಶಕ್ತತೆಯ ಕಾರಣದಿಂದಾಗಿ ವಿಕಲ್ಪಗಳು ಉತ್ಪನ್ನವಾಗುತ್ತಿವೆ, ಅವು ಪುದ್ಗಲಭಾವವಿವೆ, ಆದರೆ ಅವರಿಗೆ ಮಿಥ್ಯಾತ್ವದ ಪಾಪವಾಗುವುದಿಲ್ಲ.

ಜ್ಞಾನಸ್ವಭಾವದಲ್ಲಿ ವಿಕಲ್ಪತೆಗಾಗಲಿ ಅಥವಾ ಆಕುಲತೆಗಾಗಲಿ ಸ್ಥಾನವೇ ಇರುವುದಿಲ್ಲವೆಂಬ ಜ್ಞಾನವಿದ್ದರೂ ಕೂಡ ರಾಗೀ ಜೀವನಿಗೆ ಪೂರ್ಣ ವೀತರಾಗ ದಶೆಯು ಉತ್ಪನ್ನವಾಗುವ ಮೊದಲು ರಾಗವು ಬಂದ ಹೊರತಾಗಿ ಇರುವುದೇ ಇಲ್ಲ. ಅನಂತ ಸಂಸಾರಕ್ಕೆ ಕಾರಣರೂಪವಿರುವಂಥ ರಾಗವು ಆಗುವುದಿಲ್ಲ ; ಆದರೆ ಅಲ್ಪ ಮಾತ್ರ ರಾಗವಾಗುತ್ತದೆ ಮತ್ತು ಅದು ಕೂಡ ಬೇಗನೆ ಹೊರಟು ಹೋಗುತ್ತದೆ.

ಅಜ್ಞಾನೀ ಜೀವರುಗಳು ವಸ್ತುವಿನ ಸ್ವರೂಪವನ್ನು ತಿಳಿದುಕೊಳ್ಳುವುದೇ ಇಲ್ಲ ಮತ್ತು ಪರದ ಪರ್ಯಾಯವನ್ನು ಪರಿವರ್ತಿಸುವುದರ ಬೆನ್ನು ಹತ್ತಿರುತ್ತಾರೆ, ಅದರ ಸಲುವಾಗಿ ಆಕುಲತೆಯನ್ನೇ ಮಾಡುತ್ತಿರುತ್ತಾರೆ. ಇಂಥ ಪ್ರಸಂಗದ ಕಾರಣದಿಂದ ಅಜ್ಞಾನೀ ಜೀವರುಗಳು ದುಃಖಿಯಾಗಿರುತ್ತಾರೆ. ಜ್ಞಾನಿಗಳಿಗೆ ತಮ್ಮ ಕಾರಣದಿಂದ ಖೇದವಾಗುತ್ತದೆ. ಎಷ್ಟು ಪ್ರಮಾಣದಲ್ಲಿ ಭೇದಜ್ಞಾನವು ವರ್ತಿಸುತ್ತದೆ ಅಷ್ಟು ಪ್ರಮಾಣದಲ್ಲಿ ಸಂವರ-ನಿರ್ಜರೆಗಳಿರುತ್ತವೆ ಮತ್ತು ಎಷ್ಟು ಪ್ರಮಾಣದಲ್ಲಿ ಪುಣ್ಯದ ಆಸ್ರವವಿದೆ ಅಷ್ಟು ಪ್ರಮಾಣದಲ್ಲಿ ಬಂಧವಿದೆ.

**ಪ್ರಶ್ನೆ :-** ಜ್ಞಾತಾ-ದೃಷ್ಟಾವಾಗಿ ಹೋದರೆ ?

**ಉತ್ತರ :-** ವೀತರಾಗದಶೆಯು ಪ್ರಕಟವಾಗಿ ಹೋದರಂತೂ ಆ ದಶೆಯಲ್ಲಿ ಯಾವುದೇ ಪ್ರಕಾರದ ಪ್ರಶ್ನೆಯೇ ಇರುವುದಿಲ್ಲ, ಆದರೆ ಛದ್ಮಸ್ಥ ರಾಗೀ ಜೀವರುಗಳಿಗೆ ರಾಗವು ಬಂದೇ ಬಿಡುತ್ತದೆ. ತನ್ನನ್ನು ತಿಳಿದುಕೊಳ್ಳದಿರುವುದರಿಂದ ಪರವನ್ನು ತಿಳಿದುಕೊಳ್ಳುವ ವಿಕಲ್ಪವು ವರ್ತಿಸುತ್ತದೆ ಮತ್ತು ದುಃಖೀ ಜೀವರುಗಳನ್ನು ತಿಳಿದುಕೊಳ್ಳುವುದರಿಂದ ರಾಗೀ ಜೀವಕ್ಕೆ ತನ್ನ ಕಾರಣದಿಂದ ಒಂದಿಷ್ಟು ಖೇದವಾಗಿ ಹೋಗುತ್ತದೆ. ಎದುರಿಗೆ ಇರುವಂಥ ಜೀವವು ಸಂಯೋಗಗಳ ಕಾರಣದಿಂದ ದುಃಖಿಯಾಗಿದೆಯೆಂದು ಅಜ್ಞಾನಿಯು ಮನ್ನಿಸುತ್ತಾನೆ ಮತ್ತು ಎದುರಿಗೆ ಇರುವಂಥ ಜೀವವು ತನ್ನ

ಅಜ್ಞಾನದ ಕಾರಣದಿಂದ ದುಃಖಿಯಾಗಿದೆಯೆಂದು ಜ್ಞಾನಿಗಳು ತಿಳಿದುಕೊಳ್ಳುತ್ತಾರೆ, ಆದರೆ ರಾಗೀ ಜೀವನಿಗೆ ರಾಗವು ಬಂದೇ ಬಿಡುತ್ತದೆ. ಕೇವಲಜ್ಞಾನಿಗಳು ಎಲ್ಲವನ್ನು ತಿಳಿದುಕೊಳ್ಳುತ್ತಾರೆ, ಆದರೆ ಅವರಿಗೆ ರಾಗವೇ ಇಲ್ಲದಿರುವುದರಿಂದ ರಾಗವಾಗುವುದಿಲ್ಲ.

ಮಿಥ್ಯಾದೃಷ್ಟಿ ಜೀವರುಗಳಿಗೆ ಮಿಥ್ಯಾತ್ವಸಹಿತವಿರುವ ಪುಣ್ಯದ ಆಸ್ರವವಿದೆ ಮತ್ತು ಸಮ್ಯಗ್ದೃಷ್ಟಿ ಜೀವನಿಗೆ ನಿರ್ಜರೆಸಹಿತ ಪುಣ್ಯದ ಆಸ್ರವವಿದೆ. ಇಲ್ಲಿ ಪುಣ್ಯಾಸ್ರವದ ಸ್ವರೂಪವನ್ನು ತಿಳಿಸಿಕೊಡಲಾಗಿದೆ.

ಇದು ಪುಣ್ಯ-ಪಾಪಗಳ ಆಸ್ರವದ ಅಧಿಕಾರವಿದೆ, ಶುಭಾಶುಭಭಾವಗಳು ಆಸ್ರವ ಮತ್ತು ಬಂಧದ ಕಾರಣವಿವೆ. ಆ ಕಲುಷಿತತೆಯು ಎರಡು ಪ್ರಕಾರದ್ದಿದೆ.

**ಕೋಧೋ ವ ಜದಾ ಮಾಣೋ ಮಾಯಾ ಲೋಭೋ ವ ಚಿತ್ತಮಾಸೇಜ್ಜ ।**
**ಜೀವಸ್ಸ ಕುಣದಿ ಖೋಹಂ ಕಲುಸೋ ತ್ತಿ ಯ ತಂ ಬುಧಾ ಬೇಂತಿ ।।೧೩೮।।**

**ಯಾವಾಗ ಕ್ರೋಧ, ಮಾನ, ಮಾಯೆಯಿಲ್ಲವೆ ಲೋಭ ಚಿತ್ತದಾಶ್ರಯ ಪಡೆದು ।**
**ಜೀವಕೆ ಕ್ಷೋಭೆ ಮಾಡುವಾಗ ಅದನು ಬುಧರು ಕಾಲುಷ್ಯವೆನ್ನುವರು ।।೧೩೮।।**

ಯಾವ ಸಮಯದಲ್ಲಿ ಶುದ್ಧ ಆತ್ಮನ ಆಶ್ರಯವು ಬಿಟ್ಟುಹೋಗುತ್ತದೆ ಆ ಸಮಯದಲ್ಲಿ ಕ್ರೋಧ, ಮಾನ, ಮಾಯೆ ಮತ್ತು ಲೋಭದ ಪರಿಣಾಮವು ಉತ್ಪನ್ನವಾಗುತ್ತದೆ, ಆ ಆಕುಲತೆಯ ಪರಿಣಾಮವನ್ನು ಕಲುಷಿತ ಪರಿಣಾಮವೆಂದು ಹೇಳಲಾಗುತ್ತದೆ. ಅಜ್ಞಾನೀ ಜೀವರುಗಳು ಪರದ ಪರ್ಯಾಯವನ್ನು ತಾವು ಬದಲಿಸುವ ಸಾಧ್ಯತೆಯಿದೆಯೆಂದು ಮನ್ನಿಸುತ್ತಾರೆ, ಆದರೆ ಜ್ಞಾನಿಗಳು ಮಾತ್ರ ಪರವನ್ನು ಬದಲಿಸುವ ಸಾಧ್ಯತೆಯಿಲ್ಲವೆಂದೇ ಮನ್ನಿಸುತ್ತಾರೆ. ಅವರು ಪರದ ಕಾರಣದಿಂದ ಕ್ರೋಧ ಮಾಡುವುದಿಲ್ಲ. ಅದರಂತೆ ಧರ್ಮಾತ್ಮ ಜೀವನು ತೀರ್ಥಂಕರ ಪುಣ್ಯಪ್ರಕೃತಿಯ ಬಂಧವಾದರೂ ಕೂಡ ಅದರ ಕುರಿತು ಅಭಿಮಾನ ಪಟ್ಟುಕೊಳ್ಳುವುದಿಲ್ಲ. ಆದರೆ ಚೈತನ್ಯಸ್ವಭಾವದ ದೃಢತೆಯನ್ನು ಕಾಯ್ದುಕೊಳ್ಳುತ್ತಾರೆ. ಅಜ್ಞಾನೀ ಜೀವರುಗಳು ಮಾನದಿಂದ ಎಂದರೆ ದೊಡ್ಡಸ್ತನದ ಪ್ರಾಪ್ತಿಯಿಂದ ಲಾಭವೆಂದು ಮನ್ನಿಸುತ್ತಾರೆ. ಆತ್ಮನು ಸರಳ ಸ್ವಭಾವದವನಿರುವುದರಿಂದ ವಿಪರೀತವಾದ ಭಾವವು ಅದು ಮಾಯೆಯಿದೆ. ಅಜ್ಞಾನೀ ಜೀವರುಗಳು ಮಾಯೆಯಿಂದ ಲಾಭ ಮನ್ನಿಸುತ್ತಾರೆ, ಜ್ಞಾನಿಗಳು ಪರದ ಕಾರಣದಿಂದ ಮಾಯಾಚಾರವನ್ನು ಮಾಡುವುದಿಲ್ಲ ಆತ್ಮನ ಸ್ವರೂಪವು ತನ್ನಿಂದ ತಾನು ಕಡುತೃಪ್ತವಿರುವುದರಿಂದ ವಿಪರೀತವು ಲೋಭವಿದೆ. ಅಜ್ಞಾನೀ ಜೀವರುಗಳು ಪರದಿಂದ ತೃಪ್ತಿ ಪಡೆದುಕೊಳ್ಳುವುದರ ಬೆನ್ನು ಹತ್ತಿದ್ದಾರೆ, ಆದರೆ ಜ್ಞಾನಿಗಳು ಪರದ ಕಾರಣದಿಂದ ಲೋಭದ ವಶೀಭೂತರಾಗಿ ಹೋಗುವುದಿಲ್ಲ ಎಂದರೆ ಲೋಭವನ್ನೇ ಮಾಡುವುದಿಲ್ಲ. ಶುದ್ಧಸ್ವಭಾವದ ಅವಲಂಬನೆ ತೆಗೆದುಕೊಳ್ಳುವುದರಿಂದ ಕ್ರೋಧ ಮೊದಲಾದ ಪರಿಣಾಮಗಳ ಉತ್ಪತ್ತಿಯೇ ಆಗುವುದಿಲ್ಲ, ಆದರೆ ಮಾನದ ನಿಮಿತ್ತದಿಂದ ಇಂಥ ಪರಿಣಾಮಗಳಾಗುತ್ತವೆ. ಅದರಲ್ಲಿ ಎರಡು ಪ್ರಕಾರಗಳನ್ನು ಹೇಳುತ್ತಾರೆ.

**ಭಾವಾರ್ಥ :-** ಯಾವಾಗ ಕ್ರೋಧ, ಮಾನ, ಮಾಯೆ ಮತ್ತು ಲೋಭದ ತೀವ್ರ ಉದಯವಿರುತ್ತದೆ ಆಗ ಚಿತ್ತದೊಳಗೆ ಯಾವ ಕ್ಷೋಭದ ಪರಿಣಾಮವು ಉತ್ಪನ್ನವಾಗುತ್ತದೆ ಅದು ಕಲುಷಿತ ಪರಿಣಾಮವಿದೆ. ಕರ್ಮವಂತೂ ಸ್ವಭಾವದಿಂದಲೇ ಜಡವಿರುವುದರಿಂದ ಅದೇನು ಪರಿಣಾಮ ಮಾಡಿಸುವುದಿಲ್ಲ; ಆದರೆ ಜೀವವು ಕಲುಷಿತ ಪರಿಣಾಮವನ್ನು ಸ್ವಯಂ ತನ್ನ ಕಾರಣದಿಂದಲೇ ಮಾಡುತ್ತದೆ ಮತ್ತು ಯಾವಾಗ ಆ ಕಷಾಯಗಳ ಉದಯವು ಮಂದವಾಗಿರುತ್ತದೆ ಆಗ ಸ್ವಾಭಾವಿಕವಾಗಿ ಚಿತ್ತದ ಪ್ರಸನ್ನತೆಯಿರುತ್ತದೆ. ಅದನ್ನು ವಿಶುದ್ಧಭಾವವೆಂದು ಹೇಳುತ್ತಾರೆ. ಆ ವಿಶುದ್ಧ-ಚಿತ್ತದ ಪ್ರಸನ್ನತೆಯು

ಕೆಲವೊಂದು ಸಮಯದಲ್ಲಿ ಕಷಾಯಮಂದತೆಯ ಕಾಲದಲ್ಲಿ ಅಜ್ಞಾನೀ ಜೀವರುಗಳಿಗೆ ಕೂಡ ಇರುತ್ತದೆ. ದಯೆ, ದಾನ, ಬ್ರಹ್ಮಚರ್ಯದ ಭಾವಗಳು ಅಜ್ಞಾನಿಗಳಿಗೆ ಕೂಡ ಇರುತ್ತವೆ ; ಆದರೆ ರಾಗದ ಮಂದತೆಯು ನಮಗೆ ಲಾಭದಾಯಕ-ವಿದೆಯೆಂದು ಅವರು ಮನ್ನಿಸುತ್ತಾರೆ, ಅದರಿಂದ ಮಿಥ್ಯಾತ್ವದ ಪಾಪವು ತಗಲುತ್ತದೆ.

ಚಿದಾನಂದದ ಅರಿವಿಲ್ಲದೆ-ಅನುಭೂತಿಯಿಲ್ಲದೆ ಮಹಾವ್ರತಗಳನ್ನು ಪಾಲಿಸಿದರೂ ಕೂಡ ವ್ಯರ್ಥವಿದೆ. ಆತ್ಮನ ಜ್ಞಾನವಿಲ್ಲದೆ ಕೇವಲ ಕಷಾಯದ ಮಂದತೆ-ಚಿತ್ತದ ಪ್ರಸನ್ನತೆಯು ಪುಣ್ಯವಿದೆ, ಅದರಲ್ಲಿ ಆತ್ಮನ ಧರ್ಮವು ಸ್ವಲ್ಪವೂ ಕೂಡ ಇರುವುದಿಲ್ಲ.

ಈಗ ಧರ್ಮಾತ್ಮ ಜೀವನ ಪ್ರಸನ್ನತೆಯ ಮಾತು ಹೇಳುತ್ತಾರೆ, ಸಾಧಕ ಜೀವನ ಉಪಯೋಗವು ಸರ್ವಥಾ ನಿರ್ಮಲವಾಗಿರುವುದಿಲ್ಲ. ನಾಲ್ಕನೆಯ ಗುಣಸ್ಥಾನದಿಂದ ಆರನೆಯ ಗುಣಸ್ಥಾನದವರೆಗೆ ಕೆಲವೊಂದು ಬಾರಿ ದೇವ-ಶಾಸ್ತ್ರ-ಗುರುಗಳ ಕುರಿತು ಉತ್ಸಾಹವು ಉದಿಸಿಬರುತ್ತದೆ. ಆ ಸಮಯದಲ್ಲಿ ಆ ಜಾತಿಯ ರಾಗದ ಕಾಲವಿದೆ. 'ಯದಾ' ಶಬ್ದದ ಪ್ರಯೋಗ ಮಾಡಿ ವಸ್ತುಸ್ಥಿತಿಯನ್ನು ತಿಳಿಸಿಕೊಡಲಾಗಿದೆ.

ಸಮ್ಯಗ್ದೃಷ್ಟಿಯಿರುವಂಥ ಇಂದ್ರನು ಕೂಡ ಭಗವಂತನ ಎದುರಿನಲ್ಲಿ ಉತ್ಸಾಹದಿಂದ ಕುಣಿಯಲಾರಂಭಿಸುತ್ತಾನೆ, ಆದರೆ ಆ ಸಮಯದಲ್ಲಿ ಅವನು ಅಂತರಂಗದೊಳಗೆ ತಿಳಿದುಕೊಂಡಿರುವುದೇನೆಂದರೆ-ಈ ದೇಹದ ಕ್ರಿಯೆಯು ದೇಹದ ಕಾರಣದಿಂದ ಆಗುತ್ತದೆ. ಸ್ವಭಾವದಲ್ಲಿ ಸ್ಥಿರಗೊಳ್ಳುವ ಸಾಧ್ಯತೆಯಿಲ್ಲದಿರುವುದರಿಂದ ಶುಭಭಾವವು ಬರುತ್ತದೆ, ಆದರೆ ಅದಂತೂ ನನ್ನ ಸ್ವರೂಪವಿಲ್ಲ, ನಾನಂತೂ ಜ್ಞಾನಸ್ವರೂಪನಿದ್ದೇನೆಂಬ ಅರಿವು ವರ್ತಿಸುತ್ತಿರುತ್ತದೆ. ಆದಾಗ್ಯೂ ಶುಭ ಭಾವವು ಬಂದಲ್ಲದೆ ಇರುವುದಿಲ್ಲ. ಅದೇಕೆ ಬರುತ್ತದೆಯೆಂದರೆ ಯಥಾಸಮಯದಲ್ಲಿ ಕ್ರಮಬದ್ಧಪರ್ಯಾಯದ ನಿಯಮದ ಅನುಸಾರ ಬರುತ್ತದೆ. ಕೆಲವೊಮ್ಮೆಯಂತೂ ಜ್ಞಾನಿಗಳಿಗಿಂತಲೂ ಅಜ್ಞಾನೀ ಜೀವರುಗಳಿಗೆ ಅಧಿಕ ಭಕ್ತಿಯು ಕಂಡುಬರುತ್ತದೆ ಮತ್ತು ಚಿತ್ತದ ಪ್ರಸನ್ನತೆಯು ಕೂಡ ಕಂಡುಬರುತ್ತದೆ, ಆದರೆ ಅವರಿಗೆ ಆತ್ಮನ ಅರಿವಿಲ್ಲದಿರುವುದರಿಂದ ಧರ್ಮವು ಆಗುವುದೇ ಇಲ್ಲ. ಅಜ್ಞಾನಿಗಳಿಗೆ ರಾಗದ ಆದರವಿರುತ್ತದೆ ಮತ್ತು ಜ್ಞಾನಿಗಳಿಗೆ ರಾಗದ ಆದರವಿರುವುದಿಲ್ಲ.

ಈಗ ಪಾಪಾಸ್ರವದ ಸ್ವರೂಪವನ್ನು ಹೇಳುತ್ತಾರೆ -

**ಚರಿಯಾ ಪಮಾದಬಹುಲಾ ಕಾಲುಸ್ಸಂ ಲೋಲದಾ ಯ ವಿಸಏಸು ।**
**ಪರಪರಿದಾವಪವಾದೋ ಪಾವಸ್ಸ ಯ ಆಸವಂ ಕುಣದಿ ॥೧೩೯॥**

**ಉರುಪ್ರಮಾದವುಳ್ಳವೃತ್ತಿ, ಕಲುಷತೆ, ವಿಷಯಗಳ ಕುರಿತು ಲೋಲುಪತೆ ।**
**ಪರರಿಗೆ ಪರಿತಾಪ ಮೇಣಪವಾದ ಮಾತಿವು ಪಾಪಾಸ್ರವ ಮಾಡುವವು ॥೧೩೯॥**

ಚಿತ್ತದ ಚಮತ್ಕಾರಯುಕ್ತ ದಶೆಯು ಎಂದರೆ ಶಾಂತ ದಶೆಯನ್ನು ಪ್ರತಿಬಿಂಬಿಸುವಂಥ ಪ್ರಮಾದದಿಂದ ಕೂಡಿರುವಂಥ ಕ್ರಿಯೆಯು ಕೆಲವೊಂದು ಬಾರಿ ಮುನಿಗಳಿಗೆ ಕೂಡ ಆರ್ತಧ್ಯಾನದ ರೂಪದಿಂದ ಇರುತ್ತದೆ ಅದು ಪಾಪಾಸ್ರವವಿದೆ ; ಆದಾಗ್ಯೂ ಆ ಮುನಿರಾಜರುಗಳು ಪಾಪದ ಅಧಿಕಾರಿಯಾಗುವುದಿಲ್ಲ. ಅಜ್ಞಾನಿಗಳಿಗೆ ಕೇವಲ ಒಂದು ಅಜ್ಞಾನದ ಪ್ರಮಾದವಿದೆ. ಕಲುಷತೆಯ ಪರಿಣಾಮವು ಜ್ಞಾನೀ-ಅಜ್ಞಾನಿಗಳೀರ್ವರಿಗೂ ಇರುತ್ತದೆ, ಆದರೆ ಈರ್ವರ ದೃಷ್ಟಿಯಲ್ಲಿ ಮಹಾನ ಅಂತರವಿರುತ್ತದೆ.

ಅಜ್ಞಾನೀ ಜೀವರುಗಳು ಐದು ಇಂದ್ರಿಯಗಳ ವಿಷಯಗಳಲ್ಲಿ ಸುಖವಿದೆಯೆಂದು ಮನ್ನಿಸುತ್ತಾರೆ, ಆದರೆ ಜ್ಞಾನಿಗಳಿಗೆ ಒಂದು ಚೈತನ್ಯದ ದೃಷ್ಟಿಯನ್ನು ಹೊರತುಪಡಿಸಿ ಬೇರೆಡೆಯಲ್ಲಿ ಲೋಲುಪತೆಯಾಗುವುದಿಲ್ಲ, ಅಲ್ಪತರದ

ಅಶುಭಭಾವವು ಆಗುತ್ತದೆ. ಇತರ ಜೀವರುಗಳಿಗೆ ದುಃಖವನ್ನುತ್ಪನ್ನ ಮಾಡುವ ಭಾವ, ನಿಂದೆ ಮಾಡುವ ಭಾವ, ಕೆಡುಕು ಮಾತುಗಳನ್ನು ಆಡುವ ಭಾವ ಇವೇ ಮೊದಲಾದವುಗಳೆಲ್ಲವು ಅಶುಭ ಭಾವಗಳಿವೆ. ಅಜ್ಞಾನಿಗಳಿಗೆ ವಸ್ತುಸ್ವರೂಪವು ಮರೆತುಹೋಗಿರುವುದರಿಂದ ಎಂದರೆ ಬಿಟ್ಟು ಹೋಗಿರುವುದರಿಂದ ಅಶುಭಭಾವಗಳಿರುತ್ತವೆ ಮತ್ತು ಜ್ಞಾನಿಗಳಿಗೆ ಸ್ವಭಾವದ ಶ್ರದ್ಧೆಯು ಬಿಟ್ಟುಹೋಗಿ ಅಶುಭಭಾವಗಳಾಗುವುದಿಲ್ಲ. ಆ ಅಶುಭಭಾವವು ಪಾಪದ ಆಸ್ರವವಿದೆ.

**ಭಾವಾರ್ಥ :-** ವಿಷಯ-ಕಷಾಯ ಮೊದಲಾದ ಅಶುಭ ಕ್ರಿಯೆಗಳಿಂದ ಜೀವಕ್ಕೆ ಅಶುಭಪರಿಣಾಮವಾಗುತ್ತದೆ. ಅದನ್ನು ಪಾಪಾಸ್ರವವೆಂದು ಹೇಳುತ್ತಾರೆ. ಅದರ ನಿಮಿತ್ತ ಪಡೆದುಕೊಂಡು ಮನ-ವಚನ-ಕಾಯದ ಯೋಗದ ಮೂಲಕ ಜಡಪರಮಾಣುಗಳು ಬರುತ್ತವೆ. ಅವನ್ನು ದ್ರವ್ಯಾಸ್ರವವೆಂದು ಹೇಳುತ್ತಾರೆ.

ಮನ-ವಚನ-ಕಾಯಗಳಂತೂ ಜಡವಿವೆ, ಅವೇನು ಯೋಗಗಳಿಲ್ಲ. ಆದರೆ ಯಾವುದರಿಂದ ಆತ್ಮನ ಪ್ರದೇಶಗಳು ಕಂಪಿಸುತ್ತವೆ ಅವು ಯೋಗವಿವೆ. ಆ ಯೋಗಗಳು ಕರ್ಮದ ಪರಮಾಣುಗಳು ಬರುವುದರಲ್ಲಿ ನಿಮಿತ್ತವಿವೆ. ದ್ರವ್ಯದೃಷ್ಟಿಯಲ್ಲಿಯಂತೂ ಆತ್ಮನೊಳಗೆ ಆಸ್ರವಗಳು ಇಲ್ಲವೇ ಇಲ್ಲ. ಆದರೆ ಇಲ್ಲಿ ಜ್ಞಾನದ ಮುಖ್ಯತೆಯಿಂದ ಕಥನವಿರುವುದರಿಂದ ಆಸ್ರವದ ಸ್ವರೂಪವನ್ನು ನಿಮಿತ್ತ-ನೈಮಿತ್ತಿಕ ಸಂಬಂಧದಿಂದ ತಿಳಿಸಿಕೊಡಲಾಗಿದೆ. ಆತ್ಮನ ಪ್ರದೇಶಗಳ ಕಂಪನದಲ್ಲಿ ಮನಸ್ಸು ನಿಮಿತ್ತವಿದ್ದರೆ ಅದನ್ನು ಮನೋಯೋಗವೆಂದು, ವಚನವು ನಿಮಿತ್ತವಿದ್ದರೆ ಅದನ್ನು ವಚನಯೋಗವೆಂದು ಮತ್ತು ಕಾಯವು ನಿಮಿತ್ತವಿದ್ದರೆ ಅದನ್ನು ಕಾಯಯೋಗವೆಂದು ಹೇಳುತ್ತಾರೆ. ಆ ಯೋಗವು ಕರ್ಮದ ಬರುವಿಕೆಯಲ್ಲಿ ನಿಮಿತ್ತವಿದೆ.

ಕ್ರಿಯೆಯು ಕರ್ಮವಿದೆ, ಪರಿಣಾಮದಿಂದ ಬಂಧವಿದೆ ಮತ್ತು ಉಪಯೋಗವು ಧರ್ಮವಿದೆ. ಆದರೆ ಅಜ್ಞಾನೀ ಜೀವರುಗಳು ಇದರ ಅರ್ಥವನ್ನು ತಿಳಿದುಕೊಳ್ಳುವುದಿಲ್ಲ.

**ಕ್ರಿಯೆಯು-ಕರ್ಮ:-**ಆತ್ಮನ ಪ್ರದೇಶಗಳ ಕಂಪನರೂಪ ಕ್ರಿಯೆಯ ನಿಮಿತ್ತದಿಂದ ಜಡಕರ್ಮಗಳ ಆಗಮನ ವಾಗುತ್ತದೆ. (ಮನ-ವಚನ-ಕಾಯದ ಕ್ರಿಯೆಯ ಮಾತಿಲ್ಲ.)

**ಪರಿಣಾಮದಿಂದ ಬಂಧ :-**ಶುಭಾಶುಭ ಭಾವಗಳಿಂದ ಬಂಧವಿದೆ.

**ಉಪಯೋಗವು ಧರ್ಮವಿದೆ :-**ಜಡದ ಕ್ರಿಯೆಯನ್ನು ನಾನು ಮಾಡುವ ಸಾಧ್ಯತೆಯೇ ಇಲ್ಲ, ನಾನಂತೂ ಕೇವಲ ಜ್ಞಾನಸ್ವರೂಪನಿದ್ದೇನೆಂಬ ಅರಿವು ಉಂಟಾಗುತ್ತಿರುವಂತೆಯೇ ಶುದ್ಧಉಪಯೋಗವು ಪ್ರಕಟವಾಗುತ್ತದೆ ಇದು ಧರ್ಮವಿದೆ.

ಮನ-ವಚನ-ಕಾಯದ ಪ್ರವೃತ್ತಿಯನ್ನು ತಡೆಯಬೇಕೆಂದು ಅಜ್ಞಾನೀ ಜೀವರುಗಳು ಹೇಳುತ್ತಿರುತ್ತಾರೆ, ಆದರೆ ಜಡದ ಪ್ರವೃತ್ತಿಯನ್ನು ಆತ್ಮನು ತಡೆಯುವ ಸಾಧ್ಯತೆಯಿದೆಯೇನು ? ಆತ್ಮನ ಪರಿಸ್ಪಂದನವನ್ನು ತಡೆದರೆ ತಡೆಯುವ ಸಾಧ್ಯತೆಯಿದೆಯೇನು ? ಆತ್ಮನ ಜ್ಞಾನ ಮಾಡಿಕೊಂಡು ಶುಭಾಶುಭ ಭಾವಗಳನ್ನು ಆಗಗೊಡದಿರುವುದು ಮತ್ತು ಆತ್ಮನಲ್ಲಿ ಏಕಾಗ್ರತೆ ಮಾಡಿದರೆ ಅದನ್ನು ಯೋಗದ ತಡೆಯುವಿಕೆಯೆಂದು ಹೇಳಲಾಗುತ್ತದೆ.

ಈ ಪ್ರಕಾರವಾಗಿ ಈ ಗಾಥೆಯಲ್ಲಿ ಪಾಪದ ಆಸ್ರವವನ್ನು ತಿಳಿಸಿಕೊಡಲಾಗಿದೆ. ಪುಣ್ಯ ಮತ್ತು ಪಾಪ ಇವೆರಡೂ ಆಸ್ರವ ಹಾಗೂ ಬಂಧದ ಕಾರಣಗಳಿವೆಯೆಂದು ಯಥಾರ್ಥ ಸ್ವರೂಪವನ್ನು ತಿಳಿದುಕೊಂಡರೆ ಆಸ್ರವದಿಂದ ರಹಿತನಿರುವ ಆತ್ಮನ ಶ್ರದ್ಧೆಯನ್ನು ಮಾಡುವ ಪ್ರಸಂಗವು ಬಂದು ಬಿಡುವುದು.

ಈಗ ಪಾಪಾಸ್ರವದ ಕಾರಣಭೂತವಿರುವ ಭಾವವನ್ನು ವಿಸ್ತಾರದಿಂದ ತಿಳಿಸಿಕೊಡುತ್ತಾರೆ -

**ಸಣ್ಣಾಓ ಯ ತಿಲೇಸ್ಸಾ ಇಂದಿಯವಸದಾ ಯ ಅಟ್ಟರುದ್ದಾಣಿ ।**
**ಣಾಣಂ ಚ ದುಪ್ಪಉತ್ತಂ ಮೋಹೋ ಪಾವಪ್ಪದಾ ಹೋಂತಿ ॥೧೪೦॥**

**ಯಾವ ಸಂಜ್ಞೆಗಳು, ಮೂರು ಲೇಶ್ಯೆಗಳು, ಇಂದ್ರಿಯವಶತೆ, ಆರ್ತರೌದ್ರಧ್ಯಾನ ।**
**ಇವಲ್ಲದೆ ದುಃಪ್ರಯುಕ್ತಜ್ಞಾನಮೇಣ್ ಮೋಹವೀಭಾವಗಳು ಪಾಪಪ್ರದವಿವೆ ॥೧೪೦॥**

ಆಹಾರ, ಭಯ, ಮೈಥುನ ಮತ್ತು ಪರಿಗ್ರಹವೆಂದು ಈ ನಾಲ್ಕು ಪ್ರಕಾರದ ಸಂಜ್ಞೆಗಳು, ಹಾಗೂ ಕೃಷ್ಣ, ನೀಲ, ಕಾಪೋತವೆಂದು ಇವು ಮೂರು ಲೇಶ್ಯೆಗಳು ಪಾಪದ ಕಾರಣಗಳಿವೆ.

ಇಂದ್ರಿಯಗಳ ಆಧೀನವಾಗುವುದು ಪಾಪದ ಕಾರಣವಿದೆ. ಅದರಂತೆ ಆರ್ತಧ್ಯಾನ-ರೌದ್ರಧ್ಯಾನದ ಪರಿಣಾಮಗಳು, ಸತ್ ಕ್ರಿಯೆಗಳಿಂದ ಭಿನ್ನವಿರುವುದು-ಅಸತ್ ಕ್ರಿಯೆಗಳಲ್ಲಿ ಜ್ಞಾನವನ್ನು ತೊಡಗಿಸುವುದು ಮತ್ತು ದರ್ಶನಮೋಹನೀಯ ಹಾಗೂ ಚಾರಿತ್ರಮೋಹನೀಯ ಕರ್ಮದ ಸಮಸ್ತ ಭಾವಗಳು ಪಾಪರೂಪ ಆಸ್ರವದ ಕಾರಣಗಳಿವೆ. ಆರ್ತ ಮತ್ತು ರೌದ್ರ ಧ್ಯಾನಗಳು ಜ್ಞಾನೀ ಶ್ರಾವಕನಿಗೆ ಕೂಡ ಎಂದಾದರೊಮ್ಮೆ ಬಂದು ಬಿಡುತ್ತವೆ, ಆದರೆ ಅವನು ಇವು ನನ್ನ ಸ್ವರೂಪವಿಲ್ಲವೆಂದು ಮತ್ತು ನಾನಂತೂ ಜ್ಞಾನಸ್ವರೂಪನಿದ್ದೇನೆಂದು ತಿಳಿದುಕೊಂಡಿರುತ್ತಾನೆ.

**ಭಾವಾರ್ಥ** :-ಜೀವನಿಗೆ ತೀವ್ರ ಮೋಹದ ಉದಯದಿಂದ ಆಹಾರ, ಭಯ, ಮೈಥುನ ಮತ್ತು ಪರಿಗ್ರಹದ ಸಂಜ್ಞೆಗಳಾಗುತ್ತವೆ ಮತ್ತು ಇವು ಪಾಪದ ಕಾರಣವಿವೆ.

**ಆಹಾರಸಂಜ್ಞೆ** – ಆತ್ಮನ ಜ್ಞಾನ ಸ್ವಭಾವವನ್ನು ಮರೆಸಿ ತಮ್ಮ ಜ್ಞಾನವನ್ನು ಆಹಾರದ ಪ್ರೀತಿಯಲ್ಲಿ ತಡೆದು ನಿಲ್ಲಿಸುವುದು ಆಹಾರಸಂಜ್ಞೆಯಿದೆ. ಸಮ್ಯಕ್‌ಪ್ರಕಾರದಿಂದ ಜ್ಞಾನವನ್ನು ಜ್ಞಾನಸ್ವಭಾವದಲ್ಲಿ ನಿಲ್ಲಿಸಿ ಬಿಡುವುದು ನಿಜವಾದ ಸಂಜ್ಞೆಯಿದೆ, ಆದರೆಅದನ್ನು ಮರೆಸಿ ಅಥವಾ ಅಸ್ಥಿರಗೊಳಿಸಿ ಆಹಾರದ ಕುರಿತಾಗಿರುವ ಪ್ರೀತಿಯಲ್ಲಿ ಜ್ಞಾನವನ್ನು ತಡೆದು ನಿಲ್ಲಿಸುವುದು ಅದು ಆಹಾರಸಂಜ್ಞೆಯಿದೆ.

ಆಹಾರವು ಬಿಟ್ಟುಹೋಗಿದೆ ಅದರಿಂದಾಗಿ ಆಹಾರದ ಸಂಜ್ಞೆಯು ಬಿಟ್ಟು ಹೋಗಿದೆಯೆಂಬುದಾಗಿ ಇಲ್ಲ. ಅದರಂತೆ ಆಹಾರ ಮಾಡಲಾಗುತ್ತಿದೆ. ಅದರಿಂದಾಗಿ ಆಹಾರ ಸಂಜ್ಞೆಯು ಇದೆಯಂಬುದಾಗಿಯೂ ಕೂಡ ಇಲ್ಲ. ಆಹಾರದ ಕ್ರಿಯೆಯ ಜತೆಯಲ್ಲಿ ಯಾವುದೇ ಸಂಬಂಧವಿಲ್ಲ, ಆದರೆ ಆ ಪ್ರಕಾರದ ರಾಗವನ್ನು ಆಹಾರಸಂಜ್ಞೆಯೆಂದು ಹೇಳಲಾಗುತ್ತದೆ.

**ಭಯಸಂಜ್ಞೆ** :- ಆತ್ಮನ ನಿರ್ಭಯವಿರುವ ಸ್ವಭಾವವನ್ನು ಬಿಟ್ಟುಕೊಟ್ಟು-ಮರೆತುಹೋಗಿ ಜ್ಞಾನವನ್ನು ಭಯದಲ್ಲಿ ತಡೆದು ನಿಲ್ಲಿಸುವುದು ಅದು ಭಯಸಂಜ್ಞೆಯಿದೆ. ಜ್ಞಾನಿಗಳಿಗೆ ಭಯವಾಗುತ್ತದೆ ನಿಜ, ಆದರೆ ನನ್ನನ್ನು ಯಾರೂ ಮೋಸಗೊಳಿಸುವ ಸಾಧ್ಯತೆಯಿಲ್ಲವೆಂದು ಅವರು ತಿಳಿದುಕೊಂಡಿರುತ್ತಾರೆ. ಅವರಿಗೆ ಕೇವಲ ಅಸ್ಥಿರತೆಯ ದೋಷವಿದೆ, ಆದರೆ ವಿಪರೀತ ಶ್ರದ್ಧೆಯ ದೋಷವಿಲ್ಲ. ಅಜ್ಞಾನಿಗಳಿಗೆ ಎರಡೂ ದೋಷಗಳಿರುತ್ತವೆ. ಅವರು ಜ್ಞಾನವನ್ನು ಮರೆತು ಹೋಗಿ ರಾಗ ಮತ್ತು ಜ್ಞಾನವನ್ನು ಒಂದು ಮಾಡಿಬಿಟ್ಟಿರುತ್ತಾರೆ. ಅದರಿಂದಾಗಿ ಅವರಿಗೆ ಮಿಥ್ಯಾತ್ವಸಹಿತವಾಗಿ ಪಾಪಾಸ್ರವವಿರುತ್ತದೆ.

**ಮೈಥುನಸಂಜ್ಞೆ** :- ತಮ್ಮ ಜ್ಞಾನವನ್ನು ಇಂದ್ರಿಯ ವಿಷಯಗಳಲ್ಲಿ ತಡೆದು ನಿಲ್ಲಿಸುವುದು ಮೈಥುನಸಂಜ್ಞೆಯಿದೆ. ಜ್ಞಾನಿಗಳಿಗೆ ವಿಷಯದ ಭಾವವು ನಾಲ್ಕನೆಯ-ಐದನೆಯ ಗುಣಸ್ಥಾನದಲ್ಲಿ ಇರುತ್ತದೆ, ಆದರೆ ದೃಷ್ಟಿಯ ಜ್ಞಾನವಿದೆ. ಆದಾಗ್ಯೂ ಎಷ್ಟು ಭಾವವಾಗುತ್ತದೆ ಅಷ್ಟು ದೋಷವಿದೆ. ಆದರೆ ಅಜ್ಞಾನಿಗಳಿಗೆ ಅರಿವಿಲ್ಲದಿರುವುದರಿಂದ ಅವರಿಗೆ ಮಿಥ್ಯಾತ್ವಸಹಿತವಾದ ಪಾಪಾಸ್ರವವಿರುತ್ತದೆ.

**ಪರಿಗ್ರಹಸಂಜ್ಞೆ :-** ತಮ್ಮ ಜ್ಞಾನವನ್ನು ಪರಿಗ್ರಹದಲ್ಲಿ ಸಿಲುಕಿಸಿಬಿಡುವುದು ಅದು ಪರಿಗ್ರಹಸಂಜ್ಞೆಯಿದೆ. ಅಜ್ಞಾನಿಗಳಂತೂ ಧನದ ಪ್ರಾಪ್ತಿಯಾಗುತ್ತಿರುವಂತಯೇ ಪರಿಗ್ರಹದ ಸಂಜ್ಞೆಯಲ್ಲಿ ಏಕಾಕಾರರಾಗಿ ಹೋಗುತ್ತಾರೆ. ಜ್ಞಾನಿಗಳಿಗೆ ಕೂಡ ಪರಿಗ್ರಹದ ರಾಗವಿರುತ್ತದೆ, ಆದರೆ ಅದು ಪರಿಗ್ರಹದ ಕಾರಣದಿಂದ ಇರುವುದಿಲ್ಲ ಆದರೆ ಅದು ತಮ್ಮ ದುರ್ಬಲತೆಯ-ಅಶಕ್ತತೆಯ ಕಾರಣದಿಂದ ಇರುತ್ತದೆ. ಆದಾಗ್ಯೂ ಎಷ್ಟು ರಾಗವಿರುತ್ತದೆ ಅದು ಪಾಪದ ಕಾರಣವಿರುತ್ತದೆ. ಈ ಪ್ರಕಾರ ಇವು ನಾಲ್ಕು ಸಂಜ್ಞೆಗಳು ಸಂಸಾರವನ್ನು ವೃದ್ಧಿಸುವಂಥವುಗಳಿವೆ. ಆದುದರಿಂದ ತಮ್ಮ ಶುದ್ಧಾತ್ಮನ ಅರಿವಿನೊಡನೆ ಅವನ್ನು ಬಿಟ್ಟುಕೊಡಬೇಕಾಗುವುದು.

ಆತ್ಮನ ಅವಸ್ಥೆಯಲ್ಲಿ ಪುಣ್ಯ-ಪಾಪದ ಪರಿಣಾಮಗಳಾಗುತ್ತವೆ, ಅವನ್ನು ಆಸ್ರವವೆಂದು ಹೇಳಲಾಗುತ್ತದೆ. ಅವು ಮೂಲ ವಸ್ತುವಿನಲ್ಲಿರುವುದಿಲ್ಲ-ಮೂಲವಸ್ತುಗಳಲ್ಲ. ಆ ಪುಣ್ಯ-ಪಾಪಗಳು ಒಂದು ಸಮಯದ ಅವಸ್ಥೆಯಲ್ಲಿ ಆಗುತ್ತವೆ. ಧರ್ಮಾತ್ಮನ ದೃಷ್ಟಿಯು ಪರ್ಯಾಯದ ಮೇಲೆ ಇರುವುದಿಲ್ಲ. ಅವನ ದೃಷ್ಟಿಯು ಚೈತನ್ಯದ ಮೇಲೆ ಇರುತ್ತದೆ. ಆದಾಗ್ಯೂ ಜ್ಞಾನಿಗಳಿಗೆ ಕೂಡ ಯಾವ ಆಸ್ರವಗಳಾಗುತ್ತವೆ ಅವುಗಳ ಜ್ಞಾನ ಮಾಡಿಸಿಕೊಡಲಾಗಿದೆ. ಅಜ್ಞಾನಿಗಳು ತಮ್ಮನ್ನು ಎಷ್ಟು ಆಸ್ರವವಿದೆ ಅಷ್ಟೇ ನಾನಿದ್ದೇನೆಂದು ಮನ್ನಿಸಿಕೊಂಡು ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡುತ್ತಿದ್ದಾರೆ. ಪಾಪವು ಅದೇನು ಪರದ ಕಾರಣದಿಂದ ಆಗುವುದಿಲ್ಲ, ಆದರೆ ಆತ್ಮನ ಆ ಸಮಯದ ಯೋಗ್ಯತೆಯ ಕಾರಣದಿಂದ ಆಗುತ್ತದೆ. ಆದರೂ ಅದು ಜೀವದ ಸ್ಥಿರವಾದ ಸ್ವರೂಪವಲ್ಲ. ಜೀವನಂತೂ ಯಾವಾಗಲೂ ತಿಳಿದುಕೊಳ್ಳುವಂಥವನು ಹಾಗೂ ನೋಡುವಂಥವನು ಇದ್ದಾನೆಂದು ಮನ್ನಿಸಿದಾಗಲೇ ಧರ್ಮವಾಗುತ್ತದೆ.

ನಾಲ್ಕು ಪ್ರಕಾರದ ಸಂಜ್ಞೆಗಳು ಮೂಲತಃ ಪಾಪದ ಕಾರಣವಿವೆ-ಆಸ್ರವದ ಕಾರಣವಿವೆಯೆಂಬ ಮಾತನ್ನು ಈ ಮೊದಲು ಹೇಳಲಾಗಿದೆ. ಈಗ ಮೂರು ಪ್ರಕಾರದ ಅಶುಭ ಲೇಶ್ಯೆಗಳ ವಿಷಯವಾಗಿ ತಿಳಿಸಿಕೊಡಲಾಗುತ್ತದೆ. ಜೀವನು ತನ್ನ ಜ್ಞಾನಸ್ವಭಾವವನ್ನು ಮರೆತುಹೋಗಿ-ಬಿಟ್ಟುಕೊಟ್ಟು, ಎಷ್ಟು ಯೋಗದ ಪ್ರವೃತ್ತಿಯಲ್ಲಿ ಕಷಾಯಸಹಿತ ತನ್ನನ್ನು ಒಂದುಗೂಡಿಸುತ್ತಾನೆ ಅದನ್ನು ಲೇಶ್ಯೆಯೆಂದು ಹೇಳಲಾಗುತ್ತದೆ. ಅದರಲ್ಲಿ ಕೃಷ್ಣ, ನೀಲ ಮತ್ತು ಕಾಪೋತವೆಂದು ಮೂರು ಅಶುಭ ಲೇಶ್ಯೆಗಳಿವೆ. ಮನ-ವಚನ-ಕಾಯಗಳಂತೂ ಜಡವಾಗಿವೆ. ಅವುಗಳ ಮಾತೇ ಇಲ್ಲ. ಆತ್ಮ ಪ್ರದೇಶಗಳ ಯಾವ ಪರಿಸ್ಪಂದನವಿದೆ ಅದು ಯೋಗದ ಕಂಪನವಿದೆ. ಕಷಾಯಗಳಿಂದ ರಂಜಿತವಾದ ಯೋಗದ ಪ್ರವೃತ್ತಿಯು ಲೇಶ್ಯೆಯಿದೆ. ಅದರಲ್ಲಿ ಯಾವ ಅಶುಭ ಲೇಶ್ಯೆಗಳಿವೆ ಅವು ಪಾಪದ ಕಾರಣಗಳಿವೆ. ಅಜ್ಞಾನೀ ಜೀವರುಗಳು ಆಸ್ರವದ ಜತೆಯಲ್ಲಿ ಏಕೀಭೂತರಾಗುತ್ತಾರೆ-ತನ್ಮಯರಾಗಿ ಹೋಗುತ್ತಾರೆ. ಜ್ಞಾನಿಗಳಿಗೆ ಆಸ್ರವದ ಮೇಲೆ ದೃಷ್ಟಿಯಿರುವುದಿಲ್ಲ. ಅವರ ದೃಷ್ಟಿಯು ಸ್ವಭಾವದ ಮೇಲೆ ಇರುತ್ತದೆ. ಆದಾಗ್ಯೂ ಎಷ್ಟು ಪ್ರಮಾಣದಲ್ಲಿ ಅಶುಭ ಲೇಶ್ಯೆಯ ಪರಿಣಾಮಗಳಾಗುತ್ತವೆ ಅಷ್ಟು ಪ್ರಮಾಣದಲ್ಲಿ ಪಾಪವಿದೆ.

ತನ್ನ ಅತೀಂದ್ರಿಯ ಸ್ವಭಾವದ ದೃಷ್ಟಿಯನ್ನು ಬಿಟ್ಟುಕೊಟ್ಟು ಇಂದ್ರಿಯಗಳ ಆಧೀನವಾಗಿ ವರ್ತಿಸುವುದು ಪಾಪಾಸ್ರವವಿದೆ. ಯಾರಿಗೆ ಅತೀಂದ್ರಿಯ ಸ್ವಭಾವದ ಅರಿವಿದೆ-ಜ್ಞಾನವಿದೆ ಅವರಿಗೆ ಅಸ್ಥಿರತೆಯ ಅಲ್ಪ ಆಸ್ರವವಿದೆ ಮತ್ತು ಯಾರು ಇಂದ್ರಿಯಗಳ ಅಭಿರುಚಿ ಮಾಡುತ್ತಾರೆ ಅವರಿಗೆ ಮಿಥ್ಯಾತ್ವ ಸಹಿತವಿರುವ ಆಸ್ರವವಿದೆ. ಆಸ್ರವವು ನನ್ನ ಸ್ವರೂಪವಲ್ಲವೆಂದು ಸಮ್ಯಗ್ದೃಷ್ಟಿಗಳು ಸರಿಯಾಗಿ ತಿಳಿದುಕೊಂಡಿರುತ್ತಾರೆ. ಆದಾಗ್ಯೂ ಅಲ್ಪ ಪ್ರಮಾಣದಲ್ಲಿ ಆಸ್ರವವಾಗಿ ಹೋಗುತ್ತದೆ. ಒಂದುವೇಳೆ ಆಸ್ರವವನ್ನು ಸರ್ವಥಾ ದೂರ ಮಾಡಿಬಿಟ್ಟರೆ ಕೇವಲಿಯಾಗಿ ಹೋಗುವನು. ಆದರೆ ಸಾಧಕನಲ್ಲಿ ಅಲ್ಪ ಪ್ರಮಾಣದಲ್ಲಿ ಇಂದ್ರಿಯ ಆಧೀನತೆಯಿರುವುದರಿಂದ ಅಷ್ಟು ಪ್ರಮಾಣದಲ್ಲಿ ಪಾಪಬಂಧವಿದೆ.

ಇಷ್ಟ ಪದಾರ್ಥಗಳ ವಿಯೋಗದಲ್ಲಿ, ಅನಿಷ್ಟ ಪದಾರ್ಥಗಳ ಸಂಯೋಗದಲ್ಲಿ ರಾಗ-ದ್ವೇಷಗಳನ್ನು ಮಾಡುವುದು, ಪೀಡೆಯ ಚಿಂತನ ಮಾಡುವುದು ಮತ್ತು ನಿದಾನಬಂಧವೆಂದು ನಾಲ್ಕು ಪ್ರಕಾರದ ಆರ್ತಧ್ಯಾನಗಳು ಪಾಪದ ಕಾರಣವಿವೆ. ಅಜ್ಞಾನೀ ಜೀವರುಗಳ ದೃಷ್ಟಿಯು ಸಂಯೋಗದ ಮೇಲೆ ಇರುತ್ತದೆ. ಜ್ಞಾನಿಗಳಿಗೆ ಸಾಧಕದಶೆಯಲ್ಲಿ ಆರ್ತಧ್ಯಾನದ ಪರಿಣಾಮಗಳಾಗುತ್ತವೆ, ಆದರೆ ಅವು ಪರದ ಕಾರಣದಿಂದ ಆಗುವುದಿಲ್ಲ. ಮುನಿರಾಜರುಗಳಿಗೆ ಕೂಡ ಕೆಲವೊಂದು ಬಾರಿ ಆರ್ತಧ್ಯಾನದ ಪರಿಣಾಮಗಳು ತಮ್ಮ ಅಶಕ್ತತೆಯ ಕಾರಣದಿಂದ ಆಗುತ್ತವೆ. ಪ್ರಥಮ ತೀರ್ಥಂಕರರಾದ ಭಗವಾನ ಋಷಭದೇವರು ಮೋಕ್ಷಕ್ಕೆ ಹೋದನಂತರ ಭರತ ಚಕ್ರವರ್ತಿಗೆ ಖೇದದ ಪರಿಣಾಮಗಳು ಆಗಿದ್ದವು ; ಆದರೆ ಅವು ತನ್ನ ಅಶಕ್ತತೆಯ ಕಾರಣದಿಂದ ಉಂಟಾಗಿದ್ದವು, ಆದರೆ ಅವನಿಗೆ ಆ ಸಮಯದಲ್ಲಿ ಕೂಡ ಆತ್ಮನ ಚೇತನ ಪ್ರವೃತ್ತಿಯು ವರ್ತಿಸುತ್ತಿತ್ತು. ಮಿಥ್ಯಾದೃಷ್ಟಿ ಜೀವರುಗಳು ಪ್ರಸಂಗದ ಕಾರಣದಿಂದ ಪರಿಣಾಮಗಳಾಗಿವೆಯೆಂದು ಮನ್ನಿಸುತ್ತಾರೆ. ಅವು ಮಿಥ್ಯಾತ್ವಸಹಿತವಿರುವ ಆರ್ತಧ್ಯಾನದ ಪರಿಣಾಮಗಳಿವೆ.

ಅಜ್ಞಾನೀ ಜೀವರುಗಳು ಶರೀರದಲ್ಲಿ ರೋಗದ ಉತ್ಪತ್ತಿಯಾದರೆ ತಮಗೇ ಆಗಿದೆಯೆಂದು ಮನ್ನಿಸಿ ತಮ್ಮ ಜ್ಞಾತಾ-ದೃಷ್ಟಾ ಸ್ವಭಾವವನ್ನು ಎಂದರೆ ಪ್ರಾಣವನ್ನು ಗಾಣದ ದಿಂಡಿನಲ್ಲಿ ಹಾಕಿ ಹಿಂಡುತ್ತಾರೆ. ತಮ್ಮ ಆನಂದಕಂದನಾದ ಪ್ರಭು ಆತ್ಮನನ್ನು ಮರೆತುಹೋಗುತ್ತಾರೆ. ಅದು ಮಿಥ್ಯಾದೃಷ್ಟಿಯ ಆರ್ತಧ್ಯಾನವಿದೆ. ಜ್ಞಾನಿಗಳಿಗೆ ತಮ್ಮ ಅಶಕ್ತತೆಯ ಕಾರಣದಿಂದ ಸಹನಶೀಲತೆಯು ಇರುವುದಿಲ್ಲ ಎಂದರೆ ವಿಕಲ್ಪಗಳು ಬರುತ್ತವೆ. ಆದಾಗ್ಯೂ ಶುದ್ಧಚೈತನ್ಯದ ಮೇಲಿರುವ ದೃಷ್ಟಿಯು ಬಿಟ್ಟುಹೋಗುವುದಿಲ್ಲ.

ತಮ್ಮ ಆತ್ಮನು ತಿಳಿಯುವಂಥವನು, ನೋಡುವಂಥವನು ಮತ್ತು ಅನಾಕುಲ ಸ್ವರೂಪದ ಚಿದ್ ಘನನಿದ್ದಾನೆಂಬ ಅರಿವು-ಪ್ರಜ್ಞೆಯು ಜ್ಞಾನಿಗಳಿಗೆ ಯಾವಾಗಲೂ ಇರುತ್ತದೆ. ತಮ್ಮಲ್ಲಿ ರಾಗವಾಗುತ್ತಿರುವುದು ಪರದ ಕಾರಣದಿಂದ ಆಗುತ್ತದೆಯೆಂದು ಅವರು ಮನ್ನಿಸುವುದಿಲ್ಲ. ಆದರೆ ಅದು ತಮ್ಮ ದುರ್ಬಲತೆಯಿಂದ ಆಗುತ್ತದೆಯೆಂದು ಮನ್ನಿಸುತ್ತಾರೆ ಮತ್ತು ಅದುಕೂಡ ಆತ್ಮನ ನಿಜವಾದ ಸ್ವರೂಪವಿಲ್ಲ. ಶುದ್ಧ ಅಂತರ್ಯವಂತೂ ಯಾವಾಗಲೂ ರಾಗದಿಂದ ರಹಿತವಿದೆಯೆಂಬ ಪ್ರಜ್ಞೆಯಿರುವುದರಿಂದ ಅವರ ಆಸ್ರವವು ಮರ್ಯಾದೆಯಲ್ಲಿ ಬಂದುಬಿಟ್ಟಿದೆ. ಇನ್ನು ಅಜ್ಞಾನೀ ಜೀವರುಗಳಂತೂ ಪರದ ಕಾರಣದಿಂದ ರಾಗವಾಗಿದೆಯೆಂದು ಮನ್ನಿಸುತ್ತಾರೆ ಮತ್ತು ಅವರು ಆ ರಾಗದಷ್ಟೇ ನಾನಿರುವೆನೆಂದು ಮನ್ನಿಸುತ್ತಿರುವುದರಿಂದ ಅವರಿಗೆ ಅನಂತಾನುಬಂಧೀ ಸಹಿತ ಎಂದರೆ ಅಮರ್ಯಾದಿತ ಆಸ್ರವವಿರುತ್ತದೆ.

**ನಿದಾನಬಂಧ :-** ಅಜ್ಞಾನೀ ಜೀವರುಗಳು ವ್ರತ-ತಪಸ್ಸಿನ ಫಲದಲ್ಲಿ ಧನದ ಅಥವಾ ಚಿನ್ನ ಮೊದಲಾದವುಗಳ ಪ್ರಾಪ್ತಿಯಾಗಲಿ, ನಾನು ಮುಂದಿನ ಭವದಲ್ಲಿ ಧನಾಢ್ಯನಾಗಿ ಉತ್ಪನ್ನನಾಗಲಿ ಇವೇ ಮೊದಲಾದ ಭಾವನೆ ಭಾವಿಸುತ್ತಾರೆ ಅದು ನಿದಾನಬಂಧರೂಪದ ಆರ್ತಧ್ಯಾನವಿದೆ.

ಸಮ್ಯಗ್ದೃಷ್ಟಿ ಜೀವರುಗಳು ಸಂಯೋಗಗಳ ಬೇಡಿಕೆ ಸಲ್ಲಿಸುವುದಿಲ್ಲ, ಅಥವಾ ಅವುಗಳ ಇಚ್ಛೆ ಮಾಡುವುದಿಲ್ಲ, ಆದರೆ ಸ್ವಭಾವದಲ್ಲಿ ಸ್ಥಿರವಿರುವ ಸಾಧ್ಯತೆಯಿಲ್ಲದಿರುವುದರಿಂದ ಒಂದಿಷ್ಟು ರಾಗವು ಉಳಿದುಕೊಂಡಿರುತ್ತದೆ. ಅದನ್ನು ನಿದಾನವೆಂದು ಗಣಿಸಿ ನಾಲ್ಕನೆಯ-ಐದನೆಯ ಗುಣಸ್ಥಾನದಲ್ಲಿ ಈ ಪ್ರಕಾರದ ಆರ್ತಧ್ಯಾನವು ಅಲ್ಪ ಪ್ರಮಾಣದಲ್ಲಿ ಇರುತ್ತದೆ, ಅದು ಆಸ್ರವವಿದೆ. ಬಂಧದ ಕಾರಣವಿದೆಯೆಂದು ಜ್ಞಾನಿಗಳು ತಿಳಿದುಕೊಂಡಿರುತ್ತಾರೆ.

ಈ ಪ್ರಕಾರ ಇಷ್ಟವಿಯೋಗ, ಅನಿಷ್ಟಸಂಯೋಗ, ಪೀಡೆಯ ಚಿಂತನೆ ಮತ್ತು ನಿದಾನಬಂಧವೆಂದು ನಾಲ್ಕು ಪ್ರಕಾರದ ಆರ್ತಧ್ಯಾನಗಳು ಪಾಪಾಸ್ರವದ ಕಾರಣಗಳಿವೆ.

ಈಗ ನಾಲ್ಕು ಪ್ರಕಾರದ ರೌದ್ರಧ್ಯಾನಗಳಿದ್ದು ಅವು ಪಾಪದ ಕಾರಣಗಳಿವೆಯೆಂದು ತಿಳಿಸಿಕೊಡಲಾಗಿದೆ. ತಮ್ಮ ಜ್ಞಾನಾನಂದ ಸ್ವಭಾವವನ್ನು ಮರೆತುಹೋಗಿ-ಬಿಟ್ಟುಕೊಟ್ಟು, ಹಿಂಸೆಯ ಪರಿಣಾಮದಲ್ಲಿ ಆನಂದ ಮನ್ನಿಸುವುದು ಅದು ಹಿಂಸಾನಂದೀ ರೌದ್ರಧ್ಯಾನದ ಪರಿಣಾಮವಿದೆ. ಇತರ ಜೀವಗಳನ್ನು ಸಾಯಿಸುವ ಸಾಧ್ಯತೆಯಿದೆಯೆಂದು ಇಲ್ಲಿ ಹೇಳಲಾಗುತ್ತಿಲ್ಲ, ಆದರೆ ಇತರ ಜೀವರುಗಳನ್ನು ಸಾಯಿಸುವ ಭಾವವನ್ನು ಇಲ್ಲಿ ಹಿಂಸೆಯೆಂದು ಹೇಳಾಲಾಗಿದೆ. ಅದರಂತೆ ಇತರ ಜೀವರುಗಳ ಶರೀರ ಮತ್ತು ಆತ್ಮನು ಬೇರೆ-ಬೇರೆಯಾಗಿ ಹೋಗಿರುವುದರಿಂದ ಹಿಂಸೆಯಾಗಿದೆಯೆಂಬುದಾಗಿಯೂ ಕೂಡ ಇಲ್ಲ. ಆದರೆ ಚಿದಾನಂದ ಸ್ವಭಾವದಿಂದ ವಿಪರೀತವಿರುವಂಥ ಭಾವ, ಇತರರನ್ನು ಸಾಯಿಸುವರೂಪದ ಉಗ್ರತರದ ಭಾವವನ್ನು ಹಿಂಸೆಯೆಂದು ಹೇಳಲಾಗಿದೆ. ಆ ಹಿಂಸೆಯಲ್ಲಿ ಆನಂದದ ಶ್ರೇಣಿಯೇರುವುದು ಎಂದರೆ ಆನಂದದ ಅತಿರೇಕತೆಯು ಅದು ಹಿಂಸಾನಂದವಿದೆ. ಮಿಥ್ಯಾದೃಷ್ಟೀ ಜೀವರುಗಳು ಅದರಲ್ಲಿ ಸುಖ ಮನ್ನಿಸುತ್ತಾರೆ. ಅಜ್ಞಾನೀ ಜೀವರುಗಳು ಹಿಂಸೆ ಮಾಡುತ್ತಿದ್ದರೆ ಮತ್ತು ಅದರಲ್ಲಿ ಆನಂದ ಮನ್ನಿಸುತ್ತಿದ್ದರೆ ಅವರಿಗೆ ಮಿಥ್ಯಾತ್ವಸಹಿತವಿರುವ ಆ ಹಿಂಸೆಯ ಪರಿಣಾಮವು ರೌದ್ರಧ್ಯಾನವಿದ್ದು ಅದು ಪಾಪದ ಕಾರಣವಿದೆ.

ಸಮ್ಯಗ್ದೃಷ್ಟಿ ಜೀವರುಗಳಿಗೆ ನಾಲ್ಕನೆಯ-ಐದನೆಯ ಗುಣಸ್ಥಾನಗಳಲ್ಲಿ ಹಿಂಸೆಯ ಪರಿಣಾಮವಿರುತ್ತದೆ, ಆದರೆ ಅದರಲ್ಲಿ ಅವರು ಆನಂದ ಮನ್ನಿಸುವುದಿಲ್ಲ. ಒಂದಿಷ್ಟು ಅಸ್ಥಿರತೆಯ ಕಾರಣದಿಂದಾಗಿ ರಾಗದೊಡನೆ ಏಕತೆಯಾಗುತ್ತದೆ. ಆದರೆ ಶುದ್ಧಚೈತನ್ಯದ ಮೇಲಿರುವ ದೃಷ್ಟಿಯು ಸ್ವಲ್ಪ ಕೂಡ ಬಿಟ್ಟು ಹೋಗುತ್ತಿಲ್ಲ. ಹಸಿರು ಏಕೇಂದ್ರಿಯ ವನಸ್ಪತಿ ಮೊದಲಾದ ಜೀವಗಳ ಹಿಂಸೆಯ ಪರಿಣಾಮವಾಗುತ್ತದೆ ಅಷ್ಟು ಮಾತ್ರ ಪಾಪದ ಕಾರಣವಿದೆ. ಆತ್ಮನು ಶುದ್ಧನಿದ್ದರೂ ಕೂಡ ಎಲ್ಲಿಯವರೆಗೆ ವೀತರಾಗನಾಗುವುದಿಲ್ಲ ಅಲ್ಲಿಯವರೆಗೆ ಮಲಿನತೆಯಿರುತ್ತದೆ. ಮಲಿನತೆಯು ಇಲ್ಲದೆ ಹೋಗಿದ್ದರೆ ವೀತರಾಗ ದೆಶೆಯು ಇರಬೇಕಾಗುವುದು, ಮತ್ತು ಮಲಿನತೆಯಿರುವಷ್ಟು ಆತ್ಮನಿದ್ದಾನೆಂದು ಮನ್ನಿಸಿದರೆ ಮಿಥ್ಯಾದೃಷ್ಟಿಯಿದ್ದಾನೆ. ಆದುದರಿಂದ ವಸ್ತುವು ಯಾವ ಪ್ರಕಾರವಿದೆ ಆ ಪ್ರಕಾರ ತಿಳಿದುಕೊಳ್ಳಬೇಕಾಗುವುದು.

ಅಜ್ಞಾನೀ ಜೀವರುಗಳು ಅರ್ಥವಿಲ್ಲದ ನಿರುಪಯೋಗದ ಪರಿಣಾಮಗಳಲ್ಲಿ ಆನಂದವನ್ನು ಮನ್ನಿಸುತ್ತಾರೆ, ಆದರೆ ಅದು ಮೃಷಾನಂದ ರೌದ್ರಧ್ಯಾನವಿದೆ. ಅದು ಪಾಪದ ಕಾರಣವಿದೆ. ಅಸತ್ಯ ವಚನಗಳನ್ನು ಆಡುವುದರಿಂದಂತೂ ವ್ಯಾಪಾರವು ನಡೆಯುತ್ತಿದೆ. ಅಸತ್ಯ ನುಡಿಯುವುದರಿಂದಲೇ ಇಂತಿಷ್ಟು ಧನ ಸಂಪಾದಿಸಿದೆನೆಂದು ಮನ್ನಿಸಿ ಅಸತ್ಯದಲ್ಲಿಯೇ ಆನಂದವನ್ನು ಮನ್ನಿಸಿದ್ದಾರೆ. ಧನವಂತೂ ಪೂರ್ವ ಪುಣ್ಯದ ಕಾರಣದಿಂದ ದೊರಕುತ್ತದೆ. ಆದರೆ ಅಜ್ಞಾನೀ ಜೀವರುಗಳು ಅಸತ್ಯ ನುಡಿಯುವುದರಿಂದ ಧನದ ಸಂಪಾದನೆಯಾಗಿದೆಯೆಂದು ಮನ್ನಿಸಿ ಆ ಅಸತ್ಯದಲ್ಲಿ ಆನಂದ ಮನ್ನಿಸುತ್ತಾರೆ. ಆ ಮೃಷಾನಂದ ರೌದ್ರಧ್ಯಾನವು ಪಾಪದ ಕಾರಣವಿದೆ.

ಸಮ್ಯಗ್ದೃಷ್ಟಿ ಜೀವರುಗಳಿಗೆ ಅಸತ್ಯ ವಚನಗಳನ್ನಾಡುವ ಪರಿಣಾಮವು ಅಸ್ಥಿರತೆಯ ಕಾರಣದಿಂದ ಆಗುತ್ತದೆ, ಆದರೆ ಅದರಲ್ಲಿ ಅವರು ಆನಂದವನ್ನು ಮನ್ನಿಸುವುದಿಲ್ಲ. ಸ್ವಭಾವದ ಅಭಿರುಚಿಯು ಕೂಡ ಕಡಿಮೆಯಾಗುವುದಿಲ್ಲ, ಆದರೆ ಎಷ್ಟು ಅಸತ್ಯ ವಚನಗಳನ್ನಾಡುವ ಭಾವವಾಗುತ್ತದೆ ಅಷ್ಟು ರೌದ್ರಧ್ಯಾನವಿದೆ ಮತ್ತು ಅದು ಪಾಪದ ಕಾರಣವಿದೆ.

ಅಜ್ಞಾನೀ ಜೀವರುಗಳಿಗೆ ಕಳವು ಮಾಡುವ ತೀವ್ರ ಪರಿಣಾಮವಾಗುತ್ತದೆ ಮತ್ತು ಅದರಲ್ಲಿ ಅವರು ಆನಂದ ಮನ್ನಿಸುತ್ತಾರೆ. ಆ ಸ್ತೇಯಾನಂದ ರೌದ್ರಧ್ಯಾನದ ಪರಿಣಾಮವು ಪಾಪದ ಕಾರಣವಿದೆ. ಆದಾಗ್ಯೂ ಅಜ್ಞಾನಿಗಳು ಅದರಲ್ಲಿ ಆನಂದ ಮನ್ನಿಸುತ್ತಾರೆ, ಆದರೆ ಜ್ಞಾನಿಗಳು ಅದರಲ್ಲಿ ಆನಂದ ಮನ್ನಿಸುವುದಿಲ್ಲ. ಕುಟುಂಬ ಪರಿವಾರದವರ ಭಾಗದೊಳಗಿಂದ ಕೆಲವೊಂದು ಬಾರಿ ಗುಪ್ತವಾಗಿ ಯಾರಿಗೂ ತಿಳಿಯದಂತೆ ಏನನ್ನಾದರೂ ತೆಗೆದುಕೊಳ್ಳುವ ಭಾವವು ಬಂದು ಬಿಡುತ್ತದೆ, ಆದರೆ ಆ ಭಾವದಲ್ಲಿ ಜ್ಞಾನಿಗಳು ಆನಂದ ಮನ್ನಿಸುವುದಿಲ್ಲ, ಆದರೆ ಎಷ್ಟು ಭಾವವಾಗುತ್ತದೆ ಅಷ್ಟು ಪಾಪಾಸ್ರವವಿದೆ.

ಐದು ಪ್ರಕಾರದ ವಿಷಯಗಳಲ್ಲಿ ಮತ್ತು ಪರಿಗ್ರಹ ಮೊದಲಾದವುಗಳ ರಕ್ಷಣೆ ಮಾಡುವಲ್ಲಿ ಅಜ್ಞಾನೀ ಜೀವರುಗಳು ಆನಂದ ಮನ್ನಿಸುತ್ತಾರೆ. ಅವರು ಚೈತನ್ಯ ಸ್ವಭಾವವನ್ನು ಮರೆತುಹೋಗಿ-ಬಿಟ್ಟುಕೊಟ್ಟು ಈ ಪ್ರಕಾರದ ಭಾವ ಮಾಡುತ್ತಾರೆ. ಅದರಂತೆ ವಿಕಲ್ಪಗಳ ಕಲ್ಪನೆಯನ್ನು ಒಂದರ ನಂತರ ಒಂದು ಮಾಡುತ್ತಿರುತ್ತಾರೆ. ಅಲ್ಲದೆ ಹಣ ಸಂಪಾದನೆ ಮಾಡುವ ಪ್ರವೃತ್ತಿ ಮಾಡುತ್ತಾರೆ. ನಮ್ಮ ಬುದ್ಧಿವಂತಿಕೆಯಿಂದ ಧನವು ಬಂದಿತೆಂದು ಮನ್ನಿಸುತ್ತಾರೆ ಹಾಗೂ ಅದರಲ್ಲಿ ಆನಂದವನ್ನೂ ಪಟ್ಟುಕೊಳ್ಳುತ್ತಾರೆ. ಈ ಪ್ರಕಾರ ಒಂದರ ನಂತರ ಒಂದು ಕಲ್ಪನೆಯ ಜಾಲವನ್ನು ವಿಸ್ತರಿಸುತ್ತಿರುತ್ತಾರೆ. ಅದು ಪರಿಗ್ರಹಾನಂದೀ ರೌದ್ರಧ್ಯಾನವಿದೆ.

ಜ್ಞಾನಿಗಳಿಗೆ ಧನ ಸಂಪಾದನೆ ಮಾಡುವ ರಾಗವು ಬರುತ್ತದೆ, ಆದರೆ ಆ ರಾಗವು ಪರದ ಕಾರಣದಿಂದ ಬರುತ್ತದೆಯೆಂದು ಮನ್ನಿಸುವುದಿಲ್ಲ. ತಾವು ಸ್ವಯಂ ಲಕ್ಷ್ಯವಹಿಸುವುದರಿಂದ ಧನವು ಬರುತ್ತದೆಯೆಂದು ಕೂಡ ಮನ್ನಿಸುವುದಿಲ್ಲ. ಜಡ ಪದಾರ್ಥಗಳು ಸ್ವಯಂ ತಮ್ಮ ಕಾರಣದಿಂದ ಬರುತ್ತವೆ. ನಮ್ಮ ಅಶಕ್ತತೆಯ ಕಾರಣದಿಂದ ರಾಗವು ಬರುತ್ತದೆ. ಜ್ಞಾನಿಗಳು ಇವೆಲ್ಲವುಗಳನ್ನು ಕೇವಲ ತಿಳಿದುಕೊಳ್ಳುವವರಿದ್ದಾರೆ. ಅಲ್ಪದಾದ ರಾಗವು ಆಗುತ್ತದೆ. ಏಕೆಂದರೆ ಅನಂತಾನುಬಂಧಿಯ ಅಭಾವವಾಗಿ ಹೋಗಿದೆ. ಸ್ವಭಾವದ ಅಭಿರುಚಿಯಿರುವುದರಿಂದ ಅವರಿಗೆ ಅಲ್ಪದಾದ ರಾಗವಿರುತ್ತದೆ. ಎಂದರೆ ಪಾಪದ ಆಸ್ರವವಿದೆ.

ಈ ಪ್ರಕಾರ ರೌದ್ರಧ್ಯಾನದ ನಾಲ್ಕು ಪ್ರಕಾರಗಳನ್ನು ಹೇಳಲಾಗಿದೆ. ಈ ಪರಿಣಾಮಗಳು ಇಲ್ಲದಿದ್ದರೆ ದುಃಖಿಯಿರುವುದಿಲ್ಲ. ದುಃಖವು ಸಂಯೋಗಿ ಪರ್ಯಾಯವಿವೆ. ದುಃಖವು ವಿಪರೀತ ದಶೆಯಿದೆ. ಅದು ಇಲ್ಲದೆ ಹೋದರೆ ಪೂರ್ಣಾನಂದದ ದಶೆಯು ಇರಬೇಕಾಗುವುದು. ಜ್ಞಾನಿಗಳಿಗೆ ಸಾಧಕ ದಶೆಯಲ್ಲಿ ನಿಜ ಶುದ್ಧಾತ್ಮನ ಪ್ರಜ್ಞೆಯಿದ್ದರೂ ಕೂಡ ಎಲ್ಲಿಯವರೆಗೆ ರಾಗವು ವರ್ತಿಸುತ್ತದೆ ಅಲ್ಲಿಯವರೆಗೆ ಅದೆಷ್ಟೋ ಬಾರಿ ಈ ಪ್ರಕಾರದ ಪರಿಣಾಮಗಳು ಬರುತ್ತಿರುತ್ತವೆ. ಪಾಪ ಪರ್ಯಾಯದಲ್ಲಿರುವುದು ಅದು ಕ್ಷಣಿಕವೆಂದು ತಿಳಿಯುತ್ತಾರೆ. ಆದಾಗ್ಯೂ ಎಷ್ಟು ಪರಿಣಾಮಗಳಿರುತ್ತವೆ ಅವನ್ನು ಪಾಪವೆಂದು ತಿಳಿಯುತ್ತಾರೆ. ಸಾಧಕನಿಗೆ ಆ ಭಾವಗಳು ಬರುವುದೇ ಇಲ್ಲವೆಂದು ಮನ್ನಿಸಿದರೆ ಅವರು ವಸ್ತುಸ್ವರೂಪವನ್ನೇ ತಿಳಿದುಕೊಳ್ಳುವುದಿಲ್ಲ. ಆ ಭಾವವಿರುವಷ್ಟೇ ಆತ್ಮನನ್ನು ಮನ್ನಿಸಿದರೆ ಅವರು ಮಿಥ್ಯಾದೃಷ್ಟಿಗಳಿದ್ದಾರೆ.

ದಯೆ, ದಾನ ಮೊದಲಾದವುಗಳ ಭಾವಗಳು ಶುಭ ಭಾವಗಳಿವೆ, ಅಂಥ ಶುಭಭಾವಗಳಲ್ಲಿ ಉಪಯೋಗವನ್ನು ತೊಡಗಿಸದೆ ಅನ್ಯತ್ರ, ಎಂದರೆ ದುಷ್ಟಭಾವಗಳಲ್ಲಿ ತಮ್ಮ ಉಪಯೋಗವನ್ನು ತೊಡಗಿಸುವುದು ಅದು ಅಸತ್ಯಜ್ಞಾನವಿದೆ. ಅದು ಮಲಿನಭಾವವಿದೆ.

ತತ್ತ್ವದ ವಿಪರೀತ ಶ್ರದ್ಧೆ, ವಿಪರೀತ ಜ್ಞಾನ ಮತ್ತು ವಿಪರೀತವಾದ ಆಚರಣೆಯಿಂದ ಯಾವ ಅವಿವೇಕವಾಗುತ್ತದೆ ಅದನ್ನು ಮೋಹ ಅಥವಾ ಅಜ್ಞಾನಭಾವವೆಂದು ಹೇಳುತ್ತಾರೆ. ಇತರ ಜೀವರುಗಳ ಮೇಲೆ ದಯೆ ಮಾಡುವ ಸಾಧ್ಯತೆಯಿದೆ, ಇತರರ ಸೇವೆ ಮಾಡುವ ಸಾಧ್ಯತೆಯಿದೆ, ಶರೀರದ ರೋಗವನ್ನು ತೊಡೆದು ಹಾಕುವ ಸಾಧ್ಯತೆಯಿದೆ, ಪರವಸ್ತುಗಳ ಕಾರಣದಿಂದ ಲಾಭ-ಹಾನಿಗಳಾಗುತ್ತವೆಯೆಂದು ಮನ್ನಿಸುವುದು ಅದೆಲ್ಲವೂ ಕೇವಲ ಭ್ರಾಂತಿಯಿದೆ. ಇತರ ಜೀವರುಗಳಿಗೆ ಉಪದೇಶ ಮಾಡಿ ಅವರಲ್ಲಿ ಧರ್ಮವನ್ನುತ್ಪನ್ನ ಮಾಡುವೆನೆನ್ನುವುದು ಕೂಡ ಮೋಹವಿದೆ. ಉಪದೇಶವು ಜಡವಿದ್ದು ಅದನ್ನು ಆತ್ಮನು ಕೊಡುವ ಸಾಧ್ಯತೆಯೇ ಇಲ್ಲ. ಉಪದೇಶದ ಕಾರಣದಿಂದ ಎದುರಿಗೆ ಇರುವಂಥ ಜೀವರುಗಳು ತಿಳಿದುಕೊಳ್ಳುವುದಿಲ್ಲ ಅವರು ತಮ್ಮ ಯೋಗ್ಯತೆಯಿಂದ ತಿಳಿದುಕೊಳ್ಳುತ್ತಾರೆ. ಅದರಂತೆ ಔಷಧದಿಂದಾಗಲಿ ಅಥವಾ ಜೀವದ ಭಾವನೆಯಿಂದಾಗಲಿ ರೋಗವು ನಾಶವಾಗಿ ಹೋಗುವುದಿಲ್ಲ. ರೋಗವು ತನ್ನ ಕಾಲದಲ್ಲಿ ತಾನು

ಹೊರಟು ಹೋಗುತ್ತದೆ. ಅದರಲ್ಲಿ ಔಷಧವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಈ ಪ್ರಕಾರ ಯಾರಿಗೆ ಜಡ ಮತ್ತು ಚೇತನದ ಮಧ್ಯದಲ್ಲಿ ಭೇದವಿಜ್ಞಾನದ ಪ್ರಜ್ಞೆಯಿರುವುದಿಲ್ಲ ಅವರು ಅಜ್ಞಾನಿಗಳಿದ್ದಾರೆ. ಆದುದರಿಂದ ಅವರುಗಳಿಗೆ ಪಾಪದ ಬಂಧವಾಗುತ್ತದೆ. ಈ ಎಲ್ಲ ಪರಿಣಾಮಗಳ ಭಾವವನ್ನು ಪಾಪಾಸ್ರವವೆಂದು ಹೇಳಲಾಗುತ್ತದೆ ಮತ್ತು ಅವುಗಳ ನಿಮಿತ್ತ ಪಡೆದು ದ್ರವ್ಯಪಾಪಾಸ್ರವದ ವಿಸ್ತಾರವಾಗುತ್ತದೆ. ದ್ರವ್ಯಾಸ್ರವವು ಜಡವಿದ್ದು ಅದು ಆತ್ಮನಲ್ಲಿ ಇರುವುದಿಲ್ಲ, ಮತ್ತು ಭಾವಾಸ್ರವವು ಅದು ಪರ್ಯಾಯದಲ್ಲಿ ಇದೆ. ಅದು ದ್ರವ್ಯದಲ್ಲಿ ಇಲ್ಲ. ಈ ಪ್ರಕಾರ ಆಸ್ರವದ ಹೇಯತೆಯನ್ನು ತಿಳಿದುಕೊಂಡು ದ್ರವ್ಯವನ್ನು ಉಪಾದೇಯವೆಂದು ಮನ್ನಿಸುವುದು ಅಥವಾ ಪರ್ಯಾಯ ಬುದ್ಧಿಯನ್ನು ಬಿಟ್ಟುಕೊಟ್ಟು ದ್ರವ್ಯಬುದ್ಧಿ ಮಾಡುವುದು ಸಮ್ಯಕ್‌ಜ್ಞಾನವಿದೆ.

ಯಾವುದನ್ನು ಸಂವರ ಧರ್ಮವೆಂದು ಹೇಳುತ್ತಾರೆಂದರೆ ಮಿಥ್ಯಾದರ್ಶನದ ಅಭಾವವು ಅದು ಸಮ್ಯಗ್ದರ್ಶನರೂಪದ ಸಂವರವಿದೆ.ಅವ್ರತ ಮತ್ತು ಪ್ರಮಾದದ ಅಭಾವವು ಕೂಡ ಸಂವರವಿದೆ. ಆತ್ಮನ ಅರಿವಿನೊಡನೆ ಮಲಿನ ಭಾವಗಳ ಉತ್ಪತ್ತಿಯಾಗದಿರುವುದನ್ನು ಕೂಡ ಸಂವರವೆಂದು ಹೇಳುತ್ತಾರೆ -

**ಇಂದಿಯಕಸಾಯಸಣ್ಣಾ ಣಿಗ್ಗಹಿದಾ ಜೇಹಿಂ ಸುಟ್ಠು ಮಗ್ಗಮ್ಹಿ ।**
**ಜಾವತ್ತಾವತ್ತೇಸಿಂ ಪಿಹಿದಂ ಪಾವಾಸವಚ್ಛಿದ್ದಂ ॥೧೪೧॥**

**ಯಾವನು ಮಾರ್ಗದಲಿದ್ದು ಇಂದ್ರಿಯ, ಕಷಾಯ, ಸಂಜ್ಞೆಗಳನೆಷ್ಟು ನಿಗ್ರಹಿಪನು ।**
**ಅವನಿಗಷ್ಟು ಪ್ರಮಾಣದಲಿ ಪಾಪಾಸ್ರವದ ರಂಧ್ರಗಳು ಮುಚ್ಚಿ ಹೋಗುವವು ॥೧೪೧॥**

ಆತ್ಮನು ವಿಚಾರ ಮಾಡುತ್ತಾನೆ, ಅದರಲ್ಲಿ ಮನಸ್ಸು ನಿಮಿತ್ತವಿದೆ ಮತ್ತು ಪರಪದಾರ್ಥಗಳನ್ನು ತಿಳಿದುಕೊಳ್ಳುವಲ್ಲಿ ಇಂದ್ರಿಯಗಳು ನಿಮಿತ್ತವಿವೆ. ಆತ್ಮನು ಜ್ಞಾನಸ್ವಭಾವಿಯಿದ್ದಾನೆ. ಅವನು ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ರಹಿತನಿದ್ದಾನೆ. ಇಂಥ ಆತ್ಮನ ಅಭಿರುಚಿ ಮಾಡುವುದು, ಮನಸ್ಸು ಹಾಗೂ ಇಂದ್ರಿಯಗಳ ಅಭಿರುಚಿಯನ್ನು ಬಿಟ್ಟುಕೊಡುವುದು, ಕ್ರೋಧ, ಮಾನ, ಮಾಯೆ, ಲೋಭದ ಮತ್ತು ನಾಲ್ಕು ಸಂಜ್ಞೆಗಳ ಪಾಪಪರಿಣಾಮವನ್ನು ಬಿಟ್ಟುಕೊಡುವುದು, ಹೀಗೆ ಬಿಟ್ಟುಕೊಟ್ಟ ಮೇಲೆ ಯಾವ ಸಮಯದಲ್ಲಿ ಸ್ವಭಾವ ದೃಷ್ಟಿಯಾಗುತ್ತದೆ ಆ ಸಮಯದಲ್ಲಿ ಮಿಥ್ಯಾತ್ವದ ಉತ್ಪತ್ತಿಯಾಗುವುದಿಲ್ಲ, ಆಗ ಸಮ್ಯಗ್ದರ್ಶನವಾಗುತ್ತದೆ. ಮೊದಲು ಮಿಥ್ಯಾತ್ವ ಅವಸ್ಥೆಯಲ್ಲಿ ಜ್ಞಾನದ ಪರ್ಯಾಯವು ಕ್ರೋಧ, ಮಾನ, ಮಾಯೆ ಹಾಗೂ ಲೋಭದ ಪರಿಣಾಮದಲ್ಲಿ ಮತ್ತು ಆಹಾರ ಮೊದಲಾದ ನಾಲ್ಕು ಸಂಜ್ಞೆಗಳಲ್ಲಿ ಸಿಲುಕಿಕೊಳ್ಳುತ್ತಿತ್ತು, ಅದು ಆಸ್ರವವಿದೆ ಮತ್ತು ಅದು ಒಂದು ಸಮಯದ ಅವಸ್ಥೆಯಿದೆ.

೧) ಮಿಥ್ಯಾತ್ವದ ಅವಸ್ಥೆಯಲ್ಲಿ ವರ್ತಮಾನದೊಳಗೆ ದೋಷವಿದೆ, ಜ್ಞಾನವು ಕಷಾಯಗಳಲ್ಲಿ ಸಿಲುಕಿಕೊಂಡಿದೆ, ಇಂದ್ರಿಯಗಳು ನಿಮಿತ್ತವಿವೆಯೆಂದು ಮನ್ನಿಸಬೇಕಾಗುವುದು. ಈ ಪ್ರಕಾರ ಮನ್ನಿಸದೆ ಹೋದರೆ ದೋಷ ಸುಧಾರಿಸಲು ಅವಕಾಶವೇ ಉಳಿಯುವುದಿಲ್ಲ.

೨) ವರ್ತಮಾನದಲ್ಲಿರುವ ದೋಷವನ್ನು ಮನ್ನಿಸುವನು, ಆದರೆ ಅದನ್ನು ವರ್ತಮಾನದಿಂದ ತೊಲಗಿಸುವುದರ ಬೆನ್ನುಹತ್ತಿದ್ದರೂ ಕೂಡ ಅದು ದೋಷವಿದೆ. ವರ್ತಮಾನದ ಲಕ್ಷ್ಯದಿಂದ ದೋಷವು ಹೊರಟುಹೋಗುವುದಿಲ್ಲ.

೩) ಇಂದ್ರಿಯಗಳ ಕಡೆಗೆ ಗಮನ ಹರಿಸದೆ ಅಸತ್ಯ ಮಾತನಾಡದಿರುವ ಭಾವ, ವಿಷಯಗಳ ಸೇವನೆ ಮಾಡದಿರುವ ಭಾವಗಳೆಲ್ಲವು ಪುಣ್ಯಾಸ್ರವವಿವೆ. ಅವುಗಳ ಲಕ್ಷ್ಯವನ್ನು ಬಿಟ್ಟುಕೊಟ್ಟು ಅತೀಂದ್ರಿಯ ಸ್ವಭಾವದ ಪ್ರತೀತಿ ಮಾಡುವುದು ಸಮ್ಯಗ್ದರ್ಶನವಿದೆ.

ದೇಹ, ಮನಸ್ಸು, ವಾಣಿಗಳಿಂದ ರಹಿತ ಮತ್ತು ವಿಕಾರೀ ಭಾವಗಳಿಂದ ರಹಿತವಿರುವಂಥ ನನ್ನ ಸ್ವಭಾವವು ಅಂತಃತತ್ತ್ವವಿದೆ. ಇಂಥ ಮನ್ನಣೆಯು ಸಮ್ಯಗ್ದರ್ಶನರೂಪವಿರುವ ಸಂವರದ ಮಾರ್ಗವಿದೆ. ಯಾವ ಜೀವರುಗಳು ಇಂದ್ರಿಯಗಳಿಂದ ಮತ್ತು ಸಂಯೋಗೀ ವಸ್ತುಗಳಿಂದ ಲಾಭವಿದೆಯೆಂದು ಮನ್ನಿಸುತ್ತಾರೆ ಅವರಿಗೆ ಅಂತರ್ಮುಖ ಅನುಸರಣೆ ಮಾಡುವ ಅವಸರವು ದೊರಕುವುದಿಲ್ಲ. ಯಾರು ಇಂದ್ರಿಯಗಳ ಕಡೆಗೆ ಪ್ರವೃತ್ತಿ ಮಾಡುತ್ತಾರೆ, ಅವುಗಳಿಂದ ಎಂದರೆ ಇಂದ್ರಿಯಗಳಿಂದ ಲಾಭವಾಗುತ್ತದೆಯೆಂದು ಮನ್ನಿಸುತ್ತಾರೆ ಅವರಿಗೆ ಮಿಥ್ಯಾತ್ವವು ಹೊರಟುಹೋಗುವುದಿಲ್ಲ.

ಯಾವ ಗುರುಗಳು ಇಂದ್ರಿಯಗಳಿಂದ ಲಾಭವಿದೆಯೆಂದು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ, ಅವರು ನಿಜವಾದ ಗುರುಗಳಿಲ್ಲ. ಅದರಂತೆ ಯಾವ ಶಾಸ್ತ್ರವು ಹೇಳುತ್ತದೆ ಅದು ನಿಜವಾದ ಶಾಸ್ತ್ರವಲ್ಲ ಮತ್ತು ಯಾರ ಜ್ಞಾನವು ವಿಪರೀತವಿದೆ ಅವರು ಸರ್ವಜ್ಞರಿಲ್ಲ.

ಅಪೂರ್ಣದಶೆಯಲ್ಲಿ ನಿಂತುಕೊಳ್ಳುವ ಜ್ಞಾನವಿದೆ ಅದರಲ್ಲಿ ಇಂದ್ರಿಯಗಳು ನಿಮಿತ್ತವಿವೆಯೆಂದು ಯಾರು ಮನ್ನಿಸುವುದಿಲ್ಲ ಅವರು ಕೂಡ ಅಸತ್ಯರಿದ್ದಾರೆ.

ಇಂದ್ರಿಯಗಳಿವೆ, ಮನಸ್ಸು ಕೂಡ ಇದೆ, ಅಪೂರ್ಣದಶೆಯಲ್ಲಿ ನಿಂತುಕೊಳ್ಳುವ ಜ್ಞಾನವು ಇದೆ, ಪುಣ್ಯ-ಪಾಪದ ಭಾವಗಳಿವೆ. ಇವೆಲ್ಲವುಗಳು ಇದ್ದರೂ ಕೂಡ ಅವುಗಳ ಅಭಿರುಚಿಯನ್ನು ಬಿಟ್ಟುಕೊಟ್ಟು, ತ್ರಿಕಾಲೀ ಸ್ವಭಾವದ ಅಭಿರುಚಿ ಮಾಡುವುದು ಸಂವರವಿದೆ. ಸಂವರದಲ್ಲಿ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಇವು ಮೂರೂ ಸಮಾವೇಶವಾಗಿ ಹೋಗುತ್ತವೆ. ಸಂವರವು ಮೋಕ್ಷಮಾರ್ಗವಿದೆ.

ಮನಸಹಿತವಾಗಿ ಪಂಚೇಂದ್ರಿಯಗಳ ಕಡೆಗಿರುವ ವ್ಯಾಪಾರವು ರಾಗದ ಕಾರಣವಿದೆ. ದ್ರವ್ಯ-ಗುಣ-ಪರ್ಯಾಯವೆಂದು ಇವು ಮೂರು ಭೇದಗಳ ಕಡೆಗಿರುವ ಪ್ರವೃತ್ತಿಯು ಕೂಡ ರಾಗದ ಕಾರಣವಿದೆ. ಆದುದರಿಂದ ಅವುಗಳ ಆಧಾರ ತೆಗೆದುಕೊಳ್ಳುವುದರಿಂದ ಸಂವರವಾಗುವುದಿಲ್ಲ, ಆದರೆ ಐದು ಇಂದ್ರಿಯಗಳು ಮತ್ತು ಮನಸ್ಸನ್ನು ಜಯಿಸುವುದರಿಂದಲೇ ಸಂವರವಾಗುತ್ತದೆ. ಅವನ್ನು ಯಾವ ರೀತಿಯಿಂದ ಜಯಿಸಬೇಕೆಂದರೆ-ಇಂದ್ರಿಯಗಳಿಂದ ಹಾಗೂ ಮನಸ್ಸಿನಿಂದ ರಹಿತವಾದ ಮತ್ತು ವಿಕಾರದಿಂದ ರಹಿತವಾದ ಯಾವ ಜ್ಞಾನಸ್ವಭಾವವಿದೆ ಅದರಲ್ಲಿ ಶ್ರದ್ಧೆ-ಜ್ಞಾನಮಾಡಿ ಏಕಾಗ್ರವಾದರೆ ವಿಕಾರವು ಉತ್ಪನ್ನವಾಗುವುದೇ ಇಲ್ಲ ಮತ್ತು ಪುಣ್ಯ-ಪಾಪದ ಪ್ರವೃತ್ತಿಯು ಕೂಡ ಉತ್ಪನ್ನವಾಗುವುದಿಲ್ಲ. ಸ್ವಭಾವ ಶಾಂತಿಯು ಪ್ರಕಟವಾಗುತ್ತದೆ ಅದನ್ನು ಸಂವರವೆಂದು ಹೇಳುತ್ತಾರೆ.

ಯಾರಿಗೆ ಸಂವರದ ಪ್ರಾಪ್ತಿಯಾಗಿದೆ ಅವರಿಗೆ ಅನಾದಿಯಿಂದ ಸಂವರವು ಇರುವುದಿಲ್ಲ. ಸಂವರವಾಗುವ ಮೊದಲು ಅಧರ್ಮವಿತ್ತು. ಆ ಅಧರ್ಮವನ್ನು ಯಾವುದು ತಡೆಯುತ್ತದೆ ಅದು ಸಂವರವಿದೆ. ಮಿಥ್ಯಾದರ್ಶನ-ಜ್ಞಾನ-ಚಾರಿತ್ರಗಳು ಅಧರ್ಮವಿವೆ. ಅವುಗಳಲ್ಲಿ ಕುದೇವ-ಕುಶಾಸ್ತ್ರ-ಕುಗುರುಗಳು ನಿಮಿತ್ತರಿದ್ದಾರೆ. ಪರದ ಕಡೆಗಿರುವ ಪ್ರವೃತ್ತಿಯ ಭಾವವಿರುವುದನ್ನು ಸ್ವಭಾವದ ಲಕ್ಷ್ಯದಿಂದ ಬದಲಿಸುವ ಸಾಧ್ಯತೆಯಿದೆ ಮತ್ತು ಸ್ವಭಾವದ ಕಡೆಗೆ ಪ್ರವೃತ್ತಿಯಾಗುವ ಸಾಧ್ಯತೆಯಿದೆ. ಇವೇ ಮೊದಲಾದ ಸಮಸ್ತ ವಿಚಾರಗಳನ್ನು ಹೇಗಿವೆ ಹಾಗೇ ಒಪ್ಪಿಕೊಂಡು ಅಂತರಂಗದಲ್ಲಿ ಧಾರಣ ಮಾಡಬೇಕಾಗುವುದು.

ನಾಲ್ಕು ಸಂಜ್ಞೆಗಳ ಕಡೆಗೆ ಒಲವು ತೋರುತ್ತಿರುವ ಪರಿಣಾಮವನ್ನು ತಡೆದು ಸ್ವಭಾವದಲ್ಲಿ ಏಕಾಗ್ರತೆ ಸಾಧಿಸುವುದು ಸಂವರವಿದೆ. ಆತ್ಮನ ಅರಿವು ಮೂಡುತ್ತಿರುವಂತೆ ಮಿಥ್ಯಾತ್ವದ ದಶೆಯು ನಿಂತುಹೋಗುವುದು ಸಂವರವಿದೆ. ಸಂಸಾರದಲ್ಲಿ ಕೂಡ ಶಿರಾ ಎಂದರೆ ಸಿಹಿಸಜ್ಜಿಗೆ ಮಾಡುವ ಯಾವ ವಿಧಿಯಿರುತ್ತದೆ ಅದೇ ಪ್ರಕಾರದಿಂದ ಮಾಡಿದರೇನೇ ಸಜ್ಜಿಗೆಯಾಗುತ್ತದೆ. ತುಪ್ಪದಲ್ಲಿ ರವೆಯನ್ನು ಹುರಿಯುವುದಕ್ಕೆ (ಶಾಖ ಕೊಡುವುದಕ್ಕೆ) ಪ್ರತಿಯಾಗಿ ಅದನ್ನು ನೀರಿನಲ್ಲಿ

ಶಾಖ ಕೊಡುವುದರಿಂದ ಶಿರಾ-ಸಜ್ಜಿಗೆ ಆಗುವುದಿಲ್ಲ. ಅದೇ ಪ್ರಕಾರ ಇಲ್ಲಿ ಧರ್ಮದ ವಿಧಿಯಲ್ಲಿ ಕೂಡ ಏನಾದರೂ ಮಧ್ಯದಲ್ಲಿ ಪ್ರವೇಶಿಸಿದರೆ ಧರ್ಮದ ಕಾರ್ಯವಾಗುವುದಿಲ್ಲ. ದಯೆ, ದಾನ, ವ್ರತ, ಮೊದಲಾದವುಗಳನ್ನು ಮಾಡುವುದರಿಂದ ಧರ್ಮವಾಗುತ್ತದೆಯೆಂದು ಅದೆಷ್ಟೋ ಜನರು ಹೇಳುತ್ತಾರೆ ; ಆದರೆ ಅವುಗಳಿಂದ ಧರ್ಮವೆಂದೂ ಆಗುವುದಿಲ್ಲ. ಏಕೆಂದರೆ ಅದು ಧರ್ಮದ ರೀತಿಯಲ್ಲ. ಯಾವ ರೀತಿಯಿಂದ ಧರ್ಮವಾಗುತ್ತದೆಯೆಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗುವುದು. ಪುಣ್ಯ-ಪಾಪಗಳಿಂದ ರಹಿತವಿರುವಂಥ ಆತ್ಮನು ಅನಂತ ಸುಖದ ಪಿಂಡನಿದ್ದಾನೆ. ಅವನ ಕಡೆಗೆ ದೃಷ್ಟಿ ತಿರುಗಿಸಿದರೆ ಮಿಥ್ಯಾತ್ವದ ಉತ್ಪತ್ತಿಯೇ ಆಗುವುದಿಲ್ಲ. ಅದು ಸಮ್ಯಗ್ದರ್ಶನರೂಪದ ಸಂವರವಿದೆ. ಆತ್ಮನಲ್ಲಿ ವಿಶೇಷರೂಪದಿಂದ ನಿಮಗ್ನತೆ ಮಾಡಿದರೆ ಅವ್ರತ, ಪ್ರಮಾದ ಮೊದಲಾದವುಗಳ ಉತ್ಪತ್ತಿಯೇ ಆಗುವುದಿಲ್ಲ ಅದು ಚಾರಿತ್ರರೂಪದ ಸಂವರವಿದೆ.

ಆತ್ಮನ ಅರಿವಿಲ್ಲದೆ ಪ್ರತಿಯೊಂದು ಜೀವವು ಅನಂತ ಬಾರಿ ಮುನಿತನವನ್ನು ಧಾರಣ ಮಾಡಿದೆ ವೈರಾಗ್ಯವನ್ನು ಪ್ರಾಪ್ತಮಾಡಿಕೊಂಡಿದೆ ಆದರೆ ಆಂತರ್ಯದಲ್ಲಿ ಶುಭರಾಗದಿಂದ ಧರ್ಮವಾಗುವುದೆಂದು ಮನ್ನಿಸಿಕೊಂಡಿರುವುದರಿಂದ ಸಂಸಾರದ ಅಭಾವವಾಗಲಿಲ್ಲ. ಅನಂತಬಾರಿ ವ್ರತ, ತಪ ಮಾಡಿದೆ ಆದರೆ ಆತ್ಮನ ಬೋಧವಾಗಲಿಲ್ಲ. ಯಾವನಿಗೆ ಚೈತನ್ಯ ಸ್ವಭಾವದ ಬೋಧವಾಗಲಿಲ್ಲ ಮತ್ತು ದಯೆ-ದಾನಾದಿಗಳಲ್ಲಿ ಧರ್ಮ ಮನ್ನಿಸಿದ್ದಾನೆ ಅವನಿಗೆ ಮಿಥ್ಯಾತ್ವದ ನಾಶವಾಗುವುದಿಲ್ಲ. ಅಜ್ಞಾನೀ ಜೀವರುಗಳು ಶಾಸ್ತ್ರ ಶ್ರವಣ ಮಾಡಿದ್ದಾರೆ ಆದರೆ ಆತ್ಮನ ಅರಿವಿಲ್ಲದ ಶ್ರವಣವನ್ನು ಕೇವಲ ಕರ್ಣದ ವಿಷಯವನ್ನಾಗಿ ಮಾಡಿದ್ದಾರೆ. ವರ್ತಮಾನದ ಕಲ್ಪನಾಭಾವದಿಂದ ಕಲ್ಯಾಣವಾಗುವುದಿಲ್ಲ ಮತ್ತು ತ್ರಿಕಾಲೀ ಸ್ವಭಾವದಿಂದ ಕಲ್ಯಾಣವಾಗುತ್ತದೆಯೆಂಬ ವಿಚಾರವನ್ನು ಮಾಡದವನಿಗೆ ಧರ್ಮವಾಗುವುದಿಲ್ಲ.

ಜೀವನು ತನ್ನ ಸ್ವಭಾವದ ಕಡೆಗೆ ಎಷ್ಟು ಒಲಿಯುತ್ತಾನು ಅಷ್ಟು ಬಹಿರ್ಮುಖ ಪ್ರವೃತ್ತಿಯಾಗುವುದಿಲ್ಲ. ಸ್ವಭಾವದ ದೃಷ್ಟಿಯಾದ ಮೇಲೆ ಪರದ ದೃಷ್ಟಿಯು ಉಳಿಯುವುದಿಲ್ಲ. ಸ್ವಭಾವದ ಜ್ಞಾನವಾದಮೇಲೆ ಮಿಥ್ಯಾಜ್ಞಾನವು ಆಗುವುದಿಲ್ಲ. ಸ್ವಭಾವದಲ್ಲಿ ಸ್ಥಿರತೆಯಾದಮೇಲೆ ಅಸ್ಥಿರತೆಯಾಗುವುದಿಲ್ಲ.

ಈ ಪ್ರಕಾರ ನಿರ್ಣಯ ಮಾಡಿಕೊಳ್ಳದಿರುವುದರಿಂದ ಅಜ್ಞಾನಿಗಳ ಕ್ರಿಯಾಕಾಂಡಗಳೆಲ್ಲವೂ ವ್ಯರ್ಥವಾಗಿ ಬಿಡುತ್ತವೆ. ಧರ್ಮದ-ಸುಖದ ಪರ್ಯಾಯವು ದ್ರವ್ಯದೊಳಗಿಂದ ಬರುತ್ತದೆ. ಆದುದರಿಂದ ಅಂಥ ದೃಷ್ಟಿ ಮಾಡದಿರುವುದು ಮತ್ತು ನಿಮಿತ್ತದಲ್ಲಿ ಹಾಗೂ ರಾಗದಲ್ಲಿ ಸಿಕ್ಕಿಬಿದ್ದುಕೊಂಡರೆ ಪ್ರಮಾಣಜ್ಞಾನವು ಕೂಡ ಆಗುವುದಿಲ್ಲ. ನನ್ನ ತತ್ತ್ವಕ್ಕೆ ನಿಮಿತ್ತದಿಂದ ಮತ್ತು ರಾಗದಿಂದ ಲಾಭವಿಲ್ಲವೆಂದು ನಿರ್ಣಯ ಮಾಡದ ಹೊರತಾಗಿ ಸಂವರದ ಜನ್ಮವಾಗುವುದೇ ಇಲ್ಲ. ಸಂವರವಿಲ್ಲದೆ ಧರ್ಮವಿಲ್ಲ.

ಸಂಸಾರೀ ಜೀವರುಗಳಿಗೆ ವಸ್ತುಸ್ವರೂಪದ ಅರಿವಿಲ್ಲ-ಪರಿಚಯವಿಲ್ಲ ಮತ್ತು ನಮಗೆ ಪ್ರತಿಕ್ರಮಣ ಮಾಡುವುದಿದೆಯೆಂದು ಹೇಳುತ್ತಾರೆ, ಆದರೆ ಎಲೈ ಸಹೋದರರನೇ ! ಮೊದಲು ಮಿಥ್ಯಾತ್ವದ ಪ್ರತಿಕ್ರಮಣ ಮಾಡದ ಹೊರತಾಗಿ ಎಂದರೆ ಮಿಥ್ಯಾತ್ವದಿಂದ ಹಿಂದಿರುಗಿ ಬರದ ಹೊರತಾಗಿ ಅವ್ರತ ಮತ್ತು ಪ್ರಮಾದದ ಪ್ರತಿಕ್ರಮಣವು ಆಗುವ ಸಾಧ್ಯತೆಯೇ ಇಲ್ಲವೆಂಬುದನ್ನು ತಿಳಿದುಕೊಳ್ಳಬೇಕು.

ಮೊದಲು ಆತ್ಮನ ಶುದ್ಧ ಸ್ವಭಾವವನ್ನು ತಿಳಿದುಕೊಂಡು, ದರ್ಶನ-ಜ್ಞಾನ-ಚಾರಿತ್ರದಲ್ಲಿ ಏಕಾಗ್ರತೆ ಮಾಡುವುದು ಮೋಕ್ಷಮಾರ್ಗವಿದೆ. ಯಾವ ಪ್ರಕಾರ ತಮಗೆ ಚಿನ್ನವು ಬೇಕಿದ್ದರೆ ಚಿನ್ನಮಾರುವಂಥವರ ಅಂಗಡಿಗೆ ಹೋಗಬೇಕಾಗುವುದು. ಅದೇ ಪ್ರಕಾರ ತಮಗೆ ಧರ್ಮವು ಬೇಕಾಗಿದ್ದರೆ ಅದು ಆತ್ಮನ ಅಂಗಡಿಯಲ್ಲಿಯೇ ದೊರಕುವುದು. ಪುಣ್ಯ-ಪಾಪದಲ್ಲಿ ಧರ್ಮವು ಎಂದೂ ದೊರಕುವುದಿಲ್ಲ, ಆದರೆ ಶುದ್ಧಸ್ವಭಾವದ ಏಕಾಗ್ರತೆಯಲ್ಲಿ ಧರ್ಮವಿದೆ. ಅದರ ಸಲುವಾಗಿ

ಪುಣ್ಯ-ಪಾಪದ ಅಭಿರುಚಿಯನ್ನು ಬಿಟ್ಟುಕೊಟ್ಟು, ಸ್ವಭಾವದಲ್ಲಿ ನಿಮಗ್ನತೆ-ಲೀನತೆ ಮಾಡಿದರೆ ಮೋಕ್ಷಮಾರ್ಗವಿದೆ ಅಥವಾ ಸಂವರವಿದೆ. ಇಂದ್ರಿಯಗಳ ವಿಷಯದಲ್ಲಿ ನಿಂತುಕೊಳ್ಳುವುದು, ಕಷಾಯ ಪರಿಣಾಮ ಮಾಡುವುದು ಮತ್ತು ಆಹಾರ ಮೊದಲಾದ ನಾಲ್ಕು ಸಂಜ್ಞೆಗಳ ಭಾವ ಮಾಡುವುದು ಪಾಪಾಸ್ರವವಿದೆ. ಅವುಗಳ ನಿಷೇಧ ಮಾಡುವಂಥ ಭಾವ ಭಾವಿಸುವುದು ಅದು ಪಾಪದ ಸಂವರವಿದೆ.

ಅವನ್ನು ಯಾವ ರೀತಿಯಿಂದ ನಿರೋಧ ಮಾಡಬೇಕೆಂಬುದನ್ನು ಹೇಳುತ್ತಾರೆ.- ತಮ್ಮ ಜ್ಞಾನ ಪರ್ಯಾಯವು ಸ್ವಭಾವದಲ್ಲಿ ಎಷ್ಟು ಅಂಶದಿಂದ ಸ್ಥಿರವಾಗುವುದು ಮತ್ತು ಎಷ್ಟು ಅಂಶದಿಂದ ವಿಷಯ-ಕಷಾಯ ಮೊದಲಾದವುಗಳ ಪರಿಣಾಮ ಮಾಡದಿದ್ದರೆ ಅದನ್ನು ಸಂವರವೆಂದು ಹೇಳುತ್ತಾರೆ ಮತ್ತು ಅಷ್ಟು ಭಾವಪಾಪಾಸ್ರವದ ನಿರೋಧ ಮಾಡಲಾಯಿತೆಂದು ಹೇಳಲಾಗುತ್ತದೆ. ಕರ್ಮಗಳಲ್ಲಿ ಸಿಲುಕಿ ಬೀಳುವುದರ ಅಥವಾ ವಿಕಾರಗಳಲ್ಲಿ ಸಿಲುಕಿಬೀಳುವುದರ ಮಾತನ್ನು ನಿಮಿತ್ತದಿಂದ ಹೇಳುವುದರಲ್ಲಿ ಬರುತ್ತದೆ. ಮೊದಲು ಪರ್ಯಾಯದ ಪ್ರವೃತ್ತಿಯು ತುಂಡು ತುಂಡು ಜ್ಞಾನದ ಕಡೆಗೆ ಹೋಗುತ್ತಿತ್ತು ಮತ್ತು ಅಂಥ ಪ್ರವೃತ್ತಿಯು ಪುಣ್ಯ-ಪಾಪರೂಪ ಆಸ್ರವದ ಕಾರಣವಾಗುತ್ತಲಿತ್ತು. ಆದರೆ ಇಂದು ತಿಳಿದುಬರುವುದೇನೆಂದರೆ ಆ ತುಂಡು ತುಂಡು ಜ್ಞಾನವು ನನ್ನ ಸ್ವರೂಪವಿಲ್ಲ, ಕ್ರೋಧ ಮೊದಲಾದವು ನನ್ನ ಸ್ವರೂಪವಿಲ್ಲ, ನಾನು ಕಷಾಯಗಳಿಂದ ರಹಿತನಾದ ಅಖಂಡ ಆತ್ಮನಿದ್ದೇನೆಂದು ಜ್ಞಾನಮಾಡಿಕೊಂಡು, ಭವರಹಿತ ಸ್ವಭಾವದ ದೃಷ್ಟಿ ಮಾಡುವುದರಿಂದ ಮತ್ತು ಆ ಸ್ವಭಾವದೊಡನೆ ಏಕಾಗ್ರತೆ ಸಾಧಿಸುವುದರಿಂದ ವಿಕಾರವು ಉತ್ಪನ್ನವಾಗುವುದೇ ಇಲ್ಲ. ತುಂಡು ತುಂಡುತನವು ಕೂಡ ಸಂಭವಿಸುವುದಿಲ್ಲ. ಅದನ್ನು ಭಾವಪಾಪಾಸ್ರವದ ನಿರೋಧ ಮಾಡಲಾಯಿತೆಂದು ಹೇಳಲಾಗುತ್ತದೆ. ಭಾವಪಾಪಸಂವರವಾಗುವುದರಿಂದ ದ್ರವ್ಯಪಾಪಸಂವರವು ಆಗುತ್ತದೆ ಎಂದರೆ ಕರ್ಮಗಳು ತಡೆಯಲ್ಪಡುತ್ತವೆ. ಆತ್ಮನ ಭಾವದಿಂದ ಕರ್ಮಗಳು ತಡೆಯಲ್ಪಟ್ಟುವೆಂದು ಹೇಳುವುದು ನಿಮಿತ್ತ ಕಥನವಿದೆ. ಆದರೆ ಆ ಕರ್ಮಗಳು ಬರುವುದಿಲ್ಲದಿರುವುದರಿಂದ ಬಂದಿಲ್ಲ. ಆದಾಗ್ಯೂ ಜೀವದ ಪ್ರವೃತ್ತಿಯು ಸ್ವಭಾವದ ಕಡೆಗೆ ಆಗಿದೆ. ಅದರಿಂದ ಕರ್ಮದ ಬರುವಿಕೆಯು ಆಗಲಿಲ್ಲವೆಂಬ ನಿಮಿತ್ತ-ನೈಮಿತ್ತಿಕ ಸಂಬಂಧವಿರುವುದರಿಂದ ದ್ರವ್ಯಸಂವರವಾಯಿತೆಂದು ಹೇಳಲಾಗುತ್ತದೆ. ತಮ್ಮ ಭೂಮಿಕೆಯ ಅನುಸಾರ ಯಾವ ಯಾವ ಗುಣಸ್ಥಾನದಲ್ಲಿ ಅಶುದ್ಧತೆಯು ಬಿಡುತ್ತ ಹೋಗುತ್ತದೆ ಅಷ್ಟು-ಅಷ್ಟು ಕರ್ಮಗಳ ಬರುವಿಕೆಯು ತಾನಾಗಿಯೇ ನಿಂತುಹೋಗುತ್ತದೆ.

ಜೀವರುಗಳು ವಸ್ತುಸ್ವರೂಪವನ್ನು ತಿಳಿದುಕೊಳ್ಳಬೇಕಾಗುವುದು. ಅದನ್ನು ತಿಳಿದುಕೊಳ್ಳಲಾರದೆ ಯಾತ್ರೆ ಮಾಡಲು ಹೋದರೆ ಪುಣ್ಯವಾಗುತ್ತದೆಯೇ ವಿನಹ ಧರ್ಮವಾಗುವುದಿಲ್ಲ. ಒಂದುವೇಳೆ ಯಾತ್ರೆ ಮಾಡುವುದರಿಂದ ಧರ್ಮವಾಗುತ್ತಿದ್ದರೆ ಡೋಲೀ ಹೊರುವವರಿಗೆ ಬಹಳಷ್ಟು ಧರ್ಮವಾಗಬೇಕಾಗುತ್ತಿತ್ತು. ಯಾತ್ರೆಯ ಭಾವವು ಆಸ್ರವವಿದೆ. ಅದೇನು ಚೈತನ್ಯದ ಶಾಂತದಶೆಯಿಲ್ಲ. ಪುಣ್ಯ-ಪಾಪಗಳಿಂದ ರಹಿತನಾಗಿ ಆತ್ಮನ ಆಶ್ರಯ ತೆಗೆದುಕೊಳ್ಳುವುದರಿಂದ ಆಸ್ರವವಾಗುವುದಿಲ್ಲ, ಆದರೆ ಭಾವಸಂವರವಾಗುತ್ತದೆ ಮತ್ತು ಪುದ್ಗಲ ಕರ್ಮಗಳು ಕೂಡ ಬರುವುದಿಲ್ಲ. ಯಾವಾಗ ಜೀವಕ್ಕೆ ಅಶುದ್ಧ ಭಾವಗಳಾಗುವುದಿಲ್ಲ ಆಗ ಪುದ್ಗಲ ಕರ್ಮಗಳ ಆಸ್ರವವು ಕೂಡ ತನ್ನ ಕಾರಣದಿಂದ ಆಗುವುದಿಲ್ಲ. ಅದು ತನ್ನ ಕಾರಣದಿಂದ ತಾನಾಗಿ ನಿಂತುಹೋಗುತ್ತದೆ.

ಈ ಪ್ರಕಾರ ಒಂದು ಸಂವರವೇ ಮೋಕ್ಷಮಾರ್ಗವಿದೆಯೆಂದು ಇಲ್ಲಿ ತಿಳಿಸಿಕೊಡಲಾಯಿತು.

ಸಂವರವು ನಾಲ್ಕನೆಯ ಗುಣಸ್ಥಾನದಲ್ಲಿ ಪ್ರಕಟವಾಗುತ್ತದೆ, ಸಂವರವು ಯಾರಿಗೆ ಆಗುತ್ತದೆಯೆಂಬುದನ್ನು ಈಗ ಹೇಳುತ್ತಾರೆ- ಆತ್ಮನು ಜ್ಞಾನಸ್ವಭಾವಿಯಿದ್ದಾನೆಂದು ತಿಳಿದುಕೊಂಡು ಯಾರು ಅವನ ಮೇಲೆ ದೃಷ್ಟಿಯಿಟ್ಟು ಏಕಾಗ್ರತೆ ಮಾಡುತ್ತಾರೆ ಅವರಿಗೆ ಸಮ್ಯಗ್ದರ್ಶನವಾಗುತ್ತದೆ ಮತ್ತು ಅವರಿಗೆ ನಲವತ್ತೊಂದು ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ನಾನು ಇತರ ಪದಾರ್ಥಗಳ ಕರ್ತೃ-ಹರ್ತೃವಿಲ್ಲ, ನಾನು ಪುಣ್ಯ-ಪಾಪಗಳ ಪ್ರಭುವಿಲ್ಲ, ನಾನು ಶುದ್ಧಜ್ಞಾನ-

ದರ್ಶನಮಯನಿದ್ದೇನೆಂಬ ಅರಿವು-ಅನುಭೂತಿಯು ಯಾವನಿಗೆ ಉಂಟಾಗಿದೆ ಅವನಿಗೆ ವ್ರತ-ತಪಸ್ಸುಗಳು ಇಲ್ಲದಿದ್ದರೂ ಕೂಡ ಅವನಿಗೆ ನಲವತ್ತೊಂದು ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ಒಂದುವೇಳೆ ಸಮ್ಯಗ್ದೃಷ್ಟಿಯು ಪ್ರಸಂಗವಶದಿಂದ ಯುದ್ಧ ಭೂಮಿಯಲ್ಲಿ ನಿಂತುಕೊಂಡಿದ್ದರೂ, ಪ್ರತ್ಯಕ್ಷ ಯುದ್ಧ ಮಾಡುತ್ತಿದ್ದರೂ ಕೂಡ ಅವನಿಗೆ ನಲವತ್ತೊಂದು ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ಯಾವನೋ ಓರ್ವ ಜೀವನು ತ್ಯಾಗಿಯಿದ್ದರೂ, ದ್ರವ್ಯಲಿಂಗಿ ಮುನಿಯಾಗಿದ್ದರೂ, ದಯೆಯನ್ನು ಪಾಲಿಸುತ್ತಿದ್ದರೂ, ಸತ್ಯವನ್ನು ಆಚರಿಸುತ್ತಿದ್ದರೂ ಕೂಡ ಅಂತರ್ಯದಲ್ಲಿ ವಿಕಲ್ಪದಿಂದ ಲಾಭವಿದೆಯೆಂದು ಮನ್ನಿಸುತ್ತಿದ್ದರೆ, ದೇಹದ ಕ್ರಿಯೆಯನ್ನು ತಾನು ಮಾಡುವ ಸಾಧ್ಯತೆಯಿದೆಯೆಂದು ಮನ್ನಿಸುತ್ತಿದ್ದರೆ ಅವನಿಗೆ ಒಂದು ಕೂಡ ಕರ್ಮಪ್ರಕೃತಿಯ ಬಂಧವಾಗುವುದು ಕಡಿಮೆಯಾಗುವುದಿಲ್ಲ , ನಿಂತುಹೋಗುವುದಿಲ್ಲ.

ಸಮ್ಯಗ್ದೃಷ್ಟಿಯಿರುವಂಥ ತಿರ್ಯಂಚ ಪ್ರಾಣಿಯು ಹಸಿರು ಹುಲ್ಲನ್ನು ತಿನ್ನುವುದಿಲ್ಲ, ಸಮ್ಯಗ್ದೃಷ್ಟಿ ವ್ಯಾಪಾರಸ್ಥನು ಮುತ್ತು-ರತ್ನಗಳ ವ್ಯಾಪಾರಮಾಡುತ್ತಿರಲಿ, ಯಾವುದೇ ವಿಷಯಗಳಲ್ಲಿ ದೃಷ್ಟಿ ಹಾಕಿರಲಿ, ಕೃಷ್ಣ, ನೀಲ, ಕಾಪೋತ ಮೊದಲಾದ ಅಶುಭ ಲೇಶ್ಯೆಗಳ ಪರಿಣಮನದಲ್ಲಿ ನಿಂತುಕೊಂಡಿದ್ದರೂ, ಆ ಸಮಯದಲ್ಲಿ ಕೂಡ ಅವನಿಗೆ ಆತ್ಮನ ಅರಿವು-ಪ್ರಜ್ಞೆಯಿರುವುದರ ಕಾರಣದಿಂದ ನರಕಗತಿ, ಅನಂತಾನುಬಂಧಿಯ ಮತ್ತು ಮಿಥ್ಯಾತ್ವ ಮೊದಲಾದ ನಲವತ್ತೊಂದು ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ಯಾವನಿಗಾದರೂ ಮೊದಲೇ ನರಕದ ಆಯುಷ್ಯವು ಬಂಧವಾಗಿದ್ದರೆ ಮತ್ತು ಅದರ ನಂತರ ಸಮ್ಯಗ್ದರ್ಶನವನ್ನು ಪ್ರಾಪ್ತಮಾಡಿಕೊಂಡಿದ್ದರೆ ಆ ಜೀವನಿಗೆ ನರಕದಲ್ಲಿ ಅಥವಾ ನರಕಕ್ಕೆ ಹೋಗುವ ಮಾರ್ಗದಲ್ಲಿ ಕೂಡ ನಲವತ್ತೊಂದು ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ಇದು ಸಮ್ಯಗ್ದರ್ಶನದ ಮಹಾಮಹಿಮೆಯಿದೆ.

ಅಜ್ಞಾನಿಯಿರುವಂಥ ಜೀವನು ಎರಡು ವಸ್ತುಗಳನ್ನು ಹೊರತುಪಡಿಸಿ ಉಳಿದ ವಸ್ತುಗಳನ್ನು ತಿನ್ನದಿದ್ದರೂ, ಕೆಲವೊಂದು ಬಾರಿ ಮಾಸೋಪವಾಸ ಮಾಡುತ್ತಿದ್ದರೂ, ಶರೀರದಲ್ಲಿ ತುಂಬ ದುರ್ಬಲತೆಯು ಬಂದಿದ್ದರೂ, ಕೂಡ ಅಂತರಂಗದಲ್ಲಿ ವಿಕಲ್ಪದ ಅಭಿರುಚಿಯು ಇರುವುದರ ಕಾರಣದಿಂದ ಮತ್ತು ಪುಣ್ಯದಿಂದ ಲಾಭವಾಗುತ್ತದೆಯೆಂದು ಮನ್ನಿಸಿಕೊಂಡಿರುವುದರಿಂದ ಚೈತನ್ಯಕ್ಕೆ ನಿರಂತರ ಆವರಣವಾಗುತ್ತ ಹೋಗುತ್ತದೆ. ನಾನು ಈ ಧಾನ್ಯವನ್ನು ಬಿಟ್ಟುಕೊಡುವ ಸಾಧ್ಯತೆಯಿದೆ, ನಾನು ಶರೀರದ ಕ್ರಿಯೆಗಳನ್ನು ಮಾಡುವ ಸಾಧ್ಯತೆಯಿದೆಯೆಂಬ ಮನ್ನಣೆಯು ಇರುವ ಕಾರಣದಿಂದ ಜಡದ ಗ್ರಹಣ-ತ್ಯಾಗದಲ್ಲಿ ತಡೆದು ನಿಂತುಕೊಂಡಿರುವವನಿಗೆ ಸಂವರವು ಎಂದೂ ಆಗುವುದಿಲ್ಲ.

ಐದನೆಯ ಗುಣಸ್ಥಾನದಲ್ಲಿ ಶ್ರಾವಕನಿಗೆ ಎರಡು ಕಷಾಯಗಳ ಅಭಾವವು ವರ್ತಿಸುತ್ತದೆ, ಸ್ವರೂಪದ ಶಾಂತಿಯ ವೃದ್ಧಿಯಿದೆ, ಅವನಿಗೆ ಅವನ ಭೂಮಿಕೆಯಲ್ಲಿ ಬಂಧಿಸಲು ಯೋಗ್ಯವಿರುವಂಥ ಕರ್ಮಪ್ರಕೃತಿಗಳ ಬಂಧವಾಗುವುದಿಲ್ಲ. ಮುನಿಗಳಿಗೆ ಆರನೆಯ ಗುಣಸ್ಥಾನದಲ್ಲಿ ಶ್ರಾವಕನಿಗಿಂತಲೂ ಉಚ್ಚಸ್ಥಾನವಿರುತ್ತದೆ, ಅಧಿಕವಾದ ಆನಂದವಿರುತ್ತದೆ ಮತ್ತು ವೀರ್ಯವು ಕೂಡ ವಿಶೇಷವಿರುತ್ತದೆ. ಒಂದು ಕ್ಷಣದಲ್ಲಿ ಏಳನೆಯ ಗುಣಸ್ಥಾನಕ್ಕೆ ಏರುವಂಥ ಶುದ್ಧತೆಯು ಅಂತರ್ಯದಲ್ಲಿ ವೃದ್ಧಿಸುತ್ತದೆ. ಇಂಥ ಸಾಮರ್ಥ್ಯ ವೃದ್ಧಿಸುತ್ತದೆ.

ಅಜ್ಞಾನೀ ಜೀವನು ಮುನಿಯಾಗಿ ಒಂಭತ್ತನೆಯ ಗ್ರೈವೇಯಕದವರೆಗೆ ಹೋಗುತ್ತಾನೆ, ಆದರೂಕೂಡ ಮಿಥ್ಯಾತ್ವದ ಕಾರಣದಿಂದ ಅನಂತ ಸಂಸಾರಿಯಿದ್ದಾನೆ. ತ್ರಿಕಾಲೀ ದ್ರವ್ಯವು ಯಾವ ಪ್ರಕಾರವಿದೆ, ವಿಕಾರವು ಯಾವ ಪ್ರಕಾರವಿದೆ ಇವೇ ಮೊದಲಾದವುಗಳ ಅರಿವು-ಪ್ರಜ್ಞೆಯು ಯಾರಿಗೆ ಇರುವುದಿಲ್ಲ ಅವರಿಗೆ ಒಂದು ಕೂಡ ಪ್ರಕೃತಿಯ ಬಂಧವು ನಿಂತು ಹೋಗುವುದಿಲ್ಲ. ನಿಜಸ್ವರೂಪದ ಅರಿವಿನೊಡನೆ ರಮಿಸುವುದರ ಮೇಲೆ ಧರ್ಮದ ಆಧಾರವಿದೆ. ಯಾವಾಗ ಸ್ವರೂಪದ ಜ್ಞಾನವಾಗುತ್ತದೆ ಆಗ ಮಾಂಸ, ಮದ್ಯ ಮೊದಲಾದವುಗಳ ರಾಗವು ಆಗುವುದಿಲ್ಲ-ಇರುವುದಿಲ್ಲ ಸ್ವಭಾವದ ಕಾರಣದಿಂದ ಧರ್ಮವಾಗುತ್ತದೆ. ವಿಕಲ್ಪಗಳು ಉತ್ಪನ್ನವಾದರೆ ಅದು ಧರ್ಮವಲ್ಲ. ಈ ಪ್ರಕಾರ ಅಂತರ್ಯದ ದಶೆಯಾದರೆ ಆಸ್ರವದ ಬರುವಿಕೆಯು ನಿಂತುಹೋಗುತ್ತದೆ ಅದನ್ನು ಸಂವರವೆಂದು ಹೇಳಲಾಗುತ್ತದೆ.

ಈಗ ಸಾಮಾನ್ಯ ಸಂವರದ ಸ್ವರೂಪ ಹೇಳುತ್ತಾರೆ,-

**ಜಸ್ಸ ಣ ವಿಜ್ಜದಿ ರಾಗೋ ದೋಸೋ ಮೋಹೋ ವ ಸವ್ವದವ್ವೇಸು ।**
**ಣಾಸವದಿ ಸುಹಂ ಅಸುಹಂ ಸಮಸುಹದುಕ್ಖಸ್ಸ ಭಿಕ್ಖುಸ್ಸ ।।೧೪೨।।**

**ಸಮಸ್ತ ದ್ರವ್ಯಗಳ ಕುರಿತು ಯಾರಿಗೆ ರಾಗದ್ವೇಷವಥವ ಮೋಹವಿಲ್ಲ ।**
**ಸಮಸುಖದುಃಖಿಯಾದಾ ಭಿಕ್ಷುವಿಗೆ ಶುಭಮೇಣಶುಭ ಕರ್ಮಾಸ್ರವವಿಲ್ಲ ।।೧೪೨।।**

**ಅರ್ಥ ः-** ಯಾವ ಪುರುಷನಿಗೆ ಎಲ್ಲ ದ್ರವ್ಯಗಳ ಕುರಿತು ರಾಗ, ದ್ವೇಷ ಅಥವಾ ಮೋಹವು ಇರುವುದಿಲ್ಲ, ಆ ಸಮಾನ ಸುಖ-ದುಃಖದ ಭಿಕ್ಷುವಿಗೆ (-ಎಂದರೆ ಸುಖ-ದುಃಖಗಳ ಕುರಿತು ಸಮಭಾವದಿಂದಿರುವಂಥ ಮಹಾಮುನಿಗೆ) ಶುಭ ಮತ್ತು ಅಶುಭ ಕರ್ಮಗಳು ಆಸ್ರವಿತವಾಗುವುದಿಲ್ಲ.

ಇಲ್ಲಿ ಆರನೆಯ-ಏಳನೆಯ ಗುಣಸ್ಥಾನದಲ್ಲಿ ಜೀಕುತ್ತಿರುವ ಮುನಿಯ ಅಪೇಕ್ಷೆಯಿಂದ ಕಥನ ಮಾಡಲಾಗಿದೆ, ಮಹಾಮುನಿಗಳಿಗೆ ಸರ್ವಜ್ಞ ಭಗವಂತರನ್ನು ನೋಡುವುದರಿಂದ ಪ್ರಮೋದವು ಬರುವುದಿಲ್ಲ, ಆದರೆ ತಮ್ಮ ಕಾರಣದಿಂದ ಶುಭರಾಗವು ಉತ್ಪನ್ನವಾಗುತ್ತದೆ. ಮುನಿರಾಜರುಗಳಿಗೆ ಸಮಸ್ತ ಪರಪದಾರ್ಥಗಳು ಅವರ ಜ್ಞಾನದ ಜ್ಞೇಯವಿದೆ. ವಿರೋಧಿಯು ಬರುವುದರಿಂದ ಆ ವಿರೋಧಿಯ ಕಾರಣದಿಂದ ದ್ವೇಷವಾಗುವುದಿಲ್ಲ. ಈ ಪ್ರಕಾರದ ಯಥಾರ್ಥ ಶ್ರದ್ಧೆಯಂತೂ ಇರುತ್ತದೆ. ತದನಂತರ ತಮ್ಮ ಸ್ವಭಾವದಲ್ಲಿ ಲೀನತೆಯಿರುವುದರಿಂದ ರಾಗ-ದ್ವೇಷಗಳ ಉತ್ಪತ್ತಿಯೇ ಆಗುವುದಿಲ್ಲ. ಅದೇ ಪ್ರಕಾರ ಮುನಿರಾಜರಿಗೆ ತತ್ತ್ವದ ಶ್ರದ್ಧೆಯಂತೂ ಇದ್ದೇ ಇರುತ್ತದೆ. ಆದಕಾರಣ ಅವರು ಜೀವದಿಂದ ಶರೀರವು ನಡೆಯುತ್ತದೆಂದು ಮನ್ನಿಸುವುದಿಲ್ಲ. ಅದರಂತೆಯೇ ಶರೀರದಿಂದ ಜೀವದಲ್ಲಿ ಲಾಭವಾಗುತ್ತದೆಯೆಂದು ಕೂಡ ಮನ್ನಿಸುವುದಿಲ್ಲ. ಶರೀರದ ನಿರೋಗತೆಯಿಂದ ಧರ್ಮವಾಗುತ್ತದೆಯೆಂದು ಮತ್ತು ರೋಗದಿಂದ ಧರ್ಮವಾಗುವುದಿಲ್ಲವೆಂದು ಮನ್ನಿಸುವುದಿಲ್ಲ. ಅದರಂತೆ ಸುಖ-ದುಃಖಗಳ ಸಂಯೋಗಗಳಲ್ಲಿ ಸಮಾನ ಭಾವವು ವರ್ತಿಸುತ್ತಿರುತ್ತದೆ. ಅಂಥ ಮುನಿರಾಜರುಗಳಿಗೆ ಶುಭಾಶುಭದ ಆಶ್ರಯವು ಇರುವುದಿಲ್ಲ. ಆ ಮುನಿಮಹಾರಾಜರುಗಳು ತಮ್ಮ ಅಂತರ್ಯದ ದಶೆಯಲ್ಲಿ-ವೀತರಾಗ ಅವಸ್ಥೆಯಲ್ಲಿ ಸತತ ಜೀಕುತ್ತಿರುತ್ತಾರೆ. ಅಮಂದಾನಂದದಲ್ಲಿ ಕೇಳಿಯಾಡುತ್ತಾರೆ.

ಶ್ರೀ ವಾದಿರಾಜ ಮುನಿರಾಜರಿಗೆ ಕುಷ್ಠರೋಗವಿತ್ತು ಅದನ್ನು ಯಾವನೋ ಓರ್ವ ದುಷ್ಕರ್ಮಿಯು ಈರ್ಷೆಯ ಭಾವದಿಂದ ದೊರೆಯ ಸಾನ್ನಿಧ್ಯದಲ್ಲಿ ಹೋಗಿ ''ಜೈನ ಮುನಿಯು ಕುಷ್ಠ ರೋಗಿಯಿದ್ದಾನೆ''ಂದು ವರದಿ ಸಲ್ಲಿಸುತ್ತಾನೆ. ಅದನ್ನು ತಿಳಿದು ದೊರೆಯು ಓರ್ವ ಜೈನ ಶ್ರಾವಕನನ್ನು ಕರೆಸಿ 'ನಿಮ್ಮ ಗುರುಗಳು ಕುಷ್ಠರೋಗಿಯಿದ್ದಾರೇನು ?' ಎಂದು ಕೇಳುತ್ತಾನೆ. ಧರ್ಮದ ನಿಂದೆಯು ಆಗದಿರಲೆಂಬ ಕಾರಣದಿಂದ ಆ ಶ್ರಾವಕನು 'ಇಲ್ಲ, ನಮ್ಮ ಗುರುಗಳಿಗೆ ಕುಷ್ಟರೋಗವಿಲ್ಲ'ವೆಂದು ಹೇಳುತ್ತಾನೆ. ಅನಂತರ ಆ ಶ್ರಾವಕನು ಮುನಿಗಳಿರುವ ವನ ಪ್ರದೇಶಕ್ಕೆ ಹೋಗಿ, ನಡೆದ ಸಮಾಚಾರವನ್ನು ಮುನಿರಾಜರಿಗೆ ತಿಳಿಸುತ್ತಾನೆ. ಅದನ್ನು ಕೇಳಿ ಮುನಿರಾಜರು 'ನೀನು ಸುಳ್ಳು ಹೇಳುವ ಅವಶ್ಯಕತೆಯಾದರೂ ಏನಿತ್ತು, ಹೋಗಲಿ ಆದದ್ದಾಯಿತು ! ಇನ್ನು ಮುಂದೆ ಭವಿಷ್ಯದಲ್ಲಿ ಹೇಗಾಗುವುದಿದೆಯೋ ಹಾಗೆಯೇ ಆಗುತ್ತದೆ ಅದರ ಕುರಿತು ಚಿಂತೆ ಮಾಡುವ ಅವಶ್ಯಕತೆಯಿಲ್ಲವೆಂದು ಹೇಳುತ್ತಾರೆ. ಮುನಿರಾಜರಿಗೆ ಆಂತರ್ಯದ ಅರಿವಿತ್ತು. ಶರೀರದ ರೋಗವನ್ನು ಬದಲು ಮಾಡುವ-ಹೋಗಲಾಡಿಸುವ ಸಾಮರ್ಥ್ಯವು ಜೀವದಲ್ಲಿ ಇಲ್ಲ. ಆದರೆ ಜೈನ ಶಾಸನದ ಪ್ರಭಾವನೆಯಾಗುವ ಯೋಗವಿದ್ದರೆ ಶರೀರವು ತನ್ನ ಕಾರಣದಿಂದ ತಾನೇ ಪರಿವರ್ತನವಾಗಿ ಹೋಗುವುದು. ಅನಂತರ ವಾದಿರಾಜ ಮುನಿಮಹಾರಾಜರು ಸರ್ವಜ್ಞಪ್ರಭುಗಳ ಸ್ತುತಿ ಮಾಡುತ್ತಾರೆ.

''ಓ ಪ್ರಭು ! ತಮ್ಮ ಶುಭಾಗಮನವು ಯಾವ ನಗರದಲ್ಲಿ ಆಗುವುದಿದೆ, ಅಲ್ಲಿ ಇಂದ್ರಿನು ವಿಶಾಲವಾದ ಸಮವಸರಣದ ರಚನೆ ಮಾಡಿಸುತ್ತಾನೆಂದಮೇಲೆ ಓ ಪ್ರಭು ! ತಮ್ಮನ್ನು ನನ್ನ ಹೃದಯಲ್ಲಿ ತಂದು ಕೊಳ್ಳುವುದು ಮತ್ತು ಶರೀರದಲ್ಲಿ ರೋಗದ ವಿದ್ಯಮಾನತೆಯಿರುವುದು ಸಂಭವಿಸುವ ಸಾಧ್ಯತೆಯಿಲ್ಲ. ಓ ಪ್ರಭು ! ತಾವು ತಾಯಿಯ ಗರ್ಭದಲ್ಲಿ ಬರುವ ಮೊದಲು ಆರು ತಿಂಗಳುಗಳಿಂದ ಇಂದ್ರನು ಪ್ರತಿದಿನವೂ ಮೂರೂವರೆ ಕೋಟಿ ರತ್ನಗಳ ವೃಷ್ಟಿಯನ್ನೇ ವರ್ಷಿಸಿದ್ದನೆಂದಮೇಲೆ ಓ ಪ್ರಭು ! ನಾನು ತಮ್ಮನ್ನು ನನ್ನ ಅಂತರಂಗದಲ್ಲಿ ಧಾರಣ ಮಾಡಿದ್ದೇನೆ ಮತ್ತು ಶರೀರದಲ್ಲಿ ರೋಗವು ಉಳಿದುಕೊಂಡಿದೆಯೆಂಬುದು ಹೇಗೆ ಸಂಭವಿಸುವ ಸಾಧ್ಯತೆಯಿದೆ ?''

ಅಯ್ಯೋ ! ನೋಡಿರಿ ಜೈನ ಶಾಸನದ ಪ್ರಭಾವನೆಯ ಸಲುವಾಗಿ ಮುನಿರಾಜರಲ್ಲಿ ವಿಕಲ್ಪವು ಉತ್ಪನ್ನವಾಗಿದೆ. ಅದರಿಂದ ಭಕ್ತಿ ಮಾಡುತ್ತಿದ್ದಾರೆ. ಆದರೆ ಆ ಭಕ್ತಿಯ ವಿಕಲ್ಪದಿಂದ ಅಥವಾ ತಮ್ಮ ಮುನಿತನದಿಂದ ಶರೀರವು ಬದಲಿಸಿ ಹೋಗುವ ಸಂಭವವಿಲ್ಲವೆಂಬುದರ ಪೂರ್ಣಪ್ರಜ್ಞೆಯಿದೆ. ಶರೀರದ ಪರಿವರ್ತನವು ಶರೀರದ ಕಾರಣದಿಂದ ಇದೆ. ಆದರೆ ಯೋಗಾಯೋಗದಿಂದ ಸಾತಾದ ಉದಯದಿಂದ ಶರೀರವು ಬದಲಾಗತೊಡಗಿತು ಮತ್ತು ರೋಗದಿಂದ ಬಿಡುಗಡೆಯಾಗಿ ಹೋಯಿತು. ಒಂದು ಬೆರಳಿನಲ್ಲಿ ಮಾತ್ರ ಕುಷ್ಠವು ಉಳಿದುಕೊಂಡಿತು. ಎಂದರೆ ಅದು ಹೋಗುವುದಿರುವುದಿಲ್ಲ ಆದರೆ ಉಳಿಯುವ ಯೋಗ್ಯತೆಯುಳ್ಳದ್ದಿರುವುದರಿಂದ ಉಳಿದುಬಿಟ್ಟಿತು.

ಮರುದಿನ ಮುಂಜಾನೆ ದೊರೆಯು ಮುನಿರಾಜರನ್ನು ನೋಡಲು ಕಾಡಿಗೆ ಬರುತ್ತಾನೆ. ಬಂದು ಮುನಿರಾಜರನ್ನು ನೋಡುತ್ತಾನೆ, ಅವರ ಶರೀರವು ಪರಮ ಸುಂದರವಾಗಿತ್ತು. ದೊರೆಯು ಆಶ್ಚರ್ಯದಿಂದ ಕೇಳುತ್ತಾನೆ. 'ತಾವು ಕುಷ್ಠರೋಗಿಗಳೆಂಬ ಮಾತನ್ನು ನಾನು ಕೇಳಿದ್ದೆನು, ಆದರೆ...'

''ಆದರೇನು ನಾವು ಕುಷ್ಠರೋಗಿಗಳಿದ್ದ ಮಾತು ಸತ್ಯವಿದೆ, ಇದೋ ನೋಡಿ, ಈ ಬೆರಳಿನಲ್ಲಿ ಇನ್ನೂ ಕುಷ್ಠವಿದೆಯೆಂದು ಹೇಳುತ್ತಾ ಮುನಿರಾಜರು ತಮ್ಮ ಬೆರಳು ತೋರಿಸುತ್ತಾರೆ. ಶ್ರಾವಕನ ಭಕ್ತಿ ಮತ್ತು ಧರ್ಮದ ಪ್ರಭಾವನೆಯ ಉದಯದ ಕಾರಣದಿಂದ ಶರೀರವು ಪರಿವರ್ತನವಾಗಿ ಹೋಗಿದೆ. ಈ ಪ್ರಕಾರ ಜೈನಧರ್ಮದ ನಿಂದೆಯಾಗುವುದು ತಪ್ಪಿಹೋಯಿತು ಮತ್ತು ಜೈನ ಧರ್ಮದ ಪ್ರಭಾವನೆಯಾಯಿತೆಂದು ಹೇಳುತ್ತಾರೆ.''

ನೋಡಿರಿ ! ಮುನಿರಾಜರು ತಮ್ಮ ಶರೀರದ ಕ್ರಿಯೆಯ ಕರ್ತೃಗಳಿಲ್ಲ, ಕೇವಲ ವಿಕಲ್ಪವು ಉತ್ಪನ್ನವಾಗಿದೆ; ಆದರೆ ಯಾರು ಮುನಿರಾಜರಿಂದ ಶರೀರದ ಅವಸ್ಥೆಯು ಬದಲಾಗಿ ಹೋಯಿತೆಂದು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ. ಸನತ್ಕುಮಾರ ಮುನಿರಾಜರಿಗೆ ಏಳು ನೂರು ವರ್ಷಗಳವರೆಗೆ ಅಂಗಾಂಗಗಳು ಕರಗಿಹೋಗುವಂಥ ಕುಷ್ಠವಿತ್ತು. ಎಲ್ಲಿಯವರೆಗೆ ಚಕ್ರವರ್ತಿಯ ಪದದಲ್ಲಿದ್ದನು ಅಲ್ಲಿಯವರೆಗೆ ಶರೀರವು ರೋಗದಿಂದ ರಹಿತವಿತ್ತು. ಆದರೆ ಯಾವಾಗ ಮುನಿಯಾಗುತ್ತಾನೆ ಆಗ ಸೋರುತ್ತಿರುವಂಥ ಕುಷ್ಠ ! ಧರ್ಮ ಮಾಡುವವರಿಗೆ ರೋಗವು ಹೇಗಾಗುತ್ತದೆಂದು ಅಜ್ಞಾನೀ ಜೀವರುಗಳಿಗೆ ಅಚ್ಚರಿಯೆನಿಸಬಹುದು, ಆದರೆ ಸಹೋದರರೇ ! ಅದೆಲ್ಲವೂ ಕ್ರಮಬದ್ಧವಿದೆ. ಮುನಿರಾಜರುಗಳು ಸುಖ-ದುಃಖದ ಪ್ರಸಂಗಗಳಲ್ಲಿ ಅತ್ಯಂತ ನಿರ್ಲೇಪರಿರುತ್ತಾರೆ. ಶ್ರಾವಕನು ಹೇಳಿದ ಮಾತು ಸತ್ಯಸೃಷ್ಟಿಗಿಳಿಯಬಹುದು, ಮತ್ತು ಶರೀರದಲ್ಲಿ ಮೊದಲಿನ ಸುಂದರತೆಯು ಮರಳಿಬರಬಹುದೆಂದು ವಾದಿರಾಜ ಮುನಿಗಳು ಮನ್ನಿಸಿಕೊಂಡಿರಲಿಲ್ಲ. ಮುನಿರಾಜರುಗಳಂತೂ ಸುಖ-ದುಃಖದ ಪ್ರಸಂಗಗಳಲ್ಲಿ ಸಹಜ ದಶೆಯಲ್ಲಿ-ಸಮತೆಯ ರಸದಲ್ಲಿ ವರ್ತಿಸುತ್ತಾರೆ. ಆದುದರಿಂದ ಅವರಿಗೆ ಆಸ್ರವವಾಗುವುದಿಲ್ಲ. (ಅಲ್ಪದಾದ ಆಸ್ರವವಾಗುತ್ತದೆ, ಆದರೆ ಅದನ್ನು ಗೌಣ ಎಂದರೆ ಗಣನೆಯಲ್ಲಿ ತಂದುಕೊಳ್ಳುವುದಿಲ್ಲ.)

ಕಥಾನುಯೋಗದ (ಪ್ರಥಮಾನುಯೋಗದ) ಅಪೇಕ್ಷೆಯಿಂದ ಜೀವನು ಪರದ್ರವ್ಯದ ಕಾರ್ಯ ಮಾಡುವ ಸಾಧ್ಯತೆಯಿದೆ ಮತ್ತು ದ್ರವ್ಯಾನುಯೋಗದ ಅಪೇಕ್ಷೆಯಿಂದ ಜೀವನು ಪರದ್ರವ್ಯದ ಕಾರ್ಯ ಮಾಡುವ ಸಾಧ್ಯತೆಯಿಲ್ಲವೆಂದು ಹೇಳುತ್ತಾರೇನು ?

ಅಯ್ಯಾ ಮಹಾನುಭಾವರೇ ! ಯಾವುದೇ ಅನುಯೋಗವಿರಲಿ, ಅದರಲ್ಲಿ ಸಿದ್ಧಾಂತವಂತೂ ಒಂದೇ ಇರುತ್ತದೆ. ಶ್ರೀ ಮಾನತುಂಗಾಚಾರ್ಯದೇವರು ಭಕ್ತಾಮರ ಸ್ತೋತ್ರದ ರಚನೆ ಮಾಡಿದ್ದಾರೆ. ಅವು ನಲವತ್ತೆಂಟು ಶ್ಲೋಕಗಳಿಂದ ಕೂಡಿದೆ. ಇದರಿಂದ ನಲವತ್ತೆಂಟು ಬೀಗಗಳು ಮುರಿದು ಬೀಳುತ್ತವೆ, ಆದರೆ ಬೀಗಗಳು ಜೀವದ ಭಾವದಿಂದ ಅಥವಾ ಜೀವದ ಭಾವದ ಕಾರಣದಿಂದ ಮುರಿದು ಬೀಳಲಿಲ್ಲ ಮತ್ತು ಶಾಸ್ತ್ರದ ಪ್ರಭಾವನೆಯ ಕಾರಣದಿಂದ ಮುರಿದುಹೋಗುವುದೆಂದು ಕೂಡ ಇಲ್ಲ. ಪರಮಾಣುಗಳು ಕೂಡ ಶಕ್ತಿಸಂಪನ್ನವಾಗಿವೆ. ಅವುಗಳಲ್ಲಿ ದ್ರವ್ಯಗುಣವಿರುವ ಕಾರಣದಿಂದ ಯಾವಾಗಲೂ ಅವುಗಳ ಅವಸ್ಥೆಯು ಬದಲಾಗುತ್ತಿರುತ್ತದೆ. ಮುನಿರಾಜರಿಂದ ಬೀಗಗಳು ಕಳಚಿ ಬಿದ್ದುವೆಂದು ಮನ್ನಿಸುವುದು ಮುನಿರಾಜರುಗಳಿಗೆ ಕಲಂಕ ತಗಲಿಸುವುದರ ಸಮಾನವಿದೆ. ಶಾಸನದ ಪ್ರಭಾವನೆಯ ಉದಯ ವಾಗುವುದಿತ್ತು. ಯಾವುವೋ ಪರಮಾಣುಗಳು ಮುನಿಗಳನ್ನು ಬಂಧನದಿಂದ ಬಿಡುಗಡೆ ಮಾಡುವುದು ಅವುಗಳ ಕೈಯೊಳಗಿನ ಮಾತಿಲ್ಲ. ಮುನಿರಾಜರ ಕುರಿತು ಸಮತೆಯ ಮಾತು ನಡೆಯುತ್ತಿದೆ. ಮುನಿರಾಜರು ಹೇಳುವುದೇನೆಂದರೆ- ಎದುರಿಗೆ ಚೈತನ್ಯವಿರಬೇಕು, ನಮ್ಮ ಮೂಲಕ ಪರದ ಪರ್ಯಾಯವಾಗುವುದಿಲ್ಲ. ಮುನಿರಾಜರಿಗೆ ಅತತ್ತ್ವದ ಶ್ರದ್ಧೆಯಂತೂ ಇರುವುದಿಲ್ಲ ಆದರೆ ಸಮ್ಯಗ್ದರ್ಶನದ ನಂತರ ಸಮತೆಯ ಭಾವವಿರುತ್ತದೆ. ಶುಭಾಶುಭಭಾವವು ನನ್ನ ಸ್ವರೂಪವಿಲ್ಲವೆಂಬ ಶ್ರದ್ಧೆಯ ಅನಂತರ ಎಷ್ಟು ಸ್ವಭಾವದಲ್ಲಿ ಲೀನತೆಯು ವರ್ತಿಸುತ್ತದೆ-ರಾಗರಹಿತ ಭಾವವು ವರ್ತಿಸುತ್ತದೆ ಅಷ್ಟು ಪ್ರಮಾಣದಲ್ಲಿ ಕರ್ಮದ ಪರಮಾಣುಗಳು ಬರುವುದಿಲ್ಲ.

**ಭಾವಾರ್ಥ :-** ಮೈಮೇಲಿನ ಬಟ್ಟೆಯನ್ನು ಕಳಚಿಹಾಕುವುದರಿಂದೇನು ಮುನಿತನವು ಬರುವುದಿಲ್ಲ. ಸ್ವಭಾವದ ದೃಷ್ಟಿಯಾದ ನಂತರ ರಾಗ-ದ್ವೇಷಗಳು ಬಹಳಷ್ಟು ಕಡಿಮೆಯಾಗಿಹೋಗಿವೆ, ಸಮಸ್ತ ಪರದ್ರವ್ಯಗಳ ಕುರಿತು ರಾಗ-ದ್ವೇಷ-ಮೋಹಗಳು ನಾಶವಾಗಿ ಹೋಗಿವೆ, ಜಡದ ಪರ್ಯಾಯವು ಜಡದಿಂದಾಗುತ್ತದೆ, ಅದು ಆತ್ಮನಿಂದಾಗುವುದಿಲ್ಲ. ಜೋರು-ಜೋರಾಗಿ ಮಾತನಾಡಿದರೆ ಸಾಮಾನ್ಯವಾಗಿ ಎಲ್ಲ ಮನುಷ್ಯರ ಮೇಲೆ ಪ್ರಭಾವನೆಯಾಗುತ್ತದೆಯೆಂದು ಮುನಿರಾಜರು ಮನ್ನಿಸುವುದಿಲ್ಲ. ಯಾವ ಸಮಯದಲ್ಲಿ ಯಾವ ಜಡ ಪದಾರ್ಥಗಳ ಸ್ಥಿತಿಯು ಎಲ್ಲಿ, ಯಾವ ಪ್ರಕಾರ ಆಗುವುದಿರುವುದು ಅದೇ ಪ್ರಕಾರ ಆಗುತ್ತದೆ. ಅದರಲ್ಲಿ ಅದಲು-ಬದಲು ಮಾಡುವ ಶಕ್ತಿ-ಸಾಮರ್ಥ್ಯವು ಯಾರಲ್ಲೂ ಇರುವುದಿಲ್ಲ. ದೇಹದ ಸ್ಥಿತಿಯು ಪೂರ್ಣವಾಗುವುದಿದ್ದರೆ ಅಲ್ಲಿ ಯಾರು ಉಳಿಸಿಕೊಳ್ಳುವ ಸಾಧ್ಯತೆಯಿದೆ ? ಇಂದ್ರನಿಂದ ಕೂಡ ಉಳಿಸಿಕೊಳ್ಳುವ ಸಾಧ್ಯತೆಯಿಲ್ಲ. ಹೀಗೆ ಮಾಡುತ್ತಿದ್ದರೆ ಉಳಿಯಬಹುದಾಗಿತ್ತೆಂದು ಅಜ್ಞಾನಿಗಳ ಮನಸ್ಸಿನಲ್ಲಿ ಬರುತ್ತದೆ, ಆದರೆ ಜ್ಞಾನಿಗಳಿಗೆ ಪರದ ಪರ್ಯಾಯವನ್ನು ಬದಲು ಮಾಡುವ ಬುದ್ಧಿಯೆಂದೂ ಬರುವುದಿಲ್ಲ. ಮುನಿರಾಜರಿಗಂತೂ ಒಮ್ಮೆ ದೃಷ್ಟಿಯು ಪ್ರಾಪ್ತವಾದನಂತರ ಪ್ರತಿಯೊಂದು ಪದಾರ್ಥದ ಕುರಿತು ಸಮತೆಯ ಭಾವವು ವರ್ತಿಸುತ್ತದೆ. ಹೀಗೆ ಆಗದೇ ಹೋದರೆ ! ಎಂಬ ವಿಷಮತೆಯು ಮುನಿರಾಜರಿಗೆ ಇರುವುದೇ ಇಲ್ಲ ಸಮಸ್ತ ಪದಾರ್ಥಗಳ ಕುರಿತು ದೃಷ್ಟಿಪೂರ್ವಕವಾಗಿ ಸಮತೆಯ ಭಾವವು ವರ್ತಿಸುತ್ತಿರುವುದರಿಂದ ಶುಭಾಶುಭ ಭಾವಗಳು ಬರುವುದೇ ಇಲ್ಲ. ಯಾರಿಗೆ ಅಂತರ ದ್ರವ್ಯದ ಅವಲಂಬನೆಯು ವರ್ತಿಸುತ್ತದೆ ಅದನ್ನು ಸಂವರವೆಂದು ಹೇಳಲಾಗುತ್ತದೆ.

ಇದು ಸಂವರದ ಅಧಿಕಾರವಿದೆ. ಜನರು ಪ್ರೋಷಧ ಮತ್ತು ಸಾಮಾಯಿಕ ಮಾಡುತ್ತಾರೆ, ಆದರೆ ಅವು ಹೇಗೆ ಇವೆಯೆಂಬುದನ್ನು ಅನಂತ ಕಾಲದಿಂದ ಲಕ್ಷ್ಯದಲ್ಲಿ ತಂದುಕೊಂಡಿಲ್ಲ. ಎರಡು ಗಳಿಗೆ ಕಣ್ಣು ಮುಚ್ಚಿ ಕುಳಿತುಕೊಳ್ಳುವುದು

ಸಾಮಾಯಿಕದ ಸ್ವರೂಪವಿಲ್ಲ. ಶರೀರ ಮೊದಲಾದ ಪರಪದಾರ್ಥಗಳಿಂದ ಭಿನ್ನ ಮತ್ತು ರಾಗ-ದ್ವೇಷಗಳಿಂದ ರಹಿತನಿರುವಂಥ ಆತ್ಮನ ಅರಿವುಂಟಾಗುವುದು ಸಮ್ಯಗ್ದರ್ಶನವಿದೆ. ಅದರ ನಂತರ ಪರಪದಾರ್ಥಗಳ ಕುರಿತು ಸಾವಧಾನತೆಯಾಗದಿರುವುದು, ಅವ್ರತದ ಪ್ರಮಾದವು ನಿಂತು ಹೋಗುವುದು ಸಂವರವಿದೆ. ಇಲ್ಲಿ ಮುನಿತನದ ಮಾತು ನಡೆಯುತ್ತಿದೆ. ಜ್ಞಾನಿಗಳಿಗೆ ಕೆಳಗಿನ ಅವಸ್ಥೆಯಲ್ಲಿ ಆತ್ಮನ ಅರಿವು ಇರುತ್ತದೆ, ಆದರೆ ಇನ್ನೂ ಚಾರಿತ್ರದ ದೋಷವಿರುತ್ತದೆ, ಆದಾಗ್ಯೂ ಅನಂತಾನುಬಂಧಿಯ ರಾಗವು ಇರುವುದಿಲ್ಲ.

**ಪ್ರಶ್ನೆ :-** ಪರದ್ರವ್ಯಗಳಂತೂ ಹಾನಿಕಾರಕವಿಲ್ಲವೆಂದಮೇಲೆ ಧರ್ಮಾತ್ಮ ಜೀವನಿಗೆ ಮಾಂಸ ಭಕ್ಷಣದ ವೃತ್ತಿಯೇಕಾಗುವುದಿಲ್ಲ ಮತ್ತು ಅನ್ನ ಉಣ್ಣುವ ವೃತ್ತಿಯಾಗುತ್ತದೆ ಏಕೆ ? ಇವೆರಡಂತೂ ಪುದ್ಗಲ ದ್ರವ್ಯಗಳಿವೆ, ಪರವಿವೆಯಲ್ಲವೇ ?

**ಉತ್ತರ :-** ಆತ್ಮನ ಜ್ಞಾನವಾಗುವುದರಿಂದ, ಅನುಭೂತಿಯಾಗುವುದರಿಂದ ಸಮ್ಯಗ್ದರ್ಶನವಾಗುತ್ತದೆ ಮತ್ತು ಅನಂತಾನುಬಂಧಿಯ ಅಭಾವವಾಗಿ ಹೋಗುತ್ತದೆ ಎಂದರೆ ಸಂವರವಾಗುತ್ತದೆ. ಪತ್ನೀ, ಪುತ್ರ, ಕುಟುಂಬ, ವ್ಯಾಪಾರ ಮೊದಲಾದವುಗಳ ಕುರಿತು ಆಸಕ್ತಿಯ ರಾಗವು ವರ್ತಿಸುತ್ತದೆ, ಆದರೆ ಮಾಂಸಭಕ್ಷಣೆ ಮಾಡಬೇಕೆಂಬ ತೀವ್ರ ರಾಗವು ಅವರಿಗೆ ಇರುವುದಿಲ್ಲ. ಮಾಂಸವು ಪರದ್ರವ್ಯವಿದೆ ಅದು ಹಾನಿಕಾರಕವಿದೆ ಎಂಬುದಾಗಿಲ್ಲ. ಅದೇ ಪ್ರಕಾರ ಆ ವಸ್ತುವನ್ನು ಬಿಡುವುದರಿಂದ ಅಥವಾ ತಿನ್ನದಿರುವುದರಿಂದ ಧರ್ಮವಾಗುತ್ತದೆಂಬುದಾಗಿಯೂ ಕೂಡ ಇಲ್ಲ. ಪರವಸ್ತುಗಳು ಲಾಭದಾಯಕವಾಗಲಿ ಅಥವಾ ಹಾನಿಕಾರಕವಾಗಲಿ ಇರುವುದೇ ಇಲ್ಲ, ಆದರೆ ಆಂತರ್ಯದಲ್ಲಿ ಆತ್ಮನ ಅರಿವು ಉಂಟಾದ ನಂತರ ಮಾಂಸಭಕ್ಷಣ ಮಾಡುವಂಥ ತೀವ್ರ ರಾಗವು ಉತ್ಪನ್ನವಾಗುವುದೇ ಇಲ್ಲ. ಯಾವ ಪ್ರಕಾರ ನಿಜ ಸ್ತ್ರೀ ಮತ್ತು ಪರಸ್ತ್ರೀ ಇವರೀರ್ವರು ಸ್ತ್ರೀಯರಿದ್ದರೂ ಕೂಡ ಸಜ್ಜನ ಪುರುಷರಿಗೆ ಅವರೀರ್ವರ ಮಧ್ಯದಲ್ಲಿ ವಿವೇಕವು ವರ್ತಿಸುತ್ತದೆ, ಅದೇ ಪ್ರಕಾರ ಆತ್ಮನ ಅರಿವುಳ್ಳವನಿಗೆ ಪರಸ್ತ್ರೀಯರ ಕುರಿತು ರಾಗವಾಗುವುದಿಲ್ಲ. ಅದರಂತೆ ಮದ್ಯ, ಮಾಂಸ ಸೇವನೆಯ ರಾಗಭಾವವು ಕೂಡ ಇರುವುದಿಲ್ಲ. ತಮ್ಮ ಭೂಮಿಕೆಯ ಅನುಸಾರವಾಗಿ ಎಷ್ಟು-ಎಷ್ಟು ದ್ರವ್ಯದ ಅವಲಂಬನವು ವರ್ತಿಸುತ್ತದೆ ಅಷ್ಟು-ಅಷ್ಟು ರಾಗವು ಇರುವುದಿಲ್ಲ.

ಐದನೆಯ ಭೂಮಿಕೆಯಲ್ಲಿ (ಗುಣಸ್ಥಾನದಲ್ಲಿ) ದ್ರವ್ಯದ ವಿಶೇಷ ಅವಲಂಬನವು ವರ್ತಿಸುತ್ತದೆ. ಅದರಿಂದ ಅವರಿಗೆ ಯುದ್ಧದ ಪರಿಣಾಮವಿರುವುದಿಲ್ಲ. ಹನ್ನೆರಡು ವ್ರತ ಮೊದಲಾದವುಗಳ ಪರಿಣಾಮವಿರುತ್ತದೆ. ಅದರ ಅನುಸಾರವಾಗಿ ಬಾಹ್ಯ ವಸ್ತುಗಳ ಮೇಲಿನ ಲಕ್ಷ್ಯವು ಕೂಡ ಬಿಟ್ಟುಹೋಗುತ್ತದೆ. ಆರನೆಯ ಭೂಮಿಕೆಯಲ್ಲಿ (ಗುಣಸ್ಥಾನದಲ್ಲಿ) ವಿಶೇಷ ಶಾಂತಿಯು ಪ್ರಕಟವಾಗುತ್ತದೆ. ಅದರಿಂದಾಗಿ ವಸ್ತ್ರ-ಪಾತ್ರೆ ಮೊದಲಾದವುಗಳ ಮೇಲೆ ರಾಗವು ಉತ್ಪನ್ನವಾಗುವುದಿಲ್ಲ. ಅದರಿಂದ ಆ ಪ್ರಕಾರಗಳ ನಿಮಿತ್ತಗಳ ಮೇಲಿನ ಲಕ್ಷ್ಯವು ಬಿಟ್ಟು ಹೋಗುತ್ತದೆ.

ಇಲ್ಲಿ ಮುನಿರಾಜರ ಮಾತು ನಡೆಯುತ್ತಿದೆ-ಇಂದು ವರ್ತಮಾನಕಾಲದಲ್ಲಿಯಂತೂ ಒಬ್ಬರು ಕೂಡ ವೀತರಾಗ ಸಂತ ಮುನಿರಾಜರನ್ನು ಕಾಣುವುದು ದುಸ್ತರವಾಗಿಹೋಗಿದೆ. ಮುನಿರಾಜರಿಗೆ ಮೂರು ಕಷಾಯ ಚೌಕಡಿಗಳು ಬಿಟ್ಟು ಹೋಗಿರುತ್ತವೆ, ಅಷ್ಟಂತೂ ಶಾಂತಿಯು ಇದ್ದೇ ಇರುತ್ತದೆ. ಆದರೆ ಭಗವಂತರಿಗೆ ನಮಸ್ಕಾರ ಮಾಡುವುದು ಮೊದಲಾದ ಎಷ್ಟು ಶುಭರಾಗಗಳು ಉತ್ಪನ್ನವಾಗುತ್ತವೆ ಅಷ್ಟಂತೂ ಮಲಿನತೆಯಿದೆ ; ಆ ಮಲಿನತೆಯನ್ನು ಹೊರತುಪಡಿಸಿ ಎಷ್ಟು ರಾಗರಹಿತ ಪರಿಣಾಮವಾಗುತ್ತದೆ ಅಷ್ಟು ಶಾಂತಿಯಿದೆ ಮತ್ತು ಅಷ್ಟು ಸಂವರವಿದೆ.

೧) ಮುನಿರಾಜರಿಗೆ ಯಾವುದೇ ದ್ರವ್ಯದಲ್ಲಿ ಅತತ್ತ್ವಶ್ರದ್ಧೆಯಿರುವುದಿಲ್ಲ.

೨) ಮುನಿರಾಜರಿಗೆ ಸಮಸ್ತ ಪರದ್ರವ್ಯಗಳ ಕುರಿತು ರಾಗ ಅಥವಾ ದ್ವೇಷವಾಗುವುದಿಲ್ಲ. ಭಗವಂತರ ಕುರಿತು ಕೂಡ

ರಾಗವು ಉತ್ಪನ್ನವಾಗುವುದಿಲ್ಲ ಮತ್ತು ಯಾರ ಕುರಿತು ದ್ವೇಷವಾಗುವುದಿಲ್ಲ. ಎಷ್ಟು ಪುಣ್ಯ-ಪಾಪಗಳ ರೂಪದ ಆಸ್ರವವು ನಿಂತುಹೋಗುತ್ತದೆ ಅಷ್ಟು ಸಂವರವಿದೆ. ಇಲ್ಲಿ ಏಳನೆಯ ಗುಣಸ್ಥಾನದಲ್ಲಿರುವ ಮುನಿರಾಜರ ಸಂವರದ ಮಾತು ನಡೆಯುತ್ತಿದೆ.

ಯಾವುದನ್ನು ಮುನಿತನವೆಂದು ಹೇಳಬೇಕೆನ್ನುವುದು ಜನಗಳ ಶ್ರದ್ಧೆಯಲ್ಲಿ ನೆಲೆ ನಿಂತುಕೊಂಡಿಲ್ಲ ಮತ್ತು ಅವರಿವರನ್ನು ಮುನಿಗಳೆಂದು ಮನ್ನಿಸಿಕೊಂಡಿದ್ದಾರೆ. ಯಾರಿಗೆ ಗಣಧರದೇವ ಮೊದಲಾದವರು ನಮಸ್ಕಾರ ಮಾಡುತ್ತಾರೆ ಅಂಥ ಮಹಾ ಮುನಿಗಳು ಎಂದರೆ ಯಾರು ತಮ್ಮ ಚೈತನ್ಯದಲ್ಲಿ ಲೀನರಾಗಿ ಹೋಗಿದ್ದಾರೆ, ಅವರಿಗೆ ಸಮಸ್ತ ದ್ರವ್ಯಗಳ ಕುರಿತು ಸಮಭಾವವಿದೆ, ಇದು ಸತ್ಯವಿದೆಯೆಂದು ಹೇಳುವಂಥ ರಾಗ ಮತ್ತು ಇನ್ನೊಂದು ಅಸತ್ಯವಿದೆಯೆಂದು ಹೇಳುವಂಥ ದ್ವೇಷವು ಏಳನೆಯ ಭೂಮಿಕೆಯಲ್ಲಿ ಉತ್ಪನ್ನವಾಗುವುದಿಲ್ಲ.

**ಪ್ರಶ್ನೆ :-** ಪರದ್ರವ್ಯದ ಕ್ರಿಯೆಯನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲದಿದ್ದರೆ ಆ ಪರದ್ರವ್ಯದ ಕ್ರಿಯೆಗಳು ಬೇಕಾದ ಹಾಗೆ ಆಗಿಹೋದರೆ ಏನು ಮಾಡುವುದು ?

**ಉತ್ತರ :-** ನಾಲ್ಕನೆಯ ಗುಣಸ್ಥಾನದಲ್ಲಿ ತಮ್ಮ ಸ್ವಭಾವದ ಅರಿವುಂಟಾದವರಿಗೆ ಮಾಂಸ ಮೊದಲಾದವುಗಳನ್ನು ಭಕ್ಷಣ ಮಾಡುವ ರಾಗದ ವೃತ್ತಿಯು ಆಗುವುದಿಲ್ಲ. ಎಂದರೆ ಮಾಂಸ-ಮದ್ಯ ಮೊದಲಾದವುಗಳ ನಿಮಿತ್ತವು ಬಿಟ್ಟು ಹೋಗುತ್ತದೆ. ಆರನೆಯ ಗುಣಸ್ಥಾನದಲ್ಲಿ ಅಂತರ್ಯದೊಳಗೆ ವೀತರಾಗ ದಶೆಯಾದೊಡನೆ ವಸ್ತ್ರ-ಪಾತ್ರೆ ಮೊದಲಾದುವನ್ನು ಧಾರಣ ಮಾಡುವ ರಾಗವು ಉತ್ಪನ್ನವಾಗುವುದಿಲ್ಲ. ಆದುದರಿಂದ ವಸ್ತ್ರ-ಪಾತ್ರೆ ಮೊದಲಾದವುಗಳ ನಿಮಿತ್ತವು ಬಿಟ್ಟುಹೋಗುತ್ತದೆ. ಎಷ್ಟು ಪ್ರಮಾಣದಲ್ಲಿ ಸ್ವಭಾವದ ಅವಲಂಬನವು ವರ್ತಿಸುತ್ತದೆ ಅಷ್ಟು ಪ್ರಮಾಣದಲ್ಲಿ ರಾಗವು ಉತ್ಪನ್ನವಾಗುವುದಿಲ್ಲ ಮತ್ತು ಅಷ್ಟು ನಿಮಿತ್ತಗಳು ಸ್ವಾಭಾವಿಕವಾಗಿ ಬಿಟ್ಟುಹೋಗುತ್ತವೆ. ಬಾಹ್ಯದಲ್ಲಿ ವಸ್ತ್ರ-ಪಾತ್ರೆಗಳಿರುವುದು ಮತ್ತು ಮುನಿತನ ಪ್ರಕಟವಾಗುವುದೆನ್ನುವುದು ಎಂದೂ ಸಂಭವವಿಲ್ಲ. ಆದರೆ ಅಂತರ್ಯದಲ್ಲಿ ವೀತರಾಗದಶೆಗೆ ಬಾಹ್ಯದಲ್ಲಿ ಶರೀರದ ನಗ್ನದಶೆಗೆ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಯಾವ ಪ್ರಕಾರ ಬೇಸಿಗೆ ಕಾಲದ ಉಷ್ಣತೆಯಲ್ಲಿ ಶ್ರೀಖಂಡದಿಂದ ತೃಪ್ತಿಯೆನಿಸುತ್ತದೆಯೋ ಅದೇ ಪ್ರಕಾರ ಆತ್ಮನ ಅರಿವು ಉಂಟಾದ ನಂತರ ಒಳಗೆ ವೀತರಾಗ ದಶೆಯು ಪ್ರಕಟವಾಯಿತೆಂದರೆ ಅಂತರ್ಯದೊಳಗಿಂದ ಶಾಂತಿಯು ಪ್ರಕಟವಾಗುತ್ತದೆ. ಈ ಪ್ರಕಾರ ಒಂದು ಏಕಾಕಾರದ ಆನಂದ ಸ್ವರೂಪದಲ್ಲಿ ಮುಳುಗೇಳುವುದನ್ನು ಸಂವರವೆಂದು ಹೇಳುತ್ತಾರೆ. ಈ ಪ್ರಕಾರದ ದಶೆಯು ಮುನಿರಾಜರುಗಳಿಗೆ ಸಾವಿರಾರು ಬಾರಿ ಬರುತ್ತದೆ. ಯಾವ ಪ್ರಕಾರ ಸಿದ್ಧರ ಅನುಭವವಿದೆ ಅದೇ ಪ್ರಕಾರ ಆಂಶಿಕ ಅನುಭವವು ಮುನಿರಾಜರುಗಳಿಗೆ ಇರುತ್ತದೆ. ಯಾರಿಗೆ ಸುಖ-ದುಃಖಗಳ ಪ್ರಸಂಗದಲ್ಲಿ ಹರ್ಷ-ಶೋಕಗಳು ಉತ್ಪನ್ನವಾಗುವುದಿಲ್ಲ ಅಂಥ ಮುನಿರಾಜರಿಗೆ ಭಾವಸಂವರವಿರುತ್ತದೆ.

ಕರ್ಮರೂಪದ ಛಿದ್ರವನ್ನು ಮುಚ್ಚಿಬಿಡುವುದರಿಂದ ಧರ್ಮವಾಗುತ್ತದೆಯೆಂದು ಅದೆಷ್ಟೋ ಜನರು ಮನ್ನಿಸಿಕೊಂಡಿದ್ದಾರೆ, ಆದರೆ ಅದು ಅಪರಾಧವಿದೆ. ಕರ್ಮವು ಪರವಸ್ತುವಿದೆ, ಆದರೆ ಅಂತರ್ಯದಲ್ಲಿ ಕರ್ಮದಿಂದ ರಹಿತವಿರುವ ಶುದ್ಧ ಆತ್ಮದ್ರವ್ಯದ ದೃಷ್ಟಿಮಾಡಿದರೆ ಮಿಥ್ಯಾತ್ವದ ಛಿದ್ರವು ಮುಚ್ಚಿಹೋಯಿತೆಂದು ಹೇಳಲಾಗುವುದು ಮತ್ತು ಆತ್ಮದ್ರವ್ಯದಲ್ಲಿ ಲೀನತೆ ಮಾಡಿದರೆ ಆಸ್ರವದ ಛಿದ್ರವು ಮುಚ್ಚಿಹೋಯಿತೆಂದು ಹೇಳಲಾಗುವುದು ಆದರೆ ಇನ್ನೂ ಪರ್ಯಾಯಬುದ್ಧಿಯ ಛಿದ್ರವು ಬಿದ್ದುಕೊಂಡಿದೆ, ಸ್ವಭಾವಬುದ್ಧಿ ಮಾಡುವುದರಿಂದ ಅದರ ನಾಶವಾಗುತ್ತದೆ. ಮೋಹ-ರಾಗ-ದ್ವೇಷಗಳು ನಾಶವಾಗಿ ಹೋದನಂತರ ಕರ್ಮಗಳು ತಾನಾಗಿಯೇ ನಾಶಹೊಂದುತ್ತವೆ. ಕರ್ಮಗಳನ್ನು ನಾಶಮಾಡಬೇಕಾಗುವುದಿಲ್ಲ. ಇನ್ನು ಅದೆಷ್ಟೋ ಜೀವರುಗಳು ಮಹಾವ್ರತ ಶುಭರಾಗದಿಂದ ಸಂವರವಾಗುತ್ತದೆಯೆಂದು ಮನ್ನಿಸಿಕೊಂಡಿದ್ದಾರೆ. ಉಪವಾಸ ಮೊದಲಾದ ಶುಭರಾಗದಿಂದ ನಿರ್ಜರೆಯಾಗುತ್ತದೆಯೆಂದು ಮನ್ನಿಸಿಕೊಂಡಿದ್ದಾರೆ.

ಅದು ಕೂಡ ಮಹಾನ ದೋಷವಿದೆ. ಅವೆರಡೂ ಶುಭರಾಗಗಳಿವೆ, ಅವುಗಳಿಂದ ರಹಿತನಿರುವಂಥ ಆತ್ಮನು ಶುದ್ಧನಿದ್ದಾನೆ. ಇಂಥ ಶುದ್ಧ ಆತ್ಮನ ಶ್ರದ್ಧೆಯಿಂದ ಭಾವಸಂವರವಾಗುತ್ತದೆ. ಅದರ ಕಾರಣದಿಂದ ಕರ್ಮಗಳು ಬರುವುದಿಲ್ಲ.

ಈಗ ಸಂವರದ ವಿಶೇಷ ಸ್ವರೂಪವನ್ನು ಹೇಳುತ್ತಾರೆ, -

**ಜಸ್ಸ ಜದಾ ಖಲು ಪುಣ್ಣಂ ಜೋಗೇ ಪಾವಂ ಚ ಣತ್ಥಿ ವಿರದಸ್ಸ ।**
**ಸಂವರಣಂ ತಸ್ಸ ತದಾ ಸುಹಾಸುಹಕದಸ್ಸ ಕಮ್ಮಸ್ಸ ॥೧೪೩॥**

**ಯಾವಾಗ ಯೋಗದಲಿ ಪುಣ್ಯಪಾಪವಿಲ್ಲದೆ ನಿಜದಿ ವಿರಕ್ತಿ ವರ್ತಿಪುದು ।**
**ಆವಾಗ ಅವನಿಗೆ ಶುಭಾಶುಭ ಭಾವಕೃತ ಕರ್ಮದ ಸಂವರವಾಗುವುದು ॥೧೪೩॥**

**ಅರ್ಥ :-** ಪರದ್ರವ್ಯಗಳ ತ್ಯಾಗದಿಂದ ತ್ಯಾಗಿಯಾಗುತ್ತಾನೆ-ಎಂದರೆ ಯಾವ ಜೀವನು ನಿಶ್ಚಯದಿಂದ ಪರದ್ರವ್ಯಗಳ ಕುರಿತು ಉಪೇಕ್ಷೆಯಭಾವ ಧಾರಣ ಮಾಡುತ್ತಾನೆ ಅವನಿಗೆ ಸಂವರವಾಗುತ್ತದೆ. ಇಲ್ಲಿ ಮುನಿರಾಜರುಗಳ ಮಾತು ನಡೆಯುತ್ತಿದೆ. ದಯೆ-ದಾನ ಇವೇ ಮೊದಲಾದವುಗಳ ಭಾವವು ಶುಭವಿದೆ, ಮತ್ತು ಹಿಂಸೆ, ಕಳವು, ಅಸತ್ಯ ಮೊದಲಾದವುಗಳ ಭಾವವು ಅಶುಭವಿದೆ. ಇವೆರಡೂ ಮಲಿನ ಭಾವಗಳಿಂದ ಆಸ್ರವವಿದೆ. ಮುನಿರಾಜರುಗಳಿಗೆ ಮನ-ವಚನ-ಕಾಯದ ನಿಮಿತ್ತದಿಂದ ಶುಭಾಶುಭ ಭಾವಗಳು ಆಗುವುದಿಲ್ಲ, ಮತ್ತು ಸ್ವಭಾವದಲ್ಲಿ ಲೀನತೆಯು ವರ್ತಿಸುತ್ತದೆ. ಆ ಸಮಯದಲ್ಲಿ ಕರ್ಮಗಳ ಬರುವಿಕೆಯು ನಿಂತು ಹೋಗುವುದು ಅದು ದ್ರವ್ಯಸಂವರವಿದೆ.

**ಭಾವಾರ್ಥ :-** ಯಾವಾಗ ಮಹಾ ಮುನಿರಾಜರುಗಳು ಎಲ್ಲ ಪ್ರಕಾರದಿಂದ ಶುಭಾಶುಭ ಯೋಗಗಳ ಪ್ರವೃತ್ತಿಯಿಂದ ನಿವೃತ್ತರಾಗಿಬಿಡುತ್ತಾರೆ ಆಗ ಭವಿಷ್ಯ ಎಂದರೆ ಮುಂಬರುವ ಕರ್ಮಗಳ ನಿರೋಧವಾಗಿ ಹೋಗುತ್ತದೆ. ಮಿಥ್ಯಾಭ್ರಾಂತಿ, ರಾಗ-ದ್ವೇಷ, ದಯೆ-ದಾನದ ಪರಿಣಾಮವು ಭಾವಕರ್ಮವಿದೆ. ಆ ಭಾವಕರ್ಮವು ಯಾವಾಗ ಬರುವುದು ಆಗ ಅದರ ನಾಶವಾಗುತ್ತಿರುವುದೇನು? ಇಲ್ಲ, ಆದರೆ ಶುದ್ಧ ಚೈತನ್ಯ ಸ್ವಭಾವದ ಅವಲಂಬನೆ ತೆಗೆದುಕೊಳ್ಳುವುದರಿಂದ ಆ ರಾಗ-ದ್ವೇಷಗಳ ಉತ್ಪತ್ತಿಯೇ ಆಗುವುದಿಲ್ಲ. ಅದನ್ನು ಭಾವಕರ್ಮಗಳ ನಾಶಮಾಡಿತೆಂದು ಹೇಳಲಾಗುತ್ತದೆ. ಅದರ ನಿಮಿತ್ತದಿಂದ ದ್ರವ್ಯಕರ್ಮಗಳ ಬರುವಿಕೆಯು ತಾನಾಗಿಯೇ ನಿಂತು ಹೋಗುತ್ತದೆ. ಮೂಲ ಕಾರಣವು ಭಾವಕರ್ಮವಿದೆ. ಯಾವಾಗ ಭಾವಕರ್ಮವು ಇರುವುದಿಲ್ಲ ಆಗ ದ್ರವ್ಯಕರ್ಮವು ಎಲ್ಲಿಂದ ಬರುವುದು? ಎಂದರೆ ಬರುವುದೇ ಇಲ್ಲ. ಆದುದರಿಂದ ಶುಭಾಶುಭ ಭಾವಗಳ ನಿರೋಧವಾಗುವುದು ಭಾವಪುಣ್ಯ-ಪಾಪದ ಸಂವರವಿದೆ ಮತ್ತು ಭಾವಸಂವರವು ದ್ರವ್ಯಪುಣ್ಯ-ಪಾಪಗಳ ನಿರೋಧದ ಪ್ರಮುಖ ಹೇತುವಿದೆಯೆಂದು ನಿಶ್ಚಿತವಾಗುತ್ತದೆ.

ಅಯ್ಯಾ ! ಜೀವರುಗಳಿಗೆ ವಸ್ತುಸ್ವಭಾವದ ಅರಿವೇ ಇರುವುದಿಲ್ಲ ಮತ್ತು ಪ್ರತಿದಿನ ತಪಸ್ಸು ಮಾಡುವುದರಿಂದ ಹಾಗೂ ಪ್ರತಿಕ್ರಮಣ ಮೊದಲಾದುವನ್ನು ಮಾಡುವುದರಿಂದ ನಿರ್ಜರೆಯಾಗುತ್ತದೆಯೆಂದು ಮನ್ನಿಸಿಕೊಂಡಿದ್ದಾರೆ. ಆದರೆ ಮಹನೀಯರೆ ! ಮಿಥ್ಯಾತ್ವದ ಪ್ರತಿಕ್ರಮಣ ಮಾಡದ ಹೊರತಾಗಿ ಅವ್ರತ ಅಥವಾ ಪ್ರಮಾದದ ಪ್ರತಿಕ್ರಮಣವಾಗುವ ಸಾಧ್ಯತೆಯಿಲ್ಲ. ಯಾರಿಗೆ ಪುಣ್ಯದ ಅಭಿರುಚಿಯಿದೆ ಅವರಿಗೆ ಅಂತರಂಗದಲ್ಲಿ ನಿಮಿತ್ತದ ಅಭಿರುಚಿಯು ಬಿಟ್ಟುಹೋಗಿರುವುದಿಲ್ಲ ಮತ್ತು ಅವರಿಗೆ ಸ್ವಭಾವದ ದೃಷ್ಟಿಯು ಆಗಿರುವುದೇ ಇಲ್ಲ. ಆದುದರಿಂದ ಅವರಿಗೆ ಸಂವರವು ಇರುವುದೇ ಇಲ್ಲ. ತನ್ನ ಶುದ್ಧ ಆತ್ಮನ ಅವಲಂಬನದಿಂದ ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಪ್ರಕಟವಾಗಿವೆ ಮತ್ತು ಅಶುದ್ಧತೆಯು ನಿಂತು ಹೋಗಿದೆ ಅದು ಭಾವಸಂವರವಿದೆ ಮತ್ತು ಅಷ್ಟು ಪ್ರಮಾಣದಲ್ಲಿ ಕರ್ಮಗಳ ಬರುವಿಕೆಯು ನಿಂತು ಹೋಗಿದೆ ಅದು ದ್ರವ್ಯಸಂವರವಿದೆ.

ಈಗ ನಿರ್ಜರೆಯೆಂಬ ಪದಾರ್ಥದ ವ್ಯಾಖ್ಯಾನ ಮಾಡುತ್ತಾರೆ. ಆತ್ಮನಲ್ಲಿ ಶುದ್ಧಿಯ ವೃದ್ಧಿಯಾಗುವುದನ್ನು ನಿರ್ಜರೆಯೆಂದು ಹೇಳಲಾಗುತ್ತದೆ.

**ಸಂವರಜೋಗೇಹಿಂ ಜುದೋ ತವೇಹಿಂ ಜೋ ಚಿಟ್ಠದೇ ಬಹುವಿಹೇಹಿಂ ।**
**ಕಮ್ಮಾಣಂ ಣಿಜ್ಜರಣಂ ಬಹುಗಾಣಂ ಕುಣದಿ ಸೋ ಣಿಯದಂ ॥೧೪೪॥**

**ಯಾವನು ಸಂವರಯೋಗದಿಂ ಯುಕ್ತನಿದ್ದು ಬಹುವಿಧ ತಪಸಹವರ್ತಿಪನು ।**
**ಅವನು ನಿಯಮದಿಂದನೇಕ ಕರ್ಮಗಳ ನಿರ್ಜರೆಯ ಮಾಡುವನು ॥೧೪೪॥**

ಯಾವ ಭೇದವಿಜ್ಞಾನಿಯು ಶುಭಾಶುಭ ಭಾವಾಸ್ರವಗಳ ನಿರೋಧರೂಪದ ಸಂವರ ಮತ್ತು ಶುದ್ಧೋಪಯೋಗ ರೂಪದ ಯೋಗದಿಂದ ಸಂಯುಕ್ತನಿರುತ್ತ ಅನೇಕ ಪ್ರಕಾರದ ಅಂತರಂಗ-ಬಹಿರಂಗ ತಪಸ್ಸುಗಳನ್ನು ಮಾಡುತ್ತಾನೆ, ಅವನು ಬಹಳಷ್ಟು ಕರ್ಮಗಳ ನಿರ್ಜರೆ ಮಾಡುತ್ತಾನೆ.

ಭೇದವಿಜ್ಞಾನಿಯಿರುವ ಜೀವನಿಗೆ ಯೋಗವಿರುತ್ತದೆ, ಆದರೆ ಮಿಥ್ಯಾದೃಷ್ಟಿ ಜೀವರುಗಳಿಗೆ ಯೋಗವಿರುವುದಿಲ್ಲ. ಅಯ್ಯೋ ! ಆತ್ಮನ ಜ್ಞಾನವಿಲ್ಲದೆ-ಅರಿವಿಲ್ಲದೆ ಯಾವುದರ ಧ್ಯಾನ ಮಾಡುವುದು ? ಲೋಕದಲ್ಲಿ ಅನಂತ ಆತ್ಮರುಗಳಿದ್ದಾರೆ, ಅನಂತ ಪರಮಾಣುಗಳಿವೆ. ಸಂಸಾರದಲ್ಲಿ ಆತ್ಮನೊಳಗೆ ಸಮಯ-ಸಮಯಕ್ಕೆ ವಿಕಾರಗಳಾಗುತ್ತವೆ. ಅದರಲ್ಲಿ ಕರ್ಮವು ನಿಮಿತ್ತವಿದೆ. ಆದಾಗ್ಯೂ ಆತ್ಮನು ದ್ರವ್ಯದಿಂದ ಶುದ್ಧನಿದ್ದಾನೆಂಬ ಅರಿವಿಲ್ಲದೆ-ಜ್ಞಾನವಿಲ್ಲದೆ ಯೋಗವಾಗುವ ಸಾಧ್ಯತೆಯಿಲ್ಲ, ಧ್ಯಾನವಾಗುವ ಸಾಧ್ಯತೆಯಿಲ್ಲ.

ಸಮಭಾವ ಕಾಯ್ದುಕೊಳ್ಳಬೇಕೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ, ಆದರೆ ಸಮಭಾವದ ಅರ್ಥವನ್ನು ತಿಳಿದುಕೊಳ್ಳುವುದಿಲ್ಲ. ಎಲ್ಲರ ಜತೆಯಲ್ಲಿ ತಿನ್ನುವುದು-ಉಣ್ಣುವುದು-ಕುಡಿಯುವುದು ಸಮತೆಯ ಭಾವವಲ್ಲ ಅದರಂತೆ ಸುದೇವ ಹಾಗೂ ಕುದೇವರನ್ನು ಸಮವಾಗಿ ಮನ್ನಿಸುವುದು ಸಮಭಾವವಲ್ಲ, ಆದರೆ ಅದು ಮೂರ್ಖತನವಿದೆ. ಆದುದರಿಂದ ಸುದೇವರುಗಳನ್ನು ಸುದೇವರುಗಳೆಂದು ತಿಳಿದುಕೊಳ್ಳುವುದು ಮತ್ತು ಸ್ಥಾಪಿಸಿಕೊಳ್ಳುವುದು, ಕುದೇವರುಗಳನ್ನು ಕುದೇವರುಗಳೆಂದು ತಿಳಿದುಕೊಳ್ಳುವುದು ಮತ್ತು ಶ್ರದ್ಧೆ ಮಾಡುವುದು ಅದರಂತೆ ಸುಧರ್ಮವನ್ನು ಸುಧರ್ಮವೆಂದು ತಿಳಿದುಕೊಳ್ಳುವುದು, ಕುಧರ್ಮವನ್ನು ಕುಧರ್ಮವೆಂದು ತಿಳಿದುಕೊಳ್ಳುವುದು ಸಮದರ್ಶಿತ್ವವಿದೆ. ಪತ್ನಿ ಮತ್ತು ಸಹೋದರಿ ಇವೆರಡೂ ಸ್ತ್ರೀಯ ಪರ್ಯಾಯಗಳಿವೆ, ಆದರೆ ಇವರೀರ್ವರನ್ನು ಸರಿಸಮಾನವಾಗಿ ಮನ್ನಿಸುವುದು ಮೂರ್ಖತೆಯಿದೆ. ಅವನಿಗೆ ವರ್ತಮಾನ ಪರ್ಯಾಯದ ವಿವೇಕ ಮಾಡಿಕೊಳ್ಳುವುದು ಇಷ್ಟವಿಲ್ಲ. ಅದರಂತೆ ಕುದೇವ-ಸುದೇವ ಮೊದಲಾದವರು ಜೀವದ್ರವ್ಯಗಳಿದ್ದರೂ ಕೂಡ ಪರ್ಯಾಯದಲ್ಲಿ ತುಂಬ ಅಂತರವಿದೆ.

ಯಾರು ಈ ಪ್ರಕಾರ ವರ್ತಮಾನ ಪರ್ಯಾಯದ ಅಂತರವನ್ನು ತಿಳಿದುಕೊಳ್ಳುವುದಿಲ್ಲ ಅವರು ತಮ್ಮ ಆತ್ಮನು ಪರದಿಂದ ಬೇರೆಯಿದ್ದಾನೆಂದು ವಿವೇಕ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಯಾರು ಪರ್ಯಾಯದ ಅಂತರವನ್ನು ಮನ್ನಿಸುವುದಿಲ್ಲ ಮತ್ತು ಒಂದು ದ್ರವ್ಯವನ್ನು ಮನ್ನಿಸುತ್ತಾರೆ ಅವರು ಭೇದಜ್ಞಾನಿಗಳಿಲ್ಲ. ಸುದೇವ ಮತ್ತು ಕುದೇವರ ಮಧ್ಯದಲ್ಲಿನ ಭೇದ ತಿಳಿಯುತ್ತಾರೆ. ಜಡ ಮತ್ತು ಚೈತನ್ಯದ ಭೇದ ತಿಳಿಯುತ್ತಾರೆ, ವಿಕಾರ ಮತ್ತು ಅವಿಕಾರದ ಭೇದ ತಿಳಿಯುತ್ತಾರೆ, ಬಂಧ ಮತ್ತು ಅಬಂಧದ ಮಧ್ಯದಲ್ಲಿರುವ ಭೇದ ತಿಳಿಯುತ್ತಾರೆ, ಶಾಂತಿ ಮತ್ತು ಅಶಾಂತಿಯ ಮಧ್ಯದಲ್ಲಿರುವ ಭೇದ ತಿಳಿಯುತ್ತಾರೆ, (ಭೇದವೆಂದರೆ ಒಳಿತು-ಕೆಡಕುಗಳ ತಿಳಿಯುವಿಕೆ) ಅವರು ಭೇದಜ್ಞಾನಿಗಳಿದ್ದಾರೆ. ಅವರಿಗೆ ಶುಭಾಶುಭ ಭಾವಗಳು ಉತ್ಪನ್ನವಾಗುವುದಿಲ್ಲ, ಅವರಿಗೆ ಸಂವರವಿದೆ. ಅವರಿಗೆ ಆತ್ಮನಲ್ಲಿ ಶುದ್ಧ

ಉಪಯೋಗರೂಪದ ಒಂದುಗೂಡಿಕೆಯಿಂದ ಮತ್ತು ಅಂತರಂಗ-ಬಹಿರಂಗ ತಪಸ್ಸಿನಿಂದ ಶುದ್ಧತೆಯಾಗುತ್ತದೆ. ಯೋಗವೆಂದರೆ ಸ್ವರೂಪದಲ್ಲಿ ಏಕಾಗ್ರತೆ ಮಾಡುವುದು. ಜ್ಞಾನಿಗಳಿಗೆ ಸ್ವರೂಪದಲ್ಲಿ ಏಕಾಗ್ರತೆಯಾಗುತ್ತದೆ. ಅದರಿಂದ ಅವರಿಗೆ ಶುದ್ಧತೆಯ ವೃದ್ಧಿರೂಪದ ಮತ್ತು ಅಶುದ್ಧತೆಯ ವ್ಯಯರೂಪದ ನಿರ್ಜರೆಯಿದೆ. ಅಥವಾ ಹಳೆಯ (ಮೊದಲಿನ) ಕರ್ಮಗಳು ಬಿಟ್ಟುಹೋಗುತ್ತವೆ. ಈ ಅಪೇಕ್ಷೆಯಿಂದ ದ್ರವ್ಯನಿರ್ಜರೆಯಿದೆ. ಅಂಥ ಜೀವರುಗಳಿಗೆ ಹನ್ನೆರಡು ಪ್ರಕಾರದ ತಪಸ್ಸು ನಿರ್ಜರೆಯಲ್ಲಿ ನಿಮಿತ್ತವೆಂದು ಹೇಳಲಾಗುತ್ತದೆ. ಅಜ್ಞಾನೀ ಜೀವರುಗಳಿಗೆ ಆತ್ಮನ ವಿವೇಕವಿಲ್ಲದಿರುವುದರಿಂದ ಅವರಿಗೆ ಶುದ್ಧತೆಯಾಗುವುದಿಲ್ಲ ಮತ್ತು ಕರ್ಮಗಳು ಹೋಗುವುದಿಲ್ಲ, ಅವರಿಗೆ ನಿರ್ಜರೆಯಾಗುವುದಿಲ್ಲ. ಜ್ಞಾನೀ ಜೀವರುಗಳಿಗೆ ಎಷ್ಟು ಶುದ್ಧೋಪಯೋಗವು ವರ್ತಿಸುತ್ತದೆ ಅಷ್ಟೇ ಶುದ್ಧತೆಯಾಗುತ್ತದೆ, ಅಷ್ಟೇ ಪ್ರಮಾಣದಲ್ಲಿ ಕರ್ಮಗಳು ಹೊರಟುಹೋಗುತ್ತವೆ.

**ಭಾವಾರ್ಥ :-** ಹನ್ನೆರಡು ಪ್ರಕಾರದ ತಪಸ್ಸಿನಿಂದ ಯಾರಿಗೆ ನಿರ್ಜರೆಯಾಗುತ್ತದೆ ಅದನ್ನು ಹೇಳುತ್ತಾರೆ-ಆತ್ಮನು ಪರಪದಾರ್ಥಗಳಿಂದ ಮತ್ತು ಪುಣ್ಯದಿಂದ ಬೇರೆಯಿದ್ದಾನೆಂಬ ಅರಿವಿನೊಡನೆ ಆತ್ಮನಲ್ಲಿ ರಮಿಸುವುದನ್ನು ತಪಸ್ಸೆಂದು ಹೇಳುತ್ತಾರೆ ಮತ್ತು ಇಂಥ ತಪಸ್ಸು ಮಾಡುವವರಿಗೆ ನಿರ್ಜರೆಯಿರುತ್ತದೆ. ಆತ್ಮನ ಅರಿವು-ಆತ್ಮನ ಜ್ಞಾನವಿಲ್ಲದೆ ನಿಜವಾದ ವ್ರತ-ತಪಸ್ಸುಗಳು ಆಗುವುದಿಲ್ಲ.

**ಅನಶನ :-** ಉಪವಾಸದಿಂದ ನಿರ್ಜರೆಯಾಗುತ್ತದೆಯೆಂದು ಹೇಳುವುದು ವ್ಯವಹಾರದ ಕಥನವಿದೆ. ನಾನು ಆಹಾರವನ್ನು ತೆಗೆದುಕೊಳ್ಳಲಿಲ್ಲ ಅದರಂತೆ ಆಹಾರವನ್ನು ಬಿಟ್ಟುಕೊಡಲಿಲ್ಲ. ರಾಗದ ಗ್ರಹಣ-ತ್ಯಾಗವು ಕೂಡ ನನ್ನ ಸ್ವಭಾವದಲ್ಲಿ ಇಲ್ಲವೆಂಬ ಅರಿವಿನೊಡನೆ-ಜ್ಞಾನಪೂರ್ವಕವಾಗಿ ಆತ್ಮನಲ್ಲಿ ಶುದ್ಧ ಉಪಯೋಗವು ವರ್ತಿಸುವುದು ಅದು ನಿರ್ಜರೆಯಿದೆ. ಮೊದಲು ಆಹಾರ ತೆಗೆದುಕೊಳ್ಳದಿರುವ ಶುಭರಾಗವು ಇರುವುದರಿಂದ ಉಪವಾಸದಿಂದ-ತಪಸ್ಸಿನಿಂದ ನಿರ್ಜರೆಯಾಗುವುದೆಂದು ಹೇಳಲಾಗುತ್ತದೆ.

**ಅವಮೌದರ್ಯ :-** ಕಡಿಮೆ ಆಹಾರ ತೆಗೆದುಕೊಳ್ಳುವುದಂತೂ ಶುಭಭಾವವಿದೆ, ಅದೇನು ತಪಸ್ಸಿಲ್ಲ. ಏಕೆಂದರೆ ಆಹಾರ ಮೊದಲಾದವುಗಳ ಗ್ರಹಣ-ತ್ಯಾಗವು ಆತ್ಮನಲ್ಲಿ ಇಲ್ಲವೇ ಇಲ್ಲ. ಪರ್ಯಾಯದಲ್ಲಿ ಒಂದಿಷ್ಟು ರಾಗವಿತ್ತು ಅದು ಸ್ವಭಾವದಲ್ಲಿ ಸ್ಥಿರತೆ ಮಾಡುವುದರಿಂದ ಹೊರಟುಹೋಯಿತು. ಅದು ನಿರ್ಜರೆಯಿದೆ-ತಪಸ್ಸು ಇದೆ.

**ವೃತ್ತಿಪರಿಸಂಖ್ಯಾನ :-** ವೃತ್ತಿಯನ್ನು ಸಂಕೋಚ ಮಾಡುವುದು ಶುಭರಾಗವಿದೆ. ಇಂಥ ವಸ್ತುವನ್ನು ತೆಗೆದುಕೊಳ್ಳುವುದು ಮತ್ತು ತೆಗೆದುಕೊಳ್ಳದಿರುವುದು ಆತ್ಮನ ಕೈಯೊಳಗಿನ ಮಾತಿಲ್ಲ. ಇಂತಿಷ್ಟು ವಸ್ತುಗಳ ಉಪಯೋಗವಾಯಿತು-ಇಂತಿಷ್ಟು ವಸ್ತುಗಳ ಉಪಯೋಗವಾಗಲಿಲ್ಲ-ಎಂಬುದರದಂತೂ ಮಾತು ಇಲ್ಲವೇ ಇಲ್ಲ. ಆತ್ಮನಲ್ಲಿ ಪರವಸ್ತುವಿನ ಅಭಾವವಿದೆಯೆಂಬ ಅರಿವಿನೊಡನೆ ಶುದ್ಧ ಉಪಯೋಗವು ವರ್ತಿಸುವುದು ನಿರ್ಜರೆಯಿದೆ. ಈ ಮೊದಲು ವೃತ್ತಿ ಸಂಕೋಚ ಮಾಡುವುದರ ಶುಭರಾಗವಿದ್ದರೆ ವೃತ್ತಿಪರಿಸಂಖ್ಯಾನದಿಂದ ತಪಸ್ಸು ಆಯಿತೆಂದು ಹೇಳುವುದರಲ್ಲಿ ಬರುತ್ತದೆ.

**ರಸಪರಿತ್ಯಾಗ :-** ಬಾಹ್ಯದಲ್ಲಿರುವ ರಸವಂತೂ ಜಡವಿದೆ, ಅದರದು ಆತ್ಮನಲ್ಲಿ ಯಾವಾಗಲೂ ತ್ಯಾಗವು ವರ್ತಿಸುತ್ತಿರುತ್ತದೆ. ಆತ್ಮನ ಅನುಭೂತಿಪೂರ್ವಕವಾಗಿ ಆತ್ಮನ ರಸದಲ್ಲಿ ಮುಳುಗಿದರೆ ಜಡಪದಾರ್ಥಗಳ ರಸ ತೆಗೆದುಕೊಳ್ಳುವುದರ ವೃತ್ತಿಯು ಉತ್ಪನ್ನವಾಗದಿರುವುದು ರಸಪರಿತ್ಯಾಗವೆಂಬ ತಪಸ್ಸಿದೆ. ಅಜ್ಞಾನಿಗಳು ರಸದ ತ್ಯಾಗ ಮತ್ತು ತಪಸ್ಸು ಮಾಡುತ್ತಾರೆ ಅದು ದೋಷವಿದೆ. ಆತ್ಮನ ರಸದಲ್ಲಿ ವರ್ತಿಸುವುದು ತಪಸ್ಸಿದೆ. ಪೂರ್ವದಲ್ಲಿ ರಸತ್ಯಾಗದ ಶುಭರಾಗವಿದ್ದರೆ ಆ ರಸತ್ಯಾಗದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ಇದು ನಿರ್ಜರೆಯ ಅಧಿಕಾರವಿದೆ. ವಾಸ್ತವಿಕತೆಯ ಯಥಾರ್ಥಜ್ಞಾನವಾದರೆ ಅವನಿಗೆ ಆಂತರ್ಯದಲ್ಲಿ ಶುದ್ಧಿಯಾದಲ್ಲದೆ ಇರುವ ಸಾಧ್ಯತೆಯಿಲ್ಲ. ಜೀವವು ವಿಕಾರೀ ಅವಸ್ಥೆ ಅಥವಾ ಅವಿಕಾರೀ ಅವಸ್ಥೆಯನ್ನು ಸ್ವತಂತ್ರತೆಯಿಂದ ಮಾಡುತ್ತದೆಯೆಂಬುದನ್ನು ಎಲ್ಲಿಯವರೆಗೆ ತಿಳಿಯುವುದಿಲ್ಲ ಅಲ್ಲಿಯವರೆಗೆ ಅಜೀವದಿಂದ ಭೇದಜ್ಞಾನವಾಗುವುದಿಲ್ಲ. ಇದು ಭೇದಜ್ಞಾನದ ಅಧಿಕಾರವಿದೆ. ಒಂಭತ್ತು ತತ್ತ್ವಗಳು ಬೇರೆಯಿವೆ. ಒಂದರದು ಇನ್ನೊಂದರಲ್ಲಿ ಅಥವಾ ಒಂದು ಇನ್ನೊಂದರ ಕಾರ್ಯ ಮಾಡುತ್ತದೆಯೆಂದು ಮನ್ನಿಸಿದರೆ ಒಂಭತ್ತು ತತ್ತ್ವಗಳು ಬೇರೆ-ಬೇರೆಯಾಗಿ ಉಳಿಯುವುದಿಲ್ಲ.

**ಜೀವ ಃ-** ತ್ರಿಕಾಲೀ ಸ್ವಭಾವವು ಸ್ವತಂತ್ರವಿದೆ. ಜೀವದ ಗುಣಗಳನ್ನು ಬೇರೆ ಯಾರೋ ಮಾಡಿದ್ದಾರೆನ್ನುವುದು ಅಥವಾ ವರ್ತಮಾನದ ಅವಸ್ಥೆಯು ಪರದಿಂದ ಆಗುತ್ತದೆಯೆಂದು ಮನ್ನಿಸಿದರೆ ಅವರು ಜೀವತತ್ತ್ವವನ್ನು ತಿಳಿದುಕೊಳ್ಳುವುದಿಲ್ಲ. ತಮ್ಮ ದ್ರವ್ಯ-ಗುಣ-ಪರ್ಯಾಯಗಳು ಪರದ ಕಾರಣದಿಂದ ಇಲ್ಲವೆಂದು ಜ್ಞಾನಮಾಡಿಕೊಂಡರೆ ಪರದಿಂದ ಪೂರ್ಣ ಬಿಡುಗಡೆಯಾಗುವ ಪ್ರಸಂಗ ಬರುತ್ತದೆ ಮತ್ತು ಪೂರ್ಣ ಬಿಡುಗಡೆಯಾಗುತ್ತದೆ.

ಕರ್ಮಗಳು ವಿಕಾರವನ್ನು ಮಾಡಿಸುತ್ತವೆ ಮತ್ತು ದೇವ-ಗುರುಗಳು-ಧರ್ಮವನ್ನು ಮಾಡಿಸುತ್ತಾರೆಯೆಂದು ಮನ್ನಿಸುವಂಥವರು ವರ್ತಮಾನದ ಸ್ವತಂತ್ರ ದಶೆಯನ್ನು ಸ್ವೀಕಾರ ಮಾಡುವುದಿಲ್ಲ ಮತ್ತು ಅವರು ದ್ರವ್ಯವನ್ನು ಕೂಡ ಸ್ವತಂತ್ರವೆಂದು ಸ್ವೀಕಾರ ಮಾಡುವುದಿಲ್ಲ. ಪುಣ್ಯ-ಪಾಪ, ಆಸ್ರವ-ಬಂಧಗಳು ನಿಮಿತ್ತದ ಸಂಯೋಗದಶೆಯಿದೆ ಮತ್ತು ಸಂವರ-ನಿರ್ಜರೆ, ಮೋಕ್ಷಗಳು ನಿಮಿತ್ತದ ವಿಯೋಗದ ದಶೆಯಿದೆ.

**ಅಜೀವ ಃ-** ಜೀವದಲ್ಲಿ ವಿಕಾರದ ತಾರತಮ್ಯತೆಯು ಅನೇಕಪ್ರಕಾರದ್ದಿದೆ. ಅದರಲ್ಲಿ ಕೂಡ ತಾರತಮ್ಯತೆಯುಳ್ಳ ಕರ್ಮ ಮೊದಲಾದ ಪುದ್ಗಲಗಳು ಅನೇಕ ಪ್ರಕಾರದ್ದಿವೆ. ಜಡ-ಪುದ್ಗಲಗಳು ಅನಂತವಿವೆಯೆಂಬುದನ್ನು ಸ್ವೀಕಾರ ಮಾಡದಿದ್ದರೆ ಆತ್ಮನು ಅಜೀವದಿಂದ ಬೇರೆಯಿದ್ದಾನೆಂದು ಜ್ಞಾನವಾಗುವುದಿಲ್ಲ.

**ಪುಣ್ಯ ಃ-** ದಯೆ-ದಾನ ಮೊದಲಾದ ಭಕ್ತಿಯ ಭಾವವು ಪುಣ್ಯವಿದೆ. ಅದನ್ನು ಧರ್ಮವೆಂದು ಮನ್ನಿಸಿದರೆ ಪುಣ್ಯವು ಸಂವರವಾಗಿ ಹೋಗುವುದು ಮತ್ತು ಒಂಭತ್ತು ತತ್ತ್ವಗಳು ಉಳಿಯುವುದಿಲ್ಲ. ಆದುದರಿಂದ ಪುಣ್ಯವು ಬಂಧದ ಕಾರಣವಿದೆಯೆಂಬುದನ್ನು ತಿಳಿದುಕೊಳ್ಳಬೇಕಾಗುವುದು.

**ಪಾಪ ಃ-** ಹಿಂಸೆ, ಕಳವು, ಅಸತ್ಯ, ಲೋಭದ ಪರಿಣಾಮವು ಪಾಪವಿದೆ. ತನ್ನ ವಿರೋಧಿಯನ್ನು ನೋಡಿ ಅದನ್ನು ದ್ವೇಷವೆಂದು ಮನ್ನಿಸಿದರೆ ಪಾಪವು ಸ್ವತಂತ್ರವಾಗಿ ಉಳಿಯುವುದಿಲ್ಲ. ಪಾಪವು ಸ್ವಯಂಸಿದ್ಧ ಪರದಿಂದ ಭಿನ್ನವಾದ ತತ್ತ್ವವಿದೆ. ಪಾಪವು ಜಡದ ಕಾರಣದಿಂದ ಇದೆಯೆಂದು ಮನ್ನಿಸಿದರೆ ಪಾಪ ಮತ್ತು ಅಜೀವಗಳು ಒಂದಾಗಿ ಹೋಗುವುದರಿಂದ ಒಂಭತ್ತು ತತ್ತ್ವಗಳು ಉಳಿಯುವುದಿಲ್ಲ.

**ಆಸ್ರವ ಃ-** ಪಾಪ ಮತ್ತು ಪುಣ್ಯ ಇವೆರಡೂ ಮಲಿನ ಪರಿಣಾಮಗಳು ಆಸ್ರವವಿವೆ. ಅವು ಎರಡನ್ನು ಆಸ್ರವವೆಂದು ಮನ್ನಿಸದೆ ಪಾಪವನ್ನು ಆಸ್ರವವೆಂದು ಮನ್ನಿಸಿದರೆ ಮತ್ತು ಪುಣ್ಯವನ್ನು ನಿರ್ಮಲ ಪರಿಣಾಮವೆಂದು ಮನ್ನಿಸಿದರೆ ಆಸ್ರವದ ಸರಿಯಾದ ಜ್ಞಾನವಾಗುವುದಿಲ್ಲ.

**ಸಂವರ ಃ-** ಅಜ್ಞಾನೀ ಜೀವರುಗಳು ದಯೆ-ದಾನ ಮೊದಲಾದವುಗಳ ಭಾವವನ್ನು ಸಂವರವೆಂದು ಮನ್ನಿಸುತ್ತಾರೆ, ಆದರೆ ಅದಂತೂ ಆಸ್ರವವಿದೆ. ಪುಣ್ಯ-ಪಾಪರೂಪದ ಅಧರ್ಮ ಭಾವವನ್ನು ಯಾವ ಭಾವದಿಂದ ತಡೆಯಲಾಗುತ್ತದೆ ಅದನ್ನು ಸಂವರವೆಂದು ಹೇಳುತ್ತಾರೆ. ಅದೆಷ್ಟೋ ಜೀವರುಗಳು ಚಾರಿತ್ರವನ್ನು ಅಥವಾ ಸಂವರವನ್ನು ದುಃಖದಾಯಕವೆಂದು ಮನ್ನಿಸಿಕೊಂಡಿದ್ದಾರೆ. ಹೀಗೆ ಮನ್ನಿಸಿಕೊಂಡು ಅವರು ಹೇಳುತ್ತಿರುವುದೇನೆಂದರೆ ಚಾರಿತ್ರವಂತೂ ಉಕ್ಕಿನ ಕಡಲೆಯ

ಸಮಾನವಿದೆ ಅಥವಾ ಮಳಲಿನ ತುತ್ತಿನ ಸಮಾನವಿದೆ. ಎಂದರೆ ಉಕ್ಕಿನ ಕಡಲೆಯನ್ನು ಹಲ್ಲುಗಳಿಂದ ನುರಿಸುವುದರ ಸಮಾನವಿದೆ. ಈ ಪ್ರಕಾರ ಹೇಳಿ ವೀತರಾಗ ಪರ್ಯಾಯವನ್ನು ದುಃಖದಾಯಕವೆಂದು ಮನ್ನಿಸಿಕೊಂಡಿದ್ದಾರೆ. ಆ ಜೀವರುಗಳು ಸಂವರವನ್ನು ಹಾರಿಸಿಬಿಟ್ಟಿದ್ದಾರೆ ಮತ್ತು ಆರ್ತಧ್ಯಾನರೂಪದ ಯಾವ ಪಾಪವಿದೆ ಅದನ್ನು ಸಂವರದ ಸ್ಥಾನದಲ್ಲಿ ಸ್ಥಾಪಿಸಿದ್ದಾರೆ. ಯಾವುದೇ ಪರದಿಂದ ಸಂವರವನ್ನು ಮನ್ನಿಸಿದರೆ ಅದು ಕೂಡ ದೋಷವಿದೆ. ಆತ್ಮನ ಆಶ್ರಯದಿಂದ ಅಶುದ್ಧತೆಯನ್ನು ತಡೆಯುವುದು ಸಂವರವಿದೆ.

**ನಿರ್ಜರೆ :-** ಯಾರಿಗೆ ಭೇದಜ್ಞಾನವಿದೆ ಅವರಿಗೆ ಶುದ್ಧಿಯ ವೃದ್ಧಿಯು ಆಗಿಯೇ ಆಗುತ್ತದೆ. ಬಾಹ್ಯದಲ್ಲಿ ಕೇವಲ ಆಹಾರ ಬಿಟ್ಟುಕೊಡುವುದರಿಂದ ನಿರ್ಜರೆಯಾಗುತ್ತದೆಯೆಂದು ಅಜ್ಞಾನಿಗಳು ಮನ್ನಿಸಿಕೊಂಡಿದ್ದಾರೆ ಅದು ಮಹಾನ ದೋಷವಿದೆ. ನಾನು ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂಬ ಅರಿವಿನಿಂದ ಶುದ್ಧತೆಯ ವೃದ್ಧಿಯಾಗುವುದು ಮತ್ತು ಅಶುದ್ಧತೆಯು ನಿಂತುಹೋಗುವುದು ಅದು ನಿರ್ಜರೆಯಿದೆ.

ಈ ಪ್ರಕಾರದಿಂದ ಸಮಸ್ತ ತತ್ತ್ವಗಳನ್ನು ಹೇಗೆ ಇವೆಯೋ ಹಾಗೆ ಮನ್ನಿಸಿಕೊಳ್ಳಬೇಕಾಗುವುದು. ಒಂಭತ್ತು ತತ್ತ್ವಗಳು ಮೊಲದ ಕೊಂಬಿನ ಹಾಗೆ ಕೇವಲ ಅಭಾವರೂಪವಾಗಿಲ್ಲ, ಒಂಭತ್ತು ಪದಾರ್ಥಗಳಿವೆ. ಎಲ್ಲವನ್ನು ಸೇರಿಸಿ ಒಂದೆಂದು ಮನ್ನಿಸಿದರೆ, ಪರದಿಂದ ಬೇರೆಯೆಂದು ಮನ್ನಿಸದಿದ್ದರೆ, ಅಥವಾ ಪರ್ಯಾಯವನ್ನು ಸ್ವೀಕಾರ ಮಾಡದಿದ್ದರೆ, ಧನದಿಂದ ಪುಣ್ಯಭಾವವಾಗುತ್ತದೆಯೆಂದು ಮನ್ನಿಸಿದರೆ, ಅಜೀವವನ್ನು ಮನ್ನಿಸದಿದ್ದರೆ ಒಂಭತ್ತು ತತ್ತ್ವಗಳು ಉಳಿಯುವುದಿಲ್ಲ. ಅಜೀವದಲ್ಲಿ ಕೂಡ ಬಹಳಷ್ಟು ಭೇದಗಳಿವೆ. ಅದೆಷ್ಟೋ ಪರಮಾಣುಗಳು ಶರೀರಕ್ಕೆ ಯೋಗ್ಯವಾದವುಗಳಿವೆ. ಅದೆಷ್ಟೋ ಪರಮಾಣುಗಳು ಕರ್ಮಕ್ಕೆ ಯೋಗ್ಯವಾದವುಗಳಿವೆ. ಇವೇ ಮೊದಲಾಗಿ ಅದೆಷ್ಟೋ ಜಾತಿಯ ಪರಮಾಣುಗಳಿವೆ. ಈ ಪ್ರಕಾರ ಅಜೀವವನ್ನು ಸ್ವೀಕಾರ ಮಾಡಬೇಕಾಗುವುದು. ಯಾವನೋ ಓರ್ವ ಸಭ್ಯ ಗೃಹಸ್ಥನಿಗೆ ಒಂಭತ್ತು ಜನರು ಮಕ್ಕಳಿದ್ದರೆ ಅವರನ್ನು ಪ್ರತಿಯಾಗಿ ಏಳು ಮಕ್ಕಳೆಂದು ತಿಳಿದುಕೊಂಡರೆ ಜಗತ್ತು ಅವನನ್ನು ಮೂರ್ಖನೆಂದು ಹೇಳುವುದು. ಅದೇ ಪ್ರಕಾರ ಒಂಭತ್ತು ಪದಾರ್ಥಗಳು ಅನಾದಿ ಅನಂತವಿವೆ. ಅದರಲ್ಲಿ ಒಂದು ಕಡಿಮೆಯಿದೆಯೆಂದು ಮನ್ನಿಸಿದರೆ ಸರ್ವಜ್ಞರು ನೀನು ಮೂರ್ಖನಿರುವೆಯೆಂದು ಹೇಳುವರು ಅಥವಾ ಅಜ್ಞಾನಿಯಿರುವೆಯೆಂದು ಹೇಳುವರು.

ನಿರ್ಜರೆಯು ಹನ್ನೆರಡು ಪ್ರಕಾರದ ಭೇದದಿಂದ ಆಗುತ್ತದೆಂದು ಹೇಳುವುದು ನಿಮಿತ್ತದಿಂದ ಕಥನವಿದೆ.

**೧) ಅನಶನ :-** ಯಾವ ರೀತಿಯಿಂದ ಲೌಕಿಕದಲ್ಲಿ ಧನವನ್ನು ಹಾಗೂ ಅನ್ನವನ್ನು ಪ್ರಾಣವೆಂದು ಹೇಳುತ್ತಾರೆ ಧನದಿಂದ ಅನ್ನವನ್ನು ತರಲಾಗುತ್ತದೆ ಮತ್ತು ಅನ್ನದಿಂದ ಶರೀರ, ಇಂದ್ರಿಯ ಮೊದಲಾದವು ಪುಷ್ಟವಾಗುತ್ತವೆ. ಶರೀರ ಮತ್ತು ಇಂದ್ರಿಯಗಳಂತೂ ತಮ್ಮ ಕಾರಣದಿಂದ ಉಳಿದುಕೊಂಡಿವೆ, ಆದರೆ ಅದರಲ್ಲಿ ಧನ ಮತ್ತು ಅನ್ನವು ನಿಮಿತ್ತವಿರುವುದರಿಂದ ಧನದಿಂದ ಅನ್ನ ದೊರಕುತ್ತದೆ. ಅನ್ನದಿಂದ ಪ್ರಾಣವು ಉಳಿಯುತ್ತದೆಂದು ಹೇಳಲಾಗುತ್ತದೆ. ಆದರೆ ಅದರಲ್ಲಿ ಜೀವಿಸಿರುವ ಜೀವನು ನಿಮಿತ್ತನಿದ್ದಾನೆ. ಸತ್ತುಹೋದ ಮನುಷ್ಯನ ಇಂದ್ರಿಯಗಳನ್ನು ಅಥವಾ ಶರೀರವನ್ನು ಅನ್ನ ಅಥವಾ ಧನವು ಪುಷ್ಟ ಮಾಡುವಲ್ಲಿ ನಿಮಿತ್ತವಾಗುವುದಿಲ್ಲ. ಜೀವಂತನಿಗೆ ನಿಮಿತ್ತವಿವೆ. ಅದರಂತೆ ಆತ್ಮನಾದ ನಾನು ಜ್ಞಾನಾನಂದ ಸ್ವಭಾವಿಯಿದ್ದೇನೆ, ರಾಗದಿಂದ ರಹಿತನಿದ್ದೇನೆಂಬ ದೃಷ್ಟಿಪೂರ್ವಕವಾಗಿ ಅಂತರ್ಯದಲ್ಲಿ ರಾಗದಿಂದ ರಹಿತವಾದ ಪರಿಣಾಮವಾಗುತ್ತದೆ. ಅದನ್ನು ಉಪವಾಸದ ನಿಮಿತ್ತವೆಂದು ಹೇಳಲಾಗುತ್ತದೆ. ಯಾರಿಗೆ ಭೇದಜ್ಞಾನವು ವರ್ತಿಸುತ್ತದೆ ಅವರಿಗೆ ಉಪವಾಸ, ತಪಸ್ಸುಗಳು ನಿಮಿತ್ತವಿವೆ, ಆದರೆ ಯಾರಿಗೆ ನವತತ್ತ್ವಗಳ ಭೇದಜ್ಞಾನರೂಪದ ಪ್ರಾಣವಿಲ್ಲ ಮತ್ತು ಪರದ ಜತೆಯಲ್ಲಿ ಏಕತ್ವಬುದ್ಧಿಯೊಳಗೆ ನಿಂತುಕೊಂಡು ಯಾರು ಶವದ ಸಮಾನರಿದ್ದಾರೆ ಅವರಿಗೆ ಉಪವಾಸ-ತಪಸ್ಸುಗಳನ್ನು ನಿಮಿತ್ತವೆಂದು ಹೇಳಲಾಗುವುದಿಲ್ಲ.

ಶವಕ್ಕೆ ಅನ್ನ ಕೊಡುವುದರಿಂದ ಪ್ರಾಣವು ಉಳಿಯುತ್ತದೆಯೆಂದು ಮನ್ನಿಸುವಂಥವರು ಮೂರ್ಖರಿದ್ದಾರೆ. ಅದೇ ಪ್ರಕಾರ ಒಂಭತ್ತು ತತ್ತ್ವಗಳ ಶ್ರದ್ಧೆ ಮತ್ತು ಜ್ಞಾನದಿಂದ ರಹಿತರಿರುವಂಥ ಜೀವರುಗಳಿಗೆ ಉಪವಾಸ ಮೊದಲಾದವುಗಳಿಂದ ಧರ್ಮವಾಗುತ್ತದೆಯೆಂದು ಮನ್ನಿಸುವಂಥವರು ಮೂರ್ಖರಿದ್ದಾರೆ. ನಾವು ಇಚ್ಛೆಯನ್ನು ಮಂದ ಮಾಡುವುದರಿಂದ ಆಹಾರ-ಪಾನೀಯ ಸ್ವೀಕರಿಸಲಿಲ್ಲವೆಂದು ಅಜ್ಞಾನೀ ಜೀವರುಗಳು ಮನ್ನಿಸುತ್ತಾರೆ. ಈ ಪ್ರಕಾರದ ಇಚ್ಛೆಯ ಕಾರಣದಿಂದ ಅಜೀವದ ಅವಸ್ಥೆಯನ್ನು ಮನ್ನಿಸುವಂಥವರಿಗೆ ಇಚ್ಛೆ ಮತ್ತು ಜಡದ ಮಧ್ಯದಲ್ಲಿನ ಭೇದಜ್ಞಾನವಿಲ್ಲವೆಂದಮೇಲೆ ಅವರಿಗೆ ಇಚ್ಛೆ ಮತ್ತು ಶುದ್ಧಸ್ವಭಾವದ ಮಧ್ಯದಲ್ಲಿನ ಭೇದಜ್ಞಾನವು ಎಂದೂ ಆಗುವುದಿಲ್ಲ. ಆದರೆ ಯಾರಿಗೆ ಭೇದಜ್ಞಾನವಿದೆ ಮತ್ತು ಶುದ್ಧತೆಯು ವೃದ್ಧಿಸಿದೆ ಅವರಿಗೆ ಉಪವಾಸ-ತಪಸ್ಸುಗಳನ್ನು ನಿಮಿತ್ತವೆಂದು ಹೇಳಲಾಗುತ್ತದೆ.

**೨) ಅವಮೌದರ್ಯ ಃ-** ಎರಡು ತುತ್ತು ಆಹಾರ ಕಡಿಮೆ ಮಾಡಿದರೆ ಅದನ್ನು ತಪವೆಂದು ಹೇಳುತ್ತಾರೆ, ಆದರೆ ಅಜೀವದಿಂದ ಮತ್ತು ಇಚ್ಛೆಯಿಂದ ಶುದ್ಧಸ್ವಭಾವವು ಭಿನ್ನವಿದೆಯೆಂಬ ಭೇದಜ್ಞಾನವು ಯಾರಿಗೆ ವರ್ತಿಸುತ್ತದೆ ಅವರಿಗೆ ಶುದ್ಧೋಪಯೋಗದ ವೃದ್ಧಿಯಾದರೆ ಅವಮೌದರ್ಯ ತಪವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ನಾನು ಆಹಾರವನ್ನು ಬಿಟ್ಟುಕೊಟ್ಟಿದ್ದೇನೆಂದು ಅಜ್ಞಾನಿಗಳು ಮನ್ನಿಸಿಕೊಂಡಿದ್ದಾರೆ ; ಆದಾಗ್ಯೂ ಕೂಡ ಅವರು ಪದಾರ್ಥಗಳನ್ನು ಸರಿಯಾಗಿ ಮನ್ನಿಸುವುದಿಲ್ಲ. ಆದರೆ ಜ್ಞಾನಿಗಳು ತಿಳಿದುಕೊಂಡಿರುವುದೇನೆಂದರೆ ಅಜೀವವು ತನ್ನ ಕಾರಣದಿಂದ ಬಿಟ್ಟುಹೋಗಿದೆ ಮತ್ತು ಕಷಾಯದ ಮಂದತೆಯು ಆಸ್ರವವಿದೆ ; ಅದು ನಿರ್ಜರೆಯ ಕಾರಣವಿಲ್ಲ, ಆದರೆ ಶುದ್ಧೋಪಯೋಗವು ನಿರ್ಜರೆಯಿದೆ. ಇಲ್ಲಿ ಟೀಕೆಯಲ್ಲಿ ಅಂತರಂಗ ಮತ್ತು ಬಹಿರಂಗವೆಂದು ಹನ್ನೆರಡು ಪ್ರಕಾರದ ತಪಸ್ಸಿನಿಂದ ನಿರ್ಜರೆಯಾಗುತ್ತದೆಯೆಂದು ಹೇಳಿದೆ ಅದು ನಿಮಿತ್ತದಿಂದ ಕಥನವಿದೆ. ಸ್ವದ ಜ್ಞಾನವು ಯಥಾರ್ಥವಾದರೆ ಪರದ ಅಥವಾ ವ್ಯವಹಾರದ ಜ್ಞಾನವು ಆಗಿಹೋಗುತ್ತದೆ. ರಾಗದಿಂದ ಅಥವಾ ಶರೀರ ಮೊದಲಾದವುಗಳ ಅವಸ್ಥೆಯಿಂದ ಧರ್ಮವಾಗುತ್ತದೆಯೆಂದು ಮನ್ನಿಸಿದರೆ ಒಂಭತ್ತು ತತ್ತ್ವಗಳು ಉಳಿಯುವುದಿಲ್ಲ. ಶರೀರ ಮೊದಲಾದ ಅಜೀವ ಪದಾರ್ಥಗಳು ಹಾಗೂ ರಾಗ ಮೊದಲಾದವುಗಳು ಇಲ್ಲವೇ ಇಲ್ಲವೆಂದು ಮನ್ನಿಸಿದರೆ ಆಗ ಕೂಡ ನವತತ್ತ್ವಗಳು ಉಳಿಯುವುದಿಲ್ಲ. ಒಂದು ಮಾತನ್ನು ತೆಗೆದುಹಾಕಬಯಸಿದರೆ ಸಂಪೂರ್ಣ ಆತ್ಮನ ನಾಶವಾಗಿ ಹೋಗುವುದು. ಒಂದು ಮಾತನ್ನು ಯಥಾರ್ಥವಾಗಿ ಮನ್ನಿಸಿದರೆ ಸಮ್ಯಗ್ದರ್ಶನವಾಗಿಬಿಡುತ್ತದೆ. ಆಹಾರದ ಸ್ವೀಕಾರ ಮಾಡಲಿಲ್ಲ ಅದು ಜಡದ ಅವಸ್ಥೆಯಿದೆ. ಇಚ್ಛೆಯು ಮಂದವಾಯಿತು ಅದು ಪುಣ್ಯವಿದೆ, ಅದು ನಿರ್ಜರೆಯಿಲ್ಲ. ಆತ್ಮನು ಅದರಿಂದ ರಹಿತವಾಗಿ ಶುದ್ಧನಿದ್ದಾನೆ. ಅವನ ಅವಲಂಬನೆ ಮಾಡುವುದರಿಂದ ಶುದ್ಧದ ವೃದ್ಧಿಯಾಗುತ್ತದೆ ಮತ್ತು ಅಶುದ್ಧತೆಯು ಬಿಟ್ಟುಹೋಗುವುದು ಭಾವನಿರ್ಜರೆಯಿದೆ. ಅದರ ನಿಮಿತ್ತ ಪಡೆದು ಕರ್ಮಗಳು ಸ್ವಯಂ ಬಿಟ್ಟು ಹೋಗುವುದು ದ್ರವ್ಯನಿರ್ಜರೆಯಿದೆ.

**ಪ್ರಶ್ನೆ ಃ-** ಕರ್ಮಗಳು ಉದುರಿಹೋದವೆಂದರೇನು ? ಪುದ್ಗಲ ದ್ರವ್ಯಗಳು ಉದುರಿ ಹೋಗುತ್ತವೆಯೇನು?

**ಉತ್ತರ ಃ-** ಇಲ್ಲ ; ದ್ರವ್ಯವು ಉದುರಿಹೋಗುವುದಿಲ್ಲ, ಆದರೆ ಪರಮಾಣುಗಳ ಅವಸ್ಥೆಯು ಕರ್ಮರೂಪದಿಂದ ಇತ್ತು ಅದು ಪರಿವರ್ತನಗೊಂಡು ಬೇರೆ ಪರಮಾಣುಗಳ ರೂಪವಾಗಿ ಹೋಗುವುದು, ಅದನ್ನು ದ್ರವ್ಯನಿರ್ಜರೆಯೆಂದು ಹೇಳುತ್ತಾರೆ. ಅದು ಜಡದ ಅವಸ್ಥೆಯಿದೆ.

ದಯೆ, ದಾನ ಮೊದಲಾದವುಗಳ ಭಾವ ಮಾಡುವುದು ಭಾವಪುಣ್ಯವಿದೆ, ಅದರ ನಿಮಿತ್ತದಿಂದ ದ್ರವ್ಯಪುಣ್ಯದ ಬಂಧವಾಗುತ್ತದೆ ಅದು ದ್ರವ್ಯವಿಲ್ಲ, ಆದರೆ ಅದು ಪರಮಾಣುಗಳ ಪರ್ಯಾಯವಿದೆ. ಪರಮಾಣುವಿನ ದ್ರವ್ಯ-ಗುಣಗಳು ತ್ರಿಕಾಲವಿವೆ ಅದರ ಅವಸ್ಥೆಯನ್ನು ದ್ರವ್ಯಪುಣ್ಯವೆಂದು ಹೇಳುತ್ತಾರೆ.

ಆತ್ಮನ ಜ್ಞಾನ ಮಾಡಿಕೊಳ್ಳುವುದು, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳನ್ನು ಪ್ರಕಟಪಡಿಸಿಕೊಳ್ಳುವುದು ಎಷ್ಟು ಪ್ರಮಾಣದಲ್ಲಿ ಸ್ಥಿರತೆಯನ್ನು ಮಾಡುವುದು ಅಷ್ಟು ಪ್ರಮಾಣದಲ್ಲಿ ದ್ರವ್ಯ ಪರಮಾಣುಗಳು ನಿಂತುಕೊಳ್ಳುವುದು ಪುದ್ಗಲದ ಅವಸ್ಥೆಯಿದೆ, ಅದು ದ್ರವ್ಯಸಂವರವಿದೆ ಮತ್ತು ಸ್ಥಿರತೆ ಮಾಡಲಾಗುತ್ತದೆ ಆಗ ಎಷ್ಟು ಪ್ರಮಾಣದಲ್ಲಿ ಕರ್ಮಗಳು ಉದುರಿಹೋಗುತ್ತವೆ, ಅದು ದ್ರವ್ಯನಿರ್ಜರೆಯಿದೆ. ಅದು ಪರಮಾಣುವಿನ ಅವಸ್ಥೆಯಿದೆ. ಆ ಪರಮಾಣುಗಳು ಕರ್ಮರೂಪದಿಂದ ಪರಿವರ್ತನಗೊಂಡು ಬೇರೆ ಅವಸ್ಥೆಯ ರೂಪವಾಗುತ್ತವೆ.

ಆತ್ಮನು ಶುದ್ಧ ಚೈತನ್ಯಸ್ವಭಾವಿಯಿದ್ದಾನೆಂದು ತಿಳಿದುಕೊಂಡು ಯಾರು ಭೇದವಿಜ್ಞಾನ ಮಾಡಿ ಸ್ವಭಾವದಲ್ಲಿ ಲೀನರಾಗುತ್ತಾರೆ ಅವರಿಗೆ ಅವಮೌದರ್ಯತಪವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

**೩) ವೃತ್ತಿಪರಿಸಂಖ್ಯಾನ :-** ಇಂಥ ವಸ್ತುವನ್ನು ತೆಗೆದುಕೊಳ್ಳದಿರುವ ಭಾವವು ಶುಭಭಾವವಿದೆ. ಅದರಿಂದ ರಹಿತನಾಗಿರುವಂಥ ಶುದ್ಧ ಆತ್ಮನಲ್ಲಿ ಲೀನತೆಯು ವೃದ್ಧಿಸಿದರೆ ಆಗ ವೃತ್ತಿಪರಿಸಂಖ್ಯಾನ ತಪದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ನಾನು ಈ ವಸ್ತುವನ್ನು ಬಿಟ್ಟುಕೊಟ್ಟಿದ್ದೇನೆ - ಆ ವಸ್ತುವನ್ನು ಬಿಟ್ಟುಕೊಟ್ಟಿದ್ದೇನೆಂದು ಅಜ್ಞಾನೀ ಜೀವರುಗಳು ಮನ್ನಿಸುತ್ತಾರೆ, ಆದರೆ ಅವರು ಅಜೀವವನ್ನು ಮತ್ತು ಇಚ್ಛೆಯನ್ನು ಒಂದೆಂದು ಮನ್ನಿಸಿಕೊಂಡಿದ್ದಾರೆ. ಜೀವನು ಇಚ್ಛೆ ಮಾಡುವುದರಿಂದ ದ್ರವ್ಯಗಳು ನಿಂತುಬಿಡುತ್ತವೆಯೆಂಬುದಾಗಿಲ್ಲ ಮತ್ತು ಜೀವನು ಮಾಡುವುದರಿಂದ ಧರ್ಮವು ಆಗಿಹೋಗುತ್ತದೆಯೆಂಬುದಾಗಿಯೂ ಕೂಡ ಇಲ್ಲ. ಆ ದ್ರವ್ಯಗಳಂತೂ ಸ್ವತಂತ್ರವಿವೆ. ಅವುಗಳಿಂದ ರಹಿತವಿರುವಂಥ ಶುದ್ಧ ಚೈತನ್ಯದ ಭಾವನೆಯಲ್ಲಿ ಏಕಾಗ್ರತೆಯು ವೃದ್ಧಿಸಿದರೆ ಮತ್ತು ಅಶುದ್ಧತೆಯು ಬಿಟ್ಟುಹೋದರೆ ಅದು ನಿರ್ಜರೆ ಮತ್ತು ತಪಸ್ಸು ಇದೆ. ಅದರಲ್ಲಿ ವೃತ್ತಿಪರಿಸಂಖ್ಯಾನವು ನಿಮಿತ್ತವಿದೆ. ಆಗ ಕರ್ಮಗಳು ಕರ್ಮರೂಪದಿಂದ ಉಳಿಯದೆ ಅವು ಬೇರೆ ಅವಸ್ಥೆಯ ರೂಪದಿಂದ ಪರಿವರ್ತಸಿಹೋಗುತ್ತವೆ ಅದನ್ನು ದ್ರವ್ಯನಿರ್ಜರೆಯೆಂದು ಹೇಳುತ್ತಾರೆ.

**೪) ರಸಪರಿತ್ಯಾಗ :-** ರಸವಿರುವಂಥ ಪದಾರ್ಥಗಳನ್ನು ಬಿಟ್ಟುಕೊಡುವ ಭಾವವು ಶುಭವಿದೆ. ಅದರಿಂದ ರಹಿತವಿರುವಂಥ ಶುದ್ಧಚೈತನ್ಯದಲ್ಲಿ ಲೀನತೆಯು ವೃದ್ಧಿಸಿದರೆ ಅದನ್ನು ತಪವೆಂದು ಹೇಳುತ್ತಾರೆ. ಅದರಲ್ಲಿ ರಸಪರಿತ್ಯಾಗದ ಶುಭಭಾವವು ನಿಮಿತ್ತವಿದೆ.

ನಾನು ರಸವುಳ್ಳ ಪದಾರ್ಥಗಳನ್ನು ಬಿಟ್ಟುಕೊಡುವ ಸಾಧ್ಯತೆಯಿದೆಯೆಂದು ಯಾರು ಮನ್ನಿಸುತ್ತಾರೆ ಅವರು ಪರಪದಾರ್ಥಗಳ ಗ್ರಹಣ-ತ್ಯಾಗದಲ್ಲಿಯೇ ನಿಂತುಕೊಂಡಿದ್ದಾರೆ. ಅವರಿಗೆ ನವತತ್ತ್ವಗಳ ಅರಿವಿಲ್ಲ-ಪ್ರಜ್ಞೆಯಿಲ್ಲ. ಅವರಿಗೆ ಭೇದಜ್ಞಾನವು ಕೂಡ ಇಲ್ಲ. ಆದುದರಿಂದ ಅವರಿಗೆ ನಿರ್ಜರೆಯಾಗುವುದಿಲ್ಲ. ಅವರಿಗೆ ರಸಪರಿತ್ಯಾಗವು ಬಾಹ್ಯದಿಂದ ಇದ್ದರೂ ಕೂಡ ಅದು ಮಿಥ್ಯಾತ್ವದ ಬಂಧವನ್ನೇ ಮಾಡುತ್ತಹೋಗುತ್ತದೆ. ರಸವಿರುವಂಥ ಪದಾರ್ಥಗಳಂತೂ ಅಜೀವವಿವೆ. ಅವು ತಮ್ಮ ಕಾರಣದಿಂದ ಬಿಟ್ಟುಹೋಗುತ್ತವೆ. ಅವನ್ನು ಬಿಟ್ಟುಕೊಡುವ ಭಾವವು ಶುಭಭಾವವಿದೆ. ಅದರಿಂದ ಎಂದರೆ ಶುಭದಿಂದ ರಹಿತನಿರುವಂಥ ಆತ್ಮನು ಶುದ್ಧನಿದ್ದಾನೆಂದು ಶ್ರದ್ಧೆಯಾಗುವುದು ಮತ್ತು ಅವನಲ್ಲಿ ಲೀನತೆಯ ವೃದ್ಧಿಯಾಗುವುದು ತಪವಿದೆ ಮತ್ತು ನಿರ್ಜರೆಯಿದೆ. ಅದರಲ್ಲಿ ರಸಪರಿತ್ಯಾಗರೂಪದ ತಪವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಅವರಿಗೆ ಸಮ್ಯಕ್ ಮತಿ-ಶ್ರುತಜ್ಞಾನದ ಪ್ರಕಟತೆಯಾಗುತ್ತದೆ ಮತ್ತು ಸಂಸಾರದ ಕೊನೆಯು ಬಂದುಬಿಡುತ್ತದೆ.

ಜೀವದಿಂದ ಜಡದ ಅವಸ್ಥೆಯಾಗುತ್ತದೆಯೆಂದು ಯಾರು ಮನ್ನಿಸುತ್ತಾರೆ ಅವರು ಜೀವವನ್ನು ಮತ್ತು ಅಜೀವವನ್ನು ಒಂದೆಂದು ಮನ್ನಿಸುತ್ತಾರೆ. ಅಜೀವದ ಪರ್ಯಾಯವು ಸ್ವತಂತ್ರವಿದೆ, ರಾಗವು ಸ್ವತಂತ್ರವಿದೆ ಮತ್ತು ರಾಗದಿಂದ ಆತ್ಮನು

ಸ್ವತಂತ್ರನಿದ್ದಾನೆಂದು ಯಾರಿಗೆ ಪರದಿಂದ ಭೇದಜ್ಞಾನವಾಗುತ್ತದೆ ಅವರಿಗೆ ಪುಣ್ಯದಿಂದ ರಹಿತನಿರುವಂಥ ಆತ್ಮನಲ್ಲಿ ಏಕಾಗ್ರತೆಯಾಗುತ್ತದೆ. ಅದರಲ್ಲಿ ರಸಪರಿತ್ಯಾಗತಪದ ಉಪಚಾರವು ಬಂದುಬಿಡುತ್ತದೆ. ಅಜೀವದಿಂದ ಜೀವನು ಬೇರೆ-ಭಿನ್ನನಿದ್ದಾನೆ, ಅದೇ ಪ್ರಕಾರ ಅಜೀವದ ಸಮಯ-ಸಮಯದ ಪರ್ಯಾಯದಿಂದ ಜೀವದ ಸಮಯ-ಸಮಯದ ಜ್ಞಾನವು ಬೇರೆಯಿದೆಯೆಂದು ಯಾರು ಮನ್ನಿಸುವುದಿಲ್ಲ ಅವರಿಗೆ ಧರ್ಮವೆಂದೂ ಆಗುವುದಿಲ್ಲ ಮತ್ತು ಯಾರು ಭೇದಜ್ಞಾನ ಮಾಡಿ ಶುದ್ಧಿಯನ್ನು ವೃದ್ಧಿಸಿಕೊಂಡಿದ್ದಾರೆ ಅವರಿಗೆ ರಸಪರಿತ್ಯಾಗ ತಪಸ್ಸಿನಿಂದ ನಿರ್ಜರೆಯಾಗುತ್ತದೆಯೆಂದು ಹೇಳಲಾಗಿದೆ.

ಇದು ನಿರ್ಜರೆಯ ಅಧಿಕಾರವಿದೆ. ಧರ್ಮದ ಪ್ರಾರಂಭವಂತೂ ಭೇದಜ್ಞಾನದಿಂದಲೇ ಆಗುತ್ತದೆ. ನಾನು ಜ್ಞಾನಸ್ವಭಾವಿಯಾದ ಆತ್ಮನಿದ್ದೇನೆ. ಶರೀರ ಮೊದಲಾದವುಗಳು ನನ್ನಿಂದ ಭಿನ್ನವಾದ ಪರತತ್ತ್ವಗಳಿವೆ. ನಾನು ವಿಕಲ್ಪಗಳಿಂದ ಕೂಡ ಭಿನ್ನನಿದ್ದೇನೆ. ಈ ಪ್ರಕಾರದ ಭೇದಜ್ಞಾನವು ಯಾರಿಗೆ ವರ್ತಿಸುತ್ತದೆ ಅವರಿಗೆ ನಿರ್ಜರೆಯಾಗುತ್ತದೆ. ಯಾರಿಗೆ ಸಂವರವಿಲ್ಲ ಅಥವಾ ಸಮ್ಯಗ್ದರ್ಶನದ ಪ್ರಾಪ್ತಿಯಾಗಿಲ್ಲ ಅಂಥವರಿಗೆ ನಿರ್ಜರೆಯಾಗುವುದಿಲ್ಲ. ''ಸಂವರಯೋಗಾತ್'' ಯಾರಿಗೆ ಸಂವರವಿದೆ ಅವರಿಗೆ ನಿರ್ಜರೆಯಿದೆ ಮತ್ತು ಯಾರಿಗೆ ಭೇದಜ್ಞಾನವಿರುತ್ತದೆ ಅವರಿಗೆ ಸಂವರವಿರುತ್ತದೆ. ಒಂದು ರಜಕಣದ ಪರ್ಯಾಯವು ಕೂಡ ನನ್ನಿಂದ ಆಗುವುದಿಲ್ಲ ನನ್ನಲ್ಲಿ ಪರದಿಂದ ಯಾವುದೂ ಆಗುವುದಿಲ್ಲ. ಪಾಪ-ಪುಣ್ಯಗಳು ಕೂಡ ಪರದಿಂದ ಆಗುವುದಿಲ್ಲ. ಅದರಂತೆ ಪುಣ್ಯ-ಪಾಪಗಳು ಆತ್ಮನಿಂದ ಬೇರೆಯಿವೆಯೆಂದು ಯಾರು ಜ್ಞಾನ ಮಾಡಿಕೊಂಡಿದ್ದಾರೆ ಅವರು ಭೇದವಿಜ್ಞಾನಿಗಳಿದ್ದಾರೆ. ಅನಂತ ಪರಪದಾರ್ಥಗಳಿಂದ ಆತ್ಮನು ಸಂಪೂರ್ಣರೂಪದಿಂದ ಬೇರೆಯಿದ್ದಾನೆ. ಆತ್ಮನು ಪುಣ್ಯ-ಪಾಪಗಳಿಂದ ರಹಿತನಿದ್ದಾನೆ ಮತ್ತು ಸಂಯೋಗಗಳಿಂದ ಕೂಡ ರಹಿತನಿದ್ದಾನೆ. ಯಾರಿಗೆ ಈ ಪ್ರಕಾರವಿರುವ ಆತ್ಮನ ಸ್ವಭಾವದ ಏಕಾಗ್ರತೆಯು ವರ್ತಿಸುತ್ತದೆ ಮತ್ತು ಸಂಯೋಗದ ಕಡೆಗೆ ಉಪೇಕ್ಷೆಯು ವರ್ತಿಸುತ್ತದೆ ಅವರಿಗೆ ಭೇದಜ್ಞಾನವು ವರ್ತಿಸುತ್ತದೆ, ಅವರಿಗೆ ಸಂಯೋಗದ ಹಾಗೂ ರಾಗದ ಸಂಬಂಧವು ಬಿಡುತ್ತ ಹೋಗುತ್ತದೆ. ಅದರಿಂದ ಜ್ಞಾನಸ್ವಭಾವದ ಜತೆಯಲ್ಲಿ ಸಂಬಂಧವು ಹೆಚ್ಚುತ್ತ ಹೋಗುತ್ತದೆ. ಅವರಿಗೆ ನಿರ್ಜರೆಯಾಗುತ್ತದೆ ಮತ್ತು ಅದನ್ನು ನಿರ್ಜರೆಯೆಂದು ಹೇಳಲಾಗುತ್ತದೆ.

ಈ ನಿರ್ಜರೆಯಲ್ಲಿ ಹನ್ನೆರಡು ಪ್ರಕಾರದ ತಪಸ್ಸು ನಿಮಿತ್ತವಿದೆ.

**೪) ರಸಪರಿತ್ಯಾಗ :-** ಆತ್ಮನು ಜಡದ ರಸದಿಂದ ಸಂಪೂರ್ಣವಾಗಿ ಬೇರೆಯಿದ್ದಾನೆಂಬ ಜ್ಞಾನವು ಯಾರಿಗೆ ವರ್ತಿಸುತ್ತದೆ ಅವರಿಗೆ ಸ್ವಭಾವದಲ್ಲಿ ಏಕಾಗ್ರತೆಯಾಗುವುದು ಅದರಿಂದ ರಾಗದ ಉತ್ಪತ್ತಿಯಾಗುವುದಿಲ್ಲ ಮತ್ತು ಎಷ್ಟು ರಸದ ಸಂಯೋಗ ಸಂಬಂಧವು ಬಿಟ್ಟುಹೋಗುತ್ತದೆ ಅಷ್ಟು ನಿರ್ಜರೆಯಿದೆ. ಅಜ್ಞಾನೀ ಜೀವರುಗಳು ಹಾಲು, ಮೊಸರು, ತುಪ್ಪ, ಸಿಹಿಯಾದ ತಿನಿಸುಗಳು ಇದೇ ಮೊದಲಾದ ಪದಾರ್ಥಗಳನ್ನು ಬಿಟ್ಟುಕೊಡುವುದಕ್ಕೆ ರಸ ಪರಿತ್ಯಾಗವೆಂದು ಹೇಳುತ್ತಾರೆ. ಅವರಿಗೆ ಆ ಪದಾರ್ಥಗಳ ಜತೆಯಲ್ಲಿರುವ ಏಕತ್ವದ ಬುದ್ಧಿಯು ಬಿಟ್ಟುಹೋಗಿಲ್ಲ, ಅದರಿಂದಾಗಿ ಅವರಿಗೆ ನಿರ್ಜರೆಯಾಗುವುದಿಲ್ಲ. ಸಂಯೋಗಗಳು ಬಿಟ್ಟುಹೋಗಿದ್ದರೂ ಕೂಡ ನಿಜವಾಗಿ ಅವು ಬಿಟ್ಟುಹೋಗಿಲ್ಲ. ಇಚ್ಛೆಯನ್ನು ಮಂದ ಮಾಡಿರುವುದರಿಂದ ಎಂದರೆ ಇಚ್ಛೆಯನ್ನು ಕುಗ್ಗಿಸಿ ಬಿಟ್ಟಿರುವುದರಿಂದ ಸಂಯೋಗಗಳು ಬಿಟ್ಟುಹೋಗಿವೆಯೆಂದು ಅವರು ಮನ್ನಿಸಿಕೊಂಡಿದ್ದಾರೆ. ಆದರೆ ಪದಾರ್ಥಗಳ ಜತೆಯಲ್ಲಿ ಏಕತ್ವಬುದ್ಧಿಯು ಬಿದ್ದುಕೊಂಡಿರುವುದ-ರಿಂದ-ವರ್ತಿಸುತ್ತಿರುವುದರಿಂದ ಅವರಿಗೆ ಸಂಯೋಗ ಸಂಬಂಧವು ಬಿಟ್ಟು ಹೋಗಿಲ್ಲ. ಕಾರಣವೇನೆಂದರೆ ಅವರಿಗೆ ಸ್ವಭಾವದ ಜತೆಯಲ್ಲಿ ಸಂಬಂಧವಾಗಿಲ್ಲ. ಅಜ್ಞಾನೀ ಜೀವರುಗಳ ದೃಷ್ಟಿಯು ಪರ ಪದಾರ್ಥಗಳ ಮೇಲೆಯೇ ಇರುತ್ತದೆ. ಒಂದುವೇಳೆ ರಾಗ ಮಾಡುತ್ತಿದ್ದರೆ ರಸವುಳ್ಳ ಪದಾರ್ಥಗಳು ಬರುತ್ತಿದ್ದವು ಮತ್ತು ರಾಗವನ್ನು ಮಾಡದಿರುವುದರಿಂದಲೇ ಪರಪದಾರ್ಥಗಳು ಬರಲಿಲ್ಲವೆಂದು ಯಾರು ಮನ್ನಿಸಿಕೊಂಡಿದ್ದಾರೆ ಅವರಿಗೆ ಪರ ಪದಾರ್ಥಗಳ ಜತೆಯಲ್ಲಿ ಸಂಯೋಗದ

ಬುದ್ಧಿಯು ಉಳಿದುಕೊಂಡಿದೆ. ಅಂಥವರಿಗೆ ನಿರ್ಜರೆಯಾಗುವುದಿಲ್ಲ.

ನಿರ್ಜರೆಯು ಹೇಗಾಗುತ್ತದೆಯೆಂಬುದನ್ನು ಹೇಳುತ್ತಾರೆ. ಪರ ಪದಾರ್ಥಗಳು ಇದ್ದರೂ ಕೂಡ ಪದಾರ್ಥವಿದೆ. ಪರದ ಲಕ್ಷ್ಯದಿಂದ ಆಗುತ್ತಿರುವಂಥ ರಾಗದ ಕಾರಣದಿಂದ ಪರ ಪದಾರ್ಥಗಳು ಬಿಟ್ಟು ಹೋಗುವಂತೆ ಸ್ವರೂಪವು ಇಲ್ಲವೇ ಇಲ್ಲ. ಆತ್ಮನು ಪರದಿಂದ ಬಿಟ್ಟವನೇ-ವಿಮುಕ್ತನೇ ಇದ್ದಾನೆ. ಆದರೆ ಪರವನ್ನು ಬಿಟ್ಟುಕೊಡುತ್ತೇನೆಂಬ ವಿಕಲ್ಪವು ಕೂಡ ಶುದ್ಧ ಸ್ವಭಾವದಲ್ಲಿ ಇಲ್ಲ. ಸ್ವಭಾವದಲ್ಲಿ ಏಕಾಗ್ರತೆ ಮಾಡಿದರೆ ಶುದ್ಧಿಯು ವೃದ್ಧಿಸುತ್ತದೆ ಮತ್ತು ರಾಗವು ಬಿಟ್ಟು ಹೋಗುತ್ತದೆ. ಎಷ್ಟು ಶುದ್ಧಿಯ ವೃದ್ಧಿಯಾಗುತ್ತದೆ-ರಾಗವು ಬಿಟ್ಟುಹೋಗುತ್ತದೆ ಅಷ್ಟು ನಿರ್ಜರೆಯಾಗುತ್ತದೆ. ಅವರಿಗೆ ಸಂಯೋಗ ಸಂಬಂಧವು ಬಿಟ್ಟುಹೋಗುತ್ತದೆ.

ಯಾರು ಪರ ಪದಾರ್ಥಗಳಿಂದ ಬೇರೆಯಾಗುವುದಿಲ್ಲ ಅವರು ರಾಗದಿಂದ ಆತ್ಮನು ಬೇರೆಯಿದ್ದಾನೆಂದು ಭೇದಜ್ಞಾನ ಮಾಡಲು ಇಷ್ಟಪಡುವುದಿಲ್ಲ. ಯಾರಿಗೆ ಒಂಭತ್ತು ತತ್ತ್ವಗಳ ಅರಿವಿಲ್ಲ-ಪ್ರಜ್ಞೆಯಿಲ್ಲ ಅವರು ಭೇದಜ್ಞಾನವನ್ನೆಂದೂ ಮಾಡುವ ಸಾಧ್ಯತೆಯಿಲ್ಲ. ಯಾರಿಗೆ ಪರದಿಂದ ಭೇದಜ್ಞಾನವು ವರ್ತಿಸುವುದಿಲ್ಲ ಅವರಿಗೆ ಪರದಲ್ಲಿ ಅಹಂಕಾರವಾದಲ್ಲದೆ ಇರುವುದೇ ಇಲ್ಲ. ಬೇಕಾದರೆ ಭೇದಜ್ಞಾನ ಮಾಡಬೇಕು ಅಥವಾ ಅಹಂಕಾರ ಮಾಡಬೇಕು. ಇದನ್ನು ಹೊರತುಪಡಿಸಿ ಜೀವವು ಬೇರೇನೂ ಮಾಡುವುದಿಲ್ಲ.

**೫) ವಿವಿಕ್ತಶಯ್ಯಾಸನ :-** ಸ್ತ್ರೀ, ಪಶು, ನಪುಂಸಕರು ವಾಸಮಾಡದಿರುವಂಥ ಸ್ಥಾನಗಳಲ್ಲಿ ಮುನಿರಾಜರುಗಳು ಏಕಾಂತದಲ್ಲಿ ಇರುತ್ತಾರೆ ಅದನ್ನು ತಪವೆಂದು ಹೇಳಲಾಗುತ್ತದೆ. ಮುನಿರಾಜರುಗಳು ಎಲ್ಲಿ ಇತರ ಮನುಷ್ಯರುಗಳು ತಮ್ಮ ಕಾರ್ಯದ ನಿಮಿತ್ತದಿಂದ ಬರುವುದು-ಹೋಗುವುದು ಇರುವುದಿಲ್ಲವೋ ಅಂಥ ಸ್ಥಾನದಲ್ಲಿ ಪದ್ಮಾಸನ ಹಾಕಿ ಕುಳಿತುಕೊಳ್ಳುತ್ತಾರೆ ಇಲ್ಲವೆ ಖಡ್ಗಾಸನದಿಂದ ನಿಂತುಕೊಳ್ಳುತ್ತಾರೆ. ಅವರಿಗೆ ನಿರ್ಜರೆಯು ಯಾವ ರೀತಿಯಿಂದ ಆಗುತ್ತದೆಯೆಂಬುದನ್ನು ಹೇಳುತ್ತಾರೆ. ಮೊದಲಂತೂ ಸಮಸ್ತ ಜಗತ್ತಿನ ಅನಂತ ಆತ್ಮರುಗಳಿಂದ-ಅನಂತ ಅನಂತ ಪರಮಾಣುಗಳಿಂದ ವಿವಿಕ್ತನಿದ್ದೇನೆ ಎಂದರೆ ಭಿನ್ನನಿದ್ದೇನೆಂದು ಯಾರು ನಿರ್ಣಯ ಮಾಡಿದ್ದಾರೆ ಅವರು ತಮ್ಮ ಸ್ವಭಾವದಲ್ಲಿ ಲೀನತೆ ಮಾಡಿದರೆ-ನಿಮಗ್ನರಾಗಿ ಹೋದರೆ ಆಗ ತಾವು ಏಕಾಂತ ಸ್ಥಾನದಲ್ಲಿ ಕುಳಿತುಕೊಂಡಿರುವುದರ ವಿಕಲ್ಪವು ಕೂಡ ಉತ್ಪನ್ನವಾಗುವುದಿಲ್ಲ ಅದು ನಿರ್ಜರೆಯಿದೆ.

ನಾನು ಪರಪದಾರ್ಥಗಳನ್ನು ಬಿಟ್ಟುಕೊಡುವ ಸಾಧ್ಯತೆಯಿದೆಯೆಂದು ಯಾವ ಜೀವರುಗಳು ಮನ್ನಿಸುತ್ತಾರೆ ಆ ಜೀವರುಗಳು ಮೂರ್ಖರಿದ್ದಾರೆ, ಅವರಿಗೆ ತಪಸ್ಸು ಆಗುವುದಿಲ್ಲ. ಯಾವ ಜೀವರುಗಳು ನನಗೆ ಸ್ತ್ರೀಯ ಕಾರಣದಿಂದ ರಾಗವಾಗುತ್ತದೆಯೆಂದು ಮನ್ನಿಸಿದ್ದಾರೆ, ಕೋಪಿಷ್ಟ ಮನುಷ್ಯನಿದ್ದರೆ ಪರಿಣಾಮವು ಸರಿಯಾಗಿ ಉಳಿಯುವುದಿಲ್ಲ ಮತ್ತು ಏಕಾಂತದಲ್ಲಿದ್ದರೆ ಪರಿಣಾಮವು ಸರಿಯಾಗಿ ಉಳಿಯುತ್ತದೆಯೆಂದು ತಿಳಿದುಕೊಂಡವರಿಗೆ ಇನ್ನೂ ಪರದಿಂದ ಭೇದಜ್ಞಾನ ಕೂಡ ಮಾಡಲು ಬರುವುದಿಲ್ಲವೆಂದ ಬಳಿಕ ಇಚ್ಛೆಯಿಂದ ಕೂಡ ಆತ್ಮನು ಬೇರೆಯಿದ್ದಾನೆಂಬ ಭೇದಜ್ಞಾನ ಮಾಡಲು ಅವರು ಇಷ್ಟಪಡುವ ಸಾಧ್ಯತೆಯೇ ಇಲ್ಲ. ಪರಪದಾರ್ಥಗಳು ತಮ್ಮಿಂದ ವಿಯೋಗ ಸ್ವರೂಪವಿದ್ದರೂ ಕೂಡ ನಾನು ಅವನ್ನು ಬಿಟ್ಟುಕೊಡುತ್ತೇನೆಂಬ ಮನ್ನಣೆಯು ಮೂರ್ಖತೆಯಿದೆ. ಯಾವ ಪ್ರಕಾರ ವಮನವಾಗಿಹೋಗಿದೆ ಅದನ್ನು ನಾನು ವಮನ ಮಾಡಿದೆನೆಂದು ಹೇಳುವುದು ಮೂರ್ಖತೆಯಿದೆ ; ಅದೇ ಪ್ರಕಾರ ಯಾವ ವಸ್ತುಗಳು ಬಿಟ್ಟುಹೋಗಿವೆ ಅವನ್ನು ನಾನು ಬಿಟ್ಟುಕೊಟ್ಟೆನೆಂದು ಹೇಳುವುದು ಮೂರ್ಖತೆಯಿದೆ.

ಮೂರು ಲೋಕದಲ್ಲಿರುವ ಅನಂತ ಪರಪದಾರ್ಥಗಳಿಂದ ಆತ್ಮನು ಅಭಾವ ಸ್ವರೂಪನಿದ್ದಾನೆ ; ಆದಾಗ್ಯೂ ಪರವನ್ನು ಬಿಟ್ಟುಕೊಡುವ ಅಭಿರುಚಿಯಿರುವವರಿಗೆ ಸ್ವಭಾವದ ಅಭಿರುಚಿಯಿಲ್ಲ. ಯಾರಿಗೆ ಸ್ವಭಾವದ ಅಭಿರುಚಿಯಿದೆ ಅವರಿಗೆ ಸಂಯೋಗ ಸಂಬಂಧದ ವ್ಯವಹಾರವು ಬಿಟ್ಟುಹೋಗಿದೆಯೆಂದು ಹೇಳಲಾಗುವುದು. ಆದರೆ ಯಾರಿಗೆ

ಸ್ವಭಾವದ ಅಭಿರುಚಿಯಿಲ್ಲ ಮತ್ತು ಪರಪದಾರ್ಥಗಳನ್ನು ಬಿಡುವ ಸಾಧ್ಯತೆಯಿದೆಯೆಂಬ ಮನ್ನಣೆಯು ಯಾರದಿದೆ ಆ ಜೀವರುಗಳು ಬಾಹ್ಯದಿಂದ ಮುನಿಯಾಗಿ ಗಿರಿ-ಗುಹೆಗಳಲ್ಲಿ ವಾಸ ಮಾಡುತ್ತಿದ್ದರೂ ಮೂರು ಕಾಲದ ಪದಾರ್ಥಗಳ ಜತೆಯಲ್ಲಿ ಸಂಯೋಗ ಸಂಬಂಧವು ಅವರ ಅಭಿಪ್ರಾಯದಲ್ಲಿ ಬಿದ್ದುಕೊಂಡಿದೆ-ನೆಲೆಯೂರಿ ನಿಂತುಕೊಂಡಿದೆ.

ನಾವು ಇಂತಿಷ್ಟು ಪದಾರ್ಥಗಳನ್ನು ಬಿಟ್ಟುಕೊಟ್ಟಿದ್ದೇವೆಂದು ಅಜ್ಞಾನೀ ಜೀವರುಗಳು ಹೇಳುತ್ತಾರೆ. ಆದರೆ ಆ ಪದಾರ್ಥಗಳು ನನ್ನಲ್ಲಿ ಇಲ್ಲವೆಂದು ನಿರ್ಣಯ ಮಾಡದ ಹೊರತಾಗಿ ಪರದ ಅಹಂಕಾರವು ಬಿಟ್ಟು ಹೋಗುವುದಿಲ್ಲ. ಇತರ ಪದಾರ್ಥಗಳಿಂದ ನಾನು ಭಿನ್ನನಿದ್ದೇನೆಂದು ಜ್ಞಾನ ಮಾಡಿಕೊಂಡು ಸ್ವಭಾವದಲ್ಲಿ ಏಕಾಗ್ರತೆ ಮಾಡಿದರೆ ವಿಕಲ್ಪಗಳು ಉತ್ಪನ್ನವಾಗುವುದೇ ಇಲ್ಲ, ಅದು ನಿರ್ಜರೆಯಿದೆ. ಅದರ ಮೊದಲು ವಿವಿಕ್ತಶಯ್ಯಾಸನದ ರಾಗವಿರುವುದರಿಂದ ಅದರಿಂದ ನಿರ್ಜರೆಯಾಯಿತೆಂಬ ಉಪಚಾರವು ಬರುತ್ತದೆ. ವಿಕಲ್ಪಗಳು ಬಿಟ್ಟುಹೋದುವೆಂದು ಹೇಳುವುದು ಉಪಚಾರವಿದೆ. ತಮ್ಮ ಪರ್ಯಾಯಗಳನ್ನು ಕೂಡ ವ್ಯಯ ಮಾಡಬೇಕಾಗುವುದಿಲ್ಲ. ರಾಗವು ಸ್ವಾಭಾವಿಕವಾಗಿ ಬಿಟ್ಟುಹೋದನಂತರ ಪರಪದಾರ್ಥಗಳನ್ನು ಬಿಟ್ಟುಕೊಡುವುದಾದರೂ ಎಲ್ಲಿ ಉಳಿಯುವುದು. ಆದುದರಿಂದ ಪರದಿಂದ ಹಾಗೂ ರಾಗದಿಂದ ಭೇದಜ್ಞಾನ ಮಾಡಿ, ಆಂತರ್ಯದಲ್ಲಿ ಶುದ್ಧಿಯ ವೃದ್ಧಿಯಾಗುವುದು ನಿಜವಾದ ನಿರ್ಜರೆಯಿದೆ.

**೬) ಕಾಯಕ್ಲೇಶ :-** ಈ ಕಾಯಕ್ಲೇಶ ಶಬ್ದದ ಅರ್ಥವೇನಿದೆಯೆಂದರೆ - ಶರೀರದಲ್ಲಿ ಅರ್ಧ ಪದ್ಮಾಸನ, ಪೂರ್ಣ ಪದ್ಮಾಸನ ಮೊದಲಾದ ಕಠೋರ ಆಸನ ಹಾಕುವುದು, ಎಂಟು ಗಂಟೆಗಳವರೆಗೆ ಕುಳಿತುಕೊಂಡಿರುವುದು, ಕಾಲುಗಳನ್ನು ಕೂಡ ವಿಸ್ತರಿಸದಿರುವುದನ್ನು ಕಾಯಕ್ಲೇಶ ತಪವೆಂದು ಹೇಳುತ್ತಾರೆ. ಆದರೆ ಯಾರಿಗೆ ಭೇದಜ್ಞಾನವು ವರ್ತಿಸುತ್ತದೆ ಅವರಿಗೆ ತಪಸ್ಸು ಇರುತ್ತದೆ. ಶರೀರದ ಪರ್ಯಾಯವನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ಆತ್ಮನು ಜ್ಞಾನ ಸ್ವರೂಪನಿದ್ದಾನೆಂಬ ಭೇದಜ್ಞಾನಪೂರ್ವಕ ಯಾರಿಗೆ ಅಂತರ್ಲೀನತೆಯು ವರ್ತಿಸುತ್ತದೆ ಆ ಜೀವರುಗಳಿಗೆ ಬಾಹ್ಯದಿಂದ ಶರೀರದ ಅವಸ್ಥೆಯು ಈ ಪ್ರಕಾರವಾಗಿರುತ್ತಿದ್ದರೆ ಕಾಯಕ್ಲೇಶ ತಪಸ್ಸಿನಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ. ಶರೀರದ ಆಸನದ ಕಾಲವಿದೆ, ಆ ಸಮಯದಲ್ಲಿ ಜ್ಞಾನದ ಕಡೆಗೆ ಪ್ರವೃತ್ತಿಯಿದೆ, ಆಗ ಇಚ್ಛೆಯು ಉತ್ಪನ್ನವಾಗದಿರುವುದರಿಂದ ಕಾಯಕ್ಲೇಶತಪದ ಉಪಚಾರವು ಬಂದಿದೆ. ಜನರು ಬಾಹ್ಯದಿಂದ ಶರೀರವನ್ನು ನೋಡುತ್ತಾರೆ ಮತ್ತು ಶರೀರದಲ್ಲಿನ ದುಃಖವನ್ನು ನೋಡುತ್ತಿರುವುದರಿಂದ ಕಾಯಕ್ಲೇಶ ಶಬ್ದ ಪ್ರಯೋಗ ಮಾಡಲಾಗಿದೆ.

ಶರೀರದ ಪರ್ಯಾಯವನ್ನು ನಾವು ಮಾಡುವ ಸಾಧ್ಯತೆಯಿಲ್ಲ ಮತ್ತು ಅದರ ಕಡೆಗಿರುವ ರಾಗವನ್ನು ರಾಗದ ದೃಷ್ಟಿಯನ್ನು ತೆಗೆಯುವ ಸಾಧ್ಯತೆಯಿಲ್ಲವೆಂದು ಜ್ಞಾನಿಗಳು ತಿಳಿಯುತ್ತಾರೆ. ಯಾರು ಚೈತನ್ಯ ಸ್ವಭಾವದ ಜತೆಯಲ್ಲಿ ಏಕತೆಯ ಬುದ್ಧಿ ಮಾಡಿದ್ದಾರೆ ಅವರು ಅನಂತ ಪರಪದಾರ್ಥಗಳ ಜತೆಯಲ್ಲಿನ ಸಂಬಂಧವನ್ನು ಕತ್ತರಿಸಿ ಹಾಕಿದ್ದಾರೆ, ಅವರು ಮಿಥ್ಯಾತ್ವನ್ನು ಕತ್ತರಿಸಿ ಹಾಕಿದ್ದಾರೆ. ಆ ಜೀವರುಗಳಿಗೆ ಯೋಗವಿರುತ್ತದೆ.

ತನ್ನ ಶುದ್ಧಸ್ವರೂಪದ ಅರಿವಿಲ್ಲದೆ, ಶ್ರದ್ಧೆಯಿಲ್ಲದೆ ಏನನ್ನು ಬಿಡುವುದು ಮತ್ತು ಏನನ್ನು ಹಿಡಿದುಕೊಳ್ಳುವುದು! ಯಾವ ರೀತಿಯಿಂದ ಮಾಡಬೇಕೆಂಬುದರ ಅರಿವಿಲ್ಲದೆ-ಪ್ರಜ್ಞೆಯಿಲ್ಲದೆ, ಚೈತನ್ಯ ಮತ್ತು ಜಡದ ಭೇದಜ್ಞಾನವಿಲ್ಲದೆ ಯೋಗ ಸಾಧಿಸುವುದು ನಿರರ್ಥಕವಿದೆ. ''ಇಂಥವನು ಮರಣದ ಮೇಲೆ ವಿಜಯ ಪ್ರಾಪ್ತಮಾಡಿಕೊಂಡ''ನೆಂದು ಜನರು ಹೇಳುತ್ತಾರೆ. ಪ್ರತಿಯೊಂದು ತತ್ತ್ವವು ಅನಂತ ಗುಣಗಳ ಸಮೂಹವಿದೆಯೆಂಬುದನ್ನು ಮರೆತುಹೋಗಿ ಅನಂತ ಪರಪದಾರ್ಥಗಳ ಜತೆಯಲ್ಲಿ ಸಂಧಾನ ಸಾಧಿಸುವಂಥವರು ಭೇದಜ್ಞಾನ ಮಾಡುವ ಸಾಧ್ಯತೆಯಿಲ್ಲ ಮತ್ತು ಮರಣದ ಮೇಲೆ ವಿಜಯ ಸಂಪಾದಿಸುವ ಸಾಧ್ಯತೆಯಿಲ್ಲ.

ಅನಂತ ಪದಾರ್ಥಗಳ ಜತೆಯಲ್ಲಿ ಭೇದಜ್ಞಾನವಿಲ್ಲದವರಿಗೆ ಶಾಂತಿಯಿರುವುದಿಲ್ಲ. ತನ್ನ ಸ್ವಭಾವವನ್ನು ಮರೆತುಬಿಟ್ಟು ಅನಂತ ಪರಪದಾರ್ಥಗಳ ಜತೆಯಲ್ಲಿ ಏಕತ್ವಬುದ್ಧಿಯಿರುವುದೇ ಅಶಾಂತಿಯಿದೆ ಮತ್ತು ಅಧರ್ಮವಿದೆ.

ಶರೀರವು ಸೊರಗಿಹೋಗುವುದು ಜಡದ ಅವಸ್ಥೆಯಿದೆ, ಜ್ಞಾನಿಗಳ ದೃಷ್ಟಿಯು ಶರೀರದ ಮೇಲೆ ಇರುವುದಿಲ್ಲ. ಅದರಿಂದ ಭೇದಜ್ಞಾನವು ವರ್ತಿಸುತ್ತದೆ, ಅವರಿಗೆ ಶುದ್ಧತೆಯು ವರ್ತಿಸುತ್ತದೆ. ಅದನ್ನು ಕಾಯಕ್ಲೇಶದಿಂದ ನಿರ್ಜರೆಯೆಂದು ಹೇಳಿದೆ. ಅದನ್ನು ಸಮಾಧಿಯಿಂದ ಶಾಂತಿಯೆಂದು ಹೇಳಿದೆ.

**ಪ್ರಶ್ನೆ :-** ಒಂದು ಕಡೆಯಿಂದ ಕಾಯಕ್ಲೇಶವೆಂದು ಹೇಳುವುದು ಮತ್ತು ಇನ್ನೊಂದು ಕಡೆಯಿಂದ ಶಾಂತಿಯೆಂದು ಹೇಳುವುದು ಇದು ಹೇಗೆ ಸಂಭವವಿದೆ ?

**ಉತ್ತರ :-** ಜಗತ್ತಿನ ಜನರು ಶರೀರದ ಅವಸ್ಥೆಯನ್ನು ಭಾವಿಸುತ್ತಾರೆ ಮತ್ತು ಜ್ಞಾನಿಗಳಿಗೆ ಈ ಸಮಯದಲ್ಲಿ ಇಂಥ ಪ್ರಕಾರದ ಅವಸ್ಥೆಯು ನಿಮಿತ್ತವಿದೆ. ಆದರೆ ಆ ಕಾಯಕ್ಲೇಶದ ನಿಮಿತ್ತವು ಯಾರಿಗೆ ಇದೆಯೆಂದರೆ ಯಾರು ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡು ಏಕಾಗ್ರತೆ ಮಾಡುತ್ತಾರೆ ಅವರಿಗೆ ಕಾಯಕ್ಲೇಶವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಇತರರಿಗೆ ಹೇಳಲಾಗುವುದಿಲ್ಲ.

ಒಂದು ಆಸನದಲ್ಲಿ ಎಂಟು ಗಂಟೆಗಳವರೆಗೆ ಕುಳಿತುಕೊಂಡಿರುವುದು ಮತ್ತು ಒಂದಿಷ್ಟೂ ಅಲ್ಲಾಡದಿರುವುದನ್ನು ಆಸನಜಯವಿದೆಯೆಂದು ಅಜ್ಞಾನೀ ಜೀವರುಗಳು ಮನ್ನಿಸಿಕೊಂಡಿದ್ದಾರೆ. ಆದರೆ ಹೀಗೆ ಮನ್ನಿಸುವವರು ಮೂರ್ಖರಿದ್ದಾರೆ. ಜಡದ ಪರ್ಯಾಯವನ್ನು ಜೀವನು ಮಾಡುತ್ತಾನೆಂದು ಮನ್ನಿಸುವವರು ಮೂಢರಿದ್ದಾರೆ.

ಯಾವ ಪ್ರಕಾರ ವಸ್ತುಬಿದ್ದುಕೊಂಡಿರುತ್ತದೆ ಅದೇ ಪ್ರಕಾರ ಶರೀರವು ಬಿದ್ದುಕೊಂಡಿರುತ್ತದೆ. ಎರಡು ತಿಂಗಳು ಅಭ್ಯಾಸ ಮಾಡುವುದರಿಂದ ತಪವಾಯಿತೆಂದು ಅಜ್ಞಾನಿಗಳು ಮನ್ನಿಸಿಕೊಂಡಿದ್ದಾರೆ. ಅವರಿಗೆ ಶರೀರದ ಜತೆಯಲ್ಲಿ ಏಕತ್ವ ಬುದ್ಧಿಯು ವರ್ತಿಸುತ್ತದೆ. ಅವರಿಗೆ ಶರೀರದಿಂದ ಭಿನ್ನತೆಯ ಅರಿವಿಲ್ಲ. ಆದುದರಿಂದ ಅವರಿಗೆ ನಿರ್ಜರೆಯಿರುವುದಿಲ್ಲ. ಸಂವರವಿಲ್ಲದೆ ನಿರ್ಜರೆಯಿರುವುದಿಲ್ಲ, ಭೇದವಿಜ್ಞಾನವಿಲ್ಲದೆ ಸಂವರವಿರುವುದಿಲ್ಲ. ಅಜ್ಞಾನಿಗಳಿಗಂತೂ ಏಕತ್ವ ಬುದ್ಧಿಯು ವರ್ತಿಸುತ್ತಿರುವುದರಿಂದ ಅವರಿಗೆ ತಪವಾಗಲಿ ಅಥವಾ ನಿರ್ಜರೆಯಾಗಲಿ ಇರುವುದಿಲ್ಲ.

ಎಂಭತ್ತು ವರುಷದ ಮನುಷ್ಯನ ಮೇಲೆ ಎಪ್ಪತ್ತು ಕೆ.ಜಿ. ಭಾರ ಹೊರಿಸಿದ್ದರೆ ಅವನು ಆ ಭಾರವನ್ನು ಮಸ್ತಕದ ಮೇಲೆ ಇಟ್ಟುಕೊಂಡು ಆಕಾಶದಲ್ಲಿನ ಚಂದ್ರನನ್ನು ನೋಡುವ ಸಾಧ್ಯತೆಯಿಲ್ಲ. ಅದರಂತೆ ಯಾರಿಗೆ ಜಡದ ಜತೆಯಲ್ಲಿ ತೀವ್ರ ಏಕತ್ವಬುದ್ಧಿಯು ವರ್ತಿಸುತ್ತದೆ ಮತ್ತು ಅದರ ಭಾರವನ್ನು ಹೊತ್ತುಕೊಂಡು ತಿರುಗುತ್ತಾರೆ ಅವರು ಸತ್ಯ ಶ್ರವಣ ಮಾಡುವ ಸಲುವಾಗಿ ಮಸ್ತಕವನ್ನು ಕೂಡ ಮೇಲೆ ಮಾಡುವ ಸಾಧ್ಯತೆಯಿಲ್ಲ.

ಆದುದರಿಂದ ಭೇದಜ್ಞಾನ ಮಾಡಬೇಕಾಗುವುದೆಂಬ ಪ್ರಜ್ಞೆಯು ಬರುವುದು ಅದರ ಕಾರಣದಿಂದ ಇದೆ. ಶುಭಭಾವವಾಗುವುದರಿಂದ ಜಡದ ಕ್ರಿಯೆಯಾಗುತ್ತದೆಯೆಂಬುದಾಗಿಲ್ಲ, ಅವೆರಡೂ ಸ್ವತಂತ್ರವಿವೆಯೆಂಬ ಭೇದಜ್ಞಾನವು ಯಾರಿಗೆ ವರ್ತಿಸುತ್ತದೆ ಅಂಥ ಭೇದಜ್ಞಾನಿಯಾದ ಜೀವನಿಗೆ ತನ್ನ ಸ್ವಭಾವದಲ್ಲಿ ಲೀನತೆಯು ವರ್ತಿಸುವುದು ನಿರ್ಜರೆಯಿದೆ. ಆ ಸಮಯದಲ್ಲಿ ಕಾಯಕ್ಲೇಶವುಳ್ಳ ಶರೀರದ ಅವಸ್ಥೆಯಿದ್ದರೆ ಆಗ ಕಾಯಕ್ಲೇಶ ತಪದ ನಿಮಿತ್ತದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ಈ ಪ್ರಕಾರದಿಂದ ಜ್ಞಾನಿಗೆ ಆರು ಪ್ರಕಾರದ ಬಾಹ್ಯ ತಪಸ್ಸುಗಳು ನಿಮಿತ್ತವಾಗುತ್ತವೆ.

ಇದು ನಿರ್ಜರಾ ಅಧಿಕಾರವಿದ್ದು, ಪರಪದಾರ್ಥಗಳಿಂದ ಮತ್ತು ರಾಗದಿಂದ ಆತ್ಮನು ಭಿನ್ನನಿದ್ದಾನೆಂದು ಜ್ಞಾನವಾದನಂತರ ಆತ್ಮನಲ್ಲಿ ಶುದ್ಧಿಯ ವೃದ್ಧಿಯಾಗುವುದು ನಿರ್ಜರೆಯಿದೆ. ಅದರಲ್ಲಿ ಹನ್ನೆರಡು ಪ್ರಕಾರದ ತಪಸ್ಸುಗಳು

ನಿಮಿತ್ತವಿವೆ. ಆರು ಬಾಹ್ಯ ತಪಸ್ಸಿನ ಮಾತು ಬಂದುಹೋಯಿತು, ಈಗ ಆರು ಅಂತರಂಗ ತಪಸ್ಸಿನ ವಿಷಯವಾಗಿ ಹೇಳಲಾಗುವುದು.

**ಪ್ರಾಯಶ್ಚಿತ್ತ :-** ಗುರುಗಳ ಹತ್ತಿರ ಪಾಪದ ಕುರಿತು ಪ್ರಾಯಶ್ಚಿತ್ತ ತೆಗೆದುಕೊಳ್ಳುವುದು ಶುಭರಾಗವಿದೆ. ಯಾವ ಪಾಪದ ಪರಿಣಾಮವಾಯಿತು ಮತ್ತು ಯಾವುದರ ಪ್ರಾಯಶ್ಚಿತ್ತ ತೆಗೆದುಕೊಳ್ಳುವುದಿದೆ ಅದು ವರ್ತಮಾನದಲ್ಲಿಯಂತೂ ಇಲ್ಲವೆಂದಮೇಲೆ ಯಾವುದರ ಪ್ರಾಯಶ್ಚಿತ್ತ ? ವ್ಯವಹಾರದಿಂದ ಗುರುಗಳ ಹತ್ತಿರ ಹೋಗಿ ಮೊದಲಿನ ಪ್ರಾಯಶ್ಚಿತ್ತ ಮಾಡಿದರೆ ಅದು ಶುಭ ರಾಗವಿದೆ, ಆ ಸಮಯದಲ್ಲಿ ಕೂಡ ಮೊದಲು ಯಾವ ಪರಿಣಾಮವಾಗಿದೆ ಅದರಿಂದ ಮತ್ತು ವಾಣಿಯಿಂದ ನಾನು ಭಿನ್ನನಿದ್ದೇನೆಂಬ ಅರಿವಿರಬೇಕಾಗುವುದು. ಪಾಪವು ಕ್ಷಣಿಕವಿದೆ. ಜ್ಞಾನಸ್ವಭಾವವು ತ್ರಿಕಾಲ ವಿದೆಯೆಂದು ಜ್ಞಾನಮಾಡಿಕೊಂಡು ಅಂತರ್ಯದಲ್ಲಿ ಸ್ಥಿರವಾಗುವುದು ಪ್ರಾಯಶ್ಚಿತ್ತವಿದೆ.

ಜ್ಞಾನ ಸ್ವಭಾವದ ನಿತ್ಯತೆಯು ಪ್ರಾಯಶ್ಚಿತ್ತ ಸ್ವರೂಪವಿದೆಯೆಂದರೆ ಅದನ್ನು ಯಾವನು ಜ್ಞಾನದಲ್ಲಿ ಸ್ವೀಕರಿಸಿದ್ದಾನೆ ಅವನ ಪರ್ಯಾಯದಲ್ಲಿ ನಿರ್ಮಲತೆಯು ಪ್ರಕಟವಾಗುವುದನ್ನು (ನಿರ್ಜರೆಯನ್ನು) ತಪವೆಂದು ಹೇಳಲಾಗಿದೆ. ವಿಕಲ್ಪವನ್ನು ಪ್ರಾಯಶ್ಚಿತ್ತವೆಂದು ಹೇಳಲಾಗುವುದಿಲ್ಲ. ಆದರೆ ಮೊದಲು ವಿಕಲ್ಪವಿರುವುದರಿಂದ ಪ್ರಾಯಶ್ಚಿತ್ತ ತಪದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ಆತ್ಮನಾಗಿ ಆತ್ಮನಾಗುವುದರ ಮಾತು ಇದೆ. ರಾಗವಾಗಿ ಆತ್ಮನಾಗುವುದಿಲ್ಲ. ಪುಣ್ಯ-ಪಾಪಗಳು ಸಂವರವಿಲ್ಲ, ನಿರ್ಜರೆಯಿಲ್ಲ. ಆ ಪುಣ್ಯದ ಭಾವಗಳು ಸಂವರ ಮೊದಲಾದವುಗಳಿದ್ದರೆ ನವತತ್ತ್ವಗಳು ಉಳಿಯುವುದಿಲ್ಲ. ಯಾರಿಗೆ ಇನ್ನೂ ನವತತ್ತ್ವಗಳ ಶ್ರದ್ಧೆಯ ಗೊತ್ತುಗುರಿಯಿಲ್ಲ, ಮಿಥ್ಯಾತ್ವವು ಹೊರಟುಹೋಗಿಲ್ಲ ಅವರ ವ್ರತ-ತಪಸ್ಸುಗಳೆಂಥವು ಮತ್ತು ಎಲ್ಲಿಯವು ?

ಜೀವರುಗಳಿಗೆ ವರ್ತಮಾನ ಪರ್ಯಾಯದ ವಿಶ್ವಾಸವು ಬಂದಿದೆ, ಆದರೆ ತ್ರಿಕಾಲೀ ಆತ್ಮನ ವಿಶ್ವಾಸವು ದೃಢಪಡುವುದಿಲ್ಲ. ಒಂದು ಚೈತನ್ಯ ಸ್ವಭಾವವೇ ಸರ್ವಸ್ವವಿದೆಯೆಂದು ಒಪ್ಪಿಕೊಳ್ಳಬೇಕಾವುದು. ಪಾಪದ ಪರಿಣಾಮಗಳಾಗುತ್ತವೆ ಅವು ಕೂಡ ಕ್ರಮವಾಗಿ ಆಗುತ್ತವೆ. ಆದಾಗ್ಯೂ ಪ್ರಾಯಶ್ಚಿತ್ತದ ವಿಕಲ್ಪವು ಬರುತ್ತದೆ. ನಿಂದೆ-ಗರ್ಹೆಗಳ ವಿಕಲ್ಪಗಳು ಬರುತ್ತವೆ. ಪ್ರಾಯಶ್ಚಿತ್ತದ ಸಮಯದಲ್ಲಿ ಕೈಮುಗಿಯುವ ರೂಪದ ಕ್ರಿಯೆಯು ವರ್ತಿಸುತ್ತದೆ, ಗುರುಗಳ ಎದುರಿಗೆ ನಿಂತುಕೊಂಡಿರುತ್ತದೆ, ವಾಣಿಯು ಮಾತನಾಡುತ್ತದೆ. ಆದಾಗ್ಯೂ ಮೊದಲಿನ ಪಾಪದ ಮತ್ತು ವರ್ತಮಾನದ ಶುಭರಾಗ, ವಾಣಿ, ಗುರು ಮೊದಲಾಗಿ ಎಲ್ಲವುಗಳಿಂದ ನಾನು ಜ್ಞಾನಸ್ವರೂಪನಾದ ಆತ್ಮನು ಭಿನ್ನನಿದ್ದೇನೆಂಬ ಅರಿವು ವರ್ತಿಸುತ್ತದೆ. ಆ ಜೀವನಿಗೆ ಆತ್ಮನ ಅವಲಂಬನದಿಂದ ಶುದ್ಧತೆಯ ವೃದ್ಧಿಯಾಗುತ್ತದೆ, ಅದು ನಿಜವಾದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ. ಆದರೆ ಮೊದಲು ವಿಕಲ್ಪವಾಗಿತ್ತು ಗುರುಗಳ ಹತ್ತಿರ ಹೋಗಿತ್ತು ಅದರಿಂದ ಪ್ರಾಯಶ್ಚಿತ್ತತಪದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ಆರು ಬಾಹ್ಯ ಮತ್ತು ಆರು ಅಭ್ಯಂತರ ಹೀಗೆ ಹನ್ನೆರಡು ಪ್ರಕಾರದ ತಪಸ್ಸಿನಿಂದ ನಿರ್ಜರೆಯಾಗುತ್ತದೆಂದು ಅಮೃತಚಂದ್ರಾಚಾರ್ಯದೇವರು ಟೀಕೆಯಲ್ಲಿ ಹೇಳಿದ್ದಾರೆ. ಆದರೆ ಶಾಸ್ತ್ರದ ಭಾವವನ್ನು ತಿಳಿದುಕೊಳ್ಳಬೇಕಾಗುವುದು. ಶಾಸ್ತ್ರಕ್ಕೆ ಜ್ಞಾನವಿಲ್ಲ, ಪ್ರಜ್ಞೆಯಿಲ್ಲ, ಶಾಸ್ತ್ರವು ಮಾತನಾಡುವುದಿಲ್ಲ, ಆದರೆ ಅದರ ಹಿಂದೆ ಯಾವ ರಹಸ್ಯವಿದೆ ಅದನ್ನು ಆತ್ಮನು ತಿಳಿದುಕೊಳ್ಳುತ್ತಾನೆ.

ಕೆಲವರು ಶಾಸ್ತ್ರವು ಪುದ್ಗಲವಿದೆಯೆಂದು ಒಂದು ರೀತಿಯಿಂದ ಹೇಳಿದರೆ ಇನ್ನೊಂದು ರೀತಿಯಿಂದ ಚಿನ್ನದ ಎಲೆಗಳನ್ನು ಮಾಡಿ ಅದರ ಮೇಲೆ ರತ್ನದ ಅಕ್ಷರಗಳಿಂದ ಬರೆಯಬೇಕೆಂದು ಶಾಸ್ತ್ರದ ಮಹಿಮೆಯನ್ನು ಹಾಡಿದ್ದಾರೆ, ಇದರ

ಅರ್ಥವೇನು ? ಅಯ್ಯಾ ಸೋದರನೇ ! ಅವೆಲ್ಲವು ಸಂಯೋಗೀ ವಸ್ತುಗಳಿವೆ. ಅದರ ಹಿಂದಿರುವ ರಾಗದ ಪರಿಚಯ ಮಾಡಿಸಿಕೊಡಲಾಗಿದೆ. ತಮ್ಮಲ್ಲಿ ಭಾವಶ್ರುತಜ್ಞಾನವು ಪ್ರಕಟವಾದಮೇಲೆ ತಮಗೆ ವಿಕಲ್ಪಗಳು ಬರುತ್ತವೆ ಅದು ವ್ಯವಹಾರವಿದೆ ; ವ್ಯವಹಾರ ವಿನಯವಿದೆ ಮತ್ತು ಅಂತರ್ಯದಲ್ಲಿ ನಿರ್ವಿಕಲ್ಪ ದಶೆಯಾಗುವುದು ನಿಶ್ಚಯ ವಿನಯವಿದೆ. ನಿಶ್ಚಯ ಮತ್ತು ವ್ಯವಹಾರವು ಆತ್ಮನಲ್ಲಿದ್ದರೂ ನಿಮಿತ್ತವು ನಿಮಿತ್ತದ ಕಾಲದಲ್ಲಿರುತ್ತದೆ, ಅದನ್ನು ನಿಮಿತ್ತ-ನೈಮಿತ್ತಿಕ ಸಂಬಂಧದಿಂದ ವಿಚಾರಿಸಿದರೆ ಕೆಲಸಕ್ಕೆ ಬರುವುದು, ಆದರೆ ಕರ್ತಾ-ಕರ್ಮ ಸಂಬಂಧವೆಂದು ಮನ್ನಿಸಿದರೆ ದೋಷವಿದೆ.

ಕೆಲವರು ತಾವು ಅದನ್ನು ಮಾಡಿಲ್ಲ, ಮಾಡಿಸಿಲ್ಲ ಮತ್ತು ಮಾಡುವುದರ ವ್ಯಾಖ್ಯೆಯನ್ನೇಕೆ ಮಾಡುತ್ತಿರುವಿರೆಂದು ಕೇಳುತ್ತಾರೆ. ಹಾಗಾದರೆ ಜಡದ ಕಾರ್ಯವನ್ನು ಯಾರಾದರೂ ಮಾಡುವ ಸಾಧ್ಯತೆಯಿದೆಯೇನು ? ಆತ್ಮನು ಜಡದ ಕಾರ್ಯವನ್ನು ಮೂರು ಕಾಲದಲ್ಲಿ ಕೂಡ ಮಾಡುವ ಸಾಧ್ಯತೆಯಿಲ್ಲ. ಸಂಯೋಗವು ಸಂಯೋಗದ ಕಾರಣದಿಂದ ದೊರಕುತ್ತದೆ. ಕೆಲವರು ನಾನು ಇಂಥ ಕಾರ್ಯಮಾಡಿದೆನೆಂದು ಹೇಳುತ್ತಾರೆ. ಆದರೆ ಆ ಜೀವನು ಜಡದ ಪರ್ಯಾಯದ ಕರ್ತೃ ಆಗುತ್ತಾನೆ, ಅದು ಮಿಥ್ಯಾಭಾವವಿದೆ. ಪರದಿಂದ ಭೇದಜ್ಞಾನ ಮಾಡಿದಲ್ಲದೆ ವ್ರತ, ತಪಗಳಾಗುವ ಸಾಧ್ಯತೆಯಿಲ್ಲ. ಜ್ಞಾನಿಗೆ ಉಪವಾಸದ ವಿಕಲ್ಪವುಂಟಾಗುತ್ತದೆ. ಆದರೆ ಆಹಾರ ಮತ್ತು ವಿಕಲ್ಪದ ಮೇಲೆ ಅವನ ದೃಷ್ಟಿಯಿರುವುದಿಲ್ಲ, ಶುದ್ಧ ಚೈತನ್ಯದ ಮೇಲೆಯೇ ಅವನ ದೃಷ್ಟಿಯಿರುವುದರಿಂದ ಅವನಿಗೆ ನಿರ್ಜರೆಯಾಗುತ್ತದೆ.

**ವಿನಯ** :- ವಿನಯ ತಪದಿಂದ ನಿರ್ಜರೆಯಾಗುತ್ತದೆ. ವಿನಯದ ಸಮಯದಲ್ಲಿ ಯಾವ ಜಡದ ಕ್ರಿಯೆ ಯಾಗುತ್ತದೆ ಅದನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ದೇವ-ಶಾಸ್ತ್ರ-ಗುರುಗಳ ವಿನಯವು ಕೂಡ ರಾಗವಿದೆ.ರಾಗದಿಂದ ರಹಿತ ಹಾಗೂ ದೇಹದ ಕ್ರಿಯೆಯಿಂದ ರಹಿತನಾಗಿ ಆತ್ಮನು ಶುದ್ಧನಿದ್ದಾನೆಂದು ಅಂತರ್ಯದಲ್ಲಿ ಅರಿವು ಮೂಡುವುದು ನಿಜವಾಗಿ ವಿನಯವಿದೆ. ದೇವ-ಶಾಸ್ತ್ರ-ಗುರುಗಳ ವಿನಯದಿಂದ ಮುಕ್ತಿಯಾಗುತ್ತಿದ್ದರೆ ಅನಂತಬಾರಿ ಇಂಥ ವಿನಯವನ್ನು ಮಾಡಲಾಗಿದೆ ಮತ್ತು ಶುಕ್ಲಲೇಶ್ಯೆಯ ಪರಿಣಾಮ ಕೂಡ ಮಾಡಿಯಾಗಿದೆ, ಆದರೆ ಮುಕ್ತಿಯು ಆಗಿಲ್ಲ. ಅಖಂಡ ಗುರುಗಳ ಸಾನ್ನಿಧ್ಯದಲ್ಲಿದ್ದರೂ ಮುಕ್ತಿಯಾಗುವುದಿಲ್ಲ, ಆದರೆ ಆತ್ಮನ ಹತ್ತಿರದಲ್ಲಿ ವಾಸ ಮಾಡುವವನಿಗೆ ಮುಕ್ತಿಯಾಗುತ್ತದೆ ಮತ್ತು ಅದೇ ನಿಜವಾದ ವಿನಯವಿದೆ.

ಆತ್ಮನ ಸ್ವಭಾವವು ಯಾವ ಪ್ರಕಾರದಿಂದ ಇದೆ ಆ ಪ್ರಕಾರದಿಂದ ತಿಳಿದುಕೊಳ್ಳದಿದ್ದರೆ ಮಿಥ್ಯಾದೃಷ್ಟಿಯಿದ್ದಾನೆ. ಈ ಮಿಥ್ಯಾತ್ವವೇ ಮಹಾಪಾಪವಿದೆ. ಅಲ್ಪಕಷಾಯಮಂದತೆಯ ಪುಣ್ಯವು ಗೌಣವಿದೆ.

ನಿನ್ನ ಅವಲಂಬನದಿಂದ ನಿನ್ನ ಧರ್ಮವಿದೆಯೆಂದು ನಿಜವಾದ ದೇವ-ಗುರುಗಳು ಹೇಳುತ್ತಾರೆ. ವಿನಯದ ಶುಭರಾಗ ಬರುವುದು ಪುಣ್ಯವಿದೆ, ಆದರೆ ಅದು ಧರ್ಮವಲ್ಲ. ಜ್ಞಾನದ ದಶೆಯಲ್ಲಿ ಎಷ್ಟು ಏಕಾಗ್ರತೆಯಾಗುತ್ತದೆ ಅದು ಧರ್ಮವಿದೆ. ಇದರ ಮೊದಲು ವಿನಯದ ಶುಭರಾಗವಿದ್ದರೆ ವಿನಯದಿಂದ ಧರ್ಮವಾಯಿತೆಂದು ಹೇಳಲಾಗುತ್ತದೆ.

ಆತ್ಮನು ಒಬ್ಬನು ಮತ್ತು ತಪಗಳು ಹನ್ನೆರಡು, ಆತ್ಮನು ಒಬ್ಬನು ಮತ್ತು ಭಾವನೆಗಳು ಹನ್ನೆರಡು, ಆತ್ಮನು ಒಬ್ಬನು ಮತ್ತು ಪರಿಷಹಗಳು ಇಪ್ಪತ್ತೆರಡು, ಸೋದರನೇ ! ಅದೆಲ್ಲವೂ ವ್ಯವಹಾರದ ಕಥನವಿದೆ. ಆತ್ಮನ ಶ್ರದ್ಧೆ-ಜ್ಞಾನ-ಏಕಾಗ್ರತೆ ಮಾಡಿದರೆ ಧರ್ಮವಾಗುತ್ತದೆ ಮತ್ತು ರಾಗವು ಉತ್ಪನ್ನವಾಗುವುದಿಲ್ಲ. ಆತ್ಮನಲ್ಲಿ ಯಾವ ಏಕಾಗ್ರತೆಯಾಗುತ್ತದೆ ಅದು ನಿಜವಾದ ವಿನಯತಪವಿದೆ.

ಮೊದಲು ದೇವ-ಶಾಸ್ತ್ರ-ಗುರುಗಳ ವಿನಯದ ವಿಕಲ್ಪವು ಬರುತ್ತದೆ, ಆದರೆ ಅದು ನಿಜವಾಗಿ ತಪಸ್ಸಲ್ಲ. ಆದರೆ ಧರ್ಮಾನುರಾಗವು ಬಂದಲ್ಲದೆ ಇರುವುದಿಲ್ಲ. ರಾಗವು ಬರುತ್ತದೆ ಅದನ್ನು ಜ್ಞಾನಿಗಳು ತಿಳಿಯುತ್ತಾರೆ. ಸ್ವಭಾವದ ಏಕಾಗ್ರತೆಯ ಮೂಲಕ ಪುನಃ ರಾಗವನ್ನು ಬರಗೊಡದಿರುವುದು ತಪಸ್ಸಿದೆ. ಜ್ಞಾನಿಗೆ ಪರದ ಹಾಗೂ ವಿಕಾರದ ಕರ್ತೃತ್ವ ಬುದ್ಧಿಯು ಇರುವುದಿಲ್ಲ.

ಭಗವಂತರು ಛದ್ಮಸ್ಥ ಜೀವದ ಮೇಲೆ ವಿನಯ ಮಾಡುತ್ತಾರೆಂಬುದು ಸಂಭವವಿಲ್ಲ. ಸಾಧಕ ಜೀವನಿಗೆ ವಿನಯದ ವಿಕಲ್ಪವು ಬರುತ್ತದೆ, ಸಾಧಕನಿಗೆ ಬಾಧಕತನದ ರಾಗವು ಉತ್ಪನ್ನವಾಗುತ್ತದೆ. ಅವನೇ ಪರಿಪೂರ್ಣನಾಗಿ ಹೋದ ಮೇಲೆ ಅವನಿಗೆ ವಿಕಲ್ಪವೂ-ರಾಗವೂ ಬರುವುದಿಲ್ಲ.

ಇಲ್ಲಿ ಆತ್ಮನು ಒಬ್ಬನು ಮತ್ತು ಹನ್ನೆರಡು ಪ್ರಕಾರದ ತಪಗಳನ್ನು ಹೇಳಿರುವುದರಿಂದ ಆತ್ಮನೇನು ಹನ್ನೆರಡು ಪ್ರಕಾರನಾಗಿ ಹೋಗುವುದಿಲ್ಲ. ಒಂದು ದ್ರವ್ಯವು ಒಡೆದು ಎರಡು ರೂಪವಾಗಿ ಹೋಗುವುದಿಲ್ಲ, ಅಜ್ಞಾನಿಯು ಶುಭ ರಾಗವನ್ನು ಧರ್ಮದ ಕ್ರಿಯೆಯೆಂದು ಮನ್ನಿಸುತ್ತಾನೆ. ಮಿಥ್ಯಾದೃಷ್ಟಿಗೆ ನಯವಿರುವುದಿಲ್ಲ, ಅದರಂತೆ ಕೇವಲಿಗಳು ಪರಿಪೂರ್ಣವಾಗಿ ಹೋಗಿರುವುದರಿಂದ ಅವರಿಗೆ ಕೂಡ ನಯವಿರುವುದಿಲ್ಲ, ಶ್ರುತಜ್ಞಾನಿಗೆ ಎಂದರೆ ಸಾಧಕ ಜೀವನಿಗೆ ನಯವಿರುತ್ತದೆ. ನಯವು ಶ್ರುತಜ್ಞಾನದ ಭಾಗವಿದೆ. ಆ ಜ್ಞಾನದ ಪರ್ಯಾಯವು ಅಲ್ಪಜ್ಞನಿಗೆ ಇರುತ್ತದೆ. ಸ್ವಭಾವದ ಕಡೆಗೆ ಪ್ರವೃತ್ತವಾಗುವುದು ನಿಶ್ಚಯವಿದೆ ಮತ್ತು ಅಲ್ಪರಾಗವು ಬಾಕಿ ಇರುವುದು ವ್ಯವಹಾರವಿದೆ. ವ್ಯವಹಾರದಿಂದ ದೇವ-ಶಾಸ್ತ್ರ-ಗುರುಗಳ ಕಡೆಗೆ ಲಕ್ಷ್ಯವು ಹೋಗುತ್ತದೆ ಮತ್ತು ಅವರ ಗೌರವವನ್ನು ಮಾಡುತ್ತಾನೆ. ಪೂರ್ಣದಶೆಯು ಬಂದುಬಿಟ್ಟನಂತರ ಕೇವಲ ನಿಶ್ಚಯವು ಉಳಿದುಬಿಡುತ್ತದೆ. ಆದುದರಿಂದಲೇ ಕೇವಲಿಗಳಿಗೆ ವಿನಯಾದಿಗಳ ವಿಕಲ್ಪಗಳು ಇರುವುದಿಲ್ಲ. ವಿನಯ ಮಾಡುವಂಥವನು ಛದ್ಮಸ್ಥನಿರುತ್ತಾನೆ. ಸ್ವಭಾವದ ಏಕಾಗ್ರತೆ ಮಾಡುವುದು ಬಾಕಿ ಉಳಿದಿರುವವನಿಗೆ ವಿನಯದ ರಾಗವು ಉಳಿದುಕೊಂಡಿರುತ್ತದೆ.

''ಗುರುಗಳ ಕೃಪೆಯಿದ್ದರೆ ಸಂಸಾರದಿಂದ ಪಾರಾಗಬಹುದು, ಗುರುಗಳಿಲ್ಲದೆ ಘೋರ ಅಂಧಕಾರವಿದೆಯೆಂದು ಜನರು ಹೇಳುತ್ತಾರೆ. ಆದರೆ ಸೋದರನೇ ! ಬಾಹ್ಯ ಗುರುವಿನ ಕುರಿತು ವಿನಯಭಾವವಾಗುವುದು ರಾಗವಿದೆ. ಅಂತರ್ಯದ ಚೈತನ್ಯದೇವನಿಲ್ಲದೆ ಮತ್ತು ಚೈತನ್ಯಗುರುವಿಲ್ಲದೆ ಅಂಧಕಾರವಿದೆ. ಅಂತರ್ಯದಲ್ಲಿ ನಿಶ್ಚಯ ಗುರುವಿನ ವಿವೇಕವಿಲ್ಲದೆ ಬಾಹ್ಯ ಗುರುವಿನ ವಿವೇಕವು ಯಥಾರ್ಥವಿರುವ ಸಾಧ್ಯತೆಯಿಲ್ಲ.

ತೀರ್ಥಂಕರ ಭಗವಾನರು ಕೂಡ ''ನಮೋ ತಿತ್ಥಸ್ಸ' ಎಂದು ಹೇಳಿ ಸಮವಸರಣದಲ್ಲಿ ಕುಳಿತುಕೊಳ್ಳುತ್ತಾರೆಂದು ಕೆಲವರು ಹೇಳುತ್ತಾರೆ. ಆದರೆ ಆ ಮಾತು ಅಸತ್ಯವಿದೆ. ಆ ಪ್ರಕಾರದ ರಾಗವು ವೀತರಾಗ ಕೇವಲೀ ಭಗವಾನರಿಗೆ ಇರುವ ಸಾಧ್ಯತೆಯೇ ಇಲ್ಲ. ಅವರು ವೀತರಾಗವನ್ನು ತಿಳಿಯುವುದಿಲ್ಲ.

ಅಂತರ್ಯದ ಅರಿವಿನೊಡನೆ ಶುದ್ಧತೆಯು ಪ್ರಕಟವಾಗುವುದು ನಿರ್ಜರೆಯಿದೆ ಮತ್ತು ಅದರ ಮೊದಲು ವಿನಯದ ಶುಭರಾಗವಿದ್ದರೆ ವಿನಯದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

**ವೈಯ್ಯಾವೃತ್ಯ :-** ನಿಜವಾದ ಸಂತ ಮುನಿಗಳ ಸೇವೆ ಮಾಡುವ ಭಾವವು ಶುಭವಿದೆ. ದೇವ-ಶಾಸ್ತ್ರ-ಗುರುಗಳಂತೂ ಪರರಿದ್ದಾರೆ. ಅವರ ಸೇವೆಯನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ಆದರೆ ಸೇವೆಯ ವಿಕಲ್ಪವು ಉತ್ಪನ್ನವಾಗುತ್ತದೆ ಅದು ಶುಭವಿದೆ. ಅದರಿಂದ ರಹಿತನಿರುವ ಆತ್ಮನು ಶುದ್ಧನಿದ್ದಾನೆಂದು ಜ್ಞಾನವು ಸ್ವಭಾವದ ಸನ್ಮುಖತೆ ಮಾಡಿದರೆ ಏಕಾಗ್ರತೆಯು ವೃದ್ಧಿಸುವುದು ಅದು ನಿರ್ಜರೆಯಿದೆ. ಅದರ ಮೊದಲು ಸೇವೆಯ ವಿಕಲ್ಪವಿದ್ದರೆ ವೈಯಾವೃತ್ಯದಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ಜ್ಞಾನೀ ಪುರುಷನ ಸೇವೆ ಮಾಡುವುದರಿಂದ ತೀರ್ಥಂಕರ ನಾಮಕರ್ಮದ ಪ್ರಕೃತಿಯ ಬಂಧವಾಗುವುದೆಂದು ಅದೆಷ್ಟೋ ಜೀವರುಗಳು ಹೇಳುತ್ತಾರೆ. ಆದರೆ ಯಾರಿಗೆ ಭೇದಜ್ಞಾನವಿಲ್ಲ ಅಂಥ ಮಿಥ್ಯಾದೃಷ್ಟಿಗೆ ತೀರ್ಥಂಕರ ನಾಮಕರ್ಮ ಪ್ರಕೃತಿಯ ಬಂಧವಾಗುವುದಿಲ್ಲ. ಸಮ್ಯಗ್ದೃಷ್ಟಿಗೇನೇ ತೀರ್ಥಂಕರಕೇವಲೀ ಅಥವಾ ಶ್ರುತಕೇವಲಿಯ ಸಮೀಪದಲ್ಲಿಯೇ ತೀರ್ಥಂಕರ ನಾಮಕರ್ಮ ಕಟ್ಟುತ್ತದೆ, ಅನ್ಯತ್ರ ಕಟ್ಟುವುದಿಲ್ಲ.

ಜೀವನಂತೂ ಇನ್ನೂ ಪರದಲ್ಲಿ ಮತ್ತು ಶುಭದಲ್ಲಿ ನಿಂತುಕೊಂಡಿದ್ದಾನೆ. ಅದರಿಂದ ಓರ್ವ ಸಾಧುವಿನ ಸೇವೆಯ ಭಾವವನ್ನು ನಿರ್ಜರೆಯೆಂದು ಹೇಳುತ್ತಾನೆ ಮತ್ತು ಬಿಂಬದ ಪೂಜೆ ಮಾಡುವುದನ್ನು ನಿರ್ಜರೆಯೆಂದು ಹೇಳುತ್ತಾನೆ ಆದರೆ ಇವಂತೂ ಶುಭಭಾವಗಳಿವೆ. ರಾಗ ಮತ್ತು ನಿಮಿತ್ತದಿಂದ ರಹಿತ ಆತ್ಮನ ಆಶ್ರಯದಿಂದ ಯಾವ ಶುದ್ಧಿಯ ವೃದ್ಧಿಯಾಗುತ್ತದೆ ಮತ್ತು ಅಶುದ್ಧತೆಯು ಬಿಟ್ಟುಹೋಗುತ್ತದೆ ಅದು ನಿರ್ಜರೆಯಿದೆ. ಮೊದಲು ವೈಯಾವೃತ್ಯದ ವಿಕಲ್ಪವಿದ್ದರೆ ಅದರಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

ಅಜ್ಞಾನಿಗೆ ಪರದ ಜತೆಯಲ್ಲಿ ಏಕತ್ವ ಬುದ್ಧಿಯು ವರ್ತಿಸುತ್ತದೆ. ದೇವ-ಶಾಸ್ತ್ರ-ಗುರುಗಳು ಪರವಿದ್ದಾರೆ ಮತ್ತು ನಾನು ಸ್ವ ಇದ್ದೇನೆ. ಪರದ ಪರ್ಯಾಯವು ಪರದ ಕಾರಣದಿಂದ ಮತ್ತು ಸ್ವದ ಪರ್ಯಾಯವು ಸ್ವದ ಕಾರಣದಿಂದ ಇದೆಯೆಂಬುದು ಕೂಡ ಯಾವನಿಗೆ ಭೇದಜ್ಞಾನವಿಲ್ಲ, ಆ ಜೀವನು ರಾಗದಿಂದ ಭಿನ್ನತೆಯ ಭೇದಜ್ಞಾನವನ್ನೆಂದೂ ಮಾಡುವ ಸಾಧ್ಯತೆಯಿಲ್ಲ.

**ಪ್ರಶ್ನೆ :-** ಗುರುಗಳ ಕೃಪೆಯು ನಮ್ಮ ಕಾರ್ಯಕ್ಕೆ ಉಪಯೋಗವಾಗುತ್ತದೆಯೋ ಅಥವಾ ಇಲ್ಲವೋ ?

**ಉತ್ತರ :-** ಯಾರದೇ ಕೃಪೆಯು ಯಾವ ಕಾರ್ಯಕ್ಕೂ ಬರುವುದಿಲ್ಲ, ಪಾತ್ರಜೀವವಿದ್ದರೆ ಅವನಮೇಲೆ ಗುರುಗಳು ಕೃಪೆ ಮಾಡಿದರೆಂದು ಹೇಳಲಾಗುತ್ತದೆ. ಆದರೆ ಜ್ಞಾನಿಗೆ ಯಾರದೇ ಕೃಪೆಯಿರುವುದಿಲ್ಲ. ಈತ ಪಾತ್ರ ಜೀವನಿದ್ದಾನೆಂದು ಗುರುಗಳು ಹೇಳುತ್ತಾರೆ. ಆದರೆ ನಿಜಪಾತ್ರತೆಯು ನಿಶ್ಚಯ ಕೃಪೆಯಿಂದಿದೆಯೆಂದು ಶಿಷ್ಯನ ಲಕ್ಷ್ಯದಲ್ಲಿ ಬಂದುಬಿಟ್ಟರೆ ಮತ್ತು ಗುರುಗಳು ಕೃಪೆಮಾಡಿದರೆಂದು ಹೇಳುವುದು ವ್ಯವಹಾರ ಕೃಪೆಯಿದೆ.

ಹೀಗೆ ವೈಯ್ಯಾವೃತ್ಯವಂತೂ ಸ್ವಭಾವದ ಅವಲಂಬನದಿಂದ ಆಗುತ್ತದೆ. ಅದನ್ನು ಪ್ರಕಟಪಡಿಸಿಕೊಂಡವನಿಗೆ ವ್ಯವಹಾರದಿಂದ ವೈಯ್ಯಾವೃತ್ಯದ ಭಾವವು ಗುರುಗಳ ಕುರಿತು ಇರುತ್ತದೆ. ಆದುದರಿಂದ ಅದರಿಂದ ನಿರ್ಜರೆಯಾಯಿತೆಂದು ಹೇಳಲಾಗುತ್ತದೆ.

**ಸ್ವಾಧ್ಯಾಯ :-** ಸತ್ ಶಾಸ್ತ್ರಗಳ ಪಠಣ ಮೊದಲಾದವುಗಳ ಭಾವವಂತೂ ಶುಭರಾಗವಿದೆ. ಶಬ್ದಗಳನ್ನು ಆಡುವುದು ಜಡದ ಕ್ರಿಯೆಯಿದೆ. ಅದನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ಸ್ವಾಧ್ಯಾಯ ಮೊದಲಾದವುಗಳ ಭಾವವು ಶುಭವಿದೆ. ಆ ಶುಭದಿಂದ ರಹಿತನಾಗಿ ಆತ್ಮನು ಶುದ್ಧನಿದ್ದಾನೆಂಬ ಅರಿವು ಯಾವ ಜೀವನಿಗೆ ವರ್ತಿಸುತ್ತದೆ ಅವನಿಗೆ ಸ್ವಾಧ್ಯಾಯ ತಪವಿರುತ್ತದೆ. ರಾಗ ಮತ್ತು ಅಜೀವದಿಂದ ಭಿನ್ನತೆಯ ಜ್ಞಾನವಾದಲ್ಲದೆ ಸ್ವಾಧ್ಯಾಯತಪಸ್ಸು ಆಗುವುದಿಲ್ಲ. ಕನ್ನಡಕವಿದ್ದರೆ ಜ್ಞಾನವಾಗುತ್ತದೆಯೆಂದು ಮನ್ನಿಸುವವನು ಜಡದ ಪರ್ಯಾಯವನ್ನು ಮತ್ತು ಜೀವದ ಪರ್ಯಾಯವನ್ನು ಒಂದೆಂದು ಮನ್ನಿಸಿದ್ದಾನೆ. ಚೈತನ್ಯವನ್ನು ಅನುಸರಿಸಿ ಆಗುವ ಪರಿಣಾಮವನ್ನು ಉಪಯೋಗವೆಂದು ಹೇಳುತ್ತಾರೆ, ಆ ಪರಿಣಾಮವು ಕನ್ನಡಕವನ್ನು ಹಾಗೂ ಇಂದ್ರಿಯವನ್ನು ಅನುಸರಿಸಿ ಆಗುವುದಿಲ್ಲ, ಆದಾಗ್ಯೂ ಯಾವ ಜೀವನು ಇಂದ್ರಿಯದ ಕಾರಣದಿಂದ ಜ್ಞಾನವಾಗುವುದನ್ನು ಮನ್ನಿಸುತ್ತಾನೆ, ಶಾಸ್ತ್ರದ ಕಡೆಗೆ ಲಕ್ಷ್ಯವಿರಿಸಿದರೆ ಉಪಯೋಗವು ಸರಿಯಾಗುತ್ತದೆಂದು ಮನ್ನಿಸುತ್ತಾನೆ. ಆ ಜೀವನು ಮಿಥ್ಯಾದೃಷ್ಟಿಯಿದ್ದಾನೆ. ಅವನಿಗೆ ಪುಣ್ಯವಾಗುತ್ತದೆ. ಆದರೆ ತಪಸ್ಸು ಆಗುವುದಿಲ್ಲ, ಶುದ್ಧ ಚೈತನ್ಯದ ಸ್ವಾಧ್ಯಾಯ ಮಾಡುವುದು ತಪಸ್ಸಿದೆ.

**ವ್ಯುತ್ಸರ್ಗ :-** ಕಾಯೋತ್ಸರ್ಗ ಮಾಡುವುದು ತಪಸ್ಸು ಇದೆ. ಕಾಯದ ಕುರಿತಾಗಿರುವ ರಾಗವನ್ನು ಬಿಟ್ಟುಕೊಡುವುದು ನಾಸ್ತಿಯಿಂದ ಕಥನವಿದೆ. ಚೈತನ್ಯ ಸ್ವಭಾವದಲ್ಲಿ ಏಕಾಗ್ರತೆ ಮಾಡುವುದರಿಂದ ರಾಗವು ಉತ್ಪನ್ನವಾಗುವುದಿಲ್ಲ. ಅದನ್ನು ರಾಗವು ಬಿಟ್ಟುಹೋಯಿತೆಂದು ಹೇಳಲಾಗುತ್ತದೆ. ಚೈತನ್ಯಸ್ವಭಾವದಲ್ಲಿ ಏಕಾಗ್ರತೆಯಾದರೆ ಕಾಯದ ಕುರಿತಾಗಿರುವ ರಾಗವು ಬಿಟ್ಟುಹೋಗುವುದು. ಅದನ್ನು ತಿಳಿಸಿಕೊಡುವ ಸಲುವಾಗಿ ನಿಮಿತ್ತದಿಂದ ಕಥನ ಮಾಡಲಾಗಿದೆ ಮತ್ತು ವ್ಯುತ್ಸರ್ಗತಪದಿಂದ ನಿರ್ಜರೆಯಾಗುವುದೆಂದು ಹೇಳಿದೆ.

ನಾಲ್ಕು ಗತಿಗಳ ವ್ಯುತ್ಸರ್ಗ ಮಾಡಿಸುವುದರ ಕಥನವು ಬರುತ್ತದೆ. ಅದು ಯಥಾರ್ಥ ಹೇಗಾಗುವುದು ? ಯಾವ ಭಾವದಿಂದ ನಾಲ್ಕು ಗತಿಗಳು ದೊರಕುತ್ತವೆ ಆ ಭಾವಗಳು ನನ್ನ ಸ್ವಭಾವದಲ್ಲಿ ಇಲ್ಲವೆಂದು ಜ್ಞಾನಮಾಡಿಕೊಳ್ಳುವುದು ಅದರಂತೆ ಚೈತನ್ಯದಿಂದ ವಿರುದ್ಧವಾದ ಭಾವವು ನಾಲ್ಕು ಗತಿಗಳಿಗೆ ಕಾರಣವಿದೆಯೆಂದು ಜ್ಞಾನಮಾಡಿಕೊಳ್ಳುವುದು ಮತ್ತು ಆ ಭಾವ ಹಾಗೂ ಭವದಿಂದ ಚೈತನ್ಯವು ಬೇರೆಯಿದೆಯೆಂದು ಜ್ಞಾನಮಾಡಿಕೊಳ್ಳುವವರಿಗೆ ನಾಲ್ಕು ಗತಿಗಳ ಅಭಾವವಾಗುತ್ತದೆ. ಅಂಥ ಜ್ಞಾನವಿಲ್ಲದೆ ಗತಿಗಳ ಅಭಾವವಾಗುವುದಿಲ್ಲ. ಯಾರಿಗೆ ನರಕದ ಗತಿಯು ಬೇಕಿಲ್ಲ ಆದರೆ ಮನುಷ್ಯಗತಿ ಅಥವಾ ದೇವಗತಿಯು ಬೇಕಾಗಿದೆ. ಆ ಜೀವನಿಗೆ ಗತಿಯ ಅಭಿರುಚಿಯಿದೆ ಆದರೆ ಸ್ವಭಾವದ ಅಭಿರುಚಿಯು ಇಲ್ಲ ಅವನು ಪರ ಪದಾರ್ಥಗಳ ಅಭಿರುಚಿ ಮಾಡಿ ಪರದ ಅಧಿಪತಿಯಾಗುತ್ತಾನೆ ಅವನಿಗೆ ಗತಿಗಳ ಅಭಾವವಾಗುವುದಿಲ್ಲ.

ಯಾವ ಜೀವನಿಗೆ ಜ್ಞಾನದ ಹೀನ ಪರ್ಯಾಯದಲ್ಲಿ ದೀನತೆಯು ವರ್ತಿಸುತ್ತದೆ ಮತ್ತು ಜ್ಞಾನದ ವಿಶೇಷ ಪ್ರಕಟತೆಯುಳ್ಳ ಪರ್ಯಾಯದಲ್ಲಿ ಅಹಂಕಾರವು ವರ್ತಿಸುತ್ತದೆ ಅವನಿಗೆ ಸ್ವಭಾವದ ಜ್ಞಾನವಾಗುವುದಿಲ್ಲ. ಆದುದರಿಂದ ಆ ಜೀವನು ಪರ್ಯಾಯದೃಷ್ಟಿಯುಳ್ಳವನಿದ್ದಾನೆ, ಅವನಿಗೆ ಆಂಶಿಕ ಅಹಂಕಾರವು ವರ್ತಿಸುತ್ತದೆ, ಆದರೆ ಯಾವ ತ್ರಿಕಾಲೀ ಸ್ವಭಾವವು ನಿತ್ಯ ಧ್ರುವವಿದೆ ಅದರ ಮಹಿಮೆಯು ಬರುವುದಿಲ್ಲ. ಆ ಜೀವನಿಗೆ ಧರ್ಮವಿಲ್ಲ, ಅವನಿಗೆ ವ್ಯುತ್ಸರ್ಗ ತಪಸ್ಸು ಆಗುವುದಿಲ್ಲ.

ಧರ್ಮಾತ್ಮ ಜೀವನಿಗೆ ಶುದ್ಧ ಚೈತನ್ಯ ಸ್ವಭಾವದ ಅರಿವಿರುತ್ತದೆ. ಜ್ಞಾನದ ಪರ್ಯಾಯವು ಆಂಶಿಕ ಪ್ರಕಟತೆಯುಳ್ಳದ್ದಿದ್ದರೂ ಅದರಲ್ಲಿ ದೀನತೆಯಿರುವುದಿಲ್ಲ, ಅಧಿಕ ಪ್ರಕಟತೆಯುಳ್ಳದ್ದಿದ್ದರೂ ಅದರಲ್ಲಿ ಅಹಂಕಾರವಿರುವುದಿಲ್ಲ. ಅಶುಭಭಾವವು ಬಂದರೂ ದೀನತೆಯಿರುವುದಿಲ್ಲ, ಶುಭಭಾವ ಬಂದರೂ ಅಹಂತನವಿರುವುದಿಲ್ಲ. ಪ್ರತಿಕೂಲ ನಿಮಿತ್ತಗಳಲ್ಲಿ ದೀನತೆಯಿರುವುದಿಲ್ಲ ಮತ್ತು ಅನುಕೂಲ ನಿಮಿತ್ತಗಳಲ್ಲಿ ಅಹಂತತೆಯಿರುವುದಿಲ್ಲ. ಶುದ್ಧ ಸ್ವಭಾವದಲ್ಲಿ ಉಗ್ರತೆಯು ವರ್ತಿಸುತ್ತಿರುವುದರಿಂದ ಅವನಿಗೆ ವ್ಯುತ್ಸರ್ಗತಪವಿರುತ್ತದೆ.

ಜ್ಞಾನಿಯು ಸಮವಸರಣದಲ್ಲಿ ಕುಳಿತುಕೊಂಡಿರುವನು, ಆಗ ಸಮವಸರಣದ ಸಂಯೋಗ, ಪ್ರತ್ಯಕ್ಷ ಭಗವಂತರು ಮತ್ತು ಶುಭಭಾವ ಮೊದಲಾದುವೆಲ್ಲ ಇದ್ದರೂ ಕೂಡ ನಾನು ಇವೆಲ್ಲವುಗಳಿಗಿಂತ ಮಿಗಿಲಾಗಿದ್ದೇನೆಂದು ತಿಳಿಯುತ್ತಾನೆ. ಆ ಶುಭಭಾವ ಮತ್ತು ಸಂಯೋಗಗಳಲ್ಲಿ ಅಧಿಕತೆಯನ್ನು ಮನ್ನಿಸುವುದಿಲ್ಲ ಮತ್ತು ಏಳನೆಯ ನರಕದಲ್ಲಿ ಯಾವನಾದರೂ ಧರ್ಮಾತ್ಮ ಜೀವನು ಇದ್ದರೆ ಅಲ್ಲಿ ಅವನು ಪ್ರತಿಕೂಲ ಸಂಯೋಗಗಲ್ಲಿ ದೀನತೆ ಮಾಡುವುದಿಲ್ಲ. ಧರ್ಮಾತ್ಮನಿಗೆ ತನ್ನ ಸ್ವಭಾವದ ಬಹುಮಾನವೇ ಎಲ್ಲೆಲ್ಲೂ ವರ್ತಿಸುತ್ತದೆ.

ಅಜ್ಞಾನೀ ಜೀವನು ಅನುಕೂಲತೆಯಲ್ಲಿ ಅಧಿಕತೆಯನ್ನು ಮನ್ನಿಸುತ್ತಾನೆ ಮತ್ತು ಪ್ರತಿಕೂಲತೆಯಲ್ಲಿ ದೀನತೆಯನ್ನು ಮನ್ನಿಸುತ್ತಾನೆ ಅವನು ಸ್ವಭಾವದ ಅಧಿಕತೆಯನ್ನು ಮನ್ನಿಸುವುದಿಲ್ಲ. ಚೈತನ್ಯದ ಅಭಿರುಚಿಯು ಯಾರಿಗೆ ಉಂಟಾಗಿಲ್ಲ ಅವರಿಗೆ ಪರವಸ್ತುವಿನ ಅಹಂಕಾರವು ವರ್ತಿಸುತ್ತದೆ, ಅವರಿಗೆ ಚೈತನ್ಯದಿಂದ ಭಿನ್ನತೆಯ ಜ್ಞಾನವು ಆಗುವುದಿಲ್ಲ. ಈ ಭೇದಜ್ಞಾನವಿಲ್ಲದೆ ಉಪವಾಸ ಮೊದಲಾದವುಗಳನ್ನು ಮಾಡಿದರೂ ಕೂಡ ವ್ಯರ್ಥವಿದೆ. ಆದರೆ ಆ ಕ್ರಿಯೆಗಳು ಸಂಸಾರದ ಸಲುವಾಗಿ ಸಾರ್ಥಕವಾಗುತ್ತವೆ.

೧) ಯಾರ ದೃಷ್ಟಿಯು ಅಂಶದ ಮೇಲೆ ಇದೆ, ಅಂಶಿಯಾದ ಸ್ವಭಾವದ ಮೇಲೆ ಇಲ್ಲ ಅಂಥ ಜೀವರುಗಳಿಗೆ ಶುಭರಾಗದ ಕ್ರಿಯೆಗಳು ಸಂಸಾರದ ಸಲುವಾಗಿ ಸಾರ್ಥಕವಿವೆ.

೨) ಧರ್ಮಾತ್ಮ ಜೀವನು ವಿಚಾರ ಮಾಡುವುದೇನೆಂದರೆ ಯಾವ ಬೇಕಾದ ಪರ್ಯಾಯವಿರಲಿ, ಅದು ಶುಭ ರಾಗದ್ದಿರಲಿ ಅಥವಾ ಅಶುಭ ರಾಗದ್ದಿರಲಿ, ಅಲ್ಪಜ್ಞಾನದ್ದಿರಲಿ ಅಥವಾ ಅಧಿಕಜ್ಞಾನದ್ದಿರಲಿ ಯಾವುದು ವರ್ತಿಸುತ್ತದೆ ಅದು ಸಾರ್ಥಕವಿದೆ. ಶುಭ ಅಥವಾ ಅಶುಭಭಾವವು ಚಾರಿತ್ರಗುಣದ ಪರ್ಯಾಯವಿದೆ ಜ್ಞಾನದ ಅವಸ್ಥೆಯು ಜ್ಞಾನ ಗುಣದ ಪರ್ಯಾಯವಿದೆ. ಪರ್ಯಾಯವು ಸ್ವತಂತ್ರವಾಗಿರದಿದ್ದರೆ ಅಖಂಡ ದ್ರವ್ಯವು ಸಿದ್ಧವಾಗುವುದಿಲ್ಲ. ಪರ್ಯಾಯವು ಪರ್ಯಾಯವುಳ್ಳವನದಿದೆ. ಅಂಶದ ಜ್ಞಾನ ಮಾಡಿಕೊಂಡು ಸಂಪೂರ್ಣ ಅಂಶಿಯನ್ನು ಲಕ್ಷ್ಯದಲ್ಲಿ ತಂದುಕೊಳ್ಳಲಾಗಿದೆ. ವಸ್ತುವಿನ ಸಿದ್ಧಿ ಮಾಡುವ ಸಲುವಾಗಿ ಶುಭರಾಗದ ಅಥವಾ ಅಶುಭರಾಗದ ಯಾವುದೇ ಪರ್ಯಾಯವಿದ್ದರೂ ಅದು ಸಾರ್ಥಕವಿದೆ. ಅವನ ದೃಷ್ಟಿಯು ಸ್ವಭಾವದ ಮೇಲೆ ಇರುವುದರಿಂದ ಸಾರ್ಥಕವಿದೆ ಎಂದರೆ ಮೋಕ್ಷದ ಪ್ರಾಪ್ತಿಯ ಸಲುವಾಗಿ ಸಾರ್ಥಕವಿದೆ.

ಬಾಹ್ಯದ ಪದಾರ್ಥಗಳ ತ್ಯಾಗದ ಉಪಚಾರವೂ ಕೂಡ ಸ್ವಭಾವದ ದೃಷ್ಟಿಸಂಪನ್ನನಾದ ಜ್ಞಾನಿಗೇನೇ ಆಗುತ್ತದೆ. ಅಜ್ಞಾನಿಗೆ ಆ ಉಪಚಾರವು ಆಗುವುದಿಲ್ಲ. ಒಂದು ಸಮಯದ ರಾಗಪರ್ಯಾಯವು (ಅಂಶವು) ಪೂರ್ಣದ್ರವ್ಯದ ಅಂಶವಿದೆಯೆಂಬುದರ ಅರಿವು ಯಾವನಿಗಿಲ್ಲ ಮತ್ತು ಅಜೀವ ಮೊದಲಾದ ಪದಾರ್ಥಗಳು ಅಥವಾ ಸಂಯೋಗಗಳು ಅವುಗಳ ಯೋಗ್ಯತೆಯ ಕಾರಣದಿಂದ ಬಿಟ್ಟುಹೋಗಿವೆ ಅವನ್ನು ಜೀವನು ಬಿಡುವ ಸಾಧ್ಯತೆಯಿಲ್ಲವೆಂಬ ದೃಷ್ಟಿಯು ಯಾವನಿಗೆ ಇಲ್ಲ ಆ ಜೀವನು ಅಜೀವ ಪದಾರ್ಥಗಳನ್ನು ಬಿಟ್ಟಿದ್ದಾನೆಂಬ ವ್ಯವಹಾರವು ಕೂಡ ಬರುವುದಿಲ್ಲ. ಆ ಚೈತನ್ಯದ ವಾಸ್ತವಿಕ ತತ್ತ್ವವನ್ನು ಅವನು ತಿಳಿದುಕೊಳ್ಳುವುದಿಲ್ಲ ಮತ್ತು ರಾಗ ಹಾಗೂ ಬಾಹ್ಯ ಪದಾರ್ಥಗಳನ್ನು ನೋಡುವಂಥವನಿರುವುದರಿಂದ ಅವನು ಬಹಿರಾತ್ಮನಿದ್ದಾನೆ ಅವನ ಸಲುವಾಗಿ ಸಂಸಾರವು ಸಫಲವಿದೆ.

ಯಾವ ಜೀವನಿಗೆ ಆತ್ಮನ ಶುದ್ಧಜ್ಞಾನವು ವರ್ತಿಸುತ್ತಿದೆ ಮತ್ತು ಸ್ವಭಾವದ ಅವಲಂಬನದಿಂದ ರಾಗವು ಬಿಟ್ಟುಹೋಗಿದೆ ಹಾಗೂ ಪದಾರ್ಥಗಳ ಸಂಬಂಧವು ಕೂಡ ಬಿಟ್ಟುಹೋಗಿದೆ ಆ ಜೀವನು ಅಂತರಾತ್ಮನಿದ್ದಾನೆ. ಈಗ ಅವನಿಗೆ ಆ ಪದಾರ್ಥಗಳ ಜತೆಯಲ್ಲಿ ರಾಗಯುಕ್ತವಾದ ಸಂಬಂಧವು ಉಳಿದಿರುವುದಿಲ್ಲ. ತಾನು ಸ್ವಯಂ ಜ್ಞಾತಾ ಮತ್ತು ಆ ಪದಾರ್ಥಗಳು ಜ್ಞೇಯವಿವೆ ಹೀಗೆ ಜ್ಞಾತಾ-ಜ್ಞೇಯ ಸಂಬಂಧವು ಉಳಿದಿರುವುದರಿಂದ ಜ್ಞಾನೀ ಜೀವನಿಗೆ ಪರಪದಾರ್ಥಗಳ ತ್ಯಾಗದ ಉಪಚಾರವು ಹೇಳಲಾಗುತ್ತದೆ. ಆದುದರಿಂದ ಧರ್ಮಾತ್ಮನ ಸಲುವಾಗಿ ತ್ಯಾಗವು ವ್ಯವ್ಯಹಾರದಿಂದ ಸಾರ್ಥಕವೆಂದು ಹೇಳಲಾಗುತ್ತದೆ. ಅಜ್ಞಾನಿಗೆ ಪರಪದಾರ್ಥಗಳ ಮೇಲೆ ದೃಷ್ಟಿಯಿದೆ, ಏಕತ್ವಬುದ್ಧಿ ಸಹಿತವಾದ ಜ್ಞಾನವು ವರ್ತಿಸುತ್ತಿರುವುದರಿಂದ ಅವನಿಗೆ ಜ್ಞಾನ-ಜ್ಞೇಯ ಸಂಬಂಧವು ಇಲ್ಲದಿರುವುದರಿಂದ ಒಂದುವೇಳೆ ಅವನಿಗೆ ಪದಾರ್ಥಗಳು ಬಿಟ್ಟುಹೋಗಿದ್ದರೂ ಕೂಡ ಪದಾರ್ಥಗಳ ತ್ಯಾಗದ ಉಪಚಾರವು ಕೂಡ ಅವನಿಗೆ ಅನ್ವಯಿಸುವುದಿಲ್ಲ. ಈ ಪ್ರಕಾರ ಧರ್ಮ ಕ್ಷೇತ್ರದಲ್ಲಿ ಧರ್ಮದ ವ್ಯವಹಾರವು ಕೂಡ ಜ್ಞಾನಿಗಳಿಗೇನೇ ಅನ್ವಯಿಸುತ್ತದೆ. ಅಜ್ಞಾನಿಗಳಿಗೆ ಸರ್ವಥಾ ಅನ್ವಯಿಸುವುದಿಲ್ಲ.

**ಧ್ಯಾನ :-** ಆತ್ಮನ ಸ್ವರೂಪವನ್ನು ತಿಳಿದುಕೊಳ್ಳದೆ ಧ್ಯಾನದಲ್ಲಿ ಕುಳಿತುಕೊಳ್ಳುವುದು ಧ್ಯಾನವಿಲ್ಲ. ಪರದಿಂದ ಹಾಗೂ ರಾಗದಿಂದ ತನ್ನ ಆತ್ಮನು ಭಿನ್ನನಿದ್ದಾನೆಂದು ಜ್ಞಾನ ಮಾಡಿಕೊಂಡು ಆಂತರ್ಯದಲ್ಲಿ ಏಕಾಗ್ರವಾಗಿ ಹೋಗುವುದನ್ನು ಧ್ಯಾನವೆಂದು ಹೇಳಲಾಗಿದೆ. ಯಾವ ಜೀವರುಗಳು ಈ ಪ್ರಕಾರದ ವಸ್ತುಸ್ವರೂಪವನ್ನು ಮನ್ನಿಸುವುದಿಲ್ಲ ಮತ್ತು ಸ್ವರೂಪದ ವಿರೋಧ ಮಾಡುತ್ತಾರೆ ಅವರು ನಿಧಾನವಾಗಿ ಏಕೇಂದ್ರಿಯವಾಗಿ ಹೋಗಬೇಕಾಗುವುದು. ಜನರಿಗೆ ಚೈತನ್ಯಸ್ವರೂಪದ ಮಹಿಮೆಯು ಬರುವುದಿಲ್ಲ. ಆದುದರಿಂದ ಪರದ ಚಮತ್ಕಾರವು ಪ್ರತಿಭಾಸವಾಗುತ್ತದೆ. ಅಜ್ಞಾನೀ ಜೀವನು ದೀನತೆಯನ್ನು ದರ್ಶಿಸುತ್ತಾನೆ. ಯಾವನೋ ಭಗವಂತನು ತನಗೆ ಮುಕ್ತಿಯನ್ನು ದಯಪಾಲಿಸುತ್ತಾನೆಂದು

ಮನ್ನಿಸುತ್ತಾನೆ, ಅಂಥ ಜೀವರುಗಳಿಗೆ ಧ್ಯಾನವಾಗುವುದಿಲ್ಲ. ಅನಂತ ಆತ್ಮರುಗಳು ಸ್ವಯಂ ಪ್ರಭು ಇದ್ದಾರೆ ಎಂದರೆ ಸ್ವಯಂ ಸಾಮರ್ಥ್ಯವುಳ್ಳವರಿದ್ದಾರೆ. ಅನಂತ ಪರಮಾಣುಗಳು ಕೂಡ ಸ್ವತಂತ್ರ ಶಕ್ತಿಸಂಪನ್ನ ಪ್ರಭು ಇವೆ. ಆ ಪ್ರತಿಯೊಂದರಿಂದ ನಾನು ಭಿನ್ನನಿದ್ದೇನೆಂಬ ಜ್ಞಾನವಿಲ್ಲದೆ ಅಜ್ಞಾನಿಗಳಿಗೆ ಶರೀರದ ಕ್ರಿಯೆ ಹಾಗೂ ಶುಭರಾಗದ ಅಹಂಕಾರ ವರ್ತಿಸುತ್ತದೆ ಅವರಿಗೆ ಧ್ಯಾನವಾಗುವುದಿಲ್ಲ.

ಅದೆಷ್ಟೋ ಜೀವರುಗಳು ಧ್ಯಾನದಲ್ಲಿ ಆನಂದ ಮನ್ನಿಸುತ್ತಾರೆ, ಆದರೆ ಅದು ಯಥಾರ್ಥವಿಲ್ಲ. ಸಾತಾವೇದನೀಯ ಪ್ರಕೃತಿಯ ನಿಮಿತ್ತದಿಂದ ಯಾವ ಸಾತಾ ಅನುಭವಿಸುತ್ತಾರೆ ಅದನ್ನು ಅವರು ಆನಂದವೆಂದು ಮನ್ನಿಸುತ್ತಾರೆ ಮತ್ತು ಅದನ್ನು ಧ್ಯಾನವೆಂದು ಮನ್ನಿಸುತ್ತಾರೆ ಅವರು ಅಜ್ಞಾನಿಯಿದ್ದಾರೆ. ನಿಜವಾದ ತತ್ತ್ವದ ದೃಷ್ಟಿಪೂರ್ವಕ ಯಾವ ಏಕಾಗ್ರತೆಯಿದೆ ಅದು ಧ್ಯಾನವಿದೆ. ಅಜ್ಞಾನೀ ಜೀವರುಗಳ ಧ್ಯಾನವು ಧರ್ಮದ ಸಲುವಾಗಿ ನಿಷ್ಫಲವಿದೆ ಮತ್ತು ಸಂಸಾರ ಭ್ರಮಣದ ಸಲುವಾಗಿ ಸಫಲವಿದೆ.

ಧರ್ಮಾತ್ಮ ಜೀವರುಗಳ ಕ್ರಿಯೆಯು ಸಂಸಾರದ ಸಲುವಾಗಿ ಅಫಲವಿದೆ ಎಂದರೆ ಅವರಿಗೆ ಸಂಸಾರದ ಫಲವು ಪ್ರಾಪ್ತವಾಗುವುದಿಲ್ಲ ಮತ್ತು ಮಿಥ್ಯಾದೃಷ್ಟಿಗಳ ಕ್ರಿಯೆಯು ಸಂಸಾರದಲ್ಲಿ ಸಿಕ್ಕಿಹಾಕಿಕೊಳ್ಳುವ ಸಲುವಾಗಿ ಸಫಲವಿದೆಯೆಂಬ ಮಾತು ಪ್ರವಚನಸಾರದಲ್ಲಿ ಕೂಡ ಬರುತ್ತದೆ.

ಇಲ್ಲಿ ನಿರ್ಜರಾತತ್ತ್ವದ ಮಾತು ನಡೆಯುತ್ತಿದೆ. ಕುದೇವ-ಕುಗುರು ಮೊದಲಾದವರಿಂದ ಸುದೇವ-ಸುಗುರು ಮೊದಲಾದವರು ಬೇರೆಯಿದ್ದಾರೆಂಬುದು ಕೂಡ ಯಾರಿಗೆ ಅರಿವಿಲ್ಲ ಅವರಿಗೆ ಧರ್ಮವಾಗುವುದಿಲ್ಲ. ಕುದೇವ ಮೊದಲಾದವರು ಅಧರ್ಮದ ಆಯತನರಿದ್ದಾರೆ, ಸುದೇವ ಮೊದಲಾದವರು ಧರ್ಮದ ಆಯತನರಿದ್ದಾರೆಂಬ ಭೇದವು ಯಾರಿಗೆ ಭಾಸವಾಗುವುದಿಲ್ಲ ಅವರಿಗೆ ಪುಣ್ಯ-ಪಾಪದಿಂದ ರಹಿತನಾದ ಶುದ್ಧ ಆತ್ಮನಿದ್ದಾನೆಂಬ ಭೇದಜ್ಞಾನವು ಆಗುವ ಸಾಧ್ಯತೆಯಿಲ್ಲ. ಯಾರದು ವಿನಯ ಮಾಡುವುದು, ಯಾರ ಸೇವೆ ಮಾಡುವುದು ಇವೇ ಮೊದಲಾದ ಮಾತುಗಳು ಕೂಡ ಇದರಲ್ಲಿ ಬಂದು ಬಿಡುವವು. ಕುದೇವಾದಿಗಳ ರಾಗವನ್ನು ಬಿಟ್ಟುಕೊಟ್ಟಿದ್ದಾನೆ ಮತ್ತು ಸುದೇವಾದಿಗಳ ಶ್ರದ್ಧೆಯನ್ನು ಮಾಡಿದ್ದಾನೆ ಅವನು ಕೂಡ ರಾಗವನ್ನು ಬಿಟ್ಟುಕೊಟ್ಟು ಆತ್ಮನ ಶ್ರದ್ಧೆ ಮಾಡಿ ಆತ್ಮನಲ್ಲಿ ಲೀನತೆ ಮಾಡಿದರೆ ಅವನಿಗೆ ನಿರ್ಜರೆಯಾಗುತ್ತದೆ. ಅದರಲ್ಲಿ ಹನ್ನೆರಡು ಪ್ರಕಾರದ ತಪಸ್ಸಿನ ಮಾತು ಬಂದಿದೆ. ಇಚ್ಛೆಯ ನಿರೋಧವು ತಪವಿದೆ. ಆ ನಿರೋಧವು ಯಾವಾಗ ಆಗುವುದು ? ಚೈತನ್ಯ ಸ್ವಭಾವದಲ್ಲಿ ಇಚ್ಛೆ ಇರುವುದಿಲ್ಲ ಏಕೆಂದರೆ ಇಚ್ಛೆಯು ವಿಕಾರವಿದೆ. ವಿಕಾರರಹಿತ ಶುದ್ಧ ಆತ್ಮನ ಆಶ್ರಯದಿಂದ ಶುದ್ಧ ಉಪಯೋಗವಾಗುವುದು ಭಾವನಿರ್ಜರೆಯಿದೆ. ಹನ್ನೆರಡು ಪ್ರಕಾರದ ತಪಸ್ಸಿನಿಂದ ಬಹಳಷ್ಟು ಕರ್ಮಗಳ ನಿರ್ಜರೆಯಾಗುತ್ತದೆ. ಆದುದರಿಂದ ಅನೇಕ ಕರ್ಮಗಳ ಶಕ್ತಿಯನ್ನು ಕ್ಷಯಗೊಳಿಸುವಲ್ಲಿ ಸಮರ್ಥವಿರುವಂಥ ಹನ್ನೆರಡು ತಪಗಳಿಂದ ಯಾವ ಶುದ್ಧ ಉಪಯೋಗ ವೃದ್ಧಿಸುತ್ತದೆ ಅದು ಭಾವನಿರ್ಜರೆಯಿದೆಯೆಂಬುದು ನಿಶ್ಚಿತವಾಗುತ್ತದೆ. ಚೈತನ್ಯದ ಆಶ್ರಯದಿಂದ ಶುಭಾಶುಭರೂಪ ಅಶುದ್ಧತೆಯ ನಾಶವಾಗುತ್ತದೆ ಮತ್ತು ಶುದ್ಧತೆಯ ವೃದ್ಧಿಯಾಗುವುದು ನಿರ್ಜರೆಯಿದೆ. ಇದರಲ್ಲಿ ವ್ರತ, ತಪ ಮಾಡಿದರೆ ಮತ್ತು ರಾಗದ ಮಂದತೆ ಮಾಡಿದರೆ ಪುಣ್ಯವಾಗುವುದು, ಆದರೆ ಅದನ್ನು ಧರ್ಮವೆಂದು ಮನ್ನಿಸಿದರೆ ಮಿಥ್ಯಾತ್ವದ ಪಾಪವು ಬಂಧಿಸುವುದು, ಅವನಿಗೆ ನಿರ್ಜರೆಯಾಗುವುದಿಲ್ಲ. ಆದರೆ ಆತ್ಮನು ಚಿದಾನಂದ ಶಾಂತ ಸ್ವರೂಪನಿದ್ದಾನೆ, ಅವನ ಆಶ್ರಯ ಮಾಡುವುದರಿಂದ ಶಾಂತಿಯು ಪ್ರಕಟವಾಗುತ್ತದೆ. ಅದರಿಂದ ಯಾವ ಕರ್ಮವಿಪಾಕವು ಫಲವಿತ್ತು ಉದುರಿಹೋಗುತ್ತದೆ ಅದನ್ನು ದ್ರವ್ಯನಿರ್ಜರೆಯೆಂದು ಹೇಳಲಾಗುತ್ತದೆ.

ಈಗ ನಿರ್ಜರೆಯ ಕಾರಣ ವಿಶೇಷತೆಯನ್ನು ತಿಳಿಸಿಕೊಡುತ್ತಾರೆ -

**ಜೋ ಸಂವರೇಣ ಜುತ್ತೋ ಅಪ್ಪಟ್ಠಪಸಾಧಗೋ ಹಿ ಅಪ್ಪಾಣಂ ।**
**ಮುಣಿಊಣ ಝಾದಿ ಣಿಯದಂ ಣಾಣಂ ಸೋ ಸಂಧುಣೋದಿ ಕಮ್ಮರಯಂ ॥೧೪೫॥**

**ಯಾವನು ಸಂವರಸಹ ಆತ್ಮಾರ್ಥದ ಪ್ರಸಾಧಕ ಆತ್ಮನನು ತಿಳಿದುಕೊಂಡು ।**
**ಅವನು ನಿಶ್ಚಲರೂಪದಿಂದ ಜ್ಞಾನವ ಧ್ಯಾನಿಸಿ ಕರ್ಮರಜವ ಕಳೆಯುವನು ॥೧೪೫॥**

ಯಾವನಿಗೆ ಪರದಿಂದ ಮತ್ತು ರಾಗದಿಂದ ಆತ್ಮನು ಭಿನ್ನನಿದ್ದಾನೆಂಬ ಜ್ಞಾನವು ಪ್ರಕಟವಾಗಿರುವುದು ಅವನಿಗೆ ಕುದೇವ ಮೊದಲಾದವರ ಕುರಿತು ರಾಗವು ಇರಲೇಬಾರದು. ಬಹಳಷ್ಟು ಜೀವರುಗಳು ಆತ್ಮನ ಮಾತುಗಳನ್ನು ಆಡುತ್ತಾರೆ, ಆದರೆ ಸಮ್ಯಗ್ದರ್ಶನದಲ್ಲಿ ಬಹಿರಂಗ ನಿಮಿತ್ತವಾಗಿ ಜಿನಸೂತ್ರಗಳಿವೆ ಮತ್ತು ಅಂತರಂಗ ನಿಮಿತ್ತವಾಗಿ ಜ್ಞಾಯಕ ಪುರುಷರಿದ್ದಾರೆ. ಕೇವಲೀಭಗವಂತರು ಹೇಳಿರುವ ಆರುದ್ರವ್ಯಗಳ ಯಥಾರ್ಥ ಸ್ವರೂಪವನ್ನು ತಿಳಿಸಿಕೊಡುವಂಥ ಶಾಸ್ತ್ರಗಳು ಮತ್ತು ಅವುಗಳ ರಹಸ್ಯವನ್ನು ತಿಳಿಸಿಕೊಡುವಂಥ ಜ್ಞಾನೀ ಪುರುಷರು ಸಮ್ಯಗ್ದರ್ಶನದಲ್ಲಿ ನಿಮಿತ್ತರಿದ್ದಾರೆ. ಅಜ್ಞಾನೀ ಅದರಂತೆ ಅಜ್ಞಾನಿಯ ವಾಣಿಯು ನಿಮಿತ್ತವಾಗುವುದಿಲ್ಲ.

ಯಾರಿಗೆ ಭೇದಜ್ಞಾನವು ವರ್ತಿಸುತ್ತಿದೆ ಅವರು ಸಂವರದಿಂದ ಯುಕ್ತರಿದ್ದಾರೆ, ಅವರು ಆತ್ಮನ ಸ್ವಭಾವವನ್ನು ಸಾಧಿಸುವಂಥವರಿದ್ದಾರೆ. ಅವರು ಆತ್ಮನ ಶುದ್ಧ ಚೈತನ್ಯಸ್ವರೂಪವನ್ನು ಸರ್ವಸ್ವವಾಗಿ ತಿಳಿದುಕೊಂಡು ಯಾವಾಗಲೂ ಆತ್ಮನನ್ನು ಧ್ಯಾನಿಸುತ್ತಾರೆ, ಅವರು ಕರ್ಮರೂಪದ ಧೂಳನ್ನು ಹಾರಿಸಿ ಬಿಡುತ್ತಾರೆ. ಶುದ್ಧ ಉಪಯೋಗವಾದ ಮೇಲೆ ಕರ್ಮವು ಸ್ವಯಂ ನಾಶ ಹೊಂದುತ್ತದೆ.

**ಭಾವಾರ್ಥ :-** ಮೊದಲು ಆತ್ಮನನ್ನು ಪರದಿಂದ ಬೇರೆಯಾಗಿ ತಿಳಿಸಿಕೊಟ್ಟಿದ್ದಾರೆ. ಕರ್ಮಗಳ ನಿರೋಧ ಮಾಡಿ ತಮ್ಮ ಸ್ವಭಾವದಿಂದ ಯಾರು ಸಂಯುಕ್ತರಿದ್ದಾರೆ ಅವರು ಧರ್ಮಾತ್ಮರಿದ್ದಾರೆ.

೧) ಯಾವ ಜೀವರುಗಳಿಗೆ ಆತ್ಮಜ್ಞಾನವಿಲ್ಲ ಆ ಜೀವರುಗಳು ಶಾಸ್ತ್ರದ ಅರ್ಥವನ್ನು ತಿಳಿದುಕೊಳ್ಳುವುದಿಲ್ಲ. ಶಾಸ್ತ್ರವನ್ನು ಬಹಳಷ್ಟು ಅಭ್ಯಸಿಸಿದರೂ ಕೂಡ ಯಾವನಿಗೆ ತತ್ತ್ವದ ಅರಿವಿಲ್ಲ ಅವನ ತಿಳಿದುಕೊಳ್ಳುವಿಕೆಯು ವ್ಯರ್ಥವಿದೆ. ನಿಜವಾದ ದೇವ-ಗುರುಗಳ ಸ್ವರೂಪವೇನು, ನಿಶ್ಚಯ-ವ್ಯವಹಾರದ ಸ್ವರೂಪವೇನೆಂಬುದನ್ನು ತಿಳಿದುಕೊಂಡಿಲ್ಲ. ವ್ಯವಹಾರ ಮತ್ತು ನಿಮಿತ್ತದಿಂದ ಧರ್ಮವನ್ನು ಮನ್ನಿಸಲಾಗುತ್ತದೆ. ಬಹಳಷ್ಟು ಮನುಷ್ಯರು ಅದನ್ನು ಆಲಿಸಲು ಬರತೊಡಗಿದರೆಂದರೆ ಅಜ್ಞಾನಿಗೆ ತನ್ನಲ್ಲಿ ಬಹಳಷ್ಟು ಜ್ಞಾನವು ಬಂದುಬಿಟ್ಟಿದೆಯೆಂದೆನಿಸುತ್ತದೆ. ಹೀಗೆ ಶಾಸ್ತ್ರಾಭ್ಯಾಸದ ಅಭಿಮಾನಿಗೆ ಆ ಶಾಸ್ತ್ರಾಭ್ಯಾಸವೇ ವೈರಿಯಾಗಿ ಹೋಗುತ್ತದೆ.

ಸಮ್ಯಗ್ದರ್ಶನದಲ್ಲಿ ಜಿನವಾಣಿಯ ಜ್ಞಾನೀ ಪುರುಷನೇ ನಿಮಿತ್ತನಿರುತ್ತಾನೆಂದು ಭ. ಕುಂದಕುಂದಾಚಾರ್ಯದೇವರು ಹೇಳುತ್ತಾರೆ. ಆದರೆ ಬೇಕಾದ ಶಾಸ್ತ್ರ ಓದಿ ಬೇಕಾದ ಹಾಗೆ ಅರ್ಥಮಾಡಿದರೆ ಆಗುವುದಿಲ್ಲ. ಆ ಪ್ರಕಾರದ ಶಾಸ್ತ್ರದ ಅಧ್ಯಯನವು ತನಗೆ ವೈರಿಯ ಸಮಾನವಿದೆ.

೨) ಬಹಳಷ್ಟು ಅಜ್ಞಾನೀ ಜನರು ತಮಗೆ ಸಮ್ಮತರಾಗಿ ಹೋದರೆ ಅಜ್ಞಾನಿಯು ಅಭಿಮಾನ ಪಟ್ಟುಕೊಳ್ಳುತ್ತಾನೆ. ಎಲ್ಲರೂ ತಲೆ ಅಲ್ಲಾಡಿಸಿದರೆ-ಹೂಗುಟ್ಟಿದರೆ ಅದು ಧರ್ಮದ ಪರೀಕ್ಷೆಯಲ್ಲ.

೩) ದೀಕ್ಷಾಧಾರಕನಾದ ಅಜ್ಞಾನಿಯು ನಮಗೆ ಬಹಳಷ್ಟು ಶಿಷ್ಯರಿದ್ದಾರೆಂದು ಹೇಳುತ್ತಾನೆ. ಅದರದು ಕೂಡ ಅಭಿಮಾನಪಡುತ್ತಾನೆ. ಲಕ್ಷಾಧೀಶರುಗಳ ಮಕ್ಕಳು ನಮ್ಮ ಹತ್ತಿರ ದೀಕ್ಷೆ ತೆಗೆದುಕೊಂಡಿದ್ದಾರೆ. ನಮ್ಮದು ಒಪ್ಪಿಗೆಯಿದ್ದರೆ

ಬಹಳಷ್ಟು ಜನರು ದೀಕ್ಷೆ ಸ್ವೀಕರಿಸುವ ಸಲುವಾಗಿ ಬರುತ್ತಾರೆಂದು ಹೆಮ್ಮೆಪಟ್ಟುಕೊಳ್ಳುತ್ತಾನೆ. ಹೀಗೆ ಹೇಳಿಕೊಳ್ಳುವುದು ಅದು ಮಹಾ ಅಭಿಮಾನವಿದೆ, ಅದು ವೈರಿಯ ಸಮಾನವಿದೆ.

೪) ಮತ್ತೆ ಅಜ್ಞಾನಿಯು ತಪಸ್ಸು ಮಾಡುತ್ತಾನೆ, ಆದರೆ ಆತ್ಮಜ್ಞಾನವಿಲ್ಲದ ಆ ತಪವು ಬಾಲತಪವಿದೆ. ಅದರ ಹೆಸರಿನ ಮೇಲೆ ಅಭಿಮಾನ ಪಟ್ಟುಕೊಳ್ಳುವುದು ಅದು ವೈರಿಯ ಸಮಾನವಿದೆ.

೫) ದಯೆ-ದಾನಾದಿಗಳ ಭಾವಮಾಡಿ ಅದರ ಅಭಿಮಾನ ಮಾಡುವುದು ಅದು ವೈರಿಯ ಸಮಾನವಿದೆ.

೬) ಜಗತ್ತಿನಲ್ಲಿ ಯಶಸ್ಸು-ಕೀರ್ತಿ ದೊರಕಿದರೆ ಅದರ ಕಾರಣದಿಂದ ಅಭಿಮಾನ ಬಂದು ಬಿಡುವುದು ಅದು ವೈರಿಯ ಸಮಾನವಿದೆ.

ಇತರರು ಉಪದೇಶ ಕೇಳಿದರೆ ತಮಗೆ ಲಾಭವಿದೆಯೆಂದು ಮನ್ನಿಸುವಂಥ ಜೀವರುಗಳಿಗೆ ಸಂವರವಾಗುವುದಿಲ್ಲ, ಅವರಿಗೆ ನಿರ್ಜರೆಯಾಗುವ ಸಾಧ್ಯತೆಯೇ ಇಲ್ಲ. ಶರೀರ ಮೊದಲಾದ ಪರಪದಾರ್ಥಗಳ ಕ್ರಿಯೆಯನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲವೆಂದು ಜ್ಞಾನ ಮಾಡಿಕೊಂಡು ತನ್ನ ಆತ್ಮಸ್ವರೂಪದ ಕಾರ್ಯದಲ್ಲಿ ಉದ್ಯಮವಾದರೆ ಅವನಿಗೆ ನಿರ್ಜರೆಯಾಗುತ್ತದೆ. ಸ್ವಯಂ ತನ್ನ ಆತ್ಮನು ಗುಣಿಯಿದ್ದಾನೆ ಮತ್ತು ಜ್ಞಾನವು ಗುಣವಿದೆಯೆಂದು ಗುಣ-ಗುಣಿಯಲ್ಲಿ ಭೇದ ಮಾಡುವುದು ಅದು ಕೂಡ ರಾಗವಿದೆ. ನಿಮಿತ್ತದಿಂದ ಭಿನ್ನ, ಪುಣ್ಯದಿಂದ ಭಿನ್ನ ಮತ್ತು ಗುಣ-ಗುಣಿಯ ವಿಕಲ್ಪದಿಂದ ಆತ್ಮನು ಭಿನ್ನನಿದ್ದಾನೆ. ಹೀಗೆ ರಾಗದಿಂದ ರಹಿತ ಪರಿಪೂರ್ಣ ಶುದ್ಧನಿರುವ ಆತ್ಮನಲ್ಲಿ ಏಕಾಕಾರವಾಗಿ ನಿಶ್ಚಲರೂಪದಿಂದ ಅನುಭವಮಾಡುವುದು ಅದು ಧರ್ಮವಿದೆ. ಎಷ್ಟು ಗುಣ-ಗುಣಿಯ ಭೇದವು ವರ್ತಿಸುತ್ತದೆ ಅಷ್ಟು ಆಸ್ರವವಿದೆ, ಆದರೆ ಗುಣ-ಗುಣಿಯ ಏಕತೆಯು ವೃದ್ಧಿಸುತ್ತದೆ ಅದರಿಂದ ನಿರ್ಜರೆಯಾಗುತ್ತದೆ.

ಯಾವ ಪ್ರಕಾರ ಸ್ನಿಗ್ಧತೆಯಿಂದ ರಹಿತವಾದ ಶುದ್ಧ ಸ್ಫಟಿಕ ಸ್ತಂಭವು ನಿರ್ಮಲವಿದೆ, ಅದೇ ಪ್ರಕಾರ ದಯೆ-ದಾನ ಮೊದಲಾದ ಪರಿಣಾಮಗಳು ಸ್ನಿಗ್ಧತೆಯುಳ್ಳವುಗಳಿವೆ ಅದರಿಂದ ರಹಿತ ಸ್ಫಟಿಕದಂತೆ ಶುದ್ಧವಿರುವ ಆತ್ಮನ ಅವಲಂಬನೆ ಮಾಡುವುದು ಧರ್ಮವಿದೆ-ಧ್ಯಾನವಿದೆ ಮತ್ತು ಆ ಧ್ಯಾನವು ನಿರ್ಜರೆಯ ಕಾರಣವಿದೆ. ಚೈತನ್ಯಸ್ವಭಾವದ ಏಕತೆಯರೂಪದ ಧ್ಯಾನವು ನಿರ್ಜರೆಗೆ ಕಾರಣವಿದೆ.

ಅಜ್ಞಾನೀ ಜೀವರುಗಳು ಧ್ಯಾನದ ಸ್ವರೂಪವನ್ನು ತಿಳಿಯುವುದಿಲ್ಲ ಮತ್ತು ಭೂಮಿಯಿಂದ ಮೇಲೆ ಇರುವುದು ಹಾಗೂ ಅಗ್ನಿಯನ್ನು ಹೊತ್ತಿಸಿಕೊಂಡು ಅದರ ಮಧ್ಯದಲ್ಲಿರುವುದು. ಇದೇ ಮೊದಲಾದುವನ್ನು ಮನ್ನಿಸುತ್ತಾರೆ, ಆದರೆ ಸೋದರರೇ ! ಅಂಥ ಬಹಳಷ್ಟು ಮಾತುಗಳೆಲ್ಲವು ನಿರರ್ಥಕವಿವೆ ; ಆದರೆ ಶರೀರವನ್ನು ನೆಲಬಿಟ್ಟು ಮೇಲೆ ಎತ್ತುವುದರಿಂದ ಆತ್ಮನೇನು ಎಂದಾದರೂ ಎತ್ತರವಾಗಿ ಹೋಗುವನೇನು ? ಪಕ್ಷಿಗಳು ಆಕಾಶದಲ್ಲಿ ಬಹಳಷ್ಟು ಎತ್ತರ ಹಾರುವುದರಿಂದ ಅವನ್ನು ಉಚ್ಚವೆಂದು ಹೇಳಲಾಗುವುದೇನು ? ಶರೀರದ ಕ್ರಿಯೆಯು ಶರೀರದಿಂದ ಆಗುತ್ತದೆ, ಆತ್ಮನು ಅದರಿಂದ ಭಿನ್ನನಿದ್ದಾನೆ. ಇಂಥ ಜ್ಞಾನಪೂರ್ವಕ ಪರವಸ್ತುಗಳಿಂದ ಮತ್ತು ರಾಗದ ಪರಿಣಾಮದಿಂದ ಉದಾಸಗೊಂಡು ಆತ್ಮನಲ್ಲಿ ಶುದ್ಧಿಯ ವೃದ್ಧಿಯಾದರೆ ಅದನ್ನು ನಿರ್ಜರೆಯೆಂದು ಮತ್ತು ತಪವೆಂದು ಹೇಳುತ್ತಾರೆ.

ಅಜ್ಞಾನಿಗಳು ಊಟವನ್ನು ಬಿಟ್ಟುಕೊಡುವುದರಿಂದ ಉಪವಾಸ ಮತ್ತು ತಪಸ್ಸು ಆಗುತ್ತದೆಯೆಂದು ಹೇಳುತ್ತಾರೆ, ಆದರೆ ಅದುಕೂಡ ಅಪರಾಧವಿದೆ. ಪರಪದಾರ್ಥಗಳನ್ನು ಆತ್ಮನು ಬಿಡುವುದಿಲ್ಲ, ನಿಜವಾಗಿ ರಾಗವನ್ನು ಕೂಡ ಬಿಡುವುದಿಲ್ಲ, ಆದರೆ ಶುದ್ಧ ಆತ್ಮನ ಜ್ಞಾನ ಮಾಡಿಕೊಂಡು ಅದರಲ್ಲಿ ಏಕಾಗ್ರತೆ ಮಾಡಿದರೆ ರಾಗವು ಸ್ವಯಂ ಬಿಟ್ಟುಹೋಗುತ್ತದೆ. ಅದನ್ನು ತಪವೆಂದು ಹೇಳುತ್ತಾರೆ.

ಸ್ವಭಾವದಲ್ಲಿ ಭವವಿಲ್ಲವೆಂದು ಜ್ಞಾನಮಾಡಿಕೊಂಡಲ್ಲದೆ ಒಂದು ಭವವು ಕೂಡ ಕಡಿಮೆಯಾಗುವುದಿಲ್ಲ. ಊಟ ಮೊದಲಾದುವನ್ನು ಬಿಟ್ಟನೆಂದು ಯಾವ ಕಥನವು ಬರುತ್ತದೆ ಅದರಲ್ಲಿರುವ ಹೇತುವೇನೆಂದರೆ ಆ ಸಮಯದಲ್ಲಿ ಎಲ್ಲಾ ಪದಾರ್ಥಗಳ ಕುರಿತು ಇಚ್ಛೆಯು ಬಿಟ್ಟುಹೋಗಿರುತ್ತದೆಯೆಂಬುದರ ಜ್ಞಾನ ಮಾಡಿಸಲಾಗಿದೆ. ಆದರೆ ಪರದ ಅವಲಂಬನದಿಂದ ಅಥವಾ ಪದಾರ್ಥಗಳು ಬಾರದಿರುವುದರಿಂದ ಧರ್ಮವಾಯಿತೆಂಬುದಾಗಿಲ್ಲ. ಶುದ್ಧ ಚೈತನ್ಯ ಸ್ವಭಾವದಲ್ಲಿ ಏಕಾಗ್ರತೆಯಾದರೆ ರಾಗವಾಗುವುದಿಲ್ಲ ಮತ್ತು ಪರಪದಾರ್ಥಗಳ ಮೇಲೆ-ಆಹಾರ ಮೊದಲಾದವುಗಳ ಮೇಲೆ ಲಕ್ಷ್ಯವು ಹೋಗದಿರುವುದರಿಂದ ಇಂತಿಷ್ಟು ಪದಾರ್ಥಗಳು ಬಿಟ್ಟುಹೋದವೆಂಬ ಉಪಚಾರವು ಧರ್ಮಾತ್ಮ ಜೀವನ ಸಲುವಾಗಿಯಿದೆ. ಅಜ್ಞಾನಿಗೆ ರಾಗದ ಅಭಾವದ ಅಥವಾ ಪರವಸ್ತುವಿನ ಅಭಾವದ ಉಪಚಾರವು ಕೂಡ ಬರುವುದಿಲ್ಲ.

ಈಗ ಧ್ಯಾನದ ಸ್ವರೂಪವನ್ನು ಹೇಳುತ್ತಾರೆ -

**ಜಸ್ಸ ಣ ವಿಜ್ಜದಿ ರಾಗೋ ದೋಸೋ ಮೋಹೋ ವ ಜೋಗ ಪರಿಕಮ್ಮೋ ।**
**ತಸ್ಸ ಸುಹಾಸುಹಡಹಣೋ ಝಾಣಮಓ ಜಾಯದೇ ಅಗಣೀ ॥೧೪೬॥**

**ಯಾವನಿಗೆ ಮೋಹ ಮೇಣ್ ರಾಗದ್ವೇಷಗಳಿಲ್ಲ ಯೋಗಗಳ ಸೇವನೆಯಿಲ್ಲ ।**
**ಅವನಿಗೆ ಶುಭಾಶುಭವ ಸುಡುವ ಧ್ಯಾನಮಯದಗ್ನಿ ಪ್ರಕಟಿಸುವುದು ॥೧೪೬॥**

ಯಾವ ಜೀವನಿಗೆ ರಾಗ-ದ್ವೇಷ-ಮೋಹ ಅಥವಾ ಮೂರು ಯೋಗಗಳ ಪರಿಣಮನವಿಲ್ಲ ಆ ಜೀವನಿಗೆ ಶುಭ-ಅಶುಭಭಾವಗಳನ್ನು ನಾಶಮಾಡುವಂಥ ಧ್ಯಾನಸ್ವರೂಪದ ಅಗ್ನಿಯು ಪ್ರಕಟವಾಗುತ್ತದೆ. ಅದನ್ನೇ ತನ್ನ ಜ್ಞಾನಸ್ವರೂಪದಲ್ಲಿ ಒಂದುಮಾಡಿ ರಾಗ-ದ್ವೇಷಗಳನ್ನು ಉತ್ಪನ್ನ ಮಾಡುವುದಿಲ್ಲ ಅವನಿಗೆ ಶುಭಾಶುಭಭಾವಗಳು ನಾಶವಾಗುತ್ತವೆ.

**ಭಾವಾರ್ಥ :-** ಯಾವ ಜೀವನು ಪರಮಾತ್ಮಸ್ವರೂಪದಲ್ಲಿ ಅಚಲನಿದ್ದಾನೆ ಆ ಜೀವನು ಧ್ಯಾನ ಮಾಡುವಂಥವನಿದ್ದಾನೆ. ಯಾವ ಜೀವನ ಉಪಯೋಗವು ಶುಭಾಶುಭಭಾವಗಳಲ್ಲಿ ಹೋಗುವುದಿಲ್ಲ, ಪರಮಾತ್ಮ ಸ್ವಭಾವದಲ್ಲಿ ಸ್ಥಿರವಾಗಿ ಹೋಗಿದೆ ಅವನಿಗೆ ಧರ್ಮವಾಗುತ್ತದೆ. ಆತ್ಮನ ಜ್ಞಾನವಿಲ್ಲದೆ ಪುಣ್ಯ ಪರಿಣಾಮ ಮಾಡಿ ಅನಂತ ಬಾರಿ ಗ್ರೈವೇಯಕದವರೆಗೆ ಹೋದರೂ ಕೂಡ ಸುಖವನ್ನು ಪ್ರಾಪ್ತ ಮಾಡಿಕೊಳ್ಳಲಿಲ್ಲ. ಇಲ್ಲಿಯಂತೂ ಆತ್ಮನ ಜ್ಞಾನ ಮಾಡಿಕೊಂಡು ಧ್ಯಾನಮಾಡುವ ಸ್ವರೂಪದ ಪ್ರಾಪ್ತಿಯು ಹೇಗಾಗುತ್ತದೆಂಬುದನ್ನು ಹೇಳಿದ್ದಾರೆ.

ಯಾವಾಗ ಯೋಗೀಶ್ವರರು ಎಂದರೆ ಸ್ವಭಾವದಲ್ಲಿ ಏಕಾಗ್ರತೆ ಸಾಧಿಸುವಂಥ ಸಂತ ಮುನಿರಾಜರು ಅನಾದಿಯ ಮಿಥ್ಯಾವಾಸನೆಯನ್ನು ಸಂಕೋಚಗೊಳಿಸಿ ತಮ್ಮ ಸ್ವರೂಪದಲ್ಲಿ ತಂದುಕೊಳ್ಳುತ್ತಾರೆ ಆಗ ಅವರಿಗೆ ಧ್ಯಾನವು ಉತ್ಪನ್ನವಾಗುತ್ತದೆ. ಬಾಹ್ಯದಲ್ಲಿನ ಪ್ರವೃತ್ತಿಯಿಂದ ಕಲ್ಯಾಣವಾಗುತ್ತದೆಯೆನ್ನುವುದು ಮಿಥ್ಯಾವಾಸನೆಯಿದೆ. ಯಾವ ಉಪಯೋಗವು ಮಿಥ್ಯಾದರ್ಶನ-ಜ್ಞಾನ-ಚಾರಿತ್ರಗಳಲ್ಲಿ ಪ್ರವರ್ತಿಸುತ್ತಿತ್ತು ಅದನ್ನು ಪುರುಷಾರ್ಥ ಮಾಡಿ ತನ್ನ ಕಡೆಗೆ ತರಲಾಗಿದೆ. ಮೊದಲು ಶುಭಾಶುಭಗಳಿದ್ದವು ಮತ್ತು ಅವನ್ನು ಸಂಕೋಚಗೊಳಿಸುವುದೆಂದರೆ ಸ್ವಭಾವದ ಕಡೆಗೆ ಒಲಿಯುವುದರಿಂದ ಅವು ಉತ್ಪನ್ನವಾಗುವುದಿಲ್ಲ. ಇದನ್ನೇ ಸಂಕೋಚಗೊಳಿಸುವುದೆಂದು ಹೇಳಲಾಗುತ್ತದೆ.

ಆತ್ಮನ ಪ್ರತೀತಿ ಮಾಡಿ ಜ್ಞಾನೋಪಯೋಗವನ್ನು ಶುದ್ಧ ಮಾಡುವುದು ಅದು ನಿರ್ಜರೆಯಿದೆ. ಯಾವನಿಗೆ ಆತ್ಮನಲ್ಲಿ ಶಾಂತಿ ಮತ್ತು ಸುಖವು ಎನಿಸಿದೆ ಅವನ ಜ್ಞಾನವು ಆಂತರ್ಯದಲ್ಲಿ ಪ್ರವೃತ್ತಿ ಮಾಡುವುದು ಆದರೆ ಪರದ

ದಯೆಯಿಂದ ಧರ್ಮ ಮನ್ನಿಸಿದರೆ ಅವನು ಆಂತರ್ಯದಲ್ಲಿ ಏತಕ್ಕಾಗಿ ಪ್ರವೃತ್ತಿ ಮಾಡುವನು ? ಪರದಿಂದ ಮತ್ತು ಧನದಿಂದ ಧರ್ಮವಾಗುತ್ತಿದ್ದರೆ ತಿಳಿದುಕೊಳ್ಳುವುದರ ಅವಶ್ಯಕತೆಯೇನಿದೆ ? ಆದುದರಿಂದ ಅಜ್ಞಾನೀ ಜೀವನು ಬಾಹ್ಯದಲ್ಲಿಯೇ ನಿಂತು ಬಿಡುತ್ತಾನೆ.

ಸಮ್ಯಗ್ದರ್ಶನವಾದ ನಂತರ ನಿರ್ಜರೆಯು ಆರಂಭವಾಗುತ್ತದೆ. ವಿಶೇಷ ನಿರ್ಜರೆಯು ಮುನಿರಾಜರಿಗೆ ಇರುತ್ತದೆ. ಎಲ್ಲಿಯವರೆಗೆ ಪರದ ಕಡೆಗೆ ಪ್ರವೃತ್ತಿಯಿತ್ತು ಅಲ್ಲಿಯವರೆಗೆ ಉಪಯೋಗವು ದರ್ಶನಮೋಹನೀಯ-ಚಾರಿತ್ರ ಮೋಹನೀಯ ಕರ್ಮದ ವಿಪಾಕದಿಂದ ಅನೇಕ ಪ್ರಕಾರದ ಕರ್ಮಗಳಲ್ಲಿ ಪ್ರವರ್ತಿಸುತ್ತಿತ್ತು. ಅದು ಕಾಲಲಬ್ಧಿ ಪಡೆದು ತನ್ನೊಳಗೆ ಸತ್‌ಪುರುಷಾರ್ಥಮಾಡಿ, ಆಂತರ್ಯದ ಶುದ್ಧ ಸ್ವರೂಪದಲ್ಲಿ ಸ್ಥಿರವಾಗಿ ಆನಂದದ ಅನುಭವ ಮಾಡುತ್ತದೆ ಮತ್ತು ನಿರ್ವಿಕಲ್ಪರಸದ ಪಿಪಾಸೆಯು ಅದರಲ್ಲಿ ಏಕಾಕಾರವಾಗುತ್ತದೆ. ಅವನಿಗೆ ವಾಸ್ತವದಲ್ಲಿ ನಿರ್ಜರೆಯಾಗುತ್ತದೆ.

ಅಜ್ಞಾನೀ ಜೀವರುಗಳು ಹೇಳುವುದೇನೆಂದರೆ ಸ್ವಾಧ್ಯಾಯವು ಅದು ತಪಸ್ಸಿದೆ. 'ಣಮೋ ಅರಹಂತಾಣಂ'ವೆಂಬ ಶಬ್ದವನ್ನು ಹೇಳುವುದು ಕೂಡ ಸ್ವಾಧ್ಯಾಯವಿದೆ. ಸ್ವಾಧ್ಯಾಯದಿಂದ ತಪಸ್ಸು, ತಪದಿಂದ ನಿರ್ಜರೆ ಮತ್ತು ನಿರ್ಜರೆಯಿಂದ ಧರ್ಮ ಹಾಗೂ ಮೋಕ್ಷವಾಗುತ್ತದೆಯೆಂದು ಅಜ್ಞಾನಿಗಳು ಮನ್ನಿಸಿಕೊಂಡಿದ್ದಾರೆ ಮತ್ತು ರಸಪರಿತ್ಯಾಗವು ಕೂಡ ತಪಸ್ಸು ಇದೆ. ಆದುದರಿಂದ ಹಾಲು ಮೊದಲಾದವನ್ನು ಬಿಡುವವನಿಗೆ ರಸಪರಿತ್ಯಾಗ ತಪಸ್ಸಿದೆ. ತಪದಿಂದ ನಿರ್ಜರೆ, ನಿರ್ಜರೆಯಿಂದ ಧರ್ಮ ಮತ್ತು ಧರ್ಮದಿಂದ ಮೋಕ್ಷವಾಗುತ್ತದೆಯೆಂದು ಅಜ್ಞಾನಿಗಳು ಮನ್ನಿಸಿಕೊಂಡಿದ್ದಾರೆ. ಹಾಗಾದರೆ ಕಳೆದ ಅನಂತ ಕಾಲದಲ್ಲಿ ಇಷ್ಟನ್ನು ಮಾಡಲಿಲ್ಲವೇನು ? ಅಯ್ಯಾ ಸಹೋದರರೇ! ಅವೆಲ್ಲವು ಅಜ್ಞಾನ ಭಾವಗಳಿವೆ. ಪರವಸ್ತುಗಳನ್ನು ಆತ್ಮನು ಬಿಟ್ಟುಕೊಡುವ ಸಾಧ್ಯತೆಯಿಲ್ಲ, ಮತ್ತು ಪುಣ್ಯದ ಅಭಿರುಚಿಯು-ರಾಗವು ಆಸ್ರವವಿದೆ. ಶಬ್ದವು ಜಡವಿದೆ. ಪಾಠ ಹೇಳುವ ಭಾವವು ಆಸ್ರವವಿದೆ. ಪರದಲ್ಲಿ ಮತ್ತು ರಾಗದಲ್ಲಿ ಏಕಾಗ್ರತೆ ಮಾಡುವುದು ಸಂಸಾರವಿದೆ. ಮತ್ತು ಇದರ ಪ್ರತಿಯಾಗಿ ಸ್ವಭಾವದಲ್ಲಿ ಏಕಾಗ್ರತೆ ಮಾಡುವುದು ಅದಂತೂ ಮುಕ್ತಿಯ ಕಾರಣವಿದೆ. ನಿಮಿತ್ತದಲ್ಲಿ ಮತ್ತು ಪುಣ್ಯ-ಪಾಪಗಳಲ್ಲಿ ಏಕಾಗ್ರತೆ ಮಾಡುವುದು ಆರ್ತ ಮತ್ತು ರೌದ್ರ ಧ್ಯಾನವಿದೆ ಮತ್ತು ಸ್ವಭಾವದಲ್ಲಿ ಏಕಾಗ್ರತೆ ಮಾಡುವುದು ಧರ್ಮ ಹಾಗೂ ಶುಕ್ಲಧ್ಯಾನವಿದೆ.

ಈ ಪ್ರಕಾರ ಯಾವ ಜೀವನು ಆತ್ಮನ ಶ್ರದ್ಧೆ-ಜ್ಞಾನ ಮಾಡಿ, ಮೋಹ-ರಾಗ-ದ್ವೇಷಗಳಿಂದ ರಹಿತವಿರುವ ಶುದ್ಧಸ್ವರೂಪವನ್ನು ಶುದ್ಧಸ್ವರೂಪದಲ್ಲಿ ನಿಷ್ಕಂಪರೂಪದಿಂದ ಸ್ಥಿರಗೊಳಿಸುತ್ತಾನೆ ಆ ಭೇದವಿಜ್ಞಾನಿಯಾದ ಧ್ಯಾನಿಗೆ ಸ್ವರೂಪ ಸಾಧಕ ಪುರುಷಾರ್ಥಸಿದ್ಧಿಯ ಪರಮ ಉಪಾಯರೂಪದ ಧ್ಯಾನವು ಉತ್ಪನ್ನವಾಗುತ್ತದೆ. ಆತ್ಮನ ಪ್ರಯೋಜನದ ಸಿದ್ಧಿಯ ಉಪಾಯವು ಧ್ಯಾನವಿದೆ ಮತ್ತು ಅದರಿಂದ ನಿರ್ಜರೆಯಾಗುತ್ತದೆ.

ಯಾವ ಪ್ರಕಾರ ಅಗ್ನಿಯು ಬಹಳಷ್ಟು ಕಾಷ್ಠ ಸಮೂಹವನ್ನು ಅತ್ಯಲ್ಪ ಸಮಯದಲ್ಲಿ ಸುಟ್ಟು ಭಸ್ಮ ಮಾಡಿಬಿಡುತ್ತದೆ, ಅದೇ ಪ್ರಕಾರ ಧ್ಯಾನರೂಪದ ಅಗ್ನಿಯು ಕರ್ಮರೂಪದ ಕಾಷ್ಠಸಮೂಹವನ್ನು ಕ್ಷಣಾರ್ಧದಲ್ಲಿ ಭಸ್ಮಮಾಡಿಬಿಡುತ್ತದೆ. ಆ ಧ್ಯಾನರೂಪದ ಅಗ್ನಿಯು ಹೇಗೆ ಇದೆ ? ಯಾವ ಪ್ರಕಾರ ಅಗ್ನಿಯು ವಾಯುವಿನಿಂದ ಪ್ರಜ್ವಲಿತವಾಗುತ್ತದೆ, ಅದೇ ಪ್ರಕಾರ ಮಿಥ್ಯಾತ್ವ-ರಾಗ-ದ್ವೇಷ ಮೊದಲಾದ ವಿಭಾವಗಳನ್ನು ನಾಶಮಾಡುತ್ತದೆ. ಇಂಥ ಲಕ್ಷಣಯುಕ್ತವಾದ ವಾಯುವಿನಿಂದ ಧ್ಯಾನಾಗ್ನಿಯು ಪ್ರಜ್ವಲಿತವಾಗುತ್ತದೆ. ಅದರಂತೆಯೇ ಯಾವ ಪ್ರಕಾರ ಅಗ್ನಿಯಲ್ಲಿ ತುಪ್ಪ ಹಾಕುವುದರಿಂದ ಅದು ಪ್ರಜ್ವಲಿತವಾಗುತ್ತದೆ. ಅದೇ ಪ್ರಕಾರ ಆನಂದ ಮತ್ತು ಸುಖ ಲಕ್ಷಣಯುಕ್ತವಿರುವ ತುಪ್ಪವನ್ನು ಧ್ಯಾನರೂಪದ ಅಗ್ನಿಯಲ್ಲಿ ಹಾಕುವುದರಿಂದ ಆ ಅಗ್ನಿಯು ಪ್ರಜ್ವಲಿತವಾಗುತ್ತದೆ. ಧ್ಯಾನದ ಲಕ್ಷಣವು ನಿಶ್ಚಲ ಆತ್ಮನ ವೇದನದಲ್ಲಿ-ಅನುಭವದಲ್ಲಿ ಇದೆ. ಆ ಧ್ಯಾನರೂಪದ ಅಗ್ನಿಯು ಕರ್ಮದ ಎಂಟು ಮೂಲ ಪ್ರಕೃತಿಗಳನ್ನು ಮತ್ತು

ನೂರನಲವತ್ತೆಂಟು ಉತ್ತರ ಪ್ರಕೃತಿಗಳನ್ನು ಕ್ಷಣಾರ್ಧದಲ್ಲಿಯೇ ಸುಟ್ಟುಹಾಕುತ್ತದೆ. ಕರ್ಮವು ಸುಟ್ಟು ಹೋಗುತ್ತದೆಯೆನ್ನುವುದು ಇದು ನಿಮಿತ್ತದ ಕಥನವಿದೆ. ಅಂತರ್ಯದಲ್ಲಿ ಏಕಾಗ್ರತೆಯಾಗುತ್ತಿರುವಂತೆ ಅಶುದ್ಧತೆಯಾಗುವುದಿಲ್ಲ. ಮೊದಲಿನ ಕರ್ಮಗಳು ಉದುರಿ ಹೋಗುತ್ತವೆ. ಅದನ್ನೇ ಕರ್ಮಗಳು ಸುಟ್ಟುಹೋದುವೆಂದು ಹೇಳಲಾಗುತ್ತದೆ.

ಆತ್ಮನ ಜ್ಞಾನವಿಲ್ಲ ಮತ್ತು ಶಾಸ್ತ್ರದ ಅಭ್ಯಾಸ ಮಾಡುವುದರಿಂದ ನಿರ್ಜರೆಯಾಗುತ್ತದೆಯೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ. ಶಾಸ್ತ್ರಾಭ್ಯಾಸದ ರಾಗವಂತೂ ಬಂಧದ ಕಾರಣವಿದೆ.

ಭೇದಜ್ಞಾನಿಗೆ ರಾಗದಿಂದ ರಹಿತವಾದ ದಶೆಯು ವರ್ತಿಸುತ್ತದೆ, ಆದುದರಿಂದ ಅವನು ನಿಷ್ಕ್ರಿಯನಿದ್ದಾನೆ ಮತ್ತು ತನ್ನಲ್ಲಿ ಶುದ್ಧತೆಯ ಪರಿಣಾಮವಾಗುತ್ತದೆ. ಅದರಿಂದ ಸಕ್ರಿಯನಿದ್ದಾನೆ. ಈ ಪ್ರಕಾರ ನಿಷ್ಕ್ರಿಯ ಚೈತನ್ಯ ಸ್ವರೂಪದಲ್ಲಿ ಸ್ಥಿರತೆಯು ವರ್ತಿಸುವುದು ಧ್ಯಾನವಿದೆ.

ಜೀವರುಗಳು ಅನಾದಿಕಾಲದಿಂದ ರಾಗದ ಪಕ್ಷವನ್ನು ವಹಿಸಿಕೊಂಡಿದ್ದಾರೆ-ವ್ಯವಹಾರದ, ರಾಗದ ಮತ್ತು ನಿಮಿತ್ತದ ಪಕ್ಷವನ್ನು ತೆಗೆದುಕೊಂಡಿರುವುದರಿಂದ ಸಂಸಾರವು ಅಖಂಡವಾಗಿ ನಡೆದುಕೊಂಡು ಬಂದಿದೆ. ಆದರೆ ರಾಗದಿಂದ ರಹಿತವಿರುವ ಶುದ್ಧ ಆತ್ಮನ ಪಕ್ಷವನ್ನು ತೆಗೆದುಕೊಂಡಲ್ಲದೆ ನಿಜವಾದ ತಿಳಿವಳಿಕೆಯಾಗುವುದಿಲ್ಲ ಮತ್ತು ಧರ್ಮವು ಪ್ರಕಟವಾಗುವುದಿಲ್ಲ.

ಭೇದವಿಜ್ಞಾನೀ ಜೀವನು ಮನ-ವಚನ-ಕಾಯದ ಕ್ರಿಯೆಯ ಭಾವನೆಯನ್ನು ಭಾವಿಸುವುದಿಲ್ಲ, ಮನ-ವಚನ-ಕಾಯಗಳಂತೂ ಜಡವಾಗಿವೆ. ಅವುಗಳ ಕ್ರಿಯೆಗಳು ಅವುಗಳ ಆಧೀನದಲ್ಲಿದೆ. ಮತ್ತು ಅವುಗಳ ಲಕ್ಷ್ಯದಿಂದ ಆಗುವಂಥ ರಾಗದ ಭಾವನೆಯನ್ನು ಕೂಡ ಜ್ಞಾನಿಯು ಭಾವಿಸುವುದಿಲ್ಲ, ಮತ್ತು ಧ್ಯಾನ ಮಾಡುವಂಥ ಜೀವನು ಕರ್ಮಕಾಂಡದಲ್ಲಿ ಪ್ರವರ್ತಿಸುವುದಿಲ್ಲ. ದಯೆ, ದಾನ, ಯಾತ್ರೆ, ಹನ್ನೆರಡು ಪ್ರಕಾರದ ತಪದ ವಿಕಲ್ಪ ಉತ್ಪನ್ನವಾಗುವುದು ಅದೆಲ್ಲವು ಕರ್ಮಕಾಂಡವಿದೆ. ಅದರಲ್ಲಿ ಧ್ಯಾನೀ ಪುರುಷನು ಪ್ರವರ್ತಿಸುವುದಿಲ್ಲ. ಆದರೆ ಶರೀರದಿಂದ ಹಾಗೂ ಪುಣ್ಯ-ಪಾಪದಿಂದ ಭಿನ್ನನಿದ್ದೇನೆಂಬ ಜ್ಞಾನವು ಸಮಸ್ತ ಶುಭಾಶುಭ ಕರ್ಮೇಂಧನವನ್ನು ಸುಟ್ಟು ಹಾಕುವಲ್ಲಿ ಸಮರ್ಥವಿದೆ. ಹೀಗೆ ಜ್ಞಾನ ಕಾಂಡವುಳ್ಳವನು ಧ್ಯಾನದ ಅನುಭವಿಯಾಗುತ್ತಾನೆ. ಅದರಿಂದ ಅವನು ಪರಮಾತ್ಮ ಪದವನ್ನು ಪಡೆಯುತ್ತಾನೆ.

ಜ್ಞಾನದ ಪ್ರಕಟತೆಯು ಅಲ್ಪವಾಗಿದ್ದರೂ ಕೂಡ ಆ ಜ್ಞಾನವು ಆತ್ಮನ ಕಡೆಗೆ ಪ್ರವೃತ್ತವಾದರೆ ಕೇವಲಜ್ಞಾನವು ಪ್ರಕಟವಾಗುತ್ತದೆ ಮತ್ತು ಜನ್ಮ-ಮರಣದ ನಾಶವಾಗಿ ಹೋಗುತ್ತದೆ.

ಕನ್ನಡಕದಿಂದ ಜ್ಞಾನವಾಗುತ್ತದೆಯೆಂದು ಮನ್ನಿಸುವಂಥ ಅಜ್ಞಾನೀ ಜೀವನು ಪರದಿಂದ ಬೇರೆಯಾಗದಿದ್ದರೆ ಅವನು ರಾಗ-ದ್ವೇಷಗಳಿಂದಂತೂ ಯಾವ ರೀತಿಯಿಂದ ಬೇರೆಯಾಗುವ ಸಾಧ್ಯತೆಯಿದೆ ? ಎಂದರೆ ಆಗುವ ಸಾಧ್ಯತೆಯೇ ಇಲ್ಲ, ಮತ್ತು ಸಂಸಾರದಲ್ಲಿ ಆಸಕ್ತಿಯಿಲ್ಲದಿದ್ದರೂ ಕೂಡ ಗೌರವದ ಭಾವನೆಯಿದ್ದರೆ ಉದ್ಯೋಗದ ವ್ಯವಹಾರವನ್ನು ನಡೆಸುತ್ತಾನೆ. ಅದೇ ಪ್ರಕಾರ ಧರ್ಮಾತ್ಮ ಜೀವನಿಗೆ ಪೂರ್ಣಜ್ಞಾನಲಕ್ಷ್ಮಿಯ ಆಸಕ್ತಿಯಿಲ್ಲದಿದ್ದರೂ ಕೂಡ ನವತತ್ತ್ವಗಳ ಪ್ರಯೋಜನಭೂತವಾದ ಜ್ಞಾನವಿದ್ದರೂ ಅದು ವೃದ್ಧಿಯಾಗಿ ಅದೇ ಭವದಲ್ಲಿ ಅಥವಾ ಒಂದು ಭವದ ನಂತರ ಕೂಡ ಪರಮಾತ್ಮದಶೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಆದುದರಿಂದ ಜ್ಞಾನವು ಆತ್ಮಸನ್ಮುಖವಾಗುವುದು ಅವಶ್ಯಕವಿದೆ.

ಇತ್ತೀಚಿನ ದಿವಸಗಳಲ್ಲಿಯಂತೂ ಜೀವರುಗಳ ಬಾಹ್ಯ ಪ್ರವೃತ್ತಿಯು ಬಹಳಷ್ಟು ವೃದ್ಧಿಸಿ ಹೋಗಿದೆ. ಬುದ್ಧಿಯು ಅಲ್ಪ, ಕಾಲವು ಕಡಿಮೆ ಮತ್ತು ಬಾಹ್ಯದಲ್ಲಿ ಏಕಾಗ್ರತೆ. ಆದರೆ ಅದರಿಂದ ನಿವೃತ್ತಿ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಹೇಳಿರುವುದೇನೆಂದರೆ ಪರದ ಕಾರ್ಯ ಮಾಡುವ ಅಹಂಕಾರದ ಭಾರವನ್ನು ತಲೆಯ ಮೇಲೆ ಹೊತ್ತುಕೊಂಡಾಗಿದೆ ಆ ಭಾರದಿಂದ ಒಂದು ಬಾರಿ ಹಗುರಾದರೂ ಆಗು. ಒಂದು ಬಾರಿ ಪರದ ಜತೆಯ, ಶರೀರ ಹಾಗೂ ಕರ್ಮ

ಮೊದಲಾದವುಗಳ ಜತೆಯಲ್ಲಿನ ಏಕತ್ವ ಬುದ್ಧಿಯ ಭಾರವನ್ನು ಹಗುರು ಮಾಡಿಕೊಳ್ಳು. ಅದನ್ನು ಮಾಡಿದಲ್ಲದೆ ಅಂತರ್ಮುಖ ಪ್ರವೃತ್ತಿಯಾಗುವಂತಿಲ್ಲ, ಅದನ್ನು ಮಾಡದ ಹೊರತಾಗಿ ಧರ್ಮಧ್ಯಾನವಾಗುವುದಿಲ್ಲ, ಮಿಥ್ಯಾತ್ವವು ಹೋದಲ್ಲದೆ ಪ್ರತಿಕ್ರಮಣವಾಗುವುದಿಲ್ಲ, ಮತ್ತು ನಿರ್ಜರೆಯೂ ಆಗುವುದಿಲ್ಲ.

ಅಜ್ಞಾನೀ ಜೀವನು ಬೇಕಾದಷ್ಟು ಪ್ರರೂಪಣೆ ಮಾಡುತ್ತಿದ್ದರೂ ಕೂಡ ಧರ್ಮಾತ್ಮನಾದ ಜೀವನು ಅದನ್ನು ಸತ್ಯವೆಂದು ಮನ್ನಿಸುವುದಿಲ್ಲ. ಯಾವನೋ ಓರ್ವ ಬಹುರೂಪಗಾರನು ಬೇರೆ ಬೇರೆ ವೇಷಧಾರಣ ಮಾಡಿದರೆ ಚತುರ ಪುರುಷನು ಇವನಂತೂ ವೇಷಧಾರಿಯಿದ್ದಾನೆಂದು ತಿಳಿಯುತ್ತಾನೆ. ಅದೇ ಪ್ರಕಾರ ಅಜ್ಞಾನಿಯು ವ್ಯವಹಾರ ಮಾಡುತ್ತ ಮಾಡುತ್ತ ಧರ್ಮವಾಗುತ್ತದೆಯೆಂದು ಜೋರು ಜೋರಾಗಿ ಪ್ರರೂಪಣೆ ಮಾಡಿದರೂ ಮತ್ತು ಅದರ ಸಲುವಾಗಿ ಉದಾಹರಣೆ ಕೊಟ್ಟರೂ ಕೂಡ ಧರ್ಮಾತ್ಮ ಜೀವನು ಈತನ ಪ್ರರೂಪಣೆಯು ಅಸತ್ಯವಿದೆಯೆಂದು ತಿಳಿಯುತ್ತಾನೆ. ಇವನು ವೇಷಧಾರಿಯಿದ್ದಾನೆ, ಯಥಾರ್ಥ ಜ್ಞಾನಿಯಿಲ್ಲವೆಂದು ನಿರ್ಣಯ ಮಾಡುತ್ತಾನೆ.

ಪ್ರವಚನಸಾರದ ಪರಿಶಿಷ್ಟದಲ್ಲಿ ಕ್ರಿಯಾಕಾಂಡದಿಂದ ಎಂದರೆ ದೇವ-ಶಾಸ್ತ್ರ-ಗುರುಗಳ ಕುರಿತಾಗಿರುವ ರಾಗದಿಂದ ಜ್ಞಾನಕಾಂಡವು ಪ್ರಚಂಡವಾಗುತ್ತದೆ ಎಂದರೆ ಆತ್ಮನ ಜ್ಞಾನವಾಗುತ್ತದೆಯೆಂಬ ಮಾತು ಬಂದು ಬಿಟ್ಟಿದೆ. ಅಜ್ಞಾನಿಯು ಇದರ ಅರ್ಥ ತಿಳಿಯುವುದಿಲ್ಲ, ಮತ್ತು ಇದರ ಆಧಾರ ಕೊಟ್ಟರೆಂದರೆ ಜ್ಞಾನಿಯು ಇದು ನಿಮಿತ್ತದ ಕಥನವಿದೆಯೆಂದು ತಿಳಿಯುತ್ತಾನೆ. ದೇವ-ಶಾಸ್ತ್ರ-ಗುರುಗಳ ಕುರಿತಾಗಿರುವ ರಾಗದ ಅಭಾವ ಮಾಡಿದ ಮೇಲೆ ಜ್ಞಾನ ಕಾಂಡವಾಗುತ್ತದೆಯೆಂಬುದು ಹಾಗೆ ಹೇಳುವುದರ ಭಾವವಿದೆ. ಆದರೆ ಶುಭರಾಗವಿದ್ದರೆ ನಿಜವಾದ ದೇವ-ಶಾಸ್ತ್ರ-ಗುರುಗಳ ಕುರಿತಾಗಿರುವುದೇ ಇರುತ್ತದೆಯೇ ವಿನಹ ಕುದೇವಾದಿಗಳದ್ದು ಇರುವುದಿಲ್ಲವೆಂಬುದನ್ನು ತಿಳಿಸಿಕೊಡುವ ಸಲುವಾಗಿ ಕ್ರಿಯಾಕಾಂಡದಿಂದ ಜ್ಞಾನಕಾಂಡವಾಗುತ್ತದೆಯೆಂದು ಹೇಳಲಾಗಿದೆ. ಅದು ವ್ಯವಹಾರನಯದ ಕಥನವಿದೆಯೆಂದು ಜ್ಞಾನಿಗಳು ತಿಳಿದುಕೊಳ್ಳುತ್ತಾರೆ. ಇಲ್ಲಿಯಂತೂ ಜೀವನು ಶುಭಾಶುಭ ಭಾವಗಳ ರೂಪದ ಕರ್ಮಕಾಂಡದಲ್ಲಿ ಪ್ರವರ್ತಿಸುವುದಿಲ್ಲವೆಂದು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದೆ. ಆದರೆ ಶುದ್ಧ ಆತ್ಮನಲ್ಲಿ ನಿಮಗ್ನವಾಗಿ ಜ್ಞಾನಕಾಂಡದಲ್ಲಿ ಎಂದರೆ ಶುದ್ಧಾತ್ಮನಲ್ಲಿ ಪ್ರವರ್ತಿಸುತ್ತಾರೆ ಅವರಿಗೆ ಪರಮಾತ್ಮ ಪದದ ಪ್ರಾಪ್ತಿಯಾಗುತ್ತದೆ.

ಈ ಪ್ರಕಾರ ನಿರ್ಜರಾ ಪದಾರ್ಥದ ವ್ಯಾಖ್ಯಾನವು ಪೂರ್ಣವಾಯಿತು.

ಈಗ ಬಂಧ ಪದಾರ್ಥದ ವ್ಯಾಖ್ಯಾನ ಮಾಡಲಾಗುತ್ತದೆ. ಅದರ ಸಲುವಾಗಿ ಗಾಥೆ ಹೇಳುತ್ತಾರೆ,-

**ಜಂ ಸುಹಮಸುಹಮುದಿಣ್ಣಂ ಭಾವಂ ರತ್ತೋ ಕರೇದಿ ಜದಿ ಅಪ್ಪಾ ।**
**ಸೋ ತೇಣ ಹವದಿ ಬದ್ಧೋ ಪೋಗ್ಗಲ ಕಮ್ಮೇಣ ವಿವಿಹೇಣ ॥೧೪೭॥**

**ಯಾವ ಆತ್ಮನು ಆಸಕ್ತನಾಗಿ ಉದಿತ ಶುಭಾಶುಭಭಾವಗಳ ಮಾಡುವನು ।**
**ಅವನು ಆ ಭಾವಗಳಿಂದ ವಿವಿಧ ಪುದ್ಗಲ ಕರ್ಮಗಳಿಂ ಬದ್ಧನಾಗುವನು ॥೧೪೭॥**

ಆತ್ಮನು ಜ್ಞಾನ ಸ್ವಭಾವಿಯಿದ್ದಾನೆ, ಅದನ್ನು ಬಿಟ್ಟುಕೊಟ್ಟು ಅಜ್ಞಾನ ಭಾವಗಳನ್ನು ಮಾಡಿ ಪುಣ್ಯ-ಪಾಪದ ಪರಿಣಾಮ ಮಾಡುತ್ತಾನೆ ಅದು ಭಾವಬಂಧನವಿದೆ, ಅವು ವಿಕಾರೀ ಪರಿಣಾಮಗಳಿವೆ. ಅವುಗಳ ನಿಮಿತ್ತದಿಂದ ಜಡ ಕರ್ಮಗಳು ಕಟ್ಟಲ್ಪಡುತ್ತವೆ, ಅದು ದ್ರವ್ಯಬಂಧವಿದೆ. ಅಶುದ್ಧ ನಿಶ್ಚಯನಯದಿಂದ ರಾಗ-ದ್ವೇಷಗಳನ್ನು ಮಾಡುತ್ತಾನೆ ಅದು ಭಾವಬಂಧವಿದೆ ಮತ್ತು ಅದರ ನಿಮಿತ್ತದಿಂದ ದ್ರವ್ಯಕರ್ಮದ ಬಂಧವಾಗುತ್ತದೆ. ಆದುದರಿಂದ ಆತ್ಮನು ದ್ರವ್ಯಕರ್ಮ ಕಟ್ಟಿಕೊಳ್ಳುತ್ತಾನೆಂದು ವ್ಯವಹಾರದಿಂದ ಹೇಳಲಾಗಿದೆ.

**ಭಾವಾರ್ಥ :-** ಆತ್ಮನು ಪರದ ಸಂಬಂಧದಿಂದ ಅನಾದಿಯ ಅವಿದ್ಯೆಯಿಂದ ಮೋಹಿತನಾಗಿ ಕರ್ಮದ ಉದಯದ ನಿಮಿತ್ತದಿಂದ ಶುಭಾಶುಭ ಭಾವಗಳನ್ನು ಮಾಡುತ್ತಾನೆ. ಜೀವ ಮತ್ತು ಕರ್ಮದ ಮಧ್ಯದಲ್ಲಿ ಅತ್ಯಂತ ಅಭಾವವಿದೆ. ಆದರೆ ಜೀವನು ತನ್ನ ಸ್ವಭಾವವನ್ನು ಮರೆತು ಪರದಲ್ಲಿ ಸಾವಧಾನನಾಗಿ ನಿಮಿತ್ತದ ಪ್ರವೃತ್ತಿಯಲ್ಲಿ ಒಂದಾಗುವುದು ಭಾವಬಂಧವಿದೆ. ಆ ಸಮಯದಲ್ಲಿ ಅಶುದ್ಧ ಉಪಾದಾನ ಯೋಗರೂಪ ಭಾವದ ನಿಮಿತ್ತ ಪಡೆದು ಪೌದ್ಗಲಿಕ ಕರ್ಮಗಳಿಂದ ಬಂಧಿಸಲ್ಪಡುತ್ತಾನೆ. ನಿಮಿತ್ತ ಪಡೆದು ಎಂದರೆ ಮೊದಲು ನಿಮಿತ್ತ ಮತ್ತು ಅನಂತರ ಉಪಾದಾನ - ಎಂಬುದಾಗಿ ಇದರ ಅರ್ಥವಿಲ್ಲ-ಯಾವ ಸಮಯದಲ್ಲಿ ತನ್ನ ಅಜ್ಞಾನವು ರಾಗ-ದ್ವೇಷದ ಕಾರಣದಿಂದ ಬಂಧಿಸಲ್ಪಡುವುದು ಆ ಸಮಯದಲ್ಲಿಯೇ ಪುದ್ಗಲಕರ್ಮಗಳಿಂದ ವ್ಯವಹಾರದಿಂದ ಕಟ್ಟಲ್ಪಡುತ್ತಾನೆ ಕರ್ಮರೂಪದಿಂದ ಪರಿಣಮಿಸಲು ಯೋಗ್ಯವಿರುವ ಪರಮಾಣುಗಳು ಕರ್ಮರೂಪದಿಂದ ಪರಿಣಮಿಸಿ ದ್ರವ್ಯಬಂಧವಾಗುತ್ತದೆ.

**ಪ್ರಶ್ನೆ :-** ಸಿದ್ಧರಿಗೆ ಕರ್ಮಗಳೇಕೆ ಕಟ್ಟುವುದಿಲ್ಲ ? ಸಿದ್ಧರಿಗೆ ರಾಗ-ದ್ವೇಷಗಳಿರುವುದಿಲ್ಲ ಅದರ ಸಲುವಾಗಿಯೇ ಕಟ್ಟುವುದಿಲ್ಲವೇನು ?

**ಉತ್ತರ :-** ಅಲ್ಲಿ ಕರ್ಮರೂಪದಿಂದ ಪರಿಣಮನ ಮಾಡಲು ಯೋಗ್ಯತೆಯಿರುವಂಥ ಪರಮಾಣುಗಳು ಸಿದ್ಧರ ಹತ್ತಿರದಲ್ಲಿ ಇರುವುದಿಲ್ಲ, ಆದುದರಿಂದ ಕಟ್ಟುವುದಿಲ್ಲ ರಾಗ-ದ್ವೇಷಗಳು ಇಲ್ಲದಿರುವುದರಿಂದ ಕಟ್ಟುವುದಿಲ್ಲವೆನ್ನುವಂತೆ ಪರಮಾಣುಗಳು ಪರಾಧೀನವಿರುವುದಿಲ್ಲ. ಕರ್ಮಗಳ ಯೋಗ್ಯತೆಯಿರುವಂಥ ಪರಮಾಣುಗಳು ರಾಗೀ ಜೀವದ ಜತೆಯಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ಧಾರಣ ಮಾಡಿರುತ್ತವೆ. ಆತ್ಮನಲ್ಲಿ ಶುಭಾಶುಭ ಭಾವರೂಪದ ಸ್ನಿಗ್ಧತೆಯಿರುತ್ತದೆ ಅದರ ಹೆಸರು ಭಾವಬಂಧವಿದೆ. ಅದರ ನಿಮಿತ್ತ ಪಡೆದು ಶುಭ-ಅಶುಭರೂಪ ಕರ್ಮವಾಗಲು ಯೋಗ್ಯವುಳ್ಳ ಪರಮಾಣುಗಳು ಜೀವದ ಪ್ರದೇಶಗಳ ಜತೆಯಲ್ಲಿ ಪರಸ್ಪರದಲ್ಲಿ ಬಂಧಿಸಲ್ಪಡುತ್ತವೆ. ಅದರ ಹೆಸರು ದ್ರವ್ಯಬಂಧವಿದೆ. ಈ ಪ್ರಕಾರ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಒಂದುವೇಳೆ ಜೀವನು ದ್ರವ್ಯಬಂಧವನ್ನು ನಿಶ್ಚಯದಿಂದ ಮನ್ನಿಸಿದರೆ ಅವನು ಬಂಧವನ್ನು ತಿಳಿಯುವುದಿಲ್ಲ ಮತ್ತು ಜೀವನು ಭಾವಕರ್ಮಗಳನ್ನು ಮಾಡುವುದರಿಂದ ಪರಮಾಣುಗಳಿಗೆ ಬಂಧಿಸಬೇಕಾಗುತ್ತದೆಯೆಂದು ಮನ್ನಿಸಿದರೆ ಅವನು ಕೂಡ ಬಂಧವನ್ನು ತಿಳಿಯುವುದಿಲ್ಲ. ಕರ್ಮವು ಭಾವಬಂಧ ಅಥವಾ ವಿಕಾರ ಮಾಡಿಸುತ್ತದೆಯೆಂದು ಮನ್ನಿಸಿದರೆ ಅವನು ಕೂಡ ಬಂಧವನ್ನು ತಿಳಿಯುವುದಿಲ್ಲ. ಜೀವನು ತನ್ನಲ್ಲಿ ರಾಗ-ದ್ವೇಷ ಮಾಡುವುದು ಅದು ಭಾವಬಂಧವಿದೆ. ಅದರ ನಿಮಿತ್ತ ಪಡೆದು ಪರಮಾಣುಗಳು ಸ್ವಯಂ ಕರ್ಮರೂಪದಿಂದ ಕಟ್ಟುತ್ತವೆ ಅದು ದ್ರವ್ಯಬಂಧವಿದೆ.

ಈ ಪ್ರಕಾರ ಬಂಧದ ಸ್ವರೂಪವನ್ನು ತಿಳಿಯದವನಿಗೆ ನವತತ್ತ್ವಗಳ ಜ್ಞಾನವು ಸರಿಯಾಗಿ ಆಗಿರುವುದಿಲ್ಲ ಮತ್ತು ಅವನಿಗೆ ಧರ್ಮವಾಗುವುದಿಲ್ಲ.

ರಾಗ-ದ್ವೇಷಾದಿಗಳ ಪರಿಣಾಮವಾಗುವುದು ಅದು ಭಾವಬಂಧವಿದೆ. ಆ ಸಮಯದಲ್ಲಿ ಕರ್ಮಗಳು ಸ್ವಯಂ ಕಟ್ಟುವುದು ದ್ರವ್ಯಬಂಧವಿದೆ. ಜಡಕರ್ಮಗಳು ಇದ್ದರೆ ವಿಕಾರವಾಗುತ್ತದೆಯೆಂದು ಮನ್ನಿಸಿದರೆ ಅವನು ಬಂಧವನ್ನು ತಿಳಿಯುವುದಿಲ್ಲ, ಮತ್ತು ಭಾವಬಂಧದ ಕಾರಣದಿಂದ ದ್ರವ್ಯಬಂಧವಾಗುತ್ತದೆಯೆಂಬುದಾಗಿಯೂ ಕೂಡ ಇಲ್ಲ. ಯಾವುದರ ಕಾರಣದಿಂದ ಯಾವುದೂ ಇಲ್ಲ, ಪ್ರತಿಯೊಂದು ತಮ್ಮ-ತಮ್ಮಲ್ಲಿ ಸ್ವತಂತ್ರವಿವೆ. ಮಿಥ್ಯಾಭ್ರಾಂತಿ, ರಾಗ-ದ್ವೇಷಾದಿಗಳ ಪರಿಣಾಮವು ಭಾವಬಂಧವಿದೆ. ಅದರ ನಿಮಿತ್ತ ಪಡೆದು ಕರ್ಮಗಳ ಕಟ್ಟುವಿಕೆಯು ದ್ರವ್ಯಬಂಧವಿದೆ. ಪೂರ್ವಕರ್ಮವು ನಿಮಿತ್ತವಿದೆ ಮತ್ತು ಭಾವಬಂಧವು ನೈಮಿತ್ತಿಕವಿದೆ. ಅಲ್ಲದೆ ಭಾವಬಂಧವು ನಿಮಿತ್ತವಿದೆ ಮತ್ತು ನವೀನ ದ್ರವ್ಯಬಂಧವು ನೈಮಿತ್ತಿಕವಿದೆ. ಹೀಗೆ ನಿಮಿತ್ತ-ನೈಮಿತ್ತಿಕದ ಸಂಬಂಧವು ಸ್ವತಂತ್ರವಿದೆ.

ಈಗ ಬಂಧದ ಬಹಿರಂಗ ಹಾಗೂ ಅಂತರಂಗ ಸ್ವರೂಪವನ್ನು ಹೇಳುತ್ತಾರೆ -

**ಜೋಗಣಿಮಿತ್ತಂ ಗಹಣಂ ಜೋಗೋ ಮಣವಯಣಕಾಯ ಸಂಭೂದೋ ।**

**ಭಾವಣಿಮಿತ್ತೋ ಬಂಧೋ ಭಾವೋ ರದಿರಾಗದೋಸಮೋಹಜುದೋ ॥೧೪೮॥**

**ಯೋಗ ನಿಮಿತ್ತ ಗ್ರಹಣವಿದ್ದು, ಯೋಗ ಮನವಚನಕಾಯಸಂಭೂತವಿದೆ ।**
**ಹಾಗೆ ಭಾವನಿಮಿತ್ತ ಬಂಧವಿದ್ದು, ಭಾವರತಿರಾಗದ್ವೇಷಮೋಹಯುಕ್ತವಿದೆ ॥೧೪೮॥**

ಜಡಕರ್ಮವು ಬದ್ಧವಾಗುತ್ತದೆ ಅದು ತನ್ನ ಯೋಗ್ಯತೆಯಿಂದ ಬದ್ಧವಾಗುತ್ತದೆ ಅದರಲ್ಲಿ ಒಂದು ಅಂತರಂಗ ಮತ್ತು ಇನ್ನೊಂದು ಬಹಿರಂಗವೆಂದು ಎರಡು ಕಾರಣಗಳಿವೆ. ಯೋಗವನ್ನು ಬಹಿರಂಗ ಕಾರಣವೆಂದು ಹೇಳಲಾಗುತ್ತದೆ ಮತ್ತು ರಾಗ-ದ್ವೇಷಗಳನ್ನು ಅಂತರಂಗ ಕಾರಣವೆಂದು ಹೇಳಲಾಗುತ್ತದೆ. ಜೀವ, ಅಜೀವ ಮೊದಲಾದ ನವ ಪದಾರ್ಥಗಳು ಪೃಥಕ್ ಪೃಥಕ್ ಇವೆ. ಪೃಥಕ್ಕಾಗಿ ಇಲ್ಲದಿದ್ದರೆ ಒಂಭತ್ತು ಉಳಿಯುವುದಿಲ್ಲ. ಸಿದ್ಧರಿಗೆ ದ್ರವ್ಯಕರ್ಮಗಳು ಏಕೆ ಆಗುವುದಿಲ್ಲ ? ಅದಕ್ಕೆ ಕೆಲವರು ಹೀಗೆ ಹೇಳುತ್ತಾರೆ-ಸಿದ್ಧರಿಗೆ ವಿಕಾರವಿಲ್ಲದಿರುವುದರಿಂದ ಆಗುವುದಿಲ್ಲ. ಹಾಗಾದರೆ ಅದು ಸರಿಯಾಗಿಲ್ಲ. ಹಾಗೆ ಮನ್ನಿಸಿದರೆ ಕರ್ತಾಕರ್ಮ ಸಂಬಂಧವಾಗಿ ಹೋಗುತ್ತದೆ. ಅಲ್ಲಿ ಕರ್ಮವಾಗಲು ಯೋಗ್ಯ ಪರಮಾಣುಗಳಿಲ್ಲದಿರುವುದರಿಂದ ಕರ್ಮವಾಗುವುದಿಲ್ಲ ಮತ್ತು ಜೀವದ ಅವಿಕಾರೀ ದಶೆಯು ನಿಮಿತ್ತವಿದೆ. ಈಗ ಅದರಲ್ಲಿ ಎರಡು ಕಾರಣಗಳಿವೆ, ಆತ್ಮನ ಪ್ರದೇಶಗಳ ಕಂಪನವಾಗುವುದು ಯೋಗವಿದೆ. ಅದರಲ್ಲಿ ಮನ-ವಚನ-ಕಾಯಗಳು ನಿಮಿತ್ತವಿವೆ. ಮನ-ವಚನ-ಕಾಯದ ಕ್ರಿಯೆಯು ಯೋಗವಿಲ್ಲ. ಆದರೆ ಆತ್ಮನ ಪ್ರದೇಶಗಳ ಕಂಪನವಾಗುವುದು ಯೋಗವಿದೆ. ಆ ಯೋಗವು ನವೀನ ಕರ್ಮ ಬರುವುದರಲ್ಲಿ ಬಹಿರಂಗ ಕಾರಣವಿದೆ ಮತ್ತು ಮೋಹ-ರಾಗ-ದ್ವೇಷಗಳು ನವೀನ ಕರ್ಮಗಳಲ್ಲಿ ಅಂತರಂಗ ಕಾರಣವಿವೆ.

ಏಕಕಾಲದಲ್ಲಿ ಎಂದರೆ ಜತೆ-ಜತೆಯಲ್ಲಿಯೇ ಜನ್ಮ ತಾಳಿದ ಎರಡು ಮಕ್ಕಳಿದ್ದರೂ ಕೂಡ ಒಂದು ಇನ್ನೊಂದರ ನಂತರ ಜನ್ಮತಾಳಿರುವುದರಿಂದ ಪೃಥಕ್ಕತೆಯ ಜ್ಞಾನವು ವರ್ತಿಸುತ್ತದೆ. ಅದರಂತೆ ಆತ್ಮನಲ್ಲಿ ಯೋಗದ ಕಂಪನ ಮತ್ತು ಕಷಾಯಗಳು ಒಂದೇ ಸಮಯದಲ್ಲಾದರೂ ಕೂಡ ಎರಡರ ಕಾರ್ಯ ಬೇರೆಯಿದೆ.

ಯೋಗದ ನಿಮಿತ್ತ ಪಡೆದು ಕರ್ಮಪುದ್ಗಲಗಳು ಜೀವದ ಪ್ರದೇಶಗಳಲ್ಲಿ ಪರಸ್ಪರ ಏಕಕ್ಷೇತ್ರಾವಗಾಹ ರೂಪದಿಂದ ಗ್ರಹಣವಾಗುತ್ತವೆ. ಯೋಗವು ಮನ-ವಚನ-ಕಾಯದ ಕ್ರಿಯೆಯಿಂದ ಉತ್ಪನ್ನವಾಗುತ್ತದೆ. ಇದರ ಅರ್ಥವು ಏನಿದೆಯೆಂದರೆ-ಯಾವಾಗ ಪ್ರದೇಶಗಳ ಕಂಪನದಲ್ಲಿ ಮನಸ್ಸು ನಿಮಿತ್ತವಾಗಿದ್ದರೆ ಮನೋಯೋಗವೆನ್ನಲಾಗುತ್ತದೆ. ವಚನವು ನಿಮಿತ್ತವಾಗಿದ್ದರೆ ವಚನಯೋಗವೆನ್ನಲಾಗುತ್ತದೆ, ಕಾಯವು ನಿಮಿತ್ತವಾಗಿದ್ದರೆ ಕಾಯಯೋಗವೆನ್ನಲಾಗುತ್ತದೆ. ಇದೇ ರೀತಿಯಿಂದ ಮನ-ವಚನ-ಕಾಯದ ನಿಮಿತ್ತದಿಂದ ಯಾವ ಕಂಪನವಾಗುತ್ತದೆ ಅದನ್ನು ನಿಮಿತ್ತ ಮಾಡಿಕೊಂಡು ಕರ್ಮದ ಪರಮಾಣುಗಳು ಬರುತ್ತವೆ ಮತ್ತು ಕರ್ಮದ ಪ್ರಕೃತಿಗಳು ಕಟ್ಟಲ್ಪಡುತ್ತವೆ. ಅದನ್ನು ಯೋಗದ ಬಹಿರಂಗ ಕಾರಣವೆಂದು ಹೇಳಲಾಗುತ್ತದೆ ಮತ್ತು ಮೋಹ-ರಾಗ-ದ್ವೇಷಗಳನ್ನು ಅಂತರಂಗ ಕಾರಣವೆಂದು ಹೇಳಲಾಗಿದೆ.

ಪ್ರತಿಯೊಂದು ಪದಾರ್ಥವು ಸ್ವತಂತ್ರವಿದೆ. ಯಾವುದರ ಕಾರಣದಿಂದ ಯಾವುದೂ ನಿಂತುಕೊಳ್ಳುವುದಿಲ್ಲ-ಸುದೃಷ್ಟಿತರಂಗಿಣಿಯಲ್ಲಿ ಬರುವುದೇನೆಂದರೆ-ಒಂದು ಪರ್ವತದ ಗುಹೆಯಲ್ಲಿ ಆರು ಜನ ಮುನಿವರರು ವೀತರಾಗ ಧ್ಯಾನದಲ್ಲಿ ಕುಳಿತುಕೊಂಡಿರುತ್ತಾರೆ. ಅವರಲ್ಲಿ ಓರ್ವ ಮುನಿರಾಜರಿಗೆ ವಿಕಲ್ಪ ಉಂಟಾಗುತ್ತದೆ ಮತ್ತು ಅವರು ಹೊರಗೆ ಬಂದುಬಿಟ್ಟರೆ ಇನ್ನೊಬ್ಬರು ಅವರ ಹಿಂದೆ ಬರಬೇಕಾಗುವುದಿಲ್ಲ. ಎಲ್ಲರು ತಮ್ಮತಮ್ಮಲ್ಲಿ ನಿಮಗ್ನರಿದ್ದಾರೆ. ಈ ಪ್ರಕಾರ

ಜಗತ್ತಿನಲ್ಲಿರುವ ಆರೂ ದ್ರವ್ಯಗಳು ವೀತರಾಗೀ ಮುನಿಗಳ ಹಾಗೆ ಇವೆ. ತಮ್ಮತಮ್ಮಲ್ಲಿ ಕಾರ್ಯ ಮಾಡುತ್ತಲಿವೆ. ಜೀವವು ರಾಗ-ದ್ವೇಷ ಮಾಡುತ್ತದೆ ಅದು ತನ್ನಿಂದ ತಾನು ಮಾಡುತ್ತದೆ ಮತ್ತು ಕರ್ಮಗಳು ಕೂಡ ಸ್ವಯಂ ತಮ್ಮ ಕಾರಣದಿಂದ ತಾವು ಬಂಧಿಸುತ್ತವೆ. ಎರಡೂ ಒಂದೇ ಸಮಯದಲ್ಲಿವೆ. ಆದಾಗ್ಯೂ ಯಾವ ಪ್ರಕಾರದ ಕರ್ಮಕಟ್ಟುವುದೆಂದು ಚೈತನ್ಯವು ಕಾಯುವುದಿಲ್ಲ. ಅದರಂತೆ ಚೈತನ್ಯವು ಯಾವ ಪ್ರಕಾರದ ವಿಕಾರ ಮಾಡುವುದೆಂದು ಜಡವು ಕಾದುಕೊಂಡಿರುವುದಿಲ್ಲ. ಅವೆರಡೂ ಸ್ವತಂತ್ರವಿವೆ. ಇಲ್ಲಿ ದ್ರವ್ಯಬಂಧದಲ್ಲಿ ನಿಮಿತ್ತ ಕಾರಣವನ್ನು ತಿಳಿಸಕೊಡಲಾಗಿದೆ. ದ್ರವ್ಯಕರ್ಮಗಳು ಕಟ್ಟಲ್ಪಡುತ್ತವೆ. ಅವು ತಮ್ಮ-ತಮ್ಮ ಯೋಗ್ಯತೆಯಿಂದ ಕಟ್ಟುತ್ತವೆ. ಆ ಬಂಧನದ ಮೂಲ ಕಾರಣವು ಯೋಗವಿಲ್ಲದಿರುವುದರಿಂದಲೇ ಅದನ್ನು ಬಹಿರಂಗ ಕಾರಣವೆಂದು ಹೇಳಿದೆ ಮತ್ತು ಮಿಥ್ಯಾಭ್ರಾಂತಿ, ರಾಗ-ದ್ವೇಷ ಮೊದಲಾದ ಅಶುದ್ಧೋಪಯೋಗಗಳನ್ನು ಅಂತರಂಗ ಕಾರಣವೆಂದು ಹೇಳಿದೆ. ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ರತಿ-ರಾಗ-ದ್ವೇಷ-ಮೋಹ ಇವು ಅಂತರಂಗ ಕಾರಣಗಳಿವೆ. ಪರವಸ್ತುಗಳು ಅನುಕೂಲ ಅಥವಾ ಪ್ರತಿಕೂಲವಿಲ್ಲ, ಆದರೆ ಇದು ಅನುಕೂಲವಿದೆ ಮತ್ತು ಇದು ಪ್ರತಿಕೂಲವಿದೆಯೆಂಬ ಮೋಹ-ರಾಗ-ದ್ವೇಷ ಮಾಡುವುದು ಭಾವಬಂಧವಿದೆ. ಅದು ಅಂತರಂಗ ಕಾರಣವಿದೆ.

ಸಮ್ಯಗ್ದರ್ಶನವಾಗುವಲ್ಲಿ ಜಿನಸೂತ್ರವು ಬಹಿರಂಗ ಕಾರಣವಿದೆ ಮತ್ತು ಜ್ಞಾನೀ ಪುರುಷನು ಅಂತರಂಗ ಕಾರಣನಿದ್ದಾನೆಂದು ನಿಯಮಸಾರದಲ್ಲಿ ಹೇಳಲಾಗಿದೆ. ಆದರೆ ಅಲ್ಲಿ ಸಮ್ಯಗ್ದರ್ಶನವಾಗುವಲ್ಲಿ ನಿಜವಾಗಿ ಅಂತರಂಗ ಅಥವಾ ಉಪಾದಾನ ಕಾರಣವಂತೂ ಶಿಷ್ಯನ ಆತ್ಮನೇ ಇರುತ್ತಾನೆ ಮತ್ತು ಅವನು ತನ್ನ ಕಾರಣದಿಂದಲೇ ಸಮ್ಯಗ್ದರ್ಶನವನ್ನು ಪಡೆಯುತ್ತಾನೆ. ಅಂತರಂಗ ಉಪಾದಾನ ಕಾರಣವಂತೂ ಸ್ವಯಂ ತಾನೇ ಇದ್ದಾನೆ ಮತ್ತು ವಾಣೀ ಹಾಗೂ ಜ್ಞಾನೀ ಪುರುಷ ಎರಡೂ ಬಾಹ್ಯ ನಿಮಿತ್ತಕಾರಣವಿದ್ದರೂ ಕೂಡ ಎರಡು ನಿಮಿತ್ತ ಕಾರಣಗಳಲ್ಲಿ ಅಂತರ-ವ್ಯತ್ಯಾಸ ತಿಳಿಸಿಕೊಡುವ ಹಾಗೂ ಜ್ಞಾನೀ ಪುರುಷನ ನಿಮಿತ್ತತೆಯ ಮೇಲೆ ಭಾರ ಹಾಕುವ ಸಲುವಾಗಿ ಜ್ಞಾನೀ ಪುರುಷನನ್ನು ಅಂತರಂಗ ಕಾರಣನೆಂದು ಹೇಳಿದೆ ಮತ್ತು ವಾಣಿಯನ್ನು ಬಾಹ್ಯಕಾರಣವೆಂದು ಹೇಳಿದೆ.

ಅದೇ ಪ್ರಕಾರ ಇಲ್ಲಿ ಕೂಡ ಕರ್ಮದ ಪರಮಾಣುಗಳು ಕಟ್ಟುತ್ತವೆ ಅದರಲ್ಲಿ ಅಂತರಂಗ ಕಾರಣವಂತೂ ಸ್ವಯಂ ಪರಮಾಣುವೇ ಇದೆ. ಬಾಹ್ಯ ಕಾರಣದ ನಿಮಿತ್ತ ತೆಗೆದುಕೊಂಡು ಪರಮಾಣುವು ಕಟ್ಟುವುದಿಲ್ಲ, ಆದರೆ ಅದರಲ್ಲಿ ಎರಡು ನಿಮಿತ್ತಗಳು ಇರುತ್ತವೆ. ಮೊದಲನೆಯದು ಜೀವದ ಮೋಹ-ರಾಗ-ದ್ವೇಷಗಳಿದ್ದರೆ ಎರಡನೆಯದು ಯೋಗವಿದೆ. ಹೀಗೆ ಎರಡೂ ಜತೆಯಲ್ಲಿರುತ್ತವೆ. ಆದಾಗ್ಯೂ ಎರಡೂ ನಿಮಿತ್ತ ಕಾರಣಗಳಲ್ಲಿ ಅಂತರ ತಿಳಿಸಿಕೊಡುವುದು ಮತ್ತು ಜೀವದ ಮೋಹ-ರಾಗ-ದ್ವೇಷದ ನಿಮಿತ್ತತೆಯ ಮೇಲೆ ಭಾರಹಾಕುವ ಸಲುವಾಗಿ ಅವನ್ನು ಅಂತರಂಗ ಕಾರಣವೆಂದು ಹೇಳಿದೆ ಮತ್ತು ಯೋಗವನ್ನು ಬಹಿರಂಗ ಕಾರಣವೆಂದು ಹೇಳಿದೆ. ಕೇವಲಿಗೆ ಯೋಗವಿದ್ದರೂ ಕೂಡ ಭಾವಮೋಕ್ಷವನ್ನು ಹೇಳಿದೆ. ಅವರಿಗೆ ಇಷ್ಟ-ಅನಿಷ್ಟ ಪದಾರ್ಥಗಳ ನಿಮಿತ್ತದಿಂದ ಮೋಹ-ರಾಗ- ದ್ವೇಷಗಳಾಗುವುದಿಲ್ಲ. ಆ ಪದಾರ್ಥಗಳು ಜ್ಞಾನದ ಜ್ಞೇಯವಿವೆ. ದ್ರವ್ಯಕರ್ಮದ ನಿಜವಾದ ನಿಮಿತ್ತ ಕಾರಣವಂತೂ ಮೋಹ-ರಾಗ- ದ್ವೇಷಗಳಿರುವುದರಿಂದ ಅವನ್ನು ಅಂತರಂಗ ಕಾರಣವೆಂದು ಹೇಳಿದೆ ಮತ್ತು ಯೋಗವನ್ನು ಬಾಹ್ಯಕಾರಣವೆಂದು ಹೇಳಿದೆ.

ನಾಲ್ಕೂ ಗತಿಗಳು ದುಃಖದ ಆಗರವಿದೆ. ಸುಖವು ಶ್ರೀಮಂತಿಕೆಯಲ್ಲಿ, ಸ್ವರ್ಗದಲ್ಲಿ, ಭೋಗಭೂಮಿಯಲ್ಲಿ, ಮಹಾವಿದೇಹದಲ್ಲಿ ಇಲ್ಲ. ಅಜ್ಞಾನೀ ಜೀವನು ಪರದಲ್ಲಿ ಅಭಿರುಚಿ-ಮಾಡಿ ದುಃಖಿಯಾಗುತ್ತಲಿದ್ದಾನೆ. ಶರೀರದಲ್ಲಿ ಶ್ವಾಸ ನಡೆಯುವುದು, ಸ್ಪಂದನ-ಅಲುಗಾಟ ನಡೆಯುವುದು ಅದೆಲ್ಲವು ಜಡವಿದೆ. ಆತ್ಮನು ಅದರ ಅವಸ್ಥೆಯನ್ನು ಮಾಡುವ ಸಾಧ್ಯತೆಯಿಲ್ಲ, ಆದಾಗ್ಯೂ ಅಜ್ಞಾನೀ ಜೀವನು ಅದನ್ನು ತನ್ನದೆಂದು ಮನ್ನಿಸಿ ವಿರುದ್ಧ ಭಾವ ಮಾಡುತ್ತಾನೆ. ಜೀವನು

ಇಷ್ಟ-ಅನಿಷ್ಟ ಪದಾರ್ಥಗಳಲ್ಲಿ ಮೋಹ-ರಾಗ-ದ್ವೇಷ ಮಾಡುತ್ತಾನೆ ಅದು ಕರ್ಮ ಬಂಧದಲ್ಲಿ ಅಂತರಂಗ ಕಾರಣವಿದೆ ಮತ್ತು ಯೋಗವು ಬಹಿರಂಗ ಕಾರಣವಿದೆ.

**ಭಾವಾರ್ಥ :-** ಜೀವದ ಪ್ರದೇಶಗಳಲ್ಲಿ ಯೋಗದ ಮೂಲಕ ಕರ್ಮದ ಬರುವಿಕೆಯಾಗುತ್ತದೆ. ಪರಮಾಣುಗಳು ಪರಮಾಣುವಿನ ಕಾರಣದಿಂದ ಬರುತ್ತವೆ ಅದರಲ್ಲಿ ಯೋಗವು ನಿಮಿತ್ತವಿದೆ. ಮೊದಲು ಕಟ್ಟಿದ ಕರ್ಮಗಳ ನಿಮಿತ್ತ ಪಡೆದು ಆತ್ಮನ ಪ್ರದೇಶಗಳ ಕಂಪನವಾಗುತ್ತದೆ. ನಿಮಿತ್ತಗಳು ಕಂಪನ ಮಾಡಿಸುವುದಿಲ್ಲ. ಆತ್ಮನ ಯೋಗ್ಯತೆಯ ಕಾರಣದಿಂದ ಕಂಪನವಾಗುತ್ತದೆ ಅದರಲ್ಲಿ ಹಳೆಯ (ಮೊದಲಿನ) ಕರ್ಮಗಳು ನಿಮಿತ್ತವಿವೆ ಮತ್ತು ನವೀನ ಕರ್ಮದ ರಜಕಣಗಳು ಬರುತ್ತವೆ ಅವು ತಮ್ಮ ಕಾರಣದಿಂದ ಬರುತ್ತವೆ ಮತ್ತು ಜೀವದ ಪ್ರದೇಶಗಳಲ್ಲಿ ಬಂಧರೂಪದಿಂದ ಉಳಿಯುತ್ತವೆ ಅದನ್ನು ಬಂಧವೆಂದು ಹೇಳುತ್ತಾರೆ. ಈ ಬಂಧವು ಮೋಹನೀಯಕರ್ಮ ಸಂಯುಕ್ತವಿರುವ ಜೀವದ ಅಶುದ್ಧೋಪಯೋಗವಿಲ್ಲದೆ ಆಗುವುದಿಲ್ಲ. ಜೀವದ ಮಲಿನ ಪರಿಣಾಮವಿಲ್ಲದೆ ಬಂಧನವಾಗುವ ಸಾಧ್ಯತೆಯಿಲ್ಲ. ಒಂದುವೇಳೆ ಯೋಗದ ಮೂಲಕ ಬಂಧವಾಗುತ್ತಿದ್ದರೂ ಕೂಡ ಸ್ಥಿತಿ-ಅನುಭಾಗವಿಲ್ಲದೆ ನವೀನ ಕರ್ಮಗಳು ಹೆಸರಿಗೆ ಮಾತ್ರ ಗ್ರಹಣವಾಗುತ್ತವೆ; ಏಕೆಂದರೆ ಸ್ಥಿತಿ-ಅನುಭಾಗ ವಿಶೇಷ ಸಹಿತವಾಗಿರುವುದರ ಹೆಸರೇ ಬಂಧವಿದೆ. ಆದುದರಿಂದ ದ್ರವ್ಯಕರ್ಮಕ್ಕೆ ಯೋಗವು ಬಹಿರಂಗ ಕಾರಣವಿದೆ ಮತ್ತು ಅಂತರಂಗ ಕಾರಣವು ಜೀವದ ರಾಗ ಮೊದಲಾದ ಭಾವಗಳಿವೆಯೆಂಬುದು ನಿಶ್ಚಿತವಾಗುತ್ತದೆ. ಪ್ರದೇಶ ಕಂಪನವು ಜೀವದ ಉದಯಭಾವವಿದೆ, ಆದರೆ ಅದನ್ನು ವಿಶೇಷ ಭಾವವೆಂದು ಗಣಿಸಲಾಗಿಲ್ಲ, ರಾಗ-ದ್ವೇಷ-ಮೋಹವನ್ನು ಮುಖ್ಯ ಕಾರಣವೆಂದು ಹೇಳಲಾಗಿದೆ. ಮೋಹದ ಅಭಾವದಲ್ಲಿ ಯೋಗವು ಉಳಿಯುವುದಿಲ್ಲ, ಹೊರಟು ಹೋಗುತ್ತದೆ. ಅದಕ್ಕಾಗಿ ಮೋಹವನ್ನು ಅಂತರಂಗಕಾರಣವೆಂದು ಹೇಳಿದೆ ಮತ್ತು ಯೋಗವನ್ನು ಬಹಿರಂಗ ಕಾರಣವೆಂದು ಹೇಳಿದೆ.

ಈಗ ದ್ರವ್ಯಮಿಥ್ಯಾತ್ವ, ಮೊದಲಾದ-ಬಂಧದ ಬಹಿರಂಗ ಕಾರಣ ಹೇಳುತ್ತಾರೆ,-

**ಹೇದೂ ಚದುವ್ವಿಯಪ್ಪೋ ಅಟ್ಠವಿಯಪ್ಪಸ್ಸ ಕಾರಣಂ ಭಣಿದಂ ।**
**ತೇಸಿಂ ಪಿ ಯ ರಾಗಾದೀ ತೇಸಿಮಭಾವೇ ಣ ಬಜ್ಝಂತೀ ।।೧೪೯।।**

**ಚತುರ್ವಿಧಹೇತು ಅಷ್ಟವಿಧಕರ್ಮಗಳಿಗೆ ಕಾರಣವೆಂದು ಹೇಳಿದೆ ।**
**ಮತ್ತವಕೆ ರಾಗಾದಿಕಾರಣವಿದ್ದು, ರಾಗಾದಿ ಅಭಾವದಿಂ ಜೀವಬದ್ಧನಿಲ್ಲ ।।೧೪೯।।**

ಈ ಗಾಥೆಯು ಸಮಯಸಾರದ ೧೭೮ ನೇ ಗಾಥೆಯ ಹಾಗೆ ಇದೆ.

ಹಳೆಯ ದ್ರವ್ಯಕರ್ಮವು ದ್ರವ್ಯಮಿಥ್ಯಾತ್ವ, ಅಸಂಯಮ, ಕಷಾಯ, ಯೋಗ, ಆ ನವೀನ ಎಂಟು ಕರ್ಮಗಳಲ್ಲಿ ಕೂಡ ನಿಮಿತ್ತ ಕಾರಣವಾಗುತ್ತವೆ. ಮೋಹನೀಯ ಕರ್ಮ ಮತ್ತು ನಾಮಕರ್ಮವು ನವೀನ ಎಂಟು ಕರ್ಮಗಳ ಕಾರಣವಾಗುತ್ತದೆ. ನಾಲ್ಕು ಪ್ರತ್ಯಯಗಳ ಕಾರಣವು ಜೀವದ ಮೋಹ, ರಾಗ, ದ್ವೇಷ ಮೊದಲಾದ ವಿಭಾವಭಾವಗಳಿವೆ. ಜೀವದ ವಿಭಾವಭಾವಗಳಿಲ್ಲದಿದ್ದರೆ ಹಳೆಯ ಕರ್ಮಗಳ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತಿರಲಿಲ್ಲ. ಮೋಹ-ರಾಗ-ದ್ವೇಷದ ನಿಮಿತ್ತದಿಂದ ನವೀನ ಕರ್ಮಗಳು ಕಟ್ಟುತ್ತವೆ ಮತ್ತು ಅವುಗಳ ವಿನಾಶವಾಗುವುದರಿಂದ ನವೀನ ಕರ್ಮಗಳು ಕಟ್ಟುವುದಿಲ್ಲ.

ಜೀವನು ತನ್ನ ಸ್ವಭಾವವನ್ನು ಮರೆತು ಬಿಟ್ಟಿದ್ದಾನೆ. ಪರದಲ್ಲಿ ಸುಖದ ಬುದ್ಧಿಮಾಡಿ ಮೋಹ-ರಾಗ-ದ್ವೇಷ

ಮಾಡುತ್ತಾನೆ. ಅದರಿಂದ ಹಳೆಯ ಜಡಕರ್ಮದ ಉದಯವನ್ನು ನವೀನ ಕರ್ಮದಲ್ಲಿ ನಿಮಿತ್ತವೆಂದು ಹೇಳಲಾಗುತ್ತದೆ. ಪರತಂತ್ರತೆಯ ಮಾತು ಇಲ್ಲ, ಯಾವ ಪ್ರಕಾರ ಜ್ಞಾನಾವರಣೀಯದ ಉದಯವಿರುವಾಗ ಕೇವಲಜ್ಞಾನವಿರುವುದಿಲ್ಲ, ವೀರ್ಯಾಂತರಾಯದ ಉದಯವಿರುವಾಗ ಅನಂತವೀರ್ಯವಿರುವುದಿಲ್ಲ. ಜೀವದ ಯೋಗ್ಯತೆಯಿದ್ದರೆ ಕರ್ಮದ ಉದಯವು ನಿಮಿತ್ತವಿದೆ ಎರಡೂ ಸ್ವತಂತ್ರವಿದೆ. ಯಾವ ಪ್ರಕಾರ ಮೋಹ-ರಾಗ-ದ್ವೇಷ ಮಾಡಿದರೆ ನಾಲ್ಕು ಹಳೆಯ ಪ್ರತ್ಯಯಗಳನ್ನು ನಿಮಿತ್ತವೆಂದು ಹೇಳಲಾಗುತ್ತದೆ ಮತ್ತು ಅವನ್ನು ನವೀನ ಎಂಟು ಕರ್ಮಗಳ ಬಂಧನದಲ್ಲಿ ನಿಮಿತ್ತವೆಂದು ಹೇಳಲಾಗುತ್ತದೆ.

ಇದು ಬಂಧ ಅಧಿಕಾರವಿದೆ. ಆತ್ಮನು ತನ್ನ ಜ್ಞಾನಾನಂದ ಸ್ವಭಾವವನ್ನು ಮರೆತು ಮಿಥ್ಯಾತ್ವ, ರಾಗ, ದ್ವೇಷ, ಪ್ರಮಾದ, ಕಷಾಯ, ಯೋಗಗಳನ್ನು ಮಾಡುತ್ತಾನೆ ಅದನ್ನು ಭಾವಬಂಧವೆಂದು ಹೇಳಲಾಗುತ್ತದೆ. ಅದರ ನಿಮಿತ್ತ ಪಡೆದು ನವೀನ ದ್ರವ್ಯಕರ್ಮಗಳು ಕಟ್ಟುತ್ತವೆ ಅದು ದ್ರವ್ಯಬಂಧವಿದೆ. ಆ ಪರಮಾಣುಗಳು ತಮ್ಮ ಕಾರಣದಿಂದ ಕಟ್ಟುತ್ತವೆ. ಅದರಲ್ಲಿ ಅಂತರಂಗ ಕಾರಣವು ಜೀವದ ಮೋಹ-ರಾಗ-ದ್ವೇಷಗಳಿವೆ ಮತ್ತು ಜೀವದ ಪ್ರದೇಶಗಳ ಕಂಪನವು ಎಂದರೆ ಯೋಗವು ಬಹಿರಂಗ ಕಾರಣವಿದೆ. ಕೇವಲಿಗಳಿಗೆ ಏಕಾಕಿ ಕಂಪನವಿರುವುದರಿಂದ ಅವರಿಗೆ ಆಸ್ರವವಾಗುತ್ತದೆ, ಆದರೆ ಬಂಧವಾಗುವುದಿಲ್ಲ. ಕಂಪನವು ನಿಜವಾಗಿ ಬಂಧದ ಕಾರಣವಿಲ್ಲ, ಆದರೆ ತನ್ನ ಸ್ವಭಾವವನ್ನು ಮರೆತು ಆಗುತ್ತಿರುವಂಥ ದಯೆ-ದಾನಾದಿಗಳ ಪರಿಣಾಮವೇ ನಿಜವಾಗಿ ಬಂಧದ ಕಾರಣವಿದೆ.

ಜಡ ನವೀನ ಕರ್ಮವು ನಿಜವಾಗಿ ಬಂಧಿಸುತ್ತಿದ್ದರೆ ಅದು ತನ್ನ ಕಾರಣದಿಂದ ಮತ್ತು ಜಡಕರ್ಮದ ಸಲುವಾಗಿ ಕಂಪನ ಮತ್ತು ರಾಗ-ದ್ವೇಷಗಳೆರಡೂ ಬಹಿರಂಗ ಕಾರಣವಿದ್ದರೂ ಕಂಪನದ ಮುಖ್ಯತೆಯಿಲ್ಲ, ಗೌಣತೆಯಿರುವುದರಿಂದ ಅದನ್ನು ಬಹಿರಂಗ ಕಾರಣವೆಂದು ಹೇಳಿದೆ ಮತ್ತು ರಾಗ-ದ್ವೇಷಾದಿಗಳನ್ನು ಅಂತರಂಗ ಕಾರಣವೆಂದು ಹೇಳಿದೆ. ಈಗ ಈ ಗಾಥೆಯಲ್ಲಿ ಹಳೆಯ ಕರ್ಮದ ಉದಯವನ್ನು ಕೂಡ ನವೀನ ಕರ್ಮವು ಬಂಧಿಸುವಲ್ಲಿ ಬಹಿರಂಗ ಕಾರಣವಿದೆಯೆಂದು ಹೇಳಿದೆ. ಮಿಥ್ಯಾತ್ವ, ಅಸಂಯಮ, ಕಷಾಯ ಇವು ಮೋಹಕರ್ಮದಲ್ಲಿ ಬರುತ್ತವೆ, ಮತ್ತು ಯೋಗವು ನಾಮಕರ್ಮದಲ್ಲಿ ಬರುತ್ತದೆ, ಎಂದರೆ ಹಳೆಯ ಮೋಹಕರ್ಮ ಮತ್ತು ನಾಮಕರ್ಮದ ಉದಯವು ನವೀನ ಜ್ಞಾನಾವರಣೀಯ ಮೊದಲಾದ ಎಂಟು ಕರ್ಮಗಳಲ್ಲಿ ಬಹಿರಂಗ ಕಾರಣವಿದೆಯೆಂದು ಈ ಗಾಥೆಯಲ್ಲಿ ತಿಳಿಸಿಕೊಡುವುದಿದೆ. ಎಂಟು ಕರ್ಮಗಳು ಬಂಧಿಸುತ್ತಿದ್ದರೆ ತಮ್ಮ ಕಾರಣದಿಂದ ಬಂಧಿಸುತ್ತವೆ, ಆದರೆ ೧೪೮ನೇ ಗಾಥೆಯಲ್ಲಿ ಎರಡು ನಿಮಿತ್ತ ಕಾರಣಗಳಲ್ಲಿ ರಾಗ-ದ್ವೇಷಗಳನ್ನು ಅಂತರಂಗ ಕಾರಣ ಮತ್ತು ಯೋಗವನ್ನು ಬಹಿರಂಗ ಕಾರಣವೆಂದು ಹೇಳಿರುವಂತೆ ಈ ಗಾಥೆಯಲ್ಲಿ ಹಳೆಯ ಮೋಹನೀಯ ಮತ್ತು ನಾಮಕರ್ಮದ ಉದಯವನ್ನು ಕೂಡ ಬಹಿರಂಗ ಕಾರಣವೆಂದು ಹೇಳಲಾಗಿದೆ.

ದ್ರವ್ಯಸಂಗ್ರಹದಲ್ಲಿ ನಿಶ್ಚಯ ಕರ್ತೃ ಮತ್ತು ವ್ಯವಹಾರ ಕರ್ತೃವಿನ ಮಾತು ಬಂದಿದೆ, ಅದರ ವಿಷಯವಾಗಿ ಹೀಗೆ ಸ್ಪಷ್ಟಪಡಿಸಲಾಗುತ್ತದೆ.

೧) ಜೀವನು ತನ್ನ ಪರ್ಯಾಯದಲ್ಲಿ ವಿಕಾರ ಮತ್ತು ಯೋಗ ಮಾಡುತ್ತಾನೆ, ಅದರ ಕರ್ತೃವು ಜೀವನು ಅಶುದ್ಧ ನಿಶ್ಚಯನಯದಿಂದ ಇದ್ದಾನೆ. ಜೀವನು ವಿಕಾರ ಮಾಡಿದರೆ ಹಳೆಯ ಕರ್ಮದ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆದುದರಿಂದ ಮೋಹನೀಯ ಮೊದಲಾದ ಹಳೆಯ ಕರ್ಮಗಳು ಜೀವದ ವಿಕಾರಾದಿ ಪರಿಣಾಮಗಳ ಕರ್ತೃವು ವ್ಯವಹಾರದಿಂದಿವೆ. ಅದು ನಿಮಿತ್ತವಿರುವುದರಿಂದ ವ್ಯವಹಾರದಿಂದ ಕರ್ತೃವೆಂದು ಹೇಳಲಾಗುವುದು.

೨) ನವೀನ ದ್ರವ್ಯಕರ್ಮಗಳು ಕಟ್ಟುತ್ತವೆ ಅವುಗಳ ಕರ್ತೃವು ನಿಶ್ಚಯದಿಂದ ಸ್ವಯಂ ಪರಮಾಣುಗಳಿವೆ ಮತ್ತು ಜೀವದ

ರಾಗ-ದ್ವೇಷಗಳು ಅದರಲ್ಲಿ ನಿಮಿತ್ತವಿವೆ. ಆದುದರಿಂದ ರಾಗ-ದ್ವೇಷಗಳನ್ನು ವ್ಯವಹಾರದಿಂದ ನವೀನ ದ್ರವ್ಯಕರ್ಮದ ಕರ್ತೃವೆಂದು ಹೇಳಲಾಗುವುದು.

ಪ್ರತಿಯೊಂದು ವಸ್ತುವನ್ನು ಸ್ವತಂತ್ರವೆಂದು ತಿಳಿಸಿ, ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡಲಾಗಿದೆ. ಜಡ ಕರ್ಮಗಳು ಜಡಕರ್ಮದಿಂದ ಕಟ್ಟಲ್ಪಡುತ್ತವೆ, ರಾಗ-ದ್ವೇಷಗಳು ತಮ್ಮ ಕಾರಣದಿಂದ ಇವೆ. ರಾಗ-ದ್ವೇಷಗಳು ಸ್ವತಂತ್ರವಾಗಿ ಆಗುತ್ತವೆ ಕರ್ಮವು ಮಾಡಿಸುವುದಿಲ್ಲ. ವರ್ತಮಾನ ಸ್ವತಂತ್ರತೆಯನ್ನು ಮನ್ನಿಸದವನಿಗೆ ತ್ರಿಕಾಲೀ ಸ್ವಭಾವವನ್ನು ಸ್ವತಂತ್ರವೆಂದು ಮನ್ನಿಸುವುದರ ಪ್ರಸಂಗವೇ ಉಳಿಯುವುದಿಲ್ಲ. ನವೀನ ಕರ್ಮವು ಬಂಧಿಸುತ್ತದೆ ಅದರಲ್ಲಿ ಕಂಪನ ಮತ್ತು ಹಳೆಯ ಕರ್ಮಗಳು ಗೌಣ ಕಾರಣವಿವೆ. ಮುಖ್ಯ ಕಾರಣವಂತೂ ರಾಗ-ದ್ವೇಷಗಳಿವೆ. ಆ ರಾಗ-ದ್ವೇಷಾದಿಗಳು ನಿನ್ನ ಸ್ವರೂಪವಿಲ್ಲ ನೀನು ಚೈತನ್ಯಸ್ವಭಾವಿಯಿರುವೆನೆಂದು ಭೇದವಿಜ್ಞಾನ ಮಾಡು.

**ಭಾವಾರ್ಥ :-** ಜ್ಞಾನಾವರಣೀಯ ಮೊದಲಾದ ಎಂಟು ಪ್ರಕಾರದ ನವೀನ ಕರ್ಮಬಂಧದ ಗೌಣ ಕಾರಣವು ಹಳೆಯ ಕರ್ಮ ಎಂದರೆ ಮಿಥ್ಯಾತ್ವ (ದರ್ಶನಮೋಹ), ಅಸಂಯಮ ಮತ್ತು ಕಷಾಯ (ಚಾರಿತ್ರಮೋಹ) ಮತ್ತು ಯೋಗ (ಎಂದರೆ ನಾಮಕರ್ಮ)ವೆಂದು ಇವು ನಾಲ್ಕು ಪ್ರಕಾರದ ದ್ರವ್ಯಪ್ರತ್ಯಯಗಳಿವೆ ಅಜ್ಞಾನೀ ಜೀವನು ಮಿಥ್ಯಾಭಾವ ಮಾಡುತ್ತಾನೆ. ಶರೀರದ ಕ್ರಿಯೆಯನ್ನು ನಾನು ಮಾಡುತ್ತೇನೆ. ಹಣ ನಾನು ಖರ್ಚು ಮಾಡುವೆನು, ಪರದ ಮೇಲೆ ದಯೆ ಮಾಡಿದೆನೆಂದು ಮಿಥ್ಯಾಭ್ರಾಂತಿ ಮಾಡುತ್ತಾನೆ. ಅದರಲ್ಲಿ ಹಳೆಯ ಕರ್ಮದ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ರಾಯರೇ ! ಕರ್ಮದ ಉದಯವು ಬಂದ ಮೇಲೆ ರಾಗ-ದ್ವೇಷಗಳನ್ನು ಮಾಡಲೇಬೇಕಾಗುತ್ತದೆಯೆಂದು ಅಜ್ಞಾನೀ ಜೀವನು ಹೇಳುತ್ತಾನೆ, ಆದರೆ ಅವನಿಗೆ ವಸ್ತುಸ್ವರೂಪದ ಅರಿವಿಲ್ಲ. ಜಡ ಕರ್ಮಗಳು ಜೀವವನ್ನು ಸುತ್ತಾಡಿಸುವುದಿಲ್ಲ. ಸ್ವಯಂ ವಿಕಾರ ಮಾಡಿದರೆ ಸುತ್ತಾಡಬೇಕಾಗುತ್ತದೆ. ವಿಕಾರವು ಆತ್ಮನ ನಿಜವಾದ ಸ್ವರೂಪವಲ್ಲವೆಂದು ಜ್ಞಾನಮಾಡಿಕೊಂಡರೆ ಧರ್ಮವಾಗುತ್ತದೆ, ಆದರೆ ಯಾರು ಜ್ಞಾನಮಾಡಿಕೊಳ್ಳುವುದಿಲ್ಲ ಮತ್ತು ನವೀನ ಕರ್ಮ ಕಟ್ಟುತ್ತದೆ ಅದರ ಕಾರಣವನ್ನಿಲ್ಲಿ ತಿಳಿಸಿಕೊಟ್ಟಿದ್ದಾರೆ.

ಯಾವ ಪ್ರಕಾರ ಸಮ್ಯಗ್ದರ್ಶನವಾಗುವಲ್ಲಿ ಸ್ವಯಂ ತಾನೇ ನಿಜವಾದ ಕಾರಣನಿದ್ದಾನೆ ಮತ್ತು ಅದರಲ್ಲಿ ಜ್ಞಾನೀ ಪುರುಷನು ಅದರಂತೆ ಭಗವಂತರ ವಾಣಿ ಹೀಗೆ ಎರಡೂ ಬಹಿರಂಗ ಕಾರಣವಿವೆ, ಆದರೆ ಇವೆರಡು ನಿಮಿತ್ತಕಾರಣಗಳಲ್ಲಿ ಅಂತರ ತಿಳಿಸುವ ಸಲುವಾಗಿ ಜ್ಞಾನೀ ಪುರುಷನ ಮಹಿಮೆಯನ್ನು ತೋರಿಸುವ ಸಲುವಾಗಿ ಅವನನ್ನು ಅಂತರಂಗ ಕಾರಣವೆಂದು ಹೇಳಿದೆ ಮತ್ತು ವಾಣಿಯನ್ನು ಬಹಿರಂಗ ಕಾರಣವೆಂದು ಹೇಳಿದೆ, ಅದೇ ಪ್ರಕಾರ ನವೀನ ಎಂಟು ಕರ್ಮಗಳು ಬಂಧಿಸುತ್ತವೆ ಅದರಲ್ಲಿ ನಿಜವಾಗಿ ಪುದ್ಗಲ ಪರಮಾಣುಗಳೇ ತಮ್ಮ ಕಾರಣದಿಂದ ಬಂಧಿಸುತ್ತವೆ ಮತ್ತು ಅದರಲ್ಲಿ ಯೋಗ ಹಾಗೂ ಮೋಹ-ರಾಗ-ದ್ವೇಷ ಇವೆರಡೂ ನಿಮಿತ್ತ ಕಾರಣವಿವೆ, ಆದರೆ ರಾಗ-ದ್ವೇಷ ಮೊದಲಾದ ಪರಿಣಾಮಗಳ ಮೇಲೆ ಭಾರ ಹಾಕುವ ಸಲುವಾಗಿ ಅವನ್ನು ಅಂತರಂಗ ಕಾರಣವೆಂದು ಹೇಳಿದೆ ಮತ್ತು ಕಂಪನವನ್ನು ಬಹಿರಂಗ ಕಾರಣವೆಂದು ಹೇಳಿದೆ. ಈಗ ಈ ಗಾಥೆಯಲ್ಲಿ ಹಳೆಯ ಕರ್ಮಗಳ ಉದಯವು ನವೀನ ಕರ್ಮದಲ್ಲಿ ಗೌಣ-ಬಹಿರಂಗ ಕಾರಣವಿದೆಯೆಂದು ಹೇಳಿದೆ. ಜೀವನು ಸ್ವಯಂ ರಾಗ-ದ್ವೇಷಾದಿ ಪರಿಣಾಮಗಳನ್ನು ಮಾಡುತ್ತಾನೆ ಆಗ ಹಳೆಯ ಕರ್ಮಗಳ ಉದಯವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆದುದರಿಂದ ಹಳೆಯ ಕರ್ಮಗಳನ್ನು ಹೊಸ ಕರ್ಮಗಳಲ್ಲಿ ಕೂಡ ಗೌಣ ನಿಮಿತ್ತ ಕಾರಣವೆಂದು ಹೇಳಲಾಗಿದೆ. ಹಳೆಯ ದ್ರವ್ಯಪ್ರತ್ಯಯಗಳ ಕಾರಣವು ರಾಗ-ದ್ವೇಷಾದಿಗಳ ಪರಿಣಾಮವಿವೆ. ಆದುದರಿಂದ ನವೀನ ದ್ರವ್ಯಕರ್ಮಬಂಧದ ಕಾರಣವು ಹಳೆಯ ಕರ್ಮವಿದೆ

ಮತ್ತು ಅದರ ಕಾರಣವು ರಾಗಾದಿಗಳ ಭಾವವಿದೆ.

ಏಕೆಂದರೆ ರಾಗ-ದ್ವೇಷ ಮೊದಲಾದ ಪರಿಣಾಮಗಳ ಅಭಾವವಿರುವಾಗ ದ್ರವ್ಯಮಿಥ್ಯಾತ್ವ, ಅಸಂಯಮ, ಕಷಾಯ ಮತ್ತು ಯೋಗ-ಇವು ನಾಲ್ಕು ಹಳೆಯ ದ್ರವ್ಯಕರ್ಮಗಳ ಉದಯವಿದ್ದರು ಕೂಡ ಜೀವನಿಗೆ ಬಂಧವಾಗುವುದಿಲ್ಲ.

ನೋಡಿರಿ! ಇಲ್ಲಿ ಬೇರೆ ಪ್ರಕಾರದ ಶೈಲಿಯನ್ನು ಸ್ವೀಕರಿಸಿದ್ದಾರೆ. ಮೋಹ-ರಾಗ-ದ್ವೇಷ ಮೊದಲಾದ ಪರಿಣಾಮಗಳಿರುವುದಿಲ್ಲ ಆಗ ಆಯಾ ಕರ್ಮದ ಉದಯವು ಕೂಡ ಇರುವುದಿಲ್ಲ. ಏಕೆಂದರೆ ಜೀವನು ಸಮ್ಯಗ್ದರ್ಶನ ಪಡೆಯುತ್ತಾನೆ ಆಗ ದರ್ಶನಮೋಹನೀಯ ಕರ್ಮದ ಉದಯವು ಇರುವುದೇ ಇಲ್ಲ ಮತ್ತು ವೀತರಾಗತೆ ಪಡೆಯುತ್ತಾನೆ ಆಗ ಚಾರಿತ್ರಮೋಹನೀಯ ಕರ್ಮದ ಉದಯವು ಇರುವುದೇ ಇಲ್ಲ. ಆದಾಗ್ಯೂ ಮೋಹ-ರಾಗ-ದ್ವೇಷಾದಿಗಳ ಅಭಾವದ ಸಮಯದಲ್ಲಿ ನಾಲ್ಕು ದ್ರವ್ಯಕರ್ಮಗಳ ಉದಯವನ್ನು ಹೇಗೆ ಹೇಳಿದೆ ? 'ನಾಲ್ಕು ಪ್ರತ್ಯಯಗಳು ಇರುತ್ತಿರುವಾಗ' ಎಂದು ಹೇಗೆ ಹೇಳಿದೆ ? ಯಾವ ನಾಲ್ಕು ದ್ರವ್ಯಪ್ರತ್ಯಯಗಳನ್ನು ಹೇಳಿದೆ ಅವುಗಳ ಸತ್ತಾದ ಮಾತು ಇಲ್ಲ, ಆದರೂ ಅವುಗಳ ಉದಯದ ಮಾತು ಇದೆಯೆಂದು ಹೇಗೆ ಹೇಳಿದೆ ?

**ಅಜ್ಞಾನೀ ಜೀವನು ಇದರ ಮೇಲಿಂದ ತರ್ಕ ತೆಗೆಯುವುದೇನೆಂದರೆ** ''ಜೀವನು ಸಮ್ಯಗ್ದರ್ಶನ ಪಡೆದಿರುವುದು ಮತ್ತು ಅವನಿಗೆ ದರ್ಶನಮೋಹನೀಯ ಕರ್ಮದ ಉದಯವು ಉಳಿದುಕೊಂಡಿರುವುದು ! ಅದರಂತೆ ಮಿಥ್ಯಾದರ್ಶನದ ಉದಯವಿರುವುದು ಮತ್ತು ಜೀವನು ಸಮ್ಯಗ್ದರ್ಶನ ಪಡೆದುಕೊಂಡಿರುವುದು ! ಇಂಥ ಉದಾಹರಣೆಯನ್ನು ತೋರಿಸಿರಿ'' ಎಂದು ಅಜ್ಞಾನೀ ಜೀವನು ಈ ಬರವಣಿಗೆಯ ಮೇಲಿಂದ ತರ್ಕ ತೆಗೆಯುತ್ತಾನೆ ಮತ್ತು ಹೇಳುವುದೇನೆಂದರೆ ಜೀವನು ಸಮ್ಯಗ್ದರ್ಶನ ಪಡೆದಿರುವಾಗ ದರ್ಶನಮೋಹದ ಉದಯವು ಇರುವುದಿಲ್ಲ ಮತ್ತು ದರ್ಶನಮೋಹದ ಉದಯವಿರುವಾಗ ಸಮ್ಯಗ್ದರ್ಶನವು ಇರುವುದಿಲ್ಲ. -ಎಂಬುದಾಗಿ ತರ್ಕ ಮಾಡುತ್ತಾನೆ ಅದರ ಸ್ಪಷ್ಟತೆಯು ಹೀಗಿದೆ.

ಇಲ್ಲಿ ಜೀವನು ಚೈತನ್ಯಸ್ವಭಾವದ ಕಡೆಗೆ ಪ್ರವೃತ್ತನಾಗಿದ್ದಾನೆ, ಅದರ ಮೇಲೆ ಒತ್ತುಕೊಡುವುದಿದೆ. ಎಲ್ಲ ಪ್ರಕಾರದ ಆಶಯವನ್ನು ತಿಳಿದುಕೊಳ್ಳಬೇಕಾಗುವುದು. ಆತ್ಮನು ಪರಪದಾರ್ಥಗಳಿಂದ ಮತ್ತು ವಿಕಾರದಿಂದ ಬೇರೆಯಿದ್ದಾನೆಂಬ ಅರಿವಿನೊಡನೆ ಸ್ವಭಾವದ ಅಭಿರುಚಿ ಮಾಡಿ ತನ್ನ ಕಡೆಗೆ ಪ್ರವೃತ್ತನಾಗಿ ಸಮ್ಯಗ್ದರ್ಶನ ಪ್ರಕಟಪಡಿಸಿಕೊಂಡಿದ್ದಾನೆ ಅವನಿಗೆ ದರ್ಶನಮೋಹನೀಯಕರ್ಮದ ಪರಮಾಣುಗಳು ಉದಯದಲ್ಲಿ ಇರುವುದೇ ಇಲ್ಲ. ಆದರೂ ಇಲ್ಲಿ ಹಳೆಯ ದ್ರವ್ಯಪ್ರತ್ಯಯಗಳು ಇದ್ದರೂ ಕೂಡ ಅವು ಜ್ಞಾನಿಗೆ ನವೀನ ಬಂಧದ ಕಾರಣವಾಗುವುದಿಲ್ಲವೆಂದು ಹೇಳಿ ಸ್ವಭಾವದ ಪುರುಷಾರ್ಥವನ್ನು ತಿಳಿಸಿ ಕೊಡುವುದಿದೆ. ನೀನು ನಿನ್ನ ಸ್ವಭಾವದ ಕಡೆಗೆ ಪ್ರವೃತ್ತವಾದ ನಂತರ ಬೇಕಾದರೆ ಮಿಥ್ಯಾತ್ವ, ಅಸಂಯಮ, ಕಷಾಯ, ಯೋಗವೆಂಬ ನಾಲ್ಕು ದ್ರವ್ಯಪ್ರತ್ಯಯಗಳ ಉದಯವಿದ್ದರೂ ಕೂಡ ನವೀನ ಬಂಧನವಾಗುವುದಿಲ್ಲವೆಂದು ಹೇಳಿ ನವೀನ ಬಂಧನದ ಸಂಬಂಧವು ರಾಗ-ದ್ವೇಷ ಮೊದಲಾದವುಗಳ ಜತೆಯಲ್ಲಿ ಇದೆ ಆದರೆ ಹಳೆಯ ಪ್ರತ್ಯಯಗಳ ಜತೆಯಲ್ಲಿ ಇಲ್ಲವೆಂದು ಹೇಳುವುದರ ಭಾವವಿದೆ, ಅಭಿಪ್ರಾಯವಿದೆ.

ಗೊಮ್ಮಟಸಾರದಲ್ಲಿ ಈ ಪ್ರಕಾರ ಬರವಣಿಗೆಯಿಲ್ಲ. ಅಲ್ಲಿಯಂತೂ ಹೇಗೆ ಕರ್ಮದ ಅವಸ್ಥೆಯಿರುವುದು ಆ ಪ್ರಕಾರ ಹೇಳಲಾಗಿದೆ. ಜೀವನಿಗೆ ಸಮ್ಯಗ್ದರ್ಶನವಾಗುತ್ತದೆ ಆಗ ದರ್ಶನಮೋಹದ ಪರಮಾಣುಗಳು ಉದಯದಲ್ಲಿ ಬರುವವಿದ್ದವು, ಅವನ್ನು ತಿರುವು ಮುರುವು ಮಾಡಿದೆಯೆನ್ನುವುದು ಕೂಡ ವ್ಯವಹಾರವಿದೆ. ಇಲ್ಲಿ ಸ್ವಭಾವದಲ್ಲಿ ರುಚಿ ಮಾಡುವುದು ಆಗ ದರ್ಶನಮೋಹದ ಪರಮಾಣುಗಳು ಉದಯದಲ್ಲಿ ಬರುವ ಸಾಧ್ಯತೆಯಿಲ್ಲ.

ಇಲ್ಲಿ ಮಿಥ್ಯಾತ್ವ ಮೊದಲಾದವುಗಳ ಉದಯವಿದ್ದರೂ ಕೂಡ ಜ್ಞಾನಿಗೆ ಕರ್ಮವು ಕಟ್ಟುವುದಿಲ್ಲವೆಂದು ಹೇಳುವ ಆಶಯವಿದೆ, ಎಂದರೆ ಇಲ್ಲಿ ಜೀವದ ಪುರುಷಾರ್ಥವನ್ನು ಸಿದ್ಧ ಮಾಡುವುದಿದೆ. ಮೊದಲಿನಿಂದ ಪುರುಷಾರ್ಥವಿದೆ ಮತ್ತು ಸ್ವಭಾವದ ಕಡೆಗೆ ವಿಸ್ತರಿಸಲ್ಪಟ್ಟಿದೆ ಅವನಿಗೆ ಕರ್ಮವು ಕಟ್ಟುವುದಿಲ್ಲವೆಂದು ಹೇಳಿ ಮತ್ತೆ ಏನು ಹೇಳುವುದಿದೆಯೆಂದರೆ-ಯೋಗ ಮತ್ತು ಹಳೆಯ ಜಡಕರ್ಮ ಇವೆರಡು ಬಹಿರಂಗ ಕಾರಣಗಳು ವಿದ್ಯಮಾನವಿದ್ದರೂ ಕೂಡ ಅಂತರಂಗ ಕಾರಣವಾದ ಯಾವ ರಾಗ, ದ್ವೇಷಗಳಿವೆ ಅವು ಇಲ್ಲದಿರುವುದರಿಂದ ಕರ್ಮವು ಕಟ್ಟುವುದಿಲ್ಲ, ಎಂದರೆ ಮುಖ್ಯ ಕಾರಣಗಳ ಅಭಾವವಾಗಿ ಹೋಗಿದೆ ಅವನಿಗೆ ಬಹಿರಂಗ ಕಾರಣಗಳು ಇದ್ದರೂ ಕೂಡ ಕರ್ಮವು ಕಟ್ಟುವುದಿಲ್ಲ, ಯಾವ ಜೀವನು ಚೈತನ್ಯ ಸ್ವಭಾವದ ಅವಲಂಬನೆ ತೆಗೆದುಕೊಂಡಿದ್ದಾನೆ ಅವನಿಗೆ ಯೋಗ ಹಾಗೂ ಜಡಕರ್ಮಗಳು ಇದ್ದರೂ ಕೂಡ ನವೀನ ಕರ್ಮಗಳ ಬಂಧವಾಗುವುದಿಲ್ಲ.

ಸ್ವಭಾವದ ದೃಷ್ಟಿಯು ಹೊರಟುಹೋದರೆ ಬಂಧನವಿದೆ ಮತ್ತು ಸ್ವಭಾವದ ದೃಷ್ಟಿ ಮಾಡಿದರೆ ಬಂಧನವಿಲ್ಲವೆಂದು ತಿಳಿದು ನಿಜಪರ್ಯಾಯದಲ್ಲಿ ಆಗುವ ಯೋಗದ ಕಂಪನ ಹಾಗೂ ಹಳೆಯ ದ್ರವ್ಯಕರ್ಮದ ಉದಯವು ಬಹಿರಂಗ ಕಾರಣವಿದೆ ಅದನ್ನು ಹಾರಿಸಿಬಿಟ್ಟರೆ ನಂತರ ದೇಹ, ವಾಣಿ ಮೊದಲಾದ ಹೊಸ ಕರ್ಮದಲ್ಲಿ ನಿಮಿತ್ತವಾಗುತ್ತದೆ ಯೆಂಬುದಾಗಿ ಆಗುವ ಸಾಧ್ಯತೆಯೇ ಇಲ್ಲ.

ಜೀವನು ರಾಗ-ದ್ವೇಷ ಮಾಡಿದರೆ ಕರ್ಮಬಂಧದಲ್ಲಿ ಬಹಿರಂಗ ಕಾರಣದ ಆರೋಪವು ಜಡಕರ್ಮದ ಉದಯದ ಮೇಲೆ ಮತ್ತು ಯೋಗದ ಕಂಪನದ ಮೇಲೆ ಬರುತ್ತದೆ, ಆದರೆ ಧನ, ದೇಹದ ಕ್ರಿಯೆ ಅಥವಾ ಬೇರೆ ನೋಕರ್ಮದ ಮೇಲೆ ಆರೋಪವು ಬರುವುದಿಲ್ಲ.

ಸಾಮಾನ್ಯ ರೀತಿಯಿಂದ ಮುಖ್ಯವು ಅದು ನಿಶ್ಚಯ ಮತ್ತು ಗೌಣವು ಅದು ವ್ಯವಹಾರವೆಂದು ಅರ್ಥವಿರುತ್ತದೆ, ಅದನ್ನು ಇಲ್ಲಿ ಸ್ವೀಕರಿಸಿಲ್ಲ. ಇಲ್ಲಿ ಅಜ್ಞಾನ-ರಾಗ-ದ್ವೇಷಗಳನ್ನು ಮುಖ್ಯ ಕಾರಣವೆಂದು ಹೇಳಲಾಗಿದೆ, ಆದರೆ ಅದು ಉಪಾದಾನ ಕಾರಣವಲ್ಲ. ಉಪಾದಾನ ಕಾರಣವಂತೂ ಸ್ವಯಂ ಜಡ ಪುದ್ಗಲ ಪರಮಾಣುಗಳೇ ಇವೆ. ರಾಗ-ದ್ವೇಷ ಮೊದಲಾದವುಗಳೆಲ್ಲವು ನಿಮಿತ್ತ ಕಾರಣಗಳಿವೆ, ಆದರೆ ನಿಮಿತ್ತ ಕಾರಣಗಳಲ್ಲಿ ಭೇದ ತಿಳಿಸುವ ಸಲುವಾಗಿ ರಾಗ-ದ್ವೇಷಗಳನ್ನು ಮುಖ್ಯ ಕಾರಣವೆಂದು ಹೇಳಿದೆ ಮತ್ತು ಯೋಗ ಹಾಗೂ ಹಳೆಯ ಕರ್ಮಗಳನ್ನು ಗೌಣ ಕಾರಣವೆಂದು ಹೇಳಲಾಗಿದೆ.

ಈ ಪ್ರಕಾರ ಬಂಧಪದಾರ್ಥದ ವ್ಯಾಖ್ಯಾನವು ಪೂರ್ಣವಾಯಿತು.

ಈಗ ಮೋಕ್ಷಪದಾರ್ಥದ ವಾಖ್ಯಾನ ಮಾಡಲಾಗುತ್ತದೆ. ಅದರಲ್ಲಿ ಮೊದಲು ದ್ರವ್ಯಮೋಕ್ಷದ ಕಾರಣ ಪರಮ ಸಂವರರೂಪ ಮೋಕ್ಷದ ಸ್ವರೂಪವನ್ನು ಹೇಳುತ್ತಾರೆ -

**ಹೇದುಮಭಾವೇ ಣಿಯಮಾ ಜಾಯದಿ ಣಾಣಿಸ್ಸ ಆಸವಣಿರೋಧೋ ।**
**ಆಸವಭಾವೇಣ ವಿಣಾ ಜಾಯದಿ ಕಮ್ಮಸ್ಸದು ಣಿರೋಧೋ ॥೧೫೦॥**

**ಕಮ್ಮಸ್ಸಾಭಾವೇಣ ಯ ಸವ್ವಣ್ಹೂ ಸವ್ವಲೋಗದರಸೀ ಯ ।**
**ಪಾವದಿ ಇಂದಿಯರಹಿದಂ ಅವ್ವಾಬಾಹಂ ಸುಹಮಣಂತಂ ॥೧೫೧॥**

**ಹೇತುವಿನಭಾವದಿಂ ಜ್ಞಾನಿಗೆ ನಿಯಮದಿಂದಾಸ್ರವ ನಿರೋಧವಾಗುವುದು ।**
**ಮತ್ತದರಂತೆ ಆಸ್ರವ ಭಾವದಭಾವದಿಂ ಕರ್ಮದ ನಿರೋಧವಾಗುವುದು ॥೧೫೦॥**
**ಕರ್ಮಗಳಭಾವವಾಗುವುದರಿಂದ ಸರ್ವಜ್ಞ-ಸರ್ವಲೋಕದರ್ಶಿಯಾಗುತ್ತ ।**
**ಒರ್ಮೆಯೇ ಇಂದ್ರಿಯಗಳಿಲ್ಲದ, ಅವ್ಯಾಬಾಧ, ಅನಂತಸುಖ ಪಡೆಯುವನು ॥೧೫೧॥**

ದಯೆ ದಾನಾದಿಗಳ ಪರಿಣಾಮವು ನನ್ನ ಸ್ವರೂಪವಿಲ್ಲ, ಶರೀರವು ನನ್ನದಿಲ್ಲ, ಅದರಿಂದ ನನಗೆ ಲಾಭ-ಹಾನಿಗಳಿಲ್ಲ. ನಾನಂತೂ ಜ್ಞಾನಾನಂದ ಸ್ವರೂಪನಿದ್ದೇನೆಂದು ಮನ್ನಿಸುವಂಥವನು ಭೇದಜ್ಞಾನಿಯಿದ್ದಾನೆ. ಅವನಿಗೆ ಶ್ರಾವಕತನ ಅಥವಾ ಮುನಿತನವು ಪ್ರಕಟವಾಗುವ ಸಾಧ್ಯತೆಯಿದೆ. ಅವನಿಗೆ ಎಷ್ಟು ಸ್ವಸಂವೇದನ ಜ್ಞಾನವು ಪ್ರಕಟವಾಗಿದೆ, ಅಂತರ್ಯದಲ್ಲಿ ಏಕಾಗ್ರನಿದ್ದಾನೆ ಅಷ್ಟು ಆಸ್ರವಭಾವವು ಆಗುವುದಿಲ್ಲ ಮತ್ತು ಸರ್ವಥಾ ರಾಗ-ದ್ವೇಷದ ಪರಿಣಾಮಗಳ ಅಭಾವವಾಗುವುದರಿಂದ ಕರ್ಮದ ಆಸ್ರವವಾಗುವುದಿಲ್ಲ. ತಾನು ತನ್ನ ಸ್ವಭಾವದ ಕಡೆಗೆ ಪ್ರವೃತ್ತನಾಗಿರುವುದರಿಂದ ರಾಗ-ದ್ವೇಷಗಳಾಗುವುದಿಲ್ಲ, ನವೀನ ಕರ್ಮಗಳು ಕಟ್ಟುವುದಿಲ್ಲ ಮತ್ತು ಹಳೆಯ ಕರ್ಮಗಳು-ಜ್ಞಾನಾವರಣಾದಿಗಳು ತಮ್ಮ ಕಾರಣದಿಂದ ನಾಶಹೊಂದುತ್ತವೆ. ಆದುದರಿಂದ ಸರ್ವಜ್ಞ ದೆಶೆಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಮೊದಲು ಜ್ಞಾನವು ರಾಗ-ದ್ವೇಷಗಳಲ್ಲಿ ನಿಂತುಕೊಳ್ಳುತ್ತಿತ್ತು ಮತ್ತು ಬಂಧವಾಗುತ್ತಿತ್ತು. ಈಗ ಆ ಜ್ಞಾನವು ರಾಗ-ದ್ವೇಷಗಳಲ್ಲಿ ನಿಂತುಕೊಳ್ಳುವುದಿಲ್ಲ, ಆದರೆ ಸ್ವಭಾವದಲ್ಲಿ ಏಕಾಗ್ರವಾಗುವುದರಿಂದ ಸರ್ವಜ್ಞದಶೆಯು ಪ್ರಕಟವಾಗುತ್ತದೆ ಮತ್ತು ಮೂರು ಕಾಲ ಮೂರು ಲೋಕಗಳ ಪದಾರ್ಥಗಳನ್ನು ಏಕಕಾಲದಲ್ಲಿ ತಿಳಿದುಕೊಳ್ಳುತ್ತಾನೆ ಮತ್ತು ನೋಡುತ್ತಾನೆ. ಅವನು ಇಂದ್ರಿಯಗಳ ಆಧೀನತೆ ಮೊದಲಾದ ಬಾಧೆಯಿಂದ ರಹಿತನಾಗಿ ಅಪರಿಮಿತ ಆತ್ಮಿಕ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಗವಂತರು ಸುಖದ ಸಲುವಾಗಿ ನೀರು ಕುಡಿಯಲಿಲ್ಲ, ಆಹಾರ ತೆಗೆದುಕೊಳ್ಳಲಿಲ್ಲ, ಚಾರಿತ್ರದಲ್ಲಿ ಬಹಳಷ್ಟು ದುಃಖ ಭೋಗಿಸಿದರೆಂದು ಜನರು ಆಡಿಕೊಳ್ಳುತ್ತಾರೆ; ಆದರೆ ಈ ಮಾತುಗಳು ಪೂರ್ಣ ಅಸತ್ಯವಿವೆ. ಚಾರಿತ್ರವು ದುಃಖದಾಯಕವಿಲ್ಲ, ಆದರೆ ಸುಖದಾಯಕವಿದೆ. ರಾಗದಿಂದ ದೂರವಾಗಿ ಆಂತರ್ಯದ ಆನಂದದಲ್ಲಿ ನೆಲೆಗೊಳ್ಳುವುದು ಅದು ಸುಖದಾಯಕವಿದೆ. ಆನಂದಾಮೃತದ ಪೂರ್ಣ ಅನುಭವವಾದ ನಂತರ ಅಲ್ಲಿ ವಿಘ್ನವಿರುವುದಿಲ್ಲ. ಅಪರಿಮಿತ ಆತ್ಮಿಕ ಆನಂದವನ್ನು ಪ್ರಾಪ್ತ ಮಾಡಿಕೊಂಡಿರುತ್ತಾರೆ. ಅಂಥ ಆನಂದವುಳ್ಳ ಭಗವಂತರಿಗೆ ಆಹಾರವಿರುತ್ತದೆ ಮತ್ತು ಶರೀರದಲ್ಲಿ ರೋಗವಾಗುತ್ತದೆಯೆಂಬುದು ಅಸಂಭವವಿದೆ. ಭಗವಂತರಿಗೆ ಆಹಾರ ಮತ್ತು ರೋಗವನ್ನು ಮನ್ನಿಸುವಂಥವರು ಭಗವಂತರ ಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ. ಭಗವಂತರು ಅಪರಿಮಿತ ಆನಂದದಶೆಗೆ ಪ್ರಾಪ್ತರಾಗಿರುತ್ತಾರೆ.

ಶುದ್ಧಚೈತನ್ಯ ಮೂರ್ತಿಯಾದ ಆತ್ಮನು ಅನಾದಿ ಅನಂತನಿದ್ದಾನೆ. ಅವನನ್ನು ಮರೆತು ಹೋಗಿ ವಿಕಾರ ಮಾಡುವುದು ಸಂಸಾರವಿದೆ. ಆ ವಿಕಾರದ ಅಭಾವವಾಗುವುದು ಮತ್ತು ಪೂರ್ಣ ಶುದ್ಧದಶೆಯನ್ನು ಪ್ರಕಟಮಾಡಿಕೊಳ್ಳುವುದು ಮೋಕ್ಷವಿದೆ. ಶರೀರವನ್ನು ತನ್ನದೆಂದು ಮನ್ನಿಸುವುದು ಮತ್ತು ಪುಣ್ಯ-ಪಾಪ ಅಥವಾ ಯಾವುದು ದುಃಖದಾಯಕವಿದೆ ಅದನ್ನು ಹಿತಕರವೆಂದು ಮನ್ನಿಸುವುದು ಭ್ರಮೆಯಿದೆ. ಅನುಕೂಲ ವಸ್ತುಗಳಲ್ಲಿ ಪ್ರೀತಿ ಮಾಡುವುದು ಅಜ್ಞಾನವಿದೆ. ಅಜ್ಞಾನೀ ಜೀವನು ಶರೀರದ ಅವಸ್ಥೆಯು ನನ್ನಿಂದ ಆಗಿದೆಯೆಂದು ಮನ್ನಿಸಿ ಪುಣ್ಯ-ಪಾಪವನ್ನು ಹಿತರೂಪವೆಂದು ಕಲ್ಪಿಸಿಕೊಂಡು, ಆಸ್ರವದಿಂದ ಮೋಕ್ಷವನ್ನು ಮನ್ನಿಸಿ ಅಜ್ಞಾನ ಹಾಗೂ ರಾಗ-ದ್ವೇಷಗಳನ್ನು ಮಾಡುತ್ತಾನೆ ಕರ್ಮದ ನವೀನ ಪರಮಾಣುಗಳು ಬರುವುದರ ಕಾರಣವು ರಾಗ-ದ್ವೇಷಗಳ ಪರಿಣಾಮಗಳಿವೆ. ಕೆರೆಯೊಳಗೆ ನೀರು ಬರುವುದರ ಕಾರಣವು ನೆಲದೊಳಗಿನ ಛಿದ್ರಗಳಿವೆ. ಅದರಂತೆ ಆತ್ಮನನ್ನು ಮರೆತುಹೋಗಿರುವುದರಿಂದ ಮಿಥ್ಯಾ ಭ್ರಾಂತಿ ಹಾಗೂ ರಾಗ-ದ್ವೇಷ ಛಿದ್ರಗಳು ಬಿದ್ದುಬಿಟ್ಟಿವೆ. ಆ ಛಿದ್ರಗಳ ಮೂಲಕ ಕರ್ಮದ ಪರಮಾಣುಗಳು ಅಖಂಡವಾಗಿ ಬರುತ್ತವೆ.

ಆತ್ಮನು ವಸ್ತುವಿದ್ದಾನೆ. ಯಾವನು ಇದ್ದಾನೆ ಅವನು ಯಾವುದರಿಂದ ಉತ್ಪನ್ನನಾಗಿಲ್ಲ. ಒಂದುವೇಳೆ ಯಾವುದರಿಂದಾದರೂ ಉತ್ಪನ್ನನಾಗುತ್ತಿದ್ದರೆ ಅವನು 'ಇದ್ದಾನೆ'ಂಬುದು ಉಳಿಯುವ ಸಾಧ್ಯತೆಯಿಲ್ಲ. ಆತ್ಮನು ದೇಹದಿಂದ ಭಿನ್ನನಾದ ತತ್ತ್ವನಿದ್ದಾನೆ. ಆದರೆ ದೇಹವು ಅನುಕೂಲವಿದ್ದರೆ ಒಳ್ಳೆಯದಿದೆ ಮತ್ತು ಪ್ರತಿಕೂಲವಿದ್ದರೆ ಒಳ್ಳೆಯದಿಲ್ಲವೆಂದು ಮನ್ನಿಸುವುದು ಅಜ್ಞಾನಭಾವವಿದೆ. ನನ್ನ ಆನಂದವು ನನ್ನಲ್ಲಿ ಇಲ್ಲ, ಆದರೆ ಪರದಿಂದ ಇದೆಯೆಂಬ ಮನ್ನಣೆಯಿಂದ ಛಿದ್ರಗಳು ಬಿದ್ದುಬಿಟ್ಟಿವೆ. ಜೀವನಿಗೆ ನವೀನ ಜಡ ಆಸ್ರವದ ಕಾರಣವು ಮೋಹ-ರಾಗ-ದ್ವೇಷರೂಪದ ಪರಿಣಾಮಗಳಿವೆ. ಯಾವಾಗ ಅಶುದ್ಧಭಾವವು ವಿನಾಶವಾಗುತ್ತದೆ ಆಗ ಜ್ಞಾನೀ ಜೀವನಿಗೆ ಅವಶ್ಯವಾಗಿ ಆಸ್ರವಭಾವಗಳ ಅಭಾವವಾಗುತ್ತದೆ. ಪರಪದಾರ್ಥಗಳು ನನ್ನ ಸ್ವರೂಪವಿಲ್ಲ, ಅದೇ ಪ್ರಕಾರ ಯಾವುದೇ ಪದಾರ್ಥವು ನನ್ನ ಸಲುವಾಗಿ ಇಷ್ಟ-ಅನಿಷ್ಟರೂಪವಿಲ್ಲ. ಆ ಪದಾರ್ಥಗಳು ನನ್ನ ಸಲುವಾಗಿ ಕೇವಲ ಜ್ಞೇಯವಿವೆಯೆಂದು ಆಂತರ್ಯದ ಸ್ವಭಾವದಲ್ಲಿ ಸ್ಥಿರವಾಗಿ ಹೋಗುತ್ತಾನೆ. ಆಗ ಆಸ್ರವವಾಗುವುದಿಲ್ಲ ಮತ್ತು ಆಗ ಕರ್ಮಗಳು ಕೂಡ ಬರುವುದು ನಿಂತು ಹೋಗುತ್ತದೆ. ಸರ್ವಥಾ ಕರ್ಮಗಳ ನಾಶವಾಗುವುದರಿಂದ ನಿರಾವರಣ ಸರ್ವಜ್ಞ ಪದ ಮತ್ತು ಸರ್ವದರ್ಶಿ ಪದವು ಪ್ರಕಟವಾಗುತ್ತದೆ.

ಆತ್ಮನು ಜ್ಞಾನ ಸ್ವಭಾವಿಯಿದ್ದಾನೆ, ಅವನನ್ನು ಮರೆತು ಪುಣ್ಯ-ಪಾಪಗಳಲ್ಲಿ ನಿಂತುಕೊಳ್ಳುವುದರಿಂದ ಜ್ಞಾನದ ದಶೆಯು ಹೀನವಾಗುತ್ತಲಿತ್ತು, ಆದರೆ ಆಂತರ್ಯದಲ್ಲಿ ಜ್ಞಾನ ಸ್ವಭಾವವು ಶಕ್ತಿಯಿಂದ ಇದೆ. ಅದರಲ್ಲಿ ಏಕಾಗ್ರವಾಗುವುದರಿಂದ ಕೇವಲಜ್ಞಾನ ಮತ್ತು ಕೇವಲದರ್ಶನವು ಪ್ರಕಟವಾಗುತ್ತದೆ ಮತ್ತು ಅಲ್ಪಜ್ಞತೆ ಹಾಗೂ ರಾಗ-ದ್ವೇಷಗಳು ನಾಶವಾಗುತ್ತವೆ. ಇಂದ್ರಿಯಗಳಿಂದ ರಹಿತವಾದ ಸುಖದ ಅನುಭವ ಮಾಡುತ್ತಾನೆ. ಮುಕ್ತಿಯು ಇದು ಸಂಪೂರ್ಣ ಸುಖದಶೆಯಿದೆ. ಅತೀಂದ್ರಿಯ ಆನಂದದ ಅನುಭವವಾಗುತ್ತದೆ. ದೇಹ ಮತ್ತು ಆಯುಷ್ಯವಿದ್ದರೂ ಕೂಡ ಅರಹಂತನಾಗುತ್ತಾನೆ.

ಯಾವುದನ್ನು ಅರಹಂತ ಪದವೆಂದು ಹೇಳಲಾಗುತ್ತದೆ ಮತ್ತು ಅದು ಯಾವ ಕ್ರಿಯೆಯಿಂದ ಪ್ರಕಟವಾಗುತ್ತದೆಯೆಂಬುದರ ಅರಿವು ಇಲ್ಲದೆ ಪುಣ್ಯವಾಗುತ್ತದೆ, ಆದರೆ ಧರ್ಮವಾಗುವುದಿಲ್ಲ. ಶರೀರ ಮತ್ತು ಆಯುಷ್ಯವಿದ್ದರೂ ಕೂಡ ಪರಮಜ್ಞಾನ ಮತ್ತು ಆನಂದವು ಪ್ರಕಟವಾಗುತ್ತದೆ. ಅದನ್ನು ಜೀವನ್ಮುಕ್ತ ಅರಹಂತ ಪದವೆಂದು ಹೇಳಲಾಗುತ್ತದೆ. ಅವರಿಗೆ ಹಸಿವೆ, ಬಾಯಾರಿಕೆಗಳಾಗುವುದಿಲ್ಲ. ಆಹಾರವನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಆನಂದವನ್ನು ಅನುಭವಿಸುವಂಥ ಅರಹಂತ ಭಗವಂತರು ಸರ್ವಥಾ ಶುದ್ಧಭಾವದಿಂದ ಸಂಯುಕ್ತರಿರುತ್ತಾರೆ. ಆ ಕಾರಣದಿಂದ ಅವರನ್ನು ಜೀವನ್ಮುಕ್ತರೆಂದು ಹೇಳಲಾಗುತ್ತದೆ.

**ಪ್ರಶ್ನೆ :-** ಯಾವ ಪ್ರಕಾರದಿಂದ ಜೀವನ್ಮುಕ್ತರಾಗುತ್ತಾರೆ ?

(ಪ್ರಶ್ನೆಯಮೇಲಿಂದ ಶಿಷ್ಯನ ಜಿಜ್ಞಾಸೆ ಮತ್ತು ಪಾತ್ರತೆಯನ್ನು ತಿಳಿದುಕೊಂಡು ಹೇಳುತ್ತಾರೆ.)

**ಉತ್ತರ :-** ಈ ಆತ್ಮನಿದ್ದಾನೆ. ಅವನ ವರ್ತಮಾನದ ದಶೆಯಲ್ಲಿ ಅಶುದ್ಧತೆಯಿದೆ. ಆ ಆವರಣದಲ್ಲಿ ನಿಮಿತ್ತ ರೂಪದಿಂದ ಕರ್ಮವಿದೆ. ಆವರಣವು ಹೊರಟುಹೋಗಿ ಕೇವಲಜ್ಞಾನವಾಗುವ ಸಾಧ್ಯತೆಯಿದೆ. ಈ ಪ್ರಕಾರದ ಭಾವನೆಯುಳ್ಳವನು ಕೇಳುತ್ತಾನೆ. ಆದುದರಿಂದ ವಿಪರೀತವಾಗಿ ಹೇಳುವವನ ಮಾತನ್ನು ಆಲಿಸಬಾರದು. ಯಾರಿಗೆ ಸಂಸಾರ ಅಥವಾ ಪುಣ್ಯ-ಪಾಪದ ಅಭಿರುಚಿಯಿದೆ ಅವನು ಪ್ರಶ್ನೆಯನ್ನು ಕೇಳುವುದಿಲ್ಲ. ದೇಹವಿದ್ದರೂ ಕೂಡ ಕೇವಲಜ್ಞಾನವು ಪ್ರಕಟವಾಗುವ ಸಾಧ್ಯತೆಯಿದೆಯೆಂಬ ಮಾತನ್ನು ಕೇಳಿ ಕೇವಲಜ್ಞಾನವಾದನಂತರವೂ ದೇಹವು ಹೇಗೆ ಉಳಿಯುತ್ತದೆ ? ಆ ಮಾತಂತೂ ಅಸತ್ಯವಿದೆಯೆಂದು ಕೆಲವರಿಗೆ ಎನಿಸುತ್ತದೆ. ಆದರೆ ತನ್ನ ಯೋಗ್ಯತೆಯಿಂದ ದೇಹವಿದ್ದರೂ ಕೂಡ ಕೇವಲಜ್ಞಾನವಾಗುತ್ತದೆ. ಆದರೆ ವಿದೇಹ ಮುಕ್ತನಾಗಿಲ್ಲವೆಂದು ಅವನು ನಿಶ್ಚಯ ಮಾಡಿರುತ್ತಾನೆ. ಇಂದ್ರಿಯಗಳಿದ್ದರೂ ಕೂಡ ಅತೀಂದ್ರಿಯ ಆನಂದವು ಪ್ರಕಟವಾಗಿರುತ್ತದೆ.

ದೇಹದಲ್ಲಿದ್ದರೂ, ಆಯುಷ್ಯವಿದ್ದರೂ ಹೇಗೆ ಜೀವನ್ಮುಕ್ತರಾದರೆಂದು ಶಿಷ್ಯನು ಪ್ರಶ್ನೆ ಮಾಡಿದ್ದನು. ಇಂದ್ರಿಯಗಳಿದ್ದರೂ ಕೂಡ ಇಂದ್ರಿಯಗಳ ವ್ಯಾಪಾರವಿಲ್ಲ. ಕ್ರಮರಹಿತ ದರ್ಶನ-ಜ್ಞಾನಗಳು ಪ್ರಕಟವಾಗಿವೆ. ದೇಹ ಮತ್ತು ವಾಣಿಯಿದ್ದರೂ ಕೂಡ ಜ್ಞಾನ, ದರ್ಶನ ಹಾಗೂ ಆನಂದದ ಅನುಭವ ಮಾಡುತ್ತಾರೆ.

ಜೀವನ್ಮುಕ್ತರು ಹೇಗಿರುತ್ತಾರೆಂದು ಕೇಳಲಾಗಿತ್ತು. ಆದುದರಿಂದ ಶಿಷ್ಯನಿಗೆ ದೇವರ ಕುರಿತು ವಿಶ್ವಾಸವು ಬಂದುಬಿಟ್ಟಿದೆ. ಸರಿಯಿದೆಯೆಂದು ಗುರುಗಳು ಹೇಳಿರುವುದರಿಂದ ಗುರುಗಳ ಕುರಿತು ಕೂಡ ವಿಶ್ವಾಸವು ಬಂದುಬಿಟ್ಟಿದೆ. ಅದರಂತೆ ಗುರುಗಳ ವಾಣಿಯ ಹಾಗೂ ಶಾಸ್ತ್ರದ ವಿಶ್ವಾಸವು ಕೂಡ ಬಂದುಬಿಟ್ಟಿದೆ. ಎಂದರೆ ನಿಜವಾದ ದೇವ-ಶಾಸ್ತ್ರ-ಗುರುಗಳ ಪ್ರತೀತಿಯು ಬಂದುಬಿಟ್ಟಿದೆ ಮತ್ತು ಕುದೇವ-ಕುಗುರು ಮೊದಲಾದವರ ಪ್ರತೀತಿಯು ಬಿಟ್ಟುಹೋಗಿದೆ.

ಜೀವನು ಮುಕ್ತನಾಗುವ ಸಾಧ್ಯತೆಯಿಲ್ಲವೆಂದರೆ ಆ ಮಾತು ಕೂಡ ಅಸತ್ಯವಿದೆಯೆಂದು ಓರ್ವನು ಹೇಳುತ್ತಾನೆ. ಆ ಮೋಕ್ಷದೊಳಗಿಂದ ಮರಳಿ ಬರುವಂಥದು ಕೂಡ ದೇವರ ಸ್ವರೂಪವಿಲ್ಲ. ಜೀವನ್ಮುಕ್ತವೆಂದರೆ ವಿದೇಹ ಮುಕ್ತವಾಗಿ ಸಂಸಾರದಲ್ಲಿ ಮರಳಿ ಬರುವುದಿಲ್ಲ.

ಬಂಧ ಮತ್ತು ಬಂಧದ ಕಾರಣದಿಂದ ಆತ್ಮನಿಗೆ ಸಹಾಯವಾಗುತ್ತದೆಯೆಂದು ಮನ್ನಿಸುವ ಜೀವನು ಜೀವನ್ಮುಕ್ತ ದಶೆಯನ್ನು ತಿಳಿಯುವುದಿಲ್ಲ. ಸ್ವಭಾವದ ಅಭಿರುಚಿಯುಳ್ಳ ಮತ್ತು ಸ್ವಭಾವದ ರುಚಿಯಿರದಂಥವನು ಜೀವನ್ಮುಕ್ತ ಹೇಗಾಗುವನೆಂಬುದರ ಮಾತು ನಡೆಯುತ್ತಿದೆ.

ದೇಹವಿದ್ದರೂ ಸರ್ವಜ್ಞದಶೆಯು ಪ್ರಕಟವಾಗುವ ಸಾಧ್ಯತೆಯಿದೆಯೇ ಗುರುಗಳೇ? ಎಂದು ಶಿಷ್ಯನು ಕೇಳಿದ್ದಾನೆ ಅದಕ್ಕೆ ಅಲ್ಪಜ್ಞತೆಯು ಹೊರಟುಹೋಗಿ ಸರ್ವಜ್ಞತೆಯಾಗುವುದು. ಆಕುಲತೆಯು ದೂರವಾಗಿ ಆನಂದವು ಪ್ರಕಟವಾಗುವುದು, ಪರ್ಯಾಯವು ಬದಲಾಗುವುದು ಮತ್ತು ದ್ರವ್ಯವು ಸ್ಥಿರ ಉಳಿಯುವುದು. ಅಶುದ್ಧತೆಯನ್ನು ಒಪ್ಪಿಕೊಳ್ಳುತ್ತಿರುವಂತೆ ದ್ರವ್ಯದ ಆಧಾರದಿಂದ ಅಶುದ್ಧತೆಯ ನಾಶವಾಗುವುದೆಂದು ದ್ರವ್ಯದ ಮೇಲೆ ಶ್ರದ್ಧೆಯಿಡುತ್ತ ದೇವ-ಶಾಸ್ತ್ರ-ಗುರುಗಳ ಮೇಲೆ ಶ್ರದ್ಧೆಯಿಡುತ್ತಾನೆ. ಈ ಪ್ರಕಾರ ಜಿಜ್ಞಾಸೆಯುಳ್ಳ ಶಿಷ್ಯನಿಗೆ ಗುರುಗಳು ಉತ್ತರ ಕೊಡುತ್ತಾರೆ.

ಅಜ್ಞಾನೀ ಜೀವನಿಗೆ ಅನಾದಿಯಿಂದ ತನ್ನ ಸ್ವರೂಪದ ಜ್ಞಾನವಿಲ್ಲ ಆ ಅಪರಾಧದಲ್ಲಿ ಕರ್ಮವು ನಿಮಿತ್ತವಿದೆ, ಅದರಿಂದ ಅಪರಾಧ ಮತ್ತು ಅಪರಾಧದಲ್ಲಿ ಯಾವುದು ನಿಮಿತ್ತವಿದೆ ಅದರ ಜ್ಞಾನ ಮಾಡಿಸಿದೆ. ತನ್ನ ಜ್ಞಾನ-ದರ್ಶನ ಶಕ್ತಿಯನ್ನು ಒಪ್ಪಿಕೊಳ್ಳುವುದಿಲ್ಲ-ಶುದ್ಧ ಆನಂದವನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ರಾಗ-ದ್ವೇಷಾದಿಗಳ ಪರಿಣಾಮವನ್ನು ಒಪ್ಪಿಕೊಳ್ಳುತ್ತಾನೆ. ಅವು ಆವರಣವಿವೆ, ಅವು ತನ್ನ ಶುದ್ಧ ಸತ್ತಾವನ್ನು ಅಡಗಿಸಿಬಿಟ್ಟಿವೆ. ನಾನು ವಿಕಾರೀ ಇದ್ದೇನೆಂದು ಮನ್ನಿಸುತ್ತ ತ್ರಿಕಾಲೀ ಸ್ವಭಾವವನ್ನು ಮರೆಮಾಡಿಬಿಟ್ಟಿದೆ. ಇತರ ವಸ್ತುಗಳು ನಿಮಿತ್ತವಿವೆ. ನಿಮಿತ್ತದ ಆಶ್ರಯದಿಂದ ಸ್ವಯಂ ಅಪರಾಧ ಮಾಡುತ್ತಾನೆ. ಆದರೆ ಕರ್ಮವು ಅಪರಾಧ ಮಾಡಿಸುವುದಿಲ್ಲ.

ಯಾವ ಜೀವನು ರಾಗ-ದ್ವೇಷಗಳಲ್ಲಿ ನಿಂತುಕೊಂಡಿದ್ದಾನೆ ಅವನ ಜ್ಞಾನವು ಕ್ರಮರಹಿತವಾಗಿ ಪ್ರವರ್ತಿಸುವುದಿಲ್ಲ. ಆದರೆ ಒಂದೊಂದು ಇಂದ್ರಿಯಗಳಲ್ಲಿ ನಿಂತುಕೊಂಡು ತಿಳಿಯುತ್ತದೆ ಅದು ಸಂಸಾರವಿದೆ, ಶಬ್ದವನ್ನು ತಿಳಿದನಂತರ ಸ್ಪರ್ಶವನ್ನು ತಿಳಿಯುತ್ತಾನೆ. ಹೀಗೆ ಒಂದರನಂತರ ಒಂದು ವಿಷಯವನ್ನು ತಿಳಿಯುತ್ತಾನೆ. ಅದು ತುಂಡು ತುಂಡಾಗಿ ವರ್ತಿಸುತ್ತದೆ. ನಾನು ಅಖಂಡನಿದ್ದೇನೆಂಬ ರುಚಿಯು ಜಾಗೃತವಾಗಿದೆ.

ಶಿಷ್ಯನ ಪ್ರಶ್ನೆಗೆ ಗುರುಗಳು ಉತ್ತರ ಕೊಡುತ್ತಾರೆ-ಸಂಸಾರವು ಹೇಗಿದೆಯೆಂಬುದನ್ನು ಮೊದಲು ತಿಳಿಸಿಕೊಡುತ್ತಾರೆ. ಅಜ್ಞಾನೀ ಜೀವನು ತನ್ನ ಜ್ಞಾನ ಸ್ವಭಾವವನ್ನು ಮರೆತು ಕ್ರಮಕ್ರಮವಾಗಿ ವಿಷಯಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ ಮತ್ತು ಅವನ್ನು ಸರ್ವಸ್ವವೆಂದು ಮನ್ನಿಸಿಕೊಳ್ಳುತ್ತಾನೆ.

ಶಿಷ್ಯನಿಗೆ ದೇವ-ಶಾಸ್ತ್ರ-ಗುರುಗಳಲ್ಲಿ ಶ್ರದ್ಧೆಯಿದೆ, ಆದರೆ ರಾಗದಲ್ಲಿ ಯಾವ ಜ್ಞಾನವು ನಿಂತುಕೊಂಡಿದೆ ಆ ಜ್ಞಾನವು ದೋಷಯುಕ್ತವಿದೆಯೆಂದು ಗುರುಗಳು ತಿಳಿಸಿಕೊಡುತ್ತಾರೆ. ನಿಂತುಕೊಳ್ಳುತ್ತಿರುವ ಜ್ಞಾನವು ಸಂಸಾರವಿದೆ. ಮಲಿನತೆಯುಳ್ಳದ್ದಿದೆ ಆಸ್ರವ ಹಾಗೂ ಬಂಧದ ಕಾರಣವಿದೆ.

ಆತ್ಮನ ಸ್ವಭಾವವು ಜ್ಞಾನವಿದೆ, ಕ್ರಮದಿಂದ ತಿಳಿದುಕೊಳ್ಳುವುದು ಅದರ ಸ್ವಭಾವವಲ್ಲ. ಇಲ್ಲಿ ಸರ್ವಜ್ಞ ಮತ್ತು ಸರ್ವದರ್ಶಿತ್ವವನ್ನು ಸಿದ್ಧ ಮಾಡುವುದಿದೆ. ಅದು ಏಕಿಲ್ಲವೆಂಬುದರ ಉತ್ತರ ಕೊಡಲಾಗಿದೆ. ಅನಾದಿಯಿಂದ ಆತ್ಮನ ಜ್ಞಾನವು ಕ್ರಮದಿಂದ ಪ್ರವರ್ತಿಸುತ್ತಿದೆ. ಹಿಂಸೆ ಹಾಗೂ ದಯೆ ಮೊದಲಾದವುಗಳ ಪರಿಣಾಮದ ಕ್ರಿಯೆಗಳನ್ನು ಒಂದರ ನಂತರ ಒಂದನ್ನು ತಿಳಿದುಕೊಂಡು ಕಾರ್ಯ ಮಾಡುತ್ತದೆ. ಅದು ಸಂಸಾರವಿದೆ ಮತ್ತು ಅಜ್ಞಾನ ಭಾವವಿದೆ. ಜ್ಞಾನವು ಕ್ರಮದಿಂದ ಪ್ರವರ್ತಿಸುವಲ್ಲಿ ಅಶುದ್ಧತೆಯು ಬಂದಲ್ಲದೆ ಇರುವುದಿಲ್ಲ. ತಿಳಿಯುವ-ನೋಡುವ ಕ್ರಿಯೆಯು ಒಂದರ ನಂತರ ಒಂದು ಪರದಲ್ಲಿ ಆಗುತ್ತದೆ. ಅಖಂಡ ಸ್ವಭಾವದ ಅಭಿರುಚಿ ಮಾಡದೆ ಕ್ರಮದಿಂದ ಪ್ರವರ್ತಿಸುವ ಕ್ರಿಯೆಗಳಲ್ಲಿ ಅಭಿರುಚಿ ಮಾಡುವುದು ಸಂಸಾರವಿದೆ.

ನೋಡಿರಿ! ಯಾರಿಗೆ ಬಾಯಾರಿಕೆಯಾಗಿದೆ ಅವರಿಗೆ ಕುಡಿಯಲು ನೀರು ಕೊಡಲಾಗುತ್ತದೆ. ಆತ್ಮನ ಪರ್ಯಾಯದಲ್ಲಿ ದೋಷವಿದೆ ಅದನ್ನು ಹೇಗೆ ದೂರಮಾಡುವುದೆಂದು ಜಿಜ್ಞಾಸೆಯುಳ್ಳವನಿಗೆ ಉತ್ತರ ಕೊಡುತ್ತಾರೆ.

ಆಲಿಸುವ ಸಮಯದಲ್ಲಿ ಕೂಡ ಜ್ಞಾನವು ಕೇಳುವುದರಲ್ಲಿ ನಿಂತುಕೊಳ್ಳುತ್ತದೆ. ಅದು ಕ್ರಮದಿಂದ ಪ್ರವರ್ತಿಸುವ ಜ್ಞಾನಕ್ರಿಯಾರೂಪದ ಭಾವವಿದೆ, ಅದು ತುಂಡು ತುಂಡಾಗಿ ಅಶುದ್ಧವಾಗುತ್ತದೆ. ನಾನು ಜ್ಞಾಯಕನಿದ್ದೇನೆಂದು ಅಖಂಡ ಸ್ವಭಾವದ ಶ್ರದ್ಧೆ-ಜ್ಞಾನ ಮಾಡದೆ ಮೋಹವನ್ನು ಅನುಸರಿಸಿ ಆಗುವ ಭಾವವಿದೆ, ಅದರಿಂದ ಅಶುದ್ಧವಿದೆ. ಜ್ಞಾನ-ಕ್ರಿಯಾ ಭಾವವು ಅಶುದ್ಧವಿದೆಯೆಂದು ಹೇಳಿದರೆ ಅದರಲ್ಲಿ ಮಿಥ್ಯಾದರ್ಶನ-ಜ್ಞಾನ-ಚಾರಿತ್ರಗಳು ಬಂದುಬಿಡುತ್ತವೆ. ಕ್ರಮದಿಂದ ಪ್ರವರ್ತಿಸುವ ದಶೆಯು ಮಲಿನವಿದೆ. ಅದನ್ನು ಸರ್ವಸ್ವವೆಂದು ಮನ್ನಿಸುವುದು ಮಿಥ್ಯಾದರ್ಶನವಿದೆ, ಅಂಥ ಜ್ಞಾನದ ಅನುಭವವು ಮಿಥ್ಯಾಜ್ಞಾನವಿದೆ ಮತ್ತು ರಾಗದ ಅನುಭವವು ಮಿಥ್ಯಾಚಾರಿತ್ರವಿದೆ.

ಕ್ರಮದಿಂದ ಪ್ರವರ್ತಿಸುವ ಭಾವವು ಆತ್ಮನಲ್ಲಿ ಇದೆಯೆಂದು ಹೇಳಿ ಜೀವವನ್ನು ಕೂಟಸ್ಥವೆಂದು ಮನ್ನಿಸಿರುವುದರ ನಿಷೇಧ ಮಾಡಿದೆ. ಜ್ಞಾತಾ-ದೃಷ್ಟಾ ಸ್ವಭಾವವನ್ನು ಮರೆತು, ಕ್ರಮದಿಂದ ಪ್ರವರ್ತಿಸುವ ಭಾವರೂಪ ದಶೆಯನ್ನು ಕೂಡ ಯಾವನು ಒಪ್ಪಿಕೊಳ್ಳುವುದಿಲ್ಲ, ಅವನಿಗೆ ಸಂಸಾರ ನಾಶ ಹೇಗೆ ಮಾಡುವುದೆಂಬುದರ ಅರಿವುಕೂಡ ಬರುವುದಿಲ್ಲ ಮತ್ತು ಪರ್ಯಾಯವನ್ನು ಮನ್ನಿಸಿ ಕ್ರಮದಿಂದ ಪ್ರವರ್ತಿಸುವುದೆಂದು ಮನ್ನಿಸಿದನು, ಆದರೆ ಕ್ರಿಯಾರೂಪ ಭಾವದಷ್ಟು ನಾನಿದ್ದೇನೆಂದು ಮನ್ನಿಸಿರುವವನಿಗೆ ಕೂಡ ಶುದ್ಧ ಚೈತನ್ಯದ ಪ್ರತೀತಿಯು ಬರುವುದಿಲ್ಲ. ಆತ್ಮನಲ್ಲಿ ಅಕ್ರಮ ದೃಷ್ಟಿಯು ಪ್ರಕಟಿಸಿದಂದಿನಿಂದ ಧರ್ಮದ ಆರಂಭವಾಗುತ್ತದೆ. ಸಂಸಾರದಲ್ಲಿ ಭವಗಳು ಹೇಗಾಗುತ್ತವೆಂಬುದನ್ನು ತಿಳಿಸಿದ್ದಾರೆ. ತನ್ನ ಜ್ಞಾನಸ್ವಭಾವವನ್ನು ಮರೆತು ಪುಣ್ಯ-ಪಾಪದ ಅಶುದ್ಧಪರಿಣಾಮ, ನಿಮಿತ್ತಗಳನ್ನು ಮತ್ತೆ ಪರಜ್ಞೇಯವನ್ನು ಅನುಸರಿಸಿ ಆಗುವ ಜ್ಞಾನ ಮತ್ತು ರಾಗದಷ್ಟೇ ನಾನಿದ್ದೇನೆಂಬ ಮನ್ನಣೆಯು ಸಂಸಾರವಿದೆ. ಆ ಜೀವನು ತ್ರಿಕಾಲೀ ದ್ರವ್ಯವನ್ನು ಮನ್ನಿಸುವುದಿಲ್ಲ. ರಾಗದಲ್ಲಿ ಮತ್ತು ಪರದಲ್ಲಿ ನಿಂತುಕೊಳ್ಳುವ ಭಾವವು ಅಶುದ್ಧವಿದೆ ಮತ್ತು ಸಂಸಾರವಿದೆ.

ಜೀವನಿಗೆ ಪೂರ್ಣ ಆನಂದದಶೆಯು ಹೇಗೆ ಪ್ರಕಟವಾಗುವುದು? ದೇಹದಲ್ಲಿರುತ್ತಿದ್ದರೂ ಕೇವಲಜ್ಞಾನ ಹಾಗೂ ಪೂರ್ಣ ಆನಂದದ ಅನುಭವವು ಯಾವ ವಿಧಿಯಿಂದಾಗುತ್ತದೆ? ಯಾರಿಗೆ ಕೇಳುವುದು? ಕೇವಲಿಗೆ ಕೇವಲಜ್ಞಾನ ಮತ್ತು ಕೇವಲದರ್ಶನದ ಉಪಯೋಗವು ಅಖಂಡ ಒಂದು ಸಮಯವಿದೆಯೆಂದು ಯಾವ ಮುನಿಗಳು ಮನ್ನಿಸಿದ್ದಾರೆ ಅವರನ್ನು ಕೇಳಲಾಗಿದೆ-ಯಾವ ಜೀವನು ಒಂದು ಸಮಯ ಕೇವಲಜ್ಞಾನ ಇನ್ನೊಂದು ಸಮಯ

ಕೇವಲದರ್ಶನವೆಂದು ಕ್ರಮಾನುಸಾರ ಉಪಯೋಗವನ್ನು ಮನ್ನಿಸುತ್ತಾನೆ ಅವನನ್ನು ಕೇಳುವುದಿಲ್ಲ. ಎಲ್ಲಿಯವರೆಗೆ ಅಲ್ಪಜ್ಞಾನ ಹಾಗೂ ರಾಗ-ದ್ವೇಷಗಳಿವೆ ಅಲ್ಲಿಯವರೆಗೆ ಜ್ಞಾನ-ದರ್ಶನದ ಉಪಯೋಗವು ಕ್ರಮಾನುಸಾರವಾಗಿರುತ್ತದೆ, ಆದರೆ ಕೇವಲಿಗೆ ವೀತರಾಗತೆ ಮತ್ತು ಕೇವಲಜ್ಞಾನವು ಪ್ರಕಟವಾದನಂತರ ಉಪಯೋಗವು ಕ್ರಮದಿಂದ ಇರುವುದಿಲ್ಲ. ಹಾಗೆ ಕೇವಲಿಯ ಸ್ವರೂಪವಿರುವ ಸಾಧ್ಯತೆಯಿಲ್ಲ. ಎಂದರೆ ಕೇಳುವವನಿಗೆ ನಿಜವಾದ ದೇವ-ಶಾಸ್ತ್ರ-ಗುರುಗಳ ಶ್ರದ್ಧೆಯಿದೆ.

ಜೀವನು ಚೈತನ್ಯಸ್ವಭಾವಿಯಿದ್ದರೂ ಕೂಡ ಎಷ್ಟು ನಿಮಿತ್ತದ ಆಶ್ರಯವಿದೆ ಅಷ್ಟು ಸ್ವಭಾವದ ಆಶ್ರಯವು ಬಿಡುತ್ತದೆ. ಅವನ ಜ್ಞಾನಪರ್ಯಾಯವು ಕ್ರಮದಿಂದ ಪ್ರವರ್ತಿಸುತ್ತದೆ. ಒಮ್ಮೆ ಹಿಂಸೆಯ ಭಾವದಲ್ಲಿ ಒಮ್ಮೆ ಕಳವಿನ ಭಾವದಲ್ಲಿ ಹೀಗೆ ಕ್ರಮದಿಂದ ಪ್ರವರ್ತಿಸುತ್ತದೆ. ಒಮ್ಮೆ ಶುಭಭಾವ, ಒಮ್ಮೆ ಸತ್ಯ ಆಡುವ ಭಾವ, ಒಮ್ಮೆ ಪರಿಗ್ರಹದ ತ್ಯಾಗ ಮಾಡುವ ಭಾವ-ಹೀಗೆ ಕ್ರಮ-ಕ್ರಮದಿಂದ ಲಕ್ಷ್ಯ ಹೋಗುತ್ತದೆ. ರಾಗದ ಕಾರಣದಿಂದ ಜ್ಞಾನದಲ್ಲಿ ಕ್ರಮವಾಗುತ್ತದೆ. ಜೀವವನ್ನು ಹಿಂಸಿಸುವುದಿಲ್ಲವೆಂಬ ಭಾವವು ರಾಗವಿದೆ. ಜ್ಞಾನವು ಕ್ರಮ-ಕ್ರಮದಿಂದ ಕಾರ್ಯ ಮಾಡುತ್ತದೆ. ಅವಸ್ಥೆಯಲ್ಲಿ ಅಶುದ್ಧತೆಯಿರುವುದರಿಂದ ಬಂಧವಾಗುತ್ತದೆ.

ಭಗವಾನ ಆತ್ಮ ಮತ್ತು ಅವನ ಜ್ಞಾನಸ್ವಭಾವ ಅನಾದಿ ಅನಂತವಿದ್ದರೂ ಕೂಡ ಜ್ಞಾನದ ವರ್ತಮಾನ ಪರ್ಯಾಯವು ದಯೆ-ದಾನಾದಿಗಳ ಪರಿಣಾಮದಲ್ಲಿ ವರ್ತಿಸುವುದು ಬಂಧದ ಕಾರಣವಿದೆ. ಪುಣ್ಯದ ಸಮಯದಲ್ಲಿ ಪುಣ್ಯ ಮತ್ತು ಕಾಮ-ಕ್ರೋಧಾದಿಗಳ ಪರಿಣಾಮದ ಸಮಯದಲ್ಲಿ ಅವುಗಳ ವಶವರ್ತಿಯಾಗಿ ಉಪಯೋಗವು ಪ್ರವರ್ತಿಸುವುದರಿಂದ ನವೀನ ಜಡಕರ್ಮವು ಬರುವುದರ ಕಾರಣವಾಗುತ್ತದೆ. ಆದುದರಿಂದ ಯಾವನ ಉಪಯೋಗವು ಕ್ರಮ-ಕ್ರಮದಿಂದ ಇದೆ ಅವನು ಕೇವಲಿಯಿರುವ ಸಾಧ್ಯತೆಯಿಲ್ಲ. ಜ್ಞಾನಸ್ವಭಾವವು ಪರ್ಯಾಯದಲ್ಲಿ ಪರಿಪೂರ್ಣ ಪ್ರಕಟವಾಗಿ ಹೋದನಂತರ ಅದರಲ್ಲಿ ಕ್ರಮವಿರುತ್ತದೆಂದು ಮನ್ನಿಸಲಾದರೆ ನವೀನ ಕರ್ಮವು ಬರುವುದರ ಕಾರಣವಾಗುತ್ತದೆ. ಅವನು ಜೀವನ್ಮುಕ್ತವಿರುವ ಸಾಧ್ಯತೆಯಿಲ್ಲ, ಅವನು ಕೇವಲಿಯಿಲ್ಲ. ಯಾವ ಶಾಸ್ತ್ರ ಮತ್ತು ಗುರು ಕೇವಲಿಯ ಉಪಯೋಗವು ಕ್ರಮದಿಂದಿದೆಯೆಂದು ಹೇಳಿದರೆ ಆ ಶಾಸ್ತ್ರವು ನಿಜವಾದ ಶಾಸ್ತ್ರವಲ್ಲ ಮತ್ತು ಆ ಗುರು ನಿಜವಾದ ಗುರುವಲ್ಲ.

ಯಾವನಿಗೆ ರತ್ನ ಬೇಕಾಗಿದೆ ಅವನು ಕುಂಭಕಾರನ ಹತ್ತಿರ ಹೋಗಿ ಕೇಳಿದರೆ ಅವನು ಮೂರ್ಖನಿದ್ದಾನೆ, ಅವನಿಗೆ ರತ್ನದ ಅರಿವಿಲ್ಲ, ಅವನು ರತ್ನದ ಅಂಗಡಿಯಲ್ಲಿ ಹೋಗಿ ಕೇಳಬೇಕಾಗುವುದು. ಹಾಗೆ ಧರ್ಮ ಬೇಕಾದವನು ಧರ್ಮವು ಪ್ರಕಟವಾಗಿರುವಂಥ ಭಾವಲಿಂಗೀ ಮುನಿಯ ಹತ್ತಿರ ಹೋಗಿ ಕೇಳಬೇಕಾಗುವುದು. ಯಾವನು ಕೇವಲೀ ಭಗವಂತರ ಉಪಯೋಗವು ಕ್ರಮದಿಂದಿದೆಯೆಂದು ಮನ್ನಿಸಿರುವವನ ಹತ್ತಿರ ಕೇಳಿದರೆ ರಹಸ್ಯವು ತಿಳಿದು ಬರುವುದಿಲ್ಲ.

ಜೀವನು ಸ್ವಯಂ ಅಪರಾಧ ಮಾಡಿ ಅಶುದ್ಧ ಭಾವ ಮಾಡುತ್ತಾನೆ, ಆದರೆ ಸರಿಯಾಗಿ ತಿಳಿದುಕೊಂಡರೆ ಅದರ ನಿಷೇಧವಾಗುತ್ತದೆಯೆಂದು ಜ್ಞಾನೀ ಪುರುಷರು ಹೇಳುತ್ತಾರೆ. ಜ್ಞಾನೀ ಜೀವನಿಗೆ ಮೋಹ-ರಾಗ-ದ್ವೇಷದ ಪ್ರವೃತ್ತಿಯಿರುವುದಿಲ್ಲ. ನಾನು ಜ್ಞಾತಾ-ದೃಷ್ಟಾ ಇದ್ದೇನೆಂಬ ಅರಿವಿನ ಕಾರಣದಿಂದ ರಾಗ-ದ್ವೇಷದ ಪ್ರವೃತ್ತಿಯು ಕಮ್ಮಿಯಾಗುತ್ತದೆ. ಅದರಿಂದ ಅಶುಭಭಾವಗಳು ಕ್ಷೀಣವಾಗುತ್ತ ಹೋಗುತ್ತವೆ. ಅಜ್ಞಾನದಶೆಯಲ್ಲಿ ಜ್ಞಾನರೂಪ ಭಾವಗಳು ಕ್ರಮದಿಂದ ಪ್ರವರ್ತಿಸುತ್ತಿದ್ದವು-ತಡೆಯಲ್ಪಡುತ್ತಿದ್ದವು. ಧರ್ಮಾತ್ಮಜೀವನು ಚೈತನ್ಯವನ್ನು ಅನುಸರಿಸುವುದರಿಂದ ಮಿಥ್ಯಾತ್ವದ ಕ್ರಿಯೆಗಳಂತೂ ಹೋಗಿಬಿಟ್ಟಿವೆ. ಎಷ್ಟು ಜ್ಞಾನವನ್ನು ಅನುಸರಿಸುತ್ತಾನೆ ಅಷ್ಟು ರಾಗ-ದ್ವೇಷಗಳು ಕುಂದುತ್ತಾ ಹೋಗುತ್ತವೆ. ಎಷ್ಟು ಜ್ಞಾತಾ-ದೃಷ್ಟಾದ ಆಶ್ರಯ ತೆಗೆದುಕೊಳ್ಳುತ್ತಾನೆ ಅಷ್ಟು ಪರಾಶ್ರಯವಾಗುವುದಿಲ್ಲ. ಅದರಿಂದ ಭೇದವಿಜ್ಞಾನಿಗೆ ಆಸ್ರವ ಭಾವಗಳ ನಿರೋಧವಾಗುತ್ತ ಹೋಗುತ್ತದೆ.

ಹಸುಗಳು ಇಡೀ ದಿವಸವೆಲ್ಲ ಮೇಯಲು ಕಾಡಿಗೆ ಹೋಗಿರುತ್ತವೆ. ಅವು ಸಾಯಂಕಾಲ ಗ್ರಾಮಕ್ಕೆ ಬರುತ್ತವೆ. ಆಗ ಒಂದರಿಂದ ಇನ್ನೊಂದು ಬಿಡುಗಡೆ ಹೊಂದಿ, ಎಲ್ಲವು ತಮ್ಮ-ತಮ್ಮ ಮನೆಗಳಿಗೆ ಹೋಗುತ್ತವೆ. ಅದನ್ನು ಬಿಟ್ಟು ಬೇರೆ ಯಾವುದೇ ಮನೆಗೆ ಹೋಗುವುದಿಲ್ಲ. ತಮ್ಮ ಮನೆಯ ಕದಗಳು ಮುಚ್ಚಿದ್ದರೆ ಅವನ್ನು ತೆರೆಯುವ ಪ್ರಯತ್ನಮಾಡುತ್ತವೆ. ಅದರಂತೆ ಅನಾದಿಯಿಂದ ಮಿಥ್ಯಾದೃಷ್ಟಿಯ ಜ್ಞಾನ ಉಪಯೋಗವು ಬಾಹ್ಯದಲ್ಲಿ ಸುತ್ತುತ್ತಿತ್ತು. ಈಗ ಅದು ಸರಿಯಾದ ಜ್ಞಾನವಾಗಿ ತನ್ನ ಮನೆಗೆ ಎಂದರೆ ತನ್ನ ತ್ರಿಕಾಲೀ ಸ್ವಭಾವದ ಕಡೆಗೆ ಬಂದಿದೆ ಮತ್ತು ರಾಗ-ದ್ವೇಷಗಳೆಂದರೆ ನಾನಲ್ಲ, ನಾನಂತೂ ಚೈತನ್ಯಸ್ವರೂಪನಿದ್ದೇನೆಂದು ಶ್ರದ್ಧೆ-ಜ್ಞಾನ ಮಾಡಿಕೊಂಡು ಸ್ವರೂಪದಲ್ಲಿ ಸ್ಥಿರಗೊಂಡಷ್ಟು ರಾಗ-ದ್ವೇಷಗಳಾಗುವುದಿಲ್ಲ. ಜ್ಞಾನಕ್ರಿಯಾರೂಪದ ಭಾವವು ರಾಗದಲ್ಲಿ ನಿಂತುಕೊಳ್ಳುತ್ತಿತ್ತು ಅದು ಈಗ ಜ್ಞಾನಸ್ವಭಾವದ ಕಡೆಗೆ ದೃಷ್ಟಿಯಾಗುವುದರಿಂದ ಪರದ ಅನುಸರಣೆಯು ಕಮ್ಮಿಯಾಗುತ್ತ ಹೋಗುತ್ತದೆ.

ಕಾಂಚನ, ಕಾಮಿನಿ, ಕುಟುಂಬವನ್ನು ಬಿಡೆಂದು ಜನರು ಹೇಳುತ್ತಾರೆ ; ಆದರೆ ಅವಂತೂ ಬಿಟ್ಟವುಗಳೇ ಇವೆ. ನಿನ್ನ ಜ್ಞಾನಪರ್ಯಾಯವು ಜಡದಲ್ಲಿ ಕ್ರಮದಿಂದ ಪ್ರವರ್ತಿಸುವುದು ನಿನ್ನ ಸ್ವಭಾವವಲ್ಲ. ಪುಣ್ಯ-ಪಾಪದಲ್ಲಿ ನಿಂತುಕೊಳ್ಳುವುದು, ಯಾವ ಭಾವದಿಂದ ತೀರ್ಥಂಕರ ಪ್ರಕೃತಿಯ ಬಂಧವಾಗುತ್ತದೆ ಆ ಭಾವದಲ್ಲಿ ನಿಂತುಕೊಳ್ಳುವುದು ನಿನ್ನ ಸ್ವಭಾವವಲ್ಲ, ಅದು ಸಂಸಾರವಿದೆ. ಇಲ್ಲಿ ಪರ್ಯಾಯ ಬುದ್ಧಿಯನ್ನು ಬಿಡಿಸಿದೆ ಮತ್ತು ಸ್ವಭಾವದ ಬುದ್ಧಿಯನ್ನು ಮಾಡಿಸಿದೆ.

ಕುಂಭಕಾರನು ಮಣ್ಣಿನ ಪಾತ್ರೆಗಳನ್ನು ಮಾಡುತ್ತಾನೆ, ಆ ಮಣ್ಣಿನಲ್ಲಿ ಒಂದಿಷ್ಟು ಸುಣ್ಣದ ಅಂಶವು ಉಳಿದುಕೊಂಡಿದ್ದರೆ ಅವನು ಮಾಡಿದ ಪಾತ್ರೆಗಳೆಲ್ಲ ಒಡೆದುಹೋಗುತ್ತವೆ. ಅದರಂತೆ ಅಜ್ಞಾನಿಯ ಸಮಸ್ತ ಮಾತುಗಳು ಪರ್ಯಾಯಬುದ್ಧಿಸಹಿತವಿರುವುದರಿಂದ ನಿಷ್ಫಲವಿವೆ. ಅಜ್ಞಾನಿಯ ಒಂದೂ ಮಾತು ಸತ್ಯವಾಗಿರುವುದಿಲ್ಲ.

ರಾಗವನ್ನು ಅನುಸರಿಸಿದರೆ ಸಂಸಾರವಿದೆ ಮತ್ತು ಶರೀರದಿಂದ ರಹಿತ, ಪುಣ್ಯದಿಂದ ರಹಿತವಿರುವ ಶುದ್ಧ ಸ್ವಭಾವವನ್ನು ಅನುಸರಿಸಿದರೆ ಧರ್ಮವಿದೆ. ಎಷ್ಟು ಕಷಾಯಗಳನ್ನು ತಡೆಯಲಾಗುತ್ತದೆ ಅಷ್ಟು ಏಕಾಗ್ರತೆಯು ವೃದ್ಧಿಸುತ್ತ ಹೋಗುತ್ತದೆ ಮತ್ತು ಎಷ್ಟು ಏಕಾಗ್ರತೆಯು ವೃದ್ಧಿಸುತ್ತದೆ ಅಷ್ಟು ಧರ್ಮವಾಗುತ್ತದೆ.

ಓರ್ವ ಮಹಿಳೆಯು ಭತ್ತ ಕುಟ್ಟುತ್ತಿದ್ದಳು, ಕುಟ್ಟುತ್ತಿರುವಂತೆ ಅಕ್ಕಿ ಕೆಳಗೆ ಹೋಗಿ ಮೇಲೆ ಹೊಟ್ಟುಬಂದುಬಿಟ್ಟಿತು. ಆಗ ಇನ್ನೋರ್ವ ಮಹಿಳೆಯು ಅಲ್ಲಿಗೆ ಬಂದು ನೋಡಿ ಇವಳು ಹೊಟ್ಟು ಕುಟ್ಟುತ್ತಿದ್ದಾಳೆಂದು ತಿಳಿದು ತಾನೂ ಮನೆಗೆ ಹೋಗಿ ಹೊಟ್ಟು ಕುಟ್ಟತೊಡಗಿದಳು, ಆದರೆ ಅದರಿಂದ ಅಕ್ಕಿಯು ಹೊರಬರಲಿಲ್ಲ. ಅದರಂತೆ ಅಜ್ಞಾನಿಯ ದೃಷ್ಟಿಯು ಹೊರಗಿನ ವ್ಯವಹಾರದ ಮೇಲೆ ಇದೆ. ಬಾಹ್ಯ ನಗ್ನ ಶರೀರ ಹಾಗೂ ರಾಗದ ಕ್ರಿಯೆಯನ್ನು ನೋಡುವುದರಿಂದ ಅದರ ಅನುಸರಣೆ ಮಾಡತೊಡಗಿದನು, ಆದರೆ ಅದರಿಂದ ಅವನು ಧರ್ಮ ಪಡೆಯುವುದಿಲ್ಲ. ಜ್ಞಾನಿಗೆ ಇಂಥ ಕ್ರಿಯೆಗಳು ಕಂಡುಬರುತ್ತಿದ್ದರೂ ಅವನ ದೃಷ್ಟಿಯು ಶರೀರ ಹಾಗೂ ರಾಗದ ಕ್ರಿಯೆಯ ಮೇಲಿರುವುದಿಲ್ಲ, ಮತ್ತು ಛದ್ಮಸ್ಥದಶೆಯಲ್ಲಿ ಜ್ಞಾನದೊಳಗೆ ಕ್ರಮ ಬೀಳುತ್ತಿದ್ದರೂ ಕ್ರಮದ ಮೇಲೆ ದೃಷ್ಟಿಯಿರುವುದಿಲ್ಲ. ದೃಷ್ಟಿಯಂತೂ ಅಖಂಡಸ್ವಭಾವದ ಮೇಲೆ ಇರುತ್ತದೆ. ಭಗವಾನ ಮಹಾವೀರರು ಹನ್ನೆರಡು ವರುಷ ತಪಸ್ಸು ಮಾಡಿದರೂ ಅವರು ಎಂದಾದರೊಮ್ಮೆ ಆಹಾರ ಸ್ವೀಕರಿಸುತ್ತಿದ್ದರೆಂದು ಅಜ್ಞಾನಿಗಳು ಕೇವಲ ಬಾಹ್ಯದಿಂದಲೇ ನೋಡಿದರು ಮತ್ತು ಬಾಹ್ಯದ ಅನುಸರಣೆಯನ್ನೇ ಮಾಡತೊಡಗಿದರು. ಆದರೆ ಆಂತರ್ಯದ ಅಖಂಡ ಜ್ಞಾನ ಹಾಗೂ ವೀತರಾಗತೆಯನ್ನು ನೋಡಲಿಲ್ಲ.

ಜ್ಞಾನೀ ಮತ್ತು ಅಜ್ಞಾನಿಯ ಬಾಹ್ಯ ಕ್ರಿಯೆಗಳು ಸಮಾನವಾಗಿ ಕಂಡುಬರುತ್ತಿದ್ದರೂ ಅಜ್ಞಾನಿಗೆ ಬಹಿರ್ಮುಖ ದೃಷ್ಟಿಯಿರುವುದರಿಂದ ಸಂಸಾರವಿದೆ. ಮತ್ತೆ ಜ್ಞಾನಿಗೆ ಅಂತರ್ಮುಖ ದೃಷ್ಟಿಯಿರುವುದರಿಂದ ಆಸ್ರವದ ನಿರೋಧವಾಗುವುದು ಮತ್ತು ಧರ್ಮದಶೆಯು ಪ್ರಕಟವಾಗುತ್ತ ಹೋಗುವುದು. ಕೊನೆಯಲ್ಲಿ ಮೋಕ್ಷವಾಗುವುದು.

ಯಾವಾಗ ಮೋಹನೀಯ ಕರ್ಮದ ಕ್ಷಯವಾಗುತ್ತದೆ ಆಗ ಅತ್ಯಂತ ನಿರ್ವಿಕಾರ ವೀತರಾಗ ಚಾರಿತ್ರವು ಪ್ರಕಟವಾಗುತ್ತದೆ. ನಾನು ಶುದ್ಧ ಚೈತನ್ಯನಿದ್ದೇನೆಂಬ ದೃಷ್ಟಿಯಂತೂ ಇತ್ತು, ಆದರೆ ಸ್ವಭಾವದಲ್ಲಿ ವಿಶೇಷ ಸ್ಥಿರತೆಯಾಗಿರುವುದರಿಂದ ಅಶುದ್ಧತೆಯು ನಾಶವಾಗಿ ವೀತರಾಗತೆಯು ಪ್ರಕಟವಾಗುತ್ತದೆ. ಆಗ ಮೋಹಕರ್ಮವು ನಾಶವಾಗುತ್ತದೆ. ಈ ಕ್ರಿಯೆಯಿಂದ ಚಾರಿತ್ರವು ಪ್ರಕಟವಾಗುತ್ತದೆ.

ಈಗಂತೂ ಜನರು ಬಾಹ್ಯದಲ್ಲಿ ಚಾರಿತ್ರ ಮನ್ನಿಸಿಕೊಂಡಿದ್ದಾರೆ ಮತ್ತು ವ್ರತ, ತಪಸ್ಸು ಮಾಡಿದರೆ ಧರ್ಮವಾಗುತ್ತದೆಂದು ಮನ್ನಿಸಿದ್ದಾರೆ. ಎಂಟು ಉಪವಾಸ ಮಾಡಿದ್ದೇನೆಂದು ಹೇಳುತ್ತಾರೆ. ಉಪವಾಸದ ಅರ್ಥ ಕೇಳಿದರೆ ಹೇಳಲು ಬರುವುದಿಲ್ಲ, ಅದಕ್ಕಾಗಿ ರೇಗುತ್ತಾರೆ. ಇದು ತಪದ ಅಭಿಮಾನದ ದಶೆಯಿದೆ ! ಶರೀರದ ಕ್ರಿಯೆಯಿಂದ ಮತ್ತು ರಾಗದ ಕ್ರಿಯೆಯಿಂದ ಆತ್ಮನು ಭಿನ್ನನಿದ್ದಾನೆಂಬುದರ ಭೇದವಿಜ್ಞಾನವಿಲ್ಲ. ಅಂಥ ಸಾಮಾನ್ಯ ತಪದ ಮಾತೇನು, ಆದರೆ ಒಂಭತ್ತನೇ ಗ್ರೈವೇಯಕಕ್ಕೆ ಹೋಗುವಂಥ ಮಹಾವ್ರತ ಪಾಲಿಸಿದರು, ಬ್ರಹ್ಮಚರ್ಯ ಪಾಲಿಸಿದರು; ಆದರೆ ಚೈತನ್ಯದ ಅರಿವಿಲ್ಲದೆ ಸಮಸ್ತ ಶ್ರಮ ವ್ಯರ್ಥವಾಯಿತು. ಬೆಂಡಿನಿಂದ ಪಲಂಗ ಮಾಡಿದರೆ ಅದು ಮಲಗಲು ಬರುವುದಿಲ್ಲ. ಅದರಂತೆ ಪುಣ್ಯ-ಪಾಪದ ವೃತ್ತಿಯು ಬೆಂಡಿನ ಮಂಚದಂತಿದೆ. ಅದರಿಂದ ಧರ್ಮವಾಗುವುದಿಲ್ಲ. ಧರ್ಮವಾಗುತ್ತದೆಂದು ಮನ್ನಿಸುವುದು ಅಜ್ಞಾನವಿದೆ.

ಒಂದು ಸಮಯದೊಳಗೆ ಆತ್ಮನಲ್ಲಿ ಅನಂತ ಗುಣಗಳಿವೆ ಮತ್ತು ಭೂತಕಾಲದ ಅಶುದ್ಧ ಪರ್ಯಾಯಗಳಿಗಿಂತ ಭವಿಷ್ಯಕಾಲದ ಶುದ್ಧ ಪರ್ಯಾಯಗಳು ಅನಂತಗುಣಿತ ತುಂಬಿಕೊಂಡಿವೆ. ಅಂಥ ಗುಣ-ಪರ್ಯಾಯಗಳ ಪಿಂಡಸ್ವರೂಪವಿರುವ ಆತ್ಮದ್ರವ್ಯದಲ್ಲಿ ಶ್ರದ್ಧೆ, ಜ್ಞಾನ ಮತ್ತು ಸ್ಥಿರತೆಯಿಂದ ನಿರ್ವಿಕಲ್ಪತೆಯಾಗುತ್ತದೆ ನೋಡಿರಿ ! ಆರನೇ, ಏಳನೇ ಗುಣಸ್ಥಾನದಲ್ಲಿ ಜೀಕುತ್ತಿರುವಂಥ ಅಮೃತಚಂದ್ರಾಚಾರ್ಯದೇವರು ಟೀಕೆ ಬರೆದಿದ್ದಾರೆ. ಟೀಕೆ ಬರೆಯುವ ಜಡದ ಪರ್ಯಾಯವು ಜಡದ ಕಾರಣದಿಂದಿದೆ. ರಾಗವುಂಟಾಗಿದೆ ಮತ್ತು ಜ್ಞಾನವು ಕ್ರಮದಿಂದ ಎಷ್ಟು ಪ್ರವರ್ತಿಸಿದೆ ಅಷ್ಟು ಆಸ್ರವವಿದೆ ಮತ್ತು ಎಷ್ಟು ಜ್ಞಾಯಕಭಾವದ ಅನುಸರಣವಿದೆ ಅಷ್ಟು ವೀತರಾಗತೆಯಿದೆ. ಬರೆಯುವ ವಿಕಲ್ಪದ ಆದರವಿರಲಿಲ್ಲ, ಆದರೆ ಸ್ವಭಾವದ ಆದರವಿತ್ತು. ನಾನು ಪಂಚಾಸ್ತಿಕಾಯದ ಟೀಕೆ ಬರೆದಿಲ್ಲ, ನಾನಂತೂ ಜ್ಞಾಯಕ ಸ್ವಭಾವದ ಅನುಸಾರ ಭಾವ ಮಾಡಿದ್ದೇನೆ ಆ ರಚನೆಯಿಂದ ವೀತರಾಗತೆಯು ಪ್ರಕಟವಾಗಿದೆಯೆಂದು ಸ್ವಯಂ ಅಮೃತಚಂದ್ರಾಚಾರ್ಯದೇವರು ಹೇಳಿದ್ದಾರೆ.

ಅನಾದಿ ಕಾಲದಿಂದ ಆಸ್ರವದ ಮೂಲಕ ಆತ್ಮನಲ್ಲಿ ಅನಂತ ಶಕ್ತಿಯು ಮುಚ್ಚಿಹೋಗಿದೆ. ವಿರುದ್ಧ ಭಾವವು ಶಕ್ತಿಯನ್ನು ಪ್ರಕಟವಾಗಗೊಡುವುದಿಲ್ಲ, ಆದರೆ ಜ್ಞಾನಿಗಳು ತಮ್ಮ ಆತ್ಮನ ಅವಲಂಬನ ತೆಗೆದುಕೊಂಡರು. ಜಡದ ಕ್ರಿಯೆ ಮತ್ತು ಪುಣ್ಯ-ಪಾಪದ ಕ್ರಿಯೆಯು ನನ್ನ ಸ್ವರೂಪವಿಲ್ಲ. ನಾನಂತೂ ಶುದ್ಧ ಚೈತನ್ಯನಿದ್ದೇನೆಂದು ಆತ್ಮನ ಆಶ್ರಯದಿಂದ ವೀತರಾಗತೆಯು ಹನ್ನೆರಡನೇ ಗುಣಸ್ಥಾನದಲ್ಲಿ ಪ್ರಕಟವಾಗುತ್ತದೆ ಮತ್ತು ಹದಿಮೂರನೆಯ ಗುಣಸ್ಥಾನದಲ್ಲಿ ರಾಗವಿಲ್ಲದಿದ್ದರೂ ಕೂಡ ಕ್ಷಾಯೋಪಶಮಿಕ ಜ್ಞಾನದಶೆಯು ಅಂತರ್ಮುಹೂರ್ತವಿರುತ್ತದೆ ಮತ್ತು ಅದರ ನಂತರ ಒಂದು ಸಮಯದಲ್ಲಿ ಜ್ಞಾನಾವರಣೀಯ ದರ್ಶನಾವರಣೀಯ, ಅಂತರಾಯ ಕರ್ಮಗಳ ನಾಶವಾಗುವುದರಿಂದ ಕಥಂಚಿತ್ ಕೂಟಸ್ಥ ಅಚಲ ಕೇವಲಜ್ಞಾನ ದಶೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಒಂದು ಸಮಯದ ಜ್ಞಾನ ಪರ್ಯಾಯದಿಂದ ಅನಂತ ಕೇವಲಜ್ಞಾನ ಮೊದಲಾದವುಗಳ ಪರ್ಯಾಯಗಳು ಪ್ರಕಟವಾಗುವಂಥ ಅಖಂಡದ್ರವ್ಯವನ್ನು ಒಪ್ಪಿಕೊಂಡ ನಂತರ ಬಾಕಿ ಏನು ಉಳಿಯುವುದು ? ಏಕಾಗ್ರತೆಯಾಗುತ್ತಿದ್ದಂತೆ ಕ್ರಮದಿಂದ ಪ್ರವರ್ತಿಸುವ ದಶೆಯು ಕುಂದತೊಡಗುವುದು, ಮೋಹದ ನಾಶವಾದ ನಂತರ ಜ್ಞಾನಾವರಣೀಯ ಮೊದಲಾಗಿ ನಿಮಿತ್ತರೂಪದಿಂದ ಇದ್ದವುಗಳು

ಕೂಡ ನಾಶಹೊಂದಲು ಕೇವಲಜ್ಞಾನವು ಪ್ರಕಟವಾಗುತ್ತದೆ.

ಮುನಿಗೆ ಪ್ರತ್ಯಕ್ಷ ಕೇವಲಜ್ಞಾನವಿಲ್ಲದಿದ್ದರೂ ಕೂಡ ಇದೇ ಮಾರ್ಗದಿಂದ ಕೇವಲಜ್ಞಾನವಿದೆಯೆಂದು ಪ್ರತೀತಿಯಲ್ಲಿ ಬಂದುಬಿಟ್ಟರೆ ಅದರಲ್ಲಿ ಎಲ್ಲವೂ ಬಂದುಬಿಡುತ್ತದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ದಶೆಯು ಪ್ರಕಟವಾದರೆ ಅವನಿಗೆ ನಿಯಮದಿಂದ ಕೇವಲಜ್ಞಾನವಾಗುವುದು.

ಕೇವಲಜ್ಞಾನ ಪರ್ಯಾಯವು ಸಮಯ ಸಮಯಕ್ಕೆ ಪ್ರಕಟವಾಗುತ್ತಿದ್ದರೂ ಅದರಲ್ಲಿ ರಾಗದ ಜತೆ ಪ್ರವರ್ತಿಸುವಂಥ ಭಾವದ ಅಭಾವವಿದೆ. ಅದಕ್ಕಾಗಿ ಕಥಂಚಿತ್ ಕೂಟಸ್ಥವೆಂದು ಹೇಳಿದೆ. ರಾಗವನ್ನು ಅವಲಂಬಿಸಿ ಕ್ರಮದಿಂದ ಪ್ರವರ್ತಿಸುತ್ತಿರುವಂಥವು ಈಗ ಇಲ್ಲದಿರುವುದರಿಂದ ಅಚಲ-ಕೂಟಸ್ಥವೆಂದು ಹೇಳಿದೆ. ಆದರೆ ಅದರಿಂದ ಬದಲಾಗುವುದಿಲ್ಲ. ಕೇವಲಜ್ಞಾನ ಪರ್ಯಾಯವು ಸಮಯ-ಸಮಯಕ್ಕೆ ಬದಲಾಗುತ್ತದೆ, ಆದರೆ ಇದ್ದಕ್ಕಿದ್ದಂತೆಯೇ ಇರುತ್ತದೆ. ಅದಕ್ಕಾಗಿ ಕೂಟಸ್ಥವಿದೆಯೆಂದು ಹೇಳಿದೆ. ಈ ಪ್ರಕಾರ ಜೀವನ್ಮುಕ್ತ ದಶೆಯು ಅಥವಾ ಕೇವಲಜ್ಞಾನದ ಅವಸ್ಥೆಯು ಪ್ರಾಪ್ತವಾಗುವ ವಿಧಿಯಿದೆಯೆಂದು ತಿಳಿಯುವುದು. ಅದನ್ನು ಇದೇ ರೀತಿಯಿಂದ ಪ್ರಾಪ್ತಮಾಡಿಕೊಳ್ಳಬೇಕಾಗುವುದು.

**ಪ್ರಶ್ನೆ :-** ಯಾವ ಪ್ರಕಾರದಿಂದ ಜೀವನು ಮುಕ್ತನಾಗುತ್ತಾನೆ ?

**ಉತ್ತರ :-** ಆತ್ಮನು ಜ್ಞಾನಸ್ವಭಾವಿಯಾದ ವಸ್ತುವಿದ್ದಾನೆ, ಅವನು ರಾಗ-ದ್ವೇಷಗಳಲ್ಲಿ ನಿಂತುಕೊಂಡಿರುವುದು ಸಂಸಾರದ ಕಾರಣವಿದೆ ಮತ್ತು ಅವನು ಚೈತನ್ಯದಲ್ಲಿ ಏಕಾಗ್ರತೆ ಮಾಡಿದನೆಂದರೆ ಹನ್ನೆರಡನೆಯ ಗುಣಸ್ಥಾನದಲ್ಲಿ ನಿರ್ಮೋಹ ದಶೆಯು ಪ್ರಕಟವಾಗುತ್ತದೆ ಮತ್ತು ಅದರನಂತರ ಒಂದು ಅಂತರ್ಮುಹೂರ್ತದಲ್ಲಿ ಕೇವಲಜ್ಞಾನವು ಪ್ರಕಟವಾಗುತ್ತದೆ, ಯಾವನಿಗೆ ರಾಗವಿರುವುದು ಅವನ ಉಪಯೋಗವು ಕ್ರಮಪೂರ್ವಕವಾಗಿ ವರ್ತಿಸುತ್ತದೆ, ಆದರೆ ಯಾರು ವೀತರಾಗರಿದ್ದಾರೆ-ಕೇವಲಜ್ಞಾನಿಯಾಗಿದ್ದಾರೆ ಅವರ ಉಪಯೋಗವು ಕ್ರಮಪೂರ್ವಕವಾಗಿ ಇರುವುದಿಲ್ಲ. ಇಲ್ಲಿ ಮೋಕ್ಷತತ್ತ್ವವನ್ನು ತಿಳಿಸಿಕೊಡಲಾಗಿದೆ. ಆ ಮೋಕ್ಷತತ್ತ್ವದಲ್ಲಿ ಉಪಯೋಗವನ್ನು ಕ್ರಮಪೂರ್ವಕವೆಂದು ಮನ್ನಿಸಿದರೆ ಮೋಕ್ಷತತ್ತ್ವದ ಕುರಿತು ದೋಷವಿದೆ.

ಆರು ಗುರಾಣಿಗಳೆಂಬ ಗ್ರಂಥದಲ್ಲಿ ಏಳು ತತ್ತ್ವಗಳ ಏಳು ದೋಷಗಳನ್ನು ತಿಳಿಸಿಕೊಡಲಾಗಿದೆ. ನಾನು ಸುಖಿ-ದುಃಖಿಯಿದ್ದೇನೆ, ಶರೀರವೆಂದರೇನೇ ನಾನಿದ್ದೇನೆನ್ನುವುದು ಜೀವತತ್ತ್ವದ ಕುರಿತು ದೋಷವಿದೆ. ಶರೀರವು ಉತ್ಪನ್ನವಾದರೆ ನಾನು ಉತ್ಪನ್ನನಾಗಿದ್ದೇನೆನ್ನುವುದು ಅಜೀವ ತತ್ತ್ವದ ಕುರಿತು ದೋಷವಿದೆ. ಪುಣ್ಯ-ಪಾಪದ ವಿಕಲ್ಪಗಳು ದುಃಖದಾಯಕವಾಗಿದ್ದರೂ ಕೂಡ ಅವನ್ನು ಸುಖದಾಯಕವೆಂದು ಮನ್ನಿಸುವುದು ಆಸ್ರವತತ್ತ್ವದ ಕುರಿತಾಗಿರುವ ದೋಷವಿದೆ. ಪುಣ್ಯವನ್ನು ಒಳ್ಳೆಯದೆಂದು ಮನ್ನಿಸುವುದು ಮತ್ತು ಪಾಪವನ್ನು ಕೆಡಕೆಂದು ಮನ್ನಿಸುವುದು ಬಂಧತತ್ತ್ವದ ಕುರಿತಾದ ದೋಷವಿದೆ. ಆತ್ಮನ ಆಶ್ರಯದಿಂದ ಸಂವರವಾಗುತ್ತಿದ್ದು ಅದು ಸುಖದಾಯಕವಿದೆ, ಆದರೆ ಅದನ್ನು ದುಃಖದಾಯಕವೆಂದು ಮನ್ನಿಸುವುದು ಸಂವರ ಕುರಿತಾಗಿರುವ ದೋಷವಿದೆ, ಆತ್ಮನ ತಿಳಿವಳಿಕೆ (ಜ್ಞಾನ) ಮಾಡಿಕೊಳ್ಳುವಲ್ಲಿ ಬೇಸರ ಬರುವುದು ಕೂಡ ಸಂವರ ತತ್ತ್ವದ ದೋಷವಿದೆ. ಇಚ್ಛೆಯನ್ನು ತಡೆಯುವಲ್ಲಿ ಆನಂದವಿದೆ, ಆದರೆ ಅದಕ್ಕೆ ಪ್ರತಿಯಾಗಿ ಇಚ್ಛೆಯಲ್ಲಿ ಆನಂದ ಮನ್ನಿಸುವುದು ನಿರ್ಜರೆಯಲ್ಲಿನ ದೋಷವಿದೆ. ಮೋಕ್ಷದಲ್ಲಿ ಆಕುಲತೆ ಮನ್ನಿಸುವುದು ಮೋಕ್ಷದ ದೋಷವಿದೆ.

ಯಾವ ಜೀವನು ಕೇವಲಜ್ಞಾನ ಮತ್ತು ಕೇವಲದರ್ಶನವನ್ನು ಕ್ರಮಪೂರ್ವಕವೆಂದು ಮನ್ನಿಸುವನು ಮತ್ತು

ಜತೆಯಲ್ಲಿ ಉಪಯೋಗರೂಪವೆಂದು ಮನ್ನಿಸುವುದಿಲ್ಲ ಅದು ಕೂಡ ಮೋಕ್ಷತತ್ತ್ವದ ದೋಷವಿದೆ. ರಾಗ-ದ್ವೇಷ ಮೊದಲಾದ ಪರಿಣಾಮದಿಂದ ಬಿಡುಗಡೆಯಾದ ನಂತರ ಜ್ಞಾನ-ದರ್ಶನದಲ್ಲಿ ಕ್ರಮವು ಬೀಳುತ್ತದೆಯೆಂಬುದು ಸಂಭವಿಸುವುದಿಲ್ಲ. ಕೇವಲೀ ಭಗವಂತರಿಗೆ ಜತೆಯಲ್ಲಿಯೇ ಎರಡು ಉಪಯೋಗಗಳಿರುತ್ತವೆ.

**ಪ್ರಶ್ನೆ** :- ಅದಂತೂ ಅನುಮಾನದ ವಿಷಯವಿಲ್ಲವೇನು ?

**ಉತ್ತರ** :- ಅನುಮಾನ ಜ್ಞಾನವು ಕೂಡ ಪ್ರಮಾಣ ಜ್ಞಾನವಿದೆ. ಜ್ಞಾನ ಮತ್ತು ದರ್ಶನವೆಂದು ಎರಡು ಗುಣಗಳಿವೆ. ಆದರೆ ಅವುಗಳ ಕರ್ತೃವು ಒಬ್ಬನಿದ್ದಾನೆ. ಯಾವಾಗ ಕೇವಲಿಯು ಜ್ಞಾನವು ಉಪಯೋಗರೂಪದಿಂದ ಪರಿಣಮಿಸುತ್ತದೆ ಆಗ ದರ್ಶನವು ಕೂಡ ಪೂರ್ಣ ಉಪಯೋಗರೂಪದಿಂದ ಪ್ರಕಟವಾಗುತ್ತದೆ, ಎರಡೂ ಜತೆಯಲ್ಲೇ ಇರುತ್ತವೆ. ಕೇವಲೀ ಭಗವಂತರುಗಳಿಗೆ ಇಂದ್ರಿಯಗಳ ವ್ಯಾಪಾರವು ಇರುವುದಿಲ್ಲ. ಅನಂತಸುಖವು ಶಕ್ತಿರೂಪದಿಂದ ಇತ್ತು ಈಗ ಅದು ವ್ಯಕ್ತವಾಗಿಹೋಗಿದೆ. ಸ್ವರೂಪದಲ್ಲಿ ಗುಪ್ತರಾಗಿರುತ್ತಾರೆ ಯಾವುದರದೂ ಏನನ್ನೂ ಮಾಡುವುದಿಲ್ಲ ತಮ್ಮಲ್ಲಿ ತಾವು ಒಂದಾಗಿ ಹೋಗುತ್ತಾರೆ.

ಕೇವಲೀ ಭಗವಂತರು ಮೊದಲು ಭಾಷೆಯ ಪರಮಾಣುಗಳನ್ನು ಗ್ರಹಣ ಮಾಡುತ್ತಾರೆ ಮತ್ತು ಅನಂತರ ಬಿಟ್ಟುಕೊಡುತ್ತಾರೆಂದು ಹೇಳುತ್ತಾರೆ ; ಆದರೆ ಅದು ಕೂಡ ದೋಷವಿದೆ.

ಆತ್ಮನು ಯಾವುದೇ ಭಾಷೆಯ ಪರಮಾಣುಗಳನ್ನು ಗ್ರಹಣ ಮಾಡುವುದಿಲ್ಲ. ಭಾಷೆಯ ಪರಮಾಣುಗಳು ತಮ್ಮ ಕಾರಣದಿಂದ ಬರುತ್ತವೆ ಮತ್ತು ಹೋಗುತ್ತವೆ. ಆದುದರಿಂದ ಕೇವಲೀ ಭಗವಂತರುಗಳ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕಾಗುವುದು.

ಕೇವಲೀ ಭಗವಂತರುಗಳ ಜ್ಞಾನ ಕ್ರಿಯೆಯ ಪ್ರವೃತ್ತಿಯು ಕ್ರಮದಿಂದ ಆಗುವುದಿಲ್ಲ, ಆದರೆ ಎರಡೂ ಅಖಂಡ ಉಪಯೋಗರೂಪದಿಂದ ಇರುತ್ತವೆ, ಏಕೆಂದರೆ ಅವರಿಗೆ ಭಾವಕರ್ಮದ ಅಭಾವವಿದೆ. ಇಂಥ ಅವಸ್ಥೆಯಾಗಿರುವುದರಿಂದ ಭಗವಂತರು ಸರ್ವಜ್ಞರಿದ್ದಾರೆ-ಸರ್ವದರ್ಶಿಯಿದ್ದಾರೆ. ಅವರಿಗೆ ಇಂದ್ರಿಯಗಳ ವ್ಯಾಪಾರವಿರುವುದಿಲ್ಲ. ಅವ್ಯಾಬಾಧ, ಅನಂತಸುಖ ಸಂಯುಕ್ತರಾಗಿ ಯಾವಾಗಲೂ ಸ್ಥಿರಸ್ವಭಾವದಿಂದ ಸ್ವರೂಪದಲ್ಲಿ ಗುಪ್ತರಾಗಿರುತ್ತಾರೆ. ಇದು ಭಾವಕರ್ಮದಿಂದ ಮುಕ್ತವಿರುವ ಜೀವದ ಸ್ವರೂಪ ತಿಳಿಸಿಕೊಡಲಾಗಿದೆ. ಕೇವಲಜ್ಞಾನ ಮೊದಲಾದ ಅನಂತ ಚತುಷ್ಟಯಗಳೂ ಪ್ರಕಟವಾಗಿರುವುದು ದ್ರವ್ಯಕರ್ಮದಿಂದ ಮುಕ್ತವಾಗಿರುವ ಪರಮ ಸಂವರಸ್ವರೂಪವಿದೆ. ಯಾವಾಗ ಜೀವನಿಗೆ ಕೇವಲಜ್ಞಾನದಶೆಯು ಪ್ರಾಪ್ತವಾಗುತ್ತದೆ ಆಗ ನಾಲ್ಕು ಅಘಾತಿ ಕರ್ಮಗಳು ಸುಟ್ಟು ಹೋಗಿರುವ ಹಗ್ಗದ ಸಮಾನ ಉಳಿದುಕೊಂಡಿರುತ್ತವೆ. ನಾಲ್ಕು ಘಾತಿಕರ್ಮಗಳು ನಾಶವಾಗಿಹೋಗುತ್ತಿರುವಂತೆಯೇ ಅನಂತ ಚತುಷ್ಟಯಗಳು ಪ್ರಕಟವಾಗುತ್ತವೆ. ಆಗ ಅವರು ಸಕಲ ಪರಮಾತ್ಮರಾಗಿಹೋಗುತ್ತಾರೆ.

ಈಗ ದ್ರವ್ಯಕರ್ಮದ ಮೋಕ್ಷದ ಕಾರಣ ಅಥವಾ ಪರಮ ನಿರ್ಜರೆಗೆ ಕಾರಣವಿರುವ ಯಾವ ಧ್ಯಾನವಿದೆ ಅದರ ಸ್ವರೂಪವನ್ನು ತಿಳಿಸಿಕೊಡಲಾಗುತ್ತದೆ -

**ದಂಸಣಣಾಣಸಮಗ್ಗಂ ಝಾಣಂ ಣೋ ಅಣ್ಣದವ್ವಸಂಜುತ್ತಂ ।**
**ಜಾಯದಿ ಣಿಜ್ಜರಹೇದೂ ಸಭಾವಸಹಿದಸ್ಸ ಸಾಧುಸ್ಸ ॥೧೫೨॥**

**ಆ ದರ್ಶನಜ್ಞಾನ ಪರಿಪೂರ್ಣಮೇಣನ್ಯದ್ರವ್ಯವಿರಹಿತ ಧ್ಯಾನವು ।**
**ಅದು ನಿರ್ಜರೆಗೆ ಹೇತುವಾಗುವುದು ಸ್ವಭಾವಪರಿಣತ ಸಾಧುವಿಗೆ ॥೧೫೨॥**

ಅಖಂಡ ಪರಿಪೂರ್ಣ ಶುದ್ಧ ಚೈತನ್ಯವಿದೆ. ಸಾಮಾನ್ಯ ಅವಲೋಕನವು ದರ್ಶನವಿದೆ ಮತ್ತು ವಿಶೇಷ ತಿಳಿದುಕೊಳ್ಳುವುದು ಜ್ಞಾನವಿದೆ. ಸರ್ವಜ್ಞ ಭಗವಂತರಿಗೆ ಜ್ಞಾನ-ದರ್ಶನದಲ್ಲಿ ಪರಿಪೂರ್ಣತೆಯು ಜತೆಯಲ್ಲಿಯೇ ಇದೆ, ಅವರಿಗೆ ದರ್ಶನ-ಜ್ಞಾನದಲ್ಲಿ ಅಪೂರ್ಣತೆಯಿಲ್ಲ. ಅದರಂತೆ ಉಪಯೋಗವು ಕೂಡ ಕ್ರಮಪೂರ್ವಕವಿರುವುದಿಲ್ಲ. ಒಂದುವೇಳೆ ಕ್ರಮಪೂರ್ವಕವಿದ್ದರೆ ಆವರಣವಿರಬೇಕಾಗುವುದು ಮತ್ತು ಆವರಣವಿರುತ್ತಿದ್ದರೆ ಸರ್ವಜ್ಞತೆಯು ಉಳಿಯುವುದಿಲ್ಲ. ಭಗವಂತರಿಗೆ ಅನಂತ ಚತುಷ್ಟಯಗಳು ಪ್ರಕಟವಾಗಿರುವುದರಿಂದ ಪರದ್ರವ್ಯದ ಚಿಂತೆಯ ನಿರೋಧರೂಪವಿರುವ ಧ್ಯಾನವು ಅವರಿಗೆ ಇರುವುದು ಮತ್ತು ಆ ಧ್ಯಾನವು ನಾಲ್ಕು ಅಘಾತಿಕರ್ಮಗಳ ನಿರ್ಜರೆಯ ಕಾರಣವಿದೆ. ಧ್ಯಾನವು ಯಾರಿಗೆ ಇರುವುದು ? ಕೇವಲೀಭಗವಂತರಿಗೆ ಧ್ಯಾನವು ಹೇಗಿರುವುದು ? ಅವರು ಪರದ್ರವ್ಯದ ಸಂಬಂಧದಿಂದ ರಹಿತರಿದ್ದಾರೆ ಮತ್ತು ಆತ್ಮಿಕ ಸ್ವಭಾವದಲ್ಲಿ ಸಂಯುಕ್ತರಿದ್ದಾರೆ. ಕೇವಲೀ ಭಗವಂತರಿಗೆ ಜ್ಞಾನ-ದರ್ಶನದ ಪರಿಪೂರ್ಣತೆಯಿರುವುದು. ಅವರಿಗೆ ನಾಲ್ಕು ಅಘಾತಿ ಕರ್ಮಗಳು ಸುಟ್ಟುಹೋದ ಹಗ್ಗದ ಸಮಾನವಿವೆ. ಭಗವಂತರು ಅಘಾತಿ ಕರ್ಮಗಳನ್ನು ದೂರಮಾಡುವ ಸಲುವಾಗಿ ವಿಹಾರ ಮಾಡುತ್ತಾರೆ, ಉಪದೇಶ ಕೊಡುತ್ತಾರೆಂದು ಯಾರೋ ಹೇಳುತ್ತಾರೆ. ಆದರೆ ಈ ಮಾತುಗಳು ಅಸತ್ಯವಿವೆ. ಭಗವಂತರಿಗೆ ವಿಹಾರ ಮಾಡುವುದರದಾಗಲಿ ಅಥವಾ ಉಪದೇಶ ಕೊಡುವುದರದಾಗಲಿ ರಾಗವು ಇರುವುದಿಲ್ಲ. ವಿಹಾರರೂಪದ ಕ್ರಿಯೆಯಿಂದ ಮತ್ತು ಉಪದೇಶ ಕೊಡುವ ಇಚ್ಛೆಯಿಂದ ಸ್ವಾಭಾವಿಕವಾಗಿಯೇ ರಹಿತರಾಗಿ ಹೋಗಿರುತ್ತಾರೆ. ಅನಂತ ಚತುಷ್ಟಯಗಳು ಪ್ರಕಟವಾಗಿರುವುದೇ ಹಳೆಯ ಕರ್ಮಗಳನ್ನು ದೂರಮಾಡುವ ಕಾರಣವಿದೆ.

**ಭಾವಾರ್ಥ :-** ಯಾವಾಗ ಆತ್ಮನು ವಿಕಾರೀ ಪರಿಣಾಮದಿಂದ ಮುಕ್ತನಾಗಿ ಕೇವಲಜ್ಞಾನದ ಅವಸ್ಥೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ ಆಗ ಕೇವಲೀ ಭಗವಂತರು ತಮ್ಮ ಸ್ವರೂಪದ ಅಲೌಕಿಕ ಸುಖದಿಂದ ತೃಪ್ತರಾಗಿ ಹೋಗುತ್ತಾರೆ. ಭಗವಂತರು ಲೋಕಾಲೋಕವನ್ನು ನೋಡುವುದರಿಂದ ಸುಖವಿರುವುದಿಲ್ಲ, ಆದರೆ ಅವರು ತಮ್ಮ ವಸ್ತುವಿನಲ್ಲಿ ತೃಪ್ತರಿರುವುದರಿಂದ ಸುಖಿಯಿದ್ದಾರೆ. ಭಗವಂತರು ಕರ್ಮಜನಿತ ಸುಖ-ದುಃಖದ ವೇದನದಿಂದ ರಹಿತರಿದ್ದಾರೆ ಮತ್ತು ಜ್ಞಾನಾವರಣೀಯ, ದರ್ಶನಾವರಣೀಯ ಕರ್ಮಗಳು ನಾಶವಾಗುವುದರಿಂದ ಅನಂತಜ್ಞಾನ-ಅನಂತದರ್ಶನದಿಂದ ಶುದ್ಧ ಚೇತನಮಯರಿದ್ದಾರೆ. ಅವರಿಗೆ ಇಚ್ಛೆಯ ಮೂಲಕ ಬರುವ ಸುಖ-ದುಃಖಗಳಿರುವುದಿಲ್ಲ. ಭಗವಂತರು ಅತೀಂದ್ರಿಯ ಆನಂದವನ್ನು ಅನುಭವಿಸುತ್ತಾರೆ. ಅವರಿಗೆ ಬಾಹ್ಯ ಪದಾರ್ಥಗಳ ರಸದ ಭೋಗವಿರುವುದಿಲ್ಲ. ಆ ಪರಮೇಶ್ವರರು ತಮ್ಮ ಅಖಂಡ ಚೈತನ್ಯಸ್ವರೂಪದಲ್ಲಿ ವರ್ತಿಸುತ್ತಾರೆ. ಭೇದ ಮಾಡಿದಲ್ಲದೆಯೇ ನಿರ್ವಿಕಲ್ಪ ರಸದ ಅನುಭವ ಮಾಡುತ್ತಾರೆ. ಆ ಕಾರಣವಾಗಿ ಕಥಂಚಿತ್ ಪ್ರಕಾರದಿಂದ ತಮ್ಮ ಸ್ವರೂಪದ ಧ್ಯಾನಿಯಿದ್ದಾರೆ. ಅಥವಾ ಪರದ್ರವ್ಯಗಳ ಸಂಯೋಗದಿಂದ ರಹಿತ, ಆತ್ಮಸ್ವರೂಪದ ಧ್ಯಾನಿಯೆಂಬ ಹೆಸರನ್ನು ಪಡೆದುಕೊಂಡಿದ್ದಾರೆ. ಸ್ವರೂಪದ ಅನುಭವದ ಅಪೇಕ್ಷೆಯಿಂದ ಕೇವಲೀ ಭಗವಂತರಿಗೆ ಉಪಚಾರದಿಂದ ಧ್ಯಾನವನ್ನು ಹೇಳಲಾಗಿದೆ. ಪೂರ್ವದಲ್ಲಿ ಬಂಧಿಸಲ್ಪಟ್ಟಿರುವ ಕರ್ಮಗಳು ಸಮಯ ಸಮಯಕ್ಕೆ ಉದುರಿಹೋಗುತ್ತಲಿವೆ. ಅದೇ ಅಪೇಕ್ಷೆಯಿಂದ ಅವರ ಧ್ಯಾನವು ನಿರ್ಜರೆಗೆ ಕಾರಣವಿದೆಯೆಂದು ಹೇಳಲಾಗುತ್ತದೆ.

ನೋಡಿರಿ ! ಈ ಪ್ರಕಾರ ಅರಹಂತರ ಸ್ವರೂಪವನ್ನು ತಿಳಿಸಿಕೊಡಲಾಗಿದೆ. ''ಣಮೋ ಅರಹಂತಾಣಂ'' ಎಂಬುದಾಗಿ ಜಪಿಸಲಾಗುತ್ತದೆ, ಆದರೆ ಅರಹಂತರು ಹೇಗಿರುತ್ತಾರೆಂಬುದರ ಅರಿವಿಲ್ಲದೆ ಎಲ್ಲವು ವ್ಯರ್ಥವಿದೆ. ಈಗಂತೂ ಅತಿಶಯ ವ್ಯತ್ಯಾಸವಾಗಿಹೋಗಿದೆ. ಭಗವಂತರಿಗೆ ಆಹಾರಾದಿಗಳನ್ನು ಮನ್ನಿಸಲಾಗಿದೆ, ಜ್ಞಾನ-ದರ್ಶನದ

ಉಪಯೋಗವನ್ನು ಕ್ರಮಪೂರ್ವಕವೆಂದು ಮನ್ನಿಸಲಾಗುತ್ತಿದೆ, ರೋಗವನ್ನು ಮನ್ನಿಸಲಾಗುತ್ತಿದೆ. ಆದರೆ ಇವೆಲ್ಲವು ಕೇವಲೀ ಭಗವಂತರಿಗೆ ಕಲಂಕಪ್ರಾಯವಿವೆ. ಆದುದರಿಂದಲೇ ಭ. ಕುಂದಕುಂದಾಚಾರ್ಯದೇವರು ಎಲ್ಲವನ್ನೂ ಸ್ಪಷ್ಟಪಡಿಸಿದ್ದಾರೆ. ಭಗವಂತರಿಗೆ ಆಹಾರವಿರುವುದಿಲ್ಲ, ರೋಗವಿರುವುದಿಲ್ಲ. ಅವರಿಗಂತೂ ಜ್ಞಾನ-ದರ್ಶನಗಳು ಜತೆಯಲ್ಲಿಯೇ ಇರುತ್ತವೆ. ಇವೇ ಮೊದಲಾದ ಪ್ರಕಾರದಿಂದ ತಿಳಿದುಕೊಳ್ಳಬೇಕೆಂಬ ಭಾವವು ಮೋಕ್ಷದ ಸ್ವರೂಪವಿದೆಯೆಂದು ಹೇಳಿದ್ದಾರೆ.

ಈಗ ದ್ರವ್ಯಮೋಕ್ಷದ ಸ್ವರೂಪವನ್ನು ಹೇಳಲಾಗುತ್ತದೆ,-

**ಜೋ ಸಂವರೇಣ ಜುತ್ತೋ ಣಿಜ್ಜರಮಾಣೋಧ ಸವ್ವಕಮ್ಮಾಣಿ ।**
**ವವಗದವೇದಾಉಸ್ಸೋ ಮುಯದಿ ಭವಂ ತೇಣ ಸೋ ಮೋಕ್ಖೋ ॥೧೫೩॥**

**ಯಾವಸಂವರಸಹಿತನಾದ ಜೀವನೆಲ್ಲ ಕರ್ಮಗಳ ನಿರ್ಜರೆ ಮಾಡುತ್ತ ।**
**ಆ ವೇದನೀಯಾಯುರಹಿತನಾಗಿ ಭವಬಿಡುವುದರಿಂದದು ಮೋಕ್ಷವಿದೆ ॥೧೫೩॥**

ಕೇವಲಜ್ಞಾನವಾದ ಮೇಲೆ ಭಾವಮೋಕ್ಷವೆಂದು ಹೇಳಲಾಗುತ್ತದೆ ಮತ್ತು ಸಿದ್ಧ ಅವಸ್ಥೆಯು ಆದನಂತರ ಭಾವಮೋಕ್ಷ ಹಾಗೂ ದ್ರವ್ಯಮೋಕ್ಷ ಎರಡನ್ನೂ ಹೇಳಲಾಗುತ್ತದೆ. ಕೇವಲಜ್ಞಾನವಾದನಂತರ ಭಗವಂತರಿಗೆ ಧ್ಯಾನವು ಉಪಚಾರದಿಂದ ಇರುತ್ತದೆ ಮತ್ತು ಸಮಯ ಸಮಯಕ್ಕೆ ಶುದ್ಧತೆಯ ವೃದ್ಧಿಯಾಗುತ್ತ ಹೋಗುತ್ತದೆ. ಕರ್ತೃ, ಕರಣ, ಸಂಪ್ರದಾನ ಮೊದಲಾದ ಹಾಗೂ ಯೋಗ ಮೊದಲಾದ ಗುಣಗಳು ಅಶುದ್ಧವಿದ್ದು, ಅವುಗಳಲ್ಲಿನ ಅಶುದ್ಧತೆಯು ದೂರವಾಗಿರುತ್ತದೆ.ಚಾರಿತ್ರಗುಣದ ಶುದ್ಧತೆಯಾಗಿಹೋಗಿದ್ದರೂ ಕೂಡ ಸಂಪೂರ್ಣ ಆತ್ಮನ ಪರಿಪೂರ್ಣ ಚಾರಿತ್ರವು ಬಾಕಿಯಿದೆಯೆಂಬುದಾಗಿ ಕೇವಲಿಯ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುವುದು. ಕೇವಲೀ ಭಗವಂತರು ಮೋಕ್ಷವಾಗುವ ಸಮಯದಲ್ಲಿ ಉಪವಾಸಮಾಡುತ್ತಾರೆಂದು ಕೆಲವರು ಹೇಳುತ್ತಾರೆ, ಆದರೆ ಆ ಮಾತು ದೋಷದಿಂದ ತುಂಬಿಕೊಂಡಿರುತ್ತದೆ. ಅವರು ಮೋಕ್ಷತತ್ತ್ವದಲ್ಲಿ ದೋಷಮಾಡುತ್ತಾರೆ. ಒಂದು ತತ್ತ್ವದಲ್ಲಿ ದೋಷವಿದ್ದರೆ ಎಲ್ಲ ತತ್ತ್ವಗಳಲ್ಲಿ ದೋಷವಿರುತ್ತದೆ.

ದ್ರವ್ಯದೃಷ್ಟಿಯಾಯಿತೆಂದರೆ ಸಮ್ಯಗ್ದರ್ಶನವಾಗುತ್ತದೆ. ಒಂದು ಸಮಯದ ಪರ್ಯಾಯಬುದ್ಧಿಯು ದೂರವಾದರೆ ಮತ್ತು ತ್ರಿಕಾಲ ಬುದ್ಧಿಯಾದರೆ ಸಮ್ಯಗ್ದರ್ಶನರೂಪದ ಸಂವರವಾಗುತ್ತದೆ. ಅದು ಮುಂದುವರೆಯುತ್ತ ಕೇವಲಜ್ಞಾನಿಗೆ ಕೂಡ ಪರಮ ಸಂವರವಿರುತ್ತದೆ. ಇಲ್ಲಿ ಭಾವಮೋಕ್ಷವುಳ್ಳ ಕೇವಲೀ ಭಗವಂತರ ಮಾತನ್ನು ತೆಗೆದುಕೊಳ್ಳಲಾಗಿದೆ. ಅವರಿಗೆ ರಾಗ-ದ್ವೇಷರೂಪ ಕರ್ಮದ ಅಭಾವವು ವರ್ತಿಸುತ್ತದೆ. ಆದರೆ ಷಟ್‌ಕಾರಕಗಳು, ಯೋಗದ ಕಂಪನ ಹಾಗೂ ಪ್ರತಿಜೀವಿ ಗುಣಗಳು ಮೊದಲಾದವುಗಳ ಅಶುದ್ಧತೆಯು ಇನ್ನೂ ಉಳಿದುಕೊಂಡಿರುತ್ತದೆ ಅಷ್ಟು ಭಾವಕರ್ಮವು ಬಾಕಿಯಿದೆ ಅಸಿದ್ಧತ್ವವು ಉದಯ ಭಾವದಿಂದಿದೆ. ಅಷ್ಟು ಅಶುದ್ಧತೆಯಿಲ್ಲದಿದ್ದರೆ ಸಿದ್ಧರಾಗಿ ಹೋಗುತ್ತಿದ್ದರು. ನಾಲ್ಕು ಅಘಾತಿಕರ್ಮಗಳು ಉಳಿದುಕೊಂಡಿರುವುದರಿಂದ ಅಶುದ್ಧತೆಯು ಉಳಿದುಕೊಂಡಿದೆಯೆಂಬ ಮಾತು ಅಸತ್ಯವಿದೆ. ಅಶುದ್ಧತೆಯಂತೂ ತನ್ನ ಯೋಗ್ಯತೆಯಿಂದ ಉಳಿದುಕೊಂಡಿದೆ. ಕೇವಲಿಯಾದನಂತರ ಅಶುದ್ಧತೆಯಿರುವುದಿಲ್ಲವೆಂದು ಅಥವಾ ಕರ್ಮದ ಕಾರಣದಿಂದ ಅಶುದ್ಧತೆಯಿರುತ್ತದೆಯೆಂದು ಯಾರಾದರೂ ಮನ್ನಿಸಿದರೆ ಅವೆರಡೂ ಮಾತುಗಳು ಅಸತ್ಯವಿವೆ. ಹದಿನಾಲ್ಕನೆಯ ಗುಣಸ್ಥಾನದವರೆಗೆ ಕೂಡ ಅಸಿದ್ಧತ್ವ ನಾಮದ ಉದಯಭಾವವಿರುತ್ತದೆ ಅಷ್ಟು ಸಂಸಾರವು ಬಾಕಿಯಿರುತ್ತದೆ. ಅದನ್ನು ಈಷತ್ ಸಂಸಾರವೆಂದು ಹೇಳುತ್ತಾರೆ.

ಕೇವಲೀ ಭಗವಂತರು ತಮ್ಮಲ್ಲಿ ಸಮಗ್ರರೂಪದಿಂದ ಏಕಾಗ್ರರಾಗಿರುತ್ತಾರೆ ಎಂದರೆ ಅಷ್ಟು ಪೂರ್ವ ಕರ್ಮಗಳು ನಾಶವಾಗುತ್ತಹೋಗುತ್ತವೆ ಮತ್ತು ವೇದನೀಯ, ನಾಮ, ಗೋತ್ರ, ಆಯು ಈ ಅಘಾತಿ ಕರ್ಮಗಳ ನಿಮಿತ್ತದಿಂದ ತಮ್ಮ ಪ್ರತಿಜೀವೀ ಗುಣಗಳ ಹಾಗೂ ಯಾವ ಇತರ ಅಶುದ್ಧತೆಯಿರುತ್ತದೆ ಅದರ ನಾಶ ಮಾಡುತ್ತಾರೆ ಆಗ ಆ ಭಗವಂತರಿಗೆ ದ್ರವ್ಯಮೋಕ್ಷವಾಯಿತೆಂದು ಹೇಳಲಾಗುತ್ತದೆ.

ಇದು ನವತತ್ತ್ವಗಳ ಅಧಿಕಾರವು ನಡೆಯುತ್ತಲಿದೆ. ಅದರಲ್ಲಿ ಈಗ ಮೋಕ್ಷತತ್ತ್ವದ ಮಾತನ್ನು ಹೇಳಲಾಗುತ್ತಿದೆ. ನವತತ್ತ್ವಗಳು ಹೇಗಿವೆ ಹಾಗೆಯೇ ಶ್ರದ್ಧೆಯಲ್ಲಿ ಮತ್ತು ಜ್ಞಾನದಲ್ಲಿ ತಂದುಕೊಂಡರೆ ಸಮ್ಯಗ್ದರ್ಶನವಾಗುತ್ತದೆ, ಆದರೆ ಯಥಾರ್ಥ ಶ್ರದ್ಧೆಯಲ್ಲಿ-ಜ್ಞಾನದಲ್ಲಿ ತಂದುಕೊಳ್ಳದಿದ್ದರೆ ಸಮ್ಯಗ್ದರ್ಶನವಾಗುವುದಿಲ್ಲ. ಮತ್ತು ಅವನಿಗೆ ಚಾರಿತ್ರವು ಕೂಡ ಇರುವುದಿಲ್ಲ. ಯಾವ ಪ್ರಕಾರ ಭೂಮಿಯಿಲ್ಲದೆ ವೃಕ್ಷವಿರುವುದಿಲ್ಲ. ಅದೇ ಪ್ರಕಾರ ಆತ್ಮನ ನಿಜವಾದ ಶ್ರದ್ಧೆಯಿಲ್ಲದೆ ಏಕಾಗ್ರತೆಯರೂಪದ ವೃಕ್ಷವು ಅಂಕುರಿಸುವುದಿಲ್ಲ. ನವತತ್ತ್ವಗಳಲ್ಲಿ ಜೀವ ಮತ್ತು ಅಜೀವವೆಂದು ಎರಡು ದ್ರವ್ಯಗಳಿವೆ ಮತ್ತು ಏಳು ಅವುಗಳ ಪರ್ಯಾಯಗಳಿವೆ. ದಯೆ-ದಾನ ಮೊದಲಾದವುಗಳ ಪರಿಣಾಮ ಮಾಡಿದರೆ ಅದು ಭಾವ ಪುಣ್ಯವಿದೆ ಮತ್ತು ಅದರ ನಿಮಿತ್ತದಿಂದ ಜಡಕರ್ಮವು ಬರುತ್ತದೆ, ಅದು ದ್ರವ್ಯಪುಣ್ಯವಿದೆ. ಹಿಂಸಾದಿಗಳ ಪರಿಣಾಮವು ಭಾವಪಾಪವಿದೆ ಮತ್ತು ಅದರ ನಿಮಿತ್ತದಿಂದ ಜಡಕರ್ಮವು ಬರುತ್ತದೆ. ಅದು ದ್ರವ್ಯಪಾಪವಿದೆ. ಅವೆರಡೂ ಆಸ್ರವವಿವೆ. ಕರ್ಮಗಳ ಬರುವಿಕೆಯು ದ್ರವ್ಯಆಸ್ರವವಿದೆ. ಪುಣ್ಯ-ಪಾಪದ ಪರಿಣಾಮಗಳಲ್ಲಿ ನಿಂತುಕೊಳ್ಳುವುದು ಭಾವಬಂಧವಿದೆ ಮತ್ತು ಕರ್ಮಗಳ ಕಟ್ಟುವಿಕೆಯು ದ್ರವ್ಯಬಂಧವಿದೆ. ಆತ್ಮನ ಅರಿವಿನಿಂದ ಅಶುದ್ಧಿಯು ನಿಂತುಕೊಳ್ಳುವುದು ಮತ್ತು ಸಮ್ಯಗ್ದರ್ಶನಾದಿಗಳಾಗುವುದು ಭಾವಸಂವರವಿದೆ ಮತ್ತು ಕರ್ಮಗಳು ಬಾರದಿರುವುದು ದ್ರವ್ಯಸಂವರವಿದೆ. ಶುದ್ಧತೆಯ ವೃದ್ಧಿಯಾಗುವುದು ಹಾಗೂ ಅಶುದ್ಧತೆಯು ದೂರವಾಗುವುದು ಭಾವನಿರ್ಜರೆಯಿದೆ ಮತ್ತು ಕರ್ಮಗಳ ಉದುರಿಹೋಗುವಿಕೆಯು ದ್ರವ್ಯನಿರ್ಜರೆಯಿದೆ. ಪೂರ್ಣ ಶುದ್ಧತೆಯು ಪ್ರಕಟವಾಗುವುದು ಮೋಕ್ಷವಿದೆ ಮತ್ತು ಸಮಸ್ತ ಕರ್ಮಗಳ ಹೊರಟುಹೋಗುವಿಕೆಯು ದ್ರವ್ಯಮೋಕ್ಷವಿದೆ.

ಹೀಗೆ ನವತತ್ತ್ವಗಳ ಜ್ಞಾನಮಾಡಿಕೊಳ್ಳಬೇಕಾಗುವುದು. ಆತ್ಮನ ಕಲ್ಯಾಣ ಮಾಡಿಕೊಳ್ಳುವುದಿದೆ, ಆದರೆ ಅದು ಎಲ್ಲಿಂದ ಬರುವುದು ? ಆನಂದವಂತೂ ಬಾಹ್ಯದೊಳಗಿಂದ ಬರುವುದಿಲ್ಲ. ದಯೆ-ದಾನಾದಿಗಳ ಪರಿಣಾಮಗಳೊಳಗಿಂದ, ಸ್ವರ್ಗ, ನರಕ ಅಥವಾ ಶ್ರೀಮಂತಿಕೆ ಮೊದಲಾದವುಗಳೊಳಗಿಂದ ಸುಖವು ಬರುವುದಿಲ್ಲ. ಆತ್ಮನು ಸ್ವಯಂ ಚೈತನ್ಯ ಸುಖನಿಧಾನನಿದ್ದಾನೆ, ಅವನೊಳಗಿಂದ ಸುಖವು ಪ್ರಕಟವಾಗುತ್ತದೆ. ಈ ಮಾತಿನ ಕುರಿತು ಮೊದಲು ಪರೋಕ್ಷ ಪ್ರತೀತಿ ಮಾಡಿಕೊಳ್ಳದಿದ್ದರೆ ಅವನಿಗೆ ಪ್ರತ್ಯಕ್ಷ ಆತ್ಮನ ಆನಂದದ ಅನುಭವವು ಆಗುವುದೇ ಇಲ್ಲ. ದೀಪದ ಕಡ್ಡಿಯನ್ನು ಉಜ್ಜುವ ಮೊದಲು ಪೊಟ್ಟಣದಲ್ಲಿರುವ ಕಡ್ಡಿಯ ತುದಿಯಲ್ಲಿ ಅಗ್ನಿಯ ಶಕ್ತಿಯಿದೆಯೆಂಬುದಾಗಿ ಮೊದಲು ಅದರ ಪ್ರತೀತಿ ಮಾಡಬೇಕಾಗುವುದು. ಶರೀರ, ಮನಸ್ಸು, ವಾಣಿ ಮೊದಲಾದವು ಅಜೀವವಿವೆ. ದಯೆ-ದಾನಾದಿಗಳ ಭಾವಗಳು ಮತ್ತು ಕಾಮ-ಕ್ರೋಧಾದಿಗಳ ಭಾವಗಳು ದುಃಖದಾಯಕವಿವೆ ಮತ್ತು ಆತ್ಮನ ಸ್ವಭಾವವು ಸುಖದಾಯಕವಿದೆಯೆಂದು ಪರೋಕ್ಷ ಪ್ರತೀತಿ ಮಾಡಿದಲ್ಲದೆ ಮತ್ತು ಅಂತರ್ಮುಖ ಪ್ರವೃತ್ತಿ ಮಾಡಿದಲ್ಲದೆ ಆತ್ಮನ ಆನಂದದ ಅನುಭವವು ಆಗುವ ಸಾಧ್ಯತೆಯೇ ಇಲ್ಲ.

ಜೀವನು ವರ್ತಮಾನದಲ್ಲಿ ಯಾವ-ಯಾವುದರ ಅಭಿರುಚಿ ಮಾಡುತ್ತಾನೆ ಅದನ್ನು ಸ್ಮರಣೆಯಲ್ಲಿ ತಂದುಕೊಳ್ಳುತ್ತಾನೆ. ಅಜ್ಞಾನಿಯು ಎಲ್ಲೆಲ್ಲಿ ಹೋಗುತ್ತಾನೆ ಅಲ್ಲಲ್ಲಿ ವರ್ತಮಾನ ಸಂಯೋಗವನ್ನೇ ನೋಡಿ ಅದರಲ್ಲಿ ಆನಂದ ಮನ್ನಿಸುತ್ತಾನೆ. ಪೂರ್ವದಲ್ಲಿ ಆಲೂಗಡ್ಡೆಯ-ನಿಗೋದದ ಭವವಿತ್ತು ಅದು ಈಗ ಸ್ಮರಣೆಯಲ್ಲಿ ಬರುವುದಿಲ್ಲ.

ಅದನ್ನಂತೂ ಮರೆತುಹೋಗಿದ್ದಾನೆ. ಅವನು ವರ್ತಮಾನವನ್ನೇ ತನ್ನ ಸರ್ವಸ್ವವೆಂದು ಮನ್ನಿಸಿ ಕುಳಿತುಕೊಂಡಿದ್ದಾನೆ. ಈ ಹೊತ್ತು ಸೋಮವಾರವಿದೆ, ನಾಳೆಗೆ ಮಂಗಳವಾರವು ಬರುತ್ತದೆ ಮತ್ತು ನಿನ್ನೆ ರವಿವಾರವಿತ್ತೆಂದು ಸ್ಮರಣೆಯಲ್ಲಿ ಉಳಿಯುತ್ತದೆ ಮತ್ತು ಅದರ ಕುರಿತು ಪೂರ್ಣ ನಂಬಿಕೆಯು ಕೂಡ ಇದೆ, ಆದರೆ ನಾನು ಈ ಮೊದಲು ಏನಿದ್ದೆನು? ಮತ್ತು ಈಗ ಏನಾಗಿದ್ದೇನೆ ? ಹಾಗೂ ಭವಿಷ್ಯದಲ್ಲಿ ಏನಾಗುವೆನು ? ಇದರ ಕುರಿತು ಅರಿವೇ ಇಲ್ಲ. ಆತ್ಮನು ತ್ರಿಕಾಲದಲ್ಲೂ ಇರುವಂಥ ಧ್ರುವ ಪದಾರ್ಥನಿದ್ದಾನೆ. ಅವನ ಕುರಿತು ಅಭಿರುಚಿ ಮಾಡದೆ ಕೇವಲ ಒಂದು ವರ್ತಮಾನದ ಅಭಿರುಚಿಯನ್ನೇ ಮಾಡುತ್ತಿದ್ದಾನೆ. ಶಾಸ್ತ್ರದಲ್ಲಿ ಕಥನವು ಬರುವುದೇನೆಂದರೆ-ಯಾವನು ಯಾವ ಮಾರ್ಗವನ್ನು ನೋಡಿದ್ದಾನೆ ಅವನು ಅಲ್ಲಿಗೆ ಕೂಡಲೇ ಹೋಗುವನು. ಯಾವನು ಸಂಸಾರದ ಅಭಿರುಚಿ ಮಾಡುತ್ತಾನೆ ಮತ್ತು ಸಂಸಾರ ಮಾರ್ಗವನ್ನು ನೋಡಿದ್ದಾನೆ ಅವನು ಅಲ್ಲಿಗೆ ಕೂಡಲೇ ಹೋಗುತ್ತಾನೆ. ಆತ್ಮನು ಶುದ್ಧ ಚಿದಾನಂದ ಮೂರ್ತಿಯಿದ್ದಾನೆ- ಸ್ವರೂಪನಿದ್ದಾನೆಂದು ಪ್ರತೀತಿ ಮಾಡಿ ಮೋಕ್ಷಮಾರ್ಗ ತಿಳಿದವನು ಆ ಮಾರ್ಗದಿಂದ ಹೋಗುತ್ತಾನೆ.

ಇಲ್ಲಿ ಮೋಕ್ಷತತ್ತ್ವದ ಮಾತು ನಡೆಯುತ್ತಿದೆ. ಮೋಕ್ಷವು ಪರ್ಯಾಯವಿದ್ದು ಅದರ ಪ್ರತೀತಿ ಹಾಗೂ ಜ್ಞಾನ ಮಾಡಿಕೊಂಡಿದ್ದರೆ ಅನುಕ್ರಮದಿಂದ ಮೋಕ್ಷಕ್ಕೆ ಹೋಗುವನು. ಭಗವಂತರು ಮೋಕ್ಷಕ್ಕೆ ಹೋದನಂತರ ಪುನಃ ಅವತಾರವೆತ್ತುವುದಿಲ್ಲ. ಬೀಜವು ಸುಟ್ಟುಹೋದಮೇಲೆ ಅಂಕುರಿಸುವುದಿಲ್ಲ, ಅದರಂತೆ ಆತ್ಮನ ಜ್ಞಾನಪೂರ್ವಕ ಮಿಥ್ಯಾತ್ವ ಮತ್ತು ರಾಗ-ದ್ವೇಷಗಳನ್ನು ಸುಟ್ಟುಹಾಕಿದನಂತರ ಅವು ಪುನಃ ಅಂಕುರಿಸುವುದಿಲ್ಲ; ಉತ್ಪನ್ನವಾಗುವುದಿಲ್ಲ.

ಅರಹಂತ ಭಗವಂತರಿಗೆ ಭಾವಮೋಕ್ಷವಿರುತ್ತದೆ ಮತ್ತು ನಾಲ್ಕು ಅಘಾತಿ ಕರ್ಮಗಳು ಬಿಟ್ಟುಹೋಗುವುದರಿಂದ ದ್ರವ್ಯಮೋಕ್ಷವಾಗುತ್ತದೆ. ಎಂದರೆ ಸಿದ್ಧಭಗವಂತರಿಗೆ ಭಾವಮೋಕ್ಷ ಮತ್ತು ದ್ರವ್ಯಮೋಕ್ಷಗಳೆರಡೂ ಇರುತ್ತವೆ.

**ಭಾವಾರ್ಥ :-** ಆತ್ಮನು ಶುದ್ಧಚಿದಾನಂದನಿದ್ದಾನೆಂದು ಪ್ರತೀತಿ ಮಾಡಿದ ನಂತರ ಲೀನತೆ ಮಾಡಿದರೆ ಕೇವಲಜ್ಞಾನವಾಗುತ್ತದೆ. ಅದರಿಂದ ಕೇವಲೀ ಭಗವಂತರಿಗೆ ಭಾವಮೋಕ್ಷವಾಗಿರುತ್ತದೆ. ಅವರಿಗೆ ಪರಮ ಸಂವರವಿರುತ್ತದೆ, ಆದರೆ ಸಂಪೂರ್ಣ ಸಂವರವಿರುವುದಿಲ್ಲ. ಏಕೆಂದರೆ ಕರ್ತೃ, ಕರಣ, ಕರ್ಮ, ಕ್ರಿಯಾವತೀ, ವೈಭಾವಿಕ ಮೊದಲಾದ ಗುಣಗಳಲ್ಲಿ ಅಶುದ್ಧತೆಯಿದೆ. ಭಾವಮೋಕ್ಷವು ಆಗಿದ್ದರೂ ಕೂಡ ಇನ್ನೂ ದ್ರವ್ಯಮೋಕ್ಷವು ಆಗಿರುವುದಿಲ್ಲ. ಎಂದರೆ ತಮ್ಮಲ್ಲಿ ಅಶುದ್ಧತೆಯಿದೆ. ಆದರೆ ಕೇವಲಜ್ಞಾನ, ಕೇವಲದರ್ಶನ ಮೊದಲಾದ ಚತುಷ್ಟಯವು ಪ್ರಕಟವಾಗಿರುವುದರಿಂದ ಭವಿಷ್ಯಕಾಲದ ಸಂಬಂಧವಾಗಿ ನವೀನ ಕರ್ಮದ ಬಂಧವಾಗುವುದಿಲ್ಲ.

ಭಗವಂತರು ಉಪವಾಸ ಮಾಡುವುದರಿಂದ ನಾಲ್ಕು ಅಘಾತಿ ಕರ್ಮಗಳು ಬಿಟ್ಟುಹೋದುವೆಂದು ಅಜ್ಞಾನಿಗಳು ಹೇಳುತ್ತಾರೆ, ಆದರೆ ಅವರ ಆ ಮಾತು ಅಸತ್ಯವಿದೆ. ಅನಂತ ಚತುಷ್ಟಯವು ಪ್ರಕಟವಾಗಿರುವುದರಿಂದ ಮತ್ತು ಪರಮಸಂವರವಾಗಿರುವುದರಿಂದ ಕರ್ಮಗಳ ನಿರೋಧವಾಗುತ್ತದೆ. ಪೂರ್ವದಲ್ಲಿ ಬಂಧಿಸಲ್ಪಟ್ಟಿರುವ ಕರ್ಮಗಳ ನಿರ್ಜರೆಯ ಸಲುವಾಗಿರುವ ಕಾರಣವು ಧ್ಯಾನವಿರುತ್ತದೆ. ಭಗವಂತರು ತಮ್ಮ ಸ್ವಭಾವದಲ್ಲಿ ಏಕಾಗ್ರರಾಗಿ ಉಳಿಯುವುದು ಭಗವಂತರ ಧ್ಯಾನವಿದೆ. ಆ ಧ್ಯಾನದ ಮೂಲಕ ಎರಡು ಪ್ರಕಾರದಿಂದ ನಿರ್ಜರೆಯಾಗುತ್ತದೆ. ಯಾರೋ ಓರ್ವ ಕೇವಲೀಭಗವಂತರಿಗೆ ಮೊದಲಿನ ಅಘಾತಿ ಕರ್ಮಗಳು ತಮ್ಮ ಸ್ಥಿತಿಯು ಪೂರ್ಣವಾದನಂತರ ಉದುರಿಹೋಗುತ್ತವೆ ಮತ್ತು ಬೇರೋರ್ವ ಕೇವಲೀ ಭಗವಂತರಿಗೆ ಆತ್ಮನ ಪ್ರದೇಶಗಳು ಲೋಕದ ಪ್ರಮಾಣ ವಿಸ್ತರಿಸಿಹೋಗಿ ಎಂದರೆ ಕೇವಲೀಸಮುದ್ಘಾತವಾಗಿ ಕರ್ಮಗಳ ನಿರ್ಜರೆಯಾಗುತ್ತದೆ.

ಹೀಗೆ ಭಾವಮೋಕ್ಷವುಳ್ಳ ಕೇವಲೀ ಭಗವಂತರಿಗೆ ದ್ರವ್ಯಮೋಕ್ಷವಾದರೆ ಎರಡು ಪ್ರಕಾರದಿಂದ ಹೇಳಲಾಗುತ್ತದೆ. ಕೆಲವೊಂದು ಸಮಯದಲ್ಲಿ ವೇದನೀಯ, ನಾಮ, ಗೋತ್ರವೆಂದು ಮೂರು ಕರ್ಮಗಳ ಸ್ಥಿತಿಯು ಆಯುಕರ್ಮದ

ಸರಿಸಮಾನವಾಗಿ ಇದ್ದರೆ ಆ ನಾಲ್ಕೂ ಅಘಾತೀ ಕರ್ಮಗಳ ಸ್ಥಿತಿಯು ಸರಿಸಮಾನವಾಗಿಯೇ ಪೂರ್ಣವಾಗಿ ಮೋಕ್ಷಾವಸ್ಥೆಯಾಗುತ್ತದೆ. ಕೆಲವೊಮ್ಮೆ ಯಾರೋ ಒಬ್ಬರಿಗೆ ಆಯುಕರ್ಮದ ಸ್ಥಿತಿಯು ಕಮ್ಮಿ ಇರುವುದು ಮತ್ತು ವೇದನೀಯ, ನಾಮ, ಗೋತ್ರದ ಸ್ಥಿತಿಯು ಅಧಿಕವಾಗಿದ್ದರೆ ಸಮುದ್ಘಾತವನ್ನು ಮಾಡಿ ಕರ್ಮಗಳ ನಾಶವಾದಮೇಲೆ ದ್ರವ್ಯಮೋಕ್ಷ ಅವಸ್ಥೆಯಾಗುತ್ತದೆ. ಈ ಪ್ರಕಾರವಾಗಿ ಜೀವದಿಂದ ಸರ್ವಥಾರೂಪದಿಂದ ಕರ್ಮಪುದ್ಗಲಗಳ ಆತ್ಯಂತಿಕ ವಿಯೋಗವಾಗುವುದರ ಹೆಸರು ದ್ರವ್ಯಮೋಕ್ಷವಿದೆ.

ಕೇವಲಜ್ಞಾನದ ಪರ್ಯಾಯದಲ್ಲಿ ಅಂತರವಿರುವುದಿಲ್ಲ, ಆದರೆ ಕೆಲವರಿಗೆ ಸಮುದ್ಘಾತವಾದರೆ ಈ ಪ್ರಕಾರದಿಂದ ಅಂತರವಾಗುತ್ತದೆ ಮತ್ತು ಎಲ್ಲರಿಗೂ ಸಮುದ್ಘಾತವಾಗಿಯೇ ಆಗುತ್ತದೆಯೆಂಬುದಾಗಿಲ್ಲ. ಭಗವಂತರು ಮೋಕ್ಷಕ್ಕೆ ಹೋದನಂತರ ಪುನಃ ಅವತಾರ ಧಾರಣ ಮಾಡುವುದಿಲ್ಲ. ಮೋಕ್ಷಾವಸ್ಥೆಯಲ್ಲಿ ಪರಿಪೂರ್ಣ ಸುಖವಿರುತ್ತದೆ.

ಈ ಪ್ರಕಾರದಿಂದ ದ್ರವ್ಯಮೋಕ್ಷದ ವ್ಯಾಖ್ಯಾನವು ಪೂರ್ಣವಾಯಿತು ಮತ್ತು ಮೋಕ್ಷಮಾರ್ಗದ ಅಂಗವಿರುವ ಸಮ್ಯಗ್ದರ್ಶನ-ಸಮ್ಯಗ್ಜ್ಞಾನದ ನಿಮಿತ್ತಭೂತವಿರುವ ನವಪದಾರ್ಥಗಳ ವ್ಯಾಖ್ಯಾನವೂ ಪೂರ್ಣವಾಯಿತು.

ಈಗ ಮೋಕ್ಷಮಾರ್ಗದ ಎಂದರೆ ಚಾರಿತ್ರದ ಸ್ವರೂಪವನ್ನು ಮೊದಲು ತಿಳಿಸಿಕೊಡಲಾಗುತ್ತದೆ -

**ಜೀವಸಹಾವಂ ಣಾಣಂ ಅಪ್ಪಡಿಹದದಂಸಣಂ ಅಣಣ್ಣಮಯಂ ।**
**ಚರಿಯಂ ಚ ತೇಸುಣಿಯದಂ ಅತ್ಥಿತ್ತಮಣಿಂದಿಯಂ ಭಣಿಯಂ ॥೧೫೪॥**

**ಜೀವಸ್ವಭಾವವದು ಜ್ಞಾನಮೇಣಪ್ರತಿಹತದರ್ಶನವಾಗಿರುವುದು ।**
**ಯಾವ ಜ್ಞಾನದರ್ಶನನಿಯತ ಅನಿಂದ್ಯ ಅಸ್ತಿತ್ವವದು ತಾನೆ ಚಾರಿತ್ರವಿದೆ ॥೧೫೪॥**

ಆತ್ಮನು ಶುದ್ಧಸ್ವಭಾವಿಯಿದ್ದಾನೆ. ಅವನನ್ನು ಜೀವನೆಂದು ಮನ್ನಿಸುವುದು, ಪುಣ್ಯವನ್ನು ವಿಕಾರವೆಂದು ಮನ್ನಿಸುವುದು, ಜಡವನ್ನು ಜಡವೆಂದು ತಿಳಿದುಕೊಳ್ಳುವುದು ಹೀಗೆ ಪ್ರತಿಯೊಂದು ಪದಾರ್ಥದ ದ್ರವ್ಯ-ಗುಣ-ಪರ್ಯಾಯಗಳನ್ನು ಹೇಗೆ ಇವೆ ಹಾಗೆ ಬೇರೆ ಬೇರೆ ಮಾಡಿ ತಿಳಿದುಕೊಳ್ಳುವಂಥದು ಜ್ಞಾನದ ಸ್ವಭಾವವಿದೆ. ಯಾವುದನ್ನಾದರೂ ಮಾಡುವಂಥದು ಜ್ಞಾನದ ಸ್ವಭಾವವಿಲ್ಲ. ಇದು ಜಡವಿದೆಯೋ ಅಥವಾ ಇದು ಚೇತನವಿದೆಯೋ ಎಂಬುದರ ಭೇದ ಮಾಡಿದಲ್ಲದೆ ಕೇವಲ ಸಾಮಾನ್ಯರೂಪದಿಂದ ನೋಡುವುದನ್ನು ದರ್ಶನವೆಂದು ಹೇಳುತ್ತಾರೆ ಮತ್ತು ಭೇದಮಾಡಿ ತಿಳಿದುಕೊಳ್ಳುವುದನ್ನು ಜ್ಞಾನವೆಂದು ಹೇಳುತ್ತಾರೆ. ಅವೆರಡನ್ನು ಒಂದು ಚೈತನ್ಯವೆಂಬ ಹೆಸರಿನಿಂದ ಗುರುತಿಸಲಾಗುತ್ತದೆ. ಚೈತನ್ಯವು ಜೀವದ ಅಸಾಧಾರಣವಾದ ಲಕ್ಷಣವಿದೆ. ನೋಡುವುದು, ತಿಳಿಯುವುದು ಜೀವದ ಸ್ವಭಾವವಿದೆ. ಪರದಲ್ಲಿ ಏನನ್ನಾದರೂ ಮಾಡುವುದು ಅಥವಾ ದಯೆ-ದಾನ ಮಾಡುವುದು ಜೀವದ ಲಕ್ಷಣವಲ್ಲ. ದೇವ-ಶಾಸ್ತ್ರ-ಗುರುಗಳ ಶ್ರದ್ಧೆಯ ರಾಗ, ಪಂಚಮಹಾವ್ರತಗಳ ರಾಗ ಜೀವದ ನಿಜವಾದ ಸ್ವಭಾವವಲ್ಲ. ಜೀವನು ಅವುಗಳನ್ನು ಕೂಡ ತಿಳಿದುಕೊಳ್ಳುವಂಥವನಿದ್ದಾನೆ. ಈ ಪ್ರಕಾರ ನಿಮಿತ್ತ ಹಾಗೂ ಪುಣ್ಯ-ಪಾಪದ ಕುರಿತಾಗಿರುವ ಅಭಿರುಚಿಯನ್ನು ಬಿಟ್ಟುಕೊಟ್ಟಲ್ಲದೆ ಮತ್ತು ಜ್ಞಾನ-ದರ್ಶನ ಸ್ವಭಾವಿಯಿರುವ ಆತ್ಮನ ದೃಷ್ಟಿ ಮಾಡಿದಲ್ಲದೆ ಧರ್ಮವೆಂದೂ ಆಗುವುದಿಲ್ಲ.

ನಿನಗೆ ಶಾಂತಿ ಮತ್ತು ಧರ್ಮ ಬೇಕಾಗಿದೆಯಲ್ಲವೇನು ? ಹಾಗಾದರೆ ವಸ್ತುವಿನ ಸ್ವಭಾವವು ಧರ್ಮವಿದೆ. ಪುಣ್ಯ-ಪಾಪ ಮತ್ತು ರಾಗವು ನಿನ್ನ ಸ್ವಭಾವವಿದೆಯೇನು ? ಭಾಷೆಯನ್ನು ಆಡುವುದು ನಿನ್ನ ಸ್ವಭಾವವಿದೆಯೇನು ? ಆತ್ಮನು ಶರೀರವನ್ನು ನಡೆಸುವ ಸಾಧ್ಯತೆಯಿದೆಯೇನು ? ಅಥವಾ ಪರದ ಮೇಲೆ ದಯೆ ಮಾಡುವ ಸಾಧ್ಯತೆಯಿದೆಯೇನು?

ಹೀಗೆ ಆತ್ಮನ ಸ್ವಭಾವವಿದೆಯೇನು ? ದಯಾನಿಧಾನನಮೇಲೆ ದೃಷ್ಟಿ ಹಾಕುವುದರಿಂದ ಧರ್ಮವಾಗುವುದೇನು ? ಶರೀರ, ಮನಸ್ಸು, ವಾಣಿಗಳು ನಿನ್ನ ನಿಧಾನವಿಲ್ಲ. ಪುಣ್ಯ-ಪಾಪಗಳು ನಿನ್ನ ನಿಧಾನವಿಲ್ಲ. ವ್ರತ ಮೊದಲಾದುವನ್ನು ಪಾಲಿಸುವುದು, ದಯೆ ಮಾಡುವುದು ನಿನ್ನ ನಿಧಾನವಿಲ್ಲ, ಆದರೆ ನಿನ್ನ ನಿಧಾನವಂತೂ ಜ್ಞಾನ-ದರ್ಶನಮಯನಾದ ನಿನ್ನ ಆತ್ಮನಿದ್ದಾನೆ. ಅವನ ಮೇಲೆ ದೃಷ್ಟಿ ಹಾಕುವುದರಿಂದ ಧರ್ಮವಾಗುತ್ತದೆ.

ಯಾವ ಪ್ರಕಾರ ವಸ್ತುವಿನ ಸ್ವಭಾವವಿದೆ ಅದೇ ಪ್ರಕಾರ ಸರ್ವಜ್ಞರು ನೋಡಿದ್ದಾರೆ. ವಾಣಿಯ ಮೂಲಕ ಹೊರಗೆ ಬಂದಿದೆ. ಆತ್ಮನ ಸ್ವಭಾವವು ಏಕರೂಪ ಜ್ಞಾನ-ದರ್ಶನವಿದೆ. ಆ ಜ್ಞಾನ-ದರ್ಶನ ಸ್ವಭಾವದ ಅಸ್ತಿತ್ವವನ್ನು ಅಖಂಡವಾಗಿ ಇಟ್ಟುಕೊಳ್ಳುವುದು, ಅದನ್ನು ಸ್ಥಿರವಾಗಿ ಕಾಯ್ದುಕೊಳ್ಳುವುದು ಚಾರಿತ್ರವಿದೆ. ಇಲ್ಲಿ ವ್ಯಾಖ್ಯೆಯನ್ನು ಅಸ್ತಿಯಿಂದ ಸ್ವೀಕರಿಸಲಾಗಿದೆ. ಪುಣ್ಯ-ಪಾಪವನ್ನು ಆಗಗೊಡದಿರುವ ಮಾತನ್ನು ಇಲ್ಲಿ ಸ್ವೀಕರಿಸಲಾಗಿಲ್ಲ.

ಇಲ್ಲಿ ಚಾರಿತ್ರದ ಮಾತನ್ನು ಸ್ವೀಕರಿಸಲಾಗಿದೆ. ದರ್ಶನ-ಜ್ಞಾನ ಗುಣಗಳನ್ನು ಧಾರಣ ಮಾಡುವಂಥವನು ಆತ್ಮನಿದ್ದಾನೆ. ವಿಕಾರವನ್ನಂತೂ ಒಂದು ಸಮಯಮಾತ್ರ ಪರ್ಯಾಯದಲ್ಲಿ ಧಾರಣ ಮಾಡುತ್ತಾನೆ, ಆದರೆ ಅದು ಅವನ ತ್ರಿಕಾಲ ಸ್ವಭಾವವಿಲ್ಲ. ತನ್ನ ಜ್ಞಾನ-ದರ್ಶನ ಸ್ವಭಾವದಲ್ಲಿ ಸ್ಥಿರವಾಗಿರುವುದು, ಸ್ವರೂಪದಲ್ಲಿ ಚರಿಸುವುದು, ಜ್ಞಾನ-ದರ್ಶನದ ಅಸ್ತಿ ಭಾವದಲ್ಲಿ ಚರಿಸುವುದು ಚಾರಿತ್ರವಿದೆ. ಆತ್ಮನಲ್ಲಿ ನಿಶ್ಚಲ ಸ್ಥಿರತೆಯು ಚಾರಿತ್ರವಿದೆ. ಅದು ಸ್ವಯಂ ವೀತರಾಗ ಭಾವವಿದೆ.

ದೇಹದ ಕ್ರಿಯೆ ಅಥವಾ ವಿಕಲ್ಪಗಳನ್ನು ತೆಗೆದು ಹಾಕುವುದು ಚಾರಿತ್ರವಲ್ಲ. ಅನಂತಕಾಲದಿಂದ ಜೀವನು ವಸ್ತು ತತ್ತ್ವವನ್ನು ತಿಳಿದುಕೊಂಡಿಲ್ಲ. ಜೀವದ ಸ್ವಭಾವವು ನೋಡುವುದು-ತಿಳಿದುಕೊಳ್ಳುವುದು ಇದೆ. ಯಾವ ಯಾವ ಸಂಯೋಗಗಳಿವೆ, ಯಾವ ಯಾವ ರಾಗ-ದ್ವೇಷದ ವೃತ್ತಿಯು ಉತ್ಪನ್ನವಾಗುವುದು ಆಯಾ ಸಮಯದಲ್ಲಿ ಅದನ್ನು ಜ್ಞಾನವು ತನ್ನಲ್ಲಿ ತಾನಿದ್ದುಕೊಂಡು ತಿಳಿದುಕೊಳ್ಳುತ್ತದೆ. ಆ ನೋಡುವುದು, ತಿಳಿದುಕೊಳ್ಳುವುದು ಶರೀರ, ಮನಸ್ಸು, ವಾಣಿಗಳಲ್ಲಿ ಇಲ್ಲ; ಏಕೆಂದರೆ ಅವು ಜಡವಿವೆ. ಪುಣ್ಯ-ಪಾಪದ ಪರಿಣಾಮದಲ್ಲಿ ನೋಡುವ-ತಿಳಿದುಕೊಳ್ಳುವ ಶಕ್ತಿಯಿಲ್ಲ. ಓರ್ವ ಅರೂಪಿಯಾದ ಆತ್ಮನೇ ನೋಡುವಂಥವನಿದ್ದಾನೆ, ತಿಳಿದುಕೊಳ್ಳುವಂಥವನಿದ್ದಾನೆ. ಇಂಥ ದೃಷ್ಟಿಯಾಗುವುದು ಮತ್ತು ಇಂಥ ಜ್ಞಾನವಾಗುವುದು ಸಮ್ಯಗ್ದರ್ಶನವಿದೆ ಮತ್ತು ಅದರಲ್ಲಿ ಸ್ಥಿರಗೊಳ್ಳುವುದು ಚಾರಿತ್ರವಿದೆ.

ಮೊದಲು ಸತ್ಯ ಮಾತನ್ನು ಗ್ರಹಣ ಮಾಡಬೇಕಾಗುವುದು. ಪ್ರಾರಂಭದಲ್ಲಿ ಜ್ಞಾನ-ದರ್ಶನದ ಧಾರಕನನ್ನು ಜೀವವೆಂದು ಹೇಳುತ್ತಾರೆಂದು ಘೋಷಣೆ ಮಾಡಿದ್ದಾರೆ. ಜೀವ, ಅಜೀವ, ಪುಣ್ಯ-ಪಾಪ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷವೆಂದು ಈ ಒಂಭತ್ತು ಭೇದಗಳ ಜ್ಞಾನಮಾಡಿಕೊಳ್ಳುವುದು ಕೂಡ ಭೇದವಾಗುವುದರಿಂದ ಅದು ಜೀವದ ಲಕ್ಷಣವಲ್ಲ ; ಆದರೆ ಜ್ಞಾನದಲ್ಲಿ ಅಭೇದತೆಯು ವರ್ತಿಸುವುದು ಅಥವಾ ಜ್ಞಾನವು ಏಕರೂಪವಾಗಿದ್ದುಕೊಂಡು ತಿಳಿದುಕೊಳ್ಳುವುದು ಅದು ಜೀವವಿದೆ. ಅದರ ಪ್ರತೀತಿಯು ಅದು ಸಮ್ಯಗ್ದರ್ಶನವಿದೆ.

ಜ್ಞಾನ-ದರ್ಶನ ಸ್ವಭಾವದ ಅಸ್ತಿತ್ವದಲ್ಲಿ ಸ್ಥಿರಗೊಳ್ಳುವುದು ಮತ್ತು ಪುಣ್ಯ-ಪಾಪದಲ್ಲಿ ಹೋಗದಿರುವುದನ್ನು ಚಾರಿತ್ರವೆಂದು ಹೇಳುತ್ತಾರೆ. ಪಂಚಮಹಾವ್ರತದ ಪರಿಣಾಮ ಇಪ್ಪತ್ತೆಂಟು ಮೂಲ ಗುಣಗಳನ್ನು ಪಾಲಿಸುವ ಪರಿಣಾಮ, ಆಹಾರ ಸ್ವೀಕರಿಸುವ ವೃತ್ತಿಯಾಗುವುದು ಮೊದಲಾದ ರಾಗದ ವೃತ್ತಿಯುತ್ಪನ್ನವಾಗುವುದು ಅದು ಚಾರಿತ್ರವಲ್ಲ.

ಇವು ಕೇವಲ ಕಾಲ್ಪನಿಕ ಮಾತುಗಳಲ್ಲ, ಆದರೆ ಸರ್ವಜ್ಞ ಭಗವಂತರ ವಾಣಿಯ ಮೂಲಕ ಘೋಷಣೆ ಮಾಡಿದ ಮಾತುಗಳಿವೆ. ಭಗವಂತರ ವಾಣಿಯಲ್ಲಿ ಬಂದಿರುವುದನ್ನೇ ಇಲ್ಲಿ ಹೇಳಲಾಗಿದೆ. ಜ್ಞಾನ-ದರ್ಶನ ಸ್ವಭಾವದ ಅಸ್ತಿತ್ವವನ್ನು ಕಾಯ್ದುಕೊಳ್ಳಲಾಗಿದೆ ಮತ್ತು ರಾಗ-ದ್ವೇಷಗಳಾಗಗೊಡದಿರುವುದನ್ನು ಚಾರಿತ್ರ ಅಥವಾ ಮೋಕ್ಷಮಾರ್ಗವೆಂದು

ಹೇಳುವುದಂತೂ ಜೀವದ ಪರ್ಯಾಯದಲ್ಲಿ ಇರುತ್ತದೆ, ಬಾಹ್ಯದಲ್ಲಿ ಇರುವುದಿಲ್ಲ. ಒಂದೇ ಮಾತನ್ನು ಸ್ವೀಕರಿಸಲಾಗಿದೆ. ತನ್ನ ದರ್ಶನ-ಜ್ಞಾನ ಸ್ವಭಾವವನ್ನು ಸ್ಥಿರವಾಗಿಟ್ಟುಕೊಳ್ಳುವುದನ್ನೇ ಚಾರಿತ್ರವೆಂದು ಹೇಳಲಾಗಿದೆ. ಬೇರೆ ಯಾವುದನ್ನೂ ಚಾರಿತ್ರವೆಂದು ಹೇಳಲಾಗುವುದಿಲ್ಲ.

ಯಾವ ಜೀವರುಗಳು ಬೇರೆ ರೀತಿಯಿಂದ ಎಂದರೆ ರಾಗದಿಂದ ಅಥವಾ ಶರೀರದ ಕ್ರಿಯೆಯಿಂದ ಚಾರಿತ್ರವೆಂದು ಹೇಳುತ್ತಿದ್ದರೆ ಅದನ್ನು ಚಾರಿತ್ರವೆಂದು ಹೇಳಲಾಗುವುದಿಲ್ಲ. ಆರನೆಯ ಗುಣಸ್ಥಾನದಲ್ಲಿ ಎಷ್ಟು ರಾಗವು ವರ್ತಿಸುತ್ತದೆ ಅದು ಚಾರಿತ್ರವಿಲ್ಲ, ಆದರೆ ಆಂತರ್ಯದ ಏಕತೆಯಿಂದ ಯಾವ ಪರಿಣತಿಯಾಗುತ್ತದೆ ಅದು ನಿಜವಾದ ಚಾರಿತ್ರವಿದೆಯೆಂದು ವೀತರಾಗ ಸರ್ವಜ್ಞ ಭಗವಂತರು ಹೇಳಿದ್ದಾರೆ.

ಇದು ಮೋಕ್ಷಮಾರ್ಗದ ಅಧಿಕಾರವಿದೆ. ಮೋಕ್ಷ ಎಂದರೆ ಪೂರ್ಣ ಪವಿತ್ರವಾದ ದಶೆಯಿದೆ ಮತ್ತು ಚಾರಿತ್ರವು ಅದರ ಮಾರ್ಗವಿದೆ. ಅದು ಯಾರಿಗೆ ಇರುತ್ತದೆ ಅದರ ಮಾತು ಇಲ್ಲಿ ನಡೆಯುತ್ತಿದೆ. ಯಾವುದೇ ಲಿಂಗ ಅಥವಾ ವೇಷವು ಅದು ಚಾರಿತ್ರವಲ್ಲ. ಮಹಾವ್ರತಾದಿಗಳ ಪರಿಣಾಮ ಅಥವಾ ನಗ್ನ ದಶೆಯು ಅದು ಚಾರಿತ್ರವಲ್ಲ, ಆದರೆ ಆಂತರ್ಯಸ್ವಭಾವದ ಏಕತೆಯು ನಿಜವಾದ ಚಾರಿತ್ರವಿದೆ. ಮೋಕ್ಷಮಾರ್ಗವು ಮೋಕ್ಷದ ಕಾರಣವಿದೆ.

**ಭಾವಾರ್ಥ :-** ಜೀವದ ಸ್ವಭಾವಭಾವದ ಸ್ಥಿರತೆಯ ಹೆಸರು ಚಾರಿತ್ರವಿದೆ. ಜೀವದ ಸ್ವಭಾವವು ದರ್ಶನ ಮತ್ತು ಜ್ಞಾನವಿದೆ. ಶರೀರ, ಮನಸ್ಸು, ವಾಣಿ ಇವು ಜೀವದ ಸ್ವಭಾವವಲ್ಲ. ಪರವನ್ನು ತೆಗೆದುಕೊಳ್ಳುವ ಅಥವಾ ಕೊಡುವ ಭಾವವು ಇದು ಜೀವದ ಸ್ವಭಾವವಲ್ಲ. ದಯೆ-ದಾನಾದಿಗಳ ಭಾವಗಳು ಕೂಡ ಜೀವದ ಸ್ವಭಾವವಲ್ಲ. ಯಾವುದರಲ್ಲಿ ಸ್ಥಿರಗೊಳ್ಳುವುದರಿಂದ ಚಾರಿತ್ರವಾಗುತ್ತದೆಯೋ ಎಂದರೆ ಚೈತನ್ಯವು ಅರ್ಥಾತ್ ಜ್ಞಾನ-ದರ್ಶನವು ಜೀವದ ಸ್ವಭಾವವಿದೆ. ಇದನ್ನು ಹೊರತುಪಡಿಸಿ ಬೇರೆ ಸ್ವಭಾವವಿಲ್ಲ. ಹಾಗಾದರೆ ಆತ್ಮನಲ್ಲಿ ಇವೆರಡೇ ಗುಣಗಳಿವೆಯೇನು ? ಎಂದು ಯಾರಾದರೂ ಕೇಳಬಹುದು, ಹಾಗೆ ಇಲ್ಲ. ಆತ್ಮನಲ್ಲಿ ವೀರ್ಯ, ಆನಂದ, ವಸ್ತುತ್ವ, ಸ್ವಚ್ಛತ್ವ ಮೊದಲಾದ ಅನಂತ ಶಕ್ತಿಗಳಿವೆ, ಆದರೆ ಮುಖ್ಯವಾಗಿ ವಸ್ತುವು ಲಕ್ಷ್ಯದಲ್ಲಿ ಬರುವ ಸಲುವಾಗಿ ಜೀವದ ಸ್ವಭಾವವು ಜ್ಞಾನ-ದರ್ಶನವೆಂದು ಹೇಳಿದೆ. ಅದರಲ್ಲಿ ಸ್ಥಿರತೆ ಮಾಡುವದು ಚಾರಿತ್ರವಿದೆ.

ಜೀವದ ಸ್ವಾಭಾವಿಕ ಭಾವವು ಜ್ಞಾನ-ದರ್ಶನವಿದೆ. ಅದು ಆತ್ಮನಲ್ಲಿ ಅಭೇದ ಹಾಗೂ ಭೇದರೂಪವಿದೆ. ಒಂದು ಚೈತನ್ಯ ಸ್ವಭಾವದ ಅಪೇಕ್ಷೆಯಿಂದ ಅಭೇದ ಸ್ವರೂಪವಿದೆ ಮತ್ತು ಸಾಮಾನ್ಯ ಹಾಗೂ ವಿಶೇಷ ಅಪೇಕ್ಷೆಯಿಂದ ಭೇದರೂಪವಿದೆ. ಅದರಲ್ಲಿ ಸಾಮಾನ್ಯ ಅವಲೋಕನವನ್ನು ದರ್ಶನವೆಂದು ಹೇಳುತ್ತಾರೆ. ಇಲ್ಲಿ ದರ್ಶನ ಎಂದರೆ ಶ್ರದ್ಧೆಯನ್ನು ತೆಗೆದುಕೊಳ್ಳಬಾರದು. ಆದರೆ ಇದು ಶರೀರವಿದೆ, ನಾನು ಆತ್ಮನಿದ್ದೇನೆ-ಎಂಬುದಾಗಿ ಭೇದ ಮಾಡದೆಯೇ ಸಾಮಾನ್ಯ ಅವಲೋಕನವನ್ನು ದರ್ಶನವೆಂದು ಹೇಳುತ್ತಾರೆ. ಜ್ಞಾನವು ವಿಶೇಷವಿದೆ. ಜ್ಞಾನವು ಸಮಸ್ತ ವಸ್ತುಗಳನ್ನು ಭೇದ ಮಾಡಿಯೇ ತಿಳಿದುಕೊಳ್ಳುತ್ತದೆ. ಚೇತನದ ಅಪೇಕ್ಷೆಯಿಂದ ಎರಡೂ ಒಂದೇ ಇವೆ. ಅವೆರಡೂ ಜೀವದ ಸ್ವರೂಪವಿದೆ. ಅದರ ಜತೆ ಗೌಣದಲ್ಲಿ ಉಳಿದ ಗುಣಗಳು ಬಂದುಬಿಡುತ್ತವೆ. ಆ ಸ್ವಭಾವದಲ್ಲಿ ಸ್ಥಿರವಿರುವುದು ಚಾರಿತ್ರವಿದೆ.

ಈ ಪ್ರಕಾರ ವಸ್ತುವಿನ ಸ್ವರೂಪವನ್ನು ತಿಳಿದುಕೊಳ್ಳದ ಹೊರತಾಗಿ ಕೇವಲ ಬಾಹ್ಯದಿಂದ ಚಾರಿತ್ರವನ್ನು ಮನ್ನಿಸುವುದು ಅಸತ್ಯವಿದೆ. ಪಂಚಮಹಾವ್ರತಗಳನ್ನು ಪಾಲಿಸುವುದು ಚಾರಿತ್ರವಲ್ಲ. ಇದನ್ನು ತಿನ್ನುವುದು ಮತ್ತು ಇದನ್ನು ತಿನ್ನದಿರುವುದು ಅದೇನು ಚಾರಿತ್ರವಲ್ಲ-ವಸ್ತ್ರಪಾತ್ರೆ ಇಟ್ಟುಕೊಳ್ಳುವವನು ಅವನು ಮುನಿಯಲ್ಲ, ವಸ್ತ್ರ-ಪಾತ್ರೆ ಇಟ್ಟುಕೊಂಡು ಮುನಿತನವನ್ನು ಮನ್ನಿಸುವವನು ಅವನು ಮಿಥ್ಯಾದೃಷ್ಟಿಯಿದ್ದಾನೆ. ಆ ಪ್ರಕಾರ ಕಥನ ಮಾಡುವಂಥ ಶಾಸ್ತ್ರವು ಅದು

ಕುಶಾಸ್ತ್ರವಿದೆ. ಅದು ವೀತರಾಗದೇವರು ಅಥವಾ ವೀತರಾಗ ಗುರುಗಳು ಹೇಳಿದುದಲ್ಲ. ವಸ್ತ್ರ-ಪಾತ್ರೆ ಸಹಿತವಾಗಿರುವಂಥ ಸಾಧುವನ್ನು ದ್ರವ್ಯಲಿಂಗೀ ಮುನಿಯೆಂದು ಕೂಡ ಹೇಳಲಾಗುವುದಿಲ್ಲ, ಆದರೆ ಅವನು ಕುಲಿಂಗಿಯಿದ್ದಾನೆ. ಎಂದರೆ ಆ ಲಿಂಗವು ಕುಲಿಂಗವಿದೆ. ಯಾವ ಮುನಿಯು ಬಾಹ್ಯದಿಂದ ನಗ್ನ ದಿಗಂಬರನಿರುವನು, ಅವನಿಗೆ ಕೇವಲ ನವಿಲುಗರಿಯ ಪಿಂಛಿ ಮತ್ತು ಕಮಂಡಲು ಇರುವುದು ಅವನು ಕೂಡ ಪುಣ್ಯದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಿದ್ದರೆ ಅವನು ದ್ರವ್ಯಲಿಂಗಿಯಿರುವನು.

ಯಾವನಿಗೆ ಆತ್ಮನ ಅರಿವಿದೆ-ಅನುಭೂತಿಯಿದೆ ಮತ್ತು ಯಾವನಿಗೆ ಆರನೆಯ-ಏಳನೆಯ ಭೂಮಿಕೆಯು ಪುನಃ ಪುನಃ ಬರುತ್ತದೆ ಅವನು ಭಾವಲಿಂಗೀ ಸಂತನಿದ್ದಾನೆ, ಭಾವಲಿಂಗೀ ಮುನಿಯಿದ್ದಾನೆ. ಅವನಿಗೆ ಬಾಹ್ಯದಲ್ಲಿ ನಗ್ನದಶೆತನವು ಬಂದುಬಿಡುತ್ತದೆಯೆಂಬುದಾಗಿಲ್ಲ. ತನ್ನ ಸ್ವಭಾವವು ಜ್ಞಾತಾ-ದೃಷ್ಟಾಯಿದೆಯೆಂಬ ದೃಷ್ಟಿಯಂತೂ ಬಂದುಬಿಟ್ಟಿದೆ. ಅದಾದನಂತರ ಲೀನತೆಯಾಗುತ್ತಿರುವಂತೆಯೇ ರಾಗವು ಬಿಟ್ಟುಹೋಗುತ್ತದೆ. ಸನಾತನ ಜೈನ ಮಾರ್ಗದ ವಿಷಯದಲ್ಲಿ ಇದು ಒಂದೇ ಪ್ರಕಾರದಿಂದ ಮುನಿತನವಿದೆ. ಬೇರೆ ರೀತಿಯಿಂದ ಮುನಿತನವು ಇಲ್ಲವೇ ಇಲ್ಲ.

ಗೃಹಸ್ಥ ಅವಸ್ಥೆಯಲ್ಲಿ ವಸ್ತ್ರದ ಪರಿಗ್ರಹವಿರುತ್ತದೆ ಅಂಥ ಭೂಮಿಕೆಯಲ್ಲಿ ಸಮ್ಯಗ್ದರ್ಶನವು ಇರುವ ಸಾಧ್ಯತೆಯಿದೆ, ಸಾಧಕದಶೆಯು ಇರುವ ಸಾಧ್ಯತೆಯಿದೆ. ಆದರೆ ವಸ್ತ್ರ ಮೊದಲಾದುವನ್ನು ಇಟ್ಟುಕೊಳ್ಳುವಂಥ ರಾಗವುಳ್ಳ ಭೂಮಿಕೆಯಲ್ಲಿ ಮುನಿತನವು ಇರುವ ಸಾಧ್ಯತೆಯಿಲ್ಲ. ಆದಾಗ್ಯೂ ಅಲ್ಲಿ ಮುನಿತನವನ್ನು ಮನ್ನಿಸಿದರೆ ಸಮ್ಯಗ್ದರ್ಶನವು ಕೂಡ ಇರುವುದಿಲ್ಲ. ಮುನಿದಶೆಯು ಆಂತರ್ಯದಿಂದ ಆನಂದ ಬರುವಂಥದ್ದಿರುತ್ತದೆ. ಕೇವಲ ಬಾಹ್ಯದಲ್ಲಿ ನಗ್ನವಾಗುವುದು ಮತ್ತು ಆಂತರ್ಯದಲ್ಲಿ ಮಿಥ್ಯಾದರ್ಶನವಿದ್ದರೆ ಮುನಿತನವಿರುವುದಿಲ್ಲ ಮತ್ತು ಭಾವಲಿಂಗವು ಪ್ರಕಟವಾಗುವುದು ಹಾಗೂ ಬಾಹ್ಯದಲ್ಲಿ ನಗ್ನತನವಿಲ್ಲದಿರುವುದು ಹೀಗೆ ಕೂಡ ಸಂಭವಿಸುವ ಸಾಧ್ಯತೆಯಿಲ್ಲ.

ಒಂದು ಧೂಳಿನ ಕಣವನ್ನು ಕೂಡ ಅದಲು ಬದಲು ಮಾಡುವುದು ನನ್ನ ಅಧಿಕಾರಕ್ಕೆ ಒಳಪಟ್ಟ ಮಾತಲ್ಲ. ಪುಣ್ಯ-ಪಾಪವು ಅದಂತೂ ಜ್ಞಾನದ ಕರ್ತವ್ಯವಲ್ಲ. ಆತ್ಮನ ಸ್ವಭಾವವು ಕೇವಲ ಜ್ಞಾತಾ-ದೃಷ್ಟಾ ಇರುವುದು. ಆದುದರಿಂದ ಅಂಥ ದೃಷ್ಟಿಯಿಲ್ಲದೆ ಕೇವಲ ದ್ರವ್ಯಲಿಂಗದ ಧಾರಣ ಮಾಡುವದು-ಮಾಡಿದರೆ ಅವನು ಮುನಿಯಲ್ಲ.

ಇತ್ತೀಚೆಗಂತೂ ತುಂಬಾ ಅದಲು ಬದಲಾಗಿ ಹೋಗಿದೆ. ವಸ್ತ್ರ-ಪಾತ್ರೆ ಸಹಿತವಾಗಿ ಮುನಿತನವನ್ನು ಮನ್ನಿಸಲಾಗುತ್ತಿದೆ-ಸ್ಥಾಪಿಸಲಾಗಿದೆ. ಆ ಶಾಸ್ತ್ರವು ನಿಜವಾದ ದೇವ-ಗುರು ಅಥವಾ ಸಮ್ಯಗ್ದೃಷ್ಟಿಗಳು ಹೇಳಿರುವುದು ಇರುವುದಿಲ್ಲ, ಆದರೆ ಮಿಥ್ಯಾದೃಷ್ಟಿಗಳು ಹೇಳಿರುವುದಾಗಿರುತ್ತದೆ. ಈ ಮಾತನ್ನು ಇಂದು ಮನ್ನಿಸಿರಿ, ನಾಳೆಗೆ ಮನ್ನಿಸಿರಿ, ತಮಗೆ ಯಾವಾಗ ಬೇಕಾದರೂ ಮನ್ನಿಸಿರಿ. ಆದರೆ ಇದನ್ನು ತಿಳಿದು ಕೊಂಡಲ್ಲದೆ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ. ಕುಶಾಸ್ತ್ರಗಳೊಳಗಿಂದ ಸತ್ಯದ ಮಾತುಗಳು ಹೊರಡುವುದು ಅಸಂಭವನೀಯವಿದೆ. ಯಾರಿಗೆ ತಮ್ಮ ಸ್ವಭಾವದ ಅರಿವಿರುವುದಿಲ್ಲ ಅಂಥವರಿಗೆ ಸಮ್ಯಗ್ದರ್ಶನವು ಆಗುವುದೇ ಇಲ್ಲ. ಯಾರು ವಸ್ತ್ರ-ಪಾತ್ರೆಗಳಿಂದ ಮುನಿತನವನ್ನು ಮನ್ನಿಸುತ್ತಿದ್ದಾರೆ ಅವರು ಕುಲಿಂಗ ಸಹಿತರಿರುವಂಥ ಮಿಥ್ಯಾದೃಷ್ಟಿಗಳಿದ್ದಾರೆ.

ಯಾರಾದರೂ ಬಾಹ್ಯದಿಂದ ನಗ್ನ ದಿಗಂಬರರಾಗುವುದು ಮತ್ತು ಪುಣ್ಯದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಿದ್ದರೆ ಅಂಥವರು ಕೂಡ ಭಾವಲಿಂಗೀ ಸಾಧುಗಳಿರುವುದಿಲ್ಲ, ಆದರೆ ಅವರು ದ್ರವ್ಯಲಿಂಗಿಗಳಿರುತ್ತಾರೆ. ಆಂತರ್ಯದಲ್ಲಿ ವೀತರಾಗತೆಯಿರುವುದು ಮತ್ತು ಬಾಹ್ಯದಲ್ಲಿ ನಗ್ನವಿರುವವರನ್ನು ಮುನಿಗಳೆಂದು ಹೇಳುತ್ತಾರೆ.

ಇದು ಸ್ವಭಾವದ ಮಾತು ಇದೆ. ಸರ್ವಜ್ಞ ಭಗವಂತರ ಮುಖಾರವಿಂದದಿಂದ ಯಾವ ವಾಣಿಯು ಹೊರಹೊರಟಿದೆ ಅದರ ಸಾರವನ್ನು ಗ್ರಹಣ ಮಾಡಿ, ತಮ್ಮ ಆಂತರ್ಯದಲ್ಲಿ ಅನುಭವ ಮಾಡಿ ಈ ಮಾತುಗಳನ್ನು

ಭ. ಕುಂದಕುಂದಾಚಾರ್ಯದೇವರು, ಸಮಂತಭದ್ರಾಚಾರ್ಯದೇವರು, ಪೂಜ್ಯಪಾದಾಚಾರ್ಯದೇವರು ಮೊದಲಾದ ಸಂತರುಗಳು ಹೇಳಿದ್ದಾರೆ. ಅವರುಗಳಂತೂ ಜೈನಧರ್ಮದ ಆಧಾರಭೂತರಾದ ಸ್ತಂಭರಿದ್ದಾರೆ. ತೀರ್ಥಂಕರರುಗಳು ಹೇಳಿರುವ, ಗಣಧರರು ಅನುಭವಿಸಿರುವ, ಇಂದ್ರರುಗಳು ಮನ್ನಿಸಿರುವಂಥ ಈ ಚಿಹ್ನವೇ ಮಾರ್ಗವಿದೆ. ಭ. ಕುಂದಕುಂದಾಚಾರ್ಯದೇವರು ಸನಾತನ ಮಾರ್ಗವನ್ನು ಸುರಕ್ಷಿತವಾಗಿ ಇರಿಸಿದ್ದಾರೆ.

ಚಾರಿತ್ರದ ಮಾತುಗಳು ಕೂಡ ಇತ್ತೀಚಿನ ದಿವಸಗಳಲ್ಲಿ ದುರ್ಲಭವಾಗಿ ಹೋಗಿವೆ. ಎಲ್ಲಿಯವರೆಗೆ ಕುದೇವಾದಿಗಳ ಶ್ರದ್ಧೆಯು ಬಿಟ್ಟುಹೋಗುವುದಿಲ್ಲ ಮತ್ತು ಸುದೇವಾದಿಗಳ ಶ್ರದ್ಧೆ ಉತ್ಪನ್ನವಾಗುವುದಿಲ್ಲ, ಅಲ್ಲಿಯವರೆಗೆ ಮಿಥ್ಯಾತ್ವವು ಬಿಟ್ಟುಹೋಗುವುದಿಲ್ಲ ಮತ್ತು ಅವರಿಗೆ ಸಾಧುತ್ವವು ಇರುವುದಿಲ್ಲ. ಜೈನದರ್ಶನದಲ್ಲಿ ಪ್ರತಿಜ್ಞೆಯನ್ನು ಸ್ವೀಕಾರ ಮಾಡದಿದ್ದರೆ ದಂಡನೆಯಿಲ್ಲ, ಆದರೆ ಚಾರಿತ್ರವಿಲ್ಲದಿದ್ದರೂ ಕೂಡ ಚಾರಿತ್ರವನ್ನು ಮನ್ನಿಸುತ್ತಿದ್ದರೆ ಅವಶ್ಯ ದಂಡನೆಗೆ ಪಾತ್ರರಿದ್ದಾರೆ.

ಇಲ್ಲಿ ಮಾನಸ್ತಂಭವಿರುವುದು, ಅದರಲ್ಲಿ ದಿಗಂಬರ ಜಿನಬಿಂಬವನ್ನು ಸ್ಥಾಪಿಸುವುದು, ದಿಗಂಬರ ಮುನಿಗಳ ಚಿತ್ರವನ್ನು ಕೊರೆಸುವುದು ಧರ್ಮಧ್ವಜವಿದೆ. ಸನಾತನ ಜೈನರ ಮುಖ್ಯ ಮಾರ್ಗವು ಹೇಗಿರಬೇಕೆಂಬುದರ ಪರಿಚಯ ಮಾಡಿಕೊಡುತ್ತಿರುವುದು ಧರ್ಮಧ್ವಜವಿದೆ, ಧರ್ಮದ ಸ್ಥಾನವಿದೆ.

ಯಾವನು ಈಶ್ವರನನ್ನು ಜಗತ್ತಿನ ಕರ್ತೃವೆಂದು ಮನ್ನಿಸುತ್ತಾನೆ ಅವನಂತೂ ಮಿಥ್ಯಾದೃಷ್ಟಿಯಿದ್ದಾನೆ. ಅವನಿಗೆ ಮಹಾನತೆಯು ಇರುವುದಿಲ್ಲ. ಯಾವುದನ್ನು ಅಹಿಂಸೆ, ಸತ್ಯವೆನ್ನಬೇಕೆಂಬುದರ ಪ್ರಜ್ಞೆಯು ಕೂಡ ಜನರಿಗೆ ಇರುವುದಿಲ್ಲ, ಪ್ರತಿಯೊಬ್ಬ ಆತ್ಮನು ಸ್ವಯಂಸಿದ್ಧ ವಸ್ತುವಿದ್ದಾನೆ. ಈಶ್ವರನ ಪ್ರಾರ್ಥನೆ ಮಾಡುವುದರಿಂದ ಯಾವುದೂ ದೊರಕುವಂತಿಲ್ಲ. ಅವನು ಏನಾದರೂ ಕೊಡಬಹುದೆನ್ನುವಂತೆಯೂ ಇಲ್ಲ. ವಸ್ತುವಿದೆ ಅದನ್ನು ಯಾರು ಮಾಡುವರು ಮತ್ತು ಇಲ್ಲದುದನ್ನು ಯಾರು ಮಾಡುವರು ? ವಸ್ತುವನ್ನು ತಿಳಿದುಕೊಂಡಲ್ಲದೆ ಕೇವಲ ಕ್ರಿಯಾಕಾಂಡ ಮಾಡುವವನು ಮೂಢನಿದ್ದಾನೆ. ಯಾವ ಜೀವನು ವಸ್ತ್ರಸಹಿತ ಮುನಿತನವನ್ನು ಮನ್ನಿಸುತ್ತಾನೆ ಅವನು ಕುಲಿಂಗಿಯಿದ್ದಾನೆ, ಅದರಂತೆ ವ್ಯವಹಾರದಿಂದ ನಿಶ್ಚಯ ಪಡೆಯಬಹುದೆಂದು ಮನ್ನಿಸುವಂಥವನು ಕೂಡ ಮಿಥ್ಯಾದೃಷ್ಟಿಯಿರುವನು.

ಈಗ ಇಲ್ಲಿ ಚಾರಿತ್ರದ ಮಾತನ್ನು ಹೇಳುತ್ತಾರೆ -

**''ಈ ಜ್ಞಾನ-ದರ್ಶನಗಳು ಜೀವದ ಸ್ವರೂಪವಿವೆ. ಇವುಗಳ ನಿಶ್ಚಲ ಸ್ಥಿರವಿರುವಿಕೆ, ತಮ್ಮ ಉತ್ಪಾದವ್ಯಯ ಧ್ರುವ ಅವಸ್ಥೆಯಿಂದ ಅಸ್ತಿತ್ವರೂಪ ಮತ್ತು ರಾಗಾದಿಗಳ ಪರಿಣತಿಯ ಅಭಾವದಿಂದ ನಿರ್ಮಲವಿರುವುದು ಅದರ ಹೆಸರು ಚಾರಿತ್ರವಿದೆ. ಅದೇ ಮೋಕ್ಷದ ಮಾರ್ಗವಿದೆ.''**

ಜ್ಞಾನ-ದರ್ಶನವು ಜೀವದ ಸ್ವಭಾವವಿದೆ. ಜೀವನು ತನ್ನ ಜ್ಞಾನ-ದರ್ಶನ ಸ್ವಭಾವದ ಅಸ್ತಿತ್ವರೂಪನಿದ್ದಾನೆ. ಪಂಚಮಹಾವ್ರತಗಳ ಉತ್ಪಾದವಾಗುತ್ತದೆ ಅದರಿಂದಲೇ ಚಾರಿತ್ರವಾಗುತ್ತದೆಯೆಂಬುದಾಗಿಲ್ಲ, ಆದರೆ ತನ್ನ ಜ್ಞಾನ-ದರ್ಶನ ಸ್ವಭಾವದಲ್ಲಿ ಏಕಾಗ್ರವಾಗುವುದರಿಂದ ಚಾರಿತ್ರವು ಪ್ರಕಟವಾಗುತ್ತದೆ. ಆರನೆಯ ಗುಣಸ್ಥಾನದಲ್ಲಿ ಇಪ್ಪತ್ತೆಂಟು ಮೂಲಗುಣಗಳನ್ನು ಪಾಲನೆ ಮಾಡುವುದರ ರಾಗ, ಆರು ಆವಶ್ಯಕಗಳನ್ನು ಪಾಲನೆ ಮಾಡುವುದರ ರಾಗ, ಎದ್ದು ನಿಂತುಕೊಂಡು ಆಹಾರ ತೆಗೆದುಕೊಳ್ಳುವುದು ಇವೇ ಮೊದಲಾದವುಗಳ ಯಾವ ವಿಕಲ್ಪಗಳು ಉಂಟಾಗುತ್ತವೆ ಆ ವಿಕಲ್ಪಗಳ ಕಾರಣದಿಂದ ಚಾರಿತ್ರವಿರುವುದಿಲ್ಲ, ಆದರೆ ತನ್ನ ಜ್ಞಾನ-ದರ್ಶನ ಸ್ವಭಾವದಲ್ಲಿ ಲೀನತೆ ಮಾಡುವುದು ಚಾರಿತ್ರವಿದೆ.

ಭಾವಲಿಂಗೀ ಮುನಿರಾಜರುಗಳ ಸ್ವರೂಪವು ಹೇಗಿರುತ್ತದೆಯೆಂಬುದರ ಮಾತು ನಡೆಯುತ್ತಿದೆ. ಯಾರಿಗೆ ಗಣಧರರು ಅಥವಾ ಯಾರು ಹದಿನಾಲ್ಕು ಪೂರ್ವಗಳನ್ನು ತಿಳಿದುಕೊಳ್ಳುವಂಥವರಿದ್ದಾರೆ ಅವರು ನಮಸ್ಕಾರ ಮಾಡುತ್ತಾರೆಂದರೆ ಆ ಮುನಿಗಳು ಹೇಗಿರಬೇಕೆಂಬುದರ ಮಾತು ನಡೆಯುತ್ತಿದೆ. ಜ್ಞಾನ-ದರ್ಶನ ಅಸ್ತಿತ್ವರೂಪವು ಸ್ವಭಾವವಿದ್ದು ಅದರಲ್ಲಿ ಸ್ಥಿರವಿರುವುದು ಚಾರಿತ್ರವಿದೆ. ಮೊದಲನೆಯ ಅವಸ್ಥೆಯಲ್ಲಿ ವಿಕಲ್ಪಗಳಾಗುವುದು ಮತ್ತು ಮಹಾವ್ರತಾದಿಗಳ ಪರಿಣಾಮದ ಉತ್ಪಾದವಾಗುವುದು ಚಾರಿತ್ರವಿಲ್ಲ.

ಯಾವ ಪ್ರಕಾರ ಮೇರು ಪರ್ವತದ ಮೇಲೆ ಶಿಖರವಿದೆ, ಅದೇ ಪ್ರಕಾರ ಇದು ಮೋಕ್ಷಮಾರ್ಗದ ಚೂಲಿಕೆಯಿದೆ. ಜ್ಞಾನ-ದರ್ಶನ ಸ್ವಭಾವದಲ್ಲಿ ಏಕಾಗ್ರವಾಗುತ್ತಿರುವಂತೆ ಮೊದಲಿನ ಅವಸ್ಥೆಯ ವ್ಯಯವಾಗುತ್ತದೆ, ನವೀನ ಅವಸ್ಥೆಯ ಉತ್ಪಾದವಾಗುತ್ತದೆ ಮತ್ತು ಜ್ಞಾನ-ದರ್ಶನ ಸ್ವಭಾವವು ಸ್ಥಿರವುಳಿಯುವುದು ಚಾರಿತ್ರವಿದೆ.

ಈಗಂತೂ ವರ್ತಮಾನದಲ್ಲಿ ನಿಜವಾದ ಮುನಿಗಳ ವಿರಹವಾಗಿ ಹೋಗಿದೆ. ಇಂದು ವ್ಯವಹಾರ ಶ್ರದ್ಧೆಯದೂ ಕೂಡ ಸುಳಿವಿಲ್ಲ. ಆರನೆಯ ಏಳನೆಯ ಗುಣಸ್ಥಾನಗಳಲ್ಲಿ ತೂಗುಯ್ಯಾಲೆಯಾಡುತ್ತಿರುವಂಥ ಭಾವಲಿಂಗೀ ಸಂತರುಗಳ ದರ್ಶನವಾಗುವುದಿಲ್ಲ. ಜೀವರುಗಳ ಉಪಾದಾನದ ಯೋಗ್ಯತೆಯ ಅನುಸಾರವಾಗಿಯೇ ನಿಮಿತ್ತಗಳು ದೊರಕುತ್ತವೆ. ಆರನೇ ಏಳನೇ ಗುಣಸ್ಥಾನದ ಭೂಮಿಕೆಯಲ್ಲಿ ಜೀಕುತ್ತಿರುವಂಥ ಭ. ಕುಂದಕುಂದಾಚಾರ್ಯದೇವರೆಲ್ಲಿ ಮತ್ತು ವರ್ತಮಾನದಲ್ಲಿ ಮನ್ನಿಸಲಾಗುತ್ತಿರುವ ಸಾಧುಗಳೆಲ್ಲಿ ! ಒಂದಿಷ್ಟೂ ಹೊಂದಿಕೆಯಾಗುವಂತೆಯೇ ಇಲ್ಲ.

ಮಹನೀಯರೇ ! ಆತ್ಮನ ಪರಿಚಯವಾಗುತ್ತಿರುವಂತೆ ಚಿದಾನಂದನ ಕಣ್ಣುಗಳು ತಾನೇ ತೆರೆದು ಬಿಡುತ್ತವೆ ಇವನು ಪುಣ್ಯ-ಪಾಪದಲ್ಲಿ ನಿಂತುಕೊಳ್ಳುವುದು ಕ್ರಿಯಾಕಾಂಡವಿದೆ ಮತ್ತು ಪುಣ್ಯ-ಪಾಪದ ವಿಸ್ತಾರದಿಂದ ರಹಿತವಾದ ಯಾವ ಆತ್ಮಸ್ವಭಾವವಿದೆ ಅದರಲ್ಲಿ ಏಕಾಗ್ರತೆ ಮಾಡುವುದು ಜ್ಞಾನಕಾಂಡವಿದೆ. ಯಾವ ಧೂಳಿನ ಕಣದ ಜತೆಯಲ್ಲಿ ನಿನ್ನದು ಸಂಬಂಧವೇ ಇಲ್ಲ-ವ್ರತಾದಿಗಳ ವಿಕಲ್ಪಗಳು ಉತ್ಪನ್ನವಾಗುವುದು ಅದಂತೂ ನನ್ನ ಸ್ವರೂಪವಲ್ಲ. ಎಷ್ಟು ಚೈತನ್ಯದ ಸ್ವಭಾವದಲ್ಲಿ ಲೀನತೆಯು ವರ್ತಿಸುವುದು ಅಷ್ಟು ಪ್ರಮಾಣದಲ್ಲಿ ರಾಗಾದಿಗಳ ಅಭಾವವಿದೆ. ಮುನಿತನವು ಪ್ರಕಟವಾಗುವುದು ಮತ್ತು ವಸ್ತ್ರ-ಪಾತ್ರೆಗಳ ರಾಗವಿರುವುದು ಹಾಗೆಂದೂ ಸಂಭವಿಸುವುದಿಲ್ಲ. ವಸ್ತ್ರ-ಪಾತ್ರೆಗಳ ಸಹಿತವಾಗಿ ಮುನಿತನವನ್ನು ಮನ್ನಿಸುವಂಥ ಜೀವನು ಆರನೇ ಗುಣಸ್ಥಾನದ ಪರ್ಯಾಯವನ್ನು ಆ ಸಮಯದಲ್ಲಿನ ರಾಗದ ಅಭಾವವನ್ನು ಮತ್ತು ಸಂಯೋಗದ ಅಭಾವವನ್ನು ತಿಳಿದುಕೊಳ್ಳುವುದಿಲ್ಲ ಅವನು ನವತತ್ತ್ವಗಳನ್ನು, ಸಮ್ಯಗ್ದರ್ಶನದ ಸ್ವರೂಪವನ್ನು ಅಥವಾ ಮುನಿಯ ಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ. ಆರನೆಯ ಗುಣಸ್ಥಾನದ ಯಾವ ಪರ್ಯಾಯವಿದೆ ಅದನ್ನು ತಿಳಿದುಕೊಳ್ಳುವಲ್ಲಿ ಯಾವನು ತಪ್ಪು ಮಾಡುತ್ತಾನೆ ಅವನಿಗೆ ನವತತ್ತ್ವಗಳಲ್ಲಿ ದೋಷವಿದೆ. ಆರನೆಯ ಗುಣಸ್ಥಾನದಲ್ಲಿ ಎಷ್ಟು ರಾಗದ ಅಭಾವವಿದೆ ಅದು ಸಂವರ-ನಿರ್ಜರೆಯಿದೆ. ಆ ಸಂವರ-ನಿರ್ಜರೆಯು ಹೇಗಿರುವುದು ಅದನ್ನು ತಿಳಿಯುವುದಿಲ್ಲ. ಅಜೀವದ ನಿಮಿತ್ತತೆಯು ಹೇಗಿರುವುದು, ಆನಂದ, ವೀರ್ಯ, ಚಾರಿತ್ರ ಮೊದಲಾದವುಗಳು ಎಷ್ಟು ಪ್ರಕಟವಾಗಿವೆಯೆಂಬುದನ್ನು ಅವನು ತಿಳಿಯುವುದಿಲ್ಲ ಎಂದರೆ ಒಂದೂ ತತ್ತ್ವವನ್ನು ಯಥಾರ್ಥವಾಗಿ ತಿಳಿದುಕೊಳ್ಳುವುದಿಲ್ಲ.

ಅದೆಷ್ಟೋ ಜೀವರುಗಳು ಶ್ರೀಮದ್ ರಾಜಚಂದ್ರರ ವಚನಗಳ ಆಧಾರವನ್ನು ಕೊಟ್ಟು ಸ್ವಚ್ಛಂದತೆಯನ್ನು ಪೋಷಿಸುತ್ತಾರೆ. ಅವರು ಯಾರನ್ನು ಉದ್ದೇಶಿಸಿ ಯಾವ ಭೂಮಿಕೆಯ ಅನುಸಾರ ವಾಕ್ಯಗಳನ್ನು ಬರೆದಿದ್ದಾರೆ ಅವುಗಳ ಮರ್ಮವನ್ನು ಅಜ್ಞಾನೀ ಜೀವರುಗಳು ತಿಳಿದುಕೊಳ್ಳುವ ಸಾಧ್ಯತೆಯಿಲ್ಲ.

ಚಾರಿತ್ರದಶೆಯ ಸಮಯದಲ್ಲಿ ಮುನಿರಾಜರಿಗೆ ಅನಂತಾನುಬಂಧಿ, ಅಪ್ರತ್ಯಾಖ್ಯಾನಾವರಣೀಯ ಮತ್ತು

ಪ್ರತ್ಯಾಖ್ಯಾನಾವರಣೀಯ ಈ ಮೂರು ಕಷಾಯ ಚೌಕಡಿಗಳು ಹೊರಟು ಹೋಗಿರುತ್ತವೆ ಮತ್ತು ಒಂದು ಸಂಜ್ವಲನ ಕಷಾಯವು ಅಲ್ಪ ಪ್ರಮಾಣದಲ್ಲಿ ಬಾಕಿ ಇರುತ್ತದೆ. ಎಷ್ಟು ರಾಗವಿರುವುದಿಲ್ಲ ಅಷ್ಟು ಪ್ರಮಾಣದಲ್ಲಿ ಆರನೆಯ ಗುಣಸ್ಥಾನದಲ್ಲಿ ಕೂಡ ವೀತರಾಗೀಶಾಂತಿ, ಆನಂದ, ವೀರ್ಯಗಳು ಪ್ರಕಟವಾಗಿರುತ್ತವೆ. ಯಾರಿಗೆ ಈ ಪ್ರಕಾರದ ಜ್ಞಾನವಿರುವುದಿಲ್ಲ ಅವರಿಗೆ ಸಮ್ಯಗ್ದರ್ಶನವು ಕೂಡ ಇರುವುದಿಲ್ಲ.

ವರ್ತಮಾನದಲ್ಲಿಯಂತೂ ಮುನಿದಶೆಯನ್ನು ಕೇಳುವುದು ಕೂಡ ಕಠಿಣವಾಗಿ ಹೋಗಿದೆ. ಬಹಳಷ್ಟು ಜೀವರುಗಳು ವಿಪರೀತ ಮಾರ್ಗದಲ್ಲಿ ಆರೂಢರಾಗಿ ಹೋಗಿದ್ದಾರೆ. ರಾಗ-ದ್ವೇಷ, ಹರುಷ-ಶೋಕ ಮೊದಲಾದ ವಿಕಾರಗಳ ಅಭಾವವಾಗಿ ಎಷ್ಟು ನಿರ್ಮಲತೆಯು ಪ್ರಕಟವಾಗುವುದು ಅಷ್ಟು ಚಾರಿತ್ರವಿದೆ.

ಭ.ಕುಂದಕುಂದಾಚಾರ್ಯದೇವರಿಗೆ ತೀರ್ಥಂಕರ ಭಗವಂತರ ವಿರಹದ ವೇದನೆಯಾಗುತ್ತಿತ್ತು. ಈ ಭರತ ಕ್ಷೇತ್ರದಲ್ಲಿ ಸೀಮಂಧರನಾಥರ ವಿರಹವಾಗಿ ಹೋಗಿದೆ, ಆದರೆ ಆ ಮುನಿಭಗವಂತರ ಯೋಗ್ಯತೆಯಿರುವುದರಿಂದ ಮತ್ತು ಪುಣ್ಯದ ಯೋಗವಿರುವುದರಿಂದ ಅವರಿಗೆ ಸೀಮಂಧರನಾಥರ ದರ್ಶನವಾಯಿತು-ಭೆಟ್ಟಿಯಾಯಿತು ಮತ್ತು ಈಗ (ವರ್ತಮಾನದಲ್ಲಿ ) ಈ ಕ್ಷೇತ್ರದಲ್ಲಿ ಸರ್ವಜ್ಞರದಂತೂ ವಿರಹವು ಇದ್ದೇ ಇದೆ, ಆದರೆ ಸಂತರುಗಳದ್ದೂ-ಮುನಿಗಳದ್ದೂ ವಿರಹವಾಗಿ ಹೋಗಿದೆ. ವರ್ತಮಾನದಲ್ಲಿಯಂತೂ ಭಾವಲಿಂಗೀ ಮುನಿಯ ಸಮಾನತೆಯು (ಮಾದರಿಯು) ಕೂಡ ನೋಡಲು ದೊರಕುವುದಿಲ್ಲ.

ಇಲ್ಲಿ ಹೇಳುವುದೇನೆಂದರೆ-ತಮ್ಮ ಜ್ಞಾನ-ದರ್ಶನ ಸ್ವಭಾವದಲ್ಲಿ ಸ್ಥಿರತೆ ಮತ್ತು ರಾಗ ಮೊದಲಾದ ಪರಿಣತಿಯ ಅಭಾವವು ಅದು ನಿಜವಾದ ಚಾರಿತ್ರವಿದೆ ಮತ್ತು ಅದೇ ಮೋಕ್ಷದ ಮಾರ್ಗವಿದೆ. ಮೋಕ್ಷದ ಕಾರಣವು ಚಾರಿತ್ರವಿದೆ ಮತ್ತು ಚಾರಿತ್ರದ ಕಾರಣವು ಜೀವದ ಜ್ಞಾನ-ದರ್ಶನಮಯವಿರುವ ಸ್ವಭಾವವಿದೆ.

ಚಾರಿತ್ರವು ಒಂದು ಸ್ವಚಾರಿತ್ರ ಮತ್ತು ಇನ್ನೊಂದು ಪರಚಾರಿತ್ರವೆಂದು ಹೀಗೆ ಎರಡು ಪ್ರಕಾರದ್ದಿದೆ. ಸ್ವಚಾರಿತ್ರವನ್ನು ಸ್ವಸಮಯವೆಂದೂ ಮತ್ತು ಪರಚಾರಿತ್ರವನ್ನು ಪರಸಮಯವೆಂದು ಹೇಳುತ್ತಾರೆ. ಅಖಂಡ ಜ್ಞಾನ-ದರ್ಶನ ಸ್ವಭಾವದಲ್ಲಿ ಲೀನತೆ ಮಾಡುವುದು ಸ್ವಚಾರಿತ್ರವಿದೆ ಮತ್ತು ಅಂಥ ಲೀನತೆಯಾಗದಿರುವಾಗ ಎಂದರೆ ಮಹಾವ್ರತಾದಿಗಳ ಪರಿಣಾಮವಿರುವಾಗ ಅದನ್ನು ಪರಚಾರಿತ್ರವೆಂದು ಹೇಳುತ್ತಾರೆ. ಧ್ರುವ ನಿತ್ಯಾನಂದ ಶುದ್ಧ ಸ್ವಭಾವದಲ್ಲಿ ಎಷ್ಟು ಸ್ಥಿರಭಾವವಿರುತ್ತದೆ ಅದು ಸ್ವಾಭಾವಿಕವಿದೆ ಅಥವಾ ಸ್ವಸಮಯವಿದೆ ಮತ್ತು ದೇವ-ಶಾಸ್ತ್ರ-ಗುರುಗಳ ಕುರಿತಾಗಿರುವ ರಾಗ ಹಾಗೂ ಮಹಾವ್ರತಾದಿಗಳ ರಾಗವು ಅದು ಪರದ್ರವ್ಯದಲ್ಲಿ ಜೋಡಿಸುವಿಕೆಯಿದೆ. ಸ್ವಭಾವದೊಳಗಿರುವ ಲೀನತೆಯು ಬಿಟ್ಟುಹೋಗಿ ಪಂಚಮಹಾವ್ರತಾದಿಗಳ ರಾಗ, ಆಹಾರ ಸ್ವೀಕರಿಸುವ ರಾಗ ಇವೇ ಮೊದಲಾದವುಗಳು ಪರಚಾರಿತ್ರವಿವೆ ದೇಹದ ಕ್ರಿಯೆಯಂತೂ ಜಡದ ಕ್ರಿಯೆಯಿದ್ದು ಅದು ಪರಚಾರಿತ್ರವಲ್ಲ, ಮುನಿರಾಜರಿಗೆ ಯಾವ ರಾಗವು ಉತ್ಪನ್ನವಾಗುತ್ತದೆ ಅದು ಮೋಕ್ಷಮಾರ್ಗವಿಲ್ಲ-ಏಕೆಂದರೆ ಅದು ಪರಚಾರಿತ್ರವಿದೆ. ಆದರೆ ತಮ್ಮ ಆತ್ಮಸ್ವಭಾವದಲ್ಲಿ ನಿರ್ವಿಕಲ್ಪತೆ ಮತ್ತು ಪುಣ್ಯ ಪಾಪದ ವಿಕಲ್ಪವಿಲ್ಲದೆ ಸ್ವಭಾವದಲ್ಲಿ ಸ್ಥಿರತೆ ಮಾಡುವುದು ಸಾಕ್ಷಾತ್ ಮೋಕ್ಷಮಾರ್ಗವಿದೆ, ರಾಗವನ್ನು ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳುತ್ತಾರೆ. ಅಜ್ಞಾನಿಗಳಂತೂ ರಾಗವನ್ನು ಸಾರಭೂತವೆಂದು ಮನ್ನಿಸುತ್ತಾರೆ. ಜ್ಞಾನಿಗಳು ಅದನ್ನು ಹೇಯವೆಂದು ತಿಳಿಯುತ್ತಾರೆ. ಆತ್ಮಸ್ವಭಾವದಲ್ಲಿ ಪ್ರತ್ಯಕ್ಷ ರಮಣತೆಯೊಂದೇ ನಿಜವಾದ ಮೋಕ್ಷಮಾರ್ಗವಿದೆ.

ಆತ್ಮನು ಚಿದಾನಂದ ವಸ್ತುವಿದ್ದಾನೆ. ಅವನ ವರ್ತಮಾನದ ಪರ್ಯಾಯವು ವಿಕಾರವುಳ್ಳದ್ದಿದೆ. ವರ್ತಮಾನದಲ್ಲಿ ವಿಕಾರವು ಇಲ್ಲದಿದ್ದರೆ ಆನಂದವು ಇರಲೇ ಬೇಕಾಗುವುದು. ಶರೀರ, ಮನಸ್ಸು, ವಾಣಿಗಳೆಲ್ಲವು ಪರವಿವೆ ಅವನ್ನು ತನ್ನವುಗಳೆಂದು ಮನ್ನಿಸಿ ರಾಗ ಮಾಡುವುದು ದುಃಖವಿದೆ. ಯಾರಿಗೆ ದುಃಖವೆನಿಸುತ್ತಿರುವುದು ಮತ್ತು ಶಾಂತಿಯು

ಬೇಕಾಗಿರುವುದು ಅವರ ಮಾತು ಇದೆ. ಆತ್ಮನು ವರ್ತಮಾನದಲ್ಲಿ ಸುಖಿಯಿದ್ದಾನೆಯೋ ಅಥವಾ ದುಃಖಿಯಿದ್ದಾನೆಯೋ? ಪರವಸ್ತುವಿನ ಆಸೆ ಮಾಡುವುದು ಅದು ಪರಾಧೀನತೆಯಿದೆ. ತಮ್ಮ ಚೈತನ್ಯ ಸ್ವಭಾವದಲ್ಲಿ ಸುಖವಿಲ್ಲವೆಂದು ಮನ್ನಿಸುವುದು ಮತ್ತು ಪರದ ಕಾರಣದಿಂದ ಸುಖವಿದೆಯೆಂದು ಮನ್ನಿಸುವುದು ಭ್ರಾಂತಿಯಿದೆ. ಜ್ಞಾನಸ್ವಭಾವಿಯಾದ ಆತ್ಮನು ಪರದ ಲಕ್ಷ್ಯಮಾಡಿ ರಾಗ ಮಾಡುವುದು ದುಃಖದಾಯಕವಿದೆ. ಯಾವಾಗ ಆಸೆಯು ಸ್ವಯಂ ದುಃಖದಾಯಕವಿದೆಯೆಂದ ಮೇಲೆ ಆಸೆಯ ವಿಷಯವಿದೆ ಅದರಲ್ಲಿ ಸುಖವಿದೆಯೆಂಬುದು ಎಂದೂ ಸಂಭವಿಸುವ ಸಾಧ್ಯತೆಯಿಲ್ಲ. ಜ್ಞಾನಸ್ವಭಾವವಿರುವಂಥ ಆತ್ಮನು ತನ್ನನ್ನು ಹೊರತುಪಡಿಸಿ ಪರದ ಆಸೆಯಿಟ್ಟುಕೊಳ್ಳುವುದು ದುಃಖದಾಯಕವಿದೆಯೆಂದು ಯಾರು ನಿರ್ಣಯ ಮಾಡಿದ್ದಾರೆ ಅವರು ಇಚ್ಛೆಯಿಂದ ರಹಿತವಿರುವಂಥ ತಮ್ಮ ಆತ್ಮನಲ್ಲಿ ಶಾಂತಿಯು ಹೇಗೆ ಪ್ರಕಟವಾಗುವುದೆಂಬುದರ ನಿರ್ಣಯ ಮಾಡುವ ಸಾಧ್ಯತೆಯಿದೆ. ಶರೀರ, ಧನ, ದೇವ-ಶಾಸ್ತ್ರ-ಗುರುಗಳ ಆಸೆಯಿಟ್ಟುಕೊಂಡಿರುವಂಥವರು ದುಃಖಿಯಾಗಿರುತ್ತಾರೆ.

ಪರದ ಕುರಿತು ಇಚ್ಛೆಮಾಡುವುದು ದುಃಖದ ಕಾರಣವಿದೆ. ಅನಂತರ ಆ ಇಚ್ಛೆಯು ಬೇಕಾದರೆ ಪೂಜೆಯದಿರಲಿ, ಭೋಗದ ವಿಷಯವಾಗಿರಲಿ ಅಥವಾ ಬೇಕಾದಂಥ ಶುಭಾಶುಭ ಭಾವದ್ದಾಗಿರಲಿ-ಅದೆಲ್ಲವೂ ದುಃಖದಾಯಕವೇ ಇದೆ, ಅದೆಲ್ಲವೂ ಪರಾಧೀನತೆಯೇ ಇದೆ. ಪರದ ಕಡೆಗೆ ಪ್ರವೃತ್ತಿ ಮಾಡದಿರುವುದು ಸ್ವಾಧೀನತೆಯಿರುವುದು, ಆದರೆ ಮೂಲದಲ್ಲಿ ತಮಗೆ ತಮ್ಮ ಶಕ್ತಿಯ ಭರವಸೆ ಬರಬೇಕಾಗುವುದು.

ಈ ಜೀವನಿಗೆ ಬಾಹ್ಯದಲ್ಲಿ ಎಂಥ ಕ್ಷುದ್ರ ವಸ್ತುವಿನ ಮೇಲೆಯೂ ಕೂಡ ಪೂರ್ಣ ವಿಶ್ವಾಸವುಂಟಾಗುತ್ತದೆ. ತಾನು ತಲುಪಬೇಕಾದ ಗುರಿಯು ಎಷ್ಟೇ ದೂರವಿದ್ದರೂ ಅದನ್ನು ತಲುಪುತ್ತಾನೆ, ಆದರೆ ಅಂತರ್ಯದಲ್ಲಿ ತನ್ನ ಆತ್ಮತತ್ತ್ವದೊಳಗೆ ಶಕ್ತಿಯಿದೆ, ಅದರಲ್ಲಿ ಏಕಾಗ್ರತೆ ಸಾಧಿಸುವುದರಿಂದ ಸರ್ವಜ್ಞತೆಯು ಪ್ರಕಟವಾಗುತ್ತದೆ. ಆನಂದವು ಪ್ರಕಟವಾಗುತ್ತಿದೆಯೆಂಬುದರ ಮೇಲೆ ವಿಶ್ವಾಸವೇ ಬರುವುದಿಲ್ಲ. ಈ ಆತ್ಮನು ಬರಿದಾಗಿದ್ದಾನೆಯೋ ಅಥವಾ ತುಂಬಿಕೊಂಡಿದ್ದಾನೆಯೋ ? ಆತ್ಮನಂತೂ ಜ್ಞಾತಾ-ದೃಷ್ಟಾ ಇದ್ದಾನೆ. ಅವನ ಪ್ರತೀತಿಯಿಲ್ಲದಿರುವುದರಿಂದ ಅವನಲ್ಲಿ ರಮಣಶೀಲತೆ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಪರವಸ್ತುವನ್ನು ವಿಷಯವನ್ನಾಗಿ ಮಾಡಿಕೊಂಡು ರಾಗದಲ್ಲಿ ವಿಹಾರಮಾಡುತ್ತಿರುವುದರಿಂದ ಸುಖಿಯಾಗುತ್ತಿಲ್ಲ.

ಯಾವ ಪ್ರಕಾರ ಬೆಂಕಿಪೊಟ್ಟಣದಲ್ಲಿರುವ ಕಡ್ಡಿಯ ತುದಿಯಲ್ಲಿ ಅಗ್ನಿಯ ಶಕ್ತಿಯು ತುಂಬಿಕೊಂಡಿದೆ, ಅದೇ ಪ್ರಕಾರ ಚೈತನ್ಯ ಸ್ವಭಾವದಲ್ಲಿ ಆನಂದದ ಶಕ್ತಿಯಿದೆ. ಅದನ್ನು ಮರೆತುಹೋಗಿ ಕಾಮ-ಕ್ರೋಧಾದಿಗಳ ಪ್ರವೃತ್ತಿಯು ಉತ್ಪನ್ನವಾಗಿರುವುದು ವಿಕೃತಿಯಿದೆ. ಆದುದರಿಂದಲೇ ಪರಪದಾರ್ಥಗಳನ್ನು ಧ್ಯೇಯವನ್ನಾಗಿ ಮಾಡಿಕೊಂಡು ಸ್ವಭಾವದಿಂದ ಭ್ರಷ್ಟನಾಗಿ ಹೋಗಿದ್ದಾನೆ. ನಾನು ಸ್ವಭಾವದಿಂದ ಜ್ಞಾನಸ್ವರೂಪನಿದ್ದೇನೆ, ನನ್ನ ಉದ್ಧಾರವನ್ನು ಬೇರೆ ಯಾರೂ ಮಾಡುವ ಸಾಧ್ಯತೆಯಿಲ್ಲವೆಂಬುದು ಅವನ ತಿಳಿವಳಿಕೆಯಲ್ಲಿ ಬಂದೇ ಇಲ್ಲ. ಸ್ವಭಾವದಲ್ಲಿ ಬಂದ ಹೊರತಾಗಿ ಶಾಂತಿಯು ಇರುವುದಿಲ್ಲ. ತನ್ನದು ನಿತ್ಯಾನಂದ ಧ್ರುವಸ್ವಭಾವವಿದೆಯೆಂಬುದರ ಪ್ರತೀತಿ ಮಾಡಿಕೊಳ್ಳಲಾರದೆ ಸ್ವ-ಸಮಯದ ತ್ಯಾಗ ಮಾಡಿದ್ದಾನೆ. ಅವನಿಗೆ ಶಾಂತಿಯು ದೊರಕುವುದಿಲ್ಲ, ನಾನು ಜ್ಞಾಯಕನಿದ್ದೇನೆ, ನನ್ನ ಶಾಂತಿಯು ಪರದಲ್ಲಿ ಅಥವಾ ಪರದ ಕಡೆಗಿರುವ ಪ್ರವೃತ್ತಿಯಲ್ಲಿ ಇರುವ ಸಾಧ್ಯತೆಯಿಲ್ಲ. ನಾನು ಧ್ರುವನಿದ್ದೇನೆ, ಆದಿ-ಅಂತದಿಂದ ರಹಿತನಿದ್ದೇನೆಂದು ಅಂತರ್ಯದಲ್ಲಿ ಜ್ಞಾನದ ಮೂಲಕ ಸ್ಥಿರತೆ ಮಾಡುವುದು ಚಾರಿತ್ರವಿದೆ.

ಚೈತನ್ಯದ ವಿರೋಧಿಯಾಗಿ ಕರ್ಮವಿದೆ. ಅದನ್ನು ನಾಶ ಮಾಡುವ ಉಪಾಯವೇನೆಂದರೆ-ನಾನು ಶುದ್ಧ ಆನಂದಕಂದನಿದ್ದೇನೆಂದು ತನ್ನ ಸ್ವರೂಪದಲ್ಲಿ ಏಕಾಗ್ರತೆಯ ರೂಪದ ರಮಣತೆ ಮಾಡುವುದು, ಕ್ರೀಡೆ ಮಾಡುವುದು

ಕರ್ಮಕ್ಷಯದ ಉಪಾಯವಿದೆ. ನಾನು ಪರಮ ಬ್ರಹ್ಮನಿದ್ದೇನೆ, ಪರದ ಕಡೆಗಿರುವ ಶುಭಾಶುಭದ ಪ್ರವೃತ್ತಿಯು ವಿಕಾರವಿದೆ. ವ್ಯಾಪಾರ ಮಾಡುವ ಭಾವವು ಅಶುಭರಾಗವಿದೆ. ಚೈತನ್ಯಮಯ ಜ್ಞಾನಸ್ವಭಾವವನ್ನು ರಾಗದಲ್ಲಿ ತಡೆದು ನಿಲ್ಲಿಸುವುದು ಕಟ್ಟಿಹಾಕುವುದು ದುಃಖದಾಯಕವಿದೆ.

ತನ್ನಲ್ಲಿ ಲಾಭವಿರುವುದೋ ಅಥವಾ ಪರದಲ್ಲಿ ಲಾಭವಿರುವುದೋ ? ನಿನ್ನೊಳಗೆ ಸುಖವಿಲ್ಲದಿದ್ದರೆ ನೀನು ನಪುಂಸಕನಿರುವೆಯೇನು ? ಯಾವ ಜೀವನಿಗೆ ಚೈತನ್ಯದ ಅಭಿರುಚಿಯಾಗುವುದಿಲ್ಲ ಮತ್ತು ಪರದಲ್ಲಿ ಲಾಭವನ್ನು ಮನ್ನಿಸುತ್ತಾನೆ ಅವನು ಷಂಡನಿದ್ದಾನೆ, ನಪುಂಸಕನಿದ್ದಾನೆ ಅವನು ಚೈತನ್ಯ ಸತ್ತಾವನ್ನು ಮನ್ನಿಸುವುದಿಲ್ಲ. ತ್ರಿಕಾಲ ಶುದ್ಧ ಸತ್ತಾದ ಆಶ್ರಯದಿಂದ ಶಾಂತಿಯು ದೊರಕುವಂತಿದೆ. ಆದಾಗ್ಯೂ ಪರದಿಂದ ಶಾಂತಿಯನ್ನು ಮನ್ನಿಸುವಂಥವನು ಸ್ವಭಾವವನ್ನು ಮನ್ನಿಸುವುದಿಲ್ಲ. ಅವನನ್ನು ಸಾಮರ್ಥ್ಯ ಹೀನನೆಂದು ಹೇಳಲಾಗಿದೆ.

ಯಾವ ಜೀವನು ಧನವನ್ನು ಸುಖದಾಯಕವೆಂದು ಮನ್ನಿಸಿದ್ದಾನೆ ಅದೇ ಜೀವನು ಧನವನ್ನು ಲೂಟಿಮಾಡಿಕೊಂಡು ಹೋಗುವಂಥವನು ದೊರಕಿದರೆ ಧನವನ್ನು ದುಃಖದಾಯಕವೆಂದು ಮನ್ನಿಸುವನು. ಧನವಿಲ್ಲದಿದ್ದರೆ ಒಳ್ಳೆಯದಾಗುತ್ತಿತ್ತೆಂದು ಅವನು ಆ ಸಮಯದಲ್ಲಿ ಕಲ್ಪನೆ ಮಾಡುತ್ತಾನೆ. ಕಲ್ಪನಾತೀತವಾದ ಯಾವ ನಿಜತತ್ತ್ವವಿದೆ ಅದರದು ಅವನಿಗೆ ಪ್ರಜ್ಞೆಯಿರುವುದಿಲ್ಲ. ಅವನು ಪರವನ್ನು ಮಹಿಮಾವಂತವೆಂದು ತಿಳಿದುಕೊಂಡಿದ್ದಾನೆ, ಆದರೆ ಮಹಿಮಾವಂತನು ಸ್ವಯಂ ತಾನು ಇದ್ದಾನೆ. ತನ್ನದು ತನಗೆ ಅರಿವಿಲ್ಲವಾಗಿದೆ. ಶುಭಾಶುಭದ ಇಚ್ಛೆಗಳೆರಡೂ ದುಃಖದಾಯಕವಿವೆ. ಅವೆರಡನ್ನು ಬಿಟ್ಟುಕೊಟ್ಟು ಇಚ್ಛೆಯಿಂದ ರಹಿತವಿರುವಂಥ ತನ್ನ ಸ್ವಭಾವದ ಪ್ರತೀತಿ ಮಾಡಿದರೆ ಅದರಲ್ಲಿಯೇ ಏಕಾಗ್ರತೆ ಮಾಡಿದರೆ ಧರ್ಮವಾಗುವುದು.

ಸ್ವ-ಸಮಯದ ಗ್ರಹಣ ಎಂದರೆ ತನ್ನ ಶುದ್ಧ ಆತ್ಮನ ಗ್ರಹಣ ಮಾಡಿದರೆ ಮತ್ತು ರಾಗ-ದ್ವೇಷಗಳ ತ್ಯಾಗಮಾಡಿದರೆ ಆಗ ಕರ್ಮದ ಕ್ಷಯವಾಗುತ್ತದೆ ಮತ್ತು ಅದರಿಂದ ಜೀವಸ್ವಭಾವದ ನಿಶ್ಚಲ ಸ್ಥಿರತೆಯರೂಪದ ಮೋಕ್ಷಮಾರ್ಗವು ತಿಳಿದು ಬರುತ್ತದೆಯೆಂದು ಇಲ್ಲಿ ತಿಳಿಸಿಕೊಡಲಾಗಿದೆ -

**ಜೀವೋ ಸಹಾವಣಿಯದೋ ಅಣಿಯದಗುಣಪಜ್ಜಓಧ ಪರಸಮಓ ।**
**ಜದಿ ಕುಣದಿ ಸಗಂ ಸಮಯಂ ಪಬ್ಭಸ್ಸದಿ ಕಮ್ಮಬಂಧಾದೋ ॥೧೫೫॥**

**ಜೀವಸ್ವಭಾವಸ್ಥಿತನಿದ್ದನಿಯತ ಗುಣಪರ್ಯಾಯತ್ವ ಪರಸಮಯವಿದೆ ।**
**ಅವನೊಂದುಪಕ್ಷ ಸ್ವಸಮಯ ಮಾಡಿದರೆ ಕರ್ಮಬಂಧದಿಂ ಮುಕ್ತನಾಗುವನು ॥೧೫೫॥**

ಈ ಆತ್ಮನು ನಿಶ್ಚಯದಿಂದ ತನ್ನ ಶುದ್ಧ ಆತ್ಮಿಕ ಭಾವದಲ್ಲಿ ನಿಶ್ಚಲನಿದ್ದಾನೆ. ಯಾವ ಪ್ರಕಾರ ಕಪ್ಪು ಮೆಣಸಿನ ಕಾಳಿನಲ್ಲಿ ನೂರಕ್ಕೆ ನೂರರಷ್ಟು ಕಾರತನವು ತುಂಬಿಕೊಂಡಿರುತ್ತದೆ ಮತ್ತು ಅದು ವ್ಯಕ್ತವಾಗಿ ಹೊರಗೆ ಬರುತ್ತದೆ. ಅದೇ ಪ್ರಕಾರ ಆತ್ಮನಲ್ಲಿ ಅಂತರ್ಯದೊಳಗೆ ಶಕ್ತಿಯು ತುಂಬಿಕೊಂಡಿರುತ್ತದೆ, ಆದರೆ ಪರದ ಕಡೆಗಿರುವ ಒಲವಿನಿಂದ ಅವನಿಗೆ ಶಾಂತಿಯು ಕಂಡು ಬರುವುದಿಲ್ಲ. ಆ ತ್ರಿಕಾಲೀ ಸ್ವರೂಪವು ಎಲ್ಲಿಯೂ ಹೋಗಿಯೇ ಇಲ್ಲ. ಗುಣ-ಗುಣಿಯು ಏಕವಿದ್ದು, ತಾನು ತನ್ನ ಸ್ವಭಾವದಲ್ಲಿ ನಿಶ್ಚಲನಿದ್ದಾನೆ ಮತ್ತು ಜ್ಞಾನ ಮೊದಲಾದ ಶಕ್ತಿಗಳಿಂದ ಪರಿಪೂರ್ಣ ತುಂಬಿಕೊಂಡಿದ್ದಾನೆ. ಅವನಲ್ಲಿ ಯಾವುದರದೂ ಕೊರತೆಯಿಲ್ಲ.

ಆದರೇನು ಮಾಡುವುದು, ಆ ಜೀವನಿಗೆ ಅನಾದಿಯಿಂದ ಅವಿದ್ಯೆಯ ವಾಸನೆಯು ಉಳಿದುಕೊಂಡಿದೆ. ದಾನ ಕೊಡುವುದರಿಂದ ಧರ್ಮವಾಗುತ್ತದೆಯೆಂದು ಮನ್ನಿಸಿಕೊಂಡಿದ್ದಾನೆ. ತೃಷ್ಣೆಯನ್ನು ಕಡಿಮೆ ಮಾಡುವುದು ಪುಣ್ಯವಿದ್ದು,

ಅದು ಕೂಡ ವಿಕಾರವಿರುವುದರಿಂದ ದುಃಖದಾಯಕವೇ ಇರುವುದು. ವರ್ತಮಾನದಲ್ಲಿಯಂತೂ ಪುಣ್ಯದ್ದೂ ಕೂಡ ಪರಿವೆಯೇ ಇಲ್ಲ. ಪರವಸ್ತುವಿನ ಕಾರಣದಿಂದ ಪುಣ್ಯವಾಗುತ್ತದೆಯೆಂದು ಮನ್ನಿಸಲಾಗಿದೆ. ಆದರೆ ರಾಗವನ್ನು ಕಡಿಮೆ ಮಾಡುವುದರಿಂದಂತೂ ಪುಣ್ಯವಾಗುತ್ತದೆಂಬುದು ಕೂಡ ಅರಿವಿಲ್ಲದಿದ್ದರೆ ಆ ಪುಣ್ಯದಿಂದ ರಹಿತನಿರುವಂಥ ಪವಿತ್ರನಾದ ಆತ್ಮನ ಪ್ರತೀತಿಯು ಎಲ್ಲಿಂದ ಇರುವ ಸಾಧ್ಯತೆಯಿದೆ ಎಂದರೆ ಇರುವುದೇ ಇಲ್ಲ. ಪುಣ್ಯ-ಪಾಪಗಳೆರಡೂ ವಿಕಾರಗಳಿವೆ. ಕ್ರೋಧ-ಮಾನ-ಮಾಯೆ-ಲೋಭದ ಪರಿಣಾಮವು ನೂರೈದು ಡಿಗ್ರಿಯ ಜ್ವರದ ಸಮಾನವಿದೆ ಮತ್ತು ದಯೆ-ದಾನದಿಗಳ ಶುಭಭಾವವು ತೊಂಭತ್ತೊಂಭತ್ತು ಡಿಗ್ರಿಯ ಜ್ವರದ ಸಮಾನವಿದೆ. ಎರಡೂ ರೋಗಗಳೇ ಇವೆ. ತೊಂಭತ್ತೊಂಭತ್ತು ಡಿಗ್ರಿಯ ಜ್ವರವು ಆರು ತಿಂಗಳುಗಳವರೆಗೆ ಬರುತ್ತಲೇ ಇದ್ದರೆ ನಿಯಮದಿಂದ ಕ್ಷಯರೋಗವು ಅಂಟಿಕೊಳ್ಳುತ್ತದೆ. ಅಂಥ ಪುಣ್ಯ-ಪಾಪಗಳನ್ನು ಒಳ್ಳೆಯವೆಂದು ಮನ್ನಿಸುವುದು ಮತ್ತು ತಮ್ಮ ಚೈತನ್ಯತತ್ತ್ವದ ಮೇಲೆ ವಿಶ್ವಾಸ ಮಾಡದಿದ್ದರೆ ಎಂಭತ್ತಾ ನ್ಲಕ್ಕು ಲಕ್ಷಯೋನಿಗಳಲ್ಲಿ ಭ್ರಮಣ ಮಾಡಬೇಕಾಗುವುದು. ಪುಣ್ಯ-ಪಾಪಗಳಂತೂ ಕೃತ್ರಿಮವಿವೆ. ಅವುಗಳಲ್ಲಿ ಧರ್ಮವನ್ನು ಮನ್ನಿಸುವವರಿಗೆ ಅನಾದಿ-ಅನಂತದ ಕ್ಷಯವು ಹಿಡಿದುಕೊಳ್ಳುತ್ತದೆ.

ಹನ್ನೆರಡು ವರುಷದ ಬಾಲಕನಿಗೆ ಕ್ಷಯವಾಗಿರುವುದರ ಅರಿವು ಮೂಡಿಬರುವುದಿಲ್ಲ. ಅವನ ತಂದೆಯಿದ್ದರೆ ಅವನು ಅಥವಾ ವೈದ್ಯನು ''ನಿನಗೆ ಕ್ಷಯವು ಅಂಟಿಕೊಂಡಿದೆ''ಯೆಂದು ಹೇಳುವನು. ಅದರಂತೆ ಅನಾದಿಯಿಂದ ಅಜ್ಞಾನಿಗೆ ಅವಿದ್ಯೆಯ ಕ್ಷಯವು ಹಿಡಿದುಕೊಂಡಿದೆ ಆದರೆ ಅವನಿಗೆ ಅದರದು ಅರಿವಿಲ್ಲ. 'ನಿನಗೆ ಮಿಥ್ಯಾದರ್ಶನದ ರೋಗವು ಹಿಡಿದುಕೊಂಡಿದೆ'ಯೆಂದು ಅವನಿಗೆ ಸಮ್ಯಗ್ಜ್ಞಾನೀ ಗುರುವು ಹೇಳುವನು.

ಈ ಸಂಸಾರವು ಅನಾದಿಯಿಂದ ಇದೆ. ಒಂದುವೇಳೆ ಮುಕ್ತದಶೆಯು ಆಗಿಹೋಗುತ್ತಿದ್ದರೆ ಪುನಃ ಈ ಸಂಸಾರದಲ್ಲಿ ಬರುತ್ತಿರಲಿಲ್ಲ. ಅಜ್ಞಾನ, ರಾಗ-ದ್ವೇಷಗಳು ಹೊರಟುಹೋದ ನಂತರವೇ ಪೂರ್ಣ ಪವಿತ್ರವಿರುವ ದಶೆಯು ಪ್ರಕಟವಾಗುತ್ತದೆ ಮತ್ತು ಆಗ ದೇಹವು ಉಳಿಯುವುದಿಲ್ಲ, ಅನಾದಿಯಿಂದಿರುವ ಜೀವನು ಹೇಗೆ ಸಿಕ್ಕಿಹಾಕಿಕೊಂಡಿದ್ದಾನೆಂಬುದರದೂ ಕೂಡ ಅಜ್ಞಾನಿಗೆ ಅರಿವಿರುವುದಿಲ್ಲ. ಅನಾದಿಯಿಂದ ಅಜ್ಞಾನಿಯ ವಾಸನೆಯು ಪರದಲ್ಲಿಯೇ ಬಿದ್ದುಕೊಡಿದೆ. ತನ್ನ ಶುದ್ಧ ಆತ್ಮನನ್ನು ಹೊರತುಪಡಿಸಿ ಉಳಿದ ಯಾವ ಪತ್ನೀ-ಪುತ್ರ, ದೇವ-ಶಾಸ್ತ್ರ-ಗುರು ಮೊದಲಾದವರೆಲ್ಲರು ಪರರಿದ್ದಾರೆ. ಅವರುಗಳ ಮೇಲೆ ಸತತ ಪ್ರೀತಿ ಮಾಡಿ ಅಂತರ್ಯದಲ್ಲಿ ರಾಗ-ದ್ವೇಷಗಳಿಂದ ಹೊತ್ತಿ ಉರಿದು ಹೋಗುತ್ತಿದ್ದಾನೆ ಪುಣ್ಯ-ಪಾಪದ ಭಾವ ಮಾಡಿ, ಗುಣ-ಗುಣಿಯ ತನ್ಮಯತೆಯನ್ನು ಬಿಟ್ಟುಕೊಟ್ಟು, ಪರದಲ್ಲಿಯೇ ಏಕತೆಯನ್ನು ಮನ್ನಿಸಿಕೊಂಡಿದ್ದಾನೆ. ಶರೀರವು ಅನುಕೂಲವಾಗಿದ್ದರೆ ಧರ್ಮವಾಗುತ್ತದೆ. ಶಾಸ್ತ್ರವು ಸರಿಯಾಗಿದ್ದರೆ ಧರ್ಮವಾಗುತ್ತದೆಯೆಂದು ತಿಳಿದುಕೊಂಡು ಕೇವಲ ಪರದ ಕಡೆಗೆ ಪ್ರವೃತ್ತನಾಗಿ ಹೋಗಿದ್ದಾನೆ. ಆದರೆ ನಾನು ಚೈತನ್ಯನಿದ್ದೇನೆ. ನನ್ನ ಜ್ಞಾನವು ನನ್ನಲ್ಲಿರುವುದು ಮತ್ತು ನನ್ನ ಧರ್ಮವು ನನ್ನಲ್ಲಿರುವುದೆಂಬುದರ ಕುರಿತು ಅಭಿರುಚಿಯನ್ನೇ ಮಾಡುತ್ತಿಲ್ಲ.

ಮನುಷ್ಯನಿಗೆ ಜ್ವರವು ದೀರ್ಘಕಾಲದವರೆಗೆ ಉಳಿದುಕೊಂಡರೆ ಕ್ಷಯವಾಗಿರಬೇಕೆಂಬ ಸಂದೇಹವು ಅವಶ್ಯವಾಗಿ ಬಂದುಬಿಡುತ್ತದೆ. ಅದರಂತೆ ಸಂಸಾರವು ಅನಾದಿಯಿಂದ ನಡೆದು ಬರುತ್ತಿದೆ. ಕಳೆದುಹೋದ ಅನಂತಕಾಲದಲ್ಲಿ ಅನಂತ ಅವತಾರಗಳನ್ನು ಧಾರಣ ಮಾಡಿದೆ. ಕ್ರಿಮಿ, ಕತ್ತೆ, ಹಂದಿ, ದರಿದ್ರ, ಧನಿಕ, ದೊರೆ ಮೊದಲಾದ ಬಹಳಷ್ಟು ಭವಗಳಲ್ಲಿ ಜನ್ಮಧಾರಣ ಮಾಡಿದೆ, ಮರಣವನ್ನು ಮಾಡಿದೆ, ಆದರೆ ನನ್ನ ಶಾಂತಿಯು ನನ್ನಲ್ಲಿಯೇ ಇದೆಯೆಂಬುದನ್ನು ಮನ್ನಿಸದೆ ಪರದಲ್ಲಿಯೇ ತನ್ನ ಸುಖ-ಶಾಂತಿಯನ್ನು ಮನ್ನಿಸುತ್ತಿದ್ದಾನೆ, ನಾನು ಜ್ಞಾಯಕ ಸ್ವರೂಪನಿದ್ದೇನೆ, ವಿಕಾರವು ನನ್ನ

ಸ್ವರೂಪವಿಲ್ಲವೆಂಬುದನ್ನು ಮನ್ನಿಸದೆ ಅನಾದಿಯಿಂದ ಉಪಯೋಗವು ಪರದಲ್ಲಿಯೇ ಇರುವುದರಿಂದ ಪುಣ್ಯ-ಪಾಪದಲ್ಲಿ ನಿಮಗ್ನನಾಗಿ ಹೋಗಿದ್ದಾನೆ. ರಾಗ ಹಾಗೂ ವಾಸನೆಯ ಮರೆಯಲ್ಲಿ ಯಾವನು ಚೈತನ್ಯನಿದ್ದಾನೆ ಅವನ ಮೇಲೆ ವಿಶ್ವಾಸವನ್ನು ಮಾಡುವುದಿಲ್ಲ.

ಜನರು ವರ್ತಮಾನದಲ್ಲಿ ಮಾಡುತ್ತಿರುವಂಥ ದಾನ, ಪುಣ್ಯವನ್ನು ಈ ಮೊದಲೆಂದೂ ಮಾಡಿಯೇ ಇರುವುದಿಲ್ಲವೇನು ? ಅಯ್ಯಾ ! ಅದೆಷ್ಟೋ ಬಾರಿ ಮಾಡಿಯಾಗಿದೆ. ಆದರೆ ಚಿದಾನಂದ ಸ್ವರೂಪ ಆತ್ಮನ ಅಭಿರುಚಿಯಿಲ್ಲದೆ ಪರಿಭ್ರಮಣವು ಬಿಟ್ಟುಹೋಗುವುದಿಲ್ಲ. ಭಗವಂತರ ಕುರಿತಾಗಿರುವ ರಾಗವು ಕೂಡ ಪುಣ್ಯವಿರುವುದರಿಂದ ಆಗುತ್ತದೆ, ಅದನ್ನು ಧರ್ಮವೆಂದು ಮನ್ನಿಸುವಂಥವರು ಮೂಢರಿದ್ದಾರೆ. ಕಾರಣವೇನೆಂದರೆ ಅದರಲ್ಲಿ ಇಚ್ಛೆಯ ಉತ್ಥಾನವಿದೆ. ಆದಾಗ್ಯೂ ಅಜ್ಞಾನಿಗಳು ಅದರಲ್ಲಿಯೇ ನಿಮಗ್ನರಿದ್ದಾರೆ-ಮುಳುಗಿಹೋಗಿದ್ದಾರೆ ಮತ್ತು ಬೇರೋರ್ವ ಜೀವದ ಕೃಪೆಯಿಂದ ದೋಷವು ಹೊರಟುಹೋಯಿತೆಂದು ಅಜ್ಞಾನಿಯು ಮನ್ನಿಸಿಕೊಂಡಿದ್ದಾನೆ, ಆದರೆ ಹೀಗಿದ್ದ ನಂತರ ಓರ್ವನು ದೋಷ ಮಾಡುವುದು ಮತ್ತು ಬೇರೋರ್ವನು ದೂರ ಮಾಡಿದರೆ ಇವನಿಗೆ ಏನನ್ನು ಮಾಡುವುದು ಉಳಿಯುವುದಿಲ್ಲ. ಇಲ್ಲಿಯಂತೂ ಹೇಳುತ್ತಿರುವುದೇನೆಂದರೆ ಶುದ್ಧ ಚೈತನ್ಯದ ಮೇಲೆ ಶ್ರದ್ಧೆಯಿಟ್ಟು ಅಂತರ್ಮುಖನಾಗಿ ವಿಶ್ವಾಸ ಮಾಡುವುದಿಲ್ಲ, ಆದುದರಿಂದಲೇ ತಾನು ದೋಷ ಮಾಡುತ್ತಾನೆ ಮತ್ತು ತಾನೇ ವಿಶ್ವಾಸ ತಂದುಕೊಂಡು ತಾನೇ ದೋಷವನ್ನು ದೂರಮಾಡುವ ಸಾಧ್ಯತೆಯಿದೆ.

ಸರ್ವಜ್ಞ ಭಗವಂತರು ಸಂಬೋಧನೆ ಮಾಡುವುದೇನೆಂದರೆ-ನೀನು ಸ್ವಯಂ ನಿನ್ನ ಗುಣ-ಪರ್ಯಾಯಗಳಲ್ಲಿ ನಿಶ್ಚಲನಾಗಿರುವೆ. ಆದರೆ ನೀನು ಏನನ್ನು ಸ್ವಲ್ಪ ಕೂಡ ಮಾಡುವ ಸಾಧ್ಯತೆಯಿಲ್ಲ. ಆದಾಗ್ಯೂ ಏನನ್ನಾದರೂ ಮಾಡಿ ಬಿಡುವಂಥ ಸಾಮರ್ಥ್ಯವು ನಿನ್ನಲ್ಲಿ ಇರುತ್ತಿದ್ದರೆ ನೀನು ನಿನ್ನ ಶರೀರದಲ್ಲಿ ರೋಗವನ್ನು ಅದೇಕೆ ಬರಗೊಡುತ್ತಿರುವೆ ? ಪತ್ನಿಯನ್ನು ಅದೇಕೆ ಸಾಯಲು ಬಿಡುತ್ತಿರುವೆ ? ಹಲ್ಲುಗಳನ್ನು ಅದೇಕೆ ಬೀಳಗೊಡುತ್ತಿರುವೆ ? ಕಣ್ಣುಗಳ ಕಾಂತಿಯನ್ನು ಅದೇಕೆ ಕಡಿಮೆಮಾಡಗೊಡುತ್ತಿರುವೆ ? ಪರದಲ್ಲಿ ನಿನ್ನ ಯಾವ ಕಾರ್ಯವು ಆಗುವುದೇ ಇಲ್ಲ, ಆದರೆ ಜೀವನು ಕೇವಲ ಅಭಿಮಾನ ಮಾಡುತ್ತಾನೆ. ಆದುದರಿಂದ ಈಗ ಶ್ರದ್ಧೆಯ ವಿಷಯವನ್ನು ತಿರುಗಿಸಿಕೋ. ಶರೀರದಲ್ಲಿ ಹಾಗೂ ಪರದಲ್ಲಿ ಕಾರ್ಯ ಮಾಡುತ್ತೇನೆಂಬ ಶ್ರದ್ಧೆಯನ್ನು ಬಿಟ್ಟುಕೊಡು. ಪುಣ್ಯ-ಪಾಪದ ಶ್ರದ್ಧೆಯನ್ನು ಬಿಟ್ಟುಕೊಡು ಮತ್ತು ನಿನ್ನ ಸ್ವಭಾವದ ಶ್ರದ್ಧೆಯನ್ನು ಮಾಡು. ಈ ಪ್ರಕಾರ ಶ್ರದ್ಧೆ ಮಾಡುವುದರಿಂದ ಪುಣ್ಯ-ಪಾಪಗಳಾಗುತ್ತಿದ್ದರೂ ಕೂಡ ಅವುಗಳ ರಸವು ಉಳಿಯುವುದಿಲ್ಲ.

ಯಾವ ಜೀವನು ತನ್ನ ಜ್ಞಾನ ಮೊದಲಾದ ಗುಣ-ಪರ್ಯಾಯಗಳಲ್ಲಿ ಲೀನವಾಗುವುದಿಲ್ಲ ಮತ್ತು ಬಾಹ್ಯದಲ್ಲಿ ಲೀನನಿರುತ್ತಾನೆ ಅದು ಪರ ಆಚರಣೆಯಿದೆ. ಪುಣ್ಯ-ಪಾಪದ ಭಾವಗಳೆಲ್ಲವು ಪರ ಆಚರಣೆಯಿದೆ. ಅದು ಜೀವವನ್ನು ತನ್ನ ಸ್ವಭಾವದಲ್ಲಿ ಇರಗೊಡುವುದಿಲ್ಲ ಎಂದರೆ ಜೀವನು ತನ್ನ ಸ್ವಭಾವದಲ್ಲಿ ಇರಲು ಇಚ್ಛೆಪಡುವುದಿಲ್ಲ. ಅವನು ತನ್ನ ಸ್ವರೂಪದ ಅಭಿರುಚಿಯ ಅಭಾವದಿಂದ ಪುಣ್ಯ-ಪಾಪದಲ್ಲಿ ಅಭಿರುಚಿ ಮಾಡಿ ಅದರಲ್ಲಿ ಆಚರಣೆ ಮಾಡುತ್ತಾನೆ ಅದು ಪರ ಆಚರಣೆಯಿದೆ. ಯಾರಿಗೆ ತಮ್ಮ ಸ್ವಭಾವದ ಅರಿವಿರುವುದಿಲ್ಲ ಮತ್ತು ಕೇವಲ ಪರದ ಆಚರಣೆ ಮಾಡುತ್ತಾರೆ ಅವರು ನಿಯಮದಿಂದ ಸಂಸಾರದಲ್ಲಿಯೇ ಪರಿಭ್ರಮಣ ಮಾಡುತ್ತಾರೆ.

ಆತ್ಮನ ಸ್ವಭಾವವು ಜ್ಞಾನ-ದರ್ಶನವಿದ್ದು ಅದರ ಆಚರಣೆ ಮಾಡುವುದು ಚಾರಿತ್ರವಿದೆ. ಸಂಸಾರೀ ಜೀವನು ಪುರುಷಾರ್ಥ ಮಾಡಿ ಆತ್ಮನ ಸ್ವರೂಪದ ಆಚರಣೆ ಮಾಡುತ್ತಾನೆ ಆಗ ಅವನು ಬಂಧರಹಿತ ದಶೆಯನ್ನು ಪಡೆಯುತ್ತಾನೆ.

**ಭಾವಾರ್ಥ ಃ-** ಜ್ಞಾನ ಸ್ವಭಾವದಿಂದ ಸ್ವಭಾವವಂತನು ಅಭೇದನಿದ್ದಾನೆ. ತನ್ನ ಸ್ವಭಾವವು ಏಕರೂಪ ನಿಶ್ಚಲವಿದೆ. ಜೀವನು ತನ್ನ ಸ್ವಭಾವದಿಂದ ಎಂದೂ ಯಾವ ಕಾಲದಲ್ಲಿಯೂ ಚ್ಯುತನಾಗಿಹೋಗುವುದಿಲ್ಲ. ಪರ್ಯಾಯದಲ್ಲಿ ಚ್ಯುತತನವು ಇರದೆ ಹೋದರೆ ಸಂಸಾರವು ಇರುವುದಿಲ್ಲ ಮತ್ತು ಸ್ವಭಾವದಲ್ಲಿ ಚ್ಯುತತನವು ಇರುವುದಾದರೆ ಸ್ವಭಾವದ ನಾಶವಾಗುತ್ತಿರುವಂತೆ ದ್ರವ್ಯದ್ದೂ ನಾಶವಾಗಿಹೋಗುವುದು. ಚೇತನ ಪದಾರ್ಥವು ಅಸಂಖ್ಯ ಪ್ರದೇಶದಲ್ಲಿ ಗುಣ-ಗುಣಿಯು ಅಭೇದ ಏಕಾಕಾರವಿರುವುದು. ದ್ರವ್ಯ ಮತ್ತು ಗುಣದಲ್ಲಿ ಎಂದೂ ಯಾವಾಗಲು ವಿಕಾರವು ಬರುವುದಿಲ್ಲ. ಹೀಗೆ ಈ ಪ್ರಕಾರ ಸ್ವಭಾವವಿರುತ್ತಿದ್ದರೂ ಕೂಡ ತಾನು ಸ್ವಯಂ ಮೋಹನೀಯ ಕರ್ಮದ ವಶವರ್ತಿಯಾಗಿ ಅಶುದ್ಧ ಉಪಯೋಗಿಯಾಗಿ ಅನೇಕಾನೇಕ ಪರಭಾವಗಳನ್ನು ಧಾರಣ ಮಾಡುತ್ತಾನೆ. ಆತ್ಮನ ಸ್ವಭಾವದ ಪ್ರಜ್ಞೆಯಿಲ್ಲದಿರುವುದರಿಂದ ವಿಕಾರದಲ್ಲಿ ತೊಡಗಿದ್ದಾನೆ, ಸಮ್ಯಗ್ದರ್ಶನದ ಪ್ರಾಪ್ತಿಯಿಲ್ಲದ ವ್ರತ-ತಪಸ್ಸು ಮೊದಲಾದವುಗಳೆಲ್ಲವು ಬಾಲವ್ರತ-ತಪಸ್ಸುಗಳಿವೆ. ಯಾವ ಭಾವದಿಂದ ಒಂಬತ್ತನೆಯ ಗ್ರೈವೇಯಕದಲ್ಲಿ ಹೋದನು, ಐದು ಸಮಿತಿಗಳ ಆಚರಣೆ ಮಾಡಿಹೋದನು ಅದು ಆತ್ಮನ ಆಚರಣೆಯಿಲ್ಲ. ಅಂಥ ಆಚರಣೆಯನ್ನು ಅನಂತಬಾರಿ ಮಾಡಿಯಾಗಿದೆ. ಅಜ್ಞಾನೀ ಜೀವನು ಪುಣ್ಯದಿಂದ ಲಾಭವಿದೆಯೆಂದು ಮನ್ನಿಸಿಕೊಂಡಿದ್ದಾನೆ. ಮಿಥ್ಯಾಭ್ರಾಂತಿಯ ಆಚರಣೆ ಮಾಡುವುದು, ನಿಜಗುಣದ ಆಚರಣೆ ಮಾಡುವುದು ಹೀಗೆ ಎರಡೂ ಜತೆಯಲ್ಲಿ ಸಂಭವಿಸುವುದಿಲ್ಲ. ಎರಡರಲ್ಲಿ ಒಂದೇ ಇರುವುದು. ಜ್ಞಾತಾ-ದೃಷ್ಟಾ ಸ್ವಭಾವರೂಪವಾಗಿ ಪರಿಣಮನ ಮಾಡದೆ ಪರಸಮಯ ರೂಪವಾಗಿ ಪ್ರವರ್ತನೆ ಮಾಡುತ್ತಾನೆ. ವಿಕಾರದಲ್ಲಿ ಆಚರಣ ಮಾಡುವುದು ಅದೇ ಪರಭಾವವಿದೆ. ಆದುದರಿಂದಲೇ ಆ ಜೀವನನ್ನು ಪರಚಾರಿತ್ರದ ಆಚರಣೆಯುಳ್ಳವನೆಂದು ಹೇಳಲಾಗುತ್ತದೆ. ಅವನು ಜ್ಞಾನಸ್ವಭಾವವುಳ್ಳವನಿದ್ದರೂ ಕೂಡ ಪುಣ್ಯ-ಪಾಪದಲ್ಲಿ ನಿಂತುಕೊಳ್ಳುವುದು ಜ್ಞಾನಸ್ವಭಾವದ ಆಚರಣೆಯಾಗುವುದಿಲ್ಲ. ಬಾಹ್ಯದಲ್ಲಿ ಸುಧಾರಣೆ ಮಾಡಿಬಿಡುವೆನೆಂದುಕೊಂಡು ಪರದಲ್ಲಿ ಪ್ರವೃತ್ತನಾಗಿ ಹೋಗುತ್ತಿದ್ದಾನೆ ಮತ್ತು ದಯೆ-ದಾನಾದಿಗಳ ಭಾವದಲ್ಲಿ ನಿಂತುಕೊಂಡಿರುವುದು ಪರಚಾರಿತ್ರವಿದೆ.

ಇನ್ನು ಯಾವ ಜೀವನು ಕುದೇವಾದಿಗಳ ಮನ್ನಣೆಯನ್ನು ಬಿಟ್ಟು ನಿಜವಾದ ದೇವಾದಿಗಳ ಮನ್ನಣೆಯನ್ನು ಮಾಡುತ್ತಾನೆ ಮತ್ತು ನಿಜವಾದ ದೇವಾದಿಗಳ ಕಡೆಗಿರುವ ರಾಗವನ್ನು ಕೂಡ ಬಿಟ್ಟು ಆಂತರ್ಯದಲ್ಲಿ ನಿಮಗ್ನನಾಗಿ ಹೋಗುತ್ತಾನೆ ಅವನಿಗೆ ಚಾರಿತ್ರವಿರುತ್ತದೆ. ಯಾವನಿಗೆ ಕುದೇವಾದಿಗಳ ಮತ್ತು ಸುದೇವಾದಿಗಳ ಮಧ್ಯದಲ್ಲಿನ ಅಂತರದ ವಿವೇಕವಿರುವುದಿಲ್ಲ ಅವನಿಗಂತೂ ಸಮ್ಯಗ್ದರ್ಶನವು ಕೂಡ ಇರುವುದಿಲ್ಲ. ಮೋಹನೀಯ ಕರ್ಮದ ಪ್ರವೃತ್ತಿಯನ್ನು ದೂರ ಮಾಡಿ ಎಂದರೆ ಆ ಪ್ರವೃತ್ತಿಯ ಕಡೆಗಿರುವ ಒಲವನ್ನು ಬಿಟ್ಟುಕೊಟ್ಟು ತನ್ನ ಚಿದಾನಂದ ಸ್ವಭಾವದಲ್ಲಿ ಲೀನನಾಗುತ್ತಾನೆ ಆಗ ನಿಜರೂಪವನ್ನು ಧಾರಣ ಮಾಡುತ್ತಾನೆ ಮತ್ತು ದಯೆ-ದಾನಾದಿಗಳ ರಾಗರೂಪವಿರುವ ಪರಿಣಾಮವನ್ನು ಧಾರಣ ಮಾಡುವುದಿಲ್ಲ. ತನ್ನದೇ ಆದ ಗುಣ-ಪರ್ಯಾಯಗಳಲ್ಲಿ ಪರಿಣಮನ ಮಾಡುತ್ತಾನೆ. ನಿಜವಾದ ದೇವ-ಶಾಸ್ತ್ರ-ಗುರುಗಳ ಕುರಿತು ರಾಗವಿದ್ದರೂ ಕೂಡ ಅದು ಪರದ ಆಶ್ರಯವಿರುವುದರಿಂದ ಅದು ಪರ ಗುಣವಿದೆ, ಪರ ಪರ್ಯಾಯವಿದೆ. ಸ್ವದ ಆಶ್ರಯದಿಂದ ಪ್ರಕಟಿತವಾಗುತ್ತದೆ ಅದು ನಿಜಗುಣ-ಪರ್ಯಾಯವಿದೆ. ದಾನಾದಿಗಳ ಪರಿಣಾಮವನ್ನು-ದಯೆಯ ಪರಿಣಾಮವನ್ನು ನಿಜಪರ್ಯಾಯವೆಂದು ಹೇಳಲಾಗಿಲ್ಲ. ಯಾವಾಗ ಜ್ಞಾತಾ-ದೃಷ್ಟಾ-ಸ್ವರೂಪದಿಂದ ಪ್ರವರ್ತಿಸುತ್ತಾನೆ ಆಗ ಅವನನ್ನು ಆತ್ಮಿಕ ಚಾರಿತ್ರದ ಧಾರಕನೆಂದು ಹೇಳಲಾಗುತ್ತದೆ. ದಯೆ-ದಾನಾದಿಗಳ ರೂಪದಿಂದ ಪ್ರವರ್ತನೆ ಮಾಡುವುದು ಆತ್ಮನ ಆಚರಣವಿಲ್ಲ. ಶುದ್ಧೋಪಯೋಗವು ಚಾರಿತ್ರವಿದೆ. ಇಪ್ಪತ್ತೆಂಟು ಮೂಲಗುಣಗಳ ಪಾಲನೆ ಅಥವಾ ಪಂಚಮಹಾವ್ರತಾದಿಗಳ ಪಾಲನೆ ಮಾಡುವುದು ಅನಾತ್ಮನ ಆಚರಣವಿದೆ.

ಈ ಆತ್ಮನು ಯಾವಾಗ ನಿಸರ್ಗ ಅಥವಾ ಅಧಿಗಮ ಸಮ್ಯಗ್ಜ್ಞಾನ ಜ್ಯೋತಿಯನ್ನು ಪ್ರಕಟಪಡಿಸಿಕೊಳ್ಳುತ್ತಾನೆ ಮತ್ತು ಪರಸಮಯವನ್ನು ತ್ಯಾಗ ಮಾಡಿ ಸ್ವಸಮಯವನ್ನು ಸ್ವೀಕಾರ ಮಾಡುತ್ತಾನೆ ಆಗ ಅವಶ್ಯವಾಗಿ ಕರ್ಮಬಂಧನದಿಂದ

ರಹಿತನಾಗುತ್ತಾನೆ. ಧರ್ಮಪಡೆಯುವ ಸಮಯದಲ್ಲಿ ಎದುರಿಗೆ ನಿಜವಾದ ದೇವ ಅಥವಾ ನಿಜವಾದ ಗುರುಗಳ ಉಪಸ್ಥಿತಿಯಿದ್ದರೆ ಅದನ್ನು ಅಧಿಗಮ ಸಮ್ಯಗ್ದರ್ಶನವೆಂದು ಹೇಳಲಾಗುತ್ತದೆ ಆದರೆ ಆ ಸಮಯದಲ್ಲಿ ಉಪಸ್ಥಿತಿಯಿಲ್ಲದಿದ್ದರೂ ಕೂಡ ಪೂರ್ವದಲ್ಲಿ ಜ್ಞಾನಿಗಳ ಹತ್ತಿರದಿಂದ ದೇಶನಾವನ್ನು ಆಲಿಸಿದ್ದರೆ ಮತ್ತು ಆ ಸಮಯದಲ್ಲಿ ಸಮ್ಯಗ್ದರ್ಶನವನ್ನು ಪ್ರಾಪ್ತಮಾಡಿಕೊಂಡಿರದಿದ್ದರೆ ಮತ್ತು ಅನಂತರ ಮೊದಲಿನ ಸಂಸ್ಕಾರವನ್ನು ಸ್ಮರಣೆಗೆ ತಂದುಕೊಂಡು ಸಮ್ಯಗ್ದರ್ಶನ ಪಡೆದುಕೊಳ್ಳುವುದನ್ನು ನಿಸರ್ಗ ಸಮ್ಯಗ್ದರ್ಶನವೆಂದು ಹೇಳಲಾಗುತ್ತದೆ. ಜ್ಞಾನಿಯು ಮೊದಲೆಂದೂ ಯಾವ ಭವದಲ್ಲಿಯೂ ದೊರಕದಿರುವುದು ಮತ್ತು ತನ್ನ ಯೋಗ್ಯತೆಯಿಂದ ಸಮ್ಯಗ್ದರ್ಶನವನ್ನು ಪಡೆದುಕೊಳ್ಳುವುದು ಎಂಬುದಾಗಿ ನಿಸರ್ಗದ ಅರ್ಥವಿರುವುದಿಲ್ಲ. ಆದರೆ ಧರ್ಮಪ್ರಾಪ್ತಿಮಾಡಿಕೊಳ್ಳುವವನಿಗೆ ಆ ಭವದಲ್ಲಿ ಜ್ಞಾನಿಯ ಸಾಮೀಪ್ಯತೆಯು ಇರುವುದಿಲ್ಲವೆಂಬುದನ್ನು ನಿಸರ್ಗವು ತಿಳಿಸಿಕೊಡುತ್ತದೆ. ಜ್ಞಾನಿಯಿಲ್ಲದೆ ತನ್ನ ಯೋಗ್ಯತೆಯಿಂದ ಧರ್ಮ ಪಡೆಯಬಹುದಾಗಿದೆಯೆಂಬುದಾಗಿಯು ಕೂಡ ಇಲ್ಲ ಮತ್ತು ತನ್ನ ಯೋಗ್ಯತೆಯಿರುವುದು ಮತ್ತು ಜ್ಞಾನಿಯು ದೊರಕದಿರುವುದು ಹೀಗೆಂದೂ ಸಂಭವಿಸುವ ಸಾಧ್ಯತೆಯಿಲ್ಲ. ಎರಡರಲ್ಲೂ ಪುರುಷಾರ್ಥವು ಸಮಾನವಿದೆ. ಜ್ಞಾನೀ ಪುರುಷರು ಗುಣ-ಗುಣೀ ಆತ್ಮನು ಅಭೇದನಿದ್ದಾನೆಂದು ಹೇಳುತ್ತಿರುವುದು ಮತ್ತು ನನ್ನ ಸಮಸ್ವಭಾವಿಯಾದ ಚೈತನ್ಯ ಸೂರ್ಯನು ಶುದ್ಧನಿದ್ದಾನೆಂದು ಅರಿವು ಮೂಡಿ ಬರುವುದು. ಶರೀರ ಮೊದಲಾದವು ಅಜೀವವಿವೆ, ಪುಣ್ಯ-ಪಾಪವು ನನ್ನ ಸ್ವಭಾವವಿಲ್ಲ, ವಸ್ತುವಿನಲ್ಲಿ ದುಃಖವಿಲ್ಲ, ವಿಕಲ್ಪವಿಲ್ಲವೆಂದು ಜ್ಞಾನವಾಗುತ್ತಿರುವಂತೆ ಸಮ್ಯಗ್ಜ್ಞಾನ ಜ್ಯೋತಿಯು ಪ್ರಕಟವಾಗಿಬಿಡುತ್ತದೆ. ಈ ಪ್ರಕಾರ ವಿಕಾರೀ ಅವಸ್ಥೆಯ ವ್ಯಯವಾಗಿ ಹೋಗುತ್ತದೆ ಮತ್ತು ನಾನು ಪೂರ್ಣನಿದ್ದೇನೆಂದು ಆತ್ಮನನ್ನು ಆದರಣೀಯವಾಗಿ ಮನ್ನಿಸುತ್ತಾನೆ. ಆಗ ಆತ್ಮನು ಅವಶ್ಯವಾಗಿ ಕರ್ಮದ ಬಂಧನದಿಂದ ರಹಿತನಾಗಿ ಹೋಗುತ್ತಾನೆ. ಚಾರಿತ್ರವು ಪ್ರತ್ಯಕ್ಷ ಧರ್ಮವಿದೆ. ಅದು ಮೋಕ್ಷದ ಕಾರಣವಿದೆ. ನಿಶ್ಚಲ ಭಾವಗಳ ಆಚರಣದಿಂದ ಮೋಕ್ಷವನ್ನು ಸಾಧಿಸಲಾಗುತ್ತದೆ.

ಅಜ್ಞಾನೀ ಜೀವನಿಗೆ ತನ್ನ ಜ್ಞಾನ ಸ್ವಭಾವದ ವಿಶ್ವಾಸವೇ ಬರುವುದಿಲ್ಲ. ತನ್ನ ಚಿದಾನಂದ ಸ್ವಭಾವದಲ್ಲಿ ಲೀನನಾಗಿ ಹೋಗುವುದನ್ನು ತಪವೆಂದು ಹೇಳಲಾಗುತ್ತದೆ. ಬೇವಿನ ಬೀಜವನ್ನು ನೀಲಮಣಿ ರತ್ನವೆಂದು ಮನ್ನಿಸುವವನು ಮೂರ್ಖನಿದ್ದಾನೆ. ಅದೇ ಪ್ರಕಾರ ಆತ್ಮನ ಸ್ವಭಾವವನ್ನು ಬಿಟ್ಟುಕೊಟ್ಟು ಬಾಹ್ಯ ಪ್ರವೃತ್ತಿಯಲ್ಲಿ ನಿಂತುಕೊಂಡಿರುವವನು ಮೂರ್ಖನಿದ್ದಾನೆ. ಓರ್ವ ಮಹಿಳೆಯು ಬತ್ತಕುಟ್ಟುತ್ತಿರುವುದನ್ನು ನೋಡಿ ಬೇರೊಬ್ಬ ಮಹಿಳೆಯು ಅವಳ ಅನುಕರಣ ಮಾಡಿ ಅವಳು ತೌಡನ್ನು ಕುಟ್ಟಲಾರಂಭಿಸಿದರೆ ಅವಳಿಗೆ ಆ ತೌಡಿನಿಂದ ಅಕ್ಕಿಯ ಪ್ರಾಪ್ತಿಯಾಗುವುದಿಲ್ಲ. ಅದೇ ಪ್ರಕಾರ ಜ್ಞಾನಿಯು ತನ್ನ ಜ್ಞಾನ ಸ್ವಭಾವದಲ್ಲಿ ಲೀನನಾಗಿ ಹೋಗುವುದರಿಂದ ಅವನಿಗೆ ಆಹಾರದ ವೃತ್ತಿಯೇ ಉತ್ಪನ್ನವಾಗುವುದಿಲ್ಲ ಮತ್ತು ಆಹಾರವು ಬಿಟ್ಟುಹೋಗಿರುತ್ತದೆ. ಜ್ಞಾನಿಯು ವೀತರಾಗತೆಯನ್ನು ಕಂಡಿರುತ್ತಾನೆ. ಅಜ್ಞಾನಿಯು ಬಾಹ್ಯದಿಂದ ಆಹಾರವು ಬಿಟ್ಟುಹೋಗಿರುವುದನ್ನು ಕಂಡಿರುತ್ತಾನೆ. ಆಹಾರವಂತೂ ಅಜೀವವಿದೆ. ಅದನ್ನು ಆತ್ಮನು ಯಾವ ರೀತಿಯಿಂದ ಬಿಟ್ಟುಕೊಡುವನು ! ಭಗವಂತನಂತೂ ಆತ್ಮನ ಶುದ್ಧ ಚಿದಾನಂದಸ್ವರೂಪದಲ್ಲಿ ಲೀನನಿರುವುದರಿಂದ ಆಹಾರ ತೆಗೆದು ಕೊಳ್ಳುವ ವಿಕಲ್ಪವೇ ಉತ್ಪನ್ನವಾಗುವುದಿಲ್ಲ. ಅದರಿಂದ ಆಹಾರ ತೆಗೆದುಕೊಳ್ಳಲಿಲ್ಲವೆಂದು ಜನರು ತಿಳಿದುಕೊಂಡಿದ್ದರು, ಇದು ಅಜ್ಞಾನ ಭಾವವಿದೆ. ಆತ್ಮನ ಭೇದಜ್ಞಾನವಿಲ್ಲದೆ ಅಜ್ಞಾನೀ ಜೀವರುಗಳು ವ್ರತ-ಉಪವಾಸ ಮಾಡುತ್ತಾರೆ, ಕಾಯಕ್ಲೇಶ ಮಾಡುತ್ತಾರೆ, ಆದರೆ ಆತ್ಮನ ಜ್ಞಾನವಿಲ್ಲದೆ-ಆತ್ಮನ ಅನುಭೂತಿಯಿಲ್ಲದೆ ಧರ್ಮವಾಗುವುದಿಲ್ಲ.

ಶ್ರೀ ಜಯಸೇನಾಚಾರ್ಯದೇವರು ಟೀಕೆಯಲ್ಲಿ ಹೇಳಿರುವುದೇನೆಂದರೆ - ಆತ್ಮನು ಶುದ್ಧ ಬುದ್ಧ ಏಕರೂಪ ಸ್ವಭಾವವುಳ್ಳವನಿದ್ದಾನೆಂಬ ಅರಿವಿನಲ್ಲಿ ಯಾವನು ತನ್ನ ಸ್ವಭಾವವನ್ನು ಭಾವಿಸುತ್ತಾನೆ, ಅವನಿಗೇ ಚಾರಿತ್ರವಿರುತ್ತದೆ ಮತ್ತು ಅವನಿಗೆ ಕರ್ಮಬಂಧದ ನಾಶವು ಕೂಡ ಆಗುತ್ತದೆ.

ಈ ಮಾತು ಇಲ್ಲಿಂದಲೇ ಹೊರಗೆ ಬಂದಿದೆ ಎಂದರೆ ಅದೇಷ್ಟೋ ಪರವಾದಿಗಳು ಈ ತತ್ತ್ವದ ಮಾತುಗಳು ನಮ್ಮ ಶಾಸ್ತ್ರಗಳಲ್ಲಿ ಕೂಡ ಇವೆಯೆಂದು ಹೇಳಿ ಮಾಯಾಚಾರ ಮಾಡಿ ಜ್ಞಾನಿಗಳ ಅನಾದರ ಮಾಡುತ್ತಾರೆ. ಕುಶಾಸ್ತ್ರಗಳನ್ನು ಪೋಷಿಸುತ್ತಾರೆ. ಸಂತರುಗಳ ಅನಾದರ ಮಾಡುವುದು, ಅಸತ್ಯವನ್ನು ಪೋಷಿಸುವುದು ಮತ್ತು ಜನರುಗಳನ್ನು ಭ್ರಾಂತಿಯಲ್ಲಿ ಸಿಲುಕಿಸುವುದು ಎಂಥ ಘೋರ ಅಪರಾಧವಿದೆ. ಅವರು ಸ್ವಚ್ಛಂದತೆಯಿಂದ ಪ್ರವರ್ತಿಸುತ್ತಾರೆ. ಭಗವಾನ ಕುಂದಕುಂದಾಚಾರ್ಯದೇವರು ಅಷ್ಟಪಾಹುಡದಲ್ಲಿ ತಿಳಿಸಿರುವುದೇನೆಂದರೆ ಯಾವ ಜೀವನು ಲಜ್ಜೆ, ಭಯ, ಕುತೂಹಲ ಮೊದಲಾದವುಗಳಿಂದ ಕುದೇವಾದಿಗಳ ಭಕ್ತಿ ಮಾಡುತ್ತಾನೆ, ಅವರನ್ನು ಪೂಜಿಸುತ್ತಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಅವನಲ್ಲಿ ಪರದಿಂದ-ರಾಗದಿಂದ ಭೇದಜ್ಞಾನ ಮಾಡುವ ಸಾಮರ್ಥ್ಯವಿಲ್ಲ, ಧರ್ಮಾತ್ಮರಿಗೆ ಕುದೇವಾದಿಗಳ ಕುರಿತು ಪ್ರೀತಿಯಿರುವುದಿಲ್ಲ. ಅವರಿಗೆ ಸುದೇವಾದಿಗಳ ಪ್ರೀತಿಯಿರುತ್ತದೆ.

ಈಗ ಪರಚಾರಿತ್ರ ರೂಪವಿರುವ ಪರಸಮಯದ ಸ್ವರೂಪ ಹೇಳುತ್ತಾರೆ -

**ಜೋ ಪರದವ್ವಮ್ಹಿ ಸುಹಂ ಅಸುಹಂ ರಾಗೇಣ ಕುಣದಿ ಜದಿ ಭಾವಂ ।**
**ಸೋ ಸಗಚರಿತ್ತಭಟ್ಠೋ ಪರಚರಿಯಚರೋ ಹವದಿ ಜೀವೋ ॥೧೫೬॥**

**ಯಾವ ಜೀವನು ರಾಗದಿಂ ಪರದ್ರವ್ಯದಲಿ ಶುಭಾಶುಭಭಾವ ಮಾಡುವನು ।**
**ಅವನು ಸ್ವಚಾರಿತ್ರಭ್ರಷ್ಟ ಪರಚಾರಿತ್ರದಾಚರಣ ಮಾಡುವವನಿಹನು ॥೧೫೬॥**

ಅವಿದ್ಯೆಯರೂಪದ ಪಿಶಾಚಿಯು ಅಜ್ಞಾನಿಯನ್ನು ಹಿಡಿದುಕೊಂಡಿದೆ. ಯಾವ ಜೀವನು ಚೈತನ್ಯ ಸ್ವಭಾವವನ್ನು ಮರೆತು ಹೋಗಿದ್ದಾನೆ ಮತ್ತು ರಾಗದಲ್ಲಿಯೇ ಏಕಾಕಾರನಾಗಿ ಹೋಗಿದ್ದಾನೆ ಅವನನ್ನು ಮೋಹರೂಪದ ಪಿಶಾಚಿಯು ಆವರಿಸಿಕೊಂಡಿದೆ. ದಯೆ-ದಾನಾದಿಗಳ ಭಾವದಲ್ಲಿ ಯಾವನು ಲಾಭವಿದೆಯೆಂದು ಮನ್ನಿಸಿದ್ದಾನೆ ಅವನು ಮದ್ಯ ಕುಡಿದ ಮರ್ಕಟನಂತಾಗಿದ್ದಾನೆ. ವ್ರತ, ಸಂಯಮ, ಭಕ್ತಿಯ ಭಾವ ಹಾಗೂ ಐದು ಇಂದ್ರಿಯಗಳ ವಿಷಯ-ಕಷಾಯದ ಭಾವಗಳು ಅಸತ್ ಭಾವಗಳಿವೆ. ಅವನ್ನು ಯಾವನು ಮಾಡುತ್ತಾನೆ ಆ ಜೀವನು ಆತ್ಮಿಕ ಶುದ್ಧ ಆಚರಣದಿಂದ ರಹಿತನಿದ್ದಾನೆ ಮತ್ತು ಪರಸಮಯದ ಆಚರಣವುಳ್ಳವನಿದ್ದಾನೆ.

ವ್ಯಾಪಾರದಲ್ಲಿ ತನಗೆ ಪರವಾನಗಿ ಇಲ್ಲದ ವಸ್ತುವನ್ನು ಅಂಗಡಿಯಲ್ಲಿ ಇಟ್ಟುಕೊಂಡಿದ್ದರೆ ಅವನನ್ನು ಪೋಲಿಸರು ಬಂಧಿಸುತ್ತಾರೆ ಮತ್ತು ಪರವಾನಗಿಗಿಂತಲೂ ಅಧಿಕ ವಸ್ತು ಇಟ್ಟುಕೊಂಡವನನ್ನು ಬಂಧಿಸಿ ಅವನಿಗೆ ದಂಡ ವಿಧಿಸುತ್ತಾರೆ. ಅದೇ ಪ್ರಕಾರ ಇಲ್ಲಿ ವಸ್ತುಸ್ವರೂಪದ ದೃಷ್ಟಿ ಮತ್ತು ಜ್ಞಾನವಿಲ್ಲದ ವ್ರತ, ತಪಸ್ಸು ಮಾಡಿದರೆ ಅವನಿಗೆ ಎಂಭತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಭ್ರಮಣ ಮಾಡುವ ದಂಡ ವಿಧಿಸಲಾಗುತ್ತದೆ. ತನ್ನ ಆತ್ಮಿಕ ವಸ್ತುವನ್ನು ಬಿಟ್ಟುಕೊಟ್ಟು ವ್ರತ, ಭಕ್ತಿ, ಸಂಯಮ, ವಿನಯದಲ್ಲಿ ಧರ್ಮ ಮನ್ನಿಸುತ್ತಾನೆ ಅವನು ಮಿಥ್ಯಾತ್ವದ ಮದ್ಯ ಕುಡಿದಿದ್ದಾನೆ, ಅವನು ಮಹಾಮೂರ್ಖನಿದ್ದಾನೆ. ಧರ್ಮಾತ್ಮ ಜೀವನಿಗೆ ಸುದೇವಾದಿಗಳ ಕುರಿತು ಭಕ್ತಿಯ ರಾಗ ಬರುತ್ತದೆ, ಆದರೆ ಅದರಲ್ಲಿ ಅವನು ಧರ್ಮವನ್ನು ಮನ್ನಿಸುವುದಿಲ್ಲ. ಅಜ್ಞಾನಿಯು ಅದರಲ್ಲಿ ಧರ್ಮ ಮನ್ನಿಸುತ್ತಾನೆ.

**ಪ್ರಶ್ನೆ :-** ಶುಭರಾಗದಲ್ಲಿ ಧರ್ಮವಿಲ್ಲದಿದ್ದರೆ ಇದೆಲ್ಲವನ್ನು ಯಾವ ಕಾರಣದಿಂದ ಮಾಡಲಾಗುತ್ತದೆ ?

**ಉತ್ತರ :-** ಆತ್ಮನು ಜಡದ ಅವಸ್ಥೆಯ ಕರ್ತೃವಿಲ್ಲ. ಶುಭರಾಗವು ಬರುತ್ತದೆ ಅದನ್ನು ಧರ್ಮಾತ್ಮ ಜೀವನು ತಿಳಿದುಕೊಳ್ಳುತ್ತಾನೆ, ಆದರೆ ಅಜ್ಞಾನಿಯು ಅದನ್ನು ಒಳ್ಳೆಯದೆಂದು ಮನ್ನಿಸುತ್ತಾನೆ.

ನಿಜವಾಗಿ ಜ್ಞಾನಪೂರ್ವಕವಿರುವ ವೈರಾಗ್ಯದಲ್ಲಿ ಬೇಸರವು ಬರುವುದು ಅದು ಸಂವರತತ್ತ್ವದ ಕುರಿತಾಗಿರುವ

ದೋಷವಿದೆ. ಅವನಿಗೆ ಸಂವರವು ದುಃಖದಾಯಕವೆನಿಸುತ್ತದೆ. ಮಿಥ್ಯಾದೃಷ್ಟಿ ಜೀವನಿಗೆ ಆಂತರ್ಯದ ಮಾತು ರುಚಿಸುವುದಿಲ್ಲ. ಅವನಿಗೆ ಅಜ್ಞಾನದಲ್ಲಿ ಮೋಜು ಎನಿಸುತ್ತದೆ.

ಇಲ್ಲಿ ಹೇಳುವುದೇನೆಂದರೆ ಯಾವನು ತನ್ನ ಶುದ್ಧ ಆತ್ಮನ ಆಚರಣೆಯನ್ನು ಮರೆತು ವ್ರತ, ತಪಸ್ಸು ಹಾಗೂ ವಿಷಯಕಷಾಯ ಮೊದಲಾದ ಭಾವಗಳನ್ನು ಆಚರಿಸುತ್ತಾನೆ ಆ ಜೀವನು ಆತ್ಮಿಕ ಶುದ್ಧ ಆಚರಣದಿಂದ ರಹಿತನಿದ್ದಾನೆ. ಅವನು ಪರಸಮಯದ ಆಚರಣೆಯುಳ್ಳವನಿದ್ದಾನೆ ಎಂದರೆ ಅವನಿಗೆ ಶುದ್ಧಿಯಾಗುವುದಿಲ್ಲ.

**ಭಾವಾರ್ಥ :-** ಇದು ಮೋಕ್ಷಮಾರ್ಗದ ಅಧಿಕಾರವಿದೆ. ಸಮ್ಯಗ್ದರ್ಶನವು ಪ್ರಕಟವಾಗದ ಹೊರತಾಗಿ ಚಾರಿತ್ರವು ಇರುವುದಿಲ್ಲ ಮತ್ತು ಚಾರಿತ್ರವಿಲ್ಲದೆ ಮುಕ್ತಿಯಾಗುವುದಿಲ್ಲ. ಆತ್ಮನು ಸ್ವಯಂ ಜ್ಞಾನಾನಂದ ಸ್ವಭಾವಿಯಿದ್ದಾನೆ. ಅವನನ್ನು ಮರೆತು ದಯೆ-ದಾನಾದಿಗಳ ಭಾವ ಮಾಡಿದರೆ ಪುಣ್ಯವಿದೆ. ಹಿಂಸೆ ಕಳವು, ಅಸತ್ಯಾದಿಗಳ ಭಾವ ಮಾಡಿದರೆ ಪಾಪವಿದೆ. ಅವೆರಡೂ ಅಶುದ್ಧ ಉಪಯೋಗಗಳಿವೆ. ಅದರಲ್ಲಿ ಕ್ರೀಡೆ ಮಾಡುವಂಥ ಜೀವನು ಜ್ಞಾನಾನಂದ ಸ್ವಭಾವದ ಆಚರಣದಿಂದ ಭ್ರಷ್ಟನಾಗಿ ಹೋದಂಥವನಿದ್ದಾನೆ. ದಯೆ, ದಾನಾದಿಗಳ ವಿಕಲ್ಪಗಳು ಆತ್ಮಿಕ ಭಾವಗಳಲ್ಲವೆಂಬುದು ಭಗವಂತರ ವಾಣಿಯಲ್ಲಿ ಪ್ರಕಟಪ್ರಸಿದ್ಧವಿದೆ.

ಅನಾಕುಲ ಸ್ವಭಾವದಲ್ಲಿ ಪ್ರವೃತ್ತಿ ಮಾಡುವುದು ಅಥವಾ ರಮಣತೆಯಾಗುವುದು ಸ್ವಚಾರಿತ್ರವಿದೆ. ಆ ಚಾರಿತ್ರವು ಯಾವುದೇ ಕ್ರಿಯಾಕಾಂಡದಿಂದ-ಕ್ರಿಯಾಕಾಂಡದ ಆಶ್ರಯದಿಂದ ಆಗುವುದಿಲ್ಲ. ಜ್ಞಾನಾನಂದ ಸ್ವಭಾವದ ಆಶ್ರಯದಿಂದ ವಿಕಾರರಹಿತ ದಶೆಯಾಗುವುದು ಅದು ಮೋಕ್ಷದ ಕಾರಣವಿದೆ.

**ಪ್ರಶ್ನೆ :-** ಇದರಲ್ಲಿ ಯಾವ ಕ್ರಿಯೆಯು ಬಂದುಬಿಟ್ಟಿತು ?

**ಉತ್ತರ :-** ಇದರಲ್ಲಿ ತಿಳಿದುಕೊಳ್ಳುವ ಕ್ರಿಯೆಯು ಬಂದುಬಿಟ್ಟದೆ. ಆತ್ಮನ ಕಡೆಗಿರುವ ಪ್ರವೃತ್ತಿಯಲ್ಲಿ ಶುದ್ಧ ಚೈತನ್ಯದ ಕ್ರಿಯೆಯು ಬಂದುಬಿಡುತ್ತದೆ. ದ್ರವ್ಯವು ತ್ರಿಕಾಲವಿದೆ ಮತ್ತು ವಿಕಾರವು ಕ್ಷಣಿಕವಿದೆ. ವಿಕಾರದಿಂದ ರಹಿತವಿರುವಂಥ ಸ್ವರೂಪದಲ್ಲಿ ಆಚರಣ ಮಾಡುವುದು ಕ್ರಿಯೆಯಿದೆ. ಅದುವೇ ವೃದ್ಧಿಯಾಗಿ ಶುಕ್ಲಧ್ಯಾನ ಮತ್ತು ಕೇವಲಜ್ಞಾನವು ಪ್ರಕಟವಾಗುತ್ತದೆ ಅದು ಕ್ರಿಯೆಯಿದೆ.

ಅದೆಷ್ಟೋ ಜನರು ಮುನಿಗಳಿಗೆ ಆಹಾರ ಮೊದಲಾದುವನ್ನು ಕೊಡುವಲ್ಲಿ ಧರ್ಮವಾಗುತ್ತದೆಂದು ಮನ್ನಿಸುತ್ತಾರೆ. ಆಹಾರ ತೆಗೆದುಕೊಳ್ಳುವವರು ಹಾಗೂ ಕೊಡುವವರೀರ್ವರೂ ಮೋಕ್ಷಕ್ಕೆ ಹೋಗುತ್ತಾರೆಂದು ಹೇಳುತ್ತಾರೆ. ಆದರೆ ಆ ಮಾತು ಯಥಾರ್ಥವಿಲ್ಲ. ಏಕೆಂದರೆ ಆಹಾರಾದಿಗಳನ್ನು ಕೊಡುವ ಭಾವವು ಶುಭವಿರುವುದರಿಂದ ಪುಣ್ಯವಾಗುತ್ತದೆ, ಆದರೆ ಅದರಿಂದ ಧರ್ಮವಾಗುವುದಿಲ್ಲ. ಆದಾಗ್ಯೂ ಪುಣ್ಯದಿಂದ ಧರ್ಮವಾಗುತ್ತದೆಂದು ಮನ್ನಿಸುತ್ತಿರುವುದರಿಂದ ಮಿಥ್ಯಾತ್ವದ ಮಹಾ ಪಾಪವು ತಗಲುತ್ತದೆ. ಜನರು ಅಶುಭವನ್ನು ಪಾಪವೆಂದು ಗಣಿಸಲಾಗುತ್ತಿದ್ದರೂ ಕೂಡ ಅವರಿಗೆ ಮಿಥ್ಯಾತ್ವದ ಪ್ರಜ್ಞೆಯೇ ಮೂಡಿ ಬರುವುದಿಲ್ಲ. ಮಿಥ್ಯಾತ್ವವು ಮಹಾಪಾಪವಿದ್ದು, ಆ ಪಾಪವು ತಮ್ಮ ಸ್ವರೂಪದ ತಿಳಿವಳಿಕೆಯಿಂದ ದೂರವಾಗುತ್ತದೆ.

ಆತ್ಮಿಕ ಭಾವಗಳಲ್ಲಿ ಪ್ರವೃತ್ತಿ ಮಾಡುವುದು ಸ್ವಸಮಯವಿದೆ ಮತ್ತು ಪರ ದ್ರವ್ಯಗಳಲ್ಲಿ ಪ್ರವೃತ್ತಿ ಮಾಡುವುದು ಪರಸಮಯವಿದೆಯೆಂದು ಇಲ್ಲಿ ಹೇಳುತ್ತಿದ್ದಾರೆ. ಸ್ವಸಮಯದಲ್ಲಿ ಲೀನರಾಗಿ ಹೋಗುವುದು ಅಧ್ಯಾತ್ಮಿಕ ಪುರುಷರ ವಿಲಾಸವಿದೆ.

ಈಗ ಯಾವ ಪುರುಷರು ಪರಸಮಯದಲ್ಲಿ ಪ್ರವೃತ್ತಿ ಮಾಡುತ್ತಾರೆ ಅವರಿಗೆ ಬಂಧವಾಗುತ್ತದೆ ಮತ್ತು ಅವರಿಗೆ ಮೋಕ್ಷಮಾರ್ಗದ ನಿಷೇಧವಿದೆಯೆಂದು ಹೇಳುತ್ತಾರೆ -

**ಆಸವದಿ ಜೇಣ ಪುಣ್ಣಂ ಪಾವಂ ವಾ ಅಪ್ಪಣೋಧ ಭಾವೇಣ ।**
**ಸೋ ತೇಣ ಪರಚರಿತ್ತೋ ಹವದಿ ತ್ತಿ ಜಿಣಾ ಪರೂವೇಂತಿ ॥೧೫೭॥**

**ಯಾವ ಭಾವದಿಂದಾತ್ಮನಿಗೆ ಪುಣ್ಯವಿಲ್ಲವೆ ಪಾಪದಾಸ್ರವವಾಗುವುದು ।**
**ಅವನಾ ಭಾವದಿಂ ಪರಚಾರಿತ್ರನೆಂದು ಜಿನದೇವ ಪ್ರರೂಪಿಸುವರು ॥೧೫೭॥**

ಆತ್ಮನಲ್ಲಿ ಶುಭಾಶುಭ ಭಾವವಾಗುವುದು ಅಶುದ್ಧೋಪಯೋಗವಿದೆ. ದಯೆ-ದಾನಾದಿಗಳಿಂದ ಪುಣ್ಯದ ಪರಮಾಣುಗಳು ಬರುತ್ತವೆ ಮತ್ತು ಹಿಂಸೆ, ಸುಳ್ಳು, ಕಳವು ಮೊದಲಾದುವಿಂದ ಪಾಪದ ಪರಮಾಣುಗಳು ಬರುತ್ತವೆ. ಆ ಅಶುದ್ಧ ಭಾವಗಳು ಪರಸಮಯದ ಆಚರಣೆ ಮಾಡಿಸುವಂಥವುಗಳಿವೆ. ಸ್ವಭಾವವನ್ನು ಬಿಟ್ಟುಕೊಟ್ಟು ಎಷ್ಟು ಪರದ ಕಡೆಗೆ ಪ್ರವೃತ್ತಿಯಾಗುತ್ತದೆ ಅಷ್ಟು ಅದೆಲ್ಲವು ಪರಚಾರಿತ್ರವಿದೆ. ಎಲ್ಲವು ಬಂಧದ ಕಾರಣವಿದೆಯೆಂದು ಸರ್ವಜ್ಞ ಭಗವಂತರು ಹೇಳಿದ್ದಾರೆ.

**ಭಾವಾರ್ಥ :-** ಭಗವಂತರು ಹೇಳುತ್ತಾರೆ ಮತ್ತು ಶಾಸ್ತ್ರವು ಹೇಳುತ್ತದೆ ಏನೆಂದರೆ - ಆತ್ಮನ ಸ್ವಭಾವವನ್ನು ಬಿಟ್ಟು ಯಾವ ಶುಭಭಾವವಾಗುತ್ತದೆ ಅದು ನವೀನ ಪುಣ್ಯದ ಕಾರಣವಿದೆ ಮತ್ತು ಮಿಥ್ಯಾತ್ವ ಮೊದಲಾದ ಯಾವ ಅಶುಭಭಾವಗಳಾಗುತ್ತವೆ ಅವು ನವೀನ ಪಾಪದ ಕಾರ್ಯವಿವೆ. ಯಾವ ಭಾವಗಳಿಂದ ಪುಣ್ಯ ಅಥವಾ ಪಾಪರೂಪದ ಕರ್ಮಗಳು ಬರುತ್ತವೆ ಅದರ ಹೆಸರು ಭಾವಾಸ್ರವವಿದೆ. ಯಾವನು ಪುಣ್ಯವನ್ನು ಒಳ್ಳೆಯದೆಂದು ಮನ್ನಿಸುತ್ತಾನೆ ಅವನು ಅದರಿಂದ ಭಿನ್ನನಾಗಲು-ಹೊರಗೆ ಬರಲು ಇಚ್ಛಿಸುವುದಿಲ್ಲ. ತನ್ನ ಶುದ್ಧ ಚಿದಾನಂದ ಸ್ವಭಾವವನ್ನು ಮರೆತು-ಬಿಟ್ಟುಕೊಟ್ಟು ಪುಣ್ಯ-ಪಾಪವಾಗುತ್ತದೆ. ಆದಾಗ್ಯೂ ಅಜ್ಞಾನೀ ಜೀವನು ಅದರಲ್ಲಿ ಆನಂದ ಮನ್ನಿಸುತ್ತಾನೆ, ಪುಣ್ಯ-ಪಾಪದ ಅಭಿರುಚಿ ಮಾಡುತ್ತಾನೆ ಮತ್ತು ನಾನು ಧರ್ಮ ಮಾಡುತ್ತಿದ್ದೇನೆಂದು ಮನ್ನಿಸುತ್ತಾನೆ. ನಿಜವಾಗಿ ಇದುವೇ ಭ್ರಾಂತಿಯಿದೆ. ಜೀವನಿಗೆ ಯಾವ ಸಮಯದಲ್ಲಿ ಶುಭಾಶುಭಭಾವಗಳಾಗುತ್ತವೆ ಆ ಸಮಯದಲ್ಲಿ ಅವನು ಅಶುದ್ಧ ಪರಿಣಾಮದಿಂದ ಪರದ್ರವ್ಯದ ಆಚರಣೆಯುಳ್ಳವನೆಂದು ಕರೆಸಿಕೊಳ್ಳುತ್ತಾನೆ. ಆ ಕಾರಣದಿಂದ ನಿಶ್ಚಿತವಾಗುವುದೇನೆಂದರೆ ಪರದ್ರವ್ಯದ ಆಚರಣರೂಪ ಪ್ರವೃತ್ತಿಯು ಬಂಧದ ಮಾರ್ಗವಿದೆ, ಆದರೆ ಮೋಕ್ಷದ ಮಾರ್ಗವಿಲ್ಲವೆಂದು ಸರ್ವಜ್ಞದೇವರು ಹೇಳಿದ್ದಾರೆ.

ಈಗ ಸ್ವಸಮಯದಲ್ಲಿ ಪ್ರವರ್ತನೆ ಮಾಡುವಂಥ ಪುರುಷನ ಸ್ವರೂಪವನ್ನು ವಿಶೇಷತೆಯಿಂದ ಹೇಳುತ್ತಾರೆ -

**ಜೋ ಸವ್ವಸಂಗಮುಕ್ಕೋ ಣಣ್ಣಮಣೋ ಅಪ್ಪಣಂ ಸಹಾವೇಣ ।**
**ಜಾಣದಿ ಪಸ್ಸದಿ ಣಿಯದಂ ಸೋ ಸಗಚರಿಯಂ ಚರದಿ ಜೀವೋ ॥೧೫೮॥**

**ಯಾವನು ಸರ್ವಸಂಗಮುಕ್ತ ಅನನ್ಯಚಿತ್ತದಿಂದಾತ್ಮನನು ಸ್ವಭಾವದಿಂದ ।**
**ಅವಿರತದಿ ತಿಳಿಯುವ ನೋಡುವನವನು ಸ್ವಚಾರಿತ್ರವಾಚರಿಪನು ॥೧೫೮॥**

ಸ್ವಸಮಯದ ಆಚರಣವುಳ್ಳವನು ಯಾವನಿದ್ದಾನೆಂದರೆ-ಸಮ್ಯಗ್ದೃಷ್ಟಿ ಜೀವನು ತನ್ನ ಶುದ್ಧ ಭಾವದಿಂದ ಶುದ್ಧ ಜೀವವನ್ನು ತಿಳಿದುಕೊಳ್ಳುತ್ತಾನೆ. ಶುಭಾಶುಭ ಭಾವಗಳಿಂದ ರಹಿತವಿರುವಂಥ ಅಂತರಂಗದಲ್ಲಿ ಲೀನತೆಯಾಗುವುದು ಶುದ್ಧಭಾವವಿದೆ. ಚೈತನ್ಯ ಮತ್ತು ಜಡದ ಮಧ್ಯದಲ್ಲಿನ ಭೇದಜ್ಞಾನವಾಗಬೇಕಾಗುವುದು. ಜ್ಞಾನಸ್ವಭಾವಿಯಿರುವ ಆತ್ಮನನ್ನು ಜಡವು ತಡೆದು ನಿಲ್ಲಿಸುವುದೇ ಇಲ್ಲ.

ಒಂದು ಆತ್ಮದ್ರವ್ಯವು ಪುದ್ಗಲ ದ್ರವ್ಯವನ್ನು ತಡೆದು ನಿಲ್ಲಿಸುವುದಿಲ್ಲ. ಒಂದು ಪುದ್ಗಲ ಪರಮಾಣುವು

ಇನ್ನೊಂದನ್ನು ತಡೆದು ನಿಲ್ಲಿಸುವುದಿಲ್ಲ. ಹೀಗೆಯೇ ಅನಂತ ತತ್ತ್ವಗಳೆಲ್ಲವು ಪೃಥಕ್ ಇವೆ. ಒಂದು ಇನ್ನೊಂದರ ಅಭಾವರೂಪದಿಂದ ಇರುವಂಥ ಪದಾರ್ಥಗಳು ಒಂದು ಇನ್ನೊಂದನ್ನು ತಡೆದು ನಿಲ್ಲಿಸುವುದಿಲ್ಲ. ಅದರಿಂದಲೇ ಅನಂತವಾಗಿ ಉಳಿದುಕೊಂಡಿವೆ. ಸಂಯೋಗದ ದೃಷ್ಟಿಯುಳ್ಳವರಂತೂ ಸ್ವಭಾವವನ್ನು ನೋಡುವುದಿಲ್ಲ. ತ್ರಿಕಾಲೀ ಜೀವವು ಕರ್ಮವನ್ನು ತಡೆಯುವುದಿಲ್ಲ ಮತ್ತು ವರ್ತಮಾನದ ರಾಗವು ಕೂಡ ಕರ್ಮದ ಕಾರಣದಿಂದ ಇಲ್ಲ. ರಾಗವು ಅಸಮರ್ಥತೆಯಿಂದ ಇದೆ, ಆದರೆ ಅದು ಸ್ವಭಾವದಲ್ಲಿ ಇಲ್ಲವೆಂದು ನಿರ್ಣಯ ಮಾಡಿದರೆ ಧರ್ಮವಾಗುತ್ತದೆ. ಆಗ ನಿಮಿತ್ತದ ಮೇಲಿನ ದೃಷ್ಟಿಯು ತಾನಾಗಿಯೇ ಹೊರಟು ಹೋಗುತ್ತದೆ.

ಪ್ರತಿಯೊಂದು ಸಮಯದಲ್ಲಿ ಪ್ರತಿಯೊಂದು ದ್ರವ್ಯವು ತನ್ನ ದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ಇದೆ. ಮತ್ತು ಪರದ್ರವ್ಯ-ಕ್ಷೇತ್ರ-ಕಾಲ-ಭಾವದಿಂದ ಇಲ್ಲ. ಧರ್ಮಾತ್ಮ ಜೀವನ ಜ್ಞಾನವು ಸ್ವತಂತ್ರತೆಯನ್ನು ನೋಡುತ್ತದೆ. ಪ್ರತಿಯೊಂದರ ಸ್ವಭಾವವು ಪೃಥಕ್ ಇದೆಯೆಂದು ಅದು ತಿಳಿದುಕೊಳ್ಳುತ್ತದೆ. ಶರೀರವನ್ನು ಕರ್ಮವು ತಡೆದಿಲ್ಲವೆಂದ ಬಳಿಕ ಕರ್ಮವು ಆತ್ಮನನ್ನು ತಡೆದೇ ಇಲ್ಲ. ಈ ಪ್ರಕಾರದ ದೃಷ್ಟಿಯು ಬಂದಲ್ಲದೆ ಧರ್ಮವು ಆಗುವುದೇ ಇಲ್ಲ. ಕೇವಲ ಸಂಯೋಗವನ್ನು ನೋಡುವಂಥವನು ಸ್ವಭಾವವನ್ನು ನೋಡುವುದೇ ಇಲ್ಲ. ಜೀವನು ಲಡ್ಡುವನ್ನು ತಡೆಯುವುದಿಲ್ಲ ಮತ್ತು ಲಡ್ಡುವು ಜೀವನನ್ನು ತಡೆಯುವುದಿಲ್ಲ. ಜ್ಞಾನವನ್ನು ಸ್ವತಂತ್ರವೆಂದು ಮನ್ನಿಸುವಂಥವನು ಜ್ಞೇಯವನ್ನು ಕೂಡ ಸ್ವತಂತ್ರವೆಂದು ಮನ್ನಿಸುತ್ತಾನೆ. ಜ್ಞೇಯವನ್ನು ಸ್ವತಂತ್ರವೆಂದು ಮನ್ನಿಸುವಂಥವನು ಜ್ಞಾನವನ್ನು ಕೂಡ ಸ್ವತಂತ್ರವೆಂದು ಮನ್ನಿಸುತ್ತಾನೆ. ಆದರೆ ತನ್ನನ್ನು ಪರಾಧೀನನೆಂದು ಮನ್ನಿಸುವಂಥವನು ಎಲ್ಲವನ್ನು ಪರಾಧೀನವೆಂದು ಮನ್ನಿಸುತ್ತಾನೆ.

ನನ್ನ ಜ್ಞಾನ-ದರ್ಶನ-ಸ್ವಭಾವದಿಂದ ಎಲ್ಲವೂ ತಿಳಿದು ಬರುತ್ತದೆ, ಕಂಡುಬರುತ್ತದೆ, ಆದಾಗ್ಯೂ ಅಜ್ಞಾನೀ ಜೀವನು ನನಗೆ ಕನ್ನಡಕ ಹಾಕುವುದರಿಂದಲೇ ಕಂಡುಬರುತ್ತದೆಯೆಂದು ಮನ್ನಿಸಿಕೊಂಡಿದ್ದಾನೆ. ಅಜ್ಞಾನಿಯ ದೃಷ್ಟಿಯು ವಿಪರೀತವಿದೆ. ಆತ್ಮನ ಸ್ವಭಾವವು ನೋಡುವುದು-ತಿಳಿಯುವುದು ಇದೆ. ಕರ್ಮವು ಏಕಕ್ಷೇತ್ರದಲ್ಲಿ ಇದ್ದರೂ ಕೂಡ ಮತ್ತು ಒಂದು ಸಮಯದ ಕ್ಷಣಿಕ ವಿಕಾರೀ ಪರ್ಯಾಯವಿದ್ದರೂ ಕೂಡ ಸ್ವಭಾವವಂತೂ ಶುದ್ಧವೇ ಇದೆ. ಜ್ಞಾನಸ್ವಭಾವವು ಸ್ವತಂತ್ರವಿದೆಯೆಂಬ ಪ್ರಜ್ಞೆಯಿಲ್ಲದೆ ಚಾರಿತ್ರವಾಗುವುದಿಲ್ಲ. ಈ ಮಾತು ಚತುರ್ಥ ಕಾಲದಲ್ಲಿ ಕೂಡ ಎಲ್ಲರಿಗೂ ತಿಳಿದುಬರುವುದಿಲ್ಲವೆಂದಮೇಲೆ ಪಂಚಮ ಕಾಲದಲ್ಲಿ ಎಲ್ಲರಿಗೂ ತಿಳಿದುಬರುತ್ತದೆಯೆಂಬುದು ಸಂಭವಿಸುವುದಿಲ್ಲ. ಪ್ರತಿಯೊಂದು ಪದಾರ್ಥದ ವರ್ತಮಾನ ಪರ್ಯಾಯವು ತಾನು ತನ್ನಿಂದಲೇ ಆಗುತ್ತದೆ, ಆದರೆ ಪರದಿಂದ ಆಗುವುದಿಲ್ಲ. ಚೈತನ್ಯಮೂರ್ತಿಯಾದ ಆತ್ಮನು ತ್ರಿಕಾಲನಿದ್ದಾನೆ ಮತ್ತು ಪರ್ಯಾಯದಲ್ಲಿ ಪರಿವರ್ತನವಾಗುವುದು ಅವನ ಸ್ವಭಾವವಿದೆ. ಪರದ ಕಾರಣದಿಂದ ವಿಕಾರವಾಗುವುದಿಲ್ಲ. ನನ್ನ ಕಾರಣದಿಂದ ಪರದಲ್ಲಿ ಲಾಭ-ಹಾನಿ ಯಾಗುವುದಿಲ್ಲವೆಂದು ಮನ್ನಣೆಯಾದರೆ ದೃಷ್ಟಿಯು ತನ್ನಲ್ಲಿ ಹೋಗುತ್ತದೆ.

ಇದು ಅಲೌಕಿಕವಾದ ಮಾತು ಇದೆ. ನಿದತ್ತ ಮತ್ತು ನಿಕಾಚಿತ ಕರ್ಮಗಳು ಜೀವವನ್ನು ಅಂಟಿಕೊಂಡಿಯೇ ಇಲ್ಲ. ಕರ್ಮವು ಕರ್ಮದಲ್ಲಿದೆ ಮತ್ತು ಜೀವನು ಜೀವದಲ್ಲಿದ್ದಾನೆ. ಶರೀರ, ರಾಗ ಮತ್ತು ಕರ್ಮಗಳಿದ್ದರೂ ಕೂಡ ಶುದ್ಧ ಆತ್ಮನು ಅವನ್ನು ತಡೆಯುವುದಿಲ್ಲ. ಶುದ್ಧ ಆತ್ಮನು ಎಲ್ಲವುಗಳಿಂದ ಭಿನ್ನನಿದ್ದಾನೆ. ಹೀಗೆ ಆತ್ಮನು ಜ್ಞಾನಪ್ರತ್ಯಕ್ಷನಿದ್ದಾನೆ.

ಈ ಮಾತನ್ನು ಅದೆಷ್ಟೋ ಜೀವರುಗಳು ಅತಿಶಯ ಸೂಕ್ಷ್ಮವಿದೆ ನಮಗೇನೂ ತಿಳಿದುಬರುವುದಿಲ್ಲವೆಂದು ಹೇಳಿ ಹಾರಿಸಿಬಿಡುತ್ತಾರೆ. ನಾವಂತೂ ಗೃಹಸ್ಥರಿದ್ದೇವೆ, ಇಡೀ ದಿವಸವೆಲ್ಲ ಕೆಲಸ-ಕಾರ್ಯಗಳಲ್ಲಿಯೇ ಮುಳುಗಿಹೋಗಿರುತ್ತೇವೆ. ತಾವು ಏನು ಹೇಳುತ್ತಿರುವಿರಿ ಅದು ನಮಗೆ ತಿಳಿದುಬರುತ್ತಲೇ ಇಲ್ಲ. ಸೋದರನೇ ! ಪರದ ಕಾರ್ಯವನ್ನು ಯಾರೂ ಮಾಡುವ ಸಾಧ್ಯತೆಯೇ ಇಲ್ಲ. ಆತ್ಮನು ಅನಂತ ಗುಣಗಳ ಪಿಂಡನಿದ್ದಾನೆ. ಆತ್ಮನು ತನ್ನ ಗುಣ-ಪರ್ಯಾಯಗಳನ್ನು ಸ್ಪರ್ಶ ಮಾಡುತ್ತಾನೆ ಮತ್ತು ಪರಮಾಣುವು ತನ್ನ ಗುಣ-ಪರ್ಯಾಯಗಳನ್ನು ಸ್ಪರ್ಶ ಮಾಡುತ್ತದೆ, ಆದರೆ ಒಂದು ಇನ್ನೊಂದನ್ನು

ಎಂದರೆ ಆತ್ಮನು ಪರಮಾಣುವನ್ನು ಪರಮಾಣುವು ಆತ್ಮನನ್ನು ಸ್ಪರ್ಶ ಮಾಡುವುದಿಲ್ಲ.

ಐಸ್ಕ್ರೀಮ್ ತಿನ್ನುವ ಸಮಯದಲ್ಲಿ ಐಸ್ಕ್ರೀಮ್, ನಾಲಿಗೆ ಮತ್ತು ಆತ್ಮ ಮೂರು ಬೇರೆಯಿವೆ. ಪ್ರತಿಯೊಂದರ ಕ್ರಿಯೆಯು ತಮ್ಮ ತಮ್ಮಲ್ಲಿ ಆಗುತ್ತದೆ. ಆತ್ಮನು ಆತ್ಮನಲ್ಲಿ ಕಾರ್ಯ ಮಾಡುತ್ತಾನೆ. ಈ ಮಾತು ಒಪ್ಪಿಗೆಯಾದರೆ ಎಲ್ಲ ಪ್ರಶ್ನೆಗಳು ತಾವಾಗಿಯೇ ಬಿಟ್ಟುಹೋಗುತ್ತವೆ.

'ಈ ಲೋಕದ ರಚನೆಯು ಅಸತ್ಯದ ಆಗ್ರಹ ಮಾಡಿಸುವಂಥದ್ದಿದೆ'ಯೆಂದು ಶ್ರೀಮಜ್ಜೀಯವರು ಹೇಳಿದ್ದಾರೆ.

ಜ್ಞಾನಸ್ವಭಾವವು ಪರದಿಂದ ಪೃಥಕ್ ಇದೆ. ಅದು ಕರ್ಮವನ್ನು ತಡೆಯುವುದಿಲ್ಲ. ಭ್ರಮಣ ಮಾಡುವಂಥ ಪರ್ಯಾಯವು ತಾನು ತನ್ನಿಂದಲೇ ಮಾಡುತ್ತದೆ. ಅದು ಸ್ವಯಂ ಪರದಿಂದ ಭಿನ್ನವೇ ಇದೆಯೆಂದು ನಿರ್ಣಯ ಮಾಡಿದರೆ ರಾಗದಿಂದ ತ್ರಿಕಾಲೀ ಸ್ವಭಾವವು ಮುಕ್ತವೇ ಇದೆಯೆಂದು ನಿರ್ಣಯ ಮಾಡುವ ಪ್ರಸಂಗವು ಬರುವುದು, ಆದರೆ ಪರದಿಂದ ಬಿಡುಗಡೆಹೊಂದಿರದವರಿಗೆ ರಾಗದಿಂದ ಸ್ವಭಾವವು ಭಿನ್ನವಿದೆಯೆಂಬ ಮಾತು ಒಪ್ಪಿಗೆಯಾಗುವುದಿಲ್ಲ.

ಸಮ್ಯಗ್ದೃಷ್ಟಿ ಜೀವನು ತನ್ನ ಶುದ್ಧ ಭಾವದಿಂದ ಶುದ್ಧ ಜೀವವನ್ನು ನಿಶ್ಚಯದಿಂದ ತಿಳಿದುಕೊಳ್ಳುತ್ತಾನೆ. ಪರದಿಂದ ಅಥವಾ ರಾಗದಿಂದ ತಿಳಿದುಕೊಳ್ಳುವುದಿಲ್ಲ, ಆದರೆ ಜ್ಞಾನದಿಂದ ತಿಳಿದುಕೊಳ್ಳುತ್ತಾನೆ. ಈ ಪ್ರಕಾರ ಪ್ರಜ್ಞೆಯುಳ್ಳ ಆತ್ಮನು ಪರದಿಂದ ಅಸ್ಪರ್ಶಿಯಾದ ಆತ್ಮನು ತನ್ನ ಜ್ಞಾನ ಮಾಡಿಕೊಂಡ ನಂತರ ಸರ್ವಸಂಗದಿಂದ ವಿಮುಕ್ತನಾಗುತ್ತಾನೆ. ''ನಾನು ಸರ್ವಸಂಗದಿಂದ ವಿಮುಕ್ತನಿದ್ದೇನೆ''ಎಂಬ ದೃಷ್ಟಿಯು ಮೊದಲು ಇರುವುದರಿಂದ ನಂತರ ಪರ್ಯಾಯದಲ್ಲಿ ಸರ್ವಸಂಗದಿಂದ ವಿಮುಕ್ತನಾಗುತ್ತಾನೆ, ಆದರೆ ಶರೀರ, ಮನಸ್ಸು, ವಾಣಿ, ದೇವ-ಶಾಸ್ತ್ರ-ಗುರು ಮೊದಲಾದವರ ಸಂಗದಿಂದ ಲಾಭವಾಗುತ್ತದೆಯೆಂದು ಮನ್ನಿಸಿದನೆಂದರೆ ಅವನ ದೃಷ್ಟಿಯು ಕೂಡ ಸತ್ಯವಿಲ್ಲ. ನಾನು ಸರ್ವಸಂಗದಿಂದ ಭಿನ್ನನಿದ್ದೇನೆಂದು ಅರಿವು ಮೂಡಿ ಬಂದನಂತರ ಮುನಿದಶೆಯಾಗುತ್ತದೆ. ಅಂತರಂಗ-ಬಹಿರಂಗ ಪರಿಗ್ರಹದಿಂದ ರಹಿತನಾಗಿ ಏಕಾಗ್ರತೆಯಿಂದ ಚಿತ್ತದ ನಿರೋಧ ಮಾಡಿ ಸ್ವರೂಪದಲ್ಲಿ ಮಗ್ನನಾಗುತ್ತಾನೆ. ಆ ಜೀವನು ಅಪಗತ ರಾಗವುಳ್ಳವನೆಂದು ಕರೆಯಿಸಿಕೊಳ್ಳುತ್ತಾನೆ.

ಚಾರಿತ್ರವು ಮೋಕ್ಷಮಾರ್ಗವಿದೆ. ಅದು ದರ್ಶನ-ಜ್ಞಾನಪೂರ್ವಕವಿರುತ್ತದೆ. ಮುನಿಯು ಅಂತರಬಾಹ್ಯ ಪರಿಗ್ರಹದಿಂದ ರಹಿತರಿರುತ್ತಾರೆ. ಸರ್ವಸಂಗದಿಂದ ಮುಕ್ತವಾದಾಗ ಚಾರಿತ್ರವಾಗುತ್ತದೆ. ಸ್ವರೂಪದ ಏಕಾಗ್ರತೆಯು ಚಾರಿತ್ರವಿದೆ.

ಶ್ರೀ ಜಯಸೇನಾಚಾರ್ಯದೇವರು ತಮ್ಮ ಟೀಕೆಯಲ್ಲಿ ಹೇಳಿರುವುದೇನೆಂದರೆ - ಮುನಿಗಳು ಸರ್ವಸಂಗದಿಂದ ವಿಮುಕ್ತರಿರುತ್ತಾರೆ. ಮೂರು ಕಾಲ ಮತ್ತು ಮೂರು ಲೋಕದ ಪದಾರ್ಥಗಳ ಕುರಿತು ಉದಾಸೀನತೆಯು ವರ್ತಿಸುತ್ತದೆ. ಹಿಂಸೆ, ಹುಸಿ, ಕಳವು ಮೊದಲಾದವುಗಳ ಭಾವವನ್ನು ಮನ-ವಚನ-ಕಾಯದಿಂದ ಮಾಡುವುದು, ಮಾಡಿಸುವುದು ಮತ್ತು ಅನುಮೋದನೆ ಕೊಡುವುದು ಹೀಗೆ ಒಂಭತ್ತು ಪ್ರಕಾರದಿಂದ ಬಿಟ್ಟುಕೊಟ್ಟಿರುತ್ತಾರೆ. ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹದಿಂದ ಮುಕ್ತರಾಗಿರುತ್ತಾರೆ ಮತ್ತು ರಾಗದಿಂದ ರಹಿತರಾಗಿ ಆತ್ಮನ ಭಾವನೆಯಿಂದ ಉತ್ಪನ್ನವಾದ ಸುಂದರ ಅಮೃತದ ಆನಂದವು ಪ್ರವಹಿಸುತ್ತಿರುತ್ತದೆ-ಚೈತನ್ಯದೊಳಗಿಂದ ವೀತರಾಗತೆಯ ಆನಂದವು ಪ್ರವಹಿಸುತ್ತದೆ, ಸುಧಾಮೃತವು ಅಸಂಖ್ಯ ಪ್ರದೇಶಗಳಿಂದ ಸ್ರವಿಸುತ್ತದೆ. ಹೀಗೆ ಮುನಿದಶೆಯಿದೆ. ಆ ಮುನಿಯು ಸಹಜಾನಂದ ದೆಸೆಯ ಅನುಭವ ಮಾಡುತ್ತಾರೆ. ಅವರು ಆತ್ಮನ ಆಚರಣೆ ಮಾಡುವಂಥವರಿದ್ದಾರೆ.

**ಭಾವಾರ್ಥ :-** ಆತ್ಮಸ್ವರೂಪದಲ್ಲಿ - ನಿಜಗುಣಪರ್ಯಾಯದಲ್ಲಿ ನಿಶ್ಚಲರೂಪದಿಂದ ಅನುಭವ ಮಾಡುವವರನ್ನು ಸ್ವಸಮಯವೆಂದು ಹೇಳುತ್ತಾರೆ. ಅದರ ಹೆಸರು ಸ್ವಚಾರಿತ್ರವಿದೆ. ಚಾರಿತ್ರದಶೆಯೇ ಮುಕ್ತಿಯ ಮಾರ್ಗವಿದೆ.

ಈಗ ಶುದ್ಧ ಸ್ವಚಾರಿತ್ರದ ಪ್ರವೃತ್ತಿಯ ಮಾರ್ಗವನ್ನು ತಿಳಿಸಿಕೊಡುತ್ತಾರೆ -

**ಚರಿಯಂ ಚರದಿ ಸಗಂ ಸೋ ಜೋ ಪರದವ್ವಪ್ಪಭಾವರಹಿದಪ್ಪಾ ।**
**ದಂಸಣಣಾಣವಿಯಪ್ಪಂ ಅವಿಯಪ್ಪಂ ಚರದಿ ಅಪ್ಪಾದೋ ॥೧೫೯॥**

**ಪರದ್ರವ್ಯಾತ್ಮಕಭಾವರಹಿತ ಸ್ವರೂಪದಿಂ ದರ್ಶನ-ಜ್ಞಾನರೂಪ ಭೇದದ ।**
**ತೊರೆದಾತ್ಮನಿಂದಭೇದರೂಪವಾಚರಿಪನವ ಸ್ವಚಾರಿತ್ರವಾಚರಿಪನು ॥೧೫೯॥**

ಯಾವ ಪುರುಷನು ತನ್ನ ಸ್ವರೂಪದ ಆಚರಣೆ ಮಾಡುತ್ತಾನೆ ಅವನು ದರ್ಶನ ಮತ್ತು ಜ್ಞಾನ ಅಥವಾ ನಿರಾಕಾರ ಮತ್ತು ಸಾಕಾರ ಅವಸ್ಥೆಯ ಭೇದರಹಿತ ಅಭೇದದ ಆಚರಣೆ ಮಾಡುತ್ತಾನೆ. ದರ್ಶನದ ವಿಷಯವು ಅಭೇದವಿದೆ. ಆದುದರಿಂದ ನಿರಾಕಾರವೆಂದು ಮತ್ತು ಜ್ಞಾನವು ಭೇದಸಹಿತವಾಗಿ ತಿಳಿಯುತ್ತದೆ. ಆದುದರಿಂದ ಸಾಕಾರವೆಂದು ಹೀಗೆ ದರ್ಶನ-ಜ್ಞಾನದ ಭೇದರಹಿತ ಎಂದರೆ ಅಭೇದತೆಯಿಂದ ತಿಳಿಯುತ್ತಾನೆ. ಆ ಭೇದವಿಜ್ಞಾನಿಯು ಪರದ್ರವ್ಯದ ಅಹಂಭಾವದಿಂದ ರಹಿತನಿದ್ದಾನೆ.

**ಭಾವಾರ್ಥ :-** ಇಲ್ಲಿ ಮುನಿಗಳ ಮಾತು ಇದೆ. ಆ ಮುನಿರಾಜರಿಗೆ ವೀತರಾಗತೆಯ ಸ್ವಸಂವೇದನವಿರುತ್ತದೆ. ರಾಗದ ವೇದನವು ಆಕುಲತೆಯಿದೆ. ತನ್ನ ಜ್ಞಾನದ ವೇದನವು ಸ್ವಸಂವೇದನವಿದೆ. ಆ ವೀತರಾಗೀ ಜ್ಞಾನಿಯು ಎಲ್ಲ ಪ್ರಕಾರದ ಮೋಹಚಕ್ರದಿಂದ ರಹಿತನಿರುತ್ತಾನೆ. ಅವನಿಗೆ ಸ್ವಭಾವದ ಅಧಿಕತೆಯು ವರ್ತಿಸುತ್ತದೆ. ಶುಭಾಶುಭ ಭಾವದ ತ್ಯಾಗಿಯಾಗಿ ಸ್ವಭಾವದ ಸನ್ಮುಖನಾಗಿ ಹೋಗಿ ಅದರಲ್ಲಿ ಅಧಿಕತೆಯಿಂದ ಪ್ರವರ್ತನೆ ಮಾಡುತ್ತಾನೆ. ನಾಲ್ಕನೆಯ ಗುಣಸ್ಥಾನದಲ್ಲಿ ಕೂಡ ಧರ್ಮಾತ್ಮ ಜೀವನಿಗೆ ದಯೆ-ದಾನಾದಿಗಳ ಭಾವದ ಮುಖ್ಯತೆಯಾಗುವುದಿಲ್ಲ. ಸ್ವದ್ರವ್ಯದ ಮುಖ್ಯತೆಯೇ ವರ್ತಿಸುತ್ತದೆ. ಒಂದು ವೇಳೆ ರಾಗದ ಮುಖ್ಯತೆಯಾಗಿ ಹೋದರೆ ಅವನು ಮಿಥ್ಯಾದೃಷ್ಟಿಯಾಗಿ ಹೋಗುತ್ತಾನೆ. ಇಲ್ಲಿಯಂತೂ ಸಮ್ಯಗ್ದರ್ಶನದ ಅನಂತರ ವಿಶೇಷ ವೀತರಾಗತೆಯು ವೃದ್ಧಿಸಿಹೋಗಿರುವಂಥ ಮುನಿರಾಜರ ಮಾತು ಇದೆ. ಆರನೆಯ ಗುಣಸ್ಥಾನದಲ್ಲಿ ಮುನಿರಾಜರಿಗೆ ಮಹಾವ್ರತಾದಿಗಳ ವಿಕಲ್ಪಗಳಿದ್ದರೂ ಕೂಡ ಅವುಗಳ ಕಡೆಗಂತೂ ಮುಖ್ಯತೆಯಿರುವುದಿಲ್ಲ. ಒಂದು ವೇಳೆ ವ್ಯವಹಾರದ ಮುಖ್ಯತೆಯು ಆಗಿಹೋದರೆ ನಿಶ್ಚಯ-ವ್ಯವಹಾರವು ಒಂದಾಗಿ ಉಳಿಯುವುದಿಲ್ಲ. ಮುನಿರಾಜರಿಗೆ ಯಾವಾಗಲೂ ಸ್ವಭಾವದ ಅಧಿಕತೆಯು ವರ್ತಿಸುತ್ತಿರುತ್ತದೆ.

ಆತ್ಮದ್ರವ್ಯದಲ್ಲಿ ಯಾವ ಸ್ವಾಭಾವಿಕ ಜ್ಞಾನ-ದರ್ಶನ ಮೊದಲಾದ ಗುಣಗಳಿವೆ ಅವುಗಳ ಭೇದರಹಿತ ಅಭೇದವಿರುವ ಜ್ಞಾತಾ-ದೃಷ್ಟಾ ಸ್ವಭಾವವನ್ನು ತಿಳಿಯಲಾಗುತ್ತದೆ. ಶರೀರ, ಮನಸ್ಸು , ವಾಣಿಗಳಂತೂ ಆತ್ಮನವುಗಳಿಲ್ಲ, ವಿಕಾರವೂ ಕೂಡ ಆತ್ಮನ ಸ್ವಭಾವವಲ್ಲ, ಆದರೆ ಆತ್ಮನು ಸ್ವಭಾವವಂತನಿದ್ದಾನೆ ಮತ್ತು ಜ್ಞಾನ-ದರ್ಶನವು ಇವನ ಸ್ವಭಾವವಿದೆ. ಇಂಥ ಗುಣ-ಗುಣಿಯ ಭೇದವು ಕೂಡ ಆತ್ಮನಲ್ಲಿ ಇರುವುದಿಲ್ಲ. ಹೀಗೆ ಅಭೇದವನ್ನು ತಿಳಿದುಕೊಂಡು ಆಚರಣೆ ಮಾಡುತ್ತಿರುವಂಥ ಮುನಿಗಳನ್ನು ಸ್ವಸಮಯದ ಅನುಭವಿಗಳೆಂದು ಹೇಳಲಾಗುತ್ತದೆ.

ವೀತರಾಗ ಸರ್ವಜ್ಞ ಭಗವಂತರು ನಿಶ್ಚಯ-ವ್ಯವಹಾರವೆಂದು ಹೀಗೆ ಎರಡು ಭೇದದಿಂದ ಮೋಕ್ಷಮಾರ್ಗವನ್ನು ತಿಳಿಸಿಕೊಟ್ಟಿದ್ದಾರೆ. ಅವೆರಡರಲ್ಲಿ ನಿಶ್ಚಯನಯದ ಅವಲಂಬನದಿಂದ ಅಭೇದ ಭಾವರೂಪದ ಯಾವ ಸಾಧ್ಯ-ಸಾಧನದ ಪ್ರವೃತ್ತಿಯಿದೆ ಅದು ನಿಶ್ಚಯ ಮೋಕ್ಷಮಾರ್ಗವಿದೆ. ನಿಶ್ಚಯದಿಂದ ಶುದ್ಧದ್ರವ್ಯವು ಸ್ವಯಂ ಸಾಧ್ಯವಿದೆ ಮತ್ತು ವೀತರಾಗೀ ಪರ್ಯಾಯವು ಸಾಧನವಿದೆ. ಈ ಪ್ರಕಾರ ಅಭೇದಭಾವರೂಪದ ಸಾಧ್ಯ-ಸಾಧನವು ನಿಶ್ಚಯದಿಂದ ಇದೆ.

ವ್ಯವಹಾರನಯಾಶ್ರಿತವಿರುವ ಮೋಕ್ಷಮಾರ್ಗದ ಪ್ರರೂಪಣೆಯನ್ನು ಈ ಮೊದಲು ೧೦೬-೧೦೭ ಈ ಎರಡು ಗಾಥೆಗಳಲ್ಲಿ ಮಾಡಲಾಗಿದೆ.

ಆ ಸ್ವದ್ರವ್ಯ-ಪರದ್ರವ್ಯದ ಕಾರಣ ಪಡೆದು ಯಾವ ಅಶುದ್ಧ ಪರ್ಯಾಯವು ಉತ್ಪನ್ನವಾಗಿದೆ ಅದರ ಆಧೀನತೆಯಿಂದ ಭಿನ್ನವಿರುವಂಥ ಯಾವ ಸಾಧ್ಯ-ಸಾಧನರೂಪದ ಈ ವ್ಯವಹಾರ ಮೋಕ್ಷಮಾರ್ಗವಿದೆ ಅದು ಸರ್ವಥಾ ನಿಷೇಧರೂಪವಿರುವುದಿಲ್ಲ. ಕಥಂಚಿತ್ ಮಹಾಪುರುಷರುಗಳು ಗ್ರಹಣ ಮಾಡಿದ್ದಾರೆ. ನಿಶ್ಚಯ ಮತ್ತು ವ್ಯವಹಾರದಲ್ಲಿ ಪರಸ್ಪರ ಸಾಧ್ಯ-ಸಾಧನ ಭಾವವಿದೆ.

ಸ್ವದ್ರವ್ಯವು ಅಖಂಡವಿದೆ. ಅದರ ಪರ್ಯಾಯದಲ್ಲಿ ನಿಜವಾದ ದೇವ-ಶಾಸ್ತ್ರ-ಗುರುಗಳ ಕುರಿತು ರಾಗವು ಬರುತ್ತದೆ. ಈ ಪ್ರಕಾರ ತನ್ನ ಪರ್ಯಾಯದಲ್ಲಿ ಪರದ ನಿಮಿತ್ತದಿಂದ ಅಶುದ್ಧತೆಯು ಉತ್ಪನ್ನವಾಗುತ್ತದೆ. ನಿಜದ್ರವ್ಯದ ಮಲಿನತೆಯ ಕಾರಣವು ತನ್ನ ಅಪರಾಧವೇ ಇದೆ. ಅಶುದ್ಧ ಉಪಾದಾನದ ಯೋಗ್ಯತೆಯಿರುತ್ತದೆ ಮತ್ತು ಅದರಲ್ಲಿ ಕರ್ಮವು ನಿಮಿತ್ತವಿರುತ್ತದೆ. ಎಲ್ಲಿಯವರೆಗೆ ಮುನಿರಾಜರಿಗೆ ವೀತರಾಗತೆಯಿರುವುದಿಲ್ಲ ಅಲ್ಲಿಯವರೆಗೆ ವಿಕಲ್ಪಗಳು ಉತ್ಪನ್ನವಾಗುತ್ತವೆ ಅದು ಅಶುದ್ಧಪರ್ಯಾಯವಿದೆ. ಆ ವಿಕಲ್ಪಗಳನ್ನು ದೂರ ಮಾಡಿ ವೀತರಾಗತೆಯನ್ನು ಪ್ರಕಟಪಡಿಸಿಕೊಳ್ಳುತ್ತಾರೆ. ಆದುದರಿಂದಲೇ ಅಲ್ಲಿ ವೀತರಾಗತೆಯನ್ನು ಸಾಧ್ಯವೆಂದು ಮತ್ತು ರಾಗವನ್ನು ಸಾಧನವೆಂದು ಹೇಳಲಾಗಿದೆ. ಅದು ಸರ್ವಥಾ ನಿಷೇಧರೂಪವಿರುವುದಿಲ್ಲ. ಏಕೆಂದರೆ ಆ ಭೂಮಿಕೆಯಲ್ಲಿ ಆ ಪ್ರಕಾರದ ರಾಗವು ಇರುತ್ತದೆ. ನಿಜವಾದ ದೇವರುಗಳ ಭಕ್ತಿ, ಪಂಚಮಹಾವ್ರತಾದಿಗಳ ರಾಗವು ಇರುತ್ತದೆ, ಆದರೆ ಕುದೇವಾದಿಗಳ ರಾಗವು ಇರುವುದಿಲ್ಲ ಮತ್ತು ಆ ಸುದೇವಾದಿಗಳ ರಾಗದ ಅಭಾವ ಮಾಡಿ ವೀತರಾಗತೆಯನ್ನು ಪ್ರಕಟಪಡಿಸಿಕೊಳ್ಳುತ್ತಾರೆ. ಆ ಶುಭರಾಗದ ಅಭಾವವು ನಿಮಿತ್ತವಾಗುತ್ತಿರುವುದರಿಂದ ಶುಭರಾಗವನ್ನು ಸಾಧನವೆಂದು ಹೇಳಲಾಗಿದೆ ಮತ್ತು ವೀತರಾಗತೆಯನ್ನು ಪ್ರಕಟಪಡಿಸಿಕೊಳ್ಳದಿದ್ದರೆ ಆ ಶುಭರಾಗವನ್ನು ಸಾಧನವೆಂದು ಕೂಡ ಹೇಳಲಾಗುವುದಿಲ್ಲ.

ನೋಡಿರಿ ! ಮುನಿರಾಜರಿಗೆ ಗುಣ-ಗುಣಿಯ ಅಭೇದವಿರುವಂಥ ಪ್ರತೀತಿಯಂತೂ ಆಗಿಹೋಗಿದೆ, ಆದರೆ ತಮ್ಮ ದುರ್ಬಲತೆಯ ಕಾರಣದಿಂದ ದೇವ-ಶಾಸ್ತ್ರ-ಗುರುಗಳ ಕುರಿತು ಪ್ರಮೋದವು ಬರುತ್ತದೆ. ಆದರೇನು ಆ ಪ್ರಮೋದದಿಂದ ಧರ್ಮವಾಗುವುದಿಲ್ಲ. ಮುನಿರಾಜರಿಗೆ ಸ್ವಭಾವದ ಮುಖ್ಯತೆಯೇ ವರ್ತಿಸುತ್ತದೆ. ರಾಗವಿದ್ದರೂ ಕೂಡ ರಾಗದ ಮುಖ್ಯತೆಯಾಗುವುದಿಲ್ಲ ಮತ್ತು ಮುನಿರಾಜರಿಗೆ ರಾಗವಾಗುವುದೇ ಇಲ್ಲವೆಂಬುದಾಗಿಯೂ ಇರುವುದಿಲ್ಲ.

ಮುನಿರಾಜರಿಗೆ ಕೂಡ ಜೈನ ಧರ್ಮದ ಪ್ರಭಾವನೆಯ ವಿಕಲ್ಪವು ಉತ್ಪನ್ನವಾಗುತ್ತದೆ. ಜಿನಮಂದಿರದ್ದು ಕೂಡ ವಿಕಲ್ಪವು ಉತ್ಪನ್ನವಾಗುತ್ತದೆ. ಭ. ಕುಂದಕುಂದಾಚಾರ್ಯದೇವರ ಶಿಷ್ಯರಾದ ಶ್ರೀ ಜಯಸೇನಾಚಾರ್ಯದೇವರು ಹೇಳುವುದೇನೆಂದರೆ - 'ಜಿನಮಂದಿರದ ಪ್ರತಿಷ್ಠೆಯ ವಿಧಿಯ ಪಾಠ ರಚಿಸಿರಿ' ನೋಡಿರಿ, ಮುನಿರಾಜರಿಗೆ ಕೂಡ ಇಂಥ ರಾಗವು ಬರುತ್ತದೆಯೆಂದು ಉಪಚಾರದಿಂದ ಹೇಳಲಾಗುತ್ತದೆ. ಆದಾಗ್ಯೂ ಅದರ ಅಧಿಕತೆಯಿರುವುದಿಲ್ಲ. ಅವರಿಗೆ ಗುಣ-ಗುಣಿಯ ಅಭೇದಸ್ವಭಾವದ ಅಧಿಕತೆಯಿರುತ್ತದೆ. ರಾಗವು ಬರುತ್ತದೆಯೆಂದರೆ ಆ ರಾಗವು ಸಮ್ಯಗ್ದರ್ಶನದ ಬಾಧಕವಿದೆಯೆಂಬುದಾಗಿಯೂ ಕೂಡ ಇಲ್ಲ. ಶ್ರೀ ಜಯಸೇನಾಚಾರ್ಯದೇವರು ಎರಡು ದಿವಸಗಳಲ್ಲಿ ಪ್ರತಿಷ್ಠಾಪಾಠವನ್ನು ರಚಿಸಿದರು. ಅದರಲ್ಲಿ ವಿಪುಲ ಪ್ರಕಾರದಿಂದ ವ್ಯವಹಾರ ಮತ್ತು ನಿಮಿತ್ತದ ಮಾತುಗಳು ಬರುತ್ತವೆ. ಜಿನಮಂದಿರದ ಪ್ರತಿಷ್ಠೆ ಮಾಡುವಂಥವನು ತನ್ನ ಆತ್ಮನ ಕಲ್ಯಾಣದ ಸಲುವಾಗಿ ಧನದ ಸದ್‌ವ್ಯಯ ಮಾಡಬೇಕಾಗುವುದು. ಆ ಜಿನಮಂದಿರದ ಸ್ಥಾನದಲ್ಲಿ ಈ ರೀತಿಯಿಂದ ಬೋಧವಾಕ್ಯಗಳನ್ನು ಕೆತ್ತಿಸಬೇಕಾಗುವುದು. ಬಿಂಬವನ್ನು ಹೇಗೆ ನಿರ್ಮಿಸಬೇಕೆಂದರೆ ಆ ಬಿಂಬದ ಬೆಲೆಯನ್ನು ನಿಶ್ಚಿತಪಡಿಸಬಾರದು. ಹೀಗೆಯೇ ಅದೆಷ್ಟು ಪ್ರಕಾರದಿಂದ ಅದರಲ್ಲಿ ಕಥನವು ಬರುತ್ತದೆ.

**ಪ್ರಶ್ನೆ :-** ಮುನಿಯು ಸರ್ವಸಂಗಪರಿತ್ಯಾಗಿಯಾಗಿದ್ದರೂ ಕೂಡ ಅವರಿಗೆ ಈ ಪ್ರಕಾರದ ರಾಗವು ಏಕೆ ಬರುತ್ತದೆಯೆಂದು ಅಜ್ಞಾನಿಗೆ ಎನಿಸುತ್ತದೆ ಮತ್ತು ಅವರು ರಾಗವನ್ನು ಅಧರ್ಮವೆಂದು ಮನ್ನಿಸುತ್ತಾರೆ, ಆದಾಗ್ಯೂ ಅವರಿಗೆ ರಾಗವೇಕೆ ಬರುತ್ತದೆ ? ಅದೇಕೆ ರಾಗವನ್ನು ಮಾಡುತ್ತಾರೆಂದು ಅನೇಕ ಪ್ರಕಾರದ ಕುತರ್ಕಗಳು ಅಜ್ಞಾನಿಗೆ ಉತ್ಪನ್ನವಾಗುತ್ತಿರುತ್ತವೆ.

**ಉತ್ತರ :-** ಮುನಿಯು ಇನ್ನೂ ಸಂಪೂರ್ಣ ವೀತರಾಗತೆಯನ್ನು ಪಡೆದುಕೊಂಡಿಲ್ಲ. ರಾಗದ ಭೂಮಿಕೆಯಿದೆ. ಸ್ವದ್ರವ್ಯಕ್ಕೆ ಆ ಪ್ರಕಾರದ ಯೋಗ್ಯತೆಯ ಪ್ರಸಂಗವಿದೆ ಮತ್ತು ಅದರಲ್ಲಿ ಪರದ್ರವ್ಯವು ನಿಮಿತ್ತವಿದೆ. ಹೀಗೆ ಸ್ವದ್ರವ್ಯವು ಪರದ್ರವ್ಯದ ಕಾರಣ ಪಡೆದು ಪರ್ಯಾಯದಲ್ಲಿ ಅಶುದ್ಧಿಯು ಉತ್ಪನ್ನವಾಗಿದೆ. ಅದು ವ್ಯವಹಾರ ಮಾರ್ಗವಿದೆ-ಬಂಧಮಾರ್ಗವಿದೆ, ಅಲ್ಲಿಯಂತೂ ರಾಗದ ವರ್ಣನೆ ಮಾಡಲಾಗಿದೆ. ತನ್ನ ಭೂಮಿಕೆಯ ಅನುಸಾರವಾಗಿ ರಾಗವು ಬರುತ್ತದೆ.

ಶ್ರೀ ನೇಮಿಚಂದ್ರಸಿದ್ಧಾಂತಚಕ್ರವರ್ತಿಗಳು ಮಹಾಮುನಿಗಳಿದ್ದರು, ಮಂದಿರದ ಪ್ರತಿಷ್ಠೆಯ ಸಮಯದಲ್ಲಿ ಉಪಸ್ಥಿತರಾಗಿದ್ದರು. ಜನರುಗಳಿಗೆ ಹಿಂಸೆ-ಅಹಿಂಸೆಯ ಪ್ರಜ್ಞೆಯೇ ಇರಲಿಲ್ಲ. ಜಡದ ಪರ್ಯಾಯದಲ್ಲಿ ಹಿಂಸೆಯನ್ನು ಮನ್ನಿಸುತ್ತಿದ್ದರು. ಅವರಿಗೆ ನಿಶ್ಚಯ-ವ್ಯವಹಾರಗಳಲ್ಲಿ ಒಂದರದೂ ಅರಿವಿರಲಿಲ್ಲ. ಒಬ್ಬನು ನಿಶ್ಚಯವನ್ನು ತಿಳಿದುಕೊಂಡಲ್ಲದೆ ನಿಶ್ಚಯವನ್ನು ಹಿಡಿದುಕುಳಿತಿದ್ದಾನೆ ಮತ್ತು ಅವನು ಮುನಿಗಳಿಗೆ ಅಂಥ ರಾಗವು ಹೇಗಿರುತ್ತದೆಯೆದು ಕೇಳುತ್ತಾನೆ ಇನ್ನೋರ್ವನು ರಾಗವು ಬರುವುದರಿಂದ ಧರ್ಮವಾಯಿತೆಂದು ಮನ್ನಿಸುತ್ತಾನೆ, ಆದರೆ ಈ ರೀತಿಯಿಂದ ಎರಡೂ ಅಭಿಪ್ರಾಯಗಳು ಅಸತ್ಯವಾಗಿಯೇ ಇವೆ.

ಆರನೆಯ-ಏಳನೆಯ ಗುಣಸ್ಥಾನದ ಭೂಮಿಕೆಯಲ್ಲಿ ಜೀಕುತ್ತಿರುವಂಥ ಮುನಿರಾಜರು ಆಗಮಿಸಿದರೆ ಆಗ ಶ್ರಾವಕರಿಗೆ ಅತಿಶಯ ಉಲ್ಲಾಸವು ಬಂದು, ಓಹೋ ! ನಮ್ಮ ಮನೆಯ ಅಂಗಳದಲ್ಲಿ ಕಲ್ಪವೃಕ್ಷವೇ ಉತ್ಪನ್ನವಾಯಿತೆಂದು ಆ ಪ್ರಸಂಗದಲ್ಲಿ ಉಲ್ಲಸಿತರಾಗಿ ಹೋಗುತ್ತಾರೆ. ಆಗ ಓರ್ವ ಅಜ್ಞಾನಿಯು ತರ್ಕ ಮಾಡುವುದೇನೆಂದರೆ - ಪರದ್ರವ್ಯದಿಂದ ಲಾಭವಿಲ್ಲವೆಂದು ನೀವು ಒತ್ತಿಹೇಳುತ್ತಿದ್ದೀರಿ ಮತ್ತು ಈಗ ಗುರುಗಳ ಕುರಿತು ನಿಮಗೆ ಬಹುಮಾನವು ಹೇಗೆ ಬರುತ್ತಿದೆ? ಅವರು ಕೂಡ ಪರದ್ರವ್ಯರಿದ್ದಾರಲ್ಲವೇನು ?

**ಉತ್ತರ :-** ಅಯ್ಯಾ ಮಹನೀಯನೇ ! ನೀನು ಭೂಮಿಕೆಯನ್ನು ತಿಳಿದುಕೊಳ್ಳುವುದಿಲ್ಲ. ತಮ್ಮ ಭೂಮಿಕೆಯ ಅನುಸಾರ ರಾಗವು ಬರುತ್ತದೆ. ಆದಾಗ್ಯೂ ಶ್ರಾವಕರು ಆ ರಾಗದಿಂದ ಧರ್ಮವಾಗುತ್ತದೆಯೆಂದು ಮನ್ನಿಸುವುದಿಲ್ಲ. ಮುನಿಗೆ ಇನ್ನೋರ್ವ ಮುನಿಯ ಭೆಟ್ಟಿಯಾಯಿತೆಂದರೆ ಸ್ವಾಭಾವಿಕವಾಗಿ ಪ್ರಮೋದವು ಬಂದುಬಿಡುತ್ತದೆ. ಅವರು ಬರುವ ಸಮಾಚಾರ ತಿಳಿದು ಅವರನ್ನು ಬರಮಾಡಿಕೊಳ್ಳಲು ಕೂಡ ಹೋಗುತ್ತಾರೆ. ಗುಣಿಗಳ ಕುರಿತಾಗಿ ಪ್ರಮೋದವು ಬಂದುಬಿಡುತ್ತದೆ. ಪರಸ್ಪರ ಪ್ರಮೋದವು ಬರುತ್ತದೆ, ಈರ್ಷೆಯನ್ನು ಮಾಡುವುದಿಲ್ಲ. ಆ ಸಮಯದಲ್ಲಿ ಶುಭರಾಗವು ಬರುತ್ತದೆ, ಶುಭರಾಗವು ಬರುವುದೇ ಇಲ್ಲವೆಂದು ಯಾರಾದರೂ ಹೇಳಿದರೆ ಆ ಮಾತು ಸತ್ಯವಿಲ್ಲ, ಆದರೆ ಆ ಶುಭರಾಗವನ್ನು ಧರ್ಮವೆಂದು ಹೇಳಲಾಗುವುದಿಲ್ಲ.

'ಕಥಂಚಿತ್ ಮಹಾಪುರುಷರು ಗ್ರಹಣ ಮಾಡಿದ್ದಾರೆ' ಇದರ ಅರ್ಥವೇನಿದೆಯೆಂದರೆ-ಮುನಿರಾಜರುಗಳಿಗೆ ಕೂಡ ತಮ್ಮ ಭೂಮಿಕೆಯ ಅನುಸಾರವಾಗಿ ರಾಗವು ಬಂದಲ್ಲದೆ ಇರುವ ಸಾಧ್ಯತೆಯಿಲ್ಲ. ಅದು ಅಂಗೀಕಾರ ಮಾಡುವಂಥದ್ದಿದೆಯೆಂದು ಮನ್ನಿಸಿಕೊಂಡರೆ ಮಿಥ್ಯಾದೃಷ್ಟಿಯಾಗಿ ಹೋಗುವನು. ವೀತರಾಗತೆಯ ಸಾಧನವಂತೂ ಸ್ವಯಂ ದ್ರವ್ಯವಿದೆ. ಧ್ರುವಸ್ವಭಾವದ ಅವಲಂಬನೆ ಮಾಡುವುದರಿಂದ ವೀತರಾಗೀ ಪರ್ಯಾಯವು ಪ್ರಕಟವಾಗುತ್ತದೆ. ಹೀಗೆ ದ್ರವ್ಯ ಸ್ವಭಾವದ ಅಧಿಕತೆಯೇ ವರ್ತಿಸುತ್ತದೆ. ಆದಾಗ್ಯೂ ಕೂಡ ಮುನಿರಾಜರಿಗೆ ವಿಕಲ್ಪಗಳು ಬರುತ್ತವೆ, ಆ ವಿಕಲ್ಪಗಳ ಜ್ಞಾನವು ವರ್ತಿಸುತ್ತದೆ.

ಮುನಿ ಭಗವಂತರುಗಳಿಗೆ ಸಿದ್ಧಕ್ಷೇತ್ರ ಗಿರಿನಾರದ ಯಾತ್ರೆ ಮಾಡುವ ವಿಕಲ್ಪವು ಬರಬಹುದು. ಅಯ್ಯಾ ! ಅದಂತೂ ಪ್ರಭು ನೇಮಿನಾಥ ಭಗವಂತರ ನಿರ್ವಾಣ ಭೂಮಿಯಿದೆ. ವಾಸುದೇವ, ಬಲದೇವ ಮೊದಲಾದವರು ನಿರ್ವಾಣದ ಸಮಯದಲ್ಲಿ ಉಪಸ್ಥಿತರಿದ್ದರು. ಸ್ವರ್ಗದಿಂದ ಇಂದ್ರ-ಇಂದ್ರಾಣಿಯರು ಕೂಡ ಗಿರಿನಾರ ಪರ್ವತದ ಮೇಲೆ ಇಳಿದುಬಂದಿದ್ದರು. ಆ ನಿರ್ವಾಣಕ್ಷೇತ್ರದಲ್ಲಿ ಇಂದ್ರನು ಮುಕುಟದಿಂದ ಚಿಹ್ನೆ-ಗುರುತು ಮಾಡಿದ್ದು ಇದೆ. ಇಂಥ

ನಿರ್ವಾಣ ಭೂಮಿಯ ಯಾತ್ರೆಯ ವಿಕಲ್ಪವು ಮುನಿಗಳಿಗೆ ಬಂದಿರುತ್ತದೆ. ಗಿರಿನಾರದ ಮೇಲೆ ಪದಾರ್ಥವಿದೆಯೆಂಬುದನ್ನು ತಿಳಿದುಕೊಂಡಿರುತ್ತಾರೆ. ನಿರ್ವಾಣವು ಇತರರದಾಗಿದೆ. ಪರದ ಕ್ರಿಯೆಯನ್ನು ಮಾಡುವ ಸಾಧ್ಯತೆಯಿಲ್ಲ, ಪರದಲ್ಲಿ ಲಾಭವಿಲ್ಲ. ರಾಗದಿಂದ ಧರ್ಮವಿಲ್ಲ. ಆದಾಗ್ಯೂ ಎಲ್ಲಿಯವರೆಗೆ ಪೂರ್ಣ ವೀತರಾಗ ದಶೆಯು ಆಗುವುದಿಲ್ಲ, ಅಲ್ಲಿಯವರೆಗೆ ರಾಗವು ಬರುತ್ತಿರುವುದರಿಂದ ಅದನ್ನು ವ್ಯವಹಾರ ಮೋಕ್ಷಮಾರ್ಗವೆಂದು ಹೇಳಲಾಗಿದೆ.

ಮೊಸರಿನಿಂದ ಬೆಣ್ಣೆಯನ್ನು ತೆಗೆಯುವ ಸಮಯದಲ್ಲಿ ಕಡೆಗೋಲಿಗೆ ಸುತ್ತಿದ ದಾರದ ಒಂದು ತುದಿಯನ್ನು ಎಳೆಯುವಾಗ ಇನ್ನೊಂದು ತುದಿಯನ್ನು ಸಡಿಲು ಬಿಡಬೇಕಾಗುತ್ತದೆ. ಅದರಂತೆ ಇಲ್ಲಿ ಅಖಂಡ ಅಭೇದ ಸ್ವಭಾವದ ದೃಷ್ಟಿಯು ಮುಖ್ಯವಿದೆ. ಅದನ್ನು ಸರಿಯಾಗಿ ಹಿಡಿದು ಇಟ್ಟುಕೊಳ್ಳುವಂತಿದೆ ಮತ್ತು ವ್ಯವಹಾರವಿದೆ ಅದನ್ನು ತಿಳಿದುಕೊಂಡು ಸಡಿಲು ಬಿಡುವಂತಿದೆ. ಇಲ್ಲಿ ಅದರ ಜ್ಞಾನ ಮಾಡಿಸಿಕೊಡಲಾಗಿದೆ.

ತೀರ್ಥಂಕರ ಶಿಶುವಿನ ಜನ್ಮವಾಗುತ್ತಿರುವಂತೆ ಇಂದ್ರನ ಆಸನವು ಕಂಪಾಯಮಾನವಾಗುತ್ತದೆ. ಅವನು ಉಪಯೋಗ ತೊಡಗಿಸಿ ನೋಡುವುದರಿಂದ ಭರತಕ್ಷೇತ್ರದಲ್ಲಿ ಭಗವಂತರ ಜನ್ಮವಾಗಿದೆಯೆಂದು ತಿಳಿದುಬರುತ್ತದೆ. ಸಮಸ್ತ ಇಂದ್ರರುಗಳು ಹಾಗೂ ದೇವ ಮೊದಲಾದವರು ಬಂದು ಜನ್ಮಮಹೋತ್ಸವವನ್ನು ಆಚರಿಸುತ್ತಾರೆ. ಆದಾಗ್ಯೂ ರಾಗದಿಂದ ಧರ್ಮವಾಗುತ್ತದೆಯೆಂದು ಮನ್ನಿಸುವುದಿಲ್ಲ.

**ಪ್ರಶ್ನೆ :-** ಭಗವಾನ ಆತ್ಮನಂತೂ ಅಂತರ್ಯದಲ್ಲಿ ವಿರಾಜಮಾನನಿದ್ದಾನೆಂದಮೇಲೆ ಮಂದಿರಗಳ ನಿರ್ಮಾಣವನ್ನು ಯಾವ ಕಾರ್ಯದ ಸಲುವಾಗಿ ಮಾಡಲಾಗುತ್ತಿದೆ ?

**ಉತ್ತರ :-** ಮಹನೀಯರೇ ! ಒಂದಿಷ್ಟು ಕೇಳಿಯಾದರೂ ತಿಳಿದುಕೊಳ್ಳಿರಿ ! ಜಡ ಪದಾರ್ಥದ ಅವಸ್ಥೆಯನ್ನು ಯಾವ ಜೀವನು ಮಾಡುವ ಸಾಧ್ಯತೆಯಿಲ್ಲ. ಎಲ್ಲಿಯವರೆಗೆ ಪೂರ್ಣ ವೀತರಾಗ ದಶೆಯು ಇರುವುದಿಲ್ಲ ಅಲ್ಲಿಯವರೆಗೆ ರಾಗವು ಬರುತ್ತದೆ. ಅದನ್ನು ವ್ಯವಹಾರ ಸಾಧನವೆಂದು ಹೇಳಲಾಗಿದೆ. ಯಾರಿಗೆ ದ್ರವ್ಯಸಾಧನವು ಪ್ರಕಟವಾಗಿದೆ ಅವರಿಗೆ ಹಾಗೆ ದ್ರವ್ಯದ ಆಶ್ರಯದಿಂದ ವೀತರಾಗತೆಯು ಪ್ರಕಟವಾಗಿದೆ ಅದು ನಿಶ್ಚಯವಿದೆ ಮತ್ತು ರಾಗವು ವ್ಯವಹಾರವಿದೆ. ವೀತರಾಗತೆಯು ಸಾಧ್ಯವಿದೆ ಮತ್ತು ರಾಗವು ವ್ಯವಹಾರದಿಂದ ಸಾಧನವಿದೆ. ಈ ಪ್ರಕಾರ ನಿಶ್ಚಯ ಮತ್ತು ವ್ಯವಹಾರದಲ್ಲಿ ಸಾಧ್ಯಸಾಧಕ ಭಾವವಿದೆ. ಅದರಲ್ಲಿ ನಿಶ್ಚಯವು ಸಾಧ್ಯವಿದೆ. ಮತ್ತು ವ್ಯವಹಾರವು ಸಾಧನವಿದೆ.

ಈಗ ದೃಷ್ಟಾಂತ ಕೊಡುತ್ತಾರೆ-ಯಾವ ಪ್ರಕಾರ ಚಿನ್ನವು ಸಾಧನವಿದೆ ಮತ್ತು ಆ ಚಿನ್ನವು ಯಾವ ಪಾಷಾಣದೊಳಗಿಂದ ಹೊರಡುತ್ತದೆ ಆ ಪಾಷಾಣವು ಸಾಧನವಿದೆ. ಯಾವ ಪಾಷಾಣದೊಳಗಿಂದ ಚಿನ್ನವು ಭಿನ್ನವಾಗುವ ಯೋಗ್ಯತೆಯಿದೆ ಆ ಪಾಷಾಣವನ್ನು ಸಾಧನವೆಂದು ಹೇಳಲಾಗುತ್ತದೆ. ಕುರುಡ ಪಾಷಾಣದೊಳಗಿಂದ ಚಿನ್ನವು ಹೊರಡುವ ಯೋಗ್ಯತೆಯಿರುವುದಿಲ್ಲ ಅದರ ಸಲುವಾಗಿ ಕುರುಡ ಪಾಷಾಣವನ್ನು ಸಾಧನವೆಂದು ಹೇಳಲಾಗುವುದಿಲ್ಲ. ಚಿನ್ನವು ಸ್ವಯಂ ತನ್ನ ಯೋಗ್ಯತೆಯಿಂದ ಹೊರಡುತ್ತದೆ, ಅದು ಪಾಷಾಣದ ಕಾರಣದಿಂದ ಹೊರಡುವುದಿಲ್ಲ, ಆದರೆ ಹೊರಟರೆ ಸಾಧನವೆಂದು ಹೇಳಲಾಗುತ್ತದೆ. ಹೊರಡದಿದ್ದರೆ ಸಾಧನವೆಂದು ಹೇಳಲಾಗುವುದಿಲ್ಲ.

ಅದೇ ಪ್ರಕಾರ ಆತ್ಮನು ಶುದ್ಧಚೈತನ್ಯಸ್ವರೂಪನಿದ್ದಾನೆಂಬ ದೃಷ್ಟಿಯನ್ನಂತೂ ಮಾಡಿಯಾಗಿದೆ. ಭಿನ್ನತೆ ಪಡೆಯುವ ಯೋಗ್ಯತೆಯು ಉಂಟಾಗಿದೆ. ಇಂಥ ಶುದ್ಧತೆಯನ್ನು ಚಿನ್ನದ ಸಮಾನವೆಂದು ಹೇಳಲಾಗಿದೆ, ಆದರೆ ಸರ್ವಥಾ ಭಿನ್ನವಾಗಿಹೋಗಿಲ್ಲ. ಅದರಿಂದ ರಾಗವಾಗುತ್ತದೆ. ಆ ರಾಗವನ್ನು ಪಾಷಾಣದ ಸಮಾನವೆಂದು ಹೇಳಿ ಸಾಧನವೆಂದು ಹೇಳಲಾಗಿದೆ. ರಾಗದೊಳಗಿಂದ ವೀತರಾಗತೆಯು ಆಗುವುದಿಲ್ಲ ರಾಗವು ಯಾವಾಗ ಸಾಧನವಾಗುವುದು ? ಯಾವ ಪ್ರಕಾರ ಚಿನ್ನವು ಹೊರಟರೆ ಪಾಷಾಣವನ್ನು ಸಾಧನವೆಂದು ಹೇಳಲಾಗುತ್ತದೆ. ಅದೇ ಪ್ರಕಾರ ನಾನು ವೀತರಾಗ ಸ್ವಭಾವಿಯಿದ್ದೇನೆ. ಚೈತನ್ಯಸ್ವಭಾವಿಯಿದ್ದೇನೆ ಮತ್ತು ರಾಗದಿಂದ ಭಿನ್ನವಾಗಲು ಯೋಗ್ಯನಿದ್ದೇನೆಂದು ಮನ್ನಿಸಿದರೆ ಅವನ

ಸಲುವಾಗಿ ಶುದ್ಧತೆಯು ಚಿನ್ನದ ಸಮಾನ ಸಾಧ್ಯವಿದೆ ಮತ್ತು ರಾಗವು ಪಾಷಾಣದ ಸಮಾನ ಸಾಧನವಿದೆ. ನಾನು ಅಖಂಡ ಜ್ಞಾಯಕ ಜ್ಯೋತಿಯಿದ್ದೇನೆ ಇತ್ಯಾದಿ ಪ್ರಕಾರದ ವಿಕಲ್ಪವುಂಟಾಗುವುದು ಸಾಧನವಿದೆ. ದ್ರವ್ಯದ ನಿಶ್ಚಯ ಸಾಧನವು ಪ್ರತೀತಿ ಮತ್ತು ಜ್ಞಾನವಿದೆ. ಅದಕ್ಕೆ ರಾಗವನ್ನು ಉಪಚಾರದಿಂದ ಸಾಧನವೆಂದು ಹೇಳಲಾಗುತ್ತದೆ. ಇಲ್ಲದಿದ್ದರೆ ರಾಗವನ್ನು ಉಪಚಾರ ಸಾಧನವೆಂದು ಕೂಡ ಹೇಳಲಾಗುವುದಿಲ್ಲ.

ಇಲ್ಲಿ ನಿಶ್ಚಯಮೋಕ್ಷಮಾರ್ಗ ಮತ್ತು ವ್ಯವಹಾರಮೋಕ್ಷಮಾರ್ಗದ ಮಾತನ್ನು ಹೇಳಿದ್ದಾರೆ. ಆತ್ಮನು ಶುದ್ಧಜ್ಞಾನ ಮತ್ತು ಆನಂದಸ್ವರೂಪನಿದ್ದಾನೆ. ಅವನಲ್ಲಿ ಶುದ್ಧತೆಯು ಪ್ರಕಟವಾಗುವುದು ನಿಶ್ಚಯವಿದೆ, ಎಷ್ಟು ರಾಗವು ಉಳಿದುಕೊಂಡಿದೆ ಅದು ವ್ಯವಹಾರ ಸಾಧನವಿದೆ. ನಿಜವಾಗಿಯಂತೂ ಜ್ಞಾಯಕಸ್ವಭಾವವು ಸಾಧ್ಯವಿದೆ ಮತ್ತು ಮೋಕ್ಷಮಾರ್ಗವು ಸಾಧನವಿದೆ, ಆದರೆ ಇಲ್ಲಿಯಂತೂ ಜ್ಞಾನಪ್ರಧಾನವಾದ ಕಥನವಿದೆ. ನಾನು ಜ್ಞಾತಾ-ದೃಷ್ಟಾ ಇದ್ದೇನೆಂಬ ಪ್ರತೀತಿಯು ಮತ್ತು ಅದರಲ್ಲಿ ರಮಣತೆಯಾಗುತ್ತದೆ ಆಗ ರಾಗವನ್ನು ನಿಮಿತ್ತರೂಪದ ಸಾಧನವೆಂದು ಹೇಳಲಾಗುತ್ತದೆ. ಯಾವ ಪ್ರಕಾರ ಚಿನ್ನವು ಸಾಧ್ಯವಿದೆ ಮತ್ತು ಚಿನ್ನದ ಪಾಷಾಣವು ಸಾಧನವಿದೆ. ಯಾವ ಚಿನ್ನವು ಭಿನ್ನತೆಯಾಗುವ ಯೋಗ್ಯತೆಯುಳ್ಳದ್ದಿದೆ ಆ ಚಿನ್ನವು ಸಾಧ್ಯವಿದೆ ಮತ್ತು ಪಾಷಾಣವು ಸಾಧನವಿದೆ. ವ್ಯವಹಾರದಿಂದ ಚಿನ್ನ ಮತ್ತು ಪಾಷಾಣವು ಒಂದಾಗಿ ಹೋಗಿವೆಯೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಜೀವ ಪುದ್ಗಲಾಶ್ರಿತ ವ್ಯವಹಾರವಿದೆ. ಆತ್ಮನು ಶರೀರ, ಕರ್ಮ ಮೊದಲಾದವುಗಳಿಂದ ಭಿನ್ನನಿದ್ದಾನೆಂಬ ಅರಿವು ಚಿನ್ನದ ಸಮಾನವಿದೆ ; ಆದರೆ ಪರ್ಯಾಯದಲ್ಲಿ ರಾಗದ ಯೋಗ್ಯತೆಯಿದೆ. ಅದರಲ್ಲಿ ಕರ್ಮದ ನಿಮಿತ್ತವಿದೆ. ಆದುದರಿಂದ ಪುದ್ಗಲದ ಆಶ್ರಯದಿಂದ ವ್ಯವಹಾರವಾಗುತ್ತದೆ. ಕೇವಲ ಒಂದು ಜೀವದ ಆಶ್ರಯದಿಂದ ವ್ಯವಹಾರವಾಗುವುದಿಲ್ಲ. ದೇವ-ಶಾಸ್ತ್ರ-ಗುರುಗಳ ಕುರಿತು ಶುಭರಾಗದ ಪರಿಣಾಮವು ಜೀವಪುದ್ಗಲದ ಆಶ್ರಿತವಾಗುತ್ತದೆ. ಏಕಾಕಿ ಶುದ್ಧ ಆನಂದ ಮೂರ್ತಿಯಾದ ಆತ್ಮನ ಆಶ್ರಯದಿಂದ ವೀತರಾಗೀ ದಶೆಯಾಗುವುದು ನಿಶ್ಚಯವಿದೆ. ಆ ಸಮಯದಲ್ಲಿ ಆರು ದ್ರವ್ಯಗಳ ಶ್ರದ್ಧೆ, ಶಾಸ್ತ್ರದ ಜ್ಞಾನ, ಇಪ್ಪತ್ತೆಂಟು ಮೂಲಗುಣಗಳು ಮೊದಲಾದವುಗಳ ಪಾಲನೆಯ ರಾಗವು ಜೀವ ಮತ್ತು ಕರ್ಮಾಶ್ರಿತವಾಗಿ ಆಗಿರುವುದರಿಂದ ಆ ರಾಗವನ್ನು ವ್ಯವಹಾರವೆಂದು ಹೇಳಲಾಗಿದೆ.

ವಸ್ತುಸ್ವಭಾವದ ಆಶ್ರಯದಿಂದ ಯಾವ ವೀತರಾಗತೆಯು ಪ್ರಕಟವಾಗುತ್ತದೆ ಅದು ನಿಜವಾದ ಮೋಕ್ಷಮಾರ್ಗವಿದೆ ಮತ್ತು ಎಲ್ಲಿಯವರೆಗೆ ಪೂರ್ಣದಶೆಯಾಗುವುದಿಲ್ಲ ಅಲ್ಲಿಯವರೆಗೆ ಮುನಿರಾಜರಿಗೆ ಯಾವ ಶುಭರಾಗವಾಗುತ್ತದೆ ಅದು ವ್ಯವಹಾರವಿದೆ, ವ್ಯವಹಾರಮೋಕ್ಷಮಾರ್ಗವಿದೆ. ರಾಗವು ಕರ್ಮದ ಆಶ್ರಯದಿಂದ ಆಗುತ್ತದೆ ಮತ್ತು ವೀತರಾಗತೆಯು ಜೀವದ ಆಶ್ರಯದಿಂದ ಆಗುತ್ತದೆ.

ಚಿನ್ನವು ಯಾವ ಪಾಷಾಣದೊಳಗಿಂದ ಹೊರಬಂದಿದೆ ಮತ್ತು ಯಾವುದಕ್ಕೆ ಪಾಷಾಣದ ಜತೆಯಲ್ಲಿ ಸಂಬಂಧವು ಉಳಿದಿಲ್ಲ ಅದು ನಿಜವಾದ ಚಿನ್ನವಿದೆ. ಅದರಂತೆ ಇಲ್ಲಿ ಕರ್ಮವು ಪಾಷಾಣದ ಹಾಗೆ ಇದೆ. ಆಂತರ್ಯದಲ್ಲಿ ಎಂಟು ಕರ್ಮಗಳು ಸೂಕ್ಷ್ಮ ಪಾಷಾಣದ ಸಮಾನವಿವೆ. ಆತ್ಮನು ಧ್ರುವ ಆನಂದಕಂದ ಚಿನ್ನದ ಸಮಾನನಿದ್ದಾನೆ. ಶುದ್ಧ ಜ್ಞಾನಾನಂದದ ಪ್ರತೀತಿ ಮಾಡಿ ಕ್ರೀಡೆ ಮಾಡುವುದು ಒಂದು ನಿರ್ಮಲ ಚಿನ್ನದ ಹಾಗೆ ನಿಜವಾದ ಮೋಕ್ಷಮಾರ್ಗವಿದೆ, ಆದರೆ ಎಲ್ಲಿಯವರೆಗೆ ವೀತರಾಗತೆ ಪ್ರಕಟವಾಗುವುದಿಲ್ಲ ಅಲ್ಲಿಯವರೆಗೆ ವೀತರಾಗವೆಂದು ಹೇಳಿಲ್ಲ. ಶುಭರಾಗಕ್ಕೆ ಕರ್ಮರೂಪದ ಪಾಷಾಣದ ಜತೆಯಲ್ಲಿ ಸಂಬಂಧವಿರುವುದರಿಂದ ರಾಗವನ್ನು ವ್ಯವಹಾರವೆಂದು ಹೇಳಿದೆ.

ಚಿದಾನಂದಸ್ವರೂಪನಿರುವ ಭಗವಾನ ಆತ್ಮನು ಕರ್ಮದ ಗಣಿಯಲ್ಲಿ ಅನಾದಿಯಿಂದ ಏಕಕ್ಷೇತ್ರದಲ್ಲಿದ್ದಾನೆ. ಈಗ ಕರ್ಮದಿಂದ ಮತ್ತು ರಾಗದಿಂದ ಭಿನ್ನನಿದ್ದಾನೆಂದು ಜ್ಞಾನ ಮಾಡಿಕೊಂಡರೆ ಅವನಿಗೆ ನಿಜವಾದ ಮೋಕ್ಷಮಾರ್ಗವು ಪ್ರಕಟವಾಗಿದೆ. ನಾನು ಜ್ಞಾಯಕನಿದ್ದೇನೆ. ದೇಹ, ಮನಸ್ಸು, ವಾಣಿ, ಕರ್ಮ ಮತ್ತು ರಾಗದಿಂದ ಭಿನ್ನನಿದ್ದೇನೆಂದು

ನಿರ್ಣಯ ಮಾಡಿದರೆ ಅವನಿಗೆ ರಾಗವು ಸಾಧನವಿದೆ, ನಿಮಿತ್ತವಿದೆ. ಎಂದರೆ ಆ ರಾಗವು ಕುದೇವ, ಕುಶಾಸ್ತ್ರ ಕುಗುರುಗಳ ನಿರಾಕರಣೆ ಮಾಡುತ್ತದೆ ಮತ್ತು ನಿಜವಾದ ದೇವ, ಶಾಸ್ತ್ರ ಗುರುಗಳ ನಿರ್ಣಯ ಮಾಡುತ್ತದೆ. ಆದುದರಿಂದ ಅದನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಆತ್ಮನ ಆಂತರ್ಯದಲ್ಲಿ ಶುದ್ಧತೆಯು ಪ್ರಕಟವಾಗುವುದರ ಅಥವಾ ವರ್ಧಿಸುವುದರ ಕಾರಣವು ನಿಮಿತ್ತ, ರಾಗ ಅಥವಾ ಪರ್ಯಾಯವಲ್ಲ. ಶುದ್ಧ ಉಪಾದಾನದ-ವಸ್ತುವಿನ ಆಶ್ರಯದಿಂದ ಯಾವನಿಗೆ ವೀತರಾಗತೆಯು ಪ್ರಕಟವಾಗಿದೆ ಅವನಿಗೆ ರಾಗವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಅನೇಕಾಂತವಾದದ ಶ್ರದ್ಧೆಯಿರುವಂಥ ಜೀವನು ನಿಶ್ಚಯ-ವ್ಯವಹಾರರೂಪವಿರುವ ಎರಡೂ ಮೋಕ್ಷ ಮಾರ್ಗವನ್ನು ಗ್ರಹಣ ಮಾಡಿರುತ್ತಾನೆ. ಎಂದರೆ ನಿಶ್ಚಯವನ್ನು ಗ್ರಹಣ ಮಾಡಿದ್ದಾನೆ ಮತ್ತು ವ್ಯವಹಾರ ಮೋಕ್ಷಮಾರ್ಗ ಎಂದರೆ ಯಾವ ರಾಗವು ಬರುತ್ತದೆ ಅದನ್ನು ತಿಳಿದುಕೊಳ್ಳುತ್ತಾನೆ. ಓರ್ವನು ನನಗೆ ನಿಶ್ಚಯವು ಪ್ರಕಟವಾಗಿ ಹೋಗಿದೆಯೆಂದು ಹೇಳುತ್ತಾನೆ, ನಾನು ಮುನಿಯಾಗಿದ್ದೇನೆ, ನನಗೆ ಆತ್ಮನ ಅರಿವು ಉಂಟಾಗಿದೆ-ಅನುಭೂತಿಯಾಗಿದೆ, ಅದರಿಂದ ನನಗೆ ರಾಗವು ಬರುವುದಿಲ್ಲ. ಭಗವಂತರು ಹೇಳಿರುವ ಆರು ದ್ರವ್ಯಗಳ ವಿಚಾರವು ಬರುವುದಿಲ್ಲ. ಮಾತನಾಡುವ ಸಮಯದಲ್ಲಿ ರಾಗವಿರುತ್ತಿದ್ದರೂ ಕೂಡ ರಾಗವಿಲ್ಲವೆಂದು ಹೇಳುತ್ತಾನೆ. ಸರ್ವಜ್ಞದೇವರು ಹೇಳಿರುವ ಪಂಚಮಹಾವ್ರತಾದಿಗಳ ಪರಿಣಾಮವು ಬರುವುದೇ ಇಲ್ಲ, ನಮಗಂತೂ ಶುದ್ಧ ಚಿದಾನಂದ ಸ್ವರೂಪವಿದೆ. ಕೇವಲ ಅಲಿಪ್ತವಾಗಿಯೇ ಉಳಿದುಕೊಂಡಿದ್ದೇನೆಂದು ಹೇಳಿದರೆ ಅವನು ಮುನಿಯಿಲ್ಲ. ಏಕಾಂತವಾದಿಯಿದ್ದಾನೆ. ನಿಶ್ಚಯಾಭಾಸಿಯಿದ್ದಾನೆ. ಬೇರೆ ಜೀವನು ಹೇಳುವುದೇನೆಂದರೆ ಪಂಚಮಹಾವ್ರತಾದಿಗಳ ಪರಿಣಾಮ ಅಥವಾ ಪೂಜೆ, ಭಕ್ತಿ ಮೊದಲಾದವುಗಳ ಪರಿಣಾಮವು ಭೂಮಿಕೆಗೆ ಯೋಗ್ಯವಾಗಿ ಬರುತ್ತದೆ ಅದು ನಮ್ಮನ್ನು ಬದುಕಿಸುತ್ತದೆ. ಕಷಾಯದ ಮಂದತೆಯಿಂದ ಧರ್ಮಪಡೆಯುತ್ತೇನೆನ್ನುವಂಥ ಜೀವನು ಪುಣ್ಯದಿಂದ ಧರ್ಮವನ್ನು ಮನ್ನಿಸುತ್ತಾನೆ ಅವನಿಗೆ ಏಕಾಂತ ವ್ಯವಹಾರದ ಪಕ್ಷವಿರುವುದರಿಂದ ಅವನು ವ್ಯವಹಾರಾಭಾಸಿಯಿದ್ದಾನೆ. ಹೀಗೆ ಎರಡೂ ಅಭಿಪ್ರಾಯಗಳು ಅಸತ್ಯವಿವೆ.

ಆತ್ಮನಲ್ಲಿ ಶುದ್ಧತೆಯು ಅಥವಾ ಧರ್ಮವು ದ್ರವ್ಯದ ಆಶ್ರಯದಿಂದಲೇ ಪ್ರಕಟವಾಗುತ್ತದೆ. ಆದಾಗ್ಯೂ ರಾಗವುಳ್ಳ ದಶೆಯಲ್ಲಿ ಭೂಮಿಕೆಯ ಅನುಸಾರ ಯಾವ ಪ್ರಕಾರದ ರಾಗವು ಬರುತ್ತದೆ ಅದನ್ನು ತಿಳಿದುಕೊಳ್ಳಬೇಕಾಗುವುದು. ರಾಗವನ್ನು ತಿಳಿದುಕೊಳ್ಳುವುದು ವ್ಯವಹಾರವಿರುವುದರಿಂದ ವ್ಯವಹಾರದಿಂದ ಗ್ರಹಣ ಮಾಡಿದೆಯೆಂದು ಹೇಳಲಾಗುತ್ತದೆ.

ಇತ್ತೀಚಿನ ದಿವಸಗಳಲ್ಲಿಯಂತೂ ಜೈನರಾಗಿದ್ದರೂ ಕೂಡ ಅದೆಷ್ಟೋ ಜೈನರಿಗೆ ವ್ಯವಹಾರದ ಅರಿವು ಕೂಡ ಇರುವುದಿಲ್ಲ. ಯಾವ ಜೀವನು ಪಂಚ ಅಸ್ತಿಕಾಯಗಳನ್ನು, ಆರು ದ್ರವ್ಯಗಳನ್ನು, ಏಳು ತತ್ತ್ವಗಳನ್ನು ಮತ್ತು ಒಂಭತ್ತು ಪದಾರ್ಥಗಳನ್ನು ಮನ್ನಿಸುವುದಿಲ್ಲ ಅವನಿಗೆ ವ್ಯವಹಾರದ್ದೂ ಕೂಡ ನಾಮ ನಿಶಾನವಿಲ್ಲ ಅವನಂತೂ ಮಿಥ್ಯಾದೃಷ್ಟಿಯೇ ಇದ್ದಾನೆ. ಇಲ್ಲಿಯಂತೂ ಹೇಳುತ್ತಿರುವುದೇನೆಂದರೆ-ಸರ್ವಜ್ಞದೇವರು ಹೇಳುವ ತತ್ತ್ವಗಳನ್ನು ಸ್ವೀಕರಿಸುವುದು ಮತ್ತು ಅವುಗಳೊಳಗಿಂದ ತಮ್ಮ ಆತ್ಮನ ಆಶ್ರಯದಿಂದ ಅನುಭೂತಿಯು ಪ್ರಕಟವಾಗುತ್ತದೆಯೆಂದು ಮನ್ನಿಸುವುದು ನಿಶ್ಚಯವಿದೆ, ಆದರೆ ಎಲ್ಲಿಯವರೆಗೆ ಪೂರ್ಣತೆಯಾಗುವುದಿಲ್ಲ ಅಲ್ಲಿಯವರೆಗೆ ದೇವ, ಶಾಸ್ತ್ರ ಗುರುಗಳ ಕುರಿತು ಪ್ರಶಸ್ತರಾಗವು ಬಂದಲ್ಲದೆ ಇರುವುದಿಲ್ಲ.

ನಿಶ್ಚಯ ಮತ್ತು ವ್ಯವಹಾರ ಇವೆರಡು ನಯಗಳ ಆಧೀನ ಧರ್ಮತೀರ್ಥದ ಪ್ರವೃತ್ತಿಯಿದೆಯೆಂದು ತಿಳಿಯುವುದು. ಕೇವಲೀ ಭಗವಂತರಿಗೆ ರಾಗವಿಲ್ಲ ಅದಕ್ಕಾಗಿ ಧರ್ಮತೀರ್ಥದ ಪ್ರವೃತ್ತಿಯಿರುವುದಿಲ್ಲ ಮತ್ತು ಅಜ್ಞಾನಿಗೆ ಆತ್ಮನ ಜ್ಞಾನವಿಲ್ಲದಿರುವುದರಿಂದ ಅವನಿಗೆ ಕೂಡ ಇರುವುದಿಲ್ಲ. ಜ್ಞಾನಿಗೆ ನಾಲ್ಕು,ಐದು, ಆರನೆಯ ಗುಣಸ್ಥಾನದಲ್ಲಿ

ರಾಗವಿರುವುದರಿಂದ ಅಲ್ಲಿ ಧರ್ಮತೀರ್ಥದ ಪ್ರವೃತ್ತಿಯಿದೆಯೆಂದು ತಿಳಿಯುವುದು. ಸ್ವಭಾವದಲ್ಲಿ ಸ್ಥಿರವಿರುವುದಿಲ್ಲ ಆಗ ಕರ್ಮದ ಅವಲಂಬನದಿಂದಾದ ಉಪಾಧಿ ಭಾವವಿದೆ. ನಿಶ್ಚಯ ಮತ್ತು ವ್ಯವಹಾರವೆರಡೂ ನಯ ತಿಳಿಯುವುದು. ಒಂದು ವ್ಯವಹಾರದಿಂದ ಧರ್ಮ ಮನ್ನಿಸಿದರೆ ಅವನು ಮೂಢನಿದ್ದಾನೆ. ನಾಲ್ಕನೆಯ ಗುಣಸ್ಥಾನದಲ್ಲಿ ದೇವ, ಶಾಸ್ತ್ರ ಗುರುಗಳ ಭಕ್ತಿಯ ಸ್ಥಾನವಿರುವುದಿಲ್ಲ ಐದನೆಯ ಗುಣಸ್ಥಾನದಲ್ಲಿ ಹನ್ನೆರಡು ವ್ರತಗಳ ಪತ್ತೆಯಿರುವುದಿಲ್ಲ ಮತ್ತು ಮುನಿಗೆ ಆರನೆಯ ಗುಣಸ್ಥಾನದಲ್ಲಿ ಇಪ್ಪತ್ತೆಂಟು ಮೂಲಗುಣಗಳ ಪಾಲನೆಯ ಪರಿವೆಯಿರದಿದ್ದರೆ ಅವನು ನಿಶ್ಚಯ ವ್ಯವಹಾರವೆರಡನ್ನೂ ತಿಳಿಯುವುದಿಲ್ಲ, ಆದರೆ ಎರಡೂ ನಯಗಳಿಂದ ಯಥಾಯೋಗ್ಯಸ್ಥಾನದಲ್ಲಿ ಧರ್ಮತೀರ್ಥದ ಪ್ರವೃತ್ತಿಯನ್ನು ತಿಳಿಯುವುದು.

ಈಗ ನಿಶ್ಚಯ ಮೋಕ್ಷಮಾರ್ಗದ ಸಾಧನರೂಪವಿರುವ ವ್ಯವಹಾರ ಮೋಕ್ಷಮಾರ್ಗದ ಸ್ವರೂಪವನ್ನು ಹೇಳುತ್ತಾರೆ -

**ಧಮ್ಮಾದೀಸದ್ದಹಣಂ ಸಮ್ಮತ್ತಂ ಣಾಣಮಂಗಪುವ್ವಗದಂ ।**
**ಚೇಟ್ಠಾ ತವಮ್ಹಿಚರಿಯಾ ವವಹಾರೋ ಮೋಕ್ಖಮಗ್ಗೋ ತ್ತಿ ॥೧೬೦॥**

**ಧರ್ಮಾದಿಗಳ ಶ್ರದ್ಧೆ ಸಮ್ಯಕ್ತ್ವ ಅಂಗಪೂರ್ವ ಸಂಬಂಧಜ್ಞಾನವದು ಜ್ಞಾನವಿದ್ದು ।**
**ಕೂರ್ಮೆಯಿಂ ತಪಪ್ರವೃತ್ತಿ ಚಾರಿತ್ರವಿದೆ ಹೀಗೆ ವ್ಯವಹಾರ ಮೋಕ್ಷಮಾರ್ಗವಿದೆ ॥೧೬೦॥**

ಇದು ವ್ಯವಹಾರ ಮೋಕ್ಷಮಾರ್ಗದ ವ್ಯಾಖ್ಯಾನವಿದೆ. ಭಗವಂತರು ಆರು ದ್ರವ್ಯಗಳನ್ನು ನೋಡಿದ್ದಾರೆ ಮತ್ತು ಹೇಳಿದ್ದಾರೆ. ಧರ್ಮಾತ್ಮ ಜೀವನು ಆತ್ಮನ ಆಶ್ರಯದಿಂದ ಶ್ರದ್ಧೆ-ಜ್ಞಾನ ಪ್ರಕಟಿಸಿಕೊಂಡಿದ್ದಾನೆ ಅವನಿಗೆ ರಾಗರಹಿತವಾದ ಪ್ರತೀತಿಯಿರುವುದು. ಜೀವ ಮೊದಲಾದ ಆರು ದ್ರವ್ಯಗಳ ಪ್ರತೀತಿಯು ವ್ಯವಹಾರ ಸಮ್ಯಕ್ತ್ವವಿದೆ, ಅದು ಶುಭರಾಗವಿದೆ. ಪುಣ್ಯಬಂಧದ ಕಾರಣವಿದೆ ಮತ್ತು ನವತತ್ತ್ವದ ಪ್ರತೀತಿಯಿರಬೇಕಾಗುವುದು. ಆ ಒಂಭತ್ತನ್ನು ಮನ್ನಿಸದವನು ಮೂಢನಿದ್ದಾನೆ. ಚೇತನಸ್ವರೂಪನಾದ ಆತ್ಮನು ಕರ್ಮ ಮತ್ತು ರಾಗದಿಂದ ಮುಕ್ತನಿದ್ದಾನೆಂಬ ದೃಷ್ಟಿಯಾದವನಿಗೆ ನವತತ್ತ್ವದ ಶ್ರದ್ಧೆಯು ವ್ಯವಹಾರ ನಾಮ ಪಡೆಯುತ್ತದೆ, ಇತರರಿಗೆ ಇಲ್ಲ.

ಭಗವಂತರು ಎರಡು ನಯ ಹೇಳಿದ್ದಾರೆ. ಎರಡೂ ನಯಗಳು ಯಾವಾಗ ಯಥಾರ್ಥವಾಗುತ್ತವೆಂದರೆ ತನ್ನ ಶುದ್ಧ ಆತ್ಮನು ಆದರಣೀಯನಿದ್ದಾನೆಂದು ಮನ್ನಿಸುವುದು ಮತ್ತು ವ್ಯವಹಾರನಯದ ವಿಷಯವು ತಿಳಿಯಲು ಯೋಗ್ಯವಿದೆಯೆಂದು ಮನ್ನಿಸುವವನಿಗೆ ವಸ್ತುವಿನ ಆಶ್ರಯದಿಂದ ವೀತರಾಗತೆಯು ಪ್ರಕಟವಾಗುತ್ತದೆ. ಅವನಿಗಿರುವ ಶುಭರಾಗವನ್ನು ವ್ಯವಹಾರವೆಂದು ಹೇಳಲಾಗುತ್ತದೆ.

ಭಗವಂತರ ದಿವ್ಯಧ್ವನಿಯಲ್ಲಿ ಬಂದಿರುವ ಹನ್ನೆರಡು ಅಂಗಗಳ ಜ್ಞಾನವನ್ನು ವ್ಯವಹಾರರೂಪ ಸಮ್ಯಗ್ಜ್ಞಾನವೆಂದು ಹೇಳಲಾಗಿದೆ. ಈಗ ಅದೆಷ್ಟೋ ಜನರು ಹನ್ನೊಂದು ಅಂಗಗಳು ಉಪಸ್ಥಿತವಿದೆಯೆಂದು ಹೇಳುತ್ತಾರೆ, ಆದರೆ ಆ ಮಾತು ಸತ್ಯವಲ್ಲ. ಅಂಗಗಳಂತೂ ವಿಚ್ಛೇದವಾಗಿ ಹೋಗಿವೆ. ಆದರೆ ಅಂಗದ ಅಲ್ಪ ಅಂಶದ ಜ್ಞಾನವು ಧರಸೇನಾಚಾರ್ಯರಿಗಿತ್ತು. ಅದರಿಂದ ಷಟ್ಖಂಡಾಗಮಾದಿ ಶಾಸ್ತ್ರಗಳ ರಚನೆಯಾಗಿದೆ ಮತ್ತು ಭ. ಕುಂದಕುಂದಾಚಾರ್ಯದೇವರು ಸಮಯಸಾರಾದಿಗಳ ರಚನೆ ಮಾಡಿದ್ದಾರೆ. ಅವುಗಳಲ್ಲಿ ಅಂಗಗಳ ಅಂಶವು ಉಳಿದುಕೊಂಡಿದೆ. ಆತ್ಮನ ಆಶ್ರಯದಿಂದ ಪ್ರಕಟವಾಗುವುದು ನಿಶ್ಚಯ ಸಮ್ಯಗ್ಜ್ಞಾನವಿದೆ. ಆ ಸಮಯದಲ್ಲಿ ಸಂತ ಮುನಿಗಳಿಗೆ ಯಾವ ರಾಗರಹಿತ ಜ್ಞಾನವು ಪ್ರವರ್ತಿಸುತ್ತಿರುತ್ತದೆ ಅದು ವ್ಯವಹಾರ ಜ್ಞಾನವಿದೆ, ಅದು ಪುಣ್ಯಬಂಧದ ಕಾರಣವಿದೆ.

ಈಗ ವ್ಯವಹಾರದ ಚಾರಿತ್ರದ ಮಾತು ಹೇಳುತ್ತಾರೆ-ಹನ್ನೆರಡು ಪ್ರಕಾರದ ತಪ ಹಾಗೂ ಹದಿಮೂರು ಪ್ರಕಾರದ ಚಾರಿತ್ರ ಇವೆಲ್ಲವು ಶುಭರಾಗವಿದೆ, ವ್ಯವಹಾರ ಚಾರಿತ್ರವಿದೆ. ಪಂಚಮಹಾವ್ರತ, ಐದು ಸಮಿತಿ, ಮೂರು ಗುಪ್ತಿ ಈ ಹದಿಮೂರು ಪ್ರಕಾರದ ಚಾರಿತ್ರವು ಶುಭರಾಗವಿದೆ. ಅದರಲ್ಲಿ ವೃತ್ತಿಯ ಉತ್ಥಾನವಿದೆ. ಅಶುಭದಿಂದ ತಪ್ಪಿಸುವ ಶುಭ ವಿಕಲ್ಪವು ಮುನಿಗಳಿಗೆ ಬರುತ್ತದೆ. ಪೂರ್ಣ ವೀತರಾಗದಶೆಯು ಆಗಿಲ್ಲ. ಅಲ್ಲಿಯವರೆಗೆ ರಾಗವು ಬಂದಲ್ಲದೆ ಇರುವುದಿಲ್ಲ. ಈ ಪ್ರಕಾರದಿಂದ ಆರು ದ್ರವ್ಯಗಳ ಪ್ರತೀತಿಯ ರಾಗವು ದಿವ್ಯಧ್ವನಿಯ ಅನುಸಾರ ರಾಗರಹಿತವಾಗಿ ಪ್ರವರ್ತಿಸುವ ಜ್ಞಾನ ಮತ್ತು ಮಹಾವ್ರತ ಮೊದಲಾದುವನ್ನು ಪಾಲಿಸುವ ರಾಗವು ವ್ಯವಹಾರ ಮೋಕ್ಷಮಾರ್ಗವಿದೆ. ಅದೇನು ನಿಜವಾದ ಮೋಕ್ಷಮಾರ್ಗವಲ್ಲ.

ಮೋಕ್ಷಮಾರ್ಗಗಳು ಎರಡಿಲ್ಲ, ಮೋಕ್ಷಮಾರ್ಗವು ಒಂದೇ ಇದೆ. ಆದರೆ ಅದರ ಕಥನವು ಎರಡು ಪ್ರಕಾರದಿಂದಿದೆಯೆಂದು ಪಂ. ಟೋಡರಮಲ್ಲರು ಮೋಕ್ಷಮಾರ್ಗ ಪ್ರಕಾಶಕದಲ್ಲಿ ಹೇಳಿದ್ದಾರೆ. ಶುದ್ಧ ಆತ್ಮನ ಆಶ್ರಯದಿಂದ ಪ್ರಕಟಿಸುವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ನಿಜವಾದ ಮೋಕ್ಷಮಾರ್ಗವಿದೆ ಮತ್ತು ರಾಗದ ಸಮಯದಲ್ಲಿ ಒಂಭತ್ತು ತತ್ತ್ವಗಳ, ಆರು ದ್ರವ್ಯಗಳ, ಮಹಾವ್ರತಾದಿಗಳನ್ನು ಪಾಲನೆ ಮಾಡುವ ಯಾವ ವಿಕಲ್ಪವು ಉತ್ಪನ್ನವಾಗುವುದು ಅದು ವ್ಯವಹಾರ ಮೋಕ್ಷಮಾರ್ಗವಿದೆ.

ಪ್ರದ್ಯುಮ್ನನು ಎಷ್ಟೋ ವರ್ಷದ ನಂತರ ದೊರಕುವುದರಿಂದ ಅವನ ತಾಯಿಯ ಪ್ರೀತಿಯು ಉಕ್ಕಿ ಬಂದು ಅವಳ ಎದೆಯಿಂದ ಹಾಲು ಸುರಿಯಿತು. ಅದೇ ಪ್ರಕಾರ ಧರ್ಮಾತ್ಮ ಜೀವನು ಶುದ್ಧ ಚೈತನ್ಯ ಸ್ವಭಾವದ ಪ್ರತೀತಿ ಪೂರ್ವಕ ಸ್ವಜ್ಞೇಯದ ಅನುಭವ ಮಾಡುತ್ತಾನೆ. ಆಗ ತನ್ನನ್ನು ತಿಳಿಸಿಕೊಡುವಂಥ ನಿಜವಾದ ದೇವ-ಶಾಸ್ತ್ರ-ಗುರುಗಳ ಕುರಿತು ಅವನಿಗೆ ಪ್ರಮೋದ ಬಂದಲ್ಲದೆ ಇರುವುದಿಲ್ಲ. ವ್ಯವಹಾರವಿಲ್ಲವೆಂದು ಹೇಳಿದೆ, ಆದರೆ ಇಲ್ಲವೆಂದರೆ ನಡೆಯುವುದಿಲ್ಲ. ಅವನು ಕೇವಲ ನಿಶ್ಚಯಾಭಾಸಿಯಿದ್ದಾನೆ. ಯಾವನು ವ್ಯವಹಾರವನ್ನು ಒಪ್ಪುತ್ತಾನೆ, ಆದರೆ ವ್ಯವಹಾರದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಾನೆ ಅವನು ನಿಶ್ಚಯವನ್ನು ಮನ್ನಿಸಿಯೇ ಇಲ್ಲ. ಹೀಗೆಯೂ ಕೂಡ ನಡೆಯವುದಿಲ್ಲ. ಅವನು ವ್ಯವಹಾರಾಭಾಸಿಯಿದ್ದಾನೆ.

ಇಲ್ಲಿ ವ್ಯವಹಾರವು ಹೇಗಿರುತ್ತದೆ ಅದನ್ನು ತಿಳಿಸುತ್ತಾರೆ. ವಸ್ತುಕೊಳ್ಳಲು ಹೋದರೆ ಕೈಚೀಲ ಬೇಕಾಗುವುದು. ವಸ್ತುವು ಚೀಲವಲ್ಲ. ಧಾನ್ಯದ ಮೊಟೆಯು ಧಾನ್ಯದ ಹಾಗೆ ಕೆಲಸಕ್ಕೆ ಬರುವುದಿಲ್ಲ. ಆತ್ಮನು ಶುದ್ಧ ಚೈತನ್ಯ ಸ್ವರೂಪನಿದ್ದಾನೆ ಅವನು ಅನುಭವಿಸುವಂಥವನಿದ್ದಾನೆ ಅವನು ಧಾನ್ಯದ ಸಮಾನನಿದ್ದಾನೆ ಮಧ್ಯದಲ್ಲಿ ರಾಗ ಬರುವುದು ಮೊಟೆಯ ಸಮಾನವಿದೆ, ಚೈತನ್ಯದ ಅವಲಂಬನದಿಂದ ಅವಿಕಾರೀ ದಶೆಯು ಪ್ರಕಟವಾಗುತ್ತದೆ ಅದು ಅನುಭವ ಮಾಡುವ ಸಲುವಾಗಿ ಆಹಾರವಿದೆ, ಆದರೆ ರಾಗವು ವರ್ತಿಸುತ್ತದೆ ಅದು ಶಾಂತ ಅನುಭವದ ಸಲುವಾಗಿ ಆಹಾರವಿಲ್ಲ. ಮೊಟೆಯ ಬೆಲೆ ವಸ್ತುವಿನಷ್ಟು ಇರುವುದಿಲ್ಲ. ಅದರಂತೆ ಮೊಟೆಯು ವಸ್ತುವಿನ ಬದಲಾವಣೆಯಲ್ಲಿ ಸಹಾಯಕವಾಗುವುದಿಲ್ಲ. ಅದರಂತೆ ವ್ಯವಹಾರ ಮೋಕ್ಷಮಾರ್ಗವು ಶುದ್ಧ ಚೈತನ್ಯ ದ್ರವ್ಯದಲ್ಲಿ ವೀತರಾಗತೆ ಪ್ರಕಟಪಡಿಸುವ ಸಲುವಾಗಿ ಸ್ವಲ್ಪವೂ ಕೂಡ ಸಹಾಯಕವಾಗುವುದಿಲ್ಲ. ವ್ಯವಹಾರದ ಯಾವ ವಿಕಲ್ಪವುಂಟಾಗುತ್ತದೆ ಅದರದು ಅಖಂಡ ಜ್ಞಾಯಕ ಸ್ವಭಾವದಲ್ಲಿ ನಿಶ್ಚಯ ದೃಷ್ಟಿಯಿಂದ ಅಭಾವವು ವರ್ತಿಸುತ್ತದೆ. ಅದಕ್ಕಾಗಿ ಹೇಗೆ ಇದೆ ಹಾಗೆ ತಿಳಿದುಕೊಳ್ಳಬೇಕಾಗುವುದು.

**ಜ್ಯಾಂ ಜ್ಯಾಂ ಜೇ ಜೇ ಯೋಗ್ಯ ಛೇ ತಹಾಂ ಸಮಜವು ತೇಹ ।**
**ತ್ಯಾಂ ತ್ಯಾಂ ತೇ ತೇ ಆಚರೇ ಆತ್ಮಾರ್ಥೀ ಜನ ಏಹ ॥**

ನಮಗೆ ರಾಗವುಳ್ಳ ಭೂಮಿಕೆಯಿದ್ದರೂ ಕೂಡ ನಿಜವಾದ ದೇವ-ಶಾಸ್ತ್ರ-ಗುರುಗಳು ಹಾಗೂ ಅವರ ಪ್ರತಿಮೆ ಮೊದಲಾದವುಗಳ ಕುರಿತು ಉಲ್ಲಾಸವೇ ಬರುವುದಿಲ್ಲವೆಂದು ಯಾರು ಹೇಳುತ್ತಾರೆ ಅವರು ಮೂಢರಿದ್ದಾರೆ ಮತ್ತು ಆ ರಾಗವು ಬಿಡುವುದರಿಂದ ಧರ್ಮವಾಗುತ್ತದೆಯೆಂದು ಮನ್ನಿಸಿದರೆ ಅವರು ಕೂಡ ಮೂಢರಿದ್ದಾರೆ. ಹೀಗೆ ಎರಡು ನಯಗಳ ಆಧೀನವಾಗಿ ಧರ್ಮತೀರ್ಥದ ಪ್ರವೃತ್ತಿಯಿದೆ. ಈ ಪ್ರಕಾರ ವ್ಯವಹಾರ ಮೋಕ್ಷಮಾರ್ಗದ ಸ್ವರೂಪವನ್ನು ಹೇಳಲಾಯಿತು.

**ಭಾವಾರ್ಥ :-** ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕತೆಯು ಮೋಕ್ಷಮಾರ್ಗವಿದೆ. ಮೋಕ್ಷ ಎಂದರೆ ಪರಮ ಚಾರಿತ್ರದಶೆಯಿದೆ, ಅದರ ಕಾರಣವು ಮೋಕ್ಷಮಾರ್ಗವಿದೆ. ಆತ್ಮನು ಅನಂತ ಗುಣಗಳ ಪಿಂಡನಿದ್ದಾನೆ. ಅಖಂಡತತ್ತ್ವದ ಪ್ರತೀತಿ, ಅಂತರಸ್ವರೂಪದ ಜ್ಞಾನ ಮತ್ತು ಲೀನತೆಯು ಹೀಗೆ-ಮೂರರ ಏಕತೆಯು ಮೋಕ್ಷಮಾರ್ಗವಿದೆ. ಎಲ್ಲಿಯವರೆಗೆ ಪೂರ್ಣ ಏಕತೆಯು ಇರುವುದಿಲ್ಲ ಅಲ್ಲಿಯವರೆಗೆ ಶುಭವಿಕಲ್ಪಗಳಿರುತ್ತವೆ. ಅದನ್ನು ವ್ಯವಹಾರ ಮೋಕ್ಷಮಾರ್ಗವೆಂದು ಹೇಳುವುದರಲ್ಲಿ ಬರುತ್ತದೆ. ನಿಶ್ಚಯ ಮತ್ತು ವ್ಯವಹಾರವನ್ನು ನಿಮಿತ್ತ-ನೈಮಿತ್ತಿಕ ಸಂಬಂಧವೆಂದು ಹೇಳಲಾಗುತ್ತದೆ. ಆತ್ಮನ ಸ್ವಭಾವದಲ್ಲಿ ಏಕಾಗ್ರತೆಯಾಗುವುದು ನೈಮಿತ್ತಿಕದ ಕಾರ್ಯವಿದೆ. ಅದರಲ್ಲಿ ವ್ಯವಹಾರದ ನಿಮಿತ್ತತನವಿರುತ್ತದೆ. ಎಲ್ಲಿಯವರೆಗೆ ಸ್ವಭಾವದಲ್ಲಿ ಸ್ಥಿರಗೊಳ್ಳುವ ಸಾಧ್ಯತೆಯಾಗುವುದಿಲ್ಲ ಅಲ್ಲಿಯವರೆಗೆ ವಿಕಲ್ಪಗಳು ಬರುತ್ತವೆ. ಐದು ಅಸ್ತಿಕಾಯ, ಆರು ದ್ರವ್ಯ, ಏಳುತತ್ತ್ವಗಳು, ನವಪದಾರ್ಥಗಳನ್ನು ಹೇಗೆ ಇವೆ ಹಾಗೆ ತಿಳಿದುಕೊಳ್ಳಬೇಕಾಗುವುದು. ಅವುಗಳೊಳಗಿಂದ ಒಂದಾದರೂ ತತ್ತ್ವವನ್ನು ತೆಗೆದುಹಾಕಿದರೆ ಅವನ ವ್ಯವಹಾರವು ನಿಜವಿರುವುದಿಲ್ಲ. ೧೦೩ ನೆಯ ಗಾಥೆಯ ಭಾವಾರ್ಥದಲ್ಲಿ ಹೇಳಿರುವುದೇನೆಂದರೆ - ''ದ್ವಾದಶಾಂಗ ವಾಣಿಯ ಅನುಸಾರ ಎಷ್ಟು ಸಿದ್ಧಾಂತಗಳಿವೆ ಅವುಗಳಲ್ಲಿ ಕಾಲಸಹಿತವಾಗಿ ಪಂಚಾಸ್ತಿಕಾಯದ ನಿರೂಪಣೆಯಿದೆ ಮತ್ತು ಯಾವುದೇ ಸ್ಥಾನದಲ್ಲಿ ಸ್ವಲ್ಪ ಕೂಡ ಬಿಟ್ಟುಕೊಡಲಾಗಿಲ್ಲ.'' ಸರ್ವಜ್ಞ ಭಗವಂತರ ಆಜ್ಞೆಯ ಪ್ರಕಾರ ಶಾಸ್ತ್ರದಲ್ಲಿ ಕಾಲದ್ರವ್ಯದ ಮಾತು ಇರುವುದು. ಯಾವ ದ್ರವ್ಯಗಳನ್ನು ಹೇಳುವುದರಲ್ಲಿ ಬಂದಿದೆ ಅವುಗಳಲ್ಲಿ ಒಂದು ದ್ರವ್ಯವನ್ನು ಕೂಡ ತೆಗೆದು ಹಾಕುವ ಕಾರ್ಯ ಮಾಡಲಾಗಿಲ್ಲ. ಯಾವ ಶಾಸ್ತ್ರಗಳು ಕಾಲವನ್ನು ಮನ್ನಿಸುವುದಿಲ್ಲ ಅವು ವೀತರಾಗ ಭಗವಂತರ ಶಾಸ್ತ್ರಗಳಿರುವುದಿಲ್ಲ. ಅವು ದ್ವಾದಶಾಂಗ ವಾಣಿಯ ಅನುಸಾರವಾಗಿರುವ ಶಾಸ್ತ್ರಗಳಲ್ಲ. ಆತ್ಮನ ಜ್ಞಾನವು ಕೂಡ ಆರು ದ್ರವ್ಯಗಳನ್ನು ತಿಳಿದುಕೊಳ್ಳುವಷ್ಟಿರುತ್ತದೆ. ಹೀನಾಧಿಕ ತಿಳಿದುಕೊಳ್ಳುವ ಜ್ಞಾನ ಸಾಮರ್ಥ್ಯವನ್ನು ಕೂಡ ಮನ್ನಿಸುವುದಿಲ್ಲ.

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂಬ ಆರು ದ್ರವ್ಯಗಳಲ್ಲಿ ಕಾಲವನ್ನು ಹೊರತುಪಡಿಸಿ ಉಳಿದವು ಐದು ಅಸ್ತಿಕಾಯಗಳಿವೆ. ಪುಣ್ಯ ಮತ್ತು ಪಾಪ ಇವೆರಡನ್ನು ಆಸ್ರವದ ಜತೆಯಲ್ಲಿ ಗಣಿಸುವುದರಲ್ಲಿ ಬಂದರೆ ಏಳು ತತ್ತ್ವಗಳು ಮತ್ತು ಬೇರೆ-ಬೇರೆಯಾಗಿ ಗಣಿಸುವುದರಲ್ಲಿ ಬಂದರೆ ಒಂಭತ್ತು ಪದಾರ್ಥಗಳಾಗುತ್ತವೆ. ಇವುಗಳ ಶ್ರದ್ಧೆ ಮಾಡುವುದು ವ್ಯವಹಾರ ಸಮ್ಯಗ್ದರ್ಶನವಿದೆ. ಅದು ಪುಣ್ಯ ಬಂಧದ ಕಾರಣವಿರುತ್ತದೆ. ಶುದ್ಧ ಆತ್ಮನ ಶ್ರದ್ಧೆ ಮಾಡುವುದು ನಿಶ್ಚಯ ಸಮ್ಯಗ್ದರ್ಶನವಿದೆ, ಶುದ್ಧ ಆತ್ಮನ ಜ್ಞಾನ ಮಾಡಿಕೊಳ್ಳುವುದು ನಿಶ್ಚಯ ಸಮ್ಯಕ್ ಜ್ಞಾನವಿದೆ ಮತ್ತು ಹನ್ನೆರಡು ಅಂಗಗಳ ಅನುಸಾರವಾಗಿ ಆಗುವ ಶಾಸ್ತ್ರಗಳ ರಾಗರಹಿತವಿರುವಂಥ ಜ್ಞಾನವು ವ್ಯವಹಾರ ಜ್ಞಾನವಿದೆ. ಅದು ಕೂಡ ಪುಣ್ಯಬಂಧದ ಕಾರಣವಿದೆ. ಲೌಕಿಕದ ಅಧ್ಯಯನವು ಪಾಪಬಂಧದ ಕಾರಣವಿದೆ. ತ್ರಿಲೋಕನಾಥ ತೀರ್ಥಂಕರದೇವರ ವಾಣಿಯಲ್ಲಿ ಏಳು ತತ್ತ್ವ ಆರು ದ್ರವ್ಯ ಮೊದಲಾದವುಗಳ ಯಾವ ಸ್ವರೂಪವನ್ನು ಹೇಳುವುದರಲ್ಲಿ ಬಂದಿದೆ ಅವುಗಳ ಅನುಸಾರವಿರುವ ಯಾವ ಜ್ಞಾನವಿದೆ ಅದು ವ್ಯವಹಾರ ಜ್ಞಾನವಿದೆ. ಅದರ ವಿಪರೀತವಾಗಿ ಹೇಳಿದರೆ ವ್ಯವಹಾರ ಜ್ಞಾನವು ಕೂಡ ಇರುವುದಿಲ್ಲ. ಮುನಿಯಿರಲಿ ಅಥವಾ ಗೃಹಸ್ಥನಿರಲಿ ಅವರೀರ್ವರ ಶ್ರದ್ಧೆ-ಜ್ಞಾನದಲ್ಲಿ

ಸಮಾನತೆಯಿರುತ್ತದೆ. ಹೀನಾಧಿಕ ಜ್ಞಾನದ ಉದಯದ ಪ್ರಶ್ನೆಯಿರುವುದಿಲ್ಲ ; ಆದರೆ ಇವರಲ್ಲಿ ಸಮ್ಯಕ್‌ತನವಿರಬೇಕಾಗುವುದು. ಮನಸ್ಸು, ವಾಣಿ ಹಾಗೂ ದೇಹದಿಂದ ಅತೀತ ಮತ್ತು ಪುಣ್ಯ-ಪಾಪದಿಂದ ಬೇರೆಯಿರುವಂಥ ಆತ್ಮನ ಶ್ರದ್ಧೆ-ಜ್ಞಾನವು ನಿಶ್ಚಯವಿದೆ. ಏಳು ತತ್ತ್ವ, ಒಂಭತ್ತು ಪದಾರ್ಥ, ಹನ್ನೆರಡು ಅಂಗ ಮೊದಲಾದವುಗಳ ಶ್ರದ್ಧೆ-ಜ್ಞಾನಗಳು ರಾಗವುಳ್ಳವುಗಳಿರುವುದರಿಂದ ವ್ಯವಹಾರವಿದೆ. ಈ ಪ್ರಕಾರದ ನಿಶ್ಚಯ ಮತ್ತು ವ್ಯವಹಾರದಲ್ಲಿ ಮುನಿ ಹಾಗೂ ಶ್ರಾವಕರುಗಳಲ್ಲಿ ಯಾವ ಅಂತರವಿರುವುದಿಲ್ಲ. ಕೇವಲ ಚಾರಿತ್ರದಲ್ಲಿ ಅಂತರವಿರುತ್ತದೆ.

ಆಚಾರಾಂಗ ಮೊದಲಾದ ಶಾಸ್ತ್ರಗಳಲ್ಲಿ ವರ್ಣಿಸಲ್ಪಟ್ಟಿರುವ ಮುನಿಯ ಆಚರಣೆಯು ವ್ಯವಹಾರಚಾರಿತ್ರವಿದೆ. ಶುದ್ಧ ಆತ್ಮನು ಆನಂದಕಂದನಿದ್ದಾನೆ,ಅವನಲ್ಲಿ ನಿಮಗ್ನತೆ ಮಾಡುವುದು ನಿಶ್ಚಯಚಾರಿತ್ರವಿದೆ. ಮಹಾವ್ರತಗಳ ವಿಕಲ್ಪವುಂಟಾಗುವುದು ವ್ಯವಹಾರಚಾರಿತ್ರವಿದೆ. ಗೃಹಸ್ಥರುಗಳಿಗೆ ದಾನ, ಶೀಲ, ವ್ರತ, ಪೂಜಾದಿಗಳ ರಾಗವು ಉತ್ಪನ್ನವಾಗುವುದು ವ್ಯವಹಾರಚಾರಿತ್ರವಿದೆ. ಮುನಿಗಳಿಗೆ ಆಹಾರ ಕೊಡುವುದರ ವಿಕಲ್ಪ, ಭಗವಂತರ ಪೂಜೆಯ ಭಾವಬರುವುದು ಶುಭವಿದೆ. ಜೈನದರ್ಶನದಲ್ಲಿ ಜಿನಬಿಂಬಗಳ ಪೂಜೆ ಮಾಡುವುದು ಅನಾದಿಯಿಂದ ಇದೆ, ಅದು ಶುಭಭಾವವಿದೆ. ಅವುಗಳ ನಿಷೇಧ ಮಾಡಿ ಅಂತರ್ಯದಲ್ಲಿ ಸ್ಥಿರಗೊಳ್ಳುವುದು ನಿಶ್ಚಯ ಚಾರಿತ್ರವಿದೆ. ಶ್ರಾವಕರಿಗೆ ಹನ್ನೊಂದು ನೆಲೆಗಳಿರುತ್ತವೆ. ಅವು ಸಮ್ಯಗ್ದೃಷ್ಟಿಗಳಿಗೇನೇ ಇರುತ್ತವೆ. ಆತ್ಮನು ಪರದಿಂದ ಭಿನ್ನನಿದ್ದಾನೆ ; ವಿಕಾರದಿಂದ ಭಿನ್ನನಿದ್ದಾನೆಂಬ ಪ್ರಜ್ಞೆಯಾದ ನಂತರದ ರಾಗವನ್ನು ವ್ಯವಹಾರ ಚಾರಿತ್ರವೆಂದು ಹೇಳಲಾಗುತ್ತದೆ. ಮುನಿಗಳಿಗೆ ಇಪ್ಪತ್ತೆಂಟು ಮೂಲಗುಣಗಳ ಪಾಲನೆಯ ವಿಕಲ್ಪವುಂಟಾಗುವುದು ವ್ಯವಹಾರವಿದೆ. ಶುದ್ಧ ಚೈತನ್ಯದ ಅವಲಂಬನದಿಂದ ಶುದ್ಧತೆ ಅಥವಾ ಚಾರಿತ್ರ ಪ್ರಕಟಪಡಿಸಿಕೊಳ್ಳುತ್ತಾರೆ ಅದನ್ನು ರಾಗಾದಿಯ ವ್ಯವಹಾರವೆಂದು ಹೇಳಲಾಗುತ್ತದೆ.

ಈ ವ್ಯವಹಾರ ಮೋಕ್ಷಮಾರ್ಗವು ಜೀವ-ಪುದ್ಗಲದ ಸಂಬಂಧದ ಕಾರಣ ಪಡೆದು ಯಾವ ಪರ್ಯಾಯವು ಉತ್ಪನ್ನವಾಗುತ್ತದೆ ಅದರ ಆಧೀನವಿರುತ್ತದೆ. ಜೀವದ ಯೋಗ್ಯತೆಯಿದೆ ಮತ್ತು ಕರ್ಮದ ನಿಮಿತ್ತವಿರುವುದರಿಂದ ರಾಗವಾಗುತ್ತದೆ. ಮೊದಲು ನಿಜವಾದ ಜ್ಞಾನ ಮಾಡಿಕೊಳ್ಳಬೇಕಾಗುವುದು. ತನ್ನ ಚೈತನ್ಯಘನನ ಜ್ಞಾನವಿಲ್ಲದೆ ನಿಜವಾದ ವ್ಯವಹಾರವಿರುವ ಸಾಧ್ಯತೆಯಿಲ್ಲ. ಶರೀರದ ಕ್ರಿಯೆಯನ್ನು ನಾನು ಮಾಡುತ್ತೇನೆಂದು ಅಜ್ಞಾನಿಯು ಮನ್ನಿಸುತ್ತಾನೆ. ಅವನಿಗೆ ಜಡದಿಂದ ಭಿನ್ನವಿರುವಂಥ ಆತ್ಮನ ಅರಿವೇ ಇರುವುದಿಲ್ಲ. ದಯೆ-ದಾನಾದಿಗಳ ಅಂಶವು ರಾಗದ ಅಂಶವಿದೆ, ಅದು ಆತ್ಮನಿಲ್ಲ. ಆತ್ಮನು ಪರದಿಂದ ಹಾಗೂ ರಾಗದಿಂದ ಭಿನ್ನನಿದ್ದಾನೆಂದು ಆತ್ಮನ ಅರಿವಿನೊಡನೆ ಪಂಚ ಮಹಾವ್ರತ, ಇಪ್ಪತ್ತೆಂಟು ಮೂಲಗುಣ, ಹನ್ನೊಂದು ನೆಲೆ ಮೊದಲಾದವುಗಳ ಪಾಲನೆಯ ಯಾವ ರಾಗವಾಗುತ್ತದೆ ಅದು ಜೀವ ಪುದ್ಗಲಗಳ ಸಂಬಂಧ ಪಡೆದು ಆಗುತ್ತದೆ. ಜೀವದ ಪರ್ಯಾಯದಲ್ಲಿ ರಾಗದ ಯೋಗ್ಯತೆಯಿರುತ್ತದೆ ಮತ್ತು ಪುದ್ಗಲ ಕರ್ಮದ ನಿಮಿತ್ತವಿರುತ್ತದೆ. ಕರ್ಮ ಮತ್ತು ಕರ್ಮದ ಕಡೆಗಿರುವ ಪ್ರವೃತ್ತಿಯ ಸಂಬಂಧದಿಂದ ಆತ್ಮನು ಬಿಡಲ್ಪಟ್ಟವನೇ ಇದ್ದಾನೆಂಬ ಅರಿವಂತೂ ಇದೆ. ಆದಾಗ್ಯೂ ಸಾಧಕದಶೆಯಲ್ಲಿ ಇನ್ನೂ ರಾಗದ ಯೋಗ್ಯತೆಯಿದೆ ಮತ್ತು ಕರ್ಮದ ನಿಮಿತ್ತವಿದೆ. ಅಷ್ಟು ರಾಗವಾಗುತ್ತದೆ ಅದು ವ್ಯವಹಾರ ಮೋಕ್ಷಮಾರ್ಗವಿದೆ, ಅದು ಬಂಧದ ಕಾರಣವಿದೆ.

ತಮ್ಮ ಕೈ ಮೇಲೆ ಆಗುವುದು-ಕೆಳಗೆ ಆಗುವುದು ಅದಂತೂ ಸ್ವಯಂ ಜಡದ ಕಾರಣದಿಂದಾಗುತ್ತದೆ, ಅದು ಆತ್ಮನ ಕಾರಣದಿಂದ ಆಗುವುದಿಲ್ಲ. ಯಾರಿಗೆ ಜಡ ಮತ್ತು ಆತ್ಮನ ಭಿನ್ನತೆಯ ಅರಿವಿರುವುದಿಲ್ಲ ಅವರಿಗೆ ನಿಶ್ಚಯ ಅಥವಾ ವ್ಯವಹಾರವೆಂಬುದರ ಜ್ಞಾನವಿರುವುದಿಲ್ಲ. ಇಲ್ಲಿಯಂತೂ ಆತ್ಮನ ಪ್ರಜ್ಞೆ ವರ್ತಿಸುತ್ತಿದೆ. ಅಂಥ ಜೀವದ ಮಾತು ನಡೆಯುತ್ತಿದೆ. ನಿಶ್ಚಯದಿಂದ ಆತ್ಮನಿಗೆ ಕರ್ಮದ ಸಂಬಂಧವಿಲ್ಲ, ಆದರೆ ಇಲ್ಲಿ ನಿಮಿತ್ತದ ಪರಿಚಯ ಮಾಡಿಸಿಕೊಡಲಾಗಿದೆ. ಶ್ರದ್ಧೆ-ಜ್ಞಾನವಂತೂ ವೀತರಾಗರು ಹೇಳಿರುವ ನವತತ್ತ್ವಾದಿಗಳದ್ದಿದೆ ಮತ್ತು ರಾಗವು ಬರುತ್ತಿದ್ದರೆ ಹನ್ನೆರಡು ವ್ರತ, ಹನ್ನೊಂದು ನೆಲೆ, ಐದು ಮಹಾವ್ರತಾದಿಗಳ ಭೂಮಿಕೆಯ ಅನುಸಾರವಿರುತ್ತದೆ, ಬೇರೆಯಿರುವುದಿಲ್ಲ.

ಆತ್ಮನ ಆಶ್ರಯದಿಂದ ಉಂಟಾಗುವಂಥ ವೀತರಾಗದಶೆಯು ಸಾಧ್ಯವಿದೆ. ಅದರ ಸಾಧನವು ನಿಶ್ಚಯದಿಂದಂತೂ ಶುದ್ಧ ಆತ್ಮದ್ರವ್ಯವಿದೆ, ಆದರೆ ರಾಗಯುಕ್ತ ದಶೆಯಲ್ಲಿ ಯಾವ ಮಹಾವ್ರತ ಮೊದಲಾದವುಗಳ ವಿಕಲ್ಪಗಳುಂಟಾಗುತ್ತವೆ ಅವನ್ನು ವ್ಯವಹಾರದಿಂದ ಸಾಧನವೆಂದು ಹೇಳಲಾಗುತ್ತದೆ. ಮುನಿಗಳಿಗಾಗಲಿ ಅಥವಾ ಸಮ್ಯಗ್ದೃಷ್ಟಿಗಳಿಗಾಗಲಿ ಯಾವ ಶುಭರಾಗವಾಗುತ್ತದೆ ಅದು ವೀತರಾಗತೆಯಿಂದ ಭಿನ್ನವಾಗಿರುತ್ತದೆ. ಸಾಧ್ಯವಿರುವಂಥ ವೀತರಾಗತೆಯು ಭಿನ್ನವಿದೆ ಮತ್ತು ಸಾಧನವಾದ ರಾಗವು ಕೂಡ ಭಿನ್ನವಿದೆ. ಇಲ್ಲಿ ನಾಲ್ಕನೆಯ, ಐದನೆಯ, ಆರನೆಯ ಗುಣಸ್ಥಾನದ ಮಾತು ನಡೆಯುತ್ತಿದೆ. ಆಂತರ್ಯದಲ್ಲಿ ಶುದ್ಧತೆಯು ಪ್ರಕಟವಾಗುವುದು ನಿಶ್ಚಯ ಮೋಕ್ಷಮಾರ್ಗವಿದೆ, ಅದು ಸಾಧನವಿದೆ ಮತ್ತು ದೇವ-ಶಾಸ್ತ್ರ-ಗುರುಗಳ ಶ್ರದ್ಧೆಯ ರಾಗವು ಮಹಾವ್ರತಾದಿಗಳ ರಾಗವು ವ್ಯವಹಾರಮೋಕ್ಷಮಾರ್ಗವಿದೆ, ಸಾಧನವಿದೆ.

ಚೈತನ್ಯದ ಮಾರ್ಗವು ಭಿನ್ನವಿದೆ ಮತ್ತು ರಾಗದ ಮಾರ್ಗವು ಭಿನ್ನವಿದೆ. ಇಲ್ಲಿ ಭಿನ್ನ ಸಾಧ್ಯ-ಸಾಧನ ಹೇಳಲಾಗಿದೆ, ಎಂದರೆ ರಾಗದಿಂದ ವೀತರಾಗತೆಯು ಪ್ರಕಟವಾಗುತ್ತದೆಯೆಂದು ಇದರ ಅರ್ಥವಲ್ಲ. ಇಲ್ಲಿಯಂತೂ ವ್ಯವಹಾರದ ಜ್ಞಾನ ಮಾಡಿಸಲಾಗಿದೆ. ನಿಜವಾದ ದೇವ-ಶಾಸ್ತ್ರ-ಗುರು ಮೊದಲಾದವರ ರಾಗವಿರುತ್ತದೆ. ಆದರೆ ಕುದೇವಾದಿಗಳ ಶ್ರದ್ಧೆಯಿರುವುದಿಲ್ಲ. ರಾಗವು ಯಾವುದೇ ಇದ್ದರೂ ಕೂಡ ಆ ರಾಗವನ್ನು ಧರ್ಮಾತ್ಮ ಜೀವನು ಮೋಕ್ಷದ ಕಾರಣವೆಂದು ಮನ್ನಿಸುವುದಿಲ್ಲ.

ದೃಷ್ಟಾಂತದಲ್ಲಿ ಸುವರ್ಣಮಯ ಪಾಷಾಣದ ಮಾತು ಇದೆ. ಯಾವ ಪಾಷಾಣದೊಳಗಿಂದ ಚಿನ್ನವು ಭಿನ್ನವಾಗಿ ಹೋಗುತ್ತದೆ, ಅಂಥ ಪಾಷಾಣದ ಮಾತನ್ನು ಸ್ವೀಕರಿಸಲಾಗಿದೆ ; ಕುರುಡು ಪಾಷಾಣದ ಮಾತನ್ನು ಸ್ವೀಕರಿಸಲಾಗಿಲ್ಲ.

ಚಿನ್ನವು ಭಿನ್ನವಾಗಿ ಹೋಗುವುದರ ನಿಜವಾದ ಕಾರಣವಂತೂ ಚಿನ್ನದ ಅಂತರಂಗ ಯೋಗ್ಯತೆಯಿದೆ. ಆಗ ಅಗ್ನಿಯನ್ನು ಬಹಿರಂಗ ಕಾರಣವೆಂದು ಹೇಳಲಾಗುತ್ತದೆ. ಅದು ಪಾಷಾಣದೊಳಗಿಂದ ಚಿನ್ನವನ್ನು ಬೇರೆ ಮಾಡುವುದರ ನಿಮಿತ್ತದಿಂದ ಕಥನವಿದೆ. ಅದೇ ಪ್ರಕಾರ ಜೀವ-ಪುದ್ಗಲದ ಭೇದದ ಕಾರಣವು ವ್ಯವಹಾರ ಮೋಕ್ಷಮಾರ್ಗವಿದೆ ಯೆಂಬುದು ನಿಮಿತ್ತದಿಂದ ಕಥನವಿದೆ. ಯಾವ ಚಿನ್ನವು ಪಾಷಾಣದೊಳಗಿಂದ ಬೇರೆಯಾಗುವುದಿಲ್ಲ ಆ ಚಿನ್ನಕ್ಕೆ ಅಗ್ನಿಯನ್ನು ನಿಮಿತ್ತವೆಂದು ಹೇಳಲಾಗುವುದಿಲ್ಲ. ಅದರಂತೆ ಯಾವನಿಗೆ ಪುಣ್ಯ-ಪಾಪದಿಂದ ನಾನು ಭಿನ್ನನಾದ ಆತ್ಮನಿದ್ದೇನೆಂಬ ದೃಷ್ಟಿಯಾಗುವುದಿಲ್ಲ ಅವನ ರಾಗವನ್ನು ಬಹಿರಂಗ ಕಾರಣವೆಂದು ಹೇಳಲಾಗುವುದಿಲ್ಲ.

ಯಾವ ಪ್ರಕಾರ ಅಗ್ನಿಯು ಚಿನ್ನವನ್ನು ದೇದಿಪ್ಯಮಾನವಾಗಿ ಬೇರೆ ಮಾಡಿಬಿಡುತ್ತದೆ, ಅದೇ ಪ್ರಕಾರ ನಾನು ಚೈತನ್ಯಮಯನಾದ ಆನಂದಕಂದನಿದ್ದೇನೆಂಬ ದೃಷ್ಟಿಮಾಡಿ, ಮನಸ್ಸು-ವಾಣಿ-ದೇಹದಿಂದ ಬೇರೆಯಾಗಿದ್ದಾನೆ ಮತ್ತು ಸಮ್ಯಗ್ದರ್ಶನವನ್ನು ಪ್ರಕಟಪಡಿಸಿಕೊಂಡಿದ್ದಾನೆ ಅವನಿಗೆ ಅಂತರಂಗ ಶುದ್ಧಸ್ವಭಾವವು ಕಾರಣವಿದೆ, ಆದರೆ ಎಲ್ಲಿಯವರೆಗೆ ವೀತರಾಗನಾಗುವುದಿಲ್ಲ ಅಲ್ಲಿಯವರೆಗೆ ಅವನಿಗೆ ರಾಗವು ಬರುತ್ತದೆ, ಕರ್ಮದ ಉದಯ ಬರುತ್ತದೆ, ಅದರಿಂದ ನಾನು ಭಿನ್ನನಿದ್ದೇನೆಂಬ ಶುಭರಾಗವು ಉತ್ಪನ್ನವಾಗುತ್ತದೆ ಅದನ್ನು ಬಹಿರಂಗ ಕಾರಣವೆಂದು ಹೇಳಲಾಗಿದೆ.

ಅಜ್ಞಾನೀ ಜೀವರುಗಳು ವಿಪರೀತ ದೃಷ್ಟಿಯುಳ್ಳವರಾಗಿರುವುದರಿಂದ ಅವರು ಅಗ್ನಿಯು ಚಿನ್ನವನ್ನು ಭಿನ್ನಮಾಡಿತೆಂದು ಹೇಳುತ್ತಾರೆ, ಆದರೆ ಅವರ ಮಾತು ಸುಳ್ಳಿದೆ. ಚಿನ್ನವು ತನ್ನ ಭಿನ್ನವಾಗುವ ಯೋಗ್ಯತೆಯಿಂದ ಭಿನ್ನವಾಗಿದೆ. ಅಲ್ಲಿ ಅಗ್ನಿಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಮಿಥ್ಯಾದೃಷ್ಟಿಗೆ ಚೈತನ್ಯದ ಪ್ರಜ್ಞೆಯಿರುವುದಿಲ್ಲ. ಹಲನ-ಚಲನ ಮಾಡುವುದು ಜೀವ, ಮಾತನಾಡುವುದು ಜೀವ, ದಯೆ-ದಾನಾದಿಗಳ ಭಾವಮಾಡುವುದು ಜೀವವೆಂದು ಮೊದಲಾಗಿ ಮನ್ನಿಸುತ್ತಿದ್ದಾರೆ ಅವರು ಕುರುಡ ಪಾಷಾಣದಂತಿದ್ದಾರೆ, ಅವರಿಗೆ ರಾಗವನ್ನು ನಿಮಿತ್ತವೆಂದು ಹೇಳಲಾಗುವುದಿಲ್ಲ.

ಆತ್ಮನ ಜ್ಞಾನ-ದರ್ಶನವಾಗಿದೆ, ವೀತರಾಗದಶೆಯಲ್ಲಿ ಸಾವಿರಾರುಬಾರಿ ಜೀಕುತ್ತಾರೆ, ಅವರಿಗೆ ಸಹಜ ನಗ್ನದಶೆ ವರ್ತಿಸುತ್ತಿದೆ, ಅಂಥ ಆನಂದಕಂದದಲ್ಲಿ ಜೀಕುತ್ತಿರವಂಥ ಮುನಿರಾಜರಿಗೆ ಎಂಥ ವ್ಯವಹಾರವಿರುತ್ತದೆಯೆಂಬುದರ ಮಾತು ನಡೆಯುತ್ತಿದೆ.

ಒಂದು ಧೂಳಿನ ಕಣದ ಪರ್ಯಾಯ ಮತ್ತು ಇನ್ನೊಂದು ಧೂಳಿನ ಕಣದ ಪರ್ಯಾಯದ ಮಧ್ಯದಲ್ಲಿ ಅನ್ಯೋನ್ಯ ಅಭಾವವಿದೆ. ಅಗ್ನಿಯು ಚಿನ್ನವನ್ನು ಸ್ಪರ್ಶಿಸುವುದಿಲ್ಲ. ಯಾವುದು ಅಭಾವರೂಪದಿಂದ ವರ್ತಿಸುತ್ತದೆ ಅದು ಪರವನ್ನೇನು ಮಾಡುವುದು ? ಆದರೆ ಯಾವ ಚಿನ್ನದಲ್ಲಿ-ಸ್ವಯಂ ತನ್ನಲ್ಲಿ ಬೇರೆಯಾಗುವ ಯೋಗ್ಯತೆಯಿದೆ ಅದಕ್ಕೆ ಅಗ್ನಿ ಹಾಗೂ ಪಾಷಾಣವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಅದರಂತೆ ಭಗವಾನ ಆತ್ಮನು ಬೇರೆಯಾಗುವ ಯೋಗ್ಯತೆಯುಳ್ಳವನಾಗಿ ಪರದಿಂದ ಭಿನ್ನನಾಗಿ ಹೋಗುತ್ತಾನೆ, ಆಗ ಕರ್ಮವು ಸ್ವಯಂ ತನ್ನ ಯೋಗ್ಯತೆಯಿಂದ-ತನ್ನ ಕಾರಣದಿಂದ ಬೇರೆಯಾಗಿ ಹೋಗುತ್ತದೆ. ಆಗ ಯಾವ ರಾಗವಿರುತ್ತದೆ ಅದಕ್ಕೆ ಬೇರೆಯಾಗಲು ಕಾರಣವೆಂದು ಹೇಳಲಾಗುತ್ತದೆ. ಚೈತನ್ಯದ ಸ್ವಭಾವವು ಚಿನ್ನದ ಸಮಾನವಿದೆ ಮತ್ತು ಜಡಕರ್ಮವು ಪಾಷಾಣದ ಸಮಾನವಿದೆ. ಸಮ್ಯಗ್ದರ್ಶನವಾದ ನಂತರ ಯಾವ ವಿಕಲ್ಪವುಂಟಾಗುತ್ತದೆ ಆ ರಾಗವನ್ನು ಆತ್ಮನು ಕರ್ಮದಿಂದ ಬೇರೆಯಾಗಿ ಹೋಗುವುದರಲ್ಲಿ ನಿಮಿತ್ತವೆಂದು ಹೇಳಲಾಗುತ್ತದೆ. ಆ ರಾಗವು ವ್ಯವಹಾರ ಮೋಕ್ಷಮಾರ್ಗವಿರುವುದರಿಂದ ಆ ವ್ಯವಹಾರ ಮೋಕ್ಷಮಾರ್ಗವನ್ನು ಜೀವ-ಪುದ್ಗಲದ ಏಕತೆಯನ್ನು ಭಿನ್ನ ಮಾಡುವುದರಲ್ಲಿ ಕಾರಣವೆಂದು ಹೇಳಲಾಗುತ್ತದೆ.

ಇಲ್ಲಿ ವ್ಯವಹಾರ ಮೋಕ್ಷಮಾರ್ಗದ ಮಾತು ನಡೆಯುತ್ತಿದೆ. ಆರು ದ್ರವ್ಯಗಳ ಶ್ರದ್ಧೆ, ಹನ್ನೆರಡು ಅಂಗಗಳ ಅನುಸಾರವಾದ ಜ್ಞಾನ ಮತ್ತು ಮಹಾವ್ರತಾದಿಗಳ ರಾಗ- ಈ ಪ್ರಕಾರ ವ್ಯವಹಾರದ ಶ್ರದ್ಧೆ, ಜ್ಞಾನ ಮತ್ತು ಚಾರಿತ್ರವನ್ನು ನಿಶ್ಚಯದ ಸಾಧನವೆಂದು ಹೇಳಲಾಗಿದೆ. ನಾನು ಸ್ವಯಂ ಶುದ್ಧ ಜೀವನಿದ್ದೇನೆ, ಕರ್ಮವಂತೂ ಜಡವಿದೆ, ಅದು ನನ್ನಿಂದ ಭಿನ್ನವಿದೆಯೆಂಬ ಜ್ಞಾನ ಮತ್ತು ಶ್ರದ್ಧೆಯಾದರೆ ಆತ್ಮನು ಕರ್ಮದಿಂದ ಭಿನ್ನನಾಗಿ ಹೋಗುತ್ತಾನೆ. ಅಲ್ಲಿ ಶುದ್ಧ ಪ್ರತೀತಿ ಮತ್ತು ಆಂತರ್ಯದಲ್ಲಿ ಸುಖಿಸುವುದು ಅದು ಅಂತರಂಗ ಕಾರಣವಿದೆ, ಆಗ ರಾಗವನ್ನು ಬಹಿರಂಗ ಕಾರಣವೆಂದು ಹೇಳಲಾಗುತ್ತದೆ. ನಿಜವಾಗಿಯಂತೂ ಪೂರ್ಣ ಶುದ್ಧ ದ್ರವ್ಯವು ಸಾಧ್ಯವಿದೆ. ಅದರಲ್ಲಿ ಕಾರಣ(ಸಾಧನ) ನಾಮದ ಗುಣವಿದೆ. ಸ್ವಯಂ ಕರ್ತಾರೂಪದಿಂದ ಆಗುತ್ತದೆ, ಸ್ವಯಂ ಕರ್ಮರೂಪದಿಂದ ಆಗುತ್ತದೆ ಮತ್ತು ಸಾಧನ ರೂಪದಿಂದ ಆಗುವಂಥದು ಸ್ವಯಂ ದ್ರವ್ಯಸ್ವಭಾವವಿದೆ. ಇಂಥ ಆಂತರ್ಯದ ಸಾಧನವು ಯಾರಿಗೆ ಪ್ರಕಟವಾಗಿದೆ ಅವರಿಗೆ ನಿಜವಾದ ದೇವಾದಿಕರ ಕುರಿತು ಶ್ರದ್ಧೆಯ ರಾಗವು ಬರುತ್ತದೆ, ಆದರೆ ಕುದೇವಾದಿಕರ ಕುರಿತು ರಾಗವು ಆಗದಿರುವುದರಿಂದ ಅವರ ರಾಗವನ್ನು ಉಪಚಾರದಿಂದ ಸಾಧನವೆಂದು ಹೇಳಲಾಗಿದೆ. ಜ್ಞಾನದಿಂದ ಜ್ಞಾನವು ಪ್ರಕಟವಾಗಿರುತ್ತದೆ ಮತ್ತು ಕ್ರೀಡೆಯರೂಪದ ದಶೆಯಾಗಿರುವುದು, ಅವನು ಅಂತರಂಗಸ್ವರೂಪದಲ್ಲಿ ಸಾವಧಾನನಿರುತ್ತಾನೆ. ನಾನಂತೂ ಜ್ಞಾತಾ-ದೃಷ್ಟಾ ಇದ್ದೇನೆ, ರಾಗವು ಉತ್ಪನ್ನವಾಗುತ್ತಿರುವುದು ನನ್ನ ಸ್ವರೂಪವಲ್ಲ. ಪರಜೀವವನ್ನು ಸಂರಕ್ಷಿಸುವುದು ನನ್ನ ಕೈಯೊಳಗಿನ ಮಾತು ಇರುವುದಿಲ್ಲವೆಂದು ತಿಳಿದುಕೊಂಡು ಆಂತರ್ಯದಲ್ಲಿ ಸಾವಧಾನನಿರುತ್ತಾನೆ. ಆದುದರಿಂದ ನನ್ನದು ನಿತ್ಯಾನಂದ ಧ್ರುವ ತತ್ತ್ವದ ಜತೆಯಲ್ಲಿ ಸಂಬಂಧವಿದೆ, ಆದರೆ ಪರದ ಜತೆಯಲ್ಲಿ ಸಂಬಂಧವಿಲ್ಲ. ಪರದ ಮತ್ತು ನನ್ನ ಮಧ್ಯದಲ್ಲಿ ಅಭಾವವಿರುವುದರಿಂದ ಪರದ ಪರ್ಯಾಯವನ್ನು ನಾನು ಮಾಡುವ ಸಾಧ್ಯತೆಯಿಲ್ಲವೆಂದು ತಿಳಿದು ಪರದಿಂದ ಪೃಥಕ್ ಆಗಿ, ಚೈತನ್ಯಸ್ವಭಾವದಲ್ಲಿ ವಿಹಾರಮಾಡುತ್ತ ಸಾವಧಾನನಿರುತ್ತಾನೆ ಅವನಿಗೆ ವ್ಯವಹಾರವು ನಿಮಿತ್ತವಿರುವುದು.

೧) ಮಿಥ್ಯಾ ಅವಸ್ಥೆಯಲ್ಲಿ ಜಡದಕ್ರಿಯೆ ಮತ್ತು ಪುಣ್ಯದಿಂದ ಧರ್ಮವಾಗುತ್ತದೆಯೆಂದು ಮನ್ನಿಸುವವನಿಗೆ ಮಿಥ್ಯಾತ್ವ ಸಹಿತವಿರುವ ರಾಗವಿರುತ್ತದೆ. ಆ ರಾಗವು ವ್ಯವಹಾರ ನಾಮವನ್ನು ಪಡೆಯುವುದಿಲ್ಲ.

೨) ನಾಲ್ಕನೆಯ ಗುಣಸ್ಥಾನದಲ್ಲಿ ಆತ್ಮನ ಜ್ಞಾನವಾಗಿರುತ್ತದೆ, ಅನಂತಾನುಬಂಧೀ ಕಷಾಯ ಚೌಕಡಿಯು ಹೊರಟುಹೋಗಿರುತ್ತದೆ, ಆ ಜೀವನಿಗೆ ದೇವ-ಶಾಸ್ತ್ರ-ಗುರುಗಳ ಶ್ರದ್ಧೆ ಮೊದಲಾದವುಗಳ ರಾಗವು ಬರುತ್ತದೆ, ಅದು ವ್ಯವಹಾರವಿರುತ್ತದೆ.

೩) ಐದನೆಯ ಗಣಸ್ಥಾನದಲ್ಲಿ ಅನಂತಾನುಬಂಧೀ ಮತ್ತು ಅಪ್ರತ್ಯಾಖ್ಯಾನ ಕಷಾಯ ಚೌಕಡಿಗಳು ಹೊರಟುಹೋಗಿರುತ್ತವೆ ಅವನಿಗೆ ಶ್ರಾವಕನ ಹನ್ನೆರಡು ವ್ರತ, ಹನ್ನೊಂದು ನೆಲೆ ಮೊದಲಾದವುಗಳ ರಾಗವು ಬರುತ್ತದೆ ಅದು ವ್ಯವಹಾರವಿದೆ.

೪) ಆರನೆಯ ಗುಣಸ್ಥಾನದಲ್ಲಿ ಮೂರು ಕಷಾಯ ಚೌಕಡಿಗಳು ಹೊರಟುಹೋಗಿರುತ್ತವೆ ಅವನಿಗೆ ಮಹಾವ್ರತಾದಿಗಳ ವಿಕಲ್ಪವು ಬರುತ್ತದೆ, ಅದು ವ್ಯವಹಾರವಿದೆ.

ಈ ಪ್ರಕಾರ ಯಾರಿಗೆ ಶುದ್ಧ ಆತ್ಮನ ಅವಲಂಬನವು ವರ್ತಿಸುತ್ತದೆ ಅವರಿಗೆ ರಾಗವು ಕಡಿಮೆಯಾಗುತ್ತ ಹೋಗುತ್ತದೆ ಮತ್ತು ಶುದ್ಧತೆಯು ವೃದ್ಧಿಯಾಗುತ್ತ ಹೋಗುತ್ತದೆ. ಭೂಮಿಕೆಗೆ ಯೋಗ್ಯವಾಗಿ ರಾಗದ ಮಂದತೆಯ ಪ್ರಕಾರವು ಕೂಡ ಬೇರೆ ಜಾತಿಯದಾಗುತ್ತದೆ. ಏಕೆಂದರೆ ಜಿನಮಂದಿರವನ್ನು ನಿರ್ಮಿಸುವ ವಿಕಲ್ಪವು ನಾಲ್ಕನೆಯ-ಐದನೆಯ ಗುಣಸ್ಥಾನದಲ್ಲಿ ಇರುತ್ತದೆ. ಆದರೆ ಆರನೇ ಗುಣಸ್ಥಾನದಲ್ಲಿ ಈ ಪ್ರಕಾರದ ರಾಗವು ಬರುವುದಿಲ್ಲ.

ಯಾವ ಜೀವನು ಸಮ್ಯಗ್ದರ್ಶನಾದಿಗಳಿಂದ ಅಂತರಂಗದಲ್ಲಿ ಸಾವಧಾನನಿರುತ್ತಾನೆ ಆ ಜೀವನಿಗೆ ಮೇಲಿನ ಗುಣಸ್ಥಾನಗಳಲ್ಲಿ ಶುದ್ಧತೆಯು ವೃದ್ಧಿಯಾಗುತ್ತ ಹೋಗುತ್ತದೆ. ಆ ಶುದ್ಧತೆಯ ಕಾರಣವಂತೂ ಶುದ್ಧದ್ರವ್ಯವಿರುವುದು, ಅದರ ಅವಲಂಬನದಿಂದ ಶುದ್ಧತೆಯು ವೃದ್ಧಿಸುತ್ತದೆ, ಆದರೆ ಹೇಗೆ ಹೇಗೆ ಗುಣಸ್ಥಾನದ ದಶೆಯು ವೃದ್ಧಿಸುತ್ತ ಹೋಗುತ್ತದೆ ಹಾಗೆ ಹಾಗೆಯೇ ರಾಗದ ಮಂದತೆಯಾಗುತ್ತ ಹೋಗುತ್ತದೆ. ರಾಗದ ಪ್ರಕಾರದಲ್ಲಿ ಕೂಡ ಅಂತರವಾಗುತ್ತದೆ. ಐದನೆಯ ಗುಣಸ್ಥಾನದಲ್ಲಿ ಹನ್ನೆರಡು ವ್ರತಗಳ ಪರಿಣಾಮದ ರಾಗವಿರುತ್ತದೆ ಮತ್ತು ಆರನೆಯ ಗುಣಸ್ಥಾನದಲ್ಲಿ ಪಂಚಮಹಾವ್ರತಗಳ ರಾಗವಿರುತ್ತದೆ. ಅಲ್ಲಿ ಏಕಾಕಿ ಸಂಜ್ವಲನ ಕಷಾಯವು ಉಳಿದುಕೊಂಡಿರುತ್ತದೆ. ಅಲ್ಲಿ ಐದನೆಯ ಗುಣಸ್ಥಾನಕ್ಕಿಂತಲೂ ರಾಗವು ಬಹಳಷ್ಟು ಕಡಿಮೆಯಾಗಿ ಹೋಗಿರುತ್ತದೆ. ಆದುದರಿಂದ ಆ ಪ್ರಕಾರದ ವ್ಯವಹಾರವು ಮೋಕ್ಷಮಾರ್ಗದಿಂದ ಗುಣಸ್ಥಾನದ ಸ್ಥಿರತೆ ಇರುತ್ತದೆಯೆಂದು ಹೇಳುವುದರಲ್ಲಿ ಬರುತ್ತದೆ. ನಿಜವಾಗಿ ಗುಣಸ್ಥಾನದ ಸ್ಥಿರತೆಯ ಕಾರಣವಂತೂ ಶುದ್ಧ ಆತ್ಮನಿದ್ದಾನೆ, ಆದರೆ ರಾಗವನ್ನು ಉಪಚಾರದಿಂದ ಕಾರಣವೆಂದು ಹೇಳಲಾಗುತ್ತದೆ.

'ಶುದ್ಧ ಜೀವನಿಗೆ ಭಿನ್ನ ಸಾಧ್ಯ-ಸಾಧನ ಭಾವದ ಸಿದ್ಧಿಯಿರುತ್ತದೆ' ನಾನು ಜ್ಞಾಯಕಸ್ವರೂಪದ ಶುದ್ಧ ಜೀವನಿದ್ದೇನೆ. ಶರೀರ, ಮನಸ್ಸು, ವಾಣಿಗಳು ಅಜೀವವಿವೆ. ಅವೆಲ್ಲವುಗಳ ವರ್ತಮಾನ ದಶೆಯು ಅವುಗಳ ಕಾರಣದಿಂದ ಆಗುತ್ತದೆ, ನನ್ನ ಕಾರಣದಿಂದ ಆಗುವುದಿಲ್ಲ. ನನ್ನ ಪರ್ಯಾಯವು ಪರದ ಕಾರಣದಿಂದ ಇರುವುದಿಲ್ಲ ಮತ್ತು ಯಾವ ದಯೆ-ದಾನಾದಿಗಳ ಪರಿಣಾಮಗಳಾಗುತ್ತವೆ ಅವೇನು ನನ್ನ ಸ್ವಭಾವವಿಲ್ಲ. ತನ್ನ ಚಿದಾನಂದ ಆತ್ಮನ ಜ್ಞಾನವು ವರ್ತಿಸುತ್ತಿರುವವನಿಗೆ ರಾಗದ ಸಮಯದಲ್ಲಿ ರಾಗವು ಬರುತ್ತದೆ ಆ ರಾಗವನ್ನು ಸಾಧನವೆಂದು ಹೇಳಲಾಗುತ್ತದೆ. ಯಾವನು ಶುದ್ಧ ಪರಿಪೂರ್ಣನಾಗಿ ಹೋಗಿದ್ದಾನೆ ಅವನಿಗೆ ಸಿದ್ಧಿ ಮಾಡಿಕೊಳ್ಳುವುದು ಬಾಕಿ ಉಳಿದಿಲ್ಲ. ಸಾಧಕನಿಗೆ ಸಿದ್ಧಿ ಮಾಡಿಕೊಳ್ಳುವುದು ಬಾಕಿ ಇದೆ. ಯಾರ ಪರ್ಯಾಯದಲ್ಲಿ ಪೂರ್ಣ ಶುದ್ಧತೆಯು ಆಗಿರುವುದಿಲ್ಲ ಅಂಥ ಜೀವನಿಗೆ ನಿಜವಾದ ದೇವ-ಶಾಸ್ತ್ರ-ಗುರುಗಳ ಕುರಿತು ರಾಗ, ಇಪ್ಪತ್ತೆಂಟು ಮೂಲಗುಣಗಳ ರಾಗವು ನಿಮಿತ್ತವಿದೆ. ಯಾವ ಜೀವನು ಪುಣ್ಯದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಾನೆ ಅವನ ಮಾತೇ ಇಲ್ಲ. ಅವನಿಗೆ ಭಿನ್ನ ಸಾಧ್ಯ-ಸಾಧನ ಭಾವದ ಸಿದ್ಧಿಯಾಗುವುದಿಲ್ಲ, ಆದರೆ ರಾಗದಿಂದ ಮತ್ತು ಜಡದಿಂದ ನಾನು ಬೇರೆಯಿದ್ದೇನೆಂಬ ಭೇದಜ್ಞಾನವು

ಯಾವನಿಗೆ ಆಗಿದೆ ಅವನಿಗೆ ಸರ್ವಜ್ಞರ ಮತ್ತು ಜಿನಬಿಂಬದ ಕುರಿತು ಭಕ್ತಿಯ ವಿಕಲ್ಪವುಂಟಾಗುತ್ತದೆ. ಅದನ್ನು ಸಾಧನವೆಂದು ಹೇಳುವುದರಲ್ಲಿ ಬರುತ್ತದೆ.

ನಾನು ರಾಗದಷ್ಟೂ ಇಲ್ಲ, ಅವಸ್ಥೆಯಷ್ಟೂ ಇಲ್ಲ. ನಾನಂತೂ ಧ್ರುವನಿದ್ದೇನೆಂಬ ಉಪಾದಾನ ದೃಷ್ಟಿಯು ಧರ್ಮಾತ್ಮನಿಗೆ ಪ್ರಕಟವಾಗಿರುತ್ತದೆ. ಜಗತ್ತಿನ ಪದಾರ್ಥಗಳು ತಮ್ಮ ಕಾರಣದಿಂದ ಸ್ಥಿರವಾಗಿದ್ದುಕೊಂಡು ಬದಲಾಗುತ್ತಿರುತ್ತವೆ. ನನ್ನ ಪರ್ಯಾಯಗಳು ನನ್ನ ತ್ರಿಕಾಲೀ ಸ್ವಭಾವದ ಅವಲಂಬನದಿಂದ ಆಗುತ್ತಿರುತ್ತವೆಯೆಂಬ ಉಪಾದಾನದೃಷ್ಟಿಯ ಕಾರಣದಿಂದ ಸ್ವಯಂ ಶುದ್ಧಭಾವರೂಪದಿಂದ ಪರಿಣಮನ ಮಾಡುತ್ತಿದ್ದಾನೆ. ನನ್ನ ಶುದ್ಧತೆಯು ನನ್ನ ದ್ರವ್ಯಸ್ವಭಾವದೊಳಗಿಂದ ಬರುತ್ತದೆ. ಅದು ಪುಣ್ಯ-ಪಾಪದ ಭಾವದೊಳಗಿಂದ ಬರುವುದಿಲ್ಲ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ನಿಶ್ಚಯ ಮೋಕ್ಷಮಾರ್ಗವು ಪ್ರಕಟವಾಗುತ್ತದೆ, ಆಗ ಸರ್ವಜ್ಞದೇವರು ಹೇಳಿರುವಂಥ ವ್ಯವಹಾರ ಮೋಕ್ಷಮಾರ್ಗವನ್ನು ಉಪಚಾರವೆಂದು ಹೇಳಲಾಗುತ್ತದೆ. ಆರು ದ್ರವ್ಯಗಳ ಶ್ರದ್ಧೆ, ಹನ್ನೆರಡು ಅಂಗಗಳ ಅನುಸಾರವಾದ ಜ್ಞಾನ ಮತ್ತು ಇಪ್ಪತ್ತೆಂಟು ಮೂಲಗುಣಗಳ ಪಾಲನೆ ಮಾಡುವಂಥ ವ್ಯವಹಾರವು ನಿಮಿತ್ತರೂಪದಿಂದ ಇರುತ್ತದೆ.

ಚಿನ್ನವು ತನ್ನ ಸಾಮರ್ಥ್ಯದಿಂದ ಕ್ರಮ-ಕ್ರಮದಿಂದ ಉಜ್ವಲವಾಗುತ್ತ ಹೋಗುತ್ತದೆ. ಆಗ ಅಗ್ನಿ ಮೊದಲಾದ ವಸ್ತುಗಳ ಪ್ರಯತ್ನವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ನಿಮಿತ್ತ-ನೈಮಿತ್ತಿಕ ಸಂಬಂಧವು ಏಕಕಾಲದಲ್ಲಿರುತ್ತದೆ. ಅಗ್ನಿಯ ಪ್ರತಿಯೊಂದು ಶಾಖದ ಸಮಯದಲ್ಲಿ ಚಿನ್ನವು ಶುದ್ಧರೂಪವಾಗುವ ಅವಸ್ಥೆಯು-ನೈಮಿತ್ತಿಕವು ಸ್ವತಂತ್ರವಿದೆ, ಅದರಿಂದ ಅಗ್ನಿಯನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಎರಡರಲ್ಲಿ ಒಂದು ಇನ್ನೊಂದರ ಅಭಾವವಿದೆ. ಚಿನ್ನವು ತನ್ನ ಕಾರಣದಿಂದ ಶುದ್ಧ ಅವಸ್ಥೆಯನ್ನು ಧಾರಣ ಮಾಡುತ್ತದೆ, ಆಗ ಅಗ್ನಿ, ಅಕ್ಕಸಾಲಿಗ ಮೊದಲಾದವರನ್ನು ಬಹಿರಂಗ ನಿಮಿತ್ತವೆಂದು ಹೇಳಲಾಗುತ್ತದೆ. ಅದರಂತೆ ಆತ್ಮನು ತನ್ನ ಶುದ್ಧ ಚೈತನ್ಯದ ದೃಷ್ಟಿಯಿಂದ ಜ್ಞಾತಾರೂಪದಿಂದ ಪರಿಣಮಿಸುತ್ತಾನೆ. ಆಗ ವೀತರಾಗ ಗುರು ಹೇಳಿರುವ ಆರು ದ್ರವ್ಯಗಳು, ನವತತ್ತ್ವಗಳು, ಮಹಾವ್ರತಾದಿಗಳ ರಾಗವಿರುತ್ತದೆ. ಬೇರೆ ಪ್ರಕಾರದ ರಾಗವಿರುವುದಿಲ್ಲ. ಚಿನ್ನವು ಬೇರ್ಪಡುವ ಸಮಯದಲ್ಲಿ ಅಗ್ನಿಯು ನಿಮಿತ್ತವಿರುತ್ತದೆ, ನೀರು ಇರುವುದಿಲ್ಲ. ಅದರಂತೆ ಶುದ್ಧತೆಯು ಪ್ರಕಟವಾಗುವ ಸಮಯದಲ್ಲಿ ವೀತರಾಗರು ಹೇಳಿರುವ ರಾಗವು ನಿಮಿತ್ತವಿರುತ್ತದೆ, ಬೇರಾವುದು ಇರುವುದಿಲ್ಲ.

ಶುಭರಾಗವನ್ನು ಬಹಿರಂಗ ಸಾಧನ ಅಥವಾ ನಿಮಿತ್ತವೆಂದು ಹೇಳಲಾಗುತ್ತದೆ. ಯಾರು ಆರು ದ್ರವ್ಯಗಳ ಪ್ರತೀತಿ ಮಾಡಿಕೊಂಡಿದ್ದಾರೆ, ಅದರ ಮೇಲಿನ ರಾಗವನ್ನು ಹೇಯವೆಂದು ಮನ್ನಿಸಿದ್ದಾರೆ ಮತ್ತು ಶುದ್ಧ ಆತ್ಮನನ್ನು ಅಂತರಂಗ ಸಾಧನವಾಗಿ ಮನ್ನಿಸಿ, ಉಪಾದೇಯವೆಂದು ಮನ್ನಿಸಿಕೊಂಡಿದ್ದಾರೆ ಅವರಿಗೆ ಶುಭರಾಗವನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಯಾವ ಜೀವರುಗಳು ಧರ್ಮ, ಅಧರ್ಮ, ಕಾಲ ಮೊದಲಾದ ದ್ರವ್ಯಗಳನ್ನು ಮನ್ನಿಸುವುದಿಲ್ಲ, ರಾಗವನ್ನು ವೀತರಾಗತೆಯ ಕಾರಣವೆಂದು ಮನ್ನಿಸುತ್ತಾರೆ, ಎಲ್ಲರೂ ಹೇಳಿರುವ ಮಾತುಗಳನ್ನು ನಿಜವಿದೆಯೆಂದು ಹೇಳಿ ಸಮನ್ವಯ ಮಾಡುತ್ತಾರೆ ಅವರ ವ್ಯವಹಾರವು ಕೂಡ ಸತ್ಯವಿರುವುದಿಲ್ಲ. ಅಮೃತ ಮತ್ತು ವಿಷವನ್ನು ಸಮಾನವೆಂದು ಮನ್ನಿಸಲಾಗುವ ಸಾಧ್ಯತೆಯಿಲ್ಲ. ಅದರಂತೆ ವೀತರಾಗರ ಜತೆಯಲ್ಲಿ ಇತರರ ಸಮನ್ವಯವಾಗುವ ಸಾಧ್ಯತೆಯಿದೆಯೆನ್ನುವಂತಿಲ್ಲ. ಆದುದರಿಂದ ಈ ಗಾಥೆಯಲ್ಲಿ ವ್ಯವಹಾರದ ಸ್ವರೂಪವನ್ನು ಯಥಾರ್ಥವಾಗಿ ತಿಳಿಸಿಕೊಟ್ಟಿದ್ದಾರೆ. ಮೂರು ನಿಮಿತ್ತಗಳ ಮಾತನ್ನು ಹೇಳುತ್ತಿದ್ದಾರೆ.

೧) **ಧಮ್ಮಾದೀಸದ್ದಹಣಂ ಸಮ್ಮತ್ತಂ -** ವೀತರಾಗರು ಹೇಳಿರುವ ಧರ್ಮ ಮೊದಲಾದ ದ್ರವ್ಯಗಳ ಶ್ರದ್ಧೆಯು ವ್ಯವಹಾರ

ಸಮ್ಯಗ್ದರ್ಶನವಿದೆ. ಆರು ದ್ರವ್ಯಗಳು ಸ್ವತಂತ್ರವಿವೆಯೆಂಬ ಶ್ರದ್ಧೆ.

೨) **ಣಾಣಮಂಗಪುವ್ವಗದಂ** - ವೀತರಾಗರ ದಿವ್ಯಧ್ವನಿಯೊಳಗಿಂದ ಹೊರಹೊರಟಂಥ ಹನ್ನೆರಡು ಅಂಗಗಳ ಅನುಸಾರವಾದ ಜ್ಞಾನವು ವ್ಯವಹಾರ ಜ್ಞಾನವಿದೆ.

೩) **ಚಿಟ್ಠಾ ತವಂಹಿ ಚರಿಯಾ** - ವೀತರಾಗರು ಹೇಳಿದ ಪ್ರಕಾರ ಭೂಮಿಕೆಯ ಅನುಸಾರ ಶುಭರಾಗವು-ಮುನಿಗಳಿಗೆ ಇಪ್ಪತ್ತೆಂಟು ಮೂಲಗುಣ ಮೊದಲಾದವುಗಳ ಪಾಲನೆ.

ಈ ಪ್ರಕಾರ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ವೀತರಾಗರು ಹೇಳಿರುವಂತೆ ಇರುವುದು ನಿಮಿತ್ತತೆಯನ್ನು ಧಾರಣ ಮಾಡುತ್ತದೆ. ಒಂದುವೇಳೆ ತಮ್ಮಲ್ಲಿ ನಿಶ್ಚಯವನ್ನು ಪ್ರಕಟಪಡಿಸಿಕೊಂಡರೆ ಇತರರು ಹೇಳಿರುವಂಥ ವ್ಯವಹಾರದಲ್ಲಿ ನಿಮಿತ್ತತನದ ಆರೋಪವು ಕೂಡ ಬರುವುದಿಲ್ಲ.

ನಾನು ಜ್ಞಾನಸ್ವಭಾವಿಯಾದ ಆತ್ಮನಿದ್ದೇನೆ. ಪರಿಪೂರ್ಣತೆ ಪಡೆಯಲು ಯೋಗ್ಯನಿದ್ದೇನೆಂದು ಅರಿವುಂಟಾದ ನಂತರ ಜ್ಞಾನವು ರಾಗದಲ್ಲಿ ನಿಂತುಕೊಳ್ಳುವುದಿಲ್ಲ. ಜ್ಞಾನವು ಜ್ಞಾನದಲ್ಲಿ ಸ್ಥಿರವಾಗಿ ಉಳಿದುಕೊಂಡರೆ ಅವನು ಸರ್ವಜ್ಞನಾಗುತ್ತಾನೆ. ಮೂರು ಲೋಕ ಮೂರು ಕಾಲಗಳನ್ನು ತಿಳಿದುಕೊಳ್ಳುವಂಥದು ಸರ್ವಜ್ಞರ ಸ್ವಭಾವವಿರುತ್ತದೆ. ಈ ಪ್ರಕಾರದ ಶ್ರದ್ಧೆ, ಜ್ಞಾನವಾಗಿರುವಂಥ ಜೀವನಿಗೆ ಸರ್ವಜ್ಞದೇವರು ಹೇಳಿರುವ ತತ್ತ್ವಗಳ, ಶಾಸ್ತ್ರಗಳ ಕುರಿತು ರಾಗವು ವರ್ತಿಸುತ್ತದೆ. ಪಂಚಮಹಾವ್ರತಾದಿಗಳ ರಾಗವು ವರ್ತಿಸುತ್ತದೆ ಅದು ನಿಮಿತ್ತರೂಪದ ವ್ಯವಹಾರವಾಗುತ್ತದೆ. ಇಲ್ಲಿ ದೇಹದ ಕ್ರಿಯೆಯ ಮಾತು ಇಲ್ಲ, ಶುಭ ರಾಗದ ಮಾತು ಇದೆ. ಈ ಪ್ರಕಾರದ ಶುಭರಾಗವಿರುತ್ತದೆ. ವಿಕಲ್ಪಗಳುಂಟಾದರೆ ಸರ್ವಜ್ಞ ಭಗವಂತರು ಹೇಳಿದ ಆರು ದ್ರವ್ಯಗಳ, ಏಳು ತತ್ತ್ವಗಳ, ಐದು ಮಹಾವ್ರತಗಳ ವಿಕಲ್ಪಗಳುಂಟಾಗುತ್ತವೆ, ಬೇರೆ ವಿಕಲ್ಪಗಳಿರುವುದಿಲ್ಲ.

ಕೇಸರಿ ಕೊಳ್ಳಲು ಹೋದರೆ ಅದನ್ನು ಎಂಥದೋ ಚಿಂದಿ ಬಟ್ಟೆಯಲ್ಲಿ ಕಟ್ಟಿಕೊಡುವುದಿಲ್ಲ, ಆದರೆ ಅದರ ಸಲುವಾಗಿ ಒಳ್ಳೆಯ ಡಬ್ಬದಲ್ಲಿಯೇ ಹಾಕಿಕೊಡಲಾಗುತ್ತದೆ. ಅದರಂತೆ ಆತ್ಮನ ಶುದ್ಧ ಪ್ರತೀತಿ, ಜ್ಞಾನ ಮತ್ತು ರಮಣತೆಯರೂಪದ ಸಲುವಾಗಿ ಕುದೇವಾದಿಗಳ ಶ್ರದ್ಧೆಯ ಮಲಿನಭಾವರೂಪವಿರುವುದಿಲ್ಲ. ಆದರೆ ನಿಜವಾದ ದೇವಾದಿಕರ ಶ್ರದ್ಧೆಯು ನಿರ್ಮಲಭಾವರೂಪವಿರುತ್ತದೆ. ಆದರೆ ಮಲಿನಭಾವರೂಪವಿರುವಂಥ ಶ್ರದ್ಧೆಯು ವೀತರಾಗತೆಯನ್ನು ತರುವುದಿಲ್ಲ. ಬೇರೆ ವಸ್ತುವು ಬೇರೆಯಿದೆ. ಆದರೆ ತಾನು ತನ್ನ ಕಾರಣದಿಂದ ಶುದ್ಧದಶೆಯನ್ನು ಪ್ರಕಟಪಡಿಸಿಕೊಂಡಾಗಲೇ ಇಂಥ ರಾಗವು ನಿಮಿತ್ತವಿರುವುದು. ಈ ಪ್ರಕಾರ ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡಲಾಗಿದೆ.

ಯಾವ ಜೀವರುಗಳು ಕಾಲದ್ರವ್ಯವನ್ನು ಮನ್ನಿಸುವುದಿಲ್ಲ, ವ್ಯವಹಾರದಿಂದ ಧರ್ಮವಾಗುತ್ತದೆಯೆಂದು ಮನ್ನಿಸುತ್ತಾರೆ, ಹನ್ನೆರಡು ಅಂಗಗಳ ವಿಚ್ಛೇದವಾಗಿ ಹೋಗಿದ್ದರೂ ಕೂಡ ಸರ್ವಜ್ಞ ಭಗವಂತರು ಹೇಳಿದ ಅಂಗಗಳು ವಿದ್ಯಮಾನವಿವೆಯೆಂದು ಮನ್ನಿಸುತ್ತಾರೆ, ಅವರ ವ್ಯವಹಾರವು ಕೂಡ ಸತ್ಯವಿರುವುದಿಲ್ಲ. ಸರ್ವಜ್ಞರು ಹೇಳಿದ ತತ್ತ್ವದ ಅನುಸಾರ ಆತ್ಮನ ಅರಿವುಂಟಾಗಿ ಶುದ್ಧತೆಯು ಪ್ರಕಟವಾದ ನಂತರವೇ ಬಾಹ್ಯದಲ್ಲಿ ನಗ್ನದಶೆಯಿರುತ್ತದೆ. ಮುನಿಯು ಆಂತರ್ಯದಲ್ಲಿ ಲೀನವಿಲ್ಲದಿರುವಾಗ ಅವರಿಗೆ ಐದು ಮಹಾವ್ರತಾದಿಗಳ ರಾಗವು ಉತ್ಪನ್ನವಾಗುತ್ತದೆ. ಭಗವಂತರು ಹೇಳಿರುವಂತೆಯೇ ರಾಗವು ಉತ್ಪನ್ನವಾಗುತ್ತದೆ, ಬೇರೆ ಜಾತಿಯ ರಾಗವು ಉತ್ಪನ್ನವಾಗುವುದಿಲ್ಲ ಮತ್ತು ಯಾರು ಯಾರು ರಾಗದಿಂದ ಲಾಭವಾಗುತ್ತದೆಯೆಂದು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಗಳಿರುತ್ತಾರೆ.

ಯಾವ ಭಾಗ್ಯಶಾಲಿ ಪುರುಷರು ತಮ್ಮ ಆಂತರ್ಯದಲ್ಲಿ ನಿಶ್ಚಯ ಮೋಕ್ಷಮಾರ್ಗವನ್ನು ಪ್ರಕಟಪಡಿಸಿಕೊಂಡಿದ್ದಾರೆ ಅವರಿಗೆ ವ್ಯವಹಾರ ಮೋಕ್ಷಮಾರ್ಗವು ಈ ಪ್ರಕಾರ ನಿಮಿತ್ತರೂಪದಿಂದ ಇದ್ದೇ ಇರುತ್ತದೆಯೆಂಬುದಾಗಿ ವ್ಯವಹಾರ ಮೋಕ್ಷಮಾರ್ಗದ ಸ್ವರೂಪವನ್ನು ತಿಳಿಸಿಕೊಡಲಾಗಿದೆ.

ವ್ಯವಹಾರಮೋಕ್ಷಮಾರ್ಗದಿಂದ ಸಾಧಿಸಲಾಗುವಂಥ ನಿಶ್ಚಯಮೋಕ್ಷಮಾರ್ಗದ ಸ್ವರೂಪವನ್ನು ಈಗ ಹೇಳುತ್ತಾರೆ. ಇಲ್ಲಿ ವ್ಯವಹಾರ ಮೋಕ್ಷಮಾರ್ಗವನ್ನು ಸಾಧನವೆಂದು ಹೇಳಿದ್ದಾರೆ. ಈ ಮಾತನ್ನು ತಿಳಿದುಕೊಳ್ಳುವಂತಿದೆ. ಮೊದಲಂತೂ ಆರು ದ್ರವ್ಯ-ಏಳು ತತ್ತ್ವ ಮೊದಲಾದವುಗಳ ವಿಕಲ್ಪವು ಬರುತ್ತದೆ. ಆದರೆ ಆ ಸಮಯದಲ್ಲಿ ಜ್ಞಾನದ ಪ್ರವೃತ್ತಿಯು ಚೈತನ್ಯಸ್ವಭಾವದ ಕಡೆಗೇನೇ ಹೋಗುತ್ತದೆ. ನಾನು ಸ್ವಯಂ ಜೀವನಿದ್ದೇನೆ, ಶರೀರ ಮೊದಲಾದವುಗಳು ಅಜೀವವಿವೆ. ಪುಣ್ಯ-ಪಾಪಗಳೆರಡೂ ಆಸ್ರವವಿವೆ, ಅವುಗಳಲ್ಲಿ ನಿಂತುಕೊಳ್ಳುವುದು ಬಂಧವಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಮೂಲಕ ಆಸ್ರವವನ್ನು ತಡೆಯುವುದು ಸಂವರವಿದೆ. ಶುದ್ಧತೆಯ ವೃದ್ಧಿಯಾಗಿ ಕರ್ಮವು ಉದುರಿಹೋಗುವುದು ನಿರ್ಜರೆಯಿದೆ. ಅದರಂತೆ ಪೂರ್ಣ ಶುದ್ಧತೆಯು ಪ್ರಕಟವಾಗುವುದು ಮೋಕ್ಷವಿದೆ. ಈ ಪ್ರಕಾರ ಏಳು ತತ್ತ್ವಗಳ ವಿಚಾರ ಮಾಡುವುದು. ಅದರಂತೆ ಆರು ದ್ರವ್ಯಗಳನ್ನು ಭಿನ್ನ-ಭಿನ್ನ ಸ್ವರೂಪದಿಂದ ವಿಚಾರ ಮಾಡುವುದು ಅದರಲ್ಲಿ ವಿಕಲ್ಪವಿರುವುದಂತೂ ನಿಮಿತ್ತವಿದೆ. ಅದು ಕೂಡ ಯಾವನು ತನ್ನ ಆಂತರ್ಯದಲ್ಲಿ ಶುದ್ಧಸ್ವರೂಪದ ಶ್ರದ್ಧೆ, ಜ್ಞಾನ ಮತ್ತು ಅನುಭೂತಿಯನ್ನು ಪ್ರಕಟಪಡಿಸಿಕೊಂಡಿದ್ದಾನೆ ಅವನಿಗೆ ಆ ವ್ಯವಹಾರವನ್ನು ನಿಮಿತ್ತದಿಂದ ಸಾಧನವೆಂದು ಹೇಳಲಾಗುತ್ತದೆ. ಆದರೆ ಸಾಧ್ಯರೂಪವಂತೂ ಒಂದು ನಿಶ್ಚಯವಿದೆ. ಆ ನಿಶ್ಚಯಮೋಕ್ಷಮಾರ್ಗವಿಲ್ಲದೆ ವ್ಯವಹಾರವನ್ನು ಸಾಧನವೆಂದು ಹೇಳಲಾಗುವುದಿಲ್ಲ. ಅದರ ಸ್ವರೂಪವನ್ನು ಗಾಥೆಯಲ್ಲಿ ಹೇಳುತ್ತಾರೆ -

**ಣಿಚ್ಛಯಣಏಣ ಭಣಿದೋ ತಿಹಿ ತೇಹಿಂ ಸಮಾಹಿದೋ ಹು ಜೋ ಅಪ್ಪಾ ।**
**ಣ ಕುಣದಿ ಕಿಂಚಿ ವಿ ಅಣ್ಣಂ ಣ ಮುಯದಿ ಸೋ ಮೋಕ್ಖಮಗ್ಗೋತ್ತಿ ॥೧೬೧॥**

**ಯಾವಾತ್ಮನು ನಿಜದಿ ದರ್ಶನಜ್ಞಾನಚಾರಿತ್ರಗಳಿಂದ ಸಮಾಹಿತನಾಗುತ್ತ ।**
**ಅವನನ್ಯವೇನನು ಮಾಡನಿಲ್ಲವೆ ಬಿಡನದು ನಿಶ್ಚಯಮೋಕ್ಷಮಾರ್ಗವಿದೆ ॥೧೬೧॥**

ನಾನು ಅಭೇದ ಜ್ಞಾನಸ್ವಭಾವಿಯಾದ ತತ್ತ್ವನಿದ್ದೇನೆಂದು ಸ್ವಭಾವದ ಶುದ್ಧ ಶ್ರದ್ಧೆ, ಅದರ ಜ್ಞಾನ ಮತ್ತು ಅದರಲ್ಲಿ ರಮಣತೆ-ಈ ಪ್ರಕಾರದ ಶ್ರದ್ಧೆ-ಜ್ಞಾನ-ಚಾರಿತ್ರರೂಪದಿಂದ ಪರಿಣಮಿಸಿದ ಆತ್ಮನು ನಿಶ್ಚಯದಿಂದ ಮೋಕ್ಷಮಾರ್ಗನಿದ್ದಾನೆ. ಅಭೇದತೆಯನ್ನು ತಿಳಿಸಿಕೊಡುವುದಿರುವುದರಿಂದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಮೂಲಕ ಪರಮ ಸಮರಸೀ ಭಾವರೂಪದಿಂದ ಪರಿಣಮಿಸಲ್ಪಟ್ಟಿರುವ ಆತ್ಮನನ್ನೇ ಮೋಕ್ಷಮಾರ್ಗವೆಂದು ಹೇಳಲಾಗಿದೆ. ಇಂಥ ಅಭೇದ ಮೋಕ್ಷಮಾರ್ಗವನ್ನು ಪ್ರಕಟಪಡಿಸಿಕೊಂಡವನಿಗೆ ವ್ಯವಹಾರ ಶ್ರದ್ಧೆ-ಜ್ಞಾನ-ಚಾರಿತ್ರಗಳನ್ನು ಸಾಧನವೆಂದು ಹೇಳಲಾಗುತ್ತದೆ. ಧ್ರುವ ಸ್ವಭಾವದ ಅವಲಂಬನದಿಂದ ವೀತರಾಗಿ ಶ್ರದ್ಧೆ-ಜ್ಞಾನ-ಚಾರಿತ್ರಗಳು ಪ್ರಕಟವಾಗಿ ಆತ್ಮನ ಜತೆಯಲ್ಲಿ ಏಕರೂಪವಾಗಿ ಹೋಗುವುದರ ಹೆಸರು ನಿಶ್ಚಯಮೋಕ್ಷಮಾರ್ಗವಿದೆ ಮತ್ತು ಭೇದದ ವಿಕಲ್ಪವು ವ್ಯವಹಾರವಿದೆ.

ಶುದ್ಧ ಉಪಾದಾನವಂತೂ ತ್ರಿಕಾಲೀ ಚೈತನ್ಯ ದ್ರವ್ಯವಿದೆ, ಅದರ ಅವಲಂಬನದಿಂದಲೇ ನಿಶ್ಚಯ ಮೋಕ್ಷಮಾರ್ಗವಿದೆ ಮತ್ತು ವ್ಯವಹಾರ ಮೋಕ್ಷಮಾರ್ಗವು ನಿಮಿತ್ತವಿದೆ. ಆ ನಿಮಿತ್ತವು ಕೂಡ ಶುದ್ಧ ಉಪಾದಾನದ ಆಶ್ರಯದಿಂದ ನಿಶ್ಚಯಮೋಕ್ಷಮಾರ್ಗವನ್ನು ಪ್ರಕಟಪಡಿಸಿಕೊಂಡಾಗ ಇರುತ್ತದೆ, ಆದರೆ ಯಾವ ವಿಕಲ್ಪವಿದೆ ಅದುವೇ

ಆಂತರ್ಯದ ಪರಮಾರ್ಥ ಸ್ವಭಾವದಲ್ಲಿ ಹೋಗುವುದರ ಕಾರಣವಿದ್ದರೆ ಯಾವ ವಿಕಲ್ಪವಿದೆ ಅದುವೇ ನಿಶ್ಚಯ ಸಾಧನವಾಗಿ ಹೋಗುವುದು. ಆಗ ಅಲ್ಲಿ ನಿಶ್ಚಯ ಮತ್ತು ವ್ಯವಹಾರವೆಂದು ಇವೆರಡು ಬೇರೆಯಾಗಿ ಉಳಿಯಲಿಲ್ಲ. ರಾಗದಿಂದಲೇ ಸ್ವಾನುಭವದ ಕಾರ್ಯ ಮಾಡಲಾಯಿತು. ಆಗ ಅಲ್ಲಿ ರಾಗವು ರಾಗರೂಪದಿಂದ ಉಳಿಯಲಿಲ್ಲ; ಆದರೆ ರಾಗವೇ ಸ್ವಭಾವವಾಗಿ ಹೋಯಿತು. ಚೈತನ್ಯ ವಸ್ತುವು ತ್ರಿಕಾಲವಿದೆ ಅದು ಶುದ್ಧವಿದೆ. ಅದರಲ್ಲಿ ಯಾವ ಅಶುದ್ಧತೆ ಇರುತ್ತದೆ ಅದು ಎಂದೂ ಹೊರಟುಹೋಗುವುದಿಲ್ಲ. ಅಶುದ್ಧತೆಯು ಅದರ ಕ್ಷಣಿಕವಾದ ಪರ್ಯಾಯದಲ್ಲಿ ಇದೆ. ಒಂದುವೇಳೆ ಪರ್ಯಾಯದಲ್ಲಿ ಅಶುದ್ಧತೆಯು ಇಲ್ಲದೆ ಹೋಗಿದ್ದರೆ ಅಶುದ್ಧತೆಯನ್ನು ದೂರ ಮಾಡುವುದರ ಪ್ರಯತ್ನವನ್ನು ಮಾಡುವುದೇ ಉಳಿಯುವುದಿಲ್ಲ. ಎಂದರೆ ತ್ರಿಕಾಲೀ ಶುದ್ಧ ದ್ರವ್ಯವು ನಿಶ್ಚಯವಿದೆ ಮತ್ತು ಪರ್ಯಾಯದಲ್ಲಿ ಅಶುದ್ಧತೆಯು ವ್ಯವಹಾರವಿದೆಯೆಂದು ಎರಡೂ ದೃಷ್ಟಿಯಿಂದ ತಿಳಿದುಕೊಂಡಲ್ಲದೆ ಪ್ರಮಾಣಜ್ಞಾನವಾಗುವುದಿಲ್ಲ.

ಜೀವನು ಹಿತವನ್ನು ಮಾಡಿಕೊಳ್ಳುವುದರ ಬೆನ್ನುಹತ್ತಿದ್ದಾನೆ. ಎಂದರೆ ಅವನ ಪರ್ಯಾಯದಲ್ಲಿ ವರ್ತಮಾನದೊಳಗೆ ಹಿತವಿಲ್ಲ. ಹಿತವೇನು ಹೊರಗಿನಿಂದ ಬರುವುದಿಲ್ಲ. ಆದರೆ ಅದು ಆಂತರ್ಯದ ಸ್ವಭಾವದೊಳಗಿಂದಲೇ ಬರುತ್ತದೆ. ತನ್ನ ಸ್ವಭಾವದ ಅವಲಂಬನ ಮಾಡುವುದರಿಂದಲೇ ಅಹಿತವು ಹೋಗಿ ಹಿತವಾಗುತ್ತದೆ. ಅದರ ಮೊದಲು ಸರ್ವಜ್ಞ ಭಗವಂತರು ಹೇಗಿದ್ದಾರೆ ? ಅವರು ಹೇಳಿದ ಆರು ದ್ರವ್ಯಗಳು ಹಾಗೂ ಏಳು ತತ್ತ್ವಗಳು ಹೇಗಿವೆ-ಎಂಬ ವಿಚಾರವು ಬರುತ್ತದೆ ಅದು ವ್ಯವಹಾರವಿದೆ. ಆದರೆ ಯಾವನು ಆ ವ್ಯವಹಾರದ ಅವಲಂಬನ ಬಿಟ್ಟು, ಒಳಗೆ ಶುದ್ಧಸ್ವಭಾವದ ಶ್ರದ್ಧೆ-ಜ್ಞಾನ-ಏಕಾಗ್ರತೆ ಮಾಡಿದನೆಂದರೆ ಆಗ ಆ ರಾಗದ ಮೇಲೆ ವ್ಯವಹಾರ ಸಾಧನದ ಆರೋಪವು ಬರುತ್ತದೆ.

ಎರಡು ವಸ್ತುಗಳಿವೆ, ಅವುಗಳಲ್ಲಿ ಒಂದು ಆಂತರ್ಯದ ಸ್ವಭಾವವಿದೆ ಮತ್ತು ಇನ್ನೊಂದು ಹೊರಗಿನ ವಸ್ತುವಿದೆ. ಅದರಲ್ಲಿ ಯಾವುದರ ಸನ್ಮುಖತೆಯಿಂದ ಕಲ್ಯಾಣವಾಗುತ್ತದೆ ? ಬಹಿರ್ಮುಖ ಪ್ರವೃತ್ತಿಯಿಂದ ಒಂದುವೇಳೆ ಹಿತವಾಗುತ್ತಿದ್ದರೆ ಎಂದೂ ಆಂತರ್ಯದಲ್ಲಿ ಪ್ರವೃತ್ತಿ ಮಾಡುವುದು ಉಳಿಯುವುದೇ ಇಲ್ಲ ಮತ್ತು ಒಂದುವೇಳೆ ಅಂತರ್ಮುಖದ ಪ್ರವೃತ್ತಿಯಿಂದ ಅಹಿತವಾಗುತ್ತಿದ್ದರೆ ಅಹಿತವೆಂದೂ ಹೋಗುವುದೇ ಇಲ್ಲ. ಅಂತರ್ಮುಖ ಪ್ರವೃತ್ತಿ ಮಾಡದಿರುವುದರಿಂದಲೇ ಜೀವನು ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಿದ್ದಾನೆ. ಒಳಗಿನ ಸ್ವಭಾವದ ಅವಲಂಬನ ಮಾಡುವುದರಿಂದ ಹಿತವಿದೆ ಮತ್ತು ಹೊರಗಿನ ಅವಲಂಬನ ಮಾಡುವುದರಿಂದ ಅಹಿತವಿದೆ.

ಯಾವನು ತನ್ನ ಶುದ್ಧ ಸ್ವಭಾವದ ಅವಲಂಬನದಿಂದ ನಿಶ್ಚಯ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಸಮರಸಭಾವವನ್ನು ಪ್ರಕಟಪಡಿಸಿಕೊಂಡಿದ್ದಾನೆ ಅಂಥ ಆ ಆತ್ಮನು ನಿಶ್ಚಯದಿಂದ ಮೋಕ್ಷಮಾರ್ಗನಿದ್ದಾನೆ. ಆ ಆತ್ಮನು ಯಾವುದೇ ಪರದ್ರವ್ಯದಲ್ಲಿ ಏನನ್ನೂ ಕೂಡ ಮಾಡುವುದಿಲ್ಲ. ಅಜ್ಞಾನಿಯು ಕೂಡ ಪರದಲ್ಲಿ ಏನನ್ನೂ ಮಾಡುವುದಿಲ್ಲ, ಆದಾಗ್ಯೂ ಅವನು ನಾನು ಪರದ ಕಾರ್ಯ ಮಾಡುತ್ತೇನೆಂದು ಮನ್ನಿಸಿಕೊಂಡಿದ್ದಾನೆ. ಧರ್ಮಾತ್ಮನಿಗೆ ನಾನಂತೂ ಜ್ಞಾಯಕ ಮೂರ್ತಿಯಿದ್ದೇನೆಂದು ಅರಿವಾಗಿ ಹೋಗಿರುವುದರಿಂದ ಜ್ಞಾನೀ ಜೀವನು ಒಂದು ಕೂಡ ಪರದ್ರವ್ಯದ ಕ್ರಿಯೆಯನ್ನು ತನ್ನ ಆಧೀನವಿದೆಯೆಂದು ಮನ್ನಿಸುವುದಿಲ್ಲ. ಅದೇ ಪ್ರಕಾರ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವಿರುವ ಆತ್ಮಸ್ವಭಾವವನ್ನು ಎಂದೂ ಬಿಟ್ಟುಕೊಡುವುದಿಲ್ಲ. ಅವನು ಒಂದು ರಜಕಣದ ಕ್ರಿಯೆಯನ್ನು ಕೂಡ ತನ್ನದೆಂದು ಮನ್ನಿಸುವುದಿಲ್ಲ ಎಂದರೆ ಅದನ್ನು ಗ್ರಹಣ ಮಾಡುವುದಿಲ್ಲ ಮತ್ತು ಅದರ ಕುರಿತು ರಾಗವನ್ನು ಕೂಡ ಮಾಡುವುದಿಲ್ಲ. ಅದೇ ಪ್ರಕಾರ ತನ್ನ ತ್ರಿಕಾಲೀ ಚಿದಾನಂದ ಸ್ವಭಾವವನ್ನು ಎಂದೂ ಬಿಟ್ಟುಕೊಡುವುದಿಲ್ಲ. ಈ ಪ್ರಕಾರವಿರುವ ಆತ್ಮನಿಗೆ ಮೋಕ್ಷಮಾರ್ಗವಿರುತ್ತದೆ.

ನಾನು ಪರವನ್ನು ಗ್ರಹಣ ಮಾಡುವೆನು ಅಥವಾ ಪರವನ್ನು ಬಿಟ್ಟುಕೊಡುವೆನೆಂದು ಅಜ್ಞಾನಿಗೆ ಭ್ರಾಂತಿಯಿರುತ್ತದೆ, ಆದರೆ ಯಾವಾಗ ಆತ್ಮನ ಅರಿವಾಗುತ್ತದೆ ಆಗ ಧರ್ಮಾತ್ಮ ಜೀವನಿಗೆ ಪರದ ಗ್ರಹಣದ ಅಥವಾ ತ್ಯಾಗದ ಮಿಥ್ಯಾಬುದ್ಧಿಯಾಗುವುದಿಲ್ಲ. ಪರದ್ರವ್ಯಗಳದ್ದಂತೂ ನನ್ನಲ್ಲಿ ಅಭಾವವಿದೆ, ಅವನ್ನು ನಾನು ಎಂದೂ ಗ್ರಹಣ ಮಾಡುವುದಿಲ್ಲ. ನನ್ನ ನಿಜದ್ರವ್ಯದ ಸ್ವಭಾವವನ್ನು ಎಂದೂ ಬಿಟ್ಟು ಕೊಡುವುದಿಲ್ಲವೆಂದು ಯಾವನಿಗೆ ಅರಿವಿರುವುದಿಲ್ಲ ಆ ಜೀವನಿಗೆ ಮೋಕ್ಷಮಾರ್ಗವಿರುವುದಿಲ್ಲ. ನಾನು ಪರವನ್ನು ಗ್ರಹಣ ಮಾಡುವಂಥವನು ಮತ್ತು ಪರವನ್ನು ಬಿಟ್ಟುಕೊಡುವಂಥ-ವನಿದ್ದೇನೆಂದು ಯಾವನು ಮನ್ನಿಸಿಕೊಂಡಿದ್ದಾನೆ ಆ ಜೀವನು ತತ್ತ್ವದ ವಿರಾಧಕನಾಗಿ ನಿಗೋದದಲ್ಲಿ ಹೊರಟುಹೋಗುವ ಸಿದ್ಧತೆ ಮಾಡಿಕೊಳ್ಳುತ್ತಾನೆ. ತತ್ತ್ವದ ಆರಾಧಕನಾದ ಧರ್ಮಾತ್ಮ ಜೀವನಂತೂ ತನ್ನ ಸ್ವಭಾವದ ಶ್ರದ್ಧೆಯನ್ನು ಎಂದೂ ಬಿಟ್ಟುಕೊಡುವುದಿಲ್ಲ ಮತ್ತು ರಾಗದ ಸಂಜ್ಞೆಯನ್ನು ಸ್ವಭಾವರೂಪದಿಂದ ಎಂದೂ ಸ್ವೀಕಾರ ಮಾಡುವುದಿಲ್ಲ. ಅದರಂತೆ ಪರದ್ರವ್ಯದ ಕ್ರಿಯೆಯನ್ನು ತನ್ನದೆಂದು ಮನ್ನಿಸುವುದಿಲ್ಲ. ಈ ಪ್ರಕಾರವಿರುವುದರ ಲಾಭವು ಶಾಂತಿಯ ಉಪಾಯವಿದೆ ಮತ್ತು ಇದರ ಹೆಸರು ಮೋಕ್ಷಮಾರ್ಗವಿದೆ. ಇದನ್ನು ಹೊರತುಪಡಿಸಿ ಉಳಿದುವೆಲ್ಲವು ನಿರರ್ಥಕವಿವೆ.

ಪದಾರ್ಥಗಳು ಯಾವ ಪ್ರಕಾರ ಇರುತ್ತವೆಯೋ ಅದೇ ಪ್ರಕಾರ ತಿಳಿದುಕೊಂಡರೆ ಅದು ಪ್ರಮಾಣ ಜ್ಞಾನವಾಗುತ್ತದೆ, ಆದರೆ ವಿಪರೀತವಾಗಿ ಮನ್ನಿಸಿದರೆ ಅದು ಮಿಥ್ಯಾಜ್ಞಾನವಿದೆ.

ಜ್ಞಾನಸ್ವಭಾವದಲ್ಲಿ ಸರ್ವಜ್ಞತೆಯ ಸಾಮರ್ಥ್ಯವು ತುಂಬಿದೆ, ಅದರೊಳಗಿಂದ ಸರ್ವಜ್ಞತೆಯು ಪ್ರಕಟವಾಗುತ್ತದೆ. ಆ ಸ್ವಭಾವದ ಪ್ರತೀತಿ ಮತ್ತು ಜ್ಞಾನ ಮಾಡಿಕೊಂಡು ಅದರ ಧ್ಯಾನದಿಂದ ಸರ್ವಜ್ಞದಶೆಯನ್ನು ಪ್ರಕಟಪಡಿಸಿಕೊಂಡು ಭಗವಂತರು ತಮ್ಮ ಕೇವಲಜ್ಞಾನದಲ್ಲಿ ಯಾವ ಪ್ರಕಾರ ವಸ್ತುಸ್ವರೂಪವನ್ನು ನೋಡಿದ್ದಾರೆ ಅದನ್ನು ಇಲ್ಲಿ ಹೇಳಲಾಗಿದೆ. ಯಾವ ಆತ್ಮನು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವಿರುವ ಸಮರಸ ಭಾವವನ್ನು ಪ್ರಕಟಪಡಿಸಿಕೊಂಡಿದ್ದಾನೆ ಮತ್ತು ಪರದ್ರವ್ಯದ ಕ್ರಿಯೆಯನ್ನು ಯಾವನು ಗ್ರಹಣ ಮಾಡುವುದಿಲ್ಲ ಅದರಂತೆ ತನ್ನ ಸ್ವಭಾವದ ಶ್ರದ್ಧೆ-ಜ್ಞಾನ-ಲೀನತೆಯನ್ನು ಬಿಟ್ಟುಕೊಡುವುದಿಲ್ಲ ಅಂಥ ಆ ಆತ್ಮನೇ ನಿಶ್ಚಯದಿಂದ ಮೋಕ್ಷಮಾರ್ಗನಿದ್ದಾನೆ. ಸಜ್ಜಿಗೆ (ಶಿರಾ) ಮಾಡುವುದಿದ್ದರೆ ತುಪ್ಪ ಸಕ್ಕರೆ ಮತ್ತು ರವೆಯನ್ನು ಯಾವ ವಿಧಾನದಿಂದ ಆಗುತ್ತದೆಯೋ ಆ ವಿಧಾನದಿಂದ ಮಾಡಿದರೆ ಆಗುತ್ತದೆ. ಮೊದಲು ತುಪ್ಪದಲ್ಲಿ ರವೆಯನ್ನು ಶಾಖ ಕೊಡುವುದರ ಪ್ರತಿಯಾಗಿ ನೀರನ್ನು ಹಾಕಿದರೆ ಸಜ್ಜಿಗೆಯಾಗುವುದಿಲ್ಲ. ಅದರಂತೆ ಮೋಕ್ಷಮಾರ್ಗವು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಸ್ವರೂಪವಿದೆ. ಅದರಲ್ಲಿ ಸಮ್ಯಗ್ದರ್ಶನವಿಲ್ಲದೆ ವ್ರತಾದಿಗಳನ್ನು ಮಾಡಿ ಅದನ್ನು ಚಾರಿತ್ರವೆಂದು ಮನ್ನಿಸಿದರೆ ಮೋಕ್ಷಮಾರ್ಗದ ಅರಿವಿರುವುದಿಲ್ಲ. ಸಂಯೋಗ ಮತ್ತು ಸಂಯೋಗದ ಕಾರಣರೂಪ ಯಾವ ಪುಣ್ಯವಿದೆ ಅವೆರಡರಿಂದ ಭಿನ್ನನಿರುವಂಥ ನಾನು ಶುದ್ಧಜ್ಞಾನಸ್ವರೂಪನಿದ್ದೇನೆಂದು ಯಾವನಿಗೆ ಅರಿವಿರುವುದಿಲ್ಲ ಅವನಿಗೆ ಮೋಕ್ಷಮಾರ್ಗವಾಗುವುದಿಲ್ಲ. ರಾಗವು ನಿಜವಾಗಿ ಚೈತನ್ಯತತ್ತ್ವವಿಲ್ಲ. ಅದರ ಅವಲಂಬನದಿಂದ ಮೋಕ್ಷಮಾರ್ಗವಾಗುವುದಿಲ್ಲ. ಮೊದಲು ತನ್ನ ಶುದ್ಧ ಆತ್ಮನ ಜ್ಞಾನಮಾಡಿಕೊಂಡು, ಅನಂತರ ಅವನಲ್ಲಿ ಸಾವಧಾನತೆಯಿಂದ ವಿಹಾರ ಮಾಡುವುದು ಮೋಕ್ಷಮಾರ್ಗವಿದೆ. ಜೀವನು ಹೇಗಿದ್ದಾನೆ, ಅಜೀವವು ಹೇಗಿದೆ, ಪುಣ್ಯ-ಪಾಪಗಳು ಹೇಗಿವೆ ? ಅವೆಲ್ಲ ತತ್ತ್ವಗಳನ್ನು ಪೃಥಕ್ ಪೃಥಕ್ಕಾಗಿ ಪರಿಚಯ ಮಾಡಿಕೊಂಡಿರದಿದ್ದರೆ ಅವನಿಗೆ ಆತ್ಮನಲ್ಲಿ ಸಾವಧಾನತೆಯು ಎಲ್ಲಿಂದ ಆಗುವುದು ? ಜ್ಞಾಯಕ ಸ್ವಭಾವವನ್ನು ತಿಳಿದುಕೊಂಡು ಅವನ ಅವಲಂಬನದಲ್ಲಿ-ಆಶ್ರಯದಲ್ಲಿ ನಿಂತುಕೊಳ್ಳುವಂಥ ಜೀವನು ಆತ್ಮಸ್ವರೂಪದಲ್ಲಿ ಸಾವಧಾನನಿರುತ್ತಾನೆ ಮತ್ತು ಅವನಿಗೇ ನಿಶ್ಚಯಮೋಕ್ಷಮಾರ್ಗವಿರುತ್ತದೆ. ಈ ಪ್ರಕಾರ ಆತ್ಮನ ಸ್ವಭಾವದ ಅವಲಂಬನದಿಂದಲೇ ಮೋಕ್ಷಮಾರ್ಗವಿರುತ್ತದೆ.

**ಪ್ರಶ್ನೆ :-** ಒಂದುವೇಳೆ ಓರ್ವ ಆತ್ಮನ ಆಶ್ರಯದಿಂದಲೇ ನಿಶ್ಚಯಮೋಕ್ಷಮಾರ್ಗವಿದ್ದರೆ, ಆ ವ್ಯವಹಾರ ಮೋಕ್ಷಮಾರ್ಗವನ್ನು ಅದರ ಸಾಧನವೆಂದು ಯಾವುದರ ಸಲುವಾಗಿ ಹೇಳಲಾಗಿದೆ ?

**ಉತ್ತರ :-** ಆತ್ಮನು ಅನಾದಿಕಾಲದಿಂದ ಅವಿದ್ಯೆಯಿಂದ ಸಂಯುಕ್ತನಿದ್ದಾನೆ, ಅವಿದ್ಯೆಯೆಂದರೆ ಅಜ್ಞಾನವಿದ್ದು, ಅದು ಅವನ ಮೂಲ ಸ್ವಭಾವವಿರುವುದಿಲ್ಲ ; ಆದರೆ ಪರ್ಯಾಯದಲ್ಲಿ ಅವನಿಗೆ ಅನಾದಿಯಿಂದ ಅಜ್ಞಾನವಿದೆ. ಒಂದುವೇಳೆ ಆ ಅಜ್ಞಾನವೇ ಇಲ್ಲದೆ ಹೋಗಿದ್ದರೆ ಭಗವಂತನಿರಬೇಕಾಗುವುದು. ಒಂದುವೇಳೆ ಅಜ್ಞಾನವು ಸ್ವಭಾವವಿದ್ದರೆ ಅದು ಎಂದೂ ಹೋಗುವುದಿಲ್ಲ. ಯಾವ ಪ್ರಕಾರ ನೀರಿನೊಳಗೆ ವರ್ತಮಾನದಲ್ಲಿ ಉಷ್ಣತೆಯು ವಿದ್ಯಮಾನವಿದ್ದರೂ ಕೂಡ ಆ ಸಮಯದಲ್ಲಿ ಅದರ ಶೀತಲಸ್ವಭಾವದ ಅಭಾವವಾಗಿ ಹೋಗಿರುವುದಿಲ್ಲ. ವರ್ತಮಾನದಲ್ಲಿ ಉಷ್ಣತೆಯು ಕೂಡ ಇದೆ ಮತ್ತು ಅದರ ಶೀತಲ ಸ್ವಭಾವವು ಕೂಡ ಇದೆಯೆಂದು ಯಾವನು ತಿಳಿಯುತ್ತಾನೆ ಅವನು ನೀರನ್ನು ಯಥಾರ್ಥವಾಗಿ ತಿಳಿಯುತ್ತಾನೆ. ಅದರಂತೆ ಆತ್ಮನ ತ್ರಿಕಾಲೀ ಸ್ವಭಾವದಲ್ಲಿ ದೋಷವಿರುವುದಿಲ್ಲ, ಆದರೆ ಪರ್ಯಾಯದಲ್ಲಿ ಅಸದ್ಭೂತ ವ್ಯವಹಾರದಿಂದ ದೋಷವಿದೆ ಅದು ಹೊರಟುಹೋಗುವ ಸಾಧ್ಯತೆಯಿದೆ. ದೋಷವು ಸ್ವಭಾವದೊಳಗೆ ಇಲ್ಲದಿರುವುದರಿಂದ ಅದು ಹೊರಟುಹೋಗುತ್ತದೆ. ಆದುದರಿಂದ ಅದು ಅಸದ್ಭೂತವಿದೆ. ಕರ್ಮದ ಕಾರಣದಿಂದ ಜೀವನಿಗೆ ಅಜ್ಞಾನ ದೆಸೆಯಿದೆಯೆಂಬುದಾಗಿಲ್ಲ ; ಆದರೆ ಅನಾದಿಯಿಂದಲೇ ತನ್ನ ಕಾರಣದಿಂದ ಜೀವನಿಗೆ ಅಜ್ಞಾನ ದಶೆಯಾಗಿದೆಯೆಂಬುದಾಗಿಲ್ಲ ; ಆದರೆ ಅನಾದಿಯಿಂದಲೇ ತನ್ನ ಕಾರಣದಿಂದ ಜೀವದ ಪರ್ಯಾಯದಲ್ಲಿ ಅಜ್ಞಾನವಿದೆ. ಅಜ್ಞಾನವು ಅದು ಅವಿದ್ಯೆಯಿದೆ. ವಿದ್ಯಮಾನವಿರುವಂಥ ಧ್ರುವಸ್ವಭಾವವನ್ನು ತಿಳಿದುಕೊಳ್ಳುವುದರ ಹೆಸರು ವಿದ್ಯೆಯಿದೆ ಮತ್ತು ತ್ರಿಕಾಲೀ ವಿದ್ಯಮಾನತತ್ತ್ವವನ್ನು ತಿಳಿದುಕೊಳ್ಳಲಾರದೆ ಕ್ಷಣಿಕವಿರುವಂಥ ರಾಗವನ್ನು ತನ್ನ ಸ್ವರೂಪವೆಂದು ಮನ್ನಿಸಿಕೊಳ್ಳುವುದರ ಹೆಸರು ಅವಿದ್ಯೆಯಿದೆ.

ಸ್ವಕಾಲಲಬ್ಧಿಯಿಂದ ಎಂದರೆ ಸ್ವಭಾವದ ಕಡೆಗಿರುವಂಥ ಪುರುಷಾರ್ಥದ ದಶೆಯಿಂದ ಯಾವಾಗ ಅನಾದಿಯ ಅವಿದ್ಯೆಯನ್ನು ನಾಶಮಾಡಲಾಗುತ್ತದೆ ಆಗ ಜೀವನಿಗೆ ವ್ಯವಹಾರಮೋಕ್ಷಮಾರ್ಗದ ಪ್ರವೃತ್ತಿಯಿರುತ್ತದೆ. ಇಲ್ಲಿ ನಿಶ್ಚಯದ ಜತೆಯಲ್ಲಿ ವ್ಯವಹಾರವನ್ನು ಉಳಿಸಿಕೊಂಡಿರುವುದನ್ನು ಕಾಣುತ್ತೇವೆ ಎಂದರೆ ವ್ಯವಹಾರವನ್ನು ಸ್ವೀಕಾರಮಾಡಿಲ್ಲ ; ಆದರೆ ಸ್ವಭಾವವನ್ನು ಹಿಡಿದುಕೊಂಡಿರುವಲ್ಲಿ ದೇವ-ಶಾಸ್ತ್ರ-ಗುರುಗಳ ಕುರಿತಾಗಿರುವ ರಾಗವನ್ನು ವ್ಯವಹಾರವೆಂದು ಹೇಳಲಾಗುತ್ತದೆ. ಸ್ವಭಾವದ ಅವಲಂಬನದಿಂದ ಎಷ್ಟು ವೀತರಾಗೀ ಶ್ರದ್ಧೆ-ಜ್ಞಾನ-ರಮಣತೆಯಾಗುತ್ತದೆ ಅದಂತೂ ನಿಶ್ಚಯ ಮೋಕ್ಷಮಾರ್ಗವಿದೆ. ಅಲ್ಲಿ ಯಾವ ವ್ಯವಹಾರ ಶ್ರದ್ಧೆ-ಜ್ಞಾನ-ಚಾರಿತ್ರದ ರಾಗವು ಉಳಿದುಕೊಂಡಿರುತ್ತದೆ ಅದನ್ನು ವ್ಯವಹಾರದ ಸಾಧನವೆಂದು ಹೇಳಲಾಗುತ್ತದೆ. ಆತ್ಮನ ಜ್ಞಾನ-ಅನುಭೂತಿಯಿಲ್ಲದೆ ಅನಂತಬಾರಿ ದ್ರವ್ಯಲಿಂಗೀ ಮುನಿಯಾಗಿದೆ; ಆದರೆ ಅದನ್ನು ನಿಜವಾಗಿ ವ್ಯವಹಾರವೆಂದು ಹೇಳಲಾಗುವುದಿಲ್ಲ. ಆಂತರ್ಯದಲ್ಲಿ ಜ್ಞಾನದ ಮೂಲಕವಾಗಿಯೇ ಆತ್ಮನನ್ನು ಹಿಡಿದುಕೊಳ್ಳಲಾಗುತ್ತದೆಯೆಂಬ ಮಾತು ಅವನ ಲಕ್ಷ್ಯದಲ್ಲಿ ಬರುವುದಿಲ್ಲ. ಆಂತರ್ಯದಲ್ಲಿ ಸ್ವಭಾವದ ಶ್ರದ್ಧೆ-ಜ್ಞಾನ-ಏಕಾಗ್ರತೆಯನ್ನು ಪ್ರಕಟಪಡಿಸಿಕೊಂಡಿರುವುದನ್ನೇ ಇಲ್ಲಿ ವ್ಯವಹಾರವೆಂದು ಹೇಳಲಾಗಿದೆ. ಅನಾದಿಯಿಂದ ಯಾವ ಮಿಥ್ಯಾಶ್ರದ್ಧೆ, ಮಿಥ್ಯಾಜ್ಞಾನ ಮತ್ತು ಮಿಥ್ಯಾಚಾರಿತ್ರವಿತ್ತು ಅದು ಮಿಥ್ಯಾರತ್ನತ್ರಯವಿದೆ. ಅಲ್ಲಿ ಯಥಾರ್ಥ ಸ್ವಭಾವದ ಸಮ್ಯಕ್ ಶ್ರದ್ಧೆ-ಜ್ಞಾನ ಮತ್ತು ರಮಣತೆಯಾಯಿತು ಅಲ್ಲಿ ಅವನಿಗೆ ಮಿಥ್ಯಾರತ್ನತ್ರಯದ ನಾಶವಾಗಿ ಹೋಗುವುದು. ಯಥಾರ್ಥ ತತ್ತ್ವಗಳ ಶ್ರದ್ಧೆ, ಹನ್ನೆರಡು ಅಂಗಗಳ ಜ್ಞಾನ ಹಾಗೂ ಯಥಾರ್ಥ ಚಾರಿತ್ರದ ಆಚರಣವು ಮಿಥ್ಯಾರತ್ನತ್ರಯದ ನಾಶದ ಉಪಾಯವಿದೆ. ಇಂಥ ರತ್ನತ್ರಯವನ್ನು ಗ್ರಹಣ ಮಾಡುವುದರ ವಿಚಾರ ಬರುವುದು ವ್ಯವಹಾರವಿದೆ. ತನ್ನ ಸ್ವಭಾವದ ನಿಶ್ಚಯ ಶ್ರದ್ಧೆ-ಜ್ಞಾನ ಮಾಡಿಕೊಂಡಿರುವಂಥ ಜೀವನಿಗೆ ಈ ಪ್ರಕಾರದ ವ್ಯವಹಾರ ಬರುತ್ತದೆ.

ಅಜ್ಞಾನೀ ಜೀವನು ಅನಾದಿಯಿಂದ ಆತ್ಮಸ್ವಭಾವವನ್ನು ಮರೆತುಹೋಗಿ, ಗ್ರಹಣಯೋಗ್ಯವಿರುವಂಥ ಶುದ್ಧಚೇತನಸ್ವಭಾವದ ಆದರ ಮಾಡುವುದಿಲ್ಲ, ಎಂದರೆ ಅದರ ತ್ಯಾಗ ಮಾಡಿಬಿಟ್ಟಿದ್ದಾನೆ ಮತ್ತು ತ್ಯಾಗಯೋಗ್ಯವಿರುವಂಥ ಮಿಥ್ಯಾತ್ವಾದಿಗಳನ್ನು ಗ್ರಹಣ ಮಾಡಿದ್ದಾನೆ. ಇಲ್ಲಿ ಪರವಸ್ತುವಿನ ಗ್ರಹಣ-ತ್ಯಾಗದ ಮಾತೇ ಇಲ್ಲ.

ತ್ರಿಕಾಲೀ ನಿರ್ಮಲ ಜ್ಞಾನಾನಂದ ಸ್ವಭಾವ ಮತ್ತು ವರ್ತಮಾನದಲ್ಲಿನ ಒಂದು ಸಮಯದ ದೋಷ-ವಿಕಾರ ಇವೆರಡನ್ನು ತಿಳಿದುಕೊಂಡರೆ ಅದು ಪ್ರಮಾಣ ಜ್ಞಾನವಾಗುತ್ತದೆ. ಅಜ್ಞಾನಿಯು ತ್ರಿಕಾಲೀ ಶುದ್ಧಸ್ವಭಾವವನ್ನು ಆದರಿಸಲು ಯೋಗ್ಯವಿದೆಯೆಂದು ಮನ್ನಿಸುತ್ತ, ಶುಭರಾಗವನ್ನು ಒಳ್ಳೆಯದೆಂದು ಮನ್ನಿಸುತ್ತಿರುವುದರಿಂದ ಅವನು ತನ್ನ ಸ್ವಭಾವದ ಆದರ ಮಾಡುವುದಿಲ್ಲ,ಅದರಿಂದ ಅವನ ಮಿಥ್ಯಾಜ್ಞಾನದ ಹೆಸರು ಅವಿದ್ಯೆಯಿದೆ.

ನಾನು ಚಿದಾನಂದನಿದ್ದೇನೆ, ನಾನು ಪರದ ಕರ್ತೃ-ಭೋಕ್ತೃ-ಅಧಿಪತಿಯಿಲ್ಲ. ಯಾವ ಕ್ಷಣಿಕ ರಾಗವಿದೆ ಅದು ತ್ರಿಕಾಲೀ ಸ್ವಭಾವದಲ್ಲಿ ಇಲ್ಲವೆಂಬುದನ್ನು ತಿಳಿದುಕೊಂಡು ವಿಕಾರ ಅಥವಾ ಯಾವ ತನ್ನ ಕ್ಷಣಿಕ ಅಪರಾಧವಿದೆ ಅದು ಬಿಟ್ಟುಕೊಡಲು ಯೋಗ್ಯವಿದೆ. ಯಾವ ತ್ರಿಕಾಲೀ ದ್ರವ್ಯಸ್ವಭಾವವು ಶುದ್ಧವಿದೆ ಅದುವೇ ಗ್ರಹಣ ಮಾಡಲು ಯೋಗ್ಯವಿದೆಯೆಂಬುದನ್ನು ಯಾವನು ಮನ್ನಿಸುವುದಿಲ್ಲ ಮತ್ತು ಅದರಿಂದ ಅಂತರ್ಮುಖ ದೃಷ್ಟಿಯನ್ನು ಮಾಡುವುದಿಲ್ಲ ಅವನು ಅನಾದಿಯಿಂದ ಸಂಸಾರದಲ್ಲಿ ಭ್ರಮಣ ಮಾಡುತ್ತಿದ್ದಾನೆ. ಸ್ವಾಶ್ರಯಶ್ರದ್ಧೆ, ಸಮ್ಯಕ್‌ಜ್ಞಾನ ಮತ್ತು ಸ್ವರೂಪ ರಮಣತೆಯಾಗುತ್ತಿರುವಂತೆ ಪುಣ್ಯದ-ವ್ಯವಹಾರದ-ಕುದೇವಾದಿಗಳ ಶ್ರದ್ಧಾದಿಗಳ ರೂಪದ ಅಜ್ಞಾನ, ಮಿಥ್ಯಾರತ್ನತ್ರಯದ ತ್ಯಾಗ ಮತ್ತು ಯಥಾರ್ಥ ತತ್ತ್ವಗಳ ಶ್ರದ್ಧೆ, ಸಮ್ಯಕ್‌ಜ್ಞಾನ ಹಾಗೂ ಯಥಾರ್ಥ ಚಾರಿತ್ರರೂಪ ಸಮ್ಯಕ್ ರತ್ನತ್ರಯದ ಗ್ರಹಣ ಮಾಡುವಂಥ ಉದ್ಯಮವನ್ನು ಮಾಡುತ್ತಾನೆ.

ವರ್ತಮಾನದಲ್ಲಿ ಪರ್ಯಾಯ ಬುದ್ಧಿಯಿತ್ತು, ಪುಣ್ಯ-ಪಾಪರೂಪದ ಶುಭಾಶುಭ ವಿಕಲ್ಪಗಳಲ್ಲಿ ಹಿತವಿದೆಯೆಂದು ಮನ್ನಿಸುತ್ತಿದ್ದನು. ಆ ವಿಕಾರದಲ್ಲಿನ ಏಕತೆಯ ಬುದ್ಧಿಯನ್ನು ಬಿಟ್ಟುಕೊಟ್ಟು,ತ್ರಿಕಾಲ ಜ್ಞಾತಾ-ದೃಷ್ಟಾಸ್ವರೂಪನಿರುವಂಥ ನಾನು ಭಿನ್ನನಿದ್ದೇನೆಂದು ಅಭೇದ ಸ್ವರೂಪದ ಆಶ್ರಯ ಮಾಡಿ ನಿರ್ಮಲ ದೃಷ್ಟಿಯುಳ್ಳವನಿದ್ದಾನೆ, ಅವನು ಈಗ ಚಾರಿತ್ರದಲ್ಲಿ ವಿಶೇಷ ಸ್ಥಿರತೆಯ ಬಲದಿಂದ ಶುದ್ಧಿಯ ವೃದ್ಧಿಯ ಸಲುವಾಗಿ ಪ್ರಯತ್ನಮಾಡುತ್ತಾನೆ. ಅದರ ಕಾರಣದಿಂದಂತೂ ಅಭೇದ ದ್ರವ್ಯಸ್ವಭಾವದ ಅವಲಂಬನರೂಪವಿರುವಂಥ ಏಕಾಗ್ರತೆಯೇ ಇದೆ, ಆದರೆ ವ್ಯವಹಾರದಿಂದ ಶುಭವಿಕಲ್ಪ ರೂಪದ ಅಣುವ್ರತ-ಮಹಾವ್ರತಾದಿಗಳ ಮಂದ ರಾಗವಿರುತ್ತದೆ ; ಆದರೆ ಅದರಲ್ಲಿ ಹೇಯಬುದ್ಧಿಯಿರುವುದರಿಂದ ಅದನ್ನು ಉಪಚಾರದಿಂದ ಸಾಧನವೆಂದು ಹೇಳಲಾಗುತ್ತದೆ.

ಎಂದಾದರೊಮ್ಮೆ ಆಚರಣದಲ್ಲಿ ದೋಷವು ತಗಲಿದರೆ ಅದರ ಶುದ್ಧಿ ಮಾಡಿಕೊಳ್ಳುವುದು ಅದು ವ್ಯವಹಾರ ಆಲೋಚನೆಯಿದೆ. ಸ್ವಭಾವದಲ್ಲಿ ಸ್ಥಿರತೆ ಸಾಧಿಸುವುದು ನಿಶ್ಚಯ ಆಲೋಚನೆಯಾಗುತ್ತದೆ. ಯಾವಾಗ ವಿಶೇಷರೂಪದಿಂದ ಶುದ್ಧಾತ್ಮತತ್ತ್ವದಲ್ಲಿ ಏಕಾಗ್ರತೆ ಮಾಡುತ್ತಾನೆ ಆಗ ಸ್ವಾಭಾವಿಕವಿರುವಂಥ ಆನಂದದಲ್ಲಿ ನಿಮಗ್ನನಾಗಿ ಹೋಗುತ್ತಾನೆ. ಆರನೆಯ-ಏಳನೆಯ ಗುಣಸ್ಥಾನದಲ್ಲಿ ಸಾವಿರಾರು ಬಾರಿ ಜೀಕುತ್ತಾನೆ. ಏಳನೆಯ ಗುಣಸ್ಥಾನದೊಳಗೆ ಪರಮಾನಂದದಲ್ಲಿ ಲೀನನಿರುತ್ತಾನೆ. ಬುದ್ಧಿಪೂರ್ವಕ ವಿಕಲ್ಪಗಳು ಇರುವುದಿಲ್ಲ. ಜ್ಞಾತಾ-ದೃಷ್ಟಾರೂಪದ ಆನಂದಮಯವಾದ ದ್ರವ್ಯಸ್ವಭಾವದಲ್ಲಿ ವಿಶೇಷ, ನಿಶ್ಚಲ ಸ್ಥಿರನಿರುತ್ತಾನೆ. ಅಲ್ಲಿಯಂತೂ ಗುಣ-ಗುಣಿಯಭೇದದಿಂದ ರಹಿತ-ರಾಗದಿಂದ ರಹಿತ ಅಚಲ-ಅಕಂಪನಾಗುತ್ತಾನೆ. ಇದು ಮುನಿದಶೆಯ ವರ್ಣನೆ ನಡೆಯುತ್ತಿದೆ. ಈಗಂತೂ ದೃಶ್ಯಮಾನ ಕ್ಷೇತ್ರದಲ್ಲಿ ಇಂಥ ಭಾವಲಿಂಗೀ ಮುನಿರಾಜರು ದೊರಕುವುದಿಲ್ಲ-ಕಂಡುಬರುವುದಿಲ್ಲ. ಮುನಿಪದದಲ್ಲಿ ವಸ್ತ್ರಗಳು ಇರುವುದಿಲ್ಲ. ಮೂರು ಕಷಾಯ ಚೌಕಡಿಗಳ ಅಭಾವವಾಗಿ, ಅತಿಶಯ ಶಾಂತ, ನಿರ್ಮಲ, ವೀತರಾಗ, ನಿರ್ವಿಕಲ್ಪದಶೆಯು ನಿಶ್ಚಲರೂಪದಿಂದ

ವರ್ತಿಸುತ್ತಿದ್ದರೆ ಅದು ಮುನಿದಶೆಯಿದೆ. ಆಗ ಯಾವುದರದೂ ಗ್ರಹಣ-ತ್ಯಾಗದ ಬುದ್ಧಿಯೇ ಉಳಿದಿರುವುದಿಲ್ಲ. ಅದರಂತೆ ಸ್ವಭಾವವನ್ನು ಹಿಡಿದುಕೊಳ್ಳಬೇಕು ಮತ್ತು ರಾಗವನ್ನು ಬಿಟ್ಟುಕೊಡಬೇಕೆಂಬ ವಿಕಲ್ಪವು ಕೂಡ ಉಳಿದಿರುವುದಿಲ್ಲ ಎಂದರೆ ವಿಕಲ್ಪಗಳು ಬರುವುದೇ ಇಲ್ಲ. ಆತ್ಮನು ಜ್ಞಾತಾ-ದೃಷ್ಟಾ ಭಗವಂತನಿದ್ದಾನೆಂಬ ದೃಷ್ಟಿಯಂತೂ ಇತ್ತು, ಆದರೆ ಮುನಿರಾಜರು ಜ್ಞಾನಾನಂದ ಸ್ವಭಾವದ ವಿಶೇಷತರವಾದ ಶಾಂತಿಯಲ್ಲಿ ಸಹಸ್ರಾರು ಬಾರಿ ಉಳಿಯುತ್ತಾರೆ. ವಂದ್ಯ-ವಂದಕದ ವಿಕಲ್ಪ, ಶ್ರವಣ ಮಾಡುವ ಮಾಡಿಸುವುದರ ರಾಗವು ಏಳನೆಯ ಗುಣಸ್ಥಾನದ ಭೂಮಿಕೆಯಲ್ಲಿ ಇರುವುದಿಲ್ಲ. ಆರನೆಯ ಗುಣಸ್ಥಾನವು ಸವಿಕಲ್ಪವಿರುತ್ತದೆ. ಏಳನೆಯದರಲ್ಲಿ ನಿರ್ವಿಕಲ್ಪ ಆನಂದದೊಳಗೆ ಸಿದ್ಧ ಭಗವಂತರುಗಳ ಸಮಾನವಾಗಿರುವಂಥ ಅಪೂರ್ವ ಆನಂದವಿರುತ್ತದೆ, ಆದರೆ ಅವರು ಸಿದ್ಧಭಗವಂತರುಗಳ ಸಮಾನ ಪೂರ್ಣರಾಗಿ ಹೋಗಿರುವುದಿಲ್ಲ.

ಅಖಂಡಾನಂದ ಸ್ವರೂಪದ ಅಭಿರುಚಿಯಂತೂ ಇದ್ದೇ ಇತ್ತು. ಆರನೆಯದರಲ್ಲಿ ಕೂಡ ಸ್ವಸನ್ಮುಖ ಏಕತೆಯ ವಿಚಾರವಿರುತ್ತದೆ, ಆದರೆ ಆ ಬುದ್ಧಿಪೂರ್ವಕವಿರುವಂಥ ವಿಕಲ್ಪದಿಂದ ಬಿಡುಗಡೆಹೊಂದಿ ನಿರ್ವಿಕಲ್ಪ ಅಭೇದ ಆತ್ಮನಲ್ಲಿ ನಿಮಗ್ನರಾಗಿ ಹೋಗುತ್ತಾರೆ. ಆ ಸಮಯದೊಳಗೆ ಶರೀರಕ್ಕೆ ಚೇಳು ಕಚ್ಚಿದರೆ, ಅಗ್ನಿಯ ಜ್ವಾಲೆಯು ತಗಲಿದರೆ ಅದರದು ಕೂಡ ಅರಿವಿರುವುದಿಲ್ಲ. ಸ್ವರೂಪದಲ್ಲಿ ಎಂಥ ನಿರ್ಭಯ ನಿರ್ವಿಕಲ್ಪ ಶಾಂತಿಯ ಕೋಟೆಯು ಕಟ್ಟಲ್ಪಟ್ಟಿರುತ್ತದೆಯೆಂದರೆ ಅಲ್ಲಿ ಯಾವುದೇ ಪ್ರಕಾರದ ಉಪಸರ್ಗದ ಅರಿವೇ-ಪ್ರಜ್ಞೆಯೇ ಇರುವುದಿಲ್ಲ-ಆರನೆಯ ಗುಣಸ್ಥಾನದೊಳಗೆ ವಿಕಲ್ಪದಲ್ಲಿ ಬಂದನಂತರವೇ ಸಂಯೋಗದ ಪ್ರಜ್ಞೆಯು ಮೂಡಿಬರುತ್ತದೆ. ಕಾರಣವೇನೆಂದರೆ ಏಕಕಾಲದಲ್ಲಿ ಎರಡು ಕಡೆಗೆ ಉಪಯೋಗವು ಛದ್ಮಸ್ಥದಶೆಯಲ್ಲಿ ಇರುವುದಿಲ್ಲ. ಜ್ಞಾನಚೇತನವು ದೃಷ್ಟಿಯಲ್ಲಿ ನಿರಂತರ ಅಖಂಡ ಉಳಿದುಕೊಂಡಿದ್ದರೂ ಕೂಡ ಪ್ರತ್ಯಕ್ಷ ಉಪಯೋಗದಲ್ಲಿ ಆಂತರ್ಯದೊಳಗೆ ಏಕಾಗ್ರತೆಯರೂಪದ ಜ್ಞಾನಚೇತನವು ಮುನಿರಾಜರಿಗೆ ಏಳನೆಯ ಗುಣಸ್ಥಾನದಲ್ಲಿಯೇ ಇರುತ್ತದೆ. ಅಲ್ಲಿ ಪಂಚ ಮಹಾವ್ರತಗಳದ್ದಾಗಲಿ ಅಥವಾ ಭಕ್ತಿ ಮೊದಲಾದ ಯಾವುದೇ ಪ್ರಕಾರದ ಬುದ್ಧಿಪೂರ್ವಕ ರಾಗವು ಇರುವುದಿಲ್ಲ. ವರ್ತಮಾನದಲ್ಲಿ ಜನರು ಈ ಪ್ರಕಾರದ ಭಾವಲಿಂಗೀ ಮುನಿತನವನ್ನು ಕೇಳಿ ತಿಳಿದುಕೊಂಡಿಲ್ಲ. ಬಾಹ್ಯ ವೇಷದಲ್ಲಿ-ಕ್ರಿಯಾಕಾಂಡದಲ್ಲಿ ಮುನಿಪದವನ್ನು ಮನ್ನಿಸಿಕೊಂಡು ಕುಳಿತಿದ್ದಾರೆ. ಆದರೆ ಅದರ (ವೇಷದ) ಆಶ್ರಯದಿಂದ ಮೋಕ್ಷಮಾರ್ಗವಿರುವುದಿಲ್ಲ. ನಾಲ್ಕನೆಯ ಗುಣಸ್ಥಾನದಿಂದಲೇ ನಿರಂತರ ಜ್ಞಾನಚೇತನದ ಸ್ವಾಮಿತ್ವಭಾವದಿಂದ ಪರಿಣಮನವಿರುತ್ತದೆ, ಆದರೆ ಅದರ ಉಗ್ರ ಅವಲಂಬನರೂಪದ ಚಾರಿತ್ರ ದಶೆಯಂತೂ ಆರನೆಯ-ಏಳನೆಯ ಗುಣಸ್ಥಾನದಲ್ಲಿರುತ್ತದೆ.

ಮುನಿರಾಜರು ಸ್ವಸನ್ಮುಖತೆಯ ಮೂಲಕ ಎಷ್ಟು ಅಂಶದಲ್ಲಿ ರಾಗಾದಿಗಳ ರೂಪವಾಗಿ ವರ್ತಿಸುವುದಿಲ್ಲ, ಅಷ್ಟು ಅಕ್ರಿಯರಿರುತ್ತಾರೆ ಮತ್ತು ಎಷ್ಟು ಸ್ವರೂಪಾಚರಣದಲ್ಲಿ ವೃದ್ಧಿ ಮಾಡುತ್ತಾರೆ ಅಷ್ಟು ಅಂಶದಲ್ಲಿ ಸಕ್ರಿಯರಿರುತ್ತಾರೆ. ಆರನೆಯ ಗುಣಸ್ಥಾನವು ಕೂಡ ಅಲ್ಪಕಾಲವಿರುತ್ತದೆ. ಅಲ್ಲಿ ಬುದ್ಧಿಪೂರ್ವಕ ವಿಕಲ್ಪವಿದ್ದರೂ ಕೂಡ ಶೀಘ್ರ-ಶೀಘ್ರವಾಗಿ ಏಳನೆಯ ಗುಣಸ್ಥಾನದೊಳಗೆ ನಿರ್ವಿಕಲ್ಪ ಆನಂದದಲ್ಲಿ ಲೀನತೆಯಾಗುವುದು ಪುನಃ ಪುನಃ ನಡೆದಿರುತ್ತದೆ. ಈ ಪ್ರಕಾರ ಮೂರು ಕಾಲದಲ್ಲಿ ಭಾವಲಿಂಗೀ ಮುನಿರಾಜರ ಸ್ವರೂಪವಿರುತ್ತದೆ ಮತ್ತು ಅದೇ ಮೋಕ್ಷಮಾರ್ಗವಿದೆ.

ಮನಸ್ಸು, ಇಂದ್ರಿಯ, ವಿಕಲ್ಪಗಳಿಂದ ಅತೀತ, ನಿರ್ವಿಕಲ್ಪ-ನಿರಾಲಂಬ ಅಭೇದ ಆತ್ಮಾನುಭವವನ್ನು ಪ್ರತ್ಯಕ್ಷ ಸ್ವಸಂವೇದನದಿಂದ ತಿಳಿದುಕೊಳ್ಳಬಹುದಾಗಿದೆ. ಬಾಹ್ಯ ಪ್ರವೃತ್ತಿ ಮೊದಲಾದುವಿಂದ ಅದನ್ನು ತಿಳಿಸಿಕೊಡುವ ಸಾಧ್ಯತೆಯಿಲ್ಲ. ಒಂದುವೇಳೆ ತಿಳಿದುಕೊಳ್ಳುವ ಅಪೇಕ್ಷೆಯಿದ್ದರೆ ಜ್ಞಾನದ ಮೂಲಕವೇ ತಿಳಿದುಕೊಳ್ಳಬಹುದಾಗಿದೆ. ಜ್ಞಾನಸ್ವಭಾವವು ನಿತ್ಯಚಿದಾನಂದವಿದೆ, ಅದನ್ನು ಬಿಟ್ಟುಕೊಟ್ಟು ಪರದ ಆಶ್ರಯದಲ್ಲಿ, ದೇಹ-ರಾಗ ಮೊದಲಾದವುಗಳಲ್ಲಿ ಒಳ್ಳೆಯದೆಂದು

ಮನ್ನಿಸಿದರೆ ಅವರಿಗೆ ಅನಂತ ಪರಗಳಲ್ಲಿ ಅನಂತ ಏಕತೆಯ ಬುದ್ಧಿಯ ಅನಂತ ದುಃಖವಿರುತ್ತದೆ. ಸ್ವಾಧೀನ ಜ್ಞಾತಾನೇ ಇದ್ದೇನೆನ್ನುವುದರಲ್ಲಿ ಪರಾಶ್ರಯದೊಳಗೆ ಸಿಕ್ಕಿಬೀಳುವ ರೂಪದ ದುಃಖವಿರುವುದಿಲ್ಲ. ಜ್ಞಾನ ಮಾಡಿಕೊಂಡರೇನೇ ಈ ಮಾತು ತಿಳಿದುಬರುವುದಿದೆ. ಅನಂತ ಪರಗಳಿಂದ ಭಿನ್ನ ಕ್ಷಣಿಕ ರಾಗದಿಂದ ಕೂಡ ಭಿನ್ನನಾದ ನಾನು ತ್ರಿಕಾಲ ಜ್ಞಾನಾನಂದನಿದ್ದೇನೆಂಬ ಅಭಿರುಚಿ ತಂದುಕೊಂಡು ಅದರಲ್ಲಿ ಸ್ಥಿರಗೊಂಡರೆ, ಒಂದು ಪ್ರತ್ಯಕ್ಷ ಜ್ಞಾನದಲ್ಲಿ ಲೀನತೆ ಮಾಡಿದರೆ ಅಂಥ ಅನುಭವವು ಯಾವುದೇ ಹೊರಗಿನ ಕಾರಣದಿಂದ ಆಗುವುದಿಲ್ಲ.

ಯಾವಾಗ ಪರಮ ಶಾಂತವಿರುವಂಥ ಅಮೃತರಸದಲ್ಲಿ ಆಂತರ್ಯದ ದಶೆಯಿಂದ ಆತ್ಮಾನಂದವನ್ನು ಅನುಭವಿಸುತ್ತದೆ ಅಲ್ಲಿ ವಿಶೇಷ ವೀತರಾಗದಶೆಯಾಗುತ್ತದೆ.ಅಲ್ಲಿ ಅತ್ಯಂತ ನಿಶ್ಚಲ ಭಾವದಿಂದ ಈ ಆತ್ಮನು ಸ್ವರೂಪದಲ್ಲಿ ಗುಪ್ತನಾಗುತ್ತಾನೆ ಮತ್ತು ಆ ಜೀವನನ್ನು ಮೋಕ್ಷಮಾರ್ಗಿಯೆಂದು ಹೇಳಲಾಗುತ್ತದೆ. ಅಲ್ಲಿರುವಂಥ ಅಭೇದ ವೀತರಾಗಚಾರಿತ್ರದಶೆಯು ಸಾಧ್ಯವಿದೆ-ನಿಶ್ಚಯವಿದೆ ಮತ್ತು ಯಾವ ವ್ಯವಹಾರ ರತ್ನತ್ರಯದ ವಿಕಲ್ಪವಿರುತ್ತದೆ ಅದನ್ನು ಉಪಚಾರದಿಂದ ವ್ಯವಹಾರ ಸಾಧನವೆಂದು ಹೇಳಲಾಗುತ್ತದೆ.

ಈ ಪ್ರಕಾರ ನಿಶ್ಚಯ-ವ್ಯವಹಾರ ಮೋಕ್ಷಮಾರ್ಗದಲ್ಲಿ ಸಾಧ್ಯ-ಸಾಧನ ಭಾವದ ಸಿದ್ಧಿಯಿದೆ.

ಆಚರಣದಲ್ಲಿ ನಿರ್ವಿಕಲ್ಪಲೀನತೆಯಲ್ಲಿ ಒಂದಾಗಿ ಹೋಗುವುದೇ ನಿಜವಾದ ಮೋಕ್ಷಮಾರ್ಗವಿದೆ. ಅಲ್ಲಿ ಮಧ್ಯದೊಳಗೆ ನಿಮಿತ್ತರೂಪವಿರುವಂಥ ವ್ಯವಹಾರ ರತ್ನತ್ರಯದ ಶುಭರಾಗವು ಬರುತ್ತದೆ ಅದನ್ನು ಉಪಚಾರದಿಂದ ಸಾಧನವೆಂದು ಹೇಳಲಾಗುತ್ತದೆ.

ಯಾರಿಗೆ ವಸ್ತುಸ್ಥಿತಿಯ ಅರಿವುಂಟಾಗಿರುವುದು ಅವರಿಗೆ ಒಂದುವೇಳೆ ರಾಗವಿದ್ದರೆ ಅದು ಸರ್ವಜ್ಞ ವೀತರಾಗದೇವ, ನಿರ್ಗ್ರಂಥ ದಿಗಂಬರ ಭಾವಲಿಂಗೀ ಮುನಿರಾಜ, ಅಂಥ ಗುರು ಮತ್ತು ಸ್ವತಂತ್ರ ಆರು ದ್ರವ್ಯಗಳು ಮೊದಲಾದುವನ್ನು ತಿಳಿಸಿಕೊಡುವಂಥ ಸತ್ಯಾರ್ಥ ಶಾಸ್ತ್ರಗಳ ಕುರಿತಾಗಿಯೇ ಇರುತ್ತದೆ. ಬೇರೆ ಯಾವುದರ ಕುರಿತಾಗಿ ವಿನಯಾದಿಗಳ ರಾಗವು ಇರುವುದಿಲ್ಲ. ಮುನಿರಾಜರಿಗೆ ಇಪ್ಪತ್ತೆಂಟು ಮೂಲಗುಣ ಮೊದಲಾದವುಗಳ ರಾಗವೇ ಆ ಭೂಮಿಕೆಯ ಅನುಸಾರವಿರುತ್ತದೆ. ಅದರಿಂದ ವಿರುದ್ಧವಿರುವಂಥ ರಾಗವಿದ್ದರೆ ಅದು ಮುನಿಪದವಿಗೆ ಯೋಗ್ಯವಾದ ರಾಗವಲ್ಲ. ಜ್ಞಾನಿಗೆ ವ್ಯವಹಾರ ರತ್ನತ್ರಯರೂಪದ ಶುಭರಾಗವಿರುತ್ತದೆ, ಆದರೆ ಅದರ ಆಶ್ರಯದಿಂದ ಮೋಕ್ಷಮಾರ್ಗವಿರುವುದಿಲ್ಲವೆಂದು ತಿಳಿದುಕೊಳ್ಳಬೇಕು.

ಈಗ ಆತ್ಮನ ಜ್ಞಾನ-ದರ್ಶನವನ್ನು ಪ್ರಕಟಪಡಿಸುವ ಉದ್ದೇಶದಿಂದ ಆಚಾರ್ಯ ಭಗವಂತರು ಮೂಲ ಗಾಥೆಯನ್ನು ಹೇಳುತ್ತಾರೆ -

**ಜೋ ಚರದಿ ಣಾದಿ ಪೇಚ್ಛದಿ ಅಪ್ಪಾಣಂ ಅಪ್ಪಣಾ ಅಣಣ್ಣಮಯಂ ।**
**ಸೋ ಚಾರಿತ್ತಂ ಣಾಣಂ ದಂಸಣಮಿದಿ ಣಿಚ್ಛಿದೋ ಹೋದಿ ।।೧೬೨।।**

**ಯಾವನನನ್ಯಮಯ ಆತ್ಮನನಾತ್ಮನಿಂದಾಚರಿಪ ತಿಳಿವ ನೋಡುವನು ।**
**ಅವನೆ ನಿಶ್ಚಯದಿ ಚಾರಿತ್ರನಿಹನು ಜ್ಞಾನನಿಹನು ದರ್ಶನನಿಹನು ।।೧೬೨।।**

ಯಾವ ಪುರುಷನು ತನ್ನ ಜ್ಞಾತಾಸ್ವರೂಪದಿಂದ ಜ್ಞಾನ ಮೊದಲಾದ ಗುಣ-ಪರ್ಯಾಯಗಳಿಂದ ಅಭೇದ ಏಕರೂಪ ಆಚರಣೆ ಮಾಡುತ್ತಾನೆ, ತಿಳಿಯುತ್ತಾನೆ, ಶ್ರದ್ಧೆಮಾಡುತ್ತಾನೆ ಅಂಥ ಆ ಆತ್ಮನೇ ಸ್ವಯಂ ಚಾರಿತ್ರನಿದ್ದಾನೆ. ತಿಳಿದುಕೊಳ್ಳುವಂಥವ, ನೋಡುವಂಥವ, ಆಚರಣೆ ಮಾಡುವಂಥವ ಈ ಮೂರರ ನಾಮಭೇದದಿಂದ ರಹಿತ ಸ್ವಯಂ

ದರ್ಶನ-ಜ್ಞಾನ-ಚಾರಿತ್ರರೂಪದಿಂದ ಆಗುತ್ತಾನೆ. ರಾಗರಹಿತ ಸ್ವರೂಪಾನಂದ ಧಾಮದಲ್ಲಿ ನಿಮಗ್ನವಾಗಿ ಹೋಗುವುದರ ಹೆಸರು ದರ್ಶನ-ಜ್ಞಾನ-ಚಾರಿತ್ರವಿದೆ. ಆಗ ಎಷ್ಟು ರಾಗವು ಉಳಿದುಕೊಂಡಿರುತ್ತದೆ ಅದು ಮೋಕ್ಷಮಾರ್ಗವಿರುವುದಿಲ್ಲ. ಚಿದಾನಂದಮಯ ಪರಮಶಾಂತ ವೀತರಾಗ ಆನಂದದ ಕ್ರೀಡೆಯು ಅಂತರ್ಯದಲ್ಲಿ ಆರಂಭವಾಗಿ ಹೋಗುವುದರ ಹೆಸರು ನಿಜವಾದ ಮೋಕ್ಷಮಾರ್ಗವಿದೆ.

**ಭಾವಾರ್ಥ :-** ನಿಜವಾಗಿ ಯಾವ ಆತ್ಮನು ತನ್ನ ಮೂಲಕ (ಎಂದರೆ ಮನಸ್ಸು, ಇಂದ್ರಿಯ, ವಿಕಲ್ಪ, ಶರೀರ ಮೊದಲಾದವುಗಳ ಮೂಲಕ ಇಲ್ಲ) ತನ್ನದೇ ಆದ ಅಭೇದರೂಪದ ಆಚರಣೆ ಮಾಡುತ್ತಾನೆ ಅವನು ಅಂತರ್ಯದ ಜ್ಞಾನಾನಂದದಲ್ಲಿ ಲೀನನಾಗಿ ಹೋಗುತ್ತಾನೆ. ಅದುವೇ (ಆ ಲೀನವಾಗಿ ಹೋಗುವುದೇ) ಚಾರಿತ್ರವಿದೆ. ಏಕೆಂದರೆ ಅಭೇದದೃಷ್ಟಿಯಿಂದ ಆತ್ಮನು ಗುಣ-ಗುಣಿಯ ಭಾವದಿಂದ ಏಕನಿದ್ದಾನೆ. ಯಾವ ಪ್ರಕಾರ ಸಕ್ಕರೆ ಮತ್ತು ಸಿಹಿತನವು ಏಕವಿದೆ, ನಿಂಬೆಯ ಹಣ್ಣು ಮತ್ತು ಅದರ ಹುಳಿತನವು ಏಕವಿದೆ, ಅದೇ ಪ್ರಕಾರ ನಿತ್ಯ ಜ್ಞಾನಾನಂದ ಸ್ವಭಾವ ಮತ್ತು ಸ್ವಭಾವವಂತನಾದ ಆತ್ಮನು ಏಕನಿದ್ದಾನೆ. ಈ ರೀತಿಯಿಂದ ನಿರ್ಮಲ ಪ್ರತೀತಿಯ ಅನುಸಾರವಾಗಿ ಪ್ರತ್ಯಕ್ಷ ತನ್ನ ಸ್ವಭಾವದಿಂದ ನಿಶ್ಚಲಭಾವದಲ್ಲಿ ಪ್ರವರ್ತನೆ ಮಾಡಿದರೆ ಅಲ್ಲಿ ವಿಕಲ್ಪಗಳ ಉತ್ಪತ್ತಿಯೇ ಆಗುವುದಿಲ್ಲ ಮತ್ತು ಅನ್ಯಕಾರಣವಿಲ್ಲದೆ ಎಂದರೆ ನಿಮಿತ್ತ, ಮನಸ್ಸು, ರಾಗವಿಲ್ಲದೆ ತಾನೇ ತನ್ನನ್ನು ಮುಕ್ತಾನಂದರೂಪದಿಂದ ತಿಳಿಯುತ್ತಾನೆ, ಅದು ಮೋಕ್ಷಮಾರ್ಗವಿದೆ.

ಸಮ್ಯಕ್ ಚಾರಿತ್ರವು ಪ್ರತ್ಯಕ್ಷಮೋಕ್ಷದ ಕಾರಣವಿದ್ದು, ಇಲ್ಲಿ ಅದರ ವರ್ಣನೆಯು ನಡೆಯುತ್ತಿದೆ. ಸ್ವ-ಪರ ಪ್ರಕಾಶಕ ಚೈತನ್ಯಶಕ್ತಿಯ ಮೂಲಕ ಸ್ವಯಂ ಆತ್ಮನೇ ಆತ್ಮನ ಅನುಭವಿಯಾಗುತ್ತಾನೆ. ರಾಗದ ಮೂಲಕ ಯಾವ ಅನುಭವ ಮಾಡಲಾಗುತ್ತದೆ ಅದು ನಿಜವಾದ ಚಾರಿತ್ರವಿರುವುದಿಲ್ಲ. ಆತ್ಮನ ಯಾವ ನಿರಂತರದ ತಿಳಿದುಕೊಳ್ಳುವ-ನೋಡುವ ಸ್ವಭಾವವಿದೆ ಅದರ ಮೂಲಕವಾಗಿಯೇ ಅನುಭವ ಮಾಡುವುದು ನಿಶ್ಚಯ ಚಾರಿತ್ರವಿದೆ. ತನ್ನ ಮೂಲಕ ನೋಡುತ್ತಾನೆ ಹಾಗೂ ತಿಳಿಯುತ್ತಾನೆ, ಆದುದರಿಂದ ಆತ್ಮನೇ ನಿಶ್ಚಯದಿಂದ ಜ್ಞಾನ-ದರ್ಶನನಿದ್ದಾನೆ. ಆತ್ಮನದು ತಿಳಿದುಕೊಳ್ಳುವ-ನೋಡುವ ಸ್ವಭಾವವಿದೆ, ಆ ಸ್ವಭಾವದಲ್ಲಿ ಅಂತರ್ಲೀನತೆ ಮಾಡುವುದು ಚಾರಿತ್ರವಿದೆ. ಬಾಹ್ಯದ ಕ್ರಿಯೆಗಳಲ್ಲಿಯಾಗಲಿ ಅಥವಾ ರಾಗದಲ್ಲಿಯಾಗಲಿ ಚಾರಿತ್ರವಿರುವುದಿಲ್ಲ. ಆತ್ಮನ ನಿರ್ವಿಕಲ್ಪ ಶ್ರದ್ಧೆ-ಜ್ಞಾನ ಮಾಡಿಕೊಂಡು ಅವನ ಅನುಭವದಲ್ಲಿ ಯಾವ ಲೀನತೆಯಾಗುತ್ತದೆ ಆ ಭೇದವಿಜ್ಞಾನಿಯಾದ ಪುರುಷನು ಸ್ವಯಂ ತಾನೇ ಚಾರಿತ್ರನಿದ್ದಾನೆ, ತಾನೇ ಜ್ಞಾನನಿದ್ದಾನೆ ಮತ್ತು ತಾನೇ ದರ್ಶನನಿದ್ದಾನೆ.

ಗುಣ-ಗುಣಿಯ ಭೇದದಿಂದ ಆತ್ಮನು ಕರ್ತೃವಿದ್ದಾನೆ ಮತ್ತು ಜ್ಞಾನ ಮೊದಲಾದವು ಅವನ ಕರ್ಮವಿವೆಯೆಂಬ ಭೇದವು ವ್ಯವಹಾರವಿದೆ; ನಿಶ್ಚಯದಿಂದ ಕರ್ತಾ-ಕರ್ಮವೆಂಬ ಭೇದವಿಲ್ಲ-ಅಭೇದವಿದೆ. ವ್ಯವಹಾರದಲ್ಲಿ ಯಾವ ರಾಗದ ವಿಕಲ್ಪವು ಉತ್ಪನ್ನವಾಗುತ್ತದೆ ಅದು ಚಾರಿತ್ರವಿರುವುದಿಲ್ಲ. ಆತ್ಮನು ಕರ್ತೃ ಮತ್ತು ಜ್ಞಾನವು ಅವನ ಕಾರ್ಯವೆಂಬುದಾಗಿ ಭೇದದ ವಿಕಲ್ಪ ಉತ್ಪನ್ನವಾಗುವುದು ಕೂಡ ನಿಶ್ಚಯದಿಂದ ಚಾರಿತ್ರವಿರುವುದಿಲ್ಲ. ಶರೀರ ಮೊದಲಾದವುಗಳಿಂದಂತೂ ಆತ್ಮನು ಭಿನ್ನನಿದ್ದಾನೆ, ರಾಗವಾಗುತ್ತದೆ ಅದು ಕೂಡ ಆತ್ಮನ ಸ್ವರೂಪವಲ್ಲ. 'ಆತ್ಮನಾದ ನಾನು ಕರ್ತೃ, ಜ್ಞಾನವು ನನ್ನ ಕಾರ್ಯ, ಹಾಗೂ ಜ್ಞಾನ ಶಕ್ತಿಯು ಅದು ಕರಣ'ವೆಂಬ ಯಾವ ಭೇದವಿದೆ ಅದು ಕೂಡ ವ್ಯವಹಾರವಿದೆ. ಅಂಥ ಆ ಭೇದದ ಆಶ್ರಯವನ್ನು ಬಿಟ್ಟುಕೊಟ್ಟು, ಅಭೇದನಿರುವಂಥ ಆತ್ಮನ ಆಶ್ರಯ ಮಾಡುವುದರಿಂದಲೇ ನಿಶ್ಚಯ ಚಾರಿತ್ರವಿರುತ್ತದೆ. ಆತ್ಮನು ಕರ್ತೃ ಮತ್ತು ನಿರ್ವಿಕಾರಿಯಾದ ಜ್ಞಾನ-ದರ್ಶನ-ಚಾರಿತ್ರ ಪರ್ಯಾಯವು ಅವನ ಕರ್ಮ ಮತ್ತು ಶಕ್ತಿಯು ಅವನ ಸಾಧನ-ಇವೇ ಮೊದಲಾಗಿ ಷಟ್‌ಕಾರಕಗಳ ಭೇದ ಮಾಡುವುದು ವ್ಯವಹಾರವಿದೆ. ಅದರ ಲಕ್ಷ್ಯದಿಂದ ವಿಕಲ್ಪವಾಗುತ್ತದೆ ಅದು ನಿಜವಾಗಿ ಚಾರಿತ್ರವಿರುವುದಿಲ್ಲ. ಆತ್ಮನು ಪರವನ್ನು ಮಾಡುತ್ತಾನೆ ಅಥವಾ

ರಾಗವನ್ನು ಮಾಡುತ್ತಾನೆಂಬ ಮಾತನ್ನಂತೂ ಇಲ್ಲಿ ಸ್ವೀಕರಿಸಲಾಗಿಲ್ಲ ; ಆದರೆ ಆತ್ಮನು ತನ್ನ ಜ್ಞಾನದ ನಿರ್ಮಲ ದಶೆಯನ್ನು ಮಾಡುತ್ತಾನೆಂದು ಭೇದ ಮಾಡುವುದು ಕೂಡ ವ್ಯವಹಾರವಿದೆ. ಕರ್ತೃ-ಕರ್ಮದ ಭೇದದಿಂದ ರಹಿತ ಏಕಾಕಾರ ಅಭೇದ ಚೈತನ್ಯದಲ್ಲಿ ನಿಮಗ್ನತೆಯಾಗುವುದರ ಹೆಸರು ನಿಶ್ಚಯಚಾರಿತ್ರವಿದೆ ಮತ್ತು ಅದು ಮೋಕ್ಷಮಾರ್ಗವಿದೆ. ಅಜ್ಞಾನಿಯಂತೂ ಈಗ ದೇಹದ ಕ್ರಿಯೆಯನ್ನು ಆತ್ಮನು ಮಾಡುತ್ತಾನೆಂದು ಮನ್ನಿಸಿಕೊಂಡಿದ್ದಾನೆ. ಅವನಿಗಂತೂ ದೇಹದಿಂದ ಬೇರೆತನದ್ದೂ ಕೂಡ ಭಾಸವಾಗುವುದಿಲ್ಲ. ವಾಸ್ತವಿಕವಾಗಿ ಆತ್ಮನ ಅರಿವಿಲ್ಲದೆ ಪುಣ್ಯ ಮಾಡಿ ಅನಂತಬಾರಿ ಸ್ವರ್ಗದಲ್ಲಿ ಹೋಗಿಯಾಗಿದೆ, ಆದರೆ ಅದರಿಂದ ಭವದ ಕೊನೆಯು ಬರಲಿಲ್ಲ. ತನ್ನ ಆತ್ಮನ ಅರಿವಿಲ್ಲದೆ-ಪರಿಚಯವಿಲ್ಲದೆ ತ್ಯಾಗಿಯಾಗಿದ್ದಾನೆ ಮತ್ತು ಪಂಚಮಹಾವ್ರತಗಳನ್ನು ಕೂಡ ಪಾಲನೆ ಮಾಡಿದ್ದಾನೆ, ಆದರೆ ಅವನ್ನು ಚಾರಿತ್ರವೆಂದು ಹೇಳಲಾಗುವುದಿಲ್ಲ. ಅಂತರ್ಯದೊಳಗೆ ಅಸಂಗ ಚೈತನ್ಯ ಸ್ವಭಾವದಲ್ಲಿ ಏಕಾಕಾರ ಸಾಧಿಸಿ ವೀತರಾಗ ಪರಿಣತಿಯಾಗುವುದು ನಿಶ್ಚಯ ಚಾರಿತ್ರವಿದೆ. ಯಾರಿಗೆ ರಾಗದಿಂದ ರಹಿತವಿರುವಂಥ ಚೈತನ್ಯತತ್ತ್ವದ ಅರಿವಿದೆ-ಪ್ರಜ್ಞೆಯಿದೆ, ನಾನು ರಾಗರಹಿತ ಮತ್ತು ದೇಹರಹಿತ ಚಿದಾನಂದ ತತ್ತ್ವನಿದ್ದೇನೆಂಬುದಾಗಿ ಯಾವನು ಜ್ಞಾನ ಮಾಡಿಕೊಂಡಿದ್ದಾನೆ ಅವನಿಗೆ ಚಾರಿತ್ರವು ಹೇಗಾಗುತ್ತದೆಯೆಂಬುದರ ಮಾತು ಇಲ್ಲಿ ನಡೆಯುತ್ತಿದೆ. ಸಮ್ಯಗ್ದರ್ಶನವಾದ ನಂತರವು ಯಾವ ರಾಗಾದಿಗಳ ವಿಕಲ್ಪಗಳುಂಟಾಗುತ್ತವೆ ಅಥವಾ ಗುಣ-ಗುಣಿಯ ವಿಕಲ್ಪವುಂಟಾಗುತ್ತದೆ ಅದು ನಿಜವಾಗಿ ಚಾರಿತ್ರವಿಲ್ಲ. ಚಾರಿತ್ರದಲ್ಲಿ ಭೇದದ ಆಶ್ರಯವಿರುವುದಿಲ್ಲ. ಆದರೆ ಏಕಾಕಾರ ಚೈತನ್ಯ ದ್ರವ್ಯದ ಆಶ್ರಯದಿಂದಲೇ ವೀತರಾಗ ಚಾರಿತ್ರವಾಗುತ್ತದೆ.

ಶರೀರಾದಿಗಳಾಗಲಿ ಅಥವಾ ರಾಗಾದಿಗಳಾಗಲಿ ಇವು ಯಾವುವೂ ಚಾರಿತ್ರದ ಸಾಧನಗಳಿಲ್ಲ. ಅಂತರ್ಯದಲ್ಲಿನ ಚೈತನ್ಯಶಕ್ತಿಯೇ ನನ್ನ ಚಾರಿತ್ರದ ಸಾಧನವಿದೆ. ಈ ಪ್ರಕಾರದಿಂದ ಕರ್ತೃ-ಕರ್ಮ ಮತ್ತು ಕರಣದ ಭೇದದಿಂದ ವಿಚಾರ ಮಾಡುವುದು ಕೂಡ ವ್ಯವಹಾರವಿದೆ. ಅದೇನು ನಿಜವಾದ ಚಾರಿತ್ರವಿಲ್ಲ. ಅನಂತ ಅನಂತ ಕಾಲದಿಂದ ಭವದ ಕೊನೆಯು ಬರಲಿಲ್ಲವೆಂದಮೇಲೆ ಸ್ವಲ್ಪ ವಿಚಾರವನ್ನಾದರೂ ಮಾಡಬೇಕಿಲ್ಲವೇನು ! ಭವದ ಕೊನೆ ಬರುವ ಸಲುವಾಗಿ ಸರ್ವಜ್ಞದೇವರು ಹೇಳಿದ ಅಚಿಂತ್ಯ ವಸ್ತುವನ್ನು ತಿಳಿದುಕೊಳ್ಳುವುದು ಬಾಕಿ ಉಳಿದಿರಬೇಕು ! ಅಂತರ್ಯದಲ್ಲಿ ದೇಹದಿಂದ ಭಿನ್ನವಿರುವಂಥ ಚೈತನ್ಯತತ್ತ್ವವು ಹೇಗಿದೆಯೆಂಬುದರ ಅರಿವಿಲ್ಲದೆ ಭೇದಜ್ಞಾನವಾಗುವುದಿಲ್ಲ ಮತ್ತು ಭೇದಜ್ಞಾನವಿಲ್ಲದೆ ಚಾರಿತ್ರದ ಜನ್ಮವಾಗುವುದಿಲ್ಲ. ಚಾರಿತ್ರವಂತೂ ಅಂತರ್ಯದ ನಿರ್ವಿಕಾರ ದಶೆಯಿದೆ. ಚಿದಾನಂದ ಸ್ವಭಾವದಲ್ಲಿ ಒಳಗೆ ವಿಹಾರ-ಕ್ರೀಡೆ ಮಾಡುವುದರ ಹೆಸರು ಚಾರಿತ್ರದಶೆಯಿದೆ. ಎಲ್ಲಿ ನಾನು ಕರ್ತೃ, ಜ್ಞಾನವು ನನ್ನ ಕಾರ್ಯವೆಂದು ಭೇದದ ವಿಚಾರವು ಉತ್ಪನ್ನವಾಗುವುದು, ಅಲ್ಲಿಕೂಡ ಶುಭರಾಗವಿರುತ್ತದೆ. ಯಾವ ಪ್ರಕಾರ ಸಮುದ್ರದಲ್ಲಿ ತನ್ನ ಕಾರಣದಿಂದ ತರಂಗಗಳು ಉತ್ಪನ್ನವಾಗುತ್ತವೆ ಅದೇ ಪ್ರಕಾರ ಅಂತರಂಗದಲ್ಲಿ ಚೈತನ್ಯ ಸ್ವಭಾವದ ದೃಷ್ಟಿಮಾಡಿ ಅದರಲ್ಲಿ ನಿಮಗ್ನವಾಗಿ ಹೋಗುವುದರಿಂದ ಧರ್ಮಾತ್ಮ ಜೀವನಿಗೆ ಆತ್ಮನ ಆನಂದದ ಅಲೆಗಳು ಉತ್ಪನ್ನವಾಗುತ್ತವೆ. ಅದರಲ್ಲಿ ಕರ್ತೃ, ಕರ್ಮ, ಕರಣ ಮೊದಲಾದ ಭೇದದ ವಿಕಲ್ಪಗಳು ಕೂಡ ಇರುವುದಿಲ್ಲ. ಯಾವ ಪ್ರಕಾರ ಚಂಡಮಾರುತವು ಬೀಸುವುದರಿಂದ ಸಮುದ್ರದಲ್ಲಿ ತರಂಗಗಳು ಏಳುವ ಸಾಧ್ಯತೆಯಿಲ್ಲ, ಅದೇ ಪ್ರಕಾರ ಯಾವಾಗ ಆತ್ಮನಲ್ಲಿ ಆನಂದದ ಸಮುದ್ರವು ಉಕ್ಕುವುದು ಮತ್ತು ಆತ್ಮನಲ್ಲಿ ಶಾಂತರಸದ ಬಿರುಗಾಳಿ ಬೀಸುವುದು ಆಗ 'ನಾನು ಕರ್ತೃ ಮತ್ತು ಜ್ಞಾನವು ನನ್ನ ಕರ್ಮ'ವೆಂದು ಭೇದದ ವಿಕಲ್ಪವು ಕೂಡ ಇರುವುದಿಲ್ಲ. ಅಲ್ಲಿ ಆತ್ಮನು ತನ್ನ ನಿಜವಾದ ಸ್ವರೂಪದಲ್ಲಿ ಬಂದುಬಿಟ್ಟಿರುತ್ತಾನೆ. ಈ ಪ್ರಕಾರ ಚಾರಿತ್ರದಶೆಯಿರುತ್ತದೆ ! ನಾನು ಅಖಂಡ ಜ್ಞಾನಮೂರ್ತಿಯಿದ್ದೇನೆ, ನನ್ನ ಸಿದ್ಧ ಸ್ವರೂಪವು ನನ್ನ ಶಕ್ತಿಯಲ್ಲಿಯೇ ಬಿದ್ದುಕೊಂಡಿದೆಯೆಂಬುದಾಗಿ ಶಕ್ತಿಯ ಪ್ರತೀತಿ ಮಾಡಿಕೊಂಡು ಅದರಲ್ಲಿ ಲೀನವಾಗಿ ಹೋಗುತ್ತಿರುವಂತೆ ಉಪಶಮ ರಸವು ಉಕ್ಕಿಬರುತ್ತದೆ. ಅದರಲ್ಲಿ ಕರ್ತೃ-ಕರ್ಮ ಮೊದಲಾದ ಭೇದದ ವಿಕಲ್ಪದ ಉತ್ಥಾನವು ಕೂಡ

ಇರುವುದಿಲ್ಲ. ಈ ಪ್ರಕಾರ ಮುನಿರಾಜರುಗಳ ದಶೆಯಿರುತ್ತದೆ.

ದೇಹದಿಂದ ಹಾಗೂ ರಾಗದಿಂದಂತೂ ಭಿನ್ನ ಮತ್ತು ಆಂತರ್ಯದಲ್ಲಿ ಗುಣ-ಗುಣಿಯ ಭೇದದ ವಿಕಲ್ಪದಿಂದ ಕೂಡ ಭಿನ್ನ ಏಕಾಕಾರ ಚಿದಾನಂದದ ಮೂರ್ತಿಯಾದಂಥ ಆತ್ಮನನ್ನು ಲಕ್ಷ್ಯದಲ್ಲಿ ತಂದುಕೊಂಡು ಅವನಲ್ಲಿ ಏಕಾಗ್ರವಾಗಿ ಹೋಗುವುದರ ಹೆಸರು ಚಾರಿತ್ರವಿದೆ. ಅಯ್ಯಾ ! ನೀನು ಆನಂದದ ಸಾಗರನಿರುವೆ ! ಸ್ವಭಾವದಲ್ಲಿ ಪರಿಣತಿಯು ಲೀನವಾಗುತ್ತಿರುವಂತೆ ಆನಂದದ ಅಲೆಗಳು ಉಕ್ಕಿ ಬರುತ್ತವೆ. ಅದರಲ್ಲಿ ಭೇದದ ವಿಕಲ್ಪಗಳು ಇರುವುದೇ ಇಲ್ಲ. ಈ ಪ್ರಕಾರ ಸ್ವರೂಪದಲ್ಲಿ ಲೀನತೆಯಾಗಿ ಹೋದರೆ ಅದನ್ನು ಸರ್ವಜ್ಞ ಭಗವಂತರು ಚಾರಿತ್ರವೆಂದು ಹೇಳಿದ್ದಾರೆ.

ಸಂಸಾರದ ಸಂಯೋಗಗಳಂತೂ ಪುಣ್ಯದಿಂದ ದೊರಕುತ್ತವೆ. ಆ ಸಂಯೋಗಗಳು ಆತ್ಮನಿಗೆ ಯಾವುದೇ ಪ್ರಕಾರದಿಂದ ಒಂದಿಷ್ಟು ಸಹಾಯ ಮಾಡುವುದಿಲ್ಲ ಮತ್ತು ಯಾವುದೇ ಪ್ರಕಾರದಿಂದ ದುಃಖವನ್ನು ಕೂಡ ಕೊಡುವುದಿಲ್ಲ. ಆದಾಗ್ಯೂ ಯಾವ ಜೀವನು ಸಂಯೋಗಗಳನ್ನು ನಾನು ದೊರಕಿಸಿಕೊಳ್ಳುವ ಸಾಧ್ಯತೆಯಿದೆಯೆಂದು ಮನ್ನಿಸುತ್ತಾನೆ ಮತ್ತು ಸಂಯೋಗಗಳಿಂದ ತನಗೆ ಲಾಭ-ಹಾನಿಗಳಿವೆಯೆಂದು ಮನ್ನಿಸುತ್ತಾನೆ ಆ ಜೀವನು ಸ್ವಯಂ ಸಂಯೋಗಗಳ ಸೇವಕನಾಗಿ ದಾಸನಾಗಿ ಬಿಡುತ್ತಾನೆ. ಇಲ್ಲಿಯಂತೂ ಹೇಳುತ್ತಿರುವುದೇನೆಂದರೆ-ಆ ಸಂಯೋಗಗಳಂತೂ ಪೂರ್ವಜನ್ಮದ ಪ್ರಾರಬ್ಧದ ಕಾರಣದಿಂದ ದೊರಕಿವೆ. ಅದರಲ್ಲಿ ನೀನೇನು ಪ್ರಯತ್ನ ಮಾಡಿರುವೆ ? ಆತ್ಮನ ಧರ್ಮವಂತೂ ಪುರುಷಾರ್ಥದಿಂದ ಪ್ರಕಟವಾಗುತ್ತದೆ ಅದೇನು ಮೊದಲಿನ ಪ್ರಾರಬ್ಧದಿಂದ ದೊರಕುವುದಿಲ್ಲ. ಆದುದರಿಂದ ನೀನು ಚೈತನ್ಯದ ಪ್ರತೀತಿ ಮಾಡಿಕೊಂಡು ಅದರಲ್ಲಿ ಪ್ರಯತ್ನಮಾಡು. ಅಖಂಡಾನಂದದ ಪ್ರತೀತಿ ಮತ್ತು ಜ್ಞಾನ ಮಾಡಿಕೊಂಡರೆ ಅವನಿಗೆ ರಾಗವು ಕಡಿಮೆಯಾದಲ್ಲದೆ ಇರುವುದಿಲ್ಲ.

ಮೊದಲು ವ್ಯವಹಾರ ತಿಳಿಸಿಕೊಡಬೇಕಾಗಿತ್ತು ಅಥವಾ ಸರ್ವಜ್ಞಭಗವಂತರು ಹೇಳಿದ ಆರು ದ್ರವ್ಯಗಳ ಪ್ರತೀತಿಯಾಗಬೇಕಾಗುವುದು. ಅದರಿಂದ ವಿಪರೀತವಾಗಿ ಮನ್ನಿಸಿಕೊಂಡರೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಸರ್ವಜ್ಞದೇವರು ಹೇಳಿರುವ ತತ್ತ್ವಗಳ ವಿಚಾರವಿರುವುದನ್ನು ವ್ಯವಹಾರವೆಂದು ಹೇಳಲಾಗಿತ್ತು, ಆದರೆ ಎಷ್ಟು ಅಂಶಗಳಲ್ಲಿ ಆತ್ಮಸ್ವಭಾವದ ಆಶ್ರಯ ಮಾಡಿ ಚಾರಿತ್ರದಶೆಯಾಗುತ್ತದೆ ಅಷ್ಟು ಅಂಶಗಳಲ್ಲಿಯಂತೂ ಆ ರಾಗವು ಕೂಡ ಉಳಿಯುವುದಿಲ್ಲ. ಭೇದದ-ವ್ಯವಹಾರದ ವಿಕಲ್ಪವಿದ್ದರೆ ಅದನ್ನು ಧರ್ಮಾತ್ಮ ಜೀವನು ನಿಜವಾದ ಚಾರಿತ್ರವೆಂದು ಮನ್ನಿಸುವುದಿಲ್ಲ. ಆರು ದ್ರವ್ಯ ಮೊದಲಾದವುಗಳ ವಿಕಲ್ಪ ಬರುವುದು ಕೂಡ ಚಾರಿತ್ರದಲ್ಲಿ ಬಾಧಕವಿದೆ. ನಿಮಿತ್ತದರೂಪದಿಂದ ಅದು ಮಧ್ಯದಲ್ಲಿ ಇರುತ್ತದೆ ಅದರ ಜ್ಞಾನ ಮಾಡಿಕೊಂಡರೆ ಅದನ್ನು ವ್ಯವಹಾರದಿಂದ ಸಾಧನವೆಂದು ಹೇಳಲಾಗಿತ್ತು, ಆದರೆ ಆಂತರ್ಯದಲ್ಲಿ ಸ್ವಭಾವದ ಶ್ರದ್ಧೆ-ಜ್ಞಾನ-ಚಾರಿತ್ರರೂಪದ ನಿಶ್ಚಯವು ಯಾವನಿಗೆ ಪ್ರಕಟವಾಗಿರುವುದು ಅವನಿಗೆ ಅದನ್ನು ವ್ಯವಹಾರವೆಂದು ಹೇಳಲಾಗುತ್ತದೆ, ಆದರೆ ಯಾವಾಗ ಆಂತರ್ಯದಲ್ಲಿ ಲೀನತೆಯು ಪ್ರಕಟವಾಗುತ್ತದೆ ಆಗಂತೂ ಆ ವ್ಯವಹಾರದ ವಿಕಲ್ಪವು ಕೂಡ ಇರುವುದಿಲ್ಲ. ಅಲ್ಲಿ ಭೇದರಹಿತವಾದ ಲೀನತೆಯು ವರ್ತಿಸುತ್ತದೆ.

ಯಾವುದಾದರೂ ವಸ್ತುವನ್ನು ಕೊಳ್ಳಲು ಹೋದರೆ ಅಲ್ಲಿ ಮೊದಲು ಬೆಲೆ-ತೂಕ ಮೊದಲಾದವುಗಳ ವಿಚಾರವು ಬರುತ್ತದೆ, ಆದರೆ ನಂತರ ತಿನ್ನುವ ಸಮಯದಲ್ಲಿ ಅದರ ವಿಚಾರವಿರುವುದಿಲ್ಲ. ಅದೇ ಪ್ರಕಾರ ಮೊದಲು ಸರ್ವಜ್ಞದೇವರು ಹೇಳಿರುವ ತತ್ತ್ವಗಳ ನಿರ್ಣಯ ಮಾಡುವ ಸಲುವಾಗಿ ವಿಚಾರವು ಬರುತ್ತದೆ, ಆದರೆ ತತ್ತ್ವಗಳ ನಿರ್ಣಯ ಮಾಡಿದ ನಂತರ ಅದರಲ್ಲಿ ಏಕಾಗ್ರವಾಗಿ ಅನುಭವದಲ್ಲಿ ಲೀನವಾಗುವ ಸಮಯದಲ್ಲಿ ಭೇದದ ವಿಕಲ್ಪಗಳಿರುವುದಿಲ್ಲ. ಚಾರಿತ್ರದಶೆಯಲ್ಲಿ ನಿಮಿತ್ತದ, ರಾಗದ ಅಥವಾ ಭೇದದ ಅವಲಂಬನವಿರುವುದಿಲ್ಲ. ಅಖಂಡ ಚೈತನ್ಯದ ಅವಲಂಬನವೇ ಇರುತ್ತದೆ.

ಕೇವಲ ಮೂಟೆಯನ್ನು ತೆಗೆದುಕೊಂಡು ಹೊರಡುವುದು, ಆದರೆ ವಸ್ತುವನ್ನು ಗುರುತಿಸದಿದ್ದರೆ ಯಾವ ವಸ್ತುವನ್ನು ತೆಗೆದುಕೊಂಡಿರುವೆ ? ಅದರಂತೆ ಕೇವಲ ವ್ಯವಹಾರದ ವಿಚಾರದಲ್ಲಿ ನಿಂತುಕೊಳ್ಳುವುದು, ಆದರೆ ಅಭೇದ ಸ್ವಭಾವದ ಶ್ರದ್ಧೆ-ಜ್ಞಾನ-ಏಕಾಗ್ರತೆಯನ್ನು ಮಾಡದಿದ್ದರೆ ಧರ್ಮವು ದೊರಕುವುದಿಲ್ಲ. ಯಾವ ಅಂಗಡಿಯಲ್ಲಿ ಯಾವ ವಸ್ತುವು ದೊರಕುತ್ತಿರುವುದು ಅಲ್ಲಿ ಹೋದರೆ ಆ ವಸ್ತು ದೊರಕುವುದು. ಅಫೀಮದ ಅಂಗಡಿಯೊಳಗೆ ಪೇಡ ದೊರಕುವುದಿಲ್ಲ ಮತ್ತು ಖೋವಾದ ಅಂಗಡಿಯಲ್ಲಿ ಅಫೀಮು ದೊರೆಯುವುದಿಲ್ಲ. ಕಳ್ಳಿಯ ಹಾಲನ್ನು ಕೂಡ 'ಹಾಲೆ'ಂದು ಹೇಳುತ್ತಾರೆ ಮತ್ತು ಹಸುವಿನ ಹಾಲನ್ನು ಕೂಡ 'ಹಾಲು' ಎಂದು ಹೇಳುತ್ತಾರೆ ಆದರೆ ಎರಡನ್ನು ಒಂದೇ ರೀತಿಯಾಗಿ ಉಪಯೋಗ ಮಾಡಲಾಗುವುದಿಲ್ಲ. ಅದನ್ನು ಸರಿಯಾಗಿ ತಿಳಿದುಕೊಂಡು ಉಪಯೋಗ ಮಾಡಬೇಕಾಗುತ್ತದೆ. ಅದರಂತೆ ಭಿಕ್ಷುಕನಿಗೆ ಒಂದು ಹಿಡಿ ಅನ್ನ ಹಾಕಿದರೂ ಧರ್ಮವೆಂದು ಹೇಳುತ್ತಾರೆ ಮತ್ತು ಆಂತರ್ಯದಲ್ಲಿ ಅತೀಂದ್ರಿಯ ಆನಂದದ ಪ್ರಾಪ್ತಿಯಾಗುವುದನ್ನು ಕೂಡ ಧರ್ಮವೆಂದು ಹೇಳಲಾಗುತ್ತದೆ; ಆದುದರಿಂದ ಮೊದಲು ವಾಸ್ತವಿಕ ಧರ್ಮದ ಪರೀಕ್ಷೆ ಮಾಡಬೇಕಾಗುವುದು, ಮತ್ತು ಅದು ಎಲ್ಲಿ ದೊರಕುತ್ತದೆಂಬುದನ್ನು ಕೂಡ ತಿಳಿದುಕೊಳ್ಳಬೇಕಾಗುವುದು. ನಿಜವಾದ ಧರ್ಮವಂತೂ ಆಂತರ್ಯದಲ್ಲಿ ಚೈತನ್ಯ ಸ್ವಭಾವದ ಆಶ್ರಯದಿಂದಲೇ ದೊರಕುತ್ತದೆ. ಯಾವುದೇ ನಿಮಿತ್ತದ-ರಾಗದ ಅಥವಾ ಭೇದದ ಆಶ್ರಯದಿಂದ ಧರ್ಮವು ದೊರಕುವುದಿಲ್ಲ. ಮೊದಲು ಈ ಪ್ರಕಾರದ ಜ್ಞಾನ ಮಾಡಿಕೊಳ್ಳದಿದ್ದರೆ ಮತ್ತು ಶುಭರಾಗದಿಂದ ಧರ್ಮವಾಗುತ್ತದೆಯೆಂದು ಮನ್ನಿಸಿಕೊಂಡುಬಿಟ್ಟರೆ ಅವನಿಗೆ ಧರ್ಮಕ್ಕೆ ಪ್ರತಿಯಾಗಿ ಮಿಥ್ಯಾತ್ವವೇ ಆಗುವುದು. ಮೊದಲು ಪರಿಚಯ ಮಾಡಿಕೊಂಡು, ನಂತರ ಆಂತರ್ಯದ ಅನುಭವದಲ್ಲಿ ಏಕಾಗ್ರತೆಯಾದರೆ ಅದರ ಹೆಸರು ಚಾರಿತ್ರದಶೆಯಿದೆ. ಅಯ್ಯಾ! ಮೋಕ್ಷದ ಸಲುವಾಗಿ ಆತ್ಮನು ಅಭಿಮಾನ ಪಟ್ಟುಕೊಳ್ಳುವಂತೆ ಚಾರಿತ್ರದ ದಶೆಯಿದೆ. ಚಾರಿತ್ರವು ಆತ್ಮನಿಂದ ಭಿನ್ನವಿರುವುದಿಲ್ಲ. ಜ್ಞಾನ-ದರ್ಶನ ಸ್ವರೂಪನಿರುವಂಥ ಆತ್ಮನೇ ಚಾರಿತ್ರನಿದ್ದಾನೆ. ಜೀವದ ಸ್ವಭಾವವು ಜ್ಞಾನ-ದರ್ಶನವಿದ್ದು ಅಂಥ ಸ್ವಭಾವದ ನಿರ್ಣಯ ಮಾಡಿ ಅದರಲ್ಲಿ ನಿಮಗ್ನತೆ ಹೊಂದುವುದರ ಹೆಸರು ಚಾರಿತ್ರವಿದೆ. ನಿಶ್ಚಯದಿಂದ ಆತ್ಮನೇ ಚಾರಿತ್ರನಿದ್ದಾನೆ. ಜೀವದ ಸ್ವಭಾವವು ಜ್ಞಾನ ಮತ್ತು ದರ್ಶನವಿದೆ. ಆ ಸ್ವಭಾವದಲ್ಲಿ ನಿಶ್ಚಲ ಲೀನವಾಗಿ ಸ್ವಭಾವದ ಆಚರಣೆ ಮಾಡಿದರೆ ಎಲ್ಲ ಪ್ರಕಾರದಿಂದ ನಿಶ್ಚಯ ಮೋಕ್ಷಮಾರ್ಗವು ಸಿದ್ಧವಾಗುತ್ತದೆ. ಇಂಥ ಮೋಕ್ಷಮಾರ್ಗವಿಲ್ಲದೆ ಎಂದೂ ಸಿದ್ಧಿಯಾಗುವುದಿಲ್ಲ; ಆತ್ಮನಿಗೆ ಶಾಶ್ವತ ಸುಖವು ದೊರಕುವುದಿಲ್ಲ.

ನಾನು ಯಾರಿದ್ದೇನೆ ಮತ್ತು ನನ್ನ ಸ್ವಭಾವವು ಹೇಗಿದೆ ? ಹಾಗೆ ವರ್ತಮಾನದಲ್ಲಿ ಅಲ್ಪತೆಯು ಏಕಿರುವುದು? ಎಂದು ಆಂತರ್ಯದಲ್ಲಿ ಯಥಾರ್ಥ ಜ್ಞಾನ ಮಾಡಿಕೊಂಡು ಅದರಲ್ಲಿ ನಿಶ್ಚಲ ಲೀನವಾಗಿ ನಿಂತುಕೊಳ್ಳುವುದರ ಹೆಸರು ನಿಶ್ಚಯಮೋಕ್ಷಮಾರ್ಗವಿದೆ.

ಇಂಥ ಮೋಕ್ಷಮಾರ್ಗವು ಜಗತ್ತಿನಲ್ಲಿನ ಸಮಸ್ತ ಜೀವರುಗಳಿಗೆ ಇರುವುದಿಲ್ಲ, ಸಂಭವಿಸುವುದಿಲ್ಲ . ಆದುದರಿಂದಲೇ ಇಂದು ಜಗತ್ತಿನ ಸಮಸ್ತ ಜೀವರುಗಳಿಗೆ ಮೋಕ್ಷಮಾರ್ಗದ ಯೋಗ್ಯತೆಯಿರುವುದರ ನಿಷೇಧ ಮಾಡುತ್ತಾರೆ. ಲೋಕದಲ್ಲಿ ಅದೆಷ್ಟೋ ಅಭವ್ಯ ಜೀವರುಗಳಿದ್ದಾರೆ. ಅಂಥವರಿಗೆ ಎಂದೂ ಮೋಕ್ಷಮಾರ್ಗವಾಗುವುದಿಲ್ಲ. ಜ್ಞಾನಾನಂದ ಸ್ವಭಾವಿಯಿರುವಂಥ ಆತ್ಮನಲ್ಲಿಯೇ ಶಾಂತಿಯಿದೆ. ತನ್ನ ಆತ್ಮನ ಸ್ವಭಾವದಲ್ಲಿಯೇ ಆನಂದವಿದೆ. ಇಂದ್ರಿಯಗಳಿಂದ ಬರುವ ಸುಖವು ನಿಜವಾದ ಸುಖವೇ ಅಲ್ಲ. ಆಂತರ್ಯದ ಸ್ವಭಾವದ ಶ್ರದ್ಧೆ-ಜ್ಞಾನ ಮತ್ತು ಏಕಾಗ್ರತೆಯಿಂದಲೇ ಪರಮಾನಂದವು ಪ್ರಕಟವಾಗಿ ಮುಕ್ತಿಯಾಗುತ್ತದೆ. ಎಂಬುದನ್ನು ಯಾರು ಮನ್ನಿಸುವುದಿಲ್ಲ ಅವರುಗಳು ಕೂಡ ವರ್ತಮಾನದಲ್ಲಿ ಅಭವ್ಯ ಜೀವರುಗಳಂತೆಯೇ ಇದ್ದಾರೆಂದು ಈಗ ಗಾಥೆಯ ಮೂಲಕ ಹೇಳುತ್ತಾರೆ -

**ಜೇಣ ವಿಜಾಣದಿ ಸವ್ವಂ ಪೇಚ್ಛದಿ ಸೋ ತೇಣ ಸೋಕ್ಖಮಣುಹವದಿ ।**
**ಇದಿ ತಂ ಜಾಣದಿ ಭವಿಓ ಅಭವಿಯಸತ್ತೋ ಣ ಸದ್ದಹದಿ ॥೧೬೩॥**

**ಸಕಲವನಾವುದರಿಂ ತಿಳಿಯುವ ಮೇಣ್ ನೋಡುವನದರಿಂದವನು ।**
**ಸುಕದನುಭವಮಾಡುವನೆಂದು ಭವ್ಯತಿಳಿವನಭವ್ಯ ಶ್ರದ್ಧೆಮಾಡನು ॥೧೬೩॥**

ಆತ್ಮನು ತನ್ನ ಸ್ವಭಾವದ ಶ್ರದ್ಧೆ-ಜ್ಞಾನ-ಏಕಾಗ್ರತೆಯ ರೂಪದ ಮೋಕ್ಷಮಾರ್ಗದಿಂದ ಪರಮಾನಂದದ ದಶೆಯನ್ನು ಪಡೆಯುತ್ತಾನೆ. ಕೇವಲಜ್ಞಾನ ಮತ್ತು ಕೇವಲದರ್ಶನವು ಪ್ರಕಟವಾಗಿ ಯಾವ ಪರಮಾನಂದದ ದಶೆಯು ಪ್ರಕಟವಾಗಿದೆ ಅದರಲ್ಲಿ ಏಕಾಕಿ ಆತ್ಮನ ತನ್ನ ಸ್ವಭಾವದಿಂದಲೇ ಆನಂದವಿದೆ, ಆದರೆ ಯಾವುದೇ ಬಾಹ್ಯ ಪದಾರ್ಥದಿಂದ ಆನಂದವಿಲ್ಲ. ಸಂಸಾರದಲ್ಲಿ ಜೀವರುಗಳು ತಮ್ಮ ಕಲ್ಪನೆಯಿಂದಲೇ ಪರಪದಾರ್ಥದಲ್ಲಿ ಸುಖ-ದುಃಖವನ್ನು ಮನ್ನಿಸಿಕೊಂಡಿದ್ದಾರೆ. ಅದು ಸುಖಗುಣದ ವಿಪರೀತ ದಶೆಯಿದೆ. ಭಗವಂತರಿಗೆ ಪೂರ್ಣಜ್ಞಾನ ಮತ್ತು ಆನಂದದಶೆಯು ಪ್ರಕಟವಾಗಿದೆ ಅಂಥ ಭಗವಂತರಿಗೆ ಪೂರ್ಣ ಸುಖದ ಅನುಭವವಿದೆ. ಇಂಥ ಅತೀಂದ್ರಿಯ ಸುಖವನ್ನು ನಿಕಟಭವ್ಯ ಜೀವರುಗಳೇ ಶ್ರದ್ಧೆ ಮಾಡುತ್ತಾರೆ, ಮತ್ತು ಅವರೇ ಮೋಕ್ಷಮಾರ್ಗಕ್ಕೆ ಯೋಗ್ಯರಿದ್ದಾರೆ. ಅಭವ್ಯ ಜೀವರುಗಳು ಆತ್ಮನ ಅತೀಂದ್ರಿಯ ಸುಖವನ್ನು ಶ್ರದ್ಧೆಮಾಡುವುದಿಲ್ಲ, ಮನ್ನಿಸುವುದಿಲ್ಲ ಅವರು ಮೋಕ್ಷಮಾರ್ಗಕ್ಕೆ ಯೋಗ್ಯರಿರುವುದಿಲ್ಲ.

ಮಧ್ಯದಲ್ಲಿ ಯಾವ ವ್ಯವಹಾರ ಮತ್ತು ವಿಕಲ್ಪವು ಬರುತ್ತದೆ ಅದು ಪುಣ್ಯವಿದೆ. ಅದನ್ನು ಯಾರು ಮೋಕ್ಷದ ಕಾರಣವೆಂದು ಮನ್ನಿಸುತ್ತಾರೆ, ಅವರಿಗೆ ಆತ್ಮನ ಸುಖದ ಪ್ರತೀತಿಯಿರುವುದಿಲ್ಲ. ಎಂದರೆ ವ್ಯವಹಾರದ ಆಶ್ರಯದಿಂದ ಮೋಕ್ಷವಾಗುವುದನ್ನು ಮನ್ನಿಸುತ್ತಾರೆ ಅವರು ಕೂಡ ಅಭವ್ಯರ ಸಮಾನರೇ ಇದ್ದಾರೆ. ಕೇವಲೀ ಭಗವಂತರ ಜ್ಞಾನದಲ್ಲಿ ಮತ್ತು ಸಿದ್ಧ ಭಗವಂತರ ಜ್ಞಾನದಲ್ಲಿ ಹಾಗೂ ಆನಂದದಲ್ಲಿ ಅಂತರವಿರುವುದಿಲ್ಲ. ಅವರು ಸಮಸ್ತ ಜ್ಞೇಯಗಳನ್ನು ತಿಳಿಯುತ್ತಾರೆ-ನೋಡುತ್ತಾರೆ ಮತ್ತು ಪೂರ್ಣ ಸುಖವನ್ನು ಅನುಭವಿಸುತ್ತಾರೆ.

ಆತ್ಮನದು ಜ್ಞಾನದರ್ಶನ ಸ್ವಭಾವವಿದೆ, ಆ ಸ್ವಭಾವವನ್ನು ಹಿಡಿದುಕೊಂಡು ಅದರಲ್ಲಿ ವಿಹಾರ-ಕ್ರೀಡೆ ಮಾಡಿದರೆ ಪೂರ್ಣಜ್ಞಾನ-ದರ್ಶನಗಳು ಪ್ರಕಟವಾಗುತ್ತವೆ ಮತ್ತು ಮೂರು ಕಾಲ ಮೂರು ಲೋಕಗಳನ್ನು ಪ್ರತ್ಯಕ್ಷ ನೋಡುತ್ತದೆ-ತಿಳಿಯುತ್ತದೆ. ಅದರಂತೆ ಅವರು ತಮ್ಮ ಸ್ವಭಾವದ ಅತೀಂದ್ರಿಯ ಸುಖವನ್ನು ಭೋಗಿಸುತ್ತಾರೆ. ಭಗವಂತರಿಗೆ ಪೂರ್ಣಜ್ಞಾನ-ದರ್ಶನಗಳು ಪ್ರಕಟವಾಗಿರುವುದರಿಂದ ಪೂರ್ಣ ಸುಖವಿದೆ. ಇಂಥ ಯಾವ ಪರಮಾರ್ಥ ಸುಖವಿದೆ ಅದುವೇ ಉಪಾದೇಯವಿದೆ. ಇಂಥ ಸುಖವನ್ನು ಅಭವ್ಯ ಜೀವರುಗಳು ಶ್ರದ್ಧೆ ಮಾಡುವುದಿಲ್ಲ ಮತ್ತು ನಿಕಟಭವ್ಯ ಜೀವರುಗಳು ಅದರ ಶ್ರದ್ಧೆ ಮಾಡುತ್ತಾರೆ. ಸುಖವಂತೂ ಆತ್ಮನಲ್ಲಿರುವುದು, ಆ ಸುಖವು ಬಾಹ್ಯದಲ್ಲಿರುವುದಿಲ್ಲ ಮತ್ತು ಭೇದದ ವಿಕಲ್ಪವು ಉತ್ಪನ್ನವಾದರೆ ಅದರಲ್ಲಿ ನನ್ನ ಸುಖವಿಲ್ಲ. ಇಂಥ ಶುದ್ಧ ಆತ್ಮನ ಸುಖದ ಪ್ರತೀತಿಯು ನಿಕಟ ಮೋಕ್ಷಗಾಮಿ ಜೀವರುಗಳಿಗೇ ಬರುತ್ತದೆ. ಇಲ್ಲಿ ಪುಣ್ಯ-ಪಾಪದಿಂದ ಭಿನ್ನನಿರುವಂಥ ಶುದ್ಧ ಆತ್ಮನ ಪ್ರತೀತಿ ಮಾಡಿಸಿದ್ದಾರೆ. ಯಾವನು ಪುಣ್ಯವನ್ನು ಸುಖದಾಯಕವೆಂದು ಮನ್ನಿಸಿದ್ದಾನೆ ಅವನಿಗೆ ಪುಣ್ಯದಿಂದ ರಹಿತ ಶುದ್ಧಾತ್ಮನ ಸುಖದ ಪ್ರತೀತಿ ಮಾಡಿಸಿಲ್ಲ, ಆ ಜೀವನಿಗೆ ಮೋಕ್ಷಮಾರ್ಗವಿರುವುದಿಲ್ಲ.

ಆತ್ಮನ ಅನಾಕುಲ ಸ್ವಭಾವದ ಅನುಭೂತಿಯಿಂದಲೇ-ನಿಮಗ್ನತೆಯಿಂದಲೇ ಮುಕ್ತಿ ಮತ್ತು ಪರಮಾನಂದದ ದಶೆಯು ಪ್ರಕಟವಾಗುತ್ತದೆ. ಈ ಪ್ರಕಾರವಿರುವ ಸ್ವಭಾವವನ್ನೇ ಧರ್ಮಾತ್ಮ ಜೀವನು ಉಪಾದೇಯವೆಂದು ಮನ್ನಿಸುತ್ತಾನೆ ಮತ್ತು ತಮ್ಮ-ತಮ್ಮ ಗುಣಸ್ಥಾನಗಳ ಅನುಸಾರವಾಗಿ ಅವರು ಸುಖವನ್ನು ಅನುಭವಿಸುತ್ತಿರುತ್ತಾರೆ. ತಮ್ಮ ಆತ್ಮನ ಸ್ವಭಾವದಲ್ಲಿಯೇ ನಿಜವಾಗಿ ಸುಖವಿದೆಯೆಂಬುದರ ಅನುಭವ ಮತ್ತು ಶ್ರದ್ಧೆಯು ಸಮಸ್ತ ಜ್ಞಾನೀ ಜೀವರುಗಳಿಗೆ

ಸಮಾನರೂಪದಿಂದ ಇರುತ್ತದೆ, ಆದರೆ ಆ ಸುಖದ ಅನುಭವವಂತೂ ಗುಣಸ್ಥಾನದ ಏರೇರಿಕೆಯ ಅನುಸಾರ ವೃದ್ಧಿಯಾಗುತ್ತ ಹೋಗುತ್ತದೆ. ಹೇಗೆ-ಹೇಗೆ ಆಂತರ್ಯದಲ್ಲಿ ಏಕಾಗ್ರತೆಯನ್ನು ಮಾಡುತ್ತ ಹೋಗುತ್ತದೆ, ಹಾಗೆ-ಹಾಗೆ ಅನಾಕುಲ ಶಾಂತಿಯ ಅನುಭವವು ಹೆಚ್ಚುತ್ತಹೋಗುತ್ತದೆ.

ಆತ್ಮನದು ಜ್ಞಾನ-ದರ್ಶನ ಸ್ವಭಾವವಿದೆ. ಅದು ತನ್ನ ಪುರುಷಾರ್ಥದಿಂದ ತಡೆಯಲ್ಪಡುತ್ತದೆ. ಆಗ ಆ ಆವರಣವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಆವರಣವಂತೂ ಸಂಯೋಗವಿದೆ, ಅದರ ಕಾರಣದಿಂದೇನು ಸುಖ-ದುಃಖವಿರುವುದಿಲ್ಲ. ಧರ್ಮಾತ್ಮನು ಹಾಗೂ ಮುನಿರಾಜರು ಆಂತರ್ಯದ ಆನಂದದ ಅನುಭವದಲ್ಲಿ ಲೀನರಾಗಿರುತ್ತಾರೆ ಮತ್ತು ಬಾಹ್ಯದಲ್ಲಿ ಸಿಂಹವೊಂದು ಬಂದು ಶರೀರವನ್ನು ತಿಂದುಹಾಕುತ್ತಿರಬಹುದು ! ಆದಾಗ್ಯೂ ಆ ಹೊರಗಿನ ಪ್ರತಿಕೂಲತೆಯದೇನು ದುಃಖವಿರುವುದಿಲ್ಲ. ವಿಪರೀತ ಪುರುಷಾರ್ಥದಿಂದ ಕರ್ಮದಿಂದ ಬಂಧವಾಗುತ್ತಿತ್ತು, ಅದು ಸರಳ ಪುರುಷಾರ್ಥದಿಂದ ನಾಶಹೊಂದುತ್ತದೆ. ತಾನು ತನ್ನ ಜ್ಞಾತಾ-ದೃಷ್ಟಾ ಸ್ವಭಾವವನ್ನು ಮರೆತುಹೋಗಿರುವಾಗ ಜ್ಞಾನಾವರಣ ಮೊದಲಾದ ಕರ್ಮಗಳು ಕಟ್ಟಲ್ಪಡುತ್ತಿದ್ದವು ಮತ್ತು ಯಾವಾಗ ಜ್ಞಾನ-ದರ್ಶನ ಸ್ವಭಾವವನ್ನು ಪರಿಚಯಿಸಿಕೊಂಡು ಅದರಲ್ಲಿ ಏಕಾಗ್ರವಾಗುತ್ತಿರುವಂತೆ ಆ ಆವರಣವು ಹೊರಟುಹೋಗುತ್ತದೆ ಮತ್ತು ಕೇವಲಜ್ಞಾನ-ಕೇವಲದರ್ಶನಗಳು ಪ್ರಕಟವಾಗುತ್ತವೆ. ಆಗ ಆತ್ಮಿಕ ಶಾಂತರಸವು ಉತ್ಪನ್ನವಾಗುತ್ತದೆ. ಅದರ ಹೆಸರು ಸುಖವಿದೆ. ಇಂಥ ಪರಮಾರ್ಥ ಸುಖವು ಮೋಕ್ಷದಲ್ಲಿಯೇ ಇದೆ.

ಇದು ಮೋಕ್ಷಮಾರ್ಗದ ಅಧಿಕಾರವಿದೆ. ಮೋಕ್ಷ ಎಂದರೆ ಆತ್ಮನ ಪೂರ್ಣ ಪವಿತ್ರತರವಾದ ದಶೆಯಿದೆ. ಅದರ ಕಾರಣದಿಂದ ಚಾರಿತ್ರವಿದೆ. ಆತ್ಮನ ಜ್ಞಾನ-ದರ್ಶನ ಸ್ವಭಾವದಲ್ಲಿ ವಿಹಾರಮಾಡುವುದರ-ಕ್ರೀಡೆ ಮಾಡುವುದರ ಹೆಸರು ಚಾರಿತ್ರವಿದೆ. ತನ್ನ ಸ್ವಭಾವದಲ್ಲಿ ನಿಮಗ್ನತೆ ಮಾಡಿದರೆ ಅದನ್ನು ಚಾರಿತ್ರವೆಂದು ಹೇಳಲಾಗುತ್ತದೆಯೋ ಅಥವಾ ಪರದಲ್ಲಿ ಲೀನವಾಗುವುದನ್ನು ಚಾರಿತ್ರವೆಂದು ಹೇಳಲಾಗುತ್ತದೆಯೋ ? ತನ್ನ ಸ್ವಭಾವದಲ್ಲಿ ನಿಮಗ್ನವಾಗುವಂಥ ಚಾರಿತ್ರವೇ ಮೋಕ್ಷದ ಕಾರಣವಿದೆ. ಆತ್ಮನ ಜ್ಞಾನ-ದರ್ಶನ ಸ್ವಭಾವದಲ್ಲಿ ಅನನ್ಯಮಯತೆಯಾಗುವುದರ ಎಂದರೆ ಏಕತೆ ಹೊಂದುವುದರ ಹೆಸರು ಸಮ್ಯಕ್ಚಾರಿತ್ರವಿದೆ. ಇಂಥ ಚಾರಿತ್ರದಿಂದ ಪ್ರತ್ಯಕ್ಷ ಮೋಕ್ಷವಾಗುತ್ತದೆ. ಆತ್ಮನದು ಜ್ಞಾನ-ದರ್ಶನ ಸ್ವಭಾವವಿದೆ, ಅವನಿಗೆ ಪರ್ಯಾಯದಲ್ಲಿ ಹೀನತೆಯಿದೆ. ಅದರಲ್ಲಿ ನಿಮಿತ್ತರೂಪದಿಂದ ಆವರಣವಿದೆ. ನಿಜವಾಗಿಯಂತೂ ಭಾವ ಆವರಣದಿಂದ ಜ್ಞಾನ-ದರ್ಶನಗಳು ತಡೆಯಲ್ಪಟ್ಟಿವೆ. ಅದರಲ್ಲಿ ದ್ರವ್ಯಕರ್ಮದ ಆವರಣವಂತೂ ಕೇವಲ ನಿಮಿತ್ತವಿದೆ.ತನ್ನದು ಎಂಥ ಸ್ವಭಾವವಿದೆ ಅಂಥ ಸ್ವಭಾವದಲ್ಲಿ ಪರಿಪೂರ್ಣ ನಿಮಗ್ನತೆ ಮಾಡದಿರುವುದು ಮತ್ತು ಅಪೂರ್ಣತೆ ಉಳಿಯುವುದು ಅಷ್ಟು ಮಾತ್ರ ಭಾವ ಆವರಣವಿದೆ ಮತ್ತು ಅದರಲ್ಲಿ ನಿಮಿತ್ತರೂಪವು ಜಡಕರ್ಮವಿದೆ. ಒಂದುವೇಳೆ ಆವರಣವು ಇಲ್ಲದೆಹೋಗಿದ್ದರೆ ಸರ್ವಜ್ಞತೆ ಮತ್ತು ಸರ್ವದರ್ಶಿತ್ವವು ಪ್ರಕಟವಾಗಬೇಕಾಗುವುದು. ಎಲ್ಲಿಯವರೆಗೆ ಪೂರ್ಣ ತಿಳಿದುಕೊಳ್ಳುವುದು-ನೋಡುವುದು ಆಗುವುದಿಲ್ಲ, ಅಲ್ಲಿಯವರೆಗೆ ಆತ್ಮನ ಪರ್ಯಾಯದಲ್ಲಿ ಅಪರಾಧವಿದೆ. ಅಪರಾಧವೆಂದು ಹೇಳಲಿ ಅಥವಾ ಭಾವಮರಣವೆಂದು ಹೇಳಲಿ ಅವೆರಡೂ ಒಂದೇ ಇದೆ. ಜ್ಞಾನ-ದರ್ಶನ ಸ್ವಭಾವದ ಪ್ರತೀತಿ ಮಾಡಿಕೊಂಡು ಅದರಲ್ಲಿ ಎಷ್ಟು ವಿಹಾರ ಮಾಡಲಾಗುವದು ಅಷ್ಟು ಸುಖವಿದೆ. ಆತ್ಮನ ಸ್ವಭಾವದ ಜ್ಞಾನಮಾಡಿಕೊಂಡು ಅದರ ಸನ್ಮುಖವಾಗಿ ಅದರಲ್ಲಿ ಏಕಾಗ್ರತೆ ಮಾಡಿದರೆ ಭಾವ ಆವರಣವು ಹೊರಟುಹೋಗುವುದು. ಮತ್ತು ಭಾವಾವರಣವು ಹೊರಟುಹೋಗುತ್ತಿರುವಂತೆ ದ್ರವ್ಯಕರ್ಮದ ಆವರಣವು ಕೂಡ ಹೊರಟುಹೋಗುತ್ತದೆ. ಆವರಣದ ನಾಶವಾಗುತ್ತಿರುವಂತೆ ಎಂದರೆ ಜ್ಞಾನ-ದರ್ಶನದ ಸಂಪೂರ್ಣ ವಿಕಾಸವಾಗುತ್ತಿದ್ದಂತೆ ಪೂರ್ಣ ಆತ್ಮಿಕ ಸುಖವು ಪ್ರಕಟವಾಗತ್ತದೆ.

ಜ್ಞಾನ-ದರ್ಶನ ಸ್ವಭಾವವೇ ಆತ್ಮನ ಸ್ವಾಭಾವಿಕ ಭಾವವಿದೆ, ರಾಗ-ದ್ವೇಷ ಮೊದಲಾದ ಯಾವ

ಭಾವಗಳಾಗುತ್ತವೆ ಅವೇನು ಆತ್ಮನ ಸ್ವಾಭಾವಿಕವಾದ ಭಾವಗಳಿರುವುದಿಲ್ಲ. ಸ್ವಾಭಾವಿಕ ಭಾವವು ಪ್ರಕಟವಾಗುತ್ತಿರುವಂತೆ ಆವರಣದ ವಿನಾಶವಾಗಿ ಹೋಗುತ್ತದೆ ಮತ್ತು ಆತ್ಮನ ಶಾಂತರಸವು ಪ್ರಕಟವಾಗುತ್ತದೆ, ಅದರ ಹೆಸರು ಸುಖವಿದೆ. ಜ್ಞಾನ-ದರ್ಶನ ಸ್ವಭಾವವು ಆತ್ಮನ ನಿಜಗೃಹವಿದೆ. ಅದರಲ್ಲಿ ಎಷ್ಟ ಲೀನತೆಯಾಗುತ್ತದೆಯೋ ಅಷ್ಟು ಸುಖವಿದೆ. ಆತ್ಮನ ಜ್ಞಾನ-ದರ್ಶನದ ಸ್ವಭಾವದಲ್ಲಿ ಎಷ್ಟು ಆವರಣವಿರುತ್ತದೆಯೋ ಅಷ್ಟು ದುಃಖವಿದೆ. ಭಗವಾನ ಆತ್ಮನ ಸ್ವಭಾವವಂತೂ ತಿಳಿದುಕೊಳ್ಳುವುದು ಮತ್ತು ನೋಡುವುದಿದೆ. ಅದರಲ್ಲಿ ರಾಗ-ದ್ವೇಷ-ಮೋಹದಿಂದ ಎಷ್ಟು ಆವರಣವಿದೆಯೋ ಅಷ್ಟು ದುಃಖವಿರುತ್ತದೆ. ಇಷ್ಟನ್ನು ಹೊರತುಪಡಿಸಿ ಯಾವ ಸಂಯೋಗದಿಂದ ಸುಖವಾಗಲಿ ಅಥವಾ ದುಃಖವಾಗಲಿ ಇರುವುದಿಲ್ಲ.

ಆತ್ಮನ ಜ್ಞಾನ-ದರ್ಶನ ಸ್ವಭಾವದಲ್ಲಿ ದುಃಖವಿರುವುದಿಲ್ಲ ; ಆದರೆ ರಾಗ-ದ್ವೇಷ-ಮೋಹದ ಮನೋಭಾವದಿಂದ ಆ ಸ್ವಭಾವವು ಅದೆಷ್ಟು ಪ್ರತಿಬದ್ಧತೆಯನ್ನು ಪಡೆಯುತ್ತದೆ ಅಷ್ಟು ಮಾತ್ರ ದುಃಖವಿದೆ. ಬಾಹ್ಯದಲ್ಲಿ ಯಾವುದೇ ದುಃಖವಿರುವುದಿಲ್ಲ. ತನ್ನದು ಪೂರ್ಣ ಜ್ಞಾನ-ದರ್ಶನ ಸ್ವಭಾವವಿದ್ದರೂ ಕೂಡ ಪರದ ಅವಲಂಬನದಲ್ಲಿ ಸಿಕ್ಕಿಹಾಕಿಕೊಂಡು ಅಲ್ಪಜ್ಞತೆಯರೂಪದಿಂದ ಪರಿಣಮಿಸುವುದು ದುಃಖವಿದೆ. ತನ್ನ ಜ್ಞಾನಾನಂದ ಸ್ವಭಾವದಲ್ಲಿ ಅಂತರ್ಲೀನವಾಗಿ ಹೋದರೆ ಕೇವಲಜ್ಞಾನ-ಕೇವದರ್ಶನವು ಪ್ರಕಟವಾಗುತ್ತದೆ. ಅಲ್ಲಿ ಪೂರ್ಣಸುಖವಿದೆ. ಸ್ವಾಧೀನ ಸ್ವಭಾವವು ಪೂರ್ಣ ಪ್ರಕಟವಾಗಿ ಹೋಗುವುದರ ಹೆಸರು ಸುಖವಿದೆ. ಆ ಸ್ವಭಾವವನ್ನು ಬಿಟ್ಟು ರಾಗಾದಿ ಭಾವಗಳಲ್ಲಿ ನಿಂತುಕೊಂಡರೆ ಅಷ್ಟು ದುಃಖವಿದೆ.

ಯಾವ ಪ್ರಕಾರ ಶರೀರದಲ್ಲಿ ಬೆರಳುಗಳ ಉಗುರುಗಳು ತಮ್ಮ ಮರ್ಯಾದೆ ಮೀರಿ ಅಧಿಕವಾಗಿ ಬೆಳೆದರೆ ದುಃಖದ ಕಾರಣವಾಗುತ್ತದೆ. (ಇದಂತೂ ಕೇವಲ ದೃಷ್ಟಾಂತವಿದೆ) ಅದೇ ಪ್ರಕಾರ ಚೈತನ್ಯ ಸ್ವಭಾವದಲ್ಲಿ ರಾಗ-ದ್ವೇಷದ ಉಪಾಧಿಯು ದುಃಖವಿದೆ. ನೋಡುವುದು-ತಿಳಿಯುವುದು ಚಿದಾನಂದ ಸ್ವಭಾವದ ಮರ್ಯಾದೆಯಿದೆ. ಆ ಮರ್ಯಾದೆಯಿಂದ ಹೊರಗೆಬಂದು,ರಾಗ-ದ್ವೇಷ-ಮೋಹದ ಉಪಾಧಿಯಲ್ಲಿ ನಿಂತುಕೊಳ್ಳುವುದು ದುಃಖವಿದೆ ಮತ್ತು ತನ್ನ ಜ್ಞಾನಸ್ವಭಾವದ ಜ್ಞಾನ ಮಾಡಿಕೊಂಡು ಅದರಲ್ಲಿ ಏಕಾಗ್ರತೆ ಮಾಡುವುದರಿಂದ ಸಮಸ್ತ ಆಕುಲತೆಯ ಅಭಾವವಾಗಿ ಮೋಕ್ಷದಶೆಯು ಪ್ರಕಟವಾಗುತ್ತದೆ. ಅದರಲ್ಲಿ ಪರಿಪೂರ್ಣ ಸುಖವಿದೆ. ಬಾಹ್ಯದಲ್ಲಿರುವ ನಯನಮನೋಹರವಾದ ಉಪವನದಲ್ಲಾಗಲಿ ಅಥವಾ ಸುಮಧುರವಿರುವ ಮಾವಿನ ಹಣ್ಣಿನ ರಸದಲ್ಲಾಗಲಿ ಸುಖವಿರುವುದಿಲ್ಲ. ಪರದ ಆಶೆ ಮಾಡುವುದು ದುಃಖವಿದೆ. ಧರ್ಮಾತ್ಮ ಜೀವನಿಗೆ ಕೂಡ ಎಷ್ಟು ಸ್ವರೂಪದಲ್ಲಿ ಲೀನತೆಯಿರುತ್ತದೆ ಅಷ್ಟು ಸುಖವಿರುತ್ತದೆ ಮತ್ತು ಎಷ್ಟು ಲೀನತೆಯಿರುವುದಿಲ್ಲ ಹಾಗೂ ರಾಗ-ದ್ವೇಷಗಳಾಗುತ್ತವೆ ಅಷ್ಟು ಅವನಿಗೆ ಕೂಡ ದುಃಖವಿರುತ್ತದೆ. ನಾನು ಜ್ಞಾತಾನಿದ್ದೇನೆಂಬುದನ್ನು ಮರೆತುಹೋಗಿ ರಾಗಾದಿಗಳ ಮನೋಭಾವದಲ್ಲಿಯೇ ಆತ್ಮನನ್ನು ತಡೆದು ನಿಲ್ಲಿಸುವುದು-ಹಿಡಿದಿಡುವುದು ದುಃಖವಿದೆ, ಆದರೆ ಯಾವಾಗ ಜ್ಞಾನಸ್ವಭಾವದ ಜ್ಞಾನ-ಪರಿಚಯ ಮಾಡಿಕೊಂಡು ಅದರಲ್ಲಿ ಪೂರ್ಣ ನಿಮಗ್ನತೆ ಮಾಡಲಾಗುತ್ತದೆ ಆಗ ಕೇವಲಜ್ಞಾನ-ಕೇವದರ್ಶನದ ಪ್ರಕಟತೆಯಾಗುತ್ತದೆ ಮತ್ತು ಆವರಣದ ಅಭಾವವು ಪೂರ್ಣರೂಪದಿಂದ ಆಗಿಹೋಗುತ್ತದೆ. ಆದುದರಿಂದ ಅಲ್ಲಿ ಪೂರ್ಣ ಆನಂದವಿರುತ್ತದೆ. ಸರ್ವಜ್ಞ ಭಗವಂತರಿಗೆ ನಿರಾಕುಲ ಸುಖದ ನಿಶ್ಚಲ ಅನುಭವವಿರುತ್ತದೆ. ಅದುವೇ ಪಾರಮಾರ್ಥಿಕ ಆತ್ಮಿಕ ಸುಖವಿದೆ. ಜ್ಞಾನ-ದರ್ಶನಗಳು ಎಲ್ಲವನ್ನು ತಿಳಿಯುತ್ತವೆ-ನೋಡುತ್ತವೆ, ಎಂದರೆ ತಿಳಿದುಕೊಳ್ಳುವಲ್ಲಿ-ನೋಡುವಲ್ಲಿ ಎಲ್ಲಿಯೂ ಒಂದಿಷ್ಟು ರಾಗ-ದ್ವೇಷ ಮಾಡಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ಆದುದರಿಂದಲೇ ಭಗವಂತರಿಗೆ ಪೂರ್ಣ ಆತ್ಮಿಕ ಸುಖವಿರುತ್ತದೆ. ಇವರನ್ನು ಹೊರತುಪಡಿಸಿ ಸ್ವರ್ಗದ ಇಂದ್ರನಿಗೂ ಕೂಡ ಪೂರ್ಣ ಸುಖವಿರುವುದಿಲ್ಲ. ಸಂಯೋಗದಿಂದ ಸುಖವಾಗಲಿ ಅಥವಾ ದುಃಖವಾಗಲಿ ಇರುವುದಿಲ್ಲ. ಸಿದ್ಧಭಗವಂತರು ಯಾವುದೇ ಸಂಯೋಗವಿಲ್ಲದೆ ತಮ್ಮ ಸ್ವಭಾವದಿಂದಲೇ ಪರಮ ಸುಖಿಯಿದ್ದಾರೆ. ಇನ್ನು ನಿಗೋದದ ಜೀವಗಳಿಗೆ ಬಾಹ್ಯದಲ್ಲಿ ಪ್ರತಿಕೂಲತೆಗಳ ಸಂಯೋಗವಂತೂ ಕಂಡುಬರುವುದಿಲ್ಲ. ಆದಾಗ್ಯೂ ಆ ಜೀವಗಳಿಗೆ ನರಕದಲ್ಲಿರುವುದಕ್ಕಿಂತ ಅನೇಕ ಗುಣಿತ ದುಃಖವಿದೆ. ಆ ದುಃಖವು

ಯಾವುದರಿಂದಿದೆಯೆಂದರೆ ಆಂತರ್ಯದೊಳಗೆ ಆತ್ಮನ ದಶೆಯಲ್ಲಿ ಚೈತನ್ಯದ ವಿರಾಧನೆಯಾಗಿ ಆ ಜೀವದ ಜ್ಞಾನ-ದರ್ಶನಗಳು ಆತ್ಯಂತಿಕ ರೂಪದಿಂದ ಆವರಿಸಿ ಹೋಗಿರುವುದರಿಂದಲೇ ಅಲ್ಲಿ ದುಃಖವಿದೆ. ಜ್ಞಾನ-ದರ್ಶನದ ಪರ್ಯಾಯಗಳು ಅತ್ಯಂತ ಹೀನವಾಗಿ ಹೋಗಿರುವಲ್ಲಿ ತೀವ್ರ ಮೋಹವಿರುವುದರಿಂದ ಅದರ ದುಃಖವಿದೆ. ಆಲೂಗಡ್ಡೆಯನ್ನು ಎಣ್ಣೆಯಲ್ಲಿ ತಾಳಿಸುವುದರದೇನು ಅದಕ್ಕೆ ದುಃಖವಿಲ್ಲ ; ಆದರೆ ತನ್ನ ಜ್ಞಾನ-ದರ್ಶನ ಸ್ವಭಾವವನ್ನು ಮರೆತುಹೋಗಿ ತೀವ್ರ ಮೋಹದಿಂದ ಅದರ ಪರ್ಯಾಯವು ದಂಡನೆಗೆ ಒಳಗಾಗಿ ಹೋಗಿರುವುದರಿಂದಲೇ ನಿಗೋದಿ ಜೀವಗಳು ದುಃಖಿಯಿವೆ. ಮಾವಿನ ಹಣ್ಣಿನ ರಸವನ್ನು ತಿನ್ನುತ್ತಿರಲಿ ಮತ್ತು ಅದರಲ್ಲಿ ಸುಖವನ್ನು ಮನ್ನಿಸುತ್ತಿದ್ದರೂ ಕೂಡ ಆ ಸಮಯದಲ್ಲಿ ಸಹ ಆ ಜೀವನು ಆಕುಲತೆಯಿಂದ ದುಃಖಿಯಿರುತ್ತಾನೆ, ಆದರೆ ಮೂಢತೆಯಿಂದ ಅದರಲ್ಲಿ ಸುಖವನ್ನು ಮನ್ನಿಸುತ್ತಾನೆ. ಆದರೆ ಜ್ಞಾನ-ದರ್ಶನ ಸ್ವಭಾವವು ಎಲ್ಲಿ ಪೂರ್ಣ ರೂಪದಿಂದ ಪ್ರಕಟವಾಗಿರುವುದೋ ಅಲ್ಲಿಯೇ ಪೂರ್ಣ ಸುಖವಿರುತ್ತದೆ. ಇಂಥ ಸ್ವಭಾವ ಸುಖದ ಪ್ರತೀತಿಯನ್ನು ಭವ್ಯ ಜೀವರುಗಳೇ ಮಾಡುತ್ತಾರೆ. ಬಾಹ್ಯ ಪದಾರ್ಥಗಳಲ್ಲಿಯಂತೂ ಸುಖವಿರುವುದೇ ಇಲ್ಲ ಮತ್ತು ದಯೆಯ ಶುಭಪರಿಣಾಮವಾಗುತ್ತದೆ ಅದರಲ್ಲಿಯೂ ಕೂಡ ಸುಖವಿರುವುದಿಲ್ಲ. ಆದರೆ ತನ್ನ ಜ್ಞಾನ-ದರ್ಶನ ಸ್ವಭಾವದಲ್ಲಿಯೇ ಸುಖವಿದೆಯೆಂಬ ಶ್ರದ್ಧೆಯು ಭವ್ಯ ಜೀವರುಗಳಿಗೆ ಆಗುತ್ತದೆ.

ಧರ್ಮಾತ್ಮರಾದ ಭವ್ಯ ಜೀವರುಗಳು ಕೂಡ ತಮ್ಮ ತಮ್ಮ ಗುಣಸ್ಥಾನದ ಅನುಸಾರವಾಗಿ ರಾಗಯುಕ್ತವಿರುವ ದಶೆಯಲ್ಲಿ ವಿಷಯಗಳನ್ನು ಭೋಗಿಸುತ್ತಾರೆ, ಆದರೆ ಅದರಲ್ಲಿ ಅವರಿಗೆ ಹೇಯಬುದ್ಧಿಯಿರುತ್ತದೆ. ಆಂತರ್ಯದಲ್ಲಿ ಚಿದಾನಂದ ಸ್ವಭಾವದ ಸುಖವನ್ನೇ ಅವರು ಉಪಾದೇಯವೆಂದು ಮನ್ನಿಸುತ್ತಾರೆ. ವಿಷಯಗಳ ಸುಖದಲ್ಲಿ ಧರ್ಮಾತ್ಮನಿಗೆ ಎಂದೂ ಉಪಾದೇಯ ಬುದ್ಧಿಯಿರುವುದಿಲ್ಲ. ಆದಾಗ್ಯೂ ಅಸ್ಥಿರತೆಯ ರಾಗದ ಕಾರಣದಿಂದ ವಿಷಯಸುಖದ ಅನುಭವವಿರುತ್ತದೆ, ಆದರೆ ಅದನ್ನು ಅವರು ಹೇಯವೆಂದು ಮನ್ನಿಸುತ್ತಾರೆ. ಅವರು ತಮ್ಮ ಅತೀಂದ್ರಿಯ ಸುಖವನ್ನೇ ಉಪಾದೇಯವೆಂದು ಮನ್ನಿಸುತ್ತಾರೆ. ಅಜ್ಞಾನೀ ಜೀವರುಗಳಂತೂ ಅತೀಂದ್ರಿಯ ಸುಖವನ್ನು ತಿಳಿಯುವುದೇ ಇಲ್ಲ ಮತ್ತು ಇಂದ್ರಿಯ ಸುಖವನ್ನೇ ಆದರಣೀಯವೆಂದು ಮನ್ನಿಸುತ್ತಾರೆ. ಚಕ್ರವರ್ತಿಯು ಸಮ್ಯಗ್ದೃಷ್ಟಿಯಾಗಿದ್ದರೆ ಯಾವುದೇ ಸಂಯೋಗದಲ್ಲಿ ಸುಖವನ್ನು ಮನ್ನಿಸುವುದಿಲ್ಲ. ಆದರೂ ಕೂಡ ಅವನಿಗೆ ಬಾಹ್ಯದಲ್ಲಿ ಸಾವಿರಾರು ರಾಣಿಯರ ಸಂಯೋಗವಿರುತ್ತದೆ ಮತ್ತು ಆ ಪ್ರಕಾರದ ಅಲ್ಪರಾಗವು ಇರುತ್ತದೆ. ಆದರೆ ಆಂತರ್ಯದಲ್ಲಿ ಸ್ವಭಾವದ ಸುಖದ ಜ್ಞಾನವು-ಅರಿವು ವರ್ತಿಸುತ್ತಿರುತ್ತದೆ. ಅಜ್ಞಾನಿಯಂತೂ ಪುಣ್ಯ ಪರಿಣಾಮವನ್ನೇ ಉಪಾದೇಯವೆಂದು ಮನ್ನಿಸುತ್ತಾನೆ. ಅವನಿಗೆ ಆತ್ಮನ ಅತೀಂದ್ರಿಯ ಸುಖದ ಅಭಿರುಚಿಯಿರುವುದೇ ಇಲ್ಲ. ಧರ್ಮಾತ್ಮನಿಗೆ ಸ್ವಭಾವದ ದೃಷ್ಟಿಯಿರುತ್ತದೆ. ಆದರೆ ಪ್ರಮಾದದ ಕಾರಣದಿಂದ ಅಲ್ಪರಾಗವಾಗುತ್ತಿದ್ದರೂ ಕೂಡ ಸ್ವಭಾವದೃಷ್ಟಿಯ ಬಲದಿಂದ ಏಕಾಗ್ರತೆ ಮಾಡಿ ಆ ರಾಗವನ್ನು ಕತ್ತರಿಸಿಹಾಕುವನು. ಯಾವ ಪ್ರಕಾರ ನಾಲಿಗೆಯದು ಎಂಥ ಶುಷ್ಕ (ರೂಕ್ಷ) ಸ್ವಭಾವವಿರುತ್ತದೆಯೆಂದರೆ ಬೇಕಾದಂಥ ಸ್ನಿಗ್ಧತೆಯಿದ್ದರೂ ಕೂಡ ಅದನ್ನು ಸರಿಯಾಗಿ ಮಾಡಿಬಿಡುತ್ತದೆ. ಅದೇ ಪ್ರಕಾರ ಧರ್ಮಾತ್ಮನಿಗೆ ಸ್ವಭಾವದ ದೃಷ್ಟಿಯ ಬಲವು ಎಷ್ಟಿರುತ್ತದೆಯೆಂದರೆ-ಅವನು ಅಲ್ಪಕಾಲದೊಳಗೆ ಸ್ವಭಾವದಲ್ಲಿ ಏಕಾಗ್ರತೆ ಮಾಡಿ ರಾಗ-ದ್ವೇಷಗಳ ಅಭಾವ ಮಾಡಿಬಿಡುತ್ತಾನೆ. ಧರ್ಮಾತ್ಮನಿಗೆ ಆತ್ಮನ ಅತೀಂದ್ರಿಯ ಸ್ವಭಾವದ ಸುಖದ ಪ್ರತೀತಿಯಿರುತ್ತದೆ. ಇಂದ್ರಿಯ ವಿಷಯಗಳೊಳಗಿನ ಸುಖದ ಬುದ್ಧಿಯು ಬಿಟ್ಟುಹೋಗಿರುತ್ತದೆ. ಪೂರ್ಣ ಜ್ಞಾನಾನಂದ ದಶೆಯು ಪ್ರಕಟವಾಗಿ ಹೋಗಿರುವಂಥ ಭಗವಂತರಿಗೆ ತಮ್ಮ ಸ್ವಭಾವದಿಂದ ಅನಾಕುಲ ಪರಮಾನಂದವಿರುತ್ತದೆ. ಇಂಥ ಸುಖದ ಪ್ರತೀತಿಯನ್ನು ಅಭವ್ಯ ಜೀವರುಗಳು ಮಾಡುವುದಿಲ್ಲ. ಆ ಭವ್ಯ ಜೀವರುಗಳಿಗೆ ಕೂಡ ವರ್ತಮಾನದಲ್ಲಿ ಇಂಥ ಸ್ವಭಾವ ಸುಖದ ಪ್ರತೀತಿಯಿರುವುದಿಲ್ಲ ಎಂದರೆ ಅದರ ಪ್ರತೀತಿ ಮಾಡಿಕೊಳ್ಳುವಂಥವರು ಇರುವುದಿಲ್ಲ. ಅವರು ಕೂಡ ವರ್ತಮಾನದಲ್ಲಿ ಯೋಗ್ಯರಿರುವುದಿಲ್ಲ.

ಆತ್ಮನಲ್ಲಿ ಸುಖವಿದೆಯೆಂದು ಹೇಳುತ್ತಾರೆ, ಆದರೆ ಅದನ್ನು ಕಂಡಲ್ಲದೆ ಹೇಗೆ ಮನ್ನಿಸುವುದು, ಮೊದಲು ಅದರ ಸ್ವಾದವಾದರೂ ಬರಬೇಕಾಗುತ್ತದೆಯಲ್ಲವೆ, ಸ್ವಾದ ಬಂದನಂತರ ಅದನ್ನು ಪಡೆದುಕೊಳ್ಳುವ ಪ್ರಯತ್ನ ಮಾಡಬಹುದಾಗಿದೆಯೆಂದು ಕೆಲವರು ಕೇಳುತ್ತಾರೆ. ಅವರಿಗೆ ಹೇಳುವುದೇನೆಂದರೆ ನೀನು ಮೊದಲು ಸ್ವಭಾವವು ಸುಖಮಯವಿದೆಯೆಂದು ನಂಬಿ, ಪ್ರತೀತಿಯನ್ನಾದರೂ ಮಾಡು ; ಅದರ ವಿಶ್ವಾಸ ಮಾಡಿದಲ್ಲದೆ ಅದರ ಅನುಭವವು ಎಲ್ಲಿಂದ ತಾನೆ ಬರುವ ಸಾಧ್ಯತೆಯಿದೆ ? ಆ ಸುಖದ ಅನುಭವ ಮಾಡಿದ ನಂತರ ಪ್ರತೀತಿ ಮಾಡುವ ಮಾತು ಎಲ್ಲಿ ಉಳಿಯುವುದು ? ಮೊದಲು ಅದರ ಅಭಿರುಚಿ ಮಾಡಿ, ಆಂತರ್ಯದಲ್ಲಿ ಅಭ್ಯಾಸ ಮಾಡಿದರೆ ಅಂಥ ಸುಖದ ಅನುಭವವಾಗುವುದು.

ಕೇವಲೀ ಭಗವಂತರಿಗೆ ಸ್ವಭಾವದಿಂದಲೇ ಸುಖವಿದೆಯೆಂಬುದನ್ನು ಯಾರು ಮನ್ನಿಸುವುದಿಲ್ಲ ಮತ್ತು ಕೇವಲಿಗಳಿಗೆ ಕೂಡ ನೀರು -ಆಹಾರದ ಸೇವನೆಯಿರುತ್ತದೆಯೆಂದು ಯಾರು ಮನ್ನಿಸುತ್ತಾರೆ. ಅವರು ಕೂಡ ಮಿಥ್ಯಾದೃಷ್ಟಿಯಿದ್ದಾರೆ. ಆತ್ಮನ ಆಂತರ್ಯದಲ್ಲಿ ಸ್ವಭಾವ ಸುಖವು ಪೂರ್ಣರೂಪದಿಂದ ತುಂಬಿಕೊಂಡಿದೆಯೆಂಬುದರ ಪ್ರತೀತಿಯು ಅಜ್ಞಾನಿಗಳಿಗೆ ಬರುವುದೇ ಇಲ್ಲ.

ಯಾವ ಪ್ರಕಾರ ಕಡಲೇ ಕಾಳಿನಲ್ಲಿ ಸಿಹಿತನವು ಶಕ್ತಿರೂಪದಿಂದ ತುಂಬಿಕೊಂಡಿರುತ್ತದೆ ಮತ್ತು ಅದಕ್ಕೆ ಶಾಕ ಕೊಡುವುದರಿಂದ ಅದು ತಾನೆ ಪ್ರಕಟವಾಗುತ್ತದೆ. ಅದೇ ಪ್ರಕಾರ ಚೈತನ್ಯಸ್ವಭಾವದಲ್ಲಿ ಸುಖವು ಶಕ್ತಿರೂಪದಿಂದ ತುಂಬಿಕೊಂಡಿರುತ್ತದೆಯೆಂದು ತಿಳಿದುಕೊಂಡು, ಅದರ ಮೇಲೆ ವಿಶ್ವಾಸ ಮಾಡಿ, ಆ ಸ್ವಭಾವದಲ್ಲಿ ಏಕಾಗ್ರತೆ ಮಾಡಿದರೆ ಆನಂದವು ತಾನೇ ತಾನಾಗಿ ಪ್ರಕಟವಾಗುತ್ತದೆ, ಆದರೆ ಅಭವ್ಯ ಜೀವರುಗಳಿಗೆ ಅದರ ಪ್ರತೀತಿಯಾಗುವುದೇ ಇಲ್ಲ. ಏಕೆಂದರೆ ಅವರ ವಿಶ್ವಾಸವೇ ಇರುವುದಿಲ್ಲ. ಇಲ್ಲಿ ಅಭವ್ಯ ಜೀವರುಗಳ ದೃಷ್ಟಾಂತವಿದೆ. ಅದೇ ಪ್ರಕಾರದಿಂದ ಯಾವ ಭವ್ಯ ಜೀವರುಗಳು ಕೂಡ ಸ್ವಭಾವ ಸುಖದ ಮೇಲೆ ಶ್ರದ್ಧೆ ಮಾಡುವುದಿಲ್ಲ, ಅವರು ವರ್ತಮಾನದಲ್ಲಿ ಅಭವ್ಯ ಸಮಾನವೇ ಇರುತ್ತಾರೆ. ಒಂದುವೇಳೆ ಮೋಕ್ಷದಲ್ಲಿ ಸುಖ ಮನ್ನಿಸಿದರೆ ಆತ್ಮನಲ್ಲಿ ಸುಖವಿದೆಯೆಂದು ಮನ್ನಿಸುವರು. ಆತ್ಮನ ಆಶ್ರಯದಿಂದ ಮೋಕ್ಷಮಾರ್ಗವಿದೆ ಅದರಲ್ಲಿ ಕೂಡ ಸುಖ ಮನ್ನಿಸಬೇಕು; ಮೋಕ್ಷಮಾರ್ಗದಲ್ಲಿ ದುಃಖವಿರುವುದಿಲ್ಲ. ಅಜ್ಞಾನಿಗೆ ಪುಣ್ಯದಲ್ಲಿ ಮತ್ತು ಅದರ ಫಲದಲ್ಲಿ ಸುಖದ ಮನ್ನಣೆಯಿದೆ. ಎಂದರೆ ಅವನಿಗೆ ಮೋಕ್ಷಮಾರ್ಗದಲ್ಲಿ ಅಥವಾ ಅದರ ಫಲರೂಪವಿರುವ ಮೋಕ್ಷದಲ್ಲಿ ಸ್ವಭಾವ ಸುಖದ ಪ್ರತೀತಿಯಾಗುವುದಿಲ್ಲ ಮತ್ತು ಆತ್ಮನ ಸ್ವಭಾವದ ಪ್ರತೀತಿಯು ಕೂಡ ಆಗುವುದಿಲ್ಲ. ಇಂಥ ಜೀವರುಗಳು ಮೋಕ್ಷದ ಸಲುವಾಗಿ ಯೋಗ್ಯರಿರುವುದಿಲ್ಲ.

ಇಂಥ ಅವಕಾಶ ಬರುವುದು ಮತ್ತು ತನಗೆ ಆತ್ಮನ ಜ್ಞಾನ-ದರ್ಶನ ಸ್ವಭಾವವು ರುಚಿಸದಿರುವುದು, ಅದರಂತೆ ತಾವು ಪುಣ್ಯಪಾಪದಲ್ಲಿ ಧರ್ಮ ಮನ್ನಿಸಿದರೆ ಮೋಕ್ಷದ ಸಲುವಾಗಿ ತಾವುಗಳು ಯೋಗ್ಯರಾಗಿರುವುದಿಲ್ಲವೆಂದು ಇಲ್ಲಿ ಆಚಾರ್ಯದೇವರು ಹೇಳುತ್ತಿದ್ದಾರೆ.

ಯಾರು ಪುಣ್ಯದಲ್ಲಿ ಸುಖವಿದೆಯೆಂದು ಮನ್ನಿಸಿದ್ದಾರೆ, ಅವರು ತಮ್ಮ ಸ್ವಭಾವದ ಅನಾದರ ಮಾಡಿದ್ದಾರೆ. ಏಕೆಂದರೆ ಪುಣ್ಯವು ವಿಕಾರವಿದೆ ಮತ್ತು ವಿಕಾರದಲ್ಲಿ ಸುಖವಿದೆಯೆಂದು ಮನ್ನಿಸಿದರೆ ಅನಂತಗುಣಿತ ವಿಕಾರದಲ್ಲಿ ಅನಂತಗುಣಿತ ಸುಖವಿದೆಯೆಂದು ಮನ್ನಿಸಿದಂತಾಯಿತು, ಎಂದರೆ ಸ್ವಭಾವದ ಅನಂತ ಸುಖವನ್ನು ಅನಾದರ ಮಾಡಿದಂತಾಯಿತು. ಆದುದರಿಂದ ಅಂಥ ಜೀವವನ್ನು ಅಭವ್ಯವೆಂದು ಹೇಳಲಾಗಿದೆ. ಅವನಲ್ಲಿ ಮೋಕ್ಷದ ಯೋಗ್ಯತೆಯಿರುವುದಿಲ್ಲ. ಯಾರು ಭವ್ಯ ಜೀವಿಗಳಿದ್ದಾರೆ ಅವರೇ ಆತ್ಮನ ಅತೀಂದ್ರಿಯ ಸುಖದ ಕುರಿತು ವಿಶ್ವಾಸ ಮಾಡುತ್ತಾರೆ ಮತ್ತು ಅವರೇ ಮೋಕ್ಷಮಾರ್ಗಕ್ಕೆ ಯೋಗ್ಯರಿದ್ದಾರೆ. ಸಂಸಾರದಲ್ಲಿ ಸಮಸ್ತ ಜೀವರುಗಳೇನು

ಮೋಕ್ಷಮಾರ್ಗದ ಸಲುವಾಗಿ ಯೋಗ್ಯರಿರುವುದಿಲ್ಲ. ಅವರಲ್ಲಿ ಕೆಲವರು ಭವ್ಯರಿರುತ್ತಾರೆ ಮತ್ತೆ ಕೆಲವರು ಅಭವ್ಯರು ಕೂಡ ಇರುತ್ತಾರೆ. ಅಭವ್ಯ ಜೀವರುಗಳಲ್ಲಿ ಮೋಕ್ಷಮಾರ್ಗದ ಯೋಗ್ಯತೆಯಿರುವುದಿಲ್ಲ ; ಆದರೆ ಭವ್ಯ ಜೀವರುಗಳೇ ಮೋಕ್ಷಮಾರ್ಗದ ಸಲುವಾಗಿ ಯೋಗ್ಯರಿದ್ದಾರೆ. ಆತ್ಮನ ಸ್ವಭಾವದ ಆಶ್ರಯದಿಂದಲೇ ಮೋಕ್ಷಮಾರ್ಗವಿದೆ.ಆ ವೀತರಾಗ ಮೋಕ್ಷಮಾರ್ಗವು ಪರಮ ಸತ್ ಇರುವುದು. ಆದರೆ ಸಮಸ್ತ ಜೀವರುಗಳು ಆ ಮೋಕ್ಷಮಾರ್ಗದ ಅಭಿರುಚಿ ಮಾಡುವುದಿಲ್ಲ. ಎಲ್ಲೋ ವಿರಳರಾಗಿಯೇ ರುಚಿ ಮಾಡುವಂಥವರಿರುತ್ತಾರೆ ; ಯಾವ ಜೀವರುಗಳು ಅದರ ಅಭಿರುಚಿ ಮಾಡುತ್ತಾರೆ ಅವರ ಕಲ್ಯಾಣವಾಗಿ ಹೋದಲ್ಲದೆ ಇರುವುದಿಲ್ಲ. ಈ ಜಗತ್ತಿನಲ್ಲಿ ಯಾವ ಜೀವರುಗಳು ಯೋಗ್ಯರಿರುತ್ತಾರೆ ಅವರು ಮೋಕ್ಷಮಾರ್ಗದ ಸಾಧನೆ ಮಾಡುತ್ತಾರೆ, ಆದರೆ ಯಾರಿಗೆ ಯಾರು ತಿಳಿಸಿಕೊಡುವುದರಲ್ಲಿ ಸಮರ್ಥರಿರುವುದಿಲ್ಲ.

ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವೇ ಮೋಕ್ಷಮಾರ್ಗವಿದೆಯೆಂದು ಸಿದ್ಧಪಡಿಸಲಾಗಿದೆ, ಆದರೆ ಎಲ್ಲಿ ಆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಮೋಕ್ಷಮಾರ್ಗವು ಪೂರ್ಣವಾಗಿರುವುದಿಲ್ಲ, ಅಲ್ಲಿ ರಾಗವು ಇರುವುದು. ಆ ರಾಗವು ಬಂಧನದ ಕಾರಣವಿದೆಯೆಂದು ಈಗ ತಿಳಿಸಿಕೊಡುತ್ತಾರೆ. ರತ್ನತ್ರಯವಂತೂ ಅಬಂಧಸ್ವಭಾವಿಯಿದೆ. ಅದೇನು ಬಂಧದ ಕಾರಣವಿರುವುದಿಲ್ಲ. ಆದರೆ ಆ ರತ್ನತ್ರಯದ ಜತೆಯಲ್ಲಿ ಜ್ಞಾನಿಗಳಿಗೆ ಕೂಡ ಇನ್ನೂ ಯಾವ ರಾಗವು ಉಳಿದುಕೊಂಡಿರುತ್ತದೆ ಅದು ಬಂಧದ ಕಾರಣವಿದೆ. ಆ ರಾಗವು ಮೋಕ್ಷದ ಕಾರಣವಿರುವುದಿಲ್ಲ. ರತ್ನತ್ರಯದ ಜತೆಯಲ್ಲಿ ಯಾವ ರಾಗವು ವರ್ತಿಸುತ್ತದೆ ಅದು ಬಂಧದ ಕಾರಣವಿದೆ. ಆದುದರಿಂದ ರತ್ನತ್ರಯವನ್ನು ಕೂಡ ಬಂಧದ ಕಾರಣವೆಂದು ಹೇಳಲಾಗುತ್ತದೆ, ಆದರೆ ಇಲ್ಲಿ ಯಾವ ವ್ಯವಹಾರದ ರಾಗವಿರುತ್ತದೆ ಅದುವೇ ಬಂಧದ ಕಾರಣವಿದೆ. ರತ್ನತ್ರಯದ ಯಾವ ಶುದ್ಧತೆಯಾಗಿದೆ ಅದೇನು ಬಂಧನದ ಕಾರಣವಿರುವುದಿಲ್ಲ. ಅಪೂರ್ಣದಶೆಯಲ್ಲಿ ಯಾವ ರಾಗವು ವರ್ತಿಸುತ್ತದೆ ಅದುವೇ ಬಂಧದ ಕಾರಣವಿದೆ. ಎಂದರೆ ಯಾವ ವ್ಯವಹಾರ ರತ್ನತ್ರಯವನ್ನು ಮೊದಲು ಉಪಚಾರದಿಂದ ಮೋಕ್ಷಮಾರ್ಗದ ಕಾರಣವೆಂದು ಹೇಳಲಾಗಿತ್ತು ಅದನ್ನು ಇಲ್ಲಿ ಬಂಧದ ಕಾರಣರೂಪದಿಂದ ಗುರುತಿಸಲಾಗುತ್ತದೆ. ಈ ಮಾತು ನೂರ ಐವತ್ತಾ ಲ್ಕನೆಯ ಗಾಥೆಯಲ್ಲಿ ಬಂದುಹೋಗಿದೆ.

ಆತ್ಮನ ಸ್ವಭಾವವು ಜ್ಞಾನ-ದರ್ಶನಮಯವಿದೆ. ಅದರ ಜ್ಞಾನವಾಗಿ-ಅದರ ಅರಿವು ಮೂಡಿ ಅದರಲ್ಲಿ ಏಕಾಗ್ರವಾದರೆ ಯಾವ ವೀತರಾಗ ಶ್ರದ್ಧೆ-ಜ್ಞಾನ-ಚಾರಿತ್ರವು ಪ್ರಕಟವಾಗುತ್ತದೆ ಅದು ನಿಜವಾದ ಮೋಕ್ಷಮಾರ್ಗವಿದೆ. ಅಲ್ಲಿ ಅಪೂರ್ಣದಶೆಯಲ್ಲಿ ಯಾವ ರಾಗವಿರುತ್ತದೆ ಅದನ್ನು ವ್ಯವಹಾರವೆಂದು ಗಣಿಸಿ ಬಂಧನದ ಕಾರಣವೆಂದು ಹೇಳಿದೆ.

**ದಂಸಣಣಾಣ ಚರಿತ್ತಾಣಿ ಮೋಕ್ಖಮಗ್ಗೋ ತ್ತಿ ಸೇವಿದವ್ವಾಣಿ ।**
**ಸಾಧೂಹಿ ಇದಂ ಭಣಿದಂ ತೇಹಿಂ ದು ಬಂಧೋ ವ ಮೋಕ್ಖೋ ವಾ ॥೧೬೪॥**

**ಆ ದರ್ಶನಜ್ಞಾನಚಾರಿತ್ರ ಮೋಕ್ಷಮಾರ್ಗವಿದ್ದವು ಸೇವನೆ ಯೋಗ್ಯವಿವೆಯೆಂದು ।**
**ಸಾಧು ಪೇಳಿರುವರಾದರವುಗಳಿಂದ ಬಂಧವದರಂತೆ ಮೋಕ್ಷವಾಗುವುದು ॥೧೬೪॥**

ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಯಾವ ರತ್ನತ್ರಯವಿದೆ ಅದು ಮೋಕ್ಷಮಾರ್ಗವಿದೆ. ಚಿದಾನಂದ ಸ್ವರೂಪನಾದಂಥ ಭಗವಾನಾತ್ಮನ ಪ್ರತೀತಿ-ಜ್ಞಾನ-ಅನುಭೂತಿಯು ಮೋಕ್ಷದ ಕಾರಣವಿರುವುದರಿಂದ ಧರ್ಮೀ ಜೀವರುಗಳು ಸೇವಿಸಲು ಯೋಗ್ಯವಾಗಿದೆ ಮತ್ತು ಆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಯಾವಾಗ ಪೂರ್ಣತೆಗೆ ಪ್ರಾಪ್ತವಾಗುವುದಿಲ್ಲ ಆಗ ಅದರ ಜತೆಯಲ್ಲಿರುವಂಥ ರಾಗದಿಂದ ಬಂಧನವಾಗುತ್ತದೆ. ಆದುದರಿಂದ ರತ್ನತ್ರಯವನ್ನು

ಕದಾಚಿತ್ ಬಂಧದ ಕಾರಣವೆಂದು ಕೂಡ ಹೇಳಲಾಗುತ್ತದೆ. ಆದರೆ ನಿಜವಾಗಿ ನೋಡಿದರೆ ದೇವ-ಶಾಸ್ತ್ರ-ಗುರು ಇವರೇ ಮೊದಲಾದವರ ಶ್ರದ್ಧೆಯಲ್ಲಿ ಯಾವ ರಾಗವಾಗುತ್ತದೆ ಅದು ಬಂಧದ ಕಾರಣವಾಗುತ್ತದೆ. ಆದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳೇನು ಬಂಧದ ಕಾರಣವಿರುವುದಿಲ್ಲ. ಜ್ಞಾನವಂತೂ ಆತ್ಮನ ಸ್ವಭಾವವಿದೆ. ಚಿದಾನಂದ ಸ್ವಭಾವದ ಆಶ್ರಯದಿಂದ ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳಿವೆ ಅವಂತೂ ಮೋಕ್ಷದ ಕಾರಣಗಳೇ ಇವೆ, ಆದರೆ ಅದರ ಜತೆಯಲ್ಲಿರುವ ದೇವ-ಶಾಸ್ತ್ರ-ಗುರುಗಳ ಶ್ರದ್ಧೆ, ನವತತ್ತ್ವಗಳ ಜ್ಞಾನದ ಯಾವ ಪ್ರಕಟತೆಯಿದೆ ಅದರಲ್ಲಿ ಪರದ ಕಡೆಗೆ ಲಕ್ಷ್ಯವಿರುವುದರಿಂದ ಅವು ಬಂಧದ ಕಾರಣಗಳಿವೆ. ನಿಜವಾದ ದೇವ-ಶಾಸ್ತ್ರ-ಗುರುಗಳ ಶ್ರದ್ಧೆಯ ಜತೆಯಲ್ಲಿ ರಾಗವಿರುತ್ತದೆ ಅದು ಬಂಧದ ಕಾರಣವಿದೆ. ಪರದ ಕಡೆಗಿರುವ ಕ್ಷಯೋಪಶಮ ಜ್ಞಾನದ ಸಮಯದಲ್ಲಿ ರಾಗವಿರುತ್ತದೆ ಅದು ಬಂಧದ ಕಾರಣವಿದೆ ಮತ್ತು ಪಂಚಮಹಾವ್ರತದ ವಿಕಲ್ಪವು ಕೂಡ ಬಂಧದ ಕಾರಣವಿದೆ. ಯಾವ ಚಿದಾನಂದ ಸ್ವಭಾವದ ಪ್ರತೀತಿರೂಪದ ನಿಶ್ಚಯಸಮ್ಯಗ್ದರ್ಶನವಿದೆ ಅದಂತೂ ನಿರ್ವಿಕಲ್ಪವಿರುತ್ತದೆ, ಅದೇನು ಬಂಧದ ಕಾರಣವಿರುವುದಿಲ್ಲ. ಶುದ್ಧಜ್ಞಾಯಕ ಸ್ವಭಾವದ ಪ್ರತೀತಿಯಂತೂ ನಿರ್ವಿಕಲ್ಪ ಮತ್ತು ನಿರಾಕಾರವಿರುತ್ತದೆ. ನಿರಾಕಾರವೆಂದರೆ ಅದು ಸ್ವ-ಪರಗಳನ್ನು ತಿಳಿದುಕೊಳ್ಳುವುದಿಲ್ಲ. ಜ್ಞಾನಪರ್ಯಾಯವು ಸ್ವ-ಪರಗಳನ್ನು ತಿಳಿಯುತ್ತದೆ. ಅಲ್ಲಿ ದೇವ-ಶಾಸ್ತ್ರ-ಗುರುಗಳನ್ನು ತಿಳಿದುಕೊಳ್ಳುವ ಜ್ಞಾನದ ಜತೆಯಲ್ಲಿ ರಾಗವು ವರ್ತಿಸುತ್ತದೆ, ಆದುದರಿಂದ ಆ ಜ್ಞಾನವನ್ನು ಕೂಡ ಬಂಧದ ಕಾರಣವೆಂದು ಗಣಿಸಲಾಗಿದೆ. ದೇವ-ಶಾಸ್ತ್ರ-ಗುರುಗಳ ವ್ಯವಹಾರ ಶ್ರದ್ಧೆಯು ಕೂಡ ಜ್ಞಾನದ ಕ್ಷಯೋಪಶಮ ಭಾವವಿದೆ. ನವತತ್ತ್ವಗಳ ಶ್ರದ್ಧೆಯಲ್ಲಿ ಕೂಡ ಕ್ಷಯೋಪಶಮ ಭಾವವಿದೆ ಅದರಂತೆ ಪಂಚಮಹಾವ್ರತಗಳ ವೃತ್ತಿಯು ಶುಭರಾಗವಿದೆ. ಈ ಪ್ರಕಾರವಿರುವ ವ್ಯವಹಾರ ಶ್ರದ್ಧೆ-ಜ್ಞಾನ-ಚಾರಿತ್ರವನ್ನು ಬಂಧದ ಕಾರಣವೆಂದು ಹೇಳಲಾಗಿದೆ. ಇದು ನಿಶ್ಚಯ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಸಹಿತವಿರುವಂಥ ಸಾಧಕದಶೆಯ ಮಾತಿದೆ. ಜ್ಞಾನಿಗಳಿಗೆ ಯಾವ ನಿಶ್ಚಯ ರತ್ನತ್ರಯವಿರುತ್ತದೆ ಅದು ಮೋಕ್ಷದ ಕಾರಣವಿರುತ್ತದೆ ಮತ್ತು ಆಗ ಅಲ್ಲಿ ಯಾವ ವ್ಯವಹಾರ ರತ್ನತ್ರಯವಿರುತ್ತದೆ ಅದು ಬಂಧದ ಕಾರಣವಿದೆ. ಏಕೆಂದರೆ ವ್ಯವಹಾರ ರತ್ನತ್ರಯವು ಪರದ ಆಶ್ರಯದಿಂದ ಇರುತ್ತದೆ. ಪರದ ಕಡೆಗಿರುವ ಶ್ರದ್ಧೆ-ಜ್ಞಾನ-ಚಾರಿತ್ರದಲ್ಲಿ ರಾಗವಿರುತ್ತದೆ. ಸಾಧಕನಿಗೆ ಸ್ವಭಾವದ ಶ್ರದ್ಧೆ-ಜ್ಞಾನ-ಚಾರಿತ್ರವಿದ್ದರೂ ಕೂಡ ಅವನಿಗೆ ಯಾವ ವ್ಯವಹಾರ ರತ್ನತ್ರಯವಿರುತ್ತದೆ ಅದು ಬಂಧದ ಕಾರಣವಿದೆ. ಸಾಧಕನಿಗೆ ಏಕಕಾಲದಲ್ಲಿ ಎರಡೂ ಇರುತ್ತವೆ. ಕ್ಷಯೋಪಶಮವನ್ನು ಬಂಧದ ಕಾರಣವೆಂದು ಕೂಡ ಹೇಳಲಾಗುತ್ತದೆ ಮತ್ತು ಅದನ್ನು ಮೋಕ್ಷದ ಕಾರಣವೆಂದೂ ಕೂಡ ಹೇಳಲಾಗುತ್ತದೆ. ಯಾವ ರೀತಿಯೆಂದರೆ ಜ್ಞಾನದ ಅಂಶವು ಪ್ರಕಟವಿರುತ್ತದೆ ಅದೇನು ಬಂಧದ ಕಾರಣವಿರುವುದಿಲ್ಲ, ಆದರೆ ಪರದ ಕಡೆಗಿರುವ ಕ್ಷಯೋಪಶಮದ ಸಮಯದಲ್ಲಿ ರಾಗವಾದಲ್ಲದೆ ಇರುವ ಸಾಧ್ಯತೆಯಿಲ್ಲ. ಆ ಅಪೇಕ್ಷೆಯಿಂದ ಆ ಜ್ಞಾನವನ್ನು ಬಂಧದ ಕಾರಣದಲ್ಲಿ ಗಣಿಸಲಾಗಿದೆ. ಅದೇ ಕ್ಷಯೋಪಶಮ ಜ್ಞಾನವು ಒಂದುವೇಳೆ ಸ್ವಭಾವದಲ್ಲಿ ಪ್ರವರ್ತಿಸಿದರೆ ಅದುವೇ ಮೋಕ್ಷದ ಕಾರಣ ಕೂಡ ಆಗುತ್ತದೆ. ಆದುದರಿಂದ ರತ್ನತ್ರಯವು ಕಥಂಚಿತ್ ಬಂಧದ ಕಾರಣ ಕೂಡ ಇದೆ ಮತ್ತು ಅದು ಮೋಕ್ಷದ ಕಾರಣ ಕೂಡ ಇದೆಯೆಂದು ಹೇಳಲಾಗಿದೆ.

**ಭಾವಾರ್ಥ :-** ದರ್ಶನ-ಜ್ಞಾನ-ಚಾರಿತ್ರವು ಒಂದು ಸರಾಗ ಮತ್ತು ಇನ್ನೊಂದು ವೀತರಾಗವೆಂದು ಎರಡು ಪ್ರಕಾರದ್ದಿದೆ. ಯಾವ ದರ್ಶನ-ಜ್ಞಾನ-ಚಾರಿತ್ರವು ರಾಗ ಸಹಿತವಿದೆ ಅದನ್ನು ಸರಾಗ ರತ್ನತ್ರಯವೆಂದು ಹೇಳಲಾಗುತ್ತದೆ ಮತ್ತು ಯಾವುದು ಆತ್ಮನಿಷ್ಠವೀತರಾಗತೆಯಿಂದ ಯುಕ್ತವಿದೆ ಅದನ್ನು ವೀತರಾಗ ರತ್ನತ್ರಯವೆಂದು ಹೇಳಲಾಗುತ್ತದೆ.

ಹದಿನೆಂಟು ದೋಷಗಳಿಂದ ರಹಿತರಾದ ಸರ್ವಜ್ಞ ವೀತರಾಗ ಪರಮಾತ್ಮರು ಆಪ್ತರಿದ್ದಾರೆ. ಅಂಥ ದಶೆಯನ್ನು ಸಾಧಿಸುತ್ತಿರುವಂಥ ನಿರ್ಗ್ರಂಥ ಮುನಿರಾಜರು ಗುರುಗಳಿದ್ದಾರೆ. ಆ ಆಪ್ತರ ಅನೇಕಾಂತ ವಾಣಿಯು ಶಾಸ್ತ್ರವಿದೆ ಹಾಗೂ ಅವರು ಹೇಳಿರುವಂಥ ಆರು ದ್ರವ್ಯಗಳು-ನವತತ್ತ್ವಗಳು ನಿಜ ತತ್ತ್ವಗಳಿವೆ. ಇಂಥ ಆಪ್ತ-ಆಗಮ-ತತ್ತ್ವದ ಶ್ರದ್ಧೆಯು

ವ್ಯವಹಾರ ಶ್ರದ್ಧೆಯಿದೆ, ಅದರಲ್ಲಿ ಶುಭರಾಗವಿರುವುದರಿಂದ ಬಂಧದ ಕಾರಣವಿದೆ. ಶುದ್ಧಾತ್ಮನ ನಿರ್ವಿಕಲ್ಪ ಪ್ರತೀತಿಯು ವೀತರಾಗ ಸಮ್ಯಕ್ತ್ವವಿದೆ. ಅದು ಬಂಧದ ಕಾರಣವಿರುವುದಿಲ್ಲ.

ಜ್ಞಾನವು ಅಂತರಸ್ವಭಾವದ ಸನ್ಮುಖವಾಗಿ ಸ್ವಸಂವೇದನ ಮಾಡಿದರೆ ವೀತರಾಗಜ್ಞಾನವಿದೆ. ಬಾಹ್ಯದಲ್ಲಿ ಶಾಸ್ತ್ರಗಳ ಲಕ್ಷ್ಯದಿಂದ ಯಾವ ಜ್ಞಾನವಾಗುತ್ತದೆ ಅದು ಸರಾಗ ಜ್ಞಾನವಿದೆ. ಎಂದರೆ ಆಗ ಅಲ್ಲಿ ಜ್ಞಾನದ ಜತೆಯಲ್ಲಿ ರಾಗವು ಉಳಿದುಕೊಂಡಿರುವುದರಿಂದ ಅದನ್ನು ಬಂಧದ ಕಾರಣವೆಂದು ಹೇಳಲಾಗಿದೆ. ಇಲ್ಲಿ ಯಾವ 'ಸರಾಗಜ್ಞಾನ'ವನ್ನು ಹೇಳಿದೆ ಅದರಲ್ಲಿ ಲೌಕಿಕ ಅಧ್ಯಯನದ ಮಾತು ಇಲ್ಲ. ಅದೇ ಪ್ರಕಾರ ಕುಶಾಸ್ತ್ರಗಳ ಮಾತು ಕೂಡ ಇರುವುದಿಲ್ಲ, ಆದರೆ ವೀತರಾಗ ಸರ್ವಜ್ಞದೇವರು ಹೇಳಿರುವ ಶಾಸ್ತ್ರಗಳ ಕಡೆಗಿರುವ ಪ್ರವೃತ್ತಿಯುಳ್ಳ ಜ್ಞಾನವು ಸರಾಗಜ್ಞಾನವಿದೆ. ತನ್ನ ಚಿದಾನಂದ ಸ್ವಭಾವದ ಸ್ವಸಂವೇದನವಿರುವಂಥ ಜ್ಞಾನವು ವೀತರಾಗ ಜ್ಞಾನವಿದೆ. ಪರದ್ರವ್ಯದ ಅವಲಂಬನವುಳ್ಳ ಜ್ಞಾನವು ರಾಗಸಹಿತವಿದೆ ಮತ್ತು ಸ್ವದ್ರವ್ಯದ ಅವಲಂಬನವುಳ್ಳ ಜ್ಞಾನವು ರಾಗರಹಿತವಿದೆ.

ಚಾರಿತ್ರದಲ್ಲಿ ಕೂಡ ಸರಾಗಚಾರಿತ್ರ ಮತ್ತು ವೀತರಾಗ ಚಾರಿತ್ರವೆಂದು ಎರಡು ಪ್ರಕಾರಗಳಿವೆ. ಇಲ್ಲಿ ಮಿಥ್ಯಾದೃಷ್ಟಿಯ ಚಾರಿತ್ರದ್ದಂತೂ ಮಾತೇ ಇರುವುದಿಲ್ಲ. ಇಲ್ಲಿಯಂತೂ ಯಾರಿಗೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಮೋಕ್ಷಮಾರ್ಗವು ಪ್ರಕಟವಾಗಿದೆ, ಯಾರಿಗೆ ಆರನೆಯ-ಏಳನೆಯ ಗುಣಸ್ಥಾನಗಳಲ್ಲಿ ಅಖಂಡ ಜೀಕುತ್ತಿರುವಂಥ ವೀತರಾಗ ಮುನಿದಶೆಯು ಪ್ರಕಟವಾಗಿದೆ, ಒಂದು ದಿವಸದಲ್ಲಿ ಸಾವಿರಾರು ಬಾರಿ ಏಳನೆಯ ಗುಣಸ್ಥಾನವು ಬಂದುಹೋಗುತ್ತದೆ ಮತ್ತು ಸಿದ್ಧ ಭಗವಂತರಂಥ ಅಮೃತಾನಂದದ ನಿರ್ವಿಕಲ್ಪ ಅನುಭವ ಮಾಡುತ್ತಾರೆ ಅಂಥ ಅವಸ್ಥೆಯಲ್ಲಿ ರಾಗವು ತುಂಡಾಗಿ, ಸ್ವರೂಪದಲ್ಲಿ ಅದೆಷ್ಟು ಲೀನತೆಯು ಪ್ರಕಟವಾಗುತ್ತದೆ ಅಷ್ಟಂತೂ ವೀತರಾಗ ಚಾರಿತ್ರವಿದೆ. ಅದು ಬಂಧದ ಕಾರಣವಿರುವುದಿಲ್ಲ, ಆದರೆ ಅದು ಮೋಕ್ಷದ ಕಾರಣವಿರುತ್ತದೆ. ಆಗ ಅಲ್ಲಿ ಆರನೆಯ ಗುಣಸ್ಥಾನದಲ್ಲಿ ಪಂಚಮಹಾವ್ರತ, ಇಪ್ಪತ್ತೆಂಟು ಮೂಲಗುಣ ಮೊದಲಾದವುಗಳ ಯಾವ ಶುಭ ಪ್ರವೃತ್ತಿಯು ಉತ್ಪನ್ನವಾಗುತ್ತದೆ ಅದರಲ್ಲಿ ಶುಭರಾಗವಿರುತ್ತದೆ, ಅದರ ಹೆಸರು ಸರಾಗಚಾರಿತ್ರವಿದೆ. ಆ ವ್ಯವಹಾರಚಾರಿತ್ರವು ಬಂಧದ ಕಾರಣವಿರುತ್ತದೆ.

ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ರಾಗಸಹಿತವಿರುತ್ತದೆ ಅದಂತೂ ಸರಾಗ ರತ್ನತ್ರಯವಿದೆ. ಇದರ ಕಡೆಗೆ ಲಕ್ಷ್ಯವಿರಿಸುವುದು ಅಥವಾ ಬಿಡುವುದು ಜ್ಞಾನದ ಮಾತಿದೆ. ಯಾರು ಮೋಕ್ಷಮಾರ್ಗದಲ್ಲಿ ಗಮನ ಮಾಡುತ್ತಿದ್ದಾರೆ ಅವರ ಮಾತು ಇದೆ. ಯಾರಿಗೆ ಇನ್ನೂ ಮೋಕ್ಷಮಾರ್ಗವೇ ಪ್ರಕಟವಾಗಿರುವುದಿಲ್ಲ ಅವರ ಮಾತು ಇಲ್ಲ. ಆತ್ಮನ ಸ್ವಭಾವದಲ್ಲಿ ಏಕಾಗ್ರತೆಯ ರೂಪದ ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತವಿದೆ ಅದು ವೀತರಾಗ ರತ್ನತ್ರಯವಿದೆ. ಆತ್ಮನ ಮೇಲೆ ಪ್ರೀತಿಯುಳ್ಳವನಾಗಿ ಅವನಲ್ಲಿಯೇ ಯಾವನು ಮಗ್ನನಾಗಿ ಹೋಗಿದ್ದಾನೆ ಮತ್ತು ಸಿದ್ಧಭಗವಂತರಂಥ ಪರಮ ಆನಂದದ ಅನುಭವದಲ್ಲಿ ಎಷ್ಟು ಸ್ಥಿರಗೊಂಡಿದ್ದಾನೆ-ಅವನು ಆತ್ಮನಿಷ್ಠನಿದ್ದಾನೆ. ಅವನ ರತ್ನತ್ರಯವು ವೀತರಾಗ ರತ್ನತ್ರಯವಿದೆ, ಅದಂತೂ ಮೋಕ್ಷದ್ದೇ ಕಾರಣವಿದೆ.

ವ್ಯವಹಾರ ರತ್ನತ್ರಯದಲ್ಲಿ ಯಾವ ರಾಗಭಾವವಿದೆ ಅದೇನು ಆತ್ಮಭಾವವಿರುವುದಿಲ್ಲ, ಆದರೆ ಅದು ಆತ್ಮಸ್ವಭಾವದಿಂದ ರಹಿತವಾಗಿ ಅನಾತ್ಮಸ್ವರೂಪವಿದೆ, ಪರಸಮಯವಿದೆ. ಆದುದರಿಂದ ಅದು ಬಂಧದ ಕಾರಣವಿರುವುದು. ಸತ್ಯವಚನಗಳನ್ನು ಆಡುವುದು, ಬ್ರಹ್ಮಚರ್ಯ ಪಾಲನೆ ಮಾಡುವುದು, ಪರಜೀವಿಗಳ ರಕ್ಷಣೆ ಮಾಡುವುದು, ಶಾಸ್ತ್ರಾಭ್ಯಾಸ ಮಾಡುವುದು ಇವೆಲ್ಲವೂ ಪರದ್ರವ್ಯದ ಕುರಿತಾಗಿರುವಂಥ ರಾಗಭಾವವಿದೆ, ಅದು ಪರಸಮಯವಿದೆ, ಅದೇನು ಆತ್ಮಭಾವವಿರುವುದಿಲ್ಲ, ಅದಂತೂ ಬಂಧದ ಕಾರಣವಿದೆ.

ಕ್ಷಯೋಪಶಮ ಭಾವವನ್ನು ಅದೆಷ್ಟೋ ಬಾರಿ ಬಂಧದ ಕಾರಣವೆಂದು ಹೇಳಲಾಗಿದೆ. ಏಕೆಂದರೆ ಪರದ ಕಡೆಗಿರುವ ಪ್ರವೃತ್ತಿಯುಳ್ಳ ಜ್ಞಾನವು ರಾಗಸಹಿತವಿರುತ್ತದೆ. ಆದುದರಿಂದ ಅದನ್ನು ಬಂಧದ ಕಾರಣವೆಂದು ಹೇಳಲಾಗುತ್ತದೆ ಮತ್ತು ತನ್ನ ಸ್ವಭಾವದ ಕಡೆಗೆ ಪ್ರವೃತ್ತವಾಗಿರುವಂಥ ಕ್ಷಯೋಪಶಮಜ್ಞಾನವು ಮೋಕ್ಷದ ಕಾರಣವಿರುತ್ತದೆ. ಕ್ಷಾಯಿಕಭಾವವಂತೂ ಮೋಕ್ಷದ ಕಾರಣವೇ ಆಗಿರುತ್ತದೆ. ಆದಾಗ್ಯೂ ಆ ಕ್ಷಾಯಿಕ ಭಾವದ ಆಶ್ರಯ ಮಾಡಹೋದರೆ ಅದರಿಂದ ವಿಕಲ್ಪವಾಗುತ್ತದೆ, ಅದು ಬಂಧದ ಕಾರಣವಿದೆ.

ಶುದ್ಧ ರತ್ನತ್ರಯವು ಮೋಕ್ಷದ ಕಾರಣವಿರುತ್ತದೆ, ಆದರೆ ಅದರ ಜತೆಯಲ್ಲಿ ಒಂದುವೇಳೆ ರಾಗವಿದ್ದರೆ ಆಗ ಬಂಧವಾಗುವುದು. ಆದುದರಿಂದಲೇ ರಾಗದ ಜತೆಯಲ್ಲಿರುವ ರತ್ನತ್ರಯವನ್ನು ಬಂಧದ ಕಾರಣವೆಂದು ಹೇಳುವ ರೂಢಿಯಿರುವುದು. ಶುದ್ಧರತ್ನತ್ರಯವಂತೂ ಮೋಕ್ಷಮಾರ್ಗವೇ ಇರುವುದು, ಆದರೆ ಜತೆಯಲ್ಲಿನ ರಾಗವು ಬಂಧದ ಕಾರಣವಿದೆಯೆಂಬುದನ್ನು ತಿಳಿಸಿಕೊಡುವ ಸಲುವಾಗಿ ಅದನ್ನು ಉಪಚಾರದಿಂದ ಬಂಧದ ಕಾರಣವೆಂದು ಕೂಡ ಹೇಳಲಾಗಿದೆ. ವ್ಯವಹಾರ ರತ್ನತ್ರಯವು ಆತ್ಮನ ಸ್ವಭಾವದ ಆಶ್ರಯದಿಂದ ಇರುವುದಿಲ್ಲ, ಆದರೆ ಅದು ಪರದ ಆಶ್ರಯದಿಂದ ಇರುತ್ತದೆ. ಪರಾಶ್ರಿತ ಭಾವವು ಬಂಧದ ಕಾರಣವಿದೆ ಮತ್ತು ಸ್ವಾಶ್ರಿತ ಭಾವವು ಎಂದೂ ಬಂಧದ ಕಾರಣವಿರುವುದಿಲ್ಲ. ಮೋಕ್ಷಮಾರ್ಗವು ಎಂದೂ ಬಂಧದ ಕಾರಣವಿರುವುದಿಲ್ಲ, ಆದರೆ ಮೋಕ್ಷಮಾರ್ಗದ ಜತೆಯಲ್ಲಿರುವ ವ್ಯವಹಾರ ರತ್ನತ್ರಯದ ರಾಗವು ಬಂಧದ ಕಾರಣವಿದೆಯೆಂದು ತಿಳಿಯುವುದು.

ಸರ್ವಜ್ಞ ಭಗವಂತರು ಹೇಳಿರುವ ದೇವ-ಶಾಸ್ತ್ರ-ಗುರು, ನವತತ್ತ್ವಗಳು, ಪಂಚಮಹಾವ್ರತಗಳು ಅದರಂತೆ ಇಪ್ಪತ್ತೆಂಟು ಮೂಲಗುಣಗಳು ಇವೆಲ್ಲವುಗಳ ಆಶ್ರಯದಿಂದ ರಾಗದ ಉತ್ಪತ್ತಿಯಾಗುತ್ತದೆ, ಅದನ್ನು ವ್ಯವಹಾರ ಮೋಕ್ಷಮಾರ್ಗವೆಂದು ಹೇಳುವ ರೂಢಿಯಿರುವುದು ಮತ್ತು ಅದು ಬಂಧದ ಕಾರಣವೇ ಇರುವುದು. ಶುದ್ಧ ರತ್ನತ್ರಯದ ಜತೆಯಲ್ಲಿ ವರ್ತಿಸುತ್ತಿರುವಂಥ ರಾಗವು ಬಂಧದ ಕಾರಣವಿರುವುದು, ಆದರೆ ಸ್ವಯಂ ರತ್ನತ್ರಯವು ಬಂಧದ ಕಾರಣವಿರುವುದಿಲ್ಲ. ಆದರೆ ರಾಗದ ಸಂಯೋಗದಿಂದ ಆ ರತ್ನತ್ರಯವನ್ನು ಕೂಡ ಬಂಧದ ಕಾರಣವೆಂದು ಹೇಳಲಾಗುತ್ತದೆ, ಅದರ ಕುರಿತು ದೃಷ್ಟಾಂತ ಕೊಡುತ್ತಾರೆ. ಯಾವ ಪ್ರಕಾರ ನವೀನವಾದ ಹಾಗೂ ಶುದ್ಧವಿರುವಂಥ ತುಪ್ಪದ ಸ್ವಭಾವವಂತೂ ಶೀತಲವೇ ಇರುತ್ತದೆ. ಅದರಿಂದೇನು ದಾಹವಾಗುವುದಿಲ್ಲ, ಆದರೆ ಅಗ್ನಿಯ ಸಂಯೋಗವಾಗುತ್ತಿರುವಂತೆ ಆ ತುಪ್ಪವನ್ನು ಕೂಡ ದಾಹವನ್ನುಂಟು ಮಾಡುವುದೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಚೈತನ್ಯಸ್ವಭಾವದ ಆಶ್ರಯದಿಂದ ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ವೀತರಾಗ ಮೋಕ್ಷಮಾರ್ಗವಿದೆ ಅದಂತೂ ಆತ್ಮನಿಗೆ ಪರಮ ಶಾಂತ ಶೀತಲ ಆನಂದದ ಅನುಭವವನ್ನೇ ಉಂಟುಮಾಡುವಂಥದ್ದಿದೆ, ಅದೇನು ಬಂಧದ ಕಾರಣವಿರುವುದಿಲ್ಲ, ಆದರೆ ಪರದ್ರವ್ಯದ ಅವಲಂಬನದಿಂದ ಯಾವ ವ್ಯವಹಾರ ಶ್ರದ್ಧೆ-ಜ್ಞಾನ-ಚಾರಿತ್ರರೂಪದ ಉತ್ಪತ್ತಿಯಾಗುತ್ತದೆ, ಆ ರಾಗದಲ್ಲಿ ಶ್ರದ್ಧೆ-ಜ್ಞಾನ-ಚಾರಿತ್ರಗಳು ಸಿಕ್ಕಿ ಬೀಳುವುದರಿಂದ ಅದನ್ನು ಬಂಧದ ಕಾರಣವೆಂದು ಹೇಳಲಾಗುತ್ತದೆ. ಆತ್ಮನ ಆಶ್ರಯದಿಂದ ಯಾವ ರತ್ನತ್ರಯರೂಪದ ಮೋಕ್ಷಮಾರ್ಗವಿದೆ ಅದರಲ್ಲಂತೂ ಇಂದ್ರಿಯ ಹಾಗೂ ಮನಸ್ಸಿನದು ಕೂಡ ಸಂಗತಿ-ಸಂಯೋಗವಿರುವುದಿಲ್ಲ, ಅದರಲ್ಲಿಯಂತೂ ಒಂದು ಅನಾಕುಲ ಶಾಂತಿಯದೇ ಅನುಭವವಿರುತ್ತದೆ. ಆದರೆ ಬಾಹ್ಯದಲ್ಲಿ ಪ್ರವೃತ್ತಿಯಾಗುತ್ತಿರುವಂತೆ ರಾಗದ ಉತ್ಪತ್ತಿಯಾಗುತ್ತದೆ (ಆ ರಾಗವು) ಬಂಧದ ಕಾರಣವಿರುತ್ತದೆ.

ಯಾವ ಪ್ರಕಾರ ಉಷ್ಣತೆಯಂತೂ ಅಗ್ನಿಯದಿರುತ್ತದೆ, ತುಪ್ಪದಲ್ಲೇನು ಉಷ್ಣತೆಯು ಇರುವುದಿಲ್ಲ, ಆದರೆ ಅಗ್ನಿಯ ಸಂಯೋಗದಿಂದ ತುಪ್ಪವನ್ನು ಕೂಡ ಉಷ್ಣತೆಯ ಕಾರಣವೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಚಿದಾನಂದ ಆತ್ಮನದು ಕೂಡ ಶಾಂತ-ಶೀತಲ ಮೋಕ್ಷಸ್ವಭಾವವಿದೆ. ಇಂಥ ಸ್ವಭಾವದಲ್ಲಿ ಜೀಕುತ್ತಿರುವಂಥ ವೀತರಾಗೀ ಸಂತ ಮುನಿರಾಜರುಗಳಿಗೆ ಯಾವ ನಿಶ್ಚಯರತ್ನತ್ರಯವಿರುತ್ತದೆ ಅದಂತೂ ಒಂದು ಮೋಕ್ಷದ ಕಾರಣವೇ ಇದೆ, ಆದರೆ

ಅವರಿಗೆ ಪರದ್ರವ್ಯದ ಕಡೆಗೆ ಲಕ್ಷ್ಯವು ಹೋಗುತ್ತಿರುವಂತೆಯೇ ವ್ಯವಹಾರ ರತ್ನತ್ರಯರೂಪ ರಾಗದ ಉತ್ಪತ್ತಿಯಾಗುತ್ತದೆ. ಆ ರಾಗದ ಸಂಯೋಗದ ಕಾರಣದಿಂದ ರತ್ನತ್ರಯವನ್ನು ಕೂಡ ಬಂಧದ ಕಾರಣವೆಂದು ಹೇಳಲಾಗುತ್ತದೆ. ನೋಡಿರಿ! ಆತ್ಮನ ವೀತರಾಗ ಮೋಕ್ಷಮಾರ್ಗವಂತೂ ಪರಮಶಾಂತ ಶೀತಲ ತುಪ್ಪದ ಸಮಾನವಿದೆ ಮತ್ತು ವ್ಯವಹಾರ ಮೋಕ್ಷಮಾರ್ಗವು ಅಗ್ನಿಯ ಸಮಾನವಿದೆ-ಆಕುಲತೆಯನ್ನು ಉತ್ಪನ್ನ ಮಾಡಿಸುವಂಥದ್ದಿದೆ. ಎಂದರೆ ವ್ಯವಹಾರ ಮೋಕ್ಷಮಾರ್ಗವು ನಿಜವಾದ ಮೋಕ್ಷಮಾರ್ಗವಿರುವುದಿಲ್ಲ, ಆದರೆ ಅದು ಬಂಧದ ಮಾರ್ಗವಿದೆ. ಮೋಕ್ಷಮಾರ್ಗವಂತೂ ಒಂದೇ ಇರುವುದು. ನಿಶ್ಚಯ ರತ್ನತ್ರಯವೇ ನಿಜವಾದ ಮೋಕ್ಷಮಾರ್ಗವಿದೆ.

ಮುನಿರಾಜರಿಗೆ ಪಂಚಮಹಾವ್ರತಗಳ ಪ್ರವೃತ್ತಿಯು ಏಕಕಾಲದಲ್ಲಿ ಇರುವುದಿಲ್ಲ. ಒಂದು ಕ್ಷಣದಲ್ಲಿ ಅಹಿಂಸೆಯ ವಿಕಲ್ಪವಿದ್ದರೆ, ಇನ್ನೊಂದು ಕ್ಷಣದಲ್ಲಿ ಸತ್ಯದ ವಿಕಲ್ಪವಿರುತ್ತದೆ. ಹೀಗೆ ವ್ಯವಹಾರರತ್ನತ್ರಯದಲ್ಲಿ ಏಕಪ್ರಕಾರದ ರಾಗವು ಉಳಿಯುವುದಿಲ್ಲ, ಆದರೆ ಅದು ಪ್ರತಿಯೊಂದು ಕ್ಷಣದಲ್ಲಿ ಬದಲಾಗುತ್ತಿರುತ್ತದೆ. ಅದರಂತೆ ಜ್ಞಾನವು ಕೂಡ ಕ್ಷಣ-ಕ್ಷಣದಲ್ಲಿ ಬದಲಾಗುತ್ತಿರುತ್ತದೆ. ಎಂದರೆ ಅದರಲ್ಲಿ ಅನೇಕ ರೂಪತೆಯಿದೆ. ಸ್ವಭಾವದ ಅವಲಂಬನದಲ್ಲಿ ಏಕರೂಪತೆಯು ಉಳಿಯುತ್ತದೆ. ಮುನಿರಾಜರಿಗೆ ಪಂಚಮಹಾವ್ರತಗಳ ವಿಕಲ್ಪಗಳು ಏಕಕಾಲದಲ್ಲಿ ಇರುವುದಿಲ್ಲ, ಆದರೆ ಯಾವಾಗ ವಿಕಲ್ಪಗಳು ಬರುತ್ತವೆ ಆಗ ಪಂಚ ಮಹಾವ್ರತಗಳಿಂದ ಅಥವಾ ಇಪ್ಪತ್ತೆಂಟು ಮೂಲಗುಣಗಳಿಂದ ವಿಪರೀತವಾದ-ವಿರುದ್ಧವಾದ ವಿಕಲ್ಪಗಳು ಬರುವುದಿಲ್ಲ. ಈ ಅಪೇಕ್ಷೆಯಿಂದಲೇ ಮುನಿರಾಜರುಗಳನ್ನು ಇಪ್ಪತ್ತೆಂಟು ಮೂಲಗುಣಗಳನ್ನು ಪಾಲಿಸುವಂಥವರು ಮತ್ತು ಪಂಚಮಹಾವ್ರತಗಳ ಧಾರಕರೆಂದು ಹೇಳಲಾಗುತ್ತದೆ. ವ್ಯವಹಾರದಲ್ಲಿ ಏಕರೂಪತೆಯು ಉಳಿಯುವುದಿಲ್ಲ ಮತ್ತು ನಿಶ್ಚಯದಲ್ಲಿಯಂತೂ ಏಕರೂಪ ಚಿದಾನಂದ ಸ್ವಭಾವದ ಅವಲಂಬನವೇ ಇರುವುದರಿಂದ ಅಲ್ಲಿ ಏಕರೂಪತೆಯು ಉಳಿಯುತ್ತದೆ. ಚೈತನ್ಯಸ್ವಭಾವದ ಅವಲಂಬನದಲ್ಲಿಯಂತೂ ರಾಗದ ಉತ್ಪತ್ತಿಯು ಇರುವುದಿಲ್ಲ, ಆದರೆ ಬಾಹ್ಯದ ಅವಲಂಬನದಲ್ಲಿ ರಾಗದ ಉತ್ಪತ್ತಿಯಾಗುತ್ತದೆ. ಸಮಸ್ತ ಪರಸಮಯದಿಂದ ನಿವೃತ್ತವಾಗಿ, ಒಂದು ಚಿದಾನಂದ ಸ್ವಭಾವದಲ್ಲಿಯೇ-ಸ್ವರೂಪದಲ್ಲಿಯೇ ಪ್ರವೃತ್ತಿಯಾಗುತ್ತದೆ. ಆ ಶುದ್ಧ ರತ್ನತ್ರಯವೇನು ಬಂಧದ ಕಾರಣವಿರುವುದಿಲ್ಲ. ಇದು ನಿವೃತ್ತಿ ಮತ್ತು ಪ್ರವೃತ್ತಿಯ ಮಾತು ಇದೆ. ಚಿದಾನಂದ ಸ್ವರೂಪದಲ್ಲಿ ಪ್ರವೃತ್ತಿ ಮತ್ತು ರಾಗದಿಂದ ನಿವೃತ್ತಿಯು ಅದು ಮೋಕ್ಷದ ಕಾರಣವಿದೆ. ಅಂತರ್ಯದ ಸ್ವಭಾವದ ಸನ್ಮುಖತೆಯಿಂದ ಯಾವ ಶುದ್ಧೋಪಯೋಗವಾಗುತ್ತದೆ ಅದಂತೂ ಅಗ್ನಿಯ ಸಂಯೋಗದಿಂದ ರಹಿತವಾದ ತುಪ್ಪದ ತೆರದಲ್ಲಿ ಪ್ರತ್ಯಕ್ಷ ಮೋಕ್ಷದಶೆಯ ಕಾರಣವಾಗುತ್ತದೆ.

ಆತ್ಮನು ರಾಗದಿಂದ ರಹಿತನಾಗಿ, ಚಿದಾನಂದ ನಿಧಾನದಲ್ಲಿ ಪ್ರವೃತ್ತಿ ಮಾಡಿ, ತನ್ನ ಸ್ವಭಾವ ಭಾವದ ಆಚರಣೆ ಮಾಡುವುದೇ ಪ್ರತ್ಯಕ್ಷ ಮೋಕ್ಷದ ಕಾರಣವಿದೆ. ವ್ಯವಹಾರ ರತ್ನತ್ರಯದ ಭಾವವು ಸ್ವಯಂ ವಿರುದ್ಧವಾದ ಆಚರಣೆಯಿದೆ. ಯಾವ ಶ್ರದ್ಧೆ-ಜ್ಞಾನ-ಚಾರಿತ್ರದಲ್ಲಿ 'ಸ್ವ'ದ (ತನ್ನ) ವಿಷಯವಿರುತ್ತದೆ, ಅದು ವೀತರಾಗ ಶ್ರದ್ಧೆ-ಜ್ಞಾನ-ಚಾರಿತ್ರವಿದೆ ಮತ್ತು ಯಾವ ಶ್ರದ್ಧೆ-ಜ್ಞಾನ-ಚಾರಿತ್ರದಲ್ಲಿ 'ಪರ'ದ ವಿಷಯವಿರುತ್ತದೆ ಅದು ಸರಾಗವಿದೆ. ತನ್ನ ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡು ಅದರಲ್ಲಿಯೇ ಲೀನತೆಯ ರೂಪದ ಆಚರಣೆ ಮಾಡಿದರೆ ಅದು ಮೋಕ್ಷಮಾರ್ಗವಿದೆ. ಮೋಕ್ಷಮಾರ್ಗದಲ್ಲಿ ಗಮನ ಮಾಡುವಂಥ ಮುನಿರಾಜರಿಗೆ ಕೂಡ ಯಾರ ಆಜ್ಞೆಯಲ್ಲಿದ್ದುಕೊಂಡು ಪಂಚಮಹಾವ್ರತ ಮೊದಲಾದವುಗಳ ಯಾವ ಭಾವಗಳು ಬರುತ್ತವೆ ಅವುಕೂಡ ಪರದ ಕಡೆಗೆ ಪ್ರವೃತ್ತಿಯುಳ್ಳ ಭಾವಗಳಿರುವುದರಿಂದ ಅವು ಬಂಧದ ಕಾರಣವಿವೆ.

ಅದಕ್ಕಾಗಿಯೇ ಶ್ರೀಮದಜ್ಜೀಯವರು ಹೀಗೆ ಹೇಳುತ್ತಾರೆ -

**ಸಂಯಮನಾ ಹೇತುಥಿ ಯೋಗಪ್ರವರ್ತನಾ,**
**ಸ್ವರೂಪಲಕ್ಷೇ ಜಿನಆಜ್ಞಾ ಆಧೀನ ಜೋ ;**
**ತೇ ಪಣ ಕ್ಷಣ ಕ್ಷಣ ಘಟತೀ ಜಾತೀ ಸ್ಥಿತಿಮಾ,**
**ಅಂತೇ ಥಾಯೇ ನಿಜಸ್ವರೂಪಯಾ ಲೀನ ಜೋ.**

ಮುನಿರಾಜರಿಗೆ ಜಿನಾಜ್ಞೆಯ ಕಡೆಗಿರುವ ಪ್ರವೃತ್ತಿಯ ಭಾವವು ಕೂಡ ಶುಭರಾಗವಿದೆಯೆಂದು ಇಲ್ಲಿ ಹೇಳಿದ್ದಾರೆ. ಆ ಪರದ ಕಡೆಗಿರುವ ಪ್ರವೃತ್ತಿಯು ಕ್ಷಣ-ಕ್ಷಣಕ್ಕೆ ಮುರಿದುಹೋಗುತ್ತದೆ ಮತ್ತು ಸ್ವಭಾವದ ಅವಲಂಬನವು ಕ್ಷಣ-ಕ್ಷಣಕ್ಕೆ ವೃದ್ಧಿಸುತ್ತಾ ಹೋಗುತ್ತದೆ ಮತ್ತು ಕೊನೆಗೆ ಸ್ವಭಾವದಲ್ಲಿ ಪೂರ್ಣ ಲೀನತೆಯಾಗುತ್ತಿರುವಂತೆ ಪರದ ಕಡೆಯ ಪ್ರವೃತ್ತಿಯು ಬಿಟ್ಟುಹೋಗುತ್ತದೆ. ಆಗ ರಾಗವು ಉಳಿಯುವುದಿಲ್ಲ ಎಂದರೆ ಕೇವಲಜ್ಞಾನ ಹಾಗೂ ಮೋಕ್ಷದಶೆಯು ಪ್ರಕಟವಾಗುತ್ತದೆ. ಈ ರೀತಿಯಿಂದ ರಾಗರಹಿತ ನಿಶ್ಚಯ ಶ್ರದ್ಧೆ-ಜ್ಞಾನ-ಚಾರಿತ್ರವೇ ನಿಜವಾದ ಮೋಕ್ಷಮಾರ್ಗವಿದೆಯೆಂದು ತಿಳಿಯುವುದು.

ಈಗ ಗಾಥೆಯ ಮೂಲಕ ಸೂಕ್ಷ್ಮ ಪರಸಮಯದ ಸ್ವರೂಪ ಹೇಳುತ್ತಾರೆ -

**ಅಣ್ಣಾಣಾದೋ ಣಾಣೀ ಜದಿ ಮಣ್ಣದಿ ಸುದ್ಧಸಂಪಓಗಾದೋ ।**
**ಹವದಿ ತ್ತಿ ದುಕ್ಖಮೋಕ್ಖಂ ಪರಸಮಯರದೋ ಹವದಿ ಜೀವೋ ॥೧೬೫॥**

**ಜಿನವರ ಪ್ರಭುವಿನ ಭಕ್ತಿಯಿಂ ದುಃಖಮುಕ್ತಿಯಪ್ಪುದೆಂದು ಅಜ್ಞಾನದಿಂದ ।**
**ಜ್ಞಾನಿಯೂ ಮನ್ನಿಸಿದರೆ ಅವನು ಪರಸಮಯರತ ಜೀವನಿಹನು ॥೧೬೫॥**

ಆತ್ಮನ ಯಾವ ಜ್ಞಾನ-ದರ್ಶನ ಸ್ವಭಾವವಿದೆ ಅದು ರಾಗದಿಂದ ರಹಿತವಿದೆ. ಯಾವ ರಾಗವಾಗುತ್ತದೆ ಅದು ಬೇಕಾದರೆ ಭಗವಂತರ ಭಕ್ತಿಯ ಕುರಿತಾಗಿದ್ದರೂ ಬಂಧದ ಕಾರಣವೇ ಇದೆ. ಶಾಸ್ತ್ರಗಳ ಅಧ್ಯಯನ ಮಾಡಿದವನಾಗಿದ್ದರೂ ಕೂಡ ಯಾರು ಆ ಸೂಕ್ಷ್ಮ ರಾಗವನ್ನು ಕೂಡ ಮೋಕ್ಷದ ಕಾರಣವೆಂದು ಮನ್ನಿಸುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ. ಜ್ಞಾನಸ್ವಭಾವದ ಆತ್ಮನಲ್ಲಿ ಏಕಾಗ್ರತೆ ಮಾಡುವುದನ್ನು ಬಿಟ್ಟು ರಾಗದಲ್ಲಿ ಲೀನರಾಗುತ್ತಾರೆ ಮತ್ತು ಆ ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸುತ್ತಿದ್ದರೆ ಆ ಜೀವರುಗಳು ಮಿಥ್ಯಾದೃಷ್ಟಿಯಾಗಿ ಹೋಗುತ್ತಾರೆ. ಅರಹಂತ ದೇವರ ಭಕ್ತಿಯ ಶುಭರಾಗವು ಕೂಡ ಮೋಕ್ಷದ ಕಾರಣವಿರುವುದಿಲ್ಲ. ಯಾವ ಭಾವದಿಂದ ತೀರ್ಥಂಕರ ನಾಮಕರ್ಮದ ಬಂಧವಾಗುತ್ತದೆ ಅದು ಕೂಡ ರಾಗಭಾವವಿದ್ದು, ಅದು ಆದರಣೀಯವಿಲ್ಲ. ಆದರೆ ತೀರ್ಥಂಕರರ ಯಾವ ಕೇವಲಜ್ಞಾನವಿದೆ ಅದಂತೂ ಆತ್ಮನ ಸ್ವಭಾವವಿದೆ.

ಭಗವಾನ ಕುಂದಕುಂದಾಚಾರ್ಯದೇವರು ಮೋಕ್ಷಮಾರ್ಗದ ವರ್ಣನೆ ಮಾಡಿದ್ದಾರೆ. ಅದರಲ್ಲಿ ಮೊದಲು ಹೇಳಿರುವುದೇನಂದರೆ-ಆತ್ಮನ ಸ್ವಭಾವವು ಜ್ಞಾನ-ದರ್ಶನವಿದೆ, ಅವನು ದೇಹಾದಿ ಕ್ರಿಯೆಗಳ ಕರ್ತೃ-ಹರ್ತೃವಿಲ್ಲ, ಆದರೆ ಜ್ಞಾತಾ-ದೃಷ್ಟಾ ಇದ್ದಾನೆ. ಇಂಥ ಜ್ಞಾನ-ದರ್ಶನ ಸ್ವಭಾವದಲ್ಲಿ ಅಂತರ್ದೃಷ್ಟಿಯಿಂದ ಪರಿಣಮನ ಮಾಡುವುದರಿಂದ ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪ್ರಕಟತೆಯಾಗುವುದು ಅದುವೇ ಮೋಕ್ಷದ ಕಾರಣವಿದೆ. ಇದನ್ನು ಬಿಟ್ಟು ದೇವ-ಶಾಸ್ತ್ರ-ಗುರುಗಳ ಭಕ್ತಿಯ ಭಾವವು ಬಂಧದ ಕಾರಣವಿದೆ. ಮೋಕ್ಷದ ಶುದ್ಧ ಉಪಾದಾನವಂತೂ ಆತ್ಮನ ಚೈತನ್ಯ ಸ್ವಭಾವವಿದೆ. ಅರಹಂತದೇವ ಮೊದಲಾದವರಂತೂ ಮೋಕ್ಷದ ನಿಮಿತ್ತರಿದ್ದಾರೆ. ಆ ನಿಮಿತ್ತದ ಕಡೆಗಿರುವ ಪ್ರವೃತ್ತಿಯ ಯಾವ ರಾಗಭಾವವಿದೆ ಅದು ಜ್ಞಾನಸ್ವಭಾವವಿಲ್ಲದಿರುವುದರಿಂದ ಅಜ್ಞಾನ ಭಾವವಿದೆ, ಭೇದದ ಕಾರಣವಿದೆ. ದ್ರವ್ಯಸ್ವಭಾವದ ಆಶ್ರಯದಿಂದ ಉಂಟಾಗುವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪರ್ಯಾಯವು ಮೋಕ್ಷದ

ಕಾರಣವಿದೆಯೆಂದು ಶ್ರೀ ಸರ್ವಜ್ಞ ತೀರ್ಥಂಕರ ಭಗವಂತರ ದಿವ್ಯಧ್ವನಿಯಲ್ಲಿ ಅನಾದಿಯಿಂದ ಬರುತ್ತಲಿದೆ. ಇಂದು ವರ್ತಮಾನದಲ್ಲಿ ಮಹಾ ವಿದೇಹಕ್ಷೇತ್ರದೊಳಗೆ ಸೀಮಂಧರಾದಿ ತೀರ್ಥಂಕರ ದೇವರು ವಿರಾಜಿಸುತ್ತಿದ್ದಾರೆ. ಭೂತಕಾಲದಲ್ಲಿ ಅನಂತ ತೀರ್ಥಂಕರ ದೇವರುಗಳು ಆಗಿಹೋಗಿದ್ದಾರೆ ಮತ್ತು ಭವಿಷ್ಯದಲ್ಲಿ ಅನಂತ ತೀರ್ಥಂಕರರುಗಳು ಆಗುವವರಿದ್ದಾರೆ. ಆ ಸಮಸ್ತ ತೀರ್ಥಂಕರ ದೇವರುಗಳ ದಿವ್ಯಧ್ವನಿಯಲ್ಲಿ ಆತ್ಮನ ಸ್ವಭಾವದ ಅವಲಂಬನದಿಂದ ಯಾವ ವೀತರಾಗ ರತ್ನತ್ರಯವಿದೆ ಅದುವೇ ಮೋಕ್ಷದ ಕಾರಣವಿದೆ ಮತ್ತು ಪಂಚ ಪರಮೇಷ್ಠಿ ಮೊದಲಾದವರ ಕುರಿತಾಗಿರುವ ಯಾವ ಶುಭರಾಗವಿದೆ ಅದು ಬಂಧದ ಕಾರಣವಿದೆಯೆಂದು ಬಂದಿದೆ,ಬರುತ್ತಲಿದೆ ಮತ್ತು ಬರುವುದಿದೆ. ಆದಾಗ್ಯೂ ಯಾರು ಆ ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸುತ್ತಾರೆ ಅವರಂತೂ ಮಿಥ್ಯಾದೃಷ್ಟಿಯಿದ್ದಾರೆ. ರಾಗವು ಜ್ಞಾನಸ್ವಭಾವವಿಲ್ಲದಿರುವುದರಿಂದ ಅದು ಅಜ್ಞಾನ ಭಾವವಿದೆ. ಆ ಅಜ್ಞಾನಭಾವವು ಮೋಕ್ಷದ ಕಾರಣ ಹೇಗಾಗುವ ಸಾಧ್ಯತೆಯಿದೆ ? ಜ್ಞಾನಸ್ವಭಾವದಲ್ಲಿ ರಾಗವಂತೂ ಉಪಾಧಿಯಿದೆ. ಸಮ್ಯಗ್ದೃಷ್ಟಿ ಜೀವನು ಆ ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸುವುದಿಲ್ಲ. ಶಾಸ್ತ್ರಗಳ ಜ್ಞಾನವುಳ್ಳವನು ಕೂಡ ಒಂದುವೇಳೆ ಆ ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸಿದರೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ದಿವ್ಯಧ್ವನಿಯಲ್ಲಿಯಂತೂ ರಾಗವು ಬಂಧದ ಕಾರಣವಿದೆಯೆಂದು ಹೇಳಲಾಗಿದೆ. ಆದಾಗ್ಯೂ ಯಾವ ಜೀವನು ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸುತ್ತಾನೆ ಅವನು ಅಜ್ಞಾನಿಯಿದ್ದಾನೆ. ಚಿದಾನಂದ ದ್ರವ್ಯ ಸ್ವಭಾವದ ಆಶ್ರಯವನ್ನು ಬಿಟ್ಟುಕೊಟ್ಟು ರಾಗದ ಆಶ್ರಯದಿಂದ ಕಲ್ಯಾಣವಾಗುತ್ತದೆಯೆಂದು ಮನ್ನಿಸಿದರೆ ನವಪೂರ್ವಗಳ ಅಧ್ಯಯನವುಳ್ಳವನು ಕೂಡ ಮಿಥ್ಯಾದೃಷ್ಟಿಯಿದ್ದಾನೆ. ಚಾರಿತ್ರವು ವೀತರಾಗಭಾವವಿದೆ ಮತ್ತು ಚಾರಿತ್ರವು ಧರ್ಮವಿದೆ, ಆ ಚಾರಿತ್ರವು ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನವಿಲ್ಲದೆ ಸಂಭವಿಸುವುದಿಲ್ಲ. ತನ್ನ ಶುದ್ಧ ಚಿದಾನಂದ ಧ್ರುವ ಸ್ವಭಾವದ ಅವಲಂಬನವಿಲ್ಲದೆ ಸಮ್ಯಗ್ದರ್ಶನವಾಗಲಿ ಅಥವಾ ಸಮ್ಯಗ್ಜ್ಞಾನವಾಗಲಿ ಆಗುವುದಿಲ್ಲ. ಮಧ್ಯದಲ್ಲಿ ವ್ಯವಹಾರವು ಬಂದು ಬಿಡುತ್ತದೆ, ಆದರೆ ಅದು ಮೋಕ್ಷಮಾರ್ಗವಲ್ಲ. ಶುಭರಾಗವನ್ನು ವ್ಯವಹಾರ ಧರ್ಮವೆಂದು ಹೇಳಿರುವುದರ ಅರ್ಥವೇನೆಂದರೆ ಎಲ್ಲಿ ನಿಶ್ಚಯಧರ್ಮ ಎಂದರೆ ವೀತರಾಗ ಶ್ರದ್ಧೆ-ಜ್ಞಾನ-ಚಾರಿತ್ರವಿದೆ ಅದು ಯಥಾರ್ಥ ಮೋಕ್ಷಮಾರ್ಗವಿದೆ ಮತ್ತು ಆಗ ಶುಭರಾಗವನ್ನು ಉಪಚಾರದಿಂದ ವ್ಯವಹಾರ ಧರ್ಮವೆಂದು ಹೇಳಲಾಗಿದೆ, ಆದರೆ ಅದು ಬಂಧದ ಕಾರಣವಿದೆ. ಯಾರಿಗೆ ನಿಶ್ಚಯಸ್ವಭಾವದ ಅರಿವಿಲ್ಲ ಅವರಿಗಂತೂ ಶುಭರಾಗವನ್ನು ವ್ಯವಹಾರವೆಂದು ಹೇಳಲಾಗುವುದಿಲ್ಲ. ಆಪ್ತ, ಆಗಮ ಮತ್ತು ತತ್ತ್ವದ ಶ್ರದ್ಧೆಯನ್ನು ವ್ಯವಹಾರದಿಂದ ಸಮ್ಯಗ್ದರ್ಶನವೆಂದು ಹೇಳಿದೆ ಆದರೆ ಅದರಲ್ಲಿ ಪರದ ಕಡೆಗಿರುವ ಯಾವ ರಾಗವಿದೆ ಅದಂತೂ ಬಂಧದಕಾರಣವೇ ಇದೆ. 'ಅನಾದಿ ಮಿಥ್ಯಾದೃಷ್ಟಿ ಜೀವನಿಗೆ ಮೊದಲು ವ್ಯವಹಾರನಯವು ಪರಿಣಮಿಸುತ್ತದೆ ಮತ್ತು ನಂತರ ನಿಶ್ಚಯನಯವು ಪರಿಣಮಿಸುತ್ತದೆ'ಯೆಂದು ಅಜ್ಞಾನೀ ಜೀವರುಗಳ ಮನ್ನಣೆಯಿರುತ್ತದೆ. ರಹಸ್ಯಪೂರ್ಣ ಪತ್ರದಲ್ಲಿ ಪಂಡಿತ ಟೋಡರಮಲ್ಲರು ಹೀಗೆ ಹೇಳುತ್ತಾರೆ, -

ಯಾರಲ್ಲಿ ಸ್ವ-ಪರದ ಯಥಾರ್ಥ ಶ್ರದ್ಧೆಯಿಲ್ಲ, ಆದರೆ ಜೈನಮತದಲ್ಲಿ ಹೇಳಿರುವ ದೇವ-ಗುರು ಮತ್ತು ಧರ್ಮ ಈ ಮೂರನ್ನು ಮನ್ನಿಸುತ್ತಾರೆ ಹಾಗೂ ಅನ್ಯ ಮತದಲ್ಲಿ ಹೇಳಿರುವ ದೇವಾದಿಕರನ್ನು ಅಥವಾ ತತ್ತ್ವಾದಿಗಳನ್ನು ಮನ್ನಿಸುವುದಿಲ್ಲ. ಹೀಗೆ ಕೇವಲ ವ್ಯವಹಾರ ಸಮ್ಯಕ್ತ್ವದಿಂದ ಅವರು ಸಮ್ಯಗ್ದೃಷ್ಟಿಯೆಂಬ ಹೆಸರನ್ನು ಪಡೆಯುವುದಿಲ್ಲ.''

ತನ್ನ ಅಂತರ್ಯದಲ್ಲಿ ಚಿದಾನಂದ ಸ್ವಭಾವದ ಜ್ಞಾನ ಮಾಡಿಕೊಂಡು ನಿಶ್ಚಯ ಶ್ರದ್ಧೆ-ಜ್ಞಾನವನ್ನು ಪ್ರಕಟಮಾಡಿಕೊಂಡಲ್ಲದೆ ವ್ಯವಹಾರ ಯಾವುದರದು ? ನಿಶ್ಚಯವಿಲ್ಲದ ಏಕಾಕಿ ಶುಭಭಾವವನ್ನು ಅನಾದಿಯಿಂದ ಮಾಡಿಯಾಗಿದೆ, ಆದರೆ ಅದನ್ನು ವ್ಯವಹಾರವೆಂದು ಹೇಳಲಾಗುವುದಿಲ್ಲ. ಎಲ್ಲಿ ತನ್ನ ಚಿದಾನಂದ ಸ್ವಭಾವದ ನಿಶ್ಚಯ ಸಮ್ಯಗ್ದರ್ಶನವಿರುತ್ತದೆ ಅಲ್ಲಿ ದೇವ-ಶಾಸ್ತ್ರ-ಗುರುಗಳ ಶ್ರದ್ಧೆಯನ್ನು ವ್ಯವಹಾರ ಸಮ್ಯಗ್ದರ್ಶನವೆಂದು ಹೇಳಲಾಗುತ್ತದೆ.

ಆದರೆ ವ್ಯವಹಾರರತ್ನತ್ರಯದಲ್ಲಿ ಯಾವ ರಾಗವಿರುತ್ತದೆ ಅದು ಧರ್ಮವಿಲ್ಲ, ಅದು ಮೋಕ್ಷಮಾರ್ಗವಿಲ್ಲ. ಮೋಕ್ಷಮಾರ್ಗವಂತೂ ಮೋಹ ಮತ್ತು ಕ್ಷೋಭದಿಂದ ರಹಿತವಿರುವಂಥ ಒಂದು ವೀತರಾಗಚಾರಿತ್ರವೇ ಇರುವುದು. ವೀತರಾಗ ಸರ್ವಜ್ಞದೇವರ ಹಾಗೂ ಭಾವಲಿಂಗೀ ನಿರ್ಗ್ರಂಥ ಸಾಧುಗಳ ಭಕ್ತಿಯ ರಾಗವನ್ನು ಕೂಡ ಯಾವನು ಮೋಕ್ಷಮಾರ್ಗವೆಂದು ಮನ್ನಿಸುತ್ತಾನೆ ಆ ಜೀವನು ಮೋಹದಿಂದ ಖೇದಖಿನ್ನನಾಗಿ ಪರಿಭ್ರಮಣ ಮಾಡುತ್ತಾನೆ. ಯಾವುದರಿಂದ ತೀರ್ಥಂಕರ ನಾಮಕರ್ಮದ ಬಂಧವಾಗುತ್ತದೆ ಅಂಥ ರಾಗವು ಸಮ್ಯಗ್ದೃಷ್ಟಿಗೇನೇ ಬರುತ್ತದೆ. ಆದರೆ ಸಮ್ಯಗ್ದೃಷ್ಟಿಯು ಅದನ್ನು ಧರ್ಮವೆಂದು ಸ್ವಪ್ನದಲ್ಲಿಯೂ ಕೂಡ ಮನ್ನಿಸುವುದಿಲ್ಲ. ಈ ಪ್ರಕಾರ ಧರ್ಮಾತ್ಮನ ದೃಷ್ಟಿಯು ಯಥಾರ್ಥವಿರುತ್ತದೆ.

ಆತ್ಮನ ಸ್ವಭಾವವು ಜ್ಞಾನ-ದರ್ಶನವಿದೆ. ಆ ಸ್ವಭಾವದ ಅವಲಂಬನದಿಂದ ಯಾವ ಪರ್ಯಾಯವು ಪ್ರಕಟವಾಗುವುದು ಅದು ಧರ್ಮವಿದೆ. ಒಂದು ಚಿದಾನಂದ ತತ್ತ್ವದ ಅವಲಂಬನವನ್ನು ಹೊರತುಪಡಿಸಿ ಹೊರಗಿನ ಅವಲಂಬನದಿಂದ ಯಾವ ಭಾವವು ಉಂಟಾಗುತ್ತದೆ ಅದು ಬಂಧದ ಕಾರಣವಿದೆ. ತೀರ್ಥಂಕರರಿಗೆ ಕೂಡ ಮುನಿ ಅವಸ್ಥೆಯಲ್ಲಿ ಆರನೇ ಗುಣಸ್ಥಾನದೊಳಗೆ ಶುಭಭಾವವು ಬಂದಲ್ಲದೆ ಇರುವುದಿಲ್ಲ. ಆದರೆ ಯಾವ ಜೀವರುಗಳು ಆ ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸುತ್ತಾರೆ ಅವರು ಅಂಥ ಮಿಥ್ಯಾ ಅಭಿಪ್ರಾಯದಿಂದ ಅತ್ಯಂತ ಖೇದಖಿನ್ನರಾಗಿ ಪ್ರವರ್ತಿಸುತ್ತಾರೆ. ಅವರು ಆ ಮಿಥ್ಯಾ ಭ್ರಾಂತಿಯಲ್ಲಿ ಪರಿಭ್ರಮಣ ಮಾಡುತ್ತಿರುತ್ತಾರೆ. ಯಾರು ರಾಗದಿಂದ ಮೋಕ್ಷವಾಗುತ್ತದೆಯೆಂದು ಮನ್ನಿಸುತ್ತಾರೆ ಅವರು ಸ್ವಸಮಯದಲ್ಲಿ ಹೇಗೆ ತಾನೆ ಪ್ರೀತಿಯುಳ್ಳವರಾಗುತ್ತಾರೆ ? ಅವರುಗಳಂತೂ ಪರಸಮಯದಲ್ಲಿಯೇ ಅನುರಕ್ತರಾಗಿರುತ್ತಾರೆ. ಸರಾಗ ಸಮ್ಯಗ್ದೃಷ್ಟಿ ಜೀವರುಗಳಿಗೆ ರಾಗವಿರುತ್ತದೆ, ಆದರೆ ಅವರು ಅದನ್ನು ಮೋಕ್ಷದ ಕಾರಣವೆಂದು ಮನ್ನಿಸುವುದಿಲ್ಲ. ಯಾರು ರಾಗದಿಂದ ಕಲ್ಯಾಣವಾಗುತ್ತದೆಯೆಂದು ಮನ್ನಿಸುತ್ತಾರೆ ಆ ಜೀವರುಗಳು ಮಿಥ್ಯಾದೃಷ್ಟಿಯಾಗಿರುತ್ತಾರೆ. ರಾಗವಿದ್ದರೂ ಕೂಡ ಯಾರು ಚಿದಾನಂದ ಸ್ವಭಾವದಲ್ಲಿ ಶ್ರದ್ಧೆಯನ್ನಿಡುತ್ತಾರೆ ಮತ್ತು ರಾಗವನ್ನು ಬಂಧದ ಕಾರಣವೆಂದು ತಿಳಿದುಕೊಂಡಿರುತ್ತಾರೆ ಅವರನ್ನಂತೂ ಸರಾಗ ಸಮ್ಯಗ್ದೃಷ್ಟಿಯೆಂದು ಹೇಳಲಾಗುತ್ತದೆ. ಆದರೆ ರಾಗವನ್ನು ಮೋಕ್ಷದ ಕಾರಣವೆಂದು ಮನ್ನಿಸಿಕೊಂಡರೆ ಅವರುಗಳಂತೂ ಮಿಥ್ಯಾದೃಷ್ಟಿಗಳಾಗಿಯೇ ಆಗಿಹೋಗುತ್ತಾರೆ. ಅವರಿಗೆ ಸರಾಗ ಸಮ್ಯಕ್ತ್ವವು ಇರುವುದಿಲ್ಲ. ಯಾರು ತಮ್ಮ ಜ್ಞಾಯಕ ಚಿದಾನಂದದ್ರವ್ಯದ ಅನಾದರ ಮಾಡಿ ರಾಗದಿಂದ ಮುಕ್ತಿಯಾಗುತ್ತದೆಯೆಂದು ಮನ್ನಿಸುತ್ತಾರೆ ಆ ಜೀವರುಗಳು ಮಿಥ್ಯಾದೃಷ್ಟಿಗಳಿದ್ದಾರೆ. ಚಿದಾನಂದ ಸ್ವಭಾವದ ಆಂತರ್ಯದ ಅವಲಂಬನವಿಲ್ಲದೆ ಬಾಹ್ಯದಲ್ಲಿ ಪಂಚಪರಮೇಷ್ಠೀ ಭಗವಂತರುಗಳ ಭಕ್ತಿಯ ಭಾವವು ಕೂಡ ಎಲ್ಲಿ ಬಂಧದಕಾರಣವಿದೆಯೆಂದಮೇಲೆ ನಿರರ್ಗಳತೆಯಿಂದ ಸ್ವಚ್ಛಂದಿಯಾಗಿ ಪಾಪಭಾವದಲ್ಲಿ ಪ್ರವರ್ತಿಸುವವರ ಮಾತನ್ನಾದರೂ ಏನು ಹೇಳುವುದು ? ಅದಂತೂ ಬಂಧದ ಕಾರಣವೇ ಇದೆ. ಎಲ್ಲಿ ಶುಭದ್ದು ಕೂಡ ನಿಷೇಧ ಮಾಡಲಾಗುತ್ತದೆ ಅಲ್ಲಿ ಅಶುಭದ ನಿಷೇಧವಂತೂ ಬಂದುಹೋಗುತ್ತದೆ.

ಮೋಕ್ಷವಂತೂ ದ್ರವ್ಯದ ಅವಲಂಬನದಿಂದ ಆಗುತ್ತದೆ. ಆದ್ದರಿಂದ ಚಿದಾನಂದ ದ್ರವ್ಯದ ಅವಲಂಬನವೇ ಮೋಕ್ಷದ ಕಾರಣವಿದೆ. ಮೋಕ್ಷಮಾರ್ಗದ ಪೂರ್ವ ಪರ್ಯಾಯವನ್ನು ಮೋಕ್ಷದ ಕಾರಣವೆಂದು ಹೇಳುವುದು ಕೂಡ ವ್ಯವಹಾರವಿದೆ. ಏಕೆಂದರೆ ಪೂರ್ವ ಪರ್ಯಾಯದ್ದಂತೂ ಅಭಾವವಾಗಿ ನವೀನ ಪರ್ಯಾಯವು ಪ್ರಕಟವಾಗುತ್ತದೆ. ಪರ್ಯಾಯದೊಳಗಿಂದ ಪರ್ಯಾಯವು ಪ್ರಕಟವಾಗುವುದಿಲ್ಲ, ಆದರೆ ಅದು ದ್ರವ್ಯದೊಳಗಿಂದ ಪ್ರಕಟವಾಗುತ್ತದೆ. ಎಂದಮೇಲೆ ರಾಗ ಪರ್ಯಾಯವನ್ನು ಮೋಕ್ಷ ಪರ್ಯಾಯದ ಕಾರಣವೆಂದು ಹೇಳುವ ಮಾತು ಎಲ್ಲಿ ತಾನೆ ಉಳಿಯುವುದು ? ಆದುದರಿಂದ ರಾಗವು ಮೋಕ್ಷದ ಕಾರಣವಿರುವುದೇ ಇಲ್ಲ. ಆತ್ಮನ ವೀತರಾಗ ದಶೆಯಿಂದ ಬದ್ಧ ವಿರೋಧವಾಗಿರುವಂಥ ರಾಗಭಾವದಿಂದ ಮೋಕ್ಷವಂತೂ ಆಗುವುದೇ ಇಲ್ಲ. ಯಾರಿಗೆ ತಮ್ಮ ದ್ರವ್ಯದ ಅರಿವಿರುವುದಿಲ್ಲ,

ಅವರುಗಳ ಶುಭರಾಗವನ್ನಂತೂ ವ್ಯವಹಾರದಿಂದಲೂ ಕೂಡ ಮೋಕ್ಷಮಾರ್ಗವೆಂದು ಹೇಳುವುದಿಲ್ಲ, ಹೇಳಲು ಬರುವುದೇ ಇಲ್ಲ. ಯಾರಿಗೆ ತಮ್ಮ ಚಿದಾನಂದ ವಿಜ್ಞಾನ ಘನ ಸ್ವಭಾವದ ಅವಲಂಬನದಿಂದ-ಆಶ್ರಯ ಮಾಡುವುದರಿಂದ ನಿಶ್ಚಯ ರತ್ನತ್ರಯ ರೂಪವಿರುವಂಥ ಮೋಕ್ಷಮಾರ್ಗವು ಪ್ರಕಟವಾಗಿರುವುದೋ ಅಂಥವರ ವ್ಯವಹಾರ ರತ್ನತ್ರಯವನ್ನು ಮಾತ್ರ ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳಲಾಗಿರುವುದು. ಆದಾಗ್ಯೂ ಅದರಲ್ಲಿ ಯಾವ ಶುಭರಾಗವಿರುತ್ತದೆ ಅದಂತೂ ವಾಸ್ತವದಲ್ಲಿ ಕೇವಲ ಬಂಧದ ಕಾರಣವೇ ಆಗಿರುತ್ತದೆ.

ಜ್ಞಾನೀಮಹಾತ್ಮರುಗಳು ರಾಗದಲ್ಲಿ ಎಂದೂ ಧರ್ಮವನ್ನು ಮನ್ನಿಸುವುದಿಲ್ಲ ಮತ್ತು ರಾಗದಲ್ಲಿ ಧರ್ಮವನ್ನು ಮನ್ನಿಸಲು ಹೇಳುತ್ತಿರುವಂಥ ಕುಗುರುಗಳನ್ನು ಅವರು ಆದರಿಸುವುದಿಲ್ಲ. ಶುಭರಾಗವು ಕೂಡ ಮೋಕ್ಷದ ಕಾರಣವಿಲ್ಲವೆಂದ ಮೇಲೆ ಅಶುಭರಾಗವಂತೂ ಎಲ್ಲಿಂದ ಹೇಗೆ ಆದರಣೀಯವಾಗುವುದು ? ಶುಭದ ನಿಷೇಧ ಮಾಡಿದ ನಂತರ ಅಶುಭದ ನಿಷೇಧವಂತೂ ಸ್ವಾಭಾವಿಕವಾಗಿಯೇ ಆಗಿಹೋಗುವುದು.

**ಅರಹಂತ ಸಿದ್ಧಚೇದಿಯಪವಯಣಗಣಣಾಣಭತ್ತಿಸಂಪಣ್ಣೋ ।**
**ಬಂಧದಿ ಪುಣ್ಣಂ ಬಹುಸೋ ಣ ಹು ಸೋ ಕಮ್ಮಕ್ಖಯಂ ಕುಣದಿ ॥೧೬೬॥**

**ಜೀವ ಜಿನ,ಸಿದ್ಧ, ಚೈತ್ಯ, ಪ್ರವಚನ, ಮುನಿಗಣ, ಜ್ಞಾನದ ಭಕ್ತಿಮಾಡಿದರೆ ।**
**ಅವನು ಬಹುಪುಣ್ಯಬದ್ಧನಾಗುವನಾದರೆ ಕರ್ಮಕ್ಷಯ ಮಾಡಲಾರನು ॥೧೬೬॥**

ಶ್ರೀ ಸೀಮಂಧರ ಪರಮಾತ್ಮರು ಅರಹಂತ ಪದದಲ್ಲಿ ಈಗಲೂ ಕೂಡ ಮಹಾವಿದೇಹದೊಳಗೆ ಸಮವಸರಣದಲ್ಲಿ ಪ್ರತ್ಯಕ್ಷ ವಿರಾಜಮಾನರಿದ್ದಾರೆ ಮತ್ತು ಪೂರ್ವಕಾಲದಲ್ಲಿ ಈ ಭರತಕ್ಷೇತ್ರದೊಳಗೆ ಕೂಡ ಮಹಾವೀರ ಭಗವಂತರು ವಿರಾಜಿಸುತ್ತಿದ್ದರು. ಇಂಥ ಭಗವಂತರುಗಳ ಕುರಿತಾಗಿರುವ ಭಕ್ತಿಯು ಪುಣ್ಯಬಂಧದ ಕಾರಣವಿದೆ. ಅರಹಂತ, ಸಿದ್ಧ, ಚೈತ್ಯಾಲಯ, ಜಿನಬಿಂಬ, ಪ್ರವಚನ ಮತ್ತು ಸಾಧು-ಮುನಿರಾಜರು ಮೊದಲಾದವರುಗಳ ಕುರಿತು ಭಕ್ತಿ ಮತ್ತು ಆದರದ ಭಾವವು ಧರ್ಮಾತ್ಮರುಗಳಿಗೆ ಬಂದಲ್ಲದೆ ಇರುವುದಿಲ್ಲ, ಆದರೆ ಈ ರಾಗವು ಪರದ್ರವ್ಯದ ಅವಲಂಬನದಿಂದ ಆಗುವಂಥದ್ದಿದೆ, ಇದೇನು ಧರ್ಮವಿಲ್ಲವೆಂದು ಅವರು ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಜಿನಬಿಂಬದ ಮೇಲಿರುವ ರಾಗಭಾವವು ಕೂಡ ಬಂಧದ ಕಾರಣವಿದೆ, ಆದರೆ ಹೀಗೆ ಹೇಳುವುದರಿಂದ ಜಿನಬಿಂಬದ ನಿಷೇಧವಾಗಿ ಹೋಗುವ ಸಾಧ್ಯತೆಯಿಲ್ಲ. ಧರ್ಮಾತ್ಮರುಗಳಿಗೆ ಶುಭರಾಗವು ಉಂಟಾಗುತ್ತಿರುವಂತೆ ಜಿನಬಿಂಬದ ಕುರಿತಾಗಿ ಭಕ್ತಿ-ಪೂಜೆಯ ಭಾವವು ಬಂದೇ ಬರುತ್ತದೆ. ಆದರೆ ಧರ್ಮಾತ್ಮನು ರಾಗದಿಂದ ಧರ್ಮವನ್ನು ಮನ್ನಿಸುವುದಿಲ್ಲ. ರಾಗದ ನಿಮಿತ್ತರೂಪವಿರುವಂಥ ಜಿನಬಿಂಬ ಮೊದಲಾದುವನ್ನು ನಿರಾಕರಿಸುವುದೂ ಇಲ್ಲ. ಜಗತ್ತಿನಲ್ಲಿ ಧರ್ಮಾತ್ಮ ಜೀವರುಗಳು ಅನಾದಿಯಿಂದ ಆಗುತ್ತಲೇ ಬಂದಿದ್ದಾರೆ. ಅವರಿಗೆ ನಿಶ್ಚಯದಿಂದಂತೂ ಚೈತನ್ಯದ ಬಹುಮಾನವಿದೆ, ಆದರೆ ರಾಗದ ಸಮಯದಲ್ಲಿ ನಿಮಿತ್ತರೂಪದಿಂದ ಜಿನಬಿಂಬದ ದರ್ಶನ ಭಕ್ತಿಯ ಭಾವವು ಬರುತ್ತದೆ. ಅವುಗಳ ನಿಮಿತ್ತಗಳು ಕೂಡ ಜಗತ್ತಿನಲ್ಲಿ ಅನಾದಿಯಿಂದ ಇವೆ. ಆದರೆ ನಿಮಿತ್ತದ ಕಾರಣದಿಂದ ರಾಗವಾಗಿರುವುದಿಲ್ಲ ಮತ್ತು ರಾಗವನ್ನು ಧರ್ಮಾತ್ಮ ಜೀವನು ಮೋಕ್ಷಮಾರ್ಗವೆಂದು ಮನ್ನಿಸುವುದಿಲ್ಲ. ಮೋಕ್ಷಮಾರ್ಗವಂತೂ ಒಂದು ವೀತರಾಗ ಭಾವವೇ ಇದೆ ಮತ್ತು ವೀತರಾಗ ಭಾವದಲ್ಲಿ ನಿಜದ್ರವ್ಯದ ಅವಲಂಬನವೇ ಇರುವುದು.

ಧರ್ಮಾತ್ಮನಿಗೆ ರಾಗವಾಗುತ್ತದೆ ಅದು ಅವನ ಚಾರಿತ್ರಗುಣದ ವಿಕಾರೀ ಪರ್ಯಾಯವಿದೆ. ಕರ್ಮದ ಉದಯದ ಕಾರಣದಿಂದ ವಿಕಾರವಾಗಿರುವುದಿಲ್ಲ. ಅದರಂತೆ ಆ ರಾಗವು ದ್ರವ್ಯದ ಸ್ವಭಾವವು ಕೂಡ ಇರುವುದಿಲ್ಲ.

ಅದು ಪರ್ಯಾಯದ ದುರ್ಬಲತೆಯಿಂದ ಆಗಿರುತ್ತದೆ. ಆತ್ಮನ ಚಾರಿತ್ರ ಗುಣವು ತ್ರಿಕಾಲವಿದೆ ಮತ್ತು ಎಷ್ಟು ಮೂರು ಕಾಲದ ಸಮಯಗಳಿವೆ ಅಷ್ಟು ಅದರ ಪರ್ಯಾಯಗಳಿವೆ. ಅದರಲ್ಲಿ ಯಾವ ರಾಗವಾಗಿದೆ ಅದು ಕೂಡ ಚಾರಿತ್ರದ ಪರ್ಯಾಯದ ಸ್ವಕಾಲವಿದೆ ; ಒಂದುವೇಳೆ ಪರದ ಕಾರಣದಿಂದ ರಾಗವಾಗಿದೆಯೆಂದು ಹೇಳಹೋದರೆ ಚಾರಿತ್ರದ ಸ್ವಕಾಲವು ಸ್ವತಂತ್ರವೆಂದು ಸಿದ್ಧವಾಗುವುದಿಲ್ಲ. ಪರದಿಂದ ರಾಗವಾಗುತ್ತದೆಯೆಂಬ ಮಾತಂತೂ ಸ್ಥೂಲ ಮಿಥ್ಯಾತ್ವವಿದೆ. ಇಲ್ಲಿಯಂತೂ ಹೇಳಿರುವುದೇನೆಂದರೆ - ಪಂಚಪರಮೇಷ್ಠಿಗಳ ಕುರಿತು ಭಕ್ತಿಯ ಶುಭರಾಗವಾಗುತ್ತದೆ ಅದನ್ನು ಕೂಡ ಯಾರು ಮೋಕ್ಷದ ಕಾರಣವೆಂದು ಮನ್ನಿಸುತ್ತಾರೆ ಅವರು ಕೂಡ ಮಿಥ್ಯಾದೃಷ್ಟಿಗಳಿದ್ದಾರೆ. ಮೋಕ್ಷಮಾರ್ಗವು ಪರದ್ರವ್ಯಗಳಿಂದ ನಿರಪೇಕ್ಷವಿದೆ. ಪರ್ಯಾಯವು ತನ್ನಿಂದ ಇದೆಯೆಂದು ನಿರಪೇಕ್ಷತೆಯನ್ನು ಸಿದ್ಧಮಾಡಿ ನಿಮಿತ್ತದ ಜ್ಞಾನ ಮಾಡಿಕೊಂಡರೆ ಯಥಾರ್ಥವಿದೆ. ಆದರೆ ನಿರಪೇಕ್ಷತೆಯಿಲ್ಲದೆ ಕೇವಲ ಒಂದು ನಿಮಿತ್ತದಿಂದ ಆಗುವುದೆಂದು ಮನ್ನಿಸಿದರೆ ಅವನು ವಸ್ತುಸ್ವರೂಪವನ್ನು ತಿಳಿಯುವುದಿಲ್ಲ. ಧರ್ಮಾತ್ಮನಿಗೆ ಯಾವ ಸಮಯದಲ್ಲಿ ಯಾವ ಪ್ರಕಾರದ ರಾಗದ ಕಾಲವಿರುತ್ತದೆ ಆ ಸಮಯದಲ್ಲಿ ಆ ಪ್ರಕಾರದ ರಾಗವು ಬರುವುದು ಮತ್ತು ಆ ಪ್ರಕಾರದ ನಿಮಿತ್ತದ ಮೇಲೆ ಲಕ್ಷ್ಯವು ಹೋಗುವುದು, ಆದರೆ ಈ ಯಾವ ರಾಗವಿದೆ ಅದು ಮೋಕ್ಷದ ಕಾರಣವಿಲ್ಲವೆಂದು ಧರ್ಮಾತ್ಮನು ತಿಳಿದುಕೊಂಡಿರುತ್ತಾನೆ. ಈ ರಾಗದಿಂದ ಪರವಸ್ತುವನ್ನು ಕೂಡ ಮಾಡುವ ಸಾಧ್ಯತೆಯಿಲ್ಲವೆಂದು ತಿಳಿದಿರುತ್ತಾನೆ. ಇಂಥ ಅರಿವಿನೊಡನೆ ಧರ್ಮಾತ್ಮ ಜೀವನಿಗೆ ದೇವ-ಶಾಸ್ತ್ರ-ಗುರುಗಳ ಕುರಿತು ಪ್ರಮೋದ ಭಾವವು ಬಂದಲ್ಲದೆ ಇರುವುದಿಲ್ಲ. ಭೇದವಿಜ್ಞಾನ ಮೊದಲಾದವುಗಳ ಕುರಿತು ಉಲ್ಲಸಿತ ಭಾವವು ಜಾಗೃತವಾದಲ್ಲದೆ ಇರುವುದಿಲ್ಲ. ಭೇದವಿಜ್ಞಾನವು ಪ್ರಕಟವಾದ ನಂತರ ಅವರ ಭಕ್ತಿಯ ವಿಕಲ್ಪವು ಉತ್ಪನ್ನವಾಗುತ್ತದೆ ಅದು ಶುಭರಾಗವಿದೆ. ಅದನ್ನು ಕೂಡ ಅವನು ಬಂಧದ ಕಾರಣವೆಂದು ತಿಳಿದುಕೊಂಡಿರುತ್ತಾನೆ. ಒಂದು ರಾಗರಹಿತ ಸ್ವಭಾವದ ಭಕ್ತಿ ಮಾಡುವುದು ಅದುವೇ ನಿಜವಾಗಿ ಮೋಕ್ಷದ ಕಾರಣವಿದೆಯೆಂದು ತಿಳಿದುಕೊಳ್ಳಬೇಕು.

ಆತ್ಮನು ಜ್ಞಾನ-ದರ್ಶನ ಸ್ವಭಾವಿಯಾದ ವಸ್ತುವಿದ್ದಾನೆ. ಅವನ ಮೂಲ ಸ್ವಭಾವದಲ್ಲಿ ರಾಗಾದಿಗಳ ಪ್ರವೃತ್ತಿಯಿರುವುದಿಲ್ಲ. ಒಂದುವೇಳೆ ಮೂಲ ಸ್ವಭಾವದಲ್ಲಿ ರಾಗಾದಿಗಳಿದ್ದರೆ ಅವು ಎಂದೂ ದೂರವಾಗುವುದಿಲ್ಲ. ನಾನಂತೂ ಜ್ಞಾತಾ ಇದ್ದೇನೆ, ರಾಗಾದಿಗಳು ನನ್ನ ಸ್ವರೂಪವಿಲ್ಲ ಮತ್ತು ನಾನು ಪರದ ಕರ್ತೃವಿಲ್ಲವೆಂದು ಯಾವನಿಗೆ ಆತ್ಮನ ಪ್ರತೀತಿಯಾಗಿದೆ, ಅಂಥ ಧರ್ಮಾತ್ಮನಿಗೆ ಕೂಡ ಎಲ್ಲಿಯವರೆಗೆ ಪೂರ್ಣ ವೀತರಾಗತೆಯಾಗುವುದಿಲ್ಲ, ಅಲ್ಲಿಯವರೆಗೆ ಶುಭರಾಗವಿರುತ್ತದೆ ಮತ್ತು ಅರಹಂತ-ಸಿದ್ಧ-ಸಂತ-ಮುನಿವರ ಮೊದಲಾದವರ ಕುರಿತು ಭಕ್ತಿಯ ಭಾವವು ಬಂದಲ್ಲದೆ ಇರುವುದಿಲ್ಲ. ಆದರೆ ಅದು ಶುಭರಾಗವಿದೆ. ಅದನ್ನು ಅವರು ಧರ್ಮವೆಂದು ತಿಳಿದುಕೊಳ್ಳುವುದಿಲ್ಲ. ಆತ್ಮನು ದೇಹ, ವಾಣಿ, ಮನಸ್ಸಿನಿಂದ ಭಿನ್ನ, ಕರ್ಮದಿಂದ ಭಿನ್ನ ಮತ್ತು ರಾಗದಿಂದ ಕೂಡ ಅತೀತ ಚಿದಾನಂದ ವಸ್ತುವಿದ್ದಾನೆಂಬ ಭೇದಜ್ಞಾನದ ಮಹಿಮೆಯ ವಿಕಲ್ಪವುಂಟಾಗುವುದು ಕೂಡ ರಾಗವಿದೆ. ಭೇದವಿಜ್ಞಾನದ ಮಹಿಮೆಯ ಭಾವವು ಧರ್ಮಾತ್ಮನಿಗೆ ಬರುತ್ತದೆ, ಆದರೆ ಅವನು ಅದನ್ನು ಬಂಧದ ಕಾರಣವೆಂದು ತಿಳಿಯುತ್ತಾನೆ. ಆತ್ಮನು ಚೈತನ್ಯಸ್ವರೂಪದ ನಿಧಿಯಿದ್ದಾನೆ. ಅವನ ಶ್ರದ್ಧೆ, ಜ್ಞಾನ ಮಾಡಿಕೊಂಡು ಅವನಲ್ಲಿ ಏಕಾಗ್ರತೆ ಮಾಡುವುದೇ ಮೋಕ್ಷದ ಕಾರಣವಿದೆ. ಧರ್ಮಾತ್ಮ ಜೀವನಿಗೆ ಕೆಳಗಿನ ದಶೆಯಲ್ಲಿ ಶುದ್ಧೋಪಯೋಗವು ದೀರ್ಘಕಾಲ ಉಳಿಯುವುದಿಲ್ಲ, ಎಂದರೆ ಸ್ವರೂಪದಲ್ಲಿ ಲೀನತೆ ಇಲ್ಲದಿರುವಾಗ ಶುಭರಾಗವು ಬರುತ್ತದೆ. ಇಂಥ ಶುಭರಾಗವು ಅದೆಷ್ಟೋ ಬಾರಿ ಬರುತ್ತದೆ ಆ ಶುಭರಾಗವು ಅಧಿಕ ಪುಣ್ಯಬಂಧದ ಕಾರಣವಿದೆ, ಅದೇನು ಮೋಕ್ಷದ ಕಾರಣವಿಲ್ಲವೆಂಬ ಶ್ರದ್ಧೆಯಂತೂ ಮೊದಲಿನಿಂದಲೇ ಇರಬೇಕಾಗುವುದು. ಯಾವನಿಗೆ ಆತ್ಮನು ಜ್ಞಾನ-ದರ್ಶನ ಸ್ವಭಾವಿಯಿದ್ದಾನೆಂಬ ಪ್ರತೀತಿಯಿದೆ, ಆದರೆ ಅದರಲ್ಲಿ

ಲೀನತೆಯಾಗದಿದ್ದರೆ ಅವನಿಗೆ ಶುಭರಾಗದ ಸಮಯದಲ್ಲಿ ಭಗವಂತರ ಭಕ್ತಿ, ಸಂತರ ಭಕ್ತಿ, ರತ್ನತ್ರಯದ ಭಕ್ತಿ-ಬಹುಮಾನ ಬರುತ್ತದೆ. ಆ ಸಮಯದಲ್ಲಿ ಕೂಡ ಧರ್ಮಾತ್ಮನಿಗೆ ಭೇದಜ್ಞಾನದಿಂದ ಸ್ವರೂಪದಲ್ಲಿ ಪ್ರವೀಣತೆ ವರ್ತಿಸುತ್ತದೆ. ಶುಭರಾಗವನ್ನು ಪುಣ್ಯಬಂಧದ ಕಾರಣವೆಂದು ತಿಳಿಯುತ್ತಾನೆ. ಆ ಶುಭರಾಗದಿಂದ ಸ್ವಭಾವದ ಪ್ರಾಪ್ತಿಯಿಲ್ಲ, ಆದರೆ ಸಂಯೋಗದ ಪ್ರಾಪ್ತಿಯಿದೆ, ಆದರೆ ರಾಗವು ಮೋಕ್ಷದ ಕಾರಣವಿಲ್ಲ, ರಾಗದ ಅಂಶವನ್ನು ಕೂಡ ಬಿಟ್ಟುಕೊಡುವಂಥದ್ದಿದೆ.

ಯಾವನಿಗೆ ಶುದ್ಧ ಆತ್ಮನ ಪ್ರತೀತಿಯಾಗಿದೆ, ಆಂಶಿಕ ಲೀನತೆಯು ಕೂಡ ವರ್ತಿಸುತ್ತಿದೆ, ಅವನಿಗೆ ಶುಭರಾಗ ಬರುತ್ತದೆ ಆಗ ಕೂಡ ಮೋಕ್ಷಮಾರ್ಗವಂತೂ ವರ್ತಿಸುತ್ತದೆ. ರಾಗವೇನು ಸ್ವಯಂ ಮೋಕ್ಷಮಾರ್ಗವಿಲ್ಲ, ರಾಗವಂತೂ ಬಂಧದ್ದೇ ಕಾರಣವಿದೆ, ಆದರೆ ಆ ರಾಗದ ಸಮಯದಲ್ಲಿ ಅಂತರ್ಯದೊಳಗೆ ಸ್ವಭಾವದ ಆಶ್ರಯದಿಂದ ಎಷ್ಟು ಶುದ್ಧತೆಯು ವರ್ತಿಸುತ್ತದೆ ಅಷ್ಟು ಮೋಕ್ಷಮಾರ್ಗವಿದೆ. ಈ ಪ್ರಕಾರ ಸಾಧಕದಶೆಯಲ್ಲಿ ಎರಡೂ ಭಾವಗಳು ಏಕಕಾಲದಲ್ಲಿ ಇರುತ್ತವೆ. ಅಂತರ್ಯದ ಶುದ್ಧತೆಯಿಲ್ಲದೆ ಏಕಾಕಿ ಶುಭರಾಗವನ್ನೇ ಯಾವನು ಮೋಕ್ಷಮಾರ್ಗವೆಂದು ಮನ್ನಿಸುತ್ತಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಯಾರಿಗೆ ಅಂತರ್ಯದ ಶುದ್ಧಚಿದಾನಂದ ಸ್ವಭಾವದ ಪ್ರತೀತಿಯಿದೆ, ನಿಶ್ಚಯ ಮೋಕ್ಷಮಾರ್ಗವು ಪ್ರಕಟವಾಗಿದೆ, ಅವನ ಶುಭರಾಗವನ್ನು ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳಲಾಗುತ್ತದೆ. ಆದರೆ ಅನುಪಚಾರ ಮೋಕ್ಷಮಾರ್ಗವು ಜತೆಯಲ್ಲಿ ವರ್ತಿಸುತ್ತಿರುವುದರಿಂದ ಅದನ್ನು ಉಪಚಾರ ಮೋಕ್ಷಮಾರ್ಗವೆಂದು ಹೇಳಲಾಗುತ್ತದೆ. ಯಾವನಿಗೆ ಅಂತರ್ಯದಲ್ಲಿ ಸ್ವಭಾವದ ಅರಿವೇ ಇಲ್ಲದಂಥ ಜೀವನಿಗೆ ಶುಭರಾಗದಲ್ಲಿ ವ್ಯವಹಾರ ಮೋಕ್ಷಮಾರ್ಗದ ಉಪಚಾರವು ಕೂಡ ಬರುವುದಿಲ್ಲ. ಆ ಅಜ್ಞಾನಿಯಂತೂ ರಾಗವನ್ನೇ ಧರ್ಮವೆಂದು ಮನ್ನಿಸಿ ಕುಳಿತುಬಿಟ್ಟಿದ್ದಾನೆ. ಆದುದರಿಂದ ಅವನಿಗಂತೂ ಅನಂತಾನುಬಂಧಿಯ ರಾಗವಿದೆ. ಅವನ ರಾಗವನ್ನು ಅಲ್ಪರಾಗವೆಂದು ಹೇಳಲಾಗುವುದಿಲ್ಲ. ಧರ್ಮಾತ್ಮನಿಗೆ ತನ್ನ ಚಿದಾನಂದ ಸ್ವರೂಪದ ಪ್ರತೀತಿಯಿರುವುದರಿಂದ ಸ್ವಭಾವದ ದೃಷ್ಟಿಯ ಬಲದಿಂದ ಅವನಿಗೆ ಅತ್ಯಂತ ಅಲ್ಪರಾಗವಾಗುತ್ತದೆ.

ಆದುದರಿಂದ ಅವನ ರಾಗವನ್ನು ಅಲ್ಪವೆಂದು ಹೇಳಲಾಗುತ್ತದೆ. ಆದರೆ ಆ ಶುಭರಾಗವು ಕೂಡ ಮೋಕ್ಷದ ಕಾರಣವಿಲ್ಲ. ಜ್ಞಾನಿಗೆ ಕೂಡ ಯಾವ ಶುಭರಾಗವಿರುತ್ತದೆ ಅದು ಪುಣ್ಯ ಬಂಧದ ಕಾರಣವಿದೆ. ಧರ್ಮಾತ್ಮನಿಗೆ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನವಾಗಿದೆ, ಅಷ್ಟು ಅಂಶದಲ್ಲಿಯಂತೂ ಬಂಧ ಪದ್ಧತಿಯ ಅಭಾವವಾಗಿದೆ. ೪೧ ಪ್ರಕೃತಿಯ ಬಂಧನವಂತೂ ನಾಲ್ಕನೆಯ ಗುಣಸ್ಥಾನದಿಂದಲೇ ನಿಂತುಹೋಗಿದೆ. ಆದರೆ ಇನ್ನೂ ಅವನಿಗೆ ಎಷ್ಟು ರಾಗವಿದೆ ಅಷ್ಟು ಬಂಧನವಿದೆ. ಆದುದರಿಂದ ಬಂಧ ಪದ್ಧತಿಯು ಸರ್ವಥಾ ಅಭಾವವಾಗಿಲ್ಲ. ಈ ಪ್ರಕಾರ ಜ್ಞಾನಿಗೆ ಸಾಧಕದಶೆಯಲ್ಲಿ ಅಬಂಧಭಾವ ಮತ್ತು ಬಂಧಭಾವಗಳೆರಡೂ ಜತೆಯಲ್ಲಿ ಇರುತ್ತವೆ. ಆದರೆ ಅದರಲ್ಲಿ ಎಷ್ಟು ಅಂಶದಲ್ಲಿ ಶುದ್ಧ ರತ್ನತ್ರಯದ ಭಾವವಿದೆ ಅದಂತೂ ಅಬಂಧಭಾವವೇ ಇದೆ. ಅದು ಸ್ವಲ್ಪಕೂಡ ಬಂಧದ ಕಾರಣವಾಗುವುದಿಲ್ಲ ಮತ್ತು ಅಲ್ಲಿ ಎಷ್ಟು ರಾಗಾದಿ ಭಾವಗಳಿವೆ ಅವು ಬಂಧದ ಕಾರಣವಿವೆ, ಅವು ಮೋಕ್ಷದ ಕಾರಣವಿಲ್ಲ. ಅಜ್ಞಾನಿಯಂತೂ ಬಂಧ-ಮೋಕ್ಷದ ಕಾರಣವನ್ನೇ ಗುರುತಿಸುವುದಿಲ್ಲ. ಪುರುಷಾರ್ಥ ಸಿದ್ಧ್ಯುಪಾಯದಲ್ಲಿ ಕೂಡ (ಗಾಥೆ ೨೧೨-೧೩-೧೪ರಲ್ಲಿ) ಹೀಗೆ ಹೇಳುತ್ತಾರೆ.

ಎಷ್ಟು ಅಂಶಗಳಲ್ಲಿ ಸಮ್ಯಗ್ದರ್ಶನ-ಸಮ್ಯಗ್ಜ್ಞಾನ-ಸಮ್ಯಕ್ಚಾರಿತ್ರವಿದೆ ಅಷ್ಟು ಅಂಶದಿಂದ ಬಂಧನವಾಗುವುದಿಲ್ಲ. ಆದರೆ ಎಷ್ಟು ಅಂಶದಲ್ಲಿ ರಾಗವಿದೆ ಅಷ್ಟು ಅಂಶದಲ್ಲಿ ಬಂಧನವಿದೆ. ಸಾಧಕ ಜೀವನಿಗೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವಿದ್ದರೂ ಕೂಡ ಯಾವ ಬಂಧನವಾಗುತ್ತದೆ ಆ ಬಂಧನವು ರಾಗಭಾವದಿಂದಲೇ ಆಗುತ್ತದೆ. ರತ್ನತ್ರಯವೇನು ಬಂಧನದ ಕಾರಣವಿಲ್ಲ, ರತ್ನತ್ರಯವಂತೂ ಮೋಕ್ಷದ ಕಾರಣವೇ ಇದೆ. ರತ್ನತ್ರಯವು ಧರ್ಮವಿದೆ, ಧರ್ಮವು

ಮೋಕ್ಷದ್ದೇ ಕಾರಣವಿದೆ, ಅದು ಚತುರ್ಗತಿಯ ಕಾರಣವಾಗುವುದಿಲ್ಲ. ಯಾವ ಪುಣ್ಯದ ಬಂಧವಾಗುತ್ತದೆ ಅದು ಶುಭರಾಗದಿಂದ ಆಗುತ್ತದೆ ಮತ್ತು ಶುಭರಾಗವು ಜೀವದ ಅಪರಾಧವಿದೆ, ಧರ್ಮವಿಲ್ಲ.

ಧರ್ಮವು ಆತ್ಮನ ಸ್ವಭಾವದೊಳಗಿಂದ ಪ್ರಕಟವಾದ ವೀತರಾಗೀ ಅವಸ್ಥೆಯಿದೆ. ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರ ಇವು ಮೂರು ಪರ್ಯಾಯಗಳಿವೆ, ಅವೇನು ತ್ರಿಕಾಲವಿಲ್ಲ. ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಇವು ನವೀನ ಪ್ರಕಟವಾಗಿವೆ. ಮೋಕ್ಷಮಾರ್ಗವು ಕೂಡ ಪರ್ಯಾಯವಿದೆ. ಅದರಂತೆ ಮಿಥ್ಯಾಶ್ರದ್ಧೆ-ಜ್ಞಾನ-ಚಾರಿತ್ರ ಅವು ವಿಕಾರೀ ಪರ್ಯಾಯಗಳಿವೆ, ಅದು ಸಂಸಾರವಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ನಿರ್ಮಲ ದಶೆಯಿದೆ, ಅದು ಮೋಕ್ಷಮಾರ್ಗವಿದೆ. ನಾನು ಚಿದಾನಂದ ಸ್ವರೂಪನಿದ್ದೇನೆಂದು ಸ್ವಭಾವದ ಪ್ರತೀತಿ ಮಾಡಿ, ಅದರ ಆಶ್ರಯದಿಂದ ಎಷ್ಟು ವೀತರಾಗ ಭಾವವಾಗುವುದು ಅಷ್ಟಂತೂ ಅಬಂಧಭಾವವಿದೆ, ಆದರೆ ಎಲ್ಲಿ ಪರಿಪೂರ್ಣ ವೀತರಾಗತೆ ಯಾಗಿರುವುದಿಲ್ಲ ಅಲ್ಲಿ ದೇವ-ಗುರು-ಧರ್ಮದ ಕುರಿತು ಭಕ್ತಿ-ಬಹುಮಾನ ಶುಭರಾಗವಾಗುತ್ತದೆ. ಆ ರಾಗವಿರುವವರೆಗೆ ಸಕಲ ಕರ್ಮದ ಕ್ಷಯವಾಗುವುದಿಲ್ಲ. ಆದುದರಿಂದ ರಾಗವು ಸರ್ವತ್ರ ವರ್ಜನೀಯವಿದೆ, ಬಿಡುವಂಥದ್ದಿದೆ. ತನ್ನ ಚಿದಾನಂದ ಸ್ವಭಾವದ ಆಶ್ರಯ ಮಾಡಿ ಅದರಲ್ಲಿ ಏಕಾಗ್ರವಾದರೆ ರಾಗವು ಬಿಟ್ಟುಹೋಗುತ್ತದೆ. ಧರ್ಮದ ದೃಷ್ಟಿಯಲ್ಲಿ ರಾಗದ ನಿಷೇಧವು ವರ್ತಿಸುತ್ತಿರುವುದರಿಂದ ಅವನ ಶುಭರಾಗವನ್ನು ಉಪಚಾರದಿಂದ ಮೋಕ್ಷದ ಪರಂಪರಾ ಕಾರಣವೆಂದು ಹೇಳಲಾಗುತ್ತದೆ; ಆದರೆ ಪ್ರತ್ಯಕ್ಷವಾಗಿಯಂತೂ ಅದು ಬಂಧದ ಕಾರಣವೇ ಇದೆ. ರಾಗವು 'ಪರಂಪರಾ' ಕಾರಣವಿದೆಯೆಂಬ ಮಾತು ಯಾರಿಗೆ ಅನ್ವಯಿಸುತ್ತದೆಯೆಂದರೆ ಯಾವನಿಗೆ ರಾಗದ ಆದರವಿದೆ ಅವನಿಗಂತೂ ಅದು ಪರಂಪರೆಯಿಂದ ಮೋಕ್ಷದ ಕಾರಣವಿಲ್ಲ ; ಆದರೆ ಯಾರಿಗೆ ರಾಗದ ಆದರವಿಲ್ಲ, ರಾಗರಹಿತ ಚಿದಾನಂದ ಸ್ವಭಾವದ ದೃಷ್ಟಿಯು ವರ್ತಿಸುತ್ತಿದೆ ಅವರು 'ಅಲ್ಪ ಕಾಲದಲ್ಲಿ ಸ್ವಭಾವದ ಉಗ್ರ ಅವಲಂಬನ ತೆಗೆದುಕೊಂಡು ರಾಗವನ್ನು ಕತ್ತರಿಸಿ ಹಾಕುತ್ತಾರೆ. ಆದುದರಿಂದ ಅವರಿಗೆ ರಾಗದಲ್ಲಿ ಪರಂಪರೆಯ ಕಾರಣದ ಉಪಚಾರವು ಅನ್ವಯಿಸುತ್ತದೆ. ನಿಜವಾಗಿಯಂತೂ ರಾಗವು ಆತ್ಮನಿಗೆ ಬಂಧದ ಕಾರಣವೇ ಇದೆ. ಎಷ್ಟ ರಾಗವಿದೆ ಅಷ್ಟಂತೂ ಮೋಕ್ಷಮಾರ್ಗದ ಘಾತವಿದೆ. ಚಿದಾನಂದ ಸ್ವಭಾವದ ಆಶ್ರಯವನ್ನು ಬಿಟ್ಟುಕೊಟ್ಟು ಯಾವುದೇ ಪರದ್ರವ್ಯದ ಆಶ್ರಯ ಮಾಡಿದರೆ ರಾಗದ ಉತ್ಪತ್ತಿಯಾಗುತ್ತದೆ ಅದು ಬಂಧದಕಾರಣವೇ ಇದೆ. ಆದ್ದರಿಂದ ಪರದ್ರವ್ಯದ ಆಶ್ರಯ ಬಿಟ್ಟುಕೊಡುವಂಥದ್ದಿದೆ ಮತ್ತು ಸ್ವದ್ರವ್ಯದ ಆಶ್ರಯ ಮಾಡುವಂಥದ್ದಿದೆ.

ಜೀವನಿಗೆ ಸ್ವಸಮಯದ ಪ್ರಾಪ್ತಿಯಾಗದಿರುವಲ್ಲಿ ರಾಗವೇ ಕಾರಣವಿದೆಯೆಂದು ಈಗ ಹೇಳುತ್ತಾರೆ. ಎಂದರೆ ಕರ್ಮದ ಕಾರಣದಿಂದ ಸ್ವಭಾವದ ಪ್ರಾಪ್ತಿಯಾಗುವುದಿಲ್ಲವೆಂದು ಯಾರಾದರೂ ಮನ್ನಿಸಿದರೆ ಆ ಮಾತು ಅಸತ್ಯವಿದೆ. ತನ್ನ ರಾಗದ ಕಾರಣದಿಂದಲೇ ಸ್ವಸಮಯದ ಪ್ರಾಪ್ತಿಯು ನಿಂತುಕೊಂಡಿದೆಯೆಂದು ಹೇಳುತ್ತಾರೆ -

**ಜಸ್ಸ ಹಿದಯೇಣುಮೇತ್ತಂ ವಾ ಪರದವ್ವಮ್ಹಿ ವಿಜ್ಜದೇ ರಾಗೋ ।**
**ಸೋ ಣ ವಿಜಾಣದಿ ಸಮಯಂ ಸಗಸ್ಸ ಸವ್ವಾಗಮಧರೋ ವಿ ॥೧೬೭॥**

**ಯಾವನಿಗೆ ಪರದ್ರವ್ಯದ ಕುರಿತು ಹೃದಯದಿ ಅಣುಮಾತ್ರ ರಾಗವಿಹುದು ।**
**ಅವನು ಸರ್ವಾಗಮಧಾರಿಯಿದ್ದರೂ ನಿಜಸಮಯವನು ತಿಳಿಯನು ॥೧೬೭॥**

ಶ್ರೀ ಪ್ರವಚನಸಾರದ ಗಾಥೆ ೨೩೯ ಮತ್ತು ಶ್ರೀ ಸಮಯಸಾರದ ಗಾಥೆ ೨೦೧ ರಲ್ಲಿ ಕೂಡ ಈ ಮಾತು ಬರುತ್ತದೆ. ಯಾರಿಗೆ ಪುದ್ಗಲ ಮೊದಲಾದ ಪರದ್ರವ್ಯಗಳಲ್ಲಿ ಅಂಶಮಾತ್ರ ಕೂಡ ಪ್ರೀತಿಯ ಭಾವವಿದೆ. ಎಂದರೆ

ಪರದ್ರವ್ಯಗಳಿಂದ ಲಾಭವಾಗುತ್ತದೆಂದು ಮನ್ನಿಸಿ ಅವುಗಳಲ್ಲಿ ರಾಗ ಮಾಡುತ್ತಾರೆ. ಆ ಪುರುಷರು ಬೇಕಾದರೆ ಸಮಸ್ತ ಶಾಸ್ತ್ರಗಳನ್ನು ಅಭ್ಯಸಿಸಿದ್ದರೂ ಕೂಡ ಅವರು ಯಥಾರ್ಥ ಆತ್ಮಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ.

ಯಾವ ಪುರುಷನ ಚಿತ್ತದಲ್ಲಿ ರಾಗರೇಣುವಿನ ಒಂದು ಕಣವಾದರೂ ಜೀವಂತವಿದೆ ಅವನು ಸಮಸ್ತ ಸಿದ್ಧಾಂತದ ಪಾರಂಗತನಿದ್ದರೂ ನಿರುಪರಾಗ-ಶುದ್ಧಸ್ವರೂಪದ ಸ್ವಸಮಯವನ್ನು ವಾಸ್ತವಿಕವಾಗಿ ಅನುಭವಿಸುವುದಿಲ್ಲ. ಆದುದರಿಂದ ಯಥಾರ್ಥ ಶುದ್ಧಸ್ವಭಾವದ ಸಿದ್ಧಿಯ ನಿಮಿತ್ತದಿಂದ ಅರಹಂತ ಮೊದಲಾದವರಲ್ಲಿ ಕೂಡ ರಾಗವನ್ನು ಕ್ರಮದಿಂದ ದೂರ ಮಾಡುವುದು ಯೋಗ್ಯವಿದೆ.

ಚಿದಾನಂದ ಸ್ವರೂಪವಿರುವ ಸ್ವದ್ರವ್ಯದ ಆಶ್ರಯದಿಂದಲೇ ಕಲ್ಯಾಣವಾಗುತ್ತದೆ. ಅದನ್ನು ಬಿಟ್ಟು ಪರದ್ರವ್ಯದ ಆಶ್ರಯದಿಂದ ಲಾಭ ಮನ್ನಿಸಿ ಯಾರು ರಾಗ ಮಾಡುತ್ತಾರೆ ಅವರು ಮಿಥ್ಯಾದೃಷ್ಟಿಯಿದ್ದಾರೆ ಚಿದಾನಂದ ಸ್ವಭಾವದ ದೃಷ್ಟಿಮಾಡಿ ಕ್ರಮದಿಂದ ಸಮಸ್ತ ರಾಗವನ್ನು ಬಿಟ್ಟುಕೊಡುವಂಥದ್ದಿದೆ. ರಾಗವು ಪರದ್ರವ್ಯದ ಅವಲಂಬನವಿಲ್ಲದೆ ಆಗುವುದಿಲ್ಲ. ಸಮಸ್ತ ಶಾಸ್ತ್ರಗಳ ಸಾರವೇನೆಂದರೆ ಸ್ವದ್ರವ್ಯದ ದೃಷ್ಟಿ ಮಾಡಿ ಅದರ ಅವಲಂಬನ ಮಾಡುವುದಿದೆ. ಎಷ್ಟು ಸ್ವದ್ರವ್ಯದ ಅವಲಂಬನ ತೆಗೆದುಕೊಳ್ಳುತ್ತದೆ ಅಷ್ಟು ರಾಗವಾಗುವುದಿಲ್ಲ. ಹೇಗೆ ಹೇಗೆ ಸ್ವದ್ರವ್ಯದ ಅವಲಂಬನವು ವೃದ್ಧಿಸುತ್ತ ಹೋಗುತ್ತದೆ ಹಾಗೆ ಹಾಗೆ ರಾಗವು ಬಿಡುತ್ತ ಹೋಗುತ್ತದೆ, ಆದರೆ ಮೊದಲು ಸ್ವಭಾವದ ದೃಷ್ಟಿಯಾಗಬೇಕಾಗುವುದು. ಶಾಸ್ತ್ರಗಳನ್ನು ಬಲ್ಲವನಾಗಿದ್ದರೂ ಕೂಡ ಒಂದುವೇಳೆ ರಾಗದಿಂದ ಕಲ್ಯಾಣವಾಗುತ್ತದೆಯೆಂದು ಮನ್ನಿಸುತ್ತಿದ್ದರೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಯಾರು ಅಂತರಂಗದಲ್ಲಿ ಸ್ವದ್ರವ್ಯದ ದೃಷ್ಟಿಮಾಡಿ ಅದರ ಅವಲಂಬನ ತೆಗೆದುಕೊಂಡಿದ್ದಾರೆ ಅವರಿಗೆ ಸ್ವಭಾವದ ಆಶ್ರಯದಿಂದ ಮುನಿದಶೆಯು ಪ್ರಕಟವಾಗುತ್ತದೆ. ಮುನಿದಶೆಯಲ್ಲಿ ೨೮ ಮೂಲಗುಣಗಳ ವಿಕಲ್ಪ, ಪಂಚಮಹಾವ್ರತದ ವಿಕಲ್ಪ ಹಾಗೂ ದಿಗಂಬರ ದಶೆಯಿರುತ್ತದೆ, ಆದರೆ ಮುನಿದಶೆಯು ಆ ವಿಕಲ್ಪಗಳ ಆಧಾರದಿಂದ ಆಗುವುದಿಲ್ಲ. ಮುನಿದಶೆಯ ವೀತರಾಗ ಭಾವವಂತೂ ಅಂತರ್ಯದ ಸ್ವಭಾವದ ಆಶ್ರಯದಿಂದಲೇ ಆಗುತ್ತದೆ. ಅಂತರ್ಯದಲ್ಲಿ ಸ್ವಭಾವದ ಆಶ್ರಯದಿಂದ ಯಾರಿಗೆ ಶುದ್ಧತೆಯು ಪ್ರಕಟವಾಗಿಲ್ಲ ಮತ್ತು ದಿಗಂಬರ ಶರೀರ ಹಾಗೂ ಪಂಚಮಹಾವ್ರತದ ವಿಕಲ್ಪ ಮಾಡಿದರೆ ಅದರಿಂದೇನು ಅಂತರ್ಯದಲ್ಲಿ ಮುನಿದಶೆಯಾಗಿ ಹೋಗುವುದಿಲ್ಲ. ವಸ್ತುವಿಲ್ಲದೆ ಮೂಟೆಯಿಂದ ಏನು ಪ್ರಯೋಜನ ? ಜ್ಞಾನಾನಂದ ಚೈತನ್ಯತತ್ತ್ವದ ಅರಿವಿಲ್ಲದೆ ಬೇಕಾದಷ್ಟು ಶುಭರಾಗ ಮಾಡಿದರೂ ಕೂಡ ಅದರಿಂದೇನು ವ್ಯವಹಾರದಿಂದ ಕೂಡ ಮೋಕ್ಷಮಾರ್ಗವಾಗುವುದಿಲ್ಲ. ಇಲ್ಲಿಯಂತೂ ಮೋಕ್ಷಮಾರ್ಗದ ಮಾತಿದೆ. ಸಾಧಕನಿಗೆ ಅಂತರ್ಯದಲ್ಲಿ ರಾಗರಹಿತ ಚೈತನ್ಯ ಸ್ವಭಾವದ ನಿಶ್ಚಯ ಶ್ರದ್ಧೆ-ಜ್ಞಾನವಾಗಿದೆ. ಅದರಲ್ಲಿ ಏಕಾಗ್ರತೆಯು ಕೂಡ ಆಗಿದೆ. ಕ್ಷಣ ಕ್ಷಣಕ್ಕೆ ಅಂತರ್ಯದೊಳಗೆ ಶಾಂತಿಯ ಸಾಗರದಲ್ಲಿ ಮುಳುಗಿಹೋಗುತ್ತಾನೆ, ಆದರೆ ಸಾಧಕನ ದಶೆಯಲ್ಲಿ ಇನ್ನೂ ಮಧ್ಯದಲ್ಲಿ ಬಾಹ್ಯಭಾವವು ಕೂಡ ಇದೆ, ಅದು ಬಂಧದ ಕಾರಣವಿದೆ. ಎಲ್ಲಿಯವರೆಗೆ ಸರ್ವತ್ರ ಶುದ್ಧವೀತರಾಗ ಭಾವದಿಂದ ಸ್ವಭಾವವನ್ನು ಅನುಭವಿಸುವುದಿಲ್ಲ ಅಲ್ಲಿಯವರೆಗೆ ಮುಕ್ತಿಯಾಗುವುದಿಲ್ಲ. ಆದುದರಿಂದ ಶುದ್ಧಸ್ವರೂಪದ ಪ್ರಾಪ್ತಿಯ ಸಲುವಾಗಿ ಅರಹಂತ ಮೊದಲಾದವರ ಕುರಿತು ಇರುವ ಭಕ್ತಿಯ ರಾಗವನ್ನು ಕೂಡ ಬಿಟ್ಟುಕೊಡಬೇಕಾಗುವುದು. ರಾಗವು ಬಿಟ್ಟುಹೋಗದಿದ್ದರೆ ಮೊದಲು ಅಂಥ ದೃಷ್ಟಿಯನ್ನಂತೂ ಮಾಡಬೇಕಾಗುವುದು. ಅಂಥ ದೃಷ್ಟಿಯನ್ನು ಮಾಡದಿದ್ದರೆ ಮತ್ತು ರಾಗವನ್ನು ಮೋಕ್ಷಮಾರ್ಗವೆಂದು ಮನ್ನಿಸಿದರೆ ಅವನು ಮಿಥ್ಯಾದೃಷ್ಟಿಯಿದ್ದಾನೆ ಅವನಿಗಂತೂ ಕಿಂಚಿತ್ ಧರ್ಮವಾಗುವುದಿಲ್ಲ.

ಯಾವನಿಗೆ ರಾಗದಲ್ಲಿ ಧರ್ಮಬುದ್ಧಿಯಿದೆ, ಆ ಜೀವನಿಗೆ ರಾಗದ ಅಂಶವು ಕೂಡ ಪರಂಪರೆಯಿಂದ ಅನರ್ಥದ ಕಾರಣವಿದೆಯೆಂಬುದನ್ನು ಈಗ ಹೇಳುತ್ತಾರೆ. ರಾಗವು ಪರಂಪರೆಯಿಂದ ಮೋಕ್ಷದ ಕಾರಣವಿದೆಯೆಂದು

ಅಜ್ಞಾನಿಯು ಮನ್ನಿಸುತ್ತಾನೆ, ಆದರೆ ಇಲ್ಲಿಯಂತೂ ಆಚಾರ್ಯ ಭಗವಂತರು ನಿನ್ನ ರಾಗವಂತೂ ಪರಂಪರೆಯಿಂದ ಅನರ್ಥದ ಕಾರಣವಿದೆಯೆಂದು ಹೇಳುತ್ತಾರೆ -

**ಧರಿದುಂ ಜಸ್ಸ ಣ ಸಕ್ಕಂ ಚಿತ್ತುಬ್ಭಾಮಂ ವಿಣಾ ದು ಅಪ್ಪಾಣಂ ।**
**ರೋಧೋ ತಸ್ಸಣ ವಿಜ್ಜದಿ ಸುಹಾಸುಹಕದಸ್ಸ ಕಮ್ಮಸ್ಸ ॥೧೬೮॥**

**ಯಾವನಿಗೆ ತನ್ನನು ಚಿತ್ತದ ಭ್ರಮಣವಿಲ್ಲದೆಯಿಡುವ ಸಾಧ್ಯತೆಯಿಲ್ಲ ।**
**ಅವನಿಗೆ ಶುಭವಿಲ್ಲವೆ ಅಶುಭ ಕರ್ಮಗಳ ನಿರೋಧವಿರುವುದಿಲ್ಲ ॥೧೬೮॥**

ರಾಗದ ಅವಲಂಬನದಿಂದ ರಾಗದ ನಾಶವಾಗುವುದಿಲ್ಲ, ಆದರೆ ರಾಗರಹಿತ ಜ್ಞಾನಾನಂದ ಧ್ರುವ ಸ್ವಭಾವದಲ್ಲಿ ನಿಮಗ್ನವಾದ ಮೇಲೆ ರಾಗದ ನಾಶವಾಗಿ ಹೋಗುತ್ತದೆ. ಜ್ಞಾನಾನಂದ ಸ್ವಭಾವಿಯಾದ ಆತ್ಮನ ಅವಲಂಬನದ ಹೊರತಾಗಿ ರಾಗದ ನಾಶವಾಗುವುದಿಲ್ಲ. ಶುಭರಾಗದ ಅವಲಂಬನದಿಂದ ಯಾವ ಧರ್ಮವಾಗುವುದಿಲ್ಲ. ರಾಗದ ಅವಲಂಬನದಿಂದ ಯಾರು ಲಾಭ ಮನ್ನಿಸುತ್ತಾರೆ ಅವರ ಆ ಮಿಥ್ಯಾಮನ್ನಣೆಯು ಮಹಾ ಅನರ್ಥದ ಕಾರಣವಿದೆ.

**ಪ್ರಶ್ನೆ :-** ಇಂಥ ಮಾತು ಕೇಳುವುದರಿಂದ ಜೀವನಿಗೆ ಹಾನಿಯಾಗುವುದಿಲ್ಲವೇನು ?

**ಉತ್ತರ :-** ಮೊದಲಂತೂ ಯಾರ ಕಾರಣದಿಂದ ಯಾರಿಗೂ ಹಾನಿಯಾಗುವುದಿಲ್ಲವೆಂಬ ಮಾತು ಇದೆ ಮತ್ತು ಎರಡನೆಯ ಮಾತೆಂದರೆ ಇದು ವಸ್ತುಸ್ವರೂಪದ ನಿಜವಾದ ಮಾತು ಇದೆ. ಸತ್ಯವು ಯಾರಿಗೂ ಹಾನಿಯ ಕಾರಣವಾಗುವುದಿಲ್ಲ. ಸಹೋದರನೇ ! ನಿನ್ನ ಕಲ್ಯಾಣವು ಯಾವುದರಲ್ಲಿದೆ, ಯಾವುದರ ಅವಲಂಬನ ತೆಗೆದುಕೊಳ್ಳುವುದರಿಂದ ನಿನ್ನ ಕಲ್ಯಾಣವಾಗುವುದೆಂಬುದರ ವಿಚಾರವನ್ನಾದರೂ ಮಾಡು. ನೀನು ಚಿದಾನಂದ ಜ್ಞಾನತತ್ತ್ವನಿರುವೆ. ನಿನ್ನ ಸ್ವಭಾವದೊಳಗಿಂದ ರಾಗದ ಉತ್ಪತ್ತಿಯಾಗುವುದಿಲ್ಲ. ರಾಗದಲ್ಲಿ ನಿನ್ನ ಜ್ಞಾನದ ವಿಸ್ತಾರವು ಹರಡುವುದಿಲ್ಲ, ಆದರೆ ಅದರಲ್ಲಿಯಂತೂ ಮನಸ್ಸಿನ ವಿಸ್ತಾರವಿದೆ. ಜ್ಞಾನದಲ್ಲಿ ಏಕಾಗ್ರವಾಗುವುದರಿಂದ ರಾಗದ ಉತ್ಪತ್ತಿಯಾಗುವುದಿಲ್ಲ, ಆದರೆ ಮನಸ್ಸಿನ ಅವಲಂಬನದಿಂದ ರಾಗದ ಉತ್ಪತ್ತಿಯಾಗುತ್ತದೆ. ಆ ರಾಗದ ನಾಶವು ಒಂದು ಜ್ಞಾನಸ್ವಭಾವದ ಅವಲಂಬನದಿಂದಲೇ ಆಗುತ್ತದೆ. ಆತ್ಮನ ಅವಲಂಬನದಿಂದ ರಾಗವಾಗುವುದಿಲ್ಲ ಮತ್ತು ಪರದ ಅವಲಂಬನದಿಂದ ರಾಗವಾಗದೆ ಇರುವುದಿಲ್ಲ. ಅದರಂತೆ ಆತ್ಮನ ಅವಲಂಬನ ತೆಗೆದುಕೊಂಡಲ್ಲದೆ ರಾಗದ ನಾಶವಾಗುವುದಿಲ್ಲ. ಪರದ ಅವಲಂಬನದಿಂದ ರಾಗದ ಉತ್ಪತ್ತಿಯಾಗದೆ ಇರುವುದಿಲ್ಲ.

೧೬೭ನೆಯ ಗಾಥೆಯಲ್ಲಿ ಹೇಳಿರುವುದೇನೆಂದರೆ ಆತ್ಮನಿಗೆ ಪರಸಮಯದಲ್ಲಿ ಪ್ರವೃತ್ತಿಯಾಗುತ್ತದೆ ಅದರ ಕಾರಣವು ರಾಗಭಾವವೇ ಇದೆ, ಪರದ್ರವ್ಯವು ಅದರ ಕಾರಣವಿಲ್ಲ. ಒಂದೇ ಕಾರಣವಿದೆ. ಕರ್ಮ ಮೊದಲಾದ ಯಾವ ಬೇರೆ ಕಾರಣವಿಲ್ಲ. ಅದರಂತೆ ಇಲ್ಲಿ ಕೂಡ ಆತ್ಮನನ್ನು ಹೊರತುಪಡಿಸಿ ಆ ರಾಗದ ನಾಶದ ಕಾರಣವು ಬೇರೆ ಯಾವುದೂ ಇಲ್ಲವೆಂದು ಹೇಳುತ್ತಿದ್ದಾರೆ. ಆತ್ಮನ ಜ್ಞಾನಸ್ವಭಾವದ ಅವಲಂಬನದಿಂದಲೇ ರಾಗದ ನಾಶವಾಗುತ್ತದೆ. ರಾಗ ಅಥವಾ ವೀತರಾಗತೆ ಅವೆರಡೂ ಜೀವದ ತನ್ನ ಚಾರಿತ್ರ ಗುಣದ ಪರ್ಯಾಯಗಳಿವೆ. ಆ ಪರ್ಯಾಯಗಳು ಪರದಿಂದ ನಿರಪೇಕ್ಷವಿವೆ. ಇಂಥ ನಿರಪೇಕ್ಷತೆಯ ಜ್ಞಾನಪೂರ್ವಕ ಕರ್ಮವನ್ನು ಅದರ ನಿಮಿತ್ತವೆಂದು ಹೇಳುವುದು ಸಾಪೇಕ್ಷತೆಯಿದೆ. ಜೀವದ ಔದಯಿಕ ಮೊದಲಾದ ಭಾವಗಳಲ್ಲಿ ಸ್ವಯಂ ಜೀವದ್ದೇ ಷಟ್‌ಕಾರಕಗಳಿವೆ ಮತ್ತು ಪುದ್ಗಲ ಕರ್ಮದ ಪರ್ಯಾಯಗಳಲ್ಲಿ ಸ್ವಯಂ ಪುದ್ಗಲದವೇ ಷಟ್‌ಕಾರಕಗಳಿವೆ.

ಆತ್ಮನು ಜ್ಞಾನ-ದರ್ಶನ ಸ್ವಭಾವಿಯಿದ್ದಾನೆ. ಆ ಸ್ವಭಾವದಲ್ಲಿ ಒಂದುವೇಳೆ ಜ್ಞಾನದ ಏಕಾಗ್ರತೆ ಮಾಡಿದರೆ ರಾಗವಾಗುವುದಿಲ್ಲ, ಆದರೆ ಜ್ಞಾನವನ್ನು ಪರದ ಕಡೆಗೆ ಉನ್ಮುಖ ಮಾಡಿ ಅಲ್ಲಿ ಏಕಾಗ್ರ ಮಾಡಿದ್ದಾನೆ. ಎಂದರೆ ಮನಸ್ಸಿನ ಜತೆಯ ಏಕತೆಯೇ-ಮಿಲನವೇ ರಾಗದ ಕಾರಣವಿದೆ. ಒಂದು ವೇಳೆ ಆತ್ಮನು ತನ್ನ ಸ್ವಭಾವದ ಅವಲಂಬನ ತೆಗೆದುಕೊಂಡರೆ ಜ್ಞಾನ-ದರ್ಶನದ ವಿಸ್ತಾರವಾಗುತ್ತದೆ ಮತ್ತು ಪರದ ಅವಲಂಬನ ತೆಗೆದುಕೊಂಡರೆ ರಾಗದ ವಿಸ್ತಾರವಾಗುತ್ತದೆ, ಆದರೆ ಅವೆರಡರಲ್ಲೂ ಸ್ವಯಂ ತಾನೇ ಕರ್ತೃ ಇದ್ದಾನೆ. ನಿಗೋದದ ಜೀವವು ಕೂಡ ತನ್ನದೇ ಆದ ಭಾವಕಲಂಕದ ಪ್ರಚುರತೆಯಿಂದಲೇ ನಿಗೋದದಲ್ಲಿ ಉಳಿಯುತ್ತದೆಯೆಂದು ಗೊಮ್ಮಟಸಾರದಲ್ಲಿ ಕೂಡ ಹೇಳಿದೆ. (ಬೃಹತ್ ಟೀಕೆ ಪುಟ ೪೪೧) ಜ್ಞಾನಸ್ವಭಾವದಲ್ಲಿ ಒಂದುಗೂಡುವುದಿಲ್ಲ ಮತ್ತು ಚಿತ್ತ ಎಂದರೆ ಮನಸ್ಸಿನ ಜತೆ ಒಂದುಗೂಡಿಸಿದರೆ ರಾಗದ ಉತ್ಪತ್ತಿಯಾಗುತ್ತದೆ. ಸ್ವಭಾವದಲ್ಲಿ ಒಂದುಗೂಡಿಸಿದರೆ ರಾಗದ ಉತ್ಪತ್ತಿಯಾಗುವುದಿಲ್ಲ. ಪರದ ಆಶ್ರಯದಿಂದ ರಾಗವಾಗುತ್ತದೆ ಅದು ಸಂಸಾರದ ಕಾರಣವಿದೆ ಮತ್ತು ಸ್ವಭಾವದ ಆಶ್ರಯ ಮಾಡಿದ ಮೇಲೆ ವೀತರಾಗತೆಯಾಗುತ್ತದೆ ಅದು ಮೋಕ್ಷಮಾರ್ಗವಿದೆ.

ಇದು ಮೋಕ್ಷಮಾರ್ಗದ ವರ್ಣನೆಯಿದೆ. ಜ್ಞಾನಸ್ವಭಾವಿಯಾದ ಆತ್ಮನ ಶ್ರದ್ಧೆ-ಜ್ಞಾನ ಮತ್ತು ರಮಣತೆಯು ಮೋಕ್ಷಮಾರ್ಗವಿದೆ. ನೋಡಿರಿ ! ಈ ಶರೀರವಂತೂ ಜಡ-ಪುದ್ಗಲವಿದೆ. ಅದರಲ್ಲಿ ಯಾವ ತಿಳಿದುಕೊಳ್ಳುವ-ನೋಡುವ ಸ್ವಭಾವವಿಲ್ಲ. ತಿಳಿಯುವ-ನೋಡುವ ಸ್ವಭಾವವಂತೂ ಆತ್ಮನಲ್ಲಿ ಇದೆ. ಆ ಜ್ಞಾನ-ದರ್ಶನ ಸ್ವಭಾವಿಯಾದ ಆತ್ಮನಲ್ಲಿ ಲೀನತೆ ಮಾಡುವುದು ಮೋಕ್ಷಮಾರ್ಗವಿದೆ ಮತ್ತು ಆತ್ಮನನ್ನು ಹೊರತುಪಡಿಸಿ ಅರಹಂತ-ಸಿದ್ಧ ಮೊದಲಾದವರ ಕುರಿತು ಭಕ್ತಿಯ ಭಾವವು ಶುಭರಾಗವಿದೆ, ಅದು ಬಂಧದ ಕಾರಣವಿದೆ. ರಾಗವು ಆತ್ಮನ ಸ್ವಭಾವವಿಲ್ಲ. ಎಷ್ಟು ಜ್ಞಾನವಿದೆ ಅಷ್ಟೇ ಆತ್ಮನಿದ್ದಾನೆ. ಆ ಸ್ವಭಾವದಲ್ಲಿ ಲೀನತೆಯು ಬಿಟ್ಟುಹೋಗಿ ಎಷ್ಟು ಪರದ್ರವ್ಯದ ಕಡೆಗೆ ಪ್ರವೃತ್ತಿಯಾಗುತ್ತದೆ ಅದು ರಾಗವಿದೆ, ಅದೇನು ಮೋಕ್ಷಮಾರ್ಗವಿಲ್ಲ. ಧರ್ಮ ಮಾಡಬಯಸುವವನು 'ಧರ್ಮವು ಏನಿದೆ'ಯೆಂಬುದನ್ನಾದರೂ ತಿಳಿದುಕೊಳ್ಳಬೇಕಲ್ಲವೇ ? ಆತ್ಮನು ವಸ್ತುವಿದ್ದಾನೆ. ಅವನ ನಿರಂತರದ ಸ್ವಭಾವವಂತೂ ಜ್ಞಾನ-ದರ್ಶನವಿದೆ. ಅವನ ಪ್ರತೀತಿ ಮತ್ತು ಜ್ಞಾನ ಮಾಡಿಕೊಂಡು ಅವನಲ್ಲಿ ಲೀನವಾಗುವುದು ಧರ್ಮವಿದೆ. ಇದರಲ್ಲಿ ತಿಳಿದುಬರದಂಥ ವಿಚಾರವೇನಿದೆ ? ತಿಳಿದುಕೊಳ್ಳಬೇಕೆಂದರೆ ಎಲ್ಲವೂ ತಿಳಿದುಬರುವಂತಿದೆ. ಆತ್ಮನ ಸ್ವಭಾವದ ಅಂತರ್ಮುಖವಾಗಿ ಭಾವನೆ ಮಾಡುವುದು ವೀತರಾಗಭಾವವಿದೆ. ಸ್ವದ್ರವ್ಯದ ಅಂತರ್ಮುಖತೆಯು ಬಿಟ್ಟುಹೋಗಿ ಪರದ್ರವ್ಯದ ಅವಲಂಬನದಿಂದ ಯಾವ ಭಾವವಾಗುತ್ತದೆ ಅದರಲ್ಲಿಯಂತೂ ರಾಗದ ವಿಸ್ತಾರವಾಗುತ್ತದೆ. ಒಂದುವೇಳೆ ಭಕ್ತಿ ಮೊದಲಾದವುಗಳ ರಾಗವನ್ನು ಧರ್ಮವೆಂದು ಮನ್ನಿಸಿದರೆ ಅವನು ಮೋಕ್ಷಮಾರ್ಗವನ್ನು ತಿಳಿಯುವುದಿಲ್ಲ. ಅದರಂತೆ ಭಗವಂತರ ಭಕ್ತಿ ಮೊದಲಾದುವನ್ನು ಸರ್ವಥಾ ಮನ್ನಿಸದಿದ್ದರೆ ಅವನು ಕೂಡ ಸಾಧಕದಶೆಯನ್ನು ತಿಳಿಯುವುದಿಲ್ಲ. ಸಾಧಕದಶೆಯಲ್ಲಿ ಭಕ್ತಿ ಮೊದಲಾದ ಶುಭಭಾವಗಳಿರುತ್ತವೆ, ಆದರೆ ಅದು ಮೋಕ್ಷಮಾರ್ಗವಿಲ್ಲ.

**'ಜ್ಞಾನಕ್ರಿಯಾಭ್ಯಾಂ ಮೋಕ್ಷಃ'** ಎಂದು ಹೇಳಲಾಗುತ್ತದೆ, ಇದರಲ್ಲಿ ಯಾವ ಕ್ರಿಯೆಯಿದೆ ? ಶರೀರದ ಕ್ರಿಯೆಯಂತೂ ಜಡದ್ದಿದೆ ಮತ್ತು ಆಂತರ್ಯದಲ್ಲಿ ವ್ರತ-ತಪ ಮೊದಲಾದವುಗಳ ವಿಕಲ್ಪವಾಗುತ್ತದೆ ಅದುಕೂಡ ರಾಗದ ಕ್ರಿಯೆಯಿದೆ ಅದು ಕೂಡ ಮೋಕ್ಷದ ಕಾರಣವಿಲ್ಲ ಆದರೆ ಜ್ಞಾನಸ್ವಭಾವಿಯಾದ ಆತ್ಮನ ಜ್ಞಾನ ಮಾಡಿಕೊಂಡು ಅವನಲ್ಲಿ ಏಕಾಗ್ರತೆಯ ರಾಗರಹಿತ ಕ್ರಿಯೆಯು ಮೋಕ್ಷದ ಕಾರಣವಿದೆ. ಬಾಹ್ಯದ ಕ್ರಿಯೆಯನ್ನು ಅಥವಾ ರಾಗದ ಕ್ರಿಯೆಗಳನ್ನು ಅಜ್ಞಾನಿಗಳು ಮೋಕ್ಷದ ಕಾರಣವೆಂದು ಮನ್ನಿಸುತ್ತಾರೆ, ಆದರೆ ಹಾಗೆ ಇಲ್ಲ. ಆತ್ಮನ ಜ್ಞಾನ ಮತ್ತು ಅವನಲ್ಲಿ ರಾಗರಹಿತ ಸ್ಥಿರತೆಯ ಕ್ರಿಯೆಯು ಜ್ಞಾನಕ್ರಿಯೆಯಿದೆ. ಅದು ಮೋಕ್ಷದ ಕಾರಣವಿದೆ, ಇದು ವೀತರಾಗ ವಾಣಿಯಿದೆ. ವೀತರಾಗ

ಭಗವಂತರು ನಮ್ಮ ಕುರಿತಾದ ಭಕ್ತಿಯ ಭಾವವು ಕೂಡ ನಿನಗೆ ಬಂಧದ ಕಾರಣವಿದೆಯೆಂದು ಹೇಳುತ್ತಾರೆ. ದೇವ-ಶಾಸ್ತ್ರ-ಗುರುಗಳ ಪೂಜೆ-ಭಕ್ತಿ-ಪ್ರಭಾವನೆ ಇವೇ ಮೊದಲಾದವುಗಳ ಭಾವವು ಧರ್ಮಾತ್ಮನಿಗೆ ಬರದೆ ಇರುವುದಿಲ್ಲ, ಆದರೆ ಅವನು ಅವನ್ನು ಬಂಧದ ಕಾರಣವೆಂದು ತಿಳಿಯುತ್ತಾನೆ. ಕ್ಷಾಯಿಕ ಸಮ್ಯಗ್ದೃಷ್ಟಿಯಾದ ಇಂದ್ರನು ಏಕಭವಾವತಾರಿಯಿದ್ದರೂ ಅವನಿಗೆ ಕೂಡ ಭಕ್ತಿಯ ಭಾವವು ಬಂದ ಮೇಲೆ ನರ್ತಿಸುತ್ತಾನೆ. ಮೊದಲನೆಯ ದೇವಲೋಕದ ಶಕ್ರೇಂದ್ರನಿದ್ದಾನೆ, ಅವನು ಏಕಭವಾವತಾರಿಯಿದ್ದಾನೆ, ಮನುಷ್ಯನಾಗಿ ಮೋಕ್ಷ ಪಡೆಯುವವನಿದ್ದಾನೆ. ಆದಾಗ್ಯೂ ತೀರ್ಥಂಕರ ಶಿಶುವಿನ ಜನ್ಮಾಭಿಷೇಕದಂಥ ಪ್ರಸಂಗದಲ್ಲಿ ಭಕ್ತಿಯಿಂದ ನೃತ್ಯಮಾಡುತ್ತಾನೆ. ಆ ಸಮಯದಲ್ಲಿ ಅಂಥರಾಗವು ಬಾರದೇ ಇರುವುದಿಲ್ಲ. ಧರ್ಮಾತ್ಮನಿಗೆ ಸ್ವಭಾವದ ಪ್ರತೀತಿಯಾದನಂತರ ರಾಗವು ಆಗುವುದೇ ಇಲ್ಲ ಎಂಬುದಾಗಿಲ್ಲ. ರಾಗದ ಕಾಲದಲ್ಲಿ ರಾಗವಿರುತ್ತದೆ, ಸಂಯೋಗದ ಕಾರಣದಿಂದ ಸಂಯೋಗವಿರುತ್ತದೆ. ಕ್ಷಯೋಪಶಮಭಾವದ ಯೋಗ್ಯತೆಯ ಪ್ರಮಾಣದಲ್ಲಿ ಜ್ಞಾನವಿರುತ್ತದೆ. ಇವೆಲ್ಲವು ಇದ್ದರೂ ಕೂಡ ಧರ್ಮಾತ್ಮ ಜೀವದ ರುಚಿಯು ಸ್ವಭಾವದ ಮೇಲೆ ಇರುತ್ತದೆ. ರುಚಿ ಬದಲಿಸುವ ಮಾತು ಇದೆ. ಧರ್ಮೀ ಜೀವನಿಗೆ ಶುಭರಾಗ ಬರುತ್ತದೆ, ಆದರೆ ಅದನ್ನು ಅವನು ಮೋಕ್ಷದ ಕಾರಣವೆಂದು ಮನ್ನಿಸುವುದಿಲ್ಲ, ಅವನಿಗೆ ಅದರ ರುಚಿಯಿರುವುದಿಲ್ಲ. ಶುಭರಾಗದ ಸಮಯದಲ್ಲಿ ಕೂಡ ಘಾತಿ-ಅಘಾತಿ ಎರಡೂ ಜಾತಿಯ ಕರ್ಮಗಳು ಕಟ್ಟುತ್ತವೆ, ಅದರಲ್ಲಿ ಘಾತಿ ಕರ್ಮಗಳು ಪಾಪವಿವೆ. ಆದುದರಿಂದ ಶುಭರಾಗದಿಂದ ಕೂಡ ಶುಭ-ಅಶುಭ ಎರಡರ ಆಸ್ರವವಾಗುತ್ತದೆ. ಇಲ್ಲಿ ಮಿಥ್ಯಾದೃಷ್ಟಿಯದಂತೂ ಮಾತೇ ಇಲ್ಲ. ಆದರೆ ಸಮ್ಯಗ್ದೃಷ್ಟಿ ಜೀವನು ರಾಗದಿಂದ ಧರ್ಮವಾಗುತ್ತದೆಂದು ಮನ್ನಿಸುವುದಿಲ್ಲ. ಅವನಿಗೆ ಕೂಡ ಶುಭಯೋಗದ ಸಮಯದಲ್ಲಿ ಘಾತಿ-ಅಘಾತಿ ಕರ್ಮಗಳು ಕಟ್ಟುತ್ತವೆ. ಎಷ್ಟು ಪರದ್ರವ್ಯದ ಕಡೆಗೆ ಪ್ರವೃತ್ತಿಯಿರುವಂಥ ಭಾವವಿದೆ ಅದರಿಂದ ಪುಣ್ಯ ಮತ್ತು ಪಾಪಗಳೆರಡರ ಆಸ್ರವವಾಗುತ್ತದೆ. ಶುಭರಾಗದ ಸಮಯದಲ್ಲಿ ಸಾತಾವೇದನೀಯದ ಜತೆ ಜ್ಞಾನಾವರಣೀಯಾದಿಗಳದ್ದು ಕೂಡ ಬಂಧವಾಗುತ್ತದೆ. ರಾಗದಿಂದ ಚಾರಿತ್ರಮೋಹದ ಬಂಧವು ಕೂಡ ಆಗುತ್ತದೆಯೆಂದ ಮೇಲೆ ಚಾರಿತ್ರಮೋಹವು ಪಾಪವಿದೆಯೋ ಅಥವಾ ಪುಣ್ಯವಿದೆಯೋ ? ಅದು ಪಾಪ ಪ್ರಕೃತಿಯಿದೆ. ಆದುದರಿಂದ ಶುಭರಾಗದಿಂದ ಪಾಪ ಮತ್ತು ಪುಣ್ಯ ಇವೆರಡರ ಬಂಧವಾಗುತ್ತದೆ. ಶುಭರಾಗವೇನು ಕೇವಲ ಪುಣ್ಯ ಬಂಧದ ಕಾರಣವಿಲ್ಲ, ಆದರೆ ಜತೆಯಲ್ಲಿ ಪಾಪ ಬಂಧದ್ದೂ ಕೂಡ ಕಾರಣವಿದೆ. ಇಂಥ ಶುಭರಾಗವನ್ನು ಯಾವನು ಮೋಕ್ಷದ ಕಾರಣವೆಂದು ಮನ್ನಿಸುತ್ತಾನೆ ಅವನಿಗೆ ತನ್ನ ಆತ್ಮನ ಸ್ವಭಾವದ ಅರಿವೇ ಇರುವುದಿಲ್ಲ. ಅವನಿಗೆ ಸಮ್ಯಗ್ದರ್ಶನದ ಭೂಮಿಕೆಯೇ ಇಲ್ಲವೆಂದ ಮೇಲೆ ಚಾರಿತ್ರರೂಪದ ವೃಕ್ಷವು ಎಲ್ಲಿಂದ ಉತ್ಪನ್ನವಾಗುವುದು ?

'ಸಮ್ಯಗ್ದರ್ಶನ' ಎಂದರೆ ಒಂದು ಸಮಯದಲ್ಲಿ ಪೂರ್ಣಶಕ್ತಿಯ ಭಂಡಾರನಾದಂಥ ಕಾರಣಪರಮಾತ್ಮನ ಪ್ರತೀತಿಯಿದೆ. ಆ ಕಾರಣಪರಮಾತ್ಮನ ಅವಲಂಬನದಿಂದಲೇ ಕಾರ್ಯಪರಮಾತ್ಮತನವು ಪ್ರಕಟವಾಗುತ್ತದೆ. ಎಲ್ಲಿ ಕಾರಣಪರಮಾತ್ಮನನ್ನು ಸ್ವೀಕರಿಸಲಾಗುವುದು ಅಲ್ಲಿ ಅವನ ಅವಲಂಬನದಿಂದ ಶುದ್ಧ ಕಾರ್ಯವು ಪ್ರಕಟವಾಗುತ್ತದೆ. ನಿಗೋದದಶೆಯಲ್ಲಿ ಯಾವ ಜ್ಞಾನದ ವಿಕಾಸವಿದೆ ಅದೇನು ಕಾರಣಪರಮಾತ್ಮನ ಅವಲಂಬನದಿಂದ ಆಗಿರುವ ಕಾರ್ಯವಲ್ಲ. ಒಂದು ಸಮಯದಲ್ಲಿ ಪರಿಪೂರ್ಣ ಕಾರಣಶುದ್ಧ ಜೀವನಿದ್ದಾನೆ ಅವನು ಸಮ್ಯಗ್ದರ್ಶನದ ವಿಷಯನಿದ್ದಾನೆ.

ಒಂದು ಸಮಯದಲ್ಲಿ ಅಖಂಡ ಚೈತನ್ಯ ಕಾರಣಪರಮಾತ್ಮನಿದ್ದಾನೆ. ಅಜ್ಞಾನಿಯು ಅವನ ಪ್ರತೀತಿ ಮಾಡದಿರುವುದರಿಂದ ಅವನಿಗೆ ಶುದ್ಧ ಕಾರ್ಯವು ಪ್ರಕಟವಾಗುವುದಿಲ್ಲ. ಓರ್ವ ಸಮ್ಯಗ್ದೃಷ್ಟಿಯೇ ಕಾರಣಪರಮಾತ್ಮನ ಪ್ರತೀತಿ ಮಾಡುತ್ತಾನೆ. ಆಂತರ್ಯದಲ್ಲಿ ಸ್ವಭಾವದ ಭಂಡಾರವಿದೆ. ಅವನ ಮಹಿಮೆಯು ಸಮ್ಯಗ್ದೃಷ್ಟಿಗೆ ವರ್ತಿಸುತ್ತದೆ.

ಬೇಕಾದಂಥ ಸಂಯೋಗಗಳ ಮಧ್ಯದಲ್ಲಿರಲಿ, ಬೇಕಾದ ಕ್ಷೇತ್ರದಲ್ಲಿರಲಿ, ಬೇಕಾದಂಥ ಶುಭ ಅಥವಾ ಅಶುಭ ಭಾವಗಳಲ್ಲಿರಲಿ, ಆದರೆ ಧರ್ಮಾತ್ಮ ಜೀವನ ಆಂತರ್ಯದಲ್ಲಿ ಚೈತನ್ಯಭಗವಾನ ಕಾರಣಪರಮಾತ್ಮನ ಅಭಿರುಚಿಯು ಒಂದಿಷ್ಟೂ ಕಡಿಮೆಯಾಗುವುದಿಲ್ಲ. ಸಾಧಕದಶೆಯಲ್ಲಿ ಮಧ್ಯದೊಳಗೆ ಅನೇಕ ಬಾಧಕಭಾವಗಳಿರುತ್ತವೆ, ಆದರೆ ಧರ್ಮೀ ಜೀವನ ದೃಷ್ಟಿಯೊಳಗಿಂದ ಸ್ವಭಾವದ ಅವಲಂಬನವು ಎಂದೂ ಹಿಂಜರಿಯುವುದಿಲ್ಲ.

ಹನ್ನೆರಡನೆಯ ಗುಣಸ್ಥಾನದಲ್ಲಿ ಕೂಡ ಇನ್ನೂ ಸಾಧಕದಶೆಯಿದೆ. ಅಲ್ಲಿ ಜ್ಞಾನ-ದರ್ಶನ-ವೀರ್ಯಗಳು ಇನ್ನೂ ಅಪೂರ್ಣ ಪರಿಣಮಿಸುತ್ತವೆ ಎಂದರೆ ಪರ್ಯಾಯದಲ್ಲಿ ಭಾವಬಂಧವಿದೆ ಮತ್ತು ಅದರಿಂದ ದ್ರವ್ಯಬಂಧ ಕೂಡ ಇನ್ನೂ ಉಳಿದುಕೊಂಡಿದೆ. ಅಲ್ಲಿ ನವೀನ ದ್ರವ್ಯಬಂಧವಾಗುವುದಿಲ್ಲ, ಆದರೆ ಪೂರ್ವದಲ್ಲಿ ಬಂಧಿಸಿದ ಕರ್ಮಗಳು ಇನ್ನೂ ಉಳಿದುಕೊಂಡಿವೆ. ಭವಬಂಧವು ನಿಂತುಕೊಂಡಿದೆ, ಎಂದರೆ ಇನ್ನೂ ಹನ್ನೆರಡನೆಯ ಗುಣಸ್ಥಾನದಲ್ಲಿರುವಾಗ ಭಾವಮುಕ್ತಿಯಿಲ್ಲ. ನಾಲ್ಕನೆಯ, ಐದನೆಯ, ಆರನೆಯ ಗುಣಸ್ಥಾನಗಳಲ್ಲಿಯಂತೂ ರಾಗವಿರುತ್ತದೆ, ಆ ರಾಗದಿಂದ ಶುಭಾಶುಭ ಆಸ್ರವವಿರುತ್ತದೆ. ಹನ್ನೆರಡನೆಯ ಗುಣಸ್ಥಾನದಲ್ಲಿ ಮೋಹವಿಲ್ಲ, ಎಂದರೆ ನವೀನ ಬಂಧವಾಗುವುದಿಲ್ಲ. ತೀರ್ಥಂಕರದೇವರು ಕೂಡ ಮುನಿದಶೆಯಲ್ಲಿ ಆರನೆಯ ಗುಣಸ್ಥಾನದಲ್ಲಿ ಅವರಿಗೆ ಕೂಡ ರಾಗವಾಗುತ್ತದೆ ಮತ್ತು ಆ ರಾಗದಿಂದ ಶುಭಾಶುಭ ಆಸ್ರವವಾಗುತ್ತಿತ್ತು. ಸಾಧಕನಿಗೆ ಎರಡು ಧಾರೆಗಳಿರುತ್ತವೆ. ಎಷ್ಟು ಸ್ವಭಾವದ ಆಶ್ರಯದಿಂದ ಸಮ್ಯಕ್ ಶ್ರದ್ಧೆ-ಜ್ಞಾನ-ಚಾರಿತ್ರದ ವೀತರಾಗ ಭಾವವು ಪ್ರಕಟವಾಗುತ್ತದೆ ಅಷ್ಟು ಅಬಂಧಭಾವವಿದೆ ಮತ್ತು ಎಷ್ಟು ರಾಗವಿದೆ ಅಷ್ಟು ಬಂಧಭಾವವು ಕೂಡ ಇದೆ. ಮಿಥ್ಯಾದೃಷ್ಟಿಗೆ ಕೇವಲ ಬಂಧಭಾವವೇ ಇರುತ್ತದೆ ಮತ್ತು ಕೇವಲೀ ಪರಮಾತ್ಮರಿಗೆ ಕೇವಲ ಅಬಂಧಭಾವವೇ ಆಗಿ ಹೋಗಿರುತ್ತದೆ. ಸಾಧಕನಿಗೆ ಸ್ವಭಾವದ ಕಡೆಗಿರುವ ಶ್ರೇಣಿಯಿದೆ ಅದು ಮೋಕ್ಷದ ಕಾರಣವಿದೆ. ಅಲ್ಲಿ ಯಾವ ರಾಗವಿರುತ್ತದೆ ಅದು ಬಂಧದ ಕಾರಣವಿದೆ. ಜೀವದ ಯಾವ ರಾಗ-ದ್ವೇಷ-ಮೋಹರೂಪದ ಯಾವ ವಿಭಾವ ಪರಿಣಾಮವಿರುತ್ತದೆ ಅದುವೇ ಸಂಸಾರ ಪರಿಭ್ರಮಣದ ಕಾರಣವಿದೆ ಮತ್ತು ತನ್ನ ಚಿದಾನಂದ ಕಾರಣಪರಮಾತ್ಮನ ಅವಲಂಬನವು ಅದು ಮೋಕ್ಷದ ಕಾರಣವಿದೆ.

ಈಗ ಸಮಸ್ತ ಸಂಕ್ಲೇಶ ಭಾವದ ನಾಶದಿಂದ ಸಿದ್ಧದಶೆಯಾಗುತ್ತದೆಯೆಂದು ಹೇಳುತ್ತಾರೆ -

**ತಮ್ಹಾ ಣಿವ್ವುದಿಕಾಮೋ ಣಿಸ್ಸಂಗೋ ಣಿಮ್ಮಮೋ ಯ ಹವಿಯ ಪುಣೋ ।**
**ಸಿದ್ಧೇಸು ಕುಣದಿ ಭತ್ತಿಂ ಣಿವ್ವಾಣಂ ತೇಣ ಪಪ್ಪೋದಿ ॥೧೬೯॥**

**ಅದರಿಂದ ಮೋಕ್ಷಾರ್ಥಿಯಾದ ಜೀವ ನಿಃಸಂಗಮತ್ತದರಂತೆ ನಿರ್ಮಮನಾಗಿ ।**
**ಸಿದ್ಧರ ಭಕ್ತಿ ಮಾಡುವುದರಿಂದವನು ನಿರ್ವಾಣವನು ಪಡೆಯುವನು ॥೧೬೯॥**

ಮೋಕ್ಷಮಾರ್ಗದಲ್ಲಿ ರಾಗದ ನಿಷೇಧವಿದೆ, ರಾಗವು ಮೋಕ್ಷಮಾರ್ಗವಿಲ್ಲ. ಯಾವ ಭಾವದಿಂದ ತೀರ್ಥಂಕರ ಪ್ರಕೃತಿಯ ಬಂಧವಾಗುತ್ತದೆ ಆ ರಾಗವು ಕೂಡ ಮೋಕ್ಷದ ಕಾರಣವಿಲ್ಲ. ಯಾವಾಗ ಆ ರಾಗವು ಹೊರಟುಹೋಗಿ ಕೇವಲಜ್ಞಾನವು ಪ್ರಕಟವಾಗುತ್ತದೆ ಆಗ ಆ ತೀರ್ಥಂಕರ ಪ್ರಕೃತಿಯು ಉದಯದಲ್ಲಿ ಬರುತ್ತದೆ. ಆದುದರಿಂದ ರಾಗದಿಂದ ಆತ್ಮನಿಗೆ ಲಾಭವಿಲ್ಲ ಮತ್ತು ಈ ಜೀವದ ರಾಗದ ಕಾರಣದಿಂದ ಇತರ ಜೀವಗಳು ಧರ್ಮದ ಪ್ರಾಪ್ತಿ ಮಾಡಿಕೊಳ್ಳುವುದಿಲ್ಲ. ಯಾವನ ಯೋಗ್ಯತೆಯಿರುತ್ತದೆ ಅವನು ತನ್ನ ಪಾತ್ರತೆಯಿಂದ ಧರ್ಮ ಪಡೆಯುತ್ತಾನೆ ಮತ್ತು ಆಗ ಭಗವಂತರ ವಾಣಿಯನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ನನ್ನ ಶಾಂತಿಯು ಆಂತರ್ಯದಲ್ಲಿದೆ. ಎಷ್ಟು ಆಂತರ್ಯದ ಅವಲಂಬನೆ ತೆಗೆದುಕೊಳ್ಳುತ್ತದೆ ಅಷ್ಟೇ ಶಾಂತಿಯಿದೆ. ರಾಗವು ನನ್ನ ಶಾಂತಿಯ ಕಾರಣವಿಲ್ಲವೆಂದು ತಿಳಿದು ಧರ್ಮಿ-ಮೋಕ್ಷಾಭಿಲಾಷೆಯುಳ್ಳ ಜೀವನು ರಾಗವನ್ನು ಬಿಟ್ಟು ಪರಮಾತ್ಮ ಸ್ವಭಾವದ ಭಾವನೆಯಲ್ಲಿ ಲೀನನಾಗುತ್ತಾನೆ.

ಮೋಕ್ಷದ ಅಭಿಲಾಷೆಯಿರುವಂಥ ಜೀವನು ವಿಭಾವದಿಂದ ರಹಿತವಿರುವ ತನ್ನ ಸಿದ್ಧ ಸ್ವಭಾವದಲ್ಲಿ ಸ್ಥಿರವಿದ್ದುಕೊಂಡು ಸ್ವರೂಪದಲ್ಲಿ ಗುಪ್ತನಾಗುತ್ತಾನೆ. ರಾಗ ಮತ್ತು ವಸ್ತ್ರಾದಿಗಳ ಪರಿಗ್ರಹದಿಂದ ರಹಿತನಾಗಿ ಚಿದಾನಂದ ಸ್ವರೂಪದಲ್ಲಿ ನಿಮಗ್ನನಾಗುತ್ತಾನೆ. ಸ್ವರೂಪದಲ್ಲಿ ಶಾಂತಿಯಿದೆ ಮತ್ತು ಬಾಹ್ಯದಲ್ಲಿ ನಿವೃತ್ತಿಯಿರುವಂಥ ಮುನಿದಶೆಯನ್ನು ಪ್ರಕಟಪಡಿಸಿಕೊಂಡು ತನ್ನ ಸಿದ್ಧ ಸದೃಶವಿರುವಂಥ ಸ್ವಭಾವದಲ್ಲಿ ನಿಮಗ್ನನಾಗಿ ತನ್ನ ಸಿದ್ಧದಶೆಯನ್ನು ಪ್ರಕಟಮಾಡಿಕೊಳ್ಳುತ್ತಾನೆ. ಇದು ಸಿದ್ಧದಶೆಯ ಮಾರ್ಗವಿದೆ. ಮುನಿರಾಜರಿಗೆ ಮಧ್ಯದಲ್ಲಿ ವ್ಯವಹಾರ ರತ್ನತ್ರಯದ ವಿಕಲ್ಪವು ಬರುತ್ತದೆ, ಅದನ್ನು ಕೂಡ ಬಿಟ್ಟುಕೊಟ್ಟು ಯಾವಾಗ ವೀತರಾಗ ಭಾವದಿಂದ ಸ್ವರೂಪದಲ್ಲಿ ಸ್ಥಿರನಾಗುತ್ತಾನೆ ಆಗ ಮುಕ್ತನಾಗುವನು. ಮೊದಲು ಬೇಕಾದರೆ ರಾಗವು ಸರ್ವಥಾ ಬಿಟ್ಟುಹೋಗಿರದಿದ್ದರೂ ಕೂಡ ತನ್ನ ಚೈತನ್ಯ ಸಮುದ್ರದಲ್ಲಿ ಲೀನತೆ ಮಾಡುವುದೇ ಮೋಕ್ಷದ ಕಾರಣವಿದೆಯೆಂಬ ದೃಷ್ಟಿಯನ್ನು ಪ್ರಕಟಪಡಿಸಿಕೊಳ್ಳಬೇಕಾಗುವುದು. ಎಷ್ಟು ರಾಗವಾಗುತ್ತದೆ ಅಷ್ಟು ಚಿತ್ತದ ಭ್ರಮಣತೆಯಾಗುತ್ತದೆ. ಒಂದುವೇಳೆ ರಾಗವನ್ನು ಧರ್ಮದ ಕಾರಣವೆಂದು ಮನ್ನಿಸದಿದ್ದರೂ ಕೂಡ ಎಷ್ಟು ರಾಗವಿದೆ ಅಷ್ಟು ಕ್ಷೋಭೆಯಿರುತ್ತದೆ. ಆದುದರಿಂದ ಅದು ಕೂಡ ಚಾರಿತ್ರದ ಭ್ರಮಣತೆಯಿದೆ. ಶುಭ ವಿಕಲ್ಪಗಳು ಬರುತ್ತವೆ ಅದರಲ್ಲಿ ಕೂಡ ಚೈತನ್ಯ ಸಮುದ್ರದ ಸ್ಥಿರತೆಯಲ್ಲಿ ಕ್ಷೋಭೆಯುಂಟಾಗುತ್ತದೆ. ಬಾಹ್ಯಾಂಭ್ಯಂತರಗಳಲ್ಲಿ ನಿರ್ಗ್ರಂಥದಶೆಯಾದ ನಂತರ ಮುನಿ ಅವಸ್ಥೆಯಲ್ಲಿ ಪಂಚಮಹಾವ್ರತದ ಶುಭ ವೃತ್ತಿಯು ಉತ್ಪನ್ನವಾಗುತ್ತದೆ ಅದನ್ನು ಕೂಡ ಬಿಟ್ಟುಕೊಟ್ಟು ಯಾವಾಗ ಸ್ವಭಾವದಲ್ಲಿ ಸ್ಥಿರವಾಗುತ್ತಾನೆ ಆಗ ಸ್ಥಿರದಶೆಯು ಪ್ರಕಟವಾಗುತ್ತದೆ. ವಸ್ತ್ರಾದಿಗಳ ಪರಿಗ್ರಹವಿರುವಲ್ಲಿ ಮುನಿದಶೆಯು ಇರುವುದಿಲ್ಲ. ಮುನಿರಾಜರಿಗೆ ಆಂತರ್ಯದಲ್ಲಿ ಸ್ವಭಾವದ ಅವಲಂಬನದಿಂದ ರಾಗದ ಪ್ರವೃತ್ತಿಯು ಬಿಟ್ಟು ಹೋಗಿರುತ್ತದೆ ಮತ್ತು ಬಾಹ್ಯದಲ್ಲಿ ವಸ್ತ್ರಾದಿಗಳ ಪರಿಗ್ರಹವು ಕೂಡ ಬಿಟ್ಟು ಹೋಗಿರುತ್ತದೆ. ಅನಂತರ ಇಂಥ ಮುನಿದಶೆಯಲ್ಲಿ ಜ್ಞಾಯಕ ಸ್ವರೂಪನಾದ ತನ್ನ ಸಿದ್ಧ ಪರಮಾತ್ಮನಲ್ಲಿ ಲೀನವಾದ ಮೇಲೆ ರಾಗವು ಬಿಟ್ಟುಹೋಗುತ್ತದೆ ಮತ್ತು ಸ್ವಸಮಯದ ಪ್ರಾಪ್ತಿಯಾಗುತ್ತದೆ. ಅದರಂತೆ ಸಮಸ್ತ ಕರ್ಮಗಳ ನಾಶವಾಗಿ ಸಿದ್ಧದಶೆಯು ಪ್ರಕಟವಾಗುತ್ತದೆ. 'ರಾಗವನ್ನು ಬಿಟ್ಟುಬಿಡುವೆ'ನೆಂಬ ಲಕ್ಷ್ಯದಿಂದ ರಾಗವು ಬಿಟ್ಟುಹೋಗುವುದಿಲ್ಲ, ಆದರೆ ಸ್ವಭಾವದ ಅವಲಂಬನ ತೆಗೆದುಕೊಳ್ಳುವುದರಿಂದ ರಾಗದ ಉತ್ಪತ್ತಿಯೇ ಆಗುವುದಿಲ್ಲ. ಇದು ರಾಗವನ್ನು ಬಿಟ್ಟುಕೊಡುವುದರ ನಿಜವಾದ ರೀತಿಯಿರುವುದು. ಶಾಸ್ತ್ರಗಳು 'ಕಷಾಯ'ವನ್ನು ಬಿಟ್ಟುಕೊಡೆಂದು ಹೇಳುತ್ತವೆ. ಇದು ಉಪದೇಶ ವಚನವಿದೆ; ಆದರೆ ಕಷಾಯವು ಹೇಗೆ ಬಿಡುತ್ತದೆಯೆಂದರೆ ಅಕಷಾಯ ಸ್ವಭಾವದಲ್ಲಿ ಸ್ಥಿರತೆ ಮಾಡಿದಮೇಲೆ ಕಷಾಯದ ಉತ್ಪತ್ತಿಯೇ ಆಗುವುದಿಲ್ಲ ಎಲ್ಲಿ ಸ್ವಭಾವದ ಉದ್ಯಮವಿರುತ್ತದೆ ಅಲ್ಲಿ ರಾಗಾದಿ ಭಾವದ ನಾಶಮಾಡಿತೆಂದು ವ್ಯವಹಾರದಿಂದ ಹೇಳಲಾಗುತ್ತದೆ. ನಿಜವಾಗಿ ಸ್ವಭಾವದ ಅವಲಂಬನ ಮಾಡಿ ಅದರಲ್ಲಿ ಸ್ಥಿರವಾದ ಮೇಲೆ ಮೋಕ್ಷದಶೆಯಾಗುತ್ತದೆ. ಎಲ್ಲಿಯವರೆಗೆ ರಾಗದ ಅಂಶವಿರುತ್ತದೆ ಅಲ್ಲಿಯವರೆಗೆ ಮೋಕ್ಷದಶೆಯಾಗುವುದಿಲ್ಲ.

ಮೋಕ್ಷವು ಹೇಗಾಗುತ್ತದೆಯೆಂಬುದರ ಮಾತು ನಡೆಯುತ್ತಿದೆ. ಮೋಕ್ಷವು ಆತ್ಮನ ಪೂರ್ಣ ಶುದ್ಧದಶೆಯಿದೆ. ಆತ್ಮನಲ್ಲಿ ಮೋಕ್ಷವಾಗುವ ಶಕ್ತಿಯು ತ್ರಿಕಾಲವಿದೆ ಆದರೆ ಮೋಕ್ಷದ ಅವಸ್ಥೆಯು ನವೀನ ಪ್ರಕಟವಾಗುತ್ತದೆ. ಆ ಮೋಕ್ಷದಶೆಯು ಎಲ್ಲಿಂದ ಪ್ರಕಟವಾಗುತ್ತದೆ ? ಪರದೊಳಗಿಂದಂತೂ ಆತ್ಮನ ನಿಜವಾದ ಶಾಂತಿಯು ಬರುವಂತಿಲ್ಲ. ಪುಣ್ಯ-ಪಾಪದ ವಿಕಾರದಲ್ಲಿ ಆತ್ಮನ ಶಾಂತಿಯಿಲ್ಲ, ಆತ್ಮನ ಸ್ವಭಾವದಲ್ಲಿ ಶಾಂತಿಯು ತುಂಬಿಕೊಂಡಿದೆ. ಅದರ ಜ್ಞಾನ

ಮಾಡಿಕೊಂಡು ಅದರಲ್ಲಿ ಏಕಾಗ್ರತೆ ಮಾಡುವುದರಿಂದ ಮೋಕ್ಷದಶೆಯು ಪ್ರಕಟವಾಗುತ್ತದೆ. ಅದರಲ್ಲಿ ಆತ್ಮನ ನಿಜವಾದ ಶಾಂತಿಯಿದೆ.

ಯಾವ ಜೀವನಿಗೆ ಮೋಕ್ಷದ ಅಭಿಲಾಷೆಯಿದೆ ಅವನು ಮೊದಲು ಮೋಕ್ಷವೆಂದರೇನು, ಎಂಬುದರ ನಿರ್ಣಯವನ್ನು ಮಾಡಬೇಕಾಗುವುದು. ಮೋಕ್ಷದಶೆಯು ಪರದೊಳಗಿಂದ, ವಿಕಾರದೊಳಗಿಂದ ಅಥವಾ ವರ್ತಮಾನದ ಅಪೂರ್ಣ ಪರ್ಯಾಯದೊಳಗಿಂದ ಬರುವುದಿಲ್ಲ. ಆದರೆ ಆತ್ಮನು ಧ್ರುವ ಆನಂದ ಸ್ವಭಾವಿಯಿದ್ದಾನೆ. ಅವನ ಪ್ರತೀತಿ, ಅವನ ಜ್ಞಾನ ಮತ್ತು ಅವನಲ್ಲಿ ಏಕಾಗ್ರತೆ ಮಾಡುವುದರಿಂದ ಮೋಕ್ಷದಶೆಯು ಪ್ರಕಟವಾಗುತ್ತದೆ. ಮಧ್ಯದೊಳಗೆ ರಾಗವಿರುತ್ತದೆ, ಆದರೆ ಅದೇನು ಮೋಕ್ಷದ ಕಾರಣವಿರುವುದಿಲ್ಲ. ಚಿದಾನಂದಪರಮಾತ್ಮನ ಆಶ್ರಯದಲ್ಲಿ ಬರುವುದರಿಂದ-ಅವನಲ್ಲಿ ನಿಮಗ್ನವಾಗುವುದರಿಂದ ಯಾವಾಗ ಆತ್ಮನಿಗೆ ರಾಗದ ಪ್ರವೃತ್ತಿಯು ಸರ್ವಥಾ ಹೊರಟುಹೋಗುತ್ತದೆ ಆಗ ಆತ್ಮನಿಗೆ ಮೋಕ್ಷವಾಗುತ್ತದೆ. ಪರವನ್ನು ದೂರ ಮಾಡುವ ಉದ್ಯಮವಂತೂ ಧರ್ಮಾತ್ಮನಿಗೆ ಇರುವುದಿಲ್ಲ ಮತ್ತು ರಾಗವನ್ನು ಬಿಟ್ಟುಕೊಡುವಲ್ಲಿ ಕೂಡ ಧರ್ಮಾತ್ಮನ ಉದ್ಯಮವಿರುವುದಿಲ್ಲ. ಧರ್ಮಾತ್ಮನ ನಿಜವಾದ ಉದ್ಯಮವಂತೂ ತನ್ನ ಚಿದಾನಂದ ಸ್ವಭಾವದಲ್ಲಿ ಇರುತ್ತದೆ. ಸ್ವಭಾವದಲ್ಲಿ ಏಕಾಗ್ರತೆಯ ಉದ್ಯಮ ಮಾಡುತ್ತಿರುವಂತೆ ರಾಗದ ಉತ್ಪತ್ತಿಯೇ ಆಗುವುದಿಲ್ಲ ಹೀಗೆ ರಾಗವು ನಿಂತುಹೋಗುತ್ತದೆ.

ಚಿನ್ನದಿಂದ ಕಡಗ ಮಾಡುವುದಿದ್ದರೆ ಯಾವುದರೊಳಗಿಂದ ಆಗುತ್ತದೆ ? ಅದು ಅಡಿಗಲ್ಲಿನಿಂದ, ಸುತ್ತಿಗೆಯಿಂದ ಅಥವಾ ಅಕ್ಕಸಾಲಿಗನಿಂದ ಆಗುವುದಿಲ್ಲ, ಆದರೆ ಧ್ರುವವಿರುವಂಥ ಚಿನ್ನದೊಳಗಿಂದ ಎಂದರೆ ಕುಂಡಲದ ವ್ಯಯವಾಗಿ ಕಡಗದ ಉತ್ಪತ್ತಿಯಾಗುತ್ತದೆ. ಆ ಕಡಗವು ಚಿನ್ನದೊಳಗಿಂದ ಬರುತ್ತದೆ. ಅದರಂತೆ ಆತ್ಮನ ಮೋಕ್ಷದಶೆಯು ಯಾವುದರೊಳಗಿಂದ ಬರುತ್ತದೆ ? ಸಂಯೋಗಗಳು-ನಿಮಿತ್ತಗಳಂತೂ ಪರವಸ್ತುಗಳಿವೆ, ಪುಣ್ಯ-ಪಾಪವಂತೂ ಮಲಿನತೆಯಿದೆ-ವಿಕಾರವಿದೆ, ಅದರೊಳಗಿಂದ ಮೋಕ್ಷದಶೆಯು ಬರುವುದಿಲ್ಲ. ವರ್ತಮಾನದಲ್ಲಿ ಯಾವ ಅಲ್ಪದಶೆಯಿದೆ ಅದರೊಳಗಿಂದ ಮೋಕ್ಷದಶೆಯು ಬರುವುದಿಲ್ಲ. ಮೋಕ್ಷದಶೆಯು ಪ್ರಕಟವಾಗುವ ಸಾಮರ್ಥ್ಯವಂತೂ ಒಂದು ಧ್ರುವ ಚಿದಾನಂದ ಸ್ವಭಾವದಲ್ಲಿ ಯಾವಾಗಲೂ ಇರುತ್ತದೆ, ಅದರಿಂದ ಉತ್ಪಾದವಾಗುತ್ತದೆ. ಆದುದರಿಂದ ಸಂಸಾರದಿಂದ ಬಿಡುಗಡೆಹೊಂದುವ ಅಭಿಲಾಷೆಯುಳ್ಳ ಜೀವರುಗಳು ಧ್ರುವದ್ರವ್ಯದ ಪ್ರತೀತಿ ಮಾಡಿ ಅದರ ಅವಲಂಬನ ಪಡೆದು ಅದರಲ್ಲಿ ಏಕಾಗ್ರವಾಗಬೇಕು.

ಅನಾದಿಯಿಂದ ನಾನು ಪರವನ್ನು ಬಿಡುವೆನು-ತ್ಯಜಿಸುವೆನೆಂಬ ವಿಪರೀತ ಮನ್ನಣೆಯಲ್ಲಿ ಮೋಸಹೋಗಿದೆ. ಯಾವ ಪ್ರಕಾರ ಕಸ್ತೂರಿ ಮೃಗವು ಸುಗಂಧಕ್ಕೆ ಮೋಸಹೋಗುತ್ತದೆ ಅದೇ ಪ್ರಕಾರ ಅಜ್ಞಾನಿಯು ಮಿಥ್ಯಾತ್ವದ ಗಂಧಕ್ಕೆ ಮೋಸಹೋಗಿದ್ದಾನೆ. ಭ. ಕುಂದಕುಂದಾಚಾರ್ಯದೇವರು ಭಾವಪಾಹುಡದಲ್ಲಿ ಹೀಗೆ ಹೇಳುತ್ತಾರೆ -

**ಭಾವವಿಮುತ್ತೋ ಮುತ್ತೋ ಣ ಯ ಮುತ್ತೋ ಬಂಧವಾಇಮಿತ್ತೇಣ ।**
**ಇಯ ಭಾವಿಊಣ ಉಜ್ಝಸು ಗಂಥಂ ಅಬ್ಭಂತರಂ ಧೀರ ॥೪೩॥**

ಯಾವನು ಆಂತರ್ಯದಲ್ಲಿ ಮಿಥ್ಯಾತ್ವ ಮೊದಲಾದ ವಿಕಾರ ಭಾವಗಳಿಂದ ಮುಕ್ತನಾಗಿದ್ದಾನೆ ಅವನೇ ಮುಕ್ತನಿದ್ದಾನೆ. ಬಾಹ್ಯದ ಸಂಗ ಬಿಡುವುದರಿಂದ ಯಾರೂ ಮುಕ್ತರಾಗಿ ಹೋಗುವುದಿಲ್ಲ. ಹೀಗೆ ತಿಳಿದುಕೊಂಡು ಎಲೈ ಜೀವನೇ ! ನೀನು ಅನಾದಿಯ ಅಜ್ಞಾನದ ವಾಸನೆಯನ್ನು ಬಿಡು ! ಸ್ವಭಾವದ ಅಭಿರುಚಿ ಬಿಟ್ಟು ಅಜ್ಞಾನಿಗಳ ಸಂಯೋಗದಲ್ಲಿ ಮತ್ತು ವಿಕಾರದ ರುಚಿಯಲ್ಲಿ ಮೋಸ ಹೋಗಿರುವೆ. ಧರ್ಮಾತ್ಮನ ದೃಷ್ಟಿಯಂತೂ ಧ್ರುವಸ್ವಭಾವದಲ್ಲಿ

ಕೀಲಿತವಾಗಿದೆ. ಅವನ ರುಚಿಯಲ್ಲಿ ಚಿದಾನಂದ ಅಖಂಡ ದ್ರವ್ಯದ ಗಂಧ ಮತ್ತು ರುಚಿ ವರ್ತಿಸುತ್ತಿದೆ, ನನ್ನ ಮೋಕ್ಷದಶೆಯ ಆಧಾರವು ಧ್ರುವಸ್ವಭಾವವಿದೆ. ಒಂದು ಸಮಯದ ಪರ್ಯಾಯವು ವ್ಯವಹಾರದ ವಿಷಯವಿದೆ ಮತ್ತು ಧ್ರುವ ತ್ರಿಕಾಲೀ ನಿತ್ಯವು ನಿಶ್ಚಯನಯದ ವಿಷಯವಿದೆ. ಅದರಲ್ಲಿ ಧ್ರುವ-ದ್ರವ್ಯದ ಆಶ್ರಯದಿಂದಲೇ ಮೋಕ್ಷದಶೆಯು ಪ್ರಕಟವಾಗುತ್ತದೆ. ಪರ್ಯಾಯದ ಆಶ್ರಯದಿಂದ ಮೋಕ್ಷದಶೆಯು ಪ್ರಕಟವಾಗುವುದಿಲ್ಲ. ಹೀಗೆ ವಸ್ತುವಿನ ಪ್ರತೀತಿಯಿಲ್ಲದೆ ಧರ್ಮ ಅಥವಾ ಮುನಿದಶೆಯು ಇರುವುದಿಲ್ಲ. ಆರು ಗುರಾಣಿಯಲ್ಲಿ ಕೂಡ ಹೀಗೆ ಹೇಳುತ್ತಾರೆ -

**ಧರಿಸಿ ಮುನಿದೀಕ್ಷೆಯನು ಜೀವನು । ಪಿರಿಯ ಮಹನಿಯಮಗಳ ತಾನಾ-**
**ಚರಿಸಿ ನೌಗ್ರೈವೇಯಕದಿ ಜನಿಸಿಹನು ಪಲವು ಸಲ**
**ಅರಿತುಕೊಳ್ಳದೆ ತನ್ನ ಆತ್ಮನ । ಮರೆತು ಭೇದಜ್ಞಾನವನು ತಾ**
**ಬರಿದೆ ತಪಮಾಡಿದರು ಸುಖಲೇಶವನು ಪಡೆಲಿಲ್ಲ ॥**

ಯಾವನಿಗೆ ಆಂತರ್ಯದಲ್ಲಿ ಚಿದಾನಂದ ಅಖಂಡ ದ್ರವ್ಯದ ಅವಲಂಬನದಿಂದ ಅತಿಶಯ ಲೀನತೆಯಾಗಿ ಹೋಗಿದೆ ಮತ್ತು ನಿರ್ಮಮತ್ವ ಭಾವವಾಗಿಹೋಗಿದೆ ಅಂಥ ಜೀವನು ಸಿದ್ಧಸಮಾನವಿರುವ ತನ್ನ ಪರಮಾತ್ಮ ಸ್ವಭಾವದಲ್ಲಿ ನಿಮಗ್ನನಾಗಿ ಅವನ ವೀತರಾಗ ಭಕ್ತಿಮಾಡಿ ಮೋಕ್ಷದಶೆಯನ್ನು ಪಡೆಯುತ್ತಾನೆ. 'ನಿರಂತರ ಸಿದ್ಧ ಸಮಾನ ನನ್ನ ಪದವಿದೆ'ಯೆಂಬ ಪ್ರತೀತಿ ಮತ್ತು ಜ್ಞಾನವನ್ನಂತೂ ಮಾಡಿಕೊಂಡಿರುವನು, ನಂತರ ಅದರಲ್ಲಿ ನಿರ್ವಿಕಲ್ಪರೂಪದಿಂದ ಏಕಾಗ್ರವಾದ ಮೇಲೆ ರಾಗವು ಸರ್ವಥಾ ಬಿಟ್ಟುಹೋಗಿ ಮೋಕ್ಷದಶೆಯು ಪ್ರಕಟವಾಗುತ್ತದೆ. ಈ ಮೋಕ್ಷ ಮತ್ತು ಮೋಕ್ಷಮಾರ್ಗವು ಅವಸ್ಥೆಗಳಿವೆ. ಆ ಅವಸ್ಥೆಗಳು ಓರ್ವ ಧ್ರುವಕಾರಣಪರಮಾತ್ಮನ ಅವಲಂಬನದಿಂದಲೇ ಪ್ರಕಟವಾಗುತ್ತವೆ. ಧ್ರುವ ಕಾರಣಪರಮಾತ್ಮನೇನು ತಾನು ಸ್ವಯಂ ಮೋಕ್ಷಮಾರ್ಗನಿಲ್ಲ. ಮೋಕ್ಷಮಾರ್ಗವಂತೂ ಅವನ ಆಶ್ರಯದಿಂದ ಪ್ರಕಟವಾದ ಅವಸ್ಥೆಯಿದೆ. ಪರರ ಭಕ್ತಿಯಿಂದಂತೂ ರಾಗವಾಗುತ್ತದೆ. ಆದುದರಿಂದ ಪರರ ಭಕ್ತಿಯು ಮೋಕ್ಷಮಾರ್ಗವಿಲ್ಲ, ಆದರೆ ತನ್ನ ಧ್ರುವ ಚಿದಾನಂದ ಸ್ವಭಾವದ ಭಕ್ತಿಯು ಎಂದರೆ ಅವನಲ್ಲಿ ನಿರ್ವಿಕಲ್ಪ ಏಕಾಗ್ರತೆಯು ಮೋಕ್ಷಮಾರ್ಗವಿದೆ. ಪರಮಾನಂದ ಸ್ವಭಾವದಲ್ಲಿ ಲೀನವಾದ ಮೇಲೆ ಸಮಸ್ತರಾಗವು ಬಿಟ್ಟುಹೋಗಿ ಮುಕ್ತದಶೆಯಾಗುತ್ತದೆ. ಸ್ವಭಾವದ ಆಶ್ರಯದಿಂದ ಎಂಟೂ ಕರ್ಮಗಳು ನಾಶವಾಗಿ ಸಿದ್ಧದಶೆಯಾಗುತ್ತದೆ. ಈ ಸಿದ್ಧದಶೆಯಲ್ಲಿ ಕ್ಷಾಯಿಕ ಮತ್ತು ಪಾರಿಣಾಮಿಕ ಭಾವವೇ ಇರುತ್ತದೆ. ಅಲ್ಲಿ ರಾಗವಿರುವುದಿಲ್ಲ. ಆದುದರಿಂದ ರಾಗವು ಸರ್ವಥಾ ಬಿಟ್ಟುಕೊಡುವಂಥದ್ದಿದೆ. ಎಲ್ಲಿಯವರೆಗೆ ರಾಗದ ಅಂಶ ಕೂಡ ಇರುತ್ತದೆ ಅಲ್ಲಿಯವರೆಗೆ ಮೋಕ್ಷವಾಗುವುದಿಲ್ಲ. ಆದಾಗ್ಯೂ ಸಾಧಕ ದಶೆಯಲ್ಲಿ ಧರ್ಮಾತ್ಮನಿಗೆ ರಾಗವು ಬರುತ್ತದೆ. ಅದರ ಜ್ಞಾನವನ್ನು ಈ ಗಾಥೆಯಲ್ಲಿ ಮಾಡಿಸಲಾಗಿದೆ.

ಯಾರಿಗೆ ಚಿದಾನಂದ ಸ್ವಭಾವದ ಅವಲಂಬನದಿಂದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ಪ್ರಕಟವಾಗಿದೆ, ಆದರೆ ಇನ್ನೂ ಪೂರ್ಣ ವೀತರಾಗದಶೆಯು ಪ್ರಕಟವಾಗಿಲ್ಲ ಅಲ್ಲಿ ರಾಗವಾಗುತ್ತದೆ. ಅಂಥ ಜೀವರುಗಳಿಗೆ ಪಂಚಪರಮೇಷ್ಠೀ ಭಗವಂತರುಗಳ ಭಕ್ತಿ ಮೊದಲಾದವುಗಳ ರಾಗಭಾವವು ಬರುತ್ತದೆ. ಆದುದರಿಂದ ಅಲ್ಲಿ ಪ್ರತ್ಯಕ್ಷ ಮೋಕ್ಷಮಾರ್ಗದ ಅಭಾವವಿರುತ್ತದೆ. ಆದಾಗ್ಯೂ ಆಂತರ್ಯದಲ್ಲಿ ನಿಶ್ಚಯಮೋಕ್ಷಮಾರ್ಗವು ವರ್ತಿಸುತ್ತಿರುವುದರಿಂದ ಅವನ ರಾಗವನ್ನು ಉಪಚಾರದಿಂದ ಪರಂಪರಾ ಮೋಕ್ಷದ ಕಾರಣವೆಂದು ಕೂಡ ಹೇಳಲಾಗುತ್ತದೆ. ಶುಭರಾಗವನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಯಾರಿಗೆ ಹೇಳಿರುತ್ತದೆ ? ಎಂದರೆ ಯಾರಿಗೆ ಮೋಕ್ಷದ ನಿಜವಾದ ಕಾರಣರೂಪವಿರುವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ಪ್ರಕಟವಾಗಿದೆ ಮತ್ತು ರಾಗದ ಕುರಿತು ನಿಷೇಧ ಭಾವವು ವರ್ತಿಸುತ್ತಲಿದೆ ಅವರ ಶುಭ ರಾಗವನ್ನು ಪರಂಪರೆಯಿಂದ ಕಾರಣವಿದೆಯೆಂದು ಉಪಚಾರದಿಂದ ಹೇಳಲಾಗಿದೆ. ಸಾಧಕ ಜೀವನಿಗೆ

ಮಧ್ಯದಲ್ಲಿ ರಾಗವು ಬಂದರೆ ಅದು ಹೇಗಿರುತ್ತದೆಯೆಂದರೆ ಕುದೇವಾದಿಗಳ ರಾಗವಂತೂ ಇರುವುದೇ ಇಲ್ಲ, ಆದರೆ ಅರಹಂತದೇವರುಗಳ ಭಕ್ತಿ ಮೊದಲಾದವುಗಳ ರಾಗವಿರುತ್ತದೆ. ಆ ರಾಗವನ್ನು ಪರಂಪರೆಯಿಂದ ಕಾರಣವೆಂದು ಹೇಳಿದರೆ ಪ್ರತ್ಯಕ್ಷಕಾರಣವು ಬೇರೆಯಿದೆ. ಶುದ್ಧ ದ್ರವ್ಯದ ಅವಲಂಬನವು ಮೋಕ್ಷದ ಪ್ರತ್ಯಕ್ಷ ಕಾರಣವಿದೆ. ಇಂಥ ಪ್ರತ್ಯಕ್ಷ ಕಾರಣವು ಎಲ್ಲಿ ಪ್ರಕಟವಾಗಿರುವುದು ಅಲ್ಲಿ ರಾಗವನ್ನು ಪರಂಪರೆಯಿಂದ ಕಾರಣವೆಂದು ಹೇಳಲಾಗುತ್ತದೆ. ಸಾಧಕನಿಗೆ ಅರಹಂತದೇವರ ಭಕ್ತಿ ಮೊದಲಾದವುಗಳ ರಾಗವು ಬರುವುದಿಲ್ಲವೆಂದು ಯಾರಾದರೂ ಮನ್ನಿಸಿದರೆ ಅವರ ಮಾತು ಮಿಥ್ಯೆಯಿದೆ. ಸಾಧಕದಶೆಯಲ್ಲಿ ಎಂಥ ರಾಗವಿರುತ್ತದೆ ಅದರ ಜ್ಞಾನವನ್ನು ಇಲ್ಲಿ ಮಾಡಿಸಲಾಗಿದೆ.

**ಸಪಯತ್ಥಂ ತಿತ್ಥಯರಂ ಅಭಿಗದಬುದ್ಧಿಸ್ಸ ಸುತ್ತರೋಇಸ್ಸ ।**
**ದೂರತರಂ ಣಿವ್ವಾಣಂ ಸಂಜಮತವಸಂಪಉತ್ತಸ್ಸ ॥೧೭೦॥**

**ಯಾವನಿಗೆ ಸೂತ್ರ, ಪದಾರ್ಥ, ಜಿನವರರ ಕುರಿತು ಚಿತ್ತದಲಿ ಪ್ರೀತಿಯಿದೆ ।**
**ಅವನು ಸಂಯಮತಪಸಂಯುಕ್ತನಿದ್ದರೂ ನಿರ್ವಾಣವದುದೂರತರವಿದೆ ॥೧೭೦॥**

ಯಾವನಿಗೆ ಚಿದಾನಂದ ಸ್ವಭಾವದ ಅವಲಂಬನದಿಂದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ಪ್ರಕಟವಾಗಿದೆ, ಆದರೆ ಇನ್ನೂ ಪೂರ್ಣ ವೀತರಾಗೀದಶೆಯು ಪ್ರಕಟವಾಗಿಲ್ಲ ಅಲ್ಲಿ ರಾಗವಾಗುತ್ತದೆ ಅಂಥ ಜೀವನಿಗೆ ಪಂಚ ಪರಮೇಷ್ಠೀ ಭಗವಂತರ ಭಕ್ತಿ ಮೊದಲಾದವುಗಳ ರಾಗಭಾವವು ಬರುವುದರಿಂದ ಅಲ್ಲಿ ಪ್ರತ್ಯಕ್ಷ ಮೋಕ್ಷದ ಅಭಾವವಿದೆ. ಆದಾಗ್ಯೂ ಆಂತರ್ಯದಲ್ಲಿ ನಿಶ್ಚಯ ಮೋಕ್ಷಮಾರ್ಗವು ವರ್ತಿಸುತ್ತಿರುವುದರಿಂದ ಅವನ ರಾಗವನ್ನು ಉಪಚಾರದಿಂದ ಪರಂಪರೆಯಿಂದ ಮೋಕ್ಷದ ಕಾರಣವೆಂದು ಹೇಳಲಾಗುತ್ತದೆ. ಶುಭರಾಗವನ್ನು ಪರಂಪರೆಯಿಂದ ಕಾರಣವೆಂದು ಹೇಳಿರುವುದು ಯಾರಿಗೆ ? ಯಾರಿಗೆ ಮೋಕ್ಷದ ನಿಜವಾದ ಕಾರಣರೂಪದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ಪ್ರಕಟವಾಗಿದೆ ಮತ್ತು ರಾಗದ ನಿಷೇಧ ಭಾವವು ವರ್ತಿಸುತ್ತಿದೆ ಅವನ ಶುಭರಾಗವನ್ನು ಪರಂಪರೆಯಿಂದ ಕಾರಣವೆಂದು ಉಪಚಾರದಿಂದ ಹೇಳಿದೆ. ಸಾಧಕ ಜೀವನಿಗೆ ಮಧ್ಯದಲ್ಲಿ ರಾಗವು ಬರುತ್ತದೆ ಆದರೆ ಕುದೇವಾದಿಗಳ ರಾಗವಂತೂ ಇರುವುದೇ ಇಲ್ಲ ಆದರೆ ಅರಹಂತದೇವರ ಭಕ್ತಿ ಮೊದಲಾದವುಗಳ ರಾಗವಿರುತ್ತದೆ. ಆ ರಾಗವನ್ನು ಪರಂಪರೆಯಿಂದ ಕಾರಣವೆಂದು ಹೇಳಿದರೆ ಪ್ರತ್ಯಕ್ಷ ಕಾರಣವು ಬೇರೆ ಇದೆ. ಶುದ್ಧ ದ್ರವ್ಯದ ಅವಲಂಬನವು ಅದು ಪ್ರತ್ಯಕ್ಷ ಮೋಕ್ಷದ ಕಾರಣವಿದೆ ಇಂಥ ಪ್ರತ್ಯಕ್ಷ ಕಾರಣವು ಎಲ್ಲಿ ಪ್ರಕಟವಾಗಿದೆ ಅಲ್ಲಿ ರಾಗವನ್ನು ಪರಂಪರಾಕಾರಣವೆಂದು ಹೇಳಲಾಗುವುದು. ಸಾಧಕನಿಗೆ ಅರಹಂತದೇವರ ಭಕ್ತಿ ಮೊದಲಾದವುಗಳ ರಾಗವು ಬರುವುದೇ ಇಲ್ಲವೆಂದು ಯಾರಾದರೂ ಮನ್ನಿಸಿದರೆ ಅವರ ಮಾತು ಅಸತ್ಯವಿದೆ. ಸಾಧಕದಶೆಯಲ್ಲಿ ಎಂಥ ರಾಗವಿರುತ್ತದೆಯೆಂಬುದರ ಜ್ಞಾನವನ್ನು ಇಲ್ಲಿ ಮಾಡಿಸಲಾಗಿದೆ.

ಯಾವನಿಗೆ ಆಂತರ್ಯದಲ್ಲಿ ಶುದ್ಧ ಚಿದಾನಂದ ಸ್ವಭಾವದ ಪ್ರತೀತಿಯಾಗಿದೆ, ಅವನ ನಿಶ್ಚಯ ಶ್ರದ್ಧೆ, ಜ್ಞಾನ, ಚಾರಿತ್ರವು ಪ್ರಕಟವಾಗಿದೆ ಅಂಥ ಜೀವನಿಗೆ ಕೂಡ ಒಂಭತ್ತು ತತ್ತ್ವಗಳ ಭಾವಸಹಿತ ಅರಹಂತದೇವರುಗಳ ಕುರಿತು ಎಲ್ಲಿಯವರೆಗೆ ಶುಭರಾಗವಿರುತ್ತದೆ ಅಲ್ಲಿಯವರೆಗೆ ಮೋಕ್ಷವು ದೂರವಿದೆ.

ನಿಶ್ಚಯದಿಂದ ಅಂತಃತತ್ತ್ವನಂತೂ ಜ್ಞಾಯಕ ಆತ್ಮನಿದ್ದಾನೆ, ಅವನೇ ಉಪಾದೇಯನಿದ್ದಾನೆ. ಇಂಥ ನಿಶ್ಚಯತತ್ತ್ವದ ಪ್ರತೀತಿಯೊಡನೆ ಒಂಭತ್ತು ತತ್ತ್ವಗಳನ್ನು ತಿಳಿದುಕೊಳ್ಳುವುದು ವ್ಯವಹಾರವಿದೆ. ಒಂಭತ್ತು ತತ್ತ್ವಗಳನ್ನು ತಿಳಿದುಕೊಂಡನೆಂದು ಯಾವಾಗ ಹೇಳಲಾಗುವುದೆಂದರೆ ಜೀವವನ್ನು ಜೀವವೆಂದು ಮನ್ನಿಸಬೇಕು, ಅಜೀವವನ್ನು ಅಜೀವವೆಂದು ಮನ್ನಿಸಬೇಕು, ಆದರೆ ಜೀವನು ಅಜೀವದ ಕಾರ್ಯ ಮಾಡುತ್ತಾನೆ ಅಥವಾ ಅಜೀವದಿಂದ ಜೀವನಿಗೆ ಲಾಭ-ಹಾನಿಯಾಗುತ್ತದೆಂದು

ಮನ್ನಿಸುವವನಿಗೆ ನವತತ್ತ್ವಗಳ ಪ್ರತೀತಿಯಿಲ್ಲ. ಪುಣ್ಯ-ಪಾಪಗಳೆರಡನ್ನು ಆಸ್ರವವೆಂದು ಮನ್ನಿಸಬೇಕು, ಪುಣ್ಯದಿಂದ ಧರ್ಮವಾಗುವುದಿಲ್ಲವೆಂದು ಮನ್ನಿಸಬೇಕು, ಸಂವರ-ನಿರ್ಜರೆ ಇವು ಸ್ವಭಾವದ ಆಶ್ರಯದಿಂದ ಇವೆ, ರಾಗದಿಂದ ಸಂವರ ಅಥವಾ ನಿರ್ಜರೆಯಿಲ್ಲ. ಮೋಕ್ಷವು ಪೂರ್ಣ ಶುದ್ಧ-ರಾಗರಹಿತ ದಶೆಯಿದೆ, ಪುಣ್ಯದಿಂದ ಮೋಕ್ಷವಾಗುವುದಿಲ್ಲ. ಈ ಪ್ರಕಾರ ನವತತ್ತ್ವಗಳನ್ನು ಭಿನ್ನಭಿನ್ನ ಸ್ವರೂಪದಿಂದ ತಿಳಿದುಕೊಳ್ಳುವುದು ಕೂಡ ವ್ಯವಹಾರವಿದೆ, ಆದರೆ ಯಾವನಿಗೆ ಅಖಂಡ ತತ್ತ್ವದ ಪ್ರತೀತಿಯಿದೆ ಅವನಿಗೆ ಅಂಥ ವ್ಯವಹಾರವಿರುತ್ತದೆ. ಕೇವಲ ಹೆಸರಿಗೆ ಮಾತ್ರ ವ್ಯವಹಾರವುಳ್ಳವನದು ಈ ಮಾತಿರುವುದಿಲ್ಲ.

ಇಲ್ಲಿಯಂತೂ ಅರಹಂತದೇವರ ಭಕ್ತಿಯ ಮಾತು ತೆಗೆದುಕೊಳ್ಳಲಾಗಿದೆ, ಆದರೆ ಅರಹಂತರೆಂದರೆ ಯಾರು? ನವತತ್ತ್ವಗಳನ್ನು ಯಥಾರ್ಥವಾಗಿ ಹೇಳಿದ್ದಾರೆ - ಅಂಥ ನವತತ್ತ್ವಗಳ ಶ್ರದ್ಧೆಯೊಡನೆ ಅರಹಂತದೇವರ ಭಕ್ತಿಯ ಭಾವ ಬರುವುದು ಶುಭರಾಗವಿದೆ. ನವತತ್ತ್ವಗಳಲ್ಲಿ ಜೀವ ಮತ್ತು ಅಜೀವ ಇವೆರಡು ಮೂಲದ್ರವ್ಯಗಳಿವೆ ಮತ್ತು ಅವುಗಳ ಏಳು ಪರ್ಯಾಯಗಳಿವೆ. ಜೀವ ಮತ್ತು ಕರ್ಮ ಭಿನ್ನ-ಭಿನ್ನ ತತ್ತ್ವಗಳಿವೆ. ಕರ್ಮದ ಕಾರಣದಿಂದ ಜೀವನಿಗೆ ರಾಗವಾಗುತ್ತದೆಯೆಂದು ಮನ್ನಿಸಿದರೆ ಅವನು ಜೀವ-ಅಜೀವ ತತ್ತ್ವಗಳನ್ನು ಭಿನ್ನವಾಗಿ ಮನ್ನಿಸಲಿಲ್ಲ. ಪರಜೀವವು ಮರಣಹೊಂದುವುದರಿಂದ ಇಲ್ಲಿ ಪಾಪವಾಯಿತು ಅಥವಾ ಪರಜೀವವು ಬದುಕುವುದರಿಂದ ಪುಣ್ಯವಾಯಿತೆಂದು ಮನ್ನಿಸಿದರೆ ಅವನು ಪುಣ್ಯ-ಪಾಪಗಳನ್ನು ಮತ್ತು ಪರಜೀವವನ್ನು ಭಿನ್ನವಾಗಿ ತಿಳಿದುಕೊಳ್ಳಲಿಲ್ಲ. ಪುಣ್ಯದಿಂದ ಧರ್ಮವಾಗುತ್ತದೆಯೆಂದು ಮನ್ನಿಸಿದರೆ ಅವನು ಪುಣ್ಯವನ್ನು ಮತ್ತು ಸಂವರ-ನಿರ್ಜರೆ-ಮೋಕ್ಷವನ್ನು ಭಿನ್ನವಾಗಿ ಪರಿಚಯಿಸಿಕೊಳ್ಳಲಿಲ್ಲ. ನವಪದಾರ್ಥಗಳ ಪ್ರತೀತಿಯೊಡನೆ ತೀರ್ಥಂಕರರ ಭಕ್ತಿಯ ಮಾತನ್ನು ತೆಗೆದುಕೊಳ್ಳಲಾಗಿದೆ. ಯಾವನಿಗೆ ಆತ್ಮನ ಸ್ವಭಾವದ ಪ್ರತೀತಿಯಿದೆ ಮತ್ತು ನವತತ್ತ್ವದ ಜ್ಞಾನಪೂರ್ವಕ ಅರಹಂತದೇವರ ಭಕ್ತಿಯ ಭಾವವಿದೆ ಅವನಿಗೆ ಕೂಡ ಶುಭರಾಗವಿದೆ ಮತ್ತು ಅದರಿಂದ ಅವನಿಗೆ ಕೂಡ ಮೋಕ್ಷತತ್ತ್ವವು ಇನ್ನೂ ದೂರವಿದೆ. ಆತ್ಮನ ಜ್ಞಾನವಿದೆ ಮತ್ತು ನವತತ್ತ್ವದ ಭೇದದ ಮೇಲಿನ ಲಕ್ಷ್ಯವಿದೆ ಅಲ್ಲಿ ರಾಗವಿದೆ, ದೃಷ್ಟಿಯಲ್ಲಿಯಂತೂ ಆ ರಾಗದ್ದೂ ನಿಷೇಧವಿದೆ. ಧ್ರುವ ಚಿದಾನಂದ ಸ್ವಭಾವದ್ದೇ ರುಚಿಯಿದೆ. ಭಗವಂತರ ಭಕ್ತಿಯ ಭಾವದ ಸಮಯದಲ್ಲಿ ಪರದ ಆಶ್ರಯದಿಂದ ರಾಗವಿದೆ ಅದು ಮೋಕ್ಷದ ಕಾರಣವಿಲ್ಲವೆಂದು ಸಾಧಕನಿಗೆ ಪ್ರಜ್ಞೆಯಿದೆ. ಮೋಕ್ಷವಂತೂ ನನ್ನ ಸ್ವಭಾವದ ಅವಲಂಬನದಿಂದಲೇ ಇದೆಯೆಂಬುದನ್ನು ತಿಳಿಯುತ್ತಾನೆ. ಭ. ಕುಂದಕುಂದಾಚಾರ್ಯದೇವರು ಸೂತ್ರದಲ್ಲಿ ಹೇಳಿರುವುದೇನೆಂದರೆ ಯಾವನಿಗೆ ನವತತ್ತ್ವ ಸಹಿತ ತೀರ್ಥಂಕರದೇವರ ಕುರಿತು ಭಕ್ತಿಯ ರಾಗವು ವರ್ತಿಸುತ್ತದೆ ಅವನಿಗೆ ಕೂಡ ಮೋಕ್ಷವು ದೂರ ವರ್ತಿಸುತ್ತದೆ. ಅದರೊಳಗಿಂದ ಶ್ರೀ ಅಮೃತಚಂದ್ರಾಚಾರ್ಯದೇವರು ಸಾಧಕದಶೆಯ ಮಾತು ತೆಗೆದುಕೊಂಡಿದ್ದಾರೆ. ಸಾಧಕದಶೆಯಲ್ಲಿ ರಾಗರಹಿತ ಸ್ವಭಾವದ ದೃಷ್ಟಿ ಮತ್ತು ಸ್ವಭಾವದ ಅವಲಂಬನವಿದ್ದರೂ ಕೂಡ ಇನ್ನೂ ರಾಗವು ಕೂಡ ಆಗುತ್ತದೆ. ಅಲ್ಲಿ ಸ್ವಭಾವದ ದೃಷ್ಟಿ ಮತ್ತು ಅದರ ಅವಲಂಬನವು ಮೋಕ್ಷದ ಕಾರಣವಿದೆ. ಶುಭರಾಗವನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಉಪಚಾರದಿಂದ ಹೇಳಲಾಗುತ್ತದೆ. ಯಾವನಿಗೆ ನವತತ್ತ್ವದ್ದೇ ಯಥಾರ್ಥ ಜ್ಞಾನವಿರುವುದಿಲ್ಲ ಅಂಥ ಜೀವನಿಗಂತೂ ಉಪಚಾರದಿಂದ ಕೂಡ ಶುಭರಾಗವು ಮೋಕ್ಷದ ಕಾರಣವಿಲ್ಲ. ಯಾವನಿಗೆ ನಿಶ್ಚಯಮೋಕ್ಷಮಾರ್ಗವು ಪ್ರಕಟವಾಗಿದೆ ಅವನಿಗೆ ಮಧ್ಯದೊಳಗೆ ಶುಭರಾಗವು ಬರುತ್ತದೆ ಅದನ್ನು ಉಪಚಾರದಿಂದ ಮೋಕ್ಷದ ಕಾರಣವೆಂದು ಹೇಳಲಾಗುತ್ತದೆ.

ಧರ್ಮಾತ್ಮನಿಗೆ ಪೂರ್ಣ ಸ್ವಭಾವದ ದೃಷ್ಟಿಯಿರುತ್ತದೆ, ಆದರೆ ಇನ್ನೂ ಪೂರ್ಣ ಚಾರಿತ್ರದಶೆಯು ಪ್ರಕಟವಾಗಿರುವುದಿಲ್ಲ ಅಂಥ ಸಾಧಕನ ಮಾತು ಇದಾಗಿದೆ, ಆದರೆ ಯಾವನು ರಾಗದಿಂದಲೇ ಕಲ್ಯಾಣವಾಗುತ್ತದೆಯೆಂದು ಮನ್ನಿಸಿಕೊಂಡಿದ್ದಾನೆ ಅಂಥ ಮಿಥ್ಯಾದೃಷ್ಟಿಯ ಮಾತು ಇದಿರುವುದಿಲ್ಲ. ಅದರಂತೆ ಯಾರಿಗೆ ಮೋಕ್ಷದಶೆಯು ಪ್ರಕಟವಾಗಿದೆ

ಅವರಿಗಂತೂ ರಾಗವು ಇರುವುದೇ ಇಲ್ಲ. ಆದುದರಿಂದ ಅವರದೂ ಕೂಡ ಮಾತು ಇಲ್ಲ. ಯಾರಿಗೆ ಸಾಧಕದಶೆಯಲ್ಲಿ ಇನ್ನೂ ರಾಗವಿದೆ ಅಂಥ ಜೀವದ ಮಾತು ಇದಾಗಿದೆ. ರಾಗವಿದ್ದರೂ ಕೂಡ ಯಾರ ಪ್ರವೃತ್ತಿಯು ನವತತ್ತ್ವ ಹಾಗೂ ಅರಹಂತ, ಸಿದ್ಧ, ಸಾಧು ಮೊದಲಾದ ಪೂಜ್ಯ ಪುರುಷರ ಕುರಿತು ಒಲದಿದೆ ಅವನು ತತ್ತ್ವಗಳನ್ನು ವಿಪರೀತವಾಗಿ ಮನ್ನಿಸುವುದಿಲ್ಲ, ಕುದೇವಾದಿಗಳನ್ನು ಆದರಿಸುವುದಿಲ್ಲ ಮತ್ತು ರಾಗವನ್ನು ಧರ್ಮವೆಂದು ಮನ್ನಿಸುವುದಿಲ್ಲ ; ಸ್ವಭಾವದ ಅವಲಂಬನದಿಂದಲೇ ಲಾಭ ಮನ್ನಿಸುತ್ತಾನೆ ಅಂಥ ಜೀವನಿಗೆ ಶುಭರಾಗವು ಉಪಚಾರದಿಂದ ಪರಂಪರೆಯಿಂದ ಮೋಕ್ಷದ ಕಾರಣವಿದೆ. ಆದರೆ ಎಲ್ಲಿಯವರೆಗೆ ರಾಗವಿದೆ ಅಲ್ಲಿಯವರೆಗೆ ಅವನಿಗೆ ಕೂಡ ಮೋಕ್ಷವು ದೂರವರ್ತಿಯೇ ಇದೆ.

ಇದಂತೂ ಅಚರಮಶರೀರಿ ಜೀವದ ಮಾತಿದೆ, ಎಂದರೆ ಯಾರಿಗೆ ಈ ಭವದಲ್ಲಿ ಮೋಕ್ಷ ದಶೆಯಿಲ್ಲ, ಸ್ವಭಾವದ ದೃಷಿಯಿದ್ದರೂ ಕೂಡ ಯಾವನಿಗೆ ರಾಗವು ವರ್ತಿಸುತ್ತಿದೆ-ದೃಷ್ಟಿಯಲ್ಲಿಯಂತೂ ರಾಗದ ನಿಷೇಧವು ವರ್ತಿಸುತ್ತಿದೆ ಅಂಥ ಜೀವನು ಇನ್ನೂ ಒಂದು ಭವ ಧಾರಣ ಮಾಡಿ ಮೋಕ್ಷ ಪಡೆಯುವವನಿದ್ದಾನೆ. ಆದುದರಿಂದ ಅವನ ಶುಭರಾಗವನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಉಪಚಾರದಿಂದ ಹೇಳಲಾಗುತ್ತದೆ.

೧೭೦ ಮತ್ತು ೧೭೧ ನೆಯ ಗಾಥೆಗಳನ್ನು ಪೂರ್ಣ ಮಾಡಿದ ಮೇಲೆ ಶ್ರೀ ಜಯಸೇನಾಚಾರ್ಯದೇವರು ಹೇಳುತ್ತಾರೆ - 'ಇತಿ ಅಚರಮದೇಹಪುರುಷವ್ಯಾಖ್ಯಾನಮುಖ್ಯತ್ವೇನ ದಶಮಸ್ಥಲೇ ಗಾಥಾದ್ವಯಂ ಗತಂ॥' ಎಂದರೆ ಯಾವನಿಗೆ ಸ್ವಭಾವದ ಪ್ರತೀತಿಯು ವರ್ತಿಸುತ್ತದೆ, ಆದರೆ ಪೂರ್ಣ ಚಾರಿತ್ರವಿಲ್ಲ ಎಂದರೆ ಈ ಭವದಲ್ಲಿ ಮೋಕ್ಷದಶೆಯಾಗುವುದಿಲ್ಲ, ರಾಗವಿದೆ, ಎಂದರೆ ಸ್ವರ್ಗದಲ್ಲಿ ಹೋಗುವವನು, ಆದರೆ ಅವನ ಶ್ರದ್ಧೆಯಲ್ಲಿ ರಾಗದ ನಿಷೇಧವು ವರ್ತಿಸುತ್ತಿರುವುದರಿಂದ ಧ್ರುವ ಸ್ವಭಾವದಲ್ಲಿ ಲೀನನಾಗಿ ರಾಗವನ್ನು ಕತ್ತರಿಸಿಹಾಕಿ ಒಂದು ಭವದಲ್ಲಿ ಮೋಕ್ಷ ಪಡೆಯುವನು. ಆದುದರಿಂದ ಅವನ ರಾಗವನ್ನು ಉಪಚಾರದಿಂದ ಪರಂಪರಾ ಕಾರಣವೆಂದು ಹೇಳಿದೆ, ಆದರೆ ಯಾವನಿಗೆ ಸ್ವಭಾವದ ಪ್ರತೀತಿಯೇ ಇಲ್ಲ ಅಂಥ ಜೀವದ ರಾಗವನ್ನು ವ್ಯವಹಾರದಿಂದ ಕೂಡ ಪರಂಪರೆಯಿಂದ ಮೋಕ್ಷದ ಕಾರಣವೆಂದು ಹೇಳುವುದಿಲ್ಲ. ಸ್ವಭಾವದ ದೃಷ್ಟಿಯಿದ್ದರೂ ಕೂಡ ವೀತರಾಗತೆಯಾಗುವುದಿಲ್ಲ ಮತ್ತು ಇನ್ನು ಪಂಚಪರಮೇಷ್ಠಿ ಮೋದಲಾದವರ ಕುರಿತು ರಾಗಭಾವವು ಬರುತ್ತದೆ ಅವನಿಗೆ ಮೋಕ್ಷವು ದೂರತರವಿದೆ. ಇನ್ನೂ ಒಂದೆರಡು ಭವ ಮಾಡುವುದು ಬಾಕಿ ಉಳಿದಿವೆ, ಆ ಅಪೇಕ್ಷೆಯಿಂದ ಅವನಿಗೆ ಮೋಕ್ಷವು ದೂರತರವಿದೆಯೆಂದು ಹೇಳಿದೆ. ಆದರೆ 'ದೂರತಮ'ವಿಲ್ಲ. ಎಂದರೆ ಅನಂತ ಭವ ಮಾಡುವುದಿಲ್ಲ. ಸಮ್ಯಗ್ದೃಷ್ಟಿಗೆ ನವತತ್ತ್ವಗಳ ಶ್ರದ್ಧೆ ಮೊದಲಾದವುಗಳ ವಿಕಲ್ಪಗಳ ವ್ಯವಹಾರಸಮ್ಯಗ್ದರ್ಶನವಿದೆ, ಆದರೆ ವ್ಯವಹಾರ ಸಮ್ಯಕ್ತ್ವದ ಸಮಯದಲ್ಲಿ ಕೂಡ ಶುದ್ಧ ಆತ್ಮನ ಶ್ರದ್ಧೆಯ ರೂಪದ ನಿಶ್ಚಯಸಮ್ಯಕ್ತ್ವವು ಜತೆಯಲ್ಲೇ ವರ್ತಿಸುತ್ತದೆ. ಧರ್ಮಾತ್ಮನಿಗೆ ನಿಶ್ಚಯಪೂರ್ವಕ ಯಾವ ವ್ಯವಹಾರದ ಶುಭರಾಗವಿದೆ, ಆ ರಾಗದ್ದೂ ಕೂಡ ಸ್ವಭಾವದ ದೃಷ್ಟಿಯಲ್ಲಿ ನಿಷೇಧವು ವರ್ತಿಸುತ್ತದೆ. ಆದುದರಿಂದ ಅವನ ರಾಗವನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಉಪಚಾರದಿಂದ ಹೇಳಿದೆ. ಸ್ವಭಾವದ ದೃಷ್ಟಿಯಿದೆ ಮತ್ತು ರಾಗದ ನಿಷೇಧವಿದೆ. ಆದುದರಿಂದ ಸ್ವಭಾವದ ಉಗ್ರ ಅವಲಂಬನ ತೆಗೆದುಕೊಂಡು ಆ ರಾಗದ ಸರ್ವಥಾ ಅಭಾವ ಮಾಡುವನು, ಆಗ ಮೋಕ್ಷದಶೆಯು ಪ್ರಕಟವಾಗುವುದು. ಎಂದರೆ ಯಾವ ಧ್ರುವ ಸ್ವಭಾವದ ಅವಲಂಬನವಿದೆ ಅದೇ ಮೋಕ್ಷದ ನಿಜವಾದ ಕಾರಣವಿದೆ.

ಆತ್ಮನು ಜ್ಞಾನ-ದರ್ಶನ ಸ್ವಭಾವಿಯಿದ್ದಾನೆ. ಅವನಲ್ಲಿ ಏಕಾಗ್ರತೆ ಮಾಡುವುದು ಮೋಕ್ಷದ ಕಾರಣವಿದೆ. ಮಧ್ಯದೊಳಗೆ ಯಾವ ರಾಗವು ಬರುತ್ತದೆ ಅದು ಅನರ್ಥ ಪರಂಪರೆಯ ಕಾರಣವಿದೆ. ಧರ್ಮಾತ್ಮ ಜೀವನಿಗೆ ಶುದ್ಧ ಆತ್ಮನ ಶ್ರದ್ಧೆ-ಜ್ಞಾನ ಮತ್ತು ಏಕಾಗ್ರತೆಯಿದ್ದರೂ ಕೂಡ ಆರನೆಯ ಗುಣಸ್ಥಾನದವರೆಗೆ ಶುಭರಾಗವು ಬರುತ್ತದೆ, ಆ

ರಾಗವನ್ನು ಉಪಚಾರದಿಂದ ಪರಂಪರೆಯಿಂದ ಮೋಕ್ಷದ ಕಾರಣವೆಂದು ಹೇಳಿದೆ. ಭಗವಂತರ ಭಕ್ತಿ ಮೊದಲಾದವುಗಳ ಶುಭರಾಗವು ಆರನೆಯ ಗುಣಸ್ಥಾನದವರೆಗೆ ಇರುತ್ತದೆ. ಏಳನೆಯ ಗುಣಸ್ಥಾನದಲ್ಲಿಯಂತೂ ಧ್ಯಾನದಲ್ಲಿ ಏಕಾಗ್ರವಿರುತ್ತದೆ. ಅಲ್ಲಿ ಬುದ್ಧಿಪೂರ್ವಕ ರಾಗವಿರುವುದಿಲ್ಲ. ನಿಶ್ಚಯದಿಂದ ರಾಗವು ಮೋಕ್ಷದ ಕಾರಣವಿಲ್ಲ. ಮೋಕ್ಷದ ಕಾರಣವಂತೂ ಒಂದು ವೀತರಾಗ ಚಾರಿತ್ರವಿದೆಯೆಂಬುದಾಗಿ ಯಾವನಿಗೆ ಪ್ರತೀತಿಯಿದೆ, ಆದರೆ ಇನ್ನೂ ಶುಭರಾಗವು ಬಿಟ್ಟು ಹೋಗಿಲ್ಲ ಅವನಿಗೆ ಪರಂಪರೆಯಿಂದ ಮೋಕ್ಷದ ಕಾರಣವಿದೆಯೆಂದು ಉಪಚಾರದಿಂದ ಹೇಳಲಾಗುತ್ತದೆ. ಎಲ್ಲಿ ಮೋಕ್ಷದ ಪ್ರತ್ಯಕ್ಷ ಕಾರಣವು ಪ್ರಕಟವಾಗಿದೆ ಅಲ್ಲಿ ರಾಗದಲ್ಲಿ ಪರಂಪರೆಯ ಕಾರಣದ ಉಪಚಾರ ಮಾಡುತ್ತದೆ. ಯಾವನಿಗೆ ರಾಗರಹಿತ ಚೈತನ್ಯ ಸ್ವಭಾವದ ಅರಿವಿರುವುದಿಲ್ಲ ಮತ್ತು ರಾಗವನ್ನು ಧರ್ಮದ ಕಾರಣವೆಂದು ಮನ್ನಿಸುತ್ತಾನೆ ಅಂಥ ಜೀವನಿಗೆ ರಾಗವಂತೂ ಅನರ್ಥದ್ದೇ ಕಾರಣವಿದೆ. ಅವನ ರಾಗವನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಉಪಚಾರದಿಂದ ಕೂಡ ಹೇಳಲಾಗುವುದಿಲ್ಲ.

ಯಾವ ಜೀವನು ತನ್ನ ಜ್ಞಾನ ಆನಂದಸ್ವಭಾವದ ಪ್ರತೀತಿ ಮಾಡಿಕೊಂಡು ಅದರಲ್ಲಿ ಏಕಾಗ್ರತೆಯಿಂದ ಮೋಕ್ಷದ ಉದ್ಯಮದಲ್ಲಿ ಪ್ರವರ್ತಿಸುತ್ತಿದ್ದಾನೆ ಅಂಥ ಜೀವದ ಮಾತು ಇದೆ. 'ಮೋಕ್ಷವೆಂದರೆ ತನ್ನ ಶುದ್ಧತೆಯಿದೆ'. ಆತ್ಮನ ಪೂರ್ಣ ಶುದ್ಧತೆಯು ಮೋಕ್ಷವಿದೆ ಮತ್ತು ಆ ಮೋಕ್ಷದ ಮಾರ್ಗವು ಕೂಡ ಶುದ್ಧವಿದೆ. ಮಧ್ಯದಲ್ಲಿ ರಾಗವು ಬರುತ್ತದೆ ಅದು ಅಶುದ್ಧತೆಯಿದೆ, ಅದು ಮೋಕ್ಷಮಾರ್ಗವಿಲ್ಲ. ಶುದ್ಧ ಉಪಯೋಗವು ಮುಖ್ಯರೂಪದಿಂದ ಏಳನೆಯ ಗುಣಸ್ಥಾನದಿಂದ ಇರುತ್ತದೆ, ಆದರೆ ಆಂಶಿಕ ಶುದ್ಧ ಉಪಯೋಗದ ಆರಂಭವಂತೂ ನಾಲ್ಕನೆಯ ಗುಣಸ್ಥಾನದಿಂದಲೇ ಆಗಿ ಹೋಗುತ್ತದೆ. ನಾಲ್ಕನೆಯ ಗುಣಸ್ಥಾನದಲ್ಲಿ ಕೆಲ-ಕೆಲವೊಮ್ಮೆ ನಿರ್ವಿಕಲ್ಪ ಉಪಯೋಗವಾಗಿ ಹೋಗುತ್ತದೆ. ಪೂರ್ಣಶುದ್ಧ ಉಪಯೋಗವು ಹನ್ನೆರಡನೆಯ ಗುಣಸ್ಥಾನದಲ್ಲಿ ಇದೆ. ನಾಲ್ಕನೆಯ ಗುಣಸ್ಥಾನದಲ್ಲಿ ಶುದ್ಧ ಉಪಯೋಗವು ಕೆಲ-ಕೆಲವೊಮ್ಮೆ ಬರುತ್ತದೆ ಮತ್ತು ಅದರ ಕಾಲವು ಅಲ್ಪವಿರುತ್ತದೆ. ಆದುದರಿಂದ ಅಲ್ಲಿ ಶುದ್ಧೋಪಯೋಗವನ್ನು ಮುಖ್ಯವಾಗಿ ಗಣಿಸಿಲ್ಲ. ಶುದ್ಧೋಪಯೋಗದ ಮುಖ್ಯತೆಯು ಏಳನೆಯ ಗುಣಸ್ಥಾನದಿಂದ ಇದೆ. ಆರನೆಯ ಗುಣಸ್ಥಾನವುಳ್ಳ ಮುನಿಯನ್ನು ಶುಭೋಪಯೋಗಿಯೆಂದು ಗಣಿಸಲಾಗಿದೆ ಮತ್ತು ಏಳರಿಂದ ಶುದ್ಧೋಪಯೋಗಿಯೆಂದು ಗಣಿಸಲಾಗಿದೆ, ಆದರೆ ಇನ್ನೂ ಏಳನೆಯ ಗುಣಸ್ಥಾನದಲ್ಲಿ ಕೂಡ ಎಷ್ಟು ರಾಗದ ಅಂಶವಿದೆ ಅಷ್ಟು ಅಶುದ್ಧತೆಯಿದೆ, ಎಂದರೆ ಪೂರ್ಣ ಶುದ್ಧ ಉಪಯೋಗವು ಅಲ್ಲಿ ಇಲ್ಲ. ಹನ್ನೆರಡನೆಯ ಗುಣಸ್ಥಾನದಲ್ಲಿ ಪೂರ್ಣ ಶುದ್ಧ ಉಪಯೋಗವಾಗುತ್ತದೆ. ಸಮ್ಯಗ್ದರ್ಶನದ ಅಪೇಕ್ಷೆಯಿಂದಂತೂ ಸಮ್ಯಗ್ದೃಷ್ಟಿಗೆ ಕೂಡ ಶುದ್ಧ ಉಪಯೋಗವನ್ನು ಗಣಿಸಲಾಗುತ್ತದೆ. ಇಲ್ಲಿಯಂತೂ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನ ಸಹಿತ ಚಾರಿತ್ರ ದಶೆಯು ಯಾರಿಗೆ ಪ್ರಕಟವಾಗಿದೆ ಅಂಥ ಮುನಿರಾಜರಿಗೆ ಕೂಡ ಆರನೆಯ ಗುಣಸ್ಥಾನದಲ್ಲಿ ಶುಭರಾಗವಿರುತ್ತದೆ ಅವರ ಮಾತು ಇದೆ. ಅಂತರ್ಯದಲ್ಲಿ ನಿರ್ವಿಕಲ್ಪ ಅನುಭವ ಮಾಡಿ, ಚೈತನ್ಯದಲ್ಲಿ ಹೆಚ್ಚು ಸ್ಥಿರತೆ ಪ್ರಕಟಪಡಿಸಿಕೊಂಡಿರುವಂಥ ಮುನಿವರ್ಯರಿಗೆ ಸಂಯಮ-ತಪವಿರುತ್ತದೆ. ಜ್ಞಾನಾನಂದ ಸ್ವಭಾವದಲ್ಲಿ ಅಧಿಕ ಲೀನತೆ ವರ್ತಿಸುವುದರ ಹೆಸರು ಸಂಯಮ ಮತ್ತು ತಪವಿದೆ. ಮುನಿಗಳು ಸಂಯಮ-ತಪದ ಭಾರವನ್ನು ಅಂಗೀಕಾರ ಮಾಡಿರುತ್ತಾರೆ, ಇಲ್ಲಿ ಸಂಯಮ-ತಪದ 'ಭಾರ' ಹೇಳಿದೆ ಅದು ದೋಷರೂಪವಿಲ್ಲ, ಆದರೆ ಗುಣರೂಪವಿದೆ. ಭಾರ ಎಂದರೆ ಯಾವ ಹೊರೆಯಲ್ಲ, ಆದರೆ ಚೈತನ್ಯದ ಉಗ್ರತೆಯಾಗಿದೆ ಅದನ್ನು ತಿಳಿಸುವುದಿದೆ. ಇಂಥ ಮುನಿದಶೆಯಾಗಿರುವಂಥ ಮುನಿಗೆ ಪರಮ ವೈರಾಗ್ಯರೂಪದ ಏಳನೆಯ ಭೂಮಿಕೆಯಲ್ಲಿ ಸ್ಥಿರವಿರುವ ಮತ್ತು ಶ್ರೇಣಿ ಮಂಡಿಸುವ ಉತ್ಕೃಷ್ಟ ಶಕ್ತಿಯಿಲ್ಲದಿರುವಾಗ ಆರನೆಯ ಗುಣಸ್ಥಾನದಲ್ಲಿ ಶುಭರಾಗವಾಗುತ್ತದೆ. ವಿಷಯದ ಅನುರಾಗವಿಲ್ಲ, ಆದರೆ ಭಗವಂತರ ಭಕ್ತಿ ಮೊದಲಾದ ಪ್ರಶಸ್ತರಾಗವು ಬರದೆ ಇರುವುದಿಲ್ಲ. ಗಣಧರರಿಗೆ ಕೂಡ ಆರನೆಯ ಗುಣಸ್ಥಾನದಲ್ಲಿ ರಾಗವು ಬರುತ್ತದೆ. ಆ ರಾಗದ ಸಮಯದಲ್ಲಿ ನವತತ್ತ್ವದ ಶ್ರದ್ಧೆ ಹಾಗೂ ಪಂಚಪರಮೇಷ್ಠಿಗಳ

ಭಕ್ತಿಯ ಭಾವವು ಬರುತ್ತದೆ. ಆಂತರ್ಯದಲ್ಲಿ ವಸ್ತುಸ್ವರೂಪದ ಶ್ರದ್ಧೆ ಮತ್ತು ಅವಲಂಬನವಂತೂ ಜಾರುವುದಿಲ್ಲ, ಆದರೆ ಇನ್ನೂ ಪೂರ್ಣ ವೀತರಾಗದಶೆಯಾಗದಿರುವುದರಿಂದ ಇಂಥ ರಾಗವು ಬರುತ್ತದೆ. ಏಳನೆಯ ಗುಣಸ್ಥಾನದ ಕಾಲವು ಅಲ್ಪವಿದೆ. ನಿರಂತರ ಏಳನೆಯ ಗುಣಸ್ಥಾನವು ಯಾರಿಗೂ ಇರುವುದಿಲ್ಲ. ಕ್ಷಣಕ್ಷಣಕ್ಕೆ ಏಳನೆಯ ಮತ್ತು ಆರನೆಯ ಗುಣಸ್ಥಾನವು ಮುನಿಗೆ ಬರುತ್ತಿರುತ್ತದೆ. ಅದರಲ್ಲಿ ಏಳನೆಯ ಗುಣಸ್ಥಾನಕ್ಕಿಂತ ಆರನೆಯ ಗುಣಸ್ಥಾನದ ಕಾಲವು ದ್ವಿಗುಣವಿದೆ. ಆರನೆಯ ಗುಣಸ್ಥಾನದ ಸಮಯದಲ್ಲಿ ನವತತ್ತ್ವಗಳ ವಿಚಾರದ ವಿಕಲ್ಪವು ಏಳುತ್ತದೆ, ಪಂಚಪರಮೇಷ್ಠಿಗಳ ಭಕ್ತಿಯ ವಿಕಲ್ಪವು ಬರುತ್ತದೆ. ಮೋಕ್ಷಮಾರ್ಗದ ದಶೆಯು ಪ್ರಕಟವಾಗಿದ್ದರೂ ಕೂಡ ಮಧ್ಯದಲ್ಲಿ ರಾಗವಿರುತ್ತದೆ. ಅದರ ಪರಿಚಯ ಮಾಡಿಸಲಾಗಿದೆ. ಆರನೆಯ ಗುಣಸ್ಥಾನದಲ್ಲಿ ಶುಭರಾಗವು ಬಿಡುವ ಸಾಧ್ಯತೆಯಿಲ್ಲ. ಒಂದುವೇಳೆ ರಾಗವು ಬಿಟ್ಟುಹೋದರೆ ಆರನೆಯ ಗುಣಸ್ಥಾನವಿರುವುದಿಲ್ಲ. ಆರನೆಯ ಗುಣಸ್ಥಾನದ ಸಮಯದಲ್ಲಿ ಭಗವಂತರ ಭಕ್ತಿಯ ಭಾವವು ಕೂಡ ಬರುತ್ತದೆ. ಅದರಂತೆ ತನಗೆ ಮೋಕ್ಷದ ಪ್ರೀತಿಯಿರುವುದರಿಂದ ಮೋಕ್ಷಗತ ಪುರುಷರ ಕಥೆಯ ಶ್ರವಣದ ಭಾವವು ಕೂಡ ಇರುತ್ತದೆ. ಯಾವ ಪ್ರಕಾರ ರಾಮಚಂದ್ರನಿಗೆ ಸೀತೆಯ ವಿರಹವಿರುತ್ತದೆ ಆಗ ಓರ್ವ ಪುರುಷನು ಸೀತೆಯ ಹತ್ತಿರದಿಂದ ಬಂದು ಅವಳ ಸಮಾಚಾರ ಹೇಳಿದರೆ ಆಗ ರಾಮಚಂದ್ರನು ಆ ಮನುಷ್ಯನ ಆದರ ಮಾಡುತ್ತಾನೆ. ಅದೇ ಪ್ರಕಾರ ಧರ್ಮಾತ್ಮನಿಗೆ ಮೋಕ್ಷದಶೆಯ ಪ್ರೀತಿಯಿರುವುದರಿಂದ ಮೋಕ್ಷ ಪರಿಣತಿಯ ವಾರ್ತೆ ಕೇಳುವ ಭಾವ ಬರುತ್ತದೆ. ಮುಕ್ತಿರೂಪದ ಸ್ತ್ರೀಯನ್ನು ವಶಪಡಿಸಿಕೊಳ್ಳುವ ಸಲುವಾಗಿ ತೀರ್ಥಂಕರರ ಹಾಗೂ ಭರತ ಚಕ್ರವರ್ತಿಯಂಥವರ ಚಾರಿತ್ರವನ್ನು ಆಲಿಸುತ್ತಾರೆ. ಶುಭರಾಗದ ಸಮಯದಲ್ಲಿ ಧರ್ಮಾತ್ಮನಿಗೆ ಇಂಥ ಭಾವ ಬರುತ್ತದೆ. ಆದರೆ ಆ ರಾಗವು ಧರ್ಮವಲ್ಲವೆಂದು ಅವರು ತಿಳಿದಿರುತ್ತಾರೆ. ವೀತರಾಗೀ ಶ್ರದ್ಧೆ-ಜ್ಞಾನ-ಚಾರಿತ್ರವೇ ಮೋಕ್ಷಮಾರ್ಗವಿದೆ. ಮತ್ತು ಯಾವ ರಾಗವಿದೆ, ಅದರಿಂದ ಸ್ವರ್ಗದ ಕ್ಲೇಶದ ಪ್ರಾಪ್ತಿಯಾಗುತ್ತದೆ. ನಂತರ ಮನುಷ್ಯನಾಗಿ ಚಾರಿತ್ರದಶೆಯನ್ನು ಪ್ರಕಟಮಾಡಿ ರಾಗವನ್ನು ಸರ್ವಥಾ ಬಿಡುತ್ತಾನೆ. ಆಗ ಮೋಕ್ಷದಶೆಯಾಗುತ್ತದೆ. ಸಮ್ಯಗ್ದೃಷ್ಟಿಗೆ ರಾಗದಲ್ಲಿ ಆದರದ ಬುದ್ಧಿಯಿರುವುದಿಲ್ಲ.

ಭ. ಕುಂದಕುಂದಾಚಾರ್ಯದೇವರು ಹೇಳುವುದೇನೆಂದರೆ ಅಯ್ಯಾ ಯಾವನ ಆಂತರ್ಯದಲ್ಲಿ ಚಿದಾನಂದ ಸ್ವಭಾವದ ಶ್ರದ್ಧೆ-ಜ್ಞಾನವಿದೆ ಮತ್ತು ಅದರಲ್ಲಿ ಅಧಿಕ ಲೀನತೆಯು ಪ್ರಕಟವಾಗಿದೆ ಅಂಥ ಸಂತರು ಮೋಕ್ಷದ ಉದ್ಯಮ ಮಾಡುತ್ತಿರುವಾಗ ಮಧ್ಯದಲ್ಲಿ ಶುಭರಾಗವು ಬಂದುಬಿಡುತ್ತದೆ. ಅಲ್ಲಿ ಆರನೆಯ ಗುಣಸ್ಥಾನದಲ್ಲಿ ಪಂಚಪರಮೇಷ್ಠಿಗಳ ಭಕ್ತಿ, ನವತತ್ತ್ವಗಳ ಶ್ರದ್ಧೆಯ ವಿಕಲ್ಪ ಮೊದಲಾದ ಭಾವವು ಬಂದುಬಿಡುತ್ತದೆ. ಹೇಗೆ ಪಿಂಜಾರನ ಬಿಲ್ಲಿಗೆ ಅಂಟಿಕೊಂಡ ಅರಳೆಯನ್ನು ದೂರಮಾಡುವ ಸಾಧ್ಯತೆಯಿಲ್ಲ. ಹಾಗೆ ಮುನಿವರರಿಗೆ ಸ್ವರೂಪದಲ್ಲಿ ಏಕಾಗ್ರತೆ ಮಾಡುತ್ತಿರುವಾಗ ಒಂದಿಷ್ಟು ರಾಗವು ಉಳಿದುಬಿಡುತ್ತದೆ. ಆಗ ಶಾಸ್ತ್ರ ಸ್ವಾಧ್ಯಾಯಾದಿಗಳ ವಿಕಲ್ಪವು ಬರುತ್ತದೆ. ಗಣಧರದೇವರು ಸ್ವಯಂ ಹನ್ನೆರಡು ಅಂಗ ರಚಿಸುವಾಗ ಅವರಿಗೆ ಕೂಡ ಶುಭರಾಗವಿರುತ್ತದೆ. ಎಲ್ಲಿಯವರೆಗೆ ರಾಗವಿರುತ್ತದೆ ಅಲ್ಲಿಯವರೆಗೆ ಪ್ರತ್ಯಕ್ಷಮೋಕ್ಷದಶೆಯು ಪ್ರಾಪ್ತವಾಗುವುದಿಲ್ಲ. ಆದರೆ ಸ್ವರ್ಗದ ಒಂದು ಭವ ಮಾಡಿ ನಂತರ ಮೋಕ್ಷ ಪಡೆಯುತ್ತಾನೆ. ಸ್ವರ್ಗದಲ್ಲಿ ಸಮ್ಯಗ್ದೃಷ್ಟಿಯು ಇಂದ್ರಪದದ ವಿಭೂತಿಯನ್ನು ಕೂಡ ತೃಣದಂತೆ ತಿಳಿಯುತ್ತಾನೆ. ಅದರಲ್ಲಿ ಸುಖ ಮನ್ನಿಸುವುದಿಲ್ಲ, ಆದರೆ ಅದರ ಕುರಿತಿರುವ ರಾಗವನ್ನು ಅಗ್ನಿ ಸಮಾನ ತಿಳಿಯುತ್ತಾನೆ. ಹೀಗೆ ಸ್ವರ್ಗದ ಭವ ಪೂರ್ಣ ಮಾಡಿ ಅಲ್ಲಿಂದ ಚ್ಯುತನಾಗಿ ಮಹಾವಿದೇಹ ಕ್ಷೇತ್ರಾದಿಗಳಲ್ಲಿ ಹುಟ್ಟುತ್ತಾನೆ. ಅಲ್ಲಿ ಸೀಮಂಧರಾದಿ ಭಗವಂತರನ್ನು ಪ್ರತ್ಯಕ್ಷ ಕಾಣುತ್ತಾನೆ ಮತ್ತು ಧರ್ಮಭಾವನೆಯನ್ನು ವಿಶೇಷ ದೃಢ ಮಾಡಿ, ಮುನಿಯಾಗಿ ಮೋಕ್ಷ ಪಡೆಯುತ್ತಾನೆ. ಧರ್ಮಾತ್ಮನು ಮೊದಲು ಶುದ್ಧ ಭಾವನೆ ಭಾವಿಸಿದ್ದನು. ಆ ಶುದ್ಧ ಭಾವನೆ ಸ್ವರ್ಗದಲ್ಲಿ ಕೂಡ ಬಿಟ್ಟುಹೋಗುವುದಿಲ್ಲ ಎಂದರೆ ಅವನಿಗೆ ಪುಣ್ಯದ ಫಲದಲ್ಲಿ ರುಚಿಯಾಗುವುದಿಲ್ಲ. ಅವನಿಗೆ ರಾಗದಲ್ಲಿ ಅಥವಾ ರಾಗದ ಫಲದಲ್ಲಿ ಆದರವಿರುವುದಿಲ್ಲ. ಅಲ್ಲಿ ಅವನು

ಚಕ್ರವರ್ತಿ ಪದಪಡೆದರೆ ಅಲ್ಲಿ ಕೂಡ ಶುದ್ಧಾತ್ಮನ ಭಾವನೆಯ ಬಲದಿಂದ ಅವನಿಗೆ ವಿಷಯ ಸುಖದ ಪ್ರೀತಿಯಿರುವುದಿಲ್ಲ. ಆದುದರಿಂದ ಶುದ್ಧಾತ್ಮನ ಭಾವನೆಯು ಉಗ್ರವಾದ ಮೇಲೆ ಪರಿಗ್ರಹ ತೊರೆದು ಮುನಿಯಾಗಿ ಕೇವಲಜ್ಞಾನ ಪ್ರಕಟಪಡಿಸಿಕೊಳ್ಳುತ್ತಾನೆ. ಈ ಪ್ರಕಾರ ಪರಂಪರೆಯಿಂದ ಮೋಕ್ಷದಶೆಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಯಾವನಿಗೆ ನಿಶ್ಚಯ ಶ್ರದ್ಧೆ-ಜ್ಞಾನ ಪ್ರಕಟವಾಗಿದೆ ಮತ್ತು ಮುನಿದಶೆಯು ಪ್ರಕಟವಾಗಿದೆ, ಆದರೆ ಅಲ್ಪ ಶುಭರಾಗ ಉಳಿದುಬಿಟ್ಟರೆ ಅವನು ಪ್ರತ್ಯಕ್ಷ ಮೋಕ್ಷ ಪಡೆಯುವುದಿಲ್ಲ. ಯಾವನಿಗೆ ಶುದ್ಧ ಉಪಾದಾನ ಕಾರಣವು ಪ್ರಕಟವಾಗಿದೆ ಅವನಿಗೆ ರಾಗದಲ್ಲಿ ನಿಮಿತ್ತಕಾರಣದ ಆರೋಪ ಬರುತ್ತದೆ, ಆದರೆ ಉಪಾದಾನವೇ ಪ್ರಕಟವಾಗಿರದಿದ್ದರೆ ನಿಮಿತ್ತ ಯಾವುದರದು ?

ಸ್ವರ್ಗದ ಸಂಯೋಗದಲ್ಲಿಯಂತೂ ಸುಖವಿಲ್ಲ. ಆದರೆ ಅಜ್ಞಾನಿಯು ರಾಗ ಮಾಡಿ ಅದರಲ್ಲಿ ಸುಖ ಮನ್ನಿಸುತ್ತಾನೆ. ಜ್ಞಾನಾನಂದ ಸ್ವಭಾವದಲ್ಲಿಯೇ ಸುಖವಿದೆ, ಸಂಯೋಗದ ಕಡೆಯ ವೃತ್ತಿಯಾಗುವುದು ಕೂಡ ದುಃಖದಾಯಕವಿದೆಯೆಂದು ತಿಳಿದ ಧರ್ಮೀ ಜೀವನಿಗೆ ಶುದ್ಧಾತ್ಮನ ಭಾವನೆಯು ಬಿಟ್ಟು ಹೋಗುವುದಿಲ್ಲ, ಪೂರ್ಣ ವೀತರಾಗತೆಯಾಗುವುದಿಲ್ಲ ಅಲ್ಲಿ ಭಕ್ತಿ ಇತ್ಯಾದಿಯ ಶುಭರಾಗವು ಕೂಡ ಬರುತ್ತದೆ. ಆದರೆ ಶುದ್ಧಾತ್ಮನ ಭಾವನೆಯ ಬಲದಿಂದ ಆ ರಾಗವನ್ನು ಬಿಟ್ಟು ಮೋಕ್ಷದಶೆಯನ್ನು ಪ್ರಕಟ ಪಡಿಸಿಕೊಳ್ಳುತ್ತಾನೆ, ಆ ಅಪೇಕ್ಷೆಯಿಂದ ರಾಗವನ್ನು ಪರಂಪರೆಯಿಂದ ಮೋಕ್ಷದ ಕಾರಣವೆಂದು ಉಪಚಾರದಿಂದ ಹೇಳಲಾಗುತ್ತದೆ. ಆದರೆ ಪ್ರತ್ಯಕ್ಷ ರೂಪದಿಂದಂತೂ ಆ ರಾಗವು ಮೋಕ್ಷವನ್ನು ಅಂತರಾಯವೇ ಮಾಡುತ್ತದೆಂದು ಈಗ ಹೇಳುತ್ತಾರೆ -

**ಅರಹಂತ ಸಿದ್ಧ ಚೇದಿಯಪವಯಣಭತ್ತೋ ಪರೇಣ ಣಿಯಮೇಣ ।**
**ಜೋ ಕುಣದಿ ತವೋ ಕಮ್ಮಂ ಸೋ ಸುರಲೋಗಂ ಸಮಾದಿಯದಿ ॥೧೭೧॥**

**ಅರಹಂತ, ಸಿದ್ಧ, ಚೈತ್ಯಮೇಣ್ ಪ್ರವಚನದಕುರಿತು ಭಕ್ತಿಯಿಂದ ವರ್ತಿಸುತ ।**
**ಪರಮಸಂಯಮಸಹ ತಪಕರ್ಮ ಮಾಡುವ ಜೀವ ದೇವಲೋಕ ಪಡೆವನು ॥೧೭೧॥**

ಅರಹಂತ-ಸಿದ್ಧ-ಚೈತ್ಯ ಹಾಗೂ ಪ್ರವಚನ ಇತ್ಯಾದಿಗಳ ಕುರಿತು ಯಾರಿಗೆ ಭಕ್ತಿಯಿದೆ ಅಂಥ ಜೀವರುಗಳು ಶುಭರಾಗದ ಕಾರಣದಿಂದ ಸ್ವರ್ಗದಲ್ಲಿ ಹೋಗುತ್ತಾರೆ. ರಾಗವಿರುವವರೆಗೆ ಮೋಕ್ಷದಶೆಯಾಗುವುದಿಲ್ಲ.

ಯಾರಿಗೆ ಅರಹಂತ ಪರಮಾತ್ಮ ಮೊದಲಾದವರ ಕುರಿತು ಭಕ್ತಿಯ ರಾಗವು ವರ್ತಿಸುತ್ತದೆ ಅಂಥ ಜೀವರುಗಳು ಪುಣ್ಯ ಕಟ್ಟಿಕೊಳ್ಳುತ್ತಾರೆ; ಆದರೆ ಕರ್ಮದ ಕ್ಷಯ ಮಾಡುವುದಿಲ್ಲವೆಂದು ಈ ಮೊದಲು ೧೬೬ ನೆಯ ಗಾಥೆಯಲ್ಲಿ ಹೇಳಲಾಗಿದೆ. ಅನಂತರ ಚೈತನ್ಯ ಸ್ವಭಾವದ ದೃಷ್ಟಿಯುಳ್ಳವನಿಗೆ ಆ ರಾಗವು ಉಪಚಾರದಿಂದ ಮೋಕ್ಷದ ನಿಮಿತ್ತವಾಗುತ್ತದೆಯೆಂದು ಕೂಡ ಹೇಳಲಾಗಿದೆ. ಈಗ ಮತ್ತೆ ಹೇಳುವುದೇನೆಂದರೆ - ಯಾರಿಗೆ ಅರಹಂತ ದೇವರ ಕುರಿತು ಭಕ್ತಿಯ ರಾಗಭಾವವಿದೆ ಅಂಥಜೀವರುಗಳು ಸ್ವರ್ಗದಲ್ಲಿ ಹೋಗುತ್ತಾರೆ. ಆದುದರಿಂದ ರಾಗವು ಮೋಕ್ಷದಲ್ಲಿ ಅಂತರಾಯ ಮಾಡುವಂಥದ್ದಿದೆ. ಇಂಥ ಪ್ರತೀತಿಯಿದ್ದರೂ ಕೂಡ ಭ. ಕುಂದಕುಂದಾಚಾರ್ಯದೇವರಂಥ ಮುನಿರಾಜರುಗಳಿಗೆ ಕೂಡ ತೀರ್ಥಯಾತ್ರೆ, ಗ್ರಂಥ ರಚನೆ ಮೊದಲಾದವುಗಳ ಶುಭರಾಗವು ಬರುತ್ತಿರಬೇಕು. ಆರನೆಯ ಗುಣಸ್ಥಾನದ ಸಮಯದಲ್ಲಿ ಅಂಥ ವಿಕಲ್ಪವು ಬರದೆ ಇರುವುದಿಲ್ಲ. ಭಗವಾನ ಧರಸೇನಾಚಾರ್ಯದೇವರಂಥ ಮಹಾಮುನಿಗಳು ಗಿರಿನಾರ ಪರ್ವತದ ಮೇಲೆ ಇರುತ್ತಿದ್ದರೂ ಅವರಿಗೆ ಶ್ರುತಜ್ಞಾನದ ಸಲುವಾಗಿ ವಿಕಲ್ಪ ಉತ್ಪನ್ನವಾಗುತ್ತದೆ. ಶ್ರುತಜ್ಞಾನದ ಧಾರೆಯು ಅವಿಚ್ಛಿನ್ನವಿರಬೇಕೆನಿಸುತ್ತದೆ. ಅನಂತರ ಈರ್ವರು ಮುನಿಗಳನ್ನು ಕರೆಸುತ್ತಾರೆ. ಮುನಿಗಳು

ಬರುತ್ತಿರುವಾಗ 'ಎರಡು ಸುಂದರ ಶುಭ್ರ ವೃಷಭಗಳು ತಮ್ಮ ಚರಣಗಳಲ್ಲಿ ನಮಸ್ಕರಿಸುತ್ತಿರುವಂತೆ' ರಾತ್ರಿಯಲ್ಲಿ ಕನಸು ಕಾಣುತ್ತಾರೆ. ಅದರ ಮೇಲಿಂದ ಶ್ರುತದ ಭಾರ ಹೊರಲು ಸಮರ್ಥವಿರುವಂಥ ಈರ್ವರು ಮುನಿರಾಜರು ಬರುತ್ತಿದ್ದಾರೆಂಬುದನ್ನು ತಿಳಿದುಕೊಳ್ಳುತ್ತಾರೆ. ಕೂಡಲೇ ಅವರ ಮುಖಾರವಿಂದದಿಂದ 'ಶ್ರುತದೇವಿಗೆ ಜಯವಾಗಲಿ !' ಎಂಬ ಉದ್ಗಾರವು ಹೊರಬರುತ್ತದೆ, ಇಂಥ ಶುಭರಾಗವು ಆರನೆಯ ಗುಣಸ್ಥಾನದಲ್ಲಿ ಮುನಿಗಳಿಗೆ ಕೂಡ ಬರುತ್ತದೆ. ಆದರೆ ಆ ಶುಭರಾಗವು ಮೋಕ್ಷದ ಕಾರಣವಿಲ್ಲ. ಆಂತರ್ಯದಲ್ಲಿ ಸ್ವಭಾವದ ಆಶ್ರಯದಿಂದ ಶುದ್ಧ ಉಪಾದಾನವು ಪ್ರಕಟವಾಗುವಲ್ಲಿ ಆ ರಾಗವನ್ನು ನಿಮಿತ್ತವೆಂದು ಗಣಿಸಿ ಪರಂಪರೆಯಿಂದ ಮೋಕ್ಷದ ಕಾರಣವಿದೆಯೆಂದು ಉಪಚಾರದಿಂದ ಹೇಳಲಾಗಿದೆ. ಆದರೆ ರಾಗ ಮಾಡುತ್ತ ಮಾಡುತ್ತ ಶುದ್ಧ ಉಪಾದಾನದ ಪ್ರಾಪ್ತಿಯಾಗುತ್ತದೆಯೆಂಬುದು ಇದರ ಅರ್ಥವಿರುವುದಿಲ್ಲ. ಇದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಆತ್ಮನದು ಜ್ಞಾನಸ್ವಭಾವವಿದೆ, ಅವನ ಶ್ರದ್ಧೆ-ಜ್ಞಾನ ಮತ್ತು ಸ್ಥಿರತೆಯು ಧರ್ಮವಿದೆ. ಮಧ್ಯದಲ್ಲಿ ಪಂಚಪರಮೇಷ್ಠಿಗಳ ಭಕ್ತಿ ಮೊದಲಾದವುಗಳ ಯಾವ ಶುಭರಾಗವು ಬರುತ್ತದೆ ಅದು ಮೋಕ್ಷದ ಕಾರಣವಿಲ್ಲ. ರಾಗವಂತೂ ಬಂಧದ ಕಾರಣವೇ ಇದೆ. ಯಾರು ಪಂಚಪರಮೇಷ್ಠಿಗಳ ಭಕ್ತಿಯ ರಾಗದಿಂದ ಧರ್ಮಮನ್ನಿಸುತ್ತಾರೆ, ಅವರಂತೂ ಅಜ್ಞಾನಿಯಿದ್ದಾರೆ. ಇಲ್ಲಿಯಂತೂ ಧರ್ಮೀ ಜೀವನಿಗೆ ಪಂಚಪರಮೇಷ್ಠಿಗಳ ಭಕ್ತಿ ಇತ್ಯಾದಿಯ ಯಾವ ಭಾವ ಬರುತ್ತದೆ ಅದುಕೂಡ ಧರ್ಮವಿಲ್ಲವೆಂದು ಹೇಳುತ್ತಾರೆ. ಯಾರಿಗೆ ಸಮ್ಯಗ್ದರ್ಶನ ಸಹಿತ ಆಂತರ್ಯದಲ್ಲಿ ಅಧಿಕ ಸ್ಥಿರತೆಯು ಪ್ರಕಟವಾಗಿದೆ, ಆಂತರ್ಯದಲ್ಲಿ ಚೈತನ್ಯದ ಅಧಿಕ ಆನಂದದಶೆಯು ಪ್ರಕಟವಾಗಿದೆ ಅಂಥ ಭಾವಲಿಂಗೀ ಸಂತರಿಗೆ ಕೂಡ ಪಂಚಪರಮೇಷ್ಠಿಯ ಭಕ್ತಿ ಇತ್ಯಾದಿಯ ಯಾವ ಶುಭಭಾವವಿದೆ ಅದು ಕೂಡ ಮೋಕ್ಷದ ಕಾರಣವಿಲ್ಲ, ಆದರೆ ಬಂಧದ ಕಾರಣವೇ ಇದೆ. ಒಳಗೆ ಬಹಳಷ್ಟು ಕಷಾಯದ ಅಭಾವವಾಗಿ ಅಧಿಕ ವೀತರಾಗತೆಯು ಪ್ರಕಟವಾಗಿದೆ ಅದು ಮೋಕ್ಷದ ಕಾರಣವಿದೆ. ಮುನಿದಶೆಯಲ್ಲಿ ಚೈತನ್ಯದ ಆನಂದದಲ್ಲಿ ಜೀಕುತ್ತ ಪಂಚೇಂದ್ರಿಯಗಳ ನಿಗ್ರಹವಾಗಿ ಹೋಗಿದೆ. ಆದುದರಿಂದ ಅವರು ಉತ್ಕೃಷ್ಟ ಇಂದ್ರಿಯ ನಿಗ್ರಹದಿಂದ ಸುಶೋಭಿತರಿದ್ದಾರೆ. ರಾಗದಿಂದ ಧರ್ಮ, ದೇಹದ ಕ್ರಿಯೆಯಿಂದ ಧರ್ಮ ಮನ್ನಿಸುತ್ತಿರುವವರ ವ್ಯವಹಾರ ಶ್ರದ್ಧೆಯು ಕೂಡ ನಿಜವಿರುವುದಿಲ್ಲ. ಅವರಂತೂ ಮಿಥ್ಯಾದೃಷ್ಟಿಯಿದ್ದಾರೆ. ಇಲ್ಲಿಯಂತೂ ಭಾವಲಿಂಗೀ ಸಂತರ ಮಾತು ಇದೆ. ಭಾವಲಿಂಗೀ ಮುನಿಗಳಿಗೆ ಕೂಡ ಆರನೆಯ ಗುಣಸ್ಥಾನದಲ್ಲಿ ಅರಹಂತ ದೇವ ಮೊದಲಾದವರ ಭಕ್ತಿಯ ಭಾವವು ಬಂದಲ್ಲದೆ ಇರುವುದಿಲ್ಲ ಆದರೂ ಕೂಡ ಆ ಭಕ್ತಿಯಿಂದ ಎಂದೂ ಮುಕ್ತಿಯಾಗುವುದಿಲ್ಲ.

ಇಲ್ಲಿ ಅರಹಂತದೇವರ ಭಕ್ತಿಯ ಮಾತು ಸ್ವೀಕರಿಸಲಾಗಿದೆ. ಅರಹಂತದೇವರು ಹೇಗಿದ್ದಾರೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಅರಹಂತರು ಸರ್ವಜ್ಞರಿದ್ದಾರೆ. ಯಾವನಿಗೆ ನನ್ನ ಆತ್ಮನು ಜ್ಞಾನ ಸ್ವಭಾವಿಯಿದ್ದಾನೆಂದು ಪ್ರತೀತಿಯಾಗಿದೆ ಅವನಿಗೆ ಸರ್ವಜ್ಞರ ಭಕ್ತಿಯು ನಿಜವಿರುವ ಸಾಧ್ಯತೆಯಿದೆ. ಸರ್ವಜ್ಞದೇವರು ಎಲ್ಲವನ್ನು ಪ್ರತ್ಯಕ್ಷ ನೋಡಿದ್ದಾರೆ ಮತ್ತು ಅದೇ ಪ್ರಕಾರ ಜಗತ್ತಿನ ಪದಾರ್ಥಗಳ ಕ್ರಮಬದ್ಧ ಅವಸ್ಥೆಯು ಅವುಗಳ ತಮ್ಮ ಕಾರಣದಿಂದ ಆಗುತ್ತದೆ. ಸರ್ವಜ್ಞರು ನೋಡಿರುವಂತೆಯೇ ಆಗುತ್ತದೆ, ಅದರಲ್ಲಿ ವ್ಯತ್ಯಾಸವಾಗುವುದಿಲ್ಲವೆಂದು ಯಾವನು ಮನ್ನಿಸುವುದಿಲ್ಲ ಅವನಿಗೆ ಅರಹಂತ-ಸಿದ್ಧರ ನಿಜವಾದ ಭಕ್ತಿಯಿರುವುದಿಲ್ಲ. ಯಾರಿಗೆ ಸರ್ವಜ್ಞರ ನಿಜವಾದ ಭಕ್ತಿಯಾಗಿದೆ ಆ ಜೀವನು ನಿಮಿತ್ತವನ್ನು-ರಾಗವನ್ನು ಮತ್ತು ಅಲ್ಪಜ್ಞತೆಯನ್ನು ಕೂಡ ಹೇಯವೆಂದು ತಿಳಿಯುತ್ತಾನೆ ಮತ್ತು ತನ್ನ ಜ್ಞಾನಸ್ವಭಾವದಲ್ಲಿ ಸರ್ವಜ್ಞವಾಗುವ ಶಕ್ತಿಯು ತುಂಬಿಕೊಂಡಿದೆ ಅದನ್ನು ಉಪಾದೇಯವೆಂದು ತಿಳಿಯುತ್ತಾನೆ. ಜಗತ್ತಿನ ಪದಾರ್ಥಗಳಲ್ಲಿ ಕ್ರಮಬದ್ಧ ಅವಸ್ಥೆಯಾಗುವ ಸ್ವಭಾವವಿದೆ, ಹಾಗಿಲ್ಲದಿದ್ದರೆ ಕೇವಲಜ್ಞಾನವು ಅವನ್ನು ಹೇಗೆ ತಿಳಿಯುವ ಸಾಧ್ಯತೆಯಿದೆ?

ಮೂರು ಕಾಲದಲ್ಲಿ ಪ್ರತಿಯೊಂದು ಸಮಯದ ಪರ್ಯಾಯವು ನಿಶ್ಚಿತವಿದೆ. ಯಾವ ಪರ್ಯಾಯವೂ ಹಿಂದೆ-ಮುಂದೆ ಆಗುವುದಿಲ್ಲ. ಸರ್ವಜ್ಞದೇವರು ಅದನ್ನು ಪ್ರತ್ಯಕ್ಷ ತಿಳಿಯುತ್ತಾರೆ, ಆ ಸರ್ವಜ್ಞದೇವರ ಪರ್ಯಾಯದಲ್ಲಿ ಕೂಡ ಮೊದಲು ಅಲ್ಪಜ್ಞತೆ ಮತ್ತು ಮಿಥ್ಯಾತ್ವವಿತ್ತು ನಂತರ ಆತ್ಮ ಸ್ವಭಾವದ ಪ್ರತೀತಿ ಮಾಡಿಕೊಂಡು ಅದರ ಆಶ್ರಯದಿಂದ ಮಿಥ್ಯಾತ್ವ ಮತ್ತು ಅಲ್ಪಜ್ಞತೆಯ ಅಭಾವ ಮಾಡಿ ಸರ್ವಜ್ಞರಾದರು. ಆ ಸರ್ವಜ್ಞತೆಯು ಸ್ವಭಾವದಲ್ಲಿರುವುದರಿಂದ ಅದರೊಳಗಿಂದ ಅದು ಪ್ರಕಟವಾಗಿದೆ. ಯಾರಿಗೆ ತಮ್ಮ ಸ್ವಭಾವ ಸಾಮರ್ಥ್ಯದ ಪ್ರತೀತಿಯಾಗಿದೆ ಅವರಿಗೆ ಅಲ್ಪಜ್ಞತೆಯಲ್ಲಿ ಸರ್ವಜ್ಞತೆಯ ಪ್ರತೀತಿಯಾಗಿದೆ. ಆ ಪ್ರತೀತಿಯು ಅಲ್ಪಜ್ಞತೆಯ ಆಶ್ರಯದಿಂದ ಆಗಿಲ್ಲ, ಆದರೆ ಗುಣಿಯಿರುವಂಥ ತನ್ನ ಸ್ವಭಾವದ ಆಶ್ರಯದಿಂದ ಸರ್ವಜ್ಞತೆಯ ಪ್ರತೀತಿಯಾಗಿದೆ. ಆ ಪ್ರತೀತಿ ಮಾಡುವಂಥ ಪರ್ಯಾಯವು ಸ್ವಯಂ ಅಲ್ಪಜ್ಞವಿದೆ, ಆದರೆ ಅದಕ್ಕೆ ಸ್ವಭಾವದ ಆಶ್ರಯವಿದೆ. ಶ್ರೀ ಸಮಯಸಾರದ ಪರಿಶಿಷ್ಟದಲ್ಲಿ ಆತ್ಮನ ಸರ್ವಜ್ಞಶಕ್ತಿಯ ವರ್ಣನೆ ಮಾಡಿದೆ. ಆತ್ಮನಲ್ಲಿ ಸರ್ವಜ್ಞಶಕ್ತಿಯು ಇದೆ. ಆ ಶಕ್ತಿಯು ನವೀನವಾಗುವುದಿಲ್ಲ, ಆದರೆ ಅದರ ಪರ್ಯಾಯವು ನವೀನವಾಗುತ್ತದೆ. ಇಷ್ಟು ಪ್ರತೀತಿ ಮಾಡಿಕೊಂಡರೆ ಆಗ ಸರ್ವಜ್ಞರನ್ನು ಮನ್ನಿಸುವ ಸಾಧ್ಯತೆಯಿದೆ ಮತ್ತು ಅವರಿಗೆ ಸರ್ವಜ್ಞರ ನಿಜವಾದ ಭಕ್ತಿಯಿರುತ್ತದೆ. ಆದಾಗ್ಯೂ ಅವರಿಗೆ ಕೂಡ ಪರದ ಭಕ್ತಿಯ ಯಾವ ರಾಗವಿರುತ್ತದೆ ಅದಂತೂ ಬಂಧದ ಕಾರಣವೇ ಇರುತ್ತದೆ.

ಅಜ್ಞಾನಿಗಂತೂ ಸರ್ವಜ್ಞತೆಯ ಪ್ರತೀತಿಯು ಕೂಡ ಬರುವುದಿಲ್ಲ. ತ್ರಿಕಾಲೀ ಜ್ಞಾನವು ಉಪಾದೇಯವಿದೆ ಮತ್ತು ಪರ್ಯಾಯ ಬುದ್ಧಿಯು ಹೇಯವಿದೆಯೆಂಬ ನಿರ್ಣಯವಿಲ್ಲದೆ ಸರ್ವಜ್ಞತೆಯ ಪ್ರತೀತಿಯಿರುವುದಿಲ್ಲ ಮತ್ತು ಅವನಿಗೆ ಸರ್ವಜ್ಞತೆಯ ಯಥಾರ್ಥ ಭಕ್ತಿಯು ಕೂಡ ಇರುವುದಿಲ್ಲ. ಆದುದರಿಂದ ಇಲ್ಲಿ 'ಯಃ ಖಲು ಅರ್ಹದಾದಿ ಭಕ್ತಿವಿಧೇಯಬುದ್ಧಿಃ ಸನ್' ಎಂದು ಹೇಳಿದೆ. ಎಂದರೆ ಧರ್ಮಾತ್ಮನಿಗೆ ಅಖಂಡ ಜ್ಞಾನಸ್ವಭಾವದ ಪ್ರತೀತಿಯಾಗಿರುವುದರಿಂದ ಅವನಿಗೆ ಸರ್ವಜ್ಞರ ಕುರಿತು ನಿಜವಾದ ಭಕ್ತಿಯಿರುತ್ತದೆ.

ಸರ್ವಜ್ಞದೇವರು ಹೇಗೆ ನೋಡಿದ್ದಾರೆ ಹಾಗೆಯೇ ವಸ್ತುವಿನ ಕ್ರಮಬದ್ಧ ಪರ್ಯಾಯವಾಗುತ್ತದೆಯೆಂದು ಯಾರು ನಿರ್ಣಯ ಮಾಡಿದ್ದಾರೆ ಅವರಿಗೆ ಜ್ಞಾನಸ್ವಭಾವದ ನಿರ್ಣಯವಾಗಿ ಹೋಗಿದೆ ಮತ್ತು ಅವರಿಗೆ ಜ್ಞಾನಸ್ವಭಾವದ ಪುರುಷಾರ್ಥವಾದಲ್ಲದೆ ಇರುವುದಿಲ್ಲ. ಜ್ಞಾನಸ್ವಭಾವದ ನಿರ್ಣಯದಲ್ಲಿ ಕ್ರಮಬದ್ಧ ಪರ್ಯಾಯದ ನಿರ್ಣಯವು ಬಂದುಬಿಡುತ್ತದೆ. ಎಷ್ಟು ಮೂರು ಕಾಲದ ಸಮಯಗಳಿವೆ ಅಷ್ಟು ದ್ರವ್ಯದ ಪರ್ಯಾಯಗಳಿವೆ. ಯಾರು ಇದರ ನಿರ್ಣಯ ಮಾಡಿದ್ದಾರೆ ಅವರಿಗೆ ಸ್ವದ್ರವ್ಯದ ಸನ್ಮುಖ ದೃಷ್ಟಿಯಾಗಿದೆ ಮತ್ತು ಸಂಸಾರದ ರುಚಿಯು ಬಿಟ್ಟುಹೋಗಿದೆ. ಕ್ರಮಬದ್ಧ ಪರ್ಯಾಯದ ನಿರ್ಣಯವು ಅಂತರ್ಮುಖವಾಗುವ-ಜ್ಞಾತಾತನದ ಪುರುಷಾರ್ಥವನ್ನೇ ತಿಳಿಸುತ್ತದೆ, ಕರ್ತೃತ್ವತೆಯ ನಿಷೇಧ ಮಾಡುತ್ತದೆ. ಕ್ರಮಬದ್ಧ ಪರ್ಯಾಯದ ನಿರ್ಣಯ ಮಾಡಿದರೆ ಅಲ್ಲಿ ಸ್ವಯಂ ಜ್ಞಾತಾನಾಗಿ ಉಳಿಯುವನು. ಆ ನಿಮಿತ್ತವನ್ನಂತೂ ಬದಲು ಮಾಡಲು ಬಯಸುವುದಿಲ್ಲ, ಆದರೆ ತನ್ನ ಪರ್ಯಾಯವನ್ನು ಕೂಡ ಹಿಂದೆ-ಮುಂದೆ ಮಾಡುವಂಥ ಕರ್ತೃತ್ವವನ್ನು ಮನ್ನಿಸುವುದಿಲ್ಲ, ಆದರೆ ವಸ್ತುವಿನ ಮೇಲೆ ಅವನ ದೃಷ್ಟಿಯು ಹೋಗುತ್ತದೆ. ಎಂದರೆ ಅದರಲ್ಲಿ ವಸ್ತುದೃಷ್ಟಿಯ ಪುರುಷಾರ್ಥವು ಬಂದುಬಿಡುತ್ತದೆ.

**ಪ್ರಶ್ನೆ :-** ಒಂದುವೇಳೆ ಸರ್ವಜ್ಞರನ್ನು ಮನ್ನಿಸಿದರೆ ಸ್ವಯಂ ಸರ್ವಜ್ಞರಾಗಿ ಹೋಗುತ್ತಾರೆಂದ ಮೇಲೆ ಪುರುಷಾರ್ಥ ಮಾಡುವ ಅವಶ್ಯಕತೆಯಾದರೂ ಏನು ಉಳಿಯಿತು ?

**ಉತ್ತರ :-** ನಿನಗೆ ಸರ್ವಜ್ಞರ ನಿರ್ಣಯವಿಲ್ಲದಿದ್ದರೆ ಅದನ್ನು ಮೊದಲು ಮಾಡಬೇಕಾಗುವುದು. ಸರ್ವಜ್ಞರ

ನಿರ್ಣಯ ಮಾಡಿದರೆ ಅದರಲ್ಲಿ ಜ್ಞಾನಸ್ವಭಾವದ ನಿರ್ಣಯವಾಗಿ ಹೋಗುವುದು ಮತ್ತು ಜ್ಞಾನಸ್ವಭಾವದ ನಿರ್ಣಯ ಮಾಡಿದರೆ ಅಲ್ಲಿ ಜ್ಞಾತಾ ಬುದ್ಧಿಯ ಅಪೂರ್ವ ಪುರುಷಾರ್ಥವಾಗುವುದು. ಅವನಿಗೆ ಪುರುಷಾರ್ಥದ ಸಂದೇಹ ಉಳಿಯುವುದಿಲ್ಲ. ಪರ್ಯಾಯಗಳು ಕ್ರಮಬದ್ಧವಾಗುತ್ತವೆ ಮತ್ತು ನಾನು ಅದರ ಜ್ಞಾತಾನಿದ್ದೇನೆಂಬ ನಿರ್ಣಯವನ್ನು ಯಾರು ಮಾಡುತ್ತಾರೆ ಅವರ ಜ್ಞಾನದಲ್ಲಿ ಅನಂತ ಪುರುಷಾರ್ಥವು ಬಂದುಬಿಡುತ್ತದೆ. ಇದು ಸಮ್ಯಗ್ದರ್ಶನದ ಎಂದರೆ ಸಮ್ಯಗ್ದೃಷ್ಟಿಯ ಪ್ರತೀತಿ ಹೇಗಿರುವುದೆಂಬುದರ ಮಾತಿದೆ. ಯಾರಿಗೆ ಕ್ರಮಬದ್ಧ ಪರ್ಯಾಯದ ನಿರ್ಣಯವಿಲ್ಲ ಅವರಿಗೆ ಸರ್ವಜ್ಞರ ಅಥವಾ ಆತ್ಮನ ಸ್ವಭಾವದ ನಿರ್ಣಯವು ಕೂಡ ಇರುವುದಿಲ್ಲ. ದ್ರವ್ಯವು ತನ್ನ ಕ್ರಮಬದ್ಧ ಪರ್ಯಾಯವನ್ನು ಪಡೆಯುತ್ತದೆಯೆಂದು ನಿಶ್ಚಿತ ಮಾಡಿದಮೇಲೆ ಎಲ್ಲವುಗಳಿಂದ ಉದಾಸೀನನಾಗಿ ಹೋಗುವನು ಮತ್ತು ತನ್ನ ಪರ್ಯಾಯವು ದ್ರವ್ಯದೊಳಗಿಂದ ಬರುತ್ತಿರುವುದರಿಂದ ಬುದ್ಧಿಯು ದ್ರವ್ಯದಲ್ಲಿ ಒಂದಾಗಿ ಹೋಗುವುದು ಎಂದರೆ ದ್ರವ್ಯದ ಆಶ್ರಯದಿಂದ ಮೋಕ್ಷದ ಪುರುಷಾರ್ಥವು ಬಂದುಬಿಡುತ್ತದೆ. ಇದನ್ನು ಬಿಟ್ಟು ಪರ್ಯಾಯದಲ್ಲಿ ಬದಲಾವಣೆ ಮಾಡುವ ಬುದ್ಧಿಯಿಂದಂತೂ ಮಿಥ್ಯಾತ್ವವಾಗುವುದು. ಮೂರು ಕಾಲದಲ್ಲಿ ಯಾವ ಸಮಯದಲ್ಲಿ ಯಾವ ಪರ್ಯಾಯವಾಗುವುದು ವಸ್ತುವಿನ ಸ್ವಭಾವವಿದೆ, ಅದನ್ನೇ ಸರ್ವಜ್ಞರು ನೋಡಿದ್ದಾರೆ ಎಂದರೆ ಸರ್ವಜ್ಞರ ನಿರ್ಣಯದಲ್ಲಿ ಕ್ರಮಬದ್ಧ ಪರ್ಯಾಯದ ನಿರ್ಣಯವು ಬಂದುಬಿಡುತ್ತದೆ ಮತ್ತು ಕ್ರಮಬದ್ಧಪರ್ಯಾಯದ ನಿರ್ಣಯದಲ್ಲಿ ಜ್ಞಾನಸ್ವಭಾವದ ಸನ್ಮುಖತೆಯ ಪುರುಷಾರ್ಥವು ಬಂದುಬಿಡುತ್ತದೆ. ಇಂಥ ಶ್ರದ್ಧೆಯಿಲ್ಲದವನು ಸರ್ವಜ್ಞರನ್ನು, ಆಗಮವನ್ನು, ವಸ್ತುವನ್ನು ಅಥವಾ ಆತ್ಮನನ್ನು ತಿಳಿಯುವುದಿಲ್ಲ. ಕ್ರಮಬದ್ಧಪರ್ಯಾಯದಲ್ಲಿ ಜೈನದರ್ಶನದ ಮರ್ಮವಿದೆ.

ನಾಟಕ ಸಮಯಸಾರದಲ್ಲಿ ಬನಾರಸೀದಾಸರು ಹೇಳಿರುವುದೇನೆಂದರೆ ಆತ್ಮ ವಸ್ತುವಿನಲ್ಲಿ ಅನೇಕ ಧರ್ಮಗಳಿವೆ. ಅದರಲ್ಲಿ ಜ್ಞಾನಸ್ವಭಾವದ ಸನ್ಮುಖವಾದ ಮೇಲೆ ಏಕಕಾಲದಲ್ಲಿ ಪುರುಷಾರ್ಥ, ಸ್ವಭಾವ, ಕಾಲ, ನಿಯತಿ ಇವು ನಾಲ್ಕೂ ಸಮವಾಯಗಳ ಅಸ್ತಿರೂಪ ಮತ್ತು ಕರ್ಮದ ನಾಸ್ತಿರೂಪ ಪರಿಣಮನವಾಗಿ ಹೋಗುತ್ತದೆ. ಇಂಥ ಆತ್ಮನ ಅನೇಕ ಧರ್ಮಗಳೊಳಗಿಂದ ಒಂದನ್ನು ಮನ್ನಿಸುವುದು ಮತ್ತು ಒಂದನ್ನು ಮನ್ನಿಸದಿದ್ದರೆ ಮಿಥ್ಯಾಜ್ಞಾನವಿದೆ. ನಿಯತವನ್ನು ಮನ್ನಿಸುವುದು ಆದರೆ ಪುರುಷಾರ್ಥವನ್ನು ಮನ್ನಿಸದಿರುವುದು ಅಥವಾ ಪುರುಷಾರ್ಥವನ್ನು ಮನ್ನಿಸುವುದು ಆದರೆ ನಿಯತವನ್ನು ಮನ್ನಿಸದಿರುವುದು ಮಿಥ್ಯಾ ಜ್ಞಾನವಿದೆ. ಐದೂ ಸಮವಾಯಗಳು ಏಕಕಾಲದಲ್ಲಿ ಇವೆ. ಯಾವ ಜೀವನು ದುರಾಗ್ರಹವನ್ನು ಬಿಟ್ಟುಕೊಟ್ಟು ಒಂದರಲ್ಲಿ ಅನೇಕ ಧರ್ಮವನ್ನು ನೋಡುತ್ತಾನೆ ಅಥವಾ ಸ್ವಭಾವದ ಕಡೆಗಿರುವ ಪುರುಷಾರ್ಥದಲ್ಲಿ ಒಂದು ಸಮಯದಲ್ಲಿ ಐದು ಸಮವಾಯಗಳು ಬರುತ್ತವೆಂದು ತಿಳಿಯುವವನು ಜ್ಞಾನಿಯಿದ್ದಾನೆ.

ನಿಶ್ಚಯದಿಂದ ಒಂದು ಸಮಯದಲ್ಲಿ ಐದು ಸಮವಾಯಗಳಿವೆ. ಜ್ಞಾನಸ್ವಭಾವದ ನಿರ್ಣಯದಲ್ಲಿ ಐದು ಸಮವಾಯಗಳು ಏಕಕಾಲದಲ್ಲಿ ಬಂದುಬಿಡುತ್ತವೆ. ಆದರೆ ಇಂಥ ಪ್ರತೀತಿಯು ಸಮ್ಯಗ್ದೃಷ್ಟಿಗೇ ಆಗುತ್ತದೆ. ಈ ನಿರ್ಣಯದಲ್ಲಿಯೇ ಮೋಕ್ಷಮಾರ್ಗದ ಪುರುಷಾರ್ಥವಿದೆ. ಸರ್ವಜ್ಞರ ಪ್ರತೀತಿ ಮಾಡಿದವನಿಗೆ ತನ್ನ ಪುರುಷಾರ್ಥದ ಸಂದೇಹವಿರುವುದಿಲ್ಲ.

ಸರ್ವಜ್ಞರು ಪೂರ್ಣಜ್ಞಾನಿ, ನಿರಾವರಣಜ್ಞಾನಿ, ಅತೀಂದ್ರಿಯ ಜ್ಞಾನಿಯೆಂಬುದನ್ನು ಯಾರು ಮನ್ನಿಸುತ್ತಾರೆ, ಯಾರು ತಮ್ಮ ಜ್ಞಾನದಲ್ಲಿ ಒಪ್ಪಿಕೊಳ್ಳುತ್ತಾರೆ, ಯಾರು ಜ್ಞಾನದಲ್ಲಿ ಸರ್ವಜ್ಞರ ಪ್ರತೀತಿ ಮಾಡುವರು ಅವರ ಜ್ಞಾನದಲ್ಲಿ ಸ್ವಭಾವದ ಕಡೆಗಿರುವ ಪುರುಷಾರ್ಥವು ಬಂದುಬಿಡುತ್ತದೆ. ಈ ಪ್ರಕಾರ ಸರ್ವಜ್ಞದೇವರ ಪರಿಚಯವಿರುವವನಿಗೆ ಅರಹಂತರ ಕುರಿತು ನಿಜವಾದ ಭಕ್ತಿಯಿರುತ್ತದೆ.

ಭಗವತೀದಾಸರು ಕೂಡ ಹೀಗೆ ಹೇಳುತ್ತಾರೆ -

**ಜೋ ಜೋ ದೇಖ್ಯೋ ವೀತರಾಗನೆ ಸೋ ಸೋ ಹೋಸೀ ವೀರಾರೇ ।**
**ಬಿನ ದೇಖ್ಯೋ ಹೋನೀ ನಹಿಂ ಕಬಹೂ ಕಾಹೇ ಹೋತ ಅಧೀರಾರೇ ॥೧॥**

**ಸಮಯೋ ಏಕ ಬಢೈ ನಹಿ ಘಟಸೀ ಜೋ ಸುಖ-ದುಖಕೀ ಪೀರಾರೇ ।**
**ತೋ ಕ್ಯೋಂ ಸೋಚ ಕರೈ ಮನ ಕೂಡೋ ಹೋಯ ವಜ್ರ ಜ್ಯೋ ಹೀರಾ ರೇ ॥೨॥**

ಸರ್ವಜ್ಞ ಭಗವಂತರು ನೋಡಿರುವುದರಿಂದ ಭಗವಂತರ ಜ್ಞಾನದ ಕಾರಣದಿಂದ ಪದಾರ್ಥಗಳ ಪರ್ಯಾಯಗಳಾಗುತ್ತವೆಯೆಂಬುದಾಗಿಲ್ಲ. ಪರ್ಯಾಯಗಳಂತೂ ಪದಾರ್ಥದ ಕಾರಣದಿಂದಲೇ ಆಗುತ್ತವೆ. ವಸ್ತುವಿನ ಸ್ವಭಾವವೇ ಸಮಯ ಸಮಯಕ್ಕೆ ಕ್ರಮಬದ್ಧ ಪರ್ಯಾಯವಾಗುವಂತಿದೆಯೆಂದು ನಿರ್ಣಯ ಮಾಡಿ ನೀನು ನಿನ್ನ ಸ್ವಭಾವದ ಕಡೆಗೆ ತಿರುಗಿ ಜ್ಞಾತಾ-ದೃಷ್ಟಾನಾಗು. ಶುಭಾಶುಭ ರಾಗವು ಬರುತ್ತದೆ, ಅದರದೂ ಕೂಡ ಜ್ಞಾತಾನಾಗು. ಪರ್ಯಾಯವನ್ನು ಬದಲಿಸಹೋದರೆ ಅಲ್ಲಿ ಮಿಥ್ಯಾತ್ವವಾಗುವುದು, ಆದರೆ ಜ್ಞಾತಾ-ದೃಷ್ಟಾದ ಅಭಿರುಚಿ ಮಾಡಿದೆಯೆಂದರೆ ಅಲ್ಲಿ ರಾಗವು ಹೊರಟೇ ಹೋಗುವುದು. ಧರ್ಮಾತ್ಮನಿಗೆ ಅರಹಂತ-ಸಿದ್ಧರ ಕೇವಲಜ್ಞಾನವಂತೂ ಸ್ವೀಕಾರವಾಗಿದೆ. ಜ್ಞಾನಸ್ವಭಾವದ ಪ್ರತೀತಿಯು ಕೂಡ ಆಗಿದೆ, ಆದರೆ ಇನ್ನೂ ಸ್ವಭಾವದಲ್ಲಿ ಪೂರ್ಣ ಲೀನತೆಯು ಆಗುತ್ತಿರುವುದಿಲ್ಲ. ಆದುದರಿಂದ ವ್ಯವಹಾರಭಕ್ತಿಯ ರಾಗವು ಉತ್ಪನ್ನವಾಗುತ್ತದೆ. ಮುನಿದಶೆಯಲ್ಲಿಯೂ ಕೂಡ ಭಕ್ತಿ ಹಾಗೂ ತಪಶ್ಚರ್ಯದ ವಿಕಲ್ಪವು ಬರುತ್ತದೆ, ಅದು ಕೂಡ ಪ್ರಶಸ್ತ ರಾಗವಿದೆ, ಅದು ಕಲಂಕವಿದೆ. ಇಲ್ಲಿಯಂತೂ ಪರ್ಯಾಯದ ಜ್ಞಾನ ಮಾಡಿಸಿಕೊಟ್ಟು, ಅದು ಹೇಗೆ ಇದೆ ಹಾಗೆ ತಿಳಿಸಿಕೊಡುತ್ತಲಿದ್ದಾರೆ. ಅಂತರಂಗ ಪರಮ ಸಂಯಮರೂಪ ಅತೀಂದ್ರಿಯ ಸ್ವಭಾವವು ಯಾವಾಗ ಪ್ರಕಟವಾಗುತ್ತದೆ ಆಗ ಇಂದ್ರಿಯಗಳ ಕಡೆಗೆ ಪ್ರವೃತ್ತಿಯಾಗುವುದಿಲ್ಲ. ಅದು ನಿಜವಾದ ಇಂದ್ರಿಯ ದಮನವಿದೆ. ಇಲ್ಲಿಯಂತೂ ನಿಶ್ಚಯಪೂರ್ವಕ ವ್ಯವಹಾರದ ಜ್ಞಾನಮಾಡಿಸಿದ್ದಾರೆ.

ಸಮ್ಯಗ್ದರ್ಶನವಾದಮೇಲೆ ಶ್ರದ್ಧೆಯ ಅಪೇಕ್ಷೆಯಿಂದಂತೂ ಜಿತೇಂದ್ರಿಯತನವು ಪ್ರಕಟವಾಗುತ್ತದೆ ಮತ್ತು ಇಲ್ಲಿ ಮುನಿದಶೆಯೊಳಗೆ ಮೂರು ಕಷಾಯಗಳ ನಾಶವಾದ ಮೇಲೆ ಉತ್ಕೃಷ್ಟ ಅತೀಂದ್ರಿಯ ದಶೆಯು ಪ್ರಕಟವಾಗುತ್ತದೆ. ಇದುವೇ ಸ್ವರೂಪದ ಏಕಾಗ್ರತೆಯರೂಪದ ತಪಸ್ಸಿದೆ. ಆಹಾರ ಮೊದಲಾದವುಗಳ ತ್ಯಾಗ ಮಾಡುವುದು ಅದೇನು ನಿಜವಾದ ತಪಸ್ಸಿಲ್ಲ. ಕಾರಣವೇನೆಂದರೆ ಆತ್ಮನಿಗೆ ಪರಪದಾರ್ಥಗಳ ಗ್ರಹಣ-ತ್ಯಾಗವಂತೂ ಇರುವುದೇ ಇಲ್ಲ.

ಮುನಿರಾಜರಿಗೆ ಕೂಡ ಎಷ್ಟು ಭಕ್ತಿ ಮೊದಲಾದವುಗಳ ರಾಗರೂಪದ ಪರಿಣಾಮವಾಗುತ್ತದೆ ಅಷ್ಟು ಕ್ಲೇಶವಿದೆ, ಕಲಂಕವಿದೆ. ಮುನಿಯು ಅದನ್ನು ಪ್ರತ್ಯಕ್ಷ ಮೋಕ್ಷದ ಅಂತರಾಯರೂಪವೆಂದು ಮನ್ನಿಸುತ್ತಾರೆ.

ಶ್ರೀಧರಸೇನಾಚಾರ್ಯರಂಥ ಮಹಾ ಮುನಿರಾಜರಿಗೆ ಕೂಡ ಶ್ರುತಭಕ್ತಿಯ ರಾಗವು ಬಂದುಬಿಟ್ಟಿತ್ತು. ಆದರೆ ಅವರು ಆ ರಾಗವನ್ನು ಕಲಂಕವೆಂದು ತಿಳಿಯುತ್ತಿದ್ದರು ಗಣಧರದೇವರು ಕೂಡ ಶಾಸ್ತ್ರರಚನೆಯ ವಿಕಲ್ಪವು ಉತ್ಪನ್ನವಾದಾಗ ಅವರು ಅದನ್ನು ಮೋಕ್ಷದ ಅಂತರಾಯರೂಪವೆಂದು ತಿಳಿಯುತ್ತಿದ್ದರು. ಹೀಗೆ ಪ್ರಶಸ್ತ ರಾಗವನ್ನು ಕೂಡ ಜ್ಞಾನಿಗಳು ಆದರಣೀಯವೆಂದು ಮನ್ನಿಸುವುದಿಲ್ಲ. ರಾಗವಿದ್ದರೂ ಕೂಡ ಮೊದಲು ಇಂಥ ಪರಿಚಯ ಮಾಡಿಕೊಳ್ಳಬೇಕು.

ಆತ್ಮನು ಜ್ಞಾನಸ್ವಭಾವಿಯಿದ್ದಾನೆ. ಅವನ ದೃಷ್ಟಿ-ಜ್ಞಾನ ಮತ್ತು ಅವನಲ್ಲಿ ಲೀನತೆಯರೂಪದ ಯಾವ ವೀತರಾಗ ಭಾವವಿದೆ ಅದು ಮೋಕ್ಷದ ಕಾರಣವಿದೆ. ಮಧ್ಯದಲ್ಲಿ ಯಾವ ರಾಗವು ಬರುತ್ತದೆ ಅದು ಬಂಧದ ಕಾರಣವಿದೆ. 'ರಾಗವು ಕರ್ಮಜನ್ಯವಿದೆ'ಯೆಂದು ಯಾರೋ ಹೇಳುತ್ತಾರೆ, ಅದರಂತೆ 'ಶುಭರಾಗದಿಂದ-ವ್ಯವಹಾರದಿಂದ

ಮೋಕ್ಷವಾಗುತ್ತದೆ'ಯೆಂದು ಕೂಡ ಹೇಳುತ್ತಾರೆ. ಆದರೆ ಇದರ ಅರ್ಥವು ಕರ್ಮಜನ್ಯ ಭಾವದಿಂದ ಮೋಕ್ಷವಾಗುತ್ತದೆಯೆಂದಂತಾಯಿತು !ಆದರೆ ಆ ಮಾತು ಸಂಪೂರ್ಣ ಅಸತ್ಯವಿದೆ. ಆತ್ಮನ ಜ್ಞಾನಾನಂದ ಸ್ವಭಾವದಲ್ಲಿ ವಿಕಾರವಿಲ್ಲದಿರುವುದರಿಂದ ಆ ಸ್ವಭಾವದ ದೃಷ್ಟಿಯಲ್ಲಿ ವಿಕಾರವನ್ನು ಕರ್ಮಜನ್ಯವೆಂದು ಹೇಳಲಾಗಿದೆ, ಆದರೆ ಪರ್ಯಾಯದಲ್ಲಿ ಸ್ವಯಂ ಜೀವದ ಅಪರಾಧವಿದೆ, ಆ ವಿಕಾರವು ಆತ್ಮನ ಸ್ವಭಾವದಲ್ಲಿ ಸಹಕಾರಿಯಿರುವುದಿಲ್ಲ ಮತ್ತು ವಿಕಾರವು ಮೋಕ್ಷದ ಕಾರಣವಾಗುವುದಿಲ್ಲ. ಆತ್ಮನ ಜ್ಞಾನಸ್ವಭಾವದ ಅಭಿರುಚಿ ಮಾಡಿ ಅದರಲ್ಲಿ ಏಕಾಗ್ರವಾಗುವುದು ಜೀವದ ಪುರುಷಾರ್ಥವಿದೆ. ಇದನ್ನು ಹೊರತುಪಡಿಸಿ ಬಾಹ್ಯದೊಳಗೆ ಪರದಲ್ಲಿ ಏನನ್ನಾದರೂ ಮಾಡುವಲ್ಲಿಯಂತೂ ಜೀವದ ಪುರುಷಾರ್ಥವಿಲ್ಲ, ಜಡಕರ್ಮವನ್ನು ತಿಳಿದುಕೊಳ್ಳುವುದರಲ್ಲಿ ಕೂಡ ಜೀವದ ಪುರುಷಾರ್ಥವಿಲ್ಲ. ನಿಜವಾಗಿ ನೋಡಹೋದರೆ ರಾಗವನ್ನು ಕೂಡ ದೂರ ಮಾಡಬೇಕಾಗುವುದಿಲ್ಲ, ಆದರೆ ತನ್ನ ಸ್ವಭಾವದ ಆಶ್ರಯ ಮಾಡಿದರೆ ಅಲ್ಲಿ ರಾಗದ ಉತ್ಪತ್ತಿಯೇ ಆಗುವುದಿಲ್ಲ. ಜ್ಞಾನಾನಂದ ಸ್ವಭಾವದ ಪರಿಚಯ ಮಾಡಿಕೊಂಡು ಅದರ ಅಭಿರುಚಿ ಮಾಡಿದರೆ ಮೊದಲು ರಾಗ ಮತ್ತು ಜ್ಞಾನದ ಏಕತ್ವ ಬುದ್ಧಿಯ ಮಿಥ್ಯಾತ್ವವು ಬಿಟ್ಟುಹೋಗುವುದು. ಅದರನಂತರ ಎಲ್ಲಿಯವರೆಗೆ ಆ ಸ್ವಭಾವದಲ್ಲಿ ಸ್ಥಿರತೆಯಾಗುವುದಿಲ್ಲ, ಅಲ್ಲಿಯವರೆಗೆ ರಾಗವಿರುತ್ತದೆ ನಿಜ, ಆದರೆ ಸ್ವಭಾವದ ದೃಷ್ಟಿಯಲ್ಲಿ ಜ್ಞಾನಿಗಳು ಅದರ ಸ್ವಾಮಿಯಾಗುವುದಿಲ್ಲ. ಇಷ್ಟೇ ಏಕೆ ಕರ್ಮವು ವಿಕಾರ ಮಾಡಿಸುತ್ತದೆಯೆಂದು ಕೂಡ ಅವರು ಮನ್ನಿಸುವುದಿಲ್ಲ.

ಕರ್ಮವು ವಿಕಾರವನ್ನು ಉತ್ಪನ್ನ ಮಾಡಿಸುತ್ತದೆಯೆಂದು ಮನ್ನಿಸಿದರೆ ಅದು ಕೂಡ ದೋಷವಿದೆ ಮತ್ತು ವಿಕಾರವನ್ನೇ ತನ್ನ ಸ್ವರೂಪವೆಂದು ಮನ್ನಿಸಿದರೆ ಅದು ಕೂಡ ದೋಷವಿದೆ. ಏಕೆಂದರೆ ಸ್ವಭಾವದಲ್ಲಿ ವಿಕಾರವಿಲ್ಲ, ಆದರೆ ಪರ್ಯಾಯದಲ್ಲಿ ತನ್ನದೇ ಆದ ಅಪರಾಧದಿಂದ ವಿಕಾರವಾಗುತ್ತದೆ. ಆತ್ಮನಿಗೆ ವಿಕಾರದ ಜತೆಯಲ್ಲಿ ಅನಿತ್ಯ ತಾದಾತ್ಮ್ಯವಿದೆಯೆಂಬುದನ್ನು ತಿಳಿದುಕೊಂಡು ಸ್ವಭಾವದ ಸನ್ಮುಖ ಏಕಾಗ್ರತೆಯನ್ನು ಸಾಧಿಸಿದರೆ ವಿಕಾರಭಾವವು ಬಿಟ್ಟುಹೋಗುತ್ತದೆ, ಆದರೆ ಮಧ್ಯದಲ್ಲಿ ಪಂಚಪರಮೇಷ್ಠಿಗಳ ಭಕ್ತಿ ಮೊದಲಾದವುಗಳ ಭಾವವು ಬರುತ್ತಿದ್ದರೆ ಆ ಭಾವವು ಉಳಿದುಕೊಂಡರೆ ಅದರ ಫಲಸ್ವರೂಪವಾಗಿ ಸ್ವರ್ಗದ ಪ್ರಾಪ್ತಿಯಾಗುತ್ತದೆ. ಎಂದರೆ ರಾಗವು ಮೋಕ್ಷಕ್ಕೆ ಹೋಗುವಲ್ಲಿ ಅಂತರಾಯ ಮಾಡುವಂಥದ್ದಿದೆ-ತಡೆಯನ್ನು ಒಡ್ಡುವಂಥದ್ದಿದೆ. ಇದು ಸಾಧಕ ಜೀವರುಗಳ ಅನುಭವಪೂರ್ವಕವಾದ ಮಾತಿದೆ. ಕೇವಲಿಯಾಗಿ ಹೋದವರಿಗಂತೂ ರಾಗವಿರುವುದೇ ಇಲ್ಲ ಮತ್ತು ಮಿಥ್ಯಾದೃಷ್ಟೀ ಜೀವರುಗಳಿಗೆ ಧರ್ಮದ ಪ್ರತೀತಿಯಿರುವುದಿಲ್ಲ, ಎಂದರೆ ಅವರಿಗೆ ಮೋಕ್ಷಮಾರ್ಗವಿಲ್ಲ. ಮೋಕ್ಷಮಾರ್ಗದಲ್ಲಿ ಮಧ್ಯದೊಳಗೆ ರಾಗವು ಬರುತ್ತದೆ. **'ಧರ್ಮೀ ಜೀವದ ಪುರುಷಾರ್ಥವು ಸ್ವಭಾವದಲ್ಲಿ ಪುರುಷಾರ್ಥ ಮಾಡುವುದಿದೆ.'** ರಾಗವನ್ನು ಬಿಟ್ಟುಕೊಡುವ ಸಲುವಾಗಿ ಬೇರೆ ಉದ್ಯಮ ಮಾಡಬೇಕಾಗುವುದಿಲ್ಲ, ಆದರೆ ತನ್ನ ಸ್ವಭಾವದ ಉದ್ಯಮ ಮಾಡಿದ ಮೇಲೆ ರಾಗದ ಉತ್ಪತ್ತಿಯೇ ಆಗುವುದಿಲ್ಲ. ಮುನಿದಶೆಯಲ್ಲಿ ಜ್ಞಾನಪೂರ್ವಕವಿರುವಂಥ ಸ್ವಭಾವದ ಶ್ರದ್ಧೆಯಿಂದ ಬಹಳಷ್ಟು ಸ್ಥಿರತೆಯಿರುತ್ತದೆ. ಎಂದರೆ ಅಲ್ಲಿ ಅಧ್ಯಾತ್ಮದ ಆನಂದವು ಅಧಿಕತರವಿರುತ್ತದೆ, ಆದರೆ ಇನ್ನೂ ರಾಗವು ಉಳಿದುಕೊಂಡಿದ್ದರೆ ಅದರ ಫಲಸ್ವರೂಪವಾಗಿ ಒಂದು ಸ್ವರ್ಗದ ಭವ ಮಾಡಬೇಕಾಗುತ್ತದೆ. ಅಲ್ಲಿ ಎಂದರೆ ಸ್ವರ್ಗದಲ್ಲಿ ನಾಲ್ಕನೆಯ ಗುಣಸ್ಥಾನವು ಬಂದುಬಿಡುತ್ತದೆ. (ಇಲ್ಲಿ ಮುನಿದಶೆಯಲ್ಲಿ ಇರುವಂಥ ಗುಣಸ್ಥಾನವು ಉಳಿಯುವುದಿಲ್ಲ). ಅಲ್ಲಿ ಆತ್ಮನ ಸ್ವಭಾವದ ಪ್ರತೀತಿಯಿರುತ್ತದೆ, ಆದರೆ ವಿಶೇಷ ಸ್ಥಿರತೆಯು ಇಲ್ಲದಿರುವುದರಿಂದ ಅಲ್ಲಿ ವಿಶೇಷ ಅಧ್ಯಾತ್ಮರಸದ ಅಭಾವವಿರುತ್ತದೆ. ಇಂದ್ರಿಯ ವಿಷಯಗಳ ವಾಸನೆಯಿಂದ ಆಕುಲತೆಯಿರುತ್ತದೆ. ಇಲ್ಲಿ ಪುಣ್ಯವನ್ನು ಕೂಡ ವಿಷವೃಕ್ಷವೆಂದು ಹೇಳಿದ್ದಾರೆ. ಚಿದಾನಂದ ಸ್ವರೂಪನಾದ ಆತ್ಮನು ಸ್ವಯಂ ಅಮೃತ ವೃಕ್ಷನಿದ್ದಾನೆ ಮತ್ತು ಪುಣ್ಯದ ಫಲದಲ್ಲಿ ಯಾವ ಇಂದ್ರಿಯ ವಿಷಯಗಳು ದೊರಕುತ್ತವೆ ಅದಂತೂ ಪ್ರತ್ಯಕ್ಷ ವಿಷದ ವೃಕ್ಷವಿದೆ. ಧರ್ಮಾತ್ಮ ಜೀವನಿಗೆ ಆಂತರ್ಯದ

ಚಿದಾನಂದದ ಹೊರತಾಗಿ ಬೇರೆ ಎಲ್ಲಿಯೂ ಯಾವ ಪದಾರ್ಥದಲ್ಲಿಯೂ ಸುಖದ ಬುದ್ಧಿಯಿರುವುದಿಲ್ಲ, ಆದರೆ ರಾಗದ ಕಾರಣದಿಂದ ಆಸಕ್ತಿಯಿರುತ್ತದೆ. ಸ್ವರ್ಗದಲ್ಲಿ ಆ ಜೀವನು ತಾನು ತನ್ನ ಪರ್ಯಾಯದ ಅಪರಾಧದಿಂದ ವಿಷಯಗಳಲ್ಲಿ ಚಿತ್ತವೃತ್ತಿಯನ್ನು ಧಾರಣ ಮಾಡುತ್ತಾನೆ. ಅಲ್ಲಿ ರಾಗರೂಪದ ಅಗ್ನಿಯಿಂದ ಖೇದ ಖಿನ್ನನಾಗುತ್ತಾನೆ. ಆದಾಗ್ಯೂ ಕೂಡ ಅಲ್ಲಿ ಆಂತರ್ಯದೊಳಗೆ ಚಿದಾನಂದ ಸ್ವಭಾವದ ಪ್ರತೀತಿಯು ಇರುತ್ತದೆ. ಮುನಿಯಿದ್ದು ನಂತರ ಸ್ವರ್ಗದಲ್ಲಿ ಹೋದರೆ ಅಲ್ಲಿ ಅವನಿಗೆ ತುಂಬ ದೀರ್ಘವಾದ ಆಯುವಿರುತ್ತದೆ. ಸ್ವರ್ಗದಲ್ಲಿ ನಾಲ್ಕನೆಯ ಗುಣಸ್ಥಾನವಿರುತ್ತದೆ. ಅಲ್ಲಿ ಯಾವ ರಾಗವಿರುತ್ತದೆ ಅದು ಆತ್ಮನ ಶಾಂತಿಯಲ್ಲಿ ವಿಘ್ನವನ್ನು ಮಾಡುವಂಥದ್ದಿದೆ. ಒಂದು ಸಾಗರದ ಆಯುವಿದ್ದರೂ ಕೂಡ ಅದರಲ್ಲಿ ಅಸಂಖ್ಯ ವರುಷಗಳು ಕಳೆದು ಹೋಗುತ್ತವೆ.

ಶುಭರಾಗದ ಫಲದಲ್ಲಿ ಸ್ವರ್ಗವು ದೊರಕುತ್ತದೆ, ಆದರೆ ಅಲ್ಲಿ ಕೂಡ ವಿಷಯಗಳ ಕುರಿತಿರುವ ರಾಗವು ಅಗ್ನಿಯ ಸಮಾನವಿದೆ. ಮುನಿದಶೆಯಲ್ಲಿ ವ್ಯವಹಾರ ರತ್ನತ್ರಯದ ರಾಗವಾಗುವುದು ಕೂಡ ಕ್ಲೇಶಕರವಿದೆ. ಆ ವ್ಯವಹಾರದ ಫಲದಲ್ಲಿ ಸ್ವರ್ಗದ ಸಂಯೋಗವಾಗುತ್ತದೆ, ಅಲ್ಲಿ ಕೂಡ ರಾಗದಿಂದ ಖೇದಖಿನ್ನನಾಗುತ್ತಾನೆ. ಒಂದು ಚಿದಾನಂದ ಸ್ವರೂಪವೇ ಶಾಂತಿಯ ನಿಲಯವಿದೆ, ಅದರಲ್ಲಿ ಎಷ್ಟು ಸ್ಥಿರತೆಯಾಗುತ್ತದೆ ಅಷ್ಟು ಶಾಂತಿಯಿದೆ. ಆತ್ಮನು ಸ್ವಭಾವರೂಪವಾಗಿ ಪರಿಣಮಿಸಲಿ ಅಥವಾ ವಿಭಾವರೂಪದಿಂದ ಪರಿಣಮಿಸಲಿ, ಆದರೆ ಪರದ್ರವ್ಯದ್ದಂತೂ ಒಂದಿಷ್ಟು ಗ್ರಹಣ ಅಥವಾ ತ್ಯಾಗವನ್ನು ಅವನು ಮಾಡುವ ಸಾಧ್ಯತೆಯೇ ಇಲ್ಲ. ಹೀಗೆಯೇ ಅವನ ಸ್ವಭಾವವಿದೆ. ಆತ್ಮನು ವಿಕಾರ ಮಾಡಿ ಜಡಕರ್ಮವನ್ನು ಗ್ರಹಿಸುವನು ಅಥವಾ ಆತ್ಮನು ಶುದ್ಧತೆ ಮಾಡಿ ಜಡಕರ್ಮವನ್ನು ಬಿಟ್ಟು ಕೊಡುವನೆಂಬುದಾಗಿ ಅವನ ಸ್ವಭಾವವಿಲ್ಲ. ಆತ್ಮನು ವಿಕಾರ ಮಾಡುವನು, ಆದರೆ ಅವನು ಜಡಕರ್ಮವನ್ನು ಗ್ರಹಣ ಮಾಡುವ ಸಾಧ್ಯತೆಯಿಲ್ಲ. ಸ್ವಯಂ ಸ್ವಭಾವದ ಆಧೀನನಾಗಿ ಪರಿಣಮಿಸಿ ಶುದ್ಧತೆಯನ್ನು ಮಾಡುವನು, ಆದರೆ ಅವನು ಜಡಕರ್ಮವನ್ನು ಬಿಟ್ಟುಕೊಡುವ ಸಾಧ್ಯತೆಯಿಲ್ಲ. ಜಡಕರ್ಮವಂತೂ ಸ್ವಯಂ ಅದರ ಕಾರಣದಿಂದ ಬಿಟ್ಟುಹೋಗುತ್ತದೆ. ಜ್ಞಾನಸ್ವಭಾವದಲ್ಲಿ ಪರಮಾರ್ಥದಿಂದ ವಿಕಾರದ್ದೂ ಕೂಡ ಗ್ರಹಣ-ತ್ಯಾಗವಿಲ್ಲ. ಜ್ಞಾನಸ್ವಭಾವವನ್ನು ದೃಷ್ಟಿಯಲ್ಲಿ ತಂದುಕೊಂಡು ಅದರಲ್ಲಿ ಏಕಾಗ್ರತೆ ಸಾಧಿಸಿದರೆ ಅಲ್ಲಿ ವಿಕಾರದ ಉತ್ಪತ್ತಿಯೇ ಆಗುವುದಿಲ್ಲ. ಆಗ 'ಆತ್ಮನು ವಿಕಾರವನ್ನು ಬಿಟ್ಟುಕೊಟ್ಟ'ನೆಂದು ಹೇಳುವುದರಲ್ಲಿ ಬರುತ್ತದೆ. ತನ್ನ ಧ್ರುವಸ್ವಭಾವದ ಆಶ್ರಯದಲ್ಲಿ ಅಷ್ಟು ಶಾಂತಿಯಿರುತ್ತದೆ ಮತ್ತು ಪರಾಶ್ರಯದಲ್ಲಿ ಎಷ್ಟು ರಾಗಭಾವವಾಗುತ್ತದೆ ಅಷ್ಟು ಕ್ಲೇಶದ ಕಾರಣವಿದೆ. ರಾಗವು ಎಂದೂ ಆತ್ಮನ ಶಾಂತಿಯ ಕಾರಣವಿಲ್ಲ.

ಯಾವುದು ಪ್ರತ್ಯಕ್ಷ ಮೋಕ್ಷಮಾರ್ಗವಿದೆ ಅದುವೇ ಆತ್ಮನ ಶಾಂತಿಯ ಕಾರಣವಿದೆ. ಯಾವುದು ಪ್ರತ್ಯಕ್ಷ ವೀತರಾಗಭಾವವಿದೆ ಅದುವೇ ಆತ್ಮನ ಶಾಂತಿಯ ಕಾರಣವಿದೆಯೆಂಬ ತಾತ್ಪರ್ಯವನ್ನು ಎಲ್ಲರೂ ಅಂತರಂಗದಲ್ಲಿ ಧಾರಣ ಮಾಡಿದರೆ ಅಲ್ಲಿ ರಾಗದ ಅಭಾವವು ಸ್ವಯಂ ಆಗಿಹೋಗುತ್ತದೆ. ಆಗ ಪ್ರತ್ಯಕ್ಷ ಮೋಕ್ಷಲಕ್ಷ್ಮಿಯ ಎಂದರೆ ತನ್ನ ಆತ್ಮಶ್ರೀರೂಪ ಚೈತನ್ಯಲಕ್ಷ್ಮಿಯ ಪ್ರಾಪ್ತಿಯಾಗಿ ಬಿಡುತ್ತದೆ.

**ತಮ್ಹಾ ಣಿವ್ವುದಿಕಾಮೋ ರಾಗಂ ಸವ್ವತ್ಥ ಕುಣದು ಮಾ ಕಿಂಚಿ ।**
**ಸೋ ತೇಣ ವೀದರಾಗೋ ಭವಿಓ ಭವಸಾಯರಂ ತರದಿ ॥೧೭೨॥**

**ಅದರಿಂ ಮೋಕ್ಷಾಭಿಲಾಷಿಯೆಲ್ಲೆಡೆ ಒಂದಿನಿತುರಾಗವನು ಮಾಡಕೂಡದು ।**
**ಇದರಿಂದಾ ಭವ್ಯಜೀವ ವೀತರಾಗನಾಗಿ ಭವಸಾಗರವ ದಾಟುವನು ॥೧೭೨॥**

ಸರ್ವಜ್ಞರ ಸಮಸ್ತ ಶಾಸ್ತ್ರಗಳ ಸಾರವು ಏನಿದೆಯೆಂಬುದರ ಕಥನವು ಇದರಲ್ಲಿದೆ.

ವೀತರಾಗರ ಮುಖಾರವಿಂದದಿಂದ ಹೊರಹೊರಟ ದಿವ್ಯಧ್ವನಿಯ ಮತ್ತು ಸಮಸ್ತ ಶಾಸ್ತ್ರಗಳ ತಾತ್ಪರ್ಯವಂತೂ ಒಂದು ವೀತರಾಗ ಭಾವವಿದೆ. ನಾಲ್ಕು ಅನುಯೋಗಗಳರೂಪ ಶಾಸ್ತ್ರದ ಸಾರವೇನೆಂದರೆ - ತನ್ನ ಜ್ಞಾನಾನಂದ ಸ್ವಭಾವವನ್ನು ತಿಳಿದುಕೊಂಡು ಅದರಲ್ಲಿ ಸ್ಥಿರಗೊಳ್ಳುವುದಿದೆ. ಮಧ್ಯದಲ್ಲಿ ಪರದ ಅವಲಂಬನದಿಂದ ರಾಗವಾಗುವುದು ಹೇಯವಿದೆ. ಚಿದಾನಂದ ಸ್ವಭಾವದ ಆಶ್ರಯದಿಂದ ವೀತರಾಗ ಭಾವವಾಗುವುದು ಆದರಣೀಯವಿದೆ. ಯಾವ ಜೀವನು ಮೋಕ್ಷದ ಅಭಿಲಾಷೆಯುಳ್ಳವನಿದ್ದಾನೆ ಅವನು ಚಿದಾನಂದ ಸ್ವಭಾವದೊಳಗಿಂದ ಪೂರ್ಣ ಆನಂದದ ಮೋಕ್ಷದಶೆಯನ್ನು ಪ್ರಕಟಪಡಿಸಿಕೊಳ್ಳುವ ಕಾರ್ಯ ಮಾಡುತ್ತಿರುತ್ತಾನೆ ಅಂಥ ಜೀವನನ್ನು ಇಲ್ಲಿ **'ಮಹಾಜನ'**ನೆಂದು ಹೇಳಲಾಗಿದೆ. ಓ ವಿರಳ ಮಹಾಪುರುಷರೇ ! ತಮಗೆ ಈ ಸಂಸಾರದ ಪರಿಭ್ರಮಣದಿಂದ ಬಿಡುಗಡೆ ಹೊಂದುವುದಿದ್ದರೆ ಮತ್ತು ಆತ್ಮನ ಪೂರ್ಣಾನಂದದಶೆಯನ್ನು ಪ್ರಾಪ್ತಮಾಡಿಕೊಳ್ಳುವುದಿದ್ದರೆ ವಿಷಯರಾಗದ ತ್ಯಾಗಿಯಾಗಿರಿ ! ಆಂತರ್ಯದಲ್ಲಿ ಮೊದಲು ಚಿದಾನಂದ ಸ್ವಭಾವದ ಜ್ಞಾನವಂತೂ ಆಗಿದೆ. ಅನಂತರ ಇದು ಮುನಿಯಾಗುವ ಮಾತಿದೆ. ಚಿದಾನಂದ ಜ್ಞಾತಾ-ದೃಷ್ಟಾ ಆತ್ಮನ ಜ್ಞಾನವನ್ನಂತೂ ಮೊದಲೇ ಮಾಡಿಕೊಳ್ಳಬೇಕಾಗುವುದು. ಅನಂತರ ಪೂರ್ಣ ಪವಿತ್ರ ಮೋಕ್ಷದಶೆಯನ್ನು ಪ್ರಕಟಪಡಿಸಿಕೊಳ್ಳುವುದರ ಸಲುವಾಗಿ ಈ ಉಪದೇಶವಿದೆ. ಸಮಸ್ತ ವಿಷಯಕಷಾಯ ಪರಿಣಾಮವನ್ನು ಬಿಟ್ಟುಕೊಟ್ಟು ಚೈತನ್ಯದಲ್ಲಿ ಲೀನತೆ ಮಾಡಿರಿ. ಧರ್ಮಾತ್ಮನಿಗೆ ಪುಣ್ಯ-ಪಾಪದ ಅಭಿರುಚಿಯಿರುವುದಿಲ್ಲ. ಆದರೆ ದುರ್ಬಲತೆಯಿಂದ ರಾಗವಾಗುತ್ತದೆ. ಆ ರಾಗವನ್ನು ಕೂಡ ಬಿಟ್ಟು ಕೊಡುವುದರ ಉಪದೇಶವು ಇಲ್ಲಿದೆ. ನನ್ನ ಸ್ವರೂಪವಂತೂ ಜ್ಞಾನವಿದೆ. ನನಗೆ ಅನಾಕುಲ ಶಾಂತಿಯು ಬೇಕಾಗಿದೆಯೆಂದು ಯಾವನಿಗೆ ಮೋಕ್ಷದ ಅಭಿಲಾಷೆಯಾಗಿದೆ ಅಂಥ ಜೀವನಿಗೆ ಸ್ವಭಾವದ ಅರಿವುಂಟಾಗಿದ್ದರೂ ಕೂಡ ಅಸ್ಥಿರತೆಯಿಂದ ಇನ್ನೂ ರಾಗವಾಗುತ್ತದೆ. ಅವನಿಗೆ, ನೀನು ಮೊದಲಂತೂ ವಿಷಯ ಕಷಾಯದ ಪಾಪರಾಗವನ್ನು ಬಿಟ್ಟುಕೊಡೆಂದು ಹೇಳುತ್ತಾರೆ. ಮೊದಲು ಧರ್ಮರಾಗವು ಬಿಟ್ಟುಹೋಗಲಾರದು. ನಿಜವಾದ ದೇವ-ಶಾಸ್ತ್ರ-ಗುರು ಹಾಗೂ ಸಾಧರ್ಮಿಗಳ ಕುರಿತು ಪ್ರೀತಿ ಮೊದಲಾದವುಗಳ ಧರ್ಮರಾಗವು ಮೊದಲು ಬರುವುದು. ಅದಕ್ಕಾಗಿ ಮೊದಲು ಅಶುಭ ರಾಗವನ್ನು ಬಿಟ್ಟುಕೊಡೆಂದು ಹೇಳಿದೆ. ನಿಜವಾಗಿಯಂತೂ ರಾಗ ಬಿಟ್ಟು ಕೊಡುವುದರಕಡೆಗೆ ಪ್ರಯತ್ನ ಕೂಡ ಮಾಡುವುದಿರುವುದಿಲ್ಲ ; ಆದರೆ ಸ್ವಭಾವದ ಕಡೆಯ ಪ್ರಯತ್ನವಿದೆ. ಸ್ವಭಾವದ ಕಡೆಗೆ ಉದ್ಯಮವಾದರೆ ರಾಗಭಾವವು ಬಿಟ್ಟುಹೋಗುತ್ತದೆ. ಸ್ವಭಾವದ ದೃಷ್ಟಿಮಾಡಿ ಅದರಲ್ಲಿ ಲೀನತೆಯಾದರೆ ವೀತರಾಗಭಾವವಾಗುತ್ತದೆ ಅದು ಶಾಸ್ತ್ರದ ಸಾರವಿದೆ. ಹೇಗೆ ಮಜ್ಜಿಗೆಯ ಸಾರವು ಬೆಣ್ಣೆ ಮತ್ತು ತುಪ್ಪವಿದೆ, ಹಾಗೆ ಶಾಸ್ತ್ರದ ಸಾರವು ವೀತರಾಗದೃಷ್ಟಿ ಮತ್ತು ವೀತರಾಗದಲ್ಲಿ ಸ್ಥಿರತೆ ಮಾಡುವುದಿದೆ. ಶುದ್ಧ ಸ್ವಭಾವದ ಕಡೆಗಿರುವ ಉದ್ಯಮ ಮಾಡಿದರೆ ರಾಗಾದಿಗಳು ಬಿಟ್ಟುಹೋಗುತ್ತವೆ. ಮೊದಲು ಸರ್ವಥಾ ವೀತರಾಗತೆಯು ಏಕಕಾಲದಲ್ಲಿ ಆಗಿಹೋಗುವುದಿಲ್ಲ, ಆದರೆ ಅಶುಭವು ಬಿಟ್ಟುಹೋಗಿ ಶುಭರಾಗವಾಗುತ್ತದೆ. ಸ್ವಭಾವದ ಕಡೆಗಿರುವ ಏಕಾಗ್ರತೆಯ ಬಲದಿಂದ ಅತ್ಯಂತ ವೀತರಾಗತೆಯಾದರೆ ಮೋಕ್ಷವಾಗುತ್ತದೆ. ಆದುದರಿಂದ ಸ್ವಭಾವದ ಸ್ಥಿರತೆಯ ಮೂಲಕ ಅತ್ಯಂತ ವೀತರಾಗ ಭಾವವನ್ನು ಪ್ರಕಟಪಡಿಸಿಕೊಂಡು ಸಂಸಾರ ಸಮುದ್ರವನ್ನು ಪಾರುಗಾಣಿಸಿರೆಂದು ಹೇಳುತ್ತಾರೆ. ಸಂಸಾರದಲ್ಲಿ ಎಲ್ಲಿಯೂ ಸುಖವಿಲ್ಲ. ದೇವ ಪದದಲ್ಲಿ ಅಥವಾ ಶ್ರೀಮಂತಿಕೆಯಲ್ಲಿ ಕೂಡ ಸುಖವಿಲ್ಲ. ಚಿದಾನಂದ ಸ್ವಭಾವದ ಸುಖವು ಬಾಹ್ಯದಲ್ಲಿಲ್ಲ. ಬಾಹ್ಯದಲ್ಲಿ ಎಷ್ಟು ಪ್ರವೃತ್ತಿಯಾಗುವುದು ಅಷ್ಟು ಆಕುಲತೆಯಿದೆ, ದುಃಖವಿದೆ. ಸಂಸಾರ ಸಮುದ್ರದಲ್ಲಿ ಹರುಷ, ಶೋಕದ ಕಲ್ಪನೆಯಿಂದ ಜೀವಗಳು ಆಕುಲ-ವ್ಯಾಕುಲವಿವೆ. ಅನುಕೂಲತೆಯಲ್ಲಿ ಸುಖ ಮನ್ನಿಸಿ ಹರುಷ ಪಡುತ್ತಾರೆ ಮತ್ತು ಪ್ರತಿಕೂಲತೆಯಲ್ಲಿ ದುಃಖ ಮನ್ನಿಸಿ ಶೋಕ ಮಾಡುತ್ತಾರೆ, ಆದರೆ ಅವೆರಡೂ ಕಲ್ಪನೆಗಳು ದುಃಖದಾಯಕವೇ ಇವೆ. ಚಿದಾನಂದ ಆತ್ಮನು ಕೇವಲ ಶಾಂತಿಯ ಸಾಗರನಿದ್ದಾನೆ. ಅದಕ್ಕೆ ಪ್ರತಿಯಾಗಿ ಬಾಹ್ಯದಲ್ಲಿ ಸುಖ-ದುಃಖದ ಕಲ್ಪನೆಯಿಂದ ಜೀವರುಗಳು ಆಕುಲ-ವ್ಯಾಕುಲರಿದ್ದಾರೆ. ಅದರಲ್ಲಿ ಎಲ್ಲಿಯೂ

ಜೀವನಿಗೆ ಶಾಂತಿಯಿಲ್ಲ. ಶಾಂತಿಯಂತೂ ಜ್ಞಾತಾ-ದೃಷ್ಟಾ ಸ್ವಭಾವದಲ್ಲಿ ಇದೆ. ಸಂಸಾರದಲ್ಲಿ ದೊಡ್ಡ ದೊಡ್ಡ ರಾಜರುಗಳು ಮತ್ತು ದೇವಗಳು ಕೂಡ ಹರುಷ-ಶೋಕದ ಕಲ್ಪನೆ ಮಾಡಿ ಆಕುಲ-ವ್ಯಾಕುಲರಾಗಿ ಹೋಗುತ್ತಿದ್ದಾರೆ. ಪರಸಂಯೋಗದ ಕಡೆಗಿರುವ ಪ್ರವೃತ್ತಿಯ ಭಾವವೇ ದುಃಖದಾಯಕವಿದೆ. ಚಿದಾನಂದ ಸ್ವರೂಪವನ್ನು ತಿಳಿದುಕೊಂಡು ಅದರ ಆಶ್ರಯದಿಂದ ವೀತರಾಗ ಭಾವವನ್ನು ಪ್ರಕಟಪಡಿಸಿಕೊಂಡರೆ ಜೀವನು ಸಂಸಾರದಿಂದ ಪಾರಾಗಿಹೋಗುತ್ತಾನೆ.

ಸುಖವು ನನ್ನ ಸ್ವರೂಪದಲ್ಲಿದೆ ಬಾಹ್ಯದಲ್ಲಿ ಯಾವ ಹರುಷ-ಶೋಕದ ಕಲ್ಪನೆಯಾಗುತ್ತದೆ ಅದರಲ್ಲಿ ನನ್ನ ಸುಖವಿಲ್ಲವೆಂದು ಒಂದುಬಾರಿ ಪರಿಚಯ ಮಾಡಿಕೊಂಡು, ಪ್ರತೀತಿ ಮಾಡಿಕೊಂಡು ಸ್ವರೂಪದಲ್ಲಿ ಸ್ಥಿರಗೊಂಡರೆ ಹರುಷ-ಶೋಕದ ಕಲ್ಪನೆಯು ಬಿಟ್ಟುಹೋಗಿ ಸಂಸಾರದಿಂದ ಮುಕ್ತವಾಗಿ ಹೋಗುವ ಅವಸರವು ಬರುತ್ತದೆ. ಅಜ್ಞಾನಿಯು ಬಾಹ್ಯದಲ್ಲಿ ಸುಖ ಮನ್ನಿಸುತ್ತಾನೆ ಅದಂತೂ ಮಿಥ್ಯೆಯಿದೆ ಮತ್ತು ಜ್ಞಾನಿಗೆ ಕೂಡ ಅಸ್ಥಿರತೆಯಿಂದ ಬಾಹ್ಯದಲ್ಲಿ ಹರುಷ-ಶೋಕದ ಕಲ್ಪನೆಯಾಗುತ್ತದೆ ಅಷ್ಟು ದುಃಖವಿದೆ. ಈ ಸಂಸಾರದಲ್ಲಿ ಹರುಷ-ಶೋಕದ ಕಲ್ಪನೆಯರೂಪದ ಆಟವನ್ನಾಡುತ್ತಿದೆ ಮತ್ತು ಕರ್ಮದ ಕಡೆಗಿರುವ ಪ್ರವೃತ್ತಿಯರೂಪದ ಬಡಬಾಗ್ನಿಯು ಹೊತ್ತಿ ಉರಿಯುತ್ತಲಿದೆ. ಯಾವ ಪ್ರಕಾರ ಸಮುದ್ರದಲ್ಲಿ ಬಡಬಾಗ್ನಿಯು ಉತ್ಪನ್ನವಾಗುತ್ತದೆ ಅದು ನೀರನ್ನು ಒಣಗಿಸಿಬಿಡುತ್ತದೆ. ಅದೇ ಪ್ರಕಾರ ಚೈತನ್ಯ ಭಗವಂತನು ಶಾಂತಿಯ ಸಮುದ್ರನಿದ್ದಾನೆ ಅವನಲ್ಲಿ ಕರ್ಮದ ಕಡೆಗಿರುವ ಪ್ರವೃತ್ತಿಯಾದರೆ ಆಕುಲತೆಯರೂಪದ ಬಡಬಾಗ್ನಿಯು ಉತ್ಪನ್ನವಾಗುತ್ತದೆ. ಅಂಥ ಸಂಸಾರವನ್ನು ದಾಟಿ ಹೋಗುವುದು ತುಂಬ ಕಠಿಣವಿದೆ. ವೀತರಾಗ ಭಾವದಿಂದ ಇಂಥ ದುಸ್ತರ ಸಂಸಾರ ಸಮುದ್ರವನ್ನು ಪಾರುಮಾಡಿ ಆತ್ಮನು ತನ್ನ ಅಮೃತ ಸಾಗರದಲ್ಲಿ ಲೀನನಾಗಿ ಮೋಕ್ಷಪದವನ್ನು ಪಡೆಯುತ್ತಾನೆ. ಭಗವಾನ ಆತ್ಮನು ಚೈತನ್ಯಸಾಗರದಲ್ಲಿ ವಿರಾಜಿಸುತ್ತಿದ್ದಾನೆ. ಅವನ ದೃಷ್ಟಿಮಾಡಿ ಅವನಲ್ಲಿ ಲೀನಗೊಂಡರೆ ಆತ್ಮನು ಕೂಡಲೇ ಮುಕ್ತಿದಶೆಯನ್ನು ಪಡೆಯುತ್ತಾನೆ. ಇದು ಶಾಸ್ತ್ರದ ತಾತ್ಪರ್ಯವಿದೆ. ಮೋಕ್ಷಮಾರ್ಗದ ಸಾಕ್ಷಾತ್ಕರಣ ಮತ್ತು ಸಮಸ್ತ ಶಾಸ್ತ್ರಗಳ ಸಾರವೆಂದರೆ ಒಂದು ವೀತರಾಗ ಭಾವವೇ ಇದೆ. ಆತ್ಮನ ಸ್ವಭಾವದ ಅವಲಂಬನ ತೆಗೆದುಕೊಂಡರೆ ಇಂಥ ವೀತರಾಗಭಾವವು ಪ್ರಕಟವಾಗುವುದು.

''ಅಧಿಕ ವಿಸ್ತಾರವನ್ನು ಎಲ್ಲಿಯವರೆಗೆ ಮಾಡುವುದು ? ಯಾವುದು ಪ್ರತ್ಯಕ್ಷ ಮೋಕ್ಷಮಾರ್ಗದ ಕಾರಣವಿದೆ, ಸಮಸ್ತ ಶಾಸ್ತ್ರಗಳ ತಾತ್ಪರ್ಯವಿದೆ ಅಂಥ ಯಾವ ವೀತರಾಗ ಭಾವವಿದೆ ಅದುವೇ ಜಯವಂತವಾಗಿರಲಿ !''

ಚಿದಾನಂದ ಭಗವಂತನಲ್ಲಿ ಅಂತರ್ಮುಖವಾಗಿ ಸ್ವಭಾವ ಸಾಮರ್ಥ್ಯದ ಪಿಂಡನನ್ನು ಹಿಡಿದುಕೊಂಡರೆ ವೀತರಾಗಭಾವದಿಂದ ಆತ್ಮನು ಮುಕ್ತಿ ಪಡೆಯುತ್ತಾನೆ ಮತ್ತು ಇದುವೇ ಮೋಕ್ಷಮಾರ್ಗವಿದೆ. ಇಂಥ ವೀತರಾಗ ಭಾವವು ಜಯವಂತವಾಗಿ ವರ್ತಿಸಲಿ. ಆ ವೀತರಾಗ ಭಾವವು ಚೈತನ್ಯ ಸ್ವಭಾವದ ಅವಲಂಬನದಿಂದಲೇ ಪ್ರಕಟವಾಗುತ್ತದೆ. ಸರ್ವಜ್ಞ ಭಗವಂತರು ಹೇಳಿದ ಸಮಸ್ತ ಶಾಸ್ತ್ರಗಳ ಸಾರವೆಂದರೆ ಒಂದು ವೀತರಾಗತೆಯಿದೆ ! ಪಂಚಮಹಾವ್ರತದ ಭಾವವು ಮುನಿಗಳಿಗೆ ಬರುತ್ತದೆ, ಆದರೆ ಅದು ಶಾಸ್ತ್ರದ ತಾತ್ಪರ್ಯವಲ್ಲ. ಶಾಸ್ತ್ರದ ತಾತ್ಪರ್ಯವಂತೂ ವೀತರಾಗಭಾವವೇ ಇದೆ. ಮಧ್ಯದಲ್ಲಿ ರಾಗವು ಬರುತ್ತದೆ ಅದರ ಜ್ಞಾನ ಮಾಡಿಸುವ ಸಲುವಾಗಿ ಶಾಸ್ತ್ರದಲ್ಲಿ ಅದರ ವರ್ಣನೆಯಿದ್ದರೂ ಕೂಡ ತಾತ್ಪರ್ಯವಂತೂ ವೀತರಾಗಭಾವವೇ ಇದೆ. ಶುಭರಾಗವನ್ನು ಉಪಾದೇಯವೆಂದು ಹೇಳಿದ್ದರೂ ಅದು ವ್ಯವಹಾರದ ಕಥನವಿದೆಯೆಂದು ತಿಳಿದುಕೊಳ್ಳಬೇಕು. ರಾಗವಾಗುವುದು ಶಾಸ್ತ್ರದ ತಾತ್ಪರ್ಯವಲ್ಲ. ಜ್ಞಾತಾ-ದೃಷ್ಟಾ ಸ್ವಭಾವದ ಪ್ರತೀತಿ ಮತ್ತು ಅದರಲ್ಲಿ ಲೀನತೆಯರೂಪದ ವೀತರಾಗ ಭಾವವಾಗುವುದು ಶಾಸ್ತ್ರದ ತಾತ್ಪರ್ಯವಿದೆ ಮತ್ತು ಅದುವೇ ಮೋಕ್ಷಮಾರ್ಗವಿದೆ. ಇಂಥ ವೀತರಾಗ ಭಾವವು ಯಾವಾಗಲೂ ಜಯವಂತವಾಗಿ ವರ್ತಿಸಲಿ !

ಸರ್ವಜ್ಞದೇವರ ದಿವ್ಯಧ್ವನಿಯಿಂದ ತೆಗೆದುಕೊಂಡು ಭ. ಕುಂದಕುಂದಾಚಾರ್ಯದೇವರು ರಚಿಸಿದ ಸಮಯಸಾರ

ಮೊದಲಾದ ಮತ್ತು ಶ್ರೀ ಧರಸೇನಾಚಾರ್ಯದೇವ ಮೊದಲಾದ ಸಂತರುಗಳು ರಚಿಸಿದ ಷಟ್‌ಖಂಡಾಗಮ ಮೊದಲಾದ ಸಮಸ್ತ ಶಾಸ್ತ್ರಗಳ ತಾತ್ಪರ್ಯವು ವೀತರಾಗ ಭಾವವಿದೆ.

ವೀತರಾಗಭಾವ ಎಂದರೆ ಸ್ವದ್ರವ್ಯದ ಅಪೇಕ್ಷೆ ಹಾಗೂ ಪರದ್ರವ್ಯದ ಉಪೇಕ್ಷೆಯ ಮಧ್ಯದಲ್ಲಿ ರಾಗ ಮತ್ತು ನಿಮಿತ್ತವು ಬರುತ್ತದೆ ಅದರ ಜ್ಞಾನ ಮಾಡಿಸಲಾಗಿದೆ, ಆದರೆ ಅದು ಶಾಸ್ತ್ರದ ತಾತ್ಪರ್ಯವಲ್ಲ. ನಿಮಿತ್ತದ ಅವಲಂಬನ ಬಿಟ್ಟುಕೊಟ್ಟು ಚಿದಾನಂದ ಸ್ವಭಾವದ ಅವಲಂಬನದಿಂದ ವೀತರಾಗ ಭಾವವಾಗುವುದು ಅದೇ ತಾತ್ಪರ್ಯವಿದೆ. ಅದಕ್ಕಾಗಿಯೇ ಆಚಾರ್ಯದೇವರು **''ಸ್ವಸ್ತಿ ಸಾಕ್ಷಾನ್ಮೋಕ್ಷಮಾರ್ಗಸಾರತ್ವೇನ ಶಾಸ್ತ್ರತಾತ್ಪರ್ಯಭೂತಾಯ ವೀತರಾಗತ್ವಾಯೇತಿ''** ಎಂದು ಹೇಳಿದ್ದಾರೆ. ಎಂದರೆ ಸಾಕ್ಷಾತ್ ಮೋಕ್ಷಮಾರ್ಗದ ಸ್ವರೂಪ ಮತ್ತು ಶಾಸ್ತ್ರದ ತಾತ್ಪರ್ಯಭೂತವಾದಂಥ ಈ ವೀತರಾಗ ಭಾವವು ಜಯವಂತವಾಗಿ ವರ್ತಿಸಲಿ, ಶ್ರೀ ಅಮೃತಚಂದ್ರಾಚಾರ್ಯದೇವರು ಈ ಶಬ್ದವನ್ನು ಬರೆಯುವ ಸಮಯದಲ್ಲಿ ಶುಭರಾಗವು ವರ್ತಿಸುತ್ತಿತ್ತು, ಆದರೆ ಈ ರಾಗದ ಜಯವಾಗದೆ ಸ್ವಭಾವದ ಕಡೆಗಿರುವ ವೀತರಾಗಭಾವವು ಜಯವಂತವಾಗಲಿ ಅದರಂತೆ ಪರದ ಕಡೆಗಿನ ಪ್ರವೃತ್ತಿಯುಳ್ಳ ರಾಗಭಾವವು ನಾಶವಾಗಿಹೋಗಲಿ ಎಂದು ಹೇಳಿದ್ದಾರೆ.

ಸ್ವಭಾವದ ಆಶ್ರಯದಿಂದ ಮೊದಲು ವೀತರಾಗ ದೃಷ್ಟಿಯನ್ನು ಪ್ರಕಟಪಡಿಸಿಕೊಳ್ಳುವುದು, ಅನಂತರ ವೀತರಾಗ ಸ್ಥಿರತೆಯನ್ನು ಪ್ರಕಟಪಡಿಸಿಕೊಳ್ಳುವುದೇ ಮೋಕ್ಷಮಾರ್ಗವಿದೆ ಮತ್ತು ಅದೇ ಶಾಸ್ತ್ರದ ತಾತ್ಪರ್ಯವಿದೆ.

ಸಂತರು ಸಿದ್ಧಾಂತದಲ್ಲಿ ಎರಡು ಪ್ರಕಾರದ ತಾತ್ಪರ್ಯವನ್ನು ಹೇಳಿದ್ದಾರೆ. ಒಂದಂತೂ **ಸೂತ್ರ ತಾತ್ಪರ್ಯವಿದ್ದರೆ** ಮತ್ತೊಂದು **ಶಾಸ್ತ್ರ ತಾತ್ಪರ್ಯವಿದೆ.** ಸರ್ವಜ್ಞರ ಪರಂಪರೆಯಿಂದ ಯಾವ ಸೂತ್ರಗಳು ನಡೆದುಕೊಂಡು ಬಂದಿವೆ ಆ ಸೂತ್ರಗಳ ಭಾವ ತಿಳಿದುಕೊಳ್ಳುವುದು ಸೂತ್ರದ ತಾತ್ಪರ್ಯವಿದೆ. ಒಂದು ಸೂತ್ರದಲ್ಲಿ ದ್ರವ್ಯದ ಜ್ಞಾನ ಮಾಡಿಸಲಾಗಿದೆ, ಒಂದು ಸ್ಥಾನದಲ್ಲಿ ಪರ್ಯಾಯದ, ರಾಗದ ಅಥವಾ ನಿಮಿತ್ತದ ಜ್ಞಾನ ಮಾಡಿಸಲಾಗಿದೆ. ಈ ಪ್ರಕಾರ ಪ್ರತಿಯೊಂದು ಸೂತ್ರದಲ್ಲಿ ಸೂತ್ರತಾತ್ಪರ್ಯವು ಬೇರೆ-ಬೇರೆಯಾಗಿರುವುದು. ಸೂತ್ರತಾತ್ಪರ್ಯವನ್ನಂತೂ ಆಯಾ ಗಾಥೆಗಳಲ್ಲಿ ತಿಳಿಸಿಕೊಡಲಾಗಿದೆ ಮತ್ತು ಸಂಪೂರ್ಣ ಶಾಸ್ತ್ರದ ತಾತ್ಪರ್ಯವು ವೀತರಾಗ ಭಾವವಿದೆ.

ಜ್ಞಾನಾವರಣೀಯದಿಂದ ಜ್ಞಾನವು ತಡೆಯಲ್ಪಡುತ್ತದೆಯೆಂದು ಸೂತ್ರದಲ್ಲಿ ಬರುತ್ತದೆ. ಅಲ್ಲಿ ಅದರ ಸೂತ್ರ ತಾತ್ಪರ್ಯವು ಏನಿದೆಯೆಂದರೆ ಜೀವದ ಜ್ಞಾನವು ತಡೆಯಲ್ಪಟ್ಟಾಗ ಎದುರಿಗೆ ಯಾವ ನಿಮಿತ್ತವಿತ್ತು ಅದನ್ನು ತಿಳಿಸಲಾಗಿದೆ. ನಿಯಮಸಾರದ ಐವತ್ತ್ಮೂರನೆಯ ಗಾಥೆಯಲ್ಲಿ ಹೇಳಿರುವುದೇನೆಂದರೆ ಸಮ್ಯಗ್ದರ್ಶನ ಪಡೆಯುವಂಥ ಜೀವನಿಗೆ ಜಿನಸೂತ್ರವು ಬಾಹ್ಯ ನಿಮಿತ್ತವಿದೆ ಮತ್ತು ಜ್ಞಾನೀ ಪುರುಷನು ಉಪಚಾರದಿಂದ ಅಂತರಂಗ ನಿಮಿತ್ತನಿದ್ದಾನೆ. ಅಲ್ಲಿ ಸೂತ್ರತಾತ್ಪರ್ಯವು ಹೇಗಿದೆಯೆಂದರೆ-ಎರಡು ನಿಮಿತ್ತಗಳಿಂದ ಶಾಸ್ತ್ರಕ್ಕಿಂತಲೂ ಜ್ಞಾನಿಯ ಮುಖ್ಯತೆಯನ್ನು ತಿಳಿಸಿಕೊಟ್ಟಿರುವುದರಿಂದ ಅವನನ್ನು ಅಂತರಂಗ ನಿಮಿತ್ತವೆಂದು ಹೇಳಲಾಗಿದೆ.

ಕಾರ್ತಿಕೇಯಾನುಪ್ರೇಕ್ಷೆಯ ಇನ್ನೂರ ಹನ್ನೊಂದನೆಯ ಸೂತ್ರದಲ್ಲಿ ಹೇಳುತ್ತಾರೆ - ಪುದ್ಗಲದಲ್ಲಿ ಇಂಥ ಒಂದು ಅಪೂರ್ವ ಶಕ್ತಿಯಿದೆ ಅದು ಜೀವದ ಕೇವಲಜ್ಞಾನವನ್ನು ಕೂಡ ನಾಶ ಮಾಡುತ್ತದೆ. ಎಂದರೆ ಕೇವಲಜ್ಞಾನವಾಗಲು ಬಿಡುವುದಿಲ್ಲ. ಅಲ್ಲಿ ಪುದ್ಗಲದೊಳಗೆ ಎಂಥ ಪರಿಣಮನವಾಗುತ್ತದೆಯೆಂಬುದನ್ನು ತಿಳಿಸಿಕೊಡುವ ಸಲುವಾಗಿ ಆ ಕಥನವಿದೆ. ಆದರೆ ಕರ್ಮವು ಜ್ಞಾನವನ್ನು ತಡೆಯುತ್ತದೆಯೆಂದು ಅಲ್ಲಿ ತಿಳಿಸಿಕೊಡಲಾಗಿಲ್ಲ. ಈ ಪ್ರಕಾರ ಸೂತ್ರ ತಾತ್ಪರ್ಯವನ್ನು ತಿಳಿಯುವುದು ಮತ್ತು ಸಮಸ್ತ ಶಾಸ್ತ್ರಗಳ ಸಾರವು ವೀತರಾಗಭಾವವಿದೆ. ಸಂಯೋಗ ಮತ್ತು ವಿಕಾರದ ದೃಷ್ಟಿಯನ್ನು ಬಿಟ್ಟುಕೊಟ್ಟು ಚಿದಾನಂದ ಅಖಂಡ ಸ್ವಭಾವದ ದೃಷ್ಟಿಮಾಡಿ, ಅದರಲ್ಲಿ ಸ್ಥಿರಮಾಡಿ ಒಂದು ವೀತರಾಗ

ಭಾವವನ್ನು ಪ್ರಕಟ ಮಾಡುವುದು ಶಾಸ್ತ್ರದ ತಾತ್ಪರ್ಯವಿದೆ ಮತ್ತು ಅದೇ ಮೋಕ್ಷಮಾರ್ಗವಿದೆ. ಜ್ಞಾನಾವರಣೀಯದಿಂದ ಜ್ಞಾನವು ತಡೆಯಲ್ಪಡುತ್ತದೆಂದು ಹೇಳುವುದು ನಿನ್ನ ಜ್ಞಾನಪರ್ಯಾಯದ ಹೀನ ಪರಿಣಮನವಿದೆಯೆಂದು ತಿಳಿಸಿದೆ ಮತ್ತು ಅದರ ತಾತ್ಪರ್ಯವು ಕೂಡ ಅಲ್ಪಜ್ಞತೆಯಿದೆ, ಅದು ನಿನ್ನ ಸ್ವರೂಪವಲ್ಲ. ಆದುದರಿಂದ ಅದರ ದೃಷ್ಟಿಯನ್ನು ಬಿಟ್ಟುಕೊಟ್ಟು ಜ್ಞಾನಸ್ವಭಾವದ ದೃಷ್ಟಿ ಮಾಡು ಮತ್ತು ಅದರ ಆಶ್ರಯದಿಂದ ಸರ್ವಜ್ಞತೆಯನ್ನು ಪ್ರಕಟಪಡಿಸಿಕೋ ! ಈ ಪ್ರಕಾರ ಸೂತ್ರತಾತ್ಪರ್ಯವಿದೆ.

ಸಮಯಸಾರ, ಗೊಮ್ಮಟಸಾರ, ರತ್ನಕರಂಡ ಶ್ರಾವಕಾಚಾರ ಅಥವಾ ಆದಿಪುರಾಣ ಮೊದಲಾದ ನಾಲ್ಕು ಅನುಯೋಗಗಳ ಶಾಸ್ತ್ರಗಳ ಸಾರವೆಂದರೆ ನೀನು ನಿನ್ನ ಸ್ವಭಾವದ ಸನ್ಮುಖನಾಗು ! ಮಧ್ಯದಲ್ಲಿ ರಾಗ ಮತ್ತು ನಿಮಿತ್ತ ಬರುತ್ತವೆ, ಆದರೆ ಅವುಗಳ ಕಡೆಗೆ ಲಕ್ಷ್ಯ ಕೊಡೆಂದು ಹೇಳುವುದು ಶಾಸ್ತ್ರದ ತಾತ್ಪರ್ಯವಲ್ಲ. ಮುನಿದಶೆಯಲ್ಲಿ ಪಂಚಮಹಾವ್ರತ, ಇಪ್ಪತ್ತೆಂಟು ಮೂಲಗುಣ ಮೊದಲಾದವುಗಳ ಎಂಥ ರಾಗವಿರುತ್ತದೆಯೆಂಬುದರ ಜ್ಞಾನ ಮಾಡಿಸಲಾಗಿದೆ, ಆದರೆ ಅಲ್ಲಿ ಶಾಸ್ತ್ರದ ತಾತ್ಪರ್ಯವೇನು ರಾಗ ಮಾಡಿಸುವುದಿರುವುದಿಲ್ಲ. ಬೇಕಾದ ಶಾಸ್ತ್ರದ ಬೇಕಾದ ಕಥನದೊಳಗಿಂದ ವಸ್ತುಸ್ವಭಾವದ ಕಡೆಗೆ ಪ್ರವೃತ್ತವಾಗುವ ತಾತ್ಪರ್ಯ ತೆಗೆಯುವುದೇ ಆ ಶಾಸ್ತ್ರದ ಆಶಯವೆಂದು ತಿಳಿಸಿಕೊಡಲಾಗಿದೆ, ಆದರೆ ಒಂದು ವೇಳೆ ಎಲ್ಲಿಯಾದರೂ ಪರದ್ರವ್ಯದ ಆಶ್ರಯದಿಂದ ಲಾಭವಾಗುವ ತಾತ್ಪರ್ಯ ತೆಗೆದರೆ ಆ ಜೀವನು ಶಾಸ್ತ್ರವನ್ನು ತಿಳಿದುಕೊಂಡಿಲ್ಲ. ಅವನ ಯುಕ್ತಿ ಮತ್ತು ತರ್ಕಗಳೆಲ್ಲವು ಕುತರ್ಕ ಮತ್ತು ಕುಯುಕ್ತಿಗಳಿವೆ. 'ನೋಡಿ ನಡೆಯಬೇಕೆ'ಂದು ಶಾಸ್ತ್ರ ಹೇಳಿದರೆ ಅಲ್ಲಿನ ತಾತ್ಪರ್ಯವೇನಿದೆ ? ಪರದ ಎದುರು ನೋಡುವ ತಾತ್ಪರ್ಯವಿದೆಯೇನು? ಅಥವಾ ಶುಭರಾಗದ ತಾತ್ಪರ್ಯವಿದೆ ? ಅಲ್ಲಿ ಅದರ ತಾತ್ಪರ್ಯವೆಂದರೆ ರಾಗವಾಗಗೊಡದಿರುವುದಿದೆ, ಎಂದರೆ ಪರದಿಂದ ಉಪೇಕ್ಷೆಮಾಡಿ ಸ್ವಭಾವದ ಸನ್ಮುಖತೆ ಮಾಡುವುದು ತಾತ್ಪರ್ಯವಿದೆ. ಸ್ವಭಾವದ ಸನ್ಮುಖತೆ ಮತ್ತು ಪರದಿಂದ ವಿಮುಖತೆಯೆಂಬ ತಾತ್ಪರ್ಯವಿದೆ. ಮಧ್ಯದಲ್ಲಿ ವ್ಯವಹಾರವು ಬರುತ್ತದೆ ಅದರಿಂದ ಒಂದು ವೇಳೆ ಲಾಭ ಮನ್ನಿಸಿದರೆ ಸ್ವಭಾವದ ಕಡೆಗೆ ಒಲಿಯುವುದಿಲ್ಲ. ಪರದ್ರವ್ಯದ ಅವಲಂಬನದಿಂದ ಲಾಭ ಮನ್ನಿಸಿದರೆ ಅಥವಾ ವ್ಯವಹಾರದ ಆಶ್ರಯದಿಂದ ಲಾಭ ಮನ್ನಿಸಿದರೆ ಆ ಜೀವನು ಶಾಸ್ತ್ರದ ತಾತ್ಪರ್ಯವನ್ನು ತಿಳಿದುಕೊಂಡಿಲ್ಲ. ಅದಕ್ಕಾಗಿ ಎಲೈ ಮೋಕ್ಷದ ಅಭಿಲಾಷೆಯುಳ್ಳ ಭವ್ಯನೇ ! ನೀನು ಸ್ವಭಾವದ ಅವಲಂಬನದಿಂದ ವೀತರಾಗ ಭಾವವನ್ನು ಪ್ರಕಟಪಡಿಸಿಕೊಂಡು ಈ ಸಂಸಾರದಿಂದ ಪಾರಾಗು. ಯಾವ ಜೀವನು ಪುಣ್ಯದ ಅಭಿಲಾಷಿಯಿರುವನು, ಧನದ ಅಭಿಲಾಷಿಯಿರುವನು ಅಥವಾ ವಿಷಯ ಭೋಗದ ಅಭಿಲಾಷಿಯಿರುವನು ಅಂಥ ಮೂಢ ಜೀವರುಗಳಿಗೆ ಈ ಮಾತು ಹೇಳುವುದಿಲ್ಲ. ನಾಲ್ಕು ಪ್ರಕಾರದ ಪುರುಷಾರ್ಥಗಳಲ್ಲಿ ಒಂದು ಮೋಕ್ಷ ಪುರುಷಾರ್ಥದ್ದೇ ಮುಖ್ಯತೆಯಿದೆ. ಇದೇ ಜಿನೇಂದ್ರ ಪ್ರಣೀತ ಶಾಸ್ತ್ರಗಳ ಉತ್ತಮತೆಯಿದೆ. ಧರ್ಮ ಎಂದರೆ ಪುಣ್ಯ, ಅರ್ಥ ಎಂದರೆ ಧನ ಮೊದಲಾದುವನ್ನು ಸಂಪಾದಿಸುವುದು ಮತ್ತು ಕಾಮ ಎಂದರೆ ವಿಷಯ ಭೋಗ ಇವು ಮೂರು ಪುರುಷಾರ್ಥಗಳಂತೂ ಸಂಸಾರದ ಕಾರಣವಿವೆ. ವೀತರಾಗ ಶಾಸ್ತ್ರದಲ್ಲಿ ಇವುಗಳ ಪ್ರಧಾನತೆಯಿಲ್ಲ, ವೀತರಾಗ ಶಾಸ್ತ್ರದಲ್ಲಂತೂ ಮೋಕ್ಷದ, ವೀತರಾಗ ಪುರುಷಾರ್ಥದ ಪ್ರಧಾನತೆಯಿದೆ. ಜಿನೇಂದ್ರದೇವರು ಹೇಳಿದ ಶಾಸ್ತ್ರಗಳಂತೂ ವೀತರಾಗಭಾವದ ಪೋಷಣೆಯನ್ನೇ ಮಾಡುವಂಥದ್ದಿವೆ.

ಜಿನೇಂದ್ರ ದೇವರು ಹೇಳಿದ ಶಾಸ್ತ್ರಗಳಂತೂ ವೀತರಾಗಭಾವದ ಪೋಷಣೆಯನ್ನೇ ಮಾಡುವಂಥದ್ದಿವೆ. ವಿಷಯ-ಕಷಾಯದ, ಪಾಪಭಾವದ ಅಥವಾ ರಾಗದ ಪೋಷಣೆಯು ಬಂದರೆ ಅವನ್ನು ಶಾಸ್ತ್ರವೆಂದು ಹೇಳಲಾಗುವುದಿಲ್ಲ. ಜಿನೇಂದ್ರ ಪ್ರಣೀತ ಶಾಸ್ತ್ರದಲ್ಲಂತೂ ಆತ್ಮನ ಮೋಕ್ಷದಶೆಯ ಸಿದ್ಧಿಯು ಯಾವುದರಿಂದ ಆಗುತ್ತದೆ ಅಂಥ ಪುರುಷಾರ್ಥದ್ದೇ ಮುಖ್ಯತೆಯಿದೆ. ಸ್ವಭಾವದ ಆಶ್ರಯದಿಂದ ವೀತರಾಗ ಭಾವವು ಪ್ರಕಟವಾಗುವುದೇ ಜಿನೇಂದ್ರದೇವರ ಶಾಸ್ತ್ರದ

ತಾತ್ಪರ್ಯವಿದೆ. ಮಧ್ಯದಲ್ಲಿ ಮುನಿಗಳಿಗೆ ಕೂಡ ಧರ್ಮರಾಗವು ಬರುತ್ತದೆ, ಆದರೆ ಅದು ಗೌಣವಿದೆ. ಅದರ ಪ್ರಧಾನತೆಯಿಲ್ಲ, ಸ್ವಭಾವದ ಅವಲಂಬನದಿಂದ ವೀತರಾಗಭಾವವು ಪ್ರಕಟವಾಗುವುದರದೇ ಮುಖ್ಯತೆಯಿದೆ ಮತ್ತು ಈ ವೀತರಾಗಭಾವವೇ ಶಾಸ್ತ್ರದ ತಾತ್ಪರ್ಯವಿದೆ ಹಾಗೂ ಅದೇ ಮೋಕ್ಷಮಾರ್ಗವಿದೆ.

ಸಮಸ್ತ ಶಾಸ್ತ್ರಗಳ ಸಾರವು ವೀತರಾಗಭಾವವಿದೆ. ಯಾವುದೇ ಶಾಸ್ತ್ರವು ಶುಭರಾಗವು ಕೂಡ ಮಾಡಲು ಯೋಗ್ಯವಿದೆಯೆಂದು ನಿಶ್ಚಯದಿಂದ ಹೇಳುವುದಿಲ್ಲ.

ಅನಂತ ತೀರ್ಥಂಕರ ದೇವರುಗಳು ಆಗಿಹೋಗಿದ್ದಾರೆ. ವರ್ತಮಾನದಲ್ಲಿ ಮಹಾವಿದೇಹ ಕ್ಷೇತ್ರದಲ್ಲಿ ವಿರಾಜಿಸುತ್ತಿದ್ದಾರೆ. ಅವರು ಎಲ್ಲ ಪ್ರಕಾರದ ರಾಗದಿಂದ ಬಿಡುಗಡೆ ಹೊಂದಿ ತ್ರಿಕಾಲೀ ಧ್ರುವ ಜ್ಞಾನಾನಂದ ಸ್ವಭಾವದಿಂದಲೇ ಹಿತ ಮತ್ತು ಹಿತದ ಮಾರ್ಗವನ್ನು ಹೇಳಿದ್ದಾರೆ. ಅವರಿಂದ ವಿರುದ್ಧವಾಗಿ ಹೇಳಿದರೆ ಅವರು ದೇವ-ಶಾಸ್ತ್ರ-ಗುರುಗಳಲ್ಲ ಎಂದರೆ ಮಿಥ್ಯಾ ದೇವ-ಶಾಸ್ತ್ರ-ಗುರುಗಳಿದ್ದಾರೆ. ಒಂದು ವೀತರಾಗ ಪ್ರಣೀತ ಶಾಸ್ತ್ರದಿಂದಲೇ ವಸ್ತುಸ್ವರೂಪವು ತಿಳಿದುಬರುತ್ತದೆ. ಆರೂ ದ್ರವ್ಯಗಳು ತ್ರಿಕಾಲ ಭಿನ್ನ ಭಿನ್ನವಿವೆ. ಯಾವುದು 'ಇದೆ' ಅದು ತನ್ನಿಂದ ಇದೆ. ಅನಂತ ಪರಪದಾರ್ಥಗಳಿಂದ ಭಿನ್ನ ಸ್ವತಂತ್ರವಿದ್ದುಕೊಂಡು ಬದಲಾಗುವಂಥದ್ದಿದೆ. ಪರವಸ್ತುವು ನನ್ನಲ್ಲಿ ಇಲ್ಲ, ನಾನು ಪರಪದಾರ್ಥದಲ್ಲಿ ಇಲ್ಲವೆಂದು ಸ್ವತಂತ್ರತೆಯಿಂದ ನಿರ್ಣಯ ಮಾಡಿದರೆ ಕ್ಷಣಿಕ ವಿಕಾರವು ತ್ರಿಕಾಲೀ ಸ್ವರೂಪದಲ್ಲಿ ಇಲ್ಲವೆಂಬ ಸ್ವಸನ್ಮುಖತೆಯರೂಪದ ಧರ್ಮವು ಆರಂಭವಾಗುತ್ತದೆ.

ಆರೂ ದ್ರವ್ಯಗಳು ತ್ರಿಕಾಲ ಭಿನ್ನವಿವೆಯೆಂದು ತಿಳಿದುಕೊಂಡರೆ ಸ್ವತಂತ್ರತೆ, ವೀತರಾಗತೆಯೇ ಬರುತ್ತದೆ. ಪಂಚಾಸ್ತಿಕಾಯದ ಜ್ಞಾನ ಮಾಡಿಕೊಂಡರೆ ಎಲ್ಲ ಕಡೆಗಳಿಂದ ಒಂದು ವೀತರಾಗತೆಯೇ ಉಪಾದೇಯವಿದೆಯೆಂದು ಬರುತ್ತದೆ. ಆರು ದ್ರವ್ಯಗಳು ಸ್ವತಂತ್ರವಿವೆಯೆಂದು ನಿರ್ಣಯ ಮಾಡುವವನಿಗೆ ನಿರ್ಮಲ ಭೇದಜ್ಞಾನ ಎಂದರೆ ವೀತರಾಗತೆಯಾಗದೆ ಇರುವುದಿಲ್ಲ. ಯಾವುದೇ ಸಂಯೋಗ, ಕರ್ಮ, ಕ್ಷೇತ್ರ ತಡೆಯುವುದು ಅಥವಾ ಸಹಾಯ ಮಾಡುವುದೆಂಬ ಪರಾಧೀನತೆಯು ಭಾಸವಾಗುವುದಿಲ್ಲ ಮತ್ತು ಇಂಥ ಭೇದಜ್ಞಾನವಾದರೆ ಪರದಲ್ಲಿ ಕರ್ತಾಬುದ್ಧಿಯು ಬಿಟ್ಟುಹೋಗಿ ತ್ರಿಕಾಲ ಜ್ಞಾತಾನೇ ಇದ್ದಾನೆಂದು ಆಂತರ್ಯದ ಸ್ವರೂಪದಲ್ಲಿ ಜ್ಞಾತಾತನ, ಸ್ವತಂತ್ರತನವಾದಲ್ಲದೆ ಇರುವುದೇ ಇಲ್ಲ.

ಸರ್ವಜ್ಞದೇವರು ಆರು ದ್ರವ್ಯಗಳನ್ನು ಪೃಥಕ್ಕಾಗಿ ಹೇಳಿ ಎಲ್ಲೆಡೆಗೆ ವೀತರಾಗತೆಯನ್ನೇ ತಿಳಿಸಿದ್ದಾರೆ. ಆತ್ಮನ ಕಡೆಗಿರುವ ಅಂತರ ಪ್ರವೃತ್ತಿಯ ಭಾವವನ್ನೇ ತಿಳಿಸಿಕೊಟ್ಟಿದ್ದಾರೆ. ಕ್ಷಣಿಕ ವಿಕಾರದ ಬುದ್ಧಿಯನ್ನು ಬಿಡಿಸಿ, ತ್ರಿಕಾಲ ಅವಿಕಾರೀ ಜ್ಞಾಯಕ ಸ್ವರೂಪದಲ್ಲಿ ಪ್ರವೃತ್ತಿ ಮಾಡುವುದನ್ನು ತಿಳಿಸಿಕೊಟ್ಟಿದ್ದಾರೆ.

ಪಂಚಾಸ್ತಿಕಾಯವನ್ನು ತಿಳಿಸಿಕೊಟ್ಟು ನಿನ್ನ ಚಿದಾನಂದಮಯ ಜೀವಾಸ್ತಿಕಾಯ ಸ್ವರೂಪವು ಪರದಿಂದ ಬೇರೆಯೇ ಇದೆಯೆಂದು ತಿಳಿಸಿದ್ದಾರೆ. ಪರಲಕ್ಷ್ಯದಿಂದಾಗುವ ಯಾವ ಕ್ಷಣಿಕ ವಿಕಾರವಿದೆ ಅದು ಪರದ ಕಾರಣದಿಂದ ಇಲ್ಲ ಮತ್ತು ವಿಕಾರದ ಕಾರಣದಿಂದ ತ್ರಿಕಾಲ ಜೀವಾಸ್ತಿಕಾಯತನವಿಲ್ಲ. ಕರ್ಮದ ಉದಯವು ಜಡವಿದೆ ಅದು ಭಿನ್ನವಿದೆ ಮತ್ತು ನಿನ್ನ ಜೀವತತ್ತ್ವವು ಭಿನ್ನವಿದೆ. ಎಂಟು ಕರ್ಮಗಳಿಂದ ಜೀವನು ತಡೆಯಲ್ಪಟ್ಟಿರುವುದಿಲ್ಲ. ಏಕೆಂದರೆ ಎರಡರ ಸತ್ತಾ ಭಿನ್ನ ಭಿನ್ನವಿದೆ.

ಮಹಿಳೆಯು ಅಡಿಗೆ ಮಾಡುತ್ತಾಳೆಂದು ಯಾವನು ಮನ್ನಿಸುತ್ತಾನೆ ಅವನು ಸ್ವತಂತ್ರ ಜೀವಾಸ್ತಿಕಾಯವನ್ನು ಮನ್ನಿಸುವುದಿಲ್ಲ. ಕೋಟ್ಯಂತರ ರೂಪಾಯಿಗಳು ಐವರು ಸಹೋದರರ ಹತ್ತಿರವಿದ್ದರೂ ಜ್ಞಾನಿಯು ಅದರಲ್ಲಿ ತನ್ನ ಭಾಗವಿದೆಯೆಂದು ಮನ್ನಿಸುವುದಿಲ್ಲ. ನನ್ನ ಭಾಗವಂತೂ ಅಸಂಖ್ಯ ಗುಣಮೂರ್ತಿಯಾದ ಜೀವಾಸ್ತಿಕಾಯವಿದೆಯೆಂದು ಅವನು ತಿಳಿಯುತ್ತಾನೆ.

ಆರು ದ್ರವ್ಯ, ಐದು ಅಸ್ತಿಕಾಯಗಳಿವೆ. ಪ್ರತಿಯೊಂದರ ಸತ್ತಾವು ತ್ರಿಕಾಲ ತನ್ನತನದಿಂದ ಇದೆ ಮತ್ತು ಪರದಿಂದ ಭಿನ್ನವಿದೆ ಮತ್ತು ತಮ್ಮ ತಮ್ಮ ಗುಣ-ಪರ್ಯಾಯಗಳಿಂದ ಅಭಿನ್ನವಿವೆ. ಈ ಪ್ರಕಾರ ಭೇದಜ್ಞಾನ ಮಾಡಿದರೆ ಪರಾಶ್ರಯ ಬುದ್ಧಿಯು ಹೊರಟುಹೋಗಿ ಸ್ವತಂತ್ರ, ಸ್ವಾಶ್ರಯತನವಾದಲ್ಲದೆ ಇರುವುದಿಲ್ಲ. ಸಂಸಾರ ಭಾಗದಲ್ಲಿ ನೋಡಿದರೆ ಕ್ಷಣಿಕ, ವಿಕಾರ, ಪುಣ್ಯ-ಪಾಪದ ಪ್ರವೃತ್ತಿ ಅದೇನು ಜಡಕರ್ಮದಿಂದ ಇಲ್ಲ, ಆದರೆ ಅದು ಪರ್ಯಾಯದಲ್ಲಿ ನಿನ್ನ ಜೀವಾಸ್ತಿಕಾಯದ ಭಾಗ(ಅಂಶ)ವಿದೆ. ಇನ್ನು ಆ ಕ್ಷಣಿಕ ವಿಕಾರದ ಮೇಲಿಂದ ದೃಷ್ಟಿಯನ್ನು ತೆಗೆದು ತ್ರಿಕಾಲ ವಿಕಾರರಹಿತ ಜ್ಞಾತಾ ಮಾತ್ರದಲ್ಲಿ ಅಭೇದ ದೃಷ್ಟಿ ಮಾಡುವುದು ವೀತರಾಗ ಧರ್ಮದೃಷ್ಟಿಯಿದೆ.

ನಿಶ್ಚಯ-ವ್ಯವಹಾರ ಕಥನವು ವೀತರಾಗ ಮಾರ್ಗದಲ್ಲಿಯೇ ಇದೆ. ಎಲ್ಲಿಯವರೆಗೆ ಪೂರ್ಣ ವೀತರಾಗತೆಯಿರುವುದಿಲ್ಲ ಅಲ್ಲಿಯವರೆಗೆ ಸತ್ಯದೇವಾದಿಕರ ಕುರಿತು ರಾಗವು ಬರದೆ ಇರುವುದಿಲ್ಲ. ಜ್ಞಾನಿಯು ಅದನ್ನು ತಿಳಿಯುತ್ತಾನೆ, ಆದರೆ ಅದರಿಂದ ಧರ್ಮ ಮನ್ನಿಸುವುದಿಲ್ಲ. ಯಥಾರ್ಥ ವಸ್ತು ಸ್ವಭಾವವನ್ನು ತಿಳಿದರೆ ಸಹಜಮೋಕ್ಷ ಸಾಧಿಸಬಹುದಾಗಿದೆ. ಆರು ದ್ರವ್ಯಗಳನ್ನು ಮನ್ನಿಸದಿದ್ದರೆ ಪೂರ್ಣ ನಿರ್ಮಲ ಪರ್ಯಾಯವನ್ನು ಪ್ರಕಟಪಡಿಸಿಕೊಳ್ಳುವ ಉಪಾಯವು ಸಂಭವಿಸುವ ಸಾಧ್ಯತೆಯಿಲ್ಲ.

ಯಾವ ಕಾಲವೂ ನಿನ್ನನ್ನು ತಡೆಯುವುದಿಲ್ಲ. ಪರದಿಂದ ಭಿನ್ನ ಒಳಗೆ ಸ್ವರೂಪದಲ್ಲಿ ವೀತರಾಗದೃಷ್ಟಿ ಮಾಡುವುದೇ ಸ್ವಕಾಲಲಬ್ಧಿಯಿದೆ. ಮೋಕ್ಷದ ಸಾಧನವು ಕೂಡ ಭೇದಜ್ಞಾನರೂಪನಾಗುತ್ತಿರುವಂಥ ಈ ಆತ್ಮನೇ ಇದ್ದಾನೆ. ನೀನು ಭಿನ್ನನಿರುವೆಯೆಂದ ಮೇಲೆ ನಿನ್ನಿಂದ ಭಿನ್ನವಿರುವುದನ್ನೇಕೆ ಮಾಡುವೆ ? ಪುದ್ಗಲಾಸ್ತಿಕಾಯವನ್ನು ತಿಳಿಸಿದರೆ ಅದರಿಂದ ನಾನು ಬೇರೆಯೇ ಇದ್ದೇನೆ ಮತ್ತು ಅದರ ಜತೆಯಲ್ಲಿ ನನ್ನ ಸಂಬಂಧವಿಲ್ಲವೆಂದು ಒಳಗೆ ವೀತರಾಗ ದೃಷ್ಟಿ ಮಾಡದಿದ್ದರೆ ಅವನು ಶಾಸ್ತ್ರತಾತ್ಪರ್ಯವನ್ನು ಮನ್ನಿಸುವುದಿಲ್ಲ.

ಭರತೇಶ ವೈಭವ ಮೊದಲಾದ ಪುರಾಣ ಶಾಸ್ತ್ರಗಳಲ್ಲಿ ಆತ್ಮವೈಭವದ ಹಾಗೂ ಪುಣ್ಯವೈಭವದ ವರ್ಣನೆಯು ಬರುತ್ತದೆ. ಅದನ್ನಾಲಿಸಿ ಯಾವನು ಪುಣ್ಯದ ಸಿಹಿಯನ್ನು ಅನುಭವಿಸುತ್ತಾನೆ ಅವನು ಪರದಿಂದ-ವಿಕಾರದಿಂದ ಭಿನ್ನ ಮತ್ತು ತನ್ನಿಂದ ಅಭಿನ್ನ-ರಾಗರಹಿತ ಜ್ಞಾತಾತನವನ್ನು ತಿಳಿಸಿಕೊಡುವಂಥ ಶಾಸ್ತ್ರದ ಉದ್ದೇಶವನ್ನು ತಿಳಿದುಕೊಳ್ಳಲಿಲ್ಲ. ಪುಣ್ಯವು ಪುದ್ಗಲಾಸ್ತಿಕಾಯವಿದೆ ಮತ್ತು ಪುಣ್ಯ-ಪಾಪರೂಪದ ವಿಕಾರವು ಜೀವಾಸ್ತಿಕಾಯದ ಅಂಶವಿದೆ. ಅದರ ಅಭಿರುಚಿ ಬಿಟ್ಟು ಒಳಗೆ ಅಭೇದ ದೃಷ್ಟಿ-ವೀತರಾಗದೃಷ್ಟಿ ಮಾಡುವ ಪ್ರಯೋಜನವನ್ನು ಶಾಸ್ತ್ರಗಳು ಹೇಳುತ್ತವೆ. ಅದನ್ನು ಮನ್ನಿಸದಿದ್ದರೆ ಅವನು ನವತತ್ತ್ವಗಳು ಭಿನ್ನ-ಭಿನ್ನವಿವೆಯೆಂಬುದನ್ನು ಮನ್ನಿಸಲೇ ಇಲ್ಲ.

ಪುಣ್ಯ-ಪಾಪಗಳು ವಿಕಾರೀ ಭಾವಗಳಿವೆ. ಅವು ಸಂವರ-ನಿರ್ಜರೆಯಲ್ಲ, ಹಾಗೂ ಅವುಗಳಿಂದ ಧರ್ಮವಿಲ್ಲ, ದಯೆ, ದಾನ, ವ್ರತಾದಿಗಳ ಭಾವವು ಪುಣ್ಯತತ್ತ್ವವಿದೆ, ಅದು ಜೀವತತ್ತ್ವವಲ್ಲ. ಪುಣ್ಯದಿಂದ ಸಂವರ, ನಿರ್ಜರೆರೂಪದ ಧರ್ಮವಾಗುವುದಿಲ್ಲ. ಅದರಿಂದ ಧರ್ಮವಾದರೆ ಪುಣ್ಯತತ್ತ್ವ ಮತ್ತು ಸಂವರ-ನಿರ್ಜರೆತತ್ತ್ವಗಳು ಬೇರೆ ಉಳಿಯುವುದಿಲ್ಲ. ಸಂವರ-ನಿರ್ಜರೆಗಳು ಆಂಶಿಕ ಶುದ್ಧಭಾವರೂಪ ಜೀವದ ಕ್ಷಣಿಕ ಅಂಶವಿವೆ, ಆದರೆ ಇಷ್ಟೇ ಜೀವವಲ್ಲ. ನವತತ್ತ್ವದ ಸ್ವರೂಪವು ಒಂದು ವೀತರಾಗತೆಯ ಸಲುವಾಗಿ ಇದೆ.

ಅಜೀವದಿಂದ ಜೀವದ ಪರ್ಯಾಯದಲ್ಲಿ ಆಸ್ರವವಾಗುತ್ತಿದ್ದರೆ ಅಜೀವ ಮತ್ತು ಜೀವ ಇವೆರಡೂ ಒಂದಾಗಿ ಹೋದವು. ಶರೀರವನ್ನು ಕೃಶಗೊಳಿಸಿದರೆ ನಿರ್ಜರೆಯಾಗುತ್ತದೆಯೆಂದು ಮನ್ನಿಸುವವನು ಅಜೀವದಿಂದ ಜೀವದ ಶುದ್ಧಿಯ ಉತ್ಪತ್ತಿಯನ್ನು ಮನ್ನಿಸಿದನು. ಇದೇ ರೀತಿ ನವತತ್ತ್ವಗಳನ್ನು ವಿಪರೀತರೂಪದಿಂದ ಮನ್ನಿಸಿದರೆ ಒಂಭತ್ತು ತತ್ತ್ವಗಳು ಪೃಥಕ್ಕಾಗಿ ಉಳಿಯುವುದಿಲ್ಲ. ಒಂಭತ್ತು ತತ್ತ್ವ, ಆರು ದ್ರವ್ಯ, ಪಂಚಾಸ್ತಿಕಾಯಗಳನ್ನು ಯಥಾರ್ಥವಾಗಿ

ತಿಳಿದುಕೊಳ್ಳುವ ತಾತ್ಪರ್ಯವೇನೆಂದರೆ ವೀತರಾಗದೃಷ್ಟಿ, ವೀತರಾಗ ಜ್ಞಾನಾನಂದ ಸ್ವಭಾವದ ಸನ್ಮುಖ ಜ್ಞಾನ ಮತ್ತು ಲೀನತೆಯಾಗುವುದಿದೆ.

ನವತತ್ತ್ವಗಳನ್ನು ತಿಳಿದುಕೊಂಡರೆ ಪರದಿಂದ ಭೇದಜ್ಞಾನವಾಗುವುದು ಹಾಗೂ ಕ್ಷಣಿಕ ಪರ್ಯಾಯದೃಷ್ಟಿಯಿರುವ ಬುದ್ಧಿಯು ಬಿಟ್ಟುಹೋಗಿ ತ್ರಿಕಾಲ ಸ್ವಭಾವದ ದೃಷ್ಟಿ ಮತ್ತು ವೀತರಾಗತೆಯ ಅವಸರವು ಬರುತ್ತದೆ, ಅದುವೇ ಇದರ ಸಾರವಿದೆ. ಟೀಕೆಯಲ್ಲಂತೂ ಅಮೃತಚಂದ್ರಾಚಾರ್ಯದೇವರು ಅಮೃತದ ವೃಷ್ಟಿಯನ್ನೇ ಮಾಡಿಬಿಟ್ಟಿದ್ದಾರೆ. ಇಂಥ ಅದ್ಭುತ ಟೀಕೆಯು ಭರತಕ್ಷೇತ್ರದಲ್ಲಿ ಅನುಪಮವಿದೆ. ವೀತರಾಗರು ಹೇಳಿರುವ ಆರು ದ್ರವ್ಯಗಳನ್ನು ನಿರ್ಣಯ ಮಾಡಿದರೆ ಅದರಲ್ಲಿಯೂ ಕೂಡ ಸ್ವಭಾವಸನ್ಮುಖನಾಗಿ ವೀತರಾಗಭಾವವನ್ನೇ ಮಾಡುವುದಿದೆಯೆಂಬುದಾಗಿದೆ. ನವತತ್ತ್ವಗಳನ್ನು ತಿಳಿದುಕೊಂಡರೆ ಅದರಲ್ಲಿಯೂ ಕೂಡ ಒಂದು ವೀತರಾಗ ತಾತ್ಪರ್ಯವೇ ಹೊರಡುತ್ತದೆ.

ನವತತ್ತ್ವಗಳಲ್ಲಿ ಜೀವದ ಸ್ವಭಾವವೇನು? ಅಜೀವೆಂದರೇನು? ಪುಣ್ಯ-ಪಾಪವೆಂದರೇನು? ಆಸ್ರವವೆಂದರೇನು? ಸಂವರವೆಂದರೇನು? ಯಾವ ಗುಣಸ್ಥಾನದಲ್ಲಿ ಎಷ್ಟು ಸಂವರವಿರುತ್ತದೆ? ಮತ್ತು ಎಷ್ಟು ಆಸ್ರವವಿರುತ್ತದೆ? ಇವೇ ಮೊದಲಾದುವೆಲ್ಲವನ್ನು ತಿಳಿದುಕೊಳ್ಳುವುದರಿಂದ ಅದರಲ್ಲಿ ದೇವ-ಶಾಸ್ತ್ರ-ಗುರುಗಳ ಸ್ವರೂಪವು ಕೂಡ ಬಂದುಬಿಡುತ್ತದೆ. ಮುನಿದಶೆಯಲ್ಲಿ ಕೂಡ ವಸ್ತ್ರದ ರಾಗವಿರುತ್ತದೆಯೆಂದು ಮನ್ನಿಸುವವ ಮುನಿದಶೆಯ ಸಂವರವನ್ನು ತಿಳಿದುಕೊಂಡೇ ಇಲ್ಲ. ನವತತ್ತ್ವಗಳಲ್ಲಿ ಅವನದು ದೋಷವಿದೆ. ಸರ್ವಜ್ಞದಶೆಯು ಪ್ರಕಟವಾದರೆ ಅಲ್ಲಿ ಆಹಾರಾದಿಗಳು ಇರುವುದಿಲ್ಲ. ಆದಾಗ್ಯೂ ಅಲ್ಲಿ ಆಹಾರ ಮನ್ನಿಸಿದರೆ ಮೋಕ್ಷ ಮೊದಲಾದ ನವತತ್ತ್ವಗಳ ಕುರಿತು ದೋಷವಿದೆ. ಆರು-ಏಳನೇ ಗುಣಸ್ಥಾನದಲ್ಲಿ ಸ್ವರೂಪದೊಳಗೆ ಜೀಕುತ್ತಿರುವಂಥ ಮುನಿರಾಜರಿಗೆ ಬಹಳಷ್ಟು ಸಂವರದಶೆ ಪ್ರಕಟವಾಗುತ್ತದೆ ಮತ್ತು ಸಂಜ್ವಲನರಾಗವು ಅತಿಶಯ ಕೃಶವಾಗುತ್ತದೆ. ಅಲ್ಲಿ ವಸ್ತ್ರಾದಿಗಳ ಸಂಯೋಗವು ಇರುವುದೇ ಇಲ್ಲವೆಂದು ತಿಳಿದುಕೊಳ್ಳದಿದ್ದರೆ ಆ ಜೀವನು ಆಸ್ರವ, ಸಂವರ ಮೊದಲಾದ ನವತತ್ತ್ವಗಳನ್ನು ತಿಳಿದುಕೊಳ್ಳುವುದಿಲ್ಲ, ಕೇವಲಜ್ಞಾನ ದಶೆಯಾದರೆ ಅಲ್ಲಿ ಅಜೀವಕರ್ಮದಲ್ಲಿ ಕೂಡ ಅಸಾತಾದ ರಸವು ಇರುವುದೇ ಇಲ್ಲ. ಅದರಿಂದ ಶರೀರದಲ್ಲಿ ರೋಗಾದಿಗಳು ಆಗುವುದಿಲ್ಲ. ಜೀವದಲ್ಲಿ ಕೇವಲಜ್ಞಾನವಾದಾಗ ಅಜೀವದಲ್ಲಿ ಪರಮ ಔದಾರಿಕ ದೇಹವಾಗುತ್ತದೆಯೆಂಬುದನ್ನು ತಿಳಿದುಕೊಳ್ಳದಿದ್ದರೆ ಮತ್ತು ಕೇವಲಿಗಳಿಗೆ ರೋಗವಾಗುತ್ತದೆಯೆಂದು ಮನ್ನಿಸಿದರೆ ಆ ಜೀವನಿಗೆ ಆತ್ಮನ ಮೋಕ್ಷದಶೆಯ, ಸಂವರ-ನಿರ್ಜರೆಯ, ಪುಣ್ಯ-ಪಾಪದ ಅಥವಾ ಅಜೀವ ತತ್ತ್ವದ ಅರಿವಿಲ್ಲ. ಲಡ್ಡು ತಿಂದರೆ ಸುಖವು ಬರುತ್ತದೆಂದು ಮನ್ನಿಸಿದರೆ ಅವನು ಅಜೀವ-ಜೀವ ತತ್ತ್ವವನ್ನು ತಿಳಿದಿಲ್ಲ. ಲಡ್ಡುವಂತೂ ಅಜೀವವಿದೆ. ಅದರಲ್ಲಿ ಜೀವದ ಸುಖವು ಇರುವುದೇ ಇಲ್ಲ.

ವೀತರಾಗ ಶಾಸ್ತ್ರದ ರಹಸ್ಯವನ್ನು ನೋಡಿರಿ ! ಯಾವುದೇ ಮಾತನ್ನು ತೆಗೆದುಕೊಳ್ಳಿರಿ, ಅದರಲ್ಲಿ ವೀತರಾಗ ತಾತ್ಪರ್ಯವೇ ಹೊರಡುತ್ತದೆ. ನವತತ್ತ್ವಗಳನ್ನು ತಿಳಿದುಕೊಂಡರೆ ಕೂಡ ಅಜೀವದಿಂದ ನಾನು ಭಿನ್ನ ಮತ್ತು ಪರ್ಯಾಯರೂಪ ಆರುತತ್ತ್ವಗಳಷ್ಟು ಕೂಡ ನಾನಿಲ್ಲವೆಂದು ತಿಳಿದುಕೊಂಡು ಧ್ರುವ ಜೀವಸ್ವಭಾವದ ಸನ್ಮುಖವಾಗಿ ಒಂದು ವೀತರಾಗತೆ ಮಾಡುವುದೇ ಬರುತ್ತದೆ. ಜೀವದಲ್ಲಿ ಪುಣ್ಯ-ಪಾಪ ಮೊದಲಾದ ಭಾವಗಳಿವೆ ಅವು ಜೀವದ ವಿಕಾರಗಳಿವೆ ಮತ್ತು ಆ ಸಮಯದೊಳಗೆ ಅಜೀವ ಕರ್ಮಗಳಲ್ಲಿ ಅದಕ್ಕೆ ಯೋಗ್ಯವಿರುವ ಪುಣ್ಯ-ಪಾಪರೂಪದ ಪರ್ಯಾಯಗಳಾಗುತ್ತವೆ ಮತ್ತು ಅದರ ಫಲರೂಪವಾಗಿ ಸ್ವರ್ಗ-ನರಕ ಮೊದಲಾದ ಸ್ಥಾನಗಳು ಕೂಡ ಜಗತ್ತಿನಲ್ಲಿ ಇವೆ. ನಿಶ್ಚಯದಿಂದ ಜೀವವು ವಿಕಾರವನ್ನು ಅದೇ ಸಮಯದಲ್ಲಿ ಅನುಭವಿಸುತ್ತದೆ ಮತ್ತು ವ್ಯವಹಾರದಿಂದ ಅದರ ಫಲರೂಪವಾಗಿ ಸ್ವರ್ಗ-ನರಕದ ಭೋಗ್ಯ ಸ್ಥಾನಗಳಿವೆ. ಜೀವವು ಆ ಸ್ವರ್ಗ-ನರಕ ಮೊದಲಾದ ಬಾಹ್ಯ ಸ್ಥಾನಗಳಿಂದ ಭಿನ್ನವಿದೆ. ಅಜೀವ ಕರ್ಮದಿಂದ ಬೇರೆಯಿದೆ ಮತ್ತು ಅದರ ಫಲರೂಪವಾದ ಪುಣ್ಯ-ಪಾಪದಿಂದ ಕೂಡ ಪರಮಾರ್ಥದಿಂದ ಬೇರೆಯಿದೆ. ಶುದ್ಧ ಚೈತನ್ಯಸ್ವಭಾವಿಯಿದ್ದೇನೆಂದು ತಿಳಿದುಕೊಂಡು ಸ್ವಸನ್ಮುಖವಾದರೆ ವೀತರಾಗಭಾವವು

ಪ್ರಕಟವಾಗುತ್ತದೆ. ಈ ಪ್ರಕಾರ ಶಾಸ್ತ್ರದ ತಾತ್ಪರ್ಯವಿದೆ. ಮೋಕ್ಷದಶೆಯಾದನಂತರ ಅವನ ನಿಶ್ಚಯ ಸ್ಥಾನವಂತೂ ಜೀವದ ಪರ್ಯಾಯವಿದೆ. ವ್ಯವಹಾರನಯದಿಂದ ಅವನ ಕ್ಷೇತ್ರವು ಲೋಕದ ಅಗ್ರಭಾಗದಲ್ಲಿ ಸಿದ್ಧಶಿಲೆಯ ಮೇಲೆ ಇದೆ. ಅಲ್ಲಿ ಹೋದ ಜೀವನು ಮರಳಿ ಸಂಸಾರ ರಾಶಿಯಲ್ಲಿ ಎಂದೂ ಬರುವುದಿಲ್ಲ.

ಬಂಧ-ಮೋಕ್ಷದ ಭಾವ ಮತ್ತು ಅದರ ಬಾಹ್ಯ ಸ್ಥಾನಗಳ ಜ್ಞಾನ ಮಾಡಿಸಿಯೂ ಕೂಡ ಒಂದು ವೀತರಾಗ ಭಾವವನ್ನೇ ತಿಳಿಸಿಕೊಟ್ಟಿದ್ದಾರೆ. ಬಂಧದ ಭಾವ, ಬಂಧ ಮತ್ತು ಬಂಧದ ಫಲರೂಪವಾದ ಬಾಹ್ಯ ಸ್ಥಾನಗಳು ಅದರಂತೆ ಮೋಕ್ಷ ಮತ್ತು ಮೋಕ್ಷದ ಬಾಹ್ಯಸ್ಥಾನ-ಇವೆಲ್ಲವುಗಳ ಜ್ಞಾನವನ್ನು ಸರ್ವಜ್ಞದೇವರು ಮಾಡಿಸಿದ್ದಾರೆ. ಬಂಧ-ಮೋಕ್ಷವೇನು? ಅವುಗಳ ನಿಮಿತ್ತಗಳು ಹೇಗಿವೆ ?ಇವೆಲ್ಲವುಗಳ ವರ್ಣನೆಯು ಜಿನವಾಣಿಯಲ್ಲಿ ಬಂದಿದೆ. ಆದರೆ ಅದರ ತಾತ್ಪರ್ಯವು ಒಂದು ವೀತರಾಗ ಭಾವವಿದೆ. ಬಂಧ-ಮೋಕ್ಷವೆಂದರೇನು ? ಅವುಗಳ ನಿಮಿತ್ತಸ್ಥಾನಗಳೆಂದರೇನು ? ಇವೆಲ್ಲವನ್ನು ತಿಳಿದರೆ ಸ್ವಸನ್ಮುಖವಾಗಿ ವೀತರಾಗ ಭಾವವಾದಲ್ಲದೆ ಇರುವುದಿಲ್ಲ.

ಶಾಸ್ತ್ರದ ತಾತ್ಪರ್ಯವು ಒಂದು ವೀತರಾಗಭಾವವಿದೆ.

ಆತ್ಮನಲ್ಲಿ ಪರದ ಅಪೇಕ್ಷೆಯನ್ನು ಬಿಟ್ಟುಕೊಟ್ಟು ಸ್ವಸ್ವಭಾವದ ಅಪೇಕ್ಷೆ ಮಾಡುವುದು ಮತ್ತು ಪರದ ಉಪೇಕ್ಷೆ ಮಾಡುವುದು ವೀತರಾಗಭಾವದ ಕಾರಣವಿದೆ ಮತ್ತು ಅದುವೇ ಸಮಸ್ತ ಶಾಸ್ತ್ರದ ಸಾರವಿದೆ.

ಆತ್ಮನ ಜ್ಞಾನಸ್ವಭಾವವು ತಿಳಿದುಕೊಳ್ಳುವುದಿದೆ, ದರ್ಶನಸ್ವಭಾವವು ನೋಡುವುದಿದೆ, ಚಾರಿತ್ರಸ್ವಭಾವವು ಸ್ವರೂಪದಲ್ಲಿ ಆಚರಣ ಮಾಡುವುದಿದೆ. ಈ ಪ್ರಕಾರ ಗುಣಗಳ ವರ್ಣನೆಯಲ್ಲಿಯೂ ಕೂಡ ಒಂದು ವೀತರಾಗತೆಯೇ ಬರುತ್ತದೆ.

ಆರು ದ್ರವ್ಯಗಳಿವೆ, ಅನಂತ ಜೀವಗಳಿವೆ, ಸ್ವರ್ಗ-ನರಕ ಮೊದಲಾದವು ಇವೆ, ಮೋಕ್ಷವಿದೆ. ಇತ್ಯಾದಿಗಳ ಎಷ್ಟು ವರ್ಣನೆಯನ್ನು ಶಾಸ್ತ್ರಗಳಲ್ಲಿ ಮಾಡಲಾಗಿದೆ ಅವೆಲ್ಲವುಗಳ ಸಾರವೆಂದರೆ ಆತ್ಮನ ಸ್ವಭಾವದ ಕಡೆಗೆ ತಿರುಗಿ ಒಂದು ವೀತರಾಗ ಭಾವವನ್ನು ಪ್ರಕಟಪಡಿಸಿಕೊಳ್ಳುವುದೇ ಇದೆ.

ಆತ್ಮನಿಗೆ ರಾಗ-ದ್ವೇಷ-ಮೋಹ ಭಾವವಾಗುತ್ತದೆ, ಅದು ಭಾವಬಂಧವಿದೆ ಮತ್ತು ಅದರ ನಿಮಿತ್ತದಿಂದ ಪುದ್ಗಲ ಕರ್ಮಗಳು ಕಟ್ಟುವುದು ದ್ರವ್ಯಬಂಧವಿದೆ. ಭಾವಬಂಧವು ಕೂಡ ಮಿಥ್ಯಾತ್ವ ಮೊದಲಾಗಿ ಐದು ಪ್ರಕಾರದಿಂದ ಇದೆ. ಈ ಪ್ರಕಾರ ಬಂಧತತ್ತ್ವವನ್ನು ತಿಳಿದುಕೊಳ್ಳುವುದಿದೆ. ಅದನ್ನು ತಿಳಿದುಕೊಂಡು ಅಬಂಧ ಸ್ವಭಾವದ ಕಡೆಗೆ ತಿರುಗುವುದು ತಾತ್ಪರ್ಯವಿದೆ. ಜ್ಞಾನಾವರಣೀಯ ಮೊದಲಾದ ಕರ್ಮಗಳ ಬಂಧನವಿದೆ. ಅವುಗಳ ವರ್ಣನೆ ಮಾಡಿ ನಿನ್ನ ಜ್ಞಾನಾದಿ ಪರ್ಯಾಯಗಳು ತಡೆಯಲ್ಪಟ್ಟಿರುವುದರಿಂದ ಭಾವಬಂಧವಿದೆ ಮತ್ತು ಅದರ ನಿಮಿತ್ತದಿಂದ ದ್ರವ್ಯಬಂಧವಾಗುತ್ತದೆಯೆಂದು ಶಾಸ್ತ್ರಗಳು ತಿಳಿಸಿಕೊಡುತ್ತವೆ. ಅದರಂತೆ ಆ ಬಂಧಭಾವ ನಿನ್ನ ಸ್ವರೂಪವಲ್ಲವೆಂದು ಕೂಡ ಪರಿಚಯ ಮಾಡಿಸುತ್ತವೆ. ಬಂಧ ಮತ್ತು ಬಂಧದ ಕಡೆಗಿರುವಭಾವ ಇವೆರಡರಿಂದ ಅತೀತ ಒಂದು ಚಿದಾನಂದ ಅಬಂಧ ಸ್ವಭಾವವನ್ನು ಲಕ್ಷ್ಯದಲ್ಲಿ ತಂದುಕೊಳ್ಳುವುದೇ ಶಾಸ್ತ್ರಗಳ ಹೇತುವಿದೆ. ಆದರೆ ಜ್ಞಾನಾವರಣೀಯ ಮೊದಲಾದ ಕರ್ಮಗಳ ವರ್ಣನೆ ಮಾಡುವಲ್ಲಿ ಕರ್ಮವು ಜೀವವನ್ನು ಭ್ರಮಣ ಮಾಡಿಸುತ್ತದೆಯೆಂಬ ಹೇತುವಿಲ್ಲ ! ಬಂಧವಿದೆ, ಆದರೆ ಅದು ನಿನ್ನ ಸ್ವರೂಪವಿಲ್ಲವೆಂದು ತಿಳಿದುಕೊಂಡು ಸ್ವಭಾವದ ಕಡೆಗಿರುವ ಪುರುಷಾರ್ಥ ಮಾಡು. ನಿಧ್ಧತ ಮತ್ತು ನಿಕಾಚಿತ ಕರ್ಮಗಳ ವರ್ಣನೆ ಮಾಡಿಯೂ ಕೂಡ ನಿನ್ನ ವಿಪರೀತ ಪುರುಷಾರ್ಥದಿಂದ ಕರ್ಮವು ಕಟ್ಟುತ್ತದೆ ಮತ್ತು ಅದು ನಿನ್ನ ಸ್ವಭಾವದ ಕಡೆಗಿನ ಪುರುಷಾರ್ಥದಿಂದ ಬಿಟ್ಟುಹೋಗುತ್ತದೆಯೆಂಬ ಮಾತನ್ನೇ ತಿಳಿಸಿಕೊಡಲಾಗಿದೆ.

ಈ ಚೈತನ್ಯಬಿಂಬವು ತನ್ನ ಆತ್ಮನ ಜ್ಞಾನ ಸಹಿತವಾಗಿ (ಅನುಭವಸಹಿತವಾಗಿ) ಜಿನೇಂದ್ರ ಬಿಂಬದ ದರ್ಶನ

ಮಾಡುವುದರಿಂದ ನಿದ್ಧತ ಮತ್ತು ನಿಕಾಚಿತ ಕರ್ಮಗಳ ಭಂಗಗಳನ್ನು ಕೂಡ ಉಲ್ಲಂಘಿಸಿ ಹೋಗುತ್ತದೆಯೆಂದು ಶ್ರೀ ಧವಲಾದಲ್ಲಿ ಹೇಳಿದೆ.

ಮೋಕ್ಷದಲ್ಲಿ ದ್ರವ್ಯಮೋಕ್ಷ ಮತ್ತು ಭಾವಮೋಕ್ಷವೆಂದು ಎರಡು ಭೇದಗಳಿವೆ. ಹದಿಮೂರನೆಯ ಗುಣಸ್ಥಾನದಲ್ಲಿ ಕೇವಲೀ ಭಗವಂತರಿಗೆ ಭಾವಮೋಕ್ಷವಿದೆ ಮತ್ತು ಸಮಸ್ತ ಕರ್ಮಗಳಿಂದ ರಹಿತವಾದ ಸಿದ್ಧದಶೆಯು ಪ್ರಕಟವಾಗುವುದು ದ್ರವ್ಯಮೋಕ್ಷವಿದೆ. ಮಿಥ್ಯಾತ್ವ ಮೊದಲಾದ ಭಾವಗಳಿಂದ ಎಷ್ಟು ಅಂಶಗಳಲ್ಲಿ ಬಿಡುಗಡೆಯಾಗುವುದು ಅಷ್ಟು ಅಂಶದಲ್ಲಿ ಮುಕ್ತಿಯಿದೆ. ನಾಲ್ಕನೆಯ ಗುಣಸ್ಥಾನದಲ್ಲಿ ಧರ್ಮಾತ್ಮನಿಗೆ ವಸ್ತುದೃಷ್ಟಿಯಾಗಿರುತ್ತದೆ. ಆ ವಸ್ತುದೃಷ್ಟಿಯ ಅಪೇಕ್ಷೆಯಿಂದಂತೂ ಅವನು ಮುಕ್ತನೇ ಇದ್ದಾನೆ. ದ್ರವ್ಯವಂತೂ ಮುಕ್ತವೇ ಇದೆ. ಅದರ ಆಶ್ರಯದಿಂದ ಪರ್ಯಾಯದಲ್ಲಿ ಮುಕ್ತದಶೆಯು ಪ್ರಕಟವಾಗಿದೆ. ಈ ಪ್ರಕಾರ ಬಂಧ-ಮೋಕ್ಷದ ಭೇದಗಳನ್ನು ವರ್ಣಿಸುವಲ್ಲಿ ಕೂಡ ಶಾಸ್ತ್ರಗಳ ಉದ್ದೇಶವು ಒಂದು ವೀತರಾಗತೆಯನ್ನೇ ಮಾಡಿಸುವುದಿದೆ.

ಇನ್ನು ಸರ್ವಜ್ಞದೇವರು ಹೇಳಿದ ಶಾಸ್ತ್ರಗಳಲ್ಲಿ ನಿಶ್ಚಯ ಮತ್ತು ವ್ಯವಹಾರವೆಂದು ಎರಡು ಪ್ರಕಾರದಿಂದ ಮೋಕ್ಷಮಾರ್ಗದ ಕಥನವಿದೆ. ವಸ್ತುವು ನಿತ್ಯವಾಗಿದ್ದುಕೊಂಡು ಬದಲಾಗುತ್ತಿರುವುದು, ಪರದಿಂದ ಭಿನ್ನವಿದ್ದು ಸ್ವಾಧೀನವಿದೆ. ಅದರಿಂದಲೇ ಅದು ತನ್ನ ಮೋಕ್ಷದ ಕಾರ್ಯವನ್ನು ಸಾಧಿಸುವ ಸಾಧ್ಯತೆಯಿದೆ. ಶುದ್ಧ ಆತ್ಮನ ಶ್ರದ್ಧೆ-ಜ್ಞಾನ ಮತ್ತು ಏಕಾಗ್ರತೆಯೇ ಮೋಕ್ಷಮಾರ್ಗವಿದೆ, ಆದರೆ ಎಲ್ಲಿಯವರೆಗೆ ಪೂರ್ಣ ವೀತರಾಗತೆಯಾಗುವುದಿಲ್ಲ ಅಲ್ಲಿಯವರೆಗೆ ಮಧ್ಯದಲ್ಲಿ ಜಿನೇಂದ್ರದೇವರ ಭಕ್ತಿ ಮೊದಲಾದವುಗಳ ಧರ್ಮರಾಗವು ಬರುತ್ತದೆ. ಆದಾಗ್ಯೂ ಮೋಕ್ಷದ ಕಾರಣವಂತೂ ಒಂದು ವೀತರಾಗಭಾವವೇ ಇದೆ. ಅಲ್ಲಿ ರಾಗವನ್ನು ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳಲಾಗುತ್ತದೆ.

ಜಗತ್ತಿನಲ್ಲಿ ದ್ರವ್ಯ-ಗುಣ-ಪರ್ಯಾಯಗಳೆಲ್ಲವೂ ಸತ್ ಇವೆ. ಅವನ್ನು ಹೇಗೆ ಇವೆ ಹಾಗೆ ತಿಳಿದುಕೊಳ್ಳುವುದು ಆತ್ಮನ ಸ್ವಭಾವವಿದೆ, ಆದರೆ ಅದರಲ್ಲಿ ಯಾವುದನ್ನು ತೆಗೆಯುವ ಸಾಧ್ಯತೆಯಿಲ್ಲ ಅಥವಾ ಯಾವುದನ್ನು ನವೀನ ಮಾಡುವ ಸಾಧ್ಯತೆಯಿಲ್ಲವೆನ್ನುವಂತೆ ಅವನ ಸಾಮರ್ಥ್ಯವಿದೆ. ಜಡದ ಕ್ರಿಯೆಯನ್ನು ಜಡದ ಹಾಗೆ ನೋಡು, ರಾಗವನ್ನು ರಾಗದ ಹಾಗೇಯೇ ತಿಳಿದುಕೊ! ಸ್ವಭಾವದ ಆಶ್ರಿತವಿರುವ ವೀತರಾಗ ಶ್ರದ್ಧೆ-ಜ್ಞಾನ-ಚಾರಿತ್ರವು ಪ್ರಕಟವಾದವನಿಗೆ ನಿಶ್ಚಯಮೋಕ್ಷಮಾರ್ಗವಿದೆಯೆಂದು ತಿಳಿದುಕೊ! ಆದರೆ ಶರೀರದ ಕ್ರಿಯೆಯನ್ನು ಮೋಕ್ಷದ ಕಾರಣವೆಂದು ಮನ್ನಿಸಬೇಡ, ರಾಗವನ್ನು ಮೋಕ್ಷದ ಕಾರಣವೆಂದು ನಿಜಕ್ಕೂ ಮನ್ನಿಸಬೇಡ. ಸ್ವಭಾವದ ರುಚಿಯನ್ನಿಟ್ಟುಕೊಂಡು ರಾಗವಾಗುತ್ತದೆಯೆಂಬುದನ್ನು ತಿಳಿದುಕೊ. ನಿಶ್ಚಯಮೋಕ್ಷಮಾರ್ಗದ ಜತೆಗೆ ಮಧ್ಯದಲ್ಲಿ ರಾಗವು ಬರುತ್ತದೆ. ಅದನ್ನು ಆರೋಪದಿಂದ ವ್ಯವಹಾರಮೋಕ್ಷಮಾರ್ಗವೆಂದು ಹೇಳಿ ಅದರ ಜ್ಞಾನ ಮಾಡಿಸಿಕೊಡಲಾಗಿದೆ, ಆದರೆ ನಿಶ್ಚಯ ಮೋಕ್ಷಮಾರ್ಗವಂತೂ ಒಂದು ವೀತರಾಗಭಾವವೇ ಇದೆ. ಆ ವೀತರಾಗಭಾವವೇ ಸಮಸ್ತ ಶಾಸ್ತ್ರಗಳ ತಾತ್ಪರ್ಯವಿದೆ.

ಸ್ವಭಾವದ ಸನ್ಮುಖವಾದರೆ ಶಾಂತಚಿತ್ತವಾಗುತ್ತದೆ. ಆತ್ಮನು ತನ್ನಲ್ಲಿ ತಾನು ಸ್ಥಿರನಾಗಿ ಹೋಗುತ್ತಾನೆ, ಮತ್ತು ವೀತರಾಗ ಭಾವವಾಗುತ್ತದೆ. ಇಂಥ ವೀತರಾಗಭಾವವು ಮೋಕ್ಷದ ಕಾರಣವಿದೆ. ಬಾಹ್ಯದ ಅವಲಂಬನದಿಂದಂತೂ ಆಕುಲತೆಯಾಗುತ್ತದೆ, ಅದು ತಾನೆ ಮೋಕ್ಷದ ಕಾರಣವಿಲ್ಲ. ಸ್ವಭಾವದ ಸನ್ಮುಖವಾಗುತ್ತಿರುವಂತೆ ಯಾವ ಸಹಜ ಶಾಂತಿಯ ಅನುಭವವಾಗುತ್ತದೆ ಅದು ಮೋಕ್ಷಮಾರ್ಗವಿದೆ. ನೀನು ಶಾಂತನಾಗು....ಶಾಂತನಾಗು ! ಸ್ವಭಾವದ ಸನ್ಮುಖನಾಗಿ ವೀತರಾಗ ಶ್ರದ್ಧೆ, ಜ್ಞಾನ ಮತ್ತು ಏಕಾಗ್ರತೆ ಮಾಡುತ್ತದೆ ಅಷ್ಟು ಶಾಂತಿಯಿದೆ. ಅದು ನಿಶ್ಚಯದಿಂದ ಮೋಕ್ಷದ ಕಾರಣವಿದೆ. ಮಧ್ಯದಲ್ಲಿ ಭಕ್ತಿ ಮೊದಲಾದವುಗಳ ಶುಭರಾಗವು ಬರುತ್ತದೆ ಅದು ನಿಜವಾದ ಮೋಕ್ಷಮಾರ್ಗವಿಲ್ಲ, ಆದರೆ ಅದನ್ನು ಆರೋಪದಿಂದ ಮೋಕ್ಷಮಾರ್ಗವೆಂದು ಹೇಳಿದೆ. ಒಂದು ವೀತರಾಗಭಾವವೇ ಆತ್ಮನ ನಿಜವಾದ

ಜೀವನವಿದೆ. ಒಂದು ಪರಮವೀತರಾಗಭಾವವೇ ಮೋಕ್ಷದ ಕಾರಣವಿದೆ. ನಿಶ್ಚಯಮೋಕ್ಷಮಾರ್ಗ ಮತ್ತು ವ್ಯವಹಾರ ಮೋಕ್ಷಮಾರ್ಗವೆಂದು ಎರಡು ಪ್ರಕಾರದಿಂದ ಅದರ ವರ್ಣನೆ ಮಾಡಿಯಾಯಿತು ಆದರೆ ಮೋಕ್ಷದ ನಿಜವಾದ ಕಾರಣವಂತೂ ಒಂದೇ ಇದೆ. ಜಗತ್ತಿನಲ್ಲಿ ಬೇಕಾದಂಥ ಕೋಲಾಹಲವಿರಲಿ, ಆದರೆ ಚೈತನ್ಯದ ಆಶ್ರಯದಿಂದ ಯಾವ ಶಾಂತಭಾವವು ಪ್ರಕಟವಾಗುವುದು ಅದು ಹಿಂದೆ ಸರಿಯುವುದಿಲ್ಲ. ಸ್ವಭಾವ ಸನ್ಮುಖವಾಗಿ ವೀತರಾಗಭಾವವು ಪ್ರಕಟವಾಗುವುದರಲ್ಲಿಯೇ ಶಾಂತಿಯಿದೆ. ಅದನ್ನು ಹೊರತುಪಡಿಸಿ ಪತ್ನೀ-ಧನ ಮೊದಲಾದುವಲ್ಲಿ ಶಾಂತಿಯಿಲ್ಲ ಮತ್ತು ಶುಭರಾಗದಲ್ಲಿ ಕೂಡ ನಿಜವಾಗಿ ಶಾಂತಿಯಿಲ್ಲ. ಪರಾಶ್ರಯಭಾವದಲ್ಲಿ ಎಲ್ಲಿಯೂ ಶಾಂತಿಯಿಲ್ಲ. ಸ್ವಭಾವದ ಕಡೆ ತಿರುಗಿ ವೀತರಾಗಭಾವವಾಗುವುದೇ ಸಮಸ್ತ ಜೈನ ಶಾಸ್ತ್ರಗಳ ಹೃದಯವಿದೆ. ಆದುದರಿಂದ ಸರ್ವಜ್ಞಕಥಿತ ಪರಮಾಗಮದ ತಾತ್ಪರ್ಯವಂತೂ ಒಂದು ವೀತರಾಗ ಭಾವವೇ ಇದೆ.

ವ್ಯವಹಾರ-ನಿಶ್ಚಯನಯದ ಅವಿರೋಧತೆಯಿಂದ ಯಾವಾಗ ಯಥಾರ್ಥರೂಪದಿಂದ ತಿಳಿದುಕೊಳ್ಳುವಲ್ಲಿ ಬರುತ್ತದೆ ಆಗಲೇ ವೀತರಾಗ ಭಾವವು ಪ್ರಕಟವಾಗುತ್ತದೆ. ಮಧ್ಯದಲ್ಲಿ ದುರ್ಬಲತೆಯಿಂದ ರಾಗವಿದ್ದರೂಕೂಡ ಅದರಿಂದ ಧರ್ಮವಿಲ್ಲ ಮತ್ತು ಆಂಶಿಕ ರಾಗವಿರುವುದರಿಂದ ವೀತರಾಗ ದೃಷ್ಟಿ ಮತ್ತು ಆಂಶಿಕ ವೀತರಾಗ ಸ್ಥಿರತೆಯ ರೂಪದ ಧರ್ಮವಾಗುವುದಿಲ್ಲ.

ಜಗತ್ತು ಶರೀರಾದಿಗಳ ಕ್ರಿಯೆಗಳಲ್ಲಿ ವ್ಯವಹಾರವನ್ನು ಮನ್ನಿಸುತ್ತಾರೆ. ಅವರು ಆತ್ಮ ಮತ್ತು ಜಡ ಇವೆರಡು ದ್ರವ್ಯಗಳ ಭಿನ್ನತೆಯನ್ನು ಕೂಡ ತಿಳಿದುಕೊಂಡಿಲ್ಲ. ಶುಭರಾಗದಿಂದ ಧರ್ಮವಾಗುವುದಿಲ್ಲ. ನಿತ್ಯಾನಂದ ದ್ರವ್ಯಸ್ವಭಾವದ ಆಶ್ರಯದಿಂದಲೇ ಧರ್ಮವಾಗುತ್ತದೆ. ವಸ್ತ್ರವಿಟ್ಟುಕೊಂಡು ಮುನಿತನವನ್ನು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ. ಮುನಿದಶೆಯಲ್ಲಿ ಪರವಸ್ತುವು ಬಾಧಿಸುವುದಿಲ್ಲ, ಆದರೆ ಒಳಗೆ ವೀತರಾಗತೆಯ ಉಗ್ರ ಆಲಂಬನವು ವೃದ್ಧಿಸಿದರೆ ರಾಗವು ಎಷ್ಟು ಕರಗಿಹೋಗುತ್ತದೆಂದರೆ ವಸ್ತ್ರಾದಿಗಳನ್ನಿಟ್ಟುಕೊಳ್ಳುವ ರಾಗವು ಎಂದೂ ಇರುವ ಸಾಧ್ಯತೆಯಿಲ್ಲ.

**ಪ್ರಶ್ನೆ :-** ಶುಭರಾಗದಿಂದ ಧರ್ಮವಿಲ್ಲದಿದ್ದರೆ ಜ್ಞಾನಿಗಳು ರಾಗವನ್ನೇಕೆ ಮಾಡುತ್ತಾರೆ ?

**ಉತ್ತರ :-** ಜ್ಞಾನಿಗಳು ರಾಗವನ್ನು ಮಾಡುವುದಿಲ್ಲ. ಅವರಂತೂ ಅದರ ಜ್ಞಾತಾರೇ ಇದ್ದಾರೆ. ಕೆಳಗಿನ ಭೂಮಿಕೆಯಲ್ಲಿ ದುರ್ಬಲತೆಯ ಕಾರಣ ರಾಗವಾಗಿಬಿಡುತ್ತದೆ, ಆದರೆ ಅದರಿಂದ ಧರ್ಮವಿಲ್ಲ. ರಾಗದಿಂದ ಧರ್ಮ ಮನ್ನಿಸಿದರೆ, ನಿಮಿತ್ತದ ಕಾರಣದಿಂದ ರಾಗವಾಗುತ್ತದೆಂದು ಮನ್ನಿಸಿದರೆ ಅವನು ಮಿಥ್ಯಾದೃಷ್ಟಿಯಿದ್ದಾನೆ.

ಜ್ಞಾನಿಯಾಗಿ, ಮುನಿಯಾಗಿ ಅನಂತರ ಬೇಕಾದ ವೇಷ, ಕ್ರಿಯೆ ಅಥವಾ ಸಂಯೋಗದಲ್ಲಿರುವುದು, ಕುದೇವಾದಿಕರನ್ನು ಮನ್ನಿಸುವುದು, ಸುದೇವಾದಿಕರ ವಿನಯ ಮಾಡದಿರುವುದು ಹೀಗೆಂದೂ ಇರುವುದಿಲ್ಲ. ವ್ಯವಹಾರದಲ್ಲಿ ವೀತರಾಗಮಾರ್ಗದಿಂದ ವಿಪರೀತ ದೇವ-ಶಾಸ್ತ್ರ-ಗುರುಗಳನ್ನು ಮನ್ನಿಸುತ್ತಿರುವುದು, ನವತತ್ತ್ವ, ಆರು ದ್ರವ್ಯಗಳ ಜ್ಞಾನವಿಲ್ಲದಿದ್ದರೆ ಅದು ನಿಂದ್ಯವಿದೆ. ಅವನಿಗೆ ನಿಶ್ಚಯ-ವ್ಯವಹಾರದಲ್ಲಿ ಸಮತೋಲನವಿಲ್ಲ. 'ಸತ್ತಾಸ್ವರೂಪ'ದಲ್ಲಿ ಹೇಳುವುದೇನೆಂದರೆ -

ಸರ್ವಜ್ಞರ ಮಾರ್ಗದಲ್ಲಿ ಬಂದು ಸತ್ ದೇವ-ಶಾಸ್ತ್ರ-ಗುರು, ಜಿನಪ್ರತಿಮೆಯ ಪೂಜೆ, ಭಕ್ತಿ ಮೊದಲಾದುವಲ್ಲಿ ಪ್ರೀತಿಯು ಬರದಿದ್ದರೆ ಅವನು ವ್ಯಭಿಚಾರಯಾದ ಸ್ತ್ರೀಯ ಹಾಗೆ ಇದ್ದಾನೆ. ನಿಶ್ಚಯ ಸ್ವಭಾವದ ಅರಿವಿನೊಡನೆ ಮಧ್ಯದಲ್ಲಿ ಯಾವ ಭೂಮಿಕೆಯಲ್ಲಿ ಎಂಥ ವ್ಯವಹಾರವಿರುವುದು ಅದನ್ನು ತಿಳಿದುಕೊಳ್ಳಬೇಕಾಗುವುದು. ನಮಗೆ ನಿಶ್ಚಯ ಸ್ವಭಾವದ ಅರಿವಿದೆಯೆಂದು ಹೇಳಬಹುದು, ಆದರೆ ವೀತರಾಗ ಸಂತ-ಮುನಿಗಳನ್ನು ನೋಡಿ ಅವರ ಕುರಿತು ಬಹುಮಾನ-ಭಕ್ತಿ-ವಿನಯ ವಿಕಲ್ಪವು ಬರದಿದ್ದರೆ ಅವನಿಗೆ ನಿಶ್ಚಯ-ವ್ಯವಹಾರದ ಅರಿವೇ ಇಲ್ಲ. ನಿನಗೆ ನಿನ್ನ

ಮನೆಯಲ್ಲಿರುವ ಪತ್ನಿ-ಪುತ್ರರ ಚಿಂತೆಯ ಭಾವವು ಬರುತ್ತದೆ ಮತ್ತು ವೀತರಾಗ ಸಂತ ಮುನಿರಾಜರನ್ನು ನೋಡಿ ನಿನಗೆ ಭಕ್ತಿಯ ಉಲ್ಲಾಸವು ಬರುವುದಿಲ್ಲವೆಂದರೆ ನಿನಗೆ ವ್ಯವಹಾರ ಅಥವಾ ನಿಶ್ಚಯಗಳಲ್ಲಿ ಯಾವೊಂದರದೂ ಅರಿವಿಲ್ಲ.

ಸ್ವಭಾವದ ಅರಿವು ಸಹಿತವಾಗಿರುವ ಭೂಮಿಕೆಯಲ್ಲಿ ಮಧ್ಯದೊಳಗೆ ದೇವ-ಗುರುಗಳ ಕುರಿತು ಪ್ರೀತಿ-ಭಕ್ತಿ ಮೊದಲಾದ ಶುಭರಾಗವು ಬರುತ್ತದೆ. ರಾಗವು ಬರುವುದರಿಂದ ನಿಶ್ಚಯ ಶ್ರದ್ಧೆ-ಜ್ಞಾನದ್ದೇನು ನಾಶವಾಗಿಹೋಗುವುದಿಲ್ಲ. ರಾಗವು ಬರುತ್ತದೆ ಅದು ಸ್ವಯಂ ಧರ್ಮವಿಲ್ಲ. ಒಂದು ವೀತರಾಗ ಭಾವವೇ ಧರ್ಮವಿದೆ ಮತ್ತು ಮಧ್ಯದಲ್ಲಿ ಭೂಮಿಕೆಯ ಅನುಸಾರ ಶುಭರಾಗರೂಪದ ವ್ಯವಹಾರವೂ ಕೂಡ ಇರುತ್ತದೆ. ನಿಶ್ಚಯ ಮತ್ತು ವ್ಯವಹಾರಗಳನ್ನು ಹೇಗಿವೆ ಹಾಗೆ ತಿಳಿದುಕೊಂಡರೆ ಮೋಕ್ಷಮಾರ್ಗದ ಸಿದ್ಧಿಯಾಗುತ್ತದೆ. ನಿಶ್ಚಯ-ವ್ಯವಹಾರದ ಅರಿವಿಲ್ಲದೆ ಐಚ್ಛಿಕ ಸಿದ್ಧಿಯಾಗುವುದಿಲ್ಲ.

ಮೋಕ್ಷಮಾರ್ಗದಲ್ಲಿ ನಿಶ್ಚಯ ಮತ್ತು ವ್ಯವಹಾರದ ಅವಿರುದ್ಧತೆಯನ್ನು ತಿಳಿಸಿಕೊಡಲಾಗಿದೆ. ಇಲ್ಲಿ ಪ್ರಮಾಣ ಜ್ಞಾನ ಮಾಡಿಸುವುದರ ಮಾತು ಇದೆ. ಯಾವ ಜೀವನು ಅನಾದಿಕಾಲದಿಂದ ಅಜ್ಞಾನಿಯಾಗಿ ಉಳಿದನು, ಅವನಿಗೆ ಜ್ಞಾಯಕ ಮೂರ್ತಿಯಾದ ಅಭೇದ ಆತ್ಮನ ಅರಿವಿಲ್ಲ ಮತ್ತು ಕೇವಲ ಭೇದದಿಂದ ಹಾಗೂ ರಾಗದಿಂದಲೇ ಲಾಭವಿದೆಯೆಂದು ಮನ್ನಿಸಿದ್ದಾನೆ. ಇಂಥ ಜೀವನು ಸಮ್ಯಕ್ ಶ್ರದ್ಧೆ, ಜ್ಞಾನ-ಚಾರಿತ್ರದ ಅಂಗೀಕಾರ ಮಾಡುತ್ತಾನೆ ಆಗ ಅವನಿಗೆ ಮಧ್ಯದಲ್ಲಿ ಭೇದರೂಪದ ವ್ಯವಹಾರವು ಕೂಡ ಇರುತ್ತದೆ. ಪೂರ್ಣ ಅಭೇದ ಭಾವವು ಪ್ರಕಟವಾಗಿಹೋದರೆ ವ್ಯವಹಾರವು ಉಳಿಯುವುದಿಲ್ಲ, ಆದರೆ ಇನ್ನೂ ಯಾವನಿಗೆ ಪೂರ್ಣ ವೀತರಾಗ ಅಭೇದ ಭಾವವು ಪ್ರಕಟವಾಗಿಲ್ಲ ಅಂಥ ಜೀವನಿಗೆ ಮಧ್ಯದಲ್ಲಿ ವಿಕಲ್ಪರೂಪದ ವ್ಯವಹಾರವು ಕೂಡ ಇರುತ್ತದೆ. ಶುದ್ಧ ಚೈತನ್ಯ ಸ್ವಭಾವದ ಶ್ರದ್ಧೆ-ಜ್ಞಾನ ಮಾಡಿಕೊಂಡು ಅದರಲ್ಲಿ ಏಕಾಗ್ರತೆಯು ಪ್ರಕಟವಾಗುವುದು ನಿಶ್ಚಯವಿದೆ. ಆರನೆಯ ಗುಣಸ್ಥಾನದವರೆಗೆ ಶುಭರಾಗವಿರುತ್ತದೆ ಅಷ್ಟು ವ್ಯವಹಾರದ ಅವಲಂಬನವಿದೆ. ದೃಷ್ಟಿಯಲ್ಲಿಯಂತೂ ನಿಶ್ಚಯದ ಮುಖ್ಯತೆಯೇ ಇರುತ್ತದೆ. ಅಂಥ ದೃಷ್ಟಿಯು ನಾಲ್ಕನೆಯ ಗುಣಸ್ಥಾನದಿಂದಲೇ ಪ್ರಕಟವಾಗಿರುತ್ತದೆ. ದ್ರವ್ಯದ ಆಶ್ರಯದಿಂದ ಪ್ರಕಟವಾಗುವಂಥ ಪೂರ್ಣ ವೀತರಾಗ ಪರ್ಯಾಯವು ಸಾಧ್ಯವಿದೆ ಮತ್ತು ಮಧ್ಯದಲ್ಲಿ ಭೇದದ ವಿಕಲ್ಪವು ಉಳಿಯುತ್ತದೆ. ಅದನ್ನು ಉಪಚಾರದಿಂದ ಸಾಧನವೆಂದು ಹೇಳಿದೆ, ನಿಜವಾಗಿಯಂತೂ ದ್ರವ್ಯದ ಅವಲಂಬನದಿಂದ ಯಾವ ಆಂಶಿಕ ಶುದ್ಧತೆಯು ಪ್ರಕಟವಾಗುತ್ತದೆ ಅದೇ ಸಾಧನವಿದೆ. ವ್ಯವಹಾರದ ಅವಲಂಬನದಿಂದ ಲಾಭವಾಗುತ್ತದೆಯೆಂದು ಮನ್ನಿಸುವಂಥ ಜೀವದ ಮಾತು ಇಲ್ಲಿ ಇಲ್ಲ. ಅವನಂತೂ ಮಿಥ್ಯಾದೃಷ್ಟಿಯಿದ್ದಾನೆ. ಇಲ್ಲಿಯಂತೂ ಯಾವನಿಗೆ ಮೋಕ್ಷಮಾರ್ಗವು ಪ್ರಕಟವಾಗಿದೆ ಅಂಥ ಜೀವದ ಮಾತು ಇದೆ. ಆರನೆಯ ಗುಣಸ್ಥಾನದಲ್ಲಿ ಶುಭ ವಿಕಲ್ಪವು ಉತ್ಪನ್ನವಾಗುತ್ತದೆ. ಅವನನ್ನು ಇಲ್ಲಿ ವ್ಯವಹಾರ ಅವಲಂಬಿಯೆಂದು ಹೇಳಿದೆ. ಆದರೆ ಆ ಸಮಯದಲ್ಲಿ ಅಭೇದ ಸ್ವಭಾವದ ಅವಲಂಬನವು ಕೂಡ ಜತೆಯಲ್ಲಿಯೇ ವರ್ತಿಸುತ್ತದೆ. ಇಲ್ಲಿ ವ್ಯವಹಾರವನ್ನು ಸಾಧನವೆಂದು ಹೇಳಿದೆ. ಅದರ ಅರ್ಥವು ವ್ಯವಹಾರದಿಂದ ನಿಶ್ಚಯವು ಪ್ರಕಟವಾಗುತ್ತದೆಯೆಂದಲ್ಲ, ಆದರೆ ಇಲ್ಲಿ ನಿಶ್ಚಯ-ವ್ಯವಹಾರ ಇವೆರಡರ ಜ್ಞಾನ ಮಾಡಿಸುವುದಿದೆ. ಸಾಧಕನಿಗೆ ಆರನೆಯ ಗುಣಸ್ಥಾನದಲ್ಲಿ ದ್ರವ್ಯದ ಅವಲಂಬನದಿಂದ ಎಷ್ಟು ವೀತರಾಗಭಾವವಾಗಿದೆ ಅಷ್ಟು ನಿಶ್ಚಯವಿದೆ ಮತ್ತು ಅಲ್ಲಿ ಇನ್ನೂ ಶುಭರಾಗವಿರುವುದು ವ್ಯವಹಾರವಿದೆ. ಆ ರಾಗದ ಸಮಯದಲ್ಲಿ ಜತೆಯಲ್ಲಿಯೇ ನಿಶ್ಚಯ ಶ್ರದ್ಧೆ-ಜ್ಞಾನ ಹಾಗೂ ಆಂಶಿಕ ಚಾರಿತ್ರವು ಕೂಡ ವರ್ತಿಸುತ್ತದೆ. ಆದುದರಿಂದ ರಾಗದಲ್ಲಿ ಅದರ ಉಪಚಾರ ಮಾಡಿ ಅದನ್ನು ಸಾಧನವೆಂದು ಹೇಳಿದೆ. ಆದರೆ ನಿಜವಾಗಿ ರಾಗವಾಗುತ್ತದೆ ಅದೇನು ಶಾಸ್ತ್ರದ ತಾತ್ಪರ್ಯವಲ್ಲ.

ಸಮಸ್ತ ಶಾಸ್ತ್ರಗಳ ಸಾರವಂತೂ ಒಂದು ವೀತರಾಗಭಾವವಿದೆ. ಚಿದಾನಂದಮಯ ದ್ರವ್ಯದ ಅವಲಂಬನ ತೆಗೆದುಕೊಂಡು ನಿಶ್ಚಯ ಶ್ರದ್ಧೆ, ಸ್ವಸಂವೇದನ ಜ್ಞಾನ ಮತ್ತು ಸ್ವರೂಪದಲ್ಲಿ ಲೀನತೆಯು ಪ್ರಕಟವಾಗುವುದೇ ಶಾಸ್ತ್ರಗಳ

ತಾತ್ಪರ್ಯವಿದೆ, ಆದರೆ ಎಲ್ಲಿಯವರೆಗೆ ಪೂರ್ಣ ವೀತರಾಗತೆಯಾಗುವುದಿಲ್ಲ ಅಲ್ಲಿಯವರೆಗೆ ಸಾಧಕನಿಗೆ ರಾಗವು ಕೂಡ ಇರುತ್ತದೆ. ಧರ್ಮಾತ್ಮನ ದೃಷ್ಟಿಯಲ್ಲಂತೂ ಒಂದು ವೀತರಾಗತೆಯೇ ಇರುತ್ತದೆ. ''ನಾನು ಶುದ್ಧ ಚೈತನ್ಯವಸ್ತುವಿದ್ದೇನೆ ರಾಗದ ಅಂಶವು ಕೂಡ ನನ್ನದಿಲ್ಲ''ವೆಂದು ಶುದ್ಧಸ್ವಭಾವದ ಮುಖ್ಯತೆಯೇ ಧರ್ಮಾತ್ಮನ ದೃಷ್ಟಿಯಲ್ಲಿ ವರ್ತಿಸುತ್ತದೆ. ಆದರೆ ಇನ್ನೂ ಅದರಲ್ಲಿ ಪೂರ್ಣ ಲೀನತೆಯಾಗುವುದಿಲ್ಲ. ಅಲ್ಲಿ ಸಾಧಕನಿಗೆ ರಾಗವು ಕೂಡ ಬರುತ್ತದೆ.

ನಿಶ್ಚಯ ಸ್ವಭಾವದ ಅರಿವಿನೊಡನೆ ನಾಲ್ಕನೆಯ ಗುಣಸ್ಥಾನದಲ್ಲಿ ದೇವ-ಶಾಸ್ತ್ರ-ಗುರುಗಳ ಭಕ್ತಿ, ಪೂಜೆ ಮೊದಲಾದವುಗಳ ಭಾವವು ಬರುತ್ತದೆ. ಐದನೆಯ ಗುಣಸ್ಥಾನದಲ್ಲಿ ಹನ್ನೆರಡು ವ್ರತ, ಹಾಗೂ ಆರನೆಯ ಗುಣಸ್ಥಾನದಲ್ಲಿ ಪಂಚಮಹಾವ್ರತ, ಇಪ್ಪತ್ತೆಂಟು ಮೂಲಗುಣ ಮೊದಲಾದವುಗಳ ಶುಭರಾಗವು ಬರುತ್ತದೆ. ದೃಷ್ಟಿಯಲ್ಲಂತೂ ಆ ರಾಗದ ಅವಲಂಬನವು ಇಲ್ಲವೇ ಇಲ್ಲ. ಸಮ್ಯಗ್ದೃಷ್ಟಿಯ ದೃಷ್ಟಿಯಲ್ಲಂತೂ ಒಂದು ಸಮಯವು ಕೂಡ ನಿಶ್ಚಯ ಸ್ವಭಾವದ ಮುಖ್ಯತೆಯು ಬಿಟ್ಟು ಹೋಗುವುದಿಲ್ಲ. ಆದರೆ ವೀತರಾಗಭಾವವು ಪ್ರಕಟವಾಗಿಲ್ಲ ಅಲ್ಲಿ ಶುಭರಾಗವು ಬರುತ್ತದೆ. ಅದನ್ನು ವ್ಯವಹಾರದ ಅವಲಂಬನವೆಂದು ಹೇಳಿದೆ. ಶಾಸ್ತ್ರದ ತಾತ್ಪರ್ಯವು ವೀತರಾಗಭಾವವಿದೆ ಮತ್ತು ಆ ವೀತರಾಗಭಾವವು ಅಖಂಡದ್ರವ್ಯದ ಆಶ್ರಯದಿಂದಲೇ ಆಗುತ್ತದೆಯೆಂಬ ಜ್ಞಾನವು ಧರ್ಮಾತ್ಮನಿಗೆ ಆಗಿದೆ ಮತ್ತು ಅವನಿಗೆ ಪರ್ಯಾಯ ಬುದ್ಧಿಯು ಬಿಟ್ಟುಹೋಗಿದೆ. ವ್ಯವಹಾರದ ಅವಲಂಬನದಿಂದ ಲಾಭವಾಗುತ್ತದೆಯೆಂಬ ಮನ್ನಣೆಯು ಬಿಟ್ಟುಹೋಗಿದೆ. ಅವನ ದೃಷ್ಟಿಯು ಅಖಂಡ ದ್ರವ್ಯದ ಮೇಲೆ ಇದೆ. ಹೀಗೆ ದೃಷ್ಟಿಯ ಮುಖ್ಯತೆಯನ್ನಿಟ್ಟುಕೊಂಡೇ ಈ ಎಲ್ಲ ಮಾತನ್ನು ತಿಳಿದುಕೊಳ್ಳುವುದಿದೆ.

ಆ ಸ್ವಭಾವದೃಷ್ಟಿಯ ಮುಖ್ಯತೆಯು ಬಿಟ್ಟುಹೋಗಿ, ರಾಗದ-ಪರ್ಯಾಯದ ಅಥವಾ ವ್ಯವಹಾರದ ರುಚಿಯ ಮುಖ್ಯತೆಯಾಗಿ ಹೋದರೆ ಅಂಥ ಜೀವನು ಮಿಥ್ಯಾದೃಷ್ಟಿಯಿದ್ದಾನೆ. ಇಂಥ ಶುಭರಾಗವನ್ನು ವ್ಯವಹಾರವೆಂದು ಕೂಡ ಹೇಳುವುದಿಲ್ಲ. ಯಾವನಿಗೆ ನಿಶ್ಚಯಸ್ವಭಾವದ ದೃಷ್ಟಿಯಿದೆ ಅವನಿಗೆ ವ್ಯವಹಾರವು ಇರುತ್ತದೆ. ನಿಶ್ಚಯವಿಲ್ಲದೆ ರಾಗದಲ್ಲಿ ವ್ಯವಹಾರದ ಆರೋಪವು ಕೂಡ ಯಾವ ರೀತಿಯಿಂದ ಬರುವುದು ?

ಸಮ್ಯಗ್ದೃಷ್ಟಿಗೆ ರಾಗರಹಿತ ಆತ್ಮನ ಜ್ಞಾನವಿದ್ದರೂ ರಾಗವು ಏಕಾಗುತ್ತದೆಯೆಂದರೆ ಆ ಚಾರಿತ್ರ ಗುಣದ ಪರ್ಯಾಯದಲ್ಲಿ ಅಂಥ ಪರಿಣಮನದ ಯೋಗ್ಯತೆಯಿರುತ್ತದೆ. ಕರ್ಮದ ಉದಯದಿಂದ ರಾಗವಾಗುತ್ತದೆಯೆಂಬ ಮಾತೇ ಸರಿಯಿಲ್ಲ, ಆದರೆ ಯಾವ ರಾಗವು ತನ್ನ ದುರ್ಬಲತೆಯಿಂದ ಆಗಿದೆ, ಆ ರಾಗದ ಮುಖ್ಯತೆಯು ಕೂಡ ಧರ್ಮಾತ್ಮನ ದೃಷ್ಟಿಯಲ್ಲಿ ಇಲ್ಲ. ಧರ್ಮಾತ್ಮನ ದೃಷ್ಟಿಯ ವಿಷಯವು ಒಂದು ಅಖಂಡ ಶುದ್ಧ ಚಿದಾನಂದ ಸ್ವಭಾವವೇ ಇದೆ. ಆ ದೃಷ್ಟಿಯಲ್ಲಿ ರಾಗದ ಮುಖ್ಯತೆಯಿರುವುದಿಲ್ಲ, ಆದರೆ ಪ್ರಮಾಣ ಜ್ಞಾನವು ಸ್ವಭಾವ ಮತ್ತು ರಾಗ ಎರಡನ್ನು ತಿಳಿಯುತ್ತದೆ. ಯಾವನಿಗೆ ಅಭ್ಯಂತರ ಸ್ವಭಾವದ ದೃಷ್ಟಿಯಾಗಿದೆ, ಆದರೆ ಇನ್ನೂ ಪರ್ಯಾಯದಲ್ಲಿ ಪೂರ್ಣ ವೀತರಾಗ ಭಾವವು ಪ್ರಕಟವಾಗಿಲ್ಲ ಅವನಿಗೆ ರಾಗವಾಗುತ್ತದೆ. ಆ ರಾಗವನ್ನು ಇಲ್ಲಿ ವ್ಯವಹಾರ ಸಾಧನವೆಂದು ಹೇಳಿದೆ, ಅದನ್ನು ಆರೋಪದಿಂದ ಹೇಳಿದೆ. ರಾಗವನ್ನು ವ್ಯವಹಾರ ಸಾಧನವೆಂದು ಹೇಳಿರುವುದರಿಂದ ಅದರ ಆಶ್ರಯದಿಂದ ಒಂದಿಷ್ಟು ಲಾಭವಾಗುವುದೆಂದು ತಿಳಿದುಕೊಳ್ಳಬಾರದು. ಯಾವನಿಗೆ ಶ್ರದ್ಧೆಯಲ್ಲಿ ವ್ಯವಹಾರದ ಅವಲಂಬನವಿದೆ ಎಂದರೆ ವ್ಯವಹಾರದ ಆಶ್ರಯದಿಂದ ಲಾಭವಾಗುತ್ತದೆಯೆಂದು ಯಾವನು ಮನ್ನಿಸಿಕೊಂಡಿದ್ದಾನೆ ಅವನು ವ್ಯವಹಾರಾವಲಂಬಿಯಿಲ್ಲ, ಅವನಂತೂ ಮಿಥ್ಯಾತ್ವದ ಅವಲಂಬಿಯಿದ್ದಾನೆ. ಇಲ್ಲಿ ಯಾವನ ದೃಷ್ಟಿಯಲ್ಲಿಯಂತೂ ನಿಶ್ಚಯ ಚಿದಾನಂದ ಸ್ವಭಾವದ್ದೇ ಅವಲಂಬನವು ವರ್ತಿಸುತ್ತದೆ ಮತ್ತು ಚಾರಿತ್ರದಶೆಯಲ್ಲಿ ಇನ್ನೂ ರಾಗದ ಅಂಶವು ಕೂಡ ವರ್ತಿಸುತ್ತಿದೆ ಅಂಥ ಜೀವನನ್ನು ರಾಗದ ಸಮಯದಲ್ಲಿ ವ್ಯವಹಾರಾವಲಂಬಿಯೆಂದು ಹೇಳಿದೆ.

ಚಿದಾನಂದ ಸ್ವಭಾವದ ಆಶ್ರಯದಿಂದ ಆರನೆಯ ಗುಣಸ್ಥಾನದ ವೀತರಾಗದಶೆಯು ಪ್ರಕಟವಾಗಿರುವಲ್ಲಿ ವಸ್ತ್ರಾದಿಗಳನ್ನು ಅಂಗೀಕಾರ ಮಾಡುವಂಥ ವೃತ್ತಿಯು ಬಂದುಬಿಡುವಂಥ ರಾಗವು ಇರುವುದೇ ಇಲ್ಲ ! ಅಲ್ಲಿ ಪಂಚಮಹಾವ್ರತ ಹಾಗೂ ಇಪ್ಪತ್ತೆಂಟು ಮೂಲಗುಣಗಳ ಶುಭವಿಕಲ್ಪವು ಇರುತ್ತದೆ. ಇದೇ ಪ್ರಕಾರ ಆ ಭೂಮಿಕೆಯ ವ್ಯವಹಾರವಿದೆ, ಆದರೆ ಈ ಪಂಚಮಹಾವ್ರತ ಮೊದಲಾದ ಶುಭರಾಗದ ಅವಲಂಬನದಿಂದ ಆರನೆಯ ಗುಣಸ್ಥಾನವು ಉಳಿಯುತ್ತದೆಯೆಂದು ಯಾವನಾದರೂ ಮನ್ನಿಸಿದರೆ ಆ ಜೀವನು ಮಿಥ್ಯಾದೃಷ್ಟಿಯಿದ್ದಾನೆ. ಆರನೆಯ ಗುಣಸ್ಥಾನದ ವೀತರಾಗಭಾವವಂತೂ ದ್ರವ್ಯದ ಅವಲಂಬನದಿಂದಲೇ ಉಳಿಯುತ್ತದೆ. ಅನಾದಿ ಕಾಲದಿಂದ ಪೂರ್ಣ ಅಭೇದ ವೀತರಾಗಭಾವವೆಂದು ಆಗಿಯೇ ಇಲ್ಲ. ಎಂದರೆ ಆರನೆಯ ಗುಣಸ್ಥಾನದಲ್ಲಿ ಇನ್ನೂ ಶುಭರಾಗವು ಬರುತ್ತದೆ.

ಶುದ್ಧ ಚಿದಾನಂದ ಸ್ವಭಾವದ ಆಶ್ರಯದಿಂದ ವೀತರಾಗ ಶ್ರದ್ಧೆ-ಜ್ಞಾನ-ಚಾರಿತ್ರದ ಪರ್ಯಾಯವು ಪ್ರಕಟವಾಗುವುದು ಸಾಧ್ಯವಿದೆ ಮತ್ತು ಅಲ್ಲಿ ವ್ಯವಹಾರ ಶ್ರದ್ಧೆ-ಜ್ಞಾನ-ಚಾರಿತ್ರದ ಶುಭಭಾವವು ಬಂದರೆ ಅದನ್ನು ಸಾಧನವೆಂದು ಹೇಳಿದೆ. ಈ ಸಾಧ್ಯ ಮತ್ತು ಸಾಧನಗಳು ಭಿನ್ನ-ಭಿನ್ನವಿವೆ, ಆದರೆ ಆ ವ್ಯವಹಾರಸಾಧನದ ಆರೋಪವು ಕೂಡ ಯಾವಾಗಬರುತ್ತದೆಯೆಂದರೆ-ಚಿದಾನಂದ ಜ್ಞಾಯಕ ಮೂರ್ತಿಯಾದ ದ್ರವ್ಯದ ಆಶ್ರಯದಿಂದ ಯಾವನಿಗೆ ನಿಶ್ಚಯ ಸಾಧ್ಯದಶೆಯು ಪ್ರಕಟವಾಗಿರುವುದು ಅವನ ಶುಭರಾಗದಲ್ಲಿ ವ್ಯವಹಾರ ಸಾಧನದ ಆರೋಪವು ಬರುತ್ತದೆ ಆದರೆ ಎಲ್ಲಿ ಸಾಧ್ಯವೇ ಪ್ರಕಟವಾಗಿರುವುದಿಲ್ಲ ಅಲ್ಲಿ ಆರೋಪದಿಂದ ಕೂಡ ಯಾವುದನ್ನು ಸಾಧನವೆಂದು ಹೇಳುವುದು? ವ್ಯವಹಾರದ ಅವಲಂಬನ ಮಾಡುತ್ತ ಮಾಡುತ್ತ ನಿಶ್ಚಯವು ಪ್ರಕಟವಾಗುವುದೆಂಬ ಮಾತು ಇದರಲ್ಲಿ ಉಳಿಯುವುದೇ ಇಲ್ಲ. ವ್ಯವಹಾರದ ಅವಲಂಬನದಿಂದ ಲಾಭವಾಗುತ್ತದೆಯೆಂದು ಯಾವನು ಮನ್ನಿಸಿದ್ದಾನೆ ಅಂಥ ಜೀವದ ಶುಭರಾಗವನ್ನು ವ್ಯವಹಾರ ಸಾಧನದಲ್ಲಿ ಕೂಡ ಗಣಿಸಲಾಗುವುದಿಲ್ಲ. ನಿಶ್ಚಯದ ಅರಿವಿರುವಂಥ ಜೀವನಿಗೆ ವ್ಯವಹಾರವಿರುತ್ತದೆ. ಯಾವನ ಶ್ರದ್ಧೆಯೊಳಗಿಂದ ವ್ಯವಹಾರದ ಅವಲಂಬನವು ಬಿಟ್ಟುಹೋಗಿದೆ ಅಂಥ ಜೀವನಿಗೆ ದೇವ-ಶಾಸ್ತ್ರ-ಗುರುಗಳ ಕುರಿತು ಭಕ್ತಿ ಮೊದಲಾದವುಗಳ ಭಾವವು ಬರುತ್ತದೆ ಅದನ್ನು ವ್ಯವಹಾರಸಾಧನವೆಂದು ಹೇಳಲಾಗುತ್ತದೆ. ಶ್ರದ್ಧೆಯೊಳಗಿಂದ ಕೂಡ ಯಾವನಿಗೆ ರಾಗದ ಅವಲಂಬನವು ಬಿಟ್ಟುಹೋಗಿಲ್ಲ ಮತ್ತು ಸ್ವಭಾವದ ದೃಷ್ಟಿಯು ಪ್ರಕಟವಾಗಿಲ್ಲ ಅಂಥ ಜೀವನಂತೂ ಮಿಥ್ಯಾದೃಷ್ಟಿಯಿದ್ದಾನೆ.

ಸಾಧ್ಯವು ವೀತರಾಗಭಾವವಿದೆ. ಮಧ್ಯದಲ್ಲಿ ರಾಗವು ಬರುತ್ತದೆ ನಿಜ, ಆದರೆ ಅದು ಸಾಧನವಿಲ್ಲವೆಂದು ತಿಳಿದುಕೊಂಡರೆ ಉಪಚಾರದಿಂದ ಶುಭವನ್ನು ಸಾಧನವೆಂದು ಹೇಳಲಾಗುತ್ತದೆ ಈ ರೀತಿಯಿಂದ ನಿಶ್ಚಯ-ವ್ಯವಹಾರದ ಯಥಾರ್ಥ ಜ್ಞಾನವನ್ನು ಅಂಗೀಕಾರ ಮಾಡಿದ್ದಾನೆ ಅವನು ಸುಖದಿಂದ ಪಾರಗಾಮಿಯಾಗುತ್ತಾನೆ. ಎಂದರೆ ವಿಕಲ್ಪವನ್ನು ಮುರಿದುಹಾಕಿ ಪೂರ್ಣನಾಗುತ್ತಾನೆ. ದೇವ-ಶಾಸ್ತ್ರ-ಗುರು, ನವತತ್ತ್ವಾದಿಗಳ ವಿಕಲ್ಪವು ಸಾಧಕನಿಗೆ ರಾಗದ ಭೂಮಿಕೆಯಲ್ಲಿ ಬರುವುದಿಲ್ಲವೆಂಬುದು ಸಂಭವಿಸುವುದಿಲ್ಲ, ಆದರೆ ಈ ಶುಭವಿಕಲ್ಪ ಬರುವುದನ್ನು ಧರ್ಮವೆಂದು ಮನ್ನಿಸುವವನಿಗೆ ಎರಡೂ ನಯಗಳ ಅವಿರೋಧತೆಯಿಲ್ಲ.

ನಯವು ಸಮ್ಯಕ್ ಶ್ರುತಜ್ಞಾನದ ಭೇದವಿದೆ. ಅವು ಮಿಥ್ಯಾದೃಷ್ಟಿಗೆ ಇರುವುದಿಲ್ಲ, ಅದರಂತೆ ಕೇವಲಜ್ಞಾನಿಗೆ ಕೂಡ ಇರುವುದಿಲ್ಲ. ಆದರೆ ಸಾಧಕನಿಗೆ ನಯಗಳಿರುತ್ತವೆ.

ನಿಮಿತ್ತ, ರಾಗ, ನಿರ್ಮಲ ಪರ್ಯಾಯ ಮತ್ತು ಪರ್ಯಾಯವಂಥ ದ್ರವ್ಯದ ಜ್ಞಾನ ಮಾಡಲಾಗುತ್ತದೆ, ಆದರೆ ದ್ರವ್ಯದ ಆಶ್ರಯದಿಂದ ಎಷ್ಟು ಅಂಶದಲ್ಲಿ ವೀತರಾಗತೆಯಾಗುತ್ತದೆ ಅಷ್ಟು ಅಂಶದಲ್ಲಿ ಧರ್ಮವಿದೆ. ವ್ಯವಹಾರ ರತ್ನತ್ರಯದ ಶುಭರಾಗವನ್ನು ಉಪಚಾರದಿಂದ ಸಾಧನವೆಂದು ಹೇಳಲಾಗುತ್ತದೆ.

ದೇವಾದಿಕರಿಂದ ಶುಭರಾಗವಾಗುವುದಿಲ್ಲ, ನಿಮಿತ್ತದಿಂದ ರಾಗವಾಗುವುದಿಲ್ಲ. ಒಂದುವೇಳೆ ನಿಮಿತ್ತದಿಂದ ರಾಗವಾಗುತ್ತಿದ್ದರೆ ಎಲ್ಲರಿಗೂ ಸಮಾನ ರಾಗವಾಗಬೇಕಿತ್ತು. ಶುಭರಾಗ ಮಾಡಿದರೆ ಎದುರಿಗಿರುವ ವಸ್ತುವನ್ನು ನಿಮಿತ್ತವೆಂದು ಹೇಳಲಾಗುತ್ತದೆ. ಶರೀರದ ಕ್ರಿಯೆಯು ವ್ಯವಹಾರವಲ್ಲ. ಪೂಜೆ, ಭಕ್ತಿಯ ಸಮಯದಲ್ಲಿ ದೇಹದ ಕ್ರಿಯೆಯನ್ನು ಆತ್ಮನು ಮಾಡುವ ಸಾಧ್ಯತೆಯಿಲ್ಲ. ಶರೀರದ ಯೋಗ್ಯತೆಯಿಂದ ಶರೀರದ ಕ್ರಿಯೆಯಾಗಿದೆ. ಅಲ್ಲಿ ಜೀವದ ಇಚ್ಛೆಯನ್ನು ನಿಮಿತ್ತವೆಂದು ಹೇಳಲಾಗುತ್ತದೆ.

ಅನಂತ ಆತ್ಮರುಗಳು ಪೃಥಕ್ ಪೃಥಕ್ ಇದ್ದಾರೆ. ಪ್ರತಿಯೊಂದು ಪರಮಾಣುವು ಸ್ವತಂತ್ರ ಪೃಥಕ್ ಪೃಥಕ್ ಇದೆ. ಪ್ರತಿಯೊಬ್ಬ ಆತ್ಮನಲ್ಲಿ ಅನಂತ ಗುಣಗಳು, ಒಂದೊಂದು ಗುಣದ ತ್ರಿಕಾಲವರ್ತಿ ಅನಂತ ಪರ್ಯಾಯಗಳು. ಜ್ಞಾನಗುಣದ ಒಂದು ಪರ್ಯಾಯದ ಪೂರ್ಣತೆಯಾದರೆ ಮೂರುಕಾಲ, ಮೂರು ಲೋಕಗಳನ್ನು ತಿಳಿದುಕೊಳ್ಳುವಂಥ ಸರ್ವಜ್ಞ ಶಕ್ತಿಯು ಆತ್ಮನಲ್ಲಿ ತ್ರಿಕಾಲವಿರುತ್ತದೆ. ಇಂಥ ಸ್ವತಂತ್ರತೆಯ ಜೈನಧರ್ಮರೂಪದ ವಸ್ತುವು ಸ್ವಭಾವದಲ್ಲಿಯೇ ಇದೆ.

ಅಲ್ಪಜ್ಞತೆ, ವಿಕಾರ, ನಿಮಿತ್ತದ ಅಭಿರುಚಿಯು ಹೊರಟುಹೋಗುವುದು ಮತ್ತು ಸರ್ವಜ್ಞ ಸ್ವಭಾವದ ಪೂರ್ಣ ದ್ರವ್ಯದ ದೃಷ್ಟಿಯು ಸ್ವಸನ್ಮುಖತೆಯಿಂದ ಆಗುವುದು ಸಾಧ್ಯವಿದೆ ಮತ್ತು ಸ್ವಾಶ್ರಯವಾದ ವೀತರಾಗ ಭಾವವು ಸಾಧನವಿದೆ. ವ್ಯವಹಾರ ರತ್ನತ್ರಯರೂಪದ ಶುಭರಾಗವು ಉಪಚಾರ ಸಾಧನವಿದೆ. ಧರ್ಮಾತ್ಮನಿಗೆ ರಾಗ ಬರುತ್ತದೆ, ಆದರೆ ರಾಗವು ಧರ್ಮವಲ್ಲ. ಸ್ವಭಾವದ ಆಶ್ರಯದಿಂದ ರಾಗವಾಗುವುದೇ ಇಲ್ಲ. ಶುದ್ಧಸ್ವಭಾವದ ಮಾತು ಹೇಳಲಾಗುತ್ತಿದೆ. ಆದರೂ ಮಧ್ಯದಲ್ಲಿ ಭೂಮಿಕೆಗೆ ಅನುಸಾರವಾಗಿ ರಾಗವು ಬರುತ್ತದೆ. ಅದನ್ನು ಒಂದುವೇಳೆ ತಿಳಿದುಕೊಳ್ಳದಿದ್ದರೆ ಅವನಿಗೆ ಕೂಡ ನಿಶ್ಚಯ-ವ್ಯವಹಾರದ ಅರಿವಿಲ್ಲ ಮತ್ತು ರಾಗವನ್ನು ಧರ್ಮವೆಂದು ಮನ್ನಿಸುವುವವನಿಗೆ ಕೂಡ ನಿಶ್ಚಯ-ವ್ಯವಹಾರದ ಅರಿವಿಲ್ಲ. ಶುದ್ಧ ಆತ್ಮಸ್ವಭಾವದ ದೃಷ್ಟಿಯಾಗಿರುವಲ್ಲಿಯಂತೂ ಧರ್ಮಾತ್ಮನಿಗೆ ರಾಗದ ಅವಲಂಬನವು ಬಿಟ್ಟೇಹೋಗಿದೆ, ಆದರೆ ಇನ್ನೂ ವೀತರಾಗ ಸ್ಥಿರತೆಯು ಪ್ರಕಟವಾಗಿಲ್ಲ ಅಲ್ಲಿ ಸರ್ವಜ್ಞದೇವರ ಕುರಿತು ಬಹುಮಾನ ಮೊದಲಾದವುಗಳ ಭಾವವು ಬರುತ್ತದೆ ಅದರ ಹೆಸರು ವ್ಯವಹಾರವಿದೆ. ಸರ್ವಜ್ಞರನ್ನು ಸ್ವೀಕಾರ ಮಾಡಿದರೆ ಅದರಲ್ಲಿ ಅಲ್ಪಜ್ಞತೆ, ವಿಕಾರ ಮತ್ತು ನಿಮಿತ್ತದ ಆಶ್ರಯದ ಬುದ್ಧಿಯು ಬಿಟ್ಟುಹೋಗಿ, ಜ್ಞಾನಸ್ವಭಾವದಲ್ಲಿ ಬುದ್ಧಿಯು ಪ್ರವೇಶಿಸುತ್ತದೆ. ಜಗತ್ತಿನಲ್ಲಿ ಭಿನ್ನ ಭಿನ್ನ ಅನಂತ ಆತ್ಮರುಗಳು, ಒಬ್ಬೊಬ್ಬ ಆತ್ಮನಲ್ಲಿ ಅನಂತ ಗುಣಗಳು ಮತ್ತು ಅವುಗಳಲ್ಲಿ ಸಮಯ ಸಮಯಕ್ಕೆ ಪರಿಣಮನ. ಇಂಥ ಮಾತುಗಳು ಒಂದು ಸರ್ವಜ್ಞ ಶಾಸನದ ಹೊರತಾಗಿ ಬೇರೆಲ್ಲಿದೆ ? ಯಾವ ಜೀವನು ಇಂಥ ಸರ್ವಜ್ಞರನ್ನು ಮನ್ನಿಸುವುದಿಲ್ಲ. ಅಂಥವರದಂತೂ ಇಲ್ಲಿ ಮಾತೇ ಇಲ್ಲ, ಮತ್ತು ನಿಜವಾದ ದೇವ-ಗುರುಗಳ ಕಡೆಗಿರುವ ಯಾವ ಶುಭರಾಗವಿದೆ ಅದರಿಂದಲೇ ಯಾವನು ಧರ್ಮವಾಗುತ್ತದೆಯೆಂದು ಮನ್ನಿಸುತ್ತಾನೆ ಅವನದು ಕೂಡ ಈ ಮಾತಿಲ್ಲ. ಇಲ್ಲಿಯಂತೂ ಯಾವನಿಗೆ ನಿಶ್ಚಯ ಸ್ವಭಾವದ ಆಶ್ರಯದಿಂದ ಶುದ್ಧ ಶ್ರದ್ಧೆ-ಜ್ಞಾನ-ಚಾರಿತ್ರರೂಪದ ಸಾಧ್ಯಭಾವವು ಪ್ರಕಟವಾಗಿದೆ ಅವನಿಗೆ ಮಧ್ಯದಲ್ಲಿ ಶುಭರಾಗವು ಬರುತ್ತದೆ ಅದನ್ನು ವ್ಯವಹಾರದಿಂದ ಸಾಧನವೆಂದು ಹೇಳಿದೆ. ತೀರ್ಥ ಎಂದರೆ ಸಾಧನಭಾವ ಮತ್ತು ತೀರ್ಥಫಲ ಎಂದರೆ ಶುದ್ಧ-ಸಿದ್ಧದಶೆ. ಇದು ಯಾವನಿಗೆ ಅಖಂಡ ದ್ರವ್ಯಸ್ವಭಾವದ ಅವಲಂಬನವಿದೆ ಅವನಿಗೆ ನಿಶ್ಚಯ ಸಾಧನವಂತೂ ಅಖಂಡದ್ರವ್ಯದ ಅವಲಂಬನ ಮಾಡುವುದೇ ಇದೆ, ಆದರೆ ಅಲ್ಲಿ ರಾಗವನ್ನು ಉಪಚಾರದಿಂದ ಸಾಧನವೆಂದು ಹೇಳಲಾಗುತ್ತದೆ.

ನಾನು ಅಖಂಡ ಚಿದಾನಂದ ಮೂರ್ತಿಯಿದ್ದೇನೆ, ರಾಗದ ಅಂಶವು ಕೂಡ ನನ್ನದಿಲ್ಲವೆಂಬ ಅರಿವಂತೂ ಮೊದಲು ಆಗಿಹೋಗಿದೆ. ಅನಂತರ ಮಧ್ಯದಲ್ಲಿ ಓಹೋ ಈಗ ಜಗತ್ತಿನಲ್ಲಿ ಸರ್ವಜ್ಞ ವೀತರಾಗದೇವರು ಶ್ರದ್ಧೆಮಾಡಲು

ಯೋಗ್ಯರಿದ್ದಾರೆ, ಅನ್ಯ ಕುದೇವಾದಿಗಳು ಶ್ರದ್ಧೆ ಮಾಡಲು ಯೋಗ್ಯರಿಲ್ಲವೆಂಬ ವಿಕಲ್ಪವು ಉತ್ಪನ್ನವಾಗುತ್ತದೆ. ಹೀಗೆ ನಿಶ್ಚಯಶ್ರದ್ಧೆ ಸಹಿತ ವ್ಯವಹಾರ ಶ್ರದ್ಧೆಯ ವಿಕಲ್ಪವು ಧರ್ಮಾತ್ಮನಿಗೆ ಬರುತ್ತದೆ. ಆ ವಿಕಲ್ಪವು ಸ್ವಯಂ ಧರ್ಮವಿಲ್ಲದಿದ್ದರೂ ಧರ್ಮಾತ್ಮನಿಗೆ ಕೆಳಗಿನ ಭೂಮಿಕೆಯಲ್ಲಿ ಇಂಥ ವ್ಯವಹಾರವು ಬಂದಲ್ಲದೆ ಇರುವುದಿಲ್ಲ. ಈ ಭೂಮಿಕೆಯ ಜ್ಞಾನ ಮಾಡಿಸಿಕೊಡುವ ಸಲುವಾಗಿ ಅದನ್ನು ವ್ಯವಹಾರ ಸಾಧನವೆಂದು ಹೇಳಿದೆ, ಆದರೆ ಆ ಸಮಯದಲ್ಲಿ ಆಂತರ್ಯದೊಳಗೆ ಒಂದು ದ್ರವ್ಯಸ್ವಭಾವದ ದೃಷ್ಟಿಯು ವರ್ತಿಸುತ್ತದೆ. ಆ ಸ್ವಭಾವದ ದೃಷ್ಟಿಯಂತೂ ಒಂದು ಸಮಯವು ಕೂಡ ಬಿಟ್ಟು ಹೋಗುವುದಿಲ್ಲ.

ಮುನಿದಶೆಯೊಳಗೆ ಅಂತರ ಸ್ವರೂಪದಲ್ಲಿನ ಲೀನತೆಯಿಂದ ಎಂಥ ಸಹಜ ಪುರುಷಾರ್ಥವಿರುತ್ತದೆಯೆಂದರೆ ಅಲ್ಲಿ ತಮ್ಮ ಸಲುವಾಗಿ ಮಾಡಿದ ಆಹಾರದ ವೃತ್ತಿಯೇ ಉತ್ಪನ್ನವಾಗುವುದಿಲ್ಲ ಮತ್ತು ಅಲ್ಲಿ ಶರೀರದ ಸ್ಥಿತಿಯು ಉಳಿಯುವುದಿದ್ದರೆ ಅಂಥ ನಿರ್ದೋಷ ಆಹಾರದ ಯೋಗವು ಸ್ವಾಭಾವಿಕವಾಗಿ ಸಂಭವಿಸಿಬಿಡುತ್ತದೆ. ಆಂತರ್ಯದ ಪವಿತ್ರತೆಯ ಜತೆಯಲ್ಲಿ ಇಂಥ ಪುಣ್ಯದ ಯೋಗವು ಸಹಜ ಸಂಭವಿಸುತ್ತದೆ. ಒಂದುವೇಳೆ ಅಂಥ ಯೋಗವು ಸಂಭವಿಸದಿದ್ದರೆ ಆಹಾರದ ವೃತ್ತಿಯೇ ಮುರಿದುಹೋಗುತ್ತದೆ. ಇಂಥ ಸಹಜ ಪುರುಷಾರ್ಥವು ಮುನಿದಶೆಯಲ್ಲಿ ಅಂತರ ಸ್ವಭಾವದ ಅವಲಂಬನದಿಂದ ವರ್ತಿಸುತ್ತಿರುತ್ತದೆ. ಆಹಾರದ ವ್ಯವಸ್ಥೆಯು ಹೇಗಾಗುವುದೆಂಬ ವಿಕಲ್ಪವು ಮುನಿರಾಜರಿಗೆ ಇರುವುದಿಲ್ಲ. ನಿರ್ದೋಷ ಆಹಾರದ ಯೋಗವು ತಾನಾಗಿಯೇ ಸಂಭವಿಸುವಂಥ ಸಹಜ ಪುಣ್ಯವು ಮುನಿದಶೆಯಲ್ಲಿ ಇರುತ್ತದೆ. ನಿರ್ದೋಷ ಆಹಾರದ ಸಹಜ ಯೋಗವು ಸಂಭವಿಸದಿರುವುದು ಮತ್ತು ಮುಖ್ಯ ತಮ್ಮ ಸಲುವಾಗಿ ಸಿದ್ಧಪಡಿಸಿದ ಆಹಾರ ಸ್ವೀಕರಿಸುವ ಪರಿಣಾಮವಾಗುತ್ತಿದ್ದರೂ ಕೂಡ ನಮಗೆ ಮುನಿದಶೆಯಿದೆಯೆಂದು ಮನ್ನಿಸುತ್ತಿದ್ದರೆ ಅವನಿಗೆ ಮುನಿದಶೆಯ ಅರಿವಿರುವುದಿಲ್ಲ. ಆಂತರ್ಯದಲ್ಲಿ ಸ್ವಭಾವದ ಕ್ರೀಡೆಯಲ್ಲಿ ಜೀಕುತ್ತಿರುವಂಥ ವೀತರಾಗ ಮುನಿದಶೆಯು ಪ್ರಕಟವಾಗಿರುವುದು ಮತ್ತು ದೇಹದ ಸ್ಥಿತಿಯು ಉಳಿಯುವುದಿದ್ದರೆ ಅಲ್ಲಿ ನಿರ್ದೋಷ ಆಹಾರದ ಯೋಗವು ತಾನಾಗಿಯೇ ಕೂಡಿ ಬರುವಂಥ ಪುಣ್ಯವು ಕೂಡ ಇರುತ್ತದೆ. ಯಾವನಿಗೆ ಆಂತರ್ಯದ ಪವಿತ್ರತೆ ಮತ್ತು ಪುಣ್ಯದ ವಿವೇಕವಿಲ್ಲ ಹಾಗೂ ಬೇಕಾದಂಥ ಆಹಾರ ತೆಗೆದುಕೊಳ್ಳುವ ಭಾವವಾಗುತ್ತಿದ್ದರೂ ಕೂಡ ತನಗೆ ಮುನಿದಶೆಯಿದೆಯೆಂದು ಮನ್ನಿಸುವವನಿಗೆ ಯಥಾರ್ಥ ಮುನಿದಶೆಯಿರುವುದಿಲ್ಲ.

ನಿಶ್ಚಯ-ವ್ಯವಹಾರದ ಅವಿರೋಧತೆಯು ಯಾವ ರೀತಿಯಿಂದಿದೆಯೆಂಬುದನ್ನು ತಿಳಿದುಕೊಂಡರೆ ವೀತರಾಗತೆಯು ಪ್ರಕಟವಾಗುತ್ತದೆ. ಯಾವ ಜೀವನಿಗೆ ಸ್ವಭಾವದ ಅರಿವಂತೂ ಆಗಿದೆ-ಆತ್ಮನು ಅಖಂಡ ಜ್ಞಾಯಕ ಸ್ವರೂಪನಿದ್ದಾನೆಂಬ ನಿಶ್ಚಯ ದೃಷ್ಟಿಯಂತೂ ಪ್ರಕಟವಾಗಿದೆ. ಅವನಿಗೆ ಎಂಥ ವ್ಯವಹಾರವಿರುತ್ತದೆಯೆಂಬುದನ್ನು ಇಲ್ಲಿ ತಿಳಿಸಿಕೊಟ್ಟಿದ್ದಾರೆ. ನಾನು ಜ್ಞಾಯಕಬಿಂಬನಿದ್ದೇನೆ, ಪರದಲ್ಲಿ ಒಂದು ರಜಕಣವನ್ನು ಅದಲು ಬದಲು ಮಾಡುವಂಥವನು ನಾನಿಲ್ಲ ಮತ್ತು ರಾಗವನ್ನು ಕೂಡ ನಾನು ನಿಜವಾಗಿ ಅದಲು ಬದಲು ಮಾಡುವಂಥವನಿಲ್ಲ. ಪರ್ಯಾಯವನ್ನು ಕೂಡ ಬದಲು ಮಾಡುವ ಬುದ್ಧಿಯು ನನಗಿಲ್ಲ. ಪರ್ಯಾಯವು ತ್ರಿಕಾಲ ಜ್ಞಾಯಕ ದ್ರವ್ಯದ ಸನ್ಮುಖವಾಗಿ ಪರಿಣಮಿಸುತ್ತದೆ. ಇಂಥ ದಶೆಯಲ್ಲಿ ಇನ್ನೂ ಪೂರ್ಣ ವೀತರಾಗತೆಯಾಗದಿರುವಲ್ಲಿ ಸರ್ವಜ್ಞದೇವರ ಕುರಿತು ಭಕ್ತಿ-ಬಹುಮಾನದ ವಿಕಲ್ಪವು ಬರುತ್ತದೆ. ಅದನ್ನು ವ್ಯವಹಾರವೆಂದು ಹೇಳಿದೆ. ನಿಶ್ಚಯ ಸ್ವಭಾವದ ಶ್ರದ್ಧೆ ಅದರಂತೆ ವ್ಯವಹಾರದಲ್ಲಿ ಸರ್ವಜ್ಞದೇವರ ಶ್ರದ್ಧೆ-ಇವೆರಡೂ ಜತೆ ಜತೆಯಲ್ಲಿವೆ.

ದೃಷ್ಟಿಯಲ್ಲಿಯಂತೂ ನಿರ್ವಿಕಲ್ಪ ಸ್ವಭಾವದ ಅವಲಂಬನವೇ ಇದೆ, ಆದರೆ ಇನ್ನೂ ಆ ಸ್ವಭಾವದಲ್ಲಿ ನಿರ್ವಿಕಲ್ಪರೂಪದಿಂದ ಲೀನತೆಯಾಗಿಲ್ಲ. ಆಗ ಎಂಥ ವಿಚಾರಗಳು ಬರುತ್ತವೆಯೆಂದರೆ-ಜೀವತತ್ತ್ವನಾದ ನಾನು

ಪರಿಪೂರ್ಣ ಶುದ್ಧ ಚೈತನ್ಯಮಯನಿದ್ದೇನೆ. ಶರೀರ ಮೊದಲಾದ ಅಜೀವ ತತ್ತ್ವಗಳು ನನ್ನಿಂದ ಭಿನ್ನವಿವೆ. ಸರ್ವಜ್ಞದೇವರು ಶ್ರದ್ಧೆ ಮಾಡಲು ಯೋಗ್ಯರಿದ್ದಾರೆ. ಅನ್ಯ ಕುದೇವಾದಿಗಳು ಶ್ರದ್ಧೆಮಾಡಲು ಯೋಗ್ಯರಿಲ್ಲ. ದಯೆ, ಪೂಜೆ ಮೊದಲಾದವುಗಳ ಶುಭಭಾವವು ಪುಣ್ಯತತ್ತ್ವವಿದೆಯೆಂದು ಶ್ರದ್ಧೆಮಾಡುವಂಥದ್ದಿದೆ. ಆದರೆ ಪೂಜೆ ಮೊದಲಾದವುಗಳ ಶುಭರಾಗವು ಧರ್ಮದ ಕಾರಣವಿಲ್ಲವೆಂದು ಶ್ರದ್ಧೆ ಈ ಪ್ರಕಾರ ಭಿನ್ನ-ಭಿನ್ನತತ್ತ್ವಗಳ ವಿಚಾರವು ಬರುತ್ತದೆ. ಅದನ್ನು ಇಲ್ಲಿ ವ್ಯವಹಾರವೆಂದು ಹೇಳಿದೆ.

ಯಾವ ನವತತ್ತ್ವಗಳಿವೆ ಅವುಗಳ ಸ್ವರೂಪವು ಭಿನ್ನ-ಭಿನ್ನವಿದೆ. ಶರೀರ ಮೊದಲಾದವು ಅಜೀವವಿದ್ದು ಅವುಗಳ ಕಾರಣದಿಂದ ಪುಣ್ಯ-ಪಾಪಗಳಾಗುವುದಿಲ್ಲ. ಒಂದುವೇಳೆ ಅಜೀವದಿಂದ ಪುಣ್ಯ-ಪಾಪಗಳಾಗುತ್ತಿದ್ದರೆ ಆ ನವತತ್ತ್ವಗಳು ಭಿನ್ನ-ಭಿನ್ನವಾಗಿ ಉಳಿಯುವುದಿಲ್ಲ. ಇದೇ ಪ್ರಕಾರದಿಂದ ದಯೆ, ಪೂಜೆ, ವ್ರತ ಮೊದಲಾದವುಗಳ ಪುಣ್ಯಭಾವವು ಆಸ್ರವವಿದೆ, ಅದರಿಂದ ಸಂವರವಾಗುವುದಿಲ್ಲ. ಒಂದುವೇಳೆ ಪುಣ್ಯದಿಂದ ಸಂವರವಾಗುತ್ತದೆಯೆಂದು ಮನ್ನಿಸಿದರೆ ನವತತ್ತ್ವಗಳು ಭಿನ್ನ-ಭಿನ್ನವಾಗಿ ಉಳಿಯುವುದಿಲ್ಲ. ಆದುದರಿಂದ ಜೀವವನ್ನು ಜೀವ, ಅಜೀವವನ್ನು ಅಜೀವ, ಪುಣ್ಯವನ್ನು ಪುಣ್ಯ, ಸಂವರವನ್ನು ಸಂವರ ಇತ್ಯಾದಿಯಾಗಿ ನವತತ್ತ್ವಗಳನ್ನು ಹೇಗೆ ಇವೆ ಹಾಗೆ ತಿಳಿದುಕೊಳ್ಳಬೇಕಾಗುವುದು. ಧರ್ಮಾತ್ಮಜೀವನು ಜ್ಞಾಯಕ ಸ್ವಭಾವದ ನಿರ್ವಿಕಲ್ಪ ಪ್ರತೀತಿಪೂರ್ವಕ ನವತತ್ತ್ವಗಳು, ಆರು ದ್ರವ್ಯಗಳು, ಪಂಚಾಸ್ತಿಕಾಯಗಳು ಇತ್ಯಾದಿಯಾಗಿ ಹೇಗೆ ಇವೆ ಹಾಗೆ ಶ್ರದ್ಧೆ ಮಾಡುತ್ತಾನೆ. ಅದು ವ್ಯವಹಾರವಿದೆ. ಆರನೆಯ ಗುಣಸ್ಥಾನದಲ್ಲಿ ಭಾವಲಿಂಗೀ ಸಂತರಿಗೆ ಕೂಡ ನವತತ್ತ್ವಗಳ ಶ್ರದ್ಧೆಯ ವಿಕಲ್ಪವು ಬರುತ್ತದೆ. ಪಂಚಪರಮೇಷ್ಠಿಗಳ ಭಕ್ತಿಯ ವಿಕಲ್ಪವು ಬರುತ್ತದೆ. ಇಂಥ ರಾಗವು ಬರುವುದನ್ನು ಉಪಚಾರದಿಂದ ತೀರ್ಥವೆಂದು ಹೇಳಲಾಗುತ್ತದೆ. ನಿಶ್ಚಯದಿಂದಂತೂ ಸ್ವಭಾವದ ಅವಲಂಬನದಿಂದಲೇ ವೀತರಾಗತೆಯಾಗುತ್ತದೆ ಮತ್ತು ಅದೇ ನಿಜವಾದ ತೀರ್ಥವಿದೆ.

ಆತ್ಮನು ಅಖಂಡ ಜ್ಞಾನಾನಂದ ಸ್ವಭಾವದವನಿದ್ದಾನೆ. ಆ ಸ್ವಭಾವದಲ್ಲಿ ಯಾವನಿಗೆ ಲೀನತೆಯಾಗಿದೆ ಅವನಿಗಂತೂ 'ಇದು ಮಾಡುವಂಥದ್ದಿದೆ ಮತ್ತು ಇದು ಮಾಡುವಂಥದಿಲ್ಲ'ವೆಂಬ ವಿಕಲ್ಪವು ಕೂಡ ಇರುವುದಿಲ್ಲ.ಸಮ್ಯಗ್ದೃಷ್ಟಿಗೆ ರಾಗದ ಸಮಯದಲ್ಲಿ ಅಂಥ ವಿಕಲ್ಪವು ಬರುತ್ತದೆ, ಆದರೆ ಅದು ವಿಕಲ್ಪದ ಭಾವನೆಯೇ ಇಲ್ಲ. ಈ ವಿಕಲ್ಪವನ್ನು ಎರಡನೆಯ ಸಮಯದಲ್ಲಿ ತೆಗೆದುಕೊಂಡು ಹೋಗುವಂಥ ಭಾವನೆಯು ಅವನದಿರುವುದಿಲ್ಲ. ಆರು ದ್ರವ್ಯಗಳಲ್ಲಿ ಯಾವುದೇ ದ್ರವ್ಯವನ್ನು ನ್ಯೂನವೆಂದು ಮನ್ನಿಸಿದರೆ ಅದು ಮಿಥ್ಯಾ ಶ್ರದ್ಧೆಯಿದೆ. ಆರು ದ್ರವ್ಯಗಳಲ್ಲಿ ಕಾಲದ್ರವ್ಯವನ್ನು ಮನ್ನಿಸದಿದ್ದರೆ ಆ ಜೀವನಿಗೆ ವೀತರಾಗರ ವಾಣಿಯ ಮೇಲೆ ಶ್ರದ್ಧೆಯಿಲ್ಲ. ನವತತ್ತ್ವಗಳನ್ನು ಯಥಾರ್ಥರೂಪದಿಂದ ಯಾವನು ಮನ್ನಿಸುವುದಿಲ್ಲ ಆ ವ್ಯಕ್ತಿಯು ಶ್ರದ್ಧೆ ಮಾಡಲು ಯೋಗ್ಯನಿಲ್ಲ. ಯಾವ ಶಾಸ್ತ್ರಗಳಲ್ಲಿ ಆರು ದ್ರವ್ಯ-ಒಂಭತ್ತು ತತ್ತ್ವಗಳ ಯಥಾರ್ಥ ಸ್ವರೂಪವನ್ನು ಹೇಳಿರುವುದಿಲ್ಲ, ಆ ಶಾಸ್ತ್ರಗಳು ಶ್ರದ್ಧೆ ಮಾಡುವಂಥವುಗಳಿಲ್ಲವೆಂಬ ವಿಚಾರವು ಶುಭರಾಗದ ಸಮಯದಲ್ಲಿ ನಾಲ್ಕನೆಯ-ಐದನೆಯ-ಆರನೆಯ ಗುಣಸ್ಥಾನದಲ್ಲಿ ಬರುತ್ತದೆಂದು ವ್ಯವಹಾರವಿದೆ. ಬಾಹ್ಯದ ಕ್ರಿಯೆಗಳಂತೂ ಅವುಗಳ (ತಮ್ಮ ) ಕಾರಣದಿಂದ ಆಗುತ್ತವೆ, ಅವುಗಳ ಕರ್ತೃವು ಆತ್ಮನಿಲ್ಲ. ಆಂತರ್ಯದಲ್ಲಿ ಚಿದಾನಂದ ಸ್ವಭಾವದ ಅರಿವು ಮಾಡಿಕೊಳ್ಳುವುದು ಅನಂತಕಾಲದಲ್ಲಿ ಮಾಡಿರದಂಥ ಅಪೂರ್ವ ಪುರುಷಾರ್ಥವಿದೆ. ಮಿಥ್ಯಾದೃಷ್ಟಿ-ಕುಲಿಂಗೀ ಜೀವರುಗಳು ಶ್ರದ್ಧೆಮಾಡಲು ಯೋಗ್ಯರಿಲ್ಲ. ಮತ್ತು ಸರ್ವಜ್ಞದೇವ ಹಾಗೂ ಭಾವಲಿಂಗಿ ಸಂತರುಗಳು ಶ್ರದ್ಧೆಮಾಡಲು ಯೋಗ್ಯರಿದ್ದಾರೆ. ಇನ್ನು ಶ್ರದ್ಧೆ ಮಾಡುವಂಥ ಪುರುಷನು ಹೇಗಿರುತ್ತಾನೆಂದರೆ ಮೂರು ಲೋಕಗಳು ಬದಲಾಗಿ ಹೋದರೂ ಕೂಡ ಅವನ ಶ್ರದ್ಧೆಯು ಬದಲಾಗುವುದಿಲ್ಲ ! ಪ್ರತಿಯೊಬ್ಬ ಆತ್ಮನು ಸ್ವತಂತ್ರನಿದ್ದಾನೆ, ಪ್ರತಿಯೊಬ್ಬ ಆತ್ಮನಲ್ಲಿ ಅನಂತ ಗುಣಗಳಿವೆ. ಒಂದೊಂದು ಗುಣದ ಅನಂತ ಪರ್ಯಾಯಗಳು ಮತ್ತು ಒಂದೊಂದು ಪರ್ಯಾಯದಲ್ಲಿ ಅನಂತ ಅವಿಭಾಗ ಪ್ರತಿಚ್ಛೇದಗಳಿರುತ್ತವೆ. ಇಂಥ ವಸ್ತುಸ್ವರೂಪವು ಒಂದು ಜೈನ ಶಾಸನವನ್ನು ಹೊರತುಪಡಿಸಿ ಬೇರೆಲ್ಲಿಯೂ

ಇರುವುದಿಲ್ಲ. ಇಂಥ ವಸ್ತುಸ್ವರೂಪವದ ಶ್ರದ್ಧೆಮಾಡುವಂಥ ಜೀವನು ಹೇಗಿರುತ್ತಾನೆಂದರೆ-ಇಡೀ ಜಗತ್ತು ಮನ್ನಿಸದಿದ್ದರೂ ಕೂಡ ಅವನ ಶ್ರದ್ಧೆಯು ಬದಲಾಗುವುದಿಲ್ಲ. ಆ ಯಥಾರ್ಥ ವಸ್ತುಸ್ವರೂಪದ ಶ್ರದ್ಧೆಮಾಡುವುದರ ಹೆಸರೇ ಶ್ರದ್ಧೆಯಿದೆ, ಇದರಿಂದ ವಿರುದ್ಧವಾಗಿ ಮನ್ನಿಸುವುದು ಅಶ್ರದ್ಧೆಯಿದೆ. ಈ ಪ್ರಕಾರ ಶ್ರದ್ಧೆಯ ಸಂಬಂಧವಾಗಿ ವಿಚಾರ ಮಾಡುವುದು ವ್ಯವಹಾರವಿದೆ ಮತ್ತು ಅಭೇದ ಸ್ವಭಾವದ ಶ್ರದ್ಧೆಯು ನಿಶ್ಚಯವಿದೆ. ಈ ಪ್ರಕಾರ ನಿಶ್ಚಯ-ವ್ಯವಹಾರಗಳೆರಡೂ ಜತೆ-ಜತೆಯಲ್ಲಿವೆ. ನಿಶ್ಚಯ ಸಮ್ಯಗ್ದರ್ಶನವಂತೂ ಅಭೇದ-ನಿರ್ವಿಕಲ್ಪ ಪರ್ಯಾಯವಿದೆ ಎಂದರೆ ವೀತರಾಗ ಪರ್ಯಾಯವಿದೆ. ಮತ್ತು ವ್ಯವಹಾರ ಸಮ್ಯಗ್ದರ್ಶನವಂತೂ ಜ್ಞಾನದ ಪರ್ಯಾಯವಿದೆ. ಅದರ ಜತೆಯಲ್ಲಿ ಇರುವ ವಿಕಲ್ಪವು ರಾಗವಿದೆ. ವ್ಯವಹಾರ ಸಮ್ಯಗ್ದರ್ಶನದಲ್ಲಿ ನವತತ್ತ್ವದ ಶ್ರದ್ಧೆಯು ಶ್ರದ್ಧಾಗುಣದ ಪರ್ಯಾಯವಲ್ಲ, ಆದರೆ ಜ್ಞಾನದ ಪರ್ಯಾಯವಿದೆ. ನಾಲ್ಕನೆಯ ಗುಣಸ್ಥಾನದಲ್ಲಿ ಶುದ್ಧಸ್ವಭಾವದ ನಿರ್ವಿಕಲ್ಪ ಶ್ರದ್ಧೆಯಾಗಿರುವುದು ನಿಶ್ಚಯ ಸಮ್ಯಗ್ದರ್ಶನವಿದೆ ಮತ್ತು ಶ್ರದ್ಧೆಮಾಡಲು ಯೋಗ್ಯವಿರುವಂಥ ತತ್ತ್ವದ ವಿಚಾರವು ಅದು ವ್ಯವಹಾರ ಸಮ್ಯಗ್ದರ್ಶನವಿದೆ, ಹೀಗೆ ವ್ಯವಹಾರವು ನಿಶ್ಚಯ ಸಹಿತವಾಗಿರುತ್ತದೆ. ಈ ವ್ಯವಹಾರವನ್ನು ಮನ್ನಿಸದಿದ್ದರೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ವ್ಯವಹಾರವನ್ನೇ ಧರ್ಮವೆಂದು ಮನ್ನಿಸಿಕೊಂಡರೆ ಅವನೂ ಕೂಡ ಮಿಥ್ಯಾದೃಷ್ಟಿಯಿದ್ದಾನೆ. ಧರ್ಮವು ನಿಶ್ಚಯ ಸ್ವಭಾವದ ಆಶ್ರಯದಿಂದ ಆಗುತ್ತದೆ. ವ್ಯವಹಾರದಿಂದ ನಿಶ್ಚಯವು ಪ್ರಕಟವಾಗುತ್ತದೆಯೆಂದು ಮನ್ನಿಸಿದರೆ ಅವನ ಮನ್ನಣೆಯಲ್ಲಿ ನಿಶ್ಚಯ ಮತ್ತು ವ್ಯವಹಾರವು ಬೇರೆ ಬೇರೆಯಾಗಿ ಉಳಿಯುವುದಿಲ್ಲ. ಎಂದರೆ ಏಕಾಂತವಾಗಿ ಹೋಗುತ್ತದೆ. ಮೊದಲು ವಸ್ತುಸ್ವಭಾವದ ಅರಿವಾದ ನಂತರ ಆ ವಸ್ತುವಿನ ಅವಲಂಬನದಿಂದ ಹೇಗೆ ಹೇಗೆ ಶುದ್ಧತೆಯು ವೃದ್ಧಿಸುತ್ತಾ ಹೋಗುತ್ತದೆ ಹಾಗೆ ಹಾಗೆ ಆ ಶುದ್ಧತೆಯ ಅನುಸಾರ ನೆಲೆಗಳಿರುತ್ತವೆ. ಅಲ್ಲಿ ಭೂಮಿಕೆಯ ಅನುಸಾರ ನೆಲೆಗಳ ವಿಕಲ್ಪವು ಬರುವುದು ವ್ಯವಹಾರವಿದೆ.

ಶ್ರದ್ಧೆಯ ಹಾಗೆ ಜ್ಞಾನದ ವ್ಯವಹಾರವನ್ನು ಕೂಡ ಹೇಳಿದ್ದಾರೆ. ಅಂತರ್ಯದಲ್ಲಿ ಜ್ಞಾನವನ್ನು ಸ್ವಸನ್ಮುಖ ಮಾಡಿ ಆತ್ಮನನ್ನಂತೂ ಸ್ವಸಂವೇದನದಿಂದ ತಿಳಿದುಕೊಂಡಿದೆ ಮತ್ತು ರಾಗದ ಸಮಯದಲ್ಲಿ ಧರ್ಮಾತ್ಮನಾದ ಜೀವನು ಹೀಗೆ ವಿಚಾರ ಮಾಡುತ್ತಾನೆ. 'ನಾನು ಜ್ಞಾತಾನಿದ್ದೇನೆ ಮತ್ತು ಮೂರು ಕಾಲ ಮೂರು ಲೋಕಗಳು ನನ್ನ ಜ್ಞಾನದಲ್ಲಿ ತಿಳಿದುಬರಲು ಯೋಗ್ಯವಿವೆ. ಜ್ಞಾನವು ನನ್ನ ಗುಣವಿದೆ. ಜ್ಞಾನದ ಕಾರ್ಯವು ರಾಗವಲ್ಲ, ರಾಗದ ಕಾರ್ಯವು ಜ್ಞಾನವಿಲ್ಲ. ರಾಗವು ಕೂಡ ನಿಜವಾಗಿ ನನ್ನ ಜ್ಞಾನದ ಜ್ಞೇಯವಿದೆ, ತನ್ನ ಶಕ್ತಿಯು ಅಲ್ಪವಿದ್ದರೆ ಇಂತಿಷ್ಟು ಪ್ರಯೋನಭೂತ ತತ್ತ್ವಗಳನ್ನೇ ತಿಳಿಯುವುದು. ನಿಜವಾದ ದೇವ-ಶಾಸ್ತ್ರ-ಗುರುಗಳು ಹೇಗಿರುವರು, ಕುದೇವ-ಕುಶಾಸ್ತ್ರ-ಕುಗುರುಗಳು ಹೇಗಿರುವರೆಂಬುದನ್ನು ತಿಳಿದುಕೊಳ್ಳುವುದು ಯೋಗ್ಯವಿದೆ. ಈ ಪ್ರಕಾರ ಜ್ಞಾತಾ-ಜ್ಞಾನ-ಜ್ಞೇಯದ ಭೇದದಿಂದ ವಿಚಾರ ಮಾಡುವುದು ವ್ಯವಹಾರವಿದೆ.

ಯಾವ ಭಾವದಿಂದ ತೀರ್ಥಂಕರ ನಾಮಕರ್ಮದ ಬಂಧವಾಗುತ್ತದೆ ಆ ಭಾವವು ಬಂಧದ ಕಾರಣವಿರುವುದರಿಂದ ಆಸ್ರವವಿದೆ. ಅದನ್ನು ಮೋಕ್ಷದ ಕಾರಣವೆಂದು ಮನ್ನಿಸುವವನು ಮಿಥ್ಯಾದೃಷ್ಟಿಯಿದ್ದಾನೆ. ಜ್ಞಾನಿಗೆ ಯಾವುದೇ ಶುಭಾಸ್ರವದ ಭಾವನೆಯಿರುವುದಿಲ್ಲ, ಆದರೆ ಅದರ ನಿಷೇಧವು ವರ್ತಿಸುತ್ತದೆ. ತನ್ನ ದುರ್ಬಲತೆಯಿರುವವರೆಗೆ ಶುಭರಾಗವಿರುತ್ತದೆ, ಆದರೆ ಒಂದುವೇಳೆ ಅದರ ಅಭಿರುಚಿ ಮಾಡಿದರೆ ರಾಗರಹಿತ ಸ್ವಭಾವದ ಅನಾದರವಾಗಿ ಹೋಗುತ್ತದೆ. ಎಂದರೆ ಮಿಥ್ಯಾತ್ವವಾಗಿ ಹೋಗುತ್ತದೆ.

ಇದು ಆಚರಿಸಲು ಯೋಗ್ಯವಿದೆಯೆಂದು ಜ್ಞಾನಿಯು ವಿಚಾರ ಮಾಡುತ್ತಾನೆ. ಸಮ್ಯಗ್ದರ್ಶನವಾದ ಮೇಲೆ ನಿಃಶಂಕಿತ ಮೊದಲಾದ ಎಂಟು ಆಚಾರಗಳಿವೆ, ಅವುಗಳ ಶುಭವಿಕಲ್ಪವು ಬರುತ್ತದೆ. ನಾಲ್ಕನೆಯ-ಐದನೆಯ-ಆರನೆಯ

ಗುಣಸ್ಥಾನದಲ್ಲಿ ಭೂಮಿಕೆಯ ಪ್ರಮಾಣದಿಂದ ಶುಭರಾಗದ ವಿಕಲ್ಪವು ವ್ಯವಹಾರವಿದೆ.

ಆರನೆಯ ಗುಣಸ್ಥಾನದಲ್ಲಿ ವಸ್ತ್ರಾದಿಗಳು ಹಾಗೂ ಅಧಃಕರ್ಮ, ಉದ್ದಿಷ್ಟ ಆಹಾರ ತೆಗೆದುಕೊಳ್ಳುವ ವಿಕಲ್ಪವು ಇರುವುದಿಲ್ಲ. ಆದರೆ ನಿರ್ದೋಷ ಆಹಾರದ ವಿಕಲ್ಪವೇ ಇರುತ್ತದೆ. ಹಾಗೂ ದರ್ಶನಾಚಾರ-ಜ್ಞಾನಾಚಾರ-ಚಾರಿತ್ರಾಚಾರ, ವೀರ್ಯಾಚಾರ, ಇಪ್ಪತ್ತೆಂಟು ಮೂಲಗುಣಗಳ ಶುಭ ವಿಕಲ್ಪವು ವ್ಯವಹಾರದ ಆಚರಣವಿದೆಯೆಂದು ಮುನಿರಾಜರು ತಿಳಿಯುತ್ತಾರೆ. ಇವು ಸ್ವಾಭಾವಿಕವಾಗಿ ಬರುತ್ತವೆ. ಕ್ರಮಬದ್ಧ ಅವಸ್ಥೆಯು ಬದಲಾಗುವುದಿಲ್ಲ. ಆದರೆ ಭೂಮಿಕೆಯ ಅನುಸಾರ ರಾಗದ ಮರ್ಯಾದೆಯಿರುತ್ತದೆ.

ನಾಲ್ಕನೆಯ ಗುಣಸ್ಥಾನದಲ್ಲಿ ಮಧು, ಮಧ್ಯ, ಮಾಂಸಗಳನ್ನು ಸ್ವೀಕಾರ ಮಾಡದಿರುವ ಇಚ್ಛೆಯು ಸ್ವಾಭಾವಿಕವಾಗಿರುತ್ತದೆ. ಏಕೆಂದರೆ ತೀವ್ರರಾಗದ ಆಚರಣ ಮಾಡದಿರುವಂಥ ದೃಢತೆಯು ಇಲ್ಲಿ ಇರುತ್ತದೆ. ಮುನಿರಾಜರಿಗೆ ಪಂಚಮಹಾವ್ರತಾದಿಗಳನ್ನು ಆಚರಿಸುವ ವೃತ್ತಿಯಿರುತ್ತದೆ. ಅದು ಆರನೆಯ ಗುಣಸ್ಥಾನದಲ್ಲಿಯೇ ಯೋಗ್ಯವಿದೆ. ಭಾವದಲ್ಲಿ ನಿರ್ಗ್ರಂಥ ಮುನಿದಶೆಯಿರುತ್ತದೆ ಮತ್ತು ಬಾಹ್ಯದಲ್ಲಿ ಬೇಕಾದಂಥ ವಿರುದ್ಧ ಆಚರಣವಿರುತ್ತದೆಯೆಂಬುದು ಸಂಭವಿಸುವುದಿಲ್ಲ. ನಿಮಿತ್ತ-ನೈಮಿತ್ತಿಕ ಸಂಬಂಧವು ಹೇಗಿರುತ್ತದೆಯೆಂದರೆ-ವಸ್ತ್ರದ ಮೂರ್ಛೆ ಮತ್ತು ಆಸಕ್ತಿಯು ಹೊರಟುಹೋಗಿರುವಲ್ಲಿ ವಸ್ತ್ರವು ಇರುವುದೇ ಇಲ್ಲ. ವಸ್ತ್ರಾದಿಗಳ ತ್ಯಾಗದ ಕಾರಣದಿಂದ ಮುನಿ ಇರುವುದಿಲ್ಲ, ಆದರೆ ವೀತರಾಗ ದಶೆಯ ಭೂಮಿಕೆಯಲ್ಲಿ ಅಭೇದ ಚಾರಿತ್ರವಾಗುತ್ತದೆ. ಅದಕ್ಕೆ ಯೋಗ್ಯವಾದ ನಿಮಿತ್ತ ಮತ್ತು ರಾಗವಿರುತ್ತದೆ, ವಿರುದ್ಧವಾಗಿರುವುದಿಲ್ಲ.

ಜನರಿಗೆ ಬಾಹ್ಯ ವಸ್ತುಗಳ ಗ್ರಹಣ-ತ್ಯಾಗದ ಇಚ್ಛೆ ಇರುತ್ತದೆ ಆದರೆ ಯಾವುದೇ ಅಪೇಕ್ಷೆಯಿಂದ ಆತ್ಮನಲ್ಲಿ ಗ್ರಹಣ-ತ್ಯಾಗವು ಇರುವುದೇ ಇಲ್ಲ. ರಾಗದ ಕಡೆಯ ಲಕ್ಷ್ಯದಿಂದ ಕೂಡ ರಾಗವು ಬಿಟ್ಟುಹೋಗುವುದಿಲ್ಲ ಏಕೆಂದರೆ ಯಾವ ಸಮಯದಲ್ಲಿ ರಾಗವು ಉತ್ಪನ್ನವಾಗುವುದು ಆ ಸಮಯದಲ್ಲಿ ಅದನ್ನು ಬಿಟ್ಟುಕೊಡುವ ಸಾಧ್ಯತೆಯಿಲ್ಲ ಮತ್ತು ರಾಗವನ್ನು ಬಿಟ್ಟುಕೊಡುತ್ತೇನೆನ್ನುವುದು ಅದು ಮಿಥ್ಯಾದೃಷ್ಟಿತನವಾಗುತ್ತದೆಂದು ಮನ್ನಿಸುತ್ತಾನೆ.

ರಾಗ ಕಷಾಯವನ್ನು ಬಿಟ್ಟುಕೊಡಿರೆಂದು ಶಾಸ್ತ್ರದಲ್ಲಿ ಕಥನಬರುತ್ತದೆ ಆದರೆ ನವೀನ ರಾಗವು ಬರುತ್ತದೆ ಅದನ್ನು ಹೇಗೆ ಬಿಟ್ಟುಕೊಡುವುದು ? ಅದಂತೂ ಎರಡನೆಯ ಸಮಯದಲ್ಲಿ ವ್ಯಯವಾಗಿ ಹೋಗುತ್ತದೆ, ಮತ್ತು ಯಾವ ಸಮಯದಲ್ಲಿ ರಾಗವಿದೆ ಆ ಸಮಯದಲ್ಲಿ ಅದನ್ನು ಹೇಗೆ ಬಿಟ್ಟು ಕೊಡುವುದು ? ಆಗದಿರುವುದನ್ನು ಹೇಗೆ ಬಿಡುವುದು? ಆದುದರಿಂದ ರಾಗವನ್ನು ಬಿಡುವುದಿರುವುದಿಲ್ಲ ಆದರೆ ಸ್ವಭಾವದ ಲಕ್ಷ್ಯ ಮಾಡಿದಮೇಲೆ ರಾಗವು ಉತ್ಪನ್ನವಾಗುವುದಿಲ್ಲ. ಅದಕ್ಕೆ ರಾಗವನ್ನು ಬಿಟ್ಟುಕೊಟ್ಟತೆಂದು ಹೇಳಲಾಗುತ್ತದೆ. ನಾನು ರಾಗವನ್ನು ಬಿಟ್ಟುಕೊಟ್ಟೆನೆಂದು ನಿಶ್ಚಯದಿಂದ ಮನ್ನಿಸಿದರೆ ರಾಗದ ಗ್ರಹಣ ಮಾಡುವವನಿದ್ದೇನೆಂಬ ಮಿಥ್ಯಾದೃಷ್ಟಿತನವಾಗುತ್ತದೆ. ಜ್ಞಾನಿಗೆ ಪೂರ್ಣ ಸ್ವಭಾವದ ಮುಖ್ಯತೆಯಿರುತ್ತದೆ ಆದಾಗ್ಯೂ ಇದು ಕರ್ತವ್ಯವಿದೆ, ಇದು ಕರ್ತವ್ಯವಿಲ್ಲವೆಂಬ ವಿಕಲ್ಪವು ಅವನಿಗೆ ದುರ್ಬಲತೆಯಿಂದ ಬರುತ್ತದೆ. ಎಲ್ಲಿ ಯಾವ ಅಪೇಕ್ಷೆಯಿಂದ ಕಥನವಿರುತ್ತದೆ ಅಲ್ಲಿ ಅಷ್ಟೇ ತಿಳಿದುಕೊಂಡರೆ ವೀತರಾಗತೆಯಾಗುತ್ತದೆ.

ಜೈನ ದರ್ಶನವು ಹೇಳುವುದೇನೆಂದರೆ ಕೇವಲ ಸ್ವಚ್ಛಂದದಿಂದ ತಿಳಿದುಕೊಳ್ಳಬಹುದೆನ್ನುವಂತಿಲ್ಲ. ಮತ್ತು ಗುರುಮುಖದಿಂದ ದೊರಕಬಹುದೆನ್ನುವಂತೆಯೂ ಇಲ್ಲ. ಆದರೆ ಯಾವನು ಸತ್ಯ ತಿಳಿದುಕೊಳ್ಳುತ್ತಾನೆ ಅವನು ವಿನಯದಿಂದ ಉಪಚಾರದಿಂದ ನನಗೆ ನನ್ನ ಗುರುಗಳು ಅನುಗ್ರಹಪೂರ್ವಕ ಶುದ್ಧಾತ್ಮನ ಉಪದೇಶ ಕೊಟ್ಟರೆಂದು ಹೇಳಲಾಗುತ್ತದೆ. ನನ್ನ ಆಂತರ್ಯದ ವೈಭವವು ಗುರುಗಳಿಂದ, ಗುರುಗಳ ಅನುಗ್ರಹದಿಂದ ಪ್ರಕಟವಾಯಿತೆಂದು ಹೇಳುತ್ತಾನೆ (ಸಮಯಸಾರ ಗಾಥೆ-೫) ಆದರೆ ನನ್ನ ಪಾತ್ರತೆಯಿಂದಲೇ ನಿಜ ವೈಭವವು ಪ್ರಕಟವಾಗಿದೆಯೆಂದು ಅರ್ಥವಿದೆ.

ನನ್ನ ಯೋಗ್ಯತೆಯಿರುವುದು ಮತ್ತು ಗುರುಗಳು ದೊರಕಲಿಲ್ಲವೆಂಬಂತಾಗುವುದಿಲ್ಲ. ದೇಶನಾ ಲಬ್ಧಿಯಲ್ಲಿ ಜ್ಞಾನಿಯ ನಿಮಿತ್ತವೇ ಇರುತ್ತದೆ. ಆದರೆ ನಿಮಿತ್ತದಿಂದ ಮತ್ತು ವಿಕಲ್ಪದಿಂದ ತಿಳಿದುಬರುವುದಿಲ್ಲ.

ನನ್ನ ಆಚರಣವು ನನ್ನಿಂದ ದೂರವಿಲ್ಲ. ಜಡ ದೇಹಾದಿಗಳ ಆಚರಣವನ್ನು ನಾನು ಮಾಡುವ ಸಾಧ್ಯತೆಯಿದೆಯೆಂದು ಜ್ಞಾನಿಯು ಮನ್ನಿಸುವುದೇ ಇಲ್ಲ.

ಶ್ರದ್ಧೆ ಮಾಡುವಂಥವನು, ಜ್ಞಾನ ಮಾಡಿಕೊಳ್ಳುವಂಥವನು ಮತ್ತು ಆಚರಣೆ ಮಾಡುವಂಥವನು ಆತ್ಮನೇ ಇದ್ದಾನೆ. ಮನಸ್ಸು, ವಾಣಿ, ದೇಹ, ವಿಕಲ್ಪ ಅವೇನು ಮೋಕ್ಷಮಾರ್ಗದ ಆಚರಣವಿಲ್ಲವೆಂಬ ವಿಕಲ್ಪವು ಜ್ಞಾನಿಗೆ ಅವಶ್ಯವಾಗಿ ಬರುತ್ತದೆ ಹೀಗೆ ಬಾರದೇ ಹೋದರೆ ಅವನು ನಿಶ್ಚಯಾಭಾಸಿಯಿದ್ದಾನೆ. ವೀತರಾಗ ಭಾವವು ಅದು ಚಾರಿತ್ರವಿದೆ ಮತ್ತು ಎಷ್ಟು ರಾಗಭಾವವಿದೆ ಅಷ್ಟು ಅಚಾರಿತ್ರವೆಂದು ಜ್ಞಾನಿ ತಿಳಿಯುತ್ತಾನೆ. ಬಟ್ಟೆಯಿಂದ ಚಾರಿತ್ರವಾಗುವುದಿಲ್ಲ ಮತ್ತು ಬಟ್ಟೆಯ ತ್ಯಾಗದಿಂದ ಚಾರಿತ್ರವಿಲ್ಲ ಮತ್ತು ಬಟ್ಟೆಯ ಸಂಬಂಧವಿರುವುದು ಹಾಗೂ ಮುನಿತನವಿರುವುದು ಹೀಗೆಂದೂ ಸಂಭವಿಸುವುದಿಲ್ಲ. ಬಟ್ಟೆ ಮತ್ತು ಶರೀರದ ಕ್ರಿಯೆ ಅದು ವ್ಯವಹಾರವಿಲ್ಲ ಆದರೆ ವೀತರಾಗತೆ ಸಹಿತ ಇಪ್ಪತ್ತೆಂಟು ಮೂಲಗುಣಗಳ ಶುಭ ವಿಕಲ್ಪ ವರ್ತಿಸುತ್ತದೆ ಅದು ವ್ಯವಹಾರವಿದೆ.

ಭಗವಾನ ಮಹಾವೀರರಿಗೆ ಕೂಡ ಆರನೆಯ ಗುಣಸ್ಥಾನದಲ್ಲಿ ಇಪ್ಪತ್ತೆಂಟು ಮೂಲಗುಣ ಮೊದಲಾದವುಗಳ ಶುಭ ವಿಕಲ್ಪ ಬರುತ್ತಿತ್ತು ಅದು ನಿಶ್ಚಯದಿಂದ ಅಚಾರಿತ್ರವಿದೆ ಆದರೆ ಅದು ಭೂಮಿಕೆಯ ಅನುಸಾರ ಇದ್ದೇ ಇರುತ್ತದೆ.

ಯಾವುದರದು ಯಾವ ಭೂಮಿಕೆಯಿರುವುದು ಅದಕ್ಕೆ ವಿರುದ್ಧವಾಗಿ ರಾಗವಿದ್ದರೆ ದೋಷವಿದೆಯೆಂಬುದು ಜೈನ ಧರ್ಮದ ಪರಂಪರೆಯಿದೆ. ಆದರೆ ಕಡಿಮೆ ಗುಣಸ್ಥಾನವಿರುವುದು ಮತ್ತು ವ್ರತಾದಿಗಳ ಶುಭರಾಗವಿಲ್ಲದಿದ್ದರೆ ಅದು ಭೂಮಿಕೆಯಿಂದ ವಿರುದ್ಧವಿಲ್ಲ. ಮುನಿದಶೆಯಲ್ಲಿ ಮುನಿಯೋಗ್ಯ ವಿಕಲ್ಪ-ರಾಗವಿರುತ್ತದೆ ಆದರೆ ಅದು ಧರ್ಮವಿಲ್ಲವೆಂದು ತಿಳಿದುಕೊಳ್ಳುವುದು ಅದು ನಿಶ್ಚಯ-ವ್ಯವಹಾರದ ಸಂಧಿಯಿದೆ. ಅದು ಪ್ರಮಾಣ ಜ್ಞಾನದ ವಿಷಯವಿದೆ. ಆತ್ಮನು ಜ್ಞಾಯಕಸ್ವರೂಪ ತ್ರಿಕಾಲ ವಸ್ತುವಿದ್ದಾನೆ ಅವನು ಭೂತಾರ್ಥ ವಸ್ತುವಿದ್ದಾನೆ.

ಭೂತಾರ್ಥ ಸ್ವಭಾವದ ದೃಷ್ಟಿಯ ಅಪೇಕ್ಷೆಯಿಂದ ಕ್ಷಣಿಕ ರಾಗ ಮೊದಲಾದ ಭಾವಗಳನ್ನು ಅಭೂತಾರ್ಥವೆಂದು ಹೇಳಿದೆ. ಒಂದು ಸಮಯದ ಪರ್ಯಾಯದ ಭೇದವು ಕೂಡ ಅಭೂತಾರ್ಥವಿದೆ. ವರ್ತಮಾನ ಪರ್ಯಾಯವು ತ್ರಿಕಾಲೀ ಸ್ವಭಾವದಲ್ಲಿ ಅಭೇದವಾದರೆ ವ್ಯವಹಾರನಯದ ವಿಷಯವು ಬೇರೆ ಉಳಿಯುವುದಿಲ್ಲ. ಆದ್ದರಿಂದ ಭೂತಾರ್ಥ ಸ್ವಭಾವದ ದೃಷ್ಟಿಯಿಂದ ವ್ಯವಹಾರವನ್ನು ಅಭೂತಾರ್ಥವೆಂದು ಗಣಿಸಿದೆ. ಸಮಯಸಾರದ ಹದಿಮೂರನೆಯ ಗಾಥೆಯಲ್ಲಿ ಹೇಳುತ್ತಾರೆ -

**ಭೂದತ್ಥೇಣಾಭಿಗದಾ ಜೀವಾಜೀವಾ ಯ ಪುಣ್ಣಪಾವಂ ಚ ।**
**ಆಸವಸಂವರಣಿಜ್ಜರಬಂಧೋ ಮೋಕ್ಖೋ ಯ ಸಮ್ಮತ್ತಂ ॥೧೩॥**

**ಅರ್ಥ :-** ಭೂತಾರ್ಥನಯದಿಂದ ತಿಳಿದುಕೊಂಡಂಥ ಜೀವ, ಅಜೀವ ಹಾಗೂ ಪುಣ್ಯ, ಪಾಪ ಮತ್ತು ಆಸ್ರವ, ಸಂವರ, ನಿರ್ಜರೆ, ಬಂಧ ಹಾಗೂ ಮೋಕ್ಷ ಈ ಒಂಭತ್ತು ತತ್ತ್ವಗಳು ಸಮ್ಯಕ್ತ್ವವಿವೆ.

ತ್ರಿಕಾಲ ಜ್ಞಾನಾನಂದ ಸ್ವಭಾವವು ಶುದ್ಧನಯದ ವಿಷಯವಿದೆ ಮತ್ತು ಅದೇ ಭೂತಾರ್ಥವಿದೆ. ಅದರ ಅಂತರ್ದೃಷ್ಟಿಮಾಡುವುದು ಸಮ್ಯಗ್ದರ್ಶನವಿದೆ. ಆ ಸಮ್ಯಗ್ದರ್ಶನದ ವಿಷಯದಲ್ಲಿ ವ್ಯವಹಾರವು ಅಭೂತಾರ್ಥವಿದೆ. ಆದರೆ ಪ್ರಮಾಣಜ್ಞಾನದ ವಿಷಯದಲ್ಲಿ ನಿಶ್ಚಯ ಮತ್ತು ವ್ಯವಹಾರ ಎರಡೂ ಬರುತ್ತವೆ. ಸಮ್ಯಗ್ದೃಷ್ಟಿಗೆ ಭೂತಾರ್ಥ ಸ್ವಭಾವದ ದೃಷ್ಟಿಯಿದ್ದರೂ ಕೂಡ ಪರ್ಯಾಯದಲ್ಲಿ ರಾಗವಾಗುತ್ತದೆ ಅದನ್ನು ಕೂಡ ಅವನು ತಿಳಿಯುತ್ತಾನೆ. ದೃಷ್ಟಿಯಲ್ಲಿ

ರಾಗದ ನಿಷೇಧವಿದ್ದರೂ ಕೂಡ ಜ್ಞಾನವು ಅದನ್ನು ತಿಳಿಯುತ್ತದೆ. ಒಂದು ವೇಳೆ ಅದು ವ್ಯವಹಾರವನ್ನು ತಿಳಿದುಕೊಳ್ಳದಿದ್ದರೆ ಜ್ಞಾನವು ಪ್ರಮಾಣವಾಗುವುದಿಲ್ಲ. ಅದರಂತೆ ಒಂದು ವೇಳೆ ವ್ಯವಹಾರದ ಆಶ್ರಯದಿಂದ ನಿಶ್ಚಯವನ್ನು ಮನ್ನಿಸಿದರೂ ಕೂಡ ಪ್ರಮಾಣಜ್ಞಾನ ಅಥವಾ ಸಮ್ಯಗ್ದರ್ಶನವಾಗುವುದಿಲ್ಲ. ನಿಶ್ಚಯದಿಂದ ಆತ್ಮನು ಉಪಯೋಗ ಸ್ವರೂಪನೇ ಇದ್ದಾನೆ. ಅವನಲ್ಲಿ ಕರ್ತೃ, ಕರ್ಮ ಮೊದಲಾದ ಭೇದದ ವಿಕಲ್ಪಗಳು ಕೂಡ ಇಲ್ಲ, ಆದರೆ ಪರ್ಯಾಯದಲ್ಲಿ ಜ್ಞಾನಿಗೆ ಭೂಮಿಕೆಯ ಅನುಸಾರ ಶ್ರದ್ಧೆ-ಜ್ಞಾನ-ಚಾರಿತ್ರದ ವಿಕಲ್ಪರೂಪ ವ್ಯವಹಾರವು ಬಂದು ಬಿಡುತ್ತದೆ. ಸಮ್ಯಗ್ದೃಷ್ಟಿಗೆ ನಾನು ಉಪಯೋಗಸ್ವರೂಪನಿದ್ದೇನೆಂಬ ಅರಿವಂತೂ ಇದ್ದೇ ಇದೆ. ಅದೇ ಪ್ರಕಾರ ಉಪಯೋಗದಲ್ಲಿ ಉಪಯೋಗವಿದೆ, ಉಪಯೋಗದಲ್ಲಿ ಕ್ರೋಧಾದಿಗಳಿಲ್ಲ ಮತ್ತು ಕ್ರೋಧಾದಿಗಳಲ್ಲಿ ಉಪಯೋಗವಿಲ್ಲ. ಚಿದಾನಂದ ಸ್ವಭಾವವು ಭೂತಾರ್ಥವಿದೆ. ಆ ಸ್ವಭಾವದ ಅರುಚಿ ಮಾಡಿ ಯಾವನು ವಿಕಾರದ ಆದರ ಮಾಡಿದ್ದಾನೆ ಆ ಜೀವನಿಗೆ ಸ್ವಭಾವದ ಮೇಲೆ ಕ್ರೋಧವಿದೆ. ಅದು ಅನಂತಾನುಬಂಧೀ ಕ್ರೋಧವಿದೆ, ಆದರೆ ಇಲ್ಲಿ ಹೇಳಿರುವುದೇನೆಂದರೆ ಉಪಯೋಗದಲ್ಲಿ ಉಪಯೋಗವಿದೆ, ಉಪಯೋಗದಲ್ಲಿ ಕ್ರೋಧಾದಿಗಳಿಲ್ಲ ಎಂದರೆ ಎಲ್ಲಿ ಧ್ರುವ ಉಪಯೋಗರೂಪ ಸ್ವಭಾವದ ಜ್ಞಾನ ಮಾಡಿಕೊಂಡು ಅದರಲ್ಲಿ ಪರ್ಯಾಯವು ಪ್ರವೃತ್ತವಾದರೆ ಆತ್ಮನಲ್ಲಿ ಕ್ರೋಧಾದಿಗಳಿಲ್ಲ. ಎಂದರೆ ಅಲ್ಲಿ ಆತ್ಮನ ಅರುಚಿಯಿರುವುದಿಲ್ಲ ಮತ್ತು ವಿಕಾರದ ಆದರವಿರುವುದಿಲ್ಲ. **ಯಾವನಿಗೆ ವಿಕಾರದ ರುಚಿಯಿದೆ ಆ ಜೀವನಿಗೆ ಸ್ವಭಾವದ ಅರುಚಿಯಿದೆ. ಸ್ವಭಾವದ ಅರುಚಿಯ ಹೆಸರು ಅನಂತಾನುಬಂಧೀ ಕ್ರೋಧವಿದೆ ಆ ಕ್ರೋಧದಲ್ಲಿ ಉಪಯೋಗದ ಅಭಾವವಿದೆ.** ಧರ್ಮಾತ್ಮನಿಗೆ ಭೇದಜ್ಞಾನವಾಗಿದೆ. ಓಹೋ ! ನಾನು ಅಭೇದ ಜ್ಞಾನಸ್ವರೂಪನಿದ್ದೇನೆ. ಭೇದದ ವಿಕಲ್ಪವು ನನ್ನ ಸ್ವರೂಪದಲ್ಲಿ ಇಲ್ಲವೆಂಬ ಅರಿವಿದ್ದರೂ ಕೂಡ ಎಲ್ಲಿಯವರೆಗೆ ಸರ್ವಥಾ ಅಭೇದ ವೀತರಾಗದಶೆಯು ಪ್ರಕಟವಾಗುವುದಿಲ್ಲ. ಅಲ್ಲಿಯವರೆಗೆ ನಾಲ್ಕನೆಯ-ಐದನೆಯ-ಆರನೆಯ ಗುಣಸ್ಥಾನಗಳಲ್ಲಿ ಭೇದದ ವಿಕಲ್ಪವು ಬರುತ್ತದೆ. ಆ ವಿಕಲ್ಪದ ಸಮಯದಲ್ಲಿ ತೀರ್ಥಂಕರ-ಸಂತ-ಮುನಿ-ಸಮ್ಯಗ್ಜ್ಞಾನೀ ಧರ್ಮಾತ್ಮ ಮೊದಲಾದ ತೀರ್ಥವನ್ನು ನೋಡಿ ಅವರ ಕುರಿತು ಬಹುಮಾನ-ಭಕ್ತಿಯ ಉತ್ಸಾಹವು ಬರುತ್ತದೆ. ಮುನಿ-ಆರ್ಯಿಕೆ ಮೊದಲಾದ ನಾಲ್ಕು ತೀರ್ಥಗಳಿವೆ ಮತ್ತು ಸಮ್ಯಗ್ದೃಷ್ಟಿ ಧರ್ಮಾತ್ಮನ ಕುರಿತು ಪ್ರೀತಿಯ ಭಾವವು ಬರುತ್ತದೆ. ಆ ಸಮಯದಲ್ಲಿ ತಮ್ಮ ಅಂತರ ಸ್ವಭಾವದ ಸುದೃಷ್ಟಿಯ ಕಾರಣದಿಂದ ವೀತರಾಗ ಭಾವವು ವೃದ್ಧಿಸುತ್ತ ಹೋಗುತ್ತದೆ. ಮುನಿ-ಆರ್ಯಿಕೆ-ಶ್ರಾವಿಕೆ ಮೊದಲಾದ ಧರ್ಮಾತ್ಮರುಗಳನ್ನು ನೋಡಿ ಧರ್ಮಿಗೆ ಅವರ ಕುರಿತು ಪ್ರಮೋದದ ಭಾವವು ಬರದೇ ಇರುವುದಿಲ್ಲ. ಪೂರ್ಣ ವೀತರಾಗ ಭಾವವು ಪ್ರಕಟವಾಗದಿರುವಲ್ಲಿ ವ್ಯವಹಾರ ರತ್ನತ್ರಯದ ಶುಭರಾಗವು ಬರುತ್ತದೆ. ಅದು ಆತ್ಮನ ಪರ್ಯಾಯವನ್ನು ಹೇಗೆ ಇದೆ ಹಾಗೆ ಪ್ರಮಾಣ ಜ್ಞಾನದಿಂದ ತಿಳಿದುಕೊಳ್ಳಬೇಕಾಗುವುದು. ದ್ರವ್ಯದೃಷ್ಟಿಯ ಅಪೇಕ್ಷೆಯಿಂದ ಸಮಯಸಾರದಲ್ಲಿಯಂತೂ ಎಷ್ಟು ವ್ಯವಹಾರದ ಪರಿಣಾಮವಿದೆ ಅದು ಪುದ್ಗಲದ ಪರಿಣಾಮವಿದೆಯೆಂದು ಹೇಳಿದೆ. ಅಲ್ಲಿಯಂತೂ ಶುದ್ಧದ್ರವ್ಯಸ್ವಭಾವದ ದೃಷ್ಟಿಮಾಡಿಸಿ ಪರ್ಯಾಯ ಬುದ್ಧಿಯನ್ನು ಬಿಡಿಸುವ ಸಲುವಾಗಿ ಆ ಕಥನವಿದೆ, ಆದರೆ ಪರ್ಯಾಯದಲ್ಲಿ ರಾಗಾದಿಗಳಿವೆ ಅವನ್ನು ತಿಳಿದುಕೊಳ್ಳಬೇಕಾಗುವುದು. ಇಲ್ಲಿಯಂತೂ ಭೂಮಿಕೆಯ ಅನುಸಾರ ನಾಲ್ಕು ತೀರ್ಥಗಳ ಭಕ್ತಿ ಮೊದಲಾದವುಗಳ ಯಾವ ಭಾವ ಬರುತ್ತದೆ ಅದು ಉತ್ಸಾಹವರ್ಧನದ ಕಾರಣವಿದೆ. ಆ ಸಮಯದಲ್ಲಿ ಒಳಗೆ ಸ್ವಭಾವದ ದೃಷ್ಟಿಯಂತೂ ಇರುತ್ತದೆ ಎಂದರೆ ಸ್ವಭಾವದ ಆಶ್ರಯದಿಂದ ವೀತರಾಗ ಭಾವವೇ ಆಗುತ್ತ ಹೋಗುತ್ತದೆ. ಆದುದರಿಂದ ದೇವ-ಶಾಸ್ತ್ರ-ಗುರುಗಳ ಕುರಿತಿರುವ ಶುಭರಾಗವನ್ನು ಕೂಡ ಉಪಚಾರದಿಂದ ಉತ್ಸಾಹವರ್ಧನದ ಕಾರಣವೆಂದು ಹೇಳಿದೆ. ಯಾವ ಜೀವನು ರಾಗದ ಆಶ್ರಯದಿಂದ ಲಾಭವಿದೆಯೆಂದು ಮನ್ನಿಸಿಕೊಂಡಿದ್ದಾನೆ ಮತ್ತು ಸ್ವಭಾವದ ಅರಿವಿಲ್ಲ, ಅವನ ರಾಗವನ್ನು ವ್ಯವಹಾರವೆಂದು ಹೇಳಲಾಗುವುದಿಲ್ಲ. ಇಲ್ಲಿಯಂತೂ ನಿಶ್ಚಯ-ವ್ಯವಹಾರದ ಸಂಧಿಯ ಕಥನವಿದೆ.

ನಿಶ್ಚಯ ಸ್ವಭಾವದ ದೃಷ್ಟಿಯು ಇದೆ ಮತ್ತು ನಾಲ್ಕನೆಯ-ಐದನೆಯ-ಆರನೆಯ ಗುಣಸ್ಥಾನದಲ್ಲಿ ರಾಗದ ಮಂದತೆಯ ರೂಪದ ವ್ಯವಹಾರವು ಬರುತ್ತದೆ. ಹೇಗೆ ಬಿದಿಗೆಯ ಚಂದ್ರನ ಕಳೆಯು ಕ್ರಮ-ಕ್ರಮದಿಂದ ವೃದ್ಧಿಸುತ್ತ ಹೋಗುತ್ತದೆ ಹಾಗೆ ಯಾವನಿಗೆ ಚಿದಾನಂದ ಸ್ವರೂಪದ ದೃಷ್ಟಿಯಾಗಿದೆ ಅವನಿಗೆ ಸ್ವಭಾವದ ಅವಲಂಬನದಿಂದ ಕ್ರಮ-ಕ್ರಮದಿಂದ ಗುಣಸ್ಥಾನಗಳು ವೃದ್ಧಿಸುತ್ತ ಹೋಗುತ್ತವೆ. ಮಧ್ಯದಲ್ಲಿ ಶುಭರಾಗವಿದ್ದರೂ ಅದರ ಕಾರಣದಿಂದ ಗುಣಸ್ಥಾನಗಳು ವೃದ್ಧಿಸುತ್ತವೆಯೆಂದು ಹೇಳುವುದು ಉಪಚಾರದಿಂದ ಕಥನವಿದೆ. ಶುದ್ಧ ಕಾರಣಪರಮಾತ್ಮನ ಆಶ್ರಯದಿಂದಲೇ ಸಮ್ಯಗ್ದರ್ಶನ-ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರವು ಪ್ರಕಟವಾಗುತ್ತದೆ, ಉಳಿಯುತ್ತದೆ ಮತ್ತು ವೃದ್ಧಿಸಿ ಪೂರ್ಣವಾಗುತ್ತದೆ, ಆದರೆ ಮಧ್ಯದಲ್ಲಿ ಪರ್ಯಾಯದಲ್ಲಿ ಹೀನಾಧಿಕತೆಯ ಭೇದಗಳಾಗುತ್ತವೆ. ಆ ಭೇದಗಳನ್ನು ಲಕ್ಷ್ಯದಲ್ಲಿ ತಂದುಕೊಳ್ಳುವದು ವ್ಯವಹಾರನಯದ ವಿಷಯವಿದೆ-ಗುಣಸ್ಥಾನಗಳ ಅನುಸಾರ ವ್ರತ-ಭಕ್ತಿ ಮೊದಲಾದವುಗಳ ಭಾವಗಳು ಬರುತ್ತವೆ. ಅದು ವ್ಯವಹಾರದ ವಿಷಯವಿದೆ. ಮೊದಲಿಗಿಂತಲೂ ಶುದ್ಧತೆಯ ಅಂಶಗಳು ಎರಡನೆಯ ಪರ್ಯಾಯದಲ್ಲಿ ವೃದ್ಧಿಸುತ್ತ ಹೋಗುತ್ತವೆ. ಎಂದರೆ ಪರ್ಯಾಯದ ಅನೇಕತೆಯಿದೆ. ಆ ಅನೇಕತೆಯು ವ್ಯವಹಾರದ ವಿಷಯವಿದೆ. ಆ ವ್ಯವಹಾರದ ಜ್ಞಾನಮಾಡಿಸುವ ಮಾತನ್ನು ಸಮಯಸಾರದ ಹನ್ನೆರಡನೆಯ ಗಾಥೆಯಲ್ಲಿ ಹೇಳಲಾಗಿದೆ. ದೃಷ್ಟಿಯಂತೂ ಅಭೇದ ಸ್ವಭಾವದ ಮೇಲೆಯೇ ಇದೆ, ಆದರೆ ಸ್ವಭಾವದ ಆಶ್ರಯದಿಂದ ಪರ್ಯಾಯದಲ್ಲಿ ಶುದ್ಧತೆಯು ವೃದ್ಧಿಸುತ್ತ ಹೋಗುತ್ತದೆ. ಆ ಪರ್ಯಾಯವನ್ನು ತಿಳಿದುಕೊಳ್ಳಬೇಕಾಗುವುದು. ಧರ್ಮೀ ಜೀವನು ಪರ್ಯಾಯದ ಆಶ್ರಯ ಮಾಡುವುದಿಲ್ಲ, ಆದರೆ ಪರ್ಯಾಯದ ಜ್ಞಾನ ಮಾಡಿಕೊಳ್ಳುತ್ತಾನೆ. ನಾಲ್ಕನೆಯ ಗುಣಸ್ಥಾನದಲ್ಲಿ ನಾನು ಪರ್ಯಾಯದಲ್ಲಿ ವೀತರಾಗ ಕೇವಲಿಯಾಗಿ ಹೋಗಿದ್ದೇನೆಂದು ಮನ್ನಿಸುವುದಿಲ್ಲ ! ಸ್ವಭಾವದಿಂದ ಪ್ರಭು ಇದ್ದೇನೆ, ಆದರೆ ಪರ್ಯಾಯದಲ್ಲಿ ಇನ್ನೂ ಪಾಮರತೆಯಿದೆ. ಅಯ್ಯಾ ! ಪರ್ಯಾಯದಲ್ಲಿ ಇನ್ನೂ ಬಹಳಷ್ಟು ಅಲ್ಪತೆಯಿದೆ, ಇನ್ನೂ ರಾಗವಾಗುತ್ತದೆ. ಆ ಸಂತರ ಮತ್ತು ಕೇವಲಿಗಳ ದಶೆಯೆಂಥದು !! ಮತ್ತು ನನ್ನ ದಶೆಯೆಂಥದು ! ಸಂತರ ದಶೆಯ ಹತ್ತಿರವಂತೂ ನನ್ನದು ಪಾಮರತೆಯಿದೆ ! ಅಯ್ಯಾ, ತಮ್ಮ ಸ್ವರೂಪದಲ್ಲಿ ಜೀಕುತ್ತಿರುವಂಥ ಸಂತರ ದಶೆಯು ಧನ್ಯವಿದೆ ! ಈ ಪ್ರಕಾರ ಧರ್ಮೀ ಜೀವನು ತನ್ನ ಪರ್ಯಾಯದ ಸೀಮೆಯನ್ನು ತಿಳಿಯುತ್ತಾನೆ ಮತ್ತು ಸ್ವಭಾವದ ಆಶ್ರಯದಿಂದ ಪುರುಷಾರ್ಥವನ್ನು ವೃದ್ಧಿಸುತ್ತಾನೆ. ಸ್ವಭಾವದಿಂದ ನನ್ನಲ್ಲಿ ತ್ರಿಕಾಲ ಪ್ರಭುತೆಯಿದೆ, ಆದರೆ ಪರ್ಯಾಯದಲ್ಲಿ ಎಲ್ಲಿಯವರೆಗೆ ಕೇವಲಜ್ಞಾನವು ಪ್ರಕಟವಾಗುವುದಿಲ್ಲ, ಅಲ್ಲಿಯವರೆಗೆ ಪಾಮರತೆಯಿದೆಯೆಂದು ಧರ್ಮೀ ಜೀವನು ದ್ರವ್ಯ-ಪರ್ಯಾಯಗಳೆರಡನ್ನು ತಿಳಿಯುತ್ತಾನೆ, ಮತ್ತು ಸ್ವಭಾವದ ಕಡೆಗಿನ ಉತ್ಸಾಹವನ್ನು ವೃದ್ಧಿಸುತ್ತಾನೆ. ದ್ರವ್ಯದ ಆಶ್ರಯವನ್ನು ಕಾಯ್ದುಕೊಂಡು ಪರ್ಯಾಯದ ಜ್ಞಾನ ಮಾಡಿಕೊಳ್ಳುತ್ತಾನೆ ಎಂದರೆ ಪರ್ಯಾಯದಲ್ಲಿ ಕ್ಷಣ-ಕ್ಷಣಕ್ಕೆ ಶುದ್ಧತೆಯು ವೃದ್ಧಿಸುತ್ತ ಹೋಗುತ್ತದೆ.

ದ್ರವ್ಯದ ಆಶ್ರಯವನ್ನು ಬಿಟ್ಟುಕೊಟ್ಟರೂ ಕೂಡ ಮೂಢತೆಯಿದೆ ಮತ್ತು ಪರ್ಯಾಯದ ವಿವೇಕವನ್ನು ಮರೆತರೂ ಕೂಡ ಮೂಢತೆಯಿದೆ. ಅಭೇದ ಸ್ವಭಾವದ ಆಶ್ರಯವಿಟ್ಟುಕೊಂಡು ದ್ರವ್ಯ-ಪರ್ಯಾಯಗಳೆರಡರ ಜ್ಞಾನ ಮಾಡಿಕೊಳ್ಳುವುದು ಸಮ್ಯಗ್ದರ್ಶನವಿದೆ. ಧರ್ಮಾತ್ಮ ಜೀವನಿಗೆ ಭೂಮಿಕೆಯ ಪ್ರಮಾಣದಿಂದ ಶುಭರಾಗವು ಬರುತ್ತದೆ. ಆದರೆ ದೃಷ್ಟಿಯಂತೂ ಸ್ವಭಾವದ ಮೇಲೆ ಇರುವುದರಿಂದ ಸ್ವಭಾವದ ಅವಲಂಬನದಿಂದ ಕ್ರಮ-ಕ್ರಮವಾಗಿ ಚಾರಿತ್ರಮೋಹದ ನಾಶವಾಗುತ್ತ ಹೋಗುತ್ತದೆ. ಬಾಹ್ಯದಲ್ಲಿ ಪರವಸ್ತುವಿನ ಗ್ರಹಣ ಅಥವಾ ತ್ಯಾಗದ ಕರ್ತೃವಂತೂ ಆತ್ಮನಿಲ್ಲ ಆದುದರಿಂದ ಬಾಹ್ಯದಲ್ಲಿ ವಸ್ತುವನ್ನು ಬಿಟ್ಟುಕೊಟ್ಟರೆ ರಾಗವು ಬಿಟ್ಟುಹೋಯಿತೆಂದು ಧರ್ಮಾತ್ಮನು ಮನ್ನಿಸುವುದಿಲ್ಲ. ಆದರೆ ಸ್ವಭಾವದ ಉದ್ಯಮ ಮಾಡಿದರೆ ರಾಗವು ಬಿಟ್ಟುಹೋಗುತ್ತದೆ. ಯಾವನಿಗೆ ಸ್ವಭಾವದ ದೃಷ್ಟಿಯು ಪ್ರಕಟವಾಗಿದೆ ಅವನಿಗೆ ವಿಕಲ್ಪದ ಭಾವನೆಯಿರುವುದಿಲ್ಲ ಮುನಿದಶೆಯು ಪ್ರಕಟವಾಗಿರುವಲ್ಲಿ ಸದೋಷ ಆಹಾರದ

ವೃತ್ತಿಯೇ ಉತ್ಪನ್ನವಾಗದಂಥ ಸಹಜ ಉಗ್ರ ಪುರುಷಾರ್ಥವಿರುತ್ತದೆ. ಅಲ್ಲಿ ಪುಣ್ಯದ ಯೋಗವು ಕೂಡ ಸ್ವಾಭಾವಿಕವಾಗಿರುತ್ತದೆ. 'ನಾಳೆ ಎಲ್ಲಿ ಆಹಾರ ದೊರಕುವುದೆ'ಂಬ ವಿಕಲ್ಪವು ಮುನಿರಾಜರಿಗೆ ಇರುವುದಿಲ್ಲ. ಹೇಗೆ ಹೇಗೆ ಸ್ವಭಾವದ ಅವಲಂಬನವು ವೃದ್ಧಿಸುತ್ತ ಹೋಗುತ್ತದೆ ಹಾಗೆ ಹಾಗೆ ಪರ್ಯಾಯದ ಶುದ್ಧತೆಯು ಹೆಚ್ಚುತ್ತ ಹೋಗುತ್ತದೆ ಮತ್ತು ರಾಗವು ಮುರಿಯುತ್ತ ಹೋಗುತ್ತದೆ ಆರನೆಯ-ಏಳನೆಯ ಗುಣಸ್ಥಾನದಲ್ಲಿ ಬಹಳಷ್ಟು ವೀತರಾಗ ಭಾವವು ಪ್ರಕಟವಾಗಿ ಹೋಗಿರುತ್ತದೆ, ಆರನೆಯ ಗುಣಸ್ಥಾನದಲ್ಲಿ ಒಂದಿಷ್ಟು ಪ್ರಮಾದವಿರುತ್ತದೆ, ಬಹಳಷ್ಟು ಮೋಹದ ನಾಶವಾಗಿ ಹೋಗಿರುತ್ತದೆ. ಆದರೆ ಅಪರಿಚಿತತನದಿಂದ ಅದೆಷ್ಟೋ ಬಾರಿ ಪ್ರಮಾದ ಭಾವವಾಗಿ ಹೋಗುತ್ತದೆ. **ಆಗ ಪುನಃ ತಿರುಗಿ ದಂಡನೆ-ಪ್ರಾಯಶ್ಚಿತ್ತ ಮಾಡಿಕೊಂಡು ಶುದ್ಧತೆ ಮಾಡುತ್ತದೆ.** ಮುನಿದಶೆಯಲ್ಲಿ ಅಜ್ಞಾನವಾಗಲಿ ಅಥವಾ ಮಿಥ್ಯಾತ್ವವಾಗಲಿ ಇರುವುದೇ ಇಲ್ಲ, ಆದರೆ ಎಷ್ಟೋ ಬಾರಿ ಸಹಜ ಪ್ರಮಾದ ಭಾವವು ಬಂದು ಹೋಗುತ್ತದೆ, ಅಷ್ಟು ಶಿಥಿಲತೆಯಿದೆ, ಆದರೆ ಯಾವುದೇ ಕರ್ಮದ ಉದಯದ ಕಾರಣದಿಂದ ಆ ಜೀವನಿಗೆ ಅಪರಾಧವಾಗಿದೆಯೆಂಬುದಾಗಿಲ್ಲ.

ಹನ್ನೊಂದನೆಯ ಗುಣಸ್ಥಾನದಿಂದ ಕರ್ಮದ ಉದಯದ ಕಾರಣದಿಂದ ಪತನವಾಗುವುದಿಲ್ಲ, ಆದರೆ ತನ್ನ ಪರ್ಯಾಯದ ಮರ್ಯಾದೆಯೇ ಅಷ್ಟಿರುತ್ತದೆ. ಹನ್ನೊಂದನೆಯ ಗುಣಸ್ಥಾನದಲ್ಲಿಯಂತೂ ಯಾವುದೇ ಮೋಹದ ಉದಯವಿರುವುದಿಲ್ಲ. ಅದರ ಉಪಶಾಂತ-ಮೋಹದಶೆಯ ಕಾಲವು ಪೂರ್ಣವಾಗುತ್ತಿರುವಂತೆ ಆ ಹತ್ತನೆಯ ಮೊದಲಾದ ಗುಣಸ್ಥಾನದಲ್ಲಿ ಹಿಂದಕ್ಕೆ ಬಂದು ಹೋಗುತ್ತದೆ. ಕ್ಷಪಕ ಶ್ರೇಣಿಯನ್ನೇಕೆ ಆರಂಭಿಸಲಿಲ್ಲ ? ಉಪಶಮ ಶ್ರೇಣಿಯನ್ನಾರಂಭಿಸಿದುದು ಅದು ಆ ಜೀವದ ಯೋಗ್ಯತೆಯೇ ಹನ್ನೊಂದನೆಯ ಗುಣಸ್ಥಾನದವರೆಗೆ ಹೋಗುವುದಿದೆ.

ಇದೇ ಪ್ರಕಾರದಿಂದ ಆರು-ಏಳನೆಯ ಗುಣಸ್ಥಾನಗಳು ಕೂಡ ತಮ್ಮ ಪರ್ಯಾಯದ ಯೋಗ್ಯತೆಯಿಂದ ಬರುತ್ತವೆ. ಸಂಜ್ವಲನದ ಮಂದ ಉದಯದಿಂದ ಏಳನೆಯ ಹಾಗೂ ತೀವ್ರ ಉದಯದಿಂದ ಆರನೆಯದೆಂದು ಹೇಳುವುದಂತೂ ನಿಮಿತ್ತದ ಕಥನವಿದೆ. ಸಮಯ ಸಮಯದ ಪರ್ಯಾಯದ ಯೋಗ್ಯತೆಯು ಸ್ವತಂತ್ರವಿದೆ. ಜ್ಞಾನಾವರಣೀಯ ಕರ್ಮದ ವ್ಯಾಖ್ಯೆಯಲ್ಲಿ ಹೇಳುವುದೇನೆಂದರೆ- 'ಆತ್ಮನ ಜ್ಞಾನವನ್ನು ತಡೆಯುವುದು ಜ್ಞಾನಾವರಣೀಯ ಕರ್ಮವಿದೆ.' ಅಲ್ಲಿ ಅದರ ಅರ್ಥವೇನೆಂದರೆ-ಆತ್ಮನು ತನ್ನ ಜ್ಞಾನದ ಹೀನ ದಶೆಯ ರೂಪದಿಂದ ಪರಿಣಮಿಸುತ್ತಾನೆ. ಆಗ ಎದುರಿಗೆ ನಿಮಿತ್ತರೂಪದಿಂದ ಜ್ಞಾನಾವರಣ ಕರ್ಮದ ಉದಯವಿರುತ್ತದೆ. ಹೀಗೆ ನಿಮಿತ್ತ-ನೈಮಿತ್ತಿಕ ಸಂಬಂಧವಿರುತ್ತದೆ. ಆದರೆ ಯಾವುದು ಯಾವುದರ ಕರ್ತೃವಿಲ್ಲ. ಒಂದುವೇಳೆ ಒಂದು ದ್ರವ್ಯವು ಇನ್ನೊಂದು ದ್ರವ್ಯದ ಪರ್ಯಾಯವನ್ನು ಮಾಡುತ್ತದೆಯೆಂದು ಮನ್ನಿಸಿದರೆ ಅದು 'ಈಶ್ವರನು ಜಗತ್ತನ್ನು ಸೃಷ್ಟಿಸಿದನು' ಎಂದು ಹೇಳುವಂತೆ ಮಿಥ್ಯಾ ಮನ್ನಣೆಯಿದೆ.ಹೇಗೆ ತ್ರಿಕಾಲೀ ದ್ರವ್ಯವು ಸತ್ ಇದೆ, ಅದರ ಕರ್ತೃವು ಯಾವನೋ ಈಶ್ವರನಿಲ್ಲ, ಹಾಗೆ ದ್ರವ್ಯದ ಪರ್ಯಾಯದ ಕರ್ತೃವು ಕೂಡ ಬೇರೆ ಇನ್ನೊಂದಿಲ್ಲ. ಹೇಗೆ ಅನ್ಯ ಮತದವರು ಈಶ್ವರನು ಜಗತ್ತಿನ ಸೃಷ್ಟಿ ಮಾಡಿದನೆಂದು ಹೇಳುತ್ತಾರೆ, ಹಾಗೆ ಜೈನರಲ್ಲಿ ಕೂಡ ಒಂದು ವೇಳೆ ಯಾವನೋ ಓರ್ವನು 'ನನ್ನ ಪರ್ಯಾಯವನ್ನು ನಿಮಿತ್ತ ಮಾಡಿದನು ಅಥವಾ ದೇಹದ ಕ್ರಿಯೆಯು ನನ್ನಿಂದ ಆಗುತ್ತದೆ'ಯೆಂದು ಹೇಳಿದರೆ ಅವರೀರ್ವರು ಮಿಥ್ಯಾದೃಷ್ಟಿಗಳಿದ್ದಾರೆ. ಒಂದು ವೇಳೆ ನಿಮಿತ್ತದಿಂದ ಆತ್ಮನ ಪರ್ಯಾಯವಾದರೆ ತಾನು ಏನು ಮಾಡಿದನು ? ತನ್ನ ಪರ್ಯಾಯದಲ್ಲಿ ಪರಾಶ್ರಯ ಭಾವದಿಂದ ವಿಕಾರವಾಗುವುದು ಅದು ಸ್ವಾಶ್ರಯದಿಂದ ತೊಲಗಿ ಬಿಡುತ್ತದೆ; ನಿಮಿತ್ತದಿಂದ ವಿಕಾರವಾಗುತ್ತದೆ. ಆದುದರಿಂದ ನಿಮಿತ್ತವನ್ನು ದೂರ ಮಾಡಬೇಕೆಂದು ಯಾವನು ಮನ್ನಿಸುತ್ತಾನೆ ಅವನಿಗೆ ಸ್ವ-ಪರದ ಭಿನ್ನತೆಯ ಅರಿವಿಲ್ಲ, ಅವನು ಮಿಥ್ಯಾದೃಷ್ಟಿಯಿದ್ದಾನೆ.

ತಿನ್ನಾಣಂ ತಾರಯಾಣಂ - ಎಂದರೆ ಓ ಭಗವಾನ್ ! ತಾವಂತೂ ಪಾರಾಗಿಹೋದಿರಿ ಮತ್ತು ನಮ್ಮನ್ನು ಪಾರುಗಾಣಿಸುವವರಿದ್ದೀರೆಂದು ಹೇಳುವುದು ನಿಮಿತ್ತದಿಂದ ಉಪಚಾರದ ಕಥನವಿದೆ. ತಾನು ಸ್ವಯಂ ಸ್ವಾಶ್ರಯದಿಂದ

ಪಾರಾಗಿ ಹೋದರೆ ಆಗ ಭಗವಂತರು ಪಾರುಗಾಣಿಸಿದರೆಂದು ವಿನಯದಿಂದ ಹೇಳಲಾಗುತ್ತದೆ.

ಭಗವಾನ ಶ್ರೀ ಕುಂದಕುಂದಾಚಾರ್ಯದೇವರು, ಶ್ರೀ ಅಮೃತಚಂದ್ರಾಚಾರ್ಯದೇವರು ಮೊದಲಾದ ಒಬ್ಬೊಬ್ಬ ದಿಗಂಬರ ಸಂತರು ಆಕಾಶದ ಕೊನೆಯಂತೆ ಮಹಾ ಸಮರ್ಥರಿದ್ದರು. ಆರನೆಯ-ಏಳನೆಯ ಗುಣಸ್ಥಾನದಲ್ಲಿ ಆತ್ಮನ ಶಾಂತ ಆನಂದ ರಸದಲ್ಲಿ ಸತತ ಜೀಕುತ್ತಿದ್ದರು. ಅವರು ದ್ರವ್ಯಸ್ವಭಾವದ ಆಶ್ರಯದಿಂದಲೇ ಶುದ್ಧಿಯಾಗುತ್ತದೆಯೆಂದು ಹೇಳಿದ್ದಾರೆ. ಚಿದಾನಂದ ದ್ರವ್ಯದ ಅವಲಂಬನವೇ ಮೋಕ್ಷಮಾರ್ಗವಿದೆ. ಪರ್ಯಾಯದಲ್ಲಿ ದುರ್ಬಲತೆಯಿಂದ ಪ್ರಮಾದವಿದೆ, ಅದನ್ನು ತಿಳಿದುಕೊಳ್ಳುವುದು ವ್ಯವಹಾರವಿದೆ. ಯಾವ ಸಮಯದಲ್ಲಿ ರಾಗವಾಗುವುದು ಆ ಸಮಯದಲ್ಲಂತೂ ಅದು ಉತ್ಪಾದ ರೂಪವಿದೆ. ಆ ಸಮಯದಲ್ಲಿ ಉತ್ಪಾದ ಪರ್ಯಾಯದ ವ್ಯಯವಾಗುವುದಿಲ್ಲ ಮತ್ತು ಎರಡನೆಯ ಸಮಯದಲ್ಲಿ ಅದು ಹೊರಟು ಹೋಗುತ್ತದೆ. ಎಂದರೆ ನಿಜವಾಗಿ ರಾಗವನ್ನು ಬಿಡಬೇಕಾಗುವುದಿಲ್ಲ, ಆದರೆ ಅಂತರ್ಯದಲ್ಲಿ ಸ್ವಭಾವದ ದೃಷ್ಟಿ ಮಾಡಿ ಅದರ ಉಗ್ರ ಅವಲಂಬನ ತೆಗೆದುಕೊಂಡರೆ ವೀತರಾಗತೆಯು ವೃದ್ಧಿಸುತ್ತದೆ ಮತ್ತು ರಾಗವು ಉತ್ಪನ್ನವಾಗುವುದೇ ಇಲ್ಲ. ಪದಾರ್ಥದ ಇಂಥ ಸ್ವರೂಪವನ್ನು ಯಥಾರ್ಥ ರೂಪದಿಂದ ತಿಳಿದುಕೊಂಡಲ್ಲದೆ ಬಾಹ್ಯದಲ್ಲಿ ಬೇಕಾದಷ್ಟು ಉಪಾಯ ಮಾಡಿದರೂ, ಶುಷ್ಕ ಕ್ರಿಯಾಕಾಂಡ ಮಾಡಿದರೂ ಅದೆಲ್ಲವು ವ್ಯರ್ಥವಿದೆ.

ಜೀವರುಗಳು ಅನಾದಿಯಿಂದ ವಸ್ತುಸ್ವರೂಪವು ಹೇಗಿದೆಯೆಂಬುದನ್ನು ತಿಳಿದುಕೊಳ್ಳಲಾರದೆ ಕೇವಲ ಬಾಹ್ಯದಲ್ಲಿ ಸಮಸ್ತ ಉಪಾಯಗಳನ್ನು ಮಾಡಿ ಅದನ್ನು ಧರ್ಮವೆಂದು ಮನ್ನಿಸಿಕೊಂಡಿದ್ದಾರೆ. ಜೈನ ದರ್ಶನವು ಅಗಮ್ಯವಿದೆ ಮತ್ತು ಅದು ಗಮ್ಯವಾದರೆ ಅಲ್ಪ ಕಾಲದಲ್ಲಿ ಮುಕ್ತಿಯಾಗಿ ಹೋಗುವಂತಿದೆ. ಗುರುಗಮವಿಲ್ಲದೆ ಅದು ತಿಳಿದುಬರುವಂತಿಲ್ಲ. ಧರ್ಮಾತ್ಮನಿಗೆ ನಿಜದ್ರವ್ಯದ ಆಶ್ರಯದ ದೃಷ್ಟಿಯಂತೂ ಬಿಟ್ಟುಹೋಗುವುದೇ ಇಲ್ಲ, ಆದರೆ ಪರ್ಯಾಯದಲ್ಲಿ ಭೂಮಿಕೆಗೆ ಯೋಗ್ಯವಿರುವಂಥ ಯಾವುದಾದರೊಂದು ದೋಷವು ತಗಲಿಬಿಟ್ಟರೆ ಗುರುಗಳ ಹತ್ತಿರದಲ್ಲಿ ಬಂದು ಅತ್ಯಂತ ವಿನಯದಿಂದ ಸರಳತೆಯಿಂದ ಅದರ ಪ್ರಾಯಶ್ಚಿತ್ತ ತೆಗೆದುಕೊಂಡು ಶುದ್ಧತೆಯನ್ನು ವೃದ್ಧಿಸಿಕೊಳ್ಳುತ್ತಾರೆ. ಅಪರಾಧವೆಸಗಿದ ಆ ಪರ್ಯಾಯವಂತೂ ಹೊರಟು ಹೋಗಿದೆ, ಆದರೆ ವ್ಯವಹಾರದಿಂದ ಅದರ ಪ್ರಾಯಶ್ಚಿತ್ತ ತೆಗೆದುಕೊಂಡರೆಂದು ಹೇಳಲಾಗುತ್ತದೆ. ಸ್ವಭಾವದ ಆಶ್ರಯದಿಂದ ನಿರ್ಮಲತೆಯು ವೃದ್ಧಿಸುತ್ತ ಹೋಗುತ್ತದೆ ಮತ್ತು ರಾಗವು ಮುರಿಯುತ್ತ ಹೋಗುತ್ತದೆ. ಇದರ ಹೆಸರು ಮೋಕ್ಷಮಾರ್ಗವಿದೆ. ಒಂದಿಷ್ಟು ರಾಗವು ಉಳಿದುಕೊಂಡಿದ್ದರೆ ಅದರ ಜ್ಞಾನ ಮಾಡಿಕೊಳ್ಳುವುದನ್ನು ವ್ಯವಹಾರವೆಂದು ಹೇಳುತ್ತಾರೆ.

ಈ ಆತ್ಮನು ಜ್ಞಾನ-ದರ್ಶನ-ಚಾರಿತ್ರ ಸ್ವಭಾವದಿಂದ ತುಂಬಿಕೊಂಡ ಪದಾರ್ಥನಿದ್ದಾನೆ. ಅವನ ಜ್ಞಾನ-ದರ್ಶನ-ಚಾರಿತ್ರಗಳೇನು ಹೊರಗಿನಿಂದ, ರಾಗದಿಂದ ಅಥವಾ ನಿಮಿತ್ತದಿಂದ ಪ್ರಕಟವಾಗುವುದಿಲ್ಲ, ಅವು ತಮ್ಮ ಸ್ವಭಾವದ ಅವಲಂಬನದಿಂದಲೇ ಆ ಜ್ಞಾನ-ದರ್ಶನ-ಚಾರಿತ್ರದ ಪರ್ಯಾಯವು ಪ್ರಕಟವಾಗುತ್ತದೆಯೆಂದು ಯಾರಿಗೆ ತಮ್ಮ ಆತ್ಮನ ಜ್ಞಾನವಾಗಿದೆ ಹಾಗೂ ಅದರಲ್ಲಿ (ಆತ್ಮನಲ್ಲಿ) ಸ್ಥಿರತೆಯಾಗಿದೆ ಅಂಥ ಜೀವನಿಗೆ ನಿಶ್ಚಯ-ವ್ಯವಹಾರವು ಹೇಗಿರುತ್ತದೆಯೆಂಬುದರದು ಈ ವರ್ಣನೆಯಿದೆ, ಧರ್ಮಾತ್ಮ ಜೀವನಿಗೆ ಸ್ವರೂಪದ ಶ್ರದ್ಧೆಯಂತೂ ಒಂದು ಕ್ಷಣವು ಕೂಡ ಬಿಟ್ಟುಹೋಗುವುದಿಲ್ಲ, ಆದರೆ ಇನ್ನೂ ಪೂರ್ಣ ವೀತರಾಗ ಸ್ಥಿರತೆಯು ಪ್ರಕಟವಾಗಿರುವುದಿಲ್ಲ. ಅಲ್ಲಿ ಹನ್ನೆರಡು ವ್ರತ, ಪಂಚಮಹಾವ್ರತ ಮೊದಲಾದವುಗಳ ಶುಭಭಾವವಿರುತ್ತದೆ ಮತ್ತು ಆ ವ್ರತಾದಿಗಳಲ್ಲಿ ಒಂದಿಷ್ಟು ದೋಷವು ತಗಲಿದರೆ ಅದರ ಸಲುವಾಗಿ ಪ್ರಾಯಶ್ಚಿತ್ತ ತೆಗೆದುಕೊಳ್ಳುತ್ತಾರೆ. ನಿಜವಾಗಿ ಹೇಳಬೇಕೆಂದರೆ ತ್ರಿಕಾಲ ಜ್ಞಾನ ಸ್ವರೂಪವಿರುವಂಥ ಆತ್ಮನೇ ಪ್ರಾಯಶ್ಚಿತ್ತ ಸ್ವರೂಪನಿದ್ದಾನೆ. ಅವನಲ್ಲಿ ಲೀನತೆ ಮಾಡುವುದು ಪ್ರಾಯಶ್ಚಿತ್ತವಿದೆ, ಆದರೆ ದೋಷ ತಗಲಿರುವುದರ ಪ್ರಾಯಶ್ಚಿತ್ತ ತೆಗೆದುಕೊಳ್ಳಲಾಯಿತೆಂದು ಉಪಚಾರದಿಂದ ಹೇಳಲಾಗುತ್ತದೆ. ದೋಷ

ತಗಲಿರುವುದಂತೂ ಪ್ರಾಯಶ್ಚಿತ್ತದ ಸಮಯದಲ್ಲಿ ವ್ಯಯವಾಗಿ ಹೋಗಿರುತ್ತದೆ, ಆದರೆ ಸ್ವಭಾವದ ಅವಲಂಬನ ಪೂರ್ವಕ ಶುಭರಾಗವಿದೆ ಮತ್ತು ಅಶುಭ ರಾಗವು ಆಗುವುದಿಲ್ಲ, ಆ ಅಪೇಕ್ಷೆಯಿಂದ ಪ್ರಾಯಶ್ಚಿತ್ತವೆಂದು ಹೇಳಲಾಗುತ್ತದೆ. ಗುರುಗಳ ಹತ್ತಿರ ಹೋಗಿ, ಓ ಪ್ರಭು ! ನನಗೆ ಇಂಥ ವಿಕಲ್ಪವು ಬಂದುಬಿಟ್ಟಿತು ಮತ್ತು ಇಂಥ ದೋಷವು ತಗಲಿತು! -ಎಂದು ಅತ್ಯಂತ ಸರಳ ಭಾವದಿಂದ ಹೇಳುತ್ತಾನೆ. ಅದರಲ್ಲಿ ವಾಣಿಯಂತೂ ಜಡದ ಕಾರಣದಿಂದ ಹೊರಟಿದೆ. ಆ ಸಮಯದಲ್ಲಿ ಶುಭ ವಿಕಲ್ಪವು ಬಂದಿದೆ ಮತ್ತು ಧ್ರುವ ಸ್ವಭಾವದ ಅವಲಂಬನವು ಕೂಡ ವರ್ತಿಸುತ್ತದೆ. ಎಂದರೆ ಶುದ್ಧತೆಯ ಅಂಶವು ವೃದ್ಧಿಸುತ್ತ ಹೋಗುತ್ತದೆ.

ಶುಭರಾಗವು ಬರುವುದು ಸಾಧನ ಮತ್ತು ಆತ್ಮನ ಶುದ್ಧ ವೀತರಾಗ ದಶೆಯು ಸಾಧ್ಯವೆಂದು ಹೇಳುವಲ್ಲಿ ಭಿನ್ನಸಾಧನ-ಸಾಧ್ಯವಿದೆ, ರಾಗವು ಆತ್ಮಸ್ವರೂಪದಿಂದ ಭಿನ್ನವಿದೆ. ವ್ಯವಹಾರರತ್ನತ್ರಯವು ನಿಶ್ಚಯರತ್ನತ್ರಯದ ಸಾಧನವೆಂದು ಹೇಳುವಲ್ಲಿ ಕೂಡ ಸಾಧನ-ಸಾಧ್ಯಗಳು ಭಿನ್ನ-ಭಿನ್ನವಿವೆ. ನಿಶ್ಚಯದಿಂದಂತೂ ತನ್ನ ಧ್ರುವ ಕಾರಣಪರಮಾತ್ಮನ ಅವಲಂಬನದಿಂದಲೇ ನಿಶ್ಚಯರತ್ನತ್ರಯವು ಪ್ರಕಟವಾಗುತ್ತದೆ, ಆದರೆ ಮಧ್ಯದಲ್ಲಿ ಭೂಮಿಕೆಯ ಅನುಸಾರ ವ್ಯವಹಾರ ರತ್ನತ್ರಯದ ಶುಭರಾಗವಿರುತ್ತದೆ. ಬಾಹ್ಯದಲ್ಲಿ ದೇಹದ ಕ್ರಿಯೆಯಾಗುತ್ತದೆ ಅದಂತೂ ಆತ್ಮನದಿಲ್ಲ. ಶರೀರದ ಕ್ರಿಯೆಯಂತೂ ಆತ್ಮನಿಂದ ಬೇರೆಯೇ ಇದೆ, ಆದರೆ ಇಲ್ಲಿಯಂತೂ ವ್ಯವಹಾರ ರತ್ನತ್ರಯದ ವಿಕಲ್ಪಗಳು ಕೂಡ ಶುದ್ಧಾತ್ಮಸ್ವರೂಪದಿಂದ ಭಿನ್ನವಿವೆಯೆಂದು ಹೇಳುತ್ತಾರೆ. ಅದನ್ನು ಉಪಚಾರದಿಂದ ಸಾಧನವೆಂದು ಹೇಳಲಾಗಿದೆ. ಏಕೆಂದರೆ ಆ ಸಮಯದಲ್ಲಿ ನಿಶ್ಚಯ ಶ್ರದ್ಧೆ-ಜ್ಞಾನ-ಚಾರಿತ್ರದ ಜತೆಯಲ್ಲಿ ವರ್ತಿಸುತ್ತವೆ. ಯಾವ ಪ್ರಕಾರ ಧೋಬಿಯು ಮಲಿನ ವಸ್ತ್ರಗಳನ್ನು ಕಲ್ಲಿನ ಮೇಲೆ ಅಪ್ಪಳಿಸಿ ತೊಳೆಯುತ್ತಾನೆ ಅಲ್ಲಿ ಅವನಿಗೆ ವಸ್ತ್ರದ ಸ್ವಚ್ಛತೆಯ ಅರಿವಿದೆ. ಅದೇ ಪ್ರಕಾರ ಅಂತರ್ಯದಲ್ಲಿ ಶುದ್ಧ ದ್ರವ್ಯ ಸ್ವಭಾವದ ಅರಿವು ಯಾವನಿಗೆ ವರ್ತಿಸುತ್ತದೆ ಮತ್ತು ಅದರ ಅವಲಂಬನವು ವರ್ತಿಸುತ್ತದೆ ಅಂಥ ಜೀವನಿಗೆ ಮಧ್ಯದಲ್ಲಿ ವ್ಯವಹಾರ ರತ್ನತ್ರಯವು ಬರುತ್ತದೆ, ಆ ವ್ಯವಹಾರ ರತ್ನತ್ರಯದಿಂದ ಶುದ್ಧತೆಯು ಪ್ರಕಟವಾಗುತ್ತದೆಯೆಂದು ಉಪಚಾರದಿಂದ ಹೇಳಲಾಗುತ್ತದೆ. ಆತ್ಮನು ಜ್ಞಾಯಕ ಸ್ವರೂಪದಿಂದ ತುಂಬಿಕೊಂಡಿದ್ದಾನೆ. ಅವನಲ್ಲಿ ರಾಗವು ಏನು ಮಾಡುವುದು ? ಸ್ವಭಾವದ ಪ್ರತೀತಿಯಾಗಿ ಅನಂತರ ಅದರಲ್ಲಿ ಏಕಾಗ್ರತೆಯಿಂದ ಶಾಂತಿಯು ವೃದ್ಧಿಸುತ್ತ ಹೋಗುತ್ತದೆ ಮತ್ತು ವ್ರತಾದಿಗಳ ಭಾವವು ಭೂಮಿಕೆಯ ಅನುಸಾರ ಬರುತ್ತದೆ. ಅಲ್ಲಿ ರಾಗ ಮತ್ತು ಸ್ವಭಾವವು ಭಿನ್ನವಿದೆ. ದೃಷ್ಟಿಯಲ್ಲಿಯಂತೂ ಸಮ್ಯಗ್ದೃಷ್ಟಿಗೆ ಯಾವಾಗಲೂ ಅಭೇದ ಸ್ವಭಾವದ್ದೇ ಮುಖ್ಯತೆಯಿದೆ ಮತ್ತು ಭೇದದ ಗೌಣತೆಯಿದೆ. ಒಂದುವೇಳೆ ದೃಷ್ಟಿಯಲ್ಲಿ ನಿಶ್ಚಯದ ಮುಖ್ಯತೆಯು ಹೊರಟುಹೋದರೆ ಮಿಥ್ಯಾದೃಷ್ಟಿಯಾಗಿ ಹೋಗುತ್ತಾನೆ.

ಇಲ್ಲಿಯಂತೂ ಚಾರಿತ್ರದ ಅಪೇಕ್ಷೆಯಿಂದ ಮುಖ್ಯತೆ ಮತ್ತು ಗೌಣತೆಯ ಮಾತು ಇದೆ. ನಾಲ್ಕನೆಯ-ಐದನೆಯ ಗುಣಸ್ಥಾನದಲ್ಲಿ ಶುಭರಾಗವಿರುತ್ತದೆ, ಅದರಿಂದ ಅಲ್ಲಿ ವ್ಯವಹಾರದ ಮುಖ್ಯತೆಯನ್ನು ಹೇಳಲಾಗಿದೆ. ಏಳನೆಯ ಗುಣಸ್ಥಾನದಿಂದ ನಿರ್ವಿಕಲ್ಪ ಅನುಭವದಲ್ಲಿ ಸ್ಥಿರಗೊಳ್ಳುತ್ತದೆ, ಅಲ್ಲಿ ನಿಶ್ಚಯದ ಮುಖ್ಯತೆಯಿರುತ್ತದೆ. ದೃಷ್ಟಿಯಲ್ಲಿಯಂತೂ ನಾಲ್ಕನೆಯ ಗುಣಸ್ಥಾನದಿಂದ ಕೂಡ ಒಂದು ಅಭೇದದ ಮುಖ್ಯತೆಯಿದೆ. ಅಭೇದದ ಆಶ್ರಯವಿಲ್ಲದೆ ಮೋಕ್ಷಮಾರ್ಗವೆಲ್ಲಿಯದು ?

ಆರನೆಯ ಗುಣಸ್ಥಾನದವರೆಗೆ ಜಿನಆಜ್ಞೆ ಮೊದಲಾದವುಗಳ ಲಕ್ಷ್ಯವಿರುವುದು ಶುಭರಾಗವಿದೆ, ಆದರೆ ಏಳನೆಯ ಗುಣಸ್ಥಾನದಲ್ಲಿ ಉಪಯೋಗವು ಸ್ವರೂಪದಲ್ಲಿ ಸ್ಥಿರಗೊಳ್ಳುವುದರಿಂದ ಜಿನ ಆಜ್ಞೆಯ ಲಕ್ಷ್ಯವು ಬಿಟ್ಟುಹೋಗುತ್ತದೆ. ಭಿನ್ನ ಸಾಧ್ಯ-ಸಾಧನವು ಬಿಟ್ಟುಹೋಗಿ ಅಭಿನ್ನ ಸಾಧ್ಯ-ಸಾಧನವು ಪ್ರಕಟವಾಗಿ ಬಿಡುವುದು. ಸ್ವರೂಪದಲ್ಲಿ ಸಾವಧಾನತೆಯಾಗಿ ಅಂತರಂಗ ಗುಪ್ತಿ ದಶೆಯು ಪ್ರಕಟವಾಗುವುದು. ಅಲ್ಲಿ ಬಾಹ್ಯ ಕ್ರಿಯಾಕಾಂಡದ ವಿಕಲ್ಪಗಳು ಇರುವುದಿಲ್ಲ. ದೇವ-ಶಾಸ್ತ್ರ-ಗುರುಗಳ ಲಕ್ಷ್ಯವು ಕೂಡ ಬಿಟ್ಟುಹೋಗುತ್ತದೆ. ಪಂಚಮಹಾವ್ರತದ ವಿಕಲ್ಪಗಳು

ಕೂಡ ಬಹಿರಂಗ ಭಾವಗಳಿವೆ. ಆಂತರ್ಯದ ಸ್ವರೂಪದಲ್ಲಿ ಗುಪ್ತವಾಗುತ್ತಿರುವಂತೆ ಆ ಪಂಚಮಹಾವ್ರತದ ವಿಕಲ್ಪಗಳು ಕೂಡ ಬಿಟ್ಟು ಹೋಗುತ್ತವೆ. ಅಲ್ಲಿಯಂತೂ ಪರಮ ಚೈತನ್ಯ ಸ್ವಭಾವದ ಮೂಲಕ ಸುಂದರ ಪರಿಪೂರ್ಣ ಪರಮಾನಂದ ಸ್ವರೂಪನಿರುವಂಥ ಭಗವಾನ ಆತ್ಮನಲ್ಲಿ ಸ್ಥಿರತೆ ಮಾಡುತ್ತದೆ. ಇಂಥ ಜೀವನು ನಿಶ್ಚಯ ಮೋಕ್ಷಮಾರ್ಗವನ್ನು ಅವಲಂಬಿಸಿರುವಂಥವನಿದ್ದಾನೆ. ಶ್ರದ್ಧೆಯಲ್ಲಿಯಂತೂ ನಾಲ್ಕನೆಯ ಗುಣಸ್ಥಾನದಿಂದಲೇ ನಿಶ್ಚಯದ ಅವಲಂಬನವಿದೆ. ನಾಲ್ಕನೆಯ ಗುಣಸ್ಥಾನದಲ್ಲಿ ಕೂಡ ನಿಶ್ಚಯ ಸಮ್ಯಗ್ದರ್ಶನವಿದೆ. ಅದರಿಂದ ಅನಂತ ಸಂಸಾರದ ನಾಶವಾಗುತ್ತದೆ. ವ್ಯವಹಾರ ರತ್ನತ್ರಯದ ಶುಭರಾಗವು ಉದಯಭಾವವಿದೆ. ಕೇವಲ ಒಂದು ವ್ಯವಹಾರದಿಂದ ಸಂಸಾರದ ನಾಶವಾಗುವುದಿಲ್ಲ. ಏಕೆಂದರೆ ಆ ವ್ಯವಹಾರ ರತ್ನತ್ರಯವು ಸ್ವಯಂ ಸಂಸಾರವಿದೆ. ನಿಶ್ಚಯರತ್ನತ್ರಯ ಸಹಿತವಾಗಿರುವ ವ್ಯವಹಾರ ರತ್ನತ್ರಯದ ಭಾವವು ಕೂಡ ನಿಜವಾಗಿ ಸಂಸಾರವಿದೆ. ಅದರಿಂದ ರಹಿತವಿರುವ ಚಿದಾನಂದ ಸ್ವಭಾವದ ಶ್ರದ್ಧೆ-ಜ್ಞಾನ-ಲೀನತೆಯೇ ಮೋಕ್ಷದ ಉಪಾಯವಿದೆ. ಸಮ್ಯಗ್ದರ್ಶನವು ನಿಜವಾಗಿ ಸರಾಗವಿರುವುದಿಲ್ಲ. ರಾಗವಂತೂ ಚಾರಿತ್ರದ ದೋಷವಿದೆ. ಸಮ್ಯಗ್ದರ್ಶನದಲ್ಲಿ ರಾಗವು ಇರುವುದಿಲ್ಲ. ರಾಗವೇನೂ ಸಮ್ಯಗ್ದರ್ಶನದ ಹಾನಿ ಮಾಡುವುದಿಲ್ಲ. ರಾಗವಿದ್ದರೂ ಕೂಡ ಕ್ಷಾಯಿಕ ಸಮ್ಯಗ್ದರ್ಶನವು ಸಹ ಇರುವುದು ಇದು ನಾಲ್ಕನೆಯ ಗುಣಸ್ಥಾನದ ಮಾತು ಇದೆ. ಅಲ್ಲಿ ಇನ್ನೂ ಸ್ವರೂಪದಲ್ಲಿ ಸ್ಥಿರತೆಯ ವೀತರಾಗ ಭಾವವಿಲ್ಲ. ಶುಭರಾಗವು ವರ್ತಿಸುತ್ತದೆ. ಆ ಅಪೇಕ್ಷೆಯಿಂದ ಚಾರಿತ್ರದಲ್ಲಿ ವ್ಯವಹಾರದ ಅವಲಂಬನವಿದೆ. ಅನಂತರ ಸ್ವರೂಪದ ಅವಲಂಬನದಲ್ಲಿ ಸ್ಥಿರವಾಗುವುದರಿಂದ ರಾಗವು ಬಿಟ್ಟುಹೋಗುವುದು. ಅಲ್ಲಿ ನಿಶ್ಚಯದ ಅವಲಂಬನವಿದೆ. ಸ್ವಭಾವದ ಅವಲಂಬನದಿಂದ ಈ ರೀತಿಯಾಗಿ ಮೋಕ್ಷಮಾರ್ಗದಲ್ಲಿ ನಿಶ್ಚಯ-ವ್ಯವಹಾರದ ವರ್ಣನೆ ಮಾಡಲಾಯಿತು. ಈಗ ಯಾವನಿಗೆ ಆಂತರ್ಯದಲ್ಲಿ ಸ್ವಭಾವದ ಅರಿವಿಲ್ಲ ಮತ್ತು ನಿಶ್ಚಯವಿಲ್ಲದೆ ಒಂದು ವ್ಯವಹಾರವನ್ನೇ ಮೋಕ್ಷಮಾರ್ಗವೆಂದು ಮನ್ನಿಸಿಕೊಂಡಿದ್ದಾನೆ. ಅಂಥ ವ್ಯವಹಾರಾಭಾಸಿ ಅಜ್ಞಾನಿಯ ಮಾತು ಇದೆ.

ಒಂಭತ್ತನೆಯ ಗ್ರೈವೇಯಕದವರೆಗೆ ಹೋಗಲು ಯೋಗ್ಯವಾದ ಶುಭರಾಗವನ್ನು ದ್ರವ್ಯಲಿಂಗೀ ಮುನಿಗಳು ಮಾಡುತ್ತಾರೆ, ಆದರೆ ಅವರೆಂದೂ ಸ್ವ ಸನ್ಮುಖತೆಯನ್ನು ಮಾಡಿರುವುದಿಲ್ಲ. ಭಗವಂತರ ಆಜ್ಞೆಯ ಪ್ರಕಾರ ವ್ಯವಹಾರ ಮಾಡಿದರೆ ನಿಶ್ಚಯ ಮೋಕ್ಷಮಾರ್ಗ ಮತ್ತು ಮೋಕ್ಷವಾಗಿ ಹೋಗುತ್ತದೆಯೆಂಬ ಮಾತು ಸರ್ವಥಾ ಮಿಥ್ಯೆಯಿದೆ.

ಬದಾಮಿ ಮತ್ತು ಬ್ರಾಹ್ಮಿ ಮೊದಲಾದವುಗಳಿಂದ ಜ್ಞಾನದ ವಿಕಾಸವಾಗುತ್ತದೆಯೆಂಬ ಮನ್ನಣೆಯು ಮೂಢರದಿದೆ. ಜಿನಬಿಂಬದ ದರ್ಶನ, ವಂದನೆ ಮೊದಲಾದವುಗಳಿಂದ ಸಮ್ಯಗ್ದರ್ಶನವಾಗುತ್ತದೆ. ಶಾಸ್ತ್ರ-ಗುರುಗಳಿಂದ ಲಾಭವಾಗುತ್ತದೆಯೆಂಬುದೆಲ್ಲವು ಪರಾಶ್ರಯದ ಬುದ್ಧಿಯಿದೆ. ಪರದ್ರವ್ಯ-ಪರಕ್ಷೇತ್ರ-ಪರಕಾಲ-ಪರಭಾವದಿಂದ ಲಾಭ ಹಾನಿಯಾಗುತ್ತದೆಂದು ಮನ್ನಿಸುವವರಿಗೆ ನಿಮಿತ್ತದ ಆಧೀನವಾದ ದೃಷ್ಟಿಯಿದೆ.

ಶುದ್ಧ ಆಹಾರವು ದೊರಕಿದರೆ ಶರೀರ ಮತ್ತು ಮನಸ್ಸು ಶುದ್ಧವಾಗುತ್ತವೆಯೆಂದು ಮನ್ನಿಸುವವನಿಗೆ ಸ್ವ-ದ್ರವ್ಯಾತ್ಮಕವಾದ ಅಭೇದ ಸಾಧ್ಯ-ಸಾಧನವಿಲ್ಲ. ನಾನೇ ಜ್ಞಾನಾನಂದ ವೀತರಾಗ ಸ್ವಭಾವದಿಂದ ಪೂರ್ಣನಿದ್ದೇನೆನ್ನುವುದೇ ಸಾಧ್ಯವಿದೆ ಮತ್ತು ಸ್ವಾಶ್ರಯ ವೀತರಾಗತೆಯೇ ಸಾಧನವಿದೆಯೆಂದು ಯಾವನಿಗೆ ಅರಿವಿಲ್ಲ ಅವನು ಏಕಾಂತ ವ್ಯವಹಾರದಿಂದ ಏಕಾಕಿ ಖೇದ ಖಿನ್ನನಾಗುತ್ತಾನೆ. ಅವನಂತೂ ನಿಮಿತ್ತದಿಂದ ಲಾಭ-ಹಾನಿಯಾಗುತ್ತದೆಯೆಂದು ಮನ್ನಿಸಿ ಸಿಕ್ಕಿಹಾಕಿಕೊಂಡಿದ್ದಾನೆ. ಶುಭರಾಗ ಮಾಡಿದರೂ ಕೂಡ ಧರ್ಮವಾಗುವುದಿಲ್ಲ. ಶಕ್ತಿಯ ಅನುಸಾರ ವ್ರತ-ತ್ಯಾಗವಿರುತ್ತದೆ, ಆದರೆ ಪರಿಣಾಮದ ಸಾಮರ್ಥ್ಯವನ್ನು ಕಂಡುಕೊಳ್ಳಲು ಕೇವಲ ಹಟದಿಂದ ಮಾಡುವವನಿಗೆ ಖೇದವೇ ಆಗುತ್ತದೆ. ನಾನು ಮುಕ್ತಸ್ವರೂಪನಿದ್ದೇನೆಂಬ ದೃಷ್ಟಿಯಿಲ್ಲದಿರುವುದರಿಂದ ಪುನಃ ಪುನಃ ಪರದ್ರವ್ಯ ಸ್ವರೂಪವಿರುವ ಧರ್ಮಾಸ್ತಿಕಾಯ ಮೊದಲಾದವುಗಳ ಶ್ರದ್ಧಾದಿಗಳನ್ನು ಮಾಡುತ್ತಾನೆ. ಬಹಳಷ್ಟು ಶಾಸ್ತ್ರಗಳ ಪಠಣ ಮಾಡುವೆನೆಂದು ಪರಸನ್ಮುಖತೆಯಲ್ಲಿಯೇ

ಅವನಿಗೆ ಉತ್ಸಾಹ ವರ್ತಿಸುತ್ತದೆ. ಶಾಸ್ತ್ರಗಳ ಅಭ್ಯಾಸದ ನಿಷೇಧವಿಲ್ಲ, ಆದರೆ ಅವನು ಶಾಸ್ತ್ರಜ್ಞಾನದಲ್ಲಿ ಆತ್ಮಜ್ಞಾನವನ್ನು ಮನ್ನಿಸಿಕೊಂಡಿದ್ದಾನೆ ಪರಲಕ್ಷ್ಯದಿಂದ ಮತ್ತು ಪರದಿಂದ ಜ್ಞಾನವಾಗುತ್ತದೆಯೆಂದು ಮನ್ನಿಸಿದ್ದಾನೆ. ಆದರಿಂದ ಅವನನ್ನು ಖೇದ-ಖಿನ್ನನೆಂದು ಹೇಳಲಾಗಿದೆ.

ಅಜ್ಞಾನಿಯ ಆತ್ಮನು ಕೂಡ ಅನಾದಿಯಿಂದ ಸಹಜಾನಂದ ಮೂರ್ತಿಯಾದ ಜ್ಞಾಯಕನಿದ್ದಾನೆ, ಆದರೆ ಅವನು ಸ್ವಸನ್ಮುಖ ಬುದ್ಧಿಯನ್ನು ಮಾಡುವುದಿಲ್ಲ. ಮಿಥ್ಯಾಬುದ್ಧಿಯ ಮೂಲಕ ಅನ್ಯಥಾ ಮನ್ನಿಸುತ್ತಾನೆ. ಒಂದು ಸಮಯದಲ್ಲಿ ನಿಮಿತ್ತವಿದೆ, ರಾಗವಿದೆ. ಅಪೂರ್ಣ ಪರ್ಯಾಯವಿದೆ ಮತ್ತು ತ್ರಿಕಾಲೀ ಧ್ರುವ ಸ್ವಭಾವವಿದೆ. ಅದರಲ್ಲಿ ತ್ರಿಕಾಲಿ ಸ್ವಭಾವದ ಅಭಿರುಚಿ ಬಿಟ್ಟುಕೊಟ್ಟು ನಿಮಿತ್ತ, ರಾಗ ಮತ್ತು ಪರ್ಯಾಯದ ಅಭಿರುಚಿ ಮಾಡಿ ಅಜ್ಞಾನಿಯು ಅದರಲ್ಲಿ ತಡೆದು ನಿಂತು ಬಿಡುತ್ತಾನೆ.

ಬಹಳಷ್ಟು ಶಾಸ್ತ್ರಗಳನ್ನು ತಿಳಿದುಕೊಂಡು ಅವುಗಳ ಧಾರಣ ಮಾಡಿ ಅನೇಕ ಪ್ರಕಾರದ ವಿಕಲ್ಪದ ಜಾಲದಿಂದ ಕಲಂಕಿತವಾದ ಅಂತರಂಗ ವೃತ್ತಿಯನ್ನು ಧಾರಣ ಮಾಡುತ್ತಾನೆ, ಆದರೆ ಜ್ಞಾನವು ಆತ್ಮನೊಳಗಿಂದ ಬರುತ್ತದೆಯೆಂಬುದರ ಅರಿವು ಅವನಿಗಿಲ್ಲ. ಯಾರಿಗೆ ಇನ್ನೂ ಭವ್ಯ-ಅಭವ್ಯದ ಸಂಬಂಧದಲ್ಲಿ ಕೂಡ ಸಂದೇಹವು ವರ್ತಿಸುತ್ತದೆ ಅಂಥ ಜೀವರುಗಳು ವೀತರಾಗರ ವಾಣಿಯನ್ನು ಪಠಿಸಲು ಪಾತ್ರರಿಲ್ಲ. ಭವರಹಿತರಾದಂಥ ವೀತರಾಗರ ವಾಣಿಯು ಯಾರಿಗೆ ಹಿಡಿಸಿದೆ ಅವರಿಗೆ ಭವಗಳಿರುವುದಿಲ್ಲ. ಯಾರಿಗೆ ಅನಂತ ಭವಗಳ ಶಂಕೆಯು ನೋವನ್ನುಂಟು ಮಾಡುತ್ತಿರುವುದು ಅಂಥ ಜೀವರುಗಳು ಭವರಹಿತ ಪುರುಷನ ವಾಣಿಯ ನಿರ್ಣಯವನ್ನು ಎಲ್ಲಿಂದ ತಾನೆ ಮಾಡುವ ಸಾಧ್ಯತೆಯಿದೆ ? 'ನಾನು ಭವ್ಯನಿದ್ದೇನೆಯೋ ಅಥವಾ ಅಭವ್ಯನಿದ್ದೇನೆಯೋ ಎಂಬುದನ್ನು ಕೇವಲಿಗಳು ತಿಳಿಯುತ್ತಾರೆ ; ಎಂದರೆ ಇನ್ನೂ ಅನಂತ ಭವಗಳನ್ನು ಮಾಡುವುದಿದ್ದರೆ ! ಇಂಥ ಸಂದೇಹವು ಕೂಡ ಯಾರಿಗೆ ಹೊರಟು ಹೋಗಿಲ್ಲ ಆ ಜೀವರುಗಳು ಸರ್ವಜ್ಞರ ವಾಣಿಯ ನಿರ್ಣಯ ಮಾಡುವ ಪುರುಷಾರ್ಥವನ್ನು ಯಾವುದರ ಬಲದಿಂದ ಮಾಡುವರು ? ತಮ್ಮ ಚಿದಾನಂದ ಸ್ವಭಾವದ ನಿಃಶಂಕತೆಯನ್ನು ಹೊರತುಪಡಿಸಿ, ಏಕಾಕಿ ಶಾಸ್ತ್ರದ ಅಧ್ಯಯನದಿಂದ ಲಾಭವಿದೆಯೆಂದು ಮನ್ನಿಸಿದರೆ ಆ ಜೀವನು ವ್ಯವಹಾರಾಭಾಸಿಯಾದ ಮಿಥ್ಯಾದೃಷ್ಟಿಯಿದ್ದಾನೆ. ಯಾವನಿಗೆ ಚಿದಾನಂದ ಸ್ವಭಾವದ ಅರಿವುಂಟಾಗಿದೆ ಅವನಿಗೆ ಸರ್ವಜ್ಞ ದೇವರ ಕುರಿತು ನಿಃಶಂಕತೆಯಿದೆ ಮತ್ತು ಅವನು ವ್ಯವಹಾರವನ್ನು ತುಚ್ಛವಾಗಿ ಗಣಿಸಿದ್ದಾನೆ. ಅಜ್ಞಾನಿಗೆ ಕೇವಲ ಒಂದು ವ್ಯವಹಾರವು ಬರುತ್ತದೆ, ಆದರೆ ಆಂತರ್ಯದಲ್ಲಿ ಚೈತನ್ಯದ್ದಂತೂ ಸುಳಿವೇ ದೊರಕುವುದಿಲ್ಲವೆಂದಮೇಲೆ ಅವನಿಗೆ ಏಕಾಕಿ ಶಾಸ್ತ್ರದ ಪಠಣದಿಂದಾದರೂ ಯಾವ ಲಾಭವಿದೆ ? ಸ್ವಭಾವದ ನಿಃಶಂಕತೆಯು ಪ್ರಕಟವಾಗಿಲ್ಲ ಮತ್ತೆ ಕೇವಲ ಶಾಸ್ತ್ರದ ಅವಲಂಬನದಿಂದ ಶುಭವಿಕಲ್ಪದಲ್ಲಿಯೇ ನಿಂತುಕೊಂಡಿದ್ದರೆ ಅವನ ಅಂತರಂಗದ ವೃತ್ತಿಯು ಕಲಂಕಿತವಿದೆ. ಅವನಿಗೆ ಸಮ್ಯಕ್ ಶ್ರದ್ಧೆ-ಜ್ಞಾನದ ಲಾಭವಾಗುವುದಿಲ್ಲ. ಬಹಳ ಮಾಡಿಯಂತೂ ಪುಣ್ಯಕಟ್ಟಿಕೊಂಡು ಸ್ವರ್ಗದಲ್ಲಿ ಹೋಗುವನು ಮತ್ತು ಚತುರ್ಗತಿಗಳಲ್ಲಿ ಭ್ರಮಣ ಮಾಡುವನು, ಆದರೆ ಸ್ವಭಾವದ ಅವಲಂಬನವಿಲ್ಲದೆ ಕಲ್ಯಾಣವಾಗುವುದಿಲ್ಲ.

ನಿಶ್ಚಯ-ವ್ಯವಹಾರರೂಪ ಮೋಕ್ಷಮಾರ್ಗದ ವರ್ಣನೆ ಮಾಡಲಾಯಿತು. ಚಿದಾನಂದ ಸ್ವಭಾವದ ಆಶ್ರಯದಿಂದ ಯಾವ ನಿಶ್ಚಯ ಶ್ರದ್ಧೆ-ಜ್ಞಾನ-ಚಾರಿತ್ರವು ಪ್ರಕಟವಾಗಿದೆ ಅದು ನಿಶ್ಚಯ ಮೋಕ್ಷಮಾರ್ಗವಿದೆ. ಅಲ್ಲಿ ಜತೆಯಲ್ಲಿ ಯಾವ ಪಂಚಮಹಾವ್ರತ ಮೊದಲಾದವುಗಳ ವೃತ್ತಿಯು ಉತ್ಪನ್ನವಾಗುತ್ತದೆ ಅದನ್ನು ಉಪಚಾರದಿಂದ ವ್ಯವಹಾರ ಮೋಕ್ಷಮಾರ್ಗವೆಂದು ಹೇಳಿದೆ, ಆದರೆ ಯಾವ ಜೀವನರುಗಳು ಇಂಥ ಮೋಕ್ಷಮಾರ್ಗವನ್ನು ತಿಳಿದುಕೊಳ್ಳುವುದಿಲ್ಲ ಮತ್ತು ಒಂದು ವ್ಯವಹಾರದ ಅವಲಂಬನದಿಂದಲೇ ಧರ್ಮ ಮನ್ನಿಸಿದ್ದಾರೆ ಅಂಥ ಮಿಥ್ಯಾದೃಷ್ಟಿ ಜೀವರುಗಳ ಮಾತನ್ನು ಈಗ ಹೇಳಲಾಗುತ್ತದೆ.

ನಿಮಿತ್ತದಿಂದ ವಿಕಾರವಾಗುತ್ತದೆ ಮತ್ತು ಎಷ್ಟು ವಿಕಾರವಾಗುತ್ತದೆ ಅಷ್ಟು ನನ್ನ ಸ್ವರೂಪವಿದೆಯೆಂದು ಅಜ್ಞಾನೀ ಜೀವನು ಮನ್ನಿಸುತ್ತಾನೆ. ಅವನಿಗೆ ಅಂತರ್ಯದಲ್ಲಿ ಜ್ಞಾಯಕ ಚಿದಾನಂದ ಸ್ವಭಾವದ ದೃಷ್ಟಿಯಿಲ್ಲ. ಇಂಥ ಜೀವನು ಧರ್ಮಾಸ್ತಿಕಾಯ ಮೊದಲಾದ ಪರ ಪದಾರ್ಥಗಳ ಶ್ರದ್ಧೆ ಮಾಡುತ್ತಾನೆ ಹಾಗೂ ಶಾಸ್ತ್ರಗಳ ವಾಚನ-ಮನನ ಮಾಡುತ್ತಾನೆ. ಅದರಲ್ಲಿ ಶುಭರಾಗವಿದೆ. ಅದನ್ನೇ ಅವನು ಮೋಕ್ಷಮಾರ್ಗವೆಂದು ಮನ್ನಿಸಿ ಕಲಂಕಿತ ವೃತ್ತಿಯುಳ್ಳವನಾಗುತ್ತಿದ್ದಾನೆ. ಅನೇಕ ಪ್ರಕಾರದ ದ್ರವ್ಯಲಿಂಗದ ಅವಲಂಬನೆ ಮಾಡಿ ಪಂಚಮಹಾವ್ರತಗಳ ವಿಕಲ್ಪವನ್ನು ಧರ್ಮವೆಂದು ಮನ್ನಿಸಿದ್ದಾನೆ, ಆದರೆ ಜ್ಞಾನಸ್ವಭಾವದ ದೃಷ್ಟಿಯಿಲ್ಲದೆ ವ್ರತವಿರುವುದೇ ಇಲ್ಲ. ಬಹಿರಂಗ ವ್ರತ-ತಪ ಮೊದಲಾದ ಕ್ರಿಯಾಕಾಂಡದ ಶುಭವಿಕಲ್ಪದಲ್ಲಿ ಅಜ್ಞಾನಿಯು ಧರ್ಮವನ್ನು ಮನ್ನಿಸಿದ್ದಾನೆ ; ಆದರೆ ಧ್ರುವ ಸ್ವಭಾವದ ಆಶ್ರಯದ ಲೀನತೆಯಲ್ಲಿ ರಾಗವಾಗುವುದಿಲ್ಲ ಮತ್ತು ರಾಗದ ನಿಮಿತ್ತ ರೂಪವಿರುವ ಪದಾರ್ಥಗಳ ಸಂಯೋಗವು ಕೂಡ ಬಿಟ್ಟು ಹೋಗುತ್ತದೆ. ಅವನಿಗೆ ಅದರ ಅರಿವಿರುವುದಿಲ್ಲ. ಶರೀರದ ಕ್ರಿಯೆಯಂತೂ ಜಡದ ಕಾರಣದಿಂದ ಆಗುತ್ತದೆ. ಆಹಾರದ ಕ್ರಿಯೆಯು ಜಡದ ಕಾರಣದಿಂದ ಆಗುತ್ತದೆ. ಆತ್ಮನು ಆಹಾರವನ್ನು ತರುವುದಿಲ್ಲ ಮತ್ತು ಶುದ್ಧ ಆಹಾರದ ಕಾರಣದಿಂದ ಆತ್ಮನಿಗೆ ಯಾವುದೇ ಲಾಭವಾಗುತ್ತದೆಯೆಂಬುದಾಗಿಲ್ಲ. ಅಜ್ಞಾನಿಯಂತೂ ಶುದ್ಧ ಆಹಾರದಲ್ಲಿಯೇ ಧರ್ಮವು ಬರುತ್ತಿರಬೇಕೆಂದು ತಿಳಿದುಕೊಂಡಿದ್ದಾನೆ. ಹೀಗೆ ಮನ್ನಿಸಿ ಅಲ್ಲಿಯೇ ಬಹಳಷ್ಟು ಸಮಯ ನಿಂತುಕೊಳ್ಳುತ್ತಾನೆ, ಆದರೆ ಆಹಾರ ಮತ್ತು ಆಹಾರದ ಕುರಿತಾಗಿರುವ ವಿಕಲ್ಪ ಇವೆರಡೂ ನಾನಿಲ್ಲ, ನಾನಂತೂ ಜ್ಞಾನಾನಂದ ಸ್ವಭಾವನಿದ್ದೇನೆಂದು ಅವನು ತಿಳಿದುಕೊಳ್ಳುವುದಿಲ್ಲ. ಆ ಜೀವನು ಏಕಾಂತ ವ್ಯವಹಾರಮೂಢ ಮಿಥ್ಯಾದೃಷ್ಟಿಯಿದ್ದಾನೆ.

ಮಿಥ್ಯಾತ್ವ ಭಾವದ ಕಾರಣದಿಂದ ಆ ಜೀವನು ಧರ್ಮರಾಗದಿಂದ ಪುಣ್ಯಕ್ರಿಯೆಯ ಅಭಿರುಚಿ ಮಾಡುತ್ತಾನೆ; ಪುಣ್ಯ ಮಾಡುತ್ತ ಮಾಡುತ್ತ ಧರ್ಮವಾಗಿ ಹೋಗುತ್ತದೆಯೆಂದು ಆ ಜೀವನು ರಾಗವನ್ನು ಧರ್ಮದ ಸಾಧನವೆಂದು ಮನ್ನಿಸಿದ್ದಾನೆ, ಆದರೆ ಅವನು ಸ್ವಭಾವದ ಸಾಧನವನ್ನು ತಿಳಿದುಕೊಳ್ಳುವುದಿಲ್ಲ ಸ್ವಭಾವವನ್ನು ತಿಳಿದುಕೊಂಡು ಅದರ ಆಶ್ರಯದಿಂದ ಧರ್ಮವನ್ನು ಪ್ರಕಟಪಡಿಸಿಕೊಂಡಿದ್ದರೆ ಶುಭರಾಗದಲ್ಲಿ ಸಾಧನದ ಆರೋಪವು ಬರುತ್ತದೆ, ಆದರೆ ಅಜ್ಞಾನಿಯಂತೂ ಶುಭರಾಗದಲ್ಲಿಯೇ ಧರ್ಮವನ್ನು ಮನ್ನಿಸಿರುವುದರಿಂದ ಅವನಿಗಂತೂ ಶುಭರಾಗದಲ್ಲಿ ಧರ್ಮದ ಆರೋಪವು ಕೂಡ ಬರುವುದಿಲ್ಲ. ಏಂದಾದರೊಮ್ಮೆ ವ್ರತದ ಪರಿಣಾಮ ಮಾಡಿ ಅದನ್ನು ಧರ್ಮವೆಂದು ಮನ್ನಿಸಿದ್ದಾನೆ. ಕೆಲವೊಮ್ಮೆ ಶಾಸ್ತ್ರದ ಅಭ್ಯಾಸದಲ್ಲಿ, ಕೆಲವೊಮ್ಮೆ ದಯೆ ಮೊದಲಾದುವಲ್ಲಿ ಧರ್ಮವನ್ನು ಮನ್ನಿಸಿದ್ದಾನೆ ಸಮ್ಯಗ್ದರ್ಶನದ ನಾಲ್ಕು ವ್ಯವಹಾರ ಲಕ್ಷಣ ಆಸ್ತಿಕ್ಯ, ಅನುಕಂಪೆ ಮೊದಲಾದುವಿದ್ದು ಅವು ಶುಭಭಾವವಿವೆ.ಆ ಶುಭಭಾವದ ಆಚರಣೆ ಮಾಡಿ ಅಜ್ಞಾನಿಯು ಅದನ್ನು ಧರ್ಮವೆಂದು ಮನ್ನಿಸಿದ್ದಾನೆ ; ಇತರರನ್ನು ನೋಡಿ ಅವರ ಮೇಲೆ ಅನುಕಂಪೆ ಬರುತ್ತದೆ. ಅಲ್ಲಿ ಅಜ್ಞಾನಿಯು ಪರದ ಕಾರಣದಿಂದ ಅನುಕಂಪೆಯನ್ನು ಮನ್ನಿಸಿದ್ದಾನೆ. ಆ ಅನುಕಂಪೆಯನ್ನು ಪ್ರವಚನಸಾರದಲ್ಲಿ ದರ್ಶನಮೋಹದ ಲಕ್ಷಣವೆಂದು ಹೇಳಿದೆ. ಪರ ಜೀವನು ತನ್ನ ಮೋಹಭಾವದಿಂದ ದುಃಖಿಯಾಗುತ್ತಾನೆ. ಆ ಜೀವನು ಸಂಯೋಗದ ಕಾರಣದಿಂದೇನು ದುಃಖಿಯಾಗುವುದಿಲ್ಲ. ಆದುದರಿಂದ ಇನ್ನೊಂದು ಜೀವವು ಅವನ ದುಃಖವನ್ನು ನಾಶಮಾಡುವ ಸಾಧ್ಯತೆಯಿಲ್ಲ. ಆ ಜೀವನು ತಾನು ತನ್ನ ಜ್ಞಾನ ಮಾಡಿಕೊಂಡು ಮೋಹ ತ್ಯಜಿಸಿದರೆ ಅವನ ದುಃಖವು ದೂರವಾಗುವುದು. ಇತರರ ದುಃಖ ದೂರ ಮಾಡುವ ಶಕ್ತಿಯು ಮೂರುಕಾಲ ಮೂರು ಲೋಕದಲ್ಲಿ ಯಾರ ಹತ್ತಿರವೂ ಇಲ್ಲವೆಂಬುದನ್ನು ತಿಳಿದುಕೊಳ್ಳದೆ ಅಜ್ಞಾನೀ ಜೀವನು ಮನ್ನಿಸಿಕೊಂಡಿರುವುದೇನೆಂದರೆ- ನಾನು ಬದಲಿಸಿ ಬಿಡುತ್ತೇನೆಂದು ಅವನು ಪರದ ಕರ್ತೃತ್ವವನ್ನು ಮನ್ನಿಸಿದ್ದಾನೆ. ಅವನಿಗೆ ಜ್ಞಾತಾ-ದೃಷ್ಟಾ ಸ್ವಭಾವಿಯಾದ ಆತ್ಮನ ಅರಿವಿಲ್ಲದಿರುವುದರಿಂದ ಅವನ ಆ ದಯೆಯು ಮಿಥ್ಯಾತ್ವ ಸಹಿತವಿದೆ. ಅವನು ವ್ಯವಹಾರಾಭಾಸಿಯಿದ್ದಾನೆ. ಜ್ಞಾಯಕ ಸ್ವಭಾವದ ಅಭಿರುಚಿಯಿರುಬೇಕಾಗುವುದು. ಅದಕ್ಕೆ ಪ್ರತಿಯಾಗಿ ಪರವನ್ನು ನೋಡಿ ಅನುಕಂಪೆಯ ಭಾವವಾಗುವುದನ್ನು

ಮನ್ನಿಸಿದ್ದಾನೆ ಮತ್ತು ಅನುಕಂಪೆಯನ್ನು ಧರ್ಮವೆಂದು ಮನ್ನಿಸಿದ್ದಾನೆ. ಅಂಥ ಜೀವನು ಮೂಢನಿದ್ದಾನೆ, ವ್ಯವಹಾರಾಭಾಸಿಯಿದ್ದಾನೆ.

ಜಗತ್ತಿನ ಪದಾರ್ಥಗಳು ಸ್ವತಂತ್ರವಿವೆ ಮತ್ತು ಅವುಗಳ ವರ್ತಮಾನವು ಸ್ವಯಂ ಅವುಗಳ ಕಾರಣದಿಂದ ಇದೆ. ಅಲ್ಲಿ ನಾನು ಪರಪದಾರ್ಥಗಳ ಪರ್ಯಾಯವನ್ನು ಬದಲಿಸಿ ಬಿಡುತ್ತೇನೆಂದು ಅನ್ಯ ಜೀವರುಗಳು ಮನ್ನಿಸಿಕೊಂಡಿದ್ದಾರೆ. ಅದು ಅವರದು ವಿಪರೀತ ಮನ್ನಣೆಯಿದೆ; ಅಂಥ ವಿಪರೀತ ಮನ್ನಣೆಯುಳ್ಳ ಜೀವರುಗಳು ಬೇಕಾದರೆ ವ್ರತೀ ನಾಮ ಧರಿಸಿದವರಿರಲಿ ಅಥವಾ ಮುನಿನಾಮ ಧರಿಸಿದವರಿರಲಿ, ಆದರೂ ಕೂಡ ಅವರಿಗೆ ಧರ್ಮವಾಗುವುದಿಲ್ಲ. ನಾನು ಪರಜೀವದ ಮೇಲೆ ದಯೆ ಮಾಡಿ ಅವನ ದುಃಖವನ್ನು ದೂರಮಾಡುವೆನೆಂಬ ಮನ್ನಣೆಯಲ್ಲಿ ತಾನು ತನ್ನ ಆತ್ಮನ ಮಹಾ ಹಿಂಸೆಯನ್ನೇ ಮಾಡುತ್ತಿದ್ದಾನೆ. ಅವನಿಗೆ ಅದರ ಅರಿವಿಲ್ಲ. ಆರೂ ದ್ರವ್ಯಗಳು ಪೃಥಕ್ ಪೃಥಕ್ ಸ್ವಭಾವದಿಂದ ತಮ್ಮ ತಮ್ಮ ಕಾರ್ಯ ಮಾಡುತ್ತಲಿವೆ. ಅದಕ್ಕೆ ಪ್ರತಿಯಾಗಿ ಪರದ ಕಾರಣದಿಂದ ನಾನು ಮತ್ತು ನನ್ನ ಕಾರಣದಿಂದ ಪರವೆಂದು ಅಜ್ಞಾನಿಯು ಮನ್ನಿಸಿಕೊಂಡಿದ್ದಾನೆ. ಅವನಿಗೆ ವಸ್ತುವಿನ ಸ್ವತಂತ್ರತೆಯ ಅರಿವಿಲ್ಲ. ಎಂದರೆ ಅನುಕಂಪೆಯ ನೆಪದಿಂದ ಕೂಡ ಅವನು ಮಿಥ್ಯಾತ್ವವನ್ನೇ ಸೇವಿಸುತ್ತಾನೆ. ಅನುಕಂಪೆಯಲ್ಲಿ ಒಂದಿಷ್ಟು ಶುಭಭಾವ ಮಾಡಿದರೂ ಕೂಡ ಜತೆಯಲ್ಲಿ ಮಿಥ್ಯಾತ್ವದ ವಿಷವು ಸಂಯುಕ್ತವಿದೆ. ಚಿದಾನಂದಸ್ವರೂಪ ಆತ್ಮನ ಅರಿವಿಲ್ಲದೆ ಒಂದು ಪರದ ಅನುಕಂಪೆ ಮಾಡುವುದನ್ನು ಮನ್ನಿಸಿದ್ದಾನೆ. ಅವನಿಗೆ ನಿಮಿತ್ತದ ಅಥವಾ ವ್ಯವಹಾರದ್ದು ಕೂಡ ಅರಿವಿಲ್ಲ. ಏಕೆಂದರೆ ಪರಜೀವಗಳಿಗೆ ಯಾವ ದುಃಖವಿದೆ ಅದು ನಿಮಿತ್ತದ ಕಾರಣದಿಂದ ಆಗುವುದಿಲ್ಲ, ಆದರೆ ತನ್ನ ಪರ್ಯಾಯದಲ್ಲಿ ಅಜ್ಞಾನದ ಕಾರಣದಿಂದ ದುಃಖವಿದೆ. ಅದರಂತೆ ತನಗೆ ಅನುಕಂಪೆಯಾಗಿದೆ ಅದು ಪರನಿಮಿತ್ತದ ಕಾರಣದಿಂದ ಆಗಿಲ್ಲ ; ಆದರೆ ಅದು ತನ್ನ ರಾಗದ ಕಾರಣದಿಂದ ಆಗಿದೆ. ಹೀಗೆ ಉಪಾದಾನ-ನಿಮಿತ್ತವನ್ನು ಕೂಡ ಯಾವನು ಸ್ವತಂತ್ರವೆಂದು ತಿಳಿದುಕೊಳ್ಳುವುದಿಲ್ಲ ಅವನಿಗೆ ಚಿದಾನಂದ ಸ್ವಭಾವವು ರಾಗದಿಂದ ಕೂಡ ಭಿನ್ನವಿದೆಯೆಂಬುದರ ಅರಿವಾಗುವುದಿಲ್ಲ ಮತ್ತು ಅದಿಲ್ಲದೆ ಧರ್ಮವು ಕಿಂಚಿತ್ತೂ ಆಗುವುದಿಲ್ಲ. ಇಲ್ಲಿ ಅನುಕಂಪೆಯ ರಾಗವಾಗಿದೆ ಅದು ಕೂಡ ಅಪರಾಧವಿದೆಯೆಂದ ಮೇಲೆ ಆ ಅಪರಾಧದಿಂದ ಪರದ ಕಲ್ಯಾಣವಾಗುತ್ತದೆಯೆಂಬ ಮನ್ನಣೆಯಂತೂ ಮಿಥ್ಯಾತ್ವವಿದೆ. ನಿನ್ನಲ್ಲಿ ರಾಗವಾಗುತ್ತದೆ ಅದು ಕೂಡ ಕಲಂಕವಿದೆಯೆಂದ ಮೇಲೆ ಆ ಕಲಂಕಭಾವದ ಆಧಾರದಿಂದ ಪರಜೀವವು ಸುಖಿಯಾಗುತ್ತದೆಯೆಂಬುದು ಹೇಗೆ ಸಂಭವವಿದೆ ? ಪರಜೀವವಂತೂ ತನ್ನ ಪರಿಣಾಮದಿಂದ ಬಂಧಿಸಲ್ಪಡುತ್ತದೆ ಅಥವಾ ಮುಕ್ತವಾಗುತ್ತದೆ. ಸುಖಿ-ದುಃಖಿಯು ತನ್ನ ಪರ್ಯಾಯದ ಯೋಗ್ಯತೆಯ ಅನುಸಾರ ಆಗುತ್ತದೆ. ಈ ಜೀವದ ಅಧ್ಯವಸಾನದ ಆಧೀನ ಪರಜೀವದ ಪರ್ಯಾಯವಾಗುವುದಿಲ್ಲ. ಇದೇ ಪ್ರಕಾರ ಆಹಾರದ ಶುದ್ಧಿಯ ಆಶ್ರಯದಿಂದ ಆತ್ಮನ ಪರ್ಯಾಯವಾಗುವುದಿಲ್ಲ. ಶುದ್ಧ ಆಹಾರವಿದ್ದರೆ ನನ್ನ ಪರ್ಯಾಯವು ಸುಧಾರಿಸುತ್ತದೆಯೆಂದು ಮನ್ನಿಸುವವನು ಕೂಡ ಮೂಢನಿದ್ದಾನೆ. ಶುದ್ಧತೆಯಂತೂ ಜ್ಞಾನಾನಂದ ಸ್ವಭಾವದ ಆಶ್ರಯದಿಂದ ಆಗುತ್ತದೆಯೆಂಬುದನ್ನು ಅವನು ತಿಳಿಯುವುದಿಲ್ಲ.

ಅಭವ್ಯ ಜೀವನು ಕೂಡ ವ್ಯವಹಾರದ ಪಕ್ಷವನ್ನು ಹಿಡಿಯುತ್ತಾನೆ. ಸ್ವಭಾವದ ದೃಷ್ಟಿಯಿಲ್ಲದೆ ವ್ರತ, ತಪ ಆಚರಿಸಲಿ, ಶಾಸ್ತ್ರಗಳ ಪಠಣೆ ಮಾಡಲಿ, ಕ್ಷಮೆ ಧರಿಸಲಿ, ಆದರೆ ಅಂತರ್ಯದಲ್ಲಿ ಸ್ವಭಾವವು ಹೇಗಿದೆಯೆಂಬುದರ ಅಭಿರುಚಿ ಮಾಡುವುದಿಲ್ಲ. ಧರ್ಮಾತ್ಮ ಜೀವನಿಗೆ ತನ್ನ ಚಿದಾನಂದ ಸ್ವಭಾವದ ದೃಷ್ಟಿಯೆಂದೂ ಬಿಟ್ಟು ಹೋಗುವುದಿಲ್ಲ. ಚೈತನ್ಯ ಸ್ವಭಾವದ ದೃಷ್ಟಿ ಮತ್ತು ಅವಲಂಬನದಿಂದಲೇ ರಾಗವು ಬಿಟ್ಟುಹೋಗುತ್ತದೆ. ಇದನ್ನು ಹೊರತುಪಡಿಸಿ ಪರದ ಅವಲಂಬನದಿಂದ ರಾಗವು ನಿಜವಾಗಿ ಬಿಟ್ಟು ಹೋಗುವುದಿಲ್ಲ. ಅಜ್ಞಾನಿಯು ರಾಗದ ಮಂದತೆ ಮಾಡಿ ಅದನ್ನು ಧರ್ಮವೆಂದು ಮನ್ನಿಸಿದ್ದಾನೆ; ಯಾವನಿಗೆ ಇನ್ನೂ ಪರದ ಕಾರಣದಿಂದ ನನಗೆ ವಿಕಾರವಾಗುತ್ತದೆಯೆಂಬ ಬುದ್ಧಿಯಿದೆ ಅವನಿಗೆ ರಾಗದ ಮಂದತೆಯು ಕೂಡ ಯಥಾರ್ಥವಿರುವುದಿಲ್ಲ. ಅಜ್ಞಾನಿಯು ಪರದ ಲಕ್ಷ್ಯದಿಂದ ಕ್ಷಮೆಮಾಡುತ್ತಾನೆ,

ಬ್ರಹ್ಮಚರ್ಯದ ಶುಭಭಾವವಿಡುತ್ತಾನೆ ಅದನ್ನು ಅವನು ಧರ್ಮವೆಂದು ಮನ್ನಿಸುತ್ತಾನೆ, ಆದರೆ ಆಂತರ್ಯದಲ್ಲಿ ರಾಗದಿಂದ ಅತೀತನಾದ ಶುದ್ಧಕಾರಣಪರಮಾತ್ಮನು ನಾನಿದ್ದೇನೆಂಬುದರ ಅರಿವು ಅವನಿಗಿಲ್ಲ. ಬ್ರಹ್ಮಾನಂದ ಚೈತನ್ಯ ಪ್ರಭುವಿನ ದೃಷ್ಟಿಯಿಲ್ಲದೆ ಬ್ರಹ್ಮಚರ್ಯವು ಎಲ್ಲಿಂದ ಬರುವುದು ? ರಾಗದ ಅಭಾವವು ಎಲ್ಲಿಂದ ಆಗುವುದು ? ನಮಗಂತೂ ಮೋಕ್ಷದಶೆಯೇ ಬೇಕೆಂದು ಅಜ್ಞಾನಿಯು ಎಂದಾದರೊಮ್ಮೆ ವೈರಾಗ್ಯದ ವಿಚಾರ ಮಾಡುತ್ತಾನೆ. ಕೆಲವೊಮ್ಮೆ ಅವನು ಆಸ್ತಿಕ್ಯಭಾವವನ್ನು ಧಾರಣ ಮಾಡುತ್ತಾನೆ. ಎಂದರೆ ಭಗವಂತರು ನೋಡಿದ್ದಾರೆ ಅದೇ ಪ್ರಕಾರ ವಸ್ತುಸ್ವರೂಪವಿದೆಯೆಂದು ಪರಾಶ್ರಯದಿಂದ ಆಸ್ತಿಕ್ಯಭಾವ ಮಾಡುತ್ತಾನೆ. ಆದರೆ ಜ್ಞಾನಸ್ವಭಾವದ ಪ್ರತೀತಿ ಪೂರ್ವಕ ಸ್ವಯಂ ತಿಳಿದುಕೊಳ್ಳುವುದಿಲ್ಲ. ಎಂದರೆ ಆಸ್ತಿಕ್ಯತೆ ಮೊದಲಾದವುಗಳದ್ದು ಕೇವಲ ಶುಭರಾಗವಿದೆ, ಅವನು ಏಕಾಂತ ವ್ಯವಹಾರಾವಲಂಬಿಯಿದ್ದಾನೆ. ಭಗವಂತರ ವಚನಗಳಲ್ಲಿ ಸಂದೇಹ ಪಟ್ಟುಕೊಳ್ಳಬಾರದೆಂದು ಅವನು ಹೇಳುತ್ತಾನೆ, ಆದರೆ ನಿಶ್ಚಯ ಸ್ವಾಶ್ರಯವಿಲ್ಲದೆ ನಿಃಶಂಕ ಮೊದಲಾದ ಸಮ್ಯಗ್ದರ್ಶನದ ಎಂಟು ಅಂಗಗಳು ಯಥಾರ್ಥವಿರುವುದಿಲ್ಲ.

ರತ್ನಕರಂಡ ಶ್ರಾವಕಾಚಾರದಲ್ಲಿ ನಿಃಶಂಕಿತ ಅಂಗದ ಸಲುವಾಗಿ ಅಂಜನಚೋರನ ಕಥೆಯು ಬರುತ್ತದೆ. ಅವನು ಕೇವಲ ಶಂಕೆ ಮಾಡಲಿಲ್ಲ, ಅದರಿಂದ ಅವನನ್ನು ಧರ್ಮಾತ್ಮ ಜೀವದ ರೂಪದಲ್ಲಿ ಗಣಿಸಲಾಯಿತು. ದೋಷರಹಿತ ವ್ಯವಹಾರ ಸಮ್ಯಕ್ತ್ವದ ಅಂಗ ಪಾಲಿಸಿ, ದ್ರವ್ಯಲಿಂಗೀ ಮುನಿಯಾಗಿ, ಇಪ್ಪತ್ತೆಂಟು ಮೂಲ ಗುಣಗಳನ್ನು ಪಾಲಿಸಿ, ಹನ್ನೊಂದು ಅಂಗಗಳನ್ನು ಅಭ್ಯಸಿಸಿ, ಶುಕ್ಲ ಲೇಶ್ಯ ಮಾಡಿ ಅನಂತಬಾರಿ ಒಂಭತ್ತನೆಯ ಗ್ರೈವೇಯಕವರೆಗೆ ಹೋದರೂ ಅವನನ್ನು ಆರಾಧಕನೆಂದು ಗಣಿಸಲಾಗಲಿಲ್ಲ. ಅದರ ಕಾರಣವೇನು ?

ಯಾವ ಜೀವನು ಭವಿಷ್ಯದಲ್ಲಿ ಸ್ವಾನುಭವದಿಂದ ನಿಶ್ಚಯ ಸಮ್ಯಕ್ತ್ವ ಮೊದಲಾದುವನ್ನು ಪಡೆದು ಮೋಕ್ಷಕ್ಕೆ ಹೋದನು ಅವನನ್ನು ಮೊದಲಿನ ಯಾವುದೇ ಒಂದು ಪ್ರಕಾರದಲ್ಲಿ ನಂತರದ ಸತ್ಯಾರ್ಥ ಧರ್ಮದ ಆರೋಪ ಮಾಡಿ ಧರ್ಮಾತ್ಮನೆಂದು ಹೇಳಿದೆ. ಕಥಾನುಯೋಗದಲ್ಲಿ ಅವನನ್ನು ನಿಃಶಂಕತೆ ಮೊದಲಾಗಿ ಹೇಳಲಾಗಿದೆ, ಆದರೆ ಭವಿಷ್ಯದಲ್ಲಿ ಯಾವ ಜೀವನು ಸಮ್ಯಗ್ದರ್ಶನ ಪಡೆಯುವುದಿಲ್ಲ ಅಂಥ ಜೀವದ ಶುಭಭಾವದಲ್ಲಿ ನಿಃಶಂಕತೆ ಮೊದಲಾದವುಗಳ ಆರೋಪವು ಕೂಡ ಬರುವುದಿಲ್ಲ. ಸಹಜ ಸ್ವಭಾವದ ಅವಲಂಬನವಿಲ್ಲದೆ ಬೇಕಾದಷ್ಟು ದೋಷ ದೂರ ಮಾಡಿ ವ್ಯವಹಾರ ರತ್ನತ್ರಯ ಪಾಲಿಸಲಿ, ನವತತ್ತ್ವಗಳಲ್ಲಿ ಶಂಕೆ ಮಾಡದಿದ್ದರೂ ಕೂಡ ಅವನನ್ನು ಧರ್ಮಾತ್ಮನೆಂದು ಗಣಿಸಲಾಗಿಲ್ಲ. ಏಕೆಂದರೆ ತಮ್ಮ ಶುದ್ಧಾತ್ಮನ ಆಶ್ರಯದಿಂದಲೇ ಸಮ್ಯಗ್ದರ್ಶನಾದಿ ಧರ್ಮವಾಗುತ್ತದೆ. ಅದರದು ಅವನಿಗೆ ಅರಿವಿಲ್ಲ. ಯಾವನು ಧರ್ಮ ಪಡೆದುಕೊಂಡಿದ್ದಾನೆ ಅವನಿಗೆ ಮೊದಲಿನ ನಿಃಶಂಕಿತ ಮೊದಲಾದ ಒಂದು ಮಾತಿನ ಆರೋಪ ಮಾಡಿ ಕಾರಣವನ್ನು ಹೇಳಲಾಗುತ್ತದೆ, ಆದರೆ ಧರ್ಮ ಪಡೆದಿರುವುದಂತೂ ನಿರ್ವಿಕಲ್ಪ ನಿಶ್ಚಯ ಸ್ವಾಶ್ರಯದಿಂದಲೇ ಪಡೆದುಕೊಂಡಿದ್ದಾನೆ ಅದೇ ಬಲಿಷ್ಠವಾದ ನಿಯಮವಿದೆ.

ಓರ್ವನು ಸ್ವದ್ರವ್ಯದ ಆಶ್ರಯದಿಂದ ಸಮ್ಯಕ್ತ್ವ ಪಡೆಯುತ್ತಾನೆ ಮತ್ತೆ ಇನ್ನೋರ್ವನು ಚರಣಾನುಯೋಗದ ಅಪೇಕ್ಷೆಯಿಂದ ವ್ಯವಹಾರ ಶುಭರಾಗದಿಂದ ಸಮ್ಯಕ್ತ್ವಾದಿ ಧರ್ಮ ಪಡೆಯುತ್ತಾನೆಂಬುದಾಗಿ ವಸ್ತುಸ್ವರೂಪವಿಲ್ಲ. ವರ್ತಮಾನ ರಾಗದ ಆಶ್ರಯದಿಂದ ಸಮ್ಯಗ್ದರ್ಶನ ಪಡೆಯುವುದಿಲ್ಲ, ಆದರೆ ಸ್ವಭಾವದ ಆಶ್ರಯದಿಂದಲೇ ಸಮ್ಯಗ್ದರ್ಶನ ಪಡೆಯುತ್ತಾನೆ. ಇದು ಮೂರು ಕಾಲದಲ್ಲೂ ಒಂದು ಅಬಾಧಿತವಾದ ಸಿದ್ಧಾಂತವಿದೆ. ಯಾವ ಜೀವನು ಸಮ್ಯಗ್ದರ್ಶನಾದಿಗಳನ್ನು ಪಡೆಯುತ್ತಾನೆ. ಆಗ ದ್ರವ್ಯಸ್ವಭಾವದ ಆಶ್ರಯದಿಂದಲೇ ಪಡೆಯುತ್ತಾನೆ. ರಾಗದ ಆಶ್ರಯದಿಂದ ಎಂದೂ ಯಾವುದೇ ಜೀವನು ಸಮ್ಯಗ್ದರ್ಶನ ಪಡೆಯುವುದಿಲ್ಲ. ಸ್ವಭಾವದ ಆಶ್ರಯದಿಂದ ಸಮ್ಯಗ್ದರ್ಶನ ಪಡೆದ ಆ ಜೀವದ ಮೊದಲಿನ ಶುಭವಿಕಲ್ಪಗಳಲ್ಲಿ ನಿಃಶಂಕತೆ ಮೊದಲಾದವುಗಳ ಆರೋಪ ಮಾಡಲಾಗುತ್ತದೆ. ಸ್ವಭಾವದ ಅರಿವಿಲ್ಲದೆ ಒಂದು ಶುಭರಾಗವನ್ನಂತೂ ಜೀವನು ಅನಂತಬಾರಿ ಮಾಡಿದ್ದಾನೆ. ಆದಾಗ್ಯೂ ಸಮ್ಯಗ್ದರ್ಶನವನ್ನೇಕೆ

ಪಡೆಯಲಿಲ್ಲ ? ಏಕೆಂದರೆ ಶುಭವಿಕಲ್ಪದ ಕಾರಣದಿಂದ ಸಮ್ಯಗ್ದರ್ಶನಾದಿಗಳು ಆಗುವುದಿಲ್ಲ. ಒಂದು ಜ್ಞಾನಾನಂದ ಸ್ವಭಾವದ ಆಶ್ರಯದಿಂದಲೇ ಸಮ್ಯಗ್ದರ್ಶನಾದಿಗಳು ಆಗುತ್ತವೆ.

ಮುನಿಯ ಉಪದೇಶವನ್ನು ಆಲಿಸಿ ಕಾಗೆಯ ಮಾಂಸವನ್ನು ತಿನ್ನದಿರುವಂಥ ಭಿಲ್ಲನನ್ನು ಕಥಾನುಯೋಗದಲ್ಲಿ ಸ್ವೀಕರಿಸಿದೆ. ಅಜ್ಞಾನಿಯು ಅನಂತಬಾರಿ ಮಾಂಸಾದಿಗಳ ತ್ಯಾಗಮಾಡಿ ದ್ರವ್ಯಲಿಂಗೀ ಮುನಿಯಾದರೂ ಅವನನ್ನು ಗಣಿಸಲಾಗಿಲ್ಲ. ಅದರ ಕಾರಣವೇನೆಂದರೆ ಅವನಿಗೆ ವ್ಯವಹಾರದ ರುಚಿಯಿರುವುದರಿಂದ ಶುಭದಲ್ಲಿ ಅದರ ಆರೋಪ ಕೂಡ ಬರಲಿಲ್ಲ. ಯಾವನು ಸ್ವಭಾವದ ದೃಷ್ಟಿ ಪ್ರಕಟಪಡಿಸಿಕೊಂಡಿದ್ದಾನೆ ಅದನ್ನು ಮೊದಲಿನ ರಾಗದಲ್ಲಿ ಆರೋಪ ಮಾಡಿ ಧರ್ಮದ ಕಾರಣವೆಂದು ಹೇಳಿಬಿಡಲಾಗಿದೆ.

ನಿಶ್ಚಯ ವೀತರಾಗ ದೃಷ್ಟಿಯಿಲ್ಲದೆ ವ್ಯವಹಾರನಯವು ಕೂಡ ಅನ್ವಯಿಸುವುದಿಲ್ಲ. ಅಜ್ಞಾನಿಗೆ ಸ್ವಭಾವದ ಅರಿವಿಲ್ಲದೆ ಒಂದು ಶುಭರಾಗದ ಉತ್ಸಾಹವು ಬರುತ್ತದೆ. ವ್ರತಪ್ರತಿಮೆ ಮೊದಲಾದುವನ್ನು ತೆಗೆದುಕೊಳ್ಳುತ್ತಾನೆ, ಆದರೆ ಸ್ವಭಾವದ ಅರಿವಿಲ್ಲದಿದ್ದರೆ ಅವನ ವ್ರತಾದಿಗಳನ್ನು ಉಪಚಾರದಿಂದ ಕೂಡ ಧರ್ಮವೆನ್ನಲಾಗುವುದಿಲ್ಲ.

ಧರ್ಮ ಪ್ರಭಾವನೆ, ಸ್ಥಿತಿಕರಣ, ವಾತ್ಸಲ್ಯ ಮೊದಲಾದವುಗಳ ಶುಭರಾಗವಾಗುತ್ತದೆ, ಅದನ್ನೇ ಅಜ್ಞಾನಿಯು ಧರ್ಮವೆಂದು ಮನ್ನಿಸುತ್ತಾನೆ. ಯಾವನು ತನ್ನ ಸ್ವಭಾವದ ಜ್ಞಾನಮಾಡಿಕೊಂಡು ತನ್ನಲ್ಲಿ ಸ್ಥಿತಿಕರಣ ಮಾಡಿಲ್ಲ ಅವನು ಇತರರಿಗೆ ಸ್ಥಿತಿಕರಣದಲ್ಲಿ ನಿಮಿತ್ತನು ಕೂಡ ಆಗುವುದಿಲ್ಲ ಮತ್ತು ಅವನ ಶುಭಭಾವನ್ನಂತೂ ಏಕಾಂತ ವ್ಯವಹಾರಾಭಾಸವೆಂದು ಹೇಳಲಾಗುತ್ತದೆ.

ಏಕಾಂತ ವ್ಯವಹಾರ ಮನ್ನಿಸುವಂಥ ಮಿಥ್ಯಾದೃಷ್ಟಿಯು ಹೇಗಿರುತ್ತಾನೆಂಬುದರ ಕುರಿತು ಈ ಮಾತು ನಡೆಯುತ್ತಿದೆ. ಶಾಸ್ತ್ರದ ತಾತ್ಪರ್ಯವು ವೀತರಾಗತೆಯಿದೆ. ಗುರುಗಳು ಕೂಡ ಒಂದು ಮೋಕ್ಷಮಾರ್ಗದ ಉಪದೇಶ ಕೊಡುವಂಥವರೇ ಇರುತ್ತಾರೆ. ಆತ್ಮನು ಜ್ಞಾನಸ್ವರೂಪನಿದ್ದಾನೆ. ಅವನ ಅವಲಂಬನವಿಲ್ಲದೆ ಎಷ್ಟು ಶುಭಾಶುಭ ಭಾವಗಳಿವೆ ಅವುಗಳಿಂದ ಧರ್ಮವಾಗುತ್ತದೆಂದು ಮನ್ನಿಸಿದರೆ ಅದು ಜೈನ ಧರ್ಮದ ಉಪದೇಶವೇ ಅಲ್ಲ. ರಾಗದಿಂದ ಧರ್ಮವಾಗುತ್ತದೆಂಬ ಉಪದೇಶವಿತ್ತರೆ ಅದು ಜೈನ ದರ್ಶನದ ಉಪದೇಶವೇ ಅಲ್ಲ. ಅಂಥ ಉಪದೇಶ ಕೊಡುವವನು ಗುರುವಲ್ಲ, ಆದರೆ ಕುಗುರು ಇದ್ದಾನೆ. ಗುರು ಹೇಗಿರುತ್ತಾರೆಂಬುದನ್ನು 'ಆತ್ಮಾವಲೋಕನ'ದಲ್ಲಿ ಹೇಳುತ್ತಾರೆ-

**ವೀತರಾಗಂ ವೀತರಾಗಂ ಜೀವಸ್ಯ ನಿಜಸ್ವರೂಪೋ ವೀತರಾಗಂ ।**
**ಮುಹುರ್ಮುಹುರ್ಗೃಣನಾತಿ ವೀತರಾಗಂ ಸ ಗುರುಪದಂ ಭಾಸತಿ ಸದಾ ॥**

ಜೀವದ ನಿಜಸ್ವರೂಪವು ವೀತರಾಗವಿದೆ. ಇಂಥ ವೀತರಾಗಸ್ವರೂಪವನ್ನು ಯಾವನು ಪುನಃ ಪುನಃ ಚಿಂತಿಸುತ್ತಾನೆ ಹಾಗೂ ಪುನಃ ಪುನಃ ಅದನ್ನೇ ಹೇಳುತ್ತಾನೆ ಅಂಥ ಜೀವನು ಗುರುಪದದಲ್ಲಿ ಶೋಭಿಸುತ್ತಾನೆ. ಯಾವ ಜೀವನು ರಾಗವನ್ನು ಉಪಾದೇಯವೆಂದು ಮನ್ನಿಸುತ್ತಾನೆ, ರಾಗ ಮಾಡುತ್ತ ಮಾಡುತ್ತ ಧರ್ಮವಾಗುವುದನ್ನು ಮನ್ನಿಸುತ್ತಾನೆ ಆ ಜೀವನು ಗುರುವಿಲ್ಲ, ಆದರೆ ಕುಗುರು ಇದ್ದಾನೆ.

ಮಧ್ಯದಲ್ಲಿ ರಾಗವು ಬರುತ್ತದೆ, ಆದರೆ ಆ ರಾಗದಿಂದ ಧರ್ಮವಾಗುತ್ತದೆಯೆಂಬುದು ಜೈನ ದರ್ಶನದಲ್ಲಿ ಮೂರು ಕಾಲದಲ್ಲೂ ಇಲ್ಲ. ಚಿದಾನಂದ ಸ್ವಭಾವವನ್ನು ಮರೆತು ಏಕಾಂತ ರಾಗದಿಂದ ಮತ್ತು ವ್ಯವಹಾರದಿಂದ ಯಾವನು ಲಾಭ ಮನ್ನಿಸುತ್ತಾನೆ, ಆ ಜೀವನಿಗೆ ಜೈನ ದರ್ಶನದ ಅರಿವಿಲ್ಲ ನಿಜವಾದ ವಾತ್ಸಲ್ಯ ಭಾವವು ಕೂಡ ಯಾರಿಗಿರುತ್ತದೆ ? ಚಿದಾನಂದ ಸ್ವಭಾವದ ಅರಿವಿನೊಡನೆ ಮಧ್ಯದಲ್ಲಿ ದೇವ-ಶಾಸ್ತ್ರ-ಗುರುಗಳ ಪ್ರೀತಿ ಹಾಗೂ ಸಾಧರ್ಮಿಯ ವಾತ್ಸಲ್ಯ ಬರುವುದು ವ್ಯವಹಾರದಿಂದ ವಾತ್ಸಲ್ಯವಿದೆ, ಆದರೆ ಯಾವ ಜೀವನು ಚೈತನ್ಯದ ಪ್ರೀತಿ ಮರೆತು

ಕೇವಲ ಪರದ ರಾಗದಿಂದ ಮುಕ್ತಿಯಾಗುವುದನ್ನು ಮನ್ನಿಸುತ್ತಾನೆ ಅವನಂತೂ ವ್ಯವಹಾರಾಭಾಸೀ ಮಿಥ್ಯಾದೃಷ್ಟಿಯಿದ್ದಾನೆ. ರಾಗದಿಂದ ಮೋಕ್ಷ ಹೇಗಾಗುವುದು ? ರಾಗವಂತೂ ಬೆಂಕಿಯ ಸಮಾನವಿದೆ ಮತ್ತು ಮೋಕ್ಷವಂತೂ ಶಾಂತಿಮಯವಿದೆ. ಅಗ್ನಿಯಿಂದ ಶಾಂತಿಯು ಹೇಗಾಗುವುದು ? ಚೈತನ್ಯ ಜ್ಞಾಯಕ ಸ್ವಭಾವದ ಜ್ಞಾನ ಮಾಡಿಕೊಂಡು, ತಾನು ತನ್ನಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವನ್ನು ಪ್ರಕಟಪಡಿಸಿಕೊಳ್ಳುವುದು ಪರಮಾರ್ಥ ಪ್ರಭಾವನೆಯಿದೆ. ಆಗ ಮಧ್ಯದಲ್ಲಿ ಧರ್ಮ ಪ್ರಭಾವನೆಯ ಭಾವವಿರುತ್ತದೆ, ಆದರೆ ಅಜ್ಞಾನೀ ಜೀವನಂತೂ ನಿಶ್ಚಯಸ್ವಭಾವದ ಅರಿವಿಲ್ಲದೆ ಕೇವಲ ಒಂದು ಶುಭರಾಗದ ಭಾವನೆಯನ್ನೇ ಭಾವಿಸುತ್ತಾನೆ. ಧರ್ಮಾತ್ಮನಿಗೆ ತೀರ್ಥಂಕರ ನಾಮಕರ್ಮವು ಯಾವ ಭಾವದಿಂದ ಬಂಧವಾಗುತ್ತದೆ ಆ ಭಾವದ್ದೂ ಕೂಡ ಭಾವನೆಯಿರುವುದಿಲ್ಲ. ಅಜ್ಞಾನಿಯು ರಾಗದ ಭಾವನೆ ಭಾವಿಸುತ್ತಾನೆ. ಅವನಿಗೆ ತೀರ್ಥಂಕರ ನಾಮಕರ್ಮದ ಬಂಧವೆಂದೂ ಆಗುವುದಿಲ್ಲ. ದರ್ಶನವಿಶುದ್ಧಿಪೂರ್ವಕ ಹದಿನಾರು ಭಾವನೆಯಿದ್ದರೆ ಅಲ್ಲಿ ತೀರ್ಥಂಕರ ನಾಮಕರ್ಮದ ಬಂಧವಾಗಿ ಹೋಗುತ್ತದೆ. ಅಜ್ಞಾನಿಯು ಕೇವಲ ಒಂದು ಶುಭರಾಗದಿಂದ ಧರ್ಮವಾಗುತ್ತದೆಂದು ಮನ್ನಿಸಿ ಆ ರಾಗದಲ್ಲಿ ಪುನಃ ಪುನಃ ಉತ್ಸಾಹಿತನಾಗುತ್ತಾನೆ, ಆದರೆ ದರ್ಶನವಿಶುದ್ಧಿಯದಂತೂ ಅವನಿಗೆ ಅರಿವೇ ಇರುವುದಿಲ್ಲ. ಇಂಥ ಜೀವನು ಏಕಾಂತ ವ್ಯವಹಾರಾವಲಂಬಿಯಾದ ಮಿಥ್ಯಾದೃಷ್ಟಿಯಿದ್ದಾನೆ.

ಶಾಸ್ತ್ರಸ್ವಾಧ್ಯಾಯ ಮಾಡುವವನು, ಪಠಣ-ಪಾಠಣ ಮಾಡುವವನು ಮತ್ತು ಅದರಿಂದ ಸಮ್ಯಗ್ದರ್ಶನವಾಗುವುದನ್ನು ಮನ್ನಿಸುತ್ತಾನೆ, ಅವನು ಕೂಡ ಮೂಢನಿದ್ದಾನೆ. ಶಾಸ್ತ್ರದ ಕಡೆಗಿರುವ ಪ್ರವೃತ್ತಿಯ ಭಾವದಿಂದ ನಾನು ಜ್ಞಾನ ಭಾವನೆ ಮಾಡುತ್ತೇನೆಂದು ಮನ್ನಿಸುತ್ತಾನೆ, ಆದರೆ ಜ್ಞಾನವಂತೂ ಜ್ಞಾಯಕನಲ್ಲಿ ಇದೆಯೆಂಬುದರ ಅರಿವು ಅವನಿಗಿರುವುದಿಲ್ಲ. ಜ್ಞಾನದ ವಿನಯ ಮಾಡುವುದು, ಶಾಸ್ತ್ರದ-ಗುರುವಿನ ಬಹುಮಾನ ಮಾಡುವುದು, ಈ ಪ್ರಕಾರದ ಶುಭರಾಗದಿಂದ ಜ್ಞಾನವು ವಿಕಸಿಸುವುದೆಂದು ಮನ್ನಿಸಿದ್ದಾನೆ. ಆದರೆ ಜ್ಞಾನಸ್ವಭಾವದೊಳಗಿಂದ ಜ್ಞಾನವು ವಿಕಸಿಸುವುದೆಂದು ನಿಶ್ಚಯ ಸ್ವಭಾವವನ್ನು ಮನ್ನಿಸುವುದಿಲ್ಲ. ಒಂದು ವ್ಯವಹಾರ ಮಾಡುತ್ತ-ಮಾಡುತ್ತ ನಿಶ್ಚಯವು ಪ್ರಕಟವಾಗುವುದೆಂದು ಮನ್ನಿಸಿದ್ದಾನೆ, ಅವನು ಮಿಥ್ಯಾದೃಷ್ಟಿಯಿದ್ದಾನೆ. ಶಾಸ್ತ್ರ ಭಕ್ತಿಯ ಸಲುವಾಗಿ ಲಕ್ಷ್ಯಾಂತರ ರೂಪಾಯಿ ಖರ್ಚು ಮಾಡುವನು. ಆದರೇನು ಆ ಧನದ ಆಧಾರದಿಂದ ಧರ್ಮವಾಗುವುದಿಲ್ಲ. ಶಾಸ್ತ್ರದಲ್ಲೇನು ಜ್ಞಾನವಿರುವುದಿಲ್ಲ. ಶಾಸ್ತ್ರದಲ್ಲಿ ಹೇಳಿದ ತನ್ನ ಸ್ವಭಾವವು ಹೀಗಿದೆಯೆಂಬುದನ್ನು ತಿಳಿದುಕೊಂಡು ಅದರ ಅವಲಂಬನೆ ಮಾಡಿದರೆ ಜ್ಞಾನವು ಪ್ರಕಟವಾಗುವುದು. ಸಮಯಸಾರ ಓದುವುದರಿಂದ ಏಕಾಂತ ನಿಶ್ಚಯವಾಗುತ್ತದೆಯೆಂದು ಅಜ್ಞಾನಿಗಳು ತರ್ಕ ಮಾಡುತ್ತಾರೆ. ಆದುದರಿಂದ ಸಮಯಸಾರ ಓದಕೂಡದು. ಅದರ ಸಲುವಾಗಿ ಬನಾರಸೀದಾಸರ ಉದಾಹರಣೆ ಕೊಡುತ್ತಾರೆ, ಆದರೆ ಆ ಉದಾಹಣೆಯು ಎಲ್ಲರಿಗೂ ಅನ್ವಯಿಸುವುದಿಲ್ಲ. ಅವರಂತೂ ಮೊದಲು ನಿಶ್ಚಯಾಭಾಸದಲ್ಲಿ ಮುಳುಗಿ ಹೋಗಿದ್ದರು, ಆದರೆ ಅದರಿಂದೇನು ಸಮಯಸಾರದ ಅಭ್ಯಾಸದ ನಿಷೇಧವಾಗಿಹೋಗುವ ಸಾಧ್ಯತೆಯಿಲ್ಲ. ನಿಶ್ಚಯ ಸ್ವಭಾವವನ್ನು ತಿಳಿದುಕೊಳ್ಳದೆ ಕೇವಲ ವ್ಯವಹಾರ ಕ್ರಿಯಾಕಾಂಡವನ್ನು ಬೇಕಾದಷ್ಟು ಮಾಡಿದರೂ ಅದರಿಂದ ಸ್ವಲ್ಪವೂ ಕಲ್ಯಾಣವಾಗುವುದಿಲ್ಲ. ಶಾಸ್ತ್ರದ ಬಹುಮಾನ ಮಾಡಿರಿ, ಗುರು ಮೊದಲಾದವರ ಉಪಕಾರ ತಿಳಿದುಕೊಂಡು ಅವರ ಬಹುಮಾನ ಮಾಡಿರಿ, ಭಕ್ತಿಮಾಡಿರಿ, ಆದರೆ ಗುರುಗಳಂತೂ ನಿನ್ನ ಪ್ರಭುತೆಯು ನಿನ್ನ ಆತ್ಮನಲ್ಲಿ ತುಂಬಿಕೊಂಡಿದೆಯೆಂದು ಹೇಳುತ್ತಾರೆ. ನೀನು ಅದರ ಪ್ರತೀತಿ ಮಾಡು ! ಇಂಥ ಪ್ರತೀತಿಯನ್ನು ಸ್ವಯಂ ಸ್ವಸನ್ಮುಖನಾಗಿ ಮಾಡುವುದಿಲ್ಲ, ಆದರೆ ಕೇವಲ ವಿನಯ ಮೊದಲಾದ ರಾಗವನ್ನೇ ಧರ್ಮವೆಂದು ಮನ್ನಿಸುತ್ತಿರುವುದರಿಂದ ಅವನು ವಿನಯ ಮಿಥ್ಯಾದೃಷ್ಟಿಯಿದ್ದಾನೆ. ನಿನ್ನ ಸಮ್ಯಗ್ದರ್ಶನವು ನಿನ್ನ ದ್ರವ್ಯದ ಅವಲಂಬನದಿಂದ ಇದೆ. ಅದೇನು ಗುರುಗಳ ಹತ್ತಿರ ಇಲ್ಲ. ಆದಾಗ್ಯೂ ಸತ್ಯ ಜ್ಞಾನೀ ಗುರುಗಳು ದೊರಕದೆ ಯಾವುದೇ ಜೀವನು ತನ್ನ ಇಚ್ಛೆಯ ಅನುಸಾರ ಸ್ವಚ್ಛಂದತೆಯಿಂದ ಸಮ್ಯಕ್ತ್ವ ಪಡೆಯಬಹುದಾಗಿದೆಯೆಂಬುದು ಅಸಂಭವವಿದೆ. ಧರ್ಮ ಪಡೆಯುವಂಥ ಜೀವನಿಗೆ ನಿಮಿತ್ತದ ರೂಪದಲ್ಲಿ ಅವಶ್ಯವಾಗಿ

ಸದ್ಗುರುಗಳಿರುತ್ತಾರೆ. ಅವರು ಈ ಭವದಲ್ಲಿ ದೊರಕಿರಲಿ ಅಥವಾ ಪೂರ್ವಭವದಲ್ಲಿ ದೊರಕಿರಲಿ, ಆದರೆ ಗುರುವಂತೂ ಅವಶ್ಯವಾಗಿ ಇರುತ್ತಾರೆ.

ಶಾಸ್ತ್ರದ ಅರ್ಥ, ಅಕ್ಷರ ಮತ್ತು ಅರ್ಥಅಕ್ಷರ ಎರಡೂ ಹೀಗೆ ಮೂರು ಪ್ರಕಾರದ ಶುದ್ಧತೆ ಕಾಯ್ದುಕೊಳ್ಳುವ ವಿಚಾರ ಮಾಡಲಾಗುತ್ತದೆ ಅದು ಕೂಡ ಶುಭರಾಗವಿದೆ. ಅಂಥ ಶುಭರಾಗವು ಮಧ್ಯದಲ್ಲಿ ಬರುತ್ತದೆ ನಿಜ. ಆದರೆ ಸ್ವಭಾವವನ್ನು ಮರೆತು, ಕೇವಲ ಆ ರಾಗದಲ್ಲಿಯೇ ಧರ್ಮವನ್ನು ಮನ್ನಿಸಿ ಯಾರು ಪ್ರವರ್ತಿಸುತ್ತಾರೆ ಅವರು ಮಿಥ್ಯಾದೃಷ್ಟಿ ವ್ಯವಹಾರಮೂಢರಿದ್ದಾರೆ. ಗಣಧರದೇವರು ಕೂಡ ಚಿದಾನಂದ ಸ್ವಭಾವದ ಶ್ರದ್ಧೆ-ಜ್ಞಾನ ಮತ್ತು ಕ್ರೀಡೆಯು ಪ್ರಕಟವಾಗಿದ್ದರೂ ಕೂಡ ಪೂರ್ಣ ವೀತರಾಗ ಸ್ಥಿರತೆಯು ಪ್ರಕಟವಾಗದವರೆಗೆ ಜ್ಞಾನಾಚಾರ ಮೊದಲಾದವುಗಳ ಶುಭವಿಕಲ್ಪವು ಬರುತ್ತದೆ. ವಿಕಲ್ಪವು ಬರುತ್ತದೆ ಆ ಮಾತಂತೂ ಬೇರೆಯಿದೆ, ಆದರೆ ಅದನ್ನೇ ಧರ್ಮವೆಂದು ಮನ್ನಿಸಿ ಅಲ್ಲಿ ತಡೆದು ನಿಂತುಕೊಳ್ಳುವುದು ಅದು ಮಿಥ್ಯಾತ್ವವಿದೆ.

ಅಹಿಂಸೆ ಪಾಲಿಸುವುದು, ಸತ್ಯ ಮಾತನಾಡುವುದು, ಕಳವು ಮಾಡದಿರುವುದು, ಬ್ರಹ್ಮಚರ್ಯ ಪಾಲಿಸುವುದು ಮತ್ತು ಪರಿಗ್ರಹ ಬಿಡುವುದು-ಇಂಥ ಪಂಚಮಹಾವ್ರತದ ವಿಕಲ್ಪವು ಕೂಡ ಶುಭರಾಗವಿದೆ, ಆಸ್ರವವಿದೆ. ಅಜ್ಞಾನಿಯು ಆ ರಾಗವನ್ನೇ ಸರ್ವಸ್ವವೆಂದು ಮನ್ನಿಸಿಕೊಂಡಿದ್ದಾನೆ, ಆದರೆ ರಾಗವಂತೂ ಅಧ್ಯವಸಾಯವಿದೆ. ಸರ್ವಜ್ಞದೇವರು ಎಲ್ಲ ಅಧ್ಯವಸಾನಗಳ ತ್ಯಾಗ ಮಾಡಿ ವ್ಯವಹಾರ ನಯವನ್ನೇ ತ್ಯಾಗ ಮಾಡಿಸಿದ್ದಾರೆ. ಶ್ರೀಮದಮೃತಚಂದ್ರಾಚಾರ್ಯದೇವರು ಸಮಯಸಾರದ ನೂರ ಎಪ್ಪತ್ತೊಮ್ಮರನೆಯ ಕಲಶದಲ್ಲಿ ಹೀಗೆ ಹೇಳುತ್ತಾರೆ -

ಸಮಸ್ತ ವಸ್ತುಗಳಲ್ಲಿ ಯಾವ ಅಧ್ಯವಸಾನವಾಗುತ್ತದೆ ಅದೆಲ್ಲವನ್ನು (ಎಂದರೆ ಅಧ್ಯವಸಾನಗಳನ್ನು) ಜಿನೇಂದ್ರ ಭಗವಂತರು ಪೂರ್ವೋಕ್ತ ರೀತಿಯಿಂದ ತ್ಯಾಗಮಾಡಲು ಯೋಗ್ಯವೆಂದು ಹೇಳಿದ್ದಾರೆ. ಆದುದರಿಂದ 'ಯಾವುದರ ಆಶ್ರಯವು ಪರವಿದೆ ಅಂಥ ವ್ಯವಹಾರವೆಲ್ಲವನ್ನು ಬಿಡಿಸಿದ್ದಾರೆ' ಎಂದು ನಾವು ಮನ್ನಿಸಬೇಕಾಗುವುದು. ಅನಂತರ ಸತ್ಪುರುಷರು ಒಂದು ಸಮ್ಯಕ್ ನಿಶ್ಚಯನಯವನ್ನೇ ನಿರಂಕುಲತೆಯಿಂದ ಅಂಗೀಕಾರ ಮಾಡಿ ಶುದ್ಧಜ್ಞಾನಘನಸ್ವರೂಪವಿರುವ ನಿಜಮಹಿಮೆಯಲ್ಲಿ (ಆತ್ಮಸ್ವರೂಪದಲ್ಲಿ) ಸ್ಥಿರತೆಯನ್ನೇಕೆ ಧಾರಣಮಾಡುವುದಿಲ್ಲ ?

ಈ ಶ್ಲೋಕದ ಮೇಲೆ ಎಟೀಕೆ ಮಾಡುತ್ತ ಬನಾರಸೀದಾಸರು ನಾಟಕ ಸಮಯಸಾರದಲ್ಲಿ ಹೇಳಿರುವುದೇನೆಂದರೆ-

**ಅಸಂಖ್ಯಾತ ಲೋಕ ಪರವಾನ ಜೇ, ಮಿಥ್ಯಾತ್ವಭಾವ;**
**ತೇ ಈ ವಿವಹಾರ ಭಾವ ಕೇವಲೀ ಉಕ್ತ ಹೈ ।**
**ಜಿಹ್ನಕೋ ಮಿಥ್ಯಾತ್ವ ಗಯೋ ಸಮ್ಯಕ ದರಸ ಭಯೌ,**
**ತೇ ನಿಯತ-ಲೀನ ವ್ಯವಹಾರಸೋ ಮುಕ್ತ ಹೈ ॥**

ಓ ಸಂತರುಗಳೇ ! ಭಗವಂತರಂತೂ ಒಂದು ನಿಶ್ಚಯ ಸ್ವಭಾವದ ಅವಲಂಬನವನ್ನೇ ಮಾಡಿಸಿ ಸಮಸ್ತ ವ್ಯವಹಾರವನ್ನು ಬಿಟ್ಟುಕೊಡುವ ಉಪದೇಶ ಮಾಡಿದ್ದಾರೆ. ಯಾವ ಜೀವನು ಶುದ್ಧ ಸ್ವಭಾವದ ಅವಲಂಬನೆ ಮಾಡಿದ್ದಾನೆ ಆ ಜೀವನು ಸಮಸ್ತ ವ್ಯವಹಾರದ ವಿಕಲ್ಪಗಳನ್ನು ಬಿಟ್ಟುಕೊಟ್ಟು ಮುಕ್ತಿ ಪಡೆಯುತ್ತಾನೆ. ವ್ಯವಹಾರನಯದ ಅವಲಂಬನದಿಂದ ಲಾಭವಿದೆಯೆಂದು ಮನ್ನಿಸುವವನನ್ನು ಭಗವಂತರು ಮಿಥ್ಯಾದೃಷ್ಟಿಯೆಂದು ಹೇಳಿದ್ದಾರೆ.

ಆರನೆಯ ಗುಣಸ್ಥಾನದಲ್ಲಿ ಸಾಧುಗಳಿಗೆ ಪಂಚಮಹಾವ್ರತಗಳ ಶುಭವಿಕಲ್ಪವು ಕೂಡ ಆಸ್ರವವಿದೆ, ಅದು ಬಾಹ್ಯ ಧರ್ಮವಿದೆ. ಎಂದರೆ ನಿಜವಾಗಿ ಅದು ಧರ್ಮವಿಲ್ಲ. ರಾಗವು ಧರ್ಮ ಹೇಗಾಗುವುದು ? ಶಾಸ್ತ್ರದ

ತಾತ್ಪರ್ಯವಂತೂ ವೀತರಾಗ ಭಾವವಿದೆ. ಅದೇ ಧರ್ಮವಿದೆ. ಪಂಚಮಹಾವ್ರತಗಳ ರಾಗಭಾವವು ಕೂಡ ನಿಶ್ಚಯದಿಂದ ಅಚಾರಿತ್ರವಿದೆ. ಅದೇನು ಮೋಕ್ಷದ ಕಾರಣವಾಗಿಲ್ಲ. ಮೋಕ್ಷದ ಕಾರಣವಂತೂ ವೀತರಾಗ ಸ್ವರೂಪಾಚರಣವಿದೆ. ಅದೇ ನಿಜವಾದ ಚಾರಿತ್ರವಿದೆ. ನಿಶ್ಚಯ ಸ್ವಭಾವದ ಸ್ಥಿರತೆಯೊಡನೆ ಮಧ್ಯದಲ್ಲಿ ಪಂಚಮಹಾವ್ರತ ಮೊದಲಾದವುಗಳ ಭಾವ ಬರುತ್ತದೆ; ಆದರೆ ಜ್ಞಾನಿಗಳು ಅವನ್ನು ಧರ್ಮವೆಂದು ಮನ್ನಿಸುವುದಿಲ್ಲ, ಅಜ್ಞಾನಿಗಳು ತಮ್ಮ ಸ್ವಭಾವವನ್ನು ಮರೆತು ರಾಗವನ್ನೇ ಧರ್ಮವೆಂದು ಮನ್ನಿಸುತ್ತಾರೆ. ಎಂದರೆ ಅವರಂತೂ ಶುಭರಾಗದ ಜತೆಯಲ್ಲಿ ಮಿಥ್ಯಾತ್ವದ ಸೇವನೆ ಮಾಡುತ್ತಾರೆ. ಆದುದರಿಂದ ಅವರ ಶುಭರಾಗದಿಂದಂತೂ ಮಿಥ್ಯಾತ್ವರೂಪದ ಮಹಾಭೂತವೇ ಬಂದುಬಿಡುತ್ತದೆ. ಮೊದಲು ರಾಗವು ಸರ್ವಥಾ ಹೊರಟುಹೋಗಿಲ್ಲ ಆದುದರಿಂದ ರಾಗದ ರುಚಿಯು ಬಿಟ್ಟುಹೋಗಿ ಸ್ವಭಾವದ ರುಚಿಯುಂಟಾಗಬೇಕಾಗುವುದು. ಯಾರಿಗೆ ಎಂಥ ರುಚಿಯಿರುವುದು ಅವರು ಇಪ್ಪತ್ತುನಾಲ್ಕು ಗಂಟೆ ಅಂಥ ಮಾತಿನ ಅನುಮೋದನ ಮಾಡುತ್ತಿರುತ್ತಾರೆ ಮತ್ತು ಅಂಥ ಭಾವವನ್ನೇ ಭಾವಿಸುತ್ತಿರುತ್ತಾರೆ. ಯಾರಿಗೆ ಸ್ವಭಾವದ ಅಭಿರುಚಿಯಾಗಿದೆ ಅವರು ಕ್ಷಣ ಕ್ಷಣಕ್ಕೆ ಸ್ವಭಾವದ ಆದರವನ್ನೇ ಮಾಡುತ್ತಾರೆ. ರಾಗವಿದ್ದರೂ ಕೂಡ ಅವರಿಗೆ ಅದರ ರುಚಿಯಿರುವುದಿಲ್ಲ. ಅಜ್ಞಾನಿಯು ಸ್ವಭಾವದ ರುಚಿಯನ್ನು ಬಿಟ್ಟುಕೊಟ್ಟು ರಾಗದ ಅಭಿರುಚಿಯಿಂದ ಐದು ಸಮಿತಿ ಮೊದಲಾದವುಗಳ ಶುಭಭಾವ ಮಾಡುತ್ತಾನೆ; ಅವನು ಏಕಾಂತ ವ್ಯವಹಾರಾಭಾಸಿಯಾದ ಮಿಥ್ಯಾದೃಷ್ಟಿಯಿದ್ದಾನೆ. ಪರ ಜೀವದ ರಕ್ಷಣೆ ಮಾಡುವುದನ್ನು ಅಜ್ಞಾನಿಯು ಧರ್ಮವೆಂದು ನಂಬಿಕೊಂಡಿದ್ದಾನೆ; ಆದರೆ ಪರಜೀವದ ರಕ್ಷಣೆಯನ್ನಂತೂ ಯಾರೂ ಮಾಡುವ ಸಾಧ್ಯತೆಯಿಲ್ಲ. ಆದ್ದರಿಂದ ಅದೇನು ಜೈನಧರ್ಮವಿಲ್ಲ. ಪರಜೀವದ ರಕ್ಷಣೆಯ ಯಾವ ಶುಭಭಾವವಾಗುತ್ತದೆ ಅದು ಕೂಡ ಜೈನಧರ್ಮವಿಲ್ಲ. ಜೈನಧರ್ಮವಂತೂ ಒಂದು ವೀತರಾಗ ಭಾವವಿದೆ ಮತ್ತು ಆ ಭಾವವು ಚಿದಾನಂದ ಸ್ವಭಾವದ ಅವಲಂಬನದಿಂದ ಇದೆ. ಅಜ್ಞಾನೀ ಜೀವನು ರಾಗದಲ್ಲಿ ಧರ್ಮ ಮನ್ನಿಸುತ್ತಿರುವುದರಿಂದ ಐದು ಸಮಿತಿ, ಗುಪ್ತಿ ಮೊದಲಾದ ರಾಗದಲ್ಲಿಯೇ ಅವನು ತನ್ನ ಉದ್ಯಮವನ್ನು ಸರ್ವಥಾ ಜೋಡಿಸಿ ಬಿಟ್ಟಿದ್ದಾನೆ. ಅವನು ಸ್ವಭಾವದ ಉದ್ಯಮವನ್ನು ಸ್ವಲ್ಪವೂ ಮಾಡದಿರುವುದರಿಂದ ಏಕಾಂತ ವ್ಯವಹಾರೀ ಮಿಥ್ಯಾದೃಷ್ಟಿಯಿದ್ದಾನೆ.

ಬಾಹ್ಯದಲ್ಲಿ ಅನಶನ ಮಾಡುವುದು, ಅಲ್ಪಾಹಾರ ಸ್ವೀಕರಿಸುವುದು, ಕೆಲವೊಂದು ವಸ್ತುಗಳ ತ್ಯಾಗಮಾಡುವುದು, ನೀರಸ ಆಹಾರ ಸ್ವೀಕರಿಸುವುದು, ಏಕಾಂತವಾಸದಲ್ಲಿರುವುದು, ಕಾಯಕ್ಲೇಶ ಮಾಡುವುದು ಈ ಪ್ರಕಾರ ಮಂದ ಕಷಾಯದಿಂದ ಮಾಡುವುದು ಮತ್ತು ಅದರಲ್ಲಿ ಧರ್ಮ ಮನ್ನಿಸಿ ಯಾವಾಗಲೂ ಅದರಲ್ಲಿಯೇ ಉತ್ಸಾಹಿತರಾಗಿರುವುದು. ಈ ಪ್ರಕಾರ ಶುಭದಲ್ಲಿ ಪ್ರವರ್ತನೆ ಮಾಡಿ ಅದನ್ನೇ ಧರ್ಮವೆಂದು ಮನ್ನಿಸಿರುವವನಿಗೆ ಕಿಂಚಿತ್ತೂ ಧರ್ಮವಿಲ್ಲ. ಬಾಹ್ಯ ವಸ್ತುಗಳ ತ್ಯಾಗ ಮಾಡಿದರೆ ಧರ್ಮವಾಗುತ್ತದೆಂದು ಅಜ್ಞಾನಿಯು ಮನ್ನಿಸಿದ್ದಾನೆ, ಆದರೆ ಹೊರಗಿನ ವಸ್ತುಗಳಂತೂ ನಿನ್ನಿಂದ ಭಿನ್ನವಾಗಿಯೇ ಇವೆ. ಅವುಗಳ ತ್ಯಾಗ ಮಾಡುವುದನ್ನು ಮನ್ನಿಸಿ ಯಾವನು ಅಹಂಕಾರ ಮಾಡುತ್ತಾನೆ ಅವನು ಸ್ವಧರ್ಮದ ತ್ಯಾಗಮಾಡಿದ್ದಾನೆ. ಸ್ವಭಾವದ ಆಶ್ರಯದಿಂದ ಶುದ್ಧತೆಯಾಗುತ್ತಿರುವಂತೆ ರಾಗವು ಬಿಟ್ಟು ಹೋಗುತ್ತದೆ, ಅದರ ಅರಿವಿಲ್ಲ. ಬಾಹ್ಯದಲ್ಲಿ ತ್ಯಾಗಮಾಡಿದರೆ ರಾಗವು ಬಿಟ್ಟು ಹೋಗುತ್ತದೆಯೆಂದು ಅಜ್ಞಾನಿಯು ಮನ್ನಿಸಿದ್ದಾನೆ. ನೀನು ನಿನ್ನ ಜ್ಞಾಯಕ ಸ್ವರೂಪವನ್ನು ಸಂರಕ್ಷಿಸು ಮತ್ತು ಅದರಲ್ಲಿ ಏಕಾಗ್ರವಿರುವುದರ ಹೆಸರು ನಿಜವಾದ ವಿವಿಕ್ತಶಯ್ಯಾಸನ ಮೊದಲಾದ ತಪವಿದೆ. ಪರದ್ರವ್ಯಗಳು ಲಾಭ-ಹಾನಿ ಮಾಡುವುದಿಲ್ಲವೆಂದು ಯಾವನು ತಿಳಿದುಕೊಂಡಿದ್ದಾನೆ ಅವನಿಗೆ ಪರದ್ರವ್ಯಗಳ ಸಂಗತಿಯ ಭಾವನೆಯು ಬಿಟ್ಟುಹೋಗಿ, ಸ್ವಭಾವದ ಭಾವನೆಯಾಗುತ್ತದೆ. ಅವನ ಬಹಳಷ್ಟು ರಾಗವು ಬಿಟ್ಟುಹೋಗುತ್ತದೆ. ಪರದ್ರವ್ಯದಿಂದ ಹಾನಿಯಿಲ್ಲವೆಂದು ಬೇಕಾದ ಹಾಗೆ ಸ್ವಚ್ಛಂದ ಭಾವ ಸೇವಿಸೆಂಬುದು ಇದರ ಅರ್ಥವಿಲ್ಲ. ಸ್ವಚ್ಛಂದ ಭಾವ ಸೇವಿಸುವುದಂತೂ ಕೇವಲ ಪಾಪದ ಸೇವನೆಯಿದೆ, ಇಲ್ಲಿ ಅದರ ಮಾತಿಲ್ಲ. ಇಲ್ಲಿಯಂತೂ ಯಾವ ಜೀವನು ಅಶುಭ ಭಾವವನ್ನು ತ್ಯಜಿಸಿ ವ್ರತ-ತಪ ಮೊದಲಾದ ಶುಭಭಾವ ಮಾಡುತ್ತಾನೆ ಮತ್ತು ಆ ಶುಭರಾಗವನ್ನೇ ಧರ್ಮವೆಂದು ಮನ್ನಿಸಿದ್ದಾನೆ, ಆದರೆ ಸ್ವಭಾವದ ಜ್ಞಾನ ಮಾಡಿಕೊಳ್ಳುವುದಿಲ್ಲ. ಆ ಜೀವನು ಕೂಡ

ಮಿಥ್ಯಾದೃಷ್ಟಿಯಿದ್ದಾನೆ. ಸ್ವಭಾವದ ಅವಲಂಬನ ಮಾಡುವುದಿಲ್ಲ ಮತ್ತು ರಾಗದಲ್ಲಿಯೇ ಸರ್ವಸ್ವ ಮನ್ನಿಸಿಕೊಂಡಿದ್ದಾನೆ ಆ ಜೀವನಿಗೆ ಸ್ವಲ್ಪವೂ ಧರ್ಮವಾಗುವುದಿಲ್ಲ.

ಸಹಜ ಪಾಪ ತಗಲಿದರೆ ಅಲ್ಲಿ ಸರಳತೆಯಿಂದ ಪ್ರಾಯಶ್ಚಿತ್ತ ತೆಗೆದುಕೊಳ್ಳಬೇಕು, ದೇವ-ಗುರುಗಳ ಸೇವೆ ಮಾಡುವುದು, ವಿನಯ ಮಾಡುವುದು, ಶರೀರದಿಂದ ಉದಾಸೀನವಾಗುವುದು, ಸ್ವಾಧ್ಯಾಯ ಮಾಡುವುದು ಮತ್ತು ಶುಭವಿಕಲ್ಪರೂಪದ ಧ್ಯಾನ ಮಾಡುವುದು, ಇಂಥ ಶುಭಭಾವ ಮಾಡುವುದು ಮತ್ತು ಆ ರಾಗವನ್ನೇ ಮೋಕ್ಷದ ಕಾರಣವೆಂದು ಮನ್ನಿಸುವುದು, ಆದರೆ ತನ್ನ ಚೈತನ್ಯ ಸ್ವಭಾವವನ್ನು ತಿಳಿದುಕೊಳ್ಳದಿದ್ದರೆ ಅವನು ವ್ಯವಹಾರ ಮೂಢ ಮಿಥ್ಯಾದೃಷ್ಟಿಯಿದ್ದಾನೆ. ಸ್ವಭಾವದ ದೃಷ್ಟಿಯಿಲ್ಲದ ಕೇವಲ ಶಾಸ್ತ್ರದ ಕಡೆಗಿರುವ ಬುದ್ಧಿಯು ಕೂಡ ಕಲಂಕಿತ ಬುದ್ಧಿಯಿದೆ, ಸ್ವಭಾವವನ್ನಂತೂ ಪಠಿಸುವುದಿಲ್ಲ ಮತ್ತು ಕೇವಲ ಶಾಸ್ತ್ರ ಪಠಿಸಿ ಅದರಿಂದ ಕಲ್ಯಾಣವಾಗುತ್ತದೆಂದು ಮನ್ನಿಸಿದರೆ ಆ ಜೀವನು ಬಹಿರ್ಮುಖ ಬುದ್ಧಿಯುಳ್ಳವನಿದ್ದಾನೆ. ಚೈತನ್ಯ ಸ್ವಭಾವದ ರುಚಿ ಮಾಡಲಿಲ್ಲ ಮತ್ತು ರಾಗದ ರುಚಿ ಮಾಡಿ ಅದನ್ನು ಧರ್ಮವೆಂದು ಮನ್ನಿಸಿದ ಜೀವನಿಗೆ ಚೈತನ್ಯದ ಧ್ಯಾನವಿರುವುದಿಲ್ಲ. ಶುಭವಿಕಲ್ಪ ಮಾಡಿ ಅದನ್ನೇ ಅವನು ಧ್ಯಾನವೆಂದು ಮನ್ನಿಸಿದ್ದಾನೆ, ಆದರೆ ಅದು ನಿಜವಾದ ಧ್ಯಾನವಿಲ್ಲ, ಶ್ರೀಮಜ್ಜೀಯವರು ಕೂಡ ಹೀಗೆ ಹೇಳುತ್ತಾರೆ-

**ಗಮ ಪಡ್ಯಾ ವಿನಾ ಆಗಮ ಅನರ್ಥಕಾರಕ ಥಈ ಪಡೇ ಛೆ ।**
**ಸತ್ಸಂಗ-ವಿನಾ ಧ್ಯಾನ ತೇ ತರಂಗರೂಪ ಥಈ ಪಡೇ ಛೆ ॥**

**ಸಂತ ವಿನಾ ಸಂತನೀ ಬಾತಮಾ ಅಂತ ಪಾಮತೋ ನಥೀ ।**
**ಲೋಕಸಂಜ್ಞಾಥೀ ಲೋಕಾಗ್ರೇ ಜವಾತು ನಥೀ ॥**

ಜ್ಞಾನಾರ್ಣವ ಮೊದಲಾದುವಲ್ಲಿ ಅನೇಕ ಪ್ರಕಾರದಿಂದ ವ್ಯವಹಾರ ಧರ್ಮಧ್ಯಾನದ ವರ್ಣನೆಯು ಬಂದಿದೆ, ಆದರೆ ಅದಂತೂ ಶುಭರಾಗವಿದೆ. ಚೈತನ್ಯದ ಧ್ಯಾನಪೂರ್ವಕ ಇಂಥ ಶುಭವಿಕಲ್ಪವಿದ್ದರೆ ಅದನ್ನು ವ್ಯವಹಾರದಿಂದ ಧರ್ಮಧ್ಯಾನವೆಂದು ಹೇಳಿಬಿಟ್ಟಿದೆ, ಆದರೆ ಯಾರಿಗೆ ಇನ್ನೂ ಚೈತನ್ಯದ ಅರಿವಿಲ್ಲ ಮತ್ತು ಹೊರಗಿನ ಕ್ರಿಯಾಕಾಂಡದ ರಾಗದಿಂದ ಧರ್ಮ ಮನ್ನಿಸಿದ್ದಾರೆ ಅವರಿಗಂತೂ ನಿಶ್ಚಯ ಧ್ಯಾನವು ಇರುವುದಿಲ್ಲ. ನಿಶ್ಚಯ ಧರ್ಮಧ್ಯಾನವಿಲ್ಲದೆ ಶುಭರಾಗವನ್ನು ವ್ಯವಹಾರ ಧ್ಯಾನವೆಂದು ಕೂಡ ಹೇಳಲಾಗುವುದಿಲ್ಲ-ಆತ್ಮಸ್ವಭಾವದ ಕಡೆಗೆ ಆಂಶಿಕವೀರ್ಯವು ಕೂಡ ಪ್ರವೃತ್ತವಾಗುವುದಿಲ್ಲ, ಎಲ್ಲಿ ಸ್ವಭಾವದ ಆಶ್ರಯದ ಮಾತು ಬರುತ್ತದೆ ಅಲ್ಲಿ ಅದರದಂತೂ ನಕಾರವೇ ಬರುತ್ತದೆ ಮತ್ತು ಶುಭರಾಗರೂಪ ವ್ಯವಹಾರದ ಅವಲಂಬನದಲ್ಲಿಯೇ ಸಮಸ್ತ ಶಕ್ತಿಯನ್ನು ತಡೆದು ನಿಲ್ಲಿಸಲಾಗಿದೆ ಅಂಥ ಜೀವನು ಏಕಾಂತ ವ್ಯವಹಾರಾವಲಂಬಿಯಾದ ಮಿಥ್ಯಾದೃಷ್ಟಿಯಿದ್ದಾನೆ. ಕರ್ಮಚೇತನಾದ ಮುಖ್ಯತೆ ಅಶುಭಕರ್ಮದ ಪ್ರವೃತ್ತಿಯನ್ನಂತೂ ದೂರ ಮಾಡಿದ್ದಾನೆ. ಶುಭಕರ್ಮದ ಪ್ರವೃತ್ತಿಯನ್ನು ಅಂಗೀಕಾರಮಾಡಿ ಅದರಲ್ಲಿ ಪ್ರವೃತ್ತಿಸುತ್ತಾನೆ, ಆದರೆ ಕರ್ಮಚೇತನಾರಹಿತ ಶುದ್ಧಜ್ಞಾನಚೇತನವು ಹೇಗಿದೆಯೆಂಬುದನ್ನು ತಿಳಿದುಕೊಳ್ಳುವುದಿಲ್ಲ. ಆ ಜೀವನು ಕ್ರಿಯಾಕಾಂಡದ ಆಡಂಬರದಿಂದ ಗರ್ಭಿತನಿದ್ದಾನೆ, ಆದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದಿಂದ ಗರ್ಭಿತವಿರುವಂಥ ಶುದ್ಧಜ್ಞಾನಚೇತನವನ್ನು ಅವನು ಯಾವ ಕಾಲದಲ್ಲಿಯೂ ಪಡೆಯುವುದಿಲ್ಲ. ಇಂಥ ಜೀವನು ಬಹಳಷ್ಟು ಪುಣ್ಯ ಆಚರಣೆಯ ಭಾರದಿಂದ ಗರ್ಭಿತವಿರುವ ಚಿತ್ತವೃತ್ತಿಯನ್ನು ಧಾರಣ ಮಾಡುತ್ತಾನೆ. ಅವನು ಶುಭಭಾವದಲ್ಲಿ ಖೇದಖಿನ್ನ-ಆಕುಲ-ವ್ಯಾಕುಲನಿರುತ್ತಾನೆ. ಇಂಥ ಜೀವರುಗಳ ಸಲುವಾಗಿ ಹೀಗೆ ಹೇಳುತ್ತಾರೆ -

**ಸೌ ಸಾಧನ ಬಂಧನ ಥಯಾ, ರಹ್ಯೋ ನ ಕೋಈ ಉಪಾಯ ।**
**ಸತ್ ಸಾಧನ ಸಮಜ್ಯೋ ನಹಿ, ತ್ಯಾಂ ಬಂಧನ ಶು ಜಾಯ ॥**

ಚಿದಾನಂದ ಸ್ವಭಾವದ ಅರಿವಿಲ್ಲ ಮತ್ತು ಕೇವಲ ವ್ಯವಹಾರನಯದ ಅವಲಂಬನದಿಂದ ಲಾಭ ಮನ್ನಿಸಿದ್ದಾನೆ. ಇಂಥ ಕೇವಲ ವ್ಯವಹಾರಾವಲಂಬಿಯಾದ ಮಿಥ್ಯಾದೃಷ್ಟಿ ಜೀವನು ಶುಭಭಾವದಿಂದ ಸ್ವರ್ಗ ಮೊದಲಾದವುಗಳ ಕ್ಲೇಶದ ಪರಂಪರೆಯನ್ನು ಪಡೆಯುತ್ತಾನೆ. ಅಜ್ಞಾನಿಗೆ ಸ್ವರ್ಗದಲ್ಲಿ ಕೂಡ ಕ್ಲೇಶವಿದೆ. 'ಈಗಂತೂ ಪುಣ್ಯಮಾಡಿ ಸ್ವರ್ಗದಲ್ಲಿ ಹೋಗುವೆನು ಮತ್ತು ಅಲ್ಲಿಂದ ಭಗವಂತರ ಹತ್ತಿರ ಹೋಗಿ ಸಮ್ಯಗ್ದರ್ಶನ ಪಡೆಯುವೆ'ನೆಂದು ವರ್ತಮಾನದಲ್ಲಿ ಯಾವ ಜೀವನು ರಾಗದ ಅಭಿರುಚಿ ಮಾಡುತ್ತಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಅಜ್ಞಾನಿಗೆ ಜ್ಞಾನ ಕಲೆಯ ಅರಿವಿಲ್ಲ. ಪರಮ ಜ್ಞಾನಕಲೆಯ ಅಭಾವದಿಂದ ಅಜ್ಞಾನೀ ಜೀವನು ಅಧಿಕ ಕಾಲದ ಪರ್ಯಂತ ಸಂಸಾರದಲ್ಲಿಯೇ ಪರಿಭ್ರಮಣ ಮಾಡುತ್ತಾನೆ. ಜ್ಞಾನಿಗೆ ಜ್ಞಾನಕಲೆಯು ಜಾಗೃತಗೊಂಡಿದೆ ಅವನಿಗೆ ರಾಗದ ರುಚಿಯಿರುವುದಿಲ್ಲ. ಅವನು ಸಹಜ ವೈರಾಗಿಯಿದ್ದಾನೆ. ಬನಾರಸೀದಾಸರು ಹೇಳುತ್ತಾರೆ -

**ಗ್ಯಾನಕಲಾ ಜಿನಕೆ ಘಟ ಜಾಗೀ ತೇ ಜಗಮಾಹೀ ಸಹಜ ವೈರಾಗೀ ।**
**ಗ್ಯಾನೀ ಮಗನ ವಿಷಯ ಸುಖಮಾಹೀ ಯಹ ವಿಪರೀತ ಸಂಭವೇ ನಾಹೀ ॥**

ಜ್ಞಾನಿಗೆ ಸ್ವಭಾವದ ಅರಿವಾಗಿದೆ ಎಂದರೆ ಅವನು ಸಹಜ ವೈರಾಗಿಯಿರುವನು. ಅವನಿಗೆ ವಿಷಯದಲ್ಲಿ ಸುಖಬುದ್ಧಿಯಿರುವುದೆಂಬುದು ಎಂದೂ ಸಂಭವಿಸುವುದಿಲ್ಲ. ಇಂಥ ಜ್ಞಾನಿಯಂತೂ ಅಲ್ಪಕಾಲದಲ್ಲಿಯೇ ಮೋಕ್ಷ ಪಡೆಯುತ್ತಾನೆ. ವ್ಯವಹಾರದ ರುಚಿಯುಳ್ಳ ಜೀವನು ಅನಂತಕಾಲ ಸಂಸಾರದಲ್ಲಿ ಪರಿಭ್ರಮಣ ಮಾಡುವನು.

ಈ ಪ್ರಕಾರ ಏಕಾಂತ ವ್ಯವಹಾರಾವಲಂಬಿಯಾದ ಮಿಥ್ಯಾದೃಷ್ಟಿಯ ವರ್ಣನೆ ಮಾಡಲಾಯಿತು. ಈಗ ಏಕಾಂತ ನಿಶ್ಚಯಾಭಾಸಿ ಮಿಥ್ಯಾದೃಷ್ಟಿಯ ವರ್ಣನೆ ಮಾಡಲಾಗುವುದು.

ಸಮಸ್ತ ಶಾಸ್ತ್ರಗಳ ತಾತ್ಪರ್ಯವು ವೀತರಾಗತೆಯಿದೆ. ನಾಲ್ಕೂ ಅನುಯೋಗರೂಪ ಶಾಸ್ತ್ರಗಳ ಸಾರವಂತೂ ಚಿದಾನಂದ ಸ್ವಭಾವದ ವೀತರಾಗೀ ಶ್ರದ್ಧೆ-ವೀತರಾಗೀ ಜ್ಞಾನ ಮತ್ತು ವೀತರಾಗೀ ಆಚರಣೆ ಮಾಡುವುದೇ ಇದೆ. ಮಧ್ಯದಲ್ಲಿ ರಾಗವಂತೂ ಬರುತ್ತದೆ ನಿಜ. ಆದರೆ ಅದು ಮೋಕ್ಷಮಾರ್ಗವಲ್ಲ.

ಆತ್ಮನು ಅನಂತ ಪರದ್ರವ್ಯಗಳಿಂದ ಬೇರೆಯಿದ್ದಾನೆ. ನಿಜವಾಗಿ ಒಂದು ಸಮಯದ ವಿಕಾರದಿಂದ ಕೂಡ ಅವನ ಸ್ವಭಾವವು ಬೇರೆಯಿದೆ. 'ಜ್ಞ' ಸ್ವಭಾವಿಯಾದ ವಸ್ತುವಿದ್ದು ಅದರ ಸನ್ಮುಖ ದೃಷ್ಟಿ ಮತ್ತು ಏಕಾಗ್ರತೆ ಮಾಡಿದ ಮೇಲೆ ಯಾವ ವೀತರಾಗ ಭಾವವಾಗುತ್ತದೆ ಅದೇ ಶಾಸ್ತ್ರಗಳ ಸಾರವಿದೆ. ಸ್ವಭಾವದ ಅವಲಂಬನದಿಂದಲೇ ಮೋಕ್ಷಮಾರ್ಗವಿದೆ. ಅಲ್ಲಿ ನಿಶ್ಚಯಪೂರ್ವಕ ಮಧ್ಯದಲ್ಲಿ ರಾಗವು ಬರುತ್ತದೆ ಅದು ವ್ಯವಹಾರವಿದೆ. ಇಂಥ ಮೋಕ್ಷವನ್ನು ಯಾವ ಜೀವನು ಮನ್ನಿಸುವುದಿಲ್ಲ, ಒಂದು ಶುಭ ಆಚರಣದಲ್ಲಿಯೇ ಮೋಕ್ಷಮಾರ್ಗ ಮನ್ನಿಸಿದ್ದಾನೆ ಅವನು ಮಿಥ್ಯಾದೃಷ್ಟಿಯಿದ್ದಾನೆ. ಅವನ ಸಲುವಾಗಿ ಗಾಥೆ ಹೇಳುತ್ತಾರೆ -

**ಚರಣಕರಣಪ್ಪಹಾಣಾ ಸುಸಮಯ ಪರಮತ್ಥಮುಕ್ಕವಾವಾರಾ ।**
**ಚರಣಕರಣಸ್ಸ ಸಾರಂ ಣಿಚ್ಛಯ ಸುದ್ಧಂ ಣ ಜಾಣಂತಿ ॥**

ಚೈತನ್ಯ ಸ್ವಭಾವದ ದೃಷ್ಟಿ ಮತ್ತು ಅವಲಂಬನವನ್ನು ಬಿಟ್ಟುಕೊಟ್ಟು ಬಾಹ್ಯದ ಆಚರಣದಲ್ಲಿ ಹಾಗೂ ರಾಗದಲ್ಲಿಯೇ ಯಾರಿಗೆ ಮುಖ್ಯತೆಯಾಗಿ ಹೋಗಿದೆ ಅಂಥ ಜೀವರುಗಳು ಸ್ವಸಮಯ ರೂಪ ಪರಮಾರ್ಥದ ವ್ಯಾಪಾರದಿಂದ

ರಹಿತರಿದ್ದಾರೆ. ಚರಣಕರಣದ ಸಾರರೂಪವಾದ ಯಾವ ಶುದ್ಧ ನಿಶ್ಚಯವಿದೆ ಅದನ್ನು ಅವರು ತಿಳಿಯುವುದಿಲ್ಲ. ಚೈತನ್ಯದ ಮುಖ್ಯತೆಯನ್ನು ಬಿಟ್ಟುಕೊಟ್ಟು ಒಂದು ರಾಗದ ಮುಖ್ಯತೆಯಿಂದಲೇ ಮೋಕ್ಷಮಾರ್ಗವನ್ನು ಮನ್ನಿಸುತ್ತಿದ್ದಾರೆ, ಅವರು ಮಿಥ್ಯಾದೃಷ್ಟಿಯಿದ್ದಾರೆ, ಶಾಸ್ತ್ರಗಳಲ್ಲಿ ಯಾವ ವ್ಯವಹಾರದ ಆಚರಣವನ್ನು ಹೇಳಿದೆ ಅದನ್ನು ಅವರು ಮೋಕ್ಷದ ಸಾಧನವೆಂದು ಮನ್ನಿಸಿದ್ದಾರೆ. ಆದರೆ ಆ ವ್ಯವಹಾರ ಕಥನದ ಸಾರನಂತೂ ಶುದ್ಧ ಆತ್ಮನಿದ್ದಾನೆ. ಅವನನ್ನು ಅವರು ತಿಳಿದುಕೊಳ್ಳುವುದಿಲ್ಲ. ಇಂಥ ಜೀವರುಗಳಿಗೆ ಮೋಕ್ಷಮಾರ್ಗವು ಇರುವುದಿಲ್ಲ. ಆ ಜೀವರುಗಳು ಏಕಾಂತ ವ್ಯವಹಾರಾವಲಂಬಿಯಾದ ಮಿಥ್ಯಾದೃಷ್ಟಿಗಳಿದ್ದಾರೆ.

ಮತ್ತು ಯಾವ ಜೀವನಿಗೆ ಶುದ್ಧ ನಿಶ್ಚಯ ಸ್ವಭಾವದ ಅರಿವಂತೂ ಇಲ್ಲ. ಆದರೆ ಕೇವಲ ಶುದ್ಧ ನಿಶ್ಚಯದ ಮಾತುಗಳನ್ನು ಆಡುತ್ತಾನೆ, ವ್ಯವಹಾರದ ಶುಭಭಾವವನ್ನು ಬಿಟ್ಟುಕೊಟ್ಟು ಸ್ವಚ್ಛಂದವನ್ನೇ ಸೇವಿಸುತ್ತಾನೆ ಅಂಥ ಏಕಾಂತ ನಿಶ್ಚಯಾಭಾಸೀ ಜೀವದ ಮಾತನ್ನು ಹೇಳುತ್ತಾರೆ. ಶುದ್ಧ ಸ್ವಭಾವದ ಶ್ರದ್ಧೆ-ಜ್ಞಾನವಾದ ನಂತರ ಅದರಲ್ಲಿ ಪೂರ್ಣ ಲೀನತೆಯಾಗುವುದಿಲ್ಲ, ಆಗ ಮಧ್ಯದಲ್ಲಿ ಗಣಧರದೇವರಿಗೆ ಕೂಡ ಶುಭರಾಗವು ಬರುತ್ತದೆ. ಆ ವ್ಯವಹಾರವನ್ನು ಯಾವ ಜೀವನು ಮನ್ನಿಸುವುದಿಲ್ಲ, ಭೂಮಿಕೆಯ ಅನುಸಾರ ಎಷ್ಟು ರಾಗವು ಕಡಿಮೆಯಾಗುತ್ತದೆ ಅದರ ವಿವೇಕ ಮಾಡುವುದಿಲ್ಲ, ಆದರೆ ಕೇವಲ ನಿಶ್ಚಯದ ಮಾತು ಆಡಿದರೆ ಅವನು ಕೂಡ ಸ್ವಚ್ಛಂದಿಯಿದ್ದಾನೆ.

ನಿಶ್ಚಯ ಸ್ವಭಾವವಂತೂ ಆದರಣೀಯವೇ ಇದೆ, ಆದರೆ ಯಾರಿಗೆ ನಿಶ್ಚಯ ಸ್ವಭಾವದ ದೃಷ್ಟಿಯು ಪ್ರಕಟವಾಗಿರುವುದು ಅವರ ಜ್ಞಾನದಲ್ಲಿ ಪರ್ಯಾಯದ ವಿವೇಕವು ಸರಿಯಾಗಿರುವದು. ಪರದ್ರವ್ಯದಿಂದ ಆತ್ಮನಿಗೆ ಪಾಪವು ತಗಲುವುದಿಲ್ಲವೆಂದು ಹೇಳಿ, ರಾತ್ರಿಯಲ್ಲಿ ತಿನ್ನುವ ಭಾವ ಮಾಡುತ್ತಾನೆ, ಸ್ತ್ರೀಸಂಗದ ಭಾವ ಮಾಡುತ್ತಾನೆ. ಈ ಪ್ರಕಾರ ಸ್ವಚ್ಛಂದ ಪರಿಣಾಮದ ಸೇವನೆ ಮಾಡುತ್ತಿದ್ದರೆ ಆ ಜೀವನು ಭ್ರಷ್ಟನಿದ್ದಾನೆ. ಅವನಿಗೆ ನಿಶ್ಚಯದ ಅರಿವು ಇರುವುದಿಲ್ಲ, ಅದರಂತೆ ವ್ಯವಹಾರದ ಅರಿವು ಕೂಡ ಇರುವುದಿಲ್ಲ. ಭಗವಂತರ ಪೂಜೆ, ದೇವ, ಗುರುಗಳ ವಿನಯ, ಸಾಧರ್ಮಿಗಳ ಕುರಿತು ಪ್ರೀತಿ, ಧರ್ಮದ ಪ್ರಭಾವನೆ ಮೊದಲಾದವುಗಳ ಉತ್ಸಾಹದ ಭಾವವು ನಾಲ್ಕನೆಯ-ಐದನೆಯ ಗುಣಸ್ಥಾನದಲ್ಲಿ ಧರ್ಮಾತ್ಮರುಗಳಿಗೆ ಬರದೇ ಇರುವುದಿಲ್ಲ. ಇಂಥ ಶುಭಭಾವನ್ನು ಆಡಂಬರವೆಂದು ಹೇಳಿ ಅದನ್ನು ಬಿಟ್ಟುಕೊಡುವುದು ಮತ್ತು ಅಶುಭಭಾವವನ್ನೇ ಸೇವಿಸಿದನೆಂದರೆ ಆ ಜೀವನಂತೂ ಸ್ವಚ್ಛಂದಿ ಇದ್ದಾನೆ ಮತ್ತು ಭ್ರಷ್ಟನಿದ್ದಾನೆ. ಆ ಜೀವನು ವಸ್ತುಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲ.

ನಿಶ್ಚಯದ ದೃಷ್ಟಿಯಿರುವವನಿಗೆ ಪರ್ಯಾಯದಲ್ಲಿ ಅದೆಷ್ಟು ವೈರಾಗ್ಯ ಭಾವವಿರುವುದು ! 'ಸಮ್ಯಗ್ದೃಷ್ಟಿಯ ಭೋಗವು ನಿರ್ಜರೆಯ ಹೇತುವಿದೆ'ಯೆಂದು ಸಮಯಸಾರದಲ್ಲಿ ಹೇಳಲಾಗಿದೆ, ಅದಂತೂ ಶುದ್ಧಸ್ವಭಾವದ ದೃಷ್ಟಿಯ ಅಪೇಕ್ಷೆಯಿಂದ ಹೇಳಿದೆ. ಭೋಗದ ಭಾವದ ಸಮಯದಲ್ಲಿ ಕೂಡ ಸಮ್ಯಗ್ದೃಷ್ಟಿಗೆ ಶುದ್ಧ ಸ್ವಭಾವದ ದೃಷ್ಟಿಯು ಬಿಟ್ಟು ಹೋಗುವುದಿಲ್ಲ. ಆ ಅಪೇಕ್ಷೆಯಿಂದ ಅದನ್ನು ದೃಷ್ಟಿಯ ಬಲದಿಂದ ನಿರ್ಜರೆಯೆಂದು ಹೇಳಲಾಗಿದೆ, ಆದರೆ ಯಾವ ರಾಗ ಭಾವವಿದೆ ಅದಂತೂ ಅವನಿಗೆ ಕೂಡ ಬಂಧದ ಕಾರಣವಿದೆ. ರಾಗಭಾವದ ಕಾರಣದಿಂದೇನು ನಿರ್ಜರೆ ಯಾಗುವುದಿಲ್ಲ. ಪರಿಣಾಮದ ವಿವೇಕ ಮಾಡದಿದ್ದರೆ ಮತ್ತು ಸ್ವಚ್ಛಂದಿಯಾಗಿ ಬೇಕಾದಂಥ ಭಾವದಲ್ಲಿ ವರ್ತಿಸಿದರೆ ಅವನು ಮೂಢನಿದ್ದಾನೆ. ಯಾವ ಭೂಮಿಕೆಯಲ್ಲಿ ಯಾವ ಯಾವದು ಯೋಗ್ಯವಿರುವುದು ಅದನ್ನು ತಿಳಿದುಕೊಳ್ಳಬೇಕಾಗುವುದು. ಅಂತರ್ಯದಲ್ಲಿ ಯಾವನಿಗೆ ಚಿದಾನಂದ ಜ್ಞಾಯಕ ಸ್ವಭಾವದ ದೃಷ್ಟಿಯಾಗಿರುವುದು ಅವನಿಗೆ ಬಹಳಷ್ಟು ರಾಗವು ಬಿಟ್ಟುಹೋಗುತ್ತದೆ. ರಾಗದ ನಿಮಿತ್ತಗಳ ಕಡೆಗಿರುವ ಪ್ರವೃತ್ತಿಯು ಕೂಡ ಬಿಟ್ಟು ಹೋಗುತ್ತದೆ. ಅಜ್ಞಾನಿಯಂತೂ ಸ್ವಭಾವದ ಜ್ಞಾನಮಾಡಿಕೊಳ್ಳುವುದಿಲ್ಲ. ಪರ್ಯಾಯದ ವಿವೇಕವನ್ನು ಕೂಡ

ಮಾಡಿಕೊಳ್ಳುವುದಿಲ್ಲ. 'ಎಂಥ ಪರ್ಯಾಯವಾಗುವುದಿದೆ ಅಂಥ ಪರ್ಯಾಯವು ಕ್ರಮಬದ್ಧ ಆಗುವುದೆ'ಂದು ಹೇಳಿ, ವ್ರತಾದಿಗಳ ಪರಿಣಾಮದಿಂದ ಉದಾಸೀನನಾಗಿ, ತೀವ್ರ ವಿಷಯ ಕಷಾಯ ಭಾವವನ್ನು ಸೇವಿಸುತ್ತಾನೆ. ಕುದೇವಾದಿಗಳನ್ನು ಮನ್ನಿಸುವನು. ಸತ್ಯದೇವ, ಗುರುಗಳ ಮೇಲೆ ಪ್ರೀತಿ ಬರುವುದಿಲ್ಲ. ಇಂಥ ಜೀವನಂತೂ ಮಿಥ್ಯಾದೃಷ್ಟಿಯಿದ್ದಾನೆ. ತನ್ನ ಪರಿವಾರದವರಿಗಿಂತ ಸಾಧರ್ಮಿ ಜೀವರುಗಳ ಮೇಲೆ ಧರ್ಮಿ ಜೀವನಿಗೆ ಅಧಿಕ ಪ್ರೀತಿಯು ಬರುತ್ತದೆ. ಯಾವನಿಗೆ ದೇವ, ಗುರುಗಳ ಮೇಲೆ ಪ್ರೀತಿ ಬರುವುದಿಲ್ಲ, ಸಾಧರ್ಮಿಗಳ ಮೇಲೆ ಪ್ರೀತಿ ಬರುವುದಿಲ್ಲ, ಆ ವಿಷಯ ಕಷಾಯದ ಪಾಪ ಪರಿಣಾಮವನ್ನು ಸೇವಿಸುತ್ತಾನೆ, ಅಂಥ ಜೀವನಂತೂ ಭ್ರಷ್ಟನಿದ್ದಾನೆ. ಮಧ್ಯದಲ್ಲಿ ಶುಭರಾಗ, ಪೂಜೆ, ಭಕ್ತಿ ಮೊದಲಾದ ವ್ಯವಹಾರ ಬರುತ್ತದೆ, ಆದರೆ ಮೋಕ್ಷಮಾರ್ಗವಂತೂ ನಿಶ್ಚಯಸ್ವಭಾವದ ಶ್ರದ್ಧೆ-ಜ್ಞಾನ ಮತ್ತು ಚಾರಿತ್ರರೂಪ ವೀತರಾಗ ಭಾವವೇ ಇದೆ. ನೋಡಿರಿ ಮಧ್ಯದಲ್ಲಿ ಭೂಮಿಕೆಯ ಅನುಸಾರ ಶುಭರಾಗರೂಪದ ವ್ಯವಹಾರವು ಬರುತ್ತದೆ ಅದನ್ನು ಜ್ಞಾನಿಯು ತಿಳಿಯುತ್ತಾನೆ, ಆದರೆ ಆ ರಾಗವನ್ನು ಮೋಕ್ಷಮಾರ್ಗವೆಂದು ಮನ್ನಿಸುವುದಿಲ್ಲ. ಒಂದುವೇಳೆ ವ್ಯವಹಾರದಿಂದ ನಿಶ್ಚಯವಾಗುವುದನ್ನು ಮನ್ನಿಸಿದರೆ ಅವನು ಕೂಡ ಏಕಾಂತ ವ್ಯವಹಾರಾಭಾಸಿ ಮಿಥ್ಯಾದೃಷ್ಟಿಯಿದ್ದಾನೆ. ಶುಭರಾಗವು ಮೋಕ್ಷಮಾರ್ಗವಿಲ್ಲದಿರುವುದರಿಂದ ಶುಭದ ವಿಕಲ್ಪಬಿಟ್ಟು ಅಶುಭರಾಗ ಮಾಡಿದರೆ, ಮದ್ಯ-ಮಾಂಸಾದಿಗಳ ಸೇವನೆಯ ಭಾವ ಮಾಡಿದರೆ ಮತ್ತು ನಿಶ್ಚಯದೃಷ್ಟಿಯಿದೆಯೆಂದು ಹೇಳಿದರೆ ಅವನು ಏಕಾಂತ ನಿಶ್ಚಯಾಭಾಸಿ ಮಿಥ್ಯಾದೃಷ್ಟಿಯಿದ್ದಾನೆ. ಮದ್ಯ-ಮಾಂಸ ಸೇವನೆಯ ವೃತ್ತಿಯು ಮಹಾಪಾಪವಿದ್ದು, ಇಂಥ ವೃತ್ತಿಯು ಧರ್ಮಾತ್ಮನಿಗೆ ಇರುವುದಿಲ್ಲ, ಪುರುಷಾರ್ಥಸಿದ್ಧ್ಯುಪಾಯದಲ್ಲಿ ಹೇಳುತ್ತಾರೆ -

**ಅಷ್ಟಾವನಿಷ್ಟದುಸ್ತರದುರಿತಾಯತನಾನ್ಯಮೂನಿ ಪರಿವರ್ಜ್ಯ ।**
**ಜಿನಧರ್ಮ ದೇಶನಾಯಾ ಭವಂತಿ ಪಾತ್ರಾಣಿ ಶುದ್ಧಧಿಯಃ ॥೭೪॥**

ಯಾವನು ದುಃಖದಾಯಕ ದುಸ್ತರ ಮತ್ತು ಪಾಪದ ಸ್ಥಾನರೂಪವಿರುವ ಈ ಎಂಟು ಪದಾರ್ಥಗಳನ್ನು ಬಿಟ್ಟು ನಿರ್ಮಲ ಬುದ್ಧಿಯುಳ್ಳವನಾಗುತ್ತಾನೆ ಅವನೇ ಜಿನಧರ್ಮದ ಉಪದೇಶವನ್ನಾಲಿಸಲು ಪಾತ್ರನಾಗುತ್ತಾನೆ.

ಮಾಂಸ ಭಕ್ಷಣ ಮೊದಲಾದ ಭಾವವಿರುವ ಜೀವನು ಉಪದೇಶ ಶ್ರವಣ ಮಾಡಲು ಕೂಡ ಪಾತ್ರನಿಲ್ಲ- ಅದರಿಂದ ಸಮ್ಯಗ್ದೃಷ್ಟಿ ಜೀವನಿಗಂತೂ ಮಾಂಸದ ಭಕ್ಷಣ ಹೇಗಿರುವುದು ! ಜೈನನಾಮ ಧಾರಕನಿಗೆ ಕೂಡ ಮಾಂಸಾದಿಗಳ ಆಹಾರವಿರುವುದಿಲ್ಲ. ಸ್ವಭಾವದರುಚಿಯಾದಂಥ ಜೀವನಿಗೆ ಮಾಂಸಾದಿಗಳನ್ನು ತಿನ್ನುವ ತೀವ್ರ ಪಾಪಭಾವವಿರುವುದಿಲ್ಲ. ಇಂಥ ತೀವ್ರರಾಗಭಾವವಂತೂ ಅವನಿಗೆ ಸಹಜ ಬಿಟ್ಟುಹೋಗಿರುತ್ತದೆ. ಸ್ವಭಾವದ ದೃಷ್ಟಿಕಾಯ್ದುಕೊಂಡು ಮಾಂಸಾದಿಗಳನ್ನು ತಿನ್ನಲು ದೋಷವಿಲ್ಲವೆಂದು ಕೇಳುವ ಜೀವನು ನಿಶ್ಚಯ ವ್ಯವಹಾರರೂಪ ಮೋಕ್ಷಮಾರ್ಗವನ್ನು ತಿಳಿದುಕೊಂಡಲ್ಲದೆ ನಿಂತುಕೊಂಡಿದ್ದಾನೆ. ಸಮ್ಯಕ್‌ಜ್ಞಾನಿಗೆ ಭೂಮಿಕೆಯ ಎಲ್ಲ ಪ್ರಕಾರದ ವಿವೇಕವು ಸ್ವಾಭಾವಿಕವಾಗಿ ಇರುತ್ತದೆ. ನಿಶ್ಚಯ-ವ್ಯವಹಾರಗಳೆರಡರ ಯಥಾರ್ಥ ಜ್ಞಾನವು ಇರಬೇಕಾಗುವುದು. ತನ್ನ ಕಲ್ಪನೆಯಿಂದ ಅಭೇದ ನಿಶ್ಚಯ ಸಾಧ್ಯ-ಸಾಧನಗಳನ್ನು ತನ್ನಲ್ಲಿ ಮನ್ನಿಸಿದ್ದಾನೆ ಮತ್ತು ಅಶುಭ ಸಹಿತ ಮಿಥ್ಯಾತ್ವ ರೂಪದ ಪ್ರಮಾದದಲ್ಲಿ ಮೂರ್ಛಿತನಾಗಿ ವರ್ತಿಸುತ್ತಾನೆ. ಉಭಯ ಭ್ರಷ್ಟನಾಗಿ ನಿಶ್ಚಯವನ್ನು ಪಡೆಯುವುದಿಲ್ಲ, ವ್ಯವಹಾರ ಶುಭಭಾವವನ್ನು ಪಡೆಯುವುದಿಲ್ಲ. ಮೋಕ್ಷಮಾರ್ಗದ ಪರ್ಯಾಯದ ಹಾಗೂ ರಾಗದ ವಿವೇಕವಿಲ್ಲ, ಸತ್ ಶಾಸ್ತ್ರಗಳ ಸ್ವಾಧ್ಯಾಯವಿಲ್ಲ, ಸಾಧರ್ಮಿಗಳ ಸಮಾಗಮವಿಲ್ಲ, ಸತ್ಯದೇವ-ಶಾಸ್ತ್ರ-ಗುರುಗಳ ವಿನಯವಿಲ್ಲ. ಸ್ವಚ್ಛಂದದಲ್ಲಿ ಮೂಢನಾಗಿ ಹೋಗಿದ್ದಾನೆ. ಪ್ರಮಾದರೂಪದ ಮದ್ಯದಿಂದ ಮತ್ತನಾಗಿ ಹೋಗಿದ್ದಾನೆ. ಶುದ್ಧ ಉಪಯೋಗದಲ್ಲಿದ್ದೇನೆಂದು ಹೇಳುತ್ತಾನೆ, ಆದರೆ ಗಣಧರ ದೇವರಿಗೆ ಕೂಡ ನಿರ್ವಿಕಲ್ಪತೆಯು ಅಧಿಕ ಸಮಯ ಉಳಿಯುವುದಿಲ್ಲವೆಂದ ಮೇಲೆ ನಿನಗೆಲ್ಲಿಂದ ಇರುವುದು?

ಯಾವ ಪ್ರಕಾರ ಒಬ್ಬನು ಬಹಳಷ್ಟು ತುಪ್ಪ-ಸಕ್ಕರೆ-ಹಾಲು ಮೊದಲಾದ ಗರಿಷ್ಟ ಪದಾರ್ಥಗಳನ್ನು ತಿಂದು, ಮೂರ್ಛಿತ, ಆಲಸೀ, ಜಡನಂತೆ ಆಗಿ ಹೋಗಿರುತ್ತಾನೆ. ಅದೇ ಪ್ರಕಾರ ಶುಷ್ಕ ಜ್ಞಾನಿಯು ಜ್ಞಾಯಕದ ಜಾಗೃತಿಯಿಲ್ಲದ ಮೂಢತೆಯಲ್ಲಿ ಆನಂದ ಮನ್ನಿಸಿ, ಸತ್ ಸಾಧನದ ನಿಷೇಧ ಮಾಡಿ, ಪ್ರಮಾದದಲ್ಲಿ ಮೂಢನಾಗಿ ಉಳಿದಿದ್ದಾನೆ. ಹೇಗೆ ಓರ್ವ ಸ್ತ್ರೀಯ ಪತಿಯು ಅಧಿಕ ಕಾಲದಿಂದ ಪರದೇಶಕ್ಕೆ ಹೋಗಿರುವನು ಮತ್ತು ಅವನ ಸಮಾಚಾರವೇನೂ ದೊರಕದಿರುವುದರಿಂದ ಓರ್ವ ಪುರುಷನ ಸೇವೆ ಮಾಡುವುದು, ಸನ್ಮಾನ ಮಾಡುವುದು, ತನು-ಮನ-ಧನ-ದ್ರವ್ಯ-ಕ್ಷೇತ್ರ-ಕಾಲ-ಕಷಾಯದ ಮೂಲಕ ಅವನ ಸೇವೆ ಮಾಡುತ್ತಾಳೆ. ಎಂದಾದರೊಮ್ಮೆ ಭಾಗ್ಯವಶದಿಂದ ಅವಳಿಗೆ ನಿಜವಾದ ಪತಿಯು ದೊರಕುವುದು ಮತ್ತು ಅವಳು ನಿಜವಾದ ಪತಿಯೊಡನೆ ಮೊದಲಿನಂತೆ ವರ್ತಿಸಿದರೆ ಅವಳು ಕುಲಟೆಯಾದ ಸ್ತ್ರೀ ಇದ್ದಾಳೆ. ಅದರಂತೆ ನಿಜವಾದ ದೇವಾದಿಕರ ಸಂಬಂಧದಲ್ಲಿ ಧರ್ಮಾತ್ಮರು ಪ್ರಾಮಾಣಿಕವಾಗಿರಬೇಕಾಗುವುದು. ಕೆಳಗಿನ ಭೂಮಿಕೆಯಲ್ಲಿ ಶುಭವಿರುತ್ತದೆ, ಆದರೆ ಅದರಲ್ಲಿ ಧರ್ಮ ಮನ್ನಿಸಿದರೆ ಅವನು ನಿಶ್ಚಯದಿಂದ ಭ್ರಷ್ಟನಿದ್ದಾನೆ ಮತ್ತು ನಿಶ್ಚಯ ವೀತರಾಗ ದೃಷ್ಟಿ ಹಾಗೂ ಸ್ವರೂಪಸ್ಥಿರತೆಯಿಲ್ಲದೆ ಕಥನ ಮಾತ್ರ ನಿಶ್ಚಯವುಳ್ಳ ಪುರುಷನು ಪ್ರಮಾದದಲ್ಲಿ ಸಂತೋಷ ಮನ್ನಿಸುತ್ತಾನೆ. ಅವರೀರ್ವರು ನಿಗೋದ ವನಸ್ಪತಿಯಾಗಬೇಕಾಗುವುದು.

ಮಿಥ್ಯಾತ್ವ ಅವಸ್ಥೆಯಲ್ಲಿ ತ್ರಸ ಪರ್ಯಾಯದ ಕಾಲವು ಹೆಚ್ಚು ಹೆಚ್ಚೆಂದರೆ ಎರಡು ಸಾವಿರ ಸಾಗರದ್ದಿದೆ. ಅಜ್ಞಾನಿಯು ಎಂದಾದರೂ ಪುಣ್ಯ ಮಾಡಿದರೆ ಸಾತಾವೇದನೀಯದ ಉತ್ಕೃಷ್ಟ ಸ್ಥಿತಿಯು ಹದಿನೈದು ಕೋಟಾಕೋಟಿ ಸಾಗರದ್ದು ಕಟ್ಟುವುದು, ಆದರೆ ಅದನ್ನು ಭೋಗಿಸುವ ಸಾಧ್ಯತೆಯಿಲ್ಲ. ಏಕೆಂದರೆ ಮಿಥ್ಯಾತ್ವದ ಪ್ರಬಲತೆಯಿರುವುದರಿಂದ ಆ ಸ್ಥಿತಿಯು ಮುರಿದು ಅಶುಭದ ಬಲದಿಂದ ನಿಗೋದದಲ್ಲಿಯೇ ಹೋಗುವನು. ಆಗ ಸಮ್ಯಗ್ದೃಷ್ಟಿಗೆ ಕರ್ಮದ ಸ್ಥಿತಿಯು ಅಂತಃಕೋಟಾಕೋಟಿಯಿಂದ ಹೆಚ್ಚಿಗೆ ಕಟ್ಟುವುದಿಲ್ಲ. ಜ್ಞಾನಿಗೆ ಶುಭದ ರಸವು ಅಧಿಕವಿದ್ದರೂ ಕೂಡ ಕರ್ಮದ ಸ್ಥಿತಿಯ ಯಾವ ಸಂಸಾರವಿದೆ ಅದು ಜ್ಞಾನಿಗೆ ದೀರ್ಘವಿರುವುದಿಲ್ಲ. ಎಂದಾದರೊಮ್ಮೆ ಬಂಧಿಸಿದರೂ ಕೂಡ ಅಷ್ಟು ಸ್ಥಿತಿಯನ್ನು ಭೋಗಿಸುವುದಿಲ್ಲ, ಆದರೆ ಸ್ವಭಾವದ ಬಲದಿಂದ ಆ ಕರ್ಮದ ಸ್ಥಿತಿಯನ್ನು ಕತ್ತರಿಸಿಹಾಕಿ ಮೋಕ್ಷದಲ್ಲಿಯೇ ಹೊರಟು ಹೋಗುವನು.

ಯಾವನಿಗೆ ನಿಶ್ಚಯ-ವ್ಯವಹಾರದ ಅರಿವಿಲ್ಲ ಅವನು ವ್ರತಾದಿಗಳನ್ನು ಶುಭಾಸ್ರವವೆಂದು ತಿಳಿದು, ಪುಣ್ಯಬಂಧದ ಭಯದಿಂದ ಬಿಟ್ಟುಕೊಡುತ್ತಾನೆ ಮತ್ತು ಮುನಿ ಪದದಲ್ಲಿ ಇರಲು ಯೋಗ್ಯವಾದ ಇಪ್ಪತ್ತೆಂಟು ಮೂಲಗುಣ ಮೊದಲಾದ ಶುಭರಾಗರೂಪ ಕರ್ಮಚೇತನದ ಏಕಾಂತ ನಿಷೇಧ ಮಾಡುತ್ತಾನೆ. ಪುಣ್ಯವು ಬೇಕಾಗಿಲ್ಲವೆಂದು ಹೇಳಿ ವ್ಯವಹಾರ ಶುಭದ ಅವಲಂಬನ ಬಿಟ್ಟುಕೊಡುತ್ತಾನೆ ಮತ್ತು ನಿಃಕರ್ಮದಶೆರೂಪದ ನಿರ್ಮಲ ಜ್ಞಾನಚೇತನವನ್ನಂತೂ ಯಾವುದೇ ರೀತಿಯಿಂದ ಅಂಗೀಕಾರ ಮಾಡಿಯೇ ಇಲ್ಲ. ಈ ಕಾರಣದಿಂದ ಪರಾಶ್ರಯದಲ್ಲಿಯೇ ಸಾವಧಾನನಿದ್ದಾನೆ. ಅತಿಶಯ ಚಂಚಲ ಭಾವವನ್ನು ಧಾರಣ ಮಾಡಿದ್ದಾನೆ. ದೇಹ-ಸಂಸಾರ-ಭೋಗದ ಪ್ರವೃತ್ತಿಯಿದೆ. ನಿಶ್ಚಯ-ವ್ಯವಹಾರದ ಕುರಿತು ಯಾವುದೇ ವಿವೇಕವಿಲ್ಲ. ವ್ಯವಹಾರ ರತ್ನತ್ರಯದಲ್ಲಿ ಕೂಡ ಪ್ರೀತಿಯಿಲ್ಲದಿರುವುದರಿಂದ ಅವನು ಪ್ರಕಟ ಅಪ್ರಕಟ ಪ್ರಮಾದದ ಆಧೀನನಿದ್ದಾನೆ. ಮಹಾ ಅಶುಭ ಭಾವದಿಂದ ಭವಿಷ್ಯಕಾಲದಲ್ಲಿ ಏಕೇಂದ್ರಿಯ ದಶೆಯನ್ನು ಅಥವಾ ಯಾವುದರಲ್ಲಿ ಕರ್ಮಫಲಚೇತನವು ಮುಖ್ಯವಿದೆ ಅದನ್ನು ಪಡೆಯುವವನಿರುವುದರಿಂದ ವನಸ್ಪತಿಯ ಸಮಾನ ಜಡನಿದ್ದಾನೆ.

ಸಮಯಸಾರದಲ್ಲಿ ಹೇಳಿರುವುದೇನೆಂದರೆ ಅಜ್ಞಾನಿಯು ಶಾಸ್ತ್ರಗಳ ಅಧ್ಯಯನ ಮಾಡಿಯೂ ಕೂಡ ಪರಾಶ್ರಯರೂಪ ಸಂಸಾರದ ಪುಷ್ಟಿಯನ್ನೇ ಮಾಡುತ್ತಾನೆ. ಜ್ಞಾನವರ್ಧಕವಿರುವ ಭೂತಾರ್ಥದ ತ್ಯಾಗ ಮಾಡಿ ವ್ಯವಹಾರದಲ್ಲಿ ವರ್ತನ ಮಾಡುತ್ತಾನೆ. ವಿದ್ವಾಂಸನೆಂಬ ಹೆಸರನ್ನು ಧಾರಣ ಮಾಡಿ, ನಿಶ್ಚಯ ತತ್ತ್ವಜ್ಞಾನದ ಸ್ವಾಶ್ರಯವನ್ನು

ಬಿಟ್ಟುಕೊಟ್ಟು ಪರಾಶ್ರಯವಿರುವ ವ್ಯವಹಾರದ ಪಕ್ಷ ವಹಿಸಿಕೊಂಡು ವರ್ತಿಸುತ್ತಾನೆ, ಆದರೆ ಕರ್ಮಕ್ಷಯದ ವಿಧಾನವಂತೂ ನಿಶ್ಚಯ ಪರಮಾರ್ಥ ಸ್ವರೂಪ ಜ್ಞಾಯಕನ ಆಶ್ರಯದಿಂದಲೇ ಇದೆ. ಅದನ್ನು ಅವನು ತಿಳಿಯುವುದಿಲ್ಲ. ಭಗವಂತರು ವ್ಯವಹಾರ ಫಲವನ್ನಂತೂ ಸಂಸಾರವೆಂದು ಹೇಳಿದ್ದಾರೆ. ಅದರದು ಅವನಿಗೆ ಅರಿವಿಲ್ಲ. ಯಾವನು ನಿಶ್ಚಯದ ಹೆಸರನ್ನು ಸ್ವೀಕರಿಸಿ, ಶುಭ ಪರಿಣಾಮದ ವಿವೇಕವನ್ನು ತ್ಯಜಿಸಿ, ಪ್ರಮಾದಲ್ಲಿಯೇ ವರ್ತಿಸುತ್ತಾನೆ, ಭೂಮಿಕೆಯ ಅನುಸಾರ ವ್ಯವಹಾರವು ಹೇಗಿರುವುದೆಂಬುದನ್ನು ತಿಳಿದುಕೊಳ್ಳುವುದಿಲ್ಲ ಅವನು ಸ್ವಚ್ಛಂದಿಯಾಗಿ, ಅನ್ಯಾಯ, ಅಭಕ್ಷ ಸೇವನೆ ಮಾಡಿ, ಮಹಾ ಅಶುಭಭಾವ ಮಾಡಿ, ಶೀಘ್ರದಲ್ಲಿಯೇ ನರಕ-ನಿಗೋದಕ್ಕೆ ಇಳಿಯುವನು. ನಿಜವಾದ ದೇವ, ಗುರು, ಧರ್ಮ, ಸಾಧರ್ಮಿಗಳ ಕುರಿತು ಪ್ರೀತಿ, ಪೂಜೆ, ಭಕ್ತಿ, ಅನುಮೋದನೆ ಮಾಡುವುದಿಲ್ಲ ಅವನು ಕೇವಲ ಪಾಪವನ್ನೇ ಕಟ್ಟಿಕೊಳ್ಳುತ್ತಾನೆ.

ಯಾವನು ನಿಶ್ಚಯದ ರುಚಿ ಮತ್ತು ಜ್ಞಾನ ಮಾಡಿಕೊಳ್ಳುವುದಿಲ್ಲ, ನಿಶ್ಚಯದ ವಿಷಯ ಯಾವುದು ನಿಶ್ಚಯದ ವಿಷಯ ಮಾಡುವಂಥದು ತ್ರಿಕಾಲವಿದೆಯೋ ಅಥವಾ ವರ್ತಮಾನವಿದೆಯೆಂಬುದನ್ನು ಕೂಡ ತಿಳಿಯುವುದಿಲ್ಲ. ನಿಶ್ಚಯನಯವು ಶ್ರುತಜ್ಞಾನದ ಪರ್ಯಾಯವಿರುವುದರಿಂದ ವರ್ತಮಾನವಿದೆ ಹಾಗೂ ಅದರ ವಿಷಯವು ತ್ರಿಕಾಲವಿದೆ. ಅದರ ಅಂತರಂಗ ಸಾಧನವು ತ್ರಿಕಾಲ ಶುದ್ಧ ಕಾರಣಪರಮಾತ್ಮ ಸ್ವಭಾವವಿದೆ, ಅದರ ಫಲವು ವೀತರಾಗಿ ಅವಿನಾಶೀ ಶಾಂತಿಯಿದೆ. ಅದರ ಅರಿವಿಲ್ಲ-ನಿಜವಾದ ದೇವಾದಿಕರ ವಿನಯ, ನವತತ್ತ್ವ, ಆರು ದ್ರವ್ಯಗಳ ಜ್ಞಾನ ಮಾಡಿಕೊಂಡಿಲ್ಲ. ನಿಜವಾದ ಗುರುಗಳ ವಿನಯ ಮಾಡುವ ಪಾತ್ರತೆ ತಂದುಕೊಂಡಿಲ್ಲ, ಆತ್ಮನು ಆತ್ಮನ ಗುರು ಇದ್ದಾನೆಂದು ಹೇಳುತ್ತಾನೆ. ಆಂತರ್ಯದಿಂದ ಜ್ಞಾನವಾಗಿರಬೇಕು, ಆದರೆ ನಿಜವಾದ ಜ್ಞಾನದಲ್ಲಿ ಯಾವ ಜ್ಞಾನಿಯು ನಿಮಿತ್ತರೂಪರಿದ್ದರೆಂಬುದರ ವಿವೇಕವಿಲ್ಲದಿದ್ದರೆ ಅವನು ಮೂಢನಿದ್ದಾನೆ. ಸ್ವ-ಪರಪ್ರಕಾಶಕ ಸಮ್ಯಗ್ಜ್ಞಾನವಾದರೆ ಸತ್‌ದ ಸತ್ ನಿಮಿತ್ತ ಯಾವುದಿರುವುದನ್ನು ತಿಳಿದೇ ತಿಳಿಯುತ್ತಾನೆ, ಸ್ವಸನ್ಮುಖ ವೀತರಾಗೀ ದೃಷ್ಟಿಯ ಮುಖ್ಯತೆಯು ಇದ್ದೇ ಇರುವುದು. ಈ ರೀತಿಯಿಂದ ನಿಶ್ಚಯ-ವ್ಯವಹಾರದ ಸಂಧಿಯಿದ್ದರೆ ಅವನಿಗೆ ಮೋಕ್ಷಮಾರ್ಗವಿರುವುದು.

ಈ ನೂರೆಪ್ಪತ್ತೆರಡನೆಯ ಗಾಥೆಯಿಂದ ಶ್ರೀ ಅಮೃತಚಂದ್ರಾಚಾರ್ಯದೇವರು ಬಹಳಷ್ಟು ಭಾವ ತೆಗೆದಿದ್ದಾರೆ. ಯಾವ ಜೀವನು ಮುಕ್ತಿಯ ಅಭಿಲಾಷೆಯುಳ್ಳವನಿದ್ದಾನೆ ಆ ಜೀವನು ಸಮಸ್ತ ಪರದ್ರವ್ಯಗಳ ಕುರಿತಿರುವ ರಾಗವನ್ನು ತ್ಯಜಿಸಿ ನಿವೃತ್ತ ಸ್ವರೂಪದಲ್ಲಿ ಏಕಾಗ್ರತೆ ಮಾಡುವನು. ಯಾವ ಜೀವನು ರಾಗದ ಇಚ್ಛುಕನಿದ್ದಾನೆ ಆ ಜೀವನು ನಿವೃತ್ತಿಯ ಇಚ್ಛುಕನಿಲ್ಲ ಮತ್ತು ಯಾವ ಜೀವನು ನಿವೃತ್ತಿಯ ಇಚ್ಛುಕನಿದ್ದಾನೆ ಆ ಜೀವನು ರಾಗದ ಇಚ್ಛುಕನಿಲ್ಲ. ಮಧ್ಯದಲ್ಲಿ ರಾಗವು ಬಂದರು ಕೂಡ ಧರ್ಮೀ ಜೀವನು ಅದರ ಇಚ್ಛುಕನಿಲ್ಲ. ರಾಗದ ಅವಲಂಬನದಿಂದ ಲಾಭವಿದೆಯೆಂದು ಮನ್ನಿಸುವ ಜೀವನು ಭವಸಾಗರವನ್ನು ದಾಟುವ ಸಾಧ್ಯತೆಯಿಲ್ಲ. ಜ್ಞಾಯಕ ಸ್ವರೂಪದ ಶ್ರದ್ಧೆ-ಜ್ಞಾನ-ಏಕಾಗ್ರತೆಯರೂಪದ ವೀತರಾಗ ಭಾವದಿಂದಲೇ ಭವಸಾಗರವನ್ನು ಪಾರುಗಾಣಬಹುದು. ಆದುದರಿಂದ ಯಾವ ಜೀವನು ನಿವೃತ್ತಿಯ ಇಚ್ಛುಕನಿರುವನು ಆ ಜೀವನು ಸ್ವಲ್ಪಕೂಡ ರಾಗ ಮಾಡಕೂಡದು. ಮೊದಲು ರಾಗದ ರುಚಿಯು ದೂರವಾಗುವುದು ಮತ್ತು ನಂತರ ಸ್ವರೂಪದಲ್ಲಿ ಸ್ಥಿರತೆಯಾಗಿ ರಾಗವು ಸರ್ವಥಾ ಬಿಟ್ಟುಹೋಗಿ ಮುಕ್ತಿಯಾಗುವುದು.

'ಸ್ವಲ್ಪ ಕೂಡ ರಾಗ ಮಾಡಬೇಡೆ'ಂದು ಇಲ್ಲಿ ಹೇಳಿದೆ. ಈ ಉಪದೇಶವನ್ನು ಜೀವನಿಗೆ ಕೊಡಲಾಗಿದೆ. ಏಕೆಂದರೆ ಕರ್ಮವು ರಾಗಮಾಡಿಸುವುದಿಲ್ಲ. ಆದರೆ ಜೀವನು ತನ್ನ ಪರ್ಯಾಯದಲ್ಲಿ ಮಾಡುತ್ತಾನೆ. ತಾನೇ ಸ್ವಭಾವದ ಆಶ್ರಯದಿಂದ ಅದನ್ನು ತ್ಯಜಿಸುತ್ತಾನೆ. ಒಂದು ವೇಳೆ ಕರ್ಮವು ರಾಗಮಾಡಿಸುತ್ತಿದ್ದರೆ 'ಎಲೈ ನಿಮಿತ್ತಗಳೇ ! ನೀವು ದೂರವಾಗಿರಿ, ನೀವು ವಿಕಾರವನ್ನುಂಟು ಮಾಡಬೇಡಿರೆ'ಂದು ಕರ್ಮಕ್ಕೆ ಉಪದೇಶ ಕೊಡಬೇಕಾಗುವದು, ಆದರೆ

ಹಾಗೆ ಇಲ್ಲ. ಇಲ್ಲಿಯಂತೂ ಜೀವಕ್ಕೆ ಉಪದೇಶ ಕೊಟ್ಟಿದೆ. ಯಾರಿಗೆ ತಮ್ಮ ಪರ್ಯಾಯದ ಸ್ವತಂತ್ರತೆಯದು ಕೂಡ ಅರಿವಿಲ್ಲ ಅವರಂತೂ ಮೂಢರಿದ್ದಾರೆ. ಓ ಪ್ರಭು ! ನೀನು ನಿನ್ನ ಚಿದಾನಂದ ಸ್ವಭಾವದ ಜ್ಞಾನ ಮಾಡಿಕೊಂಡು ಅದರ ಆಶ್ರಯದಿಂದ ರಾಗಭಾವ ಬಿಡು ಮತ್ತು ಭವಸಾಗರವನ್ನು ದಾಟಿ ಹೋಗು ! ಸಾಧಕನಿಗೆ ಮಧ್ಯದಲ್ಲಿ ರಾಗವು ಬರುತ್ತದೆ, ಆದರೆ ಆಂತರ್ಯದಲ್ಲಿ ಸ್ವಭಾವದ ದೃಷ್ಟಿ ಮತ್ತು ಅವಲಂಬನವು ಬಿದ್ದುಕೊಂಡಿದೆ. ಇಂಥ ದಶೆಯಲ್ಲಿ ನಿಶ್ಚಯ-ವ್ಯವಹಾರದ ಸಂಧಿಯಿದೆ. ಸಾಧಕ ಜೀವನು ಸ್ವಭಾವದ ದೃಷ್ಟಿಯಿಟ್ಟುಕೊಂಡು ರಾಗರೂಪದ ವ್ಯವಹಾರವನ್ನು ತಿಳಿಯುತ್ತಾನೆ ಮತ್ತು ಸ್ವಭಾವದ ಅವಲಂಬನದಿಂದ ಅದನ್ನು ದೂರಮಾಡುವ ಉದ್ಯಮ ಕೂಡ ಮಾಡುತ್ತಾನೆ.

ಯಾವ ಪುರುಷರು ಮೋಕ್ಷದ ನಿಮಿತ್ತದಿಂದ ಯಾವಾಗಲೂ ಉದ್ಯಮಶೀಲರಿದ್ದಾರೆ ಅವರು ಮಹಾ ಭಾಗ್ಯವಂತರಿದ್ದಾರೆ. ನಿಶ್ಚಯ-ವ್ಯವಹಾರ ಇವೆರಡು ನಯಗಳಲ್ಲಿ ಯಾವೊಂದರದು ಪಕ್ಷವಹಿಸುವುದಿಲ್ಲ-ಸರ್ವಥಾ ಮಧ್ಯಸ್ಥಭಾವವಿಡುತ್ತಾರೆ. ಶುದ್ಧ ಚೈತನ್ಯಸ್ವರೂಪ ಆತ್ಮತತ್ತ್ವದಲ್ಲಿ ಸ್ಥಿರತೆಮಾಡುವ ಸಲುವಾಗಿ ನಿರಂತರ ಸಾವಧಾನರಿರುತ್ತಾರೆ.

ಇದು ಸಾಧಕ ಜೀವದ ಮಾತು ಇದೆ. ನಾನು ಚಿದಾನಂದ ಸ್ವರೂಪದ ಕಾರಣ ಶುದ್ಧ ಜೀವನಿದ್ದೇನೆಂಬ ಅರಿವು ಯಾವನಿಗೆ ಆಗಿದೆ ಮತ್ತು ಸ್ವಭಾವದ ಉದ್ಯಮವು ಕೂಡ ವರ್ತಿಸುತ್ತಿದೆ ಅಂಥ ಧರ್ಮಾತ್ಮ ಸಂತ ಮುನಿವರರು ಮಹಾಭಾಗ್ಯಶಾಲಿಯಿದ್ದಾರೆ. ಇಲ್ಲಿ ಅವರನ್ನು ಭಗವಂತರೆಂದು ಹೇಳಿದೆ ಅವರು ಮೋಕ್ಷದ ಉದ್ಯಮ ಮಾಡುತ್ತಾರೆ. ಇದರಲ್ಲಿ ಸಮ್ಯಗ್ದೃಷ್ಟಿ ಹಾಗೂ ಶ್ರಾವಕರು ಕೂಡ ಬಂದು ಬಿಡುತ್ತಾರೆ. ಅಮೃತಚಂದ್ರಾಚಾರ್ಯ ದೇವರು ಹೇಳುತ್ತಾರೆ- **''ಯೇತು ಪುನರಪುನರ್ಭವಾಯ ನಿತ್ಯವಿಹಿತೋದ್ಯೋಗಮಹಾಭಾಗಾ ಭಗವಂತೋ ನಿಶ್ಚಯವ್ಯವಹಾರಯೋರ-ನ್ಯತರಾನವಲಂಬನೇನಾತ್ಯಂತಮಧ್ಯಸ್ಥೀಭೂತಾಃ । ಶುದ್ಧಚೈತನ್ಯರೂಪಾತ್ಮತತ್ತ್ವವಿಶ್ರಾಂತಿವಿರಚನೋನ್ಮುಖಾ''** ಮೋಕ್ಷಮಾರ್ಗವನ್ನು ಸಾಧಿಸುತ್ತಿರುವ ಮಹಾಭಾಗ್ಯಶಾಲಿ ಮುನಿಭಗವಂತರ ಮಾತನ್ನೇನು ಹೇಳುವುದು ? ಆ ಆರನೆಯ-ಏಳನೆಯ ಭೂಮಿಕೆಯಲ್ಲಿ ಜೀಕುತ್ತಿರುವ ಸಂತರಂತೂ ಪಂಚ ಪರಮೇಷ್ಠೀ ಪದದಲ್ಲಿ ಕೂಡಿದ ಭಗವಂತರಿದ್ದಾರೆ. ಗಣಧರದೇವರುಕೂಡ **'ಣಮೋ ಲೋಏ ಸವ್ವಸಾಹೂಣಂ'** - ಎಂದು ಹೇಳಿ ಅವರ ಚರಣಗಳಿಗೆ ನಮಸ್ಕರಿಸುತ್ತಾರೆ. ವ್ಯವಹಾರದಲ್ಲಿ-ಬಾಹ್ಯದಲ್ಲಿ ನಮಸ್ಕಾರ ಮಾಡುವುದಿಲ್ಲ. ಆ ಮುನಿವರರು ನಿಶ್ಚಯ ಮತ್ತು ವ್ಯವಹಾರವೆರಡೂ ನಯಗಳನ್ನು ಹೇಗಿವೆ ಹಾಗೆ ತಿಳಿಯುತ್ತಾರೆ. ಯಾವುದೇ ನಯದ ಏಕಾಂತ ಪಕ್ಷ ವಹಿಸುವುದಿಲ್ಲ ಚೈತನ್ಯ ಸ್ವಭಾವದ ಅವಲಂಬನ ಕಾಯ್ದುಕೊಂಡು ಪರ್ಯಾಯದ ಭೇದವನ್ನು ಕೂಡ ತಿಳಿಯುತ್ತಾರೆ. ಒಂದು ವೇಳೆ ಪರ್ಯಾಯದ ಶುದ್ಧತೆಯ ಭೇದಗಳನ್ನು ಮನ್ನಿಸದಿದ್ದರೆ ತೀರ್ಥದ ನಾಶವಾಗುತ್ತದೆ. ಧ್ರುವ ಚಿದಾನಂದ ಸ್ವಭಾವದ ದೃಷ್ಟಿ ತಪ್ಪಿದರೆ ಯಾವುದರ ಆಶ್ರಯದಿಂದ ತೀರ್ಥ ಉಳಿಯುವುದು ? ಆದುದರಿಂದ ನಿಶ್ಚಯ ಮತ್ತು ವ್ಯವಹಾರಗಳೆರಡನ್ನು ಹೇಗಿವೆ ಹಾಗೆ ತಿಳಿದುಕೊಳ್ಳಬೇಕಾಗುವುದು. ಶುದ್ಧ ಚೈತನ್ಯಸ್ವರೂಪ ಆತ್ಮತತ್ತ್ವದಲ್ಲಿ ಸ್ಥಿರತೆ ಮಾಡುವ ಸಲುವಾಗಿ ಮುನಿವರರು ಸಾವಧಾನರಿರುತ್ತಾರೆ. ಮಧ್ಯದಲ್ಲಿ ರಾಗವಿರುತ್ತದೆ ಅದರಜ್ಞಾನಮಾಡಿಸಿದೆ, ಆದರೆ ಎಲ್ಲಿ ಸಾವಧಾನರಿರುತ್ತಾರೆಂದರೆ - **''ಶುದ್ಧಚೈತನ್ಯರೂಪಾತ್ಮ ತತ್ತ್ವವಿಶ್ರಾಂತಿವಿರಚನೋನ್ಮುಖಾಃ''** ಶುದ್ಧ ಚೈತನ್ಯಸ್ವರೂಪದ ಆತ್ಮತತ್ತ್ವದಲ್ಲಿ ಲೀನವಾಗುವ ಸಲುವಾಗಿ ಮುನಿವರರು ಉದ್ಯಮ ಮಾಡುತ್ತಾರೆ. ಅವರು ಕ್ಷಣಿಕ ರಾಗಾದಿ ಭಾವಗಳಲ್ಲಿ ಸಾವಧಾನರಿಲ್ಲ, ಪಂಚಮಹಾವ್ರತದ ವೃತ್ತಿಯುಂಟಾದರೆ ಅದರದು ಕೂಡ ಭಾವನೆಯಿಲ್ಲ, ಸ್ವರೂಪದಲ್ಲಿ ಲೀನತೆಯದೇ ಭಾವನೆಯಿದೆ. ನವತತ್ತ್ವಗಳಲ್ಲಿ ಶುದ್ಧಚೈತನ್ಯಸ್ವರೂಪದ ಜೀವತತ್ತ್ವವಿದೆ. ಅದರಲ್ಲಿ ಏಕಾಗ್ರವಾಗುವುದರದೇ ಮುನಿವರರ ಪುರುಷಾರ್ಥವಿದೆ; ಅಜೀವತತ್ತ್ವವಂತೂ ಭಿನ್ನವಿದ್ದು ಅದರಲ್ಲಿ ಪುರುಷಾರ್ಥ ಮಾಡುವುದಿಲ್ಲ. ಪುಣ್ಯ-ಪಾಪ, ಆಸ್ರವ-ಬಂಧ ಭಾವಗಳಂತೂ ವಿಕಾರವಿದ್ದು ಅದರಲ್ಲಿ ಕೂಡ ಮುನಿವರರ ಸಾವಧಾನತೆಯಿಲ್ಲ. ಇನ್ನು ಸಂವರ

ನಿರ್ಜರೆಗಳಂತೂ ಕ್ಷಣಿಕ ಪರ್ಯಾಯಗಳಿದ್ದು ಅದರಲ್ಲಿ ಸ್ಥಿರತೆಯಾಗುವ ಸಾಧ್ಯಾತೆಯಿಲ್ಲ. ಅದರಂತೆ ಮೋಕ್ಷ ಪರ್ಯಾಯವಂತೂ ವರ್ತಮಾನದಲ್ಲಿಲ್ಲ. ಅದಕ್ಕಾಗಿ ಧ್ರುವಚಿದಾನಂದ ಸ್ವರೂಪದಲ್ಲಿಯೇ ಸ್ಥಿರವಾಗುವ ಪ್ರಯತ್ನವು ವರ್ತಿಸುತ್ತದೆ.

'ಸ್ಥಿರತೆ'ಯು ಸ್ವಯಂ ಸಂವರ-ನಿರ್ಜರೆ ರೂಪದ ಪರ್ಯಾಯವಿದೆ, ಆದರೆ ಸ್ಥಿರರೂಪ ಧ್ರುವ ಕಾರಣ ಪರಮಾತ್ಮನ ಅವಲಂಬನದಿಂದ ಸ್ಥಿರತೆಯು ಪ್ರಕಟವಾಗುತ್ತದೆ. ಪರ್ಯಾಯದ ಅವಲಂಬನದಿಂದ ಸ್ಥಿರತೆಯು ಉಳಿಯುವುದಿಲ್ಲ. ನವತತ್ತ್ವಗಳನ್ನು ತಿಳಿಯುವುದು ಅದು ವ್ಯವಹಾರವಿದೆ. ಶುದ್ಧ ಜೀವತತ್ತ್ವದ ಆಶ್ರಯ ಮಾಡುವುದು ನಿಶ್ಚಯವಿದೆ. ಇಲ್ಲಿ ಮೋಕ್ಷ ಪುರುಷಾರ್ಥದ ಮಾತು ಹೇಳಿದೆ. ಈಗಂತೂ ಮೋಕ್ಷವಾಗುವುದಿಲ್ಲವೆಂದ ಮೇಲೆ ಮೋಕ್ಷ ಪುರುಷಾರ್ಥದ ಮಾತನ್ನೇಕೆ ಹೇಳುವಿರೆಂದರೆ ? ವಸ್ತುವು ತ್ರಿಕಾಲ ಮುಕ್ತಸ್ವರೂಪವಿದೆ, ಅದರ ಪ್ರತೀತಿಯನ್ನಾದರೂ ಮಾಡು ! ಆ ವಸ್ತುವಿನ ದೃಷ್ಟಿ ಮಾಡಿದರೆ 'ದೃಷ್ಟಿಮೋಕ್ಷ'ವಂತೂ ಇಲ್ಲಿ ಆಗಿ ಹೋಗುವುದು. ಆ ದ್ರವ್ಯದ ಆಶ್ರಯದಿಂದ ಪ್ರರ್ಯಾಯದಲ್ಲಿ ಕೂಡ ಅಲ್ಪ ಕಾಲದಲ್ಲಿ ಮುಕ್ತಿಯಾಗಿ ಹೋಗುವುದು. ಶುದ್ಧ ಚೈತನ್ಯಸ್ವರೂಪ ಆತ್ಮನ ದೃಷ್ಟಿಮಾಡಿ, ಅದರಲ್ಲಿ ಏಕಾಗ್ರತೆಯ ಪ್ರಯತ್ನ ಮಾಡುವುದೇ ಮೋಕ್ಷದ ಕಾರಣವಿದೆ. ಪರ್ಯಾಯದಲ್ಲಿ ಒಂದು ಸಮಯದ ಸಂಸಾರವಿದೆ, ಆದರೆ ಅದು ತ್ರಿಕಾಲ ದ್ರವ್ಯದಲ್ಲಿ ಇಲ್ಲ. ಇಂಥ ತ್ರಿಕಾಲೀ ದ್ರವ್ಯದ ದೃಷ್ಟಿಯಿಂದ ಸಮ್ಯಗ್ದರ್ಶನವಾಗುವುದು, ಆಗ ಮುಕ್ತ ದ್ರವ್ಯವು ಪ್ರತೀತಿಯಲ್ಲಿ ಬಂದು ಬಿಡುವುದು ಮತ್ತು ಆ ದ್ರವ್ಯದ ಆಶ್ರಯದಿಂದ ಪರ್ಯಾಯದಲ್ಲಿ ಮುಕ್ತಿಯ ಪುರುಷಾರ್ಥವು ಪ್ರಕಟವಾಗುವುದು. ಆದುದರಿಂದ ಸ್ವಭಾವದಲ್ಲಿ ಸಾವಧಾನವಿರಲು ಹೇಳಿದೆ. ಆದರೆ ಶಾಸ್ತ್ರ ಹಾಗೂ ದೇಹ ಮೊದಲಾದ ಪರದಲ್ಲಿ ಸಾವಧಾನವಿರಲು ಹೇಳಿಲ್ಲ. ಇದು ಬಂಧದಿಂದ ಬಿಡುಗಡೆ ಹೊಂದುವ ಮಾರ್ಗವಿದೆ. ಆಗಮ, ಯುಕ್ತಿ, ಅನುಭವದಿಂದ ಮೊದಲು ಮೋಕ್ಷದ ರೀತಿ ತಿಳಿದುಕೊಳ್ಳಬೇಕಾಗುವುದು.

ಮುನಿಗಳು ಶುದ್ಧಸ್ವರೂಪದಲ್ಲಿ ಸ್ಥಿರತೆಯ ಸಲುವಾಗಿ ಸಾವಧಾನರಿರುತ್ತಾರೆ. ಆಂಶಿಕ ದುರ್ಬಲತೆಯಿಂದ ಅಸಾವಧಾನತೆಯಿರುತ್ತದೆ, ಆದರೆ ಅದು ಮುಖ್ಯವಿಲ್ಲ. ಬಟ್ಟೆ ಬಿಟ್ಟು ನಗ್ನವಾಗುವಲ್ಲಿ ಸಾಧುಪದವಿಲ್ಲ. ಮುನಿಪದವು ಮೋಕ್ಷಮಾರ್ಗವಿದೆ ಪರಮೇಷ್ಠಿ ಪದದಲ್ಲಿ ನಿವಾಸವಿರುವಂಥ ಮತ್ತು ಶುದ್ಧ ಚೈತನ್ಯದ ಧ್ಯಾನದಲ್ಲಿ ವರ್ತಿಸುವ ಭಾವಲಿಂಗಿ ಮುನಿತನ ಸಾಧಕದಶೆಯಿದೆ. ಅದರಲ್ಲಿ ಆಂಶಿಕ ಪ್ರಮಾದ ಬಾಧಕಭಾವದ ಪ್ರವೃತ್ತಿಯಾಗುತ್ತದೆ. ಪ್ರಮಾದದಲ್ಲಿ ಶರೀರ ಕ್ರಿಯೆಯ ಮಾತಿಲ್ಲ. ಪ್ರಮಾದ ವೃತ್ತಿಯಾಗುವುದನ್ನು ದೂರ ಮಾಡುವ ಸಲುವಾಗಿ ಶಾಸ್ತ್ರಾನುಸಾರ ಕ್ರಿಯಾಕಾಂಡ ಪರಿಣತಿರೂಪ ಪ್ರಾಯಶ್ಚಿತ್ತ-ಸ್ವಭಾವಸನ್ಮುಖತೆ ರೂಪದ ವಿಶೇಷ ಉಗ್ರತೆ ಮಾಡುತ್ತಾರೆ. ಗುರುಗಳ ಎದುರು ವಿನಯದಿಂದ ದೋಷ ಹೇಳುತ್ತಾರೆ. ವ್ಯವಹಾರ ವಿಧಿಯ ಮಹಿಮೆ ಮಾಡುತ್ತಿರುವಂತೆನಿಸಿದರೂ ಶುಭರಾಗ ಮಾಡುವ ಮಾತಿಲ್ಲ, ಆದರೆ ವೀತರಾಗ ಮಾರ್ಗದ ಮಹಿಮೆಯ ಮಾತು ಇದೆ.

ಆರನೇ ಭೂಮಿಕೆಯಲ್ಲಿ ಶರೀರದಿಂದ ಯಾವುದೇ ಪ್ರಮಾದವಾಗಿದ್ದರೆ, ಭಾವದಲ್ಲಿ ದೋಷವಿಲ್ಲದಿದ್ದರೂ ಕೂಡ ಶರೀರ ಸಂಬಂಧದ ದೋಷ ತಿಳಿದು, ಗುರುಗಳ ಹತ್ತಿರ ಹೋಗಿ ವ್ಯವಹಾರ ಆಲೋಚನೆ ಮಾಡುತ್ತಾರೆ. ಜಡದ ಕ್ರಿಯೆಯ ಕರ್ತೃವಿಲ್ಲ, ಪರಜೀವ ಸತ್ತುದರ ಪಾಪವಿಲ್ಲ, ಪರ್ಯಾಯ ಬದಲಿಸುವ ಕರ್ತೃ ಬುದ್ಧಿಯಿಲ್ಲ. ದ್ರವ್ಯದೃಷ್ಟಿಯು ಮುಖ್ಯವಿದೆ, ಅದು ಬಿಟ್ಟುಹೋಗಿಲ್ಲ.

ಆರನೇ ಗುಣಸ್ಥಾನದಲ್ಲಿ ಕೆಲವೊಮ್ಮೆ ಅಲ್ಪ ಆರ್ತಧ್ಯಾನ-ಅಶುಭರಾಗವಾಗಿ ಹೋಗುತ್ತದೆ, ಆದರೆ ಭೂಮಿಕೆಯ ವಿರುದ್ಧ ರಾಗವಿರುವುದಿಲ್ಲ. ದೃಷ್ಟಿಯಲ್ಲಿ ವೀತರಾಗತೆಯಿದ್ದರೂ ಚಾರಿತ್ರದಲ್ಲಿ ಶಿಥಿಲತೆ ಬೇಕಿಲ್ಲದಿರುವುದರಿಂದ ಜ್ಞಾನದಲ್ಲಿ ಉಗ್ರತೆ ಮಾಡುವ ಸಲುವಾಗಿ ಪ್ರಾಯಶ್ಚಿತ್ತದ ವಿಚಾರ ಮಾಡುತ್ತಾನೆ. ಪ್ರಮಾದವಂತೂ ಕ್ರಮಬದ್ಧದಲ್ಲಿದೆ, ಆದರೆ ಮುನಿ

ಪದದಲ್ಲಿ ಆರನೇ ಗುಣಸ್ಥಾನದಲ್ಲಿ ಅಧಿಕಕಾಲವಿರುವುದಿಲ್ಲ. ವಿಕಲ್ಪದಲ್ಲಿ ಅಲ್ಪಪ್ರಮಾದವಾಗಿ ಹೋಗುತ್ತದೆ. ಆರನೇ ಗುಣಸ್ಥಾನಕ್ಕೆ ಅಯೋಗ್ಯವಾದ ಪ್ರಮಾದವು ಬಂದುಬಿಟ್ಟರೆ ಶಾಸ್ತ್ರಾನುಸಾರ ಗುರುಗಳ ಹತ್ತಿರ ಹೋಗಿ ಪ್ರಾಯಶ್ಚಿತ್ತ ಸ್ವೀಕರಿಸುವನು ಮತ್ತು ಸ್ವಸನ್ಮುಖನಾಗಿ ರಾಗದಿಂದ, ನಿಮಿತ್ತದಿಂದ ಅತ್ಯಂತ ಉದಾಸೀನಭಾವ ಧಾರಣ ಮಾಡುತ್ತಾನೆ. ಮುನಿಗೆ ಪರಮೇಶ್ವರ ಪದವಿರುವುದರಿಂದ ಅಲ್ಪ ದೋಷವನ್ನೂ ಬಚ್ಚಿಡುವುದಿಲ್ಲ. ನಿರಂತರ ವೀತರಾಗ ಭಾವದಿಂದ ಜಾಗ್ರತನಿದ್ದು ಅಲ್ಪಕಾಲದಲ್ಲಿ ಕೇವಲಜ್ಞಾನ ಪಡೆಯುತ್ತಾನೆ. ಮುನಿಯು ಯಥಾಶಕ್ತಿ ತನ್ನ ನಿಜ ಚೈತನ್ಯದ ಮೂಲಕ ತನ್ನನ್ನೇ ಅನುಭವಿಸುತ್ತಾನೆ. ಚಾರಿತ್ರದ ಶಾಂತಿಯ ಅನುಭವ ಮಾಡುತ್ತಾನೆ. ಮಧ್ಯದಲ್ಲಿ ವ್ಯವಹಾರ ರಾಗವನ್ನು ಜ್ಞೇಯರೂಪದಿಂದ ತಿಳಿಯುತ್ತಾನೆ, ಆದರೆ ಅದನ್ನು ಮೋಕ್ಷಮಾರ್ಗವೆಂದು ಮನ್ನಿಸುವುದಿಲ್ಲ.

ಜ್ಞಾನವನ್ನಂತೂ ಯಥಾರ್ಥವಾಗಿ ಮಾಡಿಕೊಳ್ಳಬೇಕಲ್ಲವೇನು ? ಅದಿಲ್ಲದೆ ನಿಜವಾದ ಮಾರ್ಗದೊರಕುವುದಿಲ್ಲ. ವ್ಯವಹಾರ ರತ್ನತ್ರಯದ ಶುಭರಾಗವು ಬರುತ್ತದೆ. ಆದರೆ ದೃಷ್ಟಿಯಲ್ಲಿ ಅದರದು ನಿಷೇಧವಿದೆ.

ಆಂತರ್ಯದಿಂದ ವೀತರಾಗ ಮಾರ್ಗದ ಅಬಿರುಚಿ ಮಾಡದಿದ್ದರೆ ವಸ್ತುವು ಆಂತರ್ಯದಿಂದ ಉತ್ತರ ಕೊಡುವುದಿಲ್ಲ.-ಚೇತನದ ಜಾಗೃತಿಯಾಗುವುದಿಲ್ಲ. ಹೇಗೆ ಅಧಿಕಾರಿಗೆ ಯೋಗ್ಯ ರೀತಿಯಿಂದ ಯೋಗ್ಯ ಹೆಸರಿನಲ್ಲಿ ಮನವಿ ಸಲ್ಲಿಸಿದರೆ ಅವನು ಉತ್ತರ ಕೊಡುವನು. ಹಾಗೆ ಚಿದಾನಂದ ಆತ್ಮನನ್ನು ಪೂರ್ವಾಪರ ವಿರೋಧದಿಂದ ರಹಿತ ಯಥಾರ್ಥ ಶ್ರದ್ಧೆ-ಜ್ಞಾನದಿಂದ ತಿಳಿದುಕೊಂಡು, ನಂತರ ಅಂತರ್ಮುಖವಾದರೆ ನಿಜವಾದ ಶಾಂತಿಯ ಅನುಭವವಾಗುವುದು. ಮುನಿಗಳಿಗೆ ಅಖಂಡ ಚಿದಾನಂದ ಸ್ವಭಾವದ ಮುಖ್ಯತೆಯೇ ಇರುವುದರಿಂದ ಅವರು ಯಾವಾಗಲೂ ನಿಜಸ್ವರೂಪದ ಉಪಯೋಗಿಯಿರುವರು. ದೃಷ್ಟಿಯಲ್ಲಿ ನಿತ್ಯ ಸ್ಥಿರವಿರುವುದರ ಬೆನ್ನು ಹತ್ತಿರುತ್ತಾರೆ ಮತ್ತು ಕ್ಷಣದಲ್ಲಿ ಏಳನೇ ಗುಣಸ್ಥಾನದ ನಿರ್ವಿಕಲ್ಪ ವೀತರಾಗ ಆನಂದವನ್ನು ಅನುಭವಿಸುತ್ತಾರೆ.

ರಾಗವು ಬರುತ್ತದೆ ಅದನ್ನು ತಿಳಿದುಕೊಳ್ಳದಿದ್ದರೆ ಜ್ಞಾನವು ಮಿಥ್ಯೆಯಿದೆ. ಕರ್ಮದ ಉದಯಾನುಸಾರ ರಾಗವಾಗುತ್ತದೆಂದು ಮನ್ನಿಸಿದರೆ ಅದು ದೋಷವಿದೆ. ತ್ರಿಕಾಲ ಸ್ವಭಾವದಲ್ಲಿ ರಾಗ ಮನ್ನಿಸುವುದು ಕೂಡ ದೋಷವಿದೆ. ಈ ಎಲ್ಲ ಮಿಥ್ಯಾಭಾವಗಳಿಂದ ರಹಿತ ನಿರ್ಮಲ ಶ್ರದ್ಧೆಯೊಡನೆ ಅನೇಕಾಂತವಾದೀ ಸಾಧಕ ದಶೆಯುಳ್ಳ ಜೀವನಿದ್ದಾನೆ ಅವನು ನಿಜಸ್ವರೂಪದ ಸ್ಥಿರತೆಯ ಅನುಸಾರ ಕ್ರಮ ಕ್ರಮದಿಂದ ಕರ್ಮ ಮಾಲಿನ್ಯವನ್ನು ನಾಶಮಾಡುತ್ತಾನೆ.

'ಕರ್ಮದ ನಾಶಮಾಡುತ್ತಾನೆ'ನ್ನುವುದು ವ್ಯವಹಾರ ಕಥನವಿದೆ. ರಾಗದ ತ್ಯಾಗಮಾಡುವುದೆನ್ನುವುದು ಕೂಡ ನಾಮ ಮಾತ್ರವಿದೆ. ಜ್ಞಾನಸ್ವಭಾವದಲ್ಲಿ ಏಕಾಗ್ರತೆ ಮಾಡಿದರೆ ರಾಗವು ಬಿಟ್ಟುಹೋಗುತ್ತದೆ. ಪರಮಾರ್ಥದಿಂದ ರಾಗದ ತ್ಯಾಗದ ಕರ್ತೃತ್ವವೂ ಆತ್ಮನಿಗಿಲ್ಲ. ಏಕೆಂದರೆ ಜ್ಞಾನಸ್ವಭಾವಿಯಾದ ಆತ್ಮನು ತನ್ನ ಸ್ವಭಾವದಿಂದ ಎಂದೂ ಬಿಟ್ಟುಹೋಗಿಲ್ಲ. ನಿಮಿತ್ತ-ನೈಮಿತ್ತಿಕ ಸಂಬಂಧವನ್ನು ತಿಳಿಸಿಕೊಡುವ ಸಲುವಾಗಿ ಕರ್ಮವನ್ನು ಮತ್ತು ರಾಗವನ್ನು ಬಿಡುವ ಕಥನವು ಉಪಚಾರದಿಂದ ಇದೆ. ನಿಜವಾಗಿ ಆತ್ಮನನ್ನು ರಾಗ ಹಾಗೂ ಕರ್ಮವನ್ನು ಬಿಡುವವನೆಂದು ಮನ್ನಿಸಿದರೆ ಆತ್ಮನು ರಾಗ ಮತ್ತು ಜಡಕರ್ಮದ ಕರ್ತೃವಾಗಿ ಹೋಗುತ್ತಾನೆ. ಆತ್ಮನು ತನ್ನ ಜ್ಞಾನದಲ್ಲಿ ಸ್ಥಿರತೆ ಮಾಡಿದರೆ ಆಗ ಕರ್ಮ ಮತ್ತು ರಾಗದ ಅಭಾವವು ಸ್ವಯಂ ಆಗಿ ಹೋಗುತ್ತದೆ.

ಸಮಸ್ತ ಶಾಸ್ತ್ರಗಳ ಸಾರವು ವೀತರಾಗತೆಯಿದೆ. ವ್ಯವಹಾರ-ನಿಶ್ಚಯದ ಕಥನವು ಬೇಕಾದಷ್ಟು ಬಂದರೂ ಕೂಡ ಶುದ್ಧ ಆತ್ಮದ್ರವ್ಯದ ಆಶ್ರಯದಿಂದ ವೀತರಾಗತೆ ಮಾಡುವುದೇ ತಾತ್ಪರ್ಯವಿದೆ.

ಪೂರ್ಣರೂಪದಿಂದ ಸ್ವಭಾವದ ಆಶ್ರಯವಿಲ್ಲದಿರುವ ಸಾಧಕದಶೆಯಲ್ಲಿ ಅಲ್ಪರಾಗವಿದೆ. ತನ್ನ ಆಶ್ರಯದಿಂದಲೇ ಅವನು ಕ್ರಮದಿಂದ ಕರ್ಮದ ನಾಶ ಮಾಡುತ್ತಾನೆ, ಜಡಕರ್ಮದ ನಾಶಮಾಡುವ ಸಾಧ್ಯತೆಯಿಲ್ಲ, ಆದರೆ ಅದು ನಿಮಿತ್ತದ ಕಥನವಿದೆ. ಚೈತನ್ಯದ ಆಶ್ರಯದಿಂದ ಸ್ಥಿರತೆ ವೃದ್ಧಿಸಿದರೆ ಶುಭಾಶುಭ ರಾಗದ ನಾಶವಾಗಿ ಹೋಗುತ್ತದೆ.

ಆರನೇ-ಏಳನೇ ಗುಣಸ್ಥಾನದಲ್ಲಿ ಜೀಕುವ ಮುನಿಯ ಮಾತಿದೆ. ಶಾಂತ ಜ್ಞಾನಾನಂದ ಸ್ವರೂಪದಲ್ಲಿ ಸ್ಥಿರ-ಅಕಂಪರಾಗಿ ಹೋಗಿದ್ದಾರೆ. ಅದೇನು ವನಸ್ಪತಿಯಾಗಿ ಹೋಗಿದ್ದಾರೆಯೋ ! ಅಜ್ಞಾನೀ ಎಂದರೆ ಪಾಪದಲ್ಲಿ ಲೀನನಿರುವವನನ್ನು ಹಾಗೂ ಕೇವಲ ಒಂದು ಶುಭರಾಗದಲ್ಲಿ ಲೀನನಿರುವವನನ್ನು ಕೂಡ ಜಡದಂತೆ ವನಸ್ಪತಿಯೆಂದು ಹೇಳಲಾಗಿತ್ತು. ಇಲ್ಲಿ ಜ್ಞಾನಾನಂದದಲ್ಲಿ ಜಾಗ್ರತನಿರುವವನನ್ನು ವನಸ್ಪತಿಯಂತೆ ಸ್ಥಿರವೆಂದು ಹೇಳಲಾಗಿದೆ.

ಯಾರು ಕರ್ಮಫಲಚೇತನದ ಅನುಭವ ಎಂದರೆ ಹರ್ಷ-ಶೋಕ ಮೊದಲಾದ ಕಲುಷತೆಯ ವೇದನ ದೂರ ಮಾಡಿದ್ದಾರೆ ಅವರಿಗೆ ಚೈತನ್ಯಾನಂದದಲ್ಲಿ ಉಗ್ರಸ್ಥಿರತೆಯ ಅವಲಂಬನದಿಂದ ಪರದ ಕಡೆಗೆ ಪ್ರವೃತ್ತಿಯೇ ಆಗುವುದಿಲ್ಲ. ಕರ್ಮಚೇತನಾ ಎಂದರೆ ಶುಭಾಶುಭರಾಗ-ವ್ಯವಹಾರ ರತ್ನತ್ರಯ, ಪಂಚ ಮಹಾವ್ರತದ ರಾಗ ಅದರ ಅನುಭವ ಕೂಡ ಅವರಿಗೆ ಇಲ್ಲ. ಆದರೆ ಕೇವಲಜ್ಞಾನ ಚೇತನಾಮಯ ಶುದ್ಧಾತ್ಮಾನುಭವದಿಂದ ಆತ್ಮಿಕ ಸುಖದಿಂದ ಪರಿಪೂರ್ಣರಿದ್ದಾರೆ ಅವರು ಶೀಘ್ರವೇ ಸ್ವಾನುಭವದ ಉಗ್ರ ಅವಲಂಬನ ತೆಗೆದುಕೊಂಡು ಸಂಸಾರ ಸಾಗರದಿಂದ ಪಾರಾಗಿ ಸರ್ವ ಶಾಸ್ತ್ರಗಳ ಸಾರರೂಪ ಮೂಲ ಶಾಶ್ವತ ಆತ್ಮಿಕ ಮೋಕ್ಷಪದದ ಭೋಕ್ತಾರರಾಗುತ್ತಾರೆ.

ನಿಶ್ಚಯವಿಲ್ಲದ ಏಕಾಕೀ ವ್ಯವಹಾರವು ಅಸತ್ಯವಿದೆ ಮತ್ತು ನಿಶ್ಚಯಪೂರ್ವಕ ವ್ಯವಹಾರವಿಲ್ಲದಿದ್ದರೆ ಪೂರ್ಣವೀತರಾಗತೆಯಾಗುವುದು, ಸಾಧಕತನವು ಉಳಿಯಲಾರದು.

ಈಗ ಆಚಾರ್ಯ ಭಗವಂತರು ತಾವು ಕೈಕೊಂಡ ಕಾರ್ಯವನ್ನು ಪೂರ್ಣಗೊಳಿಸುತ್ತ ಹೇಳಿರುವುದೇನೆಂದರೆ ಪ್ರವಚನದ ಕುರಿತಾಗಿರುವ ಭಕ್ತಿಯಿಂದ ಪ್ರೇರಿತನಾಗಿ ಮಾರ್ಗದ ಪ್ರಭಾವನೆಯ ಸಲುವಾಗಿ ನಾನು ಈ ಗ್ರಂಥದ ರಚನೆ ಮಾಡಿದ್ದೇನೆ.

**ಮಗ್ಗ ಪ್ಪಭಾವಣಟ್ಠಂ ಪವಯಣಭತ್ತಿ ಪ್ಪಚೋದಿದೇಣಮಯಾ ।**
**ಭಣಿಯಂ ಪವಯಣಸಾರಂ ಪಂಚತ್ಥಿಯಸಂಗಹಂ ಸುತ್ತಂ ।।೧೭೩।।**

**ಪ್ರವಚನದ ಭಕ್ತಿಯಿಂ ಪ್ರೇರಿತನಾದ ನಾನು ಮಾರ್ಗಪ್ರಭಾವನೆಯ ಕುರಿತು ।**
**ಪ್ರವಚನದ ಸಾರಭೂತ 'ಪಂಚಾಸ್ತಿಕಾಯಸಂಗ್ರಹ' ಹೇಳಿರುವೆನು ।।೧೭೩।।**

ನಾನು-ಶ್ರೀ ಕುಂದಕುಂದಾಚಾರ್ಯದೇವರು-ಈ ಪಂಚಾಸ್ತಿಕಾಯದ ರಚನೆ ಮಾಡಿದ್ದೇನೆ. ಇದರಲ್ಲಿ ಪೂರ್ವಾಚಾರ್ಯರುಗಳ ಪರಂಪರೆಯಿಂದ ನಡೆದುಕೊಂಡು ಬಂದ ಶಬ್ದಬ್ರಹ್ಮದ ಅನುಸಾರ ಹೇಳಿದ್ದೇನೆ, ಇದರಲ್ಲಿ ಮುಖ್ಯರೂಪದಿಂದ ಐದು ದ್ರವ್ಯಗಳ ವರ್ಣನೆಯಿದೆ, ಹಾಗೂ ಕಾಲದ್ರವ್ಯದ ವರ್ಣನೆಯು ಗೌಣವಿದೆ. ಶ್ರೀಮದ್ ರಾಜಚಂದ್ರರು ಈ ಶಾಸ್ತ್ರದ ಸಂಕ್ಷೇಪ ಅರ್ಥ ಬರೆದಿದ್ದಾರೆ, ಅದರಲ್ಲಿ ಈ ಗಾಥೆಯ ಅರ್ಥವನ್ನು ಹೀಗೆ ಮಾಡಿದ್ದಾರೆ.

'ಮಾರ್ಗದ ಪ್ರಭಾವನೆಯಾಗುವ ಸಲುವಾಗಿ ಪ್ರವಚನದ ಭಕ್ತಿಯಿಂದ ಅಂತರ್ಯದಲ್ಲಿ ಉತ್ಪನ್ನವಾದಂಥ ಪ್ರೇರಣೆಯಿಂದ ಪ್ರವಚನದ ರಹಸ್ಯಭೂತ 'ಪಂಚಾಸ್ತಿಕಾಯ'ದ ಸಂಗ್ರಹರೂಪ ಈ ಶಾಸ್ತ್ರವನ್ನು ನಾನು ಹೇಳಿದ್ದೇನೆ.'

ಇಲ್ಲಿ ನಾನು ಎಂದರೆ ಶ್ರೀಮದ್ ರಾಜಚಂದ್ರನೆಂದು ತಿಳಿದುಕೊಳ್ಳಬಾರದು, ಆದರೆ ಭಗವಾನ ಕುಂದಕುಂದಾಚಾರ್ಯದೇವರು ರಚಿಸಿದ್ದಾರೆಂದು ತಿಳಿದುಕೊಳ್ಳಬೇಕು. ಜಗತ್ತಿನಲ್ಲಿ ಆರೂ ದ್ರವ್ಯಗಳು ಸ್ವತಂತ್ರ ಸ್ವಯಂಸಿದ್ಧ

ಅಸ್ತಿತ್ವವುಳ್ಳವುಗಳಿವೆ. ಜೀವದ ಅಸ್ತಿತ್ವವು ಬೇರೆಯಿದೆ ಮತ್ತು ಪುದ್ಗಲದ ಅಸ್ತಿತ್ವವು ಬೇರೆಯಿದೆ. ಕರ್ಮವು ಪುದ್ಗಲಾಸ್ತಿಕಾಯವಿದೆ. ಅದು ಜೀವದಲ್ಲಿ ಏನನ್ನೂ ಮಾಡುವುದಿಲ್ಲ ಮತ್ತು ಜೀವವು ಅದರಲ್ಲಿ ಏನನ್ನೂ ಮಾಡುವುದಿಲ್ಲ. ಈ ಪಂಚಾಸ್ತಿಕಾಯ ಶಾಸ್ತ್ರದಲ್ಲಿ ದ್ವಾದಶಾಂಗರೂಪ ಜಿನವಾಣಿಯ ರಹಸ್ಯವಿದೆ. ಭಗವಾನ ಕುಂದಕುಂದಾಚಾರ್ಯ ದೇವರು ಹೇಗಿದ್ದರೆಂಬುದನ್ನು ಸ್ವಯಂ ಹೇಳಿರುವುದೇನೆಂದರೆ-ನಾನು ಜಿನವಾಣಿಯ ಕುರಿತಾಗಿರುವ ಭಕ್ತಿಯಿಂದ ಪ್ರೇರಿತನಾಗಿ ಜಿನಮಾರ್ಗದ ಪ್ರಭಾವನೆಯ ಸಲುವಾಗಿ ಈ ಶಾಸ್ತ್ರದ ರಚನೆ ಮಾಡಿದ್ದೇನೆ. ಅಯ್ಯಾ ! ವೀತರಾಗರೂಪದ ಮೋಕ್ಷಮಾರ್ಗವು ಜಗತ್ತಿನಲ್ಲಿ ಬೆಳಗುತ್ತಿರಲಿ ಮತ್ತು ಅದರ ಪ್ರಭಾವನೆಯಾಗಲೆಂಬ ಸದುದ್ದೇಶದಿಂದ ಈ ಶಾಸ್ತ್ರದ ರಚನೆ ಮಾಡಿದ್ದೇನೆ. ಆತ್ಮನ ಆಶ್ರಯದಿಂದ ಯಾವ ಪರಮ ನಿರಪೇಕ್ಷ ವೀತರಾಗಿ ಶ್ರದ್ಧೆ-ಜ್ಞಾನ-ಚಾರಿತ್ರವು ಪ್ರಕಟವಾಗುವುದು, ಅದು ಮಾರ್ಗವಿದೆ. ಆ ಮಾರ್ಗದ ಪ್ರಭಾವನೆಯ ಸಲುವಾಗಿ ಈ ಶಾಸ್ತ್ರದ ರಚನೆ ಮಾಡಲಾಗಿದೆ, ಎಂದರೆ ರಾಗದಿಂದ ಧರ್ಮವಾಗುತ್ತದೆಂದು ಮನ್ನಿಸುವುದು ಅಥವಾ ಕರ್ಮವು ವಿಕಾರ ಮಾಡಿಸುತ್ತದೆಯೆಂದು ಮನ್ನಿಸುವುದು ಮಾರ್ಗವಲ್ಲ, ಆದರೆ ಅದು ಕುಮಾರ್ಗವಿದೆ. ಆದರೆ ತಾನು ತನ್ನ ಪುರುಷಾರ್ಥದಲ್ಲಿ ಸ್ವತಂತ್ರನಿರುವುದರಿಂದಲೇ ನಿಜವಾಗಿ ಮಾರ್ಗದ ಪ್ರಭಾವನೆಯಾಗುತ್ತದೆ. ತಾನು ತನ್ನ ಸ್ವಭಾವದ ಆಶ್ರಯದಿಂದ ವೀತರಾಗೀ ಶ್ರದ್ಧೆ-ಜ್ಞಾನ-ಚಾರಿತ್ರದ ಪ್ರಕಟತೆ ಮಾಡುವುದರ ಹೆಸರು ಮಾರ್ಗವಿದೆ ಮತ್ತು ಅದುವೇ ಭಗವಾನ್ ಜಿನೇಂದ್ರ ದೇವರ ಆಜ್ಞೆಯಿದೆ, ಅದರ ಪ್ರಭಾವನೆಯ ಸಲುವಾಗಿ ಈ ಶಾಸ್ತ್ರದ ರಚನೆ ಮಾಡಲಾಗಿದೆ, ಎಂದರೆ ಯಾವ ಜೀವನು ಶಾಸ್ತ್ರದೊಳಗಿಂದ ರಾಗದ ತಾತ್ಪರ್ಯವನ್ನು ತೆಗೆಯುತ್ತಾನೆ ಆ ಜೀವನು ಶಾಸ್ತ್ರವನ್ನು ತಿಳಿದುಕೊಳ್ಳುವುದಿಲ್ಲ.

ಸಮ್ಯಗ್ದೃಷ್ಟಿಗೆ ಚಾರಿತ್ರಮೋಹದ ರಾಗವಾಗುತ್ತದೆ. ಆ ರಾಗವೇನು ಚಾರಿತ್ರಮೋಹ ಕರ್ಮದ ಉದಯದ ಕಾರಣದಿಂದ ಆಗುವುದಿಲ್ಲ; ಆದರೆ ಅದು ತನ್ನ ಪರ್ಯಾಯದ ದುರ್ಬಲತೆಯಿಂದ ಆಗುತ್ತದೆಯೆಂದು ಧರ್ಮಾತ್ಮ ಜೀವನು ತಿಳಿಯುತ್ತಾನೆ. ಒಂದು ವೇಳೆ ರಾಗವನ್ನು ಸ್ವಭಾವವೆಂದು ಮನ್ನಿಸಿದರೆ ಪರ್ಯಾಯಬುದ್ಧಿಯೆಂದು ಹೇಳಲಾಗುವುದು, ಆದರೆ ಪರ್ಯಾಯದಲ್ಲಿ ರಾಗವನ್ನು ತಿಳಿಯುವುದು ಪರ್ಯಾಯಬುದ್ಧಿಯಲ್ಲ ಮತ್ತು ಪರ್ಯಾಯದಲ್ಲಿ ಯಾವ ರಾಗವಾಗುತ್ತದೆ ಅದನ್ನು ಕರ್ಮವು ಉತ್ಪನ್ನ ಮಾಡಿದೆಯೆಂದು ಮನ್ನಿಸಿದರೆ ಅವನು ಕೂಡ ಮೂಢ-ಮಿಥ್ಯಾದೃಷ್ಟಿಯಿದ್ದಾನೆ. ಇನ್ನು ಯಾವನೋ ಓರ್ವನು ರಾಗವನ್ನು ಕರ್ಮವೇ ಮಾಡಿಸುತ್ತದೆಯೆಂದು ಮನ್ನಿಸಿಕೊಂಡರೆ ಅದುವೇ ರಾಗದಿಂದ ಭೇದಜ್ಞಾನವಾಯಿತು, ಆದರೆ ಹೀಗೆ ಹೇಳುವಂಥವನಿಗೆ ಭೇದಜ್ಞಾನದ ಅರಿವಿರುವುದಿಲ್ಲ. ತನ್ನ ಪರ್ಯಾಯದ ದುರ್ಬಲತೆಯಿಂದ ರಾಗವಾಗುತ್ತದೆಯೆಂದು ತನ್ನ ಪರ್ಯಾಯವನ್ನು ಕೂಡ ಅವನು ಸ್ವತಂತ್ರವೆಂದು ತಿಳಿದುಕೊಳ್ಳದಿದ್ದರೆ ಅವನಿಗೆ ರಾಗದಿಂದ ಭೇದಜ್ಞಾನ ಮಾಡುವುದರ ಮಾತು ಉಳಿಯುವುದಿಲ್ಲ. ಅವನಂತೂ ಮಿಥ್ಯಾದೃಷ್ಟಿಯಿದ್ದಾನೆ. ಅವನಿಗೆ ಕರ್ಮದಿಂದ ಭಿನ್ನತೆಯದೂ ಕೂಡ ಅರಿವಿಲ್ಲದಿದ್ದರೆ ಅವನು ರಾಗದಿಂದ ಭೇದಜ್ಞಾನವನ್ನು ಎಲ್ಲಿಂದ ತಾನೆ ಮಾಡುವ ಸಾಧ್ಯತೆಯಿದೆ ?

ಯಾವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವಿದೆ ಅದುವೇ ನಿಜವಾದ ಮಾರ್ಗವಿದೆ. ಆ ಮಾರ್ಗದ ಪ್ರಭಾವನೆಯನ್ನು ಯಾವಾಗ ಮಾಡುವ ಸಾಧ್ಯತೆಯಿದೆಯೆಂದರೆ ಯಾವನು ಆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಈ ಮೂರರಲ್ಲಿ ಸ್ವತಂತ್ರನಿರುತ್ತಾನೆ ಆಗ ಸಾಧ್ಯವಿದೆ ಮತ್ತು ಚಾರಿತ್ರಮೋಹ ಕರ್ಮವು ಯಾವಾಗ ಕ್ಷಯವಾಗುತ್ತದೆ ಆಗ ಚಾರಿತ್ರವಾಗುತ್ತದೆಯೆಂದು ಯಾರು ಕರ್ಮದ ಆಧೀನವಿದ್ದಾರೆ ಆ ಜೀವದ ಕೈಯಲ್ಲಿ ಮಾರ್ಗದ ಪ್ರಭಾವನೆಯು ಉಳಿಯುವುದಿಲ್ಲ.

ಜಗತ್ತಿನಲ್ಲಿ ಅನಂತ ಜೀವಾಸ್ತಿಕಾಯಗಳು ಪ್ರತಿಯೊಂದು ಭಿನ್ನಭಿನ್ನವಿವೆ, ಸ್ವತಂತ್ರವಿವೆ, ಅನಂತ ಪುದ್ಗಲಾಸ್ತಿಕಾಯಗಳು ಜೀವದಿಂದ ಭಿನ್ನವಿವೆ. ಯಾವುದೇ ಜೀವದ ಕೃಪೆಯಿಂದ ಕಲ್ಯಾಣವಾಗಲಿ ಅಥವಾ ಅಹಿತವಾಗಲಿ ಆಗುವುದಿಲ್ಲ. ಏಕೆಂದರೆ ಪ್ರತಿಯೊಂದು ಜೀವವು ಭಿನ್ನಭಿನ್ನವಿದೆ. ಮಾರ್ಗಪ್ರಭಾವನೆಯೆಂದು ಹೇಳಿರುವಲ್ಲಿ ಆಚಾರ್ಯದೇವರು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಅವು ಮೂರು ಆತ್ಮಸ್ವಭಾವದ ಆಶ್ರಯದಿಂದೆಂದು ತಿಳಿಸಿಕೊಟ್ಟಿದ್ದಾರೆ.

ಸಂಸಾರ-ವಿಷಯ ಭೋಗಗಳಿಂದ ಪರಮ ವೈರಾಗ್ಯ ಮಾಡಿಸುವಂಥ ಸರ್ವಜ್ಞ ಭಗವಂತರ ಆಜ್ಞೆಯ ಹೆಸರು 'ವೈರಾಗ್ಯ'ವಿದೆ. '**ಮಾರ್ಗೋಹಿ ಪರಮವೈರಾಗ್ಯಕಾರಣಪ್ರತಣಾ ಪಾರಮೇಶ್ವರೀ ಪರಮಾಜ್ಞಾ**' ಸ್ವಭಾವದಲ್ಲಿ ರಮಿಸುವುದರಿಂದ ಸಂಸಾರ-ಶರೀರ-ಭೋಗಗಳಿಂದ ಪರಮ ವೈರಾಗ್ಯವಾಗಿ ಹೋಗುವುದರ ಹೆಸರು ಪರಮೇಶ್ವರರ ಪರಮ ಆಜ್ಞೆಯಿದೆ ಮತ್ತು ಅದುವೇ ಮೋಕ್ಷ ಮಾರ್ಗವಿದೆ. ಪರಪದಾರ್ಥಗಳು ಒಂದು ವೇಳೆ ಆತ್ಮನ ಮೇಲೆ ಬಲವಂತ ಮಾಡಿ ವಿಕಾರವನ್ನುಂಟು ಮಾಡಿಸುವಂತಿದ್ದರೆ ಆತ್ಮನು ಅವುಗಳಿಂದ ಪರಮ ವೈರಾಗ್ಯ ಮಾಡುವ ಸಾಧ್ಯತೆಯಿಲ್ಲ. ಚಿದಾನಂದ ಸ್ವರೂಪದಲ್ಲಿ ಅಪೇಕ್ಷೆ ಮತ್ತು ಸಮಸ್ತ ಪರದ್ರವ್ಯಗಳಿಂದ ಉಪೇಕ್ಷೆಯೆಂಬ ಮಾರ್ಗವಿದೆ. ನನ್ನ ಸ್ವರೂಪದಲ್ಲಿ ಸ್ವಲ್ಪ ಕೂಡ ಸಮಸ್ತ ಜಗತ್ತಿನ ಪ್ರವೇಶವಿಲ್ಲವೆಂದು ಜಗತ್ತಿನಿಂದ ಉದಾಸನಾಗಿ ತನ್ನ ಚಿದಾನಂದ ಸ್ವರೂಪದ ಶ್ರದ್ಧೆ, ಅದರ ಜ್ಞಾನ ಮತ್ತು ಅದರಲ್ಲಿ ಲೀನತೆ ಮಾಡುವುದರ ಹೆಸರು ಮೋಕ್ಷಮಾರ್ಗವಿದೆ. ಬೇರೆ ಯಾವುದೂ ಮೋಕ್ಷಮಾರ್ಗವಿಲ್ಲ.

ಒಂದುವೇಳೆ ಪರದ ಆಶ್ರಯದಿಂದ ಕಲ್ಯಾಣವಾಗುವಂತಿದ್ದರೆ ಪರದಿಂದ ವಿರಕ್ತವಾಗಿ ನಿಜದಲ್ಲಿ ಬರುವುದರ ಅವಶ್ಯಕತೆಯೇನಿದೆ. ಅದರಂತೆ ಒಂದುವೇಳೆ ದಯೆ, ವ್ರತಾದಿಗಳ ರಾಗದಿಂದ ಕಲ್ಯಾಣವಾಗುವಂತಿದ್ದರೆ ರಾಗದಿಂದ ವಿರಕ್ತವಾಗಿ ಸ್ವರೂಪದಲ್ಲಿ ಬಂದುಬಿಡುವುದೇ ಉಳಿಯುವುದಿಲ್ಲ. ಆದುದರಿಂದ ಸಂಸಾರ ಎಂದರೆ ರಾಗ ಮೊದಲಾದ ಉದಯ ಭಾವಗಳಿಂದ ಉದಾಸೀನರಾಗಿ ನಿಜಸ್ವರೂಪದಲ್ಲಿ ಬರುವುದರ ಹೆಸರು ವೀತರಾಗದ ಆಜ್ಞೆಯಿದೆ, ನೋಡಿರಿ! ಮಧ್ಯದಲ್ಲಿ ವ್ಯವಹಾರ ಬರುತ್ತದೆ ಅದು ನಿಜವಾಗಿ ಭಗವಂತರ ಆಜ್ಞೆಯಲ್ಲ. ನಿಮಿತ್ತ, ವಿಕಾರ ಮತ್ತು ಪರ್ಯಾಯದ ಕಡೆಗೆ ಇರುವ ಅಭಿರುಚಿಯನ್ನು ತ್ಯಜಿಸಿ ಸ್ವಾಶ್ರಯ ಶ್ರದ್ಧೆ, ಜ್ಞಾನ, ಆನಂದರೂಪದ ಸ್ವಭಾವದಲ್ಲಿ ಸ್ಥಿರವಾಗುವುದೇ ಆಜ್ಞೆಯಿದೆ. ಯಾವ ಜೀವನು ವೈರಾಗ್ಯದಲ್ಲಿ ಪ್ರವೃತ್ತವಾಗುತ್ತಾನೆ ಅವನು ಪರದಿಂದ ಅಲಿಪ್ತನಾಗುತ್ತಾನೆ ಅವನಿಗೆ ಭಗವಂತರ ಆಜ್ಞೆಯು ನಿಮಿತ್ತವಾಗುವುದು.

ತ್ರಿಕಾಲ ಶುದ್ಧಸ್ವರೂಪದಲ್ಲಿ ಪರಿಪೂರ್ಣ ಭಗವಾನತನವಿದೆ ಮತ್ತು ವರ್ತಮಾನದ ದುರ್ಬಲತೆಯಲ್ಲಿ ಪರ್ಯಾಯದ ಅಪೇಕ್ಷೆಯಿಂದ ಪಾಮರತೆಯಿದೆಯೆಂದು ಯಾವನು ತಿಳಿಯುತ್ತಾನೆ ಅವನಿಗೆ ಪ್ರಮಾಣದ ಜ್ಞಾನವಿದೆ.

ಮೋಕ್ಷಮಾರ್ಗದಲ್ಲಿ ಶ್ರದ್ಧೆಯಾಗುವ ಮೊದಲು ಕುದೇವ-ಕುಶಾಸ್ತ್ರ-ಕುಗುರುಗಳ ಹಾಗೂ ಅವರನ್ನು ಮನ್ನಿಸುವಂಥವರ ಆದರ ಮಾಡುವುದನ್ನು ಬಿಟ್ಟುಕೊಟ್ಟು ಯಥಾರ್ಥ ಪರಿಣಾಮದೊಡನೆ ಸುದೇವಾದಿಗಳನ್ನು ಮನ್ನಿಸುವುದು ಇಪ್ಪತ್ತೈದು ದೋಷ ರಹಿತ ಸಮ್ಯಕ್ತ್ವವನ್ನು ಪಾಲಿಸುವುದು ವ್ಯವಹಾರದಿಂದ ಆಜ್ಞೆಯಿದೆ ಮತ್ತು ನಿರ್ವಿಕಲ್ಪ ನಿಶ್ಚಯ ಜ್ಞಾಯಕ ಸ್ವಭಾವಿಯಾದ ಆತ್ಮನ ಅವಲಂಬನದಲ್ಲಿ ಸ್ಥಿರವಿರುವುದು ನಿಶ್ಚಯ ಆಜ್ಞೆಯಿದೆ. ಪರದಿಂದ ಮತ್ತು ಶುಭರಾಗದಿಂದ ಕೂಡ ಪರಮ ಉದಾಸೀನತೆಯಾದಮೇಲೆ ನಿಶ್ಚಯರತ್ನತ್ರಯರೂಪದ ಸ್ಥಿರತೆಯಾಗುತ್ತದೆ-ರಮಣತೆಯಾಗುತ್ತದೆ. ಅದು ಸರ್ವಜ್ಞ ಭಗವಂತರು ಹೇಳಿದ ಆಜ್ಞೆಯಿದೆ.

ಯಾರು ರಾಗವನ್ನು ಧರ್ಮವೆಂದು ಮನ್ನಿಸಿಲ್ಲ ಅವರನ್ನು ಭಗವಂತರ ಆಜ್ಞೆ ಮನ್ನಿಸಿದವರೆಂದು ಹೇಳಲಾಗುತ್ತದೆ ಮತ್ತು ಯಾರು ರಾಗವನ್ನು ಧರ್ಮವೆಂದು ಮನ್ನಿಸಿದ್ದಾರೆ ಅವರು ಭಗವಂತರ ಆಜ್ಞೆಯನ್ನು ಮನ್ನಿಸಿಲ್ಲ. ಭಗವಂತರ ಆಜ್ಞೆಯು ಪರಮ ವೈರಾಗ್ಯವನ್ನುತ್ಪನ್ನ ಮಾಡುವಂಥದ್ದಿದೆ. ಸಮ್ಯಗ್ದರ್ಶನ-ಸಮ್ಯಗ್ಜ್ಞಾನ-ಸಮ್ಯಕ್ಚಾರಿತ್ರ ಇವು ಮೂರು

ಪರದಿಂದ ಅತ್ಯಂತ ನಿರಪೇಕ್ಷವಿರುವಂಥ ಸ್ವಭಾವದ ಆಶ್ರಯದಿಂದ ಆಗುತ್ತವೆ ಮತ್ತು ಅವುಗಳ ಏಕತೆಯೇ ಮೋಕ್ಷಮಾರ್ಗವಿದೆ. ಮಧ್ಯದಲ್ಲಿ ರಾಗವು ಬರುತ್ತದೆ ಅದೇನು ಮೋಕ್ಷಮಾರ್ಗವಿಲ್ಲ. ಇಂಥ ವೀತರಾಗಸ್ವರೂಪದ ಮೋಕ್ಷಮಾರ್ಗವನ್ನು ನಾನು ಪಂಚಾಸ್ತಿಕಾಯ ಶಾಸ್ತ್ರದಲ್ಲಿ ಉದ್ಯೋತಗೊಳಿಸಿದ್ದೇನೆ. ಈ ಪಂಚಾಸ್ತಿಕಾಯ ಶಾಸ್ತ್ರವು ಸರ್ವಜ್ಞ ವೀತರಾಗ ಭಗವಂತರು ಹೇಳಿರುವ ಸಿದ್ಧಾಂತದ ಅನುಸಾರ ನಾನು ಹೇಳಿರುವೆನು. ಅದನ್ನು ಜಿನೇಂದ್ರ ಭಗವಂತರ ಪ್ರವಚನದ ಕುರಿತಾಗಿರುವ ನಿರ್ಮಲ ಭಕ್ತಿಯಿಂದ ಮತ್ತು ವೀತರಾಗಮಾರ್ಗದ ಉದ್ಯೋತದ ಸಲುವಾಗಿ ಹೇಳಲಾಗಿರುವುದು.

ಈ ಪ್ರಕಾರ ಸೂತ್ರಕರ್ತೃಗಳಾದ ಭಗವಾನ ಕುಂದಕುಂದಾಚಾರ್ಯದೇವರು ತಮ್ಮ ಪ್ರತಿಜ್ಞೆಯನ್ನು ಪೂರ್ಣಮಾಡಿದ್ದಾರೆ ಮತ್ತು ಇದರಿಂದ ಕೃತಕೃತ್ಯರಾಗಿ ತಮ್ಮ ಕರ್ಮರಹಿತ ಶುದ್ಧಸ್ವರೂಪದಲ್ಲಿ ಅವರು ಸ್ಥಿತರಾಗಿ ಹೋಗುವವರು. ಈ ಪ್ರಕಾರ ನಮ್ಮಲ್ಲಿ ಶ್ರದ್ಧೆಯನ್ನು ಉತ್ಪನ್ನ ಮಾಡಿದ್ದಾರೆಂದು ಟೀಕಾಕಾರರಾದ ಆಚಾರ್ಯ ಅಮೃತಚಂದ್ರದೇವರು ಹೇಳಿದ್ದಾರೆ. ಆಹಾ! ಆಚಾರ್ಯದೇವರು ಚಿದಾನಂದಸ್ವರೂಪದ ಅವಲಂಬನದಿಂದ ವೀತರಾಗಭಾವ ಮಾಡಲು ಹೇಳಿದ್ದಾರೆ. ಆದುದರಿಂದ ನಮಗೆ ಕೂಡ ಅದರ ಭಾವನೆಯಾಗುತ್ತದೆ. ನಮ್ಮಲ್ಲಿ ಕೂಡ ಚಿದಾನಂದ ಸ್ವರೂಪದಲ್ಲಿ ಸ್ಥಿರವಾಗುವ ಉತ್ಸಾಹವಾಗಿದೆ. ರಾಗದಲ್ಲಿ ನಿಂತುಕೊಳ್ಳುವ ಭಾವನೆಯಿಲ್ಲ ಆದರೆ ನಿಜರೂಪದಲ್ಲಿಯೇ ನಿಂತುಕೊಳ್ಳುವುದರ ಭಾವನೆಯಾಗುತ್ತಿದೆ.

ಈ ಪ್ರಕಾರ ಪಂಚಾಸ್ತಿಕಾಯವು ಪೂರ್ಣವಾಯಿತು. ಈಗ ಟೀಕಾಕಾರರಾದ ಅಮೃತಚಂದ್ರದೇವರು ಹೀಗೆ ಹೇಳುತ್ತಾರೆ -

**ಸ್ವಶಕ್ತಿಸಂಸೂಚಿತವಸ್ತು ತತ್ತ್ವೈರ್ವ್ಯಾಖ್ಯಾ ಕೃತೇಯಂ ಸಮಯಸ್ಯ ಶಬ್ದೈಃ ।**
**ಸ್ವರೂಪಗುಪ್ತಸ್ಯ ನ ಕಿಂಚಿದಸ್ತಿ ಕರ್ತವ್ಯಮೇವಾಮೃತಚಂದ್ರಸೂರೇಃ ॥**

ಈ ಶಾಸ್ತ್ರದ ಶಬ್ದಗಳ ರಚನೆಯನ್ನು ನಾನು ಮಾಡಿರುವುದಿಲ್ಲ. ಶಬ್ದಗಳಂತೂ ಪರಮಾಣುವಿನ ಪರ್ಯಾಯದ ಕಾಲದಲ್ಲಿ ರಚಿಸಲ್ಪಟ್ಟಿವೆ. ಆತ್ಮನಂತೂ ಅವುಗಳ ಜ್ಞಾತಾನಿದ್ದಾನೆ. ವಿಕಲ್ಪದ ಭಾವನೆಯು ಕೂಡ ಇಲ್ಲ. ಇಚ್ಛೆಯ ಕಾರಣದಿಂದ ಶಾಸ್ತ್ರದ ಭಾಷೆಯಾಗಲಿಲ್ಲ. ಶಬ್ದಗಳು ತಮ್ಮ ಸ್ವಶಕ್ತಿಯಿಂದ ಈ ಕಥನವನ್ನು ಮಾಡಿವೆ. ಆಚಾರ್ಯದೇವರು ತಾವು ತಮ್ಮಲ್ಲಿ ವೀತರಾಗಭಾವವನ್ನು ಪಾನ ಮಾಡುತ್ತಾರೆ. ಆತ್ಮನಂತೂ ಜ್ಞಾನಸ್ವರೂಪನಿದ್ದಾನೆ. ಅವನು ತನ್ನ ಸ್ವರೂಪದಲ್ಲಿ ಗುಪ್ತನಿದ್ದಾನೆ. ಅವನು ಜಡದಲ್ಲಿ ಪ್ರವೇಶಿಸಿ ಏನನ್ನೂ ಮಾಡುವುದಿಲ್ಲ. ಭಗವಾನ ಕುಂದಕುಂದಾಚಾರ್ಯ-ದೇವರು ಹೇಳಿರುವುದೇನೆಂದರೆ - 'ನಾನು ಈ ಶಾಸ್ತ್ರದ ರಚನೆ ಮಾಡಿದ್ದೇನೆ'ನ್ನುವುದಂತೂ ತಮಗೆ ಎಂಥ ವಿಕಲ್ಪವುತ್ಪನ್ನವಾಗಿದೆ ಅದರ ನಿಮಿತ್ತತೆಯನ್ನು ತಿಳಿಸಿಕೊಡುವುದರ ಕಥನವಿದೆ ಮತ್ತು ಆತ್ಮನು ಶಬ್ದಗಳ ಕರ್ತೃವಲ್ಲ ಆದರೆ ಆತ್ಮನಂತೂ ಕೇವಲ ಜ್ಞಾಯಕನಿದ್ದಾನೆಂದು ಆಚಾರ್ಯಅಮೃತಚಂದ್ರದೇವರು ಹೇಳುತ್ತಾರೆ.

**ಈ ಪ್ರಕಾರ ಶ್ರೀ ಪಂಚಾಸ್ತಿಕಾಯಶಾಸ್ತ್ರವು ಇಲ್ಲಿಗೆ ಪೂರ್ಣವಾಯಿತು.**

**ಭದ್ರಂ ಶುಭಂ ಮಂಗಲಂ**